ವಚನಗಳ ಓದು

ಹನ್ನೆರಡನೆಯ ಶತಮಾನದ ಶಿವ ಶರಣ ಶರಣೆಯರ 170 ವಚನಗಳಿಗೆ ಮತ್ತು
ವಚನಗಳಿಂದ ಆಯ್ದ 150 ಸಾಲುಗಳಿಗೆ ಬರೆದಿರುವ ಟೀಕು



ಸಿ ಪಿ ನಾಗರಾಜ

ವಚನಗಳ ಓದು

ಹನ್ನೆರಡನೆಯ ಶತಮಾನದ ಶಿವ ಶರಣ ಶರಣೆಯರ 170 ವಚನಗಳಿಗೆ ಮತ್ತು
ವಚನಗಳಿಂದ ಆಯ್ದ 150 ಸಾಲುಗಳಿಗೆ ಬರೆದಿರುವ ಟೀಕು

ಸಿ.ಪಿ. ನಾಗರಾಜ

ನಾಗು ಸ್ಮಾರಕ ಪ್ರಕಾಶನ
75, 5ನೆಯ ಕ್ರಾಸ್, ' ಎ ' ಬ್ಲಾಕ್, ಕ್ರಿಶ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–560 059

VACHANAGALA ODU
by C.P.Nagaraja, Published by Nagu Smaraka Prakashana
75, 5th Cross, ‘A‘ Block, Krishna Garden, R.V.College Post
Bengaluru-560 059
Mobile: 9986347521

First Edition	:	2025
Page	:	648
Price	:	**Rs. 750/-**
Paper	:	60 gsm Stora Creamy
Size	:	Demy 1/8
Copies	:	500
Copy right	:	Author
ಪುಟಗಳು	:	648
ಪ್ರತಿಗಳು	:	500
ಬೆಲೆ	:	**ರೂ. 750/–**
ಮುಖಪುಟ ವಿನ್ಯಾಸ	:	ಓಂಶಿವಪ್ರಕಾಶ್, ಟೆಕ್ ಫಿಜ್ ಇಂಕ್, ಬೆಂಗಳೂರು.
ಪುಟ ವಿನ್ಯಾಸ	:	ಕೆ.ಆರ್. ಹರೀಶ್, 8553184584

ಪ್ರತಿಗಳು ದೊರೆಯುತ್ತವೆ

ಆರ್.ಸುಧೀಂದ್ರ ಕುಮಾರ್
9, 20ನೆಯ ಮೈನ್, 3ನೆಯ ಕ್ರಾಸ್
ವಿಜಯನಗರ 2ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು–570017
ಮೊ. 8892626269

ಮುನ್ನುಡಿ

ಆತ್ಮೀಯತೆಗೆ ಹೆಸರಾದ ಸಿ.ಪಿ.ನಾಗರಾಜ ಅವರು ಕನ್ನಡ ಸಾಹಿತ್ಯ ಕ್ಷೇತ್ರದ ಮೇರು ಕೃತಿಗಳನ್ನು ಸರಳ ವ್ಯಾಖ್ಯಾನಗಳ ಮೂಲಕ ಓದುಗರ ಲೋಕಕ್ಕೆ ಈಗಾಗಲೇ ಪರಿಚಯಿಸಿದ್ದಾರೆ. ಪಂಪ, ಕುಮಾರವ್ಯಾಸ ಮೊದಲಾದ ಮಹಾಕವಿ ಗಳನ್ನು ಸಮಗ್ರವಾಗಿ ತಿಳಿದುಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಕಾವ್ಯ ಭಾಗಗಳನ್ನು ಪದಶಃ ಬಿಡಿಸಿ, ಅವುಗಳ ಅರ್ಥ, ಕಾವ್ಯಾಂಶ, ಚಾರಿತ್ರಿಕ ವೈಶಿಷ್ಟ್ಯ ಮುಂತಾದುವನ್ನು ವಿವರಿಸಿ, ಮಹತ್ತಾದ ಆಕರ ಗ್ರಂಥಗಳನ್ನು ನೀಡಿದ್ದಾರೆ. ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿ ಓದುಗರಿಗೆ, ಅದರಲ್ಲಿಯೂ ವಿಶೇಷವಾಗಿ ಸಾಹಿತ್ಯಾಭ್ಯಾಸಿಗಳ ರಸಾಸ್ವಾದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಆದರೆ ಅವು ಯಾವುವು ಕೇವಲ ಕೈಪಿಡಿಗಳಲ್ಲ. ಬದಲಾಗಿ ವಿದ್ವತ್ತಿನ ಖನಿಗಳು ಮತ್ತು ಸಾಹಿತ್ಯದ ವಿವಿಧ ಆಯಾಮಗಳನ್ನು ತಿಳಿಯಲು ಹಾಗೂ ಸವಿಯಲು ಮಾರ್ಗದರ್ಶಿ ಆಕರಗಳು.

ಪ್ರಸ್ತುತ ನಿಜಕ್ಕೂ ಅರ್ಥವತ್ತಾಗಿ ಮತ್ತು ವಿಶಾಲವಾಗಿ ಬೆಳೆಯಲು 'ವಚನಗಳ ಓದು' ಎಂಬ ಆಕರ ಗ್ರಂಥವೊಂದನ್ನು ನಮ್ಮ ಮುಂದಿರಿಸಿದ್ದಾರೆ. ಕೇವಲ ಹತ್ತಕ್ಕೆ ಇನ್ನೊಂದು ಎನಿಸಿಕೊಳ್ಳದ ಮತ್ತು ಸ್ವತಂತ್ರ ಅರ್ಥಗ್ರಹಣಕ್ಕೆ ದಾರಿದೀಪವಾಗಿ ರಂಜಿಸುವ ಮೌಲಿಕ ಕೃತಿಯೊಂದನ್ನು ನೀಡಿರುವುದಕ್ಕಾಗಿ ಸಿ.ಪಿ.ನಾಗರಾಜ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಶಿಕ್ಷಣವನ್ನು ಪಡೆಯಲು ಮುಕ್ತ ಸೌಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಇನ್ನೂರಕ್ಕೂ ಹೆಚ್ಚು ವಚನಕಾರರು ತಮ್ಮ ಅನುಭವಜನ್ಯ ಪ್ರೌಢಿಮೆಯನ್ನು ಅಭಿವ್ಯಕ್ತಿಸಲು ಸಾಧ್ಯವಾದದ್ದು ವಚನ ಚಳುವಳಿಯ ಒಂದು ಅನನ್ಯ ಕೊಡುಗೆ. ಉತ್ಕೃಷ್ಟವಾದ ಹೊಸದೊಂದು ಜೀವನ ದೃಷ್ಟಿಯನ್ನು ಅತಿ ಸಾಮಾನ್ಯ ಕಸುಬುಗಳಲ್ಲಿ ನಿರತರಾಗಿದ್ದವರು ನೀಡಿದ್ದಾರೆಂದರೆ, ಅದೇ ಒಂದು ಪವಾಡ ವೆನಿಸುತ್ತದೆ. ಅಂಬಿಗ, ಮಡಿವಾಳ, ಮೇದ, ಗಾಣಿಗ ಮುಂತಾದ ನೂರಾರು ಕಸುಬುಗಳ ಪ್ರತಿನಿಧಿಗಳು ಅಭಿಜಾತ ತತ್ವಶಾಸ್ತ್ರದ ಮಾದರಿಯನ್ನು ಮೀರಿಸುವ ಚಿಂತನೆ ಮತ್ತು ಸಾಮಾಜಿಕ ಆಂದೋಲನ ನಡೆಸಿದ್ದು ಒಂದು ಅದ್ಭುತವೇ ಸರಿ. ಸ್ವಂತ ದುಡಿಮೆ, ಅವಲೋಕನ ಮತ್ತು ಅನುಭವಗಳಿಂದ ರೂಪು ತಾಳಿದ ವಚನಗಳು ಯಾವುದೇ ಸಾಹಿತ್ಯವು ರೂಪಿಸುವ ರೂಪಕಗಳನ್ನು ಮೀರಿ, ವಿಶಾಲವಾದ ಚಿಂತನೆಯ ಆಕರಗಳಾಗಿರುವುದು ಒಂದು ವಿಶೇಷ.

ಎಲ್ಲಾ ವಚನಗಳೂ ಒಂದೇ ಮಾದರಿಯವಲ್ಲವೆಂಬುದು ತಿಳಿದ ವಿಷಯ. ಕೆಲವನ್ನು 'ಬೆಡಗಿನ ವಚನಗಳು' ಎಂದು ಕರೆಯುತ್ತಾರೆ. ಅಂತಹ ಕೆಲವನ್ನು ಗುರುತಿಸಿ, ಅದೇ ಶೀರ್ಷಿಕೆಯ ಒಂದು ಗ್ರಂಥವನ್ನು ಡಾ.ಎಸ್.ಪ್ರಭುಶಂಕರ ಅವರು ಪ್ರಕಟಿಸಿದ್ದಾರೆ. ನಾಗರಾಜ ಅವರ ಈ ಕೃತಿಯಲ್ಲಿ ಸಹ ಅಂತಹ ಕೆಲವು ವಚನಗಳು ಸೇರಿವೆ. ಅರ್ಥ ವ್ಯಾಪ್ತಿಯಲ್ಲಿ ಸ್ವಲ್ಪ ಕ್ಲಿಷ್ಟವಾಗಿರುವುದು ಬೆಡಗಿನ ವಚನಗಳಲ್ಲಿ ಎದ್ದುಕಾಣುತ್ತದೆ. ಆ ಹೆಸರಿಗೆ ಪಾತ್ರವಾದ ಎಷ್ಟೋ ವಚನಗಳು ಸಹ ಒಂದೇ ಓದಿಗೆ ದಕ್ಕದೆ ಉಳಿಯುವುದು ವಚನಕಾರರ ವಿಶಿಷ್ಟ ಕಾವ್ಯಪದ್ಧತಿಯ ಮತ್ತು ಪ್ರತಿಭೆಯ ಸೂಚಕವೇ ಸರಿ.

" ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು
ವೀರರೂ ಅಲ್ಲ ಧೀರರೂ ಅಲ್ಲ.
ಇದು ಕಾರಣ
ನೆರೆ ಮೂರು ಲೋಕವೆಲ್ಲವೂ
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ."

ಎಂಬ ಅಲ್ಲಮನ ವಚನವನ್ನು ಅದೆಷ್ಟು ವ್ಯಾಪ್ತಿಗಳಲ್ಲಿ ನಿರ್ವಚಿಸಲು ಸಾಧ್ಯವೆಂಬುದನ್ನು ನೋಡಿದರೆ, ಅಂಥವಕ್ಕೆ ಮಾರ್ಗದರ್ಶಿ ವಿವರಣೆಗಳು

ಆವಶ್ಯಕ ಮತ್ತು ಸಹಾಯಕ ಎನಿಸುತ್ತದೆ. ಅಂತಹ ಅನೇಕ ವಚನಗಳ ಅರ್ಥವು ಸ್ಫುರಿಸುವಂತೆ ನಾಗರಾಜ ಅವರು ವ್ಯಾಖ್ಯಾನ ನೀಡಿದ್ದಾರೆ. ವಚನಗಳಿಗೆ ಅನ್ವಯಾರ್ಥ ಹೇಳುವುದರ ಜೊತೆಗೆ, ವಿವಿಧ ಸೂಚ್ಯಾರ್ಥಗಳತ್ತ ನಮ್ಮ ಗಮನ ಸೆಳೆದಿದ್ದಾರೆ. ನಾಗರಾಜ ಅವರು ಆಯ್ದುಕೊಂಡಿರುವ ಮತ್ತು ಅರ್ಥೈಸಿರುವ ವಚನಗಳೆಲ್ಲಾ ಒಂದೇ ಮಾದರಿಯವಲ್ಲ. ಆಯಾ ವಚನಕಾರರ ವಿಶಿಷ್ಟ ಚಿಂತನೆ ಮತ್ತು ಪ್ರತಿಪಾದನಾ ವೈಖರಿ ಭಿನ್ನವಾಗಿರುವುದು ಸಹಜ. ಅವುಗಳಲ್ಲಿ ವ್ಯಕ್ತವಾಗಿರುವ ವಸ್ತು ಸಹ ಸಂಕೀರ್ಣವಾಗಿರುತ್ತದೆ. ಒಂದೊಂದು ವಚನದ ವೈಶಿಷ್ಟ್ಯವನ್ನು ಸ್ಫುಟವಾಗಿ ತೆರೆದಿಡುವುದರಲ್ಲಿ ಲೇಖಕರು ಸಮರ್ಥರು. ಮೂರು ದಶಕಗಳಿಗೂ ಹೆಚ್ಚು ಕಾಲ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಸಿ.ಪಿ. ನಾಗರಾಜ ಅವರಿಗೆ ಎಲ್ಲಿ ಏನು ತೊಡಕಿದೆಯೆಂದು ಸುಲಭವಾಗಿ ತಿಳಿಯುತ್ತದೆ ಮತ್ತು ಅದರ ಆಯಾಮಗಳನ್ನು ವಿಸ್ತರಿಸಿ ಹೇಳುವುದು ಹಾಗೂ ಖಚಿತವಾಗಿ ಅದು ಮನಸ್ಸಿನಲ್ಲಿ ಉಳಿಯುವಂತೆ ಮಾಡುವುದು ಅಭ್ಯಾಸವಾಗಿ ಹೋಗಿದೆ.

ಉದಾಹರಣೆಗೆ ಈ ಗ್ರಂಥದ 143 ನೆಯ ವಚನವನ್ನು ನೋಡಬಹುದು.

"ಹಾವಾಡಿಗನು ಮೂಕೊರತಿಯು ತನ್ನ ಕೈಯಲ್ಲಿ ಹಾವು
ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ
ತನ್ನ ಸತಿ ಮೂಕೊರತಿ ತನ್ನ ಕೈಯಲ್ಲಿ ಹಾವು ತಾನು ಮೂಕೊರೆಯ
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬ ಕೂಡಲಸಂಗಮದೇವಾ."

"ಬಸವಣ್ಣನ ಈ ವಚನವನ್ನು ಎರಡು ನೆಲೆಗಳಲ್ಲಿ ವಿವರಿಸಿಕೊಳ್ಳಬಹುದು" ಎಂದು ಹೇಳಿ, ಎರಡು ಆಯಾಮಗಳಲ್ಲೂ ಅದರ ವಿಸ್ತೃತವಾದ ಅರ್ಥ ಏನೆಂಬುದನ್ನು ತಿಳಿಸಿ ಹೇಳುತ್ತಾರೆ. ಬೇರೆ ವಚನಗಳಿಗೂ ಇಂಥದೇ ವ್ಯಾಪಕ ಅರ್ಥೈಸುವಿಕೆ ಯುಂಟು. ಇಂತಹ ವಿವರಣೆಗಳಿಂದಾಗಿ ಈ ಕೃತಿಯು ವಚನಗಳ ಸಾಮಾನ್ಯ ಓದುಗರಿಗೆ, ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಅತ್ಯುಪಯುಕ್ತವಾಗಿದೆ.

ಇನ್ನೊಂದು ಮಾತು ಸೇರಿಸಿದರೆ ಅಪಚಾರವಾಗುವುದಿಲ್ಲವೆಂದು ಭಾವಿಸುತ್ತೇನೆ. ವಚನಗಳು ರಚನೆಗೊಂಡ ಕಾಲದ ಯಾವುದೋ ಒಂದು ಫಲಿತಾಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಡೀ ಚಳುವಳಿಯ ಮಾಪನ ಮಾಡಲಾಗುವುದಿಲ್ಲ.

ಡಾ.ಎಂ.ಚಿದಾನಂದಮೂರ್ತಿಯವರು ಹೇಳಿರುವಂತೆ " ಕರ್ನಾಟಕದ ಜನಜೀವನವು ಸರಿಸುಮಾರು ಆ ಕಾಲದಲ್ಲಿ ಒಂದು ಘಟ್ಟವನ್ನು ಮುಟ್ಟಿ, ಇನ್ನೊಂದು ಹೊಸ ಬಾಳನ್ನು ಪ್ರವೇಶಿಸಿತೆಂದು ಹೇಳಬಹುದು." ಆ ಹೊಸ ಬಾಳಿನ ಲಕ್ಷಣಗಳೇನೆಂಬುದು ವಚನ ಸಾಹಿತ್ಯದ ಹೂರಣದಿಂದ ತಿಳಿಯುತ್ತದೆ.ಆ ದೃಷ್ಟಿಯಿಂದ ಐತಿಹಾಸಿಕವಾಗಿ ಇದೊಂದು ಸ್ಥಿತ್ಯಂತರವೆನ್ನಲು ಅಡ್ಡಿಯಿಲ್ಲ.

ತಥಾಕಥಿತ ಅಸ್ಪೃಶ್ಯರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಹಲವು ಆಚರಣೆಗಳನ್ನು ವಚನ ಚಳುವಳಿಯು ತೀವ್ರವಾಗಿ ಟೀಕಿಸಿತು. ಸ್ವಲ್ಪ ಸ್ವಾಗತಾರ್ಹ ಬೆಳವಣಿಗೆಗಳನ್ನೂ ತಂದಿತು. ಆದರೆ ಅಸ್ಪೃಶ್ಯತೆಯು ಕೊನೆಗೊಳ್ಳಲಿಲ್ಲ. ಜನರ ಆರ್ಥಿಕ ಜೀವನದಲ್ಲಿ ಗಮನಾರ್ಹವಾದ ಬದಲಾವಣೆ ಆಗಿರದಿದ್ದುದು, ಅದಕ್ಕೆ ಮೂಲಭೂತ ಕಾರಣ. ಆರ್ಥಿಕ ಸ್ಥಿತ್ಯಂತರವಾಗದೆ, ಕೇವಲ ಸಾಮಾಜಿಕ ಸ್ಥಿತ್ಯಂತರದ ಆಕಾಂಕ್ಷೆಯು ವ್ಯಕ್ತವಾದರೆ, ಅದು ವ್ಯಾವಹಾರಿಕವಾಗಿ ಪರಿಣಾಮ ಬೀರದು. ಬಸವಣ್ಣ ಮತ್ತು ಅವನ ಸಮಕಾಲೀನ ಚಿಂತಕರು ಹಾಗೂ ಹೋರಾಟಗಾರರು ತಮ್ಮ ಆಕಾಂಕ್ಷೆಗಳು ಕೇವಲ ಸಾಮಾಜಿಕ ಮತ್ತು ಧಾರ್ಮಿಕವೆಂದು ಬಗೆದಿದ್ದರೋ ಅಥವಾ ಅದರಲ್ಲಿ ರಾಜಕೀಯ ಮತ್ತು ಆರ್ಥಿಕ ಉದ್ದೇಶಗಳೂ ಅಂತರ್ಗತವಾಗಿದ್ದವೋ?. ಮೊದಲನೆಯದು ಮಾತ್ರ ಅವರ ಕಕ್ಷೆಯಲ್ಲಿದ್ದಿತೆಂದು ಡಾ.ಎಂ.ಚಿದಾನಂದಮೂರ್ತಿ ಭಾವಿಸಿದ್ದಾರೆ. ಈ ದೃಷ್ಟಿಯು ಸರ್ವಥಾ ಅಸಂಗತವೆಂದು ಅಂದಿನ ಆರ್ಥಿಕ ಕ್ಷೇತ್ರದ ತುಮುಲ ಮತ್ತು ಘರ್ಷಣೆಗಳಿಂದ ತಿಳಿಯುತ್ತದೆ. ಬಸವಾದಿಗಳು ಈ ನಿಟ್ಟಿನಲ್ಲಿ ಆಲೋಚಿಸಿದ್ದರೆ, ಆರ್ಥಿಕ ಚೈತನ್ಯವು ಗಟ್ಟಿಗೊಳ್ಳದೆ ತುಳಿತಕ್ಕೊಳಗಾದವರ ಸಾಮಾಜಿಕ ಸ್ಥಾನವು ಸಾರ್ಥಕವಾಗಿ ಬದಲಾಗಲಾರದೆಂದು ತಿಳಿದೇ ತಿಳಿಯುತ್ತಿದ್ದರು.

ವಚನ ಚಳುವಳಿಯನ್ನು ಕೇವಲ ಭಾವನಾತ್ಮಕವಾದದ್ದೆಂಬ ನೆಲೆಗೆ ತಂದು ನಿಲ್ಲಿಸಿದರೆ, ಚಳುವಳಿಯೇ ಅಪ್ರಸ್ತುತವೆಂದು ಹೇಳಿದಂತಾಗುತ್ತದೆ. ಡಾ.ಸಿ.ವೀರಣ್ಣ ನವರು ಇದನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. "ಒಂದು ಸಂಘಟಿತ ಹೋರಾಟ ವಾಗಿ ರೂಪುಗೊಳ್ಳಲು ಸಮರ್ಥವಾದ ಯಾವುದೇ ಚಳುವಳಿಗಳು ಚರಿತ್ರೆಯಲ್ಲಿ ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ ಮಾತ್ರ ಹುಟ್ಟಿ ಬಂದವುಗಳಾಗಿರುವುದಿಲ್ಲ. ಆಯಾ ಕಾಲದ ಅನಿವಾರ್ಯತೆಯಿಂದಾಗಿ ಅವು ಧಾರ್ಮಿಕ ತೆರೆಯ ಹಿಂದೆ ಕೆಲಸ ಮಾಡಿದ್ದರೂ, ಅವುಗಳ ಮೂಲ ನೆಲೆ ಬದುಕಿನ ಮೂಲಸ್ರೋತವಾದ ಆರ್ಥಿಕ ಜೀವನ ಸ್ವರೂಪವನ್ನು ಅವಲಂಬಿಸಿಕೊಂಡೇ ಇರುತ್ತದೆ."

ವಿಪುಲವಾದ ವಚನ ಸಾಹಿತ್ಯದಲ್ಲಿ ಇದರ ಎಳೆ ಸಿಕ್ಕುವುದು ಅಪರೂಪ. ಎಷ್ಟೋ ವಚನಗಳು ಸದಿಚ್ಛೆಯನ್ನು ಪ್ರಕಟಿಸುವ ಒಂದು ಸರಳ ಸುಭಾಷಿತ ಕ್ಕಿಂತಲೂ ಎತ್ತರಕ್ಕೆ ಹೋಗುವುದಿಲ್ಲ. 'ಮಾ ವಿದ್ವಿಷಾವಹೈ' ಎಂದು ಹೇಳುತ್ತಲೇ, ಸಮಾಜದ ಆಂತರಿಕ ಸನ್ನಿವೇಶಗಳಲ್ಲಿ ದ್ವೇಷವನ್ನು ಬಿತ್ತುವುದು ಸಾಧ್ಯವೆಂದು ಅನುಭವದಿಂದ ತಿಳಿದಿದೆ. ವ್ಯಕ್ತಿಯಲ್ಲಾಗಲಿ ಸಮಷ್ಟಿಯಲ್ಲಾಗಲಿ ಆತ್ಯಂತಿಕ ಬದಲಾವಣೆಯನ್ನು ತರುವುದು ವಚನ ಚಳುವಳಿಯ ಉದ್ದೇಶ. ಆದರೆ ಸಂಘಟನೆಯ ವಿರೂಪ, ಜನಶಕ್ತಿಯ ಅಭಾವ ಅಥವಾ ದೌರ್ಬಲ್ಯ, ವಿರೋಧಿ ವಲಯದ ಬಗೆಗಿನ ತಪ್ಪು ತಿಳುವಳಿಕೆ, ಅಸಮಗ್ರವಾದ ಪರಿವೀಕ್ಷಣೆ––ಹೀಗೆ ಹಲವು ಕಾರಣಗಳಿಂದ ಚಳುವಳಿಯ ಮೂಲೋದ್ದೇಶ ಫಲಿಸುವುದಿಲ್ಲ. ಇವನ್ನೆಲ್ಲಾ ಅವಗಣನೆಗೆ ಗುರಿಮಾಡದೆ ವಚನ ಸಾಹಿತ್ಯ ಮತ್ತು ವಚನ ಚಳುವಳಿಯನ್ನು ವಿಶ್ಲೇಷಿಸಿಕೊಳ್ಳುವುದು ಸೂಕ್ತ. ಹಾಗೆ ಮಾಡದಿದ್ದರೆ "ಎಲ್ಲರಿಗೂ ಒಳ್ಳೆಯದಾಗಲಿ" ಎಂದು ಹರಸಿ, ಮಾತಿನ ಸಮಾರಾಧನೆ ಮಾತ್ರ ಮಾಡಿದಂತಾಗುತ್ತದೆ. ವಚನಗಳು ಅದಷ್ಟನ್ನೇ ಮಾಡಿ ವಿರಮಿಸುವುದಿಲ್ಲ.

ವಚನ ಚಳುವಳಿಯು ಎಂತಹ ಪ್ರಬಲರ ವಿರುದ್ಧವಾಗಿದ್ದಿತು ಎಂತಹ ಅನೀತಿವಂತರೊಡನೆ ಸೆಣೆಸಬೇಕಾಗಿದ್ದಿತು ಎಂಬುದರ ಸುಳುಹು ಎಷ್ಟೋ ವಚನಗಳಲ್ಲಿ ದೊರೆಯುತ್ತದೆ.

"ಉಳ್ಳವರು ಶಿವಾಲಯ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರ ಹೊನ್ನಕಲಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ."

ಎಂದು ಬಸವಣ್ಣ ಹೇಳಿದರೆ, ಒಂದು ಇಡೀ ಜನವರ್ಗದ ಜೀವನ ಪ್ರಯಾಸದ ಅರಿವು ಮೂಡುತ್ತದೆ.

(ಹೆಚ್ಚಿನ ವಿವರಗಳಿಗೆ ಭಾಷಾ ಭಾರತಿ ಪ್ರಾಧಿಕಾರವು 2016 ರಲ್ಲಿ ಪ್ರಕಟಿಸಿರುವ "ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು" ಎಂಬುದರ 4 ನೆಯ ಸಂಪುಟವನ್ನು ಗಮನಿಸಬಹುದು. ಅದರಲ್ಲಿ ಪ್ರಸ್ತುತ ಲೇಖಕನದೂ ಒಂದು ದೀರ್ಘ ಲೇಖನವಿದೆ.)

ನಾಗರಾಜ ಅವರು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ವಚನಗಳಿಂದ ಆಯ್ದು ಪ್ರಕಟಿಸುತ್ತಿರುವ ' ವಚನಗಳ ಓದು ' ಸಂಕಲನವನ್ನು ಓದುವಾಗ, ವಚನಗಳೆಲ್ಲಾ ಏನೋ ಕಿವಿಗೆ ಇಂಪಾದ, ಬುದ್ಧಿಗೆ ಚುರುಕನ್ನು ನೀಡುವ ಸುಭಾಷಿತಗಳೆಂದಷ್ಟೇ ನೋಡದಿರೋಣ.ಅದು ಸಿ.ಪಿ.ನಾಗರಾಜ ಅವರ ಆಶಯವೂ ಆಗಿದೆ. ವಚನಗಳಲ್ಲಿ ಸುಭಾಷಿತಗಳು ವಿಪುಲವಾಗಿವೆ. ಸೊಗಸಾಗಿವೆ. ಆದರೆ ಮನಸ್ಸಿಗೆ ಆಹ್ಲಾದ ನೀಡಿ ಮುಕ್ತಾಯವಾಗುವ ಕಾವ್ಯದ ಪರಿ ವಚನಗಳದ್ದಲ್ಲ. ಅವು ಪ್ರಾಯೋಗಿಕ ಜಗತ್ತಿನ ತಿಳಿವಳಿಕೆ ಮತ್ತು ಮುಲಾಮು. ಎರಡಕ್ಕೂ ಸಿದ್ಧೌಷಧ. ಇಂತಹ ಪ್ರಚೋದನಾತ್ಮಕ ಮತ್ತು ಪ್ರಯೋಜನಕಾರಿ ಕೃತಿಯೊಂದನ್ನು ರಚಿಸಿ ಹೊರತಂದಿರುವ ಸಿ.ಪಿ.ನಾಗರಾಜ ಅವರಿಗೆ ಮತ್ತೊಮ್ಮೆ ಅಭಿನಂದನೆಗಳು ಮತ್ತು ಶುಭಾಶಯಗಳು.

ಫೆಬ್ರವರಿ 7 2025

ಜಿ.ರಾಮಕೃಷ್ಣ
ಬೆಂಗಳೂರು

ನನ್ನ ನುಡಿ

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ವಚನಗಳನ್ನು ಓದುತ್ತಿದ್ದಾಗ, ನನಗೆ ಮೆಚ್ಚುಗೆಯಾದ ಕೆಲವು ವಚನಗಳನ್ನು ಓದುಗರ ಗಮನಕ್ಕೆ ತರಬೇಕೆಂಬ ಆಸೆಯಾಯಿತು. ವಚನಗಳನ್ನು ಮೊದಲ ಬಾರಿ ಓದುವವರಿಗೆ ನೆರವಾಗಲೆಂಬ ಉದ್ದೇಶದಿಂದ ವಚನದಲ್ಲಿ ಜತೆಗೂಡಿರುವ ಪದಗಳನ್ನು ಬಿಡಿಸಿ ಬರೆದು, ಪದಗಳ ತಿರುಳನ್ನು ತಿಳಿಸುವ ಬರಹವನ್ನು ಗುರುಗಳಾದ ಕೆ.ವಿ.ನಾರಾಯಣ ಅವರಿಗೆ ತೋರಿಸಿದೆನು. ಅದನ್ನು ನೋಡಿದ ಅವರು "ಪ್ರತಿಯೊಂದು ವಚನದಲ್ಲಿ ಕಂಡುಬರುವ ವಚನಕಾರರ ಇಂಗಿತವನ್ನು ಕೆಲವು ಸಾಲುಗಳಲ್ಲಿ ಬರೆದರೆ ಒಳ್ಳೆಯದು. ಹೊಸ ತಲೆಮಾರಿನ ಓದುಗರಿಗೆ ಈ ರೀತಿಯ ಬರಹ ಉಪಯೋಗಕ್ಕೆ ಬರಬಹುದು. ಇದನ್ನು ಮುಂದುವರಿಸಿ" ಎಂದು ಸಲಹೆಯನ್ನು ನೀಡಿ, ನನ್ನ ಬರವಣಿಗೆಗೆ ಮಾರ್ಗದರ್ಶನವನ್ನು ನೀಡಿದರು.

ಬರಹವನ್ನು ಆನ್‌ಲೈನ್ ಮ್ಯಾಗಜೀನ್ 'ಹೊನಲು' ಮಿಂದಾಣಕ್ಕೆ (honalu.net) ಕಳುಹಿಸಿದೆನು. ಸೆಪ್ಟಂಬರ್ 2016 ರಿಂದ ಜೂನ್ 2023 ರ ವರೆಗೆ 190 ಕಂತುಗಳಲ್ಲಿ ಹೊನಲು ಮಿಂದಾಣದ ಸಂಪಾದಕ ವರ್ಗದವರು ವಚನಗಳ ಬರಹವನ್ನು ನಿರಂತರವಾಗಿ ಪ್ರಕಟಿಸಿದರು. ಮೂಡಿಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗ ಬಳಗದವರು ಮೆಚ್ಚುಗೆಯನ್ನು ಸೂಚಿಸಿದರು. ಈ ರೀತಿ ಈ ಬರಹ ರೂಪುಗೊಳ್ಳಲು ಗುರುಗಳಾದ ಕೆ.ವಿ.ನಾರಾಯಣ ಅವರ

ಮಾರ್ಗದರ್ಶನ, ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ನೀಡಿದ ಉತ್ತೇಜನವೇ ಕಾರಣವಾಗಿದೆ.

ಬರಹವನ್ನು ಹೊನಲು ಮಿಂದಾಣಕ್ಕೆ ಕಳುಹಿಸುವುದಕ್ಕೆ ಮೊದಲು ಗೆಳೆಯರಾದ ಆರ್.ಲಕ್ಷ್ಮೀನಾರಾಯಣ, ಆರ್.ಚಲಪತಿ, ಬಿ.ಎ.ಅನ್ನದಾನೇಶ್, ಸುಬ್ರಹ್ಮಣ್ಯಸ್ವಾಮಿ ಮತ್ತು ಟಿ.ಮಂಜುನಾಥ ಅವರಿಗೆ ಮಿಂಚಂಚೆಯ ಮೂಲಕ ಕಳುಹಿಸುತ್ತಿದ್ದೆನು. ಅವರು ಪ್ರತಿಯೊಂದು ವಚನದ ಟಿಪ್ಪಣಿಯನ್ನು ಪರಿಶೀಲಿಸಿ, ಅದರ ಸರಿ ತಪ್ಪುಗಳನ್ನು ಗಮನಿಸಿ, ತಪ್ಪುಗಳನ್ನು ತಿದ್ದಿ ಸರಿಪಡಿಸಿಕೊಳ್ಳಲು ಸೂಚನೆಗಳನ್ನು ನೀಡುತ್ತಿದ್ದರು.

ಈ ಬರಹದ ಕರಡು ಪ್ರತಿಯನ್ನು ನನ್ನ ಗುರುಹಿರಿಯರು ಮತ್ತು ಗೆಳೆಯರಿಗೆ ಅಂಚೆ ಮೂಲಕ ಕಳುಹಿಸಿದ್ದೆನು. ಅವರೆಲ್ಲರೂ ಓದಿ ನೋಡಿ ಉತ್ತೇಜನದ ನುಡಿಗಳನ್ನಾಡಿದ್ದಾರೆ. ನನ್ನೆಲ್ಲಾ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಯನ್ನು ತಿಳಿಸಿದ್ದಾಳೆ. ಗೆಳೆಯರಾದ ಆರ್.ಸುಧೀಂದ್ರ ಕುಮಾರ್ ಅವರು ನಾನು ಬರೆದು ಪ್ರಕಟಿಸಿದ ಪುಸ್ತಕಗಳನ್ನು ಓದುಗರಿಗೆ ತಲುಪಿಸಲು ನೆರವಾಗುತ್ತಿದ್ದಾರೆ. ಗೆಳೆಯರಾದ ಓಂಶಿವಪ್ರಕಾಶ್ ಅವರು ಮುಖಪುಟವನ್ನು ರಚಿಸಿಕೊಟ್ಟಿದ್ದಾರೆ. ಈ ಹೊತ್ತಿಗೆಯ ಪುಟ ವಿನ್ಯಾಸವನ್ನು ಕೆ.ಆರ್.ಹರೀಶ್ ಅವರು ಸಿದ್ಧಪಡಿಸಿದ್ದಾರೆ.

ಎಂ.ಎಂ.ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ ವಚನ ಸಂಪುಟಗಳಿಂದ ವಚನಗಳನ್ನು ಆಯ್ದುಕೊಂಡಿದ್ದೇನೆ.

- ಎಂ.ಎಂ.ಕಲಬುರ್ಗಿ: ಬಸವಣ್ಣನವರ ವಚನ ಸಂಪುಟ
- ಬಿ.ವ್ಹಿ.ಮಲ್ಲಾಪುರ: ಅಲ್ಲಮಪ್ರಭುದೇವರ ವಚನ ಸಂಪುಟ
- ಬಿ.ವ್ಹಿ.ಮಲ್ಲಾಪುರ: ಚೆನ್ನಬಸವಣ್ಣನವರ ವಚನ ಸಂಪುಟ
- ಎಸ್.ವಿದ್ಯಾಶಂಕರ: ಸಿದ್ಧರಾಮೇಶ್ವರ ವಚನ ಸಂಪುಟ
- ವೀರಣ್ಣ ರಾಜೂರ: ಶಿವಶರಣೆಯರ ವಚನ ಸಂಪುಟ
- ಎಂ.ಎಂ.ಕಲಬುರ್ಗಿ: ಸಂಕೀರ್ಣ ವಚನ ಸಂಪುಟ: ಒಂದು
- ಎಸ್.ವಿದ್ಯಾಶಂಕರ: ಸಂಕೀರ್ಣ ವಚನ ಸಂಪುಟ: ಎರಡು
- ಬಿ.ಆರ್.ಹಿರೇಮಠ: ಸಂಕೀರ್ಣ ವಚನ ಸಂಪುಟ: ಮೂರು

❖ ವೈ.ಸಿ.ಭಾನುಮತಿ: ಸಂಕೀರ್ಣ ವಚನ ಸಂಪುಟ: ಮೂರು (ಪ್ರಸ್ತುತ ಪರಿಷ್ಕರಣ ಸಂಪಾದಕಿ)

❖ ಬಿ.ಆರ್.ಹಿರೇಮಠ: ಸಂಕೀರ್ಣ ವಚನ ಸಂಪುಟ: ನಾಲ್ಕು

❖ ವೈ.ಸಿ.ಭಾನುಮತಿ: ಸಂಕೀರ್ಣ ವಚನ ಸಂಪುಟ: ನಾಲ್ಕು (ಪ್ರಸ್ತುತ ಪರಿಷ್ಕರಣ ಸಂಪಾದಕಿ)

ವಚನಗಳಿಗೆ ಟಿಪ್ಪಣಿಯನ್ನು ಬರೆಯುವಾಗ ಗುರು ಸಮಾನರಾದ ಡಿ.ಎನ್. ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ.

ಕನ್ನಡ ಸಾಹಿತ್ಯ ರಂಗದಲ್ಲಿ ವೈಚಾರಿಕ ಬರಹಕ್ಕೆ ದೊಡ್ಡ ಕೊಡುಗೆಯನ್ನು ಕೊಡುತ್ತಿರುವ ಗುರು ಸಮಾನರಾದ ಜಿ.ರಾಮಕೃಷ್ಣ ಅವರಿಂದ ಈ ನನ್ನ ಬರಹಕ್ಕೆ ಪ್ರತಿಕ್ರಿಯೆಯನ್ನು ತಿಳಿಯಬೇಕೆಂಬ ಆಸೆಯಿಂದ ಅವರನ್ನು ಕೋರಿಕೊಂಡಾಗ, ನನ್ನ ಕೋರಿಕೆಯನ್ನು ಮನ್ನಿಸಿ, ಉತ್ತೇಜನದ ರೂಪದಲ್ಲಿ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ.

ವಚನಗಳ ಓದಿಗೆ ನೆರವಾದ ಮೇಲ್ಕಂಡ ಎಲ್ಲಾ ಗುರುಹಿರಿಯರಿಗೆ, ಗೆಳೆಯರಿಗೆ ಮತ್ತು ಸಂಪಾದಕ ವರ್ಗದವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ.ನಾಗರಾಜ

ವಚನಗಳ ಓದಿಗೆ ನೆರವಾದ ಪುಸ್ತಕಗಳು

1) **ಎಂ.ಎಂ.ಕಲಬುರ್ಗಿ**
ಪ್ರಧಾನ ಸಂಪಾದಕರು
ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಯ ಮಹಾ ಸಂಪುಟಗಳು
ಬಸವಯುಗದ ವಚನ ಮಹಾ ಸಂಪುಟ: ಒಂದು
ಬಸವೋತ್ತರಯುಗದ ವಚನ ಮಹಾ ಸಂಪುಟ: ಎರಡು
ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ತೃತೀಯ ಆವೃತ್ತಿ (ಬೈಬಲ್ ಮುದ್ರಣ ಮಾದರಿ). 2016

2) **ಬಾ.ರಂ.ಸುಂಠನಕರ್** (ಮೂಲ)
ಚಂದ್ರಕಾಂತ ಪೋಕಳೆ (ಕನ್ನಡಕ್ಕೆ):
ಸಂತ ಚಳುವಳಿ
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು. 2019

3) **ಜಿ.ಎಸ್.ಶಿವರುದ್ರಪ್ಪ**
ಸಮಗ್ರ ಗದ್ಯ–1
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು. 2009–ನಾಲ್ಕನೆಯ ಮುದ್ರಣ

4) **ಎಂ. ಚಿದಾನಂದಮೂರ್ತಿ**
ವಚನ ಸಾಹಿತ್ಯ
ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು.1975

5) **ಕೆ.ವಿ.ನಾರಾಯಣ**
ತೊಂಡು ಮೇವು–ಕಂತೆ ಎರಡು
ಬರಹ ಪಬ್ಲಿಷಿಂಗ್ ಹೌಸ್
ಬೆಂಗಳೂರು. 2010

ಹನ್ನೆರಡನೆಯ ಶತಮಾನದ ವಚನಕಾರರು

ಎಂ.ಎಂ.ಕಲುಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಈ ಮೊದಲು ಪ್ರಕಟಗೊಂಡಿದ್ದ ಹದಿನೈದು ವಚನ ಸಂಪುಟಗಳನ್ನು ಜತೆಗೂಡಿಸಿ "ಬಸವ ಯುಗದ ವಚನ ಮಹಾ ಸಂಪುಟ–ಒಂದು" ಮತ್ತು "ಬಸವೋತ್ತರಯುಗದ ವಚನ ಮಹಾ ಸಂಪುಟ–ಎರಡು" ಎಂಬ ಹೆಸರಿನಲ್ಲಿ ಎರಡು ಸಂಪುಟಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ 2016 ನೆಯ ಇಸವಿಯಲ್ಲಿ ಪ್ರಕಟಿಸಿದೆ. ಮೊದಲನೆಯ ಸಂಪುಟದಲ್ಲಿ ಹನ್ನೆರಡನೆಯ ಶತಮಾನದಲ್ಲಿ 177 ಮಂದಿ ಶಿವಶರಣರು ಮತ್ತು 33 ಮಂದಿ ಶಿವಶರಣೆಯರು ರಚಿಸಿದ ಒಟ್ಟು 14,895 ವಚನಗಳಿವೆ. ಎರಡನೆಯ ಸಂಪುಟದಲ್ಲಿ ಹದಿನೈದರಿಂದ ಹದಿನೇಳನೆಯ ಶತಮಾನದ ಅವಧಿಯಲ್ಲಿ 40 ಮಂದಿ ಶಿವಶರಣರು ರಚಿಸಿದ 7,951 ವಚನಗಳು. ಎರಡು ಸಂಪುಟಗಳಲ್ಲಿ ಒಟ್ಟು 250 ಮಂದಿ ವಚನಕಾರರು ರಚಿಸಿರುವ 22,846 ವಚನಗಳು ದೊರಕುತ್ತವೆ.

ಬಸವಯುಗದ ವಚನ ಮಹಾ ಸಂಪುಟ–ಒಂದರಲ್ಲಿ ಸಂಕಲನಗೊಂಡಿರುವ 14,895 ವಚನಗಳಿಂದ 170 ವಚನಗಳನ್ನು ಮತ್ತು ವಚನಗಳಿಂದ ಆಯ್ದ 150 ಸಾಲುಗಳನ್ನು ಆಯ್ಕೆ ಮಾಡಿಕೊಂಡು ಈ ಹೊತ್ತಗೆಯಲ್ಲಿ ಟಿಪ್ಪಣಿಯನ್ನು ಬರೆದಿದ್ದೇನೆ. ವಚನಗಳ ಆಯ್ಕೆಗೆ ಜಿ.ಎಸ್.ಶಿವರುದ್ರಪ್ಪನವರು 'ವಚನಕಾರರ ವಿಚಾರ ಕ್ರಾಂತಿ' ಎಂಬ ಬರಹದಲ್ಲಿ ಹೇಳಿರುವ ಈ ಕೆಳಕಂಡ ನುಡಿಗಳು ನನಗೆ ಮಾರ್ಗದರ್ಶಕವಾಗಿವೆ.

"ಯಾವ ಯಾವ ಜಡ್ಡುಗಟ್ಟಿದ ಕಾಲಗಳಲ್ಲಿ ಸೂಕ್ಷ್ಮ ಸಂವೇದನೆ ಉಳ್ಳವರೂ, ವಿಚಾರವಂತರೂ ಆದ ಕೆಲವೇ ಜನ ತಮ್ಮ ಸುತ್ತಣ ಪರಿಸ್ಥಿತಿಯನ್ನೂ ಮತ್ತು

ಅದನ್ನು ನಿಯಂತ್ರಿಸಿಕೊಂಡು ಬಂದ ರೂಢಿಗತವಾದ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನೂ ಪ್ರಶ್ನಿಸಲು ತೊಡಗುತ್ತಾರೋ, ಪ್ರತಿಭಟಿಸಲು ತೊಡಗುತ್ತಾರೋ ಅಂತಹ ಕಾಲಗಳನ್ನು ಸಂಕ್ರಮಣ ಕಾಲಗಳೆಂದು ಕರೆಯ ಬಹುದು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಇಂತಹ ಒಂದು ಸಂಕ್ರಮಣ ಕಾಲ. ಹನ್ನೆರಡನೆಯ ಶತಮಾನದ ವಚನಕಾರರು ಅಥವಾ ಶಿವಶರಣಶರಣೆಯರು ಮೂಲತಃ ನಿಷ್ಠೂರ ವಿಮರ್ಶಕರು. ಪರಂಪರೆಯನ್ನು ಕುರಿತು, ಧರ್ಮವನ್ನು ಕುರಿತು, ದೇವರನ್ನು ಕುರಿತು, ತಮ್ಮ ಸುತ್ತಮುತ್ತಣ ಸಾಮಾಜಿಕ ಪರಿಸರವನ್ನು ಕುರಿತು, ಎಲ್ಲಕ್ಕೂ ಮಿಗಿಲಾಗಿ ತಮ್ಮನ್ನೇ ಕುರಿತು ವಸ್ತುನಿಷ್ಠವಾಗಿ ವಿಮರ್ಶೆ ಮಾಡಿದವರು." ಜಿ.ಎಸ್.ಶಿವರುದ್ರಪ್ಪನವರ ಈ ನಿಲುವಿಗೆ ಪೂರಕವಾದ ವಚನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಹನ್ನೆರಡನೆಯ ಶತಮಾನವೆಂದರೆ ಕ್ರಿ.ಶ.1101 ರಿಂದ 1200 ವರೆಗಿನ ಕಾಲಾವಧಿ. ಬಸವಯುಗದ ವಚನಕಾರರಲ್ಲಿ ಕ್ರಿ.ಶ.1120 ರಲ್ಲಿದ್ದ ಜೇಡರ ದಾಸಿಮಯ್ಯನನ್ನು ಆದ್ಯ ವಚನಕಾರನೆಂದು ಸಾಹಿತ್ಯ ಚರಿತ್ರಕಾರರು ಗುರುತಿಸಿದ್ದಾರೆ. ಕ್ರಿ.ಶ.1130ರಲ್ಲಿದ್ದ ಬಸವಣ್ಣ ಮತ್ತು ಅವನ ಸಮಕಾಲೀನರು ನಡೆಸಿದ ಸಾಮಾಜಿಕ ಆಂದೋಲನದಲ್ಲಿ ಪಾಲ್ಗೊಂಡ ಸಾವಿರಾರು ಶಿವಶರಣ ಶರಣೆಯರಲ್ಲಿ ಮತ್ತು ವಚನಗಳನ್ನು ರಚಿಸಿದ ನೂರಾರು ಮಂದಿ ವಚನಕಾರರಲ್ಲಿ ಬಸವಣ್ಣ, ಮಧುವರಸಯ್ಯ, ಪಂಡಿತಾರಾಧ್ಯ ಮುಂತಾದ ಬೆರಳೆಣಿಕೆಯ ವಚನಕಾರರನ್ನು ಬಿಟ್ಟರೆ ಉಳಿದವರೆಲ್ಲರೂ ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಕದಿರ ರೆಮ್ಮವ್ವೆಯಂತಹ ಶೂದ್ರರು ಮತ್ತು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯನಂತಹ ಪಂಚಮರೇ ಹೆಚ್ಚಾಗಿದ್ದಾರೆ.

ಹನ್ನೆರಡನೆಯ ಶತಮಾನದ ವಚನಕಾರ ಬಗ್ಗೆ ಕೆ.ವಿ.ನಾರಾಯಣ ಅವರು "ವಚನ ಚಳುವಳಿ:ಟಿಪ್ಪಣಿಗಳು" ಎಂಬ ಬರಹದಲ್ಲಿ ಈ ರೀತಿ ಹೇಳಿದ್ದಾರೆ.

" ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಒಂದು ಭಾಗ ಅನುಭವಿಸಿದ ತಲ್ಲಣ ಸಾಮಾಜಿಕವಾಗಿ ಮಹತ್ವ ಪಡೆದಿದೆ. ಆಗ ನಡೆದ ಘಟನೆಗಳಿಗೆ ಮತ್ತು ಪರಿಣಾಮವಾಗಿ ಆದ ಸ್ಥಿತ್ಯಂತರಗಳಿಗೆ ಯಾವುದೇ ವ್ಯಕ್ತಿಯನ್ನು ಬೆರಳು ಮಾಡಿ ತೋರಿಸುವುದು ಸಲ್ಲದು. ಒಂದು ಸಮಾಜ ಸದಾಕಾಲವೂ ಪರಸ್ಪರ ವಿರೋಧವನ್ನುಳ್ಳ ಸಂಗತಿಗಳ ಮೊತ್ತವಾಗಿರುತ್ತದೆ. ಈ ವಿರೋಧಗಳು ಒಂದು ಕಾಲದಲ್ಲಿ ಪರಸ್ಪರ ಮುಖಾಮುಖಿಯಾಗುತ್ತವೆ. ಆಗಲೇ ಬದಲಾವಣೆಗಳು

ನಡೆಯುವುದು. ಹನ್ನೆರಡನೆಯ ಶತಮಾನದ ಸಮಾಜವೂ ಇಂತಹ ಒಂದು ಸ್ಥಿತಿಯಲ್ಲಿ ಇತ್ತು. ಹಾಗಿದ್ದರೆ ಎದುರುಬದಿರಾಗಿ ನಿಂತ ವಿರೋಧಗಳು ಯಾವುವು? ಈ ಪ್ರಶ್ನೆಗೆ ಉತ್ತರ ಪಡೆಯಲು ನಾವು ವಚನಗಳಿಗೆ ಮೊರೆಹೋಗಬೇಕು."

ಉತ್ತರವನ್ನು ಪಡೆಯಲು ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಜನಸಮುದಾಯದ ಧಾರ್ಮಿಕ ಆಚರಣೆ, ಸಾಮಾಜಿಕ ರಚನೆ, ರಾಜಕೀಯ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿತಿಗತಿಯ ಸ್ವರೂಪಗಳು ಹೇಗಿದ್ದವು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಅಂದಿನ ಜನಸಮುದಾಯದ ಬದುಕನ್ನು ಹೊರತುಪಡಿಸಿ ವಚನಗಳನ್ನು ಓದಲು ಆಗುವುದಿಲ್ಲ.

ತೀರ್ಥಂಕರರ ಆರಾಧನೆಯ ಜೈನಧರ್ಮ, ವಿಷ್ಣುವಿನ ಆರಾಧನೆಯ ವೈಷ್ಣವ ಧರ್ಮ ಮತ್ತು ಶಿವನ ಆರಾಧನೆಯ ಶೈವ ಧರ್ಮಗಳು ಸಮಾನಾಂತರವಾಗಿ ಜನಸಮುದಾಯದಲ್ಲಿ ನೆಲೆಸಿದ್ದವು. ಶೈವ ಧರ್ಮದಲ್ಲಿ ಏಕ ದೇವೋಪಾಸನೆ ಯಿದ್ದರೆ, ವೈಷ್ಣವ ಧರ್ಮದಲ್ಲಿ ವಿಷ್ಣುವಿನ ಅವತಾರಗಳ ನಂಬಿಕೆಯಿದ್ದುದರಿಂದ ಹಲವಾರು ದೇವರುಗಳ ಆರಾಧನೆಯು ನಡೆಯುತ್ತಿತ್ತು. ಇದರ ಜತೆಜತೆಗೆ ಮರಗಿಡಬಳ್ಳಿಗಳನ್ನು ಮತ್ತು ಕಲ್ಲು, ಮಣ್ಣು, ಮರ ಮತ್ತು ಲೋಹದ ಮೂರ್ತಿ ಗಳನ್ನೇ ದೇವರೆಂದು ನಂಬಿ ಪೂಜಿಸುತ್ತಿದ್ದ ಜನಪದವಿತ್ತು. ಜನಸಮುದಾಯದ ಹೆಚ್ಚಿನ ಭಾಗ ಮೇಲು ಕೀಳಿನ ಜಾತಿ ವ್ಯವಸ್ಥೆಗೆ ಒಳಪಟ್ಟಿದ್ದರು. ಜಾತಿಗಳಿಗೆ ಸೀಮಿತವಾದ ಕಸುಬುಗಳಿದ್ದವು. ಜಾತಿ ವ್ಯವಸ್ಥೆಯೇ ಜನರ ಬದುಕನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಶಕ್ತಿಯಾಗಿತ್ತು.

ರಾಜಕೀಯ ವ್ಯವಸ್ಥೆಯಲ್ಲಿ ಚಕ್ರವರ್ತಿ, ರಾಜ, ಸಾಮಂತ ಮತ್ತು ಪಾಳೆಯಗಾರರು ಬೇರೆ ಬೇರೆ ಹಂತಗಳಲ್ಲಿ ಅಧಿಕಾರದ ಹತೋಟಿಯನ್ನು ಜನಸಮುದಾಯದ ಮೇಲೆ ಹೊಂದಿದ್ದರು. ಊಳಿಗಮಾನ್ಯ ಪದ್ಧತಿಯಿಂದಾಗಿ 'ಉಳ್ಳವರು ಮತ್ತು ಇಲ್ಲದವರು' ಎಂಬ ವರ್ಗಭೇದವಿತ್ತು. ಅಧಿಕಾರಸ್ಥರ ಗದ್ದುಗೆಯನ್ನು ಉಳಿಸುವು ದಕ್ಕಾಗಿ ಮತ್ತು ಸಿರಿವಂತರ ಸಂಪತ್ತನ್ನು ಬೆಳೆಸುವುದಕ್ಕಾಗಿ, ಆಸ್ತಿಪಾಸ್ತಿ ಮತ್ತು ಸಂಪತ್ತಿಲ್ಲದ ಜನಸಾಮಾನ್ಯರು ನಿರಂತರವಾಗಿ ದುಡಿಯುವುದಲ್ಲದೆ, ದುಡಿದುದರಲ್ಲಿ ಬಗೆಬಗೆಯ ತೆರಿಗೆಗಳನ್ನು ಆಳುವ ದಣಿಗಳಿಗೆ ಕಟ್ಟುತ್ತಾ, ತೀವ್ರವಾದ ಶೋಷಣೆಗೆ ಗುರಿಯಾಗಿದ್ದರು. ಹನ್ನೆರಡನೆಯ ಶತಮಾನದಲ್ಲಿ ಶ್ರೀಸಾಮಾನ್ಯರ ಬದುಕಿನ ರೀತಿಯನ್ನು ಎಂ.ಚಿದಾನಂದಮೂರ್ತಿಯವರು ಈ ರೀತಿ ವಿವರಿಸಿದ್ದಾರೆ.

‘ಮನುಷ್ಯನಿಗೆ ಸಾಮಾಜಿಕ ಸ್ಥಾನ (Social Status), ಅಧಿಕಾರ (Power) ಮತ್ತು ಹಣ ಇವು ಮೂರು ಬೇಕು–ಇವುಗಳನ್ನು ಪಡೆಯಬಯಸುವವರು ಒಂದಲ್ಲ ಒಂದು ರೀತಿಯ ಸೂಕ್ಷ್ಮವೂ ಕೆಲವೆಡೆ ಸ್ಪಷ್ಟವೂ ಆದ ಶೋಷಣೆಗೆ ಕೈಹಾಕುತ್ತಾರೆ. ಪ್ರಾಚೀನ ಕರ್ನಾಟಕದಲ್ಲಿ ಈ ಮೂರನ್ನು ಪಡೆದು ಶಿಷ್ಟ ಸಮಾಜದ ಭಾಗಗಳೆನ್ನಿಸಿಕೊಂಡಿದ್ದವರು ಬ್ರಾಹ್ಮಣರು, ದೊರೆಗಳು ಮತ್ತು ವರ್ತಕರು. ಬ್ರಾಹ್ಮಣರಿಗೆ ಹುಟ್ಟಿನಿಂದಲೇ ಒಂದು ಸ್ಥಾನ ಲಭ್ಯವಾಗುತ್ತದೆ. ಜ್ಞಾನದ ಕೀಲಿಯನ್ನು ಹಿಡಿದಿದ್ದ ಇವರ ಸಲಹೆ, ಸೂಚನೆ, ಮಾರ್ಗದರ್ಶನಗಳು ಆಳುವವರಿಗೆ ಬೇಕು. ರಾಜರು ಅವರಿಗೆ ಸಮೃದ್ಧವಾಗಿ ದತ್ತಿಗಳನ್ನು ಕೊಡುವುದರ ಮೂಲಕ ಮತ್ತು ಅವರಿಗೆ ರಾಜ್ಯದಲ್ಲಿ ಬಹುಮುಖ್ಯ ಅಧಿಕಾರ ಸ್ಥಾನಗಳನ್ನು ಕೊಡುವುದರ ಮೂಲಕ ಅವರ ಸಹಕಾರವನ್ನು ಗೆದ್ದುಕೊಳ್ಳುತ್ತಿದ್ದರು. ಆಸ್ಥಾನಗಳಲ್ಲಿದ್ದುಕೊಂಡು, ರಾಜಾಶೀರ್ವಾದವನ್ನೂ ರಾಜ ಪ್ರಶಂಸೆಯನ್ನೂ ಮಾಡಿ ಬ್ರಾಹ್ಮಣರು ತಮಗೆ ದೊರೆತ ದತ್ತಿಗಳ ಸಹಾಯದಿಂದ ಜೀವಿತವನ್ನು ನಡೆಸುತ್ತಿದ್ದರು. ರಾಜ್ಯಾದಾಯದ ದೃಷ್ಟಿಯಿಂದ ವರ್ತಕರು ದೇಶದ ಬಹು ಮುಖ್ಯ ಭಾಗವಾಗಿದ್ದರು.

ಈ ಮೂರು ವರ್ಗಗಳೂ ತಮಗೆ ಮುಖ್ಯವಾಗಿ ಬೇಕಾದ ಸಾಮಾಜಿಕ ಸ್ಥಾನ, ಅಧಿಕಾರ ಮತ್ತು ಹಣಕ್ಕೆ ಪರಸ್ಪರ ಸಹಾಯಕರಾಗಿ ನಿಲ್ಲುವುದರಲ್ಲಿ ಆಶ್ಚರ್ಯ ವೇನಿದೆ? ಆದರೆ ಈ ಮೂವರೂ ತಮ್ಮ ಸೌಲಭ್ಯವನ್ನು ಬೆಳೆಸಿಕೊಳ್ಳುವುದು ಬಹು ಸಂಖ್ಯಾತರಾಗಿದ್ದ ಸಾಮಾನ್ಯವರ್ಗದವರಿಂದ. ಕರ್ನಾಟಕದ ಸಾವಿರಾರು ಶಾಸನ ಗಳನ್ನು ನೋಡಿದರೆ ಅಲ್ಲೆಲ್ಲ ತುಂಬಿರುವುದು ಅಥವಾ ಎದ್ದು ಕಾಣುವುದು ಮೇಲಿನ ಮೂರು ವರ್ಗಗಳ ಕತೆಯೇ. ಬೌದ್ಧಿಕ ಅಥವಾ ಧಾರ್ಮಿಕ ಚಟುವಟಿಕೆಗಳಿಂದ, ಅಧಿಕಾರ, ಐಶ್ವರ್ಯಗಳಿಂದ ದೂರವಾದ ಸಾಮಾನ್ಯ ಜನತೆಯು ಇರುವುದು ಯಾರಾದರೂ ಶ್ರೀಮಂತರು ದೇವಸ್ಥಾನ ಕಟ್ಟಿಸಿದರೆ ಅದಕ್ಕೆ ತಮ್ಮ ಕೈಲಾದಷ್ಟು ದತ್ತಿ ಕೊಡುವುದಕ್ಕೆ; ದುಡಿದು ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ: ಮತ್ತು ಯುದ್ಧ ಗಳಲ್ಲಿ ಹೋರಾಡಿ ಸಾಯುವುದಕ್ಕೆ. ಈ ಸಾಮಾನ್ಯರೇ ನಿಜವಾಗಿಯೂ ದೇಶದ ಆಸ್ತಿ ಅಥವಾ ಅವರೇ ನಿಜವಾಗಿ ದೇಶ. ಆದರೆ ಅವರ ಸೌಲಭ್ಯಗಳನ್ನು ತಮ್ಮ ಸುಖಕ್ಕೆ ಹರಿಸಿಕೊಂಡ ರಾಜರ, ದಂಡನಾಯಕರ, ಮಂತ್ರಿಗಳ, ಪುರೋಹಿತರ, ವರ್ತಕರ ಕತೆಗಳನ್ನು ದಾನ ಶಾಸನಗಳು ಸುದೀರ್ಘವಾಗಿ ಬಣ್ಣಿಸುತ್ತವೆ. ಚಿಕ್ಕ ಚಿಕ್ಕ ಪಾಠವಿರುವ (Text) ವೀರಗಲ್ಲುಗಳಲ್ಲಿ ಸಾಮಾನ್ಯರ ಕತೆ ದೊರಕುತ್ತದೆ. ಸುಖಪಡಲು ಅವರು; ದುಡಿದು ಸಾಯಲು ಇವರು. ಇದು ಅಂದಿನ ಕರ್ನಾಟಕದ ಕತೆ.” (ಎಂ.ಚಿದಾನಂದಮೂರ್ತಿ. 1975. ವಚನ ಸಾಹಿತ್ಯ)

ಉಳ್ಳವರು ತಿನ್ನುವ ಆಹಾರವನ್ನು ಬೆಳೆಯುವ, ಉಡುವ ಬಟ್ಟೆಯನ್ನು ನೆಯ್ಯುವ ಮತ್ತು ವಾಸಿಸುವ ಮನೆಯನ್ನು ಕಟ್ಟುವ ಕಾಯಕದಲ್ಲಿ ತೊಡಗಿರುವ ಸಾಮಾನ್ಯರೆಲ್ಲರೂ ಜಾತಿ ಶ್ರೇಣಿಯಲ್ಲಿ ಕೆಳವರ್ಗದ ಶೂದ್ರರಾಗಿದ್ದರು ಮತ್ತು ಪಂಚಮರಾಗಿದ್ದರು. ತಮ್ಮ ದುಡಿಮೆಯಿಂದಲೇ ಉತ್ಪಾದನೆಗೊಂಡ ಅನ್ನ, ಬಟ್ಟೆ ಮತ್ತು ವಸತಿಯ ಮೊತ್ತದಲ್ಲಿ ತಾವು ನೆಮ್ಮದಿಯಿಂದ ಬಾಳುವುದಕ್ಕೆ ಅಗತ್ಯ ವಾದಷ್ಟನ್ನು ಪಡೆಯಲಾಗದೆ, ಕಡುಬಡತನದಲ್ಲಿಯೇ ಬೇಯುತ್ತ ದುಡಿಯುತ್ತಿದ್ದ ಸಾಮಾನ್ಯರು ತಮ್ಮ ಹೀನ ಸ್ಥಿತಿಗತಿಗಳಿಗೆ ಕಾರಣವಾದ ಸನ್ನಿವೇಶ ಮತ್ತು ವ್ಯಕ್ತಿಗಳ ಬಗ್ಗೆ ಚಿಂತಿಸತೊಡಗಿದಾಗ, ಪರಸ್ಪರ ವಿರೋಧವುಳ್ಳ ಸಂಗತಿಗಳು ಅವರಿಗೆ ಮನದಟ್ಟಾಗತೊಡಗಿದವು.

ಅದೇನೆಂದರೆ ಸಮಾಜದ ಸಂಪತ್ತನ್ನು ಜಾತಿ, ಧರ್ಮ ಮತ್ತು ದೇವರ ಹೆಸರಿನಲ್ಲಿ ತಮ್ಮ ವಶದಲ್ಲಿಟ್ಟುಕೊಂಡು ಬಾಳುತ್ತಿರುವ ಮೇಲು ಜಾತಿ ಮತ್ತು ಮೇಲು ವರ್ಗದವರ ಕೈಯಲ್ಲಿ ತಾವು ಸಿಲುಕಿ ನರಳುತ್ತಿರುವುದು. ಯಾವ ಜಾತಿ, ಧರ್ಮ, ದೇವರುಗಳು ಉಳ್ಳವರಿಗೆ ಎಲ್ಲ ಬಗೆಯ ಸಂಪತ್ತನ್ನು ನೀಡಿವೆಯೆಂದು ಹೇಳಲಾಗುತ್ತಿದೆಯೋ, ಅದೇ ಜಾತಿ, ಧರ್ಮ ಮತ್ತು ದೇವರುಗಳಿಂದ ತಾವು ನಿರ್ಗತಿಕರಾಗಿ ಬಾಳುತ್ತಿರುವುದು. ಉಳ್ಳವರಿಗೆ ನೆರವಾಗಿ ತಮ್ಮ ಬದುಕಿನ ದುರಂತ ಗಳಿಗೆ ಕಾರಣವಾಗಿರುವ ಈ ಮೂರು ಶಕ್ತಿಗಳ ವಿರುದ್ಧ ದುಡಿಯುವ ವರ್ಗದ ಜನರು ಒಗ್ಗೂಡಿ ಹೋರಾಡಲು ಅಣಿಯಾದಾಗ ನಡೆದ ಆಂದೋಲನದ ಸಂದರ್ಭದಲ್ಲಿ ಹೊರಹೊಮ್ಮಿದ ವಿಚಾರ ಸರಣಿಯೇ ವಚನಗಳ ರಚನೆಗೆ ಕಾರಣವಾಗಿದೆ.

ವಚನಗಳನ್ನು 'ಸೂಳ್ನುಡಿ' ಎಂದು ಕರೆಯುತ್ತಾರೆ. ಸೂಳ್ ಮತ್ತು ನುಡಿ ಎಂಬ ಎರಡು ಪದಗಳು ಸೇರಿ 'ಸೂಳ್ನುಡಿ' ಎಂದಾಗಿದೆ. 'ಸೂಳ್' ಎಂದರೆ ಸರದಿ, ವ್ಯಕ್ತಿಯ ಪಾಲಿಗೆ ದೊರೆತ ಅವಕಾಶ. ನುಡಿ ಎಂದರೆ 'ಮಾತು/ಸೊಲ್ಲು'. ಸರದಿಯ ಪ್ರಕಾರ ಆಡಿದ ಮಾತಿಗೆ ಸೂಳ್ನುಡಿ ಎಂದು ಹೆಸರು. ಶಿವಶರಣಶರಣೆಯರು ಸಾಮಾಜಿಕ ಆಂದೋಲನದ ಸಂದರ್ಭದಲ್ಲಿ ತಮ್ಮ ವ್ಯಕ್ತಿಗತವಾದ ನಡೆನುಡಿ ಗಳನ್ನು ಒರೆಹಚ್ಚಿ ನೋಡಿಕೊಳ್ಳುವಾಗ ಮತ್ತು ಸಮಾಜದ ಅರೆಕೊರೆಗಳನ್ನು ಕುರಿತು ಒಬ್ಬರು ಮತ್ತೊಬ್ಬರೊಡನೆ ಚರ್ಚಿಸುವಾಗ ಆಡಿದ ನುಡಿಗಳೇ ವಚನ ಗಳಾಗಿ ರೂಪುಗೊಂಡಿರಬಹುದು ಎಂಬುದನ್ನು ಸೂಳ್ನುಡಿ ಎಂಬ ಪದ ಸೂಚಿಸುತ್ತದೆ.

1948ರಲ್ಲಿ 'ಮಹಾರಾಷ್ಟ್ರದ ಸಂತರ ಚಾರಿತ್ರಿಕ ಕಾರ್ಯ' ಎಂಬ ಹೊತ್ತಿಗೆಯನ್ನು ಬಾ.ರಂ.ಸುಂಠಣಕರ್ ಎಂಬುವರು ರಚಿಸಿದ್ದರು. ಅದನ್ನು 'ಸಂತ ಚಳವಳಿ' ಎಂಬ ಹೆಸರಿನಲ್ಲಿ ಚಂದ್ರಕಾಂತ ಪೋಕಳೆ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಹೊತ್ತಿಗೆಯಲ್ಲಿ ಬಾ.ರಂ.ಸುಂಠಣಕರ್ ಅವರು 13–17ನೆಯ ಶತಮಾನದವರೆಗೆ ಮಹಾರಾಷ್ಟ್ರದಲ್ಲಿ ಜ್ಞಾನದೇವನಿಂದ ತುಕಾರಾಮನ ವರೆಗೆ ಸಂತರ ಪರಂಪರೆಯಲ್ಲಿ ನಡೆದ ಸಂತರ ಚಳವಳಿಯ ಆಗುಹೋಗುಗಳನ್ನು ಕುರಿತು ಈ ರೀತಿ ವಿಶ್ಲೇಷಣೆ ಮಾಡಿದ್ದಾರೆ.

'ಜನಸಾಮಾನ್ಯರು ಸಂತರನ್ನು ಕೇವಲ ಭಕ್ತಿಯ ದೃಷ್ಟಿಯಿಂದ ನೋಡುತ್ತಾರೆ. ಸಂತರು ಐತಿಹಾಸಿಕ ಕಾರ್ಯ ಮಾಡಿದ್ದಾರೆ ಎಂಬ ಕಲ್ಪನೆಯೂ ಅವರ ಮನವನ್ನು ಸ್ಪರ್ಶಿಸುವುದಿಲ್ಲ. ತಮ್ಮನ್ನು ಕ್ರಾಂತಿಕಾರಿ ಎಂದು ಭಾವಿಸುವ ಕೆಲ ಲೇಖಕರು ಸಂತರನ್ನು ಪ್ರತಿಕ್ರಾಂತಿಕಾರಕರೆಂದು ಹಣೆಪಟ್ಟಿ ಕಟ್ಟಿ ಮುಕ್ತರಾಗುತ್ತಾರೆ. ಸಮಾಜಶಾಸ್ತ್ರದ ದೃಷ್ಟಿಯಿಂದ ಸಂತರು ತಮ್ಮ ಕಾಲದಲ್ಲಿ ಯಾವ ಕಾರ್ಯವನ್ನು ಕೈಗೊಂಡರು ಯಾವ ಸ್ಥಿತ್ಯಂತರವನ್ನು ತಂದರು ಎಂಬ ವಿವೇಚನೆ ಈವರೆಗೂ ಆಗಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಸಂತರ ಕಾರ್ಯದ ಬಗೆಗೆ ಯೋಚಿಸುವಾಗ ಸಂತರು ಯಾವ ಕಾಲದಲ್ಲಿ ಬಾಳಿ ಬದುಕಿದರೋ, ಆಗ ಅವರು ವ್ಯವಹರಿಸಿದ ಸಮಾಜದ ಅವಸ್ಥೆ ಹೇಗಿತ್ತು, ಆ ಸಮಾಜದ ಅಗತ್ಯವೇನಿತ್ತು, ಆ ಅಗತ್ಯವನ್ನು ಪೂರೈಸಲು ಸಂತರು ನೀಡಿದ ಪಾಲೇನು, ಅದರಿಂದ ಸಮಾಜದ ಮೇಲಾದ ಪರಿಣಾಮವೇನು, ಚರಿತ್ರೆಯ ಪ್ರವಾಹವನ್ನು ಅವರಿಂದ ಬದಲಾಯಿಸುವುದು ಸಾಧ್ಯವಾಯಿತೇ ಇಲ್ಲವೇ – ಮುಂತಾದ ವಿಷಯಗಳ ಬಗೆಗೆ ಪ್ರಮುಖವಾಗಿ ಯೋಚಿಸುವಂತಾಗಬೇಕು. ಅಂದರೆ ಸಂತರ ಕಾಲದ ಐತಿಹಾಸಿಕ ಕ್ರಮ ಆ ಕ್ರಮವನ್ನು ಅನುಸರಿಸಿ ಸಂತರು ಮಾಡಿದ ಸಾಮಾಜಿಕ ಕಾರ್ಯದ ಬಗೆಗೆ ವಿವೇಚನೆಯಾಗಬೇಕು.'

ಈ ಹೊತ್ತಿಗೆಯಲ್ಲಿ ಬಾ.ರಂ.ಸುಂಠಣಕರ್ ಹೇಳಿರುವ ಈ ಮೇಲ್ಕಂಡ ನುಡಿಗಳು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ಚಳವಳಿಯನ್ನು ತಿಳಿದುಕೊಳ್ಳುವುದಕ್ಕೆ ನೆರವಾಗುತ್ತವೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಒಡನಾಡಿಗಳಾಗಿದ್ದ ಶಿವಶರಣಶರಣೆಯರ ಹೆಸರುಗಳ ಜತೆಜತೆಯಲ್ಲಿಯೇ ಅವರ ಮಾಡುತ್ತಿದ್ದ ಕಸುಬು ಇಲ್ಲವೇ ಜಾತಿ ಸೂಚಕ ಸಂಗತಿಗಳು ಸೇರಿಕೊಂಡಿವೆ. ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ, ಮಡಿವಾಳ ಮಾಚಿದೇವ, ಮೇದರ ಕೇತಯ್ಯ, ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ,

ಕೊಟ್ಟಣದ ಸೋಮಮ್ಮ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ ಮುಂತಾದ ನೂರಾರು ಮಂದಿ ಶಿವಶರಣಶರಣೆಯರೆಲ್ಲರೂ ಜನಸಮುದಾಯದ ಬದುಕಿಗೆ ಅಗತ್ಯವಾದುದೆಲ್ಲವನ್ನೂ ಉತ್ಪಾದನೆಯ ಮಾಡುವ ಮತ್ತು ಒದಗಿಸುವ ಹಂತದಲ್ಲಿ ದುಡಿಯುತ್ತಿರುವ ವ್ಯಕ್ತಿಗಳಾಗಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಇವರೆಲ್ಲರೂ ಜಾತಿ ಮತ್ತು ಸಂಪತ್ತಿನ ನೆಲೆಯಲ್ಲಿ ಕೆಳಜಾತಿ ಮತ್ತು ಕೆಳವರ್ಗಕ್ಕೆ ಸೇರಿದವ ರಾಗಿದ್ದಾರೆ. ಜಾತಿ ಎಂಬುದು ಇವರೆಲ್ಲರ ಪಾಲಿಗೆ ಅಧಿಕಾರ ಮತ್ತು ಸಂಪತ್ತನ್ನು ಗಳಿಸದಂತೆ ಮತ್ತು ಸಾಮಾಜಿಕವಾಗಿ ಒಳ್ಳೆಯ ಸ್ಥಾನಮಾನಗಳನ್ನು ಪಡೆಯದಂತೆ ತಡೆಗಟ್ಟಿರುವ ಸಾಧನವಾಗಿದೆ. ಕೆಳಜಾತಿ ಎಂಬುದು ಬಡತನಕ್ಕೆ ಕಾರಣವಾಗಿರು ವಂತೆಯೇ ಅಪಮಾನದ ಬದುಕಿಗೂ ಕಾರಣವಾಗಿದೆ.

ಇಂತಹ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಅಂದರೆ ಜೇಡರ ದಾಸಿಮಯ್ಯನ ಕಾಲದಲ್ಲಿಯೇ ಪ್ರಾರಂಭವಾಗಿದ್ದ ಭಕ್ತಿ ಚಳುವಳಿಯು ಇಷ್ಟಲಿಂಗವನ್ನು ಕೊರಳಲ್ಲಿ ಕಟ್ಟಿಕೊಂಡು ಶಿವಭಕ್ತರಾದವರೆಲ್ಲರೂ, ಅವರು ಬ್ರಾಹ್ಮಣನಾಗಿರಲಿ ಇಲ್ಲವೇ ಪಂಚಮನಾಗಿರಲಿ ಅವರೆಲ್ಲಾ 'ಒಂದೇ ಕುಲಜರು' ಎಂಬ ಘೋಷಣೆಯೊಡನೆ ಜಾತಿ ವ್ಯವಸ್ಥೆಯ ವಿರುದ್ಧ ಸಮರವನ್ನು ಸಾರಿತ್ತು. ಜಾತಿ ವಿರುದ್ಧದ ಹೋರಾಟವು "ವ್ಯಕ್ತಿಯ ಮನದಲ್ಲಿ ಬೇರುಬಿಟ್ಟಿರುವ ಜಾತಿಯ ಬಗೆಗಿನ ಮೇಲರಿಮೆ ಇಲ್ಲವೇ ಕೀಳರಿಮೆಯ ಭಾವನೆಯನ್ನು ಕಿತ್ತೊಗೆದು, ಮನುಷ್ಯರಾದ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಬಿತ್ತುವುದಕ್ಕೆ ನೆರವಾಯಿತು."

ವಚನಗಳಲ್ಲಿ 'ಭಕ್ತ' ಮತ್ತು 'ಭವಿ' ಎಂಬ ಪದಗಳು ಮತ್ತೆ ಮತ್ತೆ ಬಳಕೆ ಯಾಗುತ್ತವೆ. ಭಕ್ತ ಎಂದರೆ "ಜಾತಿ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ನಡೆ ನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸು ವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಬಯಸುವವನು."

ಭವಿ ಎಂದರೆ "ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವ ಬದುಕಿನ ಆಗುಹೋಗುಗಳಿಗೆ ಕರ್ಮಸಿದ್ಧಾಂತ ಮತ್ತು ಹಿಂದಿನ ಜನ್ಮದ ಪಾಪಪುಣ್ಯಗಳೇ ಕಾರಣವೆಂದು ನಂಬಿಕೊಂಡಿರುವ ವ್ಯಕ್ತಿ." ಆದ್ದರಿಂದಲೇ ಒಮ್ಮೆ ಜಾತಿಯ ಬಂಧನದಿಂದ ಹೊರಬಂದು ಭಕ್ತನಾದ ವ್ಯಕ್ತಿಯು ಮತ್ತೆ ಯಾವುದೇ ಕಾರಣದಿಂದಲೂ ಭವಿಯ ಜತೆಯಲ್ಲಿ ನಂಟನ್ನು ಹೊಂದಬಾರದೆಂಬ ನಿಯಮವನ್ನು ವಚನಕಾರರು ವಿಧಿಸಿದ್ದಾರೆ.

ಎಲ್ಲಾ ವಚನಕಾರರು ಗುಡಿಗೋಪುರಗಳಲ್ಲಿ ಪ್ರತಿಷ್ಠಾಪನೆಗೊಂಡಿರುವ ಸ್ಥಾವರಲಿಂಗದ ಪೂಜೆಯನ್ನು ವಿರೋಧಿಸುತ್ತಾರೆ. ಶಿವನನ್ನು ದೇವರನ್ನಾಗಿ ಒಪ್ಪಿಕೊಂಡಿರುವ ಶಿವಶರಣಶರಣೆಯರು ದೇಗುಲವನ್ನು ನಿರಾಕರಿಸುವುದಕ್ಕೆ ಅನೇಕ ಕಾರಣಗಳಿವೆ. ವಿಗ್ರಹ ರೂಪದಲ್ಲಿ ಕಡೆದಿರುವ ದೇವರನ್ನು ದೇಗುಲದ ಒಳಗುಡಿಯಲ್ಲಿ ನೆಲೆಗೊಳಿಸುತ್ತಿದ್ದಂತೆಯೇ, ವಿಗ್ರಹದ ಹತ್ತಿರಕ್ಕೆ ಹೋಗಿ ಪೂಜಿಸಲು ಪೂಜಾರಿಯು ಮಾತ್ರ ತಕ್ಕವನಾಗುತ್ತಾನೆ. ಇನ್ನುಳಿದವರು ಒಳಗುಡಿಯಿಂದ ಹೊರನಿಲ್ಲಬೇಕಾಗುತ್ತದೆ. ಇಲ್ಲಿಂದಲೇ ಮಾನವರಲ್ಲಿ ಮೇಲು ಕೀಳಿನ ವಿಂಗಡಣೆಯು ಮೊದಲಾಗುತ್ತದೆ. ಮೇಲು ಕೀಳಿನ ಜಾತಿ ಮೆಟ್ಟಿಲುಗಳಿಂದ ಕೂಡಿರುವ ನಮ್ಮ ಸಮಾಜದ ಜಾತಿರಚನೆಯ ಕಟ್ಟುಪಾಡುಗಳು ದೇಗುಲದಲ್ಲಿ ನಡೆಯುವ ಆಚರಣೆಗಳನ್ನು ಮುಂದುವರಿಸಿಕೊಂಡು ಬರುತ್ತಿವೆ.

ಮೇಲು ಜಾತಿಯವರಿಗೆ ಮತ್ತು ಮೇಲು ವರ್ಗದವರಿಗೆ ಅಂದರೆ ಸಿರಿವಂತರಿಗೆ ಹಾಗೂ ದೊಡ್ಡ ದೊಡ್ಡ ಗದ್ದುಗೆಯಲ್ಲಿರುವವರಿಗೆ ಮೊದಲ ಮನ್ನಣೆಯನ್ನು ನೀಡುವ ದೇಗುಲದ ಆಚರಣೆಗಳು, ಕೆಳ ಜಾತಿ ಮತ್ತು ಕೆಳ ವರ್ಗದ ಅಂದರೆ ಹಣವಿಲ್ಲದ, ಸಂಪತ್ತಿಲ್ಲದ, ಅಧಿಕಾರವಿಲ್ಲದ ಜನಸಮುದಾಯವನ್ನು ಕಡೆಗಣಿಸಿವೆ. ಈ ರೀತಿ ಮೇಲು ಕೀಳಿನ ತರತಮವು ಮುಂದುವರಿದುಕೊಂಡು ಹೋಗಲು ಕಾರಣವಾಗಿರುವ ಮತ್ತು ನೆರವಾಗುತ್ತಿರುವ ದೇಗುಲದ ನೆಲೆಯಿಂದ ಶಿವಶರಣಶರಣೆಯರು ದೂರಸರಿದಿದ್ದಾರೆ.

ಶಿವಶರಣಶರಣೆಯರು ತಮ್ಮ ಅಂಗಯ್ ಮೇಲಿಟ್ಟುಕೊಂಡು ಪೂಜಿಸುತ್ತಿದ್ದ ಇಷ್ಟಲಿಂಗ ಇಲ್ಲವೇ ತಮ್ಮ ಕೊರಳಲ್ಲಿ ಕಟ್ಟಿಕೊಂಡಿದ್ದ ಶಿವಲಿಂಗ, ಅವರ ಪಾಲಿಗೆ ಸಾಂಕೇತಿಕ ದೇವರು ಮಾತ್ರವಾಗಿತ್ತು. ಶಿವಶರಣಶರಣೆಯರ ನಿಜ ಜೀವನದಲ್ಲಿ ಅವರ ಪಾಲಿನ ದೇವರು ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿದ ಮೂರ್ತಿಯಾಗಿರಲಿಲ್ಲ. ಜನಸಮುದಾಯಕ್ಕೆ ಒಳಿತನ್ನು ಉಂಟುಮಾಡುವ ನಡೆನುಡಿಗಳನ್ನು ತಮ್ಮ ದೇವರೆಂದು ನಂಬಿದ್ದರು. ಆದ್ದರಿಂದಲೇ ಶಿವಭಕ್ತರಾದವರಲ್ಲಿ ಒಳ್ಳೆಯ ನಡೆನುಡಿಗಳು ಕಡ್ಡಾಯವಾಗಿ ಇರಲೇಬೇಕು ಎಂಬ ಮಾನದಂಡವನ್ನು ಹಾಕಿಕೊಂಡಿದ್ದರು. ಒಳ್ಳೆಯ ನಡೆನುಡಿ ಎಂದರೆ "ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿಯನ್ನು ಹೊಂದಿರುವುದು." ಇಷ್ಟಲಿಂಗದ ಪೂಜೆಯು ಅವರ ಪಾಲಿಗೆ ಮೈಮನದಲ್ಲಿ ನಿರಂತರವಾಗಿ ಮೂಡುತ್ತಿರುವ ಒಳ್ಳೆಯ ಮತ್ತು ಕೆಟ್ಟ ಭಾವನೆಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಸಾಮಾಜಿಕವಾಗಿ

ಒಳ್ಳೆಯ ನಡೆನುಡಿಯಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವುದರ ಸಂಕೇತವಾಗಿತ್ತು.

ಉಳ್ಳವರು, ಮೇಲುಜಾತಿಯವರು ಮತ್ತು ಅಕ್ಷರವಂತರು ದೇವರ ಹೆಸರಿನಲ್ಲಿ ದುಡಿಯುವ ಬಡಜನರ ಮನದಲ್ಲಿ ತಲೆತಲಾಂತರಗಳಿಂದ ಕೀಳರಿಮೆ ಮತ್ತು ತಪ್ಪು ತಿಳುವಳಿಕೆಯನ್ನು ನಾಟಿಸಿದ್ದರು. ಅದೇನೆಂದರೆ ಬಡವರಾಗಿರುವ ಜನರ ಸಂಕಟಗಳಿಗೆ ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ ಪುಣ್ಯಗಳೇ ಕಾರಣವೆಂಬ ನಂಬಿಕೆಯನ್ನು ದೇವರು ಮತ್ತು ಧರ್ಮದ ಹೆಸರಿನಲ್ಲಿ ಕಲೆ ಸಾಹಿತ್ಯ, ಸಂಗೀತಗಳ ಮೂಲಕ ಜನಮನದಲ್ಲಿ ಬಿತ್ತಿದ್ದರು. ವಚನಕಾರರು ಜನಮನದಲ್ಲಿ ಬೇರೂರಿದ್ದ ಇಂತಹ ಕೀಳರಿಮೆಯನ್ನು ಮತ್ತು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ಒಳ್ಳೆಯ ನಡೆನುಡಿ ಮತ್ತು ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದರ ಮೂಲಕ ವ್ಯಕ್ತಿಯು ತನ್ನ ಒಳಿತಿನ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬಹುದೆಂಬುದನ್ನು ಮನಗಾಣಿಸಿದರು.

ಜನರ ಆಸೆಗಳನ್ನು ಈಡೇರಿಸುವ ಜಡವಸ್ತುವನ್ನಾಗಿ ದೇವರನ್ನು ಕಾಣದೆ, ಜನರಿಗೆ ಸತ್ಯ, ನೀತಿ, ನ್ಯಾಯದಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವ ಚೇತನವನ್ನಾಗಿ ಶಿವಶರಣಶರಣೆಯರು ದೇವರನ್ನು ಕಂಡರು. ಕಲ್ಲುಚಪ್ಪಡಿಗಳ ತಳಹದಿಯ ಮೇಲೆ ಕಟ್ಟಿರುವ ದೇಗುಲದ ಬದಲು, ಒಳ್ಳೆಯ ನಡೆನುಡಿಗಳಿಂದ ಕೂಡಿದ ಸಾಮಾಜಿಕ ವ್ಯಕ್ತಿತ್ವದ ತಳಹದಿಯ ಮೇಲೆ ದೇವರನ್ನು ನೆಲೆಗೊಳಿಸಿದರು.

ಶಿವಶರಣಶರಣೆಯರು ವೇದ, ಪುರಾಣ, ಶಾಸ್ತ್ರ ಮತ್ತು ತರ್ಕದ ವಿಚಾರಗಳ ಬಗ್ಗೆ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ ಋಗ್ವೇದದ ಪುರುಷ ಸೂಕ್ತದಲ್ಲಿ ಉಲ್ಲೇಖಿಸಿರುವ "ಭಗವಂತನ ಮುಖ ಕಮಲದಿಂದ ಬ್ರಾಹ್ಮಣರು, ತೋಳುಗಳಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು ಮತ್ತು ಪಾದದಿಂದ ಶೂದ್ರರು ಹುಟ್ಟಿದರು. ಅಧ್ಯಯನ ಮತ್ತು ಅಧ್ಯಾಪನಕ್ಕೆ ಬ್ರಾಹ್ಮಣರು, ನಾಡನ್ನಾಳುವುದಕ್ಕೆ ಕ್ಷತ್ರಿಯರು, ವ್ಯಾಪಾರ ಮತ್ತು ವ್ಯವಸಾಯಕ್ಕೆ ವೈಶ್ಯರು ಮತ್ತು ಈ ಮೂರು ಮಂದಿಯ ಸೇವೆಯನ್ನು ಮಾಡುವುದಕ್ಕೆ ಶೂದ್ರರು ಅರ್ಹರಾಗಿದ್ದಾರೆ. ವಿದ್ಯೆ,ಅಧಿಕಾರ ಮತ್ತು ಸಂಪತ್ತನ್ನು ಪಡೆಯುವುದಕ್ಕೆ ಶೂದ್ರರು ಯೋಗ್ಯರಲ್ಲ' ಎಂಬ ವರ್ಣ ವ್ಯವಸ್ಥೆಯನ್ನು ದೃಢಗೊಳಿಸಿರುವ ಮಾತುಗಳನ್ನು ಶಿವಶರಣಶರಣೆಯರು ತಿರಸ್ಕರಿಸಿದರು. ವೇದಗಳಲ್ಲಿ ಹೇಳಿರುವ ಯಜ್ಞ ಯಾಗಾದಿಗಳ ಆಚರಣೆಯಿಂದ ಯಾವುದೇ ಬಗೆಯ ಒಳಿತಾಗುವುದಿಲ್ಲವೆಂಬ

ನಿಲುವು ವಚನಕಾರರಲ್ಲಿತ್ತು. ಪೂಜೆ, ತಪಸ್ಸು, ಉಪವಾಸ, ಯಜ್ಞದಲ್ಲಿ ನೀಡುವ ಬಲಿ ಮುಂತಾದ ಆಚರಣೆಗಳಿಗಿಂತ ವ್ಯಕ್ತಿಯು ತನ್ನ ಒಳಿತಿನ ಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳೇ ದೊಡ್ಡದೆಂಬ ಸಂಗತಿಯನ್ನು ಶಿವಶರಣಶರಣೆಯರು ಪ್ರತಿಪಾದಿಸಿದ್ದರು.

ದೇವದೇವಿಯರ ಅವತಾರಗಳನ್ನು ಮತ್ತು ಪವಾಡಗಳನ್ನು ಬಣ್ಣಿಸುವ ನೆಪದಲ್ಲಿ ಪುರಾಣಗಳಲ್ಲಿನ ಸಂಗತಿಗಳು ಜಾತಿ ವ್ಯವಸ್ಥೆ, ಕರ್ಮಸಿದ್ಧಾಂತ ಮತ್ತು ಪುನರ್ ಜನ್ಮ ಭಾವನೆಗಳನ್ನು ಜನಮನದಲ್ಲಿ ಬಿತ್ತುತ್ತಾ, ಜನರನ್ನು ಮಾನಸಿಕವಾಗಿ ಗುಲಾಮರನ್ನಾಗಿ ಮಾಡುತ್ತಿದ್ದವು. ಯಜ್ಞಯಾಗಾದಿಗಳನ್ನು ಮಾಡುವಾಗ ಮತ್ತು ದೇವತೆಗಳ ಪೂಜಾ ಸಂದರ್ಭಗಳಲ್ಲಿ ಪಾಲಿಸಬೇಕಾದ ಆಚರಣೆಗಳನ್ನು ಶಾಸ್ತ್ರಗಳಲ್ಲಿನ ನಿಯಮಗಳು ಕಡ್ಡಾಯಗೊಳಿಸುತ್ತಿದ್ದವು. ಮಾತಿನ ಮೋಡಿಯಿಂದ ವೇದ, ಪುರಾಣ, ಶಾಸ್ತ್ರಗಳಲ್ಲಿನ ಸಂಗತಿಗಳನ್ನೇ ತರ್ಕದಲ್ಲಿನ ನುಡಿಗಳು ಸತ್ಯವೆಂದು ಸಾರುತ್ತ, ಜನರು ತಮ್ಮ ಪಾಲಿನ ಬಡತನವನ್ನು, ಸಂಕಟವನ್ನು ಮತ್ತು ಅಪಮಾನವನ್ನು ಮರುಮಾತಿಲ್ಲದೆ ಒಪ್ಪಿಕೊಂಡು ಬಾಳುವಂತೆ ಮಾಡಿದ್ದವು. ಸಾಮಾನ್ಯರ ಬದುಕು ಆರ್ಥಿಕವಾಗಿ ಬದಲಾವಣೆಗೊಳ್ಳದಂತೆ ಮತ್ತು ಜಾತಿ ವ್ಯವಸ್ಥೆಯು ನಾಶವಾಗದೆ ಯಥಾವತ್ತಾಗಿ ಮುಂದುವರಿಯುವಂತೆ ಮಾಡುವಲ್ಲಿ ವೇದ, ಪುರಾಣ, ಶಾಸ್ತ್ರ ಮತ್ತು ತರ್ಕದ ವಿಚಾರಗಳು ಬಹು ದೊಡ್ಡ ಪ್ರಭಾವ ಮತ್ತು ಪರಿಣಾಮವನ್ನು ಉಂಟುಮಾಡುತ್ತಿದ್ದ ಕಾರಣದಿಂದಾಗಿ, ಶಿವಶರಣ ಶರಣೆಯರು ಇವನ್ನು ಸಂಪೂರ್ಣವಾಗಿ ನಿರಾಕರಿಸಿದ್ದರು,

ಒಳ್ಳೆಯ ಕಾಯಕದ ಮೂಲಕ ವ್ಯಕ್ತಿಯು ಹಣವನ್ನು ಸಂಪಾದಿಸಿ, ತನ್ನೊಬ್ಬನ ಹಿತವನ್ನು ಮಾತ್ರ ಕಾಯ್ದುಕೊಳ್ಳದೆ, ಗುರು ಲಿಂಗ ಜಂಗಮದ ಸೇವೆಯಲ್ಲಿ ತೊಡಗುವುದು ಪ್ರತಿಯೊಬ್ಬ ಶಿವಭಕ್ತನ ಜೀವನದ ಗುರಿಯಾಗಿರಬೇಕೆಂದು ಬಯಸಿದ್ದರು. ಉನ್ನತವಾದ ಗದ್ದುಗೆಗಳಲ್ಲಿ ಕುಳಿತು ಸಮಾಜಕ್ಕೆ ಒಳಿತನ್ನು ಮಾಡಬೇಕಾದ ವ್ಯಕ್ತಿಗಳ ಡಾಂಬಿಕತನವನ್ನು ಕುರಿತು ತೀವ್ರವಾದ ವಿರೋಧವನ್ನು ಶಿವಶರಣಶರಣೆಯರು ವ್ಯಕ್ತಪಡಿಸಿದ್ದಾರೆ. ಒಳ್ಳೆಯ ನುಡಿಯಂತೆಯೇ ವ್ಯಕ್ತಿಯ ನಡೆಯು ಒಳ್ಳೆಯತನದಿಂದ ಕೂಡಿರಬೇಕು. ಒಳ್ಳೆಯ ನಡೆನುಡಿಗಳು ಒಂದಾದಾಗ ಮಾತ್ರ ಸಮಾಜ ಉಳಿಯುತ್ತದೆ, ಬೆಳೆಯುತ್ತದೆ ಮತ್ತು ಬಾಳುತ್ತದೆ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ನಡೆನುಡಿಯು ಮೇಲು ನೋಟಕ್ಕೆ ಭಕ್ತಿ ಚಳುವಳಿಯಂತೆ ಕಂಡುಬಂದರೂ, ಅದರ ಒಡಲಾಳದಲ್ಲಿ ಜನಸಮುದಾಯದ ಬಡತನ, ಅಜ್ಞಾನ ಮತ್ತು ನೋವಿಗೆ ಕಾರಣವಾಗಿದ್ದ ಸಂಗತಿಗಳನ್ನು ಗುರುತಿಸಿ, ಅವುಗಳನ್ನು ತೊಲಗಿಸಿ, ಜನರ ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಿದ ಜನಪರ ಆಂದೋಲನವಾಗಿದೆ. ಜಪ, ತಪ, ವ್ರತ, ನೇಮಗಳ ಬದಲಾಗಿ ದೇವರನ್ನು ಒಳ್ಳೆಯ ನಡೆನುಡಿಗಳ ಮೂಲಕ ಒಲಿಸಿಕೊಳ್ಳಬೇಕೆಂಬ ನಿಲುವನ್ನು ವ್ಯಕ್ತಪಡಿಸುವುದರ ಜತೆಗೆ ವ್ಯಕ್ತಿಯು ತನ್ನ ಸಾಮಾಜಿಕ ವ್ಯವಹಾರದ ನಡೆನುಡಿಗಳಿಗೆ "ತನ್ನ ಮನಸ್ಸನ್ನೇ ಒಂದು ಸಾಕ್ಷಿಯಾಗಿ ಇಟ್ಟುಕೊಳ್ಳಬೇಕು" ಎಂಬ ಕರೆಯನ್ನು ನೀಡಿದ್ದಾರೆ. ಇದನ್ನು ಕುರಿತು ಕೆ.ವಿ.ನಾರಾಯಣ ಅವರು "ವಚನಕಾರರು ತಮ್ಮ ಎಲ್ಲಾ ಮಾತುಗಳನ್ನು ಅಂತರಂಗದ ಸಾಕ್ಷಿಯಲ್ಲಿ ಅಥವಾ ಇಷ್ಟದೈವದ ಹಾಜರಿಯಲ್ಲಿ ಹೇಳುತ್ತಾರೆ" ಎಂದು ಗುರುತಿಸಿದ್ದಾರೆ. (ಕೆ.ವಿ.ನಾರಾಯಣ: ವಚನ ಚಳುವಳಿ–ಟಿಪ್ಪಣಿಗಳು.)

ಶಿವಶರಣಶರಣೆಯರಲ್ಲಿ ಬಹುತೇಕ ಮಂದಿ ತಾವು ರಚಿಸಿದ ವಚನಗಳಲ್ಲಿ ಶಿವನ ಹೆಸರನ್ನು ಅಂಕಿತನಾಮವನ್ನಾಗಿ ಬಳಸಿದ್ದಾರೆ. ವಚನಕಾರರು ಹುಟ್ಟಿ ಬೆಳೆದ ಇಲ್ಲವೇ ಬೇರೊಂದು ಊರಿಗೆ ಹೋಗಿ ನೆಲೆಸಿದ ತಾಣದಲ್ಲಿ ಶಿವನಿಗೆ ಇದ್ದ ಹೆಸರನ್ನು ಇಟ್ಟುಕೊಂಡಿದ್ದಾರೆ. ಆದಯ್ಯನ ವಚನದಲ್ಲಿ ಕಂಡುಬರುವ 'ಸೌರಾಷ್ಟ್ರ ಸೋಮೇಶ್ವರ' ಎಂಬ ಅಂಕಿತನಾಮ, ಆದಯ್ಯನು ಹುಟ್ಟಿದ ನಾಡಿನ ಹೆಸರನ್ನು ಒಳಗೊಂಡಿದೆ. ಅಂಬಿಗರ ಚೌಡಯ್ಯನು ತನ್ನ ಕಸುಬಿನ ಹೆಸರನ್ನೇ ಅಂಕಿತನಾಮವನ್ನಾಗಿ ಬಳಸಿದ್ದಾನೆ. ನಾಗಲಾಂಬಿಕೆಯು ತನ್ನ ಮೆಚ್ಚಿನ ದೇವರ ಜತೆಯಲ್ಲಿ ಬಸವಣ್ಣನವರನ್ನು ನೆನೆಯುತ್ತಾ 'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬ ಅಂಕಿತನಾಮವನ್ನು ಬಳಸಿದ್ದಾಳೆ.

ವಚನಕಾರರು ಬಳಸಿರುವ ಕನ್ನಡ ನುಡಿರಚನೆಯು ಇತ್ತ ಛಂದೋಬದ್ಧವಾದ ಪದ್ಯವೂ ಅಲ್ಲದ, ಅತ್ತ ಛಂದೋರಹಿತವಾದ ಗದ್ಯವೂ ಅಲ್ಲದ, ಜನಮನವನ್ನು ತನ್ನತ್ತ ಸೆಳೆಯುವಂತಹ ಹೃದ್ಯವಾದ ಶೈಲಿಯಿಂದ ಕೂಡಿದೆ. ಜನಪದರ ಆಡುನುಡಿಯು ವಚನಗಳಲ್ಲಿ ಬಳಕೆಯಾಗಿರುವುದರಿಂದ ವಚನಗಳ ಕಟ್ಟುವಿಕೆಯಲ್ಲಿ ರೂಪಕದ ನುಡಿಗಟ್ಟುಗಳು ಹೆಚ್ಚಾಗಿ ಬಳಕೆಗೊಂಡಿವೆ.

ಸಿ.ಪಿ.ನಾಗರಾಜ

ಪರಿವಿಡಿ

ವಚನಗಳು

1.	ಅಂಗಸೋಂಕಿನ ಲಿಂಗತಂದೆ	...	...	27
2.	ಅಂಬಿಗರ ಚೌಡಯ್ಯ	...	...	33
3.	ಅಕ್ಕಮಹಾದೇವಿ	...	...	72
4.	ಅಕ್ಕಮ್ಮ	...	...	88
5.	ಅಮುಗಿ ದೇವಯ್ಯ	...	...	95
6.	ಅಮುಗೆ ರಾಯಮ್ಮ	...	...	103
7.	ಅರಿವಿನ ಮಾರಿತಂದೆ	...	...	118
8.	ಅಲ್ಲಮ	...	...	124
9.	ಅವಸರದ ರೇಕಣ್ಣ	...	...	201
10.	ಆದಯ್ಯ	...	...	204
11.	ಆಯ್ದಕ್ಕಿ ಮಾರಯ್ಯ	...	...	210
12.	ಆಯ್ದಕ್ಕಿ ಲಕ್ಕಮ್ಮ	...	...	213
13.	ಉರಿಲಿಂಗಪೆದ್ದಿ	...	...	223
14.	ಏಲೇಶ್ವರ ಕೇತಯ್ಯ	...	...	232
15.	ಒಕ್ಕಲಿಗ ಮುದ್ದಣ್ಣ	...	...	238
16.	ಕೋಲ ಶಾಂತಯ್ಯ	...	...	242

17. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ 245
18. ಗಾವುದಿ ಮಾಚಯ್ಯ 250
19. ಗುಪ್ತ ಮಂಚಣ್ಣ 252
20. ಗುರುಪುರದ ಮಲ್ಲಯ್ಯ 255
21. ಗೊಗ್ಗವ್ವೆ 258
22. ಘಟ್ಟಿವಾಳಯ್ಯ 261
23. ಚಂದಿಮರಸ 265
24. ಚನ್ನಬಸವಣ್ಣ 276
25. ಜಗಳಗಂಟ ಕಾಮಣ್ಣ 291
26. ಜೇಡರ ದಾಸಿಮಯ್ಯ 294
27. ಡಕ್ಕೆಯ ಬೊಮ್ಮಣ್ಣ 324
28. ತುರುಗಾಹಿ ರಾಮಣ್ಣ 336
29. ನಗೆಯ ಮಾರಿತಂದೆ 340
30. ಬಸವಣ್ಣ 346
31. ಬಹುರೂಪಿ ಚೌಡಯ್ಯ 427
32. ಬಾಲಸಂಗಯ್ಯ 430
33. ಬಾಹೂರ ಬೊಮ್ಮಣ್ಣ 434
34. ಮಡಿವಾಳ ಮಾಚಿದೇವರು 437
35. ಮಧುವಯ್ಯ 440
36. ಮುಕ್ತಾಯಕ್ಕ 443
37. ಮೆರೆಮಿಂಡಯ್ಯ 446
38. ಮೋಳಿಗೆ ಮಾರಯ್ಯ 448
39. ಲದ್ದೆಯ ಸೋಮಯ್ಯ 447
40. ಲಿಂಗಮ್ಮ 461
41. ಶಿವಲೆಂಕ ಮಂಚಣ್ಣ 472
42. ಸಕಲೇಶ ಮಾದರಸ 476

43. ಸಿದ್ಧರಾಮೇಶ್ವರ 484
44. ಸೊಡ್ಡಳ ಬಾಚರಸ 495
45. ಹಡಪದ ಅಪ್ಪಣ್ಣ 498
46. ಹಾವಿನಹಾಳ ಕಲ್ಲಯ್ಯ 502

ವಚನಗಳಿಂದ ಆಯ್ದ ಸಾಲುಗಳು

1. ಅಂಬಿಗರ ಚೌಡಯ್ಯ 506
2. ಅಕ್ಕಮಹಾದೇವಿ 510
3. ಅಕ್ಕಮ್ಮ 521
4. ಅಮುಗೆ ರಾಯಮ್ಮ 524
5. ಅಲ್ಲಮ 528
6. ಆದಯ್ಯ 568
7. ಆಯ್ದಕ್ಕಿ ಲಕ್ಕಮ್ಮ 570
8. ಗಜೇಶ ಮಸಣಯ್ಯ 574
9. ಗುಪ್ತ ಮಂಚಣ್ಣ 576
10. ಚಂದಿಮರಸ 578
11. ಚೆನ್ನಬಸವಣ್ಣ 581
12. ನಗೆಯ ಮಾರಿತಂದೆ 590
13. ಬಸವಣ್ಣ 592
14. ಭೋಗಣ್ಣ 627
15. ಮಾರೇಶ್ವರೊಡೆಯ 629
16. ಮೆರೆಮಿಂಡಯ್ಯ 631
17. ಮೋಳಿಗೆ ಮಾರಯ್ಯ 634
18. ಸಿದ್ಧರಾಮೇಶ್ವರ 638
19. ಸೊಡ್ಡಳ ಬಾಚರಸ 640
20. ಹಡಪದ ಅಪ್ಪಣ್ಣ 642

1. ಅಂಗಸೋಂಕಿನ ಲಿಂಗತಂದೆ

ದೊರೆತಿರುವ ವಚನಗಳು : ಹನ್ನೊಂದು

ಅಂಕಿತನಾಮ : ಭೋಗಬಂಕೇಶ್ವರ ಲಿಂಗ

ಮರದೊಳಗಣ ಬೆಂಕಿ
ತನ್ನ ತಾನೇ ಉರಿಯಬಲ್ಲುದೆ
ಶಿಲೆಯೊಳಗಣ ದೀಪ್ತಿ
ಆ ಬೆಳಗ ತನ್ನ ತಾನೇ ಬೆಳಗಬಲ್ಲುದೆ
ಆ ತೆರನಂತೆ

ಕುಟಿಲನ ಭಕ್ತಿ ಕಿಸುಕುಳನ ವಿರಕ್ತಿ
ಮಥನಿಸಿಯಲ್ಲದೆ ದಿಟ ಹುಸಿಯ ಕಾಣಬಾರದು
ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿದಲ್ಲದೆ
ನಿಶ್ಚಯವನರಿಯಬಾರದು

ಗುರುವಾದಡೂ ಲಿಂಗವಾದಡೂ ಜಂಗಮವಾದಡೂ
ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ
ತೂತಕುಂಭದಲ್ಲಿಯ ನೀರು
ಸೂತ್ರ ತಪ್ಪಿದ ಬೊಂಬೆ
ನಿಜನೇತ್ರ ತಪ್ಪಿದ ದೃಷ್ಟಿ
ಬೇರು ಮೇಲಾದ ಸಸಿಗೆ ನೀರಿನಾರೈಕೆಯುಂಟೆ

ಇಂತು ಆವ ಕ್ರೀಯಲ್ಲಿಯೂ
ಭಾವಶುದ್ಧಾತ್ಮನಾಗಿ ಆರೈಕೆ ಬೇಕು
ಭೋಗ ಬಂಕೇಶ್ವರ ಲಿಂಗದ ಸಂಗದ
ಶರಣನ ಸುಖ

ವ್ಯಕ್ತಿಯು ಒಳ್ಳೆಯವನು ಇಲ್ಲವೇ ಕೆಟ್ಟವನು ಎಂಬುದನ್ನು ಅವನ ಮಯ್ಯಿನ ಅಂದಚೆಂದ; ಅವನು ತೊಟ್ಟಿರುವ ಉಡುಗೆ-ತೊಡುಗೆ; ಅವನು ಆಡುವ ಬಣ್ಣಬಣ್ಣದ ಮಾತು; ಅವನು ಏರಿ ಕುಳಿತಿರುವ ಗದ್ದುಗೆ; ಅವನು ಹೊಂದಿರುವ ಸಂಪತ್ತಿನಿಂದ ತೀರ್ಮಾನಿಸದೆ, ಅವನು ಮಾಡುತ್ತಿರುವ ಒಳ್ಳೆಯ ಇಲ್ಲವೇ ಕೆಟ್ಟ ಕೆಲಸಗಳನ್ನು ಒರೆಹಚ್ಚಿ ನೋಡುವುದರ ಮೂಲಕ ಅವನ ವ್ಯಕ್ತಿತ್ವವನ್ನು ಗುರುತಿಸಬೇಕು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

'ಒಳ್ಳೆಯ ಕೆಲಸ' ಎಂದರೆ ವ್ಯಕ್ತಿಯು ಮಾಡುವ ಕೆಲಸವು ಆತನಿಗೆ ಒಳಿತನ್ನು ಉಂಟುಮಾಡುವುದರ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕು. 'ಕೆಟ್ಟ ಕೆಲಸ' ಎಂದರೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವುದು.

(ಮರ+ಒಳಗಣ; ಮರ=ಕೊಂಬೆರೆಂಬೆಗಳು ಅಗಲವಾಗಿ ಟಿಸಿಲೊಡೆದು ಹರಡಿಕೊಂಡು ಎತ್ತರವಾಗಿ ಬೆಳೆದು ನಿಂತಿರುವ ತರು; ಒಳಗಣ=ಒಳಗಿರುವ; ಬೆಂಕಿ=ಉರಿ/ಕಿಚ್ಚು; ತನ್ನ=ತನ್ನಲ್ಲಿರುವ; ತಾನ್+ಏ; ತಾನ್=ತನ್ನದೇ ಆದುದು; ತಾನೇ=ತಾನಾಗಿಯೇ; ಉರಿಯ+ಬಲ್ಲುದೆ; ಉರಿ=ಬೆಂಕಿ; ಉರಿಯ= ಹತ್ತಿಕೊಂಡು ದಗದಗನೆ ಬೇಯಲು; ಬಲ್ಲುದೆ=ತಿಳಿದಿದೆಯೇ; **ಮರದೊಳಗಣ ಬೆಂಕಿ ತನ್ನ ತಾನೇ ಉರಿಯಬಲ್ಲುದೆ**=ಬೆಂಕಿ ಬಿದ್ದಾಗ ಮಾತ್ರ ಹತ್ತಿಕೊಂಡು ಉರಿಯಬಲ್ಲ ಗುಣ ಮರದಲ್ಲಿದೆ. ಆದರೆ ಬೆಂಕಿಯ ಸಂಪರ್ಕವಿಲ್ಲದೆ ಮರ ತನಗೆ ತಾನೇ ಉರಿಯಲಾರದು.

ಶಿಲೆ+ಒಳಗಣ; ಶಿಲೆ=ಕಲ್ಲು; ದೀಪ್ತಿ=ಕಾಂತಿ/ಕಿರಣ; ಆ=ಅಂತಹ; ಬೆಳಗು+ಅ; ಬೆಳಗು=ಕಾಂತಿ/ಕಿರಣ; ಬೆಳಗ=ಕಾಂತಿಯನ್ನು/ಪ್ರಕಾಶವನ್ನು; **ಶಿಲೆಯೊಳಗಣ ದೀಪ್ತಿ ಆ ಬೆಳಗ ತನ್ನ ತಾನೇ ಬೆಳಗಬಲ್ಲುದೆ**=ಒಂದು ಕಲ್ಲಿಗೆ ಮತ್ತೊಂದು ಕಲ್ಲು ಜೋರಾಗಿ ಬಡಿದಾಗ ಬೆಂಕಿಯ ಕಿಡಿ ಹೊರಹೊಮ್ಮುತ್ತದೆ. ಆದರೆ ಒಂದು ಕಲ್ಲು ತನಗೆ ತಾನಾಗಿಯೇ ಬೆಂಕಿಯ ಕಿಡಿಯನ್ನಾಗಲಿ ಇಲ್ಲವೇ ಬೆಳಕಿನ ಕಿರಣವನ್ನಾಗಲೀ ಹೊರಸೂಸಲಾರದು;

ತೆರ+ಅಂತೆ; ತೆರ=ರೀತಿ; ಅಂತೆ=ಆ ರೀತಿಯಲ್ಲಿ; ಕುಟಿಲ=ಮೋಸಗಾರ/ಕಪಟಿ; ಭಕ್ತಿ=ದೇವರ ಕರುಣೆಗೆ ಪಾತ್ರರಾಗಲು ವ್ಯಕ್ತಿಯು ಮಾಡುವ ಬಹುಬಗೆಯ ಜಪ ತಪ ಪೂಜೆಯ ಆಚರಣೆಗಳು; ಕುಟಿಲನ ಭಕ್ತಿ=ನಯಗಾರಿಕೆಯ ನಡೆನುಡಿಗಳಿಂದ ಜನರನ್ನು ವಂಚಿಸಲೆಂದು ದೇವರನ್ನೇ ನಂಬಿ ನಡೆಯುವವನಂತೆ ಮಾಡುವ ನಾಟಕ;

ಕಿಸುಕುಳ=ಕೆಟ್ಟ ನಡೆನುಡಿಯುಳ್ಳವನು; ವಿರಕ್ತಿ=ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವಂತಹ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡು, ತನ್ನನ್ನು ಒಳಗೊಂಡಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿ; ಕಿಸುಕುಳನ ವಿರಕ್ತಿ=ಬಹಿರಂಗದಲ್ಲಿ ಒಳ್ಳೆಯ ವ್ಯಕ್ತಿಯಂತೆ ತೋರಿಸಿಕೊಳ್ಳುತ್ತಾ, ಅಂತರಂಗದ ಮನದಲ್ಲಿ ಕೆಟ್ಟ ಒಳಮಿಡಿತಗಳಿಂದ ಕೂಡಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟುವಂತಹ ಉದ್ದೇಶವನ್ನು ಹೊಂದಿರುವುದು;

ಮಥನಿಸಿ+ಅಲ್ಲದೆ; ಮಥನ=ಮಸೆ/ಉಜ್ಜು; ಮಥನಿಸು=ಕಡೆಯುವುದು/ ಉಜ್ಜುವುದು; ಅಲ್ಲದೆ=ಹಾಗೆ ಮಾಡದೆ; ದಿಟ=ವಾಸ್ತವ; ಹುಸಿ=ಸುಳ್ಳು; ಕಾಣ+ ಬಾರದು; ಕಾಣ್+ಅ; ಕಾಣ್=ನೋಡು/ತಿಳಿ; ಕಾಣ=ಕಾಣಲು/ತಿಳಿಯಲು; ಬಾರದು=ಆಗುವುದಿಲ್ಲ;

ಆ ತೆರನಂತೆ ಕುಟಿಲನ ಭಕ್ತಿ ಕಿಸುಕುಳನ ವಿರಕ್ತಿ ಮಥನಿಸಿಯಲ್ಲದೆ ದಿಟ ಹುಸಿಯ ಕಾಣಬಾರದು=ಯಾವ ರೀತಿ ಮರಕ್ಕೆ ಬೆಂಕಿ ಬಿದ್ದಾಗ ಹತ್ತಿಕೊಂಡು ಉರಿಯುತ್ತದೆಯೋ; ಒಂದು ಕಲ್ಲಿಗೆ ಮತ್ತೊಂದು ಕಲ್ಲು ಜೋರಾಗಿ ಬಡಿದಾಗ ಕಿಡಿಯು ಹೊರಹೊಮ್ಮುತ್ತದೆಯೋ ಅಂತೆಯೇ ಮೋಸಗಾರನಿಗೆ ಹೊಣೆಗಾರಿಕೆಯುಳ್ಳ ಹುದ್ದೆ ದೊರೆತಾಗ, ಅವನು ಅದನ್ನು ದುರುಪಯೋಗ ಪಡಿಸಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಮಾಡುವ ವಂಚನೆಯ ನಡೆನುಡಿಗಳಿಂದ ಅವನ ನಿಜವಾದ ವ್ಯಕ್ತಿತ್ವ ಏನೆಂಬುದು ತಿಳಿದುಬರುತ್ತದೆ;

ಸತ್ಯ=ವಾಸ್ತವ; ಅಸತ್ಯ=ವಾಸ್ತವವಲ್ಲದ್ದು; ಪ್ರತ್ಯಕ್ಷ=ಕಣ್ಣಿಗೆ ಕಾಣುವುದು; ಪ್ರಮಾಣಿಸಿದ+ಅಲ್ಲದೆ; ಪ್ರಮಾಣ=ಯಾವುದೇ ಸಂಗತಿಯನ್ನು ಕಾರ್ಯ ಕಾರಣದ ಹಿನ್ನೆಲೆಯಲ್ಲಿ ಒರೆಹಚ್ಚಿ ನೋಡಿ ತಿಳಿಯುವುದು; ಯಾವಾಗ–ಎಲ್ಲಿ–ಯಾರಿಂದ–ಯಾವುದರಿಂದ–ಏಕೆ–ಹೇಗೆ ಉಂಟಾಯಿತು ಎಂಬುದೆಲ್ಲವನ್ನೂ ವಾಸ್ತವದ ನೆಲೆಯಲ್ಲಿ ವಿವೇಚಿಸಿ ತಿಳಿಯುವುದು;

ನಿಶ್ಚಯ+ಅನ್+ಅರಿಯ+ಬಾರದು; ನಿಶ್ಚಯ=ಸರಿಯಾದ ನಿಲುವು/ಅಚಲವಾದ ತೀರ್ಮಾನ; ಅನ್=ಅನ್ನು; ಅರಿ=ತಿಳಿ; ಅರಿಯ=ತಿಳಿಯಲು; **ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿದಲ್ಲದೆ ನಿಶ್ಚಯವನರಿಯಬಾರದು**=ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ ಎಂಬುದನ್ನು ನಾವೇ ಒರೆಹಚ್ಚಿ ನೋಡಿ ತಿಳಿದುಕೊಂಡು, ಸರಿಯಾದ ತೀರ್ಮಾನವನ್ನು ಕಯ್ಗೊಳ್ಳಬೇಕು. ಇತರರ ಮಾತುಗಳನ್ನು ಕುರುಡಾಗಿ ನಂಬಬಾರದು;

ಗುರು+ಆದಡೂ; ಗುರು=ವಿದ್ಯೆಯನ್ನು ಹೇಳಿಕೊಡುವವನು; ಆದಡೂ=ಆದರೂ; ಲಿಂಗ+ಆದಡೂ; ಲಿಂಗ=ಈಶ್ವರ/ಒಳ್ಳೆಯ ನಡೆನುಡಿಗಳಿಂದ ಬಾಳುವುದನ್ನು ಲಿಂಗದ ಸಂಕೇತವಾಗಿ ಶಿವಶರಣಶರಣೆಯರು ಪರಿಗಣಿಸಿದ್ದರು; ಜಂಗಮ+ಆದಡೂ; ಜಂಗಮ=ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನು ಜನರಿಗೆ ತಿಳಿಯ ಹೇಳುತ್ತಾ , ಒಂದೆಡೆಯಿಂದ ಮತ್ತೊಂದೆಡೆಗೆ ನಿರಂತರವಾಗಿ ಸಂಚರಿಸುತ್ತಿರುವ ಶಿವಶರಣ;

ಪರೀಕ್ಷೆ=ಯಾವುದು ಸರಿ–ಯಾವುದು ತಪ್ಪು ಎಂಬುದನ್ನು ಒರೆಹಚ್ಚಿ ನೋಡುವುದು; ಹಿಡಿಯದ+ಅವನ; ಹಿಡಿ=ಹೊಂದು; ಅವನ=ಅಂತಹ ವ್ಯಕ್ತಿಯ; ಹಿಡಿಯದವನ=ಹೊಂದಿಲ್ಲದವನ; ತೂತ+ಕುಂಭ+ಅಲ್ಲಿಯ; ತೂತು+ಅ; ತೂತು=ಕಂಡಿ; ತೂತ=ಕಂಡಿ ಬಿಟ್ಟಿರುವ; ಕುಂಭ=ಕೊಡ/ಕಳಸ; **ತೂತಕುಂಭದಲ್ಲಿಯ ನೀರು**=ತೂತಾಗಿರುವ ಕೊಡದಲ್ಲಿ ತುಂಬಿಸಿ ಇಟ್ಟಿರುವ ನೀರು ನಿರಂತರವಾಗಿ ಸೋರಿಹೋಗಿ ಕೆಲವೇ ಗಳಿಗೆಗಳಲ್ಲಿ ಕೊಡ ಬರಿದಾಗುತ್ತದೆ;

ಸೂತ್ರ=ಗಾಳಿಪಟವನ್ನು ಮುಗಿಲಿನಲ್ಲಿ ಹಾರಾಡಿಸಲು ಇಲ್ಲವೇ ಬೊಂಬೆಗಳನ್ನು ರಂಗದ ಮೇಲೆ ಕುಣಿಸಲು ಕಟ್ಟುವ ದಾರ/ನೂಲು; ತಪ್ಪು=ಹಾಳಾಗು/ಹದಗೆಡು; ತಪ್ಪಿದ=ಕಿತ್ತುಹೋದ/ತುಂಡಾದ; **ಸೂತ್ರ ತಪ್ಪಿದ ಬೊಂಬೆ**=ಸೂತ್ರ ಕಿತ್ತುಹೋದ ಬೊಂಬೆಯನ್ನು ವ್ಯಕ್ತಿಯು ತನ್ನ ಇಚ್ಚೆಗೆ ತಕ್ಕಂತೆ ಆಡಿಸುವುದಕ್ಕೆ ಆಗುವುದಿಲ್ಲ; ನಿಜ=ತನ್ನ/ವ್ಯಕ್ತಿಯ; ನೇತ್ರ=ಕಣ್ಣು; ದೃಷ್ಟಿ=ನೋಟ; **ನಿಜನೇತ್ರ ತಪ್ಪಿದ ದೃಷ್ಟಿ**=ವ್ಯಕ್ತಿಯ ಕಣ್ಣಿನ ಗುಡ್ಡೆಗಳು ಹಿಂಗಿಹೋಗಿ, ನೋಟದ ಕಸುವನ್ನು ಕಳೆದುಕೊಂಡು ಕುರುಡಾಗುವುದು;

ಗುರುವಾದಡೂ ಲಿಂಗವಾದಡೂ ಜಂಗಮವಾದಡೂ ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ ತೂತಕುಂಭದಲ್ಲಿಯ ನೀರು ಸೂತ್ರ ತಪ್ಪಿದ ಬೊಂಬೆ ನಿಜನೇತ್ರ ತಪ್ಪಿದ

ದೃಷ್ಟಿ=ಕುಟುಂಬದ ನೆಲೆ / ದುಡಿಮೆಯ ನೆಲೆ / ಸಾರ್ವಜನಿಕ ನೆಲೆಗಳಲ್ಲಿ ಕಂಡು ಬರುವ ಗುರು ಹಿರಿಯರನ್ನು ವ್ಯಕ್ತಿಯು ಒಪ್ಪಿಕೊಂಡು, ಅವರ ನಡೆನುಡಿಗಳನ್ನು ಅನುಸರಿಸಿ ನಡೆಯುವ ಮುನ್ನ "ಗುರು ಹಿರಿಯರೆನಿಸಿಕೊಂಡವರ ವ್ಯಕ್ತಿತ್ವದಲ್ಲಿ ಒಳ್ಳೆಯತನವಿದೆಯೇ ಅವರ ನಡೆನುಡಿಗಳು ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವಂತೆ ಇವೆಯೇ" ಎಂಬುದನ್ನು ಒರೆಹಚ್ಚಿ ನೋಡಿ ತಿಳಿದು ಕೊಳ್ಳಬೇಕು. ಹಾಗೆ ತಿಳಿದುಕೊಳ್ಳದೆ ಅನುಸರಿಸಿದರೆ ತೂತಾದ ಕೊಡದಲ್ಲಿ ತುಂಬಿಸಿ ಇಟ್ಟಿದ್ದ ನೀರು... ಸೂತ್ರದ ಎಳೆಗಳಿಲ್ಲದ ಬೊಂಬೆ... ನೋಟ ಹಿಂಗಿದ ಕಣ್ಣುಗಳು ಇದ್ದರೂ, ಅವು ಯಾವುದೇ ರೀತಿಯಲ್ಲಿ ಉಪಯೋಗಕ್ಕೆ ಬಾರದಂತಾಗುತ್ತವೆಯೋ ಅಂತೆಯೇ ಒಳ್ಳೆಯ ನಡೆನುಡಿಗಳಿಲ್ಲದ ಗುರು ಹಿರಿಯರ ಸಹವಾಸದಿಂದ ವ್ಯಕ್ತಿಯ ಜೀವನಕ್ಕೆ ಒಳಿತಾಗುವುದಿಲ್ಲ ಎಂಬ ತಿರುಳನ್ನು ಈ ಮೂರು ರೂಪಕಗಳು ಸೂಚಿಸುತ್ತಿವೆ.

ಬೇರು=ಮರಗಿಡಗಳ ತಾಯಿಬೇರು ಮತ್ತು ಕವಲು ಬೇರುಗಳು ಭೂಮಿಯೊಳಗಿನ ಮಣ್ಣಿನಲ್ಲಿ ಹೂತಿರುತ್ತದೆ; ಮೇಲ್+ಆದ; ಮೇಲೆ=ಹೊರಗಡೆ; ಆದ=ಆಗಿರುವ; ಸಸಿ=ಎಳೆಯ ಗಿಡ/ಪಯಿರು; ಬೇರು ಮೇಲಾದ ಸಸಿ=ಬೇರು ಕಿತ್ತುಬಂದು ಭೂಮಿಯ ಮೇಲೆ ಬುಡಮೇಲಾಗಿ ಬಿದ್ದಿರುವ ಎಳೆಯ ಗಿಡ; ನೀರಿನ+ಆರೈಕೆ+ಉಂಟೆ; ಆರೈಕೆ=ಎಚ್ಚರದಿಂದ ಜೋಪಾನವಾಗಿ ಕಾಪಾಡುವಿಕೆ; ಉಂಟು+ಎ; ಉಂಟು=ಇದೆ;

ಬೇರು ಮೇಲಾದ ಸಸಿಗೆ ನೀರಿನಾರೈಕೆಯುಂಟೆ=ಬುಡಮೇಲಾಗಿ ಭೂಮಿಯ ಮೇಲೆ ಬಿದ್ದಿರುವ ಪಯಿರಿಗೆ ನೀರನ್ನು ಎರೆಯುವುದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ನೀರನ್ನು ಹೀರಿಕೊಂಡು ಪಯಿರನ ಬೆಳವಣಿಗೆಗೆ ಕಾರಣವಾಗುವ ತಾಯಿಬೇರು ಈಗ ತಾನಿರಬೇಕಾದ ಎಡೆಯಲ್ಲಿ ಇಲ್ಲ; ಇಂತು=ಈ ರೀತಿಯಲ್ಲಿ; ಆವ=ಯಾವುದು; ಕ್ರೀ+ಅಲ್ಲಿಯೂ; ಕ್ರೀ=ಕ್ರಿಯೆ/ಕೆಲಸ; ಕ್ರೀಯಲ್ಲಿಯೂ=ಕೆಲಸದಲ್ಲಿಯೂ; ಭಾವ+ಶುದ್ಧ+ಆತ್ಮನ್+ಆಗಿ; ಭಾವ= ಮನದಲ್ಲಿ ತುಡಿಯುವ ಚಿಂತನೆ/ಕಲ್ಪನೆ; ಶುದ್ಧ=ಚೊಕ್ಕಟವಾದ; ಆತ್ಮನ್=ಮನಸ್ಸು; ಭಾವಶುದ್ಧಾತ್ಮ=ಮನದಲ್ಲಿ ತುಡಿಯುವ ನೂರೆಂಟು ಬಗೆಯ ಒಳಮಿಡಿತಗಳಲ್ಲಿ ಕೆಟ್ಟ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ಕಲ್ಪನೆ/ ಚಿಂತನೆಯಿಂದ ತನ್ನ ನಡೆನುಡಿಗಳನ್ನು ರೂಪಿಸಿಕೊಂಡಿರುವವನು; ಬೇಕು=ಅಗತ್ಯವಾಗಿರುವುದು;

ಬೇರು ಮೇಲಾದ ಸಸಿಗೆ ನೀರಿನಾರೈಕೆಯುಂಟೆ ಇಂತು ಆವ ಕ್ರೀಯಲ್ಲಿಯೂ ಭಾವಶುದ್ಧಾತ್ಮನಾಗಿ ಆರೈಕೆ ಬೇಕು=ಬುಡಮೇಲಾದ ಸಸಿಗೆ ನೀರಿನ್ನು ಎರೆಯುವದರಿಂದ ಯಾವುದೇ ಪ್ರಯೋಜನವಿಲ್ಲ. ಅದೇ ರೀತಿಯಲ್ಲಿ ವ್ಯಕ್ತಿಯು ತಾನು ಮಾಡುವ ಯಾವುದೇ ಬಗೆಯ ಕೆಲಸದಲ್ಲಿ ಒಳ್ಳೆಯ ಉದ್ದೇಶವನ್ನು ಹೊಂದಿರದಿದ್ದರೆ, ಅಂತಹ ಕೆಲಸದಿಂದ ಸಹಮಾನವರಿಗಾಗಲಿ ಇಲ್ಲವೇ ಸಮಾಜಕ್ಕಾಗಲಿ ಯಾವೊಂದು ಪ್ರಯೋಜನವೂ ಇಲ್ಲ. ಆದುದರಿಂದ ವ್ಯಕ್ತಿಯು ತಾನು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ' ಶುದ್ಧಾತ್ಮನಾಗಿರಬೇಕು '. ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಒಳ್ಳೆಯ ಮನಸ್ಸನ್ನು ಹೊಂದಿರಬೇಕು ಎಂಬ ತಿರುಳಿನಲ್ಲಿ ಈ ರೂಪಕದ ನುಡಿಗಳು ಬಳಕೆಯಾಗಿವೆ;

ಭೋಗಬಂಕೇಶ್ವರಲಿಂಗ=ಈಶ್ವರ/ಅಂಗಸೋಂಕಿನ ಲಿಂಗತಂದೆಯ ವಚನಗಳ ಅಂಕಿತನಾಮ; ಸಂಗ=ಒಡನಾಟ; ಶರಣ=ಶಿವನನ್ನು ಒಲಿದವನು; ಸುಖ=ಆನಂದ/ನಲಿವು; **ಭೋಗಬಂಕೇಶ್ವರಲಿಂಗ ಸಂಗದ ಶರಣನ ಸುಖ**= ಶಿವಶರಣನ ಪಾಲಿಗೆ ಜೀವನದಲ್ಲಿ ಒಲವು ನಲಿವು ನೆಮ್ಮದಿಯು ಒಳಿತಿನ ನಡೆನುಡಿಗಳಿಂದ ದೊರೆಯುತ್ತದೆ ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.)

❖

2. ಅಂಬಿಗರ ಚೌಡಯ್ಯ

ಊರು: ಚೌಡದಾನಪುರ, ರಾಣಿಬೆನ್ನೂರು ತಾಲ್ಲೂಕು, ಧಾರವಾಡ ಜಿಲ್ಲೆ.
ಕಸುಬು: ದೋಣಿಯನ್ನು ನದಿ/ಹೊಳೆ/ತೊರೆಯಲ್ಲಿ ನಡೆಸುವುದು.
ದೊರೆತಿರುವ ವಚನಗಳು: 273
ವಚನಗಳ ಅಂಕಿತನಾಮ: ಅಂಬಿಗರ ಚೌಡಯ್ಯ

2. ಅತ್ಯಾಹಾರವನುಂಡು
ಹೊತ್ತುಗಳೆದು ಹೋಕಿನ ಮಾತನಾಡುತ್ತ
ಚಿತ್ತ ಬಂದ ಪರಿಯಲ್ಲಿ ವ್ಯವಹರಿಸಿಕೊಳ್ಳುತ್ತ
ಮತ್ತೆ ಶಿವನ ನೆನೆದೆನೆಂದಡೆ
ಶಿವನವರ ಎತ್ತಲೆಂದರಿಯನೆಂದಾತ
ನಮ್ಮಂಬಿಗರ ಚೌಡಯ್ಯ.

ನಿತ್ಯ ಜೀವನದಲ್ಲಿ ಕೆಟ್ಟ ನಡೆನುಡಿಗಳಲ್ಲಿಯೇ ತೊಡಗಿಕೊಂಡು ಜತೆಜತೆಗೆ ಶಿವನಾಮ ಸ್ಮರಣೆಯನ್ನು ಮಾಡಿದ ಮಾತ್ರಕ್ಕೆ ವ್ಯಕ್ತಿಗಳು ಒಳ್ಳೆಯವರಾಗುವುದಿಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಕೆಟ್ಟ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸವು ಅವನಿಗೆ, ಅವನ ಕುಟುಂಬಕ್ಕೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಉಂಟುಮಾಡುವುದು.

'ಒಳ್ಳೆಯ ವ್ಯಕ್ತಿ" ಎಂದರೆ ವ್ಯಕ್ತಿಯು ತಾನಾಡುವ ಮಾತಿನಿಂದ ಮತ್ತು ಮಾಡುವ ಕೆಲಸದಿಂದ ತನಗೆ, ತನ್ನ ಕುಟುಂಬಕ್ಕೆ ಒಳಿತನ್ನು ಮಾಡಿಕೊಳ್ಳು ವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು.

(ಅತ್ಯಾಹಾರವನು+ಉಂಡು; ಆಹಾರ=ಉಣಿಸು/ತಿನಸು; ಅತ್ಯಾಹಾರ=ಹೆಚ್ಚಿನ ಪ್ರಮಾಣದ ಆಹಾರ; ಉಣ್=ತಿನ್ನು/ಸೇವಿಸು; **ಅತ್ಯಾಹಾರವನುಂಡು**=ಒಂದು ಇತಿಮಿತಿಯಿಲ್ಲದೆ ಅತಿ ಹೆಚ್ಚಾಗಿ ಆಹಾರವನ್ನು ತಿಂದು;

ಹೊತ್ತು+ಕಳೆದು; ಹೊತ್ತು=ಸಮಯ/ವೇಳೆ; ಕಳೆ=ಹಾಳುಮಾಡು; **ಹೊತ್ತುಗಳೆದು**=ತನಗೆ ಮತ್ತು ಇತರರಿಗೆ ಒಳಿತನ್ನು ಉಂಟುಮಾಡುವ ಯಾವುದೇ ಒಂದು ದುಡಿಮೆಯನ್ನು ಮಾಡದೇ, ಸುಮ್ಮನೆ ಕುಂತು ನಿಂತು ನಿದ್ರಿಸಿ ಕಾಲವನ್ನು ನೂಕುತ್ತಿರುವುದು; ಹೋಕು=ತಿರುಳಿಲ್ಲದ; ಮಾತು=ಸೊಲ್ಲು/ನುಡಿ; **ಹೋಕಿನ ಮಾತನಾಡುತ್ತ**=ಕೆಲಸಕ್ಕೆ ಬಾರದ ಪೊಳ್ಳು ಮಾತನ್ನಾಡುತ್ತ;

ಚಿತ್ತ=ಮನಸ್ಸು; ಪರಿ=ರೀತಿ; ವ್ಯವಹಾರ=ಯಾವುದಾದರೊಂದು ಬಗೆಯ ಕೆಲಸದಲ್ಲಿ ತೊಡಗುವುದು; **ಚಿತ್ತ ಬಂದ ಪರಿಯಲ್ಲಿ ವ್ಯವಹರಿಸಿಕೊಳ್ಳುತ್ತ**= ಮನದಲ್ಲಿ ಮೂಡುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಕೆಟ್ಟ ಕೆಲಸಗಳನ್ನೇ ಮಾಡುತ್ತ;

ಮತ್ತೆ=ಇದರ ಜತೆಗೆ; ಶಿವ=ದೇವರು; ನೆನೆದೆನ್+ಎಂದಡೆ; ನೆನೆ=ಸ್ಮರಿಸು/ಚಿಂತಿಸು; ಎಂದಡೆ=ಎಂದರೆ; **ಶಿವನ ನೆನೆದೆನೆಂದಡೆ**=ಶಿವನಾಮ ಸ್ಮರಣೆಯಲ್ಲಿ ನಾನು ತೊಡಗಿದ್ದೇನೆ ಎಂದು ಹೇಳಿಕೊಂಡರೆ;

ಶಿವನು+ಅವರ; ಅವರ=ಅಂತಹ ವ್ಯಕ್ತಿಗಳನ್ನು; ಎತ್ತಲ್+ಎಂದು+ಅರಿಯನ್+ಎಂದು+ಆತ; ಎತ್ತಲ್=ಯಾವ ಕಡೆಯ; ಅರಿ=ತಿಳಿ; ಅರಿಯನ್=ತಿಳಿಯನು;

ಶಿವನವರ ಎತ್ತಲೆಂದರಿಯನು=ಕೆಟ್ಟ ನಡೆನುಡಿಯಿಂದ ಬಾಳುತ್ತಿರುವ ವ್ಯಕ್ತಿಗಳನ್ನು ಶಿವನು ಯಾವ ರೀತಿಯಿಂದಲೂ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಶಿವಶರಣಶರಣೆಯರ ಪಾಲಿಗೆ ಶಿವನು ಕಲ್ಲಿನ, ಮಣ್ಣಿನ, ಮರದ, ಲೋಹದ ವಿಗ್ರಹವಾಗಿರಲಿಲ್ಲ. ವಚನಕಾರರ ಶಿವನು ಒಳ್ಳೆಯ ನಡೆನುಡಿಗಳ ಪ್ರತಿರೂಪವಾಗಿದ್ದನು;

ನಮ್ಮ+ಅಂಬಿಗರ; ಅಂಬಿಗ=ದೋಣಿಯನ್ನು ನಡೆಸುವ ಕಾಯಕವನ್ನು ಮಾಡುವವನು; **ಅಂಬಿಗರ ಚೌಡಯ್ಯ**=ವಚನಕಾರನು ತನ್ನ ಕಸುಬನ್ನು ಹೇಳುವ ಪದದ ಜತೆಗೆ ತನ್ನ ಹೆಸರನ್ನು ತಾನು ರಚಿಸಿದ ವಚನಗಳಿಗೆ ಅಂಕಿತನಾಮವನ್ನಾಗಿ ಬಳಸಿದ್ದಾನೆ;

❖

3. ಅರಿವಿನ ಪಥವನರಿಯದಿರ್ದಡೆ
ಮುಂದೆ ಹೆರರಿಗೆ ದೀಕ್ಷೆಯ ಮಾಡಲೇಕೆ
ತೊರೆಯಲದ್ದವನನೀಸಲರಿಯದವ
ತೆಗೆಯ ಹೋದಂತಾಯಿತ್ತೆಂದನಂಬಿಗ ಚೌಡಯ್ಯ.

ಇತರರ ನಡೆನುಡಿಗಳನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ ಹೊಣೆಯನ್ನು ಹೊತ್ತಿರುವ ವ್ಯಕ್ತಿಯು, ಮೊದಲು ತಾನು ಒಳ್ಳೆಯ ಅರಿವನ್ನು ಪಡೆದುಕೊಂಡು, ತನ್ನ ಬದುಕಿನಲ್ಲಿ ಒಳ್ಳೆಯ ನಡೆನುಡಿಗಳನ್ನು ಹೊಂದಿರಬೇಕು. ತಾನೇ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರದೆ ಇತರರಿಗೆ ತಿಳಿಯ ಹೇಳಲು ಹೋದರೆ, ಅದು ದುರಂತಕ್ಕೆ ಕಾರಣವಾಗುತ್ತದೆಯೆಂಬ ಎಚ್ಚರಿಕೆಯನ್ನು ರೂಪಕವೊಂದರ ಮೂಲಕ ಈ ವಚನದಲ್ಲಿ ನೀಡಲಾಗಿದೆ.

(ಅರಿವು=ತಿಳುವಳಿಕೆ/ವಿವೇಕ; ಪಥ + ಅನ್ + ಅರಿಯದೆ + ಇರ್ದಡೆ; ಪಥ= ದಾರಿ/ಮಾರ್ಗ; ಅನ್=ಅನ್ನು; ಅರಿ=ತಿಳಿ/ಕಲಿ; ಅರಿಯದೆ=ಕಲಿತುಕೊಳ್ಳದೆ/ ತಿಳಿದುಕೊಳ್ಳದೆ; ಇರ್ದಡೆ=ಇದ್ದರೆ; **ಅರಿವಿನ ಪಥ**=ಜೀವನದಲ್ಲಿ ಯಾವುದು ಒಳ್ಳೆಯದು... ಯಾವುದು ಕೆಟ್ಟದ್ದು ಎಂಬ ತಿಳುವಳಿಕೆಯನ್ನು ಪಡೆದುಕೊಂಡು, ಕೆಟ್ಟದ್ದನ್ನು ತೊರೆದು, ಒಳ್ಳೆಯದನ್ನು ಅನುಸರಿಸಿ, ತನಗೆ ಒಳಿತನ್ನು ಬಯಸು ವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿಗಳು; ಅರಿಯದಿರ್ದಡೆ=ತಿಳಿಯದಿದ್ದರೆ/ಕಲಿಯದಿದ್ದರೆ;

ಮುಂದೆ=ತರುವಾಯ/ಆಮೇಲೆ;; ಹೆರರು=ಬೇರೆಯವರು; ಹೆರರಿಗೆ= ಬೇರೆಯವರಿಗೆ; ದೀಕ್ಷೆ=ವ್ರತ/ನಿಯಮ/ಉಪದೇಶವನ್ನು ನೀಡುವುದು; ಮಾಡಲ್+ಏಕೆ; ಏಕೆ=ಏತಕ್ಕಾಗಿ/ಯಾವುದಕ್ಕಾಗಿ; **ಮುಂದೆ ಹೆರರಿಗೆ ದೀಕ್ಷೆಯ ಮಾಡಲೇಕೆ**=ತನಗೆ ತಿಳಿಯದ ವಿಚಾರಗಳನ್ನು ಇತರರಿಗೆ ಹೇಳುವುದರಿಂದಾಗಲಿ ಇಲ್ಲವೇ ತಾನು ಮಾಡಲಾಗದ ಒಳ್ಳೆಯ ಕೆಲಸಗಳನ್ನು ಇತರರಿಗೆ ಮಾಡುವಂತೆ ಹೇಳುವುದರಿಂದಾಗಲಿ ಯಾವುದೇ ಪ್ರಯೋಜನವಿಲ್ಲ;

ತೊರೆಯಲ್+ಅದ್ದ+ಅವನನ್+ಈಸಲ್+ಅರಿಯದವ; ತೊರೆ=ನದಿ/ಹೊಳೆ; ಅದ್ದ=ಮುಳುಗಿದ/ನೀರಿನಲ್ಲಿ ಮುಳುಗುತ್ತಿರುವ; ಅವನನ್=ಆ ವ್ಯಕ್ತಿಯನ್ನು; **ತೊರೆಯಲದ್ದವನನ್**=ನದಿಯ ನೀರಿನಲ್ಲಿ ಮುಳುಗೇಳುತ್ತಾ, ಸಾವು ಬದುಕಿನ ನಡುವೆ ಹೋರಾಡುತ್ತಿರುವವನನ್ನು; ಈಸು=ಈಜು/ನೀರಿನಲ್ಲಿ ಕಯ್

ಕಾಲುಗಳನ್ನು ಆಡಿಸುತ್ತ, ನೀರಿನ ಅಲೆಗಳನ್ನು ಸೀಳಿಕೊಂಡು, ನೀರಿನಲ್ಲಿ ಮುಳುಗಿಹೋಗದೆ, ತೇಲುತ್ತಾ ಮುಂದೆ ಮುಂದೆ ಸಾಗುವುದು; ಈಸಲು=ಈಜನ್ನು ಹೊಡೆಯಲು; ಅರಿಯದವ=ತಿಳಿಯದವನು; **ಈಸಲರಿಯದವ**=ಈಜನ್ನು ಕಲಿಯದವನು; ತೆಗೆ=ಮೇಲಕ್ಕೆ ಎತ್ತು; ತೆಗೆಯ=ತೆಗೆಯಲು; ಹೋದ+ಅಂತೆ+ಆಯಿತ್ತು+ಎಂದನ್+ಅಂಬಿಗ; ಅಂತೆ=ಹಾಗೆ; **ತೆಗೆಯ ಹೋದಂತೆ**=ಹೊರಕ್ಕೆ ಎಳೆದು ತರಲು ಹೋದ ಹಾಗೆ; ಆಯಿತ್ತು=ಆಯಿತು.

ಈಜನ್ನು ಕಲಿಯದವನು ತೊರೆಯಲ್ಲಿ ಮುಳುಗಿ ಸಾಯುತ್ತಿರುವವನ್ನು ಮೇಲಕ್ಕೆತ್ತಲು ಹೋದಾಗ, ಅವನನ್ನು ಕಾಪಾಡಲಾಗದೆ, ತಾನೂ ಅವನೊಡನೆ ಸಾಯುವಂತೆ ಒಳ್ಳೆಯ ಅರಿವನ್ನು ತನ್ನದಾಗಿಸಿಕೊಳ್ಳದವನು ಮತ್ತು ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಹೊಂದದವನು ಗುರುವಾದರೆ, ತಾನು ಹಾಳಾಗುವುದಲ್ಲದೆ, ತನ್ನ ಬಳಿ ವಿದ್ಯೆಯನ್ನು ಕಲಿಯಲು ಬಂದವರನ್ನು ಹಾಳುಮಾಡುತ್ತಾನೆ ಎಂಬ ಇಂಗಿತವನ್ನು ಈ ರೂಪಕ ಸೂಚಿಸುತ್ತಿದೆ)

❖

4. ಈಶ ಲಾಂಛನವ ತೊಟ್ಟು
ಮನ್ಮಥ ವೇಷ ಲಾಂಛನವ ತೊಡಲೇತಕ್ಕೆ
ಇದು ನಿಮ್ಮ ನುಡಿ ನಡೆಗೆ ನಾಚಿಕೆಯಲ್ಲವೇ
ಅಂದಳ ಛತ್ರ ಆಭರಣ
ಕರಿ ತುರಗಂಗಳ ಗೊಂದಣವೇತಕ್ಕೆ
ಅದು ಘನಲಿಂಗದ ಮೆಚ್ಚಲ್ಲ ಎಂದನಂಬಿಗ ಚೌಡಯ್ಯ.

ಜಾತಿ, ಮತ, ದೇವರುಗಳ ನೆಲೆಯಲ್ಲಿನ ಒಕ್ಕೂಟಗಳಿಗೆ ಗುರುಗಳಾದವರು ಮತ್ತು ದೇವ ಮಾನವರೆಂದು ತಮ್ಮನ್ನು ತಾವೇ ಕರೆದುಕೊಂಡು ಜನಸಮುದಾಯದ ನಡುವೆ ಕಾಣಿಸಿಕೊಳ್ಳುತ್ತಿರುವ ವ್ಯಕ್ತಿಗಳು ಹಣೆಯಲ್ಲಿ ವಿಭೂತಿ, ಕುಂಕುಮ, ಚಂದನದ ದ್ರವ್ಯಗಳನ್ನು ಬಳಿದುಕೊಂಡು; ಮಯ್ ಮೇಲೆ ಕಾವಿ ಇಲ್ಲವೇ ಬಿಳಿಯ ಬಣ್ಣದ ಬಟ್ಟೆಯನ್ನುಟ್ಟು; ಕೊರಳು ಮತ್ತು ತೋಳುಗಳಲ್ಲಿ ಜಪಮಣಿಗಳ ಮಾಲೆಯನ್ನು ಕಟ್ಟಿಕೊಂಡು ಸರಳವಾದ ಜೀವನವನ್ನು ನಡೆಸುತ್ತಿರುವಂತೆ ಮೇಲ್ನೋಟಕ್ಕೆ ಕಂಡು ಬಂದರೂ, ಕೆಲವು ಸನ್ನಿವೇಶಗಳಲ್ಲಿ ಜರತಾರಿ ಉಡುಗೆಯನ್ನುಟ್ಟು, ರತ್ನವಜ್ರಗಳಿಂದ ಕೂಡಿದ ಚಿನ್ನದ ಕಿರೀಟವನ್ನು ಮುಡಿಯಲ್ಲಿ ತೊಟ್ಟು, ಪಲ್ಲಕ್ಕಿಯನ್ನೇರಿ, ಆಡಂಬರದಿಂದ ಕೂಡಿದ ಆಚರಣೆಗಳಲ್ಲಿ ತೊಡಗಿ, ಅದ್ದೂರಿಯ ಮೆರವಣಿಗೆಯಲ್ಲಿ ಮೆರೆಯುತ್ತಿರುತ್ತಾರೆ. ಇಂತಹ ಇಬ್ಬಂದಿತನದ ನಡೆನುಡಿಗಳನ್ನು ಈ ವಚನದಲ್ಲಿ ಕಟುವಾಗಿ ಟೀಕಿಸಲಾಗಿದೆ.

'ಇಬ್ಬಂದಿತನದ ನಡೆನುಡಿ' ಎಂದರೆ, ಒಂದೆಡೆಯಲ್ಲಿ ಸರ್ವಸಂಗ ಪರಿತ್ಯಾಗಿಗಳಂತೆ ನಟಿಸುತ್ತಾ, ಮತ್ತೊಂದೆಡೆಯಲ್ಲಿ ಎಲ್ಲಾ ಬಗೆಯ ಸಿರಿಸಂಪದಗಳಿಂದ ಕೂಡಿದ ಆಡಂಬರದ ಬದುಕನ್ನು ನಡೆಸುತ್ತಿರುವುದು.

(ಈಶ=ಈಶ್ವರ/ದೇವರು; ಲಾಂಛನ=ಗುರುತು/ಚಿಹ್ನೆ; **ಈಶ ಲಾಂಛನ**=ಕಾವಿ ಇಲ್ಲವೇ ಬಿಳಿಯ ಬಣ್ಣದ ಬಟ್ಟೆ, ಹಣೆಯಲ್ಲಿ ವಿಭೂತಿ/ಕುಂಕುಮ/ಚಂದನ ದ್ರವ್ಯ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಅಂಗಯ್ ಮೇಲೆ ಇಷ್ಟಲಿಂಗ. ಶಿವನನ್ನು ಪೂಜಿಸುವ ವ್ಯಕ್ತಿಗಳು ಈ ಬಗೆಯ ಉಡುಗೆ ತೊಡುಗೆಗಳಿಂದ ಕಂಡುಬರುತ್ತಾರೆ; ತೊಟ್ಟು=ಹಾಕಿಕೊಂಡು; ಮನ್ಮಥ=ಹೆಣ್ಣುಗಂಡಿನ ಮಯ್ ಮನಗಳಲ್ಲಿ ಕಾಮದ ನಂಟಿನ ಒಳಮಿಡಿತಗಳು ಮೂಡುವಂತೆ ಮಾಡುವ ದೇವತೆ ಎಂಬ ಕಲ್ಪನೆಯು ಜನಮನದಲ್ಲಿದೆ; ವೇಷ=ಮಯ್ಯನ್ನು ಉಡುಗೆತೊಡುಗೆಗಳಿಂದ ಸಿಂಗರಿಸಿಕೊಳ್ಳುವುದು; **ಮನ್ಮಥ ವೇಷ ಲಾಂಛನ**=ಮನದಲ್ಲಿ ಕಾಮದ ನಂಟಿನ ಒಳಮಿಡಿತಗಳಿಂದ ಕೂಡಿ

ಅಂದಚೆಂದದ ಒಡವೆ ಮತ್ತು ಬಟ್ಟೆಗಳಿಂದ ಸಿಂಗಾರಗೊಂಡಿರುವ ದೇಹ; ತೊಡಲ್+ಏತಕ್ಕೆ; ತೊಡು=ಬಟ್ಟೆ ಮತ್ತು ಒಡವೆಗಳನ್ನು ಮಯ್ ಮೇಲೆ ಹಾಕಿಕೊಳ್ಳುವುದು ; ಏತಕ್ಕೆ=ಯಾವ ಉದ್ದೇಶಕ್ಕಾಗಿ/ಏನು ಕಾರಣಕ್ಕಾಗಿ;

ಇದು=ಈ ರೀತಿಯ; ನುಡಿ=ಮಾತು; ನಡೆ=ನಡವಳಿಕೆ/ಆಚರಣೆ; ನಾಚಿಕೆ+ಅಲ್ಲವೇ; ನಾಚಿಕೆ=ಲಜ್ಜೆ/ಅವಮಾನ; **ಇದು ನಿಮ್ಮ ನಡೆನುಡಿಗೆ ನಾಚಿಕೆಯಲ್ಲವೇ**=ಬಾಯಲ್ಲಿ ಸರಳತನದ ನುಡಿಗಳನ್ನಾಡುತ್ತಾ, ನಿಜಜೀವನದಲ್ಲಿ ಅದ್ದೂರಿತನದಿಂದ ಕೂಡಿದ ಸಿರಿವಂತಿಕೆಯ ಜೀವನವನ್ನು ಮಾಡುತ್ತಿರುವುದು ನಿಮ್ಮ ಮನವನ್ನು ಕಾಡುತ್ತಿಲ್ಲವೇ / ಈ ರೀತಿ ಇಬ್ಬಗೆಯಲ್ಲಿ ಬಾಳುವುದು ಸರಿಯಲ್ಲ ಎಂಬ ಒಳಮಿಡಿತವು ನಿಮ್ಮ ಮನದಲ್ಲಿ ಮೂಡಿಲ್ಲವೇ / ಆಡುವುದು ಒಂದು ಮಾಡುವುದು ಮತ್ತೊಂದು ಎಂಬ ನಾಣ್ಣುಡಿಯಂತೆ ನಾನಿದ್ದೇನೆ ಎಂಬ ಅಳುಕು ನಿಮ್ಮನ್ನು ಕಾಡುತ್ತಿಲ್ಲವೇ / ಸಮಾಜದಲ್ಲಿ ನನ್ನನ್ನು ನೋಡಿದ ನಾಲ್ಕು ಮಂದಿ ನನ್ನ ಬಗ್ಗೆ ಏನಂದುಕೊಳ್ಳಬಹುದು ಎಂಬ ಹೆದರಿಕೆಯಿಲ್ಲವೇ ;

ಅಂದಳ=ಪಲ್ಲಕ್ಕಿ/ಮೇನೆ; ಛತ್ರ=ದೇವರು/ರಾಜ/ಗುರುಹಿರಿಯರ ಸಾಮಾಜಿಕ ಅಂತಸ್ತಿನ ಹಿರಿಮೆಯ ಸೂಚಕವಾಗಿ ಹಿಡಿಯುವ ಬಿಳಿಯ ಕೊಡೆ; ಆಭರಣ= ಚಿನ್ನಬೆಳ್ಳಿವಜ್ರಗಳಿಂದ ಮಾಡಿರುವ ಒಡವೆ; ಕರಿ=ಆನೆ; ತುರಗ=ಕುದುರೆ; ತುರಗಂಗಳ=ಕುದುರೆಗಳ; ಗೊಂದಣವು+ಏತಕ್ಕೆ; ಗೊಂದಣ=ಗುಂಪು/ಮೇಳ; ಘನ=ದೊಡ್ಡದಾದ/ಮಂಗಳಕರವಾದ/ಮಹಿಮೆಯುಳ್ಳ; ಲಿಂಗ=ಈಶ್ವರನ ವಿಗ್ರಹ/ ದೇವರು; ಮೆಚ್ಚು=ಒಪ್ಪು/ಒಲಿ; ಮೆಚ್ಚಲ್ಲ=ಒಪ್ಪಿಗೆಯಾಗುವುದಿಲ್ಲ/ಒಲಿಯುವುದಿಲ್ಲ;

ಅದು ಘನಲಿಂಗದ ಮೆಚ್ಚಲ್ಲ=ಈ ರೀತಿ ಹೊರಗೊಂದು ಒಳಗೊಂದು ಬಗೆಯ ಉದ್ದೇಶಗಳಿಂದ ಕೂಡಿ, ಮನದಲ್ಲಿ ಒಳಿತು ಕೆಡುಕಿನ ನಡೆನುಡಿಗಳ ಬಗ್ಗೆ ಯಾವೊಂದು ಬಗೆಯ ಒಳತೋಟಿಗಳಿಲ್ಲದೆ ಮೆರೆಯುವ ವ್ಯಕ್ತಿಗಳನ್ನು ದೇವರು ಮೆಚ್ಚುವುದಿಲ್ಲ. ದೇವರು ಮೆಚ್ಚುವುದು ಒಳ್ಳೆಯ ನಡೆನುಡಿಗಳಿಂದ ಕೂಡಿ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿಗಳನ್ನು ಮಾತ್ರ ಎಂಬ ಇಂಗಿತವನ್ನು ಈ ನುಡಿಗಳಲ್ಲಿ ಸೂಚಿಸಲಾಗಿದೆ; ಎಂದನ್+ ಅಂಬಿಗ;ಎಂದನ್=ಎಂದು ಹೇಳಿದನು.)

❖

5. ಉಂಡರೆ ಭೂತನೆಂಬರು
ಉಣದಿದ್ದರೆ ಚಾತಕನೆಂಬರು
ಭೋಗಿಸಿದರೆ ಕಾಮಿಯೆಂಬರು
ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು
ಊರೊಳಗಿದ್ದರೆ ಸಂಸಾರಿ ಎಂಬರು
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು
ನಿದ್ರೆಗೈದರೆ ಜಡದೇಹಿ ಎಂಬರು
ಎದ್ದಿದ್ದರೆ ಚಕೋರನೆಂಬರು
ಇಂತೀ ಜನಮೆಚ್ಚಿ ನಡೆದವರ
ಎಡದ ಪಾದ ಕಿರಿ ಕಿರುಗುಣಿಯಲ್ಲಿ ಮನೆ ಮಾಡು ಮನೆ ಮಾಡು
ಎಂದಾತ ನಮ್ಮ ಅಂಬಿಗರ ಚೌಡಯ್ಯ.

ವ್ಯಕ್ತಿಯು ತನ್ನ ಜೀವನವನ್ನು ಯಾವ ರೀತಿಯಲ್ಲಿ ನಡೆಸುತ್ತಿದ್ದರೂ, ಸುತ್ತುಮುತ್ತಣ ಜನರಲ್ಲಿ ಕೆಲವರಾದರೂ ಅವನ ಬಗ್ಗೆ ಒಂದಲ್ಲ ಒಂದು ಬಗೆಯ ಕೊಂಕುನುಡಿಗಳನ್ನು ಆಡುತ್ತಿರುತ್ತಾರೆ. ಆದುದರಿಂದ ಲೋಕದಲ್ಲಿ ಎಲ್ಲರೂ ಮೆಚ್ಚುವಂತೆ ಬಾಳ್ವೆಯನ್ನು ನಡೆಸಲು ಯಾರಿಂದಲೂ ಆಗದು ಎಂಬ ಸಾಮಾಜಿಕ ವಾಸ್ತವವನ್ನು ಈ ವಚನದಲ್ಲಿ ಹೇಳಲಾಗಿದೆ.

(ಉಂಡರೆ=ಊಟವನ್ನು ಮಾಡಿದರೆ; ಭೂತನ್+ಎಂಬರು; ಭೂತ=ದೆವ್ವ/ ಪಿಶಾಚಿ. ಉಣಿಸು ತಿನಸುಗಳನ್ನು ಇತಿಮಿತಿಯಿಲ್ಲದೆ ಎಷ್ಟೇ ಉಂಡರೂ ದೆವ್ವದ ಹಸಿವು ಇಂಗುವುದಿಲ್ಲವೆಂಬ ನಂಬಿಕೆ ಜನರಲ್ಲಿದೆ. ದೆವ್ವವೆಂಬುದು ಜನರ ಮಾನಸಿಕ ಕಲ್ಪನೆಯಿಂದ ರೂಪುಗೊಂಡಿದೆ; ಎಂಬರು=ಎನ್ನುವರು; ಉಣದೆ+ ಇದ್ದರೆ; ಉಣದೆ=ಉಣ್ಣದೆ/ತಿನ್ನದೆ; ಚಾತಕನ್+ಎಂಬರು; ಚಾತಕ=ಒಂದು ಬಗೆಯ ಹಕ್ಕಿ. ಈ ಹಕ್ಕಿಯು ಯಾವುದೇ ಬಗೆಯ ಹಣ್ಣುಕಾಯಿ ಹುಳು ಹುಪ್ಪಟೆ ಗಳನ್ನು ತಿನ್ನದೆ, ಕೇವಲ ಮಳೆಯ ಹನಿ ನೀರನ್ನು ಕುಡಿದು ಜೀವಿಸುತ್ತದೆ ಎಂದು ಜನರು ಮಾತನಾಡಿಕೊಳ್ಳುತ್ತಾರೆ; **ಉಂಡರೆ ಭೂತನೆಂಬರು ಉಣದಿದ್ದರೆ ಚಾತಕನೆಂಬರು**= ಚೆನ್ನಾಗಿ ಉಂಡುತಿಂದು ತೇಗಿ ಆನಂದಪಡುತ್ತಿದ್ದರೆ, ಇತಿಮಿತಿಯಿಲ್ಲದೆ ಉಣ್ಣುವ ಹೊಟ್ಟೆಬಾಕ ಎನ್ನುತ್ತಾರೆ, ಮಿತಿಯಾಗಿ ತಿಂದುಂಡರೆ, ಹೊಟ್ಟೆಬಟ್ಟೆಗೂ ವೆಚ್ಚ ಮಾಡದೆ ಅತಿಜಿಪುಣನಾಗಿ ಬಾಳುತ್ತಿದ್ದಾನೆ ಎಂದು ಆಡಿಕೊಳ್ಳುತ್ತಾರೆ;

ಭೋಗ=ಜೀವನದಲ್ಲಿ ಒಲವು ನಲಿವುಗಳಿಂದ ಆನಂದವನ್ನು ಪಡೆಯುವುದು; **ಭೋಗಿಸಿದರೆ**=ಜೀವನದಲ್ಲಿ ಆನಂದ, ನೆಮ್ಮದಿ, ಒಲವು, ನಲಿವುಗಳನ್ನು ಪಡೆಯುತ್ತಿದ್ದರೆ; ಕಾಮಿ+ಎಂಬರು; ಕಾಮಿ=ಹೆಣ್ಣನ್ನು ಕೂಡುವುದಕ್ಕಾಗಿ ಹಂಬಲಿಸುವವನು/ಕಾಮುಕ/ಅತಿಯಾದ ಆಸೆಯುಳ್ಳವನು; ಭೋಗಿಸದೆ+ಇದ್ದರೆ; **ಭೋಗಿಸದಿದ್ದರೆ**=ಯಾವುದೇ ಬಗೆಯ ಒಲವು ನಲಿವುಗಳನ್ನು ಹೊಂದದಿದ್ದರೆ; ಮುನ್ನ=ಈ ಮೊದಲು/ಮುಂಚೆ; ಮಾಡಿದ= ಮಾಡಿರುವ; ಕರ್ಮ=ಪಾಪದ ಕೆಲಸ; ಕರ್ಮಿ=ಪಾಪಿ/ನೀಚ; **ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು**=ಹಿಂದಿನ ಜನ್ಮದಲ್ಲಿ ಮಾಡಬಾರದ ಪಾಪದ ಕೆಲಸಗಳನ್ನು ಮಾಡಿ ಜನರಿಗೆ ಕೇಡನ್ನು ಬಗೆದಿದ್ದಾನೆ. ಆದುದರಿಂದಲೇ ಈ ಜನ್ಮದಲ್ಲಿ ಯಾವುದೇ ಬಗೆಯ ಸುಖವನ್ನು ಪಡೆಯದೆ ಸಂಕಟದಲ್ಲಿ ಬೇಯುತ್ತಿದ್ದಾನೆ ಎಂದು ನಿಂದಿಸುತ್ತಾರೆ;

ಊರು+ಒಳಗೆ+ಇದ್ದರೆ; ಊರೊಳಿಗಿದ್ದರೆ=ಊರಿನಲ್ಲಿ ವಾಸಿಸುತ್ತಿದ್ದರೆ; ಸಂಸಾರ=ಕುಟುಂಬ/ಪರಿವಾರ; ಸಂಸಾರಿ=ಹೆಂಡತಿ ಮಕ್ಕಳು ಮೊಮ್ಮಕ್ಕಳಿಂದ ಕೂಡಿ ನನ್ನದು ತನ್ನದು ಎಂಬ ಮೋಹದಿಂದ ಬಾಳುತ್ತಿರುವ ವ್ಯಕ್ತಿ; ಅಡವಿ+ ಒಳಗೆ+ಇದ್ದರೆ; ಅಡವಿ=ಕಾಡು; ಮೃಗ=ಪ್ರಾಣಿ; ಜಾತಿ=ವರ್ಗ/ಗುಂಪು; **ಊರೊಳಗಿದ್ದರೆ ಸಂಸಾರಿ ಎಂಬರು ಅಡವಿಯೊಳಗಿದ್ದರೆ ಮೃಗಜಾತಿ ಎಂಬರು**= ಊರಿನಲ್ಲಿ ಸಂಸಾರಿಯಾಗಿದ್ದರೆ ಮೋಹದ ಸುಳಿಯಲ್ಲಿ ಸಿಲುಕಿರುವ ವ್ಯಕ್ತಿಯೆಂದು ಟೀಕಿಸುತ್ತಾರೆ. ಸಂಸಾರದ ಬಯಕೆಗಳೆಲ್ಲವನ್ನೂ ಕಿತ್ತೊಗೆದು ಸಂನ್ಯಾಸಿಯಾಗಿ ಕಾಡಿನಲ್ಲಿ ನೆಲೆಸಿದರೆ ಕಾಡಿನ ಪ್ರಾಣಿಯೆಂದು ಹಂಗಿಸುತ್ತಾರೆ;

ನಿದ್ರೆ+ಗೈದರೆ; ಗೈದರೆ=ಗೆಯ್ದರೆ; ಗೆಯ್=ಮಾಡು; ಗೆಯ್ದರೆ=ಮಾಡಿದರೆ; ನಿದ್ರೆಗೈಯ್ದರೆ=ಮಲಗಿ ನಿದ್ರಿಸಿದರೆ; ಜಡ=ಚಟುವಟಿಕೆಯಿಲ್ಲದ; ದೇಹ=ಶರೀರ/ ಮಯ್; ಜಡದೇಹಿ=ಸೋಂಬೇರಿ/ಮಯ್ಗಳ್ಳ; ಎದ್ದು+ಇದ್ದರೆ; ಎದ್ದು=ಎಳ್ದು; ಏಳ್/ಏಳು=ನಿಲ್ಲು; ಎದ್ದಿದ್ದರೆ=ಕ್ರಿಯಾಶೀಲತೆಯ ನಡೆನುಡಿಗಳಿಂದ ಕೂಡಿದ್ದರೆ; ಚಕೋರನ್+ಎಂಬರು; ಚಕೋರ=ಒಂದು ಬಗೆಯ ಹಕ್ಕಿ.ಇದು ಇರುಳಿನಲ್ಲಿ ಕಣ್ಣುಮುಚ್ಚದೆ ಎಚ್ಚರವಾಗಿದ್ದುಕೊಂಡು, ಚಂದಿರನ ಬೆಳದಿಂಗಳನ್ನು ಹೀರುತ್ತ ಬದುಕಿರುತ್ತದೆ ಎಂದು ಜನರು ಮಾತನಾಡಿ ಕೊಳ್ಳುತ್ತಾರೆ; **ನಿದ್ರೆಗೈದರೆ ಜಡದೇಹಿ ಎಂಬರು ಎದ್ದಿದ್ದರೆ ಚಕೋರನೆಂಬರು**=

ಯಾವೊಂದು ಕೆಲಸವನ್ನು ಮಾಡದೆ ಸುಮ್ಮನಿದ್ದರೂ ಆಡಿಕೊಳ್ಳುತ್ತಾರೆ. ಏನನ್ನಾದರೂ ಮಾಡುತ್ತಾ ಚಟುವಟಿಕೆಯಿಂದ ಕೂಡಿದ್ದರೂ ನಿಂದಿಸುತ್ತಾರೆ;

ಇಂತು+ಈ; ಇಂತು=ಈ ರೀತಿಯಲ್ಲಿ; ಜನ=ಲೋಕದ ಮಂದಿ; ಮೆಚ್ಚು= ಹೊಗಳು/ಕೊಂಡಾಡು; ನಡೆ=ನಡವಳಿಕೆ/ಆಚರಣೆ; ನಡೆದವರ= ನಡೆದವರನ್ನು; **ಇಂತೀ ಜನಮೆಚ್ಚಿ ನಡೆದವರ**=ತಮ್ಮ ಸುತ್ತಮುತ್ತಣ ಜನರನ್ನು ಮೆಚ್ಚಿಸಲೆಂದು, ಜನರ ತಾಳಕ್ಕೆ ತಕ್ಕಂತೆ ಕುಣಿಯುತ್ತಾ, ತಮ್ಮ ಮಯ್ ಮನಗಳನ್ನು ತಾವೇ ವಂಚಿಸಿಕೊಂಡು ಬಾಳುವಂತಹ ವ್ಯಕ್ತಿಗಳನ್ನು; ಪಾದ= ಅಡಿ/ಕಾಲು; ಎಡದ ಪಾದ=ಯಾವುದೇ ಒಂದು ವಸ್ತು, ಪ್ರಾಣಿ, ಮಾನವ ಜೀವಿಯನ್ನು ಬಹುಕೀಳಾಗಿ ಕಾಣುವಾಗ ಅದನ್ನು ಇಲ್ಲವೇ ವ್ಯಕ್ತಿಯನ್ನು ಎಡದ ಪಾದಕ್ಕೆ ಹೋಲಿಸಿ ಹೀಯಾಳಿಸುವುದು ಜನಸಮುದಾಯದ ಮಾತುಕತೆಯಲ್ಲಿ ಒಂದು ನುಡಿಗಟ್ಟಾಗಿ ಬಳಕೆಯಾಗುತ್ತಿದೆ;

ಕಿರಿ=ಚಿಕ್ಕದು/ಸಣ್ಣದು; ಕಿರು+ಕುಣಿ=ಕಿರುಗುಣಿ; ಕುಣಿ=ಕುಳಿ/ತಗ್ಗು; ಕಿರುಗುಣಿ=ಸಣ್ಣಗುಳಿ/ಚಿಕ್ಕಬಿರುಕು; ಕಿರುಗುಣಿಕೆ=ಕಿರು ಬೆರಳು; ಎಡದ ಪಾದದ ಕಿರಿ ಕಿರುಗುಣಿ=ಎಡದ ಪಾದದಲ್ಲಿ ಅತಿಚಿಕ್ಕದಾಗಿರುವ ಕಿರುಬೆರಳು; ಮನೆ ಮಾಡು=ನೆಲೆಸುವಂತೆ ಮಾಡು; **ಜನಮೆಚ್ಚಿ ನಡೆದವರ ಎಡದ ಪಾದ ಕಿರಿ ಕಿರುಗುಣಿಯಲ್ಲಿ ಮನೆ ಮಾಡು ಮನೆ ಮಾಡು**=ಜನರ ಮೆಚ್ಚುಗೆಯನ್ನು ಪಡೆಯಲೆಂದೇ ಸುಳ್ಳು, ತಟವಟ, ಕುಟಿಲತೆಯಿಂದ ನಡೆದುಕೊಳ್ಳುವ ವ್ಯಕ್ತಿಗಳನ್ನು ದೂರವಿಡಬೇಕು ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ಎಂದು+ಆತ; ಆತ=ಅವನು; ಎಂದಾತ=ಎಂದು ಹೇಳಿದನು;

ಯಾವುದೇ ವ್ಯಕ್ತಿಯು ಜನರ ಮೆಚ್ಚುಗೆಗಾಗಿ ಹಂಬಲಿಸದೆ, ಜನರ ಹೊಗಳಿಕೆಗೆ ಹಿಗ್ಗದೆ ಇಲ್ಲವೇ ತೆಗಳಿಕೆಗೆ ಕುಗ್ಗದೆ, ತನ್ನ ಮನಸ್ಸಿಗೆ ತಾನೇ ಸಾಕ್ಷಿಯಾಗಿದ್ದುಕೊಂಡು ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಿಂದ ಬಾಳುತ್ತಿರಬೇಕು ಎಂಬ ಇಂಗಿತವನ್ನು ಈ ವಚನದಲ್ಲಿ ಸೂಚಿಸಲಾಗಿದೆ)

❖

6. ಓದಿಹೆನೆಂಬ ಒಡಲು
ಕಂಡೆಹೆನೆಂಬ ಭ್ರಾಂತು
ಸರ್ವರಿಗೆ ಹೇಳಿಹೆನೆಂಬ ತೇಜಸ್ಸು
ಇಂತಿವೆಲ್ಲವು ಇದಿರಿಗೆ ಹೇಳೆ
ತನ್ನ ಉದರದ ಕಕ್ಕುಲತೆಯಲ್ಲದೆ
ಆತ ಅರಿವಿಂಗೆ ಒಡಲಲ್ಲ
ಎಂದನಂಬಿಗ ಚೌಡಯ್ಯ.

"ನಾನು ಎಲ್ಲವನ್ನೂ ಚೆನ್ನಾಗಿ ಓದಿದ್ದೇನೆ; ಲೋಕದ ಆಗುಹೋಗುಗಳನ್ನು ಕಂಡಿದ್ದೇನೆ; ಎಲ್ಲರಿಗೂ ತಿಳಿಯಹೇಳಬಲ್ಲ ಕಸುವನ್ನು ಹೊಂದಿದ್ದೇನೆ." ಎಂದು ತನ್ನನ್ನು ತಾನೇ ಹಾಡಿಹೊಗಳಿಕೊಳ್ಳುವ ವ್ಯಕ್ತಿಯು ಎಂದೆಂದಿಗೂ ಒಳ್ಳೆಯ ನಡೆ ನುಡಿಗಳಿಂದ ಕೂಡಿದ ವ್ಯಕ್ತಿಯಾಗಿರುವುದಿಲ್ಲ. ಏಕೆಂದರೆ ತಾನು ಪಡೆದುಕೊಂಡ ಅಕ್ಕರದ ವಿದ್ಯೆಯಿಂದ ಸುಂದರವಾಗಿ ಮಾತನಾಡುವುದನ್ನು ಕಲಿತುಕೊಂಡು ಜನರನ್ನು ವಂಚಿಸುವ ಕಲೆಯಲ್ಲಿ ಪರಿಣತನಾಗಿ ತನ್ನ ಹೊಟ್ಟೆಯ ಪಾಡನ್ನು ನೀಗಿಕೊಳ್ಳುತ್ತಾನೆಯೇ ಹೊರತು ಎಂದೆಂದಿಗೂ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದಿಲ್ಲ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸವು ಆತನಿಗೆ ಮತ್ತು ಆತನ ಕುಟುಂಬಕ್ಕೆ ಒಲವು, ನಲಿವು ಮತ್ತು ನೆಮ್ಮದಿಯನ್ನು ಉಂಟುಮಾಡುವಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಿರಬೇಕು.

(ಓದು+ಇಹೆನ್+ಎಂಬ; ಓದು=ಲಿಪಿರೂಪದಲ್ಲಿರುವ ವಿದ್ಯೆಯನ್ನು ನೋಡಿ ಕಲಿಯುವುದು; ಇಹೆನ್=ಇರುವೆನು; ಎಂಬ=ಎನ್ನುವ; ಒಡಲು=ದೇಹ; **ಓದಿಹೆನೆಂಬ ಒಡಲು**=ನಾನು ಚೆನ್ನಾಗಿ ಓದಿದ್ದೇನೆ ಎಂದು ಅಹಂಕಾರ ಪಡುವ ವ್ಯಕ್ತಿ;

ಕಂಡು+ಎಹೆನ್+ಎಂಬ; ಕಂಡು=ಲೋಕದಲ್ಲಿನ ನಿಸರ್ಗ ಮತ್ತು ಮಾನವ ಸಮುದಾಯದ ಸಂಗತಿಗಳನ್ನು ನೋಡಿ; ಎಹೆನ್=ಇರುವೆನು; ಭ್ರಾಂತು=ಇರುವುದನ್ನು ಇಲ್ಲವೆಂದು, ಇಲ್ಲದ್ದನ್ನು ಇದೆಯೆಂದು ತಿಳಿದು

ಕೊಂಡಿರುವುದು; **ಕಂಡೆಹೆನೆಂಬ ಭ್ರಾಂತು**=ಲೋಕದಲ್ಲಿನ ಎಲ್ಲವನ್ನು ನಾನು ನೋಡಿ ತಿಳಿದುಕೊಂಡಿದ್ದೇನೆ ಎನ್ನುವುದು ಒಂದು ತಪ್ಪು ಗ್ರಹಿಕೆಯೇ ಹೊರತು, ವಾಸ್ತವವಲ್ಲ. ಏಕೆಂದರೆ ಯಾವುದೇ ಒಬ್ಬ ವ್ಯಕ್ತಿಯು ಲೋಕದಲ್ಲಿನ ಎಲ್ಲ ಸಂಗತಿಗಳನ್ನು ತಿಳಿಯಲಾಗುವುದಿಲ್ಲ;

ಸರ್ವರಿಗೆ=ಎಲ್ಲರಿಗೆ; ಹೇಳಿ+ಇಹೆನ್+ಎಂಬ; ತೇಜಸ್ಸು=ಹೆಚ್ಚುಗಾರಿಕೆ/ ದೊಡ್ಡಸ್ತಿಕೆ; **ಸರ್ವರಿಗೆ ಹೇಳಿಹೆನೆಂಬ ತೇಜಸ್ಸು**=ಎಲ್ಲರಿಗೂ ಉಪದೇಶ ಮಾಡಬಲ್ಲನೆಂಬ ದೊಡ್ಡಸ್ತಿಕೆ;

ಇಂತು+ಇವು+ಎಲ್ಲವು; ಇಂತು=ಈ ರೀತಿ; ಇದಿರಿಗೆ=ಬೇರೆಯವರಿಗೆ; ಹೇಳ್=ಉಪದೇಶಮಾಡುವುದು; ತನ್ನ=ಅವನ; ಉದರ=ಹೊಟ್ಟೆ; ಕಕ್ಕುಲತೆ+ ಅಲ್ಲದೆ; ಕಕ್ಕುಲತೆ=ಚಿಂತೆ/ಕಳವಳ; ಅಲ್ಲದೆ=ಹೊರತು; ಅರಿವು=ತಿಳುವಳಿಕೆ; ಒಡಲ್+ಅಲ್ಲ;

ಆತ ಅರಿವಿಂಗೆ ಒಡಲಲ್ಲ=ಅವನು ಒಳ್ಳೆಯ ಅರಿವನ್ನು ಪಡೆದ ವ್ಯಕ್ತಿಯಲ್ಲ. ಏಕೆಂದರೆ ಒಳ್ಳೆಯ ಅರಿವನ್ನು ಹೊಂದಿದ್ದರೆ ಆತ ಮೊದಲು ತಾನು ಆಡುವ ಮಾತು ಮತ್ತು ತಾನು ಮಾಡುವ ಕಾಯಕದಿಂದ ತನ್ನ ಜೀವನವನ್ನು ಮೊದಲು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಂಡು, ಅದರ ಜತೆಜತೆಗೆ ಸಹಮಾನವರ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತಿದ್ದ. ಆದರೆ ದಿನಬೆಳಗಾದರೆ ಯಾವೊಂದು ದುಡಿಮೆಯನ್ನು ಮಾಡದೆ ಜನರಿಗೆ ಕೇವಲ ಉಪದೇಶ ಮಾಡುವ ವ್ಯಕ್ತಿಯು ತನ್ನ ಹೊಟ್ಟೆಯ ಪಾಡನ್ನು ನೀಗಿಸಿಕೊಳ್ಳುತ್ತಾನೆಯೇ ಹೊರತು, ಆತ ಸಮಾಜಕ್ಕೆ ಯಾವ ರೀತಿಯಿಂದಲೂ ಉಪಯುಕ್ತ ವ್ಯಕ್ತಿಯಾಗಿರುವುದಿಲ್ಲ; ಎಂದನ್+ಅಂಬಿಗ;

❖

7. ಕುಲ ಹಲವಾದಡೇನು
ಉತ್ಪತ್ಯ ಸ್ಥಿತಿ ಲಯ ಒಂದೆ ಭೇದ
ಮಾತಿನ ರಚನೆಯ ಬೇಕಾದಂತೆ ನುಡಿದಡೇನು
ಬಿಡುಮುಡಿಯಲ್ಲಿ ಎರಡನರಿಯಬೇಕು
ಎಂದನಂಬಿಗ ಚೌಡಯ್ಯ.

ನೂರೆಂಟು ಬಗೆಯ ಜಾತಿ ಮತ್ತು ಸಾವಿರಾರು ಬಗೆಯ ಉಪಜಾತಿಗಳ ಹೆಣಿಗೆಯಿಂದ ಕೂಡಿರುವ ಜಾತಿ ತಾರತಮ್ಯದ ಸಾಮಾಜಿಕ ರಚನೆಯನ್ನು ಅಲ್ಲಗಳೆದು, ಜಗತ್ತಿನಲ್ಲಿ ಹುಟ್ಟಿ ಬೆಳದು ಬಾಳಿ ಅಳಿಯುವ ಜನರೆಲ್ಲರೂ 'ಮಾನವ ಕುಲ' ಎಂಬ ಒಂದೇ ಜಾತಿಗೆ ಸೇರಿದವರು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಕುಲ=ಜಾತಿ; ಹಲವು+ಆದಡೆ+ಏನು; ಹಲವು=ಬಹಳ/ಅನೇಕ; ಆದಡೆ= ಆದರೆ; ಏನು=ಯಾವುದು; **ಕುಲ ಹಲವಾದಡೇನು**=ಸಮಾಜದಲ್ಲಿ ಜನರನ್ನು ವಿಂಗಡಿಸಿರುವ ಹಲವು ಬಗೆಯ ಜಾತಿಗಳು ಇದ್ದರೇನು?; ಉತ್ಪತ್ಯ=ಹುಟ್ಟು/ ಜನನ; ಸ್ಥಿತಿ=ಇರುವಿಕೆ; ಲಯ=ಸಾವು; ಭೇದ=ರೀತಿ; **ಉತ್ಪತ್ಯ ಸ್ಥಿತಿ ಲಯ ಒಂದೆ ಭೇದ**=ಮಾನವ ಜೀವಿಗಳೆಲ್ಲರೂ ಹುಟ್ಟುವ, ಇರುವ ಮತ್ತು ಸಾಯುವ ರೀತಿ ಮಾತ್ರ ಒಂದೇ ಬಗೆಯಲ್ಲಿದೆ. ಮಾನವ ಜೀವಿಗಳಲ್ಲಿ ಒಂದು ಗಂಡು ಮತ್ತು ಒಂದು ಹೆಣ್ಣು ಕಾಮದ ನಂಟನ್ನು ಹೊಂದಿದಾಗ ಹೆಣ್ಣಿನ ಬಸಿರಿನಿಂದ ಮಗು ಹುಟ್ಟುತ್ತದೆ. ಹುಟ್ಟಿದ ಮಗು ಬೆಳೆದು ಬಾಳುವಾಗ ಈ ಜಗತ್ತಿನಲ್ಲಿ ಎಲ್ಲರಂತೆಯೇ ಉಸಿರಾಡುತ್ತದೆ; ಉಣ್ಣುತ್ತದೆ; ಉಡುತ್ತದೆ. ಬಾಲ್ಯ–ಪ್ರಾಯ–ಮುಪ್ಪಿನ ಹಂತ ಗಳನ್ನು ದಾಟಿ ಕಟ್ಟಕಡೆಗೆ ಹುಟ್ಟಿದ ಮಾನವರೆಲ್ಲರೂ ಸಾವನ್ನಪ್ಪುತ್ತಾರೆ. ಇದುವೇ ಮಾನವ ಜೀವಿಗಳೆಲ್ಲರ ನಿಸರ್ಗ ಸಹಜವಾದ ಹುಟ್ಟು ಬದುಕು ಸಾವಿನ ರೀತಿ;

ರಚನೆ=ಹೊಸದಾಗಿ ಕಟ್ಟುವುದು/ನಿರ್ಮಿಸುವುದು; ಮಾತಿನ ರಚನೆ=ವ್ಯಕ್ತಿಯು ನುಡಿಯ ಮೂಲಕ ವಿಚಾರಗಳನ್ನು ಇಲ್ಲವೇ ಸಂಗತಿಗಳನ್ನು ಬಣ್ಣಿಸಿ ಹೇಳುವುದು; ಬೇಕಾದಂತೆ=ತನಗೆ ಇಚ್ಚೆ ಬಂದಂತೆ; ನುಡಿದಡೆ+ಏನು; ನುಡಿದಡೆ=ಹೇಳಿದರೆ; ಏನು=ಯಾವುದು;

"ಮಾತಿನ ರಚನೆಯ ಬೇಕಾದಂತೆ ನುಡಿದಡೇನು?**"** ಎಂಬ ಈ ಪ್ರಶ್ನೆಯನ್ನು ವಚನಕಾರನು ಕುಲದ ಬಗ್ಗೆ ಪ್ರಾಚೀನ ಕಾಲದಲ್ಲಿ ಸಂಸ್ಕೃತ ನುಡಿಯಲ್ಲಿ

ಹೊತ್ತಗೆಗಳನ್ನು ರಚಿಸಿರುವ ವ್ಯಕ್ತಿಗಳಿಗೆ ಹಾಕುತ್ತಿದ್ದಾನೆ. ಅಂಬಿಗರ ಚೌಡಯ್ಯನನ್ನು ಒಳಗೊಂಡಂತೆ ಎಲ್ಲಾ ಶಿವಶರಣಶರಣೆಯರು ಮೇಲು-ಕೀಳಿನ ಜಾತಿ ತಾರತಮ್ಯದಿಂದ ಕೂಡಿರುವ ಸಮಾಜವನ್ನು ತಿರಸ್ಕರಿಸಿ, ಶಿವನನ್ನು ಪೂಜಿಸುವ ಎಲ್ಲ ಶರಣರು ಒಂದೇ ಕುಲಕ್ಕೆ ಸೇರಿದವರು ಎಂಬ ನಿಲುವನ್ನು ತಳೆದಿದ್ದರು. ಜಾತಿ ತಾರತಮ್ಯ ಸಮಾಜದಲ್ಲಿ ದುಡಿಯುವ ವರ್ಗದ ಜನರು ಬಡತನ, ಸಂಕಟ ಮತ್ತು ಅಪಮಾನದಿಂದ ಹೇಗೆ ನರಳುತ್ತಿದ್ದಾರೆ ಎಂಬುದನ್ನು ತಿಳಿಯಬೇಕಾದರೆ ಇಂಡಿಯಾ ದೇಶದ ಪ್ರಾಚೀನ ಸಮಾಜದ ಚರಿತ್ರೆಯನ್ನು ತಿಳಿಯಬೇಕು. ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ಪ್ರಾಚೀನ ಕಾಲದ ಕೆಲವು ಹೊತ್ತಗೆಗಳಲ್ಲಿ ಇಂಡಿಯಾ ದೇಶದಲ್ಲಿ ಅಂದು ನೆಲೆಸಿದ್ದ ಜನಸಮುದಾಯದ ಸಾಮಾಜಿಕ ರಚನೆಯ ಸ್ವರೂಪವನ್ನು ಮತ್ತು ಜನರು ನಿತ್ಯಜೀವನದಲ್ಲಿ ಮಾಡಬೇಕಾದ ಆಚರಣೆಗಳನ್ನು ಹಾಗೂ ಅನುಸರಿಸಬೇಕಾದ ನಿಯಮಗಳನ್ನು ವಿವರಿಸಿರುವ ನುಡಿ ರಚನೆಗಳು ಈ ಕೆಳಕಂಡಂತಿವೆ.

ಇಂಡಿಯಾ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ "ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ" ಎಂಬ ನಾಲ್ಕು ವರ್ಣಗಳಿದ್ದವು. ಬ್ರಹ್ಮನೆಂಬ ದೇವರ ಮೊಗದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರರು ಹುಟ್ಟಿ ಬಂದಿದ್ದಾರೆ. ವಿದ್ಯೆ, ಸಂಪತ್ತು ಮತ್ತು ಅಧಿಕಾರವನ್ನು ಹೊಂದುವುದಕ್ಕೆ ಶೂದ್ರರು ಯೋಗ್ಯರಲ್ಲ. ಪಾದವು ಹೇಗೆ ದೇಹದ ತೂಕವನ್ನು ಹೊರುತ್ತದೆಯೋ ಅಂತೆಯೇ ಶೂದ್ರರು ಇನ್ನುಳಿದ ಮೂರು ವರ್ಣದವರ ಸೇವೆಯಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕು ಎಂಬ ಕಟ್ಟಳೆಗಳನ್ನು ಗೊತ್ತುಪಡಿಸಲಾಗಿತ್ತು

ಪ್ರಾಚೀನ ಕಾಲದಲ್ಲಿಯೇ ಜನಸಮುದಾಯದಲ್ಲಿದ್ದ ಮತ್ತೊಂದು ವರ್ಗದ ಜನರನ್ನು 'ಚಂಡಾಲ'ರೆಂದು ಹೆಸರಿಸಲಾಗಿದೆ. ಸಾಮಾಜಿಕ ಇತಿಹಾಸದಲ್ಲಿ ಇವರನ್ನು ಪಂಚಮರೆಂದು ಗುರುತಿಸಲಾಗಿದೆ. ಕಾಲ ಉರುಳಿದಂತೆಲ್ಲಾ ನಾಲ್ಕು ವರ್ಣಗಳು ಹತ್ತಾರು ನೂರಾರು ಸಾವಿರಾರು ಬಗೆಯ ಕವಲುಗಳಾಗಿ ಮತ್ತೆ ಮತ್ತೆ ಒಡೆದು ಜಾತಿ ಉಪಜಾತಿಗಳಾಗಿ ರೂಪುಗೊಂಡಿವೆ. ಪ್ರತಿಯೊಂದು ಜಾತಿ ಉಪಜಾತಿಗಳು ತಮ್ಮದೇ ಆದ ಸಂಪ್ರದಾಯ ಮತ್ತು ಕಟ್ಟುಪಾಡುಗಳನ್ನು ಆಚರಿಸುತ್ತಿವೆ. ಇಂತಹ ಜಾತಿ/ವರ್ಣ ವಿಂಗಡಣೆಯ ಕಾರಣದಿಂದಾಗಿಯೇ ಸಾವಿರಾರು ವರ್ಷಗಳಿಂದಲೂ ಸಮಾಜದಲ್ಲಿ ದುಡಿಯುವ ವರ್ಗ ಸಂಕಟದಲ್ಲಿ

ನರಳುತ್ತಿದೆ. ಇದರ ಜತೆಗೆ ಶಾಸ್ತ್ರದಲ್ಲಿ ಹೇಳಿದೆಯೆಂದು ಅನುಸರಿಸುತ್ತಿರುವ ಕಟ್ಟುಪಾಡುಗಳು ಜಾತಿ ಸಮುದಾಯಗಳನ್ನು ಮಾನಸಿಕವಾಗಿ ವಿಂಗಡಿಸಿ **"ನಮ್ಮ ಜಾತಿ ಮತ್ತೊಂದು ಜಾತಿಗಿಂತ ಮೇಲು ಎಂಬ ಮೇಲರಿಮೆಯನ್ನು ಮತ್ತು ನಮ್ಮ ಜಾತಿ ಮತ್ತೊಂದು ಜಾತಿಗಿಂತ ಕೀಳು"** ಎಂಬ ಕೀಳರಿಮೆಯನ್ನು ಜನಮನದಲ್ಲಿ ನಾಟಿಸಿವೆ. ಆದ್ದರಿಂದಲೇ ಜಾತಿ ಸಮುದಾಯದಲ್ಲಿ ಹುಟ್ಟಿ ಬೆಳೆದು ಬಾಳುತ್ತಿರುವ ಪ್ರತಿಯೊಬ್ಬರ ಮಯ್ ಮನದಲ್ಲಿಯೂ ಬೇರೆ ಬೇರೆ ಪ್ರಮಾಣದಲ್ಲಿ ಜಾತಿಯ ಬಗೆಗಿನ ಮೇಲರಿಮೆ/ಕೀಳರಿಮೆಯು ನೆಲೆಸಿದೆ;

ವಚನಕಾರ ಅಂಬಿಗ ಚೌಡಯ್ಯನು ಪ್ರಾಚೀನ ಹೊತ್ತಗೆಗಳಲ್ಲಿ ಬ್ರಹ್ಮನ ಮುಖ ತೋಳು, ತೊಡೆ ಮತ್ತು ಪಾದಗಳಿಂದ ಬೇರೆ ಬೇರೆ ವರ್ಣಗಳ ಜನರು ಹುಟ್ಟಿದರು ಎಂಬುದನ್ನು ಪ್ರಶ್ನಿಸಿ, ಇಂತಹ ಕಟ್ಟುಕತೆಗಳಿಂದ ಕೂಡಿದ ಸಂಗತಿಗಳನ್ನು ಅಲ್ಲಗಳೆದು, ಇಂತಹ ನುಡಿರಚನೆಗಳು ವಾಸ್ತವವಲ್ಲ ಎಂಬುದನ್ನು ಸಮಾಜದ ಜನರ ಮುಂದೆ ವಿವರಿಸಿದ್ದಾನೆ.

ಬಿಡುಮುಡಿ=ಕೊನೆ/ಅಂತಿಮ; ಎರಡನ್+ಅರಿಯಬೇಕು; ಅರಿ=ತಿಳಿ; **ಬಿಡುಮುಡಿಯಲ್ಲಿ ಎರಡನರಿಯಬೇಕು**=ಮಾನವರ ಹುಟ್ಟಿನ ಬಗ್ಗೆ ಸಂಸ್ಕೃತ ನುಡಿಯ ಹೊತ್ತಗೆಗಳಲ್ಲಿ ಹೇಳಿರುವ ಜಾತಿ/ಕುಲ/ವರ್ಣದ ಸಂಗತಿಗಳನ್ನು ಮತ್ತು ನಿಸರ್ಗ ಸಹಜವಾದ ಸಂಗತಿಗಳನ್ನು ಒರೆಹಚ್ಚಿ ನೋಡಿ, ಅಂತಿಮವಾಗಿ ಯಾವುದು ವಾಸ್ತವ… ಯಾವುದು ಕಟ್ಟುಕತೆ ಎಂಬುದನ್ನು ಒರೆಹಚ್ಚಿ ನೋಡಿ ತಿಳಿಯಬೇಕು. ತಮಗೆ ಬೇಕಾದಂತೆ ರಚನೆ ಮಾಡಿರುವ ಕಟ್ಟುಕತೆಗಳಿಂದ ಕೂಡಿರುವ ಮಾತಿನ ರಚನೆಗಳನ್ನು ನಿಜವೆಂದು ನಂಬದೆ, ಎಲ್ಲ ಮಾನವರು ಒಂದೇ ಕುಲದವರು ಎಂಬ ಸತ್ಯವನ್ನು ಮನಗಾಣಬೇಕು;

ಎಂದೆನ್ +ಅಂಬಿಗ;

8. ಜಾತಿ ಭ್ರಮೆ ನೀತಿ ಭ್ರಮೆ ಎಂಬ ಕರ್ಮಂಗಳನು
ಘಾತಿಸಿ ಕಳೆಯಬಲ್ಲಡಾತ ಯೋಗಿ
ಕ್ಷೇತ್ರಭ್ರಮೆ ತೀರ್ಥಭ್ರಮೆ ಪಾಷಾಣಭ್ರಮೆ ಎಂಬ ಕರ್ಮಂಗಳನು
ನೀಕರಿಸಿ ಕಳೆಯಬಲ್ಲಡಾತ ಯೋಗಿ
ಲೋಕಕ್ಕಂಜಿ ಲೌಕಿಕವ ಮರೆಗೊಂಡು
ನಡೆವಾತ ತೂತಯೋಗಿ
ಎಂದಾತನಂಬಿಗ ಚೌಡಯ್ಯ.

ಯೋಗಿಯಾದವನ ವ್ಯಕ್ತಿತ್ವವು ಹೇಗಿರಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ. ಸಾಮಾಜಿಕ ಒಳಿತಿಗಾಗಿ/ಜನಸಮುದಾಯದ ಹಿತಕ್ಕಾಗಿ ಬಾಳುವವನೇ ಯೋಗಿ. ಯೋಗಿಯಾದವನು ತನ್ನ ಮಯ್ ಮನವನ್ನು ಆವರಿಸಿ ಕೊಂಡಿರುವ ತಪ್ಪುಗ್ರಹಿಕೆಗಳನ್ನು/ಕಲ್ಪಿತ ಸಂಗತಿಗಳನ್ನು ಹೋಗಲಾಡಿಸಿಕೊಂಡು, ಒಳ್ಳೆಯ ನಡೆನುಡಿಗಳುಳ್ಳ ವ್ಯಕ್ತಿಯಾಗಿ ಬೆಳೆದು ಬಾಳಬೇಕಾದ ರೀತಿಯನ್ನು ವಿವರಿಸಲಾಗಿದೆ.

(ಜಾತಿ=ಮೇಲು ಕೀಳೆಂಬ ಜಾತಿ ಮೆಟ್ಟಿಲುಗಳಿಂದ ಕೂಡಿರುವ ಸಮಾಜದಲ್ಲಿ, ಜಾತಿ ಎನ್ನುವುದು ಮಾನವರೇ ಕಟ್ಟಿ ಕೊಂಡಿರುವ ಒಂದು ಸಾಮಾಜಿಕ ಒಕ್ಕೂಟ; ಭ್ರಮೆ=ಇಲ್ಲದ್ದನ್ನು ಇದೆಯೆಂಬ/ಇರುವುದನ್ನು ಇಲ್ಲವೆಂಬ ಒಳಮಿಡಿತಗಳಿಂದ ಕೂಡಿರುವ/ತಪ್ಪು ಗ್ರಹಿಕೆ; **ಜಾತಿ ಭ್ರಮೆ**=ನೂರೆಂಟು ಬಗೆಯ ಜಾತಿಗಳ ಕಟ್ಟುಪಾಡಿನಿಂದ ಕೂಡಿರುವ ಸಮಾಜದಲ್ಲಿ ತಾನು ಹುಟ್ಟಿ ಬೆಳೆದು ಬಾಳುತ್ತಿರುವ ತನ್ನ ಜಾತಿಯು ಮತ್ತೊಂದು ಜಾತಿಗಿಂತ ಮೇಲು ಎಂಬ ಮೇಲರಿಮೆ ಇಲ್ಲವೇ ತನ್ನ ಜಾತಿಯು ಮತ್ತೊಂದಕ್ಕಿಂತ ಕೀಳು ಎಂಬ ಕೀಳರಿಮೆಯಿಂದ ಕೂಡಿರುವ ಒಳಮಿಡಿತದ ಮನಸ್ಸು;

ನೀತಿ=ಒಳ್ಳೆಯ ನಡೆನುಡಿ; **ನೀತಿ ಭ್ರಮೆ**=ನಾನೊಬ್ಬನೇ ಪ್ರಾಮಾಣಿಕ ವ್ಯಕ್ತಿ/ ಒಳ್ಳೆಯವನು/ಸತ್ಯವಂತ/ಬೆವರನ್ನು ಹರಿಸಿ ದುಡಿದು ಬಾಳುತ್ತಿರುವವನು/ ಸರಿಯಾದ ದಾರಿಯಲ್ಲಿ ನಡೆಯುತ್ತಿರುವವನು ಎಂಬ ಒಳಮಿಡಿತದಿಂದ ಕೂಡಿ, ನನ್ನನ್ನು ಬಿಟ್ಟರೆ ಈ ಜಗತ್ತಿನಲ್ಲಿ ಮತ್ತಾರು ನೀತಿವಂತರಿಲ್ಲ/ ಸತ್ಯವಂತರಿಲ್ಲ/ಪ್ರಾಮಾಣಿಕರಿಲ್ಲ ಎಂದು ಇತರರನ್ನು ಕಡೆಗಣಿಸುವಂತಹ

ನಿಲುವು; ಎಂಬ=ಎನ್ನುವ/ಎಂದು; ಕಾಡುವ/ಪೀಡಿಸುವ; ಕರ್ಮ=ಕೆಲಸ/ಕಸುಬು/ಉದ್ಯೋಗ; ಕರ್ಮಂಗಳನು=ನಡೆನುಡಿಗಳನ್ನು; ಘಾತ=ಹೊಡೆತ/ನಾಶ; ಘಾತಿಸಿ=ನಾಶಪಡಿಸಿ/ಇಲ್ಲದಂತೆ ಮಾಡಿ; ಕಳೆಯ+ಬಲ್ಲಡೆ+ಆತ; ಕಳೆ=ಬಿಡು/ತೊರೆ; ಬಲ್ಲ=ತಿಳಿದ/ಅರಿತ; ಬಲ್ಲಡೆ=ತಿಳಿದುಕೊಂಡರೆ; ಕಳೆಯಬಲ್ಲಡೆ=ಹೋಗಲಾಡಿಸಿಕೊಳ್ಳಲು ಶಕ್ತನಾದರೆ; ಆತ=ಅಂತಹ ವ್ಯಕ್ತಿಯು; ಯೋಗಿ=ಮಯ್ ಮನಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿ/ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು;

ಕ್ಷೇತ್ರ=ದೇಗುಲಗಳು/ಗುರುಹಿರಿಯರ ಗದ್ದುಗೆಗಳು ನೆಲೆಗೊಂಡಿರುವ ಪ್ರದೇಶ; **ಕ್ಷೇತ್ರ ಭ್ರಮೆ**=ಪುಣ್ಯದ ನೆಲೆಗಳೆಂದು ನಂಬಿರುವ ಜಾಗಗಳಿಗೆ ಹೋಗಿ ಮಿಂದು ಮಡಿಯುಟ್ಟು, ದೇವರಿಗೆ ಕಾಣಿಕೆ ಒಪ್ಪಿಸಿ, ಹಣ್ಣುಕಾಯಿ ಮಾಡಿಸಿ, ಅಡ್ಡಬಿದ್ದು ಬರುವುದರಿಂದ ತಮಗೆ ಜೀವನದಲ್ಲಿ ಬಂದೊದಗಿರುವ ಸಂಕಟಗಳು ನಿವಾರಣೆಯಾಗುವುದೆಂಬ/ತಾವು ಮನದಲ್ಲಿ ಹರಸಿಕೊಂಡ ಕೆಲಸಗಳು ಈಡೇರಿ ಮುಂದಿನ ದಿನಗಳಲ್ಲಿ ಒಳಿತಾಗುವುದೆಂಬ/ಜೀವನದಲ್ಲಿ ತಾವು ಮಾಡಿರುವ ಪಾಪಗಳು ಪರಿಹಾರವಾಗುದೆಂಬ ಒಳಮಿಡಿತದಿಂದ ಕೂಡಿದ ನಿಲುವು;

ತೀರ್ಥ=ದೇಗುಲದಲ್ಲಿ/ಗುರುಹಿರಿಯರ ಗದ್ದುಗೆಗಳಲ್ಲಿ ಬಳಿ ಹರಿಯು ತ್ತಿರುವ ಹೊಳೆಗಳು ಇಲ್ಲವೇ ಇರುವ ಕೊಳ/ಕಲ್ಯಾಣಿಗಳು; ನೀರು/ಜಲ; **ತೀರ್ಥ ಭ್ರಮೆ**=ದೇಗುಲದ/ಗದ್ದುಗೆಗಳ ಬಳಿಯಿರುವ ನದಿ/ಹೊಳೆ/ಕಲ್ಯಾಣಿಗಳ ನೀರಿನಲ್ಲಿ ಮಿಂದೇಳುವುದರಿಂದ ಇಲ್ಲವೇ ದೇವರ ಮುಂದೆ ಇಟ್ಟು ಪೂಜೆ ಮಾಡಿ ನೀಡುವ ನೀರನ್ನು ಕುಡಿಯುವುದರಿಂದ/ಮಯ್ ಮೇಲೆ ಸಿಂಪಡಿಸಿ ಕೊಳ್ಳುವುದರಿಂದ ಮಾಡಿದ ಪಾಪಗಳೆಲ್ಲ ನಿವಾರಣೆಯಾಗಿ/ಇರುವ ಸಂಕಟ ಗಳೆಲ್ಲ ತೊಲಗಿ/ಬರಲಿರುವ ಕೇಡು ಮರೆಯಾಗಿ/ಆಸೆಪಟ್ಟ ಬಯಕೆಗಳೆಲ್ಲ ಈಡೇರಿ, ಒಳಿತಾಗುವುದೆಂಬ ಒಳಮಿಡಿತದಿಂದ ಕೂಡಿದ ನಿಲುವು;

ಪಾಷಾಣ=ಕಲ್ಲು/ಮಣಿ/ರತ್ನ; **ಪಾಷಾಣ ಭ್ರಮೆ**=ನವರತ್ನದಲ್ಲಿ ಒಂದು ರತ್ನವನ್ನು ಇಲ್ಲವೇ ಯಾವುದಾದರೊಂದು ಬಗೆಯ ಕಲ್ಲಿನ ಹರಳೊಂದನ್ನು ಉಂಗುರದಲ್ಲಿ ಇಲ್ಲವೇ ಸರದಲ್ಲಿ ಹಾಕಿಸಿಕೊಂಡು ಬೆರಳಲ್ಲಿ/ಕೊರಳಿನಲ್ಲಿ

ತೊಟ್ಟುಕೊಂಡರೆ ಒಳಿತಾಗುವುದೆಂಬ ಒಳಮಿಡಿತದಿಂದ ಕೂಡಿದ ನಿಲುವು; ವ್ಯಕ್ತಿಗೆ ಬರಲಿರುವ ಎಲ್ಲಾ ಬಗೆಯ ಕೇಡುಗಳನ್ನು ಈ ಬಗೆಯ ರತ್ನ/ಹರಳು ತಡೆದು, ಆಪತ್ತುಗಳಿಂದ ವ್ಯಕ್ತಿಯನ್ನು ಪಾರುಮಾಡಿ, ಕಾಪಾಡುವುದೆಂಬ ನಂಬಿಕೆಯು ಜನಮನದಲ್ಲಿದೆ;

ನೀಕರಿಸಿ=ತಿರಸ್ಕರಿಸಿ; **ನೀಕರಿಸಿ ಕಳೆಯಬಲ್ಲಡಾತ ಯೋಗಿ**=ಎಲ್ಲಾ ಬಗೆಯ ತಪ್ಪುಗ್ರಹಿಕೆಗಳಿಂದ ಬಿಡಿಸಿಕೊಂಡು, ನಿಸರ್ಗದಲ್ಲಿನ ಮತ್ತು ಸಮಾಜದಲ್ಲಿನ ವಾಸ್ತವವನ್ನು ಅರಿತುಕೊಂಡು ಬಾಳುವವನು ಯೋಗಿಯಾಗುತ್ತಾನೆ;

ಲೋಕಕ್ಕೆ+ಅಂಜಿ; ಲೋಕ=ಜಗತ್ತು/ಜನಸಮುದಾಯ; ಅಂಜಿಕೆ=ಹೆದರಿಕೆ; ಅಂಜಿ=ಹೆದರಿಕೊಂಡು/ದಿಗಿಲುಗೊಂಡು; **ಲೋಕಕ್ಕಂಜಿ**=ಸಮಾಜದಲ್ಲಿರುವ ಜನರು ಏನೆಂದುಕೊಳ್ಳುವರೋ/ಜನರಿಗೆ ತನ್ನ ನಿಜವಾದ ಬಣ್ಣ ಅಂದರೆ ನೀಚತನದ ಹಾಗೂ ಕಪಟತನದ ನಡೆನುಡಿಗಳು ಎಲ್ಲಿ ತಿಳಿಯುತ್ತದೆಯೋ ಎಂಬ ಹೆದರಿಕೆಯಿಂದ; ಲೌಕಿಕ= ಜನಸಮುದಾಯದ ನಿತ್ಯದ ನಡೆನುಡಿಗಳು; ಮರೆ+ಕೊಂಡು=ಮರೆಗೊಂಡು; ಮರೆ=ಗುಟ್ಟು/ರಹಸ್ಯ; ನಡೆವ+ಆತ; ನಡೆವ=ಜೀವನವನ್ನು ಮಾಡುತ್ತಿರುವ;

ಲೋಕಕ್ಕಂಜಿ ಲೌಕಿಕವ ಮರೆಗೊಂಡು ನಡೆವಾತ=ಜನರ ಕಣ್ಣಿಗೆ ಕಾಣದಂತೆ ಒಳಗೊಳಗೆ ತನ್ನ ಮಯ್ ಮನದ ಕಾಮದ ಬಯಕೆಗಳನ್ನು/ತುಡಿತಗಳನ್ನು ತಣಿಸಿಕೊಂಡು ಬಾಳುತ್ತಿರುವವನು; ತೂತು=ಕಂಡಿ/ಬಿಲ/ಬಿರುಕು; **ತೂತಯೋಗಿ**=ಹೊರನೋಟಕ್ಕೆ ಯೋಗಿಯಂತೆ ಕಾಣಿಸಿಕೊಳ್ಳುತ್ತಾ, ತನ್ನ ಮಯ್ ಮನಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾಗದೆ ಒಳಗಡೆ ಅಂದರೆ ಇತರರಿಗೆ ತಿಳಿಯದಂತೆ ಕೆಟ್ಟಕೆಲಸಗಳಲ್ಲಿ ತೊಡಗಿರುವವನು; ಎಂದ+ಆತನ್+ಅಂಬಿಗ; ಆತನ್=ಅವನು; ಎಂದಾತನ್=ಎಂದು ಹೇಳಿದನು) ❖

9. ತಟಾಕ ಒಡೆದಡೆ ಕಟ್ಟುವಡೆವುದಲ್ಲದೆ
ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಿಂಗೆ ಹಿಂಗಿ ನಿಂದುದುಂಟೆ
ಅರಿಯದವಂಗೆ ಅರಿಕೆಯ ಹೇಳಿದಡೆ ಅರಿವನಲ್ಲದೆ
ಅರಿದು ಮರೆದವಂಗೆ ಬೇರೊಂದೆಡೆಯ ಹೇಳಿಹೆನೆಂದಡೆ
ಕಡೆ ನಡು ಮೊದಲಿಲ್ಲ ಎಂದನಂಬಿಗ ಚೌಡಯ್ಯ.

ಅರಿವಿಲ್ಲದ ವ್ಯಕ್ತಿಗೆ ತಿಳುವಳಿಕೆಯನ್ನು ಹೇಳಿದರೆ ಅರಿತುಕೊಳ್ಳುತ್ತಾನೆ. ಆದರೆ ಅರಿತಿದ್ದರೂ ಮರೆತವನಂತೆ ಇಲ್ಲವೇ ಗೊತ್ತಿಲ್ಲದವನಂತೆ ನಟಿಸುವ ವ್ಯಕ್ತಿಗೆ ಯಾವ ರೀತಿಯಿಂದಲೂ ಹೇಳಿದರೂ ಅರಿವು ಅವನ ಮನಸ್ಸಿಗೆ ನಾಟುವುದಿಲ್ಲ. ಏಕೆಂದರೆ ಅಂತಹ ವ್ಯಕ್ತಿಯು ಉದ್ದೇಶಪೂರ್ವಕವಾಗಿಯೇ ಅರಿವಿನ ಸಂಗತಿಗಳನ್ನು ನಿರಾಕರಿಸುತ್ತಾನೆ ಎಂಬ ವಿಚಾರವನ್ನು ಈ ವಚನದಲ್ಲಿ ಹೇಳಲಾಗಿದೆ.

‘ಅರಿವು’ ಎಂದರೆ “ಲೋಕಜೀವನದಲ್ಲಿ ಯಾವುದು ಸರಿ/ಯಾವುದು ತಪ್ಪು; ಯಾವುದು ನೀತಿ/ಯಾವುದು ಅನೀತಿ; ಯಾವುದು ವಾಸ್ತವ/ಯಾವುದು ಕಲ್ಪಿತ” ಎಂಬುದನ್ನು ಒರೆಹಚ್ಚಿ ನೋಡಿ, ತನ್ನನ್ನು ಒಳಗೊಂಡಂತೆ ಲೋಕದ ಜನ ಸಮುದಾಯಕ್ಕೆ ಒಳಿತನ್ನು ಮಾಡುವ ನುಡಿ ಮತ್ತು ದುಡಿಮೆಯ ಸ್ವರೂಪವನ್ನು ತಿಳಿಯುವುದು:

ತಟಾಕ=ಕೆರೆ; ಒಡೆ=ಬಿರಿ/ಸೀಳು; ಒಡೆದಡೆ=ಒಡೆದರೆ; **ತಟಾಕ ಒಡೆದಡೆ**= ಕೆರೆಗೆ ಕಟ್ಟಿರುವ ಏರಿಯು ಒಡೆದು ಹೋದರೆ/ಬಿರುಕು ಬಿಟ್ಟರೆ; ಕಟ್ಟು+ ಪಡೆವುದು+ಅಲ್ಲದೆ; ಕಟ್ಟು=ಏರಿ; ಪಡೆ=ಹೊಂದು; ಕಟ್ಟುಪಡೆವುದು=ಮತ್ತೆ ಏರಿಯನ್ನು ಕಟ್ಟಬಹುದು; ಅಲ್ಲದೆ=ಹೊರತು;

ಅಂಬುಧಿ=ಸಾಗರ/ಕಡಲು; ಮೇರೆ+ತಪ್ಪಿದಲ್ಲಿ; ಮೇರೆ=ಎಲ್ಲೆ/ದಡ/ತೀರ; ತಪ್ಪು=ಮೀರು/ಅತಿಕ್ರಮಿಸು; **ಅಂಬುಧಿ ಮೇರೆದಪ್ಪದಲ್ಲಿ**=ಕಡಲಿನಲ್ಲಿರುವ ಅಪಾರವಾದ ನೀರು ಬಿರುಗಾಳಿಯ/ಸುಂಟರಗಾಳಿಯ ಹೊಡೆತಕ್ಕೆ ಸಿಲುಕಿ ದೊಡ್ಡ ದೊಡ್ಡ ಅಲೆಗಳಾಗಿ ಉಕ್ಕೆದ್ದು ದಡವನ್ನು ಅಪ್ಪಳಿಸಿ, ತನ್ನ ಎಲ್ಲೆಯನ್ನು ಮೀರಿ ನುಗ್ಗಿ ಹರಿದಾಗ;

ಕಟ್ಟಿಂಗೆ=ಏರಿಗೆ/ಕಟ್ಟೆಗೆ; ಹಿಂಗಿ=ಹಿಂದಕ್ಕೆ ಸರಿ/ತಗ್ಗು; ನಿಂದುದು+ಉಂಟೆ; ನಿಂದುದು=ನಿಂತುಕೊಂಡಿದ್ದು/ಮುಂದಕ್ಕೆ ಬಾರದೆ ಇರುವ ಎಡೆಯಲ್ಲಿಯೇ ಇರುವುದು; ಉಂಟೆ=ಇದೆಯೇ;

ಅರಿ=ತಿಳಿ; ಅರಿಕೆ=ಅರಿವಿನ ಸಂಗತಿಗಳು; ಅರಿಯದವಂಗೆ=ತಿಳಿಯದವನಿಗೆ; ಹೇಳಿದಡೆ=ಹೇಳಿದರೆ; ಅರಿವನ್+ಅಲ್ಲದೆ; ಅರಿವನ್=ತಿಳಿದುಕೊಳ್ಳುತ್ತಾನೆ;

ಅರಿದು=ತಿಳಿದು; ಮರೆ=ಕಡೆಗಣಿಸು/ನೆನಪಿನಿಂದ ತೆಗೆದುಹಾಕು; ಮರೆದವಂಗೆ=ಮರೆತವನಿಗೆ; ಬೇರೆ+ಒಂದು+ಎಡೆಯ; ಎಡೆ=ಚೆನ್ನಾಗಿ ಕಾಣು/ಮನದಟ್ಟಾಗು; ಹೇಳಿಹೆನ್+ಎಂದಡೆ; ಹೇಳಿಹೆನ್=ಹೇಳುತ್ತೇನೆ; ಎಂದಡೆ=ಎಂದರೆ;

ಕಡೆ=ಕೊನೆ/ಅಂತ್ಯ; ನಡು=ಮಧ್ಯ; ಮೊದಲ್+ಇಲ್ಲ; ಮೊದಲು=ಆದಿ; ಎಂದನ್+ಅಂಬಿಗ; ಎಂದನ್=ಎಂದು ಹೇಳಿದನು;

ಈ ವಚನದಲ್ಲಿ ಜಾತಿ, ಮತ ಮತ್ತು ದೇವರ ಹೆಸರಿನಲ್ಲಿ ಇಡೀ ಜನಸಮುದಾಯವನ್ನು ಸುಲಿಗೆ ಮಾಡಿ ವಂಚಿಸುತ್ತಿರುವ ಓದು ಬರಹವನ್ನು ಬಲ್ಲ ವ್ಯಕ್ತಿಗಳನ್ನು ಯಾವ ರೀತಿಯಿಂದಲೂ ತಿದ್ದಲಾಗುವುದಿಲ್ಲವೆಂಬ ವಿಚಾರವನ್ನು ಒಂದೊಂದು ರೂಪಕ ಮತ್ತು ನುಡಿಗಟ್ಟಿನ ಮೂಲಕ ವಚನಕಾರನು ಚಿತ್ರಿಸಿದ್ದಾನೆ.

1. **ತಟಾಕ ಒಡೆದಡೆ ಕಟ್ಟುವಡೆವುದಲ್ಲದೆ ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಿಂಗೆ ಹಿಂಗಿ ನಿಂದುದುಂಟೆ**=ಇದೊಂದು ರೂಪಕವಾಗಿ ಬಳಕೆಗೊಂಡಿದೆ. ಮಳೆಗಾಲದಲ್ಲಿ ಕೆರೆಗೆ ಹರಿದು ಬಂದ ನೀರಿನ ಪ್ರಮಾಣ ಹೆಚ್ಚಾಗಿ ಕೆರೆಗೆ ಕಟ್ಟಿದ್ದ ಏರಿಯು ಕೊಚ್ಚಿಹೋದರೆ ಇಲ್ಲವೇ ಬಿರುಕು ಬಿಟ್ಟರೆ, ಮತ್ತೆ ಕೆರೆಗೆ ಏರಿಯನ್ನು ಕಟ್ಟಿ ನೀರನ್ನು ನಿಲ್ಲಿಸಬಹುದು; ಆದರೆ ಕಡಲಿನ ಜಲರಾಶಿಯು ಉಕ್ಕೆದ್ದು ಹರಿದು ದಡವನ್ನು ಅಪ್ಪಳಿಸಿ ಮುನ್ನುಗ್ಗಿದಾಗ ಯಾವುದೇ ಬಗೆಯ ಏರಿಯನ್ನು ಕಟ್ಟಿ, ಕಡಲಿನ ನೀರನ್ನು ಮುಂದಕ್ಕೆ ನುಗ್ಗದಂತೆ ತಡೆಯಲಾಗುವುದಿಲ್ಲ.

ಅಂತೆಯೇ ತಿಳುವಳಿಕೆಯಿಲ್ಲದ ವ್ಯಕ್ತಿಗಳಿಗೆ ತಿಳಿಯ ಹೇಳಿ ಅವರ ನಡೆನುಡಿಯಲ್ಲಿ ಸಹ ಮಾನವರ ಮತ್ತು ಸಮಾಜದ ಬಗ್ಗೆ ಪ್ರೀತಿ, ಕರುಣೆ ಮತ್ತು ಗೆಳೆತನದ ಒಳಮಿಡಿತಗಳನ್ನು ಮೂಡಿಸಬಹುದು. ಆದರೆ ಓದು ಬರಹದ ಮೂಲಕ ಅಪಾರವಾದ ತಿಳುವಳಿಕೆಯನ್ನು ಪಡೆದಿದ್ದರೂ ತಮ್ಮ ತಮ್ಮ ಜಾತಿ ಮತ್ತು ಮತದ ಮಂದಿಯೇ ಸಮಾಜದ ಸಂಪತ್ತನ್ನು ಮತ್ತು ರಾಜಕೀಯ ಗದ್ದುಗೆಯನ್ನು ಪಡೆಯಬೇಕೆಂಬ ಕೆಟ್ಟ ಉದ್ದೇಶದಿಂದ ದೇವರ ಹೆಸರಿನಲ್ಲಿ ಸಹಮಾನವರಿಗೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಗಳ ಮನದಲ್ಲಿ ಯಾವ ರೀತಿಯಿಂದಲೂ ಮಾನವೀಯ ಗುಣಗಳನ್ನು ನೆಲೆಗೊಳಿಸಲು ಆಗುವುದಿಲ್ಲ. ಏಕೆಂದರೆ ಇಂತಹ ವ್ಯಕ್ತಿಗಳು ತಾವು ಪಡೆದ ಅರಿವಿನಿಂದ ತಮ್ಮ ತಮ್ಮ ಜಾತಿ ಮತ್ತು

ವರ್ಗದ ಹಿತವನ್ನು ಕಾಯ್ದುಕೊಳ್ಳುತ್ತಾರೆಯೇ ಹೊರತು ದುಡಿಯುವ ವರ್ಗಕ್ಕೆ ಸೇರಿದ ಕೆಳಜಾತಿ ಹಾಗೂ ಇನ್ನಿತರ ಮತದ ಜನಸಮುದಾಯದ ಬದುಕನ್ನು ಹಸಿವು, ಬಡತನ ಮತ್ತು ಅಪಮಾನದ ಕಡೆಗೆ ದೂಡುತ್ತಾರೆ ಎಂಬ ತಿರುಳಿನಲ್ಲಿ ಈ ರೂಪಕ ಬಳಕೆಯಾಗಿದೆ;

2. ಕಡೆ ನಡು ಮೊದಲಿಲ್ಲ=ಇದೊಂದು ನುಡಿಗಟ್ಟು. ಕೆಟ್ಟ ನಡೆನುಡಿಗಳನ್ನೇ ತನ್ನ ಬದುಕಿನ ಉಸಿರನ್ನಾಗಿ ಮಾಡಿಕೊಂಡಿರುವ ವ್ಯಕ್ತಿಯನ್ನು ತಿದ್ದಲು ಇತರರು ಆಡುವ ಮಾತಿನಿಂದ ಇಲ್ಲವೇ ಮಾಡುವ ಕೆಲಸದಿಂದ ಏನೊಂದು ಪ್ರಯೋಜನವಿಲ್ಲ. ಏಕೆಂದರೆ ಕೆಟ್ಟ ವ್ಯಕ್ತಿಯ ಮನದಲ್ಲಿ ಸಹಮಾನವರ ಬಗ್ಗೆ ತುಸುವಾದರೂ ಕರುಣೆ, ಸಹನೆ ಮತ್ತು ಸಹಬಾಳ್ವೆಯ ಒಳಮಿಡಿತಗಳೇ ಇರುವುದಿಲ್ಲ ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ.

❖

10. ನೇಮಸ್ಥನೆಂಬವ ಕ್ರೂರಕರ್ಮಿ
ಶೀಲವಂತನೆಂಬವ ಸಂದೇಹಧಾರಿ
ಭಾಷೆವಂತನೆಂಬವ ಬ್ರಹ್ಮೇತಿಕಾರ
ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು
ಇವರು ಹೋದ ಬಟ್ಟೆಯ ಹೊಗಲಾಗದು
ಇವರು ಮೂವರಿಗೂ ಗುರುವಿಲ್ಲ
ಲಿಂಗವಿಲ್ಲೆಂದಾತನಂಬಿಗ ಚೌಡಯ್ಯ.

"ತಮ್ಮ ನಡೆನುಡಿಯೇ ಇತರರ ನಡೆನುಡಿಗಿಂತ ಎಲ್ಲ ರೀತಿಯಿಂದಲೂ ಮೇಲು" ಎಂಬ ಅಹಂಕಾರವುಳ್ಳ ವ್ಯಕ್ತಿಗಳ ಜತೆಯಲ್ಲಿ ಯಾವುದೇ ಬಗೆಯ ವ್ಯವಹಾರವನ್ನಾಗಲಿ ಇಲ್ಲವೇ ಒಡನಾಟವನ್ನಾಗಲಿ ಇಟ್ಟುಕೊಳ್ಳದೆ, ಅಂತಹ ವ್ಯಕ್ತಿಗಳಿಂದ ದೂರವಿರಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ನೇಮಸ್ಥನ್+ಎಂಬವ; ನೇಮ=ಜಾತಿ ಮತದ ಸಂಪ್ರದಾಯಗಳನ್ನು ಪಾಲಿಸುವಾಗ ಮತ್ತು ದೇವರನ್ನು ಪೂಜಿಸುವಾಗ ಮಾಡುವ ಜಪ, ತಪ, ಉಪವಾಸ, ಜಾಗರಣೆ ಮುಂತಾದ ಆಚರಣೆಗಳು/ವ್ರತ/ನೋಂಪಿ; ನೇಮಸ್ಥ= ಜಾತಿ ಮತ ದೇವರ ಬಗೆಗಿನ ಆಚರಣೆ ಮತ್ತು ಕಟ್ಟುಪಾಡುಗಳನ್ನೇ ದೊಡ್ಡದೆಂದು ನಂಬಿಕೊಂಡು ಅದರಲ್ಲಿ ಯಾವುದೊಂದನ್ನು ಬಿಡದೆ ಆಚರಿಸುವವನು: ಎಂಬವ=ಎನ್ನುವವನು; ಕ್ರೂರ=ಕರುಣೆಯಿಲ್ಲದ/ದಯೆಯಿಲ್ಲದ; ಕರ್ಮಿ= ಕೆಲಸದಲ್ಲಿ ತೊಡಗಿದವನು; ಕ್ರೂರಕರ್ಮಿ=ಇತರ ಜೀವಿಗಳಿಗೆ ಮತ್ತು ವ್ಯಕ್ತಿಗಳಿಗೆ ಅಪಾರವಾದ ಕೇಡನ್ನು ಬಗೆಯುವವನು/ಹಿಂಸೆಯನ್ನು ನೀಡುವವನು;

ನೇಮಸ್ಥನೆಂಬವ ಕ್ರೂರಕರ್ಮಿ=ತನ್ನ ಜಾತಿ, ಮತ ಮತ್ತು ದೇವರ ಬಗೆಗಿನ ಆಚರಣೆ ಮತ್ತು ಕಟ್ಟುಪಾಡುಗಳಿಗೆ ಅಂಟಿಕೊಂಡಿರುವ ವ್ಯಕ್ತಿಯು ಇನ್ನಿತರ ಜಾತಿ, ಮತ ಮತ್ತು ದೇವರ ಬಗ್ಗೆ ಸದಾಕಾಲ ಹಗೆತನದ ನಂಜನ್ನು ಕಾರುತ್ತ, ಸಹಮಾನವರ ಬಗ್ಗೆ ಕಿಂಚಿತ್ತಾದರೂ ಕರುಣೆಯಿಲ್ಲದೆ, ಜನಸಮುದಾಯದ ಮತ್ತು ಸಮಾಜದ ನೆಮ್ಮದಿಯ ಬದುಕನ್ನೇ ಹಾಳುಮಾಡುವಂತಹ ಕೆಟ್ಟ ಕೆಲಸಗಳಲ್ಲಿ ತೊಡಗಿರುತ್ತಾನೆ;

ಶೀಲವಂತನ್+ಎಂಬವ; ಶೀಲವಂತ=ಒಳ್ಳೆಯ ನಡೆನುಡಿಯುಳ್ಳವನು; ಸಂದೇಹ=ಅನುಮಾನ/ಅಪನಂಬಿಕೆ; ಧಾರಿ=ಹೊಂದಿರುವವನು; ಸಂದೇಹಧಾರಿ

=ಎಲ್ಲವನ್ನೂ ಮತ್ತು ಎಲ್ಲರನ್ನೂ ಅನುಮಾನದಿಂದಲೇ ಕಾಣುವವನು;

ಶೀಲವಂತನೆಂಬವ ಸಂದೇಹಧಾರಿ="ಈ ಜಗತ್ತಿನಲ್ಲಿ ನಾನೊಬ್ಬನೇ ನೀತಿವಂತ/ಪರಮ ಪ್ರಾಮಾಣಿಕ/ಸತ್ಯವಂತ. ನನ್ನನ್ನು ಬಿಟ್ಟರೆ ಯಾರಲ್ಲಿಯೂ ನನ್ನಲ್ಲಿರುವಂತಹ ಒಳ್ಳೆಯ ನಡೆನುಡಿಗಳಿಲ್ಲ" ಎಂಬ ತಪ್ಪು ಗ್ರಹಿಕೆಗೆ ಒಳಗಾದ ವ್ಯಕ್ತಿಯು ತನ್ನನ್ನು ಹೊರತುಪಡಿಸಿ ಇನ್ನುಳಿದವರಲ್ಲಿ ಒಂದಲ್ಲ ಒಂದು ಬಗೆಯ ತಪ್ಪುಗಳನ್ನೇ ಕಾಣುತ್ತ, ಎಲ್ಲ ಸಂಗತಿಗಳನ್ನು ಮತ್ತು ಎಲ್ಲರನ್ನೂ ಅನುಮಾನದಿಂದಲೇ ಕಾಣುತ್ತಿರುತ್ತಾನೆ;

ಭಾಷೆವಂತನ್+ಎಂಬವ; ಭಾಷೆ=ಮಾತು/ನುಡಿ; ಭಾಷೆವಂತ=ಒಳ್ಳೆಯ ಮಾತುಗಾರ/ಮಾತಿನ ಕಲೆಯಲ್ಲಿ ಪರಿಣತನಾದವನು; ಬ್ರಹ್ಮೇತಿ+ಕಾರ; ಬ್ರಹ್ಮೇತಿ= ವಿಪರೀತ/ಅತಿ ಹೆಚ್ಚಾಗಿ; ಕಾರ=ಮಾಡುವವನು; ಬ್ರಹ್ಮೇತಿಕಾರ=ಅತಿಯಾಗಿ ಮಾಡುವವನು;

ಭಾಷೆವಂತನೆಂಬವ ಬ್ರಹ್ಮೇತಿಕಾರ=ಮಾತನಾಡುವ ಕಲೆಯಲ್ಲಿ ಪರಿಣತನಾದ ವ್ಯಕ್ತಿಯು, ತನ್ನ ಮಾತಿನ ಮೋಡಿಯಿಂದಲೇ ಜನರನ್ನು ಮುದಗೊಳಿಸುವುದರ ಜತೆಜತೆಗೆ ಜನರನ್ನು ವಂಚಿಸುವ ಕಲೆಯಲ್ಲಿಯೂ ಕುಶಲನಾಗಿರುತ್ತಾನೆ. ಅತಿಯಾಗಿ ಮಾತನಾಡುವ ವ್ಯಕ್ತಿಯು ಜನಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ ಮತ್ತು ಆರೋಗ್ಯದ ಬಗ್ಗೆ ಚಿಂತಿಸದೆ ಇಲ್ಲವೇ ಅವುಗಳ ಉತ್ಪಾದನೆಗೆ ದುಡಿಮೆಯನ್ನು ಮಾಡದೆ ಕಾಲವನ್ನು ಕಳೆಯುತ್ತಿರುತ್ತಾನೆ. ಜನರನ್ನು ಮರುಳುಗೊಳಿಸುವಂತೆ ಮಾತನಾಡುವ ಇಂತಹ ವ್ಯಕ್ತಿಯಿಂದ ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಹಾನಿಯುಂಟಾಗುತ್ತದೆಯೇ ಹೊರತು ಯಾವ ರೀತಿಯಿಂದಲೂ ಒಳಿತಾಗುವುದಿಲ್ಲ;

ಕುಳ್ಳ್+ಇರ್ದ+ಅಲ್ಲಿ; ಕುಳ್ಳಿರ್ದಲ್ಲಿ=ಕುಳಿತುಕೊಂಡಿರುವ ಜಾಗದಲ್ಲಿ; ಕುಳ್ಳಿರಲ್+ಆಗದು; ಕುಳ್ಳಿರಲ್=ಕುಳಿತುಕೊಳ್ಳಲು; ಆಗದು=ಆಗುವುದಿಲ್ಲ;

ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು=ಇಂತಹ ನಡೆನುಡಿಯುಳ್ಳವ ರೊಡನೆ ಕುಳಿತುಕೊಳ್ಳಲು ಆಗುವುದಿಲ್ಲ. ಅಂದರೆ ಇಂತವರೊಡನೆ ನಂಟು ಇಲ್ಲವೇ ಗೆಳೆತನವನ್ನು ಮಾಡಿದರೆ ಹಾನಿಯುಂಟಾಗುತ್ತದೆ;

ಬಟ್ಟೆ=ದಾರಿ/ಹಾದಿ; ಹೊಗಲ್+ಆಗದು; ಹೊಗು=ಪ್ರವೇಶಿಸು/ ಒಳಬರುವುದು;

ಇವರು ಹೋದ ಬಟ್ಟೆಯ ಹೊಗಲಾಗದು=ಇವರು ಹೋದ ದಾರಿಯಲ್ಲಿ ಹೋಗಲು ಆಗುವುದಿಲ್ಲ. ಅಂದರೆ ಇಂತಹ ವ್ಯಕ್ತಿಗಳ ನಡೆನುಡಿಯನ್ನು ಅನುಕರಣ ಮಾಡಲು ಹೋದರೆ ಬದುಕಿನಲ್ಲಿ ಕೇಡಾಗುತ್ತದೆ. .

“ಕುಳ್ಳಿರಲಾಗದು/ಹೊಗಲಾಗದು” ಎಂಬ ಈ ನುಡಿಗಳು ರೂಪಕಗಳಾಗಿ ಬಳಕೆಗೊಂಡಿವೆ.

ಅಹಂಕಾರ, ಸಂಶಯ ಮತ್ತು ವಂಚಕತನದ ನಡೆನುಡಿಯುಳ್ಳ ವ್ಯಕ್ತಿಗಳಿಂದ ದೂರವಿರಬೇಕು. ಏಕೆಂದರೆ ಅಂತಹ ವ್ಯಕ್ತಿಗಳು ಸಮಾಜದಲ್ಲಿನ ಒಟ್ಟು ಜನಸಮುದಾಯದ ಒಲವು ನಲಿವು ನೆಮ್ಮದಿಯಿಂದ ಕೂಡಿದ ಬದುಕಿಗೆ ಹಾನಿಯನ್ನುಂಟುಮಾಡುವ ನಡೆನುಡಿಗಳನ್ನು ಹೊಂದಿರುತ್ತಾರೆ. ಅಂತಹವರ ಒಡನಾಟ ಇಲ್ಲವೇ ಅವರೊಡನೆ ಮಾಡುವ ವ್ಯವಹಾರದಿಂದ ಕೇವಲ ಒಂದಿಬ್ಬರಿಗೆ ಮಾತ್ರವಲ್ಲ, ಇಡೀ ಸಮಾಜದ ಬದುಕು ದುರಂತದತ್ತ ಸಾಗುತ್ತದೆ ಎಂಬ ತಿರುಳಿನಲ್ಲಿ ಈ ರೂಪಕಗಳು ಬಳಕೆಗೊಂಡಿವೆ.

ಲಿಂಗ+ಇಲ್ಲ+ಎಂದಾತನ್+ಅಂಬಿಗ;

ಇವರು ಮೂವರಿಗೂ ಗುರುವಿಲ್ಲ ಲಿಂಗವಿಲ್ಲೆಂದಾತನಂಬಿಗ ಚೌಡಯ್ಯ= ಕೆಟ್ಟ ನಡೆನುಡಿಯುಳ್ಳವರ ಪಾಲಿಗೆ ಗುರುವಾಗಲಿ ಇಲ್ಲವೇ ಲಿಂಗವಾಗಲಿ ಇರುವುದಿಲ್ಲ. ಏಕೆಂದರೆ ಗುರು ಮತ್ತು ಲಿಂಗ ಮೆಚ್ಚುವುದು ವ್ಯಕ್ತಿಯಲ್ಲಿರುವ ಒಳ್ಳೆಯ ನಡೆನುಡಿಗಳನ್ನು ಮಾತ್ರ. ‘ಒಳ್ಳೆಯ ನಡೆನುಡಿ’ ಎಂದರೆ ವ್ಯಕ್ತಿಯು ಆಡುವ ನುಡಿ ಮತ್ತು ಮಾಡುವ ದುಡಿಮೆಯು ವ್ಯಕ್ತಿಗೆ ಮತ್ತು ಅವನ ಕುಟುಂಬಕ್ಕೆ ಒಳಿತನ್ನು ಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

❖

11. ಮಾತಿನ ವೇದ ನೀತಿಯ ಶಾಸ್ತ್ರ ಘಾತಕದ ಕಥೆ
ಕಲಿವುದಕ್ಕೆ ಎಷ್ಟಾದಡೂ ಉಂಟು
ಅಜಾತನ ಒಲುಮೆ ನಿಶ್ಚಯವಾದ ವಾಸನೆಯ ಬುದ್ಧಿ
ತ್ರಿವಿಧದ ಆಸೆಯಿಲ್ಲದ ಚಿತ್ತ
ಸರ್ವರಿಗೆ ಹೇಸಿಕೆಯಿಲ್ಲದ ನಡೆನುಡಿ
ಇಷ್ಟಿರಬೇಕೆಂದೆನಂಬಿಗ ಚೌಡಯ್ಯ.

ಓದು ಬರಹದಿಂದ ವ್ಯಕ್ತಿಯು ಕಲಿಯುವ ವಿದ್ಯೆ ಮತ್ತು ಗಳಿಸುವ ಪಾಂಡಿತ್ಯವೇ ದೊಡ್ಡದಲ್ಲ. ಅದಕ್ಕಿಂತ ಮಿಗಿಲಾಗಿ ವ್ಯಕ್ತಿಯ ಸಾಮಾಜಿಕ ನಡೆನುಡಿಯು ಒಳ್ಳೆಯ ರೀತಿಯಲ್ಲಿರಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಸಾಮಾಜಿಕ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ನುಡಿಗಳು ಮತ್ತು ಮಾಡುವ ಕೆಲಸಗಳು ಆತನಿಗೆ, ಆತನ ಕುಟುಂಬಕ್ಕೆ ಒಳಿತನ್ನು ಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವುದು.

ಮಾತು=ನುಡಿ/ಸೊಲ್ಲು; ವೇದ=ಇಂಡಿಯಾ ದೇಶದಲ್ಲಿದ್ದ ಪ್ರಾಚೀನ ಜನಸಮುದಾಯದವರು ನಿಸರ್ಗ ದೇವತೆಗಳನ್ನು ಪೂಜಿಸುತ್ತಿದ್ದ ಆಚರಣೆಗಳ ವಿವರವನ್ನು ಒಳಗೊಂಡ ಋಗ್ವೇದ–ಯಜುರ್ವೇದ–ಅಥರ್ವಣ ವೇದ–ಸಾಮವೇದ ಎಂಬ ನಾಲ್ಕು ವೇದಗಳು; **ಮಾತಿನ ವೇದ**=ವೇದಗಳನ್ನು ಬಲ್ಲವರು ತಾವಾಡುವ ಮಾತಿನಲ್ಲಿ ವೇದದ ನುಡಿಗಟ್ಟುಗಳನ್ನು ಹೆಚ್ಚಾಗಿ ಬಳಸುವುದು;

ನೀತಿ=ಒಳ್ಳೆಯ ನಡತೆ; ಶಾಸ್ತ್ರ=ದೇವತೆಗಳ ಪೂಜೆಯಲ್ಲಿ ಅನುಸರಿಸಬೇಕಾದ ಸಂಪ್ರದಾಯಗಳು ಮತ್ತು ಜನಸಮುದಾಯದ ಹುಟ್ಟು, ಮದುವೆ, ಸಾವಿನ ಸನ್ನಿವೇಶಗಳಲ್ಲಿ ಮಾಡಬೇಕಾದ ಆಚರಣೆಗಳು; **ನೀತಿಯ ಶಾಸ್ತ್ರ**=ಶಾಸ್ತ್ರದಲ್ಲಿ ಹೇಳಿರುವ ಆಚರಣೆಗಳು ಚಾಚು ತಪ್ಪದೆ ಮಾಡುವುದನ್ನೇ ನೀತಿಯ ನಡವಳಿಕೆಯೆಂದು ತಿಳಿದಿರುವುದು;

ಘಾತಕ=ಕೊಲೆ/ಹೊಡೆತ/ಹಿಂಸೆ; ಕಥೆ=ವಾಸ್ತವದ ಪ್ರಸಂಗಗಳಿಗೆ ಕಲ್ಪಿತ ಸಂಗತಿಗಳನ್ನು ಹೆಣೆದು ರಚಿಸಿರುವ ಸಾಹಿತ್ಯ; **ಘಾತಕದ ಕಥೆ**=ರಾಜ್ಯದ ಪಟ್ಟಕ್ಕಾಗಿ ಇಲ್ಲವೇ ಹೆಣ್ಣನ್ನು ಪಡೆಯುವುದಕ್ಕಾಗಿ ಪರಸ್ಪರ ಒಬ್ಬರನ್ನೊಬ್ಬರು ಕೊಲೆ ಮಾಡುವಂತಹ ಸಂಗತಿಗಳನ್ನು ಒಳಗೊಂಡ ಕತೆಗಳು/ಕಾವ್ಯಗಳು;

ಕಲಿ=ಅರಿತುಕೊಳ್ಳುವುದು/ತಿಳಿಯುವುದು; ಎಷ್ಟಾದಡೂ=ಹೆಚ್ಚಿನ

ಸಂಕೆಯಲ್ಲಿದ್ದರೂ; **ಕಲಿವುದಕ್ಕೆ ಎಷ್ಟಾದಡೂ ಉಂಟು**=ಕಲಿಯುವುದಕ್ಕೆ ಹೆಚ್ಚಿನ ಸಂಗತಿಗಳು ಈ ಜಗತ್ತಿನಲ್ಲಿವೆ;

ಅಜಾತ=ಶಿವ; ಒಲುಮೆ=ಪ್ರೀತಿ/ದಯೆ/ಅನುಗ್ರಹ; **ಅಜಾತನ ಒಲುಮೆ**=ಶಿವನ ದಯೆ; ನಿಶ್ಚಯ=ದಿಟ/ಸತ್ಯ/ಗೊತ್ತುಪಡಿಸಿದ;

ವಾಸನೆ=ಬಯಕೆ/ಆಸೆ; ಬುದ್ಧಿ=ಅರಿವು/ವಿವೇಕ; **ನಿಶ್ಚಯವಾದ ವಾಸನೆಯ ಬುದ್ಧಿ**=ವಾಸ್ತವವನ್ನು ಅರಿತುಕೊಂಡು ಬಾಳಬೇಕೆಂಬ ವಿವೇಕ;

ತ್ರಿವಿಧ=ದೇಹ ಮನಸ್ಸು ಮಾತು ಎಂಬ ಮೂರು ಬಗೆಗಳು; ಆಸೆ+ಇಲ್ಲದ; ಚಿತ್ತ=ಮನಸ್ಸು; **ತ್ರಿವಿಧದ ಆಸೆಯಿಲ್ಲದ ಚಿತ್ತ**=ದೇಹದಲ್ಲಿ ತುಡಿಯವ ಮಿಡಿತಗಳು ಮತ್ತು ಮನಸ್ಸಿನಲ್ಲಿ ಮೂಡುವ ಒಳಿತು ಕೆಡುಕಿನ ಸಂಗತಿಗಳಲ್ಲಿ ತನಗೆ ಮತ್ತು ಇತರರಿಗೆ ಕೆಡುಕನ್ನು ಉಂಟುಮಾಡುವ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಮಾತ್ರ ಮಾಡುವಂತಹ ಮನಸ್ಸು;

ಸರ್ವ=ಎಲ್ಲ/ಸಮಸ್ತ; ಸರ್ವರಿಗೆ=ಎಲ್ಲ ಜನರಿಗೆ; ಹೇಸಿಕೆ+ಇಲ್ಲದ; ಹೇಸಿಕೆ= ಅಸಹ್ಯ/ಜುಗುಪ್ಸೆ/ಬೇಸರ; ನಡೆ=ವರ್ತನೆ/ಮಾಡುವ ಕೆಲಸ; ನುಡಿ=ಮಾತು;

ಸರ್ವರಿಗೆ ಹೇಸಿಕೆಯಿಲ್ಲದ ನಡೆನುಡಿ=ಇತರರು ತನ್ನ ಬಗ್ಗೆ ಅಸಹ್ಯಪಟ್ಟು ಕೊಳ್ಳದಂತೆ ಒಳ್ಳೆಯ ನಡೆನುಡಿಗಳಿಂದ ಬಾಳುವುದು; ಇಷ್ಟು+ಇರಬೇಕು+ ಎಂದನ್+ಅಂಬಿಗ;

ಇಷ್ಟಿರಬೇಕೆಂದೆನಂಬಿಗ ಚೌಡಯ್ಯ=ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಈ ಬಗೆಯ ಸಾಮಾಜಿಕ ನಡೆನುಡಿಗಳು ಇರಬೇಕು ಎಂದು ಅಂಬಿಗ ಚೌಡಯ್ಯನು ಹೇಳುತ್ತಿದ್ದಾನೆ.

ಈ ವಚನದಲ್ಲಿ ವಚನಕಾರನು ಬಹು ದೊಡ್ಡ ಸಂಗತಿಯೊಂದನ್ನು ಪ್ರಸ್ತಾಪಿಸಿದ್ದಾನೆ. ಅದೇನೆಂದರೆ ವೇದಗಳಲ್ಲಿನ ವಿಚಾರಗಳನ್ನು ಹೇಳುವ, ಶಾಸ್ತ್ರಗಳ ಮೂಲಕ ನೀತಿಯನ್ನು ತಿಳಿಸುವ ಮತ್ತು ಮಹಾಕಾವ್ಯಗಳನ್ನು ಓದಿ ಅಲ್ಲಿನ ಕತೆಗಳನ್ನು ಹೇಳುವ ಮಂದಿಯು ಮೇಲು ವರ್ಣ ಮತ್ತು ಮೇಲು ವರ್ಗಕ್ಕೆ ಸೇರಿದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಾಗಿದ್ದರು.

ಹನ್ನೆರಡನೆಯ ಶತಮಾನದ ಸಾಮಾಜಿಕ ರಚನೆಯಲ್ಲಿ ವರ್ಣ ವ್ಯವಸ್ಥೆಯಿದ್ದುದರಿಂದ ಈ ಮೂರು ವರ್ಣದವರು ಮಾತ್ರ ವಿದ್ಯೆ, ಸಂಪತ್ತು ಮತ್ತು ರಾಜಕೀಯ ಗದ್ದುಗೆಗೆ ಹಕ್ಕುದಾರರಾಗಿದ್ದರು. ಇನ್ನುಳಿದ ಶೇ.80 ಮಂದಿ ಶೂದ್ರರು

ಮತ್ತು ಪಂಚಮರು ಈ ಮೂರು ವರ್ಣದವರ ಸೇವೆಯನ್ನು ಮಾಡಬೇಕಿತ್ತೇ ಹೊರತು ಬದುಕಿನ ಒಳ್ಳೆಯ ಅವಕಾಶಗಳಿಂದ ವಂಚಿತರಾಗಿ ಹಸಿವು, ಬಡತನ ಮತ್ತು ಅಪಮಾನದಿಂದ ನರಳುತ್ತಿದ್ದರು.

ವಚನಕಾರರು ದುಡಿಯುವ ವರ್ಗದ ಶೂದ್ರ ಮತ್ತು ಪಂಚಮರ ಪರವಾಗಿ ದನಿಯೆತ್ತಿ, ಮೇಲಿನ ಮೂರು ವರ್ಣದವರು ಮಾಡುತ್ತಿದ್ದ ವಂಚನೆ, ಸುಲಿಗೆ ಮತ್ತು ಕ್ರೂರತನದ ನಡೆನುಡಿಗಳನ್ನು ಟೀಕಿಸಿದ್ದಾರೆ.

ವರ್ಣ ವ್ಯವಸ್ಥೆಯನ್ನು ಎತ್ತಿಹಿಡಿಯುವ ವೇದಗಳನ್ನು, ಜನಸಮುದಾಯ ವನ್ನು ಮೇಲು-ಕೀಳು ಎಂದು ವಿಂಗಡಿಸುವ ಜಾತಿಯ ಕಟ್ಟುಪಾಡುಗಳನ್ನು ತಿಳಿಸುವ ಶಾಸ್ತ್ರಗಳನ್ನು ಮತ್ತು ಇಡೀ ಜನಸಮುದಾಯದ ಸಾವು ನೋವಿನ ದುರಂತಕ್ಕೆ ಕಾರಣವಾಗುವ ಕಾಳಗವನ್ನೇ ವೀರತನದ ಸಂಕೇತವೆಂದು ಸಾರುವ ಮಹಾಕಾವ್ಯಗಳನ್ನು ಶಿವಶರಣಶರಣೆಯರು ನಿರಾಕರಿಸಿದ್ದರು.

ವೇದಗಳು, ಶಾಸ್ತ್ರಗಳು ಮತ್ತು ಮಹಾಕಾವ್ಯಗಳಲ್ಲಿನ ವಿಚಾರಗಳಿಂದ ಕಲಿಯುವ ವಿದ್ಯೆಯು ಮತ್ತು ಪಡೆಯುವ ಪಾಂಡಿತ್ಯವು ಜನರನ್ನು ವಿಂಗಡಿಸುತ್ತದೆಯೇ ಹೊರತು, ಎಲ್ಲರೂ ಜತೆಗೂಡಿ ಬಾಳುವಂತಹ ಸಾಮಾಜಿಕವಾದ ನಡೆನುಡಿಗಳನ್ನು ಕಲಿಸುವುದಿಲ್ಲ. ಆದ್ದರಿಂದ ಒಳ್ಳೆಯ ನಡೆನುಡಿಗಳಿಗೆ ಶಿವನನ್ನು ಒಂದು ಸಂಕೇತವನ್ನಾಗಿ ಮಾಡಿಕೊಂಡು, ಸರ್ವರಿಗೆ ಹೇಸಿಕೆಯಿಲ್ಲದ ನಡೆನುಡಿಯನ್ನು ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರಬೇಕು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

"ಹೇಸಿಕೆಯ ನಡೆನುಡಿ" ಎಂದರೆ ಜಾತಿ ಮತ ದೇವರ ಹೆಸರಿನಲ್ಲಿ ಜನಸಮುದಾಯದ ಮನದಲ್ಲಿ ಪರಸ್ಪರ ಅಸೂಯೆ, ಅಪನಂಬಿಕೆ ಮತ್ತು ಹಗೆತನವನ್ನು ಉಂಟುಮಾಡಿ, ನೂರೆಂಟು ಜಾತಿಗಳಿಂದ ಮತ್ತು ಹಲವಾರು ಮತಗಳಿಂದ ರಚನೆಗೊಂಡಿರುವ ಸಮಾಜದಲ್ಲಿ ಜನರು ಪರಸ್ಪರ ಹೊಡೆದಾಟ ಬಡಿದಾಟ ಕೊಲೆ ಸುಲಿಗೆಯಲ್ಲಿ ತೊಡಗುವಂತೆ ಉದ್ರೇಕಿಸುವಂತಹ ಮಾತುಗಳು ಮತ್ತು ಕ್ರಿಯೆಗಳು. ಜನಸಮುದಾಯದ ಮತ್ತು ಸಮಾಜಕ್ಕೆ ಸೇರಿದ ಸಂಪತ್ತನ್ನು ಲೂಟಿ ಮಾಡಿ ರಾಜಕೀಯ ಗದ್ದುಗೆಯನ್ನೇರಿ ದುಡಿಯುವ ವರ್ಗದ ಜನತೆಯು ಬಡತನ ಮತ್ತು ಅಪಮಾನದಿಂದ ನರಳುವಂತೆ ಮಾಡುವ ಕೆಟ್ಟತನ ಮತ್ತು ಕ್ರೂರತನದಿಂದ ಕೂಡಿದ ನಡೆನುಡಿಗಳು.

❖

12 ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು
ಕಾಮನಿಯರ ಕಾಲದೆಸೆ ಸಿಕ್ಕಿ
ಕ್ರೋಧದ ದಳ್ಳುರಿಯಲ್ಲಿ ಬೆಂದು
ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ
ಅದೇತಕೊ ಅದೇತರ ಮಾತು
ಎಂದನಂಬಿಗ ಚೌಡಯ್ಯ.

ನಿತ್ಯ ಜೀವನದ ಅಂತರಂಗದಲ್ಲಿ ಕೆಟ್ಟ ಕಾಮನೆಗಳಲ್ಲಿಯೇ ತೊಡಗಿರುವ ಯಾವುದೇ ಒಬ್ಬ ವ್ಯಕ್ತಿಯು, ತನ್ನ ಬಹಿರಂಗದ ಸಾಮಾಜಿಕ ವ್ಯವಹಾರಗಳಲ್ಲಿ ಸತ್ಯ ನೀತಿ ನ್ಯಾಯದ ವಿಚಾರಗಳನ್ನು ಜನ ಮೆಚ್ಚಿ ಮರುಳಾಗುವಂತೆ ಆಡುವ ಇಂಪಾದ ಮಾತಿನಿಂದ ಯಾವ ಪ್ರಯೋಜನವೂ ಇಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಮಾತುಗಂಟಿತನ+ಇಂದ; ಮಾತುಗಂಟಿ=ಅತಿಯಾಗಿ ಮಾತನಾಡುವ ವ್ಯಕ್ತಿ; ಮಾತುಗಂಟಿತನ=ಮಾತನಾಡುವ ಕಲೆಯಲ್ಲಿ ಪರಿಣತಿಯನ್ನು ಹೊಂದಿರುವುದು; ಮಾತನ್+ಆಡಿದಡೆ+ಏನು; ಆಡಿದಡೆ=ಆಡಿದರೆ; **ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು**=ತನ್ನ ನಿಜ ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಲ್ಲದ ವ್ಯಕ್ತಿಯು ಒಂದೇ ಸಮನೆ ಆಡುತ್ತಿರುವ ಸೊಗಸಾದ ಮಾತುಗಳಿಂದ ಯಾವುದೇ ರೀತಿಯಿಂದಲೂ ಯಾರಿಗೂ ಒಳ್ಳೆಯದಾಗುವುದಿಲ್ಲ;

ಕಾಮಿನಿ=ಹೆಣ್ಣು; ಕಾಲದೆಸೆ=ಪಾದದ ಎಡೆಯಲ್ಲಿ; ಸಿಕ್ಕಿ=ಸಿಲುಕಿ; **ಕಾಮಿನಿಯರ ಕಾಲದೆಸೆ ಸಿಕ್ಕಿ**=ಹೆಣ್ಣುಗಳ ಸಂಗಡ ಕಾಮದ ನಂಟನ್ನು ಹೊಂದಿ;

ಕ್ರೋಧ=ಸಿಟ್ಟು/ಕೋಪ; ದಳ್ಳುರಿ=ದಗದಗನೆ ದೊಡ್ಡ ದೊಡ್ಡ ಪ್ರಮಾಣದಲ್ಲಿ ಹತ್ತಿ ಉರಿಯುತ್ತಿರುವ ಬೆಂಕಿ; ಬೆಂದು=ಬೇಯುತ್ತ; **ಕ್ರೋಧದ ದಳ್ಳುರಿಯಲ್ಲಿ ಬೆಂದು**=ಇದೊಂದು ರೂಪಕದ ನುಡಿ. ವ್ಯಕ್ತಿಯ ಮಯ್ ಮನದಲ್ಲಿ ಕೆಟ್ಟ ಒಳಮಿಡಿತಗಳು ತುಡಿಯುತ್ತಿರುವುದರಿಂದ, ಆತನು ಇತರರ ಬಗ್ಗೆ ಅಸಹನೆ, ಅಪನಂಬಿಕೆ, ಆಕ್ರೋಶ, ಹಗೆತನ, ಸೇಡಿನ ಕಾರಣಗಳಿಂದಾಗಿ ಕೋಪದಿಂದ ಉರಿಯುತ್ತಿರುತ್ತಾನೆ ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ;

ಆಸೆ+ಎಂಬ; ಪಾಶ=ಹಗ್ಗ/ಕೊರಳಿಗೆ ಬಿಗಿದಿರುವ ನೇಣಿನ ಕುಣಿಕೆ; ಸುತ್ತಿ= ಬಳಸಿಕೊಂಡು; **ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ**= ಇದು ಒಂದು ರೂಪಕದ

ನುಡಿ. ವ್ಯಕ್ತಿಯನ್ನು ಮರಣದಂಡನೆಗೆ ಗುರಿಪಡಿಸುವಾಗ ಆತನ ಕೊರಳಲ್ಲಿ ಬಿಗಿಯುವ ನೇಣಿನ ಕುಣಿಕೆಯಂತೆ ವ್ಯಕ್ತಿಯ ದುರಂತಕ್ಕೆ ಕಾರಣವಾಗುವಂತಹ ಹತ್ತಾರು ಬಗೆಯ ಕೆಟ್ಟ ಆಸೆಗಳು ಮನದಲ್ಲಿ ಮೂಡುತ್ತಿವೆ ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ;

ಅದು+ಏಕೊ; ಏಕೆ=ಯಾವ ಕಾರಣಕ್ಕಾಗಿ/ಯಾವ ಉದ್ದೇಶಕ್ಕಾಗಿ; ಅದು+ಏತರ; ಏತರ=ಯಾವುದರ; ಅದೇತರ ಮಾತು=ಯಾವ ಉದ್ದೇಶದಿಂದ ಆಡುತ್ತಿರುವ ಮಾತು;

ಅದೇತರ ಮಾತು=ವ್ಯಕ್ತಿಯು ತನ್ನ ನಿತ್ಯಜೀವನದಲ್ಲಿ ಒಳ್ಳೆಯ ದುಡಿಮೆಯನ್ನು/ಕಾಯಕವನ್ನು ಮಾಡದೆ ಆಡುವ ಮಾತುಗಳಿಗೆ ಯಾವುದೇ ಬೆಲೆಯಿಲ್ಲ; "ಒಳ್ಳೆಯ ದುಡಿಮೆ/ಕಾಯಕ" ಎಂದರೆ ವ್ಯಕ್ತಿಯು ಮಾಡುವ ದುಡಿಮೆಯಿಂದ/ಕಾಯಕದಿಂದ ಅವನಿಗೆ, ಅವನ ಕುಟುಂಬಕ್ಕೆ ಒಳಿತಾಗುವಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತಾಗಬೇಕು; ಎಂದನ್+ಅಂಬಿಗ;

❖

13 ವಚನಾರ್ಥವ ಕಂಡಹರೆಂದು
ರಚನೆಯ ಮರೆಮಾಡಿ ನುಡಿಯಲೇತಕ್ಕೆ
ದಾರಿಯಲ್ಲಿ ಸರಕು ಮರೆಯಲ್ಲದೆ ಮಾರುವಲ್ಲಿ ಮರೆ ಉಂಟೆ
ತಾನರಿವಲ್ಲಿ ಮರೆಯಲ್ಲದೆ ಬೋಧೆಗೆ ಮರೆಯಿಲ್ಲ
ಎಂದನಂಬಿಗ ಚೌಡಯ್ಯ.

ವ್ಯಕ್ತಿಯು ಓದು ಬರಹದ ಮೂಲಕ ತಾನು ಪಡೆದುಕೊಂಡಿರುವ ಒಳಿತಿನ ವಿಚಾರಗಳನ್ನು ಎಲ್ಲರಿಗೂ ತಿಳಿಯ ಹೇಳುತ್ತ, ಅರಿವಿನ ನಡೆನುಡಿಗಳನ್ನು ಎಲ್ಲರೂ ತಿಳಿದುಕೊಳ್ಳುವಂತೆ ಮಾಡಬೇಕೆ ಹೊರತು, ತನ್ನಲ್ಲಿರುವ ವಿದ್ಯೆಯನ್ನು ಮುಚ್ಚಿಡಬಾರದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ವಚನ+ಅರ್ಥವ; ವಚನ=ಮಾತು/ನುಡಿ/ಬರಹದ ರೂಪದಲ್ಲಿರುವ ಸಾಹಿತ್ಯ. ಅರ್ಥ=ತಿರುಳು; ಕಂಡಹರ್+ಎಂದು; ಕಂಡಹರ್=ತಿಳಿದವರು;

ವಚನಾರ್ಥವ ಕಂಡಹರೆಂದು=ಬರಹ ರೂಪದಲ್ಲಿರುವ ವಿಚಾರಗಳನ್ನು ನಾವು ಚೆನ್ನಾಗಿ ಅರಿತಿದ್ದೇವೆ ಎಂದುಕೊಂಡು;

ರಚನೆ=ಬರಹದಲ್ಲಿರುವ ವಿಚಾರಗಳು/ಸಂಗತಿಗಳು; ಮರೆ=ಬೇರೆಯವರ ಕಣ್ಣಿಗೆ ಕಾಣದಂತೆ ಇಲ್ಲವೇ ತಿಳಿಯದಂತೆ ಇಡುವುದು; ಮರೆಮಾಡು=ಮುಚ್ಚಿಡು; ನುಡಿಯಲ್+ಏತಕ್ಕೆ; ನುಡಿ=ಹೇಳು;

ರಚನೆಯ ಮರೆಮಾಡಿ ನುಡಿಯಲೇತಕ್ಕೆ=ಬರಹ ರೂಪದಲ್ಲಿರುವ ಒಳ್ಳೆಯ ಸಂಗತಿಗಳನ್ನು ಜನರಿಗೆ ತಿಳಿಸದೆ, ಇನ್ನಿತರ ಮಾತುಗಳನ್ನು ಆಡುವುದರಿಂದ ಪ್ರಯೋಜನವೇನು;

ದಾರಿ+ಅಲ್ಲಿ; ದಾರಿ=ಹಾದಿ/ಮಾರ್ಗ; ಸರಕು=ಸಾಮಾನು/ಸಾಮಗ್ರಿ; ಮರೆ+ಅಲ್ಲದೆ; ಅಲ್ಲದೆ=ಹೊರತು;

ಮಾರು+ಅಲ್ಲಿ; ಮಾರು=ಹಣವನ್ನು ಪಡೆದು ಸಾಮಗ್ರಿಗಳನ್ನು ನೀಡುವುದು; ಮಾರುವಲ್ಲಿ=ಮಾರಾಟ ಮಾಡುವ ಜಾಗದಲ್ಲಿ;

ದಾರಿಯಲ್ಲಿ ಸರಕು ಮರೆಯಲ್ಲದೆ ಮಾರುವಲ್ಲಿ ಮರೆ ಉಂಟೆ=ಮಾರಾಟ ಮಾಡುವ ಸಾಮಗ್ರಿಯನ್ನು ಬಂಡಿಗಳಲ್ಲಿ ತುಂಬಿ ದಾರಿಯಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಸಾಗಿಸುವಾಗ ಮರೆಮಾಡಬೇಕೆ ಹೊರತು, ಮಾರಾಟ

ಮಾಡುವ ಜಾಗದಲ್ಲಿ ಮುಚ್ಚಿಡುವುದು ಸರಿಯೇ;

ತಾನ್+ಅರಿವಲ್ಲಿ; ತಾನ್=ವ್ಯಕ್ತಿಯು; ಅರಿ+ಅಲ್ಲಿ; ಅರಿ=ತಿಳಿ/ಗ್ರಹಿಸು; ಅರಿವಲ್ಲಿ=ವಿದ್ಯೆಯನ್ನು ಕಲಿಯುವಾಗ/ಗಳಿಸುವಾಗ; ಮರೆ+ಅಲ್ಲದೆ;

ತಾನರಿವಲ್ಲಿ ಮರೆಯಲ್ಲದೆ=ವ್ಯಕ್ತಿಯು ವಿದ್ಯೆಯನ್ನು ಕಲಿಯುವಾಗ, ಅವನು ತನ್ನ ಮಯ್ ಮನಸ್ಸನ್ನು ಏಕಾಗ್ರತೆಗೆ ಒಳಪಡಿಸುತ್ತಾನೆ. ಆಗ ಅವನ ಪ್ರಯತ್ನ ಮತ್ತು ಶ್ರಮದ ಪ್ರಮಾಣ ಇತರರಿಗೆ ಕಾಣುವುದಿಲ್ಲ. ಅಂದರೆ ವಿದ್ಯೆಯನ್ನು ವ್ಯಕ್ತಿಯು ತನ್ನ ಸ್ವಂತ ಪರಿಶ್ರಮದಿಂದ ಪಡೆದುಕೊಳ್ಳುತ್ತಾನೆ;

ಬೋಧೆ=ಕಲಿಸುವಿಕೆ/ತಿಳಿಯ ಹೇಳುವಿಕೆ;

ಬೋಧೆಗೆ ಮರೆಯಿಲ್ಲ=ಇತರರಿಗೆ ತಿಳಿಯ ಹೇಳುವಾಗ ಇಲ್ಲವೇ ಉಪದೇಶಿಸುವಾಗ ಒಳಿತಿನ ಸಂಗತಿಗಳಲ್ಲಿ ಯಾವುದೊಂದನ್ನೂ ಮುಚ್ಚಿಡಬಾರದು; ವ್ಯಕ್ತಿಯು ತನಗೆ ಗೊತ್ತಿರುವ ಒಳಿತಿನ ಎಲ್ಲ ಸಂಗತಿಗಳನ್ನು ಇತರರಿಗೆ ಹೇಳಬೇಕು;

ಎಂದನ್+ಅಂಬಿಗ;

“ದಾರಿಯಲ್ಲಿ ಸರಕು ಮರೆಯಲ್ಲದೆ ಮಾರುವಲ್ಲಿ ಮರೆ ಉಂಟೆ” ಎಂಬ ರೂಪಕದ ಮೂಲಕ ವಚನಕಾರನು ಬಹು ದೊಡ್ಡ ಪ್ರಶ್ನೆಯೊಂದನ್ನು ಓದು ಬರಹವನ್ನು ಬಲ್ಲವರಿಗೆ ಹಾಕಿದ್ದಾನೆ. ಕ್ರಿ.ಶ. ಹನ್ನೆರಡನೆಯ ಶತಮಾನದ ಇಂಡಿಯಾ ದೇಶದ ಸಾಮಾಜಿಕ ರಚನೆಯಲ್ಲಿ “ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ” ಎಂಬ ವರ್ಣ ವ್ಯವಸ್ಥೆಯಿತ್ತು. ಸಾಮಾಜಿಕ ರಚನೆಯ ಹೊರಗೆ ಚಾಂಡಾಳರೆಂಬ ಜನಸಮುದಾಯವಿತ್ತು. ಶೂದ್ರರಿಗೆ, ಎಲ್ಲಾ ವರ್ಣದ ಹೆಂಗಸರಿಗೆ ಮತ್ತು ಚಾಂಡಾಲರಿಗೆ ವಿದ್ಯೆಯನ್ನು ನಿರಾಕರಿಸಲಾಗಿತ್ತು. ಒಟ್ಟು ಜನಸಮುದಾಯದಲ್ಲಿ ಶೇ. 90 ಮಂದಿಯನ್ನು ಅರಿವಿನ ನೆಲೆಯಾದ ವಿದ್ಯೆಯಿಂದ ದೂರವಿಟ್ಟಿದ್ದ ಮೇಲು ವರ್ಣದವರಿಗೆ ಈ ಬಗೆಯ ಪ್ರಶ್ನೆಯ ಮೂಲಕ **“ವಿದ್ಯೆಯೆಂಬುದು ಎಲ್ಲರಿಗೂ ದೊರಕುವಂತಾಗಬೇಕೆ ಹೊರತು ಯಾರನ್ನೂ ವಿದ್ಯೆಯಿಂದ ವಂಚಿತರನ್ನಾಗಿ ಮಾಡಬಾರದು”** ಎಂಬ ವಿವೇಕವನ್ನು ವಿದ್ಯಾವಂತರಲ್ಲಿ ಮೂಡಿಸಲು ವಚನಕಾರನು ಪ್ರಯತ್ನಿಸಿದ್ದಾನೆ.

❖

14. ವೇದದಲುಳ್ಳಡೆ ಪ್ರಾಣಿವಧೆಯಪ್ಪುದೆ
ಶಾಸ್ತ್ರದಲುಳ್ಳಡೆ ಸಮಯವಾದವಪ್ಪುದೆ
ಪರ್ವತದಲುಳ್ಳಡೆ ಹೋದವರು ಬಹರೆ
ನಿರ್ಬುದ್ಧಿ ಮಾನವರನೇನೆಂಬೆ
ಮನ ವಚನ ಕಾಯ ಶುದ್ಧಿಯಾಗಿಪ್ಪಾತನ ಹೃದಯದಲಿ
ನಿಮ್ಮ ಕಂಡೆನೆಂದನಂಬಿಗ ಚೌಡಯ್ಯ.

ವ್ಯಕ್ತಿಯ ಒಳ್ಳೆಯ ನಡೆನುಡಿಯಲ್ಲಿ ದೇವರು ನೆಲೆಸಿದ್ದಾನೆಯೇ ಹೊರತು ಯಾಗದಲ್ಲಿ ನೀಡುವ ಪ್ರಾಣಿಬಲಿಯಲ್ಲಿ, ಪೂಜಿಸುವಾಗ ಮಾಡುವ ಸಂಪ್ರದಾಯದ ಆಚರಣೆಯಲ್ಲಿ ಇಲ್ಲವೇ ಕಾಡಿನಲ್ಲಿ ಮಾಡುವ ಜಪತಪದಲ್ಲಿ ದೇವರಿಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ವೇದದಲ್+ಉಳ್ಳಡೆ; ವೇದದಲ್=ವೇದದಲ್ಲಿ; ವೇದ=ಇಂಡಿಯಾ ದೇಶದಲ್ಲಿದ್ದ ಪ್ರಾಚೀನ ಜನಸಮುದಾಯದವರು ಬೀಸುವ ಗಾಳಿ, ಉರಿಯುವ ಬೆಂಕಿ, ಸುರಿಯುವ ಮಳೆ, ಮರಗಿಡಬಳ್ಳಿಗಳು, ಮೋಡಗಳ ಡಿಕ್ಕಿಯಿಂದ ಉಂಟಾಗುವ ಸಿಡಿಲು ಮಿಂಚು ಮೊದಲಾದ ನಿಸರ್ಗದ ಸಂಗತಿಗಳನ್ನೇ ದೇವತೆಗಳನ್ನಾಗಿ ಕಲ್ಪಿಸಿಕೊಂಡು ಪೂಜಿಸುತ್ತಿದ್ದ ಆಚರಣೆಗಳ ವಿವರವನ್ನು ಒಳಗೊಂಡ 'ಋಗ್ವೇದ–ಯಜುರ್ವೇದ–ಸಾಮವೇದ–ಅಥರ್ವಣ ವೇದ' ಎಂಬ ನಾಲ್ಕು ಹೊತ್ತಗೆಗಳು;

ಉಳ್ಳಡೆ=ಇದ್ದರೆ; ಪ್ರಾಣಿ+ವಧೆ+ಅಪ್ಪುದೆ; ಪ್ರಾಣಿ=ದನ/ಎಮ್ಮೆ/ಕುದುರೆ/ಕುರಿ/ ಕೋಳಿ ಮುಂತಾದ ಜೀವಿಗಳು; ವಧೆ=ಕೊಲೆ; ಅಪ್ಪುದೆ=ಆಗುತ್ತಿತ್ತೇ;

ವೇದದಲುಳ್ಳಡೆ ಪ್ರಾಣಿವಧೆಯಪ್ಪುದೆ=ವೇದದಲ್ಲಿ ದೇವರು ಇದ್ದಿದ್ದರೇ ಪ್ರಾಣಿಗಳ ಬಲಿಯು ಆಗುತ್ತಿತ್ತೇ ಎಂಬ ಪ್ರಶ್ನೆಯನ್ನು ಜನಸಮುದಾಯದ ಮುಂದೆ ವಚನಕಾರನು ಇಟ್ಟಿದ್ದಾನೆ. ನಾಲ್ಕು ವೇದಗಳಲ್ಲಿಯೂ ಈ ಜಗತ್ತಿನಲ್ಲಿರುವ ಎಲ್ಲ ಬಗೆಯ ವಸ್ತುಗಳ ಇರುವಿಕೆಗೆ ಮತ್ತು ಜೀವಿಗಳ ಹುಟ್ಟಿಗೆ ದೇವರೇ ಕಾರಣನೆಂದು ಹೇಳಲಾಗಿದೆ. ಅಂದ ಮೇಲೆ ಅಂತಹ ದೇವರಿಗೆ ಮತ್ತೆ ಅವನೇ ಹುಟ್ಟಿಸಿರುವ ಪ್ರಾಣಿಗಳನ್ನು ಬಲಿಕೊಡಬೇಕಾದ ಅಗತ್ಯವೇನಿದೆ? ಆದ್ದರಿಂದ ದೇವರು ಎಂಬುವವನು ಕೇವಲ ಮಾನವರ ಕಲ್ಪನೆಯಿಂದ ಮೂಡಿರುವ ವ್ಯಕ್ತಿ ಇಲ್ಲವೇ ಶಕ್ತಿಯೇ ಹೊರತು, ವಾಸ್ತವದಲ್ಲಿ "ದೇವರು ಇಲ್ಲ" ಎಂಬ ಅರಿವನ್ನು

ಜನಮನದಲ್ಲಿ ಮೂಡಿಸಲು ವಚನಕಾರನು ಇಂತಹ ಪ್ರಶ್ನೆಯನ್ನು ಹಾಕಿದ್ದಾನೆ;

ಶಾಸ್ತ್ರದಲ್+ಉಳ್ಳಡೆ; ಶಾಸ್ತ್ರದಲ್=ಶಾಸ್ತ್ರದಲ್ಲಿ; ಶಾಸ್ತ್ರ=ದೇವರನ್ನು ಪೂಜಿಸುವಾಗ ಅನುಸರಿಸಬೇಕಾದ ಸಂಪ್ರದಾಯದ ಆಚರಣೆಗಳು; ಸಮಯ+ವಾದ+ಅಪ್ಪುದೆ; ಸಮಯ=ಆಚರಣೆಗಳ ರೀತಿನೀತಿ/ಸಂಪ್ರದಾಯ; ವಾದ=ಚರ್ಚೆ/ತರ್ಕ; ಸಮಯವಾದ=ದೇವರನ್ನು ಪೂಜಿಸುವಾಗ ಮಾಡುವ ಆಚರಣೆಗಳಲ್ಲಿ ಇಲ್ಲವೇ ಅನುಸರಿಸುವ ಕಟ್ಟುಕಟ್ಟಲೆಗಳಲ್ಲಿ ಕೆಲವು ಬಗೆಯು ಎಲ್ಲಕ್ಕಿಂತ ಉತ್ತಮ ಎಂಬ ಚರ್ಚೆಯಲ್ಲಿ ತೊಡಗುವುದು;

ಶಾಸ್ತ್ರದಲುಳ್ಳಡೆ ಸಮಯವಾದವಪ್ಪುದೆ=ಪೂಜೆಯ ಆಚರಣೆಗಳಲ್ಲಿ ದೇವರಿದ್ದರೆ, ಆಚರಣೆಗಳಲ್ಲಿ ಹಿರಿದು ಕಿರಿದು ಎಂಬ ಚರ್ಚೆಯ ಅಗತ್ಯವೇಕೆ;

ಪರ್ವತದಲ್+ಉಳ್ಳಡೆ; ಪರ್ವತದಲ್=ಪರ್ವತದಲ್ಲಿ; ಪರ್ವತ= ಬೆಟ್ಟಗುಡ್ಡಗಳಿಂದ ಕೂಡಿದ ಕಾಡು; ಬಹರೆ=ಬರುತ್ತಾರೆಯೆ;

ಪರ್ವತದಲುಳ್ಳಡೆ ಹೋದವರು ಬಹರೆ=ಪರ್ವತ ಪ್ರಾಂತ್ಯದಲ್ಲಿ ದೇವರಿದ್ದರೆ, ಅವನನ್ನು ಜಪತಪಗಳಿಂದ ಒಲಿಸಿಕೊಂಡವರು, ಅವನ ಜತೆಯಲ್ಲಿಯೇ ಇರದೆ, ಮತ್ತೆ ನಾಡಿಗೆ ಹಿಂತಿರುಗಿ ಬರುತ್ತಾರೆಯೇ; ಜನಮನದಲ್ಲಿರುವ ಒಂದು ನಂಬಿಕೆಯ ಹಿನ್ನೆಲೆಯಲ್ಲಿ ಈ ನುಡಿಗಳನ್ನಾಡಲಾಗಿದೆ. ಜಪತಪಗಳ ಮೂಲಕ ದೇವರನ್ನು ಮೆಚ್ಚಿಸಿ, ಅವನ ಅನುಗ್ರಹಕ್ಕೆ ಪಾತ್ರರಾದವರು 'ಜೀವಿಗಳ ಹುಟ್ಟು ಸಾವಿನ ಚಕ್ರ'ದಿಂದ ಬಿಡುಗಡೆಯನ್ನು ಪಡೆದು ಅವನಲ್ಲಿಯೇ ಒಂದಾಗುತ್ತಾರೆ ಎಂಬ ಒಂದು ನಂಬಿಕೆಯು ಜನಮನದಲ್ಲಿದೆ;

ನಿರ್ಬುದ್ಧಿ="ಯಾವುದು ಸರಿ... ಯಾವುದು ತಪ್ಪು" ಎಂಬುದರ ಅರಿವು ಇಲ್ಲದಿರುವುದು/ "ಯಾವುದು ಒಳ್ಳೆಯದು... ಯಾವುದು ಕೆಟ್ಟದ್ದು" ಎಂಬ ಎಚ್ಚರ ಇಲ್ಲದಿರುವುದು/ "ಯಾವುದು ವಾಸ್ತವ... ಯಾವುದು ಕಲ್ಪಿತ" ಎಂಬ ವಿವೇಕ ಇಲ್ಲದಿರುವುದು; ಮಾನವರನ್+ಏನ್+ಎಂಬೆ; ಮಾನವರನ್=ವ್ಯಕ್ತಿಗಳನ್ನು; ಎಂಬೆ=ಹೇಳಲಿ; ನಿರ್ಬುದ್ಧಿ ಮಾನವರು=ಅರಿವು, ಎಚ್ಚರ ಮತ್ತು ವಿವೇಕವಿಲ್ಲದ ವ್ಯಕ್ತಿಗಳು; ಏನೆಂಬೆ=ಏನೆಂದು ಕರೆಯಲಿ/ಹೇಳಲಿ;

ನಿರ್ಬುದ್ಧಿ ಮಾನವರನೇನೆಂಬೆ=ದೇವರನ್ನು ಒಲಿಸಿಕೊಂಡು ಅವನ ಅನುಗ್ರಹಕ್ಕೆ ಪಾತ್ರರಾಗಲೆಂದು ಪ್ರಾಣಿಗಳನ್ನು ಬಲಿಯನ್ನು ಕೊಡುವ, ಸಂಪ್ರದಾಯದ ಕಟ್ಟುಕಟ್ಟಲೆಗಳನ್ನೇ ದೊಡ್ಡದೆಂದು ನಂಬಿ ಆಚರಿಸುವ ಮತ್ತು ಜಪ ತಪದಲ್ಲಿ ತೊಡಗುವ ವ್ಯಕ್ತಿಗಳನ್ನು ತಿಳಿಗೇಡಿಗಳು ಎಂದು ವಚನಕಾರನು ಅಲ್ಲಗಳೆಯುತ್ತಾನೆ.

ಏಕೆಂದರೆ ವಚನಕಾರನು ದೇವರ ಬಗ್ಗೆ ಬೇರೊಂದು ಬಗೆಯ ನಿಲುವನ್ನು ಹೊಂದಿದ್ದಾನೆ;

ಮನ=ಮನಸ್ಸು; ವಚನ=ಮಾತು; ಕಾಯ=ದೇಹ;

ಶುದ್ಧಿ+ಆಗಿ+ಇಪ್ಪ+ಆತನ; ಶುದ್ಧಿ=ಸರಿಯಾಗಿರುವುದು; **ಮನ ಶುದ್ಧಿ**= ದುರಾಸೆ ಮತ್ತು ಹಗೆತನದ ಒಳಮಿಡಿತಗಳಿಂದ ದೂರವಿರುವುದು; **ವಚನ ಶುದ್ಧಿ**= ಸುಳ್ಳನ್ನು ಹೇಳದಿರುವುದು ಮತ್ತು ಕಾಡು ಹರಟೆಯನ್ನು ಹೊಡೆಯದಿರುವುದು; **ಕಾಯ ಶುದ್ಧಿ**=ಕೊಲೆ, ಕಳವು ಮತ್ತು ಹಾದರವನ್ನು ಮಾಡದಿರುವುದು;

ಇಪ್ಪ=ಇರುವ; ಹೃದಯ=ಎದೆ; ನಿಮ್ಮ=ನಿಮ್ಮನ್ನು; ಕಂಡೆನ್+ಎಂದನ್+ ಅಂಬಿಗ; ನಿಮ್ಮ ಕಂಡೆನ್=ದೇವರಾದ ನಿಮ್ಮನ್ನು ನೋಡಿದೆನು;

ಮನ ವಚನ ಕಾಯ ಶುದ್ಧಿಯಾಗಿಪ್ಪಾತನ ಹೃದಯದಲಿ ನಿಮ್ಮ ಕಂಡೆನ್= ಯಾವ ವ್ಯಕ್ತಿಯ ಮಯ್ ಮನಸ್ಸು ಮಾತು ಸರಿಯಾಗಿರುತ್ತದೆಯೋ ಅಂದರೆ ದೇಹದಿಂದ ಕೆಟ್ಟಕೆಲಸವನ್ನು ಮಾಡದೆ, ಮನಸ್ಸಿನಲ್ಲಿ ಕೆಟ್ಟದ್ದನ್ನು ಚಿಂತಿಸದೆ, ಮಾತಿನಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ನುಡಿಗಳನ್ನಾಡದೆ ಇರುತ್ತಾನೆಯೋ ಅಂತಹ ವ್ಯಕ್ತಿಯ ಅಂತರಂಗದಲ್ಲಿ ನಾನು ದೇವರನ್ನು ಕಂಡೆನು;

ಎಂದನ್=ಎಂದು ನುಡಿದನು;

ಶಿವಶರಣಶರಣೆಯರ ಪಾಲಿಗೆ 'ದೇವರು' ಎನ್ನುವ ಶಕ್ತಿ ಇಲ್ಲವೇ ವ್ಯಕ್ತಿಯು ಕಲ್ಲು, ಮಣ್ಣು, ಲೋಹ ಮತ್ತು ಮರದಿಂದ ಮಾಡಿದ ವಿಗ್ರಹರೂಪಿಯಾಗಿರಲಿಲ್ಲ. ಆದ್ದರಿಂದಲೇ ಅವರು ದೇಗುಲವನ್ನು ನಿರಾಕರಿಸಿ, ತಮ್ಮ ಅಂಗಯ್ ಮೇಲೆ ಇಷ್ಟಲಿಂಗವನ್ನು ಇಟ್ಟುಕೊಂಡು ಪೂಜಿಸುತ್ತಿದ್ದರು. ಆದರೆ ಅದು ಕೂಡ ಅವರಿಗೆ 'ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವುದಕ್ಕೆ' ಒಂದು ಸಂಕೇತವಾಗಿತ್ತೇ ಹೊರತು ಅದೇ ದೇವರಾಗಿರಲಿಲ್ಲ. ಒಳ್ಳೆಯ ನಡೆನುಡಿಗಳು ಇರುವ ಎಡೆಯಲ್ಲಿ ದೇವರು ನೆಲೆಸಿರುತ್ತಾನೆ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ತನ್ನ ಮಯ್ ಮನದಲ್ಲಿ ಮಿಡಿಯುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಆಯ್ಕೆ ಮಾಡಿಕೊಂಡು ತಾನು ಆಡುವ ಮಾತು ಮತ್ತು ಮಾಡುವ ಕಾಯಕದ ಮೂಲಕ ತನಗೆ, ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

❖

15. ಸಮಯವ ಮಾಡಿ ಹಣವ ತೆಗೆಯಲೇತಕ್ಕೆ
ಆಚಾರಕ್ಕೂ ಹಣದಾಸೆಗೂ ಸರಿಯೆ
ಎಂದನಂಬಿಗ ಚೌಡಯ್ಯ.

ಸತ್ಯ ನೀತಿ ನ್ಯಾಯದ ನಡೆನುಡಿಗಳನ್ನು ಜೀವನದಲ್ಲಿ ಆಚರಿಸುವಂತೆ ಜನರಿಗೆ ಬಹಿರಂಗದಲ್ಲಿ ತಿಳಿಯ ಹೇಳುತ್ತ, ಅಂತರಂಗದಲ್ಲಿ ಹಣವನ್ನು ಸಂಪಾದನೆ ಮಾಡುವ ಕೆಟ್ಟ ಉದ್ದೇಶವನ್ನು ಹೊಂದಿರುವ ವ್ಯಕ್ತಿಗಳ ಇಬ್ಬಗೆಯ ವರ್ತನೆಯನ್ನು ವಚನಕಾರನು ಈ ವಚನದಲ್ಲಿ ಟೀಕಿಸಿದ್ದಾನೆ.

'ಇಬ್ಬಗೆಯ ವರ್ತನೆ' ಎಂದರೆ ಒಂದು ಕಡೆ ಒಳ್ಳೆಯದನ್ನು ಹೇಳುತ್ತಿರುವ ವ್ಯಕ್ತಿಯೇ ಮತ್ತೊಂದು ಕಡೆ ಕೆಟ್ಟದ್ದನ್ನು ಮಾಡುತ್ತಿರುವುದು.

ಸಮಯ=ಧರ್ಮ/ಒಳ್ಳೆಯ ನಡೆನುಡಿಗಳ ಪಾಲನೆ; **ಸಮಯವ ಮಾಡಿ**= ಜನರಿಗೆ ಒಳ್ಳೆಯ ನಡೆನುಡಿಯನ್ನು ಪಾಲಿಸುವಂತೆ ತಿಳಿಯ ಹೇಳುತ್ತ; ಹಣ= ಸಂಪತ್ತು; ತೆಗೆಯಲ್+ಏತಕ್ಕೆ; ತೆಗೆ=ಅಪಹರಿಸು/ಕದಿ; ಏತಕ್ಕೆ=ಯಾವ ಉದ್ದೇಶಕ್ಕಾಗಿ;

ಆಚಾರ=ಒಳ್ಳೆಯ ನಡೆನುಡಿ. 'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸವು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಳಿತನ್ನು ಮಾಡುವಂತೆಯೇ ಸಹಮಾನವರಿಗೂ ಮತ್ತು ಸಮಾಜಕ್ಕೂ ಒಳಿತನ್ನು ಉಂಟುಮಾಡುವುದು;

ಹಣದ+ಆಸೆಗೂ; ಹಣದಾಸೆ=ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಪಾದಿಸ ಬೇಕೆಂಬ ಬಯಕೆ; ಸರಿ=ತಕ್ಕುದು/ಯೋಗ್ಯವಾದುದು; ಸರಿಯೆ=ಯೋಗ್ಯವೇ; ಎಂದನ್+ಅಂಬಿಗ; ಅಂಬಿಗ=ನದಿಯಲ್ಲಿ ದೋಣಿಯನ್ನು ನಡೆಸುವ ಕಾಯಕದವನು;

ದೇವ ಮಂದಿರಗಳಲ್ಲಿ ಉಳ್ಳವರಿಗೆ ದೊರೆಯುವ ಮನ್ನಣೆಯು ದುಡಿಯುವ ವರ್ಗದ ಬಡವರಿಗೆ ದೊರೆಯುವುದಿಲ್ಲ. ದೇವರ ವಿಗ್ರಹವನ್ನು ನೋಡುವುದಕ್ಕೆ ಹೆಚ್ಚು ಹಣ ಕೊಟ್ಟವರನ್ನು ಮೊದಲು ಬಿಡುವ ಮತ್ತು ದೇವರಿಗೆ ಮಾಡುವ ಪೂಜೆಗಳಲ್ಲಿ ಒಂದೊಂದು ಬಗೆಯ ಪೂಜೆಗೂ ಒಂದೊಂದು ಬಗೆಯ ದರವನ್ನು ನಿಗದಿಪಡಿಸಿರುವ ಕ್ರಮದಲ್ಲಿ ಹೆಚ್ಚು ಹೆಚ್ಚು ಹಣವನ್ನು ಸಂಪಾದನೆ ಮಾಡುವ ಉದ್ದೇಶವಿದೆಯೇ ಹೊರತು ದೇವರ ಬಳಿ ಬರುವವರು ಒಳ್ಳೆಯ

ನಡೆನುಡಿಗಳನ್ನು ಹೊಂದಿರಬೇಕೆಂಬ ಇಲ್ಲವೇ ಒಳ್ಳೆಯ ನಡೆನುಡಿಗಳನ್ನು ಕಲಿತು ಕೊಳ್ಳುವಂತೆ ಆಗಬೇಕೆಂಬ ಉದ್ದೇಶವಿಲ್ಲ. ವ್ಯಕ್ತಿಗಳು ಪಡೆಯುವ ಸಾಮಾಜಿಕ ಅರಿವು ಮತ್ತು ಎಚ್ಚರದಿಂದ ಒಳ್ಳೆಯ ನಡೆನುಡಿಗಳು ರೂಪುಗೊಳ್ಳುತ್ತವೆಯೇ ಹೊರತು ಅವರು ಮಾಡುವ ದೇವರ ಪೂಜೆಯಿಂದಲ್ಲ ಎಂಬ ನಿಲುವನ್ನು ಹನ್ನೆರಡನೆಯ ಶತಮಾನದ ವಚನಕಾರರು ತಳೆದಿದ್ದರು.

ಜಾತಿ ಮತದ ಒಕ್ಕೂಟಗಳ ಗುರುಗಳು ತಂತಮ್ಮ ಜಾತಿಯ ಸಿರಿವಂತರಿಗೆ ಮತ್ತು ರಾಜಕೀಯವಾಗಿ ಉನ್ನತ ಗದ್ದುಗೆಯಲ್ಲಿ ಇರುವವರಿಗೆ ಹೆಚ್ಚಿನ ಮನ್ನಣೆಯನ್ನು ನೀಡುತ್ತಾರೆ. ತಮ್ಮ ಬಳಿ ಬರುವ ಸಿರಿವಂತರಿಗೆ ಇಲ್ಲವೇ ಉನ್ನತ ಗದ್ದುಗೆಯಲ್ಲಿರುವ ವ್ಯಕ್ತಿಗಳಿಗೆ **"ಜನಸಮುದಾಯವನ್ನು ಮತ್ತು ಸಮಾಜವನ್ನು ವಂಚಿಸಿ ಕೆಟ್ಟ ರೀತಿಯಲ್ಲಿ ನೀವು ಸಂಪತ್ತನ್ನು ಗಳಿಸಬೇಡಿ"** ಎಂಬ ಅರಿವನ್ನಾಗಲಿ ಇಲ್ಲವೇ ಎಚ್ಚರಿಕೆಯನ್ನಾಗಲಿ ನೀಡುವುದಿಲ್ಲ. ಏಕೆಂದರೆ ಎಲ್ಲಾ ಕಾಲದಲ್ಲಿಯೂ ಜಾತಿ ಮತ ದೇವರ ಹೆಸರಿನಲ್ಲಿ ಹಣದ/ಸಂಪತ್ತಿನ ಗಳಿಕೆಯೇ ಮೂಲ ಉದ್ದೇಶ ವಾಗಿರುತ್ತದೆ ಎಂಬ ವಾಸ್ತವವನ್ನು ವಚನಕಾರನು ಗುರುತಿಸಿ, ಅಂತಹ ಇಬ್ಬಗೆಯ ನಡವಳಿಕೆಯನ್ನು ಟೀಕಿಸಿದ್ದಾನೆ.

❖

16. ಹಿತ್ತಿಲ ಸೊಪ್ಪಿಂಗೆ ನೀರ ಹೊಯಿದು
ಮತ್ತೆ ಪುನರಪಿಯಾಗಿ ಕೊಯಿವವನಂತೆ
ಭಕ್ತರಿಗೆ ಬೋಧೆಯ ಹೇಳಿ
ಚಿತ್ತವೃತ್ತಿಯನರಿದು ಬೇಡುವಂಗೆ
ಇನ್ನೆತ್ತಣ ಮುಕ್ತಿಯೆಂದನಂಬಿಗ ಚೌಡಯ್ಯ.

ಸತ್ಯ, ನೀತಿ ಮತ್ತು ನ್ಯಾಯದ ಸಂಗತಿಗಳನ್ನು ಬಹಿರಂಗದಲ್ಲಿ ಜನರಿಗೆ ತಿಳಿಯ ಹೇಳುತ್ತ, ಅಂತರಂಗದಲ್ಲಿ ಅವರಿಂದ ಹಣ ಒಡವೆ ವಸ್ತುಗಳನ್ನು ಬೇಡಿ ಪಡೆಯುವ ವ್ಯಕ್ತಿಯ ಕಪಟತನವನ್ನು ಈ ವಚನದಲ್ಲಿ ಟೀಕಿಸಲಾಗಿದೆ.

'ಹಿತ್ತಿಲ ಸೊಪ್ಪಿಂಗೆ ನೀರ ಹೊಯಿದು ಮತ್ತೆ ಪುನರಪಿಯಾಗಿ ಕೊಯಿವವನಂತೆ' ಎಂಬ ಹೋಲಿಕೆಯು ಜನರಿಂದ ಮತ್ತೆ ಮತ್ತೆ ಉಪಯೋಗವನ್ನು ಪಡೆಯುವುದಕ್ಕಾಗಿಯೇ ವ್ಯಕ್ತಿಯು ಉಪದೇಶದ ನಾಟಕವನ್ನು ಆಡುತ್ತಿದ್ದಾನೆ ಎಂಬ ತಿರುಳಿನಲ್ಲಿ ಬಳಕೆಯಾಗಿದೆ.

(ಹಿತ್ತಿಲು=ಮನೆಯ ಹಿಂದಿನ ಜಾಗ; ಸೊಪ್ಪು=ಮರಗಿಡಬಳ್ಳಿಗಳ ಎಲೆ; ಹಿತ್ತಿಲ ಸೊಪ್ಪು=ಮನೆಯ ಹಿತ್ತಿಲಿನ ಜಾಗದಲ್ಲಿ ಒಂದು ಕಡೆ ಮಣ್ಣನ್ನು ಅಗೆದು ಹದಗೊಳಿಸಿ ಚಿಕ್ಕ ಚಿಕ್ಕ ಪಾತಿಗಳನ್ನು ಕಟ್ಟಿ, ಅಲ್ಲಿ ಕೀರೆ ಬೀಜಗಳನ್ನು ಬಿತ್ತಿ ಬೆಳೆಸುತ್ತಾರೆ. ಇದನ್ನು ಕೀರೆ ಮಡಿ ಎನ್ನುತ್ತಾರೆ. ಸಣ್ಣನೆಯ ಕಡ್ಡಿಯಾಕಾರದಲ್ಲಿ ಬೆಳೆಯುವ ಕೀರೆ ಗಿಡಗಳ ಸೊಪ್ಪನ್ನು ಮಾತ್ರ ಕಿತ್ತುಕೊಂಡು ಸಾರನ್ನು ಮಾಡಲು ಬಳಸುತ್ತಾರೆ. ಕೀರೆ ಗಿಡಗಳ ಬೇರು ಹಾಗೆಯೇ ಇರುತ್ತದೆ. ಮತ್ತೆ ಮತ್ತೆ ನೀರನ್ನು ಹಾಕಿದಂತೆಲ್ಲಾ ಮತ್ತೆ ಮತ್ತೆ ಕೀರೆ ಸೊಪ್ಪು ಬೆಳೆಯುತ್ತಿರುತ್ತದೆ.

ಹೊಯ್=ಸುರಿ/ಎರೆ; **ಹಿತ್ತಿಲ ಸೊಪ್ಪಿಂಗೆ ನೀರ ಹೊಯಿದು**=ಹಿತ್ತಿಲಿನಲ್ಲಿರುವ ಸೊಪ್ಪಿನ ಮಡಿಗೆ ನೀರನ್ನು ಎರೆದು; ಮತ್ತೆ=ತಿರುಗಿ; ಪುನರಪಿ=ಮತ್ತೆ ಮತ್ತೆ/ಅನೇಕ ಸಲ; ಕೊಯ್=ಕೀಳು/ಕತ್ತರಿಸು; ಅಂತೆ=ಹಾಗೆ;

ಮತ್ತೆ ಪುನರಪಿಯಾಗಿ ಕೊಯಿವವನಂತೆ=ಸೊಪ್ಪು ಬೆಳೆಬೆಳೆದಂತೆಲ್ಲಾ ಮತ್ತೆ ಮತ್ತೆ ಕೀಳುತ್ತಿರುವ ವ್ಯಕ್ತಿಯಂತೆ;

ಭಕ್ತರು=ದೇವರನ್ನು ಪೂಜಿಸುವವರು; ಬೋಧೆ=ತಿಳುವಳಿಕೆ/ಅರಿವು; **ಭಕ್ತರಿಗೆ ಬೋಧೆಯ ಹೇಳಿ**=ದೇವರನ್ನು ಪೂಜಿಸಲೆಂದು ಬರುವ ವ್ಯಕ್ತಿಗಳಿಗೆ ಒಳ್ಳೊಳ್ಳೆಯ

ಸಂಗತಿಗಳನ್ನು ಹೇಳಿ; ಚಿತ್ತವೃತ್ತಿ+ಅನ್+ಅರಿದು; ಚಿತ್ತ=ಮನಸ್ಸು; ಚಿತ್ತವೃತ್ತಿ=ಮನಸ್ಸಿನ ಮಿಡಿತ/ತುಡಿತ; ಅನ್=ಅನ್ನು; ಅರಿದು=ತಿಳಿದುಕೊಂಡು; ಬೇಡು=ಯಾಚಿಸು/ಕೇಳು; ಬೇಡುವಂಗೆ=ಬೇಡುವವನಿಗೆ;

ಚಿತ್ತವೃತ್ತಿಯನರಿದು ಬೇಡುವಂಗೆ=ತನ್ನ ಉಪದೇಶವನ್ನು ಕೇಳಲು ಬಂದ ಜನರ ಮನಸ್ಸನ್ನು ಒಳಹೊಕ್ಕು ಅಂದರೆ ಅವರನ್ನು ಮಾತಿನ ಮೂಲಕವೇ ಮರುಳುಗೊಳಿಸಿ, ಅವರಿಂದ ಹಣ ಒಡವೆ ವಸ್ತುಗಳನ್ನು ಯಾಚಿಸುವ ವ್ಯಕ್ತಿಗೆ;

ಇನ್+ಎತ್ತಣ; ಇನ್=ಇನ್ನು; ಎತ್ತಣ=ಯಾವ ಕಡೆಯ; ಮುಕ್ತಿ+ಎಂದನ್+ಅಂಬಿಗ; ಮುಕ್ತಿ=ವ್ಯಕ್ತಿಯು ಕೆಟ್ಟ ನಡೆನುಡಿಗಳನ್ನು ತೊರೆದು ಒಳ್ಳೆಯ ನಡೆನುಡಿಗಳನ್ನು ತನ್ನದಾಗಿಸಿಕೊಳ್ಳುವುದು;

ಇನ್ನೆತ್ತಣ ಮುಕ್ತಿ=ಬಹಿರಂಗದಲ್ಲಿ ಒಳ್ಳೊಳ್ಳೆಯ ಮಾತನ್ನಾಡಿ, ಅಂತರಂಗದಲ್ಲಿ ಜನರನ್ನು ವಂಚಿಸುವವನು ಎಂದೆಂದಿಗೂ ಉತ್ತಮ ವ್ಯಕ್ತಿಯಾಗಲಾರ;

ಎಂದನ್=ಎಂದು ಹೇಳಿದನು; ಅಂಬಿಗ=ದೋಣಿಯನ್ನು ನಡೆಸುವ ಕಾಯಕದವನು;

❖

17. ಹೊಡವಡಲೇಕೆ ಹಿಡಿದು ಪೂಜಿಸಲೇಕೆ
ಎಡೆಯಾಡಲೇಕೆ ದೇಗುಲಕ್ಕಯ್ಯಾ
ಬಡವರಂಧಕರಿಂಗೆ ಒಡಲಿಗನ್ನವನಿಕ್ಕಿದಡೆ
ಹೊಡವಂಟನಾದ ಮೂರು ಲೋಕಕ್ಕೆ
ಬಡವರಂಧಕರಿಗೆ ಒಡಲಿಗನ್ನವನಿಕ್ಕದಿದ್ದರೆ
ಹೊಡೆವಡಲಿಕೆ ಹುರುಳಿಲ್ಲವೆಂದನಂಬಿಗ ಚೌಡಯ್ಯ.

ದೇವರ ಹೆಸರಿನಲ್ಲಿ ಮಾಡುವ ಎಲ್ಲಾ ಬಗೆಯ ಪೂಜೆ/ಆಚರಣೆಗಳಿಗಿಂತಲೂ, ಹಸಿವು/ಬಡತನ/ಸಂಕಟದ ಬೇಗೆಯಲ್ಲಿ ಬೇಯುತ್ತಿರುವ ವ್ಯಕ್ತಿಗಳಿಗೆ ನೆರವನ್ನು ನೀಡುವ ಕೆಲಸವು ಉತ್ತಮವಾದುದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಹೊಡವಡಲ್+ಏಕೆ; ಪೊಡೆ+ಪಡು=ಪೊಡೆವಡು; ಪೊಡೆ=ಹೊಟ್ಟೆ/ಒಡಲು; ಪಡು=ಬೀಳು/ಕೆಡೆ/ಮಲಗು; ಪೊಡೆವಡು/ಹೊಡವಡು=ಅಡ್ಡಬೀಳು/ಇಡೀ ಮಯ್ಯನ್ನು ನೆಲದ ಮೇಲೆ ಒಡ್ಡಿ ತಲೆಬಾಗಿ ನಮಿಸುವುದು/ದಿಂಡುರುಳುವುದು; ಏಕೆ=ಯಾವುದಕ್ಕಾಗಿ/ಏತಕ್ಕಾಗಿ; ಹಿಡಿದು=ಅಂಗಯ್ ಮೇಲೆ ಇಷ್ಟಲಿಂಗವನ್ನು ಇಟ್ಟುಕೊಂಡು; ಪೂಜಿಸಲ್+ಏಕೆ; ಪೂಜೆ=ದೇವರಿಗೆ ಮಾಡುವ ಬಹುಬಗೆಯ ಆಚರಣೆಗಳು/ಹೂಹಣ್ಣುಕಾಯಿಗಳನ್ನು ದೇವರ ವಿಗ್ರಹದ ಮುಂದೆ ಇಟ್ಟು, ಕರ್ಪೂರ/ಸಾಂಬ್ರಾಣಿ/ದೀಪದ ಆರತಿಯನ್ನು ಬೆಳಗುವುದು;

ಎಡೆ+ಆಡಲ್+ಏಕೆ; ಎಡೆ=ನಡುವಣ ಜಾಗ; ಆಡು=ಚಲಿಸು/ತಿರುಗು; ಆಡಲ್=ಆಡಲು/ತಿರುಗಲು; ಎಡೆಯಾಡು=ಅತ್ತಿತ್ತ ಅಡ್ಡಾಡು/ಅಲೆದಾಡು/ ದೇಗುಲಕ್ಕೆ+ಅಯ್ಯಾ; ದೇಗುಲ=ದೇವ+ಕುಲ; ಕುಲ=ಮನೆ/ಆಲಯ; ದೇಗುಲ= ದೇವಾಲಯ/ ದೇವರ ವಿಗ್ರಹ ಇರುವ ಮಂದಿರ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಬಡವರ್+ಅಂಧಕರಿಂಗೆ; ಬಡವ=ಆಸ್ತಿಪಾಸ್ತಿ/ಸಂಪತ್ತು/ಹಣಕಾಸು ಇಲ್ಲದವನು; ಅಂಧಕ=ಕುರುಡ/ಕಣ್ಣು ಕಾಣದವನು; ಒಡಲಿಗೆ+ಅನ್ನವನ್+ ಇಕ್ಕಿದಡೆ; ಒಡಲು=ಹೊಟ್ಟೆ/ದೇಹ; ಅನ್ನ=ಆಹಾರವಾಗಿ ತಿನ್ನುವ ಉಣ್ಣುವ ಎಲ್ಲಾ ಬಗೆಯ ತಿನಸು ಉಣಿಸುಗಳು; ಇಕ್ಕು=ನೀಡುವುದು/ಹಾಕುವುದು; ಇಕ್ಕಿದಡೆ=ನೀಡಿದರೆ/ಉಣಬಡಿಸಿದರೆ;

ಹೊಡವಂಟನ್+ಆದ; ಹೊಡವಂಟನು=ನಮಸ್ಕರಿಸಿದವನು/

ದಿಂಡುರುಳಿದವನು; ಆದ=ಆದನು; ಮೂರು ಲೋಕ=ಮಾನವ ಜೀವಿಗಳಿರುವ ಭೂಲೋಕ, ದೇವತೆಗಳಿರುವ ದೇವಲೋಕ, ನಾಗದೇವತೆಗಳು ನೆಲೆಸಿರುವ ಪಾತಾಳಲೋಕ ಎಂಬ ಮೂರು ಲೋಕಗಳಿವೆ ಎಂಬ ಕಲ್ಪನೆಯು ಜನಮನದಲ್ಲಿದೆ;

ಹೊಡವಂಟನಾದ ಮೂರು ಲೋಕಕ್ಕೆ=ಸಹಮಾನವರ ಬಗ್ಗೆ ಕರುಣೆಯನ್ನು ತೋರಿದ ನಡೆನುಡಿಗಳಿಂದಾಗಿ, ಇಂತಹ ವ್ಯಕ್ತಿಯು ಮೂರು ಲೋಕದ ಮನ್ನಣೆಗೆ ಪಾತ್ರನಾಗುವನು ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಬಡವರ್+ಅಂಧಕರಿಂಗೆ; ಒಡಲಿಗೆ+ಅನ್ನವನ್+ಇಕ್ಕದೆ+ಇದ್ದರೆ; ಅನ್ನವನ್= ಅನ್ನವನ್ನು; ಇಕ್ಕದೆ=ನೀಡದೆ/ಕೊಡದೆ; ಇಕ್ಕದಿದ್ದರೆ=ಕೊಡದೆ ಹೋದರೆ; ಹೊಡೆವಡಲಿಕೆ=ದೇವರ ಮುಂದೆ ಇಲ್ಲವೇ ದೇಗುಲದಲ್ಲಿ ದಿಂಡುರುಳುವ/ ನಮಸ್ಕರಿಸುವ ಆಚರಣೆಯಿಂದ; ಹುರುಳ್+ಇಲ್ಲ+ಎಂದನ್+ಅಂಬಿಗ; ಹುರುಳು=ಲೇಸು/ಪ್ರಯೋಜನ;

ಹೊಡೆವಡಲಿಕೆ ಹುರುಳಿಲ್ಲ=ಸಹಮಾನವರ ಬಗ್ಗೆ ಕರುಣೆಯ ನಡೆನುಡಿಯಿಲ್ಲದವರು/ನೊಂದವರಿಗೆ ಹಸಿದವರಿಗೆ ನೆರವನ್ನು ನೀಡದವರು ಮಾಡುವ ದೇವರ ಪೂಜೆಯಿಂದ ಯಾವ ಪ್ರಯೋಜನವೂ ಇಲ್ಲ. ದೇವರ ಪೂಜೆಗಿಂತ ಸಹಮಾನವರ ಬಗೆಗಿನ ಕಾಳಜಿ ಮತ್ತು ಕರುಣೆಯ ನಡೆನುಡಿ ದೊಡ್ಡದು ಎಂಬ ತಿರುಳಿನಲ್ಲಿ ಈ ಪದಕಂತೆಯು ಬಳಕೆಯಾಗಿದೆ)

❖

3. ಅಕ್ಕಮಹಾದೇವಿ

ಊರು: ಉಡುತಡಿ / ಉಡುಗಣಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ದೊರೆತಿರುವ ವಚನಗಳು: 432
ವಚನಗಳ ಅಂಕಿತನಾಮ: ಚೆನ್ನಮಲ್ಲಿಕಾರ್ಜುನ

18. ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ.

"ಒಳ್ಳೆಯ ನಡೆನುಡಿಗಳನ್ನು ಹೊಂದದಿರುವ ವ್ಯಕ್ತಿಗಳು ನೀಡುವ ವಸ್ತುಗಳನ್ನಾಗಲಿ ಇಲ್ಲವೇ ಬಹುಬಗೆಯ ಆಚರಣೆಗಳನ್ನೊಳಗೊಂಡು ಮಾಡುವ

ಪೂಜೆಯನ್ನಾಗಲಿ ದೇವರು ಒಪ್ಪಿಕೊಳ್ಳುವುದಿಲ್ಲ” ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ದೇಗುಲವನ್ನು ನಿರಾಕರಿಸಿ, ದೇವರನ್ನು ಒಪ್ಪಿಕೊಂಡಿದ್ದರು. ಗುಡಿಯ ಲಿಂಗವನ್ನು ಬಿಟ್ಟು, ತಮ್ಮ ಅಂಗಯ್ ಮೇಲೆ ಚಿಕ್ಕದಾದ ಶಿವಲಿಂಗವನ್ನು ಇಟ್ಟುಕೊಂಡು ಪೂಜಿಸ ತೊಡಗಿದ್ದರಿಂದ, ಅವರ ಮತ್ತು ಶಿವನ ನಡುವೆ ಪೂಜಾರಿಯ ಅಗತ್ಯವಿಲ್ಲ ದಂತಾಯಿತು.

ಶಿವಶರಣಶರಣೆಯರು ತಮ್ಮ ಅಂಗಯ್ ಮೇಲಿಟ್ಟುಕೊಂಡು ಪೂಜಿಸುತ್ತಿದ್ದ ಶಿವಲಿಂಗ ಇಲ್ಲವೇ ತಮ್ಮ ಕೊರಳಲ್ಲಿ ಕಟ್ಟಿಕೊಂಡಿದ್ದ ಇಷ್ಟಲಿಂಗ ಅವರ ಪಾಲಿಗೆ ಸಾಂಕೇತಿಕ ದೇವರು ಮಾತ್ರವಾಗಿತ್ತು. ನಿಜಜೀವನದಲ್ಲಿ ಅವರ ಪಾಲಿನ ದೇವರು ಕಲ್ಲು, ಮಣ್ಣು, ಲೋಹ, ಮರದಿಂದ ಮಾಡಿದ ಮೂರ್ತಿ ಯಾಗಿರಲಿಲ್ಲ. ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನು ತಮ್ಮ ದೇವರೆಂದು ನಂಬಿದ್ದರು. ದೇವರನ್ನು ಪೂಜಿಸುವ ಮತ್ತು ದೇವರಿಗೆ ಕಾಣಿಕೆಯನ್ನು ಸಲ್ಲಿಸುವ ವ್ಯಕ್ತಿಗಳಲ್ಲಿ ಒಳ್ಳೆಯ ನಡೆನುಡಿಗಳು ಕಡ್ಡಾಯವಾಗಿ ಇರಲೇಬೇಕೆಂಬ ಮಾನದಂಡವನ್ನು ಹಾಕಿಕೊಂಡಿದ್ದರು.

ಒಳ್ಳೆಯ ನಡೆನುಡಿಗಳು ಎಂದರೆ “ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿಗಳನ್ನು ಹೊಂದಿರುವುದು”.

(ತನು=ಮಯ್/ದೇಹ; ಕರಗು=ಗಟ್ಟಿಯಾದ ವಸ್ತುಗಳನ್ನು ನೀರು ಇಲ್ಲವೇ ಹಾಲು ಮುಂತಾದ ದ್ರವಗಳಲ್ಲಿ ಹಾಕಿದಾಗ, ಅವು ನೆನೆದು ಒದ್ದೆಯಾಗಿ ಮೆದುವಾಗುವುದು ಇಲ್ಲವೇ ತನ್ನ ಆಕಾರವನ್ನೇ ಕಳೆದುಕೊಳ್ಳುವುದು; **‘ತನುಕರಗು’** ಎಂಬ ನುಡಿಗಟ್ಟು “ಮಯ್ ಮುರಿದು ದುಡಿಮೆಯನ್ನು ಮಾಡುವುದು/ವ್ಯಕ್ತಿಯು ತನ್ನ ಪಾಲಿನ ಕೆಲಸವನ್ನು ಒಲವು-ನಲಿವುಗಳಿಂದ ಅಚ್ಚುಕಟ್ಟಾಗಿ ಮಾಡುವುದು” ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ತನುಕರಗದವರು=ಮಯ್ಗಳ್ಳರು/ದೇಹವನ್ನು ದಂಡಿಸಿ ದುಡಿಯದವರು ಮಜ್ಜನ+ಅನ್+ಒಲ್ಲೆ+ಅಯ್ಯಾ; ಮಜ್ಜನ=ದೇವರ ವಿಗ್ರಹದ ಮೇಲೆ ನೀರು-ಹಾಲು-ಜೇನು ಮುಂತಾದ ದ್ರವಗಳನ್ನು ಎರೆದು ಮಾಡುವ ಆಚರಣೆ; ಅನ್=ಅನ್ನು; ಒಲ್+ಎ=ಒಲ್ಲೆ; ಒಲ್=ಒಪ್ಪು/ಮೆಚ್ಚು/ಬಯಸು; ಒಲ್ಲೆ=ಒಪ್ಪುವುದಿಲ್ಲ/

ಸ್ವೀಕರಿಸುವುದಿಲ್ಲ; ಅಯ್ಯಾ=ಗಂಡಸರನ್ನು ಕುರಿತು ಒಲವು ನಲಿವಿನಿಂದ ಇತರರನ್ನು ಕುರಿತು ಮಾತನಾಡುವಾಗ ಬಳಸುವ ಪದ;

ಮನ=ಮನಸ್ಸು; **ಮನಕರಗದವರು**=ಇತರರ ಸಂಕಟವನ್ನು ಕಂಡು ಮರುಕ ಗೊಂಡು ಅವರಿಗೆ ನೆರವಾಗದವರು/ಸಹಮಾನವರ ಹಸಿವು, ಬಡತನ, ನೋವನ್ನು ಕಂಡು ಕಾಣದಂತಿರುವವರು; ಪುಷ್ಪ+ಅನ್+ಒಲ್ಲೆ+ಅಯ್ಯಾ; ಪುಷ್ಪ=ಹೂವು /ಕುಸುಮ; ಹದುಳಿಗರ್+ಅಲ್ಲದ+ಅವರ್+ಅಲ್ಲಿ; ಹದುಳ್+ಇಗ;

ಹದುಳು=ಒಲವು/ನಂಬಿಕೆ; ಹದುಳಿಗ=ನಂಬಿಕಸ್ತ; **ಹದುಳಿಗರಲ್ಲದವರು**= ನಂಬಿಕೆಗೆ ಯೋಗ್ಯರಲ್ಲದವರು/ಒಳ್ಳೆಯ ನಡೆನುಡಿಯಿಲ್ಲದವರು; ಗಂಧ+ಅಕ್ಷತೆ+ ಅನ್+ಒಲ್ಲೆ+ಅಯ್ಯಾ; ಗಂಧ=ಚಂದನ/ಸುವಾಸನೆ/ಪರಿಮಳ; ಅಕ್ಷತೆ=ಅಕ್ಕಿಯ ಕಾಳು; ಗಂಧಾಕ್ಷತೆ=ಚಂದನದ ಕೊರಡನ್ನು ನೀರಿನಲ್ಲಿ ತೆಯ್ದಾಗ ಬರುವ ಗಂಧದ ಹಸಿಯೊಡನೆ ಕಲಸಿ ತಯಾರಿಸಿರುವ ಅಕ್ಕಿಯ ಕಾಳುಗಳು;

ಅರಿವು=ತಿಳುವಳಿಕೆ; ಕಣ್+ತೆರೆಯದ+ಅವರ್+ಅಲ್ಲಿ; ತೆರೆ=ಬಿಚ್ಚು/ತೆಗೆ/ ಅರಳು; ಕಣ್ದೆರೆ/ಕಣ್ಣನ್ನು ತೆರೆದು ನೋಡುವುದು ಎಂಬ ನುಡಿಗಟ್ಟು ಒಳಿತನ್ನು ಕಾಣುವುದು/ಒಳ್ಳೆಯ ತಿಳಿವನ್ನು ಪಡೆಯುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ; **ಕಣ್ದೆರೆಯದವರು**=ಒಳ್ಳೆಯ ತಿಳುವಳಿಕೆಯನ್ನು ಹೊಂದದಿರು ವವರು/ಒಳ್ಳೆಯದು ಕೆಟ್ಟದ್ದರ ನಡುವಣ ವ್ಯತ್ಯಾಸವನ್ನು ತಿಳಿಯದೆ, ಕೆಟ್ಟನಡೆನುಡಿ ಗಳಿಂದ ಬಾಳುತ್ತಿರುವವರು; ಆರತಿ+ಅನ್+ಒಲ್ಲೆ+ಅಯ್ಯಾ; ಆರತಿ=ತಟ್ಟೆ ಇಲ್ಲವೇ ಇನ್ನಿತರ ಉಪಕರಣದಲ್ಲಿ ಅರಿಸಿನ, ಕುಂಕುಮ ಹೂವು ಮುಂತಾದ ವಸ್ತುಗಳನ್ನು ಇಟ್ಟುಕೊಂಡು ದೇವರ ಮುಂದೆ ಜ್ಯೋತಿಯನ್ನು ಬೆಳಗಿಸುತ್ತ ಮಾಡುವ ಪೂಜೆ;

ಭಾವ+ಶುದ್ಧ+ಇಲ್ಲದ+ಅವರ್+ಅಲ್ಲಿ; ಭಾವ=ಮನದಲ್ಲಿ ಮೂಡುವ ಒಳಮಿಡಿತಗಳು; ಶುದ್ಧ=ಒಳ್ಳೆಯ ರೀತಿಯಲ್ಲಿರುವುದು/ಸರಿಯಾಗಿರುವುದು/ **ಭಾವಶುದ್ಧವಿಲ್ಲದವರು**=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ತುಡಿತವಿಲ್ಲದವರು/ಇತರರಿಗೆ ಕೇಡನ್ನು ಬಗೆಯುವ ಆಲೋಚನೆ ಗಳಿಂದ ಕೂಡಿದವರು; ಧೂಪ+ಅನ್+ಒಲ್ಲೆ+ಅಯ್ಯಾ; ಧೂಪ=ಹಾಲುಮಡ್ಡಿ / ಸಾಂಬ್ರಾಣಿ ಮುಂತಾದ ಸುವಾಸನೆಯ ಪುಡಿ. ಇದನ್ನು ಕೆಂಡದ ಮೇಲೆ ಹಾಕಿದಾಗ ಪರಿಮಳದಿಂದ ಕೂಡಿದ ಹೊಗೆಯು ಎಲ್ಲಾ ಕಡೆ ಹರಡುತ್ತದೆ;

ಪರಿಣಾಮಿ+ಗಳ್+ಅಲ್ಲದ+ಅವರ್+ಅಲ್ಲಿ; ಪರಿಣಾಮಿ=ತಾಳ್ಮೆ/ಶಾಂತಿ/

ಸಮಚಿತ್ತದ ನಡೆನುಡಿಯಿಂದ ಸಹಮಾನವರಿಗೆ ಒಳಿತನ್ನು ಮಾಡುವವರು; **ಪರಿಣಾಮಿಗಳಲ್ಲದವರು**=ಉದ್ರೇಕ/ಆವೇಶದ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟುಮಾಡುವವರು; ನೈವೇದ್ಯ+ಅನ್+ಒಲ್ಲೆ+ ಅಯ್ಯಾ; ನೈವೇದ್ಯ=ದೇವರ ವಿಗ್ರಹದ ಮುಂದೆ ಇಡುವ ಹಣ್ಣುಕಾಯಿ/ಹಾಲು/ ಬೇಯಿಸಿ ತಯಾರಿಸಿದ ಉಣಿಸು ತಿನಸುಗಳು;

ತ್ರಿಕರಣ=ದೇಹ–ಮನಸ್ಸು–ಮಾತು ಎಂಬ ಮೂರು ಅಂಗಗಳು; ಶುದ್ಧ+ ಇಲ್ಲದ+ಅವರ್+ಅಲ್ಲಿ; **ತ್ರಿಕರಣ ಶುದ್ಧವಿಲ್ಲದವರು**=ಮನದಲ್ಲಿನ ಒಳಮಿಡಿತ, ಆಡುವ ಮಾತು ಮತ್ತು ಮಾಡುವ ಕೆಲಸದಲ್ಲಿ ಹೊಂದಾಣಿಕೆ ಯಿಲ್ಲದಿರುವವರು/ ಆಡುವುದೇ ಒಂದು–ಮಾಡುವುದೇ ಮತ್ತೊಂದು ಎಂಬ ವಂಚನೆಯ ನಡೆನುಡಿಯುಳ್ಳವರು/ಕಾಯಾ(ದೇಹ)–ವಾಚಾ(ಮಾತು)– ಮನಸಾ(ಮನಸ್ಸು) ಬೇರೆ ಬೇರೆಯಾದ ನಡೆದುಕೊಳ್ಳುವವರು; ತಾಂಬೂಲ+ ಅನ್+ಒಲ್ಲೆ+ಅಯ್ಯಾ; ತಾಂಬೂಲ=ಅಡಕೆ, ಸುಣ್ಣ ಮುಂತಾದುವುಗಳ ಸಹಿತವಾದ ವೀಳೆಯದ ಎಲೆ;

ಹೃದಯ=ಎದೆ; ಕಮಲ=ತಾವರೆ; **"ಹೃದಯಕಮಲ"** ಎಂಬ ರೂಪಕವು **"ಮನಸ್ಸು"** ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ಅರಳದವರ್+ಅಲ್ಲಿ; ಅರಳು= ಬಿರಿಯುವುದು/ವಿಕಾಸಗೊಳ್ಳುವುದು;

ಹೃದಯಕಮಲ ಅರಳುವುದು=ಒಲವು ನಲಿವು ಕರುಣೆಯ ಒಳಮಿಡಿತ ಗಳಿಂದ ಕೂಡಿ ಸಹಮಾನವರ ಮತ್ತು ಸಮಾಜದ ಹಿತವನ್ನು ಬಯಸುವ ಮನಸ್ಸು/ಕಣ್ಣಮುಂದಿನ ಸಮಾಜದಲ್ಲಿ ಒಳ್ಳೆಯ ಕೆಲಸಗಳು ನಡೆದಾಗ, ಅದನ್ನು ಕಂಡು ಮುದಗೊಳ್ಳುವುದು; **ಹೃದಯಕಮಲ ಅರಳದವರು**= ಮನದಲ್ಲಿ ಸಂಕುಚಿತವಾದ ಒಳಮಿಡಿತಗಳಿಂದ ಕೂಡಿದವರು/ಇತರರ ಒಳಿತಿನ ನಡೆನುಡಿಗಳನ್ನು ಕಂಡು ಕರುಬುವವರು; ಇರಲ್+ಒಲ್ಲೆ+ಅಯ್ಯಾ; ಇರಲು= ನೆಲೆಸಲು / ವಾಸಿಸಲು; ಇರಲೊಲ್ಲೆ=ನೆಲೆಸಲು ಬಯಸುವುದಿಲ್ಲ;

ಎನ್ನ್+ಅಲ್ಲಿ; ಎನ್ನ=ನನ್ನ; ಎನ್ನಲ್ಲಿ=ನನ್ನಲ್ಲಿ/ನನ್ನ ನಡೆನುಡಿಯಲ್ಲಿ/ನನ್ನ ವ್ಯಕ್ತಿತ್ವದಲ್ಲಿ; ಏನ್+ಉಂಟು+ಎಂದು; ಏನ್=ಯಾವುದು; ಉಂಟು=ಇರುವುದು; **ಎನ್ನಲ್ಲಿ ಏನುಂಟೆಂದು**=ನನ್ನ ನಡೆನುಡಿಯಲ್ಲಿ ಯಾವ ಒಳ್ಳೆಯ ಗುಣವಿದೆಯೆಂದು ತಿಳಿದು; ಕರ+ಸ್ಥಲ+ಅನ್+ಇಂಬು+ಕೊಂಡೆ; ಕರ=ಕಯ್; ಸ್ಥಲ=ನೆಲೆ/ಜಾಗ; ಕರಸ್ಥಲ=ಅಂಗಯ್/ಹಸ್ತ; ಇಂಬು=ಎಡೆ/ಆಶ್ರಯ;ಇಂಬು+ಕೊಂಡೆ=

ಇಂಬುಗೊಂಡೆ=ನೆಲೆಸಿದೆ; ಕರಸ್ಥಲವನಿಂಬುಗೊಂಡೆ=ನನ್ನ ಅಂಗಯ್ ಮೇಲೆ ನೀನು ನೆಲೆಸಿರುವೆ;

ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ="ನನ್ನ ನಡೆನುಡಿಯಲ್ಲಿ / ನನ್ನ ವ್ಯಕ್ತಿತ್ವದಲ್ಲಿ ಯಾವ ಒಳ್ಳೆಯ ಗುಣವನ್ನು ಕಂಡು ನನ್ನ ಅಂಗಯ್ ಅಲ್ಲಿ ನೀವು ನೆಲೆಸಿರುವಿರಿ" ಎಂದು ಅಕ್ಕಮಹಾದೇವಿಯು ಅಚ್ಚರಿ ಮತ್ತು ಆನಂದದಿಂದ ತನ್ನ ಮನದೊಡೆಯನಾದ ಚೆನ್ನಮಲ್ಲಿಕಾರ್ಜುನನ್ನು ಕೇಳುತ್ತಿದ್ದಾಳೆ/ಹೇಳಾ=ಹೇಳುವಂತಹವನಾಗು/ಮಾರುತ್ತರವನ್ನು ನೀಡು; ಚೆನ್ನಮಲ್ಲಿಕಾರ್ಜುನ=ಅಕ್ಕಮಹಾದೇವಿಯ ಮೆಚ್ಚಿನ ದೇವರು/ಶಿವ; 'ಚೆನ್ನಮಲ್ಲಿಕಾರ್ಜುನ' ಎಂಬ ದೇವರ ಹೆಸರನ್ನು ಅಕ್ಕಮಹಾದೇವಿಯು ತಾನು ರಚಿಸಿದ ವಚನಗಳ ಅಂಕಿತನಾಮವನ್ನಾಗಿ ಬಳಸಿದ್ದಾಳೆ.)

❖

19. ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ
ಆಗುಮಾಡಬಂದವರಲ್ಲ
ಮನದ ಮೇಲೆ ಬಂದು ನಿಂದು ಜರೆದು ನುಡಿದು
ಪಥವ ತೋರಬಲ್ಲಡಾತನೆ ಸಂಬಂಧಿ
ಹಾಗಲ್ಲದೆ ಅವರಿಚ್ಛೆಯ ನುಡಿದು
ತನ್ನುದರವ ಹೊರೆವ ಬಚ್ಚಣಿಗಳ
ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ.

ನಮ್ಮ ನಡೆನುಡಿಗಳಲ್ಲಿ ಕಂಡುಬರುವ ತಪ್ಪುಗಳನ್ನು ಕಂಡು ಆತಂಕಗೊಂಡು, "ಹಾಳಾಗಿ ಹೋಗುತ್ತಾನಲ್ಲ" ಎಂಬ ಸಂಕಟದಿಂದ ನೊಂದು, ಬಯ್ದು ತಿಳುವಳಿಕೆಯನ್ನು ಹೇಳಿ, ಜೀವನದಲ್ಲಿ ಒಳ್ಳೆಯ ದಾರಿಯಲ್ಲಿ ನಮ್ಮನ್ನು ನಡೆಯುವಂತೆ ಮಾಡುವವನೇ ನಿಜವಾದ ನೆಂಟ/ಗೆಳೆಯ/ಆತ್ಮೀಯ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಧನ=ಹಣ/ಸಂಪತ್ತು/ಆಸ್ತಿಪಾಸ್ತಿ; ಅನುಸರಿ=ಹಿಂಬಾಲಿಸುವವನು/ಹೊಂದಿಕೊಂಡು ನಡೆವವನು; ಆಗುಮಾಡು=ನೆರವೇರಿಸು/ಈಡೇರಿಸು; **ಧನದ ಮೇಲೆ ಬಂದವರು**=ವ್ಯಕ್ತಿಯ ಬಳಿಯಿರುವ ಸಂಪತ್ತನ್ನು ನೋಡಿ, ಅದರಿಂದ ಅನುಕೂಲವನ್ನು ಪಡೆಯಬೇಕೆಂಬ ಉದ್ದೇಶದಿಂದ ಸಿರಿವಂತರ ಬಳಿಗೆ ಬಂದವರು; **ಅನುಸರಿಗಳಲ್ಲದೆ ಆಗುಮಾಡಬಂದವರಲ್ಲ**=ಸಿರಿವಂತಿಕೆಯಲ್ಲಿ ಪಾಲನ್ನು ಪಡೆದು ಉಂಡುತಿಂದು ಹೋಗುವವರೇ ಹೊರತು, ಒಳಿತನ್ನು ಮಾಡಲು ಬಂದವರಲ್ಲ;

ಮನ=ಮನಸ್ಸು; **ಮನದ ಮೇಲೆ ಬಂದು**=ವ್ಯಕ್ತಿಯ ನಡೆನುಡಿಗಳಲ್ಲಿ ಕಂಡುಬರುವ ತಪ್ಪುಒಪ್ಪುಗಳನ್ನು ಒರೆಹಚ್ಚಿನೋಡಿ, ತಪ್ಪುಗಳನ್ನು ತಿದ್ದಿಕೊಳ್ಳುವಂತೆ ಅವನ ಮನಸ್ಸಿಗೆ ನಾಟುವಂತೆ ಹಿತನುಡಿಗಳನ್ನಾಡುವವರು; ನಿಂದು=ನಿಂತುಕೊಂಡು/ಎಲ್ಲವನ್ನೂ ಚೆನ್ನಾಗಿ ಗಮನಿಸಿ; ಜರೆ=ನಿಂದಿಸು/ತೆಗಳು/ಬಯ್; **ಜರೆದು ನುಡಿದು**=ಕೆಟ್ಟ ನಡೆನುಡಿಗಳನ್ನು ಬಿಟ್ಟು ಒಳ್ಳೆಯ ರೀತಿಯಲ್ಲಿ ಬಾಳಬೇಕೆಂಬ ತಿಳುವಳಿಕೆಯನ್ನು ಹೇಳಿ/ಬಯ್ದು ಬುದ್ಧಿಯನ್ನು ಹೇಳಿ; ಪಥ=ದಾರಿ/ಮಾರ್ಗ/ಹಾದಿ; ತೋರು=ಕಾಣಿಸು/ತಿಳಿಯುವಂತೆ ಮಾಡು;

ಪಥವ ತೋರಬಲ್ಲಡೆ=ಜೀವನದಲ್ಲಿ ಒಳ್ಳೆಯ ರೀತಿಯಲ್ಲಿ ಬದುಕುವ

ಹಾದಿಯನ್ನು ತೋರಿಸಲು ಶಕ್ತನಾದರೆ; **ಆತನೆ**=ಅಂತಹ ವ್ಯಕ್ತಿಯೇ ಅಂದರೆ ಕೆಟ್ಟ ನಡೆನುಡಿಗಳನ್ನು ಕಟುನುಡಿಗಳಿಂದ ಅಲ್ಲಗಳೆದು, ಒಳಿತಿನ ಒಳಮಿಡಿತಗಳನ್ನು ಮನದಲ್ಲಿ ಮೂಡುವಂತೆ ಮಾಡಿ, ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಆಚರಣೆಗೆ ತರುವಂತೆ ಮಾಡುವವನೇ; ಸಂಬಂಧಿ=ನೆಂಟ/ಗೆಳೆಯ/ಆತ್ಮೀಯ;

ಹಾಗೆ+ಅಲ್ಲದೆ; ಹಾಗಲ್ಲದೆ=ಆ ರೀತಿಯಲ್ಲಿ ಮಾಡದೆ; ಅವರ+ಇಚ್ಛೆಯ; ಅವರ=ಸಿರಿವಂತರ/ಸಂಪತ್ತುಳ್ಳವರ; ಇಚ್ಛೆ=ಬಯಕೆ/ಆಸೆ; ನುಡಿದು=ಹೇಳಿ; ತನ್ನ+ಉದರವ; ಉದರ=ಹೊಟ್ಟೆ; ಹೊರೆ=ಕಾಪಾಡು/ಸಲಹು; ಬಚ್ಚಣೆ=ಸೋಗು /ತೋರಿಕೆಯ ನಟನೆ; ಬಚ್ಚಣಿ=ಮೋಸಗಾರ/ವಂಚಕ;

ಅವರಿಚ್ಛೆಯ ನುಡಿದು ತನ್ನುದರವ ಹೊರವ ಬಚ್ಚಣಿಗಳು=ಸಿರಿವಂತರಲ್ಲಿ ಕಂಡುಬರುವ ಕೆಟ್ಟನಡೆನುಡಿಗಳನ್ನು ತಿದ್ದಿ ಸರಿಪಡಿಸಲು ಹೋಗದೆ, ಅವರ ಉದ್ದೇಶಗಳನ್ನೇ ದೊಡ್ಡದಾಗಿ ಹೊಗಳಿ ಕೊಂಡಾಡುತ್ತಾ, ಸಿರಿವಂತರ ತಾಳಕ್ಕೆ ತಕ್ಕಂತೆ ಕುಣಿಯುತ್ತಾ, ತಮ್ಮ ಹೊಟ್ಟೆಯ ಪಾಡನ್ನು ನೀಗಿಸಿಕೊಳ್ಳುವ ನಯವಂಚಕರು; ಮಚ್ಚು=ಮೆಚ್ಚು; ಮೆಚ್ಚು=ಒಲಿ/ಹೊಗಳು/ಬಯಸು;

ಮಚ್ಚುವನೆ ಚೆನ್ನಮಲ್ಲಿಕಾರ್ಜುನ=ನಯವಂಚಕರನ್ನು ಚೆನ್ನಮಲ್ಲಿಕಾರ್ಜುನನು ಮೆಚ್ಚುವುದಿಲ್ಲ. ದೇವರ ಮೆಚ್ಚುಗೆಗೆ ಪಾತ್ರನಾಗಬೇಕಾದರೆ ವ್ಯಕ್ತಿಯಲ್ಲಿ ಒಳ್ಳೆಯ ನಡೆನುಡಿಗಳು ಇರಬೇಕೆಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತವೆ.)

❖

20. ನಡೆಯದ ನುಡಿಗಡಣ ಮಾಡದ ಕಲಿತನ
ಚಿತ್ರದ ಸತಿಯ ಶೃಂಗಾರವದೇತಕ್ಕೆ ಪ್ರಯೋಜನ
ಎಲೆಯಿಲ್ಲದ ಮರನು ಜಲವಿಲ್ಲದ ನದಿಯು
ಗುಣಿಯಲ್ಲದ ಅವಗುಣಿಯ
ಸಂಗವದೇತಕ್ಕೆ ಪ್ರಯೋಜನ
ದಯವಿಲ್ಲದ ಧರ್ಮವು ಉಭಯವಿಲ್ಲದ ಭಕ್ತಿಯು
ನಯವಿಲ್ಲದ ಶಬ್ದವದೇತಕ್ಕೆ ಪ್ರಯೋಜನ
ಎನ್ನ ದೇವ ಚೆನ್ನಮಲ್ಲಿಕಾರ್ಜುನಾ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನು ವ್ಯಕ್ತಿಯು ಹೊಂದದಿದ್ದರೆ, ಅಂತಹ ಬಾಳ್ವೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಹೇಳಲಾಗಿದೆ.

(ನಡೆ=ನಡವಳಿಕೆ/ಆಚರಣೆ/ವರ್ತನೆ; ನುಡಿ=ಮಾತು/ಸೊಲ್ಲು; ಗಡಣ=ಗುಂಪು/ರಾಶಿ; **ನಡೆಯದ ನುಡಿಗಡಣ**=ಜೀವನದ ನಿತ್ಯ ವ್ಯವಹಾರಗಳಲ್ಲಿ ಇತರರಿಗೆ ಒಳಿತನ್ನು ಮಾಡದೆ, ಸತ್ಯ/ನೀತಿ/ನಿಯಮ/ಆದರ್ಶದ ಮಾತುಗಳನ್ನು ಮಾತ್ರ ಸದಾಕಾಲ ಆಡುತ್ತಿರುವುದು/ಕಾರ್ಯರೂಪಕ್ಕೆ ಬಾರದ ಮಾತುಗಳು;

ಕಲಿತನ=ಪರಾಕ್ರಮ/ಶೂರತನ/ಕೆಚ್ಚು; **ಮಾಡದ ಕಲಿತನ**=ಕದನದಲ್ಲಿ ಇಲ್ಲವೇ ಆಪತ್ತು ಬಂದ ಸಮಯದಲ್ಲಿ ಕೆಚ್ಚಿನಿಂದ ಹೋರಾಡದೆ ಸುಮ್ಮನಿರುವುದು/ತಾನೊಬ್ಬ ಮಹಾಶೂರನೆಂದು ಬಡಾಯಿ ಕೊಚ್ಚಿಕೊಳ್ಳುತ್ತಾ, ಜೀವನರಂಗದ ಆಗುಹೋಗುಗಳಲ್ಲಿ ಯಾವುದೇ ಬಗೆಯ ಕೆಟ್ಟದ್ದನ್ನು ಹೋಗಲಾಡಿಸಲು ಹೋರಾಡದಿರುವುದು;

ಚಿತ್ರ=ಗೆರೆ/ಬಣ್ಣಗಳಿಂದ ರಚನೆಗೊಂಡಿರುವ ಆಕಾರ; ಸತಿ=ಹೆಣ್ಣು/ಹೆಂಗಸು; ಚಿತ್ರದ ಸತಿ=ಗೆರೆ/ಬಣ್ಣಗಳಿಂದ ಬಿಡಿಸಲಾಗಿರುವ ಹೆಣ್ಣಿನ ರೂಪ; ಶೃಂಗಾರ+ಅದು+ಏತಕ್ಕೆ; ಶೃಂಗಾರ=ಅಂದಚೆಂದದ ಅಲಂಕಾರ/ಸುಂದರವಾದ ಉಡುಗೆ ತೊಡುಗೆ; ಏತಕ್ಕೆ=ಯಾವುದಕ್ಕೆ; ಪ್ರಯೋಜನ=ವ್ಯಕ್ತಿಯ ಬದುಕಿಗೆ ಒಳಿತನ್ನು ಉಂಟುಮಾಡುವುದು; **ಚಿತ್ರದ ಸತಿಯ ಶೃಂಗಾರವದೇತಕ್ಕೆ ಪ್ರಯೋಜನ**=ಚಿತ್ರದಲ್ಲಿರುವ ಕಂಡುಬರುವ ಅಂದಚೆಂದದ ಹೆಣ್ಣನ್ನು ತನ್ನವಳನ್ನಾಗಿ ಪಡೆಯಲು

ಆಗದು. ಏಕೆಂದರೆ ಚಿತ್ರದಲ್ಲಿ ಕಂಡುಬರುತ್ತಿರುವ ಹೆಣ್ಣು ಜೀವವಿಲ್ಲದ ಒಂದು ಜಡರೂಪ.

ಎಲೆ+ಇಲ್ಲದ; ಜಲ=ನೀರು; ಗುಣಿಯು+ ಅಲ್ಲದ; ಗುಣಿ=ಒಳ್ಳೆಯ ನಡೆನುಡಿಗಳುಳ್ಳವನು; **ಗುಣಿಯಲ್ಲದ**=ಗುಣವಂತನಲ್ಲದ/ನಿಜದ ನಡೆನುಡಿಗಳಿಲ್ಲದ; **ಅವಗುಣಿ**=ಕೆಟ್ಟ ನಡೆನುಡಿಯುಳ್ಳವನು/ನೀಚ ವ್ಯಕ್ತಿ; ಸಂಗವು+ಅದು+ಏತಕ್ಕೆ; ಸಂಗ=ಸಹವಾಸ/ಗೆಳೆತನ;

ದಯೆ+ಇಲ್ಲದ; ದಯೆ=ಕರುಣೆ/ಅನುಕಂಪ/ಇತರರ ನೋವು ಸಂಕಟಗಳಿಗೆ ಮಿಡಿದು ನೆರವನ್ನು ನೀಡುವ ಮನಸ್ಸು; ಧರ್ಮ=ತನಗೆ ಒಳಿತನ್ನು ಬಯಸುವಂತೆಯೇ ಇತರರಿಗೂ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳು; **ದಯವಿಲ್ಲದ ಧರ್ಮ**=ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ನಡೆನುಡಿಗಳು/ಆಚರಣೆಗಳು/ಸಂಪ್ರದಾಯಗಳು/ನಂಬಿಕೆಗಳು;

ಉಭಯ+ಇಲ್ಲದ; ಉಭಯ=ಎರಡು; ಭಕ್ತಿ=ದೇವರ ಬಗೆಗಿನ ಒಲವು/ಒಳಿತಿನ ಕಡೆಗೆ ಮಯ್ ಮನಗಳನ್ನು ನೆಲೆಗೊಳಿಸುವಿಕೆ; **ಉಭಯದಿಂದ ಕೂಡಿರುವ ಭಕ್ತಿ**=ಅಂತರಂಗದ ಮನದಲ್ಲಿ ದೇವರ ಬಗ್ಗೆ ಒಲವು ಮತ್ತು ಬಹಿರಂಗದ ಸಾಮಾಜಿಕ ಜೀವನದಲ್ಲಿ ಸಹಮಾನವರಿಗೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳು; **ಉಭಯವಿಲ್ಲದ ಭಕ್ತಿ**=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡದ ದೇವರ ಪೂಜೆ;

ನಯ+ಇಲ್ಲದ; ನಯ=ಕೋಮಲವಾದ/ಇಂಪಾದ/ಒರಟಲ್ಲದ; ಶಬ್ದ+ಅದು+ಏತಕ್ಕೆ; ಶಬ್ದ=ಮಾತು/ನುಡಿ; **ನಯವಿಲ್ಲದ ಶಬ್ದ**=ಕೇಳುಗರ ಮಯ್ ಮನಗಳನ್ನು ಗಾಸಿಗೊಳಿಸುವಂತಹ ಕೆಟ್ಟಮಾತು/ನಿಂದನೆಯ ನುಡಿ/ತೆಗಳಿಕೆಯ ಮಾತು;

“ದಯವಿಲ್ಲದ ಧರ್ಮ ಮತ್ತು ನಯವಿಲ್ಲದ ಶಬ್ದವದೇತಕ್ಕೆ ಪ್ರಯೋಜನ” ಎಂಬ ನುಡಿಗಳಲ್ಲಿ ನಾವು ಆಚರಿಸುವ ಧರ್ಮದಲ್ಲಿ ಸಹಮಾನವರನ್ನು ಕರುಣೆಯಿಂದ ಕಾಣುವ ನಡೆನುಡಿಗಳಿರಬೇಕು ಮತ್ತು ನಾವು ಆಡುವ ಮಾತುಗಳಲ್ಲಿ ಕೇಳುಗರಿಗೆ ಅರಿವನ್ನು ಮತ್ತು ಮುದವನ್ನು ನೀಡುವ ಸಂಗತಿಗಳಿರಬೇಕೆಂಬ ಸೂಚನೆಯಿದೆ; ಎನ್ನ=ನನ್ನ; ಎನ್ನ ದೇವ ಚೆನ್ನಮಲ್ಲಿಕಾರ್ಜುನ=ನನ್ನ ನೆಚ್ಚಿನ ದೇವರಾದ ಚೆನ್ನಮಲ್ಲಿಕಾರ್ಜುನ.)

❖

21. ಪಂಚೇಂದ್ರಿಯಂಗಳೊಳಗೆ
ಒಂದಕ್ಕೆ ಪ್ರಿಯನಾದಡೆ ಸಾಲದೆ
ಸಪ್ತವ್ಯಸನಂಗಳೊಳಗೆ
ಒಂದಕ್ಕೆ ಪ್ರಿಯನಾದಡೆ ಸಾಲದೆ
ರತ್ನದ ಸಂಕಲೆಯಾದಡೇನು
ಬಂಧನ ಬಿಡುವುದೆ ಚೆನ್ನಮಲ್ಲಿಕಾರ್ಜುನಾ.

ಮಾನವ ಜೀವಿಯ ಮಯ್ ಮನಗಳಲ್ಲಿ ಮೂಡುವ ಕೆಟ್ಟ ಬಯಕೆ ಮತ್ತು ಚಟಗಳು ಅವನ ಇಡೀ ಬದುಕನ್ನೇ ಬಲಿತೆಗೆದುಕೊಳ್ಳುತ್ತವೆ ಎಂಬುದನ್ನು ತಿಳಿಸುತ್ತಾ, ವ್ಯಕ್ತಿಯು ತನ್ನ ಮಯ್ ಮನಗಳ ಒಲವು ನಲಿವುಗಳಿಗೆ ಕಾರಣವಾಗಿರುವ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು, ಸಪ್ತವ್ಯಸನಗಳಿಂದ ದೂರವಾಗಿ ಬಾಳಬೇಕು ಎಂಬ ಇಂಗಿತವನ್ನು ಈ ವಚನದಲ್ಲಿ ಸೂಚಿಸಲಾಗಿದೆ.

(ಪಂಚ+ಇಂದ್ರಿಯಂಗಳ+ಒಳಗೆ; ಪಂಚ=ಅಯ್ದು; ಇಂದ್ರಿಯ=ನೋಟ–ಶಬ್ದ–ಕಂಪು–ರುಚಿ–ಮುಟ್ಟುವಿಕೆಯ ಅರಿವನ್ನು ಪಡೆಯಲು ಕಾರಣವಾಗುವ ಅಂಗ; ಇಂದ್ರಿಯಂಗಳ=ಇಂದ್ರಿಯಗಳ; ಪಂಚೇಂದ್ರಿಯಗಳು=ಕಣ್ಣು–ಕಿವಿ–ಮೂಗು–ನಾಲಗೆ–ತೊಗಲು ಎಂಬ ಅಯ್ದು ಅಂಗಗಳು; ಒಳಗೆ=ಇವುಗಳಲ್ಲಿ; ಒಂದಕ್ಕೆ=ಒಂದು ಇಂದ್ರಿಯಕ್ಕೆ; ಪ್ರಿಯನು+ಆದಡೆ;

ಪ್ರಿಯ=ಒಲವು/ಮಮತೆ/ಅಕ್ಕರೆ; ಆದಡೆ=ಆದರೆ; **ಒಂದಕ್ಕೆ ಪ್ರಿಯನಾದಡೆ=** ಅಯ್ದು ಇಂದ್ರಿಯಗಳಲ್ಲಿ ಯಾವುದಾದರೂ ಒಂದು ಇಂದ್ರಿಯದ ಸೆಳತಕ್ಕೆ ಹೆಚ್ಚಾಗಿ ಸಿಲುಕಿದರೆ/ಒಳಗಾದರೆ; ಅಂದರೆ ಕಣ್ಣಿನ ಮೂಲಕ ಕೆಟ್ಟ ನೋಟಗಳನ್ನೇ ನೋಡುತ್ತಿರುವುದು/ಕಿವಿಯ ಮೂಲಕ ಕೆಟ್ಟ ಸುದ್ದಿಗಳನ್ನೇ ಕೇಳುತ್ತಿರುವುದು/ಮೂಗಿನ ಮೂಲಕ ಕೆಟ್ಟ ವಾಸನೆಯನ್ನೇ ಮೂಸಿಸುತ್ತಿರುವುದು/ನಾಲಗೆಯ ಮೂಲಕ ಕೆಟ್ಟರುಚಿಯನ್ನೇ ಸವಿಯುತ್ತಿರುವುದು/ತೊಗಲಿನ ಮೂಲಕ ಕೆಟ್ಟದ್ದನ್ನೇ ಮುಟ್ಟಿ ಮುದಗೊಳ್ಳುತ್ತಿರುವುದು; ಸಾಲದೆ=ಸಾಕಲ್ಲವೇ; **ಒಂದಕ್ಕೆ ಪ್ರಿಯನಾದಡೆ ಸಾಲದೆ**=ಒಂದು ಇಂದ್ರಿಯದ ಚಪಲತೆಗೆ ಗುರಿಯಾದರೂ ಸಾಕು, ಅಂತಹ ವ್ಯಕ್ತಿಯು ಸಾಮಾಜಿಕವಾಗಿ ಕೆಟ್ಟ ನಡೆನುಡಿಗಳಿಂದ ವರ್ತಿಸುತ್ತಾ, ತಾನೇ ತನ್ನ ಕಯ್ಯಾರ ಬದುಕನ್ನು ಹಾಳುಮಾಡಿಕೊಳ್ಳುತ್ತಾನೆ ಹಾಗೂ ತನ್ನನ್ನು ನಂಬಿದವರ ಬಾಳನ್ನು ನೋವುಸಂಕಟಗಳಿಗೆ ದೂಡುತ್ತಾನೆ ಎಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತವೆ;

ಸಪ್ತ+ವ್ಯಸನಂಗಳ+ಒಳಗೆ; ಸಪ್ತ=ಏಳು; ವ್ಯಸನ=ಗೀಳು/ಚಟ; ವ್ಯಸನಂಗಳು =ವ್ಯಸನಗಳು; ಸಪ್ತವ್ಯಸನಗಳು=ಏಳು ಬಗೆಯ ಚಟಗಳು–1)ಹಾದರ/ಹೆಣ್ಣು ಗಂಡುಗಳ ಸಮಾಜ ಒಪ್ಪಿತವಲ್ಲದ ಕಾಮದ ನಂಟು; 2)ಜೂಜು/ಸಂಪತ್ತನ್ನು ಒಡ್ಡಿ ಆಡುವ ಆಟ; 3)ಬೇಟೆ/ಪ್ರಾಣಿಪಕ್ಷಿಗಳನ್ನು ಸೆರೆ ಹಿಡಿಯುವುದು ಮತ್ತು ಕೊಲ್ಲುವುದು; 4)ಕುಡಿತ/ಮಾದಕ ಪಾನೀಯಗಳ ಸೇವನೆ; 5)ಬಿರುನುಡಿ/ ಬಯ್ಗುಳ/ಇತರರ ಮನಸ್ಸನ್ನು ನೋಯಿಸುವಂತೆ ಕೆಟ್ಟ ಮಾತುಗಳನ್ನಾಡುವುದು; 6)ದಂಡನೆ/ಪೀಡನೆ/ಕಿರುಕುಳ/ಇತರರ ಮಯ್ ಮನಗಳಿಗೆ ಪೆಟ್ಟನ್ನು ನೀಡಿ ಗಾಸಿಗೊಳಿಸುವಿಕೆ; 7)ಕಳ್ಳತನ/ಸಹಮಾನವರ ಮತ್ತು ಸಮಾಜದ ಆಸ್ತಿಪಾಸ್ತಿ/ ಒಡವೆವಸ್ತು/ಹಣಕಾಸನ್ನು ದೋಚುವುದು/ಲಪಟಾಯಿಸುವುದು; **ಸಪ್ತವ್ಯಸನಂ ಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ**=ಹಾದರ/ಜೂಜು/ಬೇಟೆ/ಕುಡಿತ/ ಬಿರುನುಡಿ/ದಂಡನೆ/ಕಳ್ಳತನವೆಂಬ ಈ ಏಳುಬಗೆಯ ಕೆಟ್ಟ ನಡೆನುಡಿಗಳಲ್ಲಿ ಯಾವುದಾದರೂ ಒಂದನ್ನು ಚಟವನ್ನಾಗಿ ಮಾಡಿಕೊಂಡರೆ ಸಾಕು, ಅಂತಹ ವ್ಯಕ್ತಿಯ ಬದುಕು ದುರಂತದಲ್ಲಿ ಕೊನೆಗೊಳ್ಳುತ್ತದೆ;

ರತ್ನ=ಬೆಲೆಬಾಳುವ ಹರಳು/ವಜ್ರ/ಮಣಿ; ಸಂಕಲೆ+ಆದಡೆ+ಏನು; ಸಂಕಲೆ= ಬೇಡಿ/ಕಬ್ಬಿಣದ ಸರಪಣಿ/ಕೋಳ; ಆದಡೆ+ಏನು; ಆದಡೇನು=ಆಗಿದ್ದರೇನು; ಬಂಧನ=ಸೆರೆಗೆ ಒಳಗಾಗುವುದು/ಕಟ್ಟಿಗೆ ಸಿಲುಕುವುದು/ಹಿಡಿತಕ್ಕೆ ಗುರಿಯಾಗುವುದು; ಬಿಡುವುದೆ=ಹೋಗುವುದೆ;

ರತ್ನದ ಸಂಕಲೆಯಾದಡೇನು ಬಂಧನ ಬಿಡುವುದೆ= ವ್ಯಕ್ತಿಗೆ ತೊಡಿಸಿರುವ ಬೇಡಿಯು ರತ್ನದ ಮಣಿಗಳಿಂದ ಕಂಗೊಳಿಸುತ್ತಿದ್ದರೇನು, ಅದು ಅವನನ್ನು ಕಟ್ಟಿಹಾಕಿದೆಯಲ್ಲದೆ, ಅವನ ಬಿಡುಗಡೆಗೆ ನೆರವಾಗುವುದಿಲ್ಲ. ಸಿರಿವಂತಿಕೆಯ ನೆಲೆಯಲ್ಲಿರುವ ವ್ಯಕ್ತಿಗಳು ಹಣವನ್ನು ಚೆಲ್ಲುತ್ತಾ ಬೆಳೆಸಿ ಕೊಂಡಿರುವ ಚಟಗಳು ಹೊರನೋಟಕ್ಕೆ ಅದ್ದೂರಿಯಾಗಿ/ಆಡಂಬರದಿಂದ ಕಂಗೊಳಿಸಿದರು, ಒಳಗೊಳಗೆ ಅವರನ್ನು ನಾಶ ಮಾಡುತ್ತಿರುತ್ತವೆ ಎಂಬ ಸಂಗತಿಯನ್ನು ಈ ರೂಪಕವು ಸೂಚಿಸುತ್ತದೆ.)

❖

22. ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಯಾವುದೇ ಒಬ್ಬ ವ್ಯಕ್ತಿಯು "ತಾನು ಇಂತಹ ಕುಟುಂಬದಲ್ಲಿಯೇ/ಇಂತಹ ಊರಿನಲ್ಲಿಯೇ ಹುಟ್ಟಿಬರಬೇಕು" ಎಂಬ ಉದ್ದೇಶವನ್ನು ಹೊಂದಿ ಈ ಜಗತ್ತಿಗೆ ಬಂದಿರುವುದಿಲ್ಲ. ಆದರೆ ಸಾಯುವ ತನಕ ಜೀವನದಲ್ಲಿ ಬರುವ ಎಡರು ತೊಡರುಗಳನ್ನು ತಾನೇ ಎದುರಿಸಬೇಕಾಗುತ್ತದೆ. ಏಕೆಂದರೆ ನಿಸರ್ಗದಲ್ಲಿನ ಆಗುಹೋಗುಗಳು, ಮಾನವ ಸಮಾಜ ರೂಪಿಸಿಕೊಂಡಿರುವ ಸಂಪ್ರದಾಯ, ಆಚರಣೆ ಹಾಗೂ ಕಟ್ಟುಪಾಡುಗಳು ಮತ್ತು ಆಳುವ ಸರ್ಕಾರದ ಕಾನೂನು ಕಟ್ಟಲೆಗಳು ವ್ಯಕ್ತಿಯ ಮಯ್ ಮನಗಳ ಮೇಲೆ ಬಹುಬಗೆಯಲ್ಲಿ ಪರಿಣಾಮವನ್ನು ಬೀರುತ್ತಿರುತ್ತವೆ. ಇದರಿಂದಾಗಿ ಜೀವನದ ಉದ್ದಕ್ಕೂ ಒಂದಲ್ಲ ಒಂದು ಬಗೆಯ ಏರಿಳಿತಗಳಲ್ಲಿ, ತಾಕಲಾಟ ತೊಳಲಾಟಗಳಲ್ಲಿ ಮತ್ತು ಸೋಲು-ಗೆಲುವುಗಳಲ್ಲಿ ಸಿಲುಕುವ ವ್ಯಕ್ತಿಯು ಎಂತಹ ಸನ್ನಿವೇಶಗಳಲ್ಲಿಯೂ ಕಂಗೆಡದೆ/ಎಚ್ಚರ ತಪ್ಪದೆ/ಬೀಗಿ ಬೆರೆಯದೆ ತನ್ನ ಬದುಕನ್ನು ಸಮಚಿತ್ತದಿಂದ ರೂಪಿಸಿಕೊಂಡು ಬಾಳಬೇಕಾದ ರೀತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಬೆಟ್ಟ=ಗಿರಿ/ಮಲೆ/ಕಲ್ಲುಬಂಡೆಮರಗಿಡಗಳಿಂದ ಕೂಡಿ ನೆಲಮಟ್ಟದಿಂದ ಎತ್ತರೆತ್ತರವಾಗಿರುವ ಜಾಗ; ಮೇಲೆ+ಒಂದು; ಮನೆಯ ಮಾಡಿ=ಮನೆಯನ್ನು ಕಟ್ಟಿಕೊಂಡು ನೆಲೆಸಿರುವಾಗ; ಮೃಗಗಳಿಗೆ+ಅಂಜಿದಡೆ+ಎಂತು+ಅಯ್ಯಾ; ಮೃಗ= ಪ್ರಾಣಿಗಳು ಹಕ್ಕಿಗಳು ಕೀಟಗಳು/ಜೀವಜಂತು; ಅಂಜು=ಹೆದರು/ಹಿಂಜರಿ/ ಆತಂಕಪಡು; ಅಂಜಿದಡೆ=ಹೆದರಿಕೆಯಿಂದ ನಡುಗಿದರೆ/ಕಂಪಿಸಿದರೆ/ತಲ್ಲಣಿಸಿದರೆ; ಎಂತು=ಹೇಗೆ/ಏನು ತಾನೆ ಮಾಡುವುದು; ಅಯ್ಯಾ=ಇತರ ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಮೃಗಗಳಿಗಂಜಿದಡೆಂತಯ್ಯಾ= ಕಾಡುಮೇಡುಗಳಿಂದ ಸುತ್ತುವರಿದಿರುವ ಬೆಟ್ಟದ ಮೇಲೆ ತಾನೇ ಕಟ್ಟಿಕೊಂಡ ಮನೆಯಲ್ಲಿ ನೆಲೆಸಿರುವಾಗ, ಅಲ್ಲಿನ ಪರಿಸರದಲ್ಲಿರುವ ಸಿಂಹ ಹುಲಿ ಚಿರತೆ ಆನೆ ಹಾವು ರಣಹದ್ದು ಮುಂತಾದ ಜೀವಿಗಳಿಂದ ಉಂಟಾಗುವ ಹಾನಿಯನ್ನು ನೆನೆನೆನೆದು ತಲ್ಲಣಗೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಈ ರೀತಿ ತಲ್ಲಣಗೊಳ್ಳುವುದರಿಂದ ಇತ್ತ ಬದುಕಲಾರದೆ... ಅತ್ತ ಸಾಯಲಾರದೆ ಒದ್ದಾಡುವುದರಲ್ಲಿಯೇ ಜೀವನದ ಸಮಯವೆಲ್ಲವೂ ಕಳೆದುಹೋಗುತ್ತದೆ;

ಸಮುದ್ರ=ಕಡಲು/ಸಾಗರ; ತಡಿಯಲಿ+ಒಂದು; ತಡಿ=ದಡ/ದಂಡೆ/ತೀರ; ತಡಿಯಲ್ಲಿ=ದಂಡೆಯಲ್ಲಿ; ನೊರೆತೆರೆಗಳಿಗೆ+ಅಂಜಿದಡೆ+ ಎಂತು+ಅಯ್ಯ; ನೊರೆ=ಸಾಗರದ ಅಲೆಗಳ ಬಡಿತದಿಂದ ಉಂಟಾಗುವ ಬೆಳ್ಳನೆಯ ನೀರಿನ ಕಣಗಳು; ತೆರೆ=ನೀರಿನ ಅಲೆ/ತರಂಗ;

ನೊರೆತೆರೆಗಳಿಗಂಜಿದಡೆಂತಯ್ಯಾ= ಗಾಳಿಯು ಬೀಸಿದಂತೆಲ್ಲಾ ಉಬ್ಬರವಿಳಿತಕ್ಕೆ ಒಳಗಾಗುವ ಕಡಲಿನ ಅಲೆಗಳು ದಡವನ್ನು ಅಪ್ಪಳಿಸುತ್ತಿದ್ದಂತೆಲ್ಲಾ, ಕಡಲಂಚಿನ ಮನೆಯಲ್ಲಿನ ವ್ಯಕ್ತಿಗಳು 'ಎಲ್ಲಿ ಕೊಚ್ಚಿಹೋಗುತ್ತೇವೆಯೋ' ಎಂಬ ಹೆದರಿಕೆಯಿಂದ ತತ್ತರಿಸುತ್ತಿದ್ದರೆ, ಅಂತಹ ನೆಮ್ಮದಿಗೆಟ್ಟ ಬದುಕಿನಿಂದ ಯಾವ ಪ್ರಯೋಜನವೂ ಇಲ್ಲ;

ಸಂತೆ+ಒಳಗೆ+ಒಂದು; ಸಂತೆ=ಸರಕುಗಳನ್ನು ಮಾರಲು/ಕೊಳ್ಳಲು ಜನರು ಜತೆಗೂಡುವ ಜಾಗ; ಶಬ್ದ=ದನಿ/ಗಲಾಟೆ/ಗದ್ದಲ; ನಾಚಿದಡೆ+ ಎಂತು+ಅಯ್ಯಾ; ನಾಚು=ಹಿಂಜರಿಯುವುದು/ಹೆದರುವುದು/ಕುಗ್ಗುವುದು/ಮುದುಡಿಕೊಳ್ಳುವುದು; ನಾಚಿದೊಡೆ=ನಾಚಿಕೊಂಡರೆ;

ಶಬ್ದಕ್ಕೆ ನಾಚಿದಡೆಂತಯ್ಯಾ=ಸದ್ದುಗದ್ದಲಗಳಿಂದಲೇ ತುಂಬಿರುವ ಸಂತೆಯ ನಡುವೆ ಕಟ್ಟಿರುವ ಮನೆಯಲ್ಲಿದ್ದುಕೊಂಡು, ಸಂತೆಯಲ್ಲಿನ ಕೂಗಾಟ/ ಅರಚಾಟಗಳನ್ನು ಕೇಳಿ ಒದ್ದಾಡುವುದರಿಂದ ಯಾವ ಪ್ರಯೋಜನವೂ ಇಲ್ಲ;

ಈ ಮೂರು ಸಂಗತಿಗಳನ್ನು ರೂಪಕವಾಗಿ ಬಳಸಿಕೊಂಡು ಜೀವನದಲ್ಲಿ ಬರುವ ಆಪತ್ತು/ನೋವು/ಸಂಕಟಗಳನ್ನು ನೇರವಾಗಿ ಎದುರಿಸಿ ಕೆಚ್ಚೆದೆಯಿಂದ ಬಾಳಬೇಕೆ ಹೊರತು, ಜೀವನದ ಸಮಸ್ಯೆಗಳಿಗೆ ಬೆನ್ನುಮಾಡಿ ಓಡಬಾರದು ಇಲ್ಲವೇ ಯಾವಾಗಲೂ ನರಳಬಾರದೆಂಬ ಸಂದೇಶವನ್ನು ಅಕ್ಕನು ನೀಡಿದ್ದಾಳೆ.

ಚೆನ್ನಮಲ್ಲಿಕಾರ್ಜುನ ದೇವ=ಅಕ್ಕನ ಒಲವಿನ ದೇವರು/ಶಿವ; ಕೇಳ್+ಅಯ್ಯಾ; ಕೇಳಯ್ಯಾ=ಕೇಳುವಂತಹವನಾಗು;

ಲೋಕದ+ಒಳಗೆ; ಲೋಕ=ಜಗತ್ತು/ಸಮಾಜ/ಜನಸಮುದಾಯ; **ಲೋಕದೊಳಗೆ ಹುಟ್ಟಿದ ಬಳಿಕ**=ಲೋಕಜೀವನದಲ್ಲಿ ಜನರೊಡನೆ ವ್ಯವಹರಿಸುತ್ತಿರುವಾಗ/ಜನಸಮುದಾಯದೊಡನೆ ಬೆರೆತು ಬಾಳುತ್ತಿರುವಾಗ; ಸ್ತುತಿ=ಹೊಗಳಿಕೆ /ಮೆಚ್ಚುಗೆ; ನಿಂದೆ=ತೆಗಳಿಕೆ/ಕಡೆಗಣಿಸುವಿಕೆ/ಬಯ್ಯುವಿಕೆ; ಬಂದಡೆ=ಬಂದರೆ/ ಒದಗಿದರೆ/ಕೇಳಿಬಂದರೆ; ಮನದಲ್ಲಿ=ಮನಸ್ಸಿನಲ್ಲಿ; ಕೋಪ=ಸಿಟ್ಟು/ಮುನಿಸು/ ಆಕ್ರೋಶ; ತಾಳು=ಹೊಂದು/ಪಡೆ; ತಾಳದೆ=ಹೊಂದದೆ/ಒಳಗಾಗದೆ; ಸಮಾಧಾನಿ+ಆಗಿರಬೇಕು; ಸಮಾಧಾನ=ಆತಂಕ ತಲ್ಲಣ ದುಗುಡಗಳಿಗೆ ಒಳಗಾಗದೆ ನೆಮ್ಮದಿಯಿಂದಿರುವುದು; ಸಮಾಧಾನಿ=ನೆಮ್ಮದಿಯಿಂದಿರುವ/ ತಾಳ್ಮೆಯಿಂದಿರುವ ವ್ಯಕ್ತಿ;

ಜೀವನದ ಏಳುಬೀಳಿನ ಪ್ರಸಂಗಗಳಲ್ಲಿ ಕೇಳಿಬರುವ ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ, ಸೋಲು/ಗೆಲುವುಗಳು ಮತ್ತು ಮಾನ/ಅಪಮಾನಗಳು ಸಾಮಾಜಿಕ ಜೀವನದಲ್ಲಿ ಮಾನವರಿಗೆ ಬರುವ ವಾಸ್ತವಗಳೆಂಬುದನ್ನು ಅರಿತು ಸಮಚಿತ್ತದಿಂದ ಅಂದರೆ ಮನಸ್ಸಿನಲ್ಲಿ ಆತಂಕ/ತಲ್ಲಣ/ಕಳವಳ/ತಳಮಳ/ ಉದ್ವೇಗ/ಅಹಂಕಾರದ ಒಳಮಿಡಿತಗಳಿಗೆ ಒಳಗಾಗದೆ ಬಾಳುವುದನ್ನು ಕಲಿಯಬೇಕು ಎಂಬುದನ್ನು **‘ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು’** ಎಂಬ ನುಡಿಗಳು ಸೂಚಿಸುತ್ತಿವೆ)

❖

23. ಹೆದರದಿರು ಮನವೆ ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬಯ್ವರೊಂದು ಕೋಟಿ
ಭಕ್ತಿಯಿಲ್ಲದವರ ಬಯ್ವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ ಸೋಪಾನ
ಚೆನ್ನಮಲ್ಲಿಕಾರ್ಜುನಾ.

ಒಳ್ಳೆಯ ನಡೆನುಡಿಗಳಿಂದ ಕೂಡಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಲೆಂದು ದುಡಿಯುವ ವ್ಯಕ್ತಿಗಳ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ಸುಳ್ಳು ಆರೋಪಕ್ಕೆ ಒಳಗಾಗುವಂತಹ ಅವಮಾನದ ಪ್ರಸಂಗಗಳು ಎದುರಾಗುತ್ತಲೇ ಇರುತ್ತವೆ. ಆದರೆ ಜೀವನದಲ್ಲಿ ಬರುವ ಎಡರುತೊಡರುಗಳಿಗೆ ಕುಗ್ಗದೆ ಕುಸಿಯದೆ ದಿಟ್ಟತನದಿಂದ ಒಳಿತಿನ ಹಾದಿಯಲ್ಲೇ ಮುನ್ನಡೆಯಬೇಕೆಂಬ ಆಶಯವನ್ನು ಈ ವಚನ ಸೂಚಿಸುತ್ತದೆ.

(ಹೆದರದೆ+ಇರು; ಹೆದರು=ಅಂಜು/ಹಿಂಜರಿ/ಹಿಮ್ಮೆಟ್ಟು; ಮನ=ಮನಸ್ಸು; ಬೆದರು=ಬೆಚ್ಚು/ಆತಂಕಗೊಳ್ಳು/ನಡುಗು/ತಲ್ಲಣಿಸು; ತನು=ಮಯ್/ದೇಹ; ನಿಜವನ್+ಅರಿತು; ನಿಜ=ದಿಟ/ಸತ್ಯ/ವಾಸ್ತವ; ನಿಜವನ್=ನಿಜವನ್ನು; ಅರಿ=ತಿಳಿ/ಗೊತ್ತುಮಾಡಿಕೊಳ್ಳುವುದು; ಅರಿತು=ತಿಳಿದುಕೊಂಡು; ನಿಶ್ಚಿಂತನ್+ ಆಗಿ+ಇರು; ನಿಶ್ಚಿಂತೆ=ಚಿಂತೆಯಿಲ್ಲದಿರುವಿಕೆ/ನೆಮ್ಮದಿ; **ನಿಶ್ಚಿಂತನಾಗಿರು**=ಯಾವುದೇ ಬಗೆಯ ಆತಂಕ/ತಲ್ಲಣ/ನಿರಾಶೆಗೆ ಒಳಗಾಗದೆ ನೆಮ್ಮದಿಯಿಂದಿರು;

ಫಲ+ಆದ; ಫಲ=ಹಣ್ಣು/ಬೆಳೆ; ಫಲವಾದ ಮರನ=ರೆಂಬೆಕೊಂಬೆಗಳ ತುಂಬಾ ಹೂವು ಹೀಚುಕಾಯಿ ಹಣ್ಣುಗಳಿಂದ ಕಂಗೊಳಿಸುತ್ತಿರುವ ಮರವನ್ನು; ಕಲ್ಲಲಿ=ಕಲ್ಲಿನಲ್ಲಿ; ಇಡುವುದು+ಒಂದು; ಇಡು=ಹೊಡೆ/ಎಸೆ/ಮಡಗು; ಕಲ್ಲಲಿ ಇಡುವುದು= ಹಣ್ಣುಕಾಯಿಗಳನ್ನು ಉದುರಿಸಲೆಂದು ಕಲ್ಲನ್ನು ಎಸೆಯುವರು/ಹೊಡೆಯುವರು; ಕೋಟಿ=ಒಂದು ನೂರು ಲಕ್ಷವನ್ನು ಸೂಚಿಸುವ ಅಂಕಿ/ಲೆಕ್ಕವಿಲ್ಲದಷ್ಟು ಮಂದಿ; **ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ**=ಈ ಪ್ರಸಂಗವು ಒಂದು ರೂಪಕವಾಗಿ ಬಳಕೆಯಾಗಿದೆ. ಕುಟುಂಬದ/ಸಮಾಜದ ನೆಲೆಯಲ್ಲಿ ಇತರರ ಒಳಿತಿಗಾಗಿ ದುಡಿಯುವ ಇಲ್ಲವೇ ಇತರರ ಸಂಕಟಕ್ಕೆ ಮರುಗಿ

ನೆರವನ್ನು ನೀಡುವ ವ್ಯಕ್ತಿಗಳನ್ನು ಎಲ್ಲರೂ ಕಿತ್ತು ತಿನ್ನತೊಡಗುತ್ತಾರೆ. ಒಳ್ಳೆಯವರ ಬಳಿ ಇರುವುದನ್ನೆಲ್ಲಾ ಪಡೆದುಕೊಂಡ ನಂತರ, ಅವರನ್ನೇ ಕಡೆಗಣಿಸಿ ನಿಂದಿಸಿ ದೂರತಳ್ಳುತ್ತಾರೆ ಎಂಬ ತಿರುಳಿನಲ್ಲಿ ಬಳಕೆಯಾಗಿದೆ.

ಎಲವದ ಮರ=ಬೂರಗ/ಬೂರಲ/ದೂದಿ ಮರ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ–ಈ ಮರದಲ್ಲಿ ಬಿಡುವ ಕಾಯಿಯ ಒಳಗಡೆ ಅರಳೆಯ/ಹತ್ತಿಯ ನೂಲಿನಂತಹ ಎಳೆಗಳಿರುತ್ತವೆ. ಎಲವದ ಕಾಯಿ/ಹಣ್ಣಿನಲ್ಲಿ ಯಾವುದೇ ಬಗೆಯ ರಸವಾಗಲಿ ಇಲ್ಲವೇ ರುಚಿಯಾಗಲಿ ಇರುವುದಿಲ್ಲ; ಇಡುವರ್+ಒಬ್ಬರ; ಇಡುವರು=ಹೊಡೆಯುವವರು/ಕಲ್ಲನ್ನು ಎಸೆಯುವವರು; ಒಬ್ಬರ=ಒಬ್ಬ ವ್ಯಕ್ತಿಯನ್ನಾದರೂ; ಕಾಣ್+ಎ; ಕಾಣ್=ನೋಡು; ಕಾಣೆ= ನೋಡಿಲ್ಲ/ಕಂಡಿಲ್ಲ; **ಎಲವದ ಮರನ ಇಡುವರೊಬ್ಬರ ಕಾಣೆ**=ಈ ಪ್ರಸಂಗವು ಒಂದು ರೂಪಕವಾಗಿ ಬಳಕೆಯಾಗಿದೆ.

ಎಲವದ ಮರದ ಕಾಯಿ/ಹಣ್ಣುಗಳನ್ನು ಮಾನವರು ತಿನ್ನುವುದಿಲ್ಲ. ಆದುದರಿಂದ ತಮಗೆ ಉಪಯೋಗವಿಲ್ಲದ ಮರದ ಬಳಿಗೆ ಯಾರೊಬ್ಬರೂ ಹೋಗುವುದಿಲ್ಲ. ಅಂತೆಯೇ ಕುಟುಂಬದಲ್ಲಾಗಲಿ ಇಲ್ಲವೇ ಸಮಾಜದ ನೆಲೆಯಲ್ಲಾಗಲಿ ನೀಚರ/ಕೇಡಿಗಳ/ಸೋಂಬೇರಿಗಳ ಬಳಿಗೆ ಯಾರೊಬ್ಬರೂ ಸುಳಿಯುವುದಿಲ್ಲ. ಅವರನ್ನು ಯಾರೊಬ್ಬರೂ ಕಾಡುವುದಿಲ್ಲ/ಬೇಡುವುದಿಲ್ಲ/ ಅವರ ತಂಟೆಗೆ ಹೋಗುವುದಿಲ್ಲ ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಭಕ್ತಿ+ಉಳ್ಳವರ; ಭಕ್ತಿ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿ/ದೇವರ ಬಗೆಗಿನ ಒಲವು; ಉಳ್ಳವರು=ಹೊಂದಿರುವವರು; ಭಕ್ತಿಯುಳ್ಳವರ=ಒಳ್ಳೆಯ ನಡೆನುಡಿಯುಳ್ಳವರನ್ನು; ಬಯ್ವರ್+ಒಂದು ಕೋಟಿ; ಬಯ್=ತೆಗಳು/ನಿಂದಿಸು; ಬಯ್ವರ್=ನಿಂದಿಸುತ್ತಾರೆ/ತೆಗಳುತ್ತಾರೆ; ಬಯ್ವರ್+ ಒಬ್ಬರ ಕಾಣೆ; ಒಬ್ಬರ=ಒಬ್ಬ ವ್ಯಕ್ತಿಯನ್ನಾದರೂ; ಶರಣ=ಶಿವನ ಬಗ್ಗೆ ಒಲವುಳ್ಳವನು/ಒಳ್ಳೆಯ ನಡೆನುಡಿಯಿಂದ ಬಾಳ್ವೆ ನಡೆಸುವುದನ್ನೇ ಶಿವನೆಂದು ತಿಳಿದವನು; ನುಡಿ=ಮಾತು; ಶಿವಶರಣರ ನುಡಿ=ಮಾನವ ಜೀವನದ ವಾಸ್ತವವನ್ನು ತಿಳಿಸುವ ವಚನಗಳು; ಎನಗೆ=ನನಗೆ; ಗತಿ=ದಾರಿ ತೋರುತ್ತವೆ/ ಕಯ್ ಹಿಡಿದು ನಡೆಸುತ್ತವೆ; ಸೋಪಾನ=ಮೆಟ್ಟಿಲು/ಜೀವನದಲ್ಲಿ ಒಳ್ಳೆಯದನ್ನು ಪಡೆಯಲು ಪ್ರೇರಣೆಯನ್ನು ನೀಡುವ ನೆಲೆ)

❖

4. ಅಕ್ಕಮ್ಮ

ದೊರೆತಿರುವ ವಚನಗಳು : 155
ಅಂಕಿತನಾಮ : ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ

24. ವ್ರತವೆಂಬುದೇನು
ಮನ ವಿಕಾರಿಸುವುದಕ್ಕೆ ಕಟ್ಟಿದ ಗೊತ್ತು
ಜಗದ ಕಾಮಿಯಂತೆ ಕಾಮಿಸದೆ
ಜಗದ ಕ್ರೋಧಿಯಂತೆ ಕ್ರೋಧಿಸದೆ
ಜಗದ ಲೋಭಿಯಂತೆ ಲೋಭಿಸದೆ
ಮಾಯಾ ಮೋಹಂಗಳು ವರ್ಜಿತವಾಗಿ
ಮನ ಬಂದಂತೆ ಆಡದೆ
ತನು ಬಂದಂತೆ ಕೂಡದೆ
ವ್ರತದಂಗಕ್ಕೆ ಸಂಗವಾಗಿ
ನಿಂದ ಸದ್ಭಕ್ತನ ಅಂಗವೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗ.

ವ್ರತವೆಂಬುದು ವ್ಯಕ್ತಿಯು ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ತನ್ನ ಮತ್ತು ಸಹಮಾನವರ ಒಳಿತಿಗಾಗಿ ಒಳ್ಳೆಯ ನಡೆನುಡಿಯನ್ನು ಸದಾಕಾಲ ಹೊಂದಿರಲು ಪಡೆಯುವ ಮಾನಸಿಕ ತರಬೇತಿಯೇ ಹೊರತು, ದೇವರನ್ನು ಪೂಜಿಸುವಾಗ ಮಾಡುವ ಬಹು ಬಗೆಯ ಆಚರಣೆಗಳಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ವ್ರತ+ಎಂಬುದು+ಏನು; ವ್ರತ=ವ್ಯಕ್ತಿಯು ಮಿಂದು ಮಡಿಯುಟ್ಟು,

ಉಪವಾಸವಿದ್ದು, ದೇವರ ಹೆಸರನ್ನು ಜಪಿಸುತ್ತ ಹೂ ಹಣ್ಣು ಕಾಯಿ ಅನ್ನ ಪಾನಗಳನ್ನು ದೇವರ ಮುಂದೆ ಎಡೆಯಾಗಿ ಇಟ್ಟು, ದೀಪ ದೂಪಗಳಿಂದ ಬೆಳಗುತ್ತ, ದೇವರ ಅನುಗ್ರಹವನ್ನು ಪಡೆಯಲು ಮತ್ತು ದೇವರನ್ನು ಒಲಿಸಿ ಕೊಳ್ಳಲು ಮಾಡುವ ನಿಯಮಿತವಾದ ಆಚರಣೆಗಳನ್ನು ವ್ರತವೆಂದು ಕರೆಯುತ್ತಾರೆ. ವ್ರತವನ್ನು ಮಾಡುವಾಗ "ಇಂತಹ ದೇವರಿಗೆ ಇಂತಹ ರೀತಿಯಲ್ಲಿಯೇ ಪೂಜೆಯನ್ನು ಮಾಡಬೇಕು" ಎಂಬ ಕಟ್ಟುಕಟ್ಟಲೆಯಿರುತ್ತದೆ; ಎಂಬುದು=ಎನ್ನುವುದು;

ಮನ=ಮನಸ್ಸು; ವಿಕಾರ=ಕೆಟ್ಟ ರೀತಿಯಲ್ಲಿ ಬದಲಾಗುವುದು; ಕಟ್ಟು= ನಿಯಮಿಸು/ ಅಳವಡಿಸು; ಗೊತ್ತು=ನೆಲೆ/ಕೊಟ್ಟಿಗೆಯಲ್ಲಿ ದನಕರುಗಳನ್ನು ಕಟ್ಟುವ ಜಾಗ;

ವ್ರತವೆಂಬುದೇನು, ಮನ ವಿಕಾರಿಸುವುದಕ್ಕೆ ಕಟ್ಟಿದ ಗೊತ್ತು=ವ್ರತ ಎಂದರೆ ಏನೆಂದು ತಿಳಿದಿರುವೆ? ಮನಸ್ಸನ್ನು ಹತೋಟಿ ತಪ್ಪದಂತೆ ಕಟ್ಟಿಹಾಕಿರುವ ಒಂದು ನೆಲೆ;

ಜಗ=ಪ್ರಪಂಚ/ಲೋಕ; ಕಾಮಿ+ಅಂತೆ; ಕಾಮ=ಬಯಕೆ/ಇಚ್ಚೆ/ಆಸೆ; ಕಾಮಿ=ಅತಿ ಹೆಚ್ಚಿನ ಬಯಕೆಗಳುಳ್ಳವನು;

ಜಗದ ಕಾಮಿ=ಜೀವನದ ಉದ್ದಕ್ಕೂ ಮಯ್ ಮನದ ಬಯಕೆಗಳಲ್ಲೇ ತೊಳಲಾಡುತ್ತ, ಯಾವುದರಿಂದಲೂ ನೆಮ್ಮದಿಯನ್ನು ಪಡೆಯದೆ ಪರಿತಪಿಸುತ್ತಿರುವ ವ್ಯಕ್ತಿ; ಕಾಮಿಸದೆ=ಅತಿಯಾಗಿ ಆಸೆಪಡದೆ;

ಕ್ರೋಧಿ+ಅಂತೆ; ಕ್ರೋಧ=ಸಿಟ್ಟು/ಕೋಪ;

ಜಗದ ಕ್ರೋಧಿ=ಒಂದಲ್ಲ ಒಂದು ಕಾರಣಕ್ಕಾಗಿ ಇತರರ ಬಗ್ಗೆ ಸದಾಕಾಲ ಕೋಪದಿಂದ ಸಿಡಿಮಿಡಿಗೊಳ್ಳುವ ವ್ಯಕ್ತಿ; ಕ್ರೋಧಿಸದೆ=ಕೋಪವನ್ನು ಮಾಡಿಕೊಳ್ಳದೆ;

ಲೋಭಿ+ಅಂತೆ; ಲೋಭಿ=ಜಿಪುಣ;

ಜಗದ ಲೋಭಿ=ಜೀವನದ ಅಗತ್ಯಗಳಿಗಾಗಿ ಹಣವನ್ನು ವೆಚ್ಚ ಮಾಡದೆ, ಸಂಪತ್ತನ್ನು ಕೂಡಿಟ್ಟುಕೊಳ್ಳುವ ವ್ಯಕ್ತಿ; ಲೋಭಿಸದೆ=ಸಂಪತ್ತಿನ ಸಂಗ್ರಹ ಕ್ಕಾಗಿಯೇ ಚಿಂತಿಸದೆ;

ಮಾಯೆ=ಇರುವುದನ್ನು ಇಲ್ಲವೆಂದು... ಇಲ್ಲದ್ದನ್ನು ಇದೆಯೆಂದು ತಿಳಿದಿರುವುದು; ಮೋಹ=ಯಾವುದೇ ವಸ್ತು ಇಲ್ಲವೇ ವ್ಯಕ್ತಿಯ ಮೇಲೆ ಅತಿಯಾದ ಒಲವು; ವರ್ಜಿತ=ಬಿಟ್ಟ/ತ್ಯಜಿಸಿದ;

ಮಾಯಾ ಮೋಹಂಗಳು ವರ್ಜಿತವಾಗಿ=ತಪ್ಪುಕಲ್ಪನೆ ಮತ್ತು ಅತಿಯಾದ ಒಲವಿನಿಂದ ಕೂಡಿದ ನಡೆನುಡಿಗಳನ್ನು ತ್ಯಜಿಸಿ; **ಮನ ಬಂದಂತೆ ಆಡುವುದು**= ಮನಸ್ಸಿನಲ್ಲಿ ಸದಾಕಾಲ ಮೂಡಿಬರುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತೋಟಿಯಲ್ಲಿಟ್ಟುಕೊಳ್ಳದೆ ವರ್ತಿಸುವುದು;

ಮನ ಬಂದಂತೆ ಆಡದೆ=ಕೆಟ್ಟ ನಡೆನುಡಿಗಳಲ್ಲಿ ತೊಡಗದೆ/ಸಮಾಜಕ್ಕೆ ಕೇಡನ್ನುಂಟುಮಾಡುವ ಕೆಲಸಗಳನ್ನು ಮಾಡದೆ;

ತನು=ದೇಹ/ಶರೀರ; **ತನು ಬಂದಂತೆ ಕೂಡು**=ದೇಹದಲ್ಲಿ ತುಡಿಯುವ ಕಾಮದ ಬಯಕೆಯನ್ನು ಈಡೇರಿಸಿಕೊಳ್ಳಲು ಅನೇಕ ವ್ಯಕ್ತಿಗಳೊಡನೆ ಕಾಮದ ನಂಟನ್ನು ಪಡೆಯುವುದು;

ತನು ಬಂದಂತೆ ಕೂಡದೆ=ಸಮಾಜ ಒಪ್ಪಿತವಲ್ಲದ ಬಗೆಯಲ್ಲಿ ಕಾಮದ ನಂಟನ್ನು ಹೊಂದದೆ;

ವ್ರತದ+ಅಂಗಕ್ಕೆ; ಅಂಗ=ದೇಹ; ಸಂಗ+ಆಗಿ; ಸಂಗ=ಹೊಂದಿಕೆ/ಸಾಮರಸ್ಯ; ನಿಂದ=ನಿಂತಿರುವ/ಬಾಳುತ್ತಿರುವ;

ವ್ರತದಂಗಕ್ಕೆ ಸಂಗವಾಗಿ ನಿಂದ=ಒಳ್ಳೆಯ ನಡೆನುಡಿಯಿಂದ ಕೂಡಿದ ವ್ಯಕ್ತಿಯಾಗಿ ಬಾಳುತ್ತಿರುವ;

ಸದ್ಭಕ್ತ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ತಿಳಿದು ಬಾಳುತ್ತಿರುವವನು;

ಆಚಾರ=ಒಳ್ಳೆಯ ನಡೆನುಡಿ; ಪ್ರಾಣ=ಉಸಿರು/ಜೀವ; ರಾಮೇಶ್ವರ ಲಿಂಗದ+ಅಂಗ; ರಾಮೇಶ್ವರಲಿಂಗ=ಶಿವನ ಮತ್ತೊಂದು ಹೆಸರು;

ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಂಗ=ಅಕ್ಕಮ್ಮನ ವಚನಗಳಲ್ಲಿ ಕಂಡುಬರುವ ಅಂಕಿತನಾಮ. ವ್ಯಕ್ತಿಯ ಒಳ್ಳೆಯ ನಡೆನುಡಿಗಳಲ್ಲಿಯೇ ಶಿವನ ಉಸಿರು ನೆಲೆಸಿದೆ ಎಂಬ ನಿಲುವನ್ನು ಅಕ್ಕಮ್ಮನು ಹೊಂದಿದ್ದಳು.

ಈ ವಚನದಲ್ಲಿ ಅಕ್ಕಮ್ಮನವರು ಬಹು ದೊಡ್ಡ ಸಂಗತಿಯೊಂದನ್ನು ಕುರಿತು ಹೇಳಿದ್ದಾರೆ. ಜನರು ಮಾಡುತ್ತಿರುವ ದೇವರ ಹೆಸರಿನ ವ್ರತಗಳಿಂದ ಉಪವಾಸ ಮತ್ತು ಜಪತಪ ಮುಂತಾದ ಆಚರಣೆಗಳ ಕಟ್ಟುಪಾಡುಗಳಿಗೆ ವ್ಯಕ್ತಿಯ ಮಯ್ ಮನಸ್ಸು ಒಳಪಡುತ್ತದೆ ಹಾಗೂ ವ್ಯಕ್ತಿಯ ಹಣ ವೆಚ್ಚವಾಗುತ್ತದೆ. ಈ ರೀತಿ ಮಾಡುವ ವ್ರತಕ್ಕೂ ವ್ಯಕ್ತಿಯ ಸಾಮಾಜಿಕ ನಡೆನುಡಿಗೂ ಯಾವುದೇ ನಂಟು ಇರುವುದಿಲ್ಲ. ಆದ್ದರಿಂದ ಅಕ್ಕಮ್ಮನವರು 'ವ್ಯಕ್ತಿಯನ್ನು ಒಳಗೊಂಡಂತೆ

ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವಂತಹ ಒಳ್ಳೆಯ ನಡೆನುಡಿಗಳನ್ನು' ವ್ರತವೆಂದು ಪರಿಗಣಿಸಿದ್ದಾರೆ.

ಕ್ರಿ.ಪೂ. ಆರನೆಯ ಶತಮಾನದಲ್ಲಿದ್ದ ಗೌತಮ ಬುದ್ದರು ವ್ಯಕ್ತಿಯು ತನ್ನ ದೇಹದ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳುವುದಕ್ಕಾಗಿ ನಿತ್ಯವೂ ಬಗೆಬಗೆಯ ವ್ಯಾಯಾಮಗಳ ಮೂಲಕ ದೇಹಕ್ಕೆ ತರಬೇತಿಯನ್ನು ನೀಡುವಂತೆಯೇ, ವ್ಯಕ್ತಿಯು ತನ್ನ, ತನ್ನ ಕುಟುಂಬದ, ಸಹಮಾನವರ ಮತ್ತು ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ, ಅಂದರೆ ಎಲ್ಲರ ಒಳಿತಿಗಾಗಿ ನಿತ್ಯವೂ ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ನಡೆನುಡಿಯಿಂದ ಬಾಳಲು ಅಗತ್ಯವಾದ ಮಾನಸಿಕ ತರಬೇತಿಯನ್ನು ನಿರಂತರವಾಗಿ ಪಡೆಯುತ್ತಿರಬೇಕೆಂದು ಹೇಳಿದ್ದಾರೆ.

ಗೌತಮ ಬುದ್ದ ಮತ್ತು ಅಕ್ಕಮ್ಮನವರ ನಿಲುವಿನಲ್ಲಿ ವ್ರತ ಎಂಬುದು "ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ರೂಪಿಸಿಕೊಂಡು ಬಾಳುವುದಕ್ಕಾಗಿ ತನ್ನ ದೇಹ ಮತ್ತು ಮನಸ್ಸಿಗೆ ನೀಡುವ ಮಾನಸಿಕ ತರಬೇತಿಯಾಗಿದೆ."

❖

25. ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ
ಬಿಡಾರ ಬಿಡಾರವೆಂದು ಹಿರಿಯತನಕ್ಕೆ ಅಹಂಕರಿಸಿ
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ
ಭಕ್ತರೊಳು ಕ್ರೋಧ ಭ್ರಷ್ಟರೊಳು ಮೇಳ
ಇವರು ನರಕಕ್ಕೆ ಯೋಗ್ಯರು
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

ಜಾತಿ, ಮತ, ದೇವರ ಹೆಸರಿನಲ್ಲಿ ಕಟ್ಟಿಕೊಂಡಿರುವ ಒಕ್ಕೂಟಗಳ ದೊಡ್ಡ ದೊಡ್ಡ ಗದ್ದುಗೆಯಲ್ಲಿರುವ ವ್ಯಕ್ತಿಗಳ ನಡೆನುಡಿಯಲ್ಲಿ ಕಂಡುಬರುವ ಕೆಟ್ಟ ವರ್ತನೆಗಳನ್ನು ಈ ವಚನದಲ್ಲಿ ಕಟುವಾಗಿ ಟೀಕಿಸಲಾಗಿದೆ.

ಹೋತ=ಗಂಡು ಆಡು; ಗಡ್ಡ=ಗಂಡಸಿನ ಮೊಗದ ಕೆನ್ನೆ ಮತ್ತು ಗದ್ದದ ಎಡೆಯಲ್ಲಿ ಬೆಳೆದಿರುವ ಉದ್ದನೆಯ ಕೂದಲು; ಹಿರಿಯರು=ವಯಸ್ಸಿನಲ್ಲಿ ದೊಡ್ಡವರು/ಉನ್ನತವಾದ ಗದ್ದುಗೆಯನ್ನೇರಿದವರು; ನೋಡು=ಕಾಣು/ತಿಳಿ; ನೋಡಾ=ಒರೆಹಚ್ಚಿ ನೋಡು/ಪರಿಶೀಲಿಸು;

ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ=ಹೋತನ ಗಡ್ಡದಂತೆ ಉದ್ದನೆಯ ಗಡ್ಡವನ್ನು ಬಿಟ್ಟಿರುವ ಹಿರಿಯರ ರೂಪವನ್ನು ಗಮನಿಸು. ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ.

ಜಾತಿ, ಮತ, ದೇವರ ಹೆಸರಿನ ಒಕ್ಕೂಟಗಳ ಗದ್ದುಗೆಯಲ್ಲಿರುವ ವ್ಯಕ್ತಿಗಳು "ತಾವು ವಿರಾಗಿಗಳು ಅಂದರೆ ಯಾವುದೇ ಬಗೆಯ ಕಾಮನೆಗಳಿಲ್ಲದವರು" ಎಂಬುದನ್ನು ಬಹಿರಂಗದಲ್ಲಿ ತೋರಿಸಿಕೊಳ್ಳುವುದಕ್ಕಾಗಿ ಉದ್ದನೆಯ ಗಡ್ಡವನ್ನು ಬಿಟ್ಟಿರುವ, ತಲೆಗೂದಲನ್ನು ಎತ್ತಿಕಟ್ಟಿರುವ ಮತ್ತು ಕೆಂಪು/ಬಿಳಿ/ಹಳದಿ ಬಣ್ಣದ ಉಡುಗೆಯನ್ನು ತೊಟ್ಟಿರುವ ಚಹರೆಗಳನ್ನು ಹೊಂದಿರುತ್ತಾರೆ;

ಬಿಡಾರ=ತಂಗುದಾಣ/ವ್ಯಕ್ತಿಯು ತನ್ನ ಊರಿನಿಂದ ಮತ್ತೊಂದು ಊರಿಗೆ ಹೋದಾಗ ತಾತ್ಕಾಲಿಕವಾಗಿ ತಂಗುವ ಜಾಗ; ಬಿಡಾರ+ಎಂದು; ಹಿರಿಯತನ =ದೊಡ್ಡತನ; ಅಹಂಕಾರ=ಸೊಕ್ಕು/ಹಮ್ಮು; ಅಹಂಕರಿಸಿ=ಸೊಕ್ಕಿನ ನಡೆನುಡಿಗಳಿಂದ ಮೆರೆಯುತ್ತ;

ಬಿಡಾರ ಬಿಡಾರವೆಂದು ಹಿರಿಯತನಕ್ಕೆ ಅಹಂಕರಿಸಿ=ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ.

ಜಾತಿ, ಮತ, ದೇವರ ಹೆಸರಿನ ಒಕ್ಕೂಟಗಳ ಗದ್ದುಗೆಯಲ್ಲಿರುವ ವ್ಯಕ್ತಿಗಳು "ತಮ್ಮನ್ನು ತಾವೇ ದೊಡ್ಡವರು ಮತ್ತು ಹೆಚ್ಚಿನ ಅರಿವನ್ನು ಹೊಂದಿದವರು" ಎಂಬ ತಪ್ಪುಗ್ರಹಿಕೆಗೆ ಒಳಗಾಗಿ, ತಾವು ತಂಗಿದ ಕಡೆಯಲ್ಲೆಲ್ಲಾ ಹೆಚ್ಚಿನ ಅನುಕೂಲಗಳನ್ನು ಮತ್ತು ಅದ್ದೂರಿಯ ಸೇವೆಯನ್ನು ಜನರಿಂದ ಬಯಸುತ್ತಾರೆ;

ಆಚಾರ=ಒಳ್ಳೆಯ ನಡೆನುಡಿ; ವ್ಯಕ್ತಿಯು ಆಡುವ ನುಡಿ ಮತ್ತು ಮಾಡುವ ದುಡಿಮೆಯು ತನಗೆ ಒಳಿತನ್ನುಂಟುಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು; ಆಚಾರವಂ=ಆಚಾರವನ್ನು; ಬಿಟ್ಟು=ತ್ಯಜಿಸಿ/ದೂರಮಾಡಿ; ಅನಾಚಾರ=ಕೆಟ್ಟ ನಡೆನುಡಿ; ವ್ಯಕ್ತಿಯು ಆಡುವ ನುಡಿ ಮತ್ತು ಮಾಡುವ ದುಡಿಮೆಯು ತನಗೆ ಮತ್ತು ತನ್ನ ಜಾತಿಮತದವರಿಗೆ ಒಳಿತನ್ನುಂಟು ಮಾಡಿ, ಇತರರ ಜಾತಿಮತದವರಿಗೆ ಮತ್ತು ಸಮಾಜಕ್ಕೆ ಕೇಡನ್ನುಂಟು ಮಾಡುವುದು; ಸಂಗ್ರಹ=ಕಲೆಹಾಕುವುದು/ಒಟ್ಟುಗೂಡಿಸುವುದು;

ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ=ಆಚಾರವನ್ನು ಬಿಟ್ಟು ಅನಾಚಾರ ದಿಂದ ಬಾಳತೊಡಗುತ್ತಾರೆ; ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ.

ಜಾತಿ, ಮತ, ದೇವರ ಹೆಸರಿನ ಒಕ್ಕೂಟಗಳ ಗದ್ದುಗೆಯಲ್ಲಿರುವವರು "ತಮ್ಮ ತಮ್ಮ ಜಾತಿ, ಮತ, ದೇವರಿಗಾಗಿ ಬಾಳುತ್ತಾರೆಯೇ" ಹೊರತು, ಇನ್ನಿತರ ಜನಸಮುದಾಯವನ್ನು ಕಡೆಗಣಿಸುತ್ತಾರೆ. ಹತ್ತಾರು ಬಗೆಯ ಮತಗಳು ಮತ್ತು ನೂರೆಂಟು ಬಗೆಯ ಜಾತಿಗಳ ಹೆಣಿಗೆಯಿಂದ ಕೂಡಿರುವ ಸಮಾಜದಲ್ಲಿ ಜಾತಿಮತ ತಾರತಮ್ಯವಿಲ್ಲದೆ ಎಲ್ಲರಿಗೂ ಒಳಿತಾಗಬೇಕೆಂಬ ಒಲವು ಮತ್ತು ಕರುಣೆಯ ಗುಣವನ್ನು ಹೊಂದಿರುವುದಿಲ್ಲ;

ಭಕ್ತರ್+ಒಳು; ಭಕ್ತ=ಒಳ್ಳೆಯ ನಡೆನುಡಿಗಳಲ್ಲಿ ದೇವರನ್ನು ಕಾಣುತ್ತ ಪ್ರಾಮಾಣಿಕನಾಗಿ ಬಾಳುತ್ತಿರುವ ವ್ಯಕ್ತಿ; ಒಳು=ಅಲ್ಲಿ; ಕ್ರೋಧ=ಸಿಟ್ಟು/ಕೋಪ; ಭ್ರಷ್ಟರ್+ಒಳು: ಭ್ರಷ್ಟ=ಕೆಟ್ಟ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟುಮಾಡಿ, ಅತಿ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತನ್ನು ಗಳಿಸಿರುವ ವ್ಯಕ್ತಿ; ಮೇಳ=ನಂಟು/ಜೊತೆ/ಸೇರುವಿಕೆ;

ಭಕ್ತರೊಳು ಕ್ರೋಧ ಭ್ರಷ್ಟರೊಳು ಮೇಳ=ಒಳ್ಳೆಯರನ್ನು ಕಂಡಾಗ ಸಿಡಿಮಿಡಿ ಗೊಳ್ಳುವುದು, ಕೆಟ್ಟವರನ್ನು ಕಂಡಾಗ ಆನಂದದಿಂದ ಜತೆಗೂಡುವುದು; ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ.

ದುಡಿಮೆಯನ್ನು ಪ್ರಾಮಾಣಿಕವಾಗಿ ಮಾಡಿ, ಒಳ್ಳೆಯ ರೀತಿಯಲ್ಲಿ ಹಣವನ್ನು

ಸಂಪಾದಿಸುವ ವ್ಯಕ್ತಿಗಳ ಬಳಿಯಲ್ಲಿ ಹೆಚ್ಚಿನ ಸಂಪತ್ತು ಇರುವುದಿಲ್ಲ. ಆದರೆ ಅಪ್ರಾಮಾಣಿಕವಾದ ದುಡಿಮೆಯಿಂದ ಕೆಟ್ಟ ರೀತಿಯಲ್ಲಿ ಹಣವನ್ನು ಸಂಪಾದಿಸುವ ವ್ಯಕ್ತಿಗಳ ಬಳಿಯಲ್ಲಿ ಅಪಾರವಾದ ಸಂಪತ್ತು ಇರುತ್ತದೆ. ಜಾತಿ, ಮತ, ದೇವರ ಹೆಸರಿನ ಒಕ್ಕೂಟಗಳ ಗದ್ದುಗೆಯಲ್ಲಿರುವ ವ್ಯಕ್ತಿಗಳ ಸುತ್ತಮುತ್ತ ಆಯಾಯ ಜಾತಿ ಮತಕ್ಕೆ ಸೇರಿದ ಅಪ್ರಾಮಾಣಿಕರಾದ ಸಿರಿವಂತರು ಮತ್ತು ರಾಜಕೀಯ ಗದ್ದುಗೆ ಯಲ್ಲಿರುವ ವ್ಯಕ್ತಿಗಳೇ ತುಂಬಿರುತ್ತಾರೆ. ಇಂತಹ ಕೆಟ್ಟ ವ್ಯಕ್ತಿಗಳ ಜತೆಯಲ್ಲಿ ಅತ್ಯಂತ ಆತ್ಮೀಯವಾದ ಒಡನಾಟವನ್ನು ಒಕ್ಕೂಟಗಳ ಹಿರಿಯರು ಹೊಂದಿರುತ್ತಾರೆ;

ನರಕ=ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದಿರುವ ವ್ಯಕ್ತಿಯು ತನ್ನ ಸಾವಿನ ನಂತರ, ತಾನು ಮಾಡಿದ ಪಾಪದ ಕೆಲಸಗಳಿಗೆ ತಕ್ಕ ದಂಡನೆಗೆ ಒಳಗಾಗಿ ನರಳುವ ಕಲ್ಪನೆಯ ಲೋಕ. ಸತ್ತ ನಂತರ ಜನರಿಗೆ ಒಳಿತನ್ನು ಮಾಡಿದವನು ಆನಂದದ ನೆಲೆಯಾದ ಸ್ವರ್ಗಲೋಕಕ್ಕೆ ಹೋಗುತ್ತಾನೆ ಎಂಬ ನಂಬಿಕೆಯು ನಮ್ಮ ಜನಸಮುದಾಯದ ಮನದಲ್ಲಿದೆ; ಇವರು=ಜಾತಿ, ಮತ, ದೇವರ ಹೆಸರಿನ ಒಕ್ಕೂಟಗಳ ಗದ್ದುಗೆಯಲ್ಲಿರುವವರು; ಯೋಗ್ಯರು= ಅರ್ಹರು/ತಕ್ಕವರು;

ಇವರು ನರಕಕ್ಕೆ ಯೋಗ್ಯರು=ಇಂತಹ ವ್ಯಕ್ತಿಗಳು ನರಕದಲ್ಲಿರಲು ತಕ್ಕವರು; ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ.

ಒಟ್ಟು ಜನಸಮುದಾಯದ ಅನ್ನ, ಬಟ್ಟೆ, ವಸತಿ, ವಿದ್ಯೆ ಮತ್ತು ಆರೋಗ್ಯಕ್ಕಾಗಿ ಬಳಕೆಯಾಗಬೇಕಿದ್ದ ನಾಡಿನ ಸಂಪತ್ತನ್ನು ಲೂಟಿ ಮಾಡುತ್ತಿರುವ ವ್ಯಕ್ತಿಗಳಿಗೆ 'ಪ್ರಾಮಾಣಿಕರಾಗಿ ಬಾಳಿರಿ' ಎಂಬ ತಿಳುವಳಿಕೆಯನ್ನು ಹೇಳದಿರುವ ಹಿರಿಯರು ಮತ್ತು "ಜಾತಿಮತಗಳ ಪರಸ್ಪರ ಅಸೂಯೆ, ಅಪನಂಬಿಕೆ ಮತ್ತು ಹಗೆತನದ ನಡೆನುಡಿಗಳನ್ನು ಬೆಂಬಲಿಸುವುದರಿಂದ ಇಡೀ ಜನಸಮುದಾಯದ ಬದುಕು ದುರಂತದ ಕಡೆಗೆ ಸಾಗುತ್ತದೆ" ಎಂಬ ಆತಂಕವನ್ನು ಹೊಂದದೇ, ಕೆಟ್ಟ ನಡೆನುಡಿಯುಳ್ಳವರೊಡನೆ ನಂಟನ್ನು ಹೊಂದಿರುವ ಒಕ್ಕೂಟಗಳ ಹಿರಿಯ ವ್ಯಕ್ತಿಗಳನ್ನು ಅಕ್ಕಮ್ಮನವರು ಕಟುವಾದ ನುಡಿಗಳ ಮೂಲಕ ಟೀಕಿಸಿದ್ದಾರೆ.

❖

5. ಅಮುಗಿ ದೇವಯ್ಯ

ಹುಟ್ಟಿದ ಊರು ಸೊನ್ನಲಿಗೆ/ಸೊನ್ನಲಾಪುರ. ಅನಂತರ ಬಸವಣ್ಣನವರು ಇದ್ದ ಕಲ್ಯಾಣನಗರಕ್ಕೆ ಬಂದು ನೆಲೆಸಿದರು.

ಹೆಂಡತಿ: ಅಮುಗೆ ರಾಯಮ್ಮ

ಕಸುಬು: ನೆಯ್ಗೆ/ನೂಲಿನಿಂದ ಬಟ್ಟೆಯನ್ನು ನೇಯುವುದು.

ದೊರೆತಿರುವ ವಚನಗಳು: 31

ವಚನಗಳ ಅಂಕಿತನಾಮ: ಸೋಮನಾಥಲಿಂಗ

26. ಜ್ಞಾನದಲರಿದಡೇನಯ್ಯ ಕ್ರೀಯನಾಚರಿಸದನ್ನಕ್ಕ
ನೆನೆದ ಮಾತ್ರದಲಿ ಅಹುದೆ ಕಾರ್ಯದಲಲ್ಲದೆ
ಕುರುಡ ಕಾಣ ಪಥವ
ಹೆಳವ ನಡೆಯಲರಿಯ
ಒಂದಿಲ್ಲದಿರ್ದಡೊಂದಾಗದು
ಜ್ಞಾನವಿಲ್ಲದಿರ್ದ ಕ್ರೀ ಜಡನು
ಕ್ರೀಯಿಲ್ಲದ ಜ್ಞಾನ ವಾಗ್ಜಾಲ ಭ್ರಾಂತು
ಇದು ಕಾರಣ
ಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.

ವ್ಯಕ್ತಿಯು ಜೀವನವನ್ನು ಚೆನ್ನಾಗಿ ರೂಪಿಸಿಕೊಂಡು ನೆಮ್ಮದಿಯಿಂದ ಬಾಳಬೇಕಾದರೆ ಒಳ್ಳೆಯ ತಿಳುವಳಿಕೆಯನ್ನು ತನ್ನದಾಗಿಸಿಕೊಳ್ಳುವ ಮತ್ತು ಒಳ್ಳೆಯ ಕಸುಬನ್ನು ಮಾಡುವ ಎರಡು ಗುಣವನ್ನು ಹೊಂದಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಒಳ್ಳೆಯ ತಿಳುವಳಿಕೆ ಎಂದರೆ "ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದನ್ನು ಮಾಡಬೇಕು–ಯಾವುದನ್ನು ಮಾಡಬಾರದು; ಯಾವುದು ನೀತಿ–ಯಾವುದು ಅನೀತಿ; ಯಾವುದು ದಿಟ–ಯಾವುದು ಸಟೆ ಎಂಬುದನ್ನು ವಿಂಗಡಿಸಿ ನೋಡಿ ಅರಿತುಕೊಳ್ಳುವುದು."

ಒಳ್ಳೆಯ ಕಸುಬು ಎಂದರೆ "ತನಗೆ ಒಳಿತನ್ನು ಮಾಡಿಕೊಳ್ಳುವುದರ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಕೆಲಸ."

(ಜ್ಞಾನದಲ್+ಅರಿದಡೆ+ಏನ್+ಅಯ್ಯಾ; ಜ್ಞಾನ=ತಿಳುವಳಿಕೆ/ವಿದ್ಯೆ; ಜ್ಞಾನದಲ್=ತಿಳುವಳಿಕೆಯಲ್ಲಿ/ವಿದ್ಯೆಯಲ್ಲಿ; ಅರಿ=ಕಲಿ/ತಿಳಿ; ಅರಿದಡೆ=ಕಲಿತರೆ/ ತಿಳಿದುಕೊಂಡರೆ; ಏನು=ಯಾವುದು/ಯಾವ ಪ್ರಯೋಜನ; ಅಯ್ಯಾ= ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಕ್ರೀ+ಅನ್+ಆಚರಿಸದ+ಅನ್ನಕ್ಕ; ಕ್ರೀ=ಕ್ರಿಯೆ/ಕೆಲಸ; ಅನ್=ಅನ್ನು; ಕ್ರೀಯನ್=ಕೆಲಸವನ್ನು;

ಆಚರಿಸು=ನಡೆಸು/ನೆರವೇರಿಸು/ವರ್ತಿಸು; ಆಚರಿಸದ=ಮಾಡದ/ನಡೆಸದ/ ನೆರವೇರಿಸದ; ಅನ್ನಕ್ಕ=ವರಗೆ/ತನಕ;

ಜ್ಞಾನದಲರಿದಡೇನಯ್ಯಾ ಕ್ರೀಯನಾಚರಿದನ್ನಕ್ಕ=ವ್ಯಕ್ತಿಯು ತಾನು ಕಲಿತ ವಿದ್ಯೆಯಿಂದ/ಪಡೆದ ತಿಳುವಳಿಕೆಯಿಂದ ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಒಳ್ಳೆಯ ರೀತಿಯಲ್ಲಿ ದುಡಿಮೆಯನ್ನು ಮಾಡದೆ ಕೇವಲ ವಿದ್ಯೆಯನ್ನು ಕಲಿಯುವುದರಿಂದ ಯಾವ ಪ್ರಯೋಜನವೂ ಇಲ್ಲ;

ನೆನೆ=ಮನದಲ್ಲಿ ಕಲ್ಪಿಸಿಕೊಳ್ಳುವುದು/ಊಹಿಸಿಕೊಳ್ಳುವುದು/ಸ್ಮರಿಸಿ ಕೊಳ್ಳುವುದು; ಮಾತ್ರ=ಕೇವಲ/ಬರಿಯ; ಅಹುದು=ಆಗುವುದು ಈಡೇರುವುದು; ಅಹುದೆ=ಈಡೇರುತ್ತದೆಯೇ/ನೆರವೇರುತ್ತದೆಯೇ;

ಕಾರ್ಯದಲ್+ಅಲ್ಲದೆ; ಕಾರ್ಯ=ಕೆಲಸ/ಕ್ರಿಯೆ/ಆಚರಣೆ; ಕಾರ್ಯದಲ್= ಕೆಲಸದಲ್ಲಿ; ಅಲ್ಲದೆ=ಹಾಗೆ ಮಾಡದೆ;

ನೆನೆದ ಮಾತ್ರದಲಿ ಅಹುದೆ ಕಾರ್ಯದಲ್ಲಲ್ಲದೆ=ವ್ಯಕ್ತಿಯು ತನ್ನ ಮನದಲ್ಲಿ ಬಯಸಿದ ಕಾರಣದಿಂದಲೇ ಜೀವನದಲ್ಲಿ ಬಯಸಿದ್ದೆಲ್ಲವೂ ದೊರೆಯುವುದಿಲ್ಲ. ಮನದಲ್ಲಿ ಮೂಡಿದ ಆಸೆಯು ಈಡೇರಬೇಕಾದರೆ, ಅದಕ್ಕೆ ತಕ್ಕಂತೆ ಕೆಲಸದಲ್ಲಿ

ವ್ಯಕ್ತಿಯು ತನ್ನನ್ನು ತೊಡಗಿಸಿಕೊಂಡು ಪ್ರಾಮಾಣಿಕವಾಗಿ ಬಯಸಿದ್ದನ್ನು ಪಡೆಯುವ ತನಕ ದುಡಿಯಬೇಕು;

ಕುರುಡ=ಕಣ್ಣಿನ ದಿಟ್ಟಿ ಇಲ್ಲದವನು; ಕಾಣ್=ನೋಡು; ಕಾಣ=ನೋಡನು/ನೋಡುವುದಕ್ಕೆ ಆಗುವುದಿಲ್ಲ; ಪಥ=ದಾರಿ/ಮಾರ್ಗ/ಹಾದಿ;

ಹೆಳವ=ಕಾಲುಗಳಲ್ಲಿ ನಡೆಯಲು ಬೇಕಾದ ಕಸುವು ಇಲ್ಲದವನು; ನಡೆ+ಅಲ್+ಅರಿಯ; ನಡೆ=ಚಲಿಸು/ಮುಂದೆ ಸಾಗು; ನಡೆಯಲ್=ನಡೆದುಕೊಂಡು ಹೋಗಲು; ಅರಿಯ=ತಿಳಿಯನು/ಕಸುವು ಇಲ್ಲದವನು;

ಕುರುಡ ಕಾಣ ಪಥವ... ಹೆಳವ ನಡೆಯಲರಿಯ=ತಾನು ಸಾಗಿಹೋಗ ಬೇಕಾಗಿರುವ ದಾರಿಯನ್ನು ಕುರುಡನು ಕಾಣಲಾರ. ಹೆಳವನು ದಾರಿಯಲ್ಲಿ ನಡೆಯಲಾರ. ಆದುದರಿಂದ ಕುರುಡನ ಹೆಗಲ ಮೇಲೆ ಹೆಳವ ಕುಳಿತುಕೊಂಡು, ಸಾಗಬೇಕಾದ ಹಾದಿಯ ಜಾಡನ್ನು ಕುರುಡನಿಗೆ ಹೇಳುತ್ತ, ಇಬ್ಬರೂ ಒಬ್ಬರಿಗೊಬ್ಬರು ನೆರವಾದಾಗ ಮಾತ್ರ ತಲುಪಬೇಕಾದ ಜಾಗವನ್ನು/ನೆಲೆಯನ್ನು ಇಬ್ಬರೂ ಮುಟ್ಟಲು ಆಗುತ್ತದೆ; ಕುರುಡ ಮತ್ತು ಹೆಳವನು ಜತೆಗೂಡಿ ಸಾಗಬೇಕಾದ ಈ ಪ್ರಸಂಗವನ್ನು ವಚನಕಾರನು ಅರಿವು ಮತ್ತು ಕ್ರಿಯೆ ಜತೆಗೂಡಿದಾಗ ಮಾತ್ರ ವ್ಯಕ್ತಿಯು ಜೀವನದಲ್ಲಿ ಮುನ್ನಡೆಯಲು ಆಗುತ್ತದೆ ಎಂಬುದನ್ನು ನಿರೂಪಿಸಲು ಒಂದು ರೂಪಕವಾಗಿ ಬಳಸಿಕೊಂಡಿದ್ದಾನೆ.

ಒಂದು+ಇಲ್ಲದೆ+ಇರ್ದೊಡೆ+ಒಂದು+ಆಗದು; ಇರ್ದೊಡೆ=ಇದ್ದರೆ; ಇಲ್ಲದಿರ್ದೊಡೆ=ಇಲ್ಲದಿದ್ದರೆ; ಆಗು=ದೊರಕುವುದು; ಆಗದು=ದೊರಕುವುದಿಲ್ಲ; **ಒಂದಿಲ್ಲದಿರ್ದೊಡೊಂದಾಗದು**=ಎರಡರಲ್ಲಿ ಅಂದರೆ ಅರಿವು ಮತ್ತು ಕ್ರಿಯೆಗಳಲ್ಲಿ ಯಾವುದೇ ಒಂದು ಇಲ್ಲದಿದ್ದರೆ, ಜೀವನದಲ್ಲಿ ಒಳ್ಳೆಯದನ್ನು ಮಾಡಲಾಗುವುದಿಲ್ಲ/ಪಡೆಯಲಾಗುವುದಿಲ್ಲ;

ಜ್ಞಾನ+ಇಲ್ಲದೆ+ಇರ್ದ; ಇರ್ದ=ಇರುವ; ಜಡ=ಚಟುವಟಿಕೆಯಿಲ್ಲದ್ದು/ಉಸಿರಿಲ್ಲದ್ದು/ಚೇತನವಿಲ್ಲದ್ದು;

ಜ್ಞಾನವಿಲ್ಲದಿರ್ದ ಕ್ರೀ ಜಡನು=ಅರಿವನ್ನು/ತಿಳುವಳಿಕೆಯನ್ನು ಪಡೆಯದೆ ಮಾಡುವ ಕೆಲಸದಿಂದ ಯಾರಿಗೂ ಒಳಿತಾಗುವುದಿಲ್ಲ; ಕ್ರೀ+ಇಲ್ಲದ; ವಾಕ್=ನುಡಿ/ಮಾತು/ಸೊಲ್ಲು; ಜಾಲ=ಬಲೆ/ಹಕ್ಕಿಮೀನು ಮುಂತಾದುವನ್ನು ಹಿಡಿಯಲೆಂದು ನೂಲಿನಿಂದ ಹೆಣೆದಿರುವ ವಸ್ತು; ವಾಗ್ಜಾಲ=ಮಾತಿನ ಬಲೆ/

ಮಾತಿನ ಮೋಡಿಯಿಂದ ಜನರನ್ನು ಮರುಳುಗೊಳಿಸುವುದು ವಶಪಡಿಸಿ ಕೊಳ್ಳುವುದು; ಭ್ರಾಂತು=ತಪ್ಪು ತಿಳುವಳಿಕೆ/ಇಲ್ಲದ್ದನ್ನು ಇದೆಯೆಂದು– ಇರುವುದನ್ನು ಇಲ್ಲವೆಂದು ನಂಬಿರುವುದು;

ಕ್ರೀಯಿಲ್ಲದ ಜ್ಞಾನ ವಾಗ್ಜಾಲ ಭ್ರಾಂತು=ಮಾನವ ಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ ಕೆಲಸವನ್ನು ಮಾಡದೆ, ಕಲಿತ ನುಡಿಗಳನ್ನು ಸೊಗಸಾಗಿ ಆಡುವುದರಿಂದಲೇ ಒಳಿತನ್ನು ಹೊಂದುತ್ತೇನೆ ಎಂಬುದೊಂದು ತಪ್ಪು ತಿಳುವಳಿಕೆ. ಅಂದರೆ ಕೇವಲ ಮಾತಿನ ಮೋಡಿಯಿಂದಲೇ ಜೀವನದಲ್ಲಿ ಏಳಿಗೆಯನ್ನು/ನೆಮ್ಮದಿಯನ್ನು ಪಡೆಯಲಾಗುವುದಿಲ್ಲ;

ಕಾರಣ=ನಿಮಿತ್ತ/ಉದ್ದೇಶ/ಸಲುವಾಗಿ; **ಇದು ಕಾರಣ**=ಈ ರೀತಿ ಅರಿವು ಮತ್ತು ಕ್ರಿಯೆಗಳೆರಡೂ ಜೀವನಕ್ಕೆ ತುಂಬಾ ಅಗತ್ಯವಾದುದರಿಂದ; ಸೋಮನಾಥ ಲಿಂಗ=ಶಿವ/ವಚನಕಾರನ ಅಂಕಿತನಾಮ; ಕೂಡು=ಸೇರು/ಜತೆಯಾಗು; ಶರಣಂಗೆ=ಶರಣನಿಗೆ; ಶರಣ=ಒಳ್ಳೆಯ ನಡೆನುಡಿಗಳಿಂದ ಶಿವನನ್ನು ಪೂಜಿಸು ವವನು; **ಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು**=ದೇವರನ್ನು ಒಲಿಸಿಕೊಳ್ಳುವ ಶಿವಶರಣನು ತನ್ನ ಜೀವನದ ಉದ್ದಕ್ಕೂ ಒಳ್ಳೆಯ ಅರಿವನ್ನು ಹೊಂದುವ ಮತ್ತು ಒಳ್ಳೆಯ ದುಡಿಮೆಯನ್ನು ಮಾಡುವ ಎರಡು ಗುಣಗಳನ್ನು ಹೊಂದಿರಬೇಕು.

❖

27. ಶಿವನ ನೆನೆದಡೆ ಭವ ಹಿಂಗೂದೆಂಬ
ವಿವರಗೇಡಿಗಳ ಮಾತ ಕೇಳಲಾಗದು
ಹೇಳದಿರಯ್ಯ
ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ
ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ
ರಂಭೆಯ ನೆನೆದಡೆ ಕಾಮದ ಕಳವಳಡಗುವುದೆ
ಅಯ್ಯಾ ನೆನೆದರಾಗದು
ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ
ಸದ್ಗುರು ಸಿದ್ಧಸೋಮನಾಥಲಿಂಗನ ನೆನೆಯಬಾರದು.

ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿಯು ದೇವರ ಹೆಸರನ್ನು ನೆನೆಯುತ್ತ ಮಾಡುವ ಜಪ ತಪ ಪೂಜೆಯಿಂದ ಯಾವುದೇ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ತನ್ನ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನುಂಟುಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

ಶಿವ=ದೇವರ ಹೆಸರು; ನೆನೆ=ಮನಸ್ಸಿನಲ್ಲಿ ತಂದುಕೊಳ್ಳುವುದು/ಕಲ್ಪಿಸಿ ಕೊಳ್ಳುವುದು; ನೆನೆದಡೆ=ನೆನೆಸಿಕೊಂಡರೆ; ಭವ=ಸಂಸಾರ/ಇಹಲೋಕದ ಬದುಕು; ಹಿಂಗೂದು+ಎಂಬ; ಹಿಂಗು=ಪರಿಹಾರವಾಗು/ನಿವಾರಣೆಯಾಗು; ಹಿಂಗೂದು=ಹಿಂಗುವುದು/ನಿವಾರಣೆಯಾಗುವುದು;; ಎಂಬ=ಎನ್ನುವ/ಎಂದು ಹೇಳುವ; ಭವ ಹಿಂಗೂದು=ಜೀವನದಲ್ಲಿ ಸಂಕಟಗಳು ಇಲ್ಲವಾಗುವುದು;

ಶಿವನ ನೆನೆದಡೆ ಭವ ಹಿಂಗೂದೆಂಬ=ದೇವರಾದ ಶಿವನನ್ನು ಕುರಿತು ಜಪ ತಪ ಪೂಜೆಯನ್ನು ಮಾಡಿದರೆ ಸಾಕು, ವ್ಯಕ್ತಿಯ ಜೀವನದಲ್ಲಿ ಇಲ್ಲವೇ ಸಂಸಾರದಲ್ಲಿ ಬರುವ ಎಲ್ಲ ಬಗೆಯ ಎಡರುತೊಡರುಗಳು ಇಲ್ಲವಾಗಿ, ವ್ಯಕ್ತಿಯ ಬದುಕಿನಲ್ಲಿ ಆನಂದ ನೆಮ್ಮದಿಯು ದೊರಕುತ್ತದೆ ಎಂದು ಹೇಳುವ;

ವಿವರ+ಕೇಡಿಗಳ; ವಿವರ=ಯಾವುದೇ ಒಂದು ಸಂಗತಿಯನ್ನು ಮೊದಲಿನಿಂದ ಕೊನೆಯವರೆಗೂ ಏನೊಂದನ್ನು ಬಿಡದೆ ಹೇಳುವುದು; ಕೇಡಿ=ಕೆಟ್ಟದ್ದನ್ನು ಮಾಡುವ ವ್ಯಕ್ತಿ;

ವಿವರಗೇಡಿಗಳು=ಉಪಯುಕ್ತವಲ್ಲದ ಸಂಗತಿಗಳನ್ನು ಬಣ್ಣಿಸಿ ಹೇಳುವಂತಹ ಸುಳ್ಳುಗಾರರು; ದೇವರ ಹೆಸರಿನಲ್ಲಿ ಬಗೆಬಗೆಯ ಕಟ್ಟುಕತೆಗಳನ್ನು ಕಟ್ಟಿ, ದೇವರ ಮಹಿಮೆಯಿಂದ ಮತ್ತು ದೇವರು ಮಾಡುವ ಪವಾಡದಿಂದ ಜನರ ರೋಗರುಜಿನ, ಬಡತನ, ಸಂಕಟಗಳು ಪರಿಹಾರಗೊಂಡು, ಒಲವು ನಲಿವು ಸಂಪತ್ತು ದೊರೆಯುವುದೆಂಬ ನಂಬಿಕೆಯನ್ನು ಜನಮನದಲ್ಲಿ ಮೂಡಿಸುತ್ತ, ಜನರನ್ನು ಬಹುಬಗೆಯ ವ್ರತ, ಯಾಗ ಮತ್ತು ಇನ್ನಿತರ ಆಚರಣೆಗಳಲ್ಲಿ ತೊಡಗುವಂತೆ ಪ್ರೇರೇಪಿಸುವವರು;

ಮಾತ=ಮಾತನ್ನು/ನುಡಿಯನ್ನು; ಕೇಳಲ್+ಆಗದು; ಕೇಳಲಾಗದು= ಕೇಳುವುದಕ್ಕೆ ಆಗುವುದಿಲ್ಲ;

ವಿವರಗೇಡಿಗಳ ಮಾತ ಕೇಳಲಾಗದು=ತಾವು ಹಣವನ್ನು ಗಳಿಸುವುದಕ್ಕಾಗಿ ದೇವರ ಹೆಸರಿನಲ್ಲಿ ಕಟ್ಟುಕತೆಗಳನ್ನು ಕಟ್ಟಿ ಹೇಳುವವರ ಮಾತುಗಳನ್ನು ಕೇಳಬಾರದು. ಏಕೆಂದರೆ ಆ ರೀತಿ ಹೇಳುವವರು ದೇವರ ಹೆಸರಿನಲ್ಲಿ ಜನರನ್ನು ವಂಚಿಸುವ ವ್ಯಕ್ತಿಗಳಾಗಿರುತ್ತಾರೆ;

ಹೇಳದಿರಯ್ಯ=ವಿವರಗೇಡಿಗಳು ಆಡುವ ಮಾತುಗಳನ್ನು ಕೇಳಿಸಿಕೊಂಡರೂ, ಮತ್ತೊಮ್ಮೆ ಅದನ್ನು ನುಡಿಯಬೇಡ. ಏಕೆಂದರೆ ಆ ಮಾತುಗಳಲ್ಲಿ ಜಗತ್ತಿನ ವಾಸ್ತವದ ಸಂಗತಿಗಳಿಲ್ಲ;

ಜ್ಯೋತಿ=ಬೆಳಕು; ಕೆಡು=ನಾಶವಾಗು/ಇಲ್ಲವಾಗು; ಕೆಡುವುದೆ= ಇಲ್ಲವಾಗುವದೇ;

ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ=ಕತ್ತಲೆಯು ಕವಿದಿರುವ ಎಡೆಯಲ್ಲಿ ಬೆಳಕು ಬರಲಿ ಎಂದು ನೆನೆದ ಮಾತ್ರಕ್ಕೆ ಕತ್ತಲೆಯು ಹೋಗಿ ಬೆಳಕು ಬರುತ್ತದೆಯೇ;

ಇಷ್ಟ+ಅನ್ನವ; ಇಷ್ಟ=ಮೆಚ್ಚಿನ/ಬಯಸಿದ/ಪ್ರಿಯವಾದ; ಅನ್ನ=ತಿನ್ನುವ ಉಣ್ಣುವ ಕುಡಿಯುವ ಆಹಾರ;

ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ=ವ್ಯಕ್ತಿಯು ತಾನು ಹಸಿದಿರುವಾಗ ತನಗೆ ಪ್ರಿಯವಾದ ಉಣಿಸುತಿನಸುಗಳನ್ನು ನೆನೆದ ಮಾತ್ರಕ್ಕೆ ಹೊಟ್ಟೆ ತುಂಬುತ್ತದೆಯೇ;

ರಂಭೆ=ಇಂದ್ರನ ಅಮರಾವತಿ ಪಟ್ಟಣದಲ್ಲಿರುವ ಸುಂದರಳಾದ ಹೆಂಗಸು; ಕಾಮ=ಗಂಡು ಹೆಣ್ಣು ಪಡೆಯುವ ದೇಹದ ನಂಟು; ಕಳವಳ+ಅಡಗುವುದೆ;

ಕಳವಳ=ತಳಮಳ/ಚಿಂತೆ; ಅಡಗು=ಕೊನೆಗೊಳ್ಳು/ಇಲ್ಲವಾಗು; ಅಡಗುವುದೆ= ತೀರುವುದೆ;

ರಂಭೆಯ ನೆನೆದಡೆ ಕಾಮದ ಕಳವಳಡಗುವುದೆ=ಸುಂದರಿಯಾದ ಹೆಣ್ಣನ್ನು ನೆನೆದ ಮಾತ್ರಕ್ಕೆ ಗಂಡಿನ ದೇಹದಲ್ಲಿರುವ ಕಾಮದ ಬಯಕೆಯು ಈಡೇರುವುದೇ;

ವಚನಕಾರ ಅಮುಗಿ ದೇವಯ್ಯನವರು ಈ ವಚನದಲ್ಲಿ " ಜ್ಯೋತಿಯನ್ನು ನೆನೆಯುವುದರಿಂದ ಕತ್ತಲೆಯು ಹೋಗುತ್ತದೆಯೇ; ಮೆಚ್ಚಿನ ಉಣಿಸುತಿನಸನ್ನು ನೆನೆದ ಮಾತ್ರಕ್ಕೆ ಹೊಟ್ಟೆ ತುಂಬುತ್ತದೆಯೇ; ರಂಬೆಯನ್ನು ನೆನೆದ ಮಾತ್ರಕ್ಕೆ ಕಾಮದ ನಂಟು ದೊರೆಯುವುದೇ" ಎಂಬ ಮೂರು ರೂಪಕಗಳ ಮೂಲಕ ವ್ಯಕ್ತಿಯ ಒಳಿತಾಗಲಿ ಇಲ್ಲವೇ ಸಮಾಜದ ಏಳಿಗೆಯಾಗಲಿ ಜನರೆಲ್ಲರ ಒಳ್ಳೆಯ ನಡೆನುಡಿ ಗಳಿಂದ ಕೂಡಿದ ದುಡಿಮೆಯಿಂದ ದೊರೆಯುತ್ತದೆಯೇ ಹೊರತು ಕೇವಲ ದೇವರ ಹೆಸರನ್ನು ಜಪಿಸುವುದರಿಂದ ಪಡೆಯಲಾಗುವುದಿಲ್ಲ ಎಂಬುದನ್ನು ಚಿತ್ರಿಸಿದ್ದಾರೆ.

ಅಯ್ಯಾ=ಗಂಡಸನ್ನು ಮಾತನಾಡಿಸುವಾಗ ಒಲವು ನಲಿವನ್ನು ಸೂಚಿಸುವುದಕ್ಕಾಗಿ ಬಳಸುವ ಪದ;

ನೆನೆದರೆ+ಆಗದು; ನೆನೆದರಾಗದು=ನೆನೆಸಿಕೊಂಡು ಮಾತ್ರಕ್ಕೆ ಯಾವುದೇ ಕೆಲಸವಾಗಲಿ ಇಲ್ಲವೇ ಬಯಕೆಯಾಗಲಿ ನೆರವೇರುವುದಿಲ್ಲ; ನಿಜ+ಅಲ್ಲಿ; ನಿಜ=ವಾಸ್ತವ; ನಿರ್ಧರಿಸು=ನಿಶ್ಚಯಿಸು/ತೀರ್ಮಾನಿಸು;

ನಿಜದಲ್ಲಿ ನಿರ್ಧರಿಸಿ=ಮನಸ್ಸಿನಲ್ಲಿ ಮೂಡಿದ ಒಳ್ಳೆಯ ಒಳಮಿಡಿತಗಳಿಗೆ ತಕ್ಕಂತೆ, ಅವನ್ನು ಕಾರ್ಯರೂಪಕ್ಕೆ ತರಲು ಮಾಡಬೇಕಾದ ಪ್ರಯತ್ನವನ್ನು ಮಾಡಬೇಕೆಂಬ ಉದ್ದೇಶವನ್ನು ತಳೆದು;

ತಾನು=ವ್ಯಕ್ತಿಯು; ತಾನಾಗದ+ಅನ್ನಕ್ಕರ; ಅನ್ನಕ್ಕರ=ವರೆಗೆ / ಆ ತನಕ;

ತಾನು ತಾನಾಗುವುದು=ವ್ಯಕ್ತಿಯು ತನ್ನನ್ನು ತಾನು ಅರಿತುಕೊಳ್ಳುವುದು. ಅಂದರೆ ಮಾನವ ಜೀವಿಯಾಗಿ ತನ್ನನ್ನು ನಿಯಂತ್ರಿಸುತ್ತಿರುವ ಮತ್ತು ಮುನ್ನಡೆಸು ತ್ತಿರುವ ನಿಸರ್ಗದ ನಿಯಮ ಮತ್ತು ಸಮಾಜದ ಕಟ್ಟುಪಾಡುಗಳು ಯಾವುವು ಎಂಬುದನ್ನು ತಿಳಿದುಕೊಂಡು, ತನ್ನ ಜೀವನದ ಒಳಿತು ಕೆಡುಕು ಸಮಾಜದ ಒಳಿತು ಕೆಡುಕನ್ನು ಅವಲಂಬಿಸಿವೆ ಎಂಬ ವಾಸ್ತವವನ್ನು ಗ್ರಹಿಸಿಕೊಂಡು, ಒಳ್ಳೆಯ ನಡೆನುಡಿಗಳಿಂದ ಬಾಳುವುದು;

ಸದ್ಗುರು=ಒಳ್ಳೆಯ ಗುರು; ಸಿದ್ಧಸೋಮನಾಥಲಿಂಗ=ದೇವರಾದ ಶಿವನಿಗೆ ಇದ್ದ ಮತ್ತೊಂದು ಹೆಸರು / ಅಮುಗಿ ದೇವಯ್ಯನವರ ವಚನಗಳ ಅಂಕಿತನಾಮ;

ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ ಸದ್ಗುರು ಸಿದ್ಧಸೋಮನಾಥ ಲಿಂಗನ ನೆನೆಯಬಾರದು=ವ್ಯಕ್ತಿಯು ವಾಸ್ತವವನ್ನು ಅರಿತುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುವ ತನಕ ದೇವರನ್ನು ನೆನೆಯಬಾರದು.

ಈ ರೀತಿ ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ದೇವರಿಗೂ ಮತ್ತು ವ್ಯಕ್ತಿಯ ಒಳ್ಳೆಯ ನಡೆನುಡಿಗಳಿಗೂ ನಂಟನ್ನು ಕಲ್ಪಿಸಿದ್ದಾರೆ. ಅಂದರೆ ದೇವರನ್ನು ಪೂಜಿಸುವ ವ್ಯಕ್ತಿಯು ಒಳ್ಳೆಯ ನಡೆನುಡಿಯನ್ನು ಹೊಂದಿರಬೇಕು.

❖

6. ಅಮುಗೆ ರಾಯಮ್ಮ

ಊರು: ಸೊನ್ನಲಾಪುರ
ಗಂಡ: ಅಮುಗೆ ದೇವಯ್ಯ
ಕಸುಬು: ನೆಯ್ಗೆಯ ಕಾಯಕ
ದೊರೆತಿರುವ ವಚನಗಳು: 116
ವಚನಗಳ ಅಂಕಿತನಾಮ: ಅಮುಗೇಶ್ವರಾ

28. ಆಸೆಯುಳ್ಳವಂಗೆ ಮಾಟಕೂಟವಲ್ಲದೆ
ನಿರಾಶೆಯುಳ್ಳವಂಗೆ ಮಾಟಕೂಟವೇಕೆ
ಮನಪರಿಣಾಮಿಗೆ ಮತ್ಸರವೇಕೆ
ಸುತ್ತಿದ ಮಾಯಾ ಪ್ರಪಂಚವ ಜರಿದವಂಗೆ
ಅಂಗನೆಯರ ಹಿಂದು ಮುಂದು ತಿರುಗಲೇಕೆ
ಅಮುಗೇಶ್ವರನೆಂಬ ಲಿಂಗವನರಿದವಂಗೆ
ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗೇಕೆ.

ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಗೆ ದೇವರನ್ನು ಪೂಜಿಸುವ ಇಲ್ಲವೇ ಮಾಟಮಂತ್ರಗಳ ಆಚರಣೆಯಲ್ಲಿ ತೊಡಗುವ ಅಗತ್ಯವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ

ದುಡಿಮೆಯು ಅವನಿಗೆ, ಅವನ ಕುಟುಂಬಕ್ಕೆ ಒಲವು, ನಲಿವು ಮತ್ತು ನೆಮ್ಮದಿಯನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವುದು;

ಆಸೆ+ಉಳ್+ಅವಂಗೆ; ಆಸೆ=ಬಯಕೆ; ಉಳ್=ಇರು; ಅವಂಗೆ=ಅವನಿಗೆ/ ವ್ಯಕ್ತಿಗೆ;

ಆಸೆಯುಳ್ಳವಂಗೆ=ಸಂಪತ್ತನ್ನು ಗಳಿಸಬೇಕೆಂಬ, ಆಡಳಿತದ ಗದ್ದುಗೆಯನ್ನು ಏರಬೇಕೆಂಬ, ದೇಹದ ಕಾಮದ ತುಡಿತವನ್ನು ತೀರಿಸಿಕೊಳ್ಳಬೇಕೆಂಬ ಮತ್ತು ಇನ್ನಿತರ ಆಸೆಗಳನ್ನು ಮಯ್ ಮನದಲ್ಲಿ ತುಂಬಿಕೊಂಡಿರುವ ವ್ಯಕ್ತಿಗೆ;

ಮಾಟ+ಕೂಟ+ಅಲ್ಲದೆ; ಮಾಟ=ವ್ಯಕ್ತಿಯು ತನ್ನ ಆಸೆಗಳನ್ನು ಈಡೇರಿಸಿ ಕೊಳ್ಳಲೆಂದು ಮಂತ್ರ-ತಂತ್ರಗಳ ಮೂಲಕ ದೇವತೆ ಹೆಸರನ್ನು ಉಚ್ಚರಿಸುತ್ತ, ನರಬಲಿ ಇಲ್ಲವೇ ಪ್ರಾಣಿಬಲಿಯನ್ನು ಕೊಡುವಂತಹ ಕ್ರೂರವಾದ ಆಚರಣೆ; ಕೂಟ=ಇಂದ್ರಜಾಲ/ಮೋಸ; ಮಾಟಕೂಟ=ದೇವತೆಯನ್ನು ಒಲಿಸಿಕೊಳ್ಳಲು ಮಾಡುವ ಆಚರಣೆಗಳು. ವ್ಯಕ್ತಿಯು ತನ್ನ ಹಗೆಯನ್ನು ಕೊಲ್ಲಿಸುವುದಕ್ಕಾಗಿ ಇಲ್ಲವೇ ಹಗೆಯ ಸಂಪತ್ತನ್ನು ನಾಶಗೊಳಿಸುವುದಕ್ಕಾಗಿ ಇಲ್ಲವೇ ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮಂತ್ರವಾದಿಗಳಿಂದ ಮಾಡಿಸುವ ಬಹುಬಗೆಯ ಆಚರಣೆಗಳು; ಮನದ ಬಯಕೆಗಳನ್ನು ಈಡೇರಿಸಿಕೊಡಬಲ್ಲ ಶಕ್ತಿಯು ಕೆಲವು ದೇವತೆಗಳಲ್ಲಿದೆ ಎಂಬ ನಂಬಿಕೆಯು ಮಾನವ ಸಮುದಾಯದ ಮನದಲ್ಲಿ ನೆಲೆಗೊಂಡಿದೆ; ಅಲ್ಲದೆ=ಹೊರತು;

ನಿರಾಶೆ+ಉಳ್+ಅವಂಗೆ; ನಿರಾಶೆ=ಯಾವುದೇ ಬಗೆಯ ಕೆಟ್ಟ ಬಯಕೆಗಳು ಇಲ್ಲದಿರುವುದು; ಮಾಟಕೂಟ+ಏಕೆ;

ಆಸೆಯುಳ್ಳವಂಗೆ ಮಾಟಕೂಟವಲ್ಲದೆ ನಿರಾಶೆಯುಳ್ಳವಂಗೆ ಮಾಟಕೂಟವೇಕೆ= ಮನದಲ್ಲಿ ಬಹುಬಗೆಯ ಆಸೆಯುಳ್ಳವನು ಮಾಟಕೂಟಗಳಲ್ಲಿ ತೊಡಗುತ್ತಾನೆಯೇ ಹೊರತು, ಪರರ ಸಂಪತ್ತಿಗಾಗಿ ಹಂಬಲಿಸದ, ಆಡಳಿತದ ಗದ್ದುಗೆಯನ್ನು ಬಯಸದ ಇಲ್ಲವೇ ಶತ್ರುವಿನ ನಾಶಕ್ಕಾಗಿ ಹಾತೊರೆಯದ ವ್ಯಕ್ತಿಗೆ ಮಾಟಕೂಟ ಗಳನ್ನು ಮಾಡುವ ಅಗತ್ಯವೇ ಇಲ್ಲ; ಅಂದರೆ ಮಾಟಕೂಟಗಳಲ್ಲಿ ತೊಡಗುವ ವ್ಯಕ್ತಿಗಳು ತಮ್ಮ ಹಿತಕ್ಕಾಗಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ವ್ಯಕ್ತಿಗಳಾಗಿರುತ್ತಾರೆ;

ಮನ=ಮನಸ್ಸು; ಪರಿಣಾಮಿ=ತಾಳ್ಮೆಯ, ಸಮಚಿತ್ತದ, ಶಾಂತಿಯ

ನಡೆನುಡಿಯಿಂದ ಸಹಮಾನವರಿಗೆ ಒಳಿತನ್ನು ಮಾಡುವ ವ್ಯಕ್ತಿ; ಮನಪರಿಣಾಮಿ =ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುತ್ತಿರುವ ವ್ಯಕ್ತಿ; ಮತ್ಸರ+ಏಕೆ; ಮತ್ಸರ=ಹೊಟ್ಟೆಕಿಚ್ಚು/ಪರರಿಗೆ ಒಳಿತಾಗುವುದನ್ನು ಕಂಡು ಅಸೂಯೆಯಿಂದ ನರಳುತ್ತ, ಅವರಿಗೆ ಕೇಡನ್ನು ಬಗೆಯಲು ಚಿಂತಿಸುವುದು;

ಮನಪರಿಣಾಮಿಗೆ ಮತ್ಸರವೇಕೆ=ತಾಳ್ಮೆಯ ನಡೆನುಡಿಯುಳ್ಳ ವ್ಯಕ್ತಿಯಲ್ಲಿ ಮತ್ಸರದ ಒಳಮಿಡಿತಗಳು ಏಕಿರಬೇಕು? ಈ ಪ್ರಶ್ನೆಯು ಒಂದು ಸಾಮಾಜಿಕ ವಾಸ್ತವವನ್ನು ತಿಳಿಸುತ್ತಿದೆ. ಅದೇನೆಂದರೆ ಜಾತಿ, ಮತ, ದೇವರ ಹೆಸರಿನ ಸಾಮಾಜಿಕ ಒಕ್ಕೂಟಗಳಲ್ಲಿ ಉನ್ನತ ಗದ್ದುಗೆಯಲ್ಲಿರುವ ವ್ಯಕ್ತಿಗಳು ಹೊರನೋಟಕ್ಕೆ ಎಲ್ಲರೊಡನೆ ಪ್ರೀತಿ, ಕರುಣೆ ಮತ್ತು ಸಮಾನತೆಯಿಂದ ನಡೆದುಕೊಳ್ಳುವಂತೆ ಕಂಡುಬರುತ್ತಾರೆ. ಆದರೆ ಇನ್ನಿತರ ಜಾತಿ ಮತಕ್ಕೆ ಸೇರಿದ ಮತ್ತು ತಮ್ಮದಲ್ಲದ ದೇವರನ್ನು ಪೂಜಿಸುವ ಜನಸಮುದಾಯದ ಬಗ್ಗೆ ಅತ್ಯಂತ ಆಕ್ರೋಶ, ಅಸೂಯೆ, ತಿರಸ್ಕಾರ ಮತ್ತು ಕ್ರೂರತನದಿಂದ ನಡೆದುಕೊಳ್ಳುತ್ತಾರೆ;

ಸುತ್ತಿದ=ಆವರಿಸಿದ/ಕೂಡಿರುವ; ಮಾಯಾ/ಮಾಯೆ=ಇಲ್ಲದ್ದನ್ನು ಇದೆಯೆಂದು, ಇರುವುದನ್ನು ಇಲ್ಲವೆಂದು ತಿಳಿಯುವಂತೆ ಮಾಡುವುದು; ಪ್ರಪಂಚ=ಜಗತ್ತು; ಜರಿ+ದ+ಅವಂಗೆ; ಜರಿ=ನಿಂದಿಸು/ತೆಗಳು; ಅಂಗನೆ=ಹೆಣ್ಣು; ತಿರುಗಲ್+ಏಕೆ; ತಿರುಗು=ಅಲೆದಾಡು/ಸುತ್ತು/ಹಿಂದೆ ಹೋಗು;

ಸುತ್ತಿದ ಮಾಯಾ ಪ್ರಪಂಚವ ಜರಿದವಂಗೆ ಅಂಗನೆಯರ ಹಿಂದು ಮುಂದು ತಿರುಗಲೇಕೆ="ಈ ಜಗತ್ತಿನಲ್ಲಿ ಇರುವುದನ್ನು ದಿಟವೆಂದು ನಂಬಬೇಡಿರಿ. ಇದೆಲ್ಲವೂ ಕೇವಲ ಕಣ್ಕಟ್ಟು. ಇದಾವುದು ಶಾಶ್ವತವಲ್ಲ. ಎಲ್ಲವೂ ನಶ್ವರ. ಆದ್ದರಿಂದ ಹೆಣ್ಣು ಹೊನ್ನು ಮಣ್ಣಿನಿಂದ ದೂರವಿರಬೇಕು" ಎಂಬ ವಿರಕ್ತಿಯ ಮಾತುಗಳನ್ನಾಡುತ್ತಿರುವ ವ್ಯಕ್ತಿಯು ತನ್ನ ದೇಹದ ಕಾಮವನ್ನು ಹಿಂಗಿಸಿಕೊಳ್ಳಲು ಹೆಣ್ಣುಗಳಿಗಾಗಿ ಹಂಬಲಿಸುವುದೇಕೆ; ವಿರಕ್ತರಂತೆ ಉಡುಗೆತೊಡುಗೆಗಳನ್ನು ತೊಟ್ಟು, "ಈ ಜಗತ್ತೆಲ್ಲವೂ ಮಾಯೆ" ಎಂದು ಜನಗಳ ಮುಂದೆ ಬಹಿರಂಗದಲ್ಲಿ ಹೇಳುತ್ತ, ನಿಜ ಜೀವನದಲ್ಲಿ ಸಕಲ ಬಗೆಯ ಸವಲತ್ತುಗಳನ್ನು ಹೊಂದಿ, ಅಂತರಂಗದಲ್ಲಿ ಎಲ್ಲ ಬಗೆಯ ಕಾಮನೆಗಳಲ್ಲಿಯೂ ಮುಳುಗಿರುವ ವಂಚಕರ ಕೆಟ್ಟ ನಡೆನುಡಿಗಳನ್ನು ಪ್ರಶ್ನಿಸಲಾಗಿದೆ;

ಅಮುಗೇಶ್ವರನ್+ಎಂಬ; ಅಮುಗೇಶ್ವರ=ಶಿವ/ಅಮುಗೆ ರಾಯಮ್ಮನವರ ವಚನಗಳ ಅಂಕಿತನಾಮ; ಎಂಬ=ಎನ್ನುವ; ಲಿಂಗ+ಅನ್+ಅರಿದ+ಅವಂಗೆ;

ಲಿಂಗ=ಶಿವ; ಅನ್=ಅನ್ನು; ಅರಿದ=ತಿಳಿದ; ಲಿಂಗವನರಿದವಂಗೆ=ಲಿಂಗವನ್ನು ತಿಳಿದವನಿಗೆ;

ಅಷ್ಟ+ವಿಧ+ಅರ್ಚನೆ; ಅಷ್ಟ=ಎಂಟು; ವಿಧ=ಬಗೆ/ರೀತಿ; ಅರ್ಚನೆ=ಪೂಜೆ; ಅಷ್ಟವಿಧಾರ್ಚನೆ=ಅರಿಸಿನ ಬೆರೆತಿರುವ ಅಕ್ಕಿ, ನೀರು, ಗಂಧ, ಹೂವು, ದೂಪ, ದೀಪ, ಹಣ್ಣುಕಾಯಿ, ತಾಂಬೂಲ–ಈ ಎಂಟು ವಸ್ತುಗಳನ್ನು ಬಳಸಿ ಮಾಡುವ ಪೂಜೆ; ಷೋಡಶ+ಉಪಚಾರದ; ಷೋಡಶ=ಹದಿನಾರು; ಉಪಚಾರ=ಸೇವೆ; ಷೋಡಶೋಪಚಾರ=ದೇವರ ವಿಗ್ರಹಕ್ಕೆ ಹದಿನಾರು ಬಗೆಯಲ್ಲಿ ಸೇವೆಯನ್ನು ಮಾಡುವುದು; ಹಂಗು+ಏಕೆ; ಹಂಗು=ರುಣ/ಅವಲಂಬನೆ;

ಅಮುಗೇಶ್ವರನೆಂಬ ಲಿಂಗವನರಿದವಂಗೆ ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗೇಕೆ= ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ತಿಳಿದು ಬಾಳುತ್ತಿರುವ ವ್ಯಕ್ತಿಗೆ ದೇವರನ್ನು ಒಲಿಸಿಕೊಳ್ಳಲೆಂದು ಇಲ್ಲವೇ ದೇವರ ಅನುಗ್ರಹವನ್ನು ಪಡೆಯಲೆಂದು ಜನರು ಮಾಡುತ್ತಿರುವ ಯಾವುದೇ ಬಗೆಯ ಆಚರಣೆಗಳ ಅಗತ್ಯವಿಲ್ಲ. ಏಕೆಂದರೆ ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ನಿಲುವಿನಲ್ಲಿ ವ್ಯಕ್ತಿಯು ಒಳ್ಳೆಯ ನಡೆನುಡಿಯಿಂದ ಬಾಳುವುದೇ ದೇವರಿಗೆ ಮಾಡುವ ಪೂಜೆಯಾಗಿತ್ತು.

❖

29. ಶೀಲವಂತನಾದಡೆ ಜಾತಿಯ ಬಿಡಬೇಕು
ಶಿವಜ್ಞಾನಿಯಾದಡೆ ಸಮಯವ ಬಿಡಬೇಕು
ಹೀಂಗಲ್ಲದೆ ಜಗದಲ್ಲಿ ನಡೆವ ಭ್ರಾಂತರ ಸುದ್ದಿಯೇಕೆ
ನಿಭ್ರಾಂತನಾದ ಶರಣಂಗೆ ಅಮುಗೇಶ್ವರಾ.

ಒಳ್ಳೆಯ ನಡೆನುಡಿಗಳಿಂದ ಕೂಡಿ ಶಿವನನ್ನು ಪೂಜಿಸುವ ವ್ಯಕ್ತಿಯು ಜಾತಿಮತದ ಕಟ್ಟುಪಾಡುಗಳನ್ನು, ಸಂಪ್ರದಾಯಗಳನ್ನು ಮತ್ತು ಆಚರಣೆಗಳನ್ನು ಬಿಟ್ಟು ಬಾಳಬೇಕು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಶೀಲವಂತನ್+ಆದಡೆ; ಶೀಲವಂತ=ಒಳ್ಳೆಯ ನಡೆನುಡಿಯುಳ್ಳವನು. ಅಂದರೆ ತಾನು ಆಡುವ ಮಾತಿನಿಂದ ಮತ್ತು ಮಾಡುವ ದುಡಿಮೆಯಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವವನು;

ಆದಡೆ=ಆಗಿದ್ದರೆ; ಜಾತಿ=ಸಮಾಜದಲ್ಲಿರುವ ಜನಸಮುದಾಯವನ್ನು ಮೇಲು ಕೀಳು ಎಂದು ವಿಂಗಡಿಸಿರುವ ಒಂದು ಸಾಮಾಜಿಕ ಒಕ್ಕೂಟ; ಈ ಒಕ್ಕೂಟದಲ್ಲಿ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಎಂಬ ನಾಲ್ಕು ವರ್ಣಗಳು ಮತ್ತು ಚಂಡಾಲರು ಎಂಬ ಮತ್ತೊಂದು ವರ್ಗವಿತ್ತು. ಇವು ಕಾಲದಿಂದ ಕಾಲಕ್ಕೆ ಕವಲೊಡೆದು ನೂರೆಂಟು ಬಗೆಯ ಜಾತಿಗಳಾಗಿ ಸಾವಿರಾರು ಬಗೆಯ ಉಪಜಾತಿಗಳಾಗಿ ರೂಪುಗೊಂಡು ಜನಸಮುದಾಯದ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಬಿಡು=ತೊರೆ/ತ್ಯಜಿಸು;

ಶೀಲವಂತನಾದಡೆ ಜಾತಿಯ ಬಿಡಬೇಕು=ಶೀಲವಂತನಾದವನು ಸಮಾಜದಲ್ಲಿ ಮತ್ತೊಬ್ಬರೊಡನೆ ವ್ಯವಹರಿಸುವಾಗ, ಅವರು ತನ್ನ ಜಾತಿಗಿಂತಲೂ ಮೇಲಿನ ಜಾತಿಯವರು ಎಂಬ ಕಾರಣಕ್ಕಾಗಿ ಕೀಳರಿಮೆಯಿಂದ ಕುಗ್ಗಿ ಹಿಂಜರಿಯಬಾರದು ಇಲ್ಲವೇ ಅವರು ತನ್ನ ಜಾತಿಗಿಂತಲೂ ಕೆಳ ಜಾತಿಯವರು ಎಂಬ ಕಾರಣಕ್ಕಾಗಿ ಮೇಲರಿಮೆಯಿಂದ ಹಿಗ್ಗಿ ಅಹಂಕಾರದಿಂದ ಮೆರೆಯಬಾರದು. ಜಾತಿಯೆಂಬುದು ಮಾನವರೇ ಕಟ್ಟಿಕೊಂಡಿರುವ ಒಂದು ಒಕ್ಕೂಟವೇ ಹೊರತು ನಿಸರ್ಗ ಸಹಜವಲ್ಲ ಎಂಬ ವಾಸ್ತವವನ್ನು ಅರಿತುಕೊಂಡು, ಜಾತಿಯ ನೆಲೆಯಲ್ಲಿ ತಾನು ಯಾರಿಗಿಂತಲೂ ಮೇಲಲ್ಲ ಇಲ್ಲವೇ ಕೀಳಲ್ಲ ಎಂಬ ನಿಲುವನ್ನು ಹೊಂದಿ, ಜಾತಿಯನ್ನು ಕಡೆಗಣಿಸಬೇಕು;

ಶಿವಜ್ಞಾನಿ+ಆದಡೆ; ಶಿವ=ಈಶ್ವರ; ಜ್ಞಾನಿ=ತಿಳಿದವನು; ಶಿವಜ್ಞಾನಿ=ಒಳ್ಳೆಯ ನಡೆನುಡಿಗಳಿಂದ ಬಾಳುವುದೇ ಶಿವಪೂಜೆಯೆಂದು ಅರಿತು ಬಾಳುತ್ತಿರುವವನು; ಸಮಯ=ಮತ/ಧರ್ಮ;

ಶಿವಜ್ಞಾನಿಯಾದಡೆ ಸಮಯವ ಬಿಡಬೇಕು=ಶಿವನನ್ನು ಪೂಜಿಸುವ ವ್ಯಕ್ತಿಯು ನೂರೆಂಟು ಜಾತಿಗಳ ಹೆಣಿಗೆಯಿಂದಾಗಿರುವ ಮತದಲ್ಲಿ ಹೇಳಿರುವಂತೆ ಬಗೆ ಬಗೆಯ ಯಾಗ, ವ್ರತ ಮತ್ತು ಇನ್ನಿತರ ಪೂಜೆಯ ಆಚರಣೆಗಳಲ್ಲಿ ತೊಡಗ ಬಾರದು; ಏಕೆಂದರೆ ಅಂತಹ ಆಚರಣೆಗಳಲ್ಲಿ ದೇವರು ಇಲ್ಲ; ದೇವರ ಇರುವಿಕೆಯು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ನಡೆನುಡಿಗಳಲ್ಲಿ ಕಂಡುಬರುತ್ತದೆ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು;

ಹೀಂಗೆ+ಅಲ್ಲದೆ; ಹೀಂಗೆ=ಈ ರೀತಿ; ಅಲ್ಲದೆ=ಹೊರತು;

ಹೀಂಗಲ್ಲದೆ=ಈ ರೀತಿ ಜಾತಿ ಮತಗಳನ್ನು ಬಿಟ್ಟು ಎಲ್ಲರೊಡನೆ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳದೆ;

ಜಗ+ಅಲ್ಲಿ; ಜಗ=ಲೋಕ/ಪ್ರಪಂಚ; ನಡೆ=ವ್ಯವಹರಿಸು; ಭ್ರಾಂತ= ಇರುವುದನ್ನು ಇಲ್ಲವೆಂದು, ಇಲ್ಲದಿರುವುದನ್ನು ಇದೆಯೆಂದು ನಂಬಿರುವುದು; **ಜಗದಲ್ಲಿ ನಡೆವ ಭ್ರಾಂತರು**=ಜಾತಿಮತಗಳೇ ದಿಟವೆಂದು ನಂಬಿ, ಮೇಲು ಕೀಳಿನ ತಾರತಮ್ಯವನ್ನು ಒಪ್ಪಿಕೊಂಡು ಬಾಳುವವರು; ಸುದ್ದಿ+ಏಕೆ; ಸುದ್ದಿ=ಸಮಾಚಾರ/ ಸಂಗತಿ; ಏಕೆ=ಏತಕ್ಕೆ; ಸುದ್ದಿಯೇಕೆ=ಸಮಾಚಾರವಾಗಲಿ ಇಲ್ಲವೇ ಸಹವಾಸ ವಾಗಲಿ ಬೇಕಾಗಿಲ್ಲ;

ನಿಭ್ರಾಂತನ್+ಆದ; ನಿಭ್ರಾಂತ=ವಾಸ್ತವವನ್ನು ಅರಿತವನು; ಕಣ್ಣ ಮುಂದಿನ ಜಗತ್ತಿನಲ್ಲಿ ಮತ್ತು ಸಮಾಜದಲ್ಲಿ ಯಾವುದು ನಿಸರ್ಗ ನಿರ್ಮಿತ ಮತ್ತು ಯಾವುದು ಮಾನವ ನಿರ್ಮಿತ ಎಂಬುದನ್ನು ತಿಳಿದವನು; ಶರಣಂಗೆ=ಶರಣನಿಗೆ; ಶರಣ=ಒಳ್ಳೆಯ ನಡೆನುಡಿಯಲ್ಲಿ ಶಿವನನ್ನು ಕಾಣುವವನು; ಅಮುಗೇಶ್ವರ=ಶಿವನ ಮತ್ತೊಂದು ಹೆಸರು/ಅಮುಗೆ ರಾಯಮ್ಮನ ವಚನಗಳ ಅಂಕಿತನಾಮ;

ನಿಭ್ರಾಂತನಾದ ಶರಣಂಗೆ ಜಗದಲ್ಲಿ ನಡೆವ ಭ್ರಾಂತರ ಸುದ್ದಿಯೇಕೆ=ಈ ಜಗತ್ತಿನ ವ್ಯವಹಾರದಲ್ಲಿ ಜಾತಿಯ ಕಟ್ಟುಪಾಡುಗಳನ್ನೇ ದಿಟವೆಂದು ನಂಬಿರುವ ಮತ್ತು ಮತದ ಆಚರಣೆಗಳನ್ನೇ ದೊಡ್ಡದಾಗಿ ಮೆರೆಸುವ ವ್ಯಕ್ತಿಗಳು, ಇತರ

ಜಾತಿಮತದವರ ಬಗ್ಗೆ ತೀವ್ರವಾದ ಅಸಹನೆ, ಆಕ್ರೋಶ, ಹಗೆತನ ಮತ್ತು ಸೇಡನ್ನು ಹೊಂದಿರುತ್ತಾರೆ. ಆದ್ದರಿಂದ ಅಂತಹ ಕ್ರೂರತನದ ನಡೆನುಡಿಯುಳ್ಳ ವ್ಯಕ್ತಿಗಳೊಡನೆ ವಾಸ್ತವವನ್ನು ಅರಿತು ಬಾಳುತ್ತಿರುವ ಶೀಲವಂತನಾದ ಶಿವಶರಣನು ವ್ಯವಹರಿಸಲು ಇಲ್ಲವೇ ಒಡನಾಡಲು ಆಗುವುದಿಲ್ಲವೆಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತಿವೆ.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಜಾತಿಯನ್ನು ಸಾಮಾಜಿಕ ಕೆಡುಕಿನ ಸಂಗತಿಯನ್ನಾಗಿ ಗುರುತಿಸಿದ್ದರು. ಏಕೆಂದರೆ ಮೇಲಿನ ಜಾತಿಯವರಿಗೆ ಮಾತ್ರ ವಿದ್ಯೆ, ಸಂಪತ್ತು ಮತ್ತು ರಾಜಕೀಯ ಗದ್ದುಗೆಯನ್ನು ಪಡೆಯುವ ಅವಕಾಶವಿತ್ತು. ಕೆಳಜಾತಿಯವರು ಮೇಲಿನ ಜಾತಿಯವರ ಸೇವೆಯನ್ನು ಮಾಡುವ ದಾಸರಾಗಿದ್ದರೇ ಹೊರತು ಯಾವುದೇ ಬಗೆಯ ಹಕ್ಕುಗಳನ್ನಾಗಲಿ ಇಲ್ಲವೇ ಸವಲತ್ತುಗಳನ್ನಾಗಲಿ ಹೊಂದಿರಲಿಲ್ಲ. ಕೆಳಜಾತಿಯವರ ಹಸಿವು, ಬಡತನ ಮತ್ತು ಅಪಮಾನದ ಬದುಕಿಗೆ ಜಾತಿ ವ್ಯವಸ್ಥೆಯೇ ದೊಡ್ಡ ಕಾರಣವಾಗಿತ್ತು. ಆದ್ದರಿಂದ ಶಿವಶರಣಶರಣೆಯರು ಮೇಲು ಕೀಳಿನ ಮೆಟ್ಟಿಲುಗಳಿಂದ ಕೂಡಿದ ಜಾತಿ ವ್ಯವಸ್ಥೆಯನ್ನು ತೊಡೆದುಹಾಕಿ, ಒಳ್ಳೆಯ ನಡೆನುಡಿಗಳಿಂದ ಕೂಡಿದ ಸರ್ವ ಸಮಾನತೆಯ ಸಮಾಜವನ್ನು ರೂಪಿಸಲು ಪಣತೊಟ್ಟಿದ್ದರು.

❖

30. ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ
ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ
ಎನ್ನ ಮನದಲ್ಲಿದ್ದ ಮಾಯಾ ಪ್ರಪಂಚುವ
ಕೆಡಿಸುವವರನಾರನೂ ಕಾಣೆನಯ್ಯಾ
ಆದ್ಯರ ವೇದ್ಯರ ವಚನಗಳಿಂದ
ಅರಿದೆವೆಂಬರು ಅರಿಯಲಾರರು ನೋಡಾ
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೆ ಕಳೆಯಬೇಕು
ಅಮುಗೇಶ್ವರಲಿಂಗವ ನಾನೆ ಅರಿಯಬೇಕು.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಬರುವ ಎಡರುತೊಡರುಗಳನ್ನು ತಾನೇ ಎದುರಿಸಿ; ತನ್ನನ್ನು ಕಾಡುವ ಸಂಕಟವನ್ನು ತಾನೇ ನಿವಾರಿಸಿಕೊಂಡು; ತನ್ನ ಮಯ್ ಮನಗಳಲ್ಲಿ ತುಡಿಯುವ ಒಳಮಿಡಿತಗಳನ್ನು ತಾನೇ ಹತೋಟಿಯಲ್ಲಿಟ್ಟುಕೊಂಡು; ತನ್ನ ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳುವ ಹೊಣೆಗಾರಿಕೆಯನ್ನು ತಾನೇ ಹೊರಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಎನ್ನ=ನನ್ನ; ಕಣ್ಣು+ಒಳಗಣ; ಒಳಗಣ=ಒಳಗಿರುವ/ಒಳಗೆ ಚುಚ್ಚಿ ಕೊಂಡಿರುವ; ಕಟ್ಟಿಗೆ=ಮರದ ತೆಳ್ಳಗಿನ ಹಾಗೂ ಚಿಕ್ಕದಾದ ಚೂರು/ಸಿವುರು/ಚೆಕ್ಕೆ; ಮುರಿವ+ಅವರ+ಆರನೂ; ಮುರಿ=ಕೀಳು/ಈಚೆಗೆ ತೆಗೆ; ಆರು=ಯಾರು; ಆರನೂ=ಯಾರೊಬ್ಬರನ್ನೂ; ಕಾಣ್+ಎ; ಕಾಣು=ನೋಡು; ಕಾಣೆ=ನೋಡಿಲ್ಲ/ ಕಂಡಿಲ್ಲ;

ಕಾಲ್+ಒಳಗಣ; ಕಾಲು=ಅಡಿ/ಪಾದ; ಕಾಲೊಳಗಣ=ಪಾದಕ್ಕೆ ಹೊಕ್ಕಿ ಕೊಂಡಿರುವ; ಮುಳ್ಳು+ಅ; ಮುಳ್ಳು=ಹರಿತವಾದ ಮೊನೆಯುಳ್ಳ ವಸ್ತು; ತೆಗೆವ+ಅವರು+ಆರನೂ; ತೆಗೆ=ಈಚೆಗೆ ಕೀಳು/ಹೊರಕ್ಕೆ ಬರುವಂತೆ ಮಾಡು;

ಅಂಗದಲ್ಲಿ+ಇದ್ದ; ಅಂಗ=ದೇಹ/ಶರೀರ/ಮಯ್; ಇದ್ದ=ಇರುವ/ ನೆಲೆಗೊಂಡಿರುವ; ಅಹಂಕಾರ=ಎಲ್ಲವೂ ನನ್ನಿಂದಲೇ ನಡೆಯುತ್ತಿದೆ/ನಾನೇ

ಎಲ್ಲರಿಗಿಂತ ಮೇಲು ಎಂಬ ಒಳಮಿಡಿತ ಸುಡುವ+ ವರನು+ಆರನೂ; ಸುಡು=ಬೆಂಕಿಯ ಉರಿಯಲ್ಲಿ ಬೇಯಿಸು/ನಾಶಪಡಿಸು/ಇಲ್ಲದಂತೆ ಮಾಡು;

ಮನದಲ್ಲಿ+ಇದ್ದ; ಮನ=ಮನಸ್ಸು; ಮಾಯಾ=ಮಾಯೆಯಿಂದ ಕೂಡಿದ; ಮಾಯೆ=ಮಯ್ ಮನಗಳಲ್ಲಿ ಬಯಕೆಗಳನ್ನು ಕೆರಳಿಸಿ, ತಮ್ಮತ್ತ ಸೆಳೆಯುವಂತಹ ವಸ್ತು/ಜೀವಿ/ಸಂಗತಿಗಳು; ಪ್ರಪಂಚು=ಬದುಕು/ಸಂಸಾರ/ಜೀವನ; ಪ್ರಪಂಚುವ= ಪ್ರಪಂಚವನ್ನು/ಬದುಕನ್ನು/ಜೀವನವನ್ನು; **ಮಾಯಾ ಪ್ರಪಂಚ**=ಮಾನವ ಜೀವಿಗಳ ಮಯ್ ಮನಗಳಲ್ಲಿ ಬಗೆಬಗೆಯಾದ ವ್ಯಾಮೋಹಗಳನ್ನು ಉಂಟು ಮಾಡಿ ಕಾಮನೆಗಳನ್ನು ಕೆರಳಿಸಿ, ತೊಳಲಾಡುವಂತೆ ಮಾಡುವ ವಸ್ತು/ಜೀವಿ/ ಸಂಗತಿಗಳಿಂದ ತುಂಬಿರುವ ಜಗತ್ತು; ಕೆಡಿಸುವ+ವರನು+ಆರನೂ; ಕೆಡಿಸು=ನಾಶಗೊಳಿಸು/ಅಳಿಸಿಹಾಕು/ಇಲ್ಲದಂತೆ ಮಾಡು; ಕಾಣೆನ್+ಅಯ್ಯಾ; ಕಾಣೆನು=ನೋಡಿಲ್ಲ/ಕಂಡಿಲ್ಲ; ಅಯ್ಯಾ=ಗಂಡಸರೊಡನೆ ಮಾತನಾಡುವಾಗ ಒಲವು ನಲಿವಿನ ಸೂಚಕವಾಗಿ ಬಳಸುವ ಪದ;

ಆದ್ಯರು=ಹಿಂದಿನವರು/ಪೂರ್ವಿಕರು/ಹಿರಿಯರು; ವೇದ್ಯರು=ತಿಳಿದವರು/ ಅರಿತವರು/ಲೋಕದ ನಡೆನುಡಿಗಳನ್ನು ಒರೆಹಚ್ಚಿ ನೋಡಿ, ಯಾವುದು ಒಳಿತು/ ಯಾವುದು ಕೆಡುಕು ಎಂಬುದನ್ನು ಜನಸಮುದಾಯಕ್ಕೆ ಹೇಳಿದವರು; ವಚನಗಳ್+ಇಂದ; ವಚನ=ನುಡಿ/ಮಾತು; ಅರಿದೆವು+ಎಂಬರು; ಅರಿ=ತಿಳಿ; ಅರಿದೆವು=ತಿಳಿದುಕೊಂಡೆವು/ಅರಿತುಕೊಂಡೆವು; ಎಂಬರು=ಎನ್ನುವವರು/ ಎಂದು ಹೇಳುವವರು; ಅರಿಯಲ್+ಆರರು; ಆರು=ಶಕ್ತಿಯುಳ್ಳವನಾಗು/ಕಸುವು ಉಳ್ಳವನಾಗು; ಆರರು=ಶಕ್ತಿಯಿಲ್ಲದವರು; ಅರಿಯಲ್=ತಿಳಿಯಲು; ಅರಿಯ ಲಾರರು=ತಿಳಿಯಲಾರರು/ತಿಳಿಯುವದಕ್ಕೆ ಆಗುವುದಿಲ್ಲ; ನೋಡು+ಆ; ನೋಡಾ=ಚೆನ್ನಾಗಿ ಆಲೋಚಿಸಿದಾಗ ತಿಳಿದುಬರುವ ಸಂಗತಿ;

“ಆದ್ಯರ ವೇದ್ಯರ ವಚನಗಳಿಂದ ಅರಿದೆವೆಂಬರು ಅರಿಯಲಾರರು ನೋಡಾ” ಎಂಬ ಈ ನುಡಿಗಳು ಯಾವುದೇ ಒಬ್ಬ ವ್ಯಕ್ತಿಯು ಇತರರು ಆಡಿರುವ ನುಡಿಗಳನ್ನು ಕೇಳಿದ ಮಾತ್ರಕ್ಕೆ ಇಲ್ಲವೇ ಬರೆದಿರುವ ವಿಚಾರಗಳನ್ನು ಓದಿದ ಮಾತ್ರಕ್ಕೆ ಅವನಲ್ಲಿರುವ ಕೆಟ್ಟಗುಣಗಳು ತೊಲಗುವುದಿಲ್ಲ. ಕೇಳುವುದರಿಂದ/ ಓದುವುದರಿಂದ ಪಡೆದ ಅರಿವನ್ನು ವ್ಯಕ್ತಿಯು ತನ್ನ ನಿಜದ ಬದುಕಿನಲ್ಲಿ ಅಳವಡಿಸಿಕೊಂಡು ಆಚರಣೆಗೆ ತಂದಾಗ ಮಾತ್ರ ವಚನಗಳನ್ನು ಅರಿತಂತಾಗುತ್ತದೆ ಎಂಬ ಇಂಗಿತವನ್ನು ಸೂಚಿಸುತ್ತಿವೆ;

ನಾನೆ=ನನ್ನಿಂದಲೇ/ನಾನು ಮಾಡುವ ಪ್ರಯತ್ನದಿಂದಲೇ/ನಾನು ಮಾಡುವ ಕಾಯಕದಿಂದಲೇ/ನಾನು ತೊಡುವ ಸಂಕಲ್ಪದಿಂದಲೇ/ನನ್ನ ಪರಿಶ್ರಮದಿಂದಲೇ/ನನ್ನ ಮಯ್ ಮನಗಳನ್ನು ಹತೋಟಿಯಲ್ಲಿಟ್ಟುಕೊಂಡು ಆಡುವ ಮಾತು ಮತ್ತು ಕೆಲಸಗಳಿಂದಲೇ; ಅಂಗದಲ್ಲಿ+ಇಪ್ಪ; ಇಪ್ಪ=ಇರುವ/ನೆಲೆಗೊಂಡಿರುವ; ಮನದಲ್ಲಿ +ಇಪ್ಪ; ಕಳೆ=ಬಿಡು/ತೊರೆ/ತಳ್ಳು;

ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೆ ಕಳೆಯಬೇಕು=ಮನದಲ್ಲಿ ಯಾವಾಗಲೂ ತುಡಿಯುತ್ತಿರುವ ಬಯಕೆ/ಕಾಮನೆ/ವ್ಯಾಮೋಹವನ್ನು ಹತೋಟಿಯಲ್ಲಿಟ್ಟುಕೊಂಡು, ಕೆಟ್ಟ ಆಸೆಗಳನ್ನು ಅಂದರೆ ನನ್ನನ್ನು ಒಳಗೊಂಡಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟು ಮಾಡುವಂತಹ ಒಳಮಿಡಿತಗಳನ್ನು ಬಿಡಬೇಕು; ಕಳೆಯಬೇಕು=ಬಿಡಬೇಕು/ತೊರೆಯಬೇಕು/ಹೊರದೂಡಬೇಕು;

ಅಮುಗೇಶ್ವರ=ಅಮುಗೆ ರಾಯಮ್ಮನ ಮೆಚ್ಚಿನ ದೇವರ ಹೆಸರು/ಅಮುಗೆ ರಾಯಮ್ಮನ ವಚನಗಳ ಅಂಕಿತನಾಮ; ಅಮುಗೇಶ್ವರಲಿಂಗವ ಅರಿಯಬೇಕು=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ತಿಳಿದು ಬಾಳಬೇಕು.)

❖

31. ಕನ್ನವನಿಕ್ಕುವ ಕಳ್ಳನು ಕನ್ನಗಳ್ಳನೆಂದು ಉಸುರುವನೆ
ಅನ್ಯರ ಕೂಡೆ ಬಣ್ಣಬಚ್ಚಣೆಯ ಮಾತಾಡುವ
ಅಣ್ಣ ಅಪ್ಪ ಎಂಬ ಕುನ್ನಿಗಳ
ಮೆಚ್ಚುವನೆ ಅಮುಗೇಶ್ವರಲಿಂಗವು.

ಯಾವುದೇ ವ್ಯಕ್ತಿಯಾಗಲಿ ತಾನು ಮಾಡುವ ಕೆಟ್ಟಕೆಲಸವನ್ನು ಇತರರ ಮುಂದೆ ಬಹಿರಂಗವಾಗಿ ಹೇಳಿಕೊಳ್ಳುವುದಿಲ್ಲ. ಇದಕ್ಕೆ ಬದಲಾಗಿ ತನ್ನ ನೀಚತನವನ್ನು ಮುಚ್ಚಿಟ್ಟುಕೊಂಡು, ಅತಿ ವಿನಯದಿಂದ ಕೂಡಿದ ಸೋಗಿನ ಮಾತುಗಳ ಮೂಲಕ ಜನರನ್ನು ಮರುಳುಗೊಳಿಸುವುದರಲ್ಲಿ ತೊಡಗಿರುತ್ತಾನೆ. ಆದುದರಿಂದ ವ್ಯಕ್ತಿಗಳ ಗುಣ/ಅವಗುಣಗಳನ್ನು ಅವರು ಮಾಡುವ ಒಳಿತು/ಕೆಡುಕಿನ ಕೆಲಸಗಳಿಂದ ತಿಳಿಯಬೇಕೆ ಹೊರತು, ಅವರು ಆಡುವ ಮಾತುಗಳಿಂದಲ್ಲ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಕನ್ನ+ಅನ್+ಇಕ್ಕುವ; ಕನ್ನ=ಗೋಡೆಯಲ್ಲಿ ಕೊರೆದಿರುವ ಕಂಡಿ/ರಂಧ್ರ; ಅನ್=ಅನ್ನು; ಇಕ್ಕು=ಹಾಕು; ಕನ್ನವನಿಕ್ಕುವುದು=ಮನೆಯಲ್ಲಿರುವ ಒಡವೆವಸ್ತು ಗಳನ್ನು ಕಳವು ಮಾಡುವ ಉದ್ದೇಶದಿಂದ ಒಬ್ಬ ವ್ಯಕ್ತಿಯು ನುಸುಳಿ ಒಳನುಗ್ಗಲು ಅನುವಾಗುವಂತೆ ಮನೆಯ ಗೋಡೆಯಲ್ಲಿ ಕಂಡಿಯನ್ನು ಕೊರೆಯುವುದು; ಕಳ್ಳ=ಇತರರ ಒಡವೆವಸ್ತುಗಳನ್ನು ಅಪಹರಿಸುವವನು/ದೋಚುವವನು/ಲಪಟಾಯಿಸುವವನು; ಕನ್ನ+ಕಳ್ಳನ್+ಎಂದು; ಕನ್ನಗಳ್ಳ=ಗೋಡೆಯಲ್ಲಿ ಕಂಡಿಯನ್ನು ಕೊರೆದು ಕಳವನ್ನು ಮಾಡುವ ವ್ಯಕ್ತಿ; ಉಸುರು=ಹೇಳು/ನುಡಿ; ಉಸುರುವನೆ=ಹೇಳುತ್ತಾನೆಯೆ/ನುಡಿಯುತ್ತಾನೆಯೆ;

ಕನ್ನವನಿಕ್ಕುವ ಕಳ್ಳನು ಕನ್ನಗಳ್ಳನೆಂದು ಉಸುರುವನೆ=ಕೆಟ್ಟ ಕೆಲಸಗಳನ್ನು ಮಾಡುವ ಯಾವುದೇ ವ್ಯಕ್ತಿಯು ತನ್ನನ್ನು ತಾನು ಕೆಟ್ಟವನೆಂದು ಹೇಳಿಕೊಳ್ಳುವುದಿಲ್ಲ. ಇದಕ್ಕೆ ಬದಲಾಗಿ ಸಮಾಜದಲ್ಲಿ ತನ್ನನ್ನು ಒಳ್ಳೆಯ ವ್ಯಕ್ತಿಯೆಂದೇ ತೋರಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ ಎಂಬ ಇಂಗಿತವನ್ನು ಈ ಮಾತುಗಳು ಸೂಚಿಸುತ್ತವೆ;

ಅನ್ಯ=ಬೇರೆ/ಮತ್ತೊಂದು; ಅನ್ಯರ=ಬೇರೆಯವರ/ಇತರರ; ಕೂಡೆ=ಜತೆಯಲ್ಲಿ; ಬಣ್ಣ=ರಂಗು/ಅಂದ/ಚೆಂದ/ಚೆಲುವು; ಬಚ್ಚಣೆ=ಸೋಗು/ತೋರಿಕೆಯ ನಟನೆ; ಮಾತು+ಆಡುವ; **ಬಣ್ಣಬಚ್ಚಣೆಯ ಮಾತು**=ಇತರರನ್ನು ಮರಳುಮಾಡುವಂತೆ

ಆಡುವಂತಹ ತೋರಿಕೆಯ/ಸೋಗಿನ ಮಾತುಗಳು; ಎಂಬ=ಎನ್ನುವ/ಎಂದು ನುಡಿಯುವ; ಅಣ್ಣ ಅಪ್ಪ ಎಂಬ=ಇತರರೊಡನೆ ಮಾತನಾಡುವಾಗ, ಅವರ ಮೆಚ್ಚುಗೆಯನ್ನು ಪಡೆಯುವುದಕ್ಕಾಗಿ ಇಲ್ಲವೇ ಅವರಿಂದ ತಮಗೆ ಬೇಕಾದ ಒಡವೆವಸ್ತುಗಳನ್ನು ಪಡೆಯಲೆಂದು ಅತಿಯಾದ ಒಲವು/ನಲಿವು/ವಿನಯವನ್ನು ತೋರಿಸುತ್ತಾ, "ಅಣ್ಣ/ಅಪ್ಪ" ಎಂಬ ಹಿರಿಯತನವನ್ನು ಸೂಚಿಸುವ ಪದಗಳನ್ನಾಡುವುದು; ಕುನ್ನಿ=ನಾಯಿಮರಿ/ನಾಯಿ; ಮೆಚ್ಚು=ಒಲಿ/ಹೊಗಳು/ಕೊಂಡಾಡು/ಒಪ್ಪು; ಮೆಚ್ಚುವನೆ=ಮೆಚ್ಚುತ್ತಾನೆಯೆ;

ಅಣ್ಣ ಅಪ್ಪ ಎಂಬ ಕುನ್ನಿಗಳ ಮೆಚ್ಚುವನೆ=ಬಣ್ಣಬಣ್ಣದ ಮಾತುಗಳನ್ನಾಡುತ್ತಾ ಜನರನ್ನು ವಂಚಿಸುವ ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಗಳನ್ನು ದೇವರಾದ ಅಮುಗೇಶ್ವರನು ಒಪ್ಪುವುದಿಲ್ಲ. ಏಕೆಂದರೆ ದೇವರು ಮೆಚ್ಚಿಕೊಳ್ಳುವುದು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಿಜದ ನಡೆನುಡಿಯುಳ್ಳವರನ್ನು ಮಾತ್ರ ಎಂಬ ಇಂಗಿತವನ್ನು ಈ ವಾಕ್ಯ ಸೂಚಿಸುತ್ತದೆ.

'ಕುನ್ನಿ' ಎಂಬ ಪದವನ್ನು "ನೀಚ/ಕೇಡಿ/ವಂಚಕ" ಎಂಬ ರೂಪಕದ ತಿರುಳಿನಲ್ಲಿ ಬಯ್ಗುಳವಾಗಿ ಬಳಸಲಾಗಿದೆ; ಅಮುಗೇಶ್ವರ=ಅಮುಗೆ ರಾಯಮ್ಮನ ಮೆಚ್ಚಿನ ದೇವರ ಹೆಸರು/ಅಮುಗೆ ರಾಯಮ್ಮನ ವಚನಗಳ ಅಂಕಿತನಾಮ.)

❖

32. ಕಾವಿ ಕಾಷಾಂಬರವ ಹೊದ್ದು ಕಾಮವಿಕಾರಕ್ಕೆ ತಿರುಗುವ
ಕರ್ಮಿಗಳ ಮುಖವ ನೋಡಲಾಗದು
ಜಂಗಮವಾಗಿ ಜಗದಿಚ್ಛೆಯ ನುಡಿವ
ಜಂಗುಳಿಗಳ ಮುಖವ ನೋಡಲಾಗದು
ಲಿಂಗೈಕ್ಯರೆನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ
ಲಿಂಗದ್ರೋಹಿಗಳ ಮುಖವ ನೋಡಲಾಗದು
ಕಾಣಾ ಅಮುಗೇಶ್ವರಲಿಂಗವೆ.

ಸರ್ವಸಂಗ ಪರಿತ್ಯಾಗಿಗಳಂತೆ ಉಡುಗೆತೊಡುಗೆಯನ್ನು ತೊಟ್ಟು, ನಯವಾದ ನಡೆನುಡಿಗಳಿಂದ ಜನಸಮುದಾಯವನ್ನು ಮರುಳುಗೊಳಿಸುತ್ತ, ಒಳಗೊಳಗೆ ಅಂದರೆ ಜನರ ಕಣ್ಣಿಗೆ ಕಾಣದಂತೆ ಕೆಟ್ಟಕೆಲಸಗಳಲ್ಲಿ ತೊಡಗಿರುವಂತಹ ವಂಚಕರ ಜತೆಯಲ್ಲಿ ಯಾವುದೇ ಬಗೆಯ ಒಡನಾಟವನ್ನು ಇಟ್ಟುಕೊಳ್ಳಬಾರದು/ ವ್ಯವಹಾರವನ್ನು ಮಾಡಬಾರದು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

(ಕಾವಿ=ಕೆಂಪು ಬಣ್ಣದ ಮಣ್ಣು/ಕೆಂಪನೆಯ ಬಣ್ಣ; ಕಾಷಾಯ+ಅಂಬರವ; ಕಾಷಾಯ=ಕೆಂಪನೆಯ ಬಣ್ಣದ; ಅಂಬರ=ಬಟ್ಟೆ/ಅರಿವೆ/ವಸ್ತ್ರ; ಕಾವಿ ಕಾಷಾಂಬರ =ಕೆಂಪನೆಯ ಬಣ್ಣದ ಬಟ್ಟೆ/ಉಡುಗೆ; "ಕೆಂಪನೆಯ ಬಣ್ಣ" ಎಂಬ ಒಂದೇ ಬಗೆಯ ತಿರುಳನ್ನು ಹೊಂದಿರುವ 'ಕಾವಿ' ಮತ್ತು 'ಕಾಷಾಯ' ಎಂಬ ಪದಗಳು ಒಟ್ಟಿಗೆ ಬಳಕೆಯಾಗಿವೆ; ಹೊದ್ದು=ಉಟ್ಟುಕೊಂಡು/ಮಯ್ ಮೇಲೆ ಹಾಕಿ ಕೊಂಡು;

ಕಾವಿ ಕಾಷಾಂಬರವ ಹೊದ್ದುಕೊಳ್ಳುವುದು=ಆಸ್ತಿಪಾಸ್ತಿ/ಹಣಕಾಸು/ಸಂಪತ್ತಿನ ಒಡೆತನವನ್ನು ವ್ಯಕ್ತಿಗತವಾಗಿ ನಿರಾಕರಿಸಿ, ಹೆಣ್ಣಿನೊಡನೆ ಕಾಮದ ನಂಟನ್ನು ಬಿಟ್ಟು, ಹುಟ್ಟಿ ಬೆಳೆದ ಕುಟುಂಬದ ನೆಲೆಯಿಂದ ದೂರಸರಿದು, ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುವ ನಿಲುವನ್ನು ತಳೆದ ಸಂಕೇತವಾಗಿ ಕಾವಿಬಟ್ಟೆಯನ್ನು ಉಟ್ಟುಕೊಳ್ಳುವ ಆಚರಣೆಯು ನಮ್ಮ ಸಮಾಜದಲ್ಲಿದೆ. ರಿಸಿಮುನಿಗಳು, ಜಾತಿ ಜಗದ್ಗುರುಗಳು ಮತ್ತು ದೇವಮಾನವರು ಕಾವಿಬಟ್ಟೆಯನ್ನು ಉಡುತ್ತಾರೆ;

ಕಾಮ=ಹೆಣ್ಣು-ಗಂಡಿನ ದೇಹಗಳ ನಂಟು/ಮಿಲನ; ವಿಕಾರ=ಈಗಿರುವ

ರೂಪ/ಆಕಾರ ಹಾಳಾಗಿ ಕೆಟ್ಟ ರೂಪವನ್ನು ತಳೆಯುವುದು/ಬದಲಾವಣೆ/ ಮಾರ್ಪಾಡು; ಕಾಮವಿಕಾರ=ಹೆಣ್ಣಿನ ದೇಹದೊಡನೆ ಕೂಡಬೇಕೆಂಬ ಒಳಮಿಡಿತದಿಂದ ಮಯ್ ಮನಗಳು ನೂರಾರು ಬಗೆಗಳಲ್ಲಿ ಹಂಬಲಿಸುವುದು/ ಕುದಿಯುತ್ತಿರುವುದು; ತಿರುಗುವ=ಅಲೆಯುವ/ಹುಡುಕಾಡುವ/ ಹೊಂಚುಹಾಕುವ; ಕರ್ಮಿ=ಕೆಟ್ಟ/ನೀಚ/ಪಾಪದ ಕೆಲಸಗಳಲ್ಲಿ ತೊಡಗಿದವನು; ನೋಡಲು+ಆಗದು; ಆಗದು=ಆಗುವುದಿಲ್ಲ;

ಕರ್ಮಿಗಳ ಮುಖವ ನೋಡಲಾಗದು= ಒಳಗೊಂದು ಹೊರಗೊಂದು ಬಗೆಯ ನಡೆನುಡಿಗಳನ್ನುಳ್ಳ ವ್ಯಕ್ತಿಗಳೊಡನೆ ಯಾವುದೇ ರೀತಿಯಲ್ಲಿಯೂ ವ್ಯವಹರಿಸಬಾರದು/ಒಡನಾಡಬಾರದು;

ಜಂಗಮ+ಆಗಿ; ಜಂಗಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಲ್ಲಿ ಶಿವನನ್ನು ಕಾಣುವ ಮತ್ತು ಕಾಯಕದ ಬೆಲೆಯನ್ನು ಅರಿತಿರುವ ವ್ಯಕ್ತಿ; ಜಂಗಮವಾಗಿ=ಒಳ್ಳೆಯ ನಡೆನುಡಿಗಳಿಂದ ಕೂಡಿದವನಾಗಿ ಮತ್ತು ಶಿವನನ್ನು ಒಲಿದಿರುವ ವ್ಯಕ್ತಿಯಾಗಿದ್ದುಕೊಂಡು; ಜಗದ+ಇಚ್ಛೆಯ; ಜಗ=ಲೋಕ/ಪ್ರಪಂಚ/ಜನಸಮುದಾಯ; ಇಚ್ಛೆ=ಆಸೆ/ಬಯಕೆ/ಹಂಬಲ; ನುಡಿ=ಹೇಳು; ಜಂಗುಳಿ=ನಾಡಾಡಿ/ಅಲೆಮಾರಿ/ಎಲ್ಲಿಯೂ ಒಂದೆಡೆ ನಿಲ್ಲದೆ ಯಾವಾಗಲೂ ಊರಿಂದೂರಿಗೆ ಅಲೆಯುತ್ತಿರುವವನು;

ಜಂಗಮವಾಗಿ ಜಗದಿಚ್ಛೆಯ ನುಡಿವ ಜಂಗುಳಿಗಳು=ಹೊರನೋಟಕ್ಕೆ ಶಿವನನ್ನು ಒಲಯಿಸುವ/ಸತ್ಯರೂಪಿಯಾದ ಶಿವನಿಗಾಗಿ ಹಂಬಲಿಸುವವನಂತೆ ನಟಿಸುತ್ತಾ, ಸಮಾಜದಲ್ಲಿ ಜಾತಿಬಲ/ಹಣಬಲ/ಗದ್ದುಗೆಯ ಬಲವುಳ್ಳವರನ್ನು ಹಾಡಿ ಹೊಗಳುತ್ತ, ಅವರ ತಾಳಕ್ಕೆ ತಕ್ಕಂತೆ ನಡೆದುಕೊಳ್ಳುವ ಜಂಗಮ ವೇಷದಲ್ಲಿರುವ ನೀಚ ವ್ಯಕ್ತಿಗಳು; 'ಜಂಗುಳಿ' ಎಂಬ ಪದ ಬಯ್ಗುಳವಾಗಿ ಬಳಕೆಯಾಗಿದೆ;

ಲಿಂಗ+ಐಕ್ಯರು+ಎನಿಸಿಕೊಂಡು; ಲಿಂಗ=ಶಿವ/ದೇವರು; ಐಕ್ಯ= ಒಂದಾಗುವುದು/ಲೀನವಾಗುವುದು; ಲಿಂಗೈಕ್ಯರು=ಒಳ್ಳೆಯ ನಡೆನುಡಿಗಳಿಂದ ಬಾಳುವುದರಲ್ಲಿ ಶಿವನನ್ನು ಕಾಣುತ್ತಿರುವ ವ್ಯಕ್ತಿಗಳು; ಅಂಗ=ದೇಹ/ಶರೀರ/ ಮಯ್; ಅಂಗವಿಕಾರ =ಮಯ್ ಮನಗಳಲ್ಲಿ ಕೆರಳುವಂತಹ ಕೆಟ್ಟಬಯಕೆ/ ಕಾಮನೆ/ಹಂಬಲ; ದ್ರೋಹಿ=ವಂಚಕ/ಮೋಸಗಾರ; ಲಿಂಗದ್ರೋಹಿ=ಶಿವನ ಹೆಸರಿನಲ್ಲಿ ಜನಸಮುದಾಯವನ್ನು ವಂಚಿಸುತ್ತಿರುವ ವ್ಯಕ್ತಿ;

ಲಿಂಗೈಕ್ಯರೆನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ ಲಿಂಗದ್ರೋಹಿಗಳು= ಸಮಾಜದಲ್ಲಿ ಜನರ ಕಣ್ಣಿಗೆ ಶಿವನನ್ನು ಒಲಿದವರಂತೆ ಹೊರನೋಟಕ್ಕೆ ಕಾಣಿಸಿ ಕೊಳ್ಳುತ್ತಿದ್ದು, ಒಳಗೊಳಗೆ ಅಂದರೆ ಜನರಿಗೆ ಗೊತ್ತಾಗದಂತೆ ಕೆಟ್ಟ ಕೆಲಸಗಳಲ್ಲಿ ಮಗ್ನರಾಗಿ, ತಮ್ಮ ಮಯ್ ಮನಗಳಲ್ಲಿ ತುಡಿಯುತ್ತಿರುವ ಕಾಮನೆಗಳನ್ನು ಹಿಂಗಿಸಿ ಕೊಳ್ಳುತ್ತಿರುವ ವಂಚಕರು; ಕಾಣ್+ಆ; ಕಾಣ್=ನೋಡು/ತಿಳಿ; ಕಾಣಾ= ನೋಡುವಂತಹವ ನಾಗು; ಅಮುಗೇಶ್ವರ=ಅಮುಗೆ ರಾಯಮ್ಮನ ಮೆಚ್ಚಿನ ದೇವರ ಹೆಸರು/ಅಮುಗೆ ರಾಯಮ್ಮನ ವಚನಗಳ ಅಂಕಿತನಾಮ.)

❖

7. ಅರಿವಿನ ಮಾರಿತಂದೆ

ವಚನಗಳ ಅಂಕಿತನಾಮ: ಸದಾಶಿವಮೂರ್ತಿಲಿಂಗ
ದೊರೆತಿರುವ ವಚನಗಳು: 309

33. ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ
ಬೆಳೆಗೆ ಮುನಿದವರುಂಟೆ ಅಯ್ಯಾ
ಅರಿದಂಗವ ತಾಳಿದವರಲ್ಲಿ ಮರವೆಗೆ ಮುನಿವರಲ್ಲದೆ
ಅರಿವಿಗೆ ಮುನಿವರುಂಟೆ ಅಯ್ಯಾ
ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ
ಮೊಲೆಯ ಕಟ್ಟಿದವರುಂಟೆ ಅಯ್ಯಾ
ಗುರುವಾದಡೂ ಆಗಲಿ
ಲಿಂಗವಾದಡೂ ಆಗಲಿ
ಜಂಗಮವಾದಡೂ ಆಗಲಿ
ಅರಿವಿಂಗೆ ಶರಣು
ಮರವಿಂಗೆ ಮಥನವ ಮಾಡಿದಲ್ಲದೆ ಇರೆ
ಇದು ನೀವು ಕೊಟ್ಟ ಅರಿವಿನ ಮಾರನ ಇರವು
ಸದಾಶಿವಮೂರ್ತಿಲಿಂಗದ ಬರವು.

ವ್ಯಕ್ತಿಗಳ ನಡೆನುಡಿಯಲ್ಲಿ ಕಂಡುಬರುವ ಒಳ್ಳೆಯ ಗುಣವನ್ನು ನಾವು ಮೆಚ್ಚಿಕೊಳ್ಳುವಂತೆಯೇ ಅವರ ನಡವಳಿಕೆಯಲ್ಲಿ ಕೆಟ್ಟದ್ದು ಕಂಡುಬಂದಾಗ, ಅದನ್ನು ಸಹಿಸಿಕೊಂಡು ಸುಮ್ಮನಿರದೆ, ಅದನ್ನು ಪ್ರಶ್ನಿಸುವಂತಹ ಎದೆಗಾರಿಕೆಯನ್ನು ಹೊಂದಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಕೆಯ್=ಬೆಳೆಯನ್ನು ಬೆಳೆಯುವ ಭೂಮಿ; ಬೆಳೆವ+ಅಲ್ಲಿ; ಬೆಳೆವ=ಬೆಳೆಯುವ;

ಬೆಳೆವಲ್ಲಿ=ರಾಗಿ ಬತ್ತ ಜೋಳ ಮುಂತಾದ ಬೆಳೆಯನ್ನು ಒಡ್ಡಿರುವ ಹೊಲಗದ್ದೆಯಲ್ಲಿ; ಸದೆ=ಕಳೆ / ಬೇಸಾಯಗಾರನು ಒಡ್ಡಿದ ಬೆಳೆಯ ಪಯಿರುಗಳ ನಡುವೆ ತಮಗೆ ತಾವೇ ಹುಟ್ಟಿ ಬೆಳೆಯುವ ಇನ್ನಿತರ ಪಯಿರು, ಮುಳ್ಳಿನ ಗಿಡ ಮತ್ತು ಗರಿಕೆ ಹುಲ್ಲು; ಮುನಿ+ಅರ್+ಅಲ್ಲದೆ; ಮುನಿ=ಸಿಟ್ಟಾಗು/ಕಳವಳಪಡು; ಮುನಿವರ್=ಕಳವಳಗೊಳ್ಳುವರು; ಅಲ್ಲದೆ=ಹೊರತು;

ಬೆಳೆ=ಒಳ್ಳೆಯ ಫಸಲು/ದವಸಧಾನ್ಯಕಾಳು; ಮುನಿ+ಅರ್+ಉಂಟೆ; ಉಂಟು= ಇರುವುದು; ಉಂಟೆ=ಇದ್ದಾರೆಯೆ; ಮುನಿದವರುಂಟೆ=ಕಳವಳಗೊಳ್ಳುವವರು ಇದ್ದಾರೆಯೇ; ಅಯ್ಯಾ=ಗಂಡಸನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ ಮುನಿದವರುಂಟೆ=ಹೊಲ ಗದ್ದೆಯಲ್ಲಿ ಒಡ್ಡಿದ ಬೆಳೆಗಿಂತಲೂ ಕಳೆಯ ಪಯಿರು ಮತ್ತು ಮುಳ್ಳುಗಿಡಗಳೇ ಹೆಚ್ಚಾದಾಗ ಬೆಳೆಗಾರ ಕಂಗಾಲಾಗುತ್ತಾನೆಯೇ ಹೊರತು ಒಳ್ಳೆಯ ಬೆಳೆ ಬಂದು ದವಸಧಾನ್ಯಕಾಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಾಗ ಯಾವ ಬೇಸಾಯಗಾರನು ಕಳವಳಗೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಆನಂದಪಡುತ್ತಾನೆ;

ಅರಿದು+ಅಂಗವ; ಅರಿ=ತಿಳಿ/ಗ್ರಹಿಸು; ಅಂಗ=ದೇಹ/ಶರೀರ; ತಾಳಿದ+ ಅವರ್+ಅಲ್ಲಿ; ತಾಳು=ಸಹಿಸು/ಹೊಂದು/ಪಡೆ; **ಅರಿದಂಗವ ತಾಳಿದವರು**= “ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದನ್ನು ಮಾಡಬೇಕು– ಯಾವುದನ್ನು ಮಾಡಬಾರದು; ಯಾವುದು ನಿಸರ್ಗ ಸಹಜವಾದುದು– ಯಾವುದು ಮಾನವ ನಿರ್ಮಿತ” ಎಂಬುದನ್ನು ಅರಿತು, ಒಳ್ಳೆಯ ನಡೆನುಡಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳುತ್ತಿರುವವರು;

ಮರವು=ನೆನಪು ಇಲ್ಲದಿರುವುದು/ಮರೆಯುವುದು; **ಮರವೆಗೆ ಮುನಿವರು**= ವ್ಯಕ್ತಿಯು ತನ್ನಲ್ಲಿದ್ದ ಒಳ್ಳೆಯ ನಡೆನುಡಿಗಳನ್ನು ಬಿಟ್ಟು, ಕೆಟ್ಟತನದಿಂದ ವರ್ತಿಸ ತೊಡಗಿದಾಗ, ಅದನ್ನು ಕಂಡು ಜನರು ಕೋಪಗೊಳ್ಳುತ್ತಾರೆ;

ಅರಿವು=ತಿಳುವಳಿಕೆ; ಅರಿವಿಂಗೆ=ಅರಿವಿಗೆ/ತಿಳುವಳಿಕೆಗೆ; ಮುನಿ+ಅರ್+ಉಂಟೆ;

ಅರಿದಂಗವ ತಾಳಿದವರಲ್ಲಿ ಮರವೆಗೆ ಮುನಿವರಲ್ಲದೆ ಅರಿವಿಗೆ ಮುನಿವರುಂಟೆ= ಅರಿವಿನ ಮೂಲಕ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದ್ದವರು ಕಾಲಕ್ರಮೇಣ

ಒಳ್ಳೆಯದನ್ನು ಮರೆತು ಕೆಟ್ಟ ನಡವಳಿಕೆಯಿಂದ ಬಾಳತೊಡಗಿದಾಗ, ಆ ವ್ಯಕ್ತಿಯ ಕೆಟ್ಟತನಕ್ಕೆ ಜನರು ಕೋಪಗೊಳ್ಳುತ್ತಾರೆಯೇ ಹೊರತು ಮೊದಲು ಅವರಲ್ಲಿದ್ದ ಒಳ್ಳೆಯ ಗುಣವನ್ನು ಯಾರೂ ಕಡೆಗಣಿಸುವುದಿಲ್ಲ;

ಕೊಲ್ಲಿ=ಪೋಲಿ/ಹತೋಟಿಗೆ ಸಿಗದ/ತುಂಟತನ; ಆವು=ಹಸು;

ಕೊಲ್ಲಿ ಆವು=ಪೋಲಿ ದನ/ಸಾಕಿದವರ ಹಿಡಿತಕ್ಕೆ ಸಿಗದೆ ಎಲ್ಲೆಂದರಲ್ಲಿ ಅಲೆಯುವ ಹಸು/ಹಾಲನ್ನು ಕರೆಯುವಾಗ ಸುಮ್ಮನೆ ನಿಂತುಕೊಳ್ಳದೆ ಮುಂದಿನಿಂದ ಕೊಂಬಿನಲ್ಲಿ ತಿವಿಯಲು ಬರುವ ಇಲ್ಲವೇ ಹಿಂದಿನ ಕಾಲುಗಳಿಂದ ಒದೆಯುವ ಹಸು;

ಆವಿಂಗೆ=ಹಸುವಿಗೆ; ಕಟ್ಟುವರ್+ಅಲ್ಲದೆ; ಕಟ್ಟು=ತೊಡಿಸು/ಬಿಗಿ;

ಕೊಲ್ಲಿ ಆವಿಂಗೆ ಕಾಲ ಕಟ್ಟುವರು= ಹಾಲನ್ನು ಕರೆಯುವಾಗ ಕೆಲವು ಹಸುಗಳು ಒದೆಯುತ್ತವೆ ಇಲ್ಲವೇ ಕೆಚ್ಚಲಿಗೆ ಕಯ್ ಹಾಕುತ್ತಿದ್ದಂತೆಯೇ ನೆಗೆದಾಡಲು ತೊಡಗುತ್ತವೆ. ಇಂತಹ ಹಸುಗಳ ಹಿಂದಿನ ಎರಡು ಕಾಲುಗಳನ್ನು ಹಗ್ಗದಿಂದ ಬಿಗಿ ಕಟ್ಟಿ, ಅನಂತರ ಹಾಲನ್ನು ಕರೆಯತೊಡಗುತ್ತಾರೆ.

ಮೊಲೆ=ಕೆಚ್ಚಲು; ಕಟ್ಟಿದರ್+ಉಂಟೆ; ಕಟ್ಟಿದರುಂಟೆ=ಕಟ್ಟಿದವರು ಇದ್ದಾರೆಯೇ;

ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ ಮೊಲೆಯ ಕಟ್ಟಿದವರುಂಟೆ=ಹಾಲನ್ನು ಕರೆಯುವಾಗ ತೊಂದರೆ ಕೊಡುವ ಹಸುವಿನ ಹಿಂಗಾಲುಗಳನ್ನು ಕಟ್ಟುತ್ತಾರೆಯೇ ಹೊರತು ಹಾಲು ಕೊಡುವ ಕೆಚ್ಚಲನ್ನು ಯಾರೂ ಕಟ್ಟುವುದಿಲ್ಲ;

ಈ ಮೂರು ರೂಪಕಗಳು “ಜನರು ಕೆಟ್ಟದ್ದನ್ನು ನಿರಾಕರಿಸುತ್ತಾರೆಯೇ ಹೊರತು, ಒಳ್ಳೆಯದನ್ನು ಒಪ್ಪಿಕೊಂಡು ಬಾಳುತ್ತಾರೆ” ಎಂಬುದನ್ನು ಸಂಕೇತಿಸುತ್ತವೆ.

ಗುರು+ಆದಡೂ; ಗುರು=ತನ್ನ ಬಳಿ ಬಂದ ವ್ಯಕ್ತಿಗಳಿಗೆ ಒಳ್ಳೆಯ ನಡೆನುಡಿ ಗಳನ್ನು ತಿಳಿಯಹೇಳಿ, ಅವರ ವ್ಯಕ್ತಿತ್ವವನ್ನು ಉತ್ತಮವಾದ ರೀತಿಯಲ್ಲಿ ರೂಪಿಸುವವನು; ಆದಡೂ=ಆದರೂ; ಲಿಂಗ+ಆದಡೂ; ಲಿಂಗ=ವ್ಯಕ್ತಿಯ ಒಳ್ಳೆಯ ನಡೆನುಡಿಯ ಆಚರಣೆಯ ಸಂಕೇತವಾಗಿರುವ ದೇವರಾದ ಶಿವನ ವಿಗ್ರಹ; ಲಿಂಗವಾದಡೂ=ಶಿವನೇ ಆಗಿದ್ದರೂ;

ಜಂಗಮ+ಆದಡೂ=ಜಂಗಮನಾಗಿದ್ದರೂ; ಜಂಗಮ=ಒಳ್ಳೆಯ ನಡೆನುಡಿಗೆ ಪ್ರೇರಣೆಯಾಗುವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಜನಮನದಲ್ಲಿ ಮೂಡಿಸುವವನು; ಜಂಗಮವಾದಡೂ=ಜಂಗಮನೇ ಆಗಿದ್ದರೂ;

ಗುರುವಾದಡೂ ಆಗಲಿ ಲಿಂಗವಾದಡೂ ಆಗಲಿ ಜಂಗಮವಾದಡೂ ಆಗಲಿ=ಗುರುವಾಗಿರಲಿ, ಲಿಂಗವಾಗಿರಲಿ ಇಲ್ಲವೇ ಜಂಗಮವೇ ಆಗಿರಲಿ ಅಂದರೆ ವ್ಯಕ್ತಿಯು ಸಮಾಜದಲ್ಲಿ ದೊಡ್ಡ ಮನ್ನಣೆಯನ್ನು ಹೊಂದಿರಲಿ ಇಲ್ಲವೇ ಗದ್ದುಗೆಯಲ್ಲಿ ಇರಲಿ;

ಅರಿವಿಂಗೆ=ತಿಳುವಳಿಕೆಗೆ; ಶರಣು=ತಲೆಬಾಗು/ಒಪ್ಪಿಕೊಳ್ಳುವುದು;

ಅರಿವಿಂಗೆ ಶರಣು=ಯಾರಲ್ಲಿ ಒಳ್ಳೆಯ ನಡೆನುಡಿಗಳು ಇವೆಯೋ ಅಂತಹ ವ್ಯಕ್ತಿಗಳೊಡನೆ ಮಾತ್ರ ಒಲವು ಮತ್ತು ನಲಿವಿನ ನಂಟನ್ನು ಹೊಂದಿ ಜತೆಗೂಡಿ ಬಾಳುವುದು;

ಮರವಿಂಗೆ="ಒಳ್ಳೆಯದನ್ನು ಮರೆತು ಕೆಟ್ಟದ್ದನ್ನು ಮಾಡುವುದಕ್ಕೆ" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ; ಮಥನ=ಕಡೆಯುವುದು; ಮಾಡಿದ+ ಅಲ್ಲದೆ; ಇರೆ=ಇರುವುದಿಲ್ಲ/ಸುಮ್ಮನಾಗುವುದಿಲ್ಲ;

ಮರವಿಂಗೆ ಮಥನವ ಮಾಡಿದಲ್ಲದೆ ಇರೆ=ಒಳ್ಳೆಯ ನಡೆನುಡಿಗಳನ್ನು ಬಿಟ್ಟು, ಈಗ ಕೆಟ್ಟ ರೀತಿಯಲ್ಲಿ ಬಾಳುತ್ತಿರುವ ವ್ಯಕ್ತಿಗಳು ಅವರು ಗುರುಗಳಾಗಿರಲಿ ಇಲ್ಲವೇ ಜಂಗಮರಾಗಿರಲಿ ಇಲ್ಲವೇ ಶಿವನನ್ನು ಪೂಜಿಸುವ ವ್ಯಕ್ತಿಯಾಗಿರಲಿ, ಅವರನ್ನು ಪ್ರಶ್ನೆ ಮಾಡದೆ ಬಿಡುವುದಿಲ್ಲ. ಅಂದರೆ ಅವರಲ್ಲಿ ಈಗ ಕಂಡುಬಂದಿರುವ ಕೆಟ್ಟತನಕ್ಕೆ ತಲೆಬಾಗದೆ ಇಲ್ಲವೇ ಬಲಿಯಾಗದೆ ಅವರನ್ನು ಎದುರಿಸುತ್ತೇನೆ;

ನೀವು=ಶಿವ; ನೀವು ಕೊಟ್ಟ ಅರಿವು=ಒಳ್ಳೆಯ ನಡೆನುಡಿಯನ್ನೇ ಶಿವನೆಂದು ತಿಳಿದು ನಡೆಯುತ್ತಿರುವುದು;

ಮಾರ=ವ್ಯಕ್ತಿಯ ಮಯ್ ಮನದಲ್ಲಿ ಬಹುಬಗೆಯ ಬಯಕೆಗಳನ್ನು ಕೆರಳಿಸಿ ಕೆಟ್ಟದ್ದರ ಕಡೆಗೆ ಸೆಳೆಯುವ ದೇವತೆ. ಈ ಬಗೆಯ ಒಂದು ಕಲ್ಪನೆ ಜನಮನದಲ್ಲಿದೆ; ಇರವು=ಇರುವಿಕೆ;

ಇದು ನೀವು ಕೊಟ್ಟ ಅರಿವಿನ ಮಾರನ ಇರವು=ಒಳ್ಳೆಯ ನಡೆನುಡಿಯನ್ನೇ ಶಿವನೆಂದು ತಿಳಿದು ಬಾಳುತ್ತಿರುವ ವ್ಯಕ್ತಿಗಳು ಮಾರನೆಂಬ ದೇವತೆಯ ಸೆಳೆತಕ್ಕೆ ವಶರಾಗದೆ ಬಾಳುವುದನ್ನು ಕಲಿಯಬೇಕು;

ಸದಾಶಿವಮೂರ್ತಿಲಿಂಗ=ಶಿವನ ಮತ್ತೊಂದು ಹೆಸರು/ಅರಿವಿನ ಮಾರಿತಂದೆಯ ವಚನಗಳ ಅಂಕಿತನಾಮ; ಬರ=ವರ/ಅನುಗ್ರಹ;

ಸದಾಶಿವಮೂರ್ತಿಲಿಂಗದ ಬರವು=ಶಿವನ ಅನುಗ್ರಹ;

❖

34 ಭರಿತಾರ್ಪಣವೆಂಬುದು ಲಿಂಗಕ್ಕೊ ನಿನಗೊ
ಲಿಂಗಕ್ಕೆ ಸಂಕಲ್ಪ ನಿನಗೆ ಮನೋಹರ
ಈ ಗುಣ ಓಗರ ಮೇಲೋಗರದ ಅಪೇಕ್ಷೆಯಲ್ಲದೆ
ಲಿಂಗದ ಒಡಲಲ್ಲ
ಸದಾಶಿವಮೂರ್ತಿಲಿಂಗಕ್ಕೆ ಸಲ್ಲ.

ವ್ಯಕ್ತಿಯು ಲಿಂಗದ ಮುಂದೆ ರುಚಿಕರವಾದ ಉಣಿಸು ತಿನಸುಗಳನ್ನಿಟ್ಟು ಮಾಡುವ ಪೂಜೆಯಿಂದ, ಅವನ ಬಾಯ್ ರುಚಿ ತಣಿದು, ಅವನ ಹೊಟ್ಟೆ ತುಂಬುತ್ತದೆಯೇ ಹೊರತು, ಮತ್ತೇನು ಆಗುವುದಿಲ್ಲವೆಂಬ ವಾಸ್ತವವನ್ನು ಈ ವಚನದಲ್ಲಿ ಹೇಳಲಾಗಿದೆ.

ಭರಿತ+ಅರ್ಪಣ+ಎಂಬುದು; ಭರಿತ=ತುಂಬಿರುವ/ಪರಿಪೂರ್ಣವಾಗಿರುವ; ಅರ್ಪಣ=ನೀಡುವುದು/ಸಲ್ಲಿಸುವುದು/ಒಪ್ಪಿಸುವುದು; **ಭರಿತಾರ್ಪಣ**=ದೇವರ ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಬಹುಬಗೆಯ ತಿಂಡಿತಿನಸುಗಳನ್ನು ಜೋಡಿಸಿ ಇಡುವುದು; ಎಂಬುದು=ಎನ್ನುವುದು;

ಭರಿತಾರ್ಪಣವೆಂಬುದು ಲಿಂಗಕ್ಕೊ ನಿನಗೊ=ಲಿಂಗವನ್ನು ಪೂಜಿಸುವಾಗ, ಅದರ ಮುಂದೆ ನೀನು ಇಟ್ಟಿರುವ ಬಗೆಬಗೆಯ ಉಣಿಸು ತಿನಸುಗಳೆಲ್ಲವನ್ನು ಲಿಂಗ ತಿನ್ನಲೆಂದು ಇಟ್ಟಿದ್ದೀಯೋ ಇಲ್ಲವೇ ನೀನು ತಿನ್ನಲೆಂದು ಇಟ್ಟಿದ್ದೀಯೋ;

ಲಿಂಗ=ದೇವರಾದ ಶಿವನ ಸಂಕೇತದ ವಿಗ್ರಹ; ಸಂಕಲ್ಪ=ಮನಸ್ಸಿನಲ್ಲಿ ತಳೆದಿರುವ ನಿಲುವು/ನಿರ್ಣಯ; ಲಿಂಗಕ್ಕೆ ಸಂಕಲ್ಪ=ವ್ಯಕ್ತಿಯು ತನ್ನ ಜೀವನದಲ್ಲಿ ಬರುವ ಎಡರುತೊಡರುಗಳನ್ನು ನಿವಾರಿಸಿ ದೇವರು ತನಗೆ ಒಳಿತನ್ನುಂಟು ಮಾಡಲೆಂದು ಹರಕೆಯನ್ನು ಕಟ್ಟಿಕೊಂಡು ಮಾಡುತ್ತಿರುವ ಆಚರಣೆ; ಮನೋಹರ=ಸೊಗಸಾದುದು/ಸುಂದರವಾದುದು;

ಲಿಂಗಕ್ಕೆ ಸಂಕಲ್ಪ ನಿನಗೆ ಮನೋಹರ=ಲಿಂಗ ಪೂಜೆಯ ಹೆಸರಿನಲ್ಲಿ ವಿಗ್ರಹದ ಮುಂದೆ ಹರಡಿದಂತೆ ಜೋಡಿಸಿಟ್ಟಿರುವ ಉಣಿಸು ತಿನಸುಗಳೆಲ್ಲವೂ ನಿನ್ನ ಕಣ್ ಮನಗಳಿಗೆ ಆನಂದವನ್ನುಂಟುಮಾಡುತ್ತಿವೆ. ಏಕೆಂದರೆ ಪೂಜೆ ಮುಗಿದ ನಂತರ ಅವೆಲ್ಲವೂ ನಿನ್ನ ಪಾಲಿಗೆ ದೊರೆಯುತ್ತವೆ;

ಈ ಗುಣ=ಈ ಬಗೆಯ ಆಚರಣೆ; ಓಗರ=ಬೇಯಿಸಿದ ಆಹಾರ/ಅಡುಗೆ ಮಾಡಿ ತಯಾರಿಸಿದ ರುಚಿಕರವಾದ ತಿಂಡಿತಿನಸುಗಳು; ಮೇಲು+ಓಗರ; ಮೇಲು=ಹೆಚ್ಚಿನ/ಅತಿಶಯವಾದ; ಮೇಲೋಗರ=ಅನ್ನದ ಜತೆಗೆ ಬಡಿಸುವ

ಸಾರು, ಪಲ್ಯ, ಸಂಡಿಗೆ, ಹಪ್ಪಳ ಮುಂತಾದ ವಸ್ತುಗಳು; ಅಪೇಕ್ಷೆ+ಅಲ್ಲದೆ; ಅಪೇಕ್ಷೆ=ಬಯಕೆ/ಆಸೆ; **ಓಗರ ಮೇಲೋಗರದ ಅಪೇಕ್ಷೆ**=ರುಚಿರುಚಿಯಾದ ತಿಂಡಿ ತಿನಸುಗಳನ್ನು ತಿನ್ನಬೇಕೆಂಬ ಆಸೆ;

ಅಲ್ಲದೆ=ಹೊರತು; ಒಡಲ್+ಅಲ್ಲ; ಒಡಲು=ಹೊಟ್ಟೆ/ದೇಹ; ಲಿಂಗದ ಒಡಲಲ್ಲ=ಲಿಂಗದ ಒಡಲಿಗೆ ಸೇರುವುದಿಲ್ಲ;

ಈ ಗುಣ ಓಗರ ಮೇಲೋಗರದ ಅಪೇಕ್ಷೆಯಲ್ಲದೆ ಲಿಂಗದ ಒಡಲಲ್ಲ= ರುಚಿಕರವಾದ ತಿಂಡಿತಿನಸುಗಳನ್ನು ಲಿಂಗದ ಮುಂದೆ ಇಟ್ಟು ಪೂಜಿಸುವ ಆಚರಣೆಯು ವ್ಯಕ್ತಿಯು ತನ್ನ ಬಾಯ್ ರುಚಿಯನ್ನು ತಣಿಸಿಕೊಂಡು, ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿಯೇ ಹೊರತು, ಅದು ಲಿಂಗದ ಒಡಲನ್ನು ತುಂಬಿಸುವುದಕ್ಕಲ್ಲ. ಏಕೆಂದರೆ ಜಡರೂಪಿಯಾದ ಲಿಂಗ ಉಣ್ಣುವುದಿಲ್ಲ ಎಂಬ ದಿಟ ಎಲ್ಲರಿಗೂ ಗೊತ್ತು;

ಸದಾಶಿವಮೂರ್ತಿಲಿಂಗ=ಶಿವ/ಅರಿವಿನ ಮಾರಿತಂದೆಯ ವಚನಗಳ ಅಂಕಿತನಾಮ; ಸಲ್ಲು=ಸೇರು;

ಸದಾಶಿವಮೂರ್ತಿಲಿಂಗಕ್ಕೆ ಸಲ್ಲ=ಶಿವನಿಗೆ ಸೇರುವುದಿಲ್ಲ/ಇಂತಹ ಆಚರಣೆಗಳು ಶಿವನಿಗೆ ಒಪ್ಪಿತವಲ್ಲ;

ವಿಗ್ರಹರೂಪದಲ್ಲಿರುವ ದೇವರಿಗೆ ಮಾಡುವ ಯಾವುದೇ ಬಗೆಯ ಆಚರಣೆ ಯನ್ನಾಗಲಿ ಇಲ್ಲವೇ ದೇವರ ಪೂಜೆಗೆಂದು ಬಳಸುವ ಸಾಮಗ್ರಿಗಳನ್ನಾಗಲಿ ಶಿವಶರಣಶರಣೆಯರು ದೊಡ್ಡದೆಂದು ಪರಿಗಣಿಸಿಲ್ಲ. ಅವರು ತಮ್ಮ ಅಂಗಯ್ ಮೇಲೆ ಇಟ್ಟುಕೊಂಡು ಪೂಜಿಸುತ್ತಿದ್ದ ಇಷ್ಟಲಿಂಗವೂ ಅವರ ಪಾಲಿಗೆ ಒಳ್ಳೆಯ ನಡೆನುಡಿಗಳಿಗೆ ಸಂಕೇತವಾಗಿತ್ತೇ ಹೊರತು, ಅದನ್ನೇ ದೇವರೆಂದು ಅವರು ನಂಬಿರಲಿಲ್ಲ. ವ್ಯಕ್ತಿಯು ತನಗೆ, ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ನಡೆನುಡಿಗಳಲ್ಲಿ ವಚನಕಾರರು ದೇವರನ್ನು ಕಾಣುತ್ತಿದ್ದರು.

❖

8. ಅಲ್ಲಮ

ಊರು :

ಅ) ಹುಟ್ಟಿದ ಊರು : ಕರುವೂರು, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ

ಆ) ಕಸುಬನ್ನು ಕಾಯ್ಗೊಂಡ ಊರುಗಳು :

ಬನವಾಸಿ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಬಳ್ಳಿಗಾವಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಕಸಬು

ದೇಗುಲದ ಪರಿಸರದಲ್ಲಿ ಪೂಜೆಯ ಆಚರಣೆಗಳು ನಡೆಯುತ್ತಿರುವಾಗ ಮದ್ದಳೆ ಎಂಬ ಚರ್ಮ ವಾದ್ಯವನ್ನು ಬಾರಿಸುವುದು.

ದೊರಕಿರುವ ವಚನಗಳು : 1613

ವಚನಗಳ ಅಂಕಿತನಾಮ : ಗುಹೇಶ್ವರ/ಗೊಹೇಶ್ವರ

35. ಅಕ್ಷರವ ಬಲ್ಲೆವೆಂದು
ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ
ಗುರುಹಿರಿಯರು ತೋರಿದ ಉಪದೇಶದಿಂದ
ವಾಗದ್ವೈತವ ಕಲಿತು ವಾದಿಪರಲ್ಲದೆ
ಆಗುಹೋಗೆಂಬುದನರಿಯರು
ಭಕ್ತಿಯನರಿಯರು ಮುಕ್ತಿಯನರಿಯರು
ಯುಕ್ತಿಯನರಿಯರು ಮತ್ತೂ ವಾದಿಗೆಳಸುವರು
ಹೋದರು ಗುಹೇಶ್ವರ ಸಲೆ ಕೊಂಡ ಮಾರಿಂಗೆ.

ಓದು ಬರಹವನ್ನು ಕಲಿತ ಮಾತ್ರದಿಂದಲೇ ಇತರರಿಗಿಂತ ತಾವೇ ದೊಡ್ಡವರೆಂದು ಸೊಕ್ಕಿನಿಂದ ಮೆರೆಯುತ್ತಾ, ಕೇವಲ ಮಾತಿನ ಚತುರತೆಯಿಂದಲೇ ಎಲ್ಲವನ್ನೂ ಗೆಲ್ಲುತ್ತ, ತಮಗೆ ಬೇಕಾದುದೆಲ್ಲವನ್ನೂ ಪಡೆದುಕೊಳ್ಳುತ್ತ, ಜನಸಮುದಾಯದ ಒಳಿತನ್ನು ಕಡೆಗಣಿಸುವಂತಹ ವ್ಯಕ್ತಿಗಳ ಸಾಮಾಜಿಕ ವರ್ತನೆಯನ್ನು ಈ ವಚನದಲ್ಲಿ ಟೀಕಿಸಲಾಗಿದೆ.

(ಅಕ್ಷರ=ನುಡಿಯ ಓದು/ಬರಹ; ಬಲ್ಲೆವು+ಎಂದು; ಬಲ್ಲ=ತಿಳಿದ/ಅರಿತ; ಬಲ್ಲೆವು=ತಿಳಿದಿರುವೆವು/ಅರಿತಿದ್ದೇವೆ; **ಅಕ್ಷರ ಬಲ್ಲೆವೆಂದು**=ನಾವು ಓದು ಬರಹವನ್ನು ಕಲಿತವರು ಎಂಬ ಒಳಮಿಡಿತದಿಂದ ಕೂಡಿ; ಅಹಂಕಾರ+ಎಡೆ+ಕೊಂಡು; ಅಹಂಕಾರ=ನಾವೇ ದೊಡ್ಡವರು/ಉತ್ತಮರು/ಮೇಲಿನವರು ಎಂಬ ಸೊಕ್ಕಿನ ನಡೆನುಡಿ; ಎಡೆ+ಕೊಂಡು; ಎಡೆ=ಪಡೆ/ಹೊಂದು; ಎಡೆಗೊಂಡು=ತಳೆದು/ಹೊಂದಿದವರಾಗಿ; ಲೆಕ್ಕ+ಕೊಳ್ಳರು+ಅಯ್ಯ; ಲೆಕ್ಕ=ಗಣನೆ/ಎಣಿಸುವುದು; ಲೆಕ್ಕಗೊಳ್=ಇತರರನ್ನು ಒಲವು ನಲಿವಿನಿಂದ ಕಾಣುವುದು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಟ್ಟು; **ಲೆಕ್ಕಗೊಳ್ಳರ್**=ಇತರರ ಬಗ್ಗೆ ಒಲವು ನಲಿವಿನಿಂದ ನಡೆದುಕೊಳ್ಳದೆ, ಎಲ್ಲವನ್ನೂ/ಎಲ್ಲರನ್ನೂ ಕೀಳಾಗಿ ಕಾಣುತ್ತಾರೆ/ಕಡೆಗಣಿಸುತ್ತಾರೆ;

ಗುರು=ಅರಿವನ್ನು/ತಿಳುವಳಿಕೆಯನ್ನು ನೀಡಿ ವ್ಯಕ್ತಿತ್ವವನ್ನು ರೂಪಿಸುವ ವ್ಯಕ್ತಿ; ಹಿರಿಯರು=ವಯಸ್ಸಿನಲ್ಲಿ ದೊಡ್ಡವರು ಮತ್ತು ಜೀವನದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಉಳ್ಳವರು; ತೋರಿದ=ಕಾಣುವಂತೆ/ತಿಳಿಯುವಂತೆ ಮಾಡಿದ; ಉಪದೇಶ+ಇಂದ; ಉಪದೇಶ=ಹೇಳಿದ ಒಳ್ಳೆಯ ನುಡಿಗಳು/ಆಡಿದ ಅರಿವಿನ ನುಡಿಗಳು/ಕಲಿಸಿದ ವಿದ್ಯೆ;

ವಾಕ್+ಅದ್ವೈತ=ವಾಗದ್ವೈತ; ವಾಕ್=ನುಡಿ/ಮಾತು; ಅದ್ವೈತ=ಜೀವಾತ್ಮ ಮತ್ತು ಪರಮಾತ್ಮ ಎಂಬುವು ಬೇರೆ ಬೇರೆಯಲ್ಲ, ಅವೆರಡೂ ಒಂದೇ ಎಂಬ ನಿಲುವು; **ವಾಗದ್ವೈತವ ಕಲಿತು**=ಯಾವುದೇ ಸಂಗತಿಯನ್ನು ಕುರಿತ ಚರ್ಚೆಯ ಸನ್ನಿವೇಶದಲ್ಲಿ ಎದುರಾಳಿಯನ್ನು ಸೋಲಿಸುವಂತಹ ಮಾತುಗಾರಿಕೆಯನ್ನು ಹೊಂದಿರುವುದು/ಮಾತಿನ ಬಳಕೆಯಲ್ಲಿ ಹೆಚ್ಚಿನ ಜಾಣ್ಮೆಯನ್ನು ಕರಗತ ಮಾಡಿಕೊಂಡಿರುವುದು; ವಾದಿಪರ್+ಅಲ್ಲದೆ; ವಾದ=ಯಾವುದೇ ಸಂಗತಿಯನ್ನು ಕುರಿತು ಚರ್ಚಿಸುವಾಗ ತಾವಾಡುವ ನುಡಿಗಳೇ/ತಮ್ಮ ನಿಲುವೇ ಸರಿಯೆಂಬ ನಿಲುವು; ವಾದಿಪರ್=ವಾದವನ್ನು ಮಾಡುತ್ತಾರೆ; ವಾದಿಪರ್+ಅಲ್ಲದೆ; ಅಲ್ಲದೆ=ಹೊರತಾಗಿ/ಅದನ್ನು ಬಿಟ್ಟು; **ವಾದಿಪರಲ್ಲದೆ**=ಸೊಗಸಾಗಿ ಮಾತನಾಡುತ್ತಾರೆಯೇ

ಹೊರತು; ಆಗುಹೋಗು+ಎಂಬುದನ್+ಅರಿಯರು; ಆಗುಹೋಗು=ಲೋಕದಲ್ಲಿನ/ಸಮಾಜದಲ್ಲಿನ ಜನಸಮುದಾಯದ ನೋವು ನಲಿವು/ಏಳು ಬೀಳು/ಹಸಿವು ಅಪಮಾನ ಬಡತನದ ಬವಣೆಗಳು; ಎಂಬುದನ್=ಎನ್ನುವುದನ್ನು; ಅರಿ=ತಿಳಿ; ಅರಿಯರು=ಅವರಿಗೆ ತಿಳಿದಿಲ್ಲ/ಗೊತ್ತಿಲ್ಲ;

ಭಕ್ತಿ+ಅನ್+ಅರಿಯರು; ಭಕ್ತಿ=ದೇವರನ್ನು ಪೂಜಿಸಲು/ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ಅನ್=ಅನ್ನು; ಮುಕ್ತಿ+ಅನ್+ಅರಿಯರು; ಮುಕ್ತಿ=ಮಯ್ ಮನಗಳಲ್ಲಿ ತುಡಿಯುವಂತಹ ಕೆಟ್ಟ ಒಳಮಿಡಿತಗಳನ್ನು ಹೋಗಲಾಡಿಸಿಕೊಂಡು/ಬಿಡುಗಡೆಯನ್ನು ಹೊಂದಿ ಒಳ್ಳೆಯ ರೀತಿಯಲ್ಲಿ ಬದುಕುವುದು; ಯುಕ್ತಿ+ಅನ್+ಅರಿಯರು; ಯುಕ್ತಿ=ಮಯ್ ಮನಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳಿತಿನ ನಡೆನುಡಿಗಳಿಂದ ಬಾಳುವ ಚತುರತೆ/ಕುಶಲತೆ; ಮತ್ತೂ=ಪದೇ ಪದೇ/ಯಾವಾಗಲೂ/ಒಂದೇ ಸಮನೆ; ವಾದಿಗೆ+ಎಳಸುವರು; ವಾದಿಗೆ=ವಾದವನ್ನು ಮಾಡುವುದಕ್ಕೆ/ತಮ್ಮ ಮಾತು/ನಿಲುವನ್ನೇ ಮುಂದೊಡ್ಡುವುದಕ್ಕೆ; ಎಳಸು=ಬಯಸು/ಪ್ರಯತ್ನಿಸು/ಹಂಬಲಿಸು; ಎಳಸುವರು=ಪ್ರಯತ್ನಿಸುತ್ತಾರೆ/ಬಯಸುತ್ತಾರೆ;

ಗುಹೇಶ್ವರ=ಶಿವ/ಅಲ್ಲಮನ ಮೆಚ್ಚಿನ ದೇವರು/ಅಲ್ಲಮನ ವಚನಗಳಲ್ಲಿ ಕಂಡುಬರುವ ಅಂಕಿತನಾಮ; ಸಲೆ=ಸಂಪೂರ್ಣವಾಗಿ/ನಿಜವಾಗಿ; ಕೊಂಡ=ಪಡೆದ; ಮಾರಿಂಗೆ=ಮಾರಿ ದೇವತೆಗೆ;

ಸಲೆ ಕೊಂಡ ಮಾರಿಂಗೆ ಹೋದರು=ಮಾರಿ ದೇವತೆಯ ಕ್ರೂರನೋಟಕ್ಕೆ ಸಿಲುಕಿ ಸಂಪೂರ್ಣವಾಗಿ ನಾಶವಾದರು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ಶಾಪದ ನುಡಿ)

36 ಅಗ್ಘವಣಿ ಪತ್ರೆ ಧೂಪ ದೀಪ ನಿವಾಳಿಯಲ್ಲಿ
ಪೂಜಿಸಿ ಪೂಜಿಸಿ ಬಳಲುತ್ತೈದಾರೆ
ಏನೆಂದರಿಯರು ಎಂತೆಂದರಿಯರು
ಜನ ಮರುಳೋ ಜಾತ್ರೆ ಮರುಳೊ ಎಂಬಂತೆ
ಎಲ್ಲರೂ ಪೂಜಿಸಿ ಏನನೂ ಕಾಣದೆ
ಲಯವಾಗಿ ಹೋದರು ಗುಹೇಶ್ವರ.

ವಿಗ್ರಹ ರೂಪದಲ್ಲಿರುವ ದೇವರಿಗೆ ಮಾಡುವ ಯಾವುದೇ ಬಗೆಯ ಆಚರಣೆಯನ್ನಾಗಲಿ ಇಲ್ಲವೇ ದೇವರ ಪೂಜೆಗೆಂದು ಬಳಸುವ ಸಾಮಗ್ರಿಯನ್ನಾಗಲಿ ಶಿವಶರಣಶರಣೆಯರು ದೊಡ್ಡದೆಂದು ಪರಿಗಣಿಸಿಲ್ಲ. ಏಕೆಂದರೆ ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಸಾಮಾಜಿಕ ನಡೆನುಡಿಗಳಲ್ಲಿ ಅವರು ದೇವರನ್ನು ಕಾಣುತ್ತಿದ್ದರು. ಶಿವಶರಣಶರಣೆಯರ ಈ ಬಗೆಯ ನಿಲುವನ್ನು ಈ ವಚನದಲ್ಲಿ ಹೇಳಲಾಗಿದೆ.

(ಅಗ್ಘವಣಿ=ದೇವರ ವಿಗ್ರಹಗಳನ್ನು ತೊಳೆಯುವುದಕ್ಕೆ ಬಳಸುವ ನೀರು; ಪತ್ರೆ=ಬಿಲ್ವ / ಬನ್ನಿ ಮರದ ಇಲ್ಲವೇ ತುಳಸಿ ಗಿಡದ ಎಲೆ/ದಳ; ಧೂಪ=ಕೆಂಡದ ಮೇಲೆ ಹಾಕಿದಾಗ ಉಂಟಾಗುವ ಹೊಗೆಯಲ್ಲಿ ಒಳ್ಳೆಯ ಕಂಪನ್ನು ಬೀರುವ ಸಾಂಬ್ರಾಣಿ/ಹಾಲುಮಡ್ಡಿ ಮುಂತಾದ ವಸ್ತುಗಳು; ದೀಪ=ದೀವಿಗೆ/ಸೊಡರು; ನಿವಾಳಿ+ಅಲ್ಲಿ; ನಿವಾಳಿ=ಆರತಿಯನ್ನು ಎತ್ತುವಿಕೆ; **ದೀಪ ನಿವಾಳಿಯಲ್ಲಿ**= ಬೆಳಗುತ್ತಿರುವ ಜ್ಯೋತಿ/ಉರಿಯುತ್ತಿರುವ ಕರ್ಪೂರವನ್ನು ಒಳಗೊಂಡ ತಟ್ಟೆಯನ್ನು ದೇವರ ವಿಗ್ರಹದ ಮುಂದೆ ಎತ್ತಿ ಹಿಡಿದು ಅತ್ತಿತ್ತ ಆಡಿಸುವ ಆಚರಣೆ; ಬಳಲುತ್ತ+ಐದಾರೆ; ಬಳಲು=ಆಯಾಸಪಡು/ದಣಿಯುವುದು/ಶ್ರಮಪಡುವುದು; ಐದಾರೆ=ಇದ್ದಾರೆ;

ಏನ್+ಎಂದು+ಅರಿಯರು; ಎಂತು+ಎಂದು+ಅರಿಯರು; ಎಂತು=ಯಾವ ರೀತಿ/ಬಗೆ; ಅರಿ=ತಿಳಿ; ಅರಿಯರು=ತಿಳಿಯರು/ಗೊತ್ತಿಲ್ಲದವರು;

ಏನೆಂದರಿಯರು ಎಂತೆಂದರಿಯರು=ಈ ರೀತಿಯ ಆಚರಣೆಗಳನ್ನು ಏಕೆ ಮಾಡಬೇಕು, ದೇವರಿಗೂ ಈ ಆಚರಣೆಗಳಿಗೂ ಇರುವ ನಂಟು ಯಾವುದು, ಇವು ಹೇಗೆ ಪರಿಣಾಮವನ್ನು ಬೀರುತ್ತವೆ ಎಂಬುದರ ಬಗ್ಗೆ ಯಾವೊಂದು

ಬಗೆಯ ತಿಳುವಳಿಕೆಯೂ ಇಲ್ಲದವರು. ಹಿಂದಿನಿಂದಲೂ ದೇವರನ್ನು ಪೂಜಿಸಿಕೊಂಡು ಬಂದಿರುವ ಆಚರಣೆಗಳನ್ನು ಚಾಚುತಪ್ಪದೆ ಎಂದಿನಂತೆ ಮಾಡುತ್ತಿದ್ದಾರೆ; ಮರುಳು=ದಡ್ಡತನ/ತಿಳಿಗೇಡಿತನ/ಹುಚ್ಚು/ಮೋಹ; ಜಾತ್ರೆ= ನೂರಾರು ಸಾವಿರಾರು ಮಂದಿ ಜತೆಗೂಡಿ ಮಾಡುವ ದೇವರ ಉತ್ಸವ;

ಜನ ಮರುಳೋ ಜಾತ್ರೆ ಮರುಳೊ=ಒಳಿತು/ಕೆಡುಕಿನ ಇಲ್ಲವೇ ಸರಿ/ತಪ್ಪುಗಳ ಅರಿವಿಲ್ಲದೆ/ವಿವೇಚನೆಯಿಲ್ಲದೆ ಮಾಡುವ ಕೆಲಸ ಎಂಬ ತಿರುಳಿನಲ್ಲಿ ಬಳಕೆಯಲ್ಲಿರುವ ನಾಣ್ಣುಡಿ;

"ಜನಮರುಳೋ ಜಾತ್ರೆ ಮರುಳೋ ಎಂಬಂತೆ ಎಲ್ಲರೂ ಪೂಜಿಸಿ" ಎಂಬ ನುಡಿಗಳು "ಹಿಂದಿನಿಂದಲೂ ದೇವರನ್ನು ಪೂಜಿಸಿಕೊಂಡು ಬಂದಿರುವ ಆಚರಣೆ ಗಳನ್ನು ಚಾಚುತಪ್ಪದೆ ಎಂದಿನಂತೆ ಮಾಡಿಕೊಂಡು ಬರುತ್ತಿದ್ದಾರೆ" ಎಂಬ ತಿರುಳಿನಲ್ಲಿ ಬಳಕೆಯಾಗಿವೆ; ಏನನೂ=ಏನನ್ನೂ/ಯಾವುದನ್ನೂ; ಕಾಣದೆ= ಸರಿಯಾಗಿ ತಿಳಿಯದೆ; ಲಯ+ಆಗಿ; ಲಯ=ನಾಶ/ಹಾಳು/ಇಲ್ಲವಾಗುವುದು; ಲಯವಾಗಿ ಹೋದರು= ಕಾಲವನ್ನು ಹಾಳುಮಾಡಿಕೊಂಡರು)

❖

37. ಅಯ್ಯಾ,
ಸತ್ಯವ ನುಡಿಯದ ಸದಾಚಾರದಲ್ಲಿ ನಡೆಯದ
ಸದ್ಭಕ್ತಿಯ ಹಿಡಿಯದ ನಿಜ ಮುಕ್ತಿಯ ಪಡೆಯದ
ಸತ್ಕ್ರಿಯವ ಸಾರದ ಸಮ್ಯಜ್ಞಾನವ ಮುಟ್ಟದ
ಸುಡು ಸುಡು
ಈ ವೇಷದ ಭಾಷೆಯ ನೋಡಿ
ಗುಹೇಶ್ವರಲಿಂಗವು ನಗುತ್ತೈದಾನೆ
ಕಾಣಾ ಚೆನ್ನಬಸವಣ್ಣಾ.

ಜನರಲ್ಲಿ ಅರಿವನ್ನು ಮೂಡಿಸಿ ಅವರನ್ನು ಒಳ್ಳೆಯ ದಾರಿಯಲ್ಲಿ ಕರೆದೊಯ್ಯುವ ಗುಣವಂತನಂತೆ, ಗುರುವಿನಂತೆ ಮತ್ತು ದೇವ ಮಾನವನಂತೆ ಉಡುಗೆ ತೊಡುಗೆಯನ್ನು ತೊಟ್ಟು, ಬಾಯಲ್ಲಿ ಸತ್ಯ ನೀತಿ ನ್ಯಾಯದ ನುಡಿಗಳನ್ನಾಡುತ್ತ, ತನ್ನ ನಿಜ ಜೀವನದಲ್ಲಿ ಕೆಟ್ಟ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಯ ಬೂಟಾಟಿಕೆಯ ವ್ಯಕ್ತಿತ್ವವನ್ನು ಈ ವಚನದಲ್ಲಿ ಅಲ್ಲಗಳೆಯಲಾಗಿದೆ.

ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ಸತ್ಯ=ನಿಜ/ವಾಸ್ತವ/ದಿಟ; ನುಡಿ=ಮಾತನಾಡು/ಹೇಳು; ನುಡಿಯದ=ಹೇಳದ;

ಸತ್ಯವ ನುಡಿಯದ=ತಾನು ತಿಳಿದಿರುವುದನ್ನು ಮತ್ತು ಕಂಡಿದ್ದನ್ನು ಹೇಳದೆ, ಸುಳ್ಳನ್ನು ಆಡುವುದು/ಜೀವನದಲ್ಲಿನ ವಾಸ್ತವ ಸಂಗತಿಗಳನ್ನು ಹೇಳದೆ ಇಲ್ಲಸಲ್ಲದ ಸಂಗತಿಗಳನ್ನು ಹೇಳಿ ಜನರನ್ನು ಮರುಳು ಮಾಡುವುದು;

ಸದಾಚಾರ+ಅಲ್ಲಿ; ಸದಾಚಾರ=ಒಳ್ಳೆಯ ವರ್ತನೆ; ನಡೆ=ಆಚರಣೆ/ನಡವಳಿಕೆ; ನಡೆಯದ=ನಡೆದುಕೊಳ್ಳದ/ಆಚರಿಸದ;

ಸದಾಚಾರದಲ್ಲಿ ನಡೆಯದ=ಸಹಮಾನವರ ಜತೆಯಲ್ಲಿ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳದಿರುವುದು/ಜನರಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ಕೆಟ್ಟದ್ದಾಗಿ ವರ್ತಿಸುವುದು;

ಸದ್ಭಕ್ತಿ=ಒಳ್ಳೆಯ ನಡೆನುಡಿಗಳಿಂದ ದೇವರನ್ನು ಪೂಜಿಸುವುದು;

ಹಿಡಿ=ಕಯ್ಗೊಳ್ಳುವುದು/ಅನುಸರಿಸುವುದು; ಹಿಡಿಯದ=ಅನುಸರಿಸಿದ;

ಸದ್ಭಕ್ತಿಯ ಹಿಡಿಯದ=ದೇವರನ್ನು ಒಲಿಸಿಕೊಳ್ಳಲು ಒಳ್ಳೆಯ ನಡೆನುಡಿಗಳನ್ನು

ಅನುಸರಿಸಿ ಬಾಳಬೇಕೆಂಬುದನ್ನು ತಿಳಿಯದಿರುವುದು;

ನಿಜ=ಸಹಜವಾದ/ತನ್ನ/ಸ್ವಂತದ; ಮುಕ್ತಿ=ಬಿಡುಗಡೆ/ವಿಮೋಚನೆ; ಪಡೆ=ಹೊಂದು/ಗಳಿಸು/ಸಂಪಾದಿಸು; ಪಡೆಯದ=ಗಳಿಸದ/ಹೊಂದದ;

ನಿಜ ಮುಕ್ತಿಯ ಪಡೆಯದ=ತನ್ನ ಮಯ್ ಮನವನ್ನು ಆವರಿಸಿಕೊಂಡಿರುವ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳಲ್ಲಿ, ಕೆಟ್ಟದ್ದನ್ನು ಬಿಡದಿರುವುದು;

ಸತ್ಕ್ರಿಯೆ=ಒಳ್ಳೆಯ ಕೆಲಸ/ಕಾರ್ಯ; ಸಾರು=ಸಮೀಪಿಸು/ಹತ್ತಿರಕ್ಕೆ ಬರುವುದು; ಸಾರದ=ಸಮೀಪಿಸದ/ಹತ್ತಿರಕ್ಕೆ ಬರದೆ ದೂರವಿರುವುದು;

ಸತ್ಕ್ರಿಯವ ಸಾರದ=ಒಳ್ಳೆಯ ಕೆಲಸಗಳಿಂದ ದೂರವಿರುವುದು/ಒಂದಾದರೂ ಒಳ್ಳೆಯ ಕೆಲಸವನ್ನು ಮಾಡದಿರುವುದು;

ಸಮ್ಯಜ್ಞಾನ=ಒಳ್ಳೆಯ ತಿಳುವಳಿಕೆ/ಅರಿವು; ಮುಟ್ಟು=ತಲುಪು/ಸೇರು/ಹೊಂದು;

ಸಮ್ಯಜ್ಞಾನವ ಮುಟ್ಟದ=ಒಳ್ಳೆಯ ಅರಿವನ್ನು ಹೊಂದದಿರುವುದು;

ಸುಡು=ಬೆಂಕಿಯಲ್ಲಿ ಬೇಯಿಸು; **ಸುಡು ಸುಡು**=ಜನಸಮುದಾಯವನ್ನು ಮತ್ತು ಸಮಾಜವನ್ನು ವಂಚಿಸುವ ವ್ಯಕ್ತಿಯ ಕೆಟ್ಟ ನಡೆನುಡಿಗಳನ್ನು ಕಂಡಾಗ ಉಂಟಾಗುವ ಕೋಪ, ಹತಾಶೆ ಮತ್ತು ಆಕ್ರೋಶವನ್ನು ಕಾರುವಾಗ ಈ ಬಗೆಯ ಪದಗಳು ಹೊರಹೊಮ್ಮುತ್ತವೆ. "ಅವನ ಜನ್ಮಕ್ಕಷ್ಟು ಬೆಂಕಿಹಾಕ" ಎಂಬ ಬಯ್ಗುಳ ಜನಸಮುದಾಯದಲ್ಲಿ ಬಳಕೆಯಲ್ಲಿದೆ;

ವೇಷ=ಉಡುಗೆ ತೊಡುಗೆ/ಸೋಗು/ತೋರಿಕೆಯ ರೂಪ; ಭಾಷೆ=ಮಾತು/ನುಡಿ; ನೋಡು=ಕಾಣು;

ಈ ವೇಷದ ಭಾಷೆಯ ನೋಡಿ=ಅಂತರಂಗದ ಮಯ್ ಮನದಲ್ಲಿ ಒಳ್ಳೆಯತನವಿಲ್ಲದೆ, ಬಹಿರಂಗದಲ್ಲಿ ಒಳ್ಳೆಯವನಂತೆ ತೊಟ್ಟಿರುವ ಉಡುಗೆ ತೊಡುಗೆಯನ್ನು ನೋಡಿ ಮತ್ತು ಆಡುವ ಮಾತುಗಳನ್ನು ಕೇಳಿ;

ಗುಹೇಶ್ವರ=ಶಿವ/ಅಲ್ಲಮನ ಮೆಚ್ಚಿನ ದೇವರು/ಅಲ್ಲಮನ ವಚನಗಳಲ್ಲಿ ಬಳಕೆಯಾಗಿರುವ ಅಂಕಿತನಾಮ; ಲಿಂಗ=ಶಿವ/ಈಶ್ವರ; ನಗುತ್ತ+ಐದಾನೆ; ನಗು= ಐದಾನೆ=ಇದ್ದಾನೆ;

ಗುಹೇಶ್ವರಲಿಂಗವು ನಗುತ್ತೈದಾನೆ=ಶಿವನು ಇಂತಹ ಬೂಟಾಟಿಕೆಯ, ನಯವಂಚಕತನದ, ಒಳಗೊಂದು ಹೊರಗೊಂದು ಬಗೆಯ ನಡೆನುಡಿಯನ್ನುಳ್ಳ

ವ್ಯಕ್ತಿಯನ್ನು ಕಂಡು ‘ಇದು ಒಂದು ಜೀವನವೇ’ ಎಂದು ಅಣಕಿಸುವಂತೆ ನಗುತ್ತಿದ್ದಾನೆ. ಕಪಟತನದ ನಡೆನುಡಿಯನ್ನು ದೇವರು ಒಪ್ಪುವುದಿಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಕಾಣಾ=ವಿಚಾರಿಸಿ ನೋಡು/ತಿಳಿ/ಅರಿ; ಚನ್ನಬಸವಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ;

❖

38. ಆಚಾರವರಿಯದೆ ವಿಭವವಳಿಯದೆ
ಕೋಪವಡಗದೆ ತಾಪ ಮುರಿಯದೆ
ಬರಿದೆ ಭಕ್ತರಾದೆವೆಂದು
ಬೆಬ್ಬನೆ ಬೆರೆವವರ ಕೇಡಿಂಗೆ
ನಾನು ಮರುಗುವೆನು
ಕಾಣಾ ಗುಹೇಶ್ವರ.

ಮಯ್ ಮನಗಳಲ್ಲಿ ತುಡಿಯುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ನಡೆನುಡಿಗಳಿಂದ ಬದುಕನ್ನು ನಡೆಸದೆ, ಇತರರ ಮುಂದೆ "ತಾವು ದೇವರನ್ನು ಒಲಿದು ಪೂಜಿಸುವ ವ್ಯಕ್ತಿಗಳು" ಎಂದು ಹೇಳಿಕೊಂಡು ಮೆರೆದಾಡುವವರನ್ನು ಕುರಿತು ಕಳವಳವನ್ನು ಈ ವಚನದಲ್ಲಿ ವ್ಯಕ್ತಪಡಿಸಲಾಗಿದೆ.

(ಆಚಾರ+ಅರಿಯದೆ; ಆಚಾರ=ತನಗೆ ಮತ್ತು ಇತರರಿಗೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳು; ಅರಿ=ತಿಳಿ; ಅರಿಯದೆ=ತಿಳಿಯದೆ; **ಆಚಾರವರಿಯದೆ**=ಒಳ್ಳೆಯತನದ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳದೆ; ವಿಭವ+ಅಳಿಯದೆ; ವಿಭವ=ಸಿರಿ/ಸಂಪತ್ತು/ಶಕ್ತಿ/ಬಲ/ಹಿರಿಮೆ; ಅಳಿ=ನಾಶ/ಇಲ್ಲವಾಗುವುದು; **ವಿಭವವಳಿಯದೆ**=ಸಿರಿಸಂಪತ್ತಿನಿಂದ/ ಗಳಿಸಿದ ವಿದ್ಯೆಯಿಂದ / ಪಡೆದ ಗದ್ದುಗೆಯಿಂದ ಉಂಟಾದ ಸೊಕ್ಕಿನ ನಡೆನುಡಿಗಳನ್ನು ತೊರೆಯದೆ.

ಕೋಪ+ಅಡಗದೆ; ಕೋಪ=ತನ್ನ ಉದ್ದೇಶ ಮತ್ತು ಆಸೆಗೆ ಇತರರಿಂದ ಅಡ್ಡಿ/ ಆತಂಕ/ನೋವು/ಹಾನಿ ಉಂಟಾದಾಗ ವ್ಯಕ್ತಿಯ ಮನದಲ್ಲಿ ಕೆರಳುವ ಒಳಮಿಡಿತ/ ಸಿಟ್ಟು; ಅಡಗು=ನಾಶಹೊಂದು/ಇಲ್ಲವಾಗು; ತಾಪ=ಸಂಕಟ/ವೇದನೆ/ಯಾತನೆ; ಮುರಿ=ಕೆಡು/ಹಾಳಾಗು/ನಾಶವಾಗು; **ತಾಪ ಮುರಿಯದೆ**=ಮನದೊಳಗಿನ ಆಕ್ರೋಶ/ಕುದಿತ ಕಡಮೆಯಾಗದೆ.

ಬರಿದೆ=ಸುಮ್ಮನೆ; ಭಕ್ತರ್+ಆದೆವ್+ಎಂದು; ಭಕ್ತ=ಒಳ್ಳೆಯ ನಡೆನುಡಿಗಳಿಂದ ದೇವರನ್ನು ಒಲಿದವನು/ಒಳ್ಳೆಯ ನಡೆನುಡಿಗಳೇ ದೇವರೆಂದು ನಂಬಿದವನು; ಆದೆವ್=ಆದೆವು/ಆಗಿದ್ದೇವೆ; ಬೆಬ್ಬನೆ=ಅತಿಯಾಗಿ/ಬಹಳವಾಗಿ; ಬೆರೆವ+ಅವರ; ಬೆರೆ=ಹೆಮ್ಮೆ/ಜಂಬ/ಉಬ್ಬು/ಸೊಕ್ಕು; ಬೆರೆವವರ=ಇತರರಿಗಿಂತ ತಾವೇ ದೊಡ್ಡವರು/ಉತ್ತಮರು/ಮೇಲಿನವರು ಎಂಬ ಸೊಕ್ಕಿನಿಂದ ನಡೆದುಕೊಳ್ಳುವ

ವ್ಯಕ್ತಿಗಳ; ಕೇಡು=ಹಾನಿ/ನಾಶ/ಕೊನೆ; ಕೇಡಿಂಗೆ=ಹಾನಿಯನ್ನು ಉಂಟು ಮಾಡುವಂತಹ ಕೆಟ್ಟ ನಡೆನುಡಿಗಳಿಗೆ; ಮರುಗು=ಕನಿಕರ/ಕರುಣೆ/ಕಳವಳ; ಕಾಣ್+ಆ; ಕಾಣ್=ನೋಡು/ತಿಳಿ; ಕಾಣಾ=ಕಂಡೆಯಾ/ತಿಳಿದಿರುವೆಯಾ).

❖

39. ಏನ ಕಂಡಡೇನಯ್ಯಾ
ತನ್ನ ಕಾಣದಾತ ಕುರುಡ
ಏನ ಕೇಳಿದಡೇನಯ್ಯಾ
ತನ್ನ ಕೇಳದಾತ ಕಿವುಡ
ಏನ ಮಾತನಾಡಿದಡೇನಯ್ಯಾ
ತನ್ನ ಮಾತಾಡದಾತ ಮೂಕ
ದಿಟದಿಂದ ತನ್ನ ತಾ ಕಾಣಬೇಕು
ದಿಟದಿಂದ ತನ್ನ ತಾ ಕೇಳಬೇಕು
ದಿಟದಿಂದ ತನ್ನ ತಾ ಮಾತಾಡಬೇಕು
ಇದೆ ತನ್ನ ನೆಲೆ ಸ್ವಭೂಮಿ ಸ್ವಸ್ವರೂಪು
ಕಾಣಾ ಗುಹೇಶ್ವರಾ.

ವ್ಯಕ್ತಿಯು ಲೋಕದಲ್ಲಿ ಕಂಡು ಕೇಳಿ ಮಾತನಾಡಿ ಪಡೆದುಕೊಂಡ ತಿಳುವಳಿಕೆಯ ಜೊತೆಜೊತೆಗೆ, ಮಾನವನ ಬದುಕಿನ ಆಗುಹೋಗುಗಳಿಗೆ ಕಾರಣವಾಗಿರುವ ವಾಸ್ತವದ ಸಂಗತಿಗಳನ್ನು ಅರಿತುಕೊಂಡು, ನಿಜದ ನಡೆನುಡಿಗಳಿಂದ ಕೂಡಿದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಈ ವಚನದಲ್ಲಿ ಹೇಳಲಾಗಿದೆ.

“ನಿಜದ ನಡೆನುಡಿಗಳು” ಎಂದರೆ ತನಗೆ ಒಳಿತನ್ನು ಬಯಸುವಂತೆಯೇ ಜನ ಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಸಾಮಾಜಿಕ ವರ್ತನೆ.

(ಏನ್+ಅ; ಏನ್=ಯಾವುದು; ಏನ=ಯಾವುದನ್ನು/ಏನನ್ನು; ಕಂಡಡೆ+ಏನ್ +ಅಯ್ಯಾ; ಕಂಡಡೆ=ನೋಡಿದರೆ;

ಏನ ಕಂಡಡೇನು=ವ್ಯಕ್ತಿಯು ತನ್ನ ಜೀವನದಲ್ಲಿ ಬಹುಬಗೆಯ ವಸ್ತುಗಳನ್ನು/ ಜೀವಿಗಳನ್ನು/ಪ್ರಸಂಗಗಳನ್ನು ನೋಡಿ, ಅವುಗಳ ಒಳಿತು ಕೆಡುಕಿನ ಅಂಶಗಳನ್ನು ಅರಿತುಕೊಂಡಿದ್ದರೆ ತಾನೇ ಏನು ಪ್ರಯೋಜನ; ತನ್ನ=ತನ್ನನ್ನು; ಕಾಣದ+ಆತ; ಕಾಣ್=ನೋಡು; ಕಾಣದ=ನೋಡದ/ತಿಳಿಯದ/ಅರಿಯದ; ಆತ=ಅವನು; ಕುರುಡ=ಕಣ್ಣಿಲ್ಲದವನು/ಕಣ್ಣಿನ ದಿಟ್ಟಿಯಿಲ್ಲದವನು; **ತನ್ನ ಕಾಣದಾತ ಕುರುಡ**=ತನ್ನ ನಡೆನುಡಿಯಲ್ಲಿನ ತಪ್ಪುಗಳನ್ನು ನೋಡಿಕೊಂಡು, ಅವನ್ನು ತಿದ್ದಿ ಸರಿಪಡಿಸಿ ಕೊಂಡು ಬಾಳದವನು, ಕಣ್ಣಿದ್ದು ಕುರುಡನಂತಾಗುತ್ತಾನೆ ಎಂಬ ನಾಣ್ಣುಡಿಯ ತಿರುಳಿನಲ್ಲಿ ಬಳಕೆಯಾಗಿರುವ ಸೊಲ್ಲು;

ಕೇಳಿದಡೆ+ಏನ್+ಅಯ್ಯಾ; ಕೇಳು=ಆಲಿಸು/ಕಿವಿಗೊಡು; ಕೇಳಿದಡೆ=ಕೇಳಿದರೆ/ ಕೇಳಿಸಿಕೊಂಡರೆ; **ಏನ ಕೇಳಿದಡೇನು**=ಇತರರು ಹೇಳಿದ ನೀತಿ/ನಿಯಮ/ಸತ್ಯ/ ವಾಸ್ತವದ ನುಡಿಗಳನ್ನು ಆಲಿಸಿ ಮನಗಂಡಿದ್ದರೆ ತಾನೇ ಏನು ಪ್ರಯೋಜನ; ಕೇಳದ+ಆತ; ಕೇಳದ=ಕೇಳಿಸಿಕೊಳ್ಳದ/ಆಲಿಸಿಕೊಳ್ಳದ/ಕಿವಿಗೊಡದ; ಕಿವುಡ=ಕಿವಿ ಕೇಳಿಸದವನು/ಕೆಪ್ಪ;

ತನ್ನ ಕೇಳದಾತ ಕಿವುಡ=ವ್ಯಕ್ತಿಯು ಆಡಿದ ಮಾತುಗಳು ಬೇರೆಯವರಿಗೆ ಕೇಳಿಸುವಂತೆಯೇ ತನಗೂ ಕೇಳಿಸುತ್ತಿರುವುದರಿಂದ, ತಾನಾಡಿದ ನುಡಿಗಳು ಕೇಳುಗರ ಮನಸ್ಸಿಗೆ ಮುದವನ್ನುಂಟು ಮಾಡಿದವೊ ಇಲ್ಲವೇ ನೋವನ್ನುಂಟು ಮಾಡಿದವೋ ಎಂಬುದರ ಬಗ್ಗೆ ಎಚ್ಚರವಿಲ್ಲದವನು;

ಮಾತು+ಆಡಿದಡೆ+ಏನ್+ಅಯ್ಯಾ; ಆಡಿದಡೆ=ಆಡಿದರೆ/ನುಡಿದರೆ; ಮಾತಾಡಿದಡೆ=ಮಾತನ್ನಾಡಿದರೆ; **ಏನ ಮಾತನಾಡಿದಡೇನು**=ನೀತಿ/ನಿಯಮ/ ಸತ್ಯ/ಆದರ್ಶದ ಸಂಗತಿಗಳನ್ನು ಕುರಿತು ದೊಡ್ಡ ದೊಡ್ಡ ಮಾತುಗಳನ್ನಾಡುವು ದರಿಂದ ಏನು ತಾನೇ ಪ್ರಯೋಜನ; ಮಾತು+ಆಡದ+ಆತ; ಮೂಕ=ಮಾತು ಬಾರದವನು/ಮಾತನಾಡಲಾಗದವನು; **ತನ್ನ ಮಾತಾಡದಾತ ಮೂಕ**=ತನಗೆ ತಿಳಿದಿರುವ ವಾಸ್ತವವನ್ನು ಕುರಿತು ಮಾತನಾಡದವನು;

ದಿಟ+ಇಂದ; ದಿಟ=ಸತ್ಯ/ವಾಸ್ತವ/ನಿಜ; ತಾ=ತಾನು; **ದಿಟದಿಂದ ತನ್ನ ತಾ ಕಾಣಬೇಕು/ಕೇಳಬೇಕು/ಮಾತಾಡಬೇಕು**=ವಾಸ್ತವದ ನೆಲೆಗಟ್ಟಿನಲ್ಲಿ ವ್ಯಕ್ತಿಯು ತನ್ನ ನಡೆನುಡಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ನಿಸರ್ಗದಲ್ಲಿ ನಡೆಯುವ ಸಂಗತಿಗಳನ್ನು ಮತ್ತು ಸಮಾಜದ ಕಟ್ಟುಪಾಡು, ಸಂಪ್ರದಾಯ ಮತ್ತು ಆಚರಣೆಗಳ ಬಗ್ಗೆ ಚಿಂತಿಸಬೇಕು. ಅವುಗಳಲ್ಲಿ ಕಾಣುವ/ಕೇಳಿ ಬರುವ ಒಳ್ಳೆಯ/ಕೆಟ್ಟ ಸಂಗತಿ ಗಳನ್ನು ಒರೆಹಚ್ಚಿ ನೋಡಬೇಕು. ನಿಸರ್ಗ ಮತ್ತು ಸಮಾಜದ ನಡುವೆ ಸಿಲುಕಿ ತನ್ನ ಮಯ್ ಮನಗಳಲ್ಲಿ ಉಂಟಾಗುತ್ತಿರುವ ತುಡಿತಗಳನ್ನು ತಿಳಿದುಕೊಂಡು, ತನ್ನ ಒಳಿತಿಗಾಗಿ ಹಂಬಲಿಸುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುವಂತಹ ವಾಸ್ತವದ ನಡೆನುಡಿಗಳನ್ನು ರೂಪಿಸಿಕೊಳ್ಳಬೇಕೆಂಬ ತಿರುಳನ್ನು ಈ ನುಡಿಗಳು ಹೊಂದಿವೆ;

ಇದೆ=ಈ ರೀತಿಯಲ್ಲಿ ಚಿಂತಿಸುವುದೆ/ಆಲೋಚಿಸುವುದೆ; ನೆಲೆ=ಗುರಿ/ ಉದ್ದೇಶ/ನಿಲುವು; ಸ್ವ=ಸ್ವಂತ/ವ್ಯಕ್ತಿಗೆ ಸೇರಿದ/ತನ್ನದೇ ಆದ; ಭೂಮಿ=ಜಾಗ/ನೆಲ; ಸ್ವರೂಪು=ನಿಜವಾದ ರೂಪ/ಸಹಜವಾದ ಗುಣ/ಇರುವಿಕೆ; ಕಾಣ್+ಆ; ಕಾಣಾ=

ತಿಳಿದು ನೋಡು/ಅರಿತು ನೋಡು; **ಇದೆ ತನ್ನ ನೆಲೆ ಸ್ವಭೂಮಿ ಸ್ವಸ್ವರೂಪು**= ವಾಸ್ತವದ ಸಂಗತಿಗಳನ್ನು ಅರಿತುಕೊಂಡು ಒಳ್ಳೆಯ ರೀತಿಯಲ್ಲಿ ಬಾಳುವುದೇ ವ್ಯಕ್ತಿಯ ಜೀವನದ ಗುರಿಯಾಗಿರಬೇಕು.)

❖

40. ಕಲ್ಲ ಮನೆಯ ಮಾಡಿ
ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದರೆ
ದೇವರೆತ್ತ ಹೋದರೋ
ಲಿಂಗಪ್ರತಿಷ್ಠೆಯ ಮಾಡಿದವಂಗೆ
ನಾಯಕ ನರಕ ಗುಹೇಶ್ವರ.

ಜಡರೂಪದ ದೇವರನ್ನು ನಿರಾಕರಿಸುವುದರ ಜತೆಗೆ, ಕಲ್ಲು/ಮರ/ಮಣ್ಣು/ಲೋಹದಿಂದ ಮಾಡಿರುವ ಲಿಂಗವನ್ನು ದೇಗುಲದಲ್ಲಿ ನೆಲೆಗೊಳಿಸುವ ಆಚರಣೆಯನ್ನು ಈ ವಚನದಲ್ಲಿ ಕಟುವಾದ ಮಾತುಗಳಿಂದ ಅಲ್ಲಗಳೆಯಲಾಗಿದೆ.

ದೇವರನ್ನು ಒಪ್ಪಿಕೊಂಡಿರುವ ಶಿವಶರಣಶರಣೆಯರು ದೇಗುಲವನ್ನು ನಿರಾಕರಿಸುವುದಕ್ಕೆ ಕಾರಣವೇನೆಂದರೆ, ವಿಗ್ರಹದ ರೂಪದಲ್ಲಿ ಕಡೆದಿರುವ ದೇವರನ್ನು ದೇಗುಲದ ಒಳಗುಡಿಯಲ್ಲಿ ನೆಲೆಗೊಳಿಸುತ್ತಿದ್ದಂತೆಯೇ, ವಿಗ್ರಹದ ಹತ್ತಿರಕ್ಕೆ ಹೋಗಿ ಪೂಜಿಸಲು ಪೂಜಾರಿಯು ಮಾತ್ರ ಯೋಗ್ಯನಾಗುತ್ತಾನೆ. ಇನ್ನುಳಿದವರು ಒಳಗುಡಿಯಿಂದ ಹೊರನಿಲ್ಲಬೇಕಾಗುತ್ತದೆ. ಇಲ್ಲಿಂದಲೇ ಮಾನವರಲ್ಲಿ ಮೇಲು ಕೀಳಿನ ವಿಂಗಡಣೆಯು ಮೊದಲಾಗುತ್ತದೆ. ಮೇಲು/ಕೀಳಿನ ಜಾತಿಮೆಟ್ಟಲುಗಳಿಂದ ಕೂಡಿರುವ ನಮ್ಮ ಸಮಾಜದ ಜಾತಿರಚನೆಯ ಕಟ್ಟುಪಾಡುಗಳನ್ನು ದೇಗುಲದಲ್ಲಿ ನಡೆಯುವ ಆಚರಣೆಗಳು ಮುಂದುವರಿಸಿಕೊಂಡು ಬರುತ್ತಿವೆ. ಮೇಲು ಜಾತಿಯವರಿಗೆ ಮತ್ತು ಮೇಲು ವರ್ಗದವರಿಗೆ ಅಂದರೆ ಸಿರಿವಂತರಿಗೆ ಹಾಗೂ ದೊಡ್ಡದೊಡ್ಡ ಗದ್ದುಗೆಯಲ್ಲಿರುವವರಿಗೆ ಮನ್ನಣೆಯನ್ನು ನೀಡುವ ದೇಗುಲದ ಆಚರಣೆಗಳು, ಕೆಳಜಾತಿ ಮತ್ತು ಕೆಳವರ್ಗದ ಅಂದರೆ ಸಂಪತ್ತಿಲ್ಲದ/ಗದ್ದುಗೆಯಿಲ್ಲದ ಜನಸಮುದಾಯವನ್ನು ಕಡೆಗಣಿಸಿವೆ. ಈ ರೀತಿ ಮೇಲು ಕೀಳಿನ ತರತಮವು ಮುಂದುವರಿದುಕೊಂಡು ಹೋಗಲು ಕಾರಣವಾಗಿರುವ ಮತ್ತು ನೆರವಾಗಿರುವ ದೇಗುಲದ ನೆಲೆಯಿಂದ ಶಿವಶರಣಶರಣೆಯರು ದೂರಸರಿದಿದ್ದಾರೆ.

(ಕಲ್ಲ್+ಅ=ಕಲ್ಲ; ಕಲ್ಲ=ಕಲ್ಲಿನ/ಕಲ್ಲನ್ನು ಬಳಸಿ; **ಕಲ್ಲ ಮನೆಯ ಮಾಡಿ**=ಕಲ್ಲಿನ ದಿಂಡುಗಳಿಂದ ಅಡಿಪಾಯ ಹಾಕಿ, ಕಲ್ಲಿನಿಂದ ಗೋಡೆಗಳನ್ನು ಕಟ್ಟಿ, ನೆಲಕ್ಕೆ ಕಲ್ಲಿನ ಚಪ್ಪಡಿಗಳನ್ನು ಹಾಸಿ, ಕಲ್ಲಿನ ಕಂಬಗಳನ್ನು ನಿಲ್ಲಿಸಿ, ಮಾಳಿಗೆಗೆ ಕಲ್ಲಿನ

ಹಾಸುಗಳನ್ನು ಹೊದಿಸಿ ದೇಗುಲವನ್ನು ಕಟ್ಟಿರುವುದು; **ಕಲ್ಲ ದೇವರ ಮಾಡಿ**= ದೇವರ ವಿಗ್ರಹವನ್ನು ಕಲ್ಲಿನಿಂದಲೇ ಕಡೆದು ರೂಪಿಸಿ;

ಆ ಕಲ್ಲು=ಮಾಳಿಗೆಯಾಗಿ ಹೊದಿಸಿರುವ ಕಲ್ಲಿನ ಚಪ್ಪಡಿಗಳು; ಕಲ್ಲ ಮೇಲೆ= ದೇವರ ವಿಗ್ರಹದ ಮೇಲೆ; ಕೆಡೆ=ಬೀಳು; **ಕಲ್ಲ ಮೇಲೆ ಕೆಡೆದರೆ**= ಒಳಗುಡಿಯಲ್ಲಿ ಇಟ್ಟಿರುವ ದೇವರ ವಿಗ್ರಹದ ಮೇಲೆ ಬಿದ್ದರೆ; ದೇವರು+ಎತ್ತ; ಎತ್ತ=ಯಾವ ಕಡೆಗೆ; ಲಿಂಗ=ಶಿವನ ಸಂಕೇತದ ವಿಗ್ರಹ; ಪ್ರತಿಷ್ಠೆ=ನೆಲೆಗೊಳಿಸುವುದು; **ಲಿಂಗಪ್ರತಿಷ್ಠೆ**= ವಿಗ್ರಹ ರೂಪದ ಲಿಂಗವನ್ನು ದೇಗುಲದಲ್ಲಿ ನೆಲೆಗೊಳಿಸುವಿಕೆ; ಮಾಡಿದವಂಗೆ= ಮಾಡಿದವನಿಗೆ; ನಾಯಕ=ಅತಿ ಹೆಚ್ಚಿನ.

ನರಕ=ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು ಅನಂತರ ತಾನು ಮಾಡಿದ ಕೆಟ್ಟಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಮತ್ತೊಂದು ಲೋಕದಲ್ಲಿರುವ ಜಾಗ. ಜನರಿಗೆ ಕೇಡನ್ನು ಬಗೆದವರು ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು ಆನಂದದ ನೆಲೆಯಾದ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಸಮುದಾಯದ ಮನದಲ್ಲಿದೆ;

ನಾಯಕ ನರಕ=ಅತಿ ಹೆಚ್ಚಿನ ದಂಡನೆಗಳನ್ನು ನೀಡಿ ವ್ಯಕ್ತಿಯನ್ನು ಹಿಂಡಿಹಿಪ್ಪೆ ಮಾಡುವ ಜಾಗ. ಕೆಟ್ಟ ನಡೆನುಡಿಗಳಿಂದ ಜನರನ್ನು ವಂಚಿಸುವ ವ್ಯಕ್ತಿಗೆ ಹೆಚ್ಚಿನ ನೋವು/ಸಂಕಟ/ಹಾನಿಯುಂಟಾಗಲಿ ಎಂಬ ತಿರುಳಿನಲ್ಲಿ ಬಳಕೆಯಾಗುವ ಶಾಪರೂಪದ ನುಡಿಗಟ್ಟು.)

❖

41. ಕಾಯದ ಕಳವಳವ ಗೆಲಿದಡೇನೊ
ಮಾಯದ ತಲೆಯನರಿಯದನ್ನಕ್ಕರ
ಮಾಯದ ತಲೆಯನರಿದಡೇನೊ
ಜ್ಞಾನದ ನೆಲೆಯನರಿಯದನ್ನಕ್ಕರ
ಜ್ಞಾನದ ನೆಲೆಯನರಿದಡೇನೊ
ತಾನು ತಾನಾಗದನ್ನಕ್ಕರ
ತಾನು ತಾನಾದ ಶರಣರ ನಿಲವಿಂಗೆ
ಒಂದು ಧಾರೆ ಮೇರೆಯುಂಟೆ ಗುಹೇಶ್ವರಾ.

ತನ್ನ ಮಯ್ ಮನದಲ್ಲಿ ಮೂಡುವ ಕಾಮನೆಗಳನ್ನು ಹಂತ ಹಂತವಾಗಿ ಹತೋಟಿಗೆ ತಂದುಕೊಳ್ಳುತ್ತಾ, ತನ್ನನ್ನು ತಾನು ಅರಿತುಕೊಂಡು ಬಾಳುವ ಶಿವಶರಣನ ವ್ಯಕ್ತಿತ್ವ ರೂಪುಗೊಳ್ಳುವ ಬಗೆಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಕಾಯ=ಮಯ್/ದೇಹ/ಶರೀರ; ಕಳವಳ=ತುಡಿತ/ತಳಮಳ/ಚಿಂತೆ; **ಕಾಯದ ಕಳವಳ**=ವ್ಯಕ್ತಿಯ ಮಯ್ ಮನದಲ್ಲಿ ನಿರಂತರವಾಗಿ ತುಡಿಯುತ್ತಿರುವ ಹಸಿವು ಮತ್ತು ಕಾಮದ ಬಯಕೆ; ಗೆಲಿದಡೆ+ಏನೊ; ಗೆಲ್=ಜಯಿಸು; ಗೆಲಿದಡೆ=ಗೆದ್ದರೆ/ಜಯಿಸಿದರೆ; ಏನ್=ಯಾವುದು; ಏನೊ=ಯಾವುದನ್ನು ಪಡೆದಂತಾಯಿತು;

"ಕಾಯದ ಕಳವಳವ ಗೆಲ್ಲುವುದು" ಎಂದರೆ ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವಂತಹ ಹಸಿವು ಮತ್ತು ಕಾಮವನ್ನು ಸಮಾಜ ಒಪ್ಪಿತವಾದ ರೀತಿಯಲ್ಲಿ ಈಡೇರಿಸಿಕೊಳ್ಳುವುದು. "ಸಮಾಜ ಒಪ್ಪಿತವಾದ ರೀತಿ" ಎಂದರೆ ವ್ಯಕ್ತಿಯು ತನ್ನ ಅಗತ್ಯಗಳನ್ನು ಪೂರಯಿಸಿಕೊಳ್ಳುವಾಗ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯದಿರುವುದು;

ಮಾಯ/ಮಾಯೆ=ವ್ಯಕ್ತಿಯ ಮಯ್ ಮನದಲ್ಲಿ ಬಯಕೆಗಳನ್ನು ಕೆರಳಿಸಿ ತಮ್ಮತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿಗಳು;

ತಲೆ+ಅನ್+ಅರಿಯದ+ಅನ್ನಕ್ಕರ; ತಲೆ=ಆದಿ/ಮೊದಲು; **ಮಾಯದ ತಲೆ**= ವ್ಯಕ್ತಿಯ ಮಯ್ ಮನದಲ್ಲಿ ನೂರೆಂಟು ಬಗೆಯ ಕಾಮನೆಗಳನ್ನು ಕೆರಳಿಸುವಂತಹ ಸಂಗತಿಗಳ ಮೂಲ; ಅನ್=ಅನ್ನು; ಅರಿ=ತಿಳಿ/ಗ್ರಹಿಸು; ಅರಿಯದ=ತಿಳಿಯದ/ಗ್ರಹಿಸದ;

“ಮಾಯದ ತಲೆಯನ್ನು ಅರಿಯುವುದು” ಎಂದರೆ ವ್ಯಕ್ತಿಯು ತನ್ನ ಮಯ್ ಮನದಲ್ಲಿ ಬಹುಬಗೆಯ ಕಾಮನೆಗಳು ಕೆರಳಲು ಕಾರಣವಾದ ಸಂಗತಿಗಳನ್ನು ತಿಳಿಯುವುದು;

ಅನ್ನಕ್ಕರ=ಅಲ್ಲಿಯವರೆಗೆ/ಅಲ್ಲಿಯತನಕ; ಅರಿಯದನ್ನಕ್ಕರ=ತಿಳಿಯುವತನಕ/ಗ್ರಹಿಸುವವರೆಗೆ;

ಕಾಯದ ಕಳವಳವ ಗೆಲಿದಡೇನೊ ಮಾಯದ ತಲೆಯನರಿದನ್ನಕ್ಕರ=ಕಾಯದ ಕಳವಳವನ್ನು ಗೆದ್ದ ಮಾತ್ರಕ್ಕೆ ಎಲ್ಲವನ್ನೂ ಪಡೆದಂತಾಗುವುದಿಲ್ಲ. ಮಾಯೆಯ ಮೂಲವನ್ನು ಅರಿಯಬೇಕು. ಮಾಯೆಯ ಮೂಲ ಎಂದರೆ “ಮಯ್ ಮನದಲ್ಲಿ ಬಹು ಬಗೆಯ ಬಯಕೆಗಳು ಎಡೆಬಿಡದೆ ತನ್ನನ್ನು ಏಕೆ ಕಾಡುತ್ತಿವೆ?… ಇದಕ್ಕೆ ನಿಸರ್ಗ ಸಹಜವಾದ ಮತ್ತು ಸಾಮಾಜಿಕವಾದ ಕಾರಣಗಳು ಯಾವುವು ಎಂಬುದನ್ನು ತಿಳಿಯಬೇಕು”;

ತಲೆ+ಅನ್+ಅರಿದಡೆ+ಏನೊ; ಅರಿದಡೆ=ತಿಳಿದರೆ/ಗ್ರಹಿಸಿಕೊಂಡರೆ; ಜ್ಞಾನ=ಅರಿವು/ತಿಳುವಳಿಕೆ; ನೆಲೆ+ಅನ್+ಅರಿಯದ+ಅನ್ನಕ್ಕರ; ನೆಲೆ=ಜಾಗ/ಗುರಿ/ಉದ್ದೇಶ;

ಜ್ಞಾನದ ನೆಲೆ=ಮಾನವ ಸಮುದಾಯದ ಜೀವನದಲ್ಲಿ “ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ; ಯಾವುದು ನೀತಿ–ಯಾವುದು ಅನೀತಿ” ಎಂಬ ಅರಿವನ್ನು ಪಡೆದುಕೊಳ್ಳುವುದು;

ಮಾಯದ ತಲೆಯನರಿದಡೇನೊ ಜ್ಞಾನದ ನೆಲೆಯನರಿಯದನ್ನಕ್ಕರ=ಮಾಯೆಯ ಮೂಲವನ್ನು ತಿಳಿದ ಮಾತ್ರಕ್ಕೆ ಎಲ್ಲವನ್ನೂ ಪಡೆದಂತಾಗುವುದಿಲ್ಲ. ಜ್ಞಾನದ ನೆಲೆಯನ್ನು ಅರಿಯಬೇಕು. ‘ಜ್ಞಾನದ ನೆಲೆ’ ಎಂದರೆ ವ್ಯಕ್ತಿಯು ತಾನು ಒಳ್ಳೆಯ ರೀತಿಯಲ್ಲಿ ಬದುಕನ್ನು ನಡೆಸಬೇಕು ಎಂಬ ಅರಿವನ್ನು ಪಡೆದುಕೊಳ್ಳುವುದು;

ನೆಲೆ+ಅನ್+ಅರಿದಡೆ+ಏನೊ; ತಾನು=ವ್ಯಕ್ತಿಯು; ತಾನ್+ಆಗದ+ಅನ್ನಕ್ಕರ;

ತಾನು ತಾನಾಗುವುದು=ಮಾನವ ಜೀವಿಯಾಗಿ ತನ್ನನ್ನು ನಿಯಂತ್ರಿಸುತ್ತಿರುವ ಮತ್ತು ಮುನ್ನಡೆಸುತ್ತಿರುವ ನಿಸರ್ಗದ ನಿಯಮ ಹಾಗೂ ಸಮಾಜದ ಕಟ್ಟುಪಾಡುಗಳು ಯಾವುವು ಎಂಬುದನ್ನು ಅರಿತುಕೊಂಡು ಬಾಳುವುದು;

ಜ್ಞಾನದ ನೆಲೆಯನರಿದಡೇನೊ ತಾನು ತಾನಾಗದನ್ನಕ್ಕರ=ಅರಿವನ್ನು ತಿಳಿದುಕೊಂಡ ಮಾತ್ರಕ್ಕೆ ಎಲ್ಲವನ್ನೂ ಪಡೆದಂತಾಗುವುದಿಲ್ಲ. ಪಡೆದ ಅರಿವನ್ನು

ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕು;

ಶರಣ=ಒಳ್ಳೆಯ ನಡೆನುಡಿಗಳಿಂದ ಬಾಳುವುದರ ಮೂಲಕ ಶಿವನನ್ನು ಒಲಿದವನು/ಶಿವನಿಗೆ ತಲೆಬಾಗಿದವನು; ನಿಲವು=ಇರುವಿಕೆ/ರೀತಿ/ ಆಲೋಚನೆ/ ಚಿಂತನೆ; ಧಾರೆ=ಪ್ರವಾಹ/ನಿರಂತರತೆ/ಎಡೆಬಿಡದೆ ಮುಂದುವರಿಯುವುದು; ಮೇರೆ=ಎಲ್ಲೆ/ಗಡಿ/ಮಿತಿ; ಉಂಟೆ=ಇದೆಯೇ; ಒಂದು ಧಾರೆ ಮೇರೆಯುಂಟೆ=ಯಾವುದೇ ಎಲ್ಲೆಯಿರುವುದಿಲ್ಲ/ಅನಂತವಾದುದು;

ತಾನು ತಾನಾದ ಶರಣರ ನಿಲವಿಂಗೆ ಒಂದು ಧಾರೆ ಮೇರೆಯುಂಟೆ=ತನ್ನನ್ನು ತಾನು ಅರಿತುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ಶರಣನ ವ್ಯಕ್ತಿತ್ವಕ್ಕೆ ಎಲ್ಲೆ ಎಂಬುದೇ ಇಲ್ಲ; ಗುಹೇಶ್ವರ=ಶಿವ/ಅಲ್ಲಮನ ಮೆಚ್ಚಿನ ದೇವರು/ ಅಲ್ಲಮನ ವಚನಗಳಲ್ಲಿ ಬಳಕೆಯಾಗಿರುವ ಅಂಕಿತನಾಮ;)

❖

42. **ಕಾಲುಗಳೆರಡೂ ಗಾಲಿ ಕಂಡಯ್ಯ**
ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ
ಬಂಡಿಯ ಹೊಡೆವವರೈವರು ಮಾನಿಸರು
ಒಬ್ಬರಿಗೊಬ್ಬರು ಸಮವಿಲ್ಲಯ್ಯ
ಅದರಿಚ್ಚೆಯನರಿದು ಹೊಡೆಯದಿದ್ದರೆ
ಅದರಚ್ಚು ಮುರಿಯಿತ್ತು ಗುಹೇಶ್ವರ.

ಜೀವನದಲ್ಲಿ ಎಲ್ಲಾ ಬಗೆಯ ಚಟುವಟಿಕೆಗಳಿಗೆ/ಆಗುಹೋಗುಗಳಿಗೆ/ಏಳುಬೀಳು ಗಳಿಗೆ ಕಾರಣವಾಗುವ ಕಣ್ಣು/ಕಿವಿ/ಮೂಗು/ತೊಗಲು/ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಂಡು ಬಾಳಬೇಕಾದ ಅಗತ್ಯವನ್ನು ಶಬ್ದಚಿತ್ರವೊಂದರ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

(ಕಾಲುಗಳ್+ಎರಡೂ; ಗಾಲಿ=ಚಕ್ರ; ಕಂಡ+ಅಯ್ಯ; ಕಂಡ=ನೋಡಿದ; ಕಂಡಯ್ಯ=ತಿಳಿದು ನೋಡು/ಅರಿತು ನೋಡು; ದೇಹ+ಎಂಬುದು+ಒಂದು; ದೇಹ=ಮಯ್/ಶರೀರ ಎಂಬುದು=ಎನ್ನುವುದು; ಬಂಡಿ=ಗಾಡಿ/ಚಕ್ಕಡಿ; ತುಂಬಿದ ಬಂಡಿ=ಸರಕಿನಿಂದ ತುಂಬಿದ ಗಾಡಿ; ಹೊಡೆವವರು +ಐವರು.

ಹೊಡೆವವರು=ಮುನ್ನಡೆಸುವವರು/ಮುಂದೆ ಮುಂದೆ ಸಾಗುವಂತೆ ಮಾಡುವವರು; ಐವರು=ಅಯ್ದು ಮಂದಿ; ಮಾನಿಸ=ಮಾನವ; ಮಾನವನ ದೇಹವನ್ನು ಸರಕು ತುಂಬಿದ ಬಂಡಿಯನ್ನಾಗಿಯೂ, ಮಯ್ ಮನಗಳನ್ನು ಹತೋಟಿಯಲ್ಲಿಟ್ಟು ಕೊಂಡು ಬದುಕಿನ ನಡೆನುಡಿಗಳನ್ನು ರೂಪಿಸುವ ಕಣ್ಣು, ಕಿವಿ, ಮೂಗು, ತೊಗಲು, ನಾಲಿಗೆಯೆಂಬ ಅಯ್ದು ಇಂದ್ರಿಯಗಳನ್ನು ಬಂಡಿಯನ್ನು ಮುನ್ನಡೆಸುವ ವ್ಯಕ್ತಿಗಳನ್ನಾಗಿಯೂ ಕಲ್ಪಿಸಿಕೊಳ್ಳಲಾಗಿದೆ;

ಒಬ್ಬರಿಗೆ+ಒಬ್ಬರು; ಸಮ+ಇಲ್ಲ+ಅಯ್ಯ; ಸಮ=ಒಂದೇ ಬಗೆ/ಒಂದೇ ರೀತಿ; **ಒಬ್ಬರಿಗೊಬ್ಬರು ಸಮವಿಲ್ಲಯ್ಯ**=ಕಣ್ಣಮುಂದಿನ ವಸ್ತುಗಳನ್ನು ಮತ್ತು ಲೋಕದಲ್ಲಿ ನಡೆಯುವ ಆಗುಹೋಗುಗಳನ್ನು ಕಾಣುತ್ತಿದ್ದಂತೆಯೇ, ಉಳಿದೆಲ್ಲ ಇಂದ್ರಿಯಗಳು ಮೋಹಕ್ಕೆ ಒಳಗಾಗಿ ಬಹುಬಗೆಯ ಒಳಮಿಡಿತಗಳಿಂದ ತುಡಿಯತೊಡಗುತ್ತವೆ. ಆಗ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ತುಂಬಾ ತೊಡಕಿನ ಕೆಲಸವಾಗುತ್ತದೆ ಎಂಬ ತಿರುಳಿನಲ್ಲಿ ಬಳಕೆಯಾಗಿವೆ;

ಅದರ+ಇಚ್ಚೆಯನ್+ಅರಿದು; ಅದರ=ಅಯ್ದು ಇಂದ್ರಿಯಗಳ; ಇಚ್ಚೆಯನ್=

ಬಯಕೆಯನ್ನು/ಆಸೆಯನ್ನು/ಕಾಮನೆಯನ್ನು; ಅರಿದು=ತಿಳಿದು/ಹೊಂದಾಣಿಕೆಯನ್ನು ಮಾಡಿಕೊಂಡು/ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂಬುದನ್ನು ತಿಳಿದು; ಹೊಡೆಯದೆ+ಇದ್ದರೆ; ಹೊಡೆಯದಿದ್ದರೆ=ಕೆಡುಕನ್ನುಂಟುಮಾಡುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳಿತಿನ ನಡೆನುಡಿಗಳನ್ನು ಆಚರಣೆಯಲ್ಲಿ ತರದಿದ್ದರೆ;

ಅದರ+ಅಚ್ಚು; ಅದರ=ಗಾಡಿಯ/ಬಂಡಿಯ; ಅಚ್ಚು=ಗಾಡಿ/ಬಂಡಿಯಲ್ಲಿನ ಎರಡು ಚಕ್ರಗಳನ್ನು ಒಂದುಗೂಡಿಸಲೆಂದು ಹಾಕಿರುವ ಕಬ್ಬಿಣದ ಉಪಕರಣ/ಇರಚಿ; ಮುರಿ=ತುಂಡಾಗು; ಮುರಿಯಿತ್ತು=ತುಂಡಾಗುತ್ತದೆ;

ಅದರಚ್ಚು ಮುರಿಯಿತ್ತು=ಮಾನವನ ಬದುಕು ಮುನ್ನಡೆಯದೆ, ದುರಂತದಲ್ಲಿ ಕೊನೆಗೊಳ್ಳುತ್ತದೆ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ;

ರೂಪಕವೆಂದರೆ ಶಬ್ದಗಳ ಮೂಲಕವೇ ಯಾವುದಾದರೊಂದು ಬಗೆಯ ಪ್ರಸಂಗವನ್ನು ಇಲ್ಲವೇ ಸಂಗತಿಯನ್ನು ಓದುಗನ/ಕೇಳುಗನ ಕಣ್ಣಿಗೆ ಕಟ್ಟುವಂತೆ ಅಂದರೆ ಮನದಲ್ಲಿ ಮೂಡುವಂತೆ ಬಣ್ಣಿಸುವುದು.)

❖

43. ಕಾಲೇ ಕಂಭಗಳಾದವೆನ್ನ
ದೇಹವೇ ದೇಗುಲವಾಯಿತ್ತಯ್ಯ
ಎನ್ನ ನಾಲಗೆಯೆ ಘಂಟೆ
ಶಿರ ಸುವರ್ಣದ ಕಳಶ
ಇದೇನಯ್ಯ
ಸರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯ
ಗುಹೇಶ್ವರ ನಿಮ್ಮ ಪ್ರಾಣಲಿಂಗಪ್ರತಿಷ್ಠೆ
ಪಲ್ಲಟವಾಗದಂತಿದ್ದೆನಯ್ಯ.

ಅಲ್ಲಮನು ರೂಪಕದ ನುಡಿಗಳ ಮೂಲಕ ಈ ವಚನದಲ್ಲಿ ತನ್ನ ದೇಹದ ಅಂಗಗಳನ್ನು ದೇಗುಲ ಶಿಲ್ಪದ ರಚನೆಯೊಂದಿಗೆ ಹೋಲಿಸುತ್ತಾ, ತನ್ನ ದೇಹವೇ ದೇವಾಲಯವಾಗಿರುವುದನ್ನು ಹೇಳಿದ್ದಾನೆ.

(ಕಾಲೇ=ನನ್ನ ಎರಡು ಕಾಲುಗಳು; ಕಂಭಗಳ್+ಆದವು+ಎನ್ನ; ಕಂಭ= ಮಾಳಿಗೆಗೆ ಆಸರೆಯಾಗಿ ನಿಲ್ಲಿಸುವ ಕಲ್ಲಿನ ಸಾಮಗ್ರಿ/ಉಪಕರಣ; ಆದವು= ಆಗಿರುವುವು; ಎನ್ನ=ನನ್ನ; ದೇಹ=ಮಯ್/ಶರೀರ; ದೇಗುಲ+ಆಯಿತ್ತು+ಅಯ್ಯ; ದೇವ+ಕುಲ=ದೇಗುಲ; ದೇವ=ಜೀವನದಲ್ಲಿ ಬರುವ ಎಡರುತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು ದೇವರು’ ಎಂದು ಮಾನವ ಸಮುದಾಯ ನಂಬಿದೆ; ಕುಲ=ವಾಸದ ಜಾಗ/ಮನೆ/ ನೆಲೆ; ದೇಗುಲ=ದೇವರ ವಿಗ್ರಹ ಇರುವ ಮಂದಿರ; ಆಯಿತ್ತು=ಆಗಿದೆ;

ಘಂಟೆ=ಕಂಚು/ಹಿತ್ತಾಳೆ ಮೊದಲಾದ ಲೋಹಗಳಿಂದ ತಯಾರಿಸಿದ ಉಪಕರಣ. ದೇವರ ವಿಗ್ರಹಕ್ಕೆ ಮಂಗಳಾರತಿಯನ್ನು ಮಾಡುವಾಗ ಇದನ್ನು ಬಾರಿಸುವುದರ ಮೂಲಕ ನಾದವನ್ನು ಹೊರಡಿಸುತ್ತಾರೆ/ಗಂಟೆ; ಶಿರ=ತಲೆ; ಸುವರ್ಣ=ಚಿನ್ನ/ಹೊನ್ನು/ಬಂಗಾರ; ಕಳಶ=ದೇಗುಲದ ಗೋಪುರದ ತುತ್ತತುದಿಯಲ್ಲಿ ಕಂಡುಬರುವ ಕಂಚು/ಹಿತ್ತಾಳೆ/ಚಿನ್ನದ ತಗಡಿನ ಹೊದಿಕೆಯಿಂದ ಕೂಡಿದ ವಸ್ತು; ಇದು+ಏನ್+ಅಯ್ಯ; ಸರ=ಉಲಿ/ದನಿ/ಶಿವನ ಹೆಸರಿನ ಉಚ್ಚಾರಣೆ; ಸಿಂಹಾಸನ+ಆಗಿ+ಇದ್ದಿತ್ತು+ಅಯ್ಯ; ಸಿಂಹ+ಆಸನ; ಸಿಂಹ=ಕಾಡಿನಲ್ಲಿರುವ ಒಂದು ಬಗೆಯ ಪ್ರಾಣಿ; ಆಸನ=ಗದ್ದುಗೆ/ಕುಳಿತುಕೊಳ್ಳಲು ಬಳಸುವ ವಸ್ತು; ಸಿಂಹಾಸನ=ಕಾಡಿನ ರಾಜನೆಂದು ಹೆಸರು ಪಡೆದಿರುವ ಸಿಂಹದ ಮೊಗದ ಕೆತ್ತನೆಯಿಂದ ಕೂಡಿರುವ ಗದ್ದುಗೆ;

ಪ್ರಾಣಲಿಂಗ=ಶಿವಶರಣಶರಣೆಯರ ಮಯ್–ಮನಗಳಲ್ಲಿ ನೆಲೆಸಿರುವ ಲಿಂಗ/ಶಿವಶರಣಶರಣೆಯರ ಒಳಿತಿನ ನಡೆನುಡಿಗಳಲ್ಲಿ ಒಂದಾಗಿ ಬೆರೆತಿರುವ ಲಿಂಗ; ಪ್ರತಿಷ್ಠೆ=ಹಿರಿಮೆ; ಪಲ್ಲಟ+ಆಗದ+ಅಂತು+ ಇದ್ದೆನ್+ಅಯ್ಯ; ಪಲ್ಲಟ=ಬದಲಾವಣೆ/ಮಾರ್‍ಪಾಟು/ತಲೆಕೆಳಗು; ಅಂತು=ಹಾಗೆ;

ಪ್ರತಿಷ್ಠೆ ಪಲ್ಲಟವಾಗದಂತೆ=ಗುಹೇಶ್ವರನ ಹಿರಿಮೆಗೆ ಹಾನಿ ತಟ್ಟದಂತೆ/ಕೆಟ್ಟಹೆಸರು ಬರದಂತೆ/ಕಳಂಕ ಬಾರದಂತೆ; ಇದ್ದೆನ್+ಅಯ್ಯ; ಇದ್ದೆನ್= ಇರುವೆನು; ಇದ್ದೆನಯ್ಯ=ನಡೆದುಕೊಳ್ಳುತ್ತಿದ್ದೇನೆ.)

❖

44. ಕುಲಮದ ಛಲಮದ ವಿದ್ಯಾಮದದವರ ತೋರದಿರಾ
ಅವರ ಆರೂಢ ಪದವಿಯನೆನಗೆ ತೋರದಿರಾ
ಅವರ ಗರುವ ಗಂಭೀರತನವನೆನಗೆ ತೋರದಿರಾ
ಶಮೆದಮೆಯುಳಿದು ದಶಮುಖ ನಿಂದು
ಲಿಂಗದಲ್ಲಿ ಲೀಯವಾದವರನಲ್ಲದೆ
ಎನಗೆ ತೋರದಿರಾ ಗುಹೇಶ್ವರ.

"ನಾವೇ ಎಲ್ಲವನ್ನೂ ತಿಳಿದವರು/ನಾವೇ ಎಲ್ಲರಿಗಿಂತ ದೊಡ್ಡವರು/ನಮ್ಮಿಂದಲೇ ಎಲ್ಲವೂ ನಡೆಯುತ್ತಿದೆ" ಎಂಬ ಮೇಲರಿಮೆಯ ಒಳಮಿಡಿತದಿಂದ ಕೂಡಿ ಕುಲಮದ, ಚಲಮದ, ವಿದ್ಯಾಮದದಿಂದ ಮೆರೆಯುತ್ತಾ, ಇತರರನ್ನು ಕೀಳಾಗಿ ಕಾಣುವಂತಹ ವ್ಯಕ್ತಿಗಳ ನಡೆನುಡಿಗಳನ್ನು ಈ ವಚನದಲ್ಲಿ ಅಲ್ಲಗಳೆಯಲಾಗಿದೆ.

'ಕುಲಮದ' ಎಂದರೆ ವ್ಯಕ್ತಿಯು ತಾನು ಹುಟ್ಟಿ ಬೆಳೆದು ಬಾಳುತ್ತಿರುವ ಜಾತಿ/ಮತ/ವಂಶ/ಮನೆತನವು ದೊಡ್ಡದು ಎಂಬ ತಿಳಿಗೇಡಿತನದ ಒಳಮಿಡಿತಕ್ಕೆ ಒಳಗಾಗಿ, ಸಮಾಜದಲ್ಲಿರುವ ಇನ್ನಿತರ ಜಾತಿ/ಮತ/ವಂಶ/ಮನೆತನಕ್ಕೆ ಸೇರಿದ ಜನಸಮುದಾಯವನ್ನು ಕೀಳೆಂದು ಕಡೆಗಣಿಸಿ, ಸೊಕ್ಕಿನಿಂದ ಕೊಬ್ಬಿ ಮೆರೆಯುವ ನಡೆನುಡಿ.

ಇನ್ನಿತರ ಜಾತಿ/ಮತಗಳಿಗೆ ಸೇರಿದ ವ್ಯಕ್ತಿಗಳು ವಿದ್ಯೆಯನ್ನು ಪಡೆದು, ಅರಿವನ್ನು ಹೊಂದಿ, ಒಳ್ಳೆಯ ಗದ್ದುಗೆಗಳನ್ನೇರಿ, ಆಸ್ತಿಪಾಸ್ತಿ, ಹಣಕಾಸನ್ನು ಸಂಪಾದಿಸಿ ಸಮಾಜದಲ್ಲಿ ತಲೆಯೆತ್ತಿ ಬಾಳುವುದನ್ನು ಕುಲಮದವುಳ್ಳ ವ್ಯಕ್ತಿಗಳು ಸಹಿಸುವುದಿಲ್ಲ. ಇದಕ್ಕಾಗಿ ಜಾತಿ/ಮತ/ದೇವರ ಹೆಸರಿನಲ್ಲಿ ಇಲ್ಲಸಲ್ಲದ/ಸುಳ್ಳಿನಿಂದ ಕೂಡಿದ ಕಟ್ಟುಕತೆಯ ಸಂಗತಿಗಳನ್ನು ಹರಡುತ್ತಾ, ನೂರೆಂಟು ಬಗೆಯ ಜಾತಿ/ಮತಗಳಿಂದ ಹೆಣೆದುಕೊಂಡು ರೂಪುಗೊಂಡಿರುವ ಸಮಾಜದ ಜನಸಮುದಾಯಗಳ ಮನದಲ್ಲಿ ಪರಸ್ಪರ ಅನುಮಾನದ, ಅಪನಂಬಿಕೆಯ, ಹಗೆತನದ ಬೆಂಕಿ ಹತ್ತಿ ಉರಿಯುವಂತೆ ಮಾಡುತ್ತಾ, ಸಮಾಜದಲ್ಲಿನ ಜನತೆಯು ಒಗ್ಗಟ್ಟಿನಿಂದ ಜತೆಗೂಡಿ ನೆಮ್ಮದಿಯಿಂದ ಬದುಕನ್ನು ನಡೆಸದಂತಹ ಹುನ್ನಾರಗಳನ್ನು ಹೂಡುತ್ತಿರುತ್ತಾರೆ.

'ಛಲಮದ' ಎಂದರೆ ವ್ಯಕ್ತಿಯು ತಾನು ತಿಳಿದುಕೊಂಡಿರುವುದು, ಹೇಳುತ್ತಿರುವುದು, ಮಾಡುತ್ತಿರುವುದೇ ಸರಿ ಎಂಬ ಒಳಮಿಡಿತದಿಂದ ಕೂಡಿ, ಇತರರು ನೀಡುವ ಯಾವುದೇ ಬಗೆಯ ಸಲಹೆ ಮತ್ತು ತಿಳುವಳಿಕೆಯ

ಮಾತುಗಳಿಗೆ ಬೆಲೆಕೊಡದ ನಡೆನುಡಿ. ಚಲಮದವುಳ್ಳ ವ್ಯಕ್ತಿಗಳು ತಮ್ಮ ಹಠಮಾರಿತನ ನಡೆನುಡಿಗಳಿಂದ "ತಾನು, ತನ್ನ ಕುಟುಂಬ, ತನ್ನ ಸಮಾಜ ಹಾಳಾದರೂ ಲೆಕ್ಕಿಸದೆ, ಇತರರಿಗೆ ಕೇಡನ್ನು ಬಗೆಯಲು" ಮುನ್ನುಗ್ಗುತ್ತಾರೆ.

'ವಿದ್ಯಾಮದ' ಎಂದರೆ ವ್ಯಕ್ತಿಯು ಅಕ್ಕರದ ಓದು ಬರಹದ ಕಲಿಕೆಯಿಂದ ಪಡೆದ ಅರಿವಿನಿಂದ ತನಗೆ ಮತ್ತು ಸಹಮಾನವರಿಗೆ ಒಳಿತನ್ನು ಉಂಟುಮಾಡುವ ಕೆಲಸಗಳನ್ನು ಮಾಡದೆ, ತಾನೊಬ್ಬನೇ ಹೆಚ್ಚಿನ ತಿಳುವಳಿಕೆಯುಳ್ಳವನು ಎಂಬ ಒಳಮಿಡಿತದಿಂದ ಕೂಡಿ, ಇನ್ನುಳಿದವರನ್ನು ತಿಳಿಗೇಡಿಗಳೆಂದು ಕಡೆಗಣಿಸುವ ನಡೆನುಡಿ. ವಿದ್ಯಾಮದವುಳ್ಳವರು ತಾವು ಕಲಿತ ವಿದ್ಯೆಯಿಂದ ಸಹಮಾನವರನ್ನು ವಂಚಿಸುವ ಕಲೆಯಲ್ಲಿ ಪರಿಣತರಾಗಿ ಜನಸಮುದಾಯಗಳ ಬದುಕನ್ನು ಹಾಳುಮಾಡುವುದಲ್ಲದೇ, ಇತರರನ್ನು ಹೆಜ್ಜೆಹೆಜ್ಜೆಗೂ ಅಪಮಾನ ಗೊಳಿಸುತ್ತಿರುತ್ತಾರೆ. ತೋರದಿರು+ಆ; ತೋರದಿರು=ತೋರಬೇಡ/ನನ್ನ ಕಣ್ಣಿಗೆ ಕಾಣುವಂತೆ ಮಾಡಬೇಡ;

ನೆಮ್ಮದಿಯ ಬದುಕಿಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ, ಕೆಲಸ, ಸಂಪತ್ತು, ಆರೋಗ್ಯವನ್ನು ಪಡೆದು ಒಲವು-ನಲಿವುಗಳಿಂದ ಜತೆಗೂಡಿ ಬಾಳಬೇಕಾದ ಜನಸಮುದಾಯಕ್ಕೆ ಎಲ್ಲಾ ರೀತಿಯಿಂದಲೂ ಕೇಡನ್ನುಂಟುಮಾಡುವ ಕುಲಮದ, ಚಲಮದ, ವಿದ್ಯಾಮದವುಳ್ಳ ವ್ಯಕ್ತಿಗಳಿಂದ ದೂರವಿರಬೇಕೆಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

ಮಯ್ ಮನಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ನಡೆನುಡಿ ಗಳಿಂದ ತಮಗೆ ಮತ್ತು ಸಮಾಜದಲ್ಲಿನ ಸಹಮಾನವರಿಗೆ ಒಳಿತನ್ನುಂಟು ಮಾಡುವ ವ್ಯಕ್ತಿಗಳನ್ನು ನೋಡುವುದು ಮತ್ತು ಅಂತಹವರೊಡನೆ ಮಾತ್ರ ಒಡನಾಡುವುದು ಒಳ್ಳೆಯದೆಂಬ ಇಂಗಿತವನ್ನು ಈ ವಚನದಲ್ಲಿ ಸೂಚಿಸಲಾಗಿದೆ.

ಆರೂಢ=ಪಡೆದಿರುವ/ಹೊಂದಿರುವ; ಪದವಿಯನ್+ಎನಗೆ; ಪದವಿ= ಹುದ್ದೆ/ಗದ್ದುಗೆ; ಆರೂಢ ಪದವಿ=ಸಮಾಜದಲ್ಲಿ ಏರಿರುವಂತಹ ದೊಡ್ಡ ಗದ್ದುಗೆ/ ಮೇಲಿನ ಅಂತಸ್ತು; ಎನಗೆ=ನನಗೆ; ಗರುವ=ಸೊಕ್ಕು/ಹೆಮ್ಮೆ; ಗಂಭೀರತನವನ್ +ಎನಗೆ; ಗಂಭೀರತನ=ಜನರೊಡನೆ ಹೆಚ್ಚು ಮಾತುಕತೆಗಳನ್ನಾಡದೆ/ಒಲವು ನಲಿವುಗಳಿಂದ ಬೆರೆಯದೆ ಗತ್ತಿನಿಂದ ಕೂಡಿದ ನಡೆನುಡಿ;

ಶಮೆ+ದಮೆ+ಉಳಿದು; ಶಮೆ= ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು; ದಮೆ=ಕಣ್ಣು/ಕಿವಿ/ಮೂಗು/ತೊಗಲು/ನಾಲಿಗೆಯಿಂದ ಉಂಟಾಗುವ

ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟು ಕೊಂಡು ಬಾಳುವುದು; ಉಳಿದು= ಹೊಂದಿ/ಪಡೆದು; ದಶ=ಹತ್ತು; ಮುಖ=ದಿಕ್ಕು/ದಿಶೆ/ಎಡೆ; ದಶಮುಖ= ಎಲ್ಲೆಡೆಗಳಲ್ಲಿಯೂ /ಎಲ್ಲಾ ಕಡೆಗಳಲ್ಲಿಯೂ; ನಿಂದು=ನೆಲೆಸಿ/ಹರಡಿ; ಲಿಂಗ+ಅಲ್ಲಿ; ಲೀಯ+ಆದವರನ್+ಅಲ್ಲದೆ;

ಲಿಂಗ=ಈಶ್ವರ/ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯನ್ನು ನೀಡುವ ದೇವರು; ಲೀಯ=ಬೆರೆಯುವಿಕೆ/ಕೂಡಿಕೊಳ್ಳುವಿಕೆ;

ಲಿಂಗದಲ್ಲಿ ಲೀಯವಾದವರು= ಒಳ್ಳೆಯತನದ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವುದನ್ನೇ ಲಿಂಗವೆಂದು ನಂಬಿ ಬಾಳುತ್ತಿರುವವರು; ಅಲ್ಲದೆ= ಹೊರತುಪಡಿಸಿ/ಬಿಟ್ಟು; ಎನಗೆ ತೋರದಿರಾ=ನನಗೆ ತೋರಿಸಬೇಡ/ಕಾಣಿಸಬೇಡ.)

❖

45. ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು
ವೀರರೂ ಅಲ್ಲ ಧೀರರೂ ಅಲ್ಲ
ಇದು ಕಾರಣ
ನೆರೆ ಮೂರುಲೋಕವೆಲ್ಲವು
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ.

ತಾವು ಮಾಡಬೇಕಾದ ಕೆಲಸವನ್ನು ಒಲವು ನಲಿವುಗಳಿಂದ ಸರಿಯಾಗಿ ಮಾಡದೆ, ಹತ್ತಾರು ಬಗೆಯ ನೆಪಗಳನ್ನೊಡ್ಡಿ, ಕಾಲ ಕಳೆಯುವಂತಹ ವ್ಯಕ್ತಿಗಳ ನಡೆನುಡಿಗಳನ್ನು ಈ ವಚನದಲ್ಲಿ ಟೀಕಿಸಲಾಗಿದೆ.

ದೂರದ ಪಯಣಕ್ಕಾಗಿ ಇಲ್ಲವೇ ಕಾಳಗದ ಕಣಕ್ಕೆ ತೆರಳುವುದಕ್ಕಾಗಿ ಕೊಟ್ಟಿರುವ ಕುದುರೆಯನ್ನು ಹತ್ತಿ, ಅದನ್ನು ಹತೋಟಿಯಲ್ಲಿಟ್ಟುಕೊಂಡು ಸವಾರಿ ಮಾಡುತ್ತ ಮುನ್ನಡೆಸುವ ಕುಶಲತೆ ಹಾಗೂ ತಲುಪಬೇಕಾದ ಎಡೆಯತ್ತ ಹೋಗುವ ಹಂಬಲವಿಲ್ಲದ ವ್ಯಕ್ತಿಗಳು, ತಮ್ಮ ಕಣ್ಣಮುಂದಿರುವ ಕುದುರೆಯನ್ನು "ಸವಾರಿಗೆ ಲಾಯಕ್ಕಾಗಿಲ್ಲ" ಎಂದು ಆರೋಪಿಸಿ, ಕುದುರೆಯ ಮೊಗಕ್ಕೆ ಹಾಕುವ ಕಡಿವಾಣ ಮತ್ತು ಅದರ ಬೆನ್ನಿನ ಮೇಲೆ ಹಾಕಬೇಕಾದ ಜೀನನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಮತ್ತೊಂದು ಕುದುರೆಗಾಗಿ ಹುಡುಕಾಡುತ್ತ ಅಲೆಯುತ್ತಿರುವ ಸಂಗತಿಯೊಂದನ್ನು ಒಂದು ರೂಪಕವನ್ನಾಗಿ ಅಲ್ಲಮನು ಚಿತ್ರಿಸಿದ್ದಾನೆ. ಈ ಶಬ್ದಚಿತ್ರವು **"ವ್ಯಕ್ತಿಗಳು ತಮ್ಮ ಮೇಲಿನ ಹೊಣೆಗಾರಿಕೆಯಿಂದ ಜಾರಿಕೊಂಡು ತಿಳಿಗೇಡಿತನದಿಂದ ನಡೆದುಕೊಳ್ಳುವುದನ್ನು"** ಸೂಚಿಸುತ್ತದೆ.

ಜಗತ್ತಿನಲ್ಲಿ ನಿತ್ಯವೂ ನೂರೆಂಟು ಬಗೆಯ ಕೆಲಸಗಳಲ್ಲಿ ತೊಡಗಿರುವ ಜನರಲ್ಲಿ ಕೆಲವರು, ತಾವು ಮಾಡುತ್ತಿರುವ ಕೆಲಸದಲ್ಲಿ ತಮ್ಮ ಮಯ್ ಮನಗಳನ್ನು ಇಡಿಯಾಗಿ ತೊಡಗಿಸದೆ, ಅಸಡ್ಡೆ ಮತ್ತು ಸೋಮಾರಿತನದಿಂದ ಕೆಲಸವನ್ನು ಹದಗೆಡಿಸುತ್ತಾರೆ. ಇದಕ್ಕೆ ಬದಲಾಗಿ ಮತ್ತೊಂದು ಕೆಲಸವನ್ನು ಹೆಸರಿಸುತ್ತಾ, ಅದರ ಕಡೆಗೆ ಒಲವನ್ನು ತೋರಿಸುತ್ತಾ **"ಆ ಕೆಲಸ ದೊರೆತಿದ್ದರೆ ತುಂಬಾ ಚೆನ್ನಾಗಿ ಮಾಡುತ್ತಿದ್ದೆ"** ಎಂದು ಹೇಳಿಕೊಳ್ಳುವುದನ್ನು ಪದೇ ಪದೇ ನಾವೆಲ್ಲರೂ

ಕೇಳುತ್ತಿರುತ್ತೇವೆ. ಈ ಬಗೆಯ ಮಾತುಗಳನ್ನು ಕೆಲವೊಮ್ಮೆ ನಾವು ಮಾಡಬೇಕಾಗಿರುವ ಕೆಲಸದ ಬಗೆಗೂ ನಾವೇ ಆಡಿಕೊಳ್ಳುತ್ತಿರುತ್ತೇವೆ.

ತಮ್ಮ ಬದುಕು, ಸಹಮಾನವರ ಮತ್ತು ಸಮಾಜದ ಒಳಿತಿನ ಬಗ್ಗೆ ಕಾಳಜಿ ಯಿಲ್ಲದ ಜನರು ತಾವು ಮಾಡಬೇಕಾಗಿರುವ ಕೆಲಸದಲ್ಲಿ ಕುಂದುಕೊರತೆಗಳನ್ನು ಹುಡುಕಿ, ಅದನ್ನು ಕಯ್ ಬಿಡುವುದಕ್ಕಾಗಿ ತಮ್ಮ ಸುತ್ತಮುತ್ತಲಿನ ನಿಸರ್ಗದ ಪರಿಸರ/ಸಾಮಾಜಿಕ ವಾತಾವರಣ/ ಹಣಕಾಸಿನ ಸಂಗತಿಗಳಲ್ಲಿರುವ ಅಡೆತಡೆ ಗಳನ್ನು ನೆಪಗಳನ್ನಾಗಿ ಮುಂದೊಡ್ಡುವುದರಲ್ಲಿ ಕಡುಜಾಣರಾಗಿರುತ್ತಾರೆಯೇ ಹೊರತು, ತಮ್ಮ ಪಾಲಿನ ಕೆಲಸವನ್ನು ಚೆನ್ನಾಗಿ ಮತ್ತು ಸರಿಯಾಗಿ ಮಾಡುವುದಕ್ಕಾಗಿ ತಮ್ಮಲ್ಲಿರುವ ಜಾಣತನ/ಕುಶಲತೆ/ಕಸುವನ್ನು ಒಗ್ಗೂಡಿಸಿ ದುಡಿಯಬೇಕೆಂಬ ಮನಸ್ಸನ್ನು ಹೊಂದಿರುವುದಿಲ್ಲ.

ಶಿವಶರಣಶರಣೆಯರ ಪಾಲಿಗೆ "ಲಿಂಗ" ಎಂದರೆ ಕಲ್ಲು/ಮಣ್ಣು/ ಲೋಹಗಳಿಂದ ರೂಪುಗೊಂಡಿರುವ ಶಿವನಲ್ಲ; ಸಮಾಜದಲ್ಲಿನ ಸಹಮಾನವರಿಗೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನೇ ಲಿಂಗರೂಪಿಯಾದ ಶಿವನೆಂದು ಅವರು ನಂಬಿದ್ದರು. ಆದುದರಿಂದಲೇ ಲಿಂಗದ ಬಗೆಗಿನ ಒಲವಿಗೆ/ ಪೂಜೆಗೆ/ನೆನಪಿಗೆ ವ್ಯಕ್ತಿಗಳ ಸಾಮಾಜಿಕ ನಡೆನುಡಿಗಳನ್ನು ತಳಕುಹಾಕಿದ್ದರು.

ತಾವು ಮಾಡಬೇಕಾದ ಕೆಲಸವನ್ನು ಕಡೆಗಣಿಸುವ ವ್ಯಕ್ತಿಗಳು ಲಿಂಗದ ಸ್ವರೂಪವನ್ನಾಗಲಿ/ಲಿಂಗದ ಒಳಿತಿನ ಮೊಗವನ್ನಾಗಲಿ ತಿಳಿಯಲಾರರು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು. ಈ ಹಿನ್ನೆಲೆಯಲ್ಲಿ ತಮ್ಮ ಪಾಲಿನ ಕೆಲಸವನ್ನು ಕಡೆಗಣಿಸುವವರನ್ನು ಕುರಿತು **"ಗುಹೇಶ್ವರನೆಂಬ ಲಿಂಗವನು ಅವರೆತ್ತ ಬಲ್ಲರೋ"** ಎಂದು ಕಟುವಾಗಿ ಟೀಕಿಸಲಾಗಿದೆ.

(ಕೊಟ್ಟ=ನೀಡಿದ; ಕುದುರೆ+ಅನ್+ಏರಲ್+ಅರಿಯದೆ; ಅನ್=ಅನ್ನು; ಏರಲ್=ಹತ್ತಿ ಸವಾರಿ ಮಾಡಲು; ಅರಿ=ತಿಳಿ; ಅರಿಯದೆ=ತಿಳಿಯದೆ/ಕುಶಲತೆ ಯಿಲ್ಲದೆ/ಚಾಕಚಕ್ಯತೆಯಿಲ್ಲದೆ; ಮತ್ತು+ಒಂದು; ಮತ್ತೊಂದು=ಬೇರೊಂದನ್ನು/ ಇನ್ನೊಂದನ್ನು; ಬಯಸು=ಇಚ್ಚಿಸು/ಕೇಳು; ವೀರ=ಕೆಚ್ಚೆದೆಯುಳ್ಳವನು/ ಕಸುವುಳ್ಳವನು; ಧೀರ=ಎದೆಗಾರಿಕೆಯುಳ್ಳವನು/ದಿಟ್ಟತನವುಳ್ಳವನು; ನೆರೆ= ಇಡಿಯಾಗಿ/ಸಂಪೂರ್ಣವಾಗಿ/ಎಲ್ಲವನ್ನು ಒಳಗೊಂಡು;

ಮೂರುಲೋಕ+ಎಲ್ಲವು; ಮೂರುಲೋಕ=ದೇವಲೋಕ/ಭೂಲೋಕ/ ಪಾತಾಳಲೋಕ ಎಂಬ ಮೂರು ಲೋಕಗಳು. ಮಾನವರು ನೆಲೆಸಿರುವ

ಭೂಲೋಕದ ಕೆಳಗೆ ನಾಗದೇವತೆಗಳು ನೆಲೆಸಿರುವ ಪಾತಾಳಲೋಕ ಮತ್ತು ಭೂಲೋಕದ ಮೇಲೆ ಇಂದ್ರ ಮೊದಲಾದ ದೇವತೆಗಳು ನೆಲೆಸಿರುವ ದೇವಲೋಕವಿದೆ ಎಂಬ ಕಲ್ಪನೆಯು ಜನಮನದಲ್ಲಿತ್ತು; ಹಲ್ಲಣ=ಜೀನು/ ಕುದುರೆಯ ಬೆನ್ನ ಮೇಲೆ ಸವಾರನು ಕುಳಿತುಕೊಳ್ಳಲು ನೆರವಾಗಲು ತಯಾರಿಸಿರುವ ತೊಗಲಿನ ವಸ್ತು; ಬಳಲುತ್ತ+ಐದಾರೆ; ಬಳಲು= ಆಯಾಸಗೊಳ್ಳುವುದು/ ದಣಿಯುವುದು; ಐದಾರೆ=ಎಯ್ದಾರೆ> ಅಯ್ದಾರೆ=ಇದ್ದಾರೆ;

ಬಳಲುತ್ತೈದಾರೆ=ದಣಿದು ಸುಸ್ತಾಗುತ್ತಿದ್ದಾರೆ/ಆಯಾಸದಿಂದ ಬಸವಳಿಯುತ್ತಿದ್ದಾರೆ; ಗುಹೇಶ್ವರನ್+ಎಂಬ; ಲಿಂಗ+ಅನ್+ ಅವರ್+ಎತ್ತ; ಗುಹೇಶ್ವರ=ಶಿವ; ಎತ್ತ=ಯಾವ ಕಡೆಯಿಂದ/ರೀತಿಯಿಂದ; ಬಲ್ಲ=ತಿಳಿ/ಅರಿ; ಬಲ್ಲರೋ= ತಿಳಿದಿದ್ದಾರೆಯೋ/ಅರಿತಿದ್ದಾರೆಯೋ; ಎತ್ತ ಬಲ್ಲರೋ= ಯಾವ ರೀತಿಯಲ್ಲಿ ತಾನೆ ತಿಳಿಯಬಲ್ಲರು).

❖

46. ಕ್ರಿಯಾಮಥನವಿಲ್ಲದೆ ಕಾಣ ಬಂದುದೇ
ಇಕ್ಷುವಿನೊಳಗಣ ಮಧುರ
ಕ್ರಿಯಾಮಥನವಿಲ್ಲದೆ ಕಾಣ ಬಂದುದೇ
ತಿಲದೊಳಗಣ ತೈಲ
ಕ್ರಿಯಾಮಥನವಿಲ್ಲದೆ ಕಾಣ ಬಂದುದೇ
ಕ್ಷೀರದೊಳಗಣ ಘೃತ
ಕ್ರಿಯಾಮಥನವಿಲ್ಲದೆ ಕಾಣ ಬಂದುದೇ
ಕಾಷ್ಠದೊಳಗಣ ಅಗ್ನಿ
ಇದು ಕಾರಣ ಗೊಹೇಶ್ವರ ಲಿಂಗವ
ತನ್ನೊಳರಿದೆನೆಂಬ ಮಹಂತಂಗೆಲ್ಲಡೆ
ಸತ್ಕ್ರಿಯಾಚರಣೆಯೇ ಸಾಧನ ಕಾಣಿ ಭೋ.

ಕಬ್ಬಿನ ಜಲ್ಲೆಯನ್ನು ಗಾಣಕ್ಕೆ ಕೊಟ್ಟು ಅರೆದಾಗ ಸಿಹಿಯಾದ ಕಬ್ಬಿನ ಹಾಲು ದೊರಕುತ್ತದೆ; ಎಳ್ಳಿನ ಕಾಳುಗಳನ್ನು ಗಾಣದಿಂದ ಅರೆದಾಗ ಎಣ್ಣೆಯು ದೊರಕುತ್ತದೆ; ಹಾಲಿಗೆ ಹೆಪ್ಪನ್ನು ಹಾಕಿ ತಯಾರಿಸಿದ ಮೊಸರನ್ನು ಕಡೆದಾಗ ಬರುವ ಬೆಣ್ಣೆಯನ್ನು ಕಾಯಿಸಿದರೆ ತುಪ್ಪ ದೊರೆಯುತ್ತದೆ; ಒಣಗಿದ ಮರದ ತುಂಡಿಗೆ ಸುಡುವ ಕಿಡಿಗಳನ್ನು ಇಲ್ಲವೇ ಉರಿಯನ್ನು ಮುಟ್ಟಿಸಿದಾಗ ಒಣಗಿದ ಮರದ ತುಂಡು ಬೆಂಕಿಯನ್ನು ಕಾರತೊಡಗುತ್ತದೆ; ಇಲ್ಲೆಲ್ಲಾ ಅರೆಯುವ/ಕಡೆಯುವ/ಮುಟ್ಟಿಸುವ ಕ್ರಿಯೆಯು ನಡೆಯದಿದ್ದರೆ ಏನನ್ನೂ ಪಡೆಯಲಾಗುತ್ತಿರಲಿಲ್ಲ.

ಈ ಸಂಗತಿಗಳ ಮೂಲಕ ಯಾವುದೇ ಒಬ್ಬ ವ್ಯಕ್ತಿಯು ತಾನು ಪಡೆದ ಅರಿವನ್ನು ತನ್ನ ದಿನನಿತ್ಯದ ನಡೆನುಡಿಗಳಲ್ಲಿ ಅಳವಡಿಸಿಕೊಂಡು ಆಚರಣೆಗೆ ತಂದಾಗ ಮಾತ್ರ ಬದುಕು ಹಸನಾಗುತ್ತದೆಯೇ ಹೊರತು, ಅದು ಕೇವಲ ಮಾತಿನ ರೂಪದಲ್ಲಿದ್ದರೆ, ಅಂತಹ ಅರಿವಿನಿಂದ ಯಾವುದೇ ಪ್ರಯೋಜನವಿಲ್ಲವೆಂಬ ನಿಲುವನ್ನು ಈ ವಚನದಲ್ಲಿ ಹೇಳಲಾಗಿದೆ.

(ಕ್ರಿಯಾ+ಮಥನ+ಇಲ್ಲದೆ; ಕ್ರಿಯಾ=ಕೆಲಸ/ಕಾರ್ಯ/ಕ್ರಿಯೆ; ಮಥನ=ಹಿಂಡುವಿಕೆ /ತೀಡುವಿಕೆ/ಉಜ್ಜುವಿಕೆ; ಕ್ರಿಯಾಮಥನ=ಹಿಂಡುವ/ತೀಡುವ/ಉಜ್ಜುವ ಕೆಲಸ ಗಳಲ್ಲಿ ತೊಡಗುವುದು; ಕಾಣಬಂದುದೇ=ನೋಡಲು ಬರುವುದೇ/ಕಾಣಲು

ಆಗುವುದೇ/ಪಡೆಯಲು ಆಗುತ್ತದೆಯೇ; ಇಕ್ಷುವಿನ್+ಒಳಗಣ; ಇಕ್ಷು=ಕಬ್ಬು; ಇಕ್ಷುವಿನ=ಕಬ್ಬಿನ; ಒಳಗಣ=ಒಳಗೆ ಇರುವ; ಮಧುರ=ಸಿಹಿ/ಸವಿ;

ಇಕ್ಷುವಿನೊಳಗಣ ಮಧುರ=ಕಬ್ಬಿನ ಜಲ್ಲೆಯೊಳಗಿರುವ ಸಿಹಿಯಾದ ರಸ; ತಿಲದ+ಒಳಗಣ; ತಿಲ=ಎಳ್ಳು/ಎಳ್ಳಿನ ಕಾಳು; ತೈಲ=ಎಣ್ಣೆ/ಜಿಡ್ಡು; **ತಿಲದೊಳಗಿನ ತೈಲ**=ಎಳ್ಳು ಕಾಳಿನ ಒಳಗಿರುವ ಜಿಡ್ಡು/ಎಣ್ಣೆ; ಕ್ಷೀರದ+ಒಳಗಣ; ಕ್ಷೀರ=ಹಾಲು; ಘೃತ=ತುಪ್ಪ; **ಕ್ಷೀರದೊಳಗಣ ಘೃತ**=ಹೆಪ್ಪುಗೊಂಡ ಹಾಲಿನಲ್ಲಿರುವ ತುಪ್ಪದ ಕಣ;

ಕಾಷ್ಠದ+ಒಳಗಣ; ಕಾಷ್ಠ=ಮರದ ತುಂಡು/ಕಟ್ಟಿಗೆ; ಅಗ್ನಿ=ಬೆಂಕಿ; **ಕಾಷ್ಠದೊಳಗಣ ಅಗ್ನಿ**=ಮರದ ಕಟ್ಟಿಗೆಯಲ್ಲಿರುವ ಉರಿದು ಕಿಡಿಕಾರುವ ಬೆಂಕಿಯ ಕಣ; **ಇದು ಕಾರಣ**=ಆದುದರಿಂದ; ಗೊಹೇಶ್ವರ>ಗುಹೇಶ್ವರ=ಶಿವ; ಗೊಹೇಶ್ವರ ಲಿಂಗವ=ಗೊಹೇಶ್ವರ/ಗುಹೇಶ್ವರನೆಂಬ ದೇವರನ್ನು; ತನ್ನ+ಒಳಗೆ+ಅರಿದೆನ್+ ಎಂಬ; ಅರಿ=ತಿಳಿ; ಅರಿದೆನ್=ತಿಳಿದಿದ್ದೇನೆ; ಎಂಬ=ಎನ್ನುವ; ಮಹಂತಂಗೆ+ ಎಲ್ಲಡೆ; ಮಹಂತ=ಸಮಾಜದಲ್ಲಿ ಎಲ್ಲರ ಒಲವು ಆದರಗಳಿಗೆ ಪಾತ್ರನಾದ ವ್ಯಕ್ತಿ; **ಗೊಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತ**=ಒಳ್ಳೆಯ ನಡೆನುಡಿಗಳಿಂದ ಬಾಳುವುದನ್ನೇ ದೇವರೆಂದು/ಗೊಹೇಶ್ವರಲಿಂಗವೆಂದು ತಿಳಿದಿರುವ ವ್ಯಕ್ತಿ;

ಎಲ್ಲೆಡೆ=ಜೀವನದ ಎಲ್ಲಾ ರಂಗಗಳಲ್ಲಿಯೂ; ಸತ್ಕ್ರಿಯಾ+ ಆಚರಣೆಯೇ; ಸತ್ಕ್ರಿಯಾ=ಒಳ್ಳೆಯ ಕೆಲಸ/ಕಾರ್ಯ; ಆಚರಣೆ=ಕಾರ್ಯರೂಪಕ್ಕೆ ತರುವುದು/ ಕೆಲಸವನ್ನು ಮಾಡಿ ತೋರಿಸುವುದು; ಸಾಧನ=ಉಪಕರಣ/ಸಾಮಗ್ರಿ;

"ಗೊಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಂತಂಗೆಲ್ಲಡೆ ಸತ್ಕ್ರಿಯಾಚರಣೆಯೇ ಸಾಧನ" ಎಂಬ ವಾಕ್ಯವು "ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ನಂಬಿರುವ ವ್ಯಕ್ತಿಗಳು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದನ್ನೇ ದೇವರನ್ನು ಪೂಜಿಸಲು ಇರುವ ಒಂದು ಉಪಕರಣವೆಂದು ನಂಬಿರುತ್ತಾರೆ" ಎಂಬ ತಿರುಳನ್ನು ಹೊಂದಿದೆ; ಭೋ=ಹೇಳುವ ಸಂಗತಿಯ ಕಡೆಗೆ ಇತರರ ಗಮನವನ್ನು ಸೆಳೆಯಲೆಂದು ಬಳಸುವ ಪದ; ಕಾಣಿ ಭೋ=ಕಾಣಿರಿ/ನೋಡಿರಿ/ತಿಳಿಯಿರಿ)

❖

**47. ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ
ಬಡಿದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ**

**ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ
ಬೈದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ**

**ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ
ಝುಂಕಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ**

**ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ
ವಂದಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ**

**ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ
ಕಲಿತನಕ್ಕೆ ನಾ ಬೆರಗಾದೆನು.**

"ಕೃತಯುಗ–ತ್ರೇತಾಯುಗ–ದ್ವಾಪರಯುಗ–ಕಲಿಯುಗ" ಎನ್ನುವ ಪದಗಳು ನಾಲ್ಕು ಬಗೆಯ ಕಾಲಮಾನಗಳನ್ನು ಹೆಸರಿಸುತ್ತವೆ. ಹಿಂದಿನ ಕಾಲದಿಂದ ಇಂದಿನ ವರೆಗೆ ಮಾನವಕುಲ ಹುಟ್ಟಿ ಬೆಳೆದು ಬಾಳಿಬಂದ ಸಮಯವನ್ನು ಕನ್ನಡ ನುಡಿ ಸಮುದಾಯವು ಈ ರೀತಿ ನಾಲ್ಕು ಹಂತಗಳಲ್ಲಿ ಗುರುತಿಸಿಕೊಂಡಿದೆ. ಕೃತಯುಗದಲ್ಲಿ ಮಾನವ ಸಮುದಾಯದಲ್ಲಿ ತುಂಬಾ ಒಳ್ಳೆಯತನದ ನಡೆನುಡಿಗಳು ಇದ್ದುವೆಂದು, ಮುಂದಿನ ಯುಗಗಳಲ್ಲಿ ಒಳ್ಳೆಯತನ ಕಡಿಮೆ ಯಾಗುತ್ತಾ ಬಂದು, ಇದೀಗ ಕಲಿಯುಗದಲ್ಲಿ ಮಾನವರ ನಡೆನುಡಿಗಳಲ್ಲಿ ಕೆಟ್ಟತನವೇ ಹೆಚ್ಚಾಗಿ ಕಂಡುಬರುತ್ತಿದೆಯೆಂಬ ಒಳಮಿಡಿತವು ಜನಮನದಲ್ಲಿ ನೆಲೆಯೂರಿದೆ.

ಆದರೆ ಈ ವಚನದಲ್ಲಿ ಅಲ್ಲಮನು ಒಂದು ಯುಗ ಕಳೆದು ಮತ್ತೊಂದು ಯುಗ ಬಂದಂತೆಲ್ಲಾ ಮಾನವರ ಅರಿವು ಹೆಚ್ಚಾಗುತ್ತಾ, ಅವರ ನಡೆನುಡಿಗಳಲ್ಲಿ ಇನ್ನೂ ಹೆಚ್ಚಿನ ಮಾನವೀಯ ಮಿಡಿತಗಳು ಅಂದರೆ ಸಹಜೀವಿಗಳ ಬಗ್ಗೆ ಒಲವು ಮತ್ತು

ಕರುಣೆಯ ಒಳಮಿಡಿತಗಳು ಹಾಗೂ ಜವಾಬ್ದಾರಿಯುತವಾದ ವರ್ತನೆಗಳು ಕಂಡು ಬರುತ್ತಿವೆಯೆಂದು ಹೇಳುತ್ತಾ, ಅದನ್ನು ನಾಲ್ಕು ಹಂತಗಳಲ್ಲಿ ಗುರು–ಗುಡ್ಡರ(ಶಿಷ್ಯರ) ನಡುವಣ ನಂಟಿನಲ್ಲಿ ಉಂಟಾದ ಒಳಿತಿನ ಬೆಳವಣಿಗೆಯ ಮೂಲಕ ಚಿತ್ರಿಸಿದ್ದಾನೆ.

ತನ್ನ ಬಳಿ ವಿದ್ಯೆಯನ್ನು ಕಲಿಯಲು ಬಂದ ಹುಡುಗನ ಮಯ್ ಮೇಲೆ ಗುರು ಮೊದಮೊದಲು ಮನಬಂದಂತೆ ಹಲ್ಲೆ ಮಾಡುತ್ತಿದ್ದ. ಒಂದು ಜಡವಸ್ತುವನ್ನು ಹೊಡೆದು ಬಡಿದು ಕೊರೆದು ಕತ್ತರಿಸಿ ಅದಕ್ಕೆ ಒಂದು ರೂಪವನ್ನು ಕೊಡುವಂತೆ ಗುರು ಶಿಷ್ಯನ ಮೇಲೆ ತನ್ನ ಬಲವನ್ನು ಈ ಹಂತದಲ್ಲಿ ತೋರಿಸುತ್ತಿದ್ದ.

ಎರಡನೆಯ ಹಂತದಲ್ಲಿ ಗುರು ಶಿಷ್ಯನನ್ನು **‘ತನ್ನಂತೆ ಒಂದು ಜೀವಿ’** ಎಂದು ತಿಳಿದು, ಅವನ ಮಯ್ ಮನಗಳ ಮೇಲೆ ಹಿಡಿತವನ್ನು ಪಡೆಯಲೆಂದು ಬಯ್ಯುತ್ತಿದ್ದ. ತಮ್ಮ ಬಳಿ ಇರುವ ವ್ಯಕ್ತಿಗಳನ್ನು **“ತಮ್ಮ ಇಚ್ಚೆಗೆ ತಕ್ಕಂತೆ ತಗ್ಗಿ ಬಗ್ಗಿ ನಡೆಯುವಂತೆ ಮಾಡಲು”** ಬಡಿಯುವಿಕೆ ಮತ್ತು ಬಯ್ಯುವಿಕೆಯನ್ನು ಉಪಕರಣ ಗಳನ್ನಾಗಿ ಮಾನವರು ಬಳಸುತ್ತಾರೆ. ಅಂತೆಯೇ ಇಲ್ಲಿ ಗುರು ಶಿಷ್ಯನನ್ನು ತನ್ನ ಹತೋಟಿಯಲ್ಲೇ ಇರಬೇಕಾದ ಮತ್ತು ಬೆಳೆಯಬೇಕಾದ ವ್ಯಕ್ತಿಯೆಂದು ತಿಳಿದಿದ್ದ.

ಮೂರನೆಯ ಹಂತದಲ್ಲಿ ಶಿಷ್ಯನ ಮನದ ಒಳಮಿಡಿತಗಳನ್ನು ಅರಿತು ಕೊಂಡು, ಅದಕ್ಕೆ ತಕ್ಕಂತೆ ವಿದ್ಯೆಯನ್ನು ಕಲಿಸುವ ರೀತಿಯನ್ನು ಗುರು ಅಳವಡಿಸಿ ಕೊಂಡಿದ್ದಾನೆ. ಆದುದರಿಂದಲೇ ಜಂಕಿಸಿ ಅಂದರೆ ಕಣ್ಸನ್ನೆ ಮತ್ತು ಕಯ್ಸನ್ನೆ ಗಳಿಂದಲೇ ಶಿಷ್ಯನ ಮನವನ್ನು ವಿದ್ಯೆಯತ್ತ ಹೊರಳುವಂತೆ ಮಾಡಿ ಓದುಬರಹ ಮತ್ತು ಬದುಕಿನ ಕಲೆಯನ್ನು ಕಲಿಸುತ್ತಿದ್ದ.

ನಾಲ್ಕನೆಯ ಹಂತದಲ್ಲಿ ಶಿಷ್ಯನನ್ನು ಗುರು ತನ್ನಂತೆ ಒಂದು ಜೀವಿಯೆಂದು ತಿಳಿಯುವುದರ ಜತೆಜತೆಗೆ, ಮುಂದೆ ಬೆಳೆದು ಬಾಳಿ ಬದುಕಬೇಕಾದ ಅವನನ್ನು ಒಲವು ನಲಿವುಗಳಿಂದ ಕಾಣುತ್ತಾ, ಅವನಲ್ಲಿ ಮಾನವ ಜೀವನದ ಒಳಿತಿನ ಬಗ್ಗೆ ಅಪಾರವಾದ ನಂಬಿಕೆಯನ್ನು ಮೂಡಿಸಿ ಮುನ್ನಡೆಯುವಂತೆ ಮಾಡತೊಡಗಿದ್ದಾನೆ.

ಕಾಲ ಉರುಳಿದಂತೆಲ್ಲಾ ಮಾನವ ಸಮಾಜದಲ್ಲಿ ಉಂಟಾಗುವ ಬಹುಬಗೆಯ ಬದಲಾವಣೆಗಳು ಗುರುವಿನ ವ್ಯಕ್ತಿತ್ವದ ಮೇಲೆ ಪರಿಣಾಮವನ್ನು ಬೀರಿ ಗುರುವಿನಲ್ಲಿ ಶಿಷ್ಯನ ಬಗೆಗೆ ಒಲವು, ಕರುಣೆ ಮತ್ತು ಸಮಾನತೆಯ ನಡೆನುಡಿಗಳು ಹೊರಹೊಮ್ಮುವಂತೆ ಮಾಡಿವೆ.

(ಕೃತಯುಗ+ಅಲ್ಲಿ; ಶ್ರೀ=ವ್ಯಕ್ತಿಗೆ ಒಲವು/ನಲಿವನ್ನು ಸೂಚಿಸುವ ಪದ; ಗುರು=ವಿದ್ಯೆಯನ್ನು ಕಲಿಸುವ/ಅರಿವನ್ನು ಮೂಡಿಸುವ/ಒಳ್ಳೆಯ ವ್ಯಕ್ತಿತ್ವವನ್ನು

ರೂಪಿಸುವ ವ್ಯಕ್ತಿ; ಶಿಷ್ಯಂಗೆ=ಶಿಷ್ಯನಿಗೆ; ಶಿಷ್ಯ=ವಿದ್ಯೆಯನ್ನು ಕಲಿಯುವ/ಅರಿವನ್ನು ಪಡೆಯುವ ಹಂಬಲವುಳ್ಳವನು; ಬಡಿದು=ಹೊಡೆದು; ಬಡಿ=ಹೊಡೆ/ಚಚ್ಚು/ಮಯ್ಯ ಮೇಲೆ ಹಲ್ಲೆಯನ್ನು ನಡೆಸು; ಬುದ್ಧಿ=ತಿಳುವಳಿಕೆ/ಅರಿವು; ಕಲಿಸು= ಹೇಳಿಕೊಡು/ ತಿಳಿಯುವಂತೆ ಮಾಡು; ಆಗಲಿ=ಒಪ್ಪಿಗೆಯನ್ನು ಸೂಚಿಸುವುದು; ಮಹಾಪ್ರಸಾದ+ ಎಂದೆನ್+ಅಯ್ಯ; ಮಹಾ=ದೊಡ್ಡ/ಹೆಚ್ಚಿನ; ಪ್ರಸಾದ=ಅನುಗ್ರಹ/ದಯೆ; ಎಂದೆನ್=ಹೇಳಿದೆನು; ಅಯ್ಯ=ಗಂಡಸರೊಡನೆ ಮಾತನಾಡುವಾಗ ಒಲವು/ ನಲಿವನ್ನು ಸೂಚಿಸಲು ಬಳಸುವ ಪದ;

ತ್ರೇತಾಯುಗ+ಅಲ್ಲಿ; ಬಯ್+ದು; ಬಯ್=ತೆಗಳು/ನಿಂದಿಸು; ಬೈದು= ಬಯ್ಗುಳದ ನುಡಿಗಳನ್ನು ಬಳಸಿ ನಿಂದಿಸುವುದು/ತೆಗಳುವುದು; ದ್ವಾಪರ+ಅಲ್ಲಿ; ಝುಂಕಿಸು=ಬೆದರಿಸು/ಗದರಿಸು; ಝುಂಕಿಸಿ= ಕಣ್ಣಿನ ಗುಡ್ಡೆಗಳನ್ನು ಅತ್ತಿತ್ತ ಹೊರಳಿಸುವ ನೋಟವನ್ನು ಬೀರುತ್ತಾ/ ಕಯ್ಗಳನ್ನು ಅತ್ತಿತ್ತ ಆಡಿಸುತ್ತಾ/ಮೊಗದಲ್ಲಿ ತೋರಿಸುವ ಬಹುಬಗೆಯ ಒಳಮಿಡಿತಗಳ ಮೂಲಕವೇ ಗದರಿಸಿ/ಬೆದರಿಸಿ/ತುಸು ಎಚ್ಚರಿಕೆಯನ್ನು ನೀಡಿ; ಕಲಿಯುಗ+ಅಲ್ಲಿ; ವಂದಿಸು=ಪ್ರೀತಿಸು/ಆದರಿಸು; ವಂದಿಸಿ=ಒಲವನ್ನು ತೋರಿ/ನಲಿವಿನಿಂದ ನಡೆಸಿಕೊಂಡು; ಕಟ್ಟಳೆ=ನಿಯಮ/ ಕಟ್ಟುಪಾಡು; ಕಲಿತನ=ಪರಾಕ್ರಮ/ಅಳವು/ಶಕ್ತಿ;

ಕಾಲದ ಕಟ್ಟಳೆಯ ಕಲಿತನ=ಕಾಲ ಉರುಳಿದಂತೆಲ್ಲಾ ಸಮಾಜದ ಕಟ್ಟುಪಾಡುಗಳಲ್ಲಿ/ಆಗುಹೋಗುಗಳಲ್ಲಿ/ವ್ಯಕ್ತಿಯ ನಡೆನುಡಿಗಳಲ್ಲಿ ಉಂಟಾಗುವ ಬದಲಾವಣೆಗಳು; ಬೆರಗು+ಆದೆನು; ಬೆರಗು=ಅಚ್ಚರಿ/ವಿಸ್ಮಯ/ಸೋಜಿಗ.)

48. ಜಾಲಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ
ಸೂನೆಗಾರನ ಮನೆಯಲ್ಲಿ ಹೆಣ ಹೋಗಿ ಅಳುವಂತೆ
ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ
ಠಕ್ಕನ ಪೂಜೆಗೆ ಮೆಚ್ಚುವನೆ ನಮ್ಮ ಗುಹೇಶ್ವರನು.

ಈ ವಚನದಲ್ಲಿ ಎರಡು ಸಂಗತಿಗಳನ್ನು ಹೇಳಲಾಗಿದೆ.

1) ಸಾಮಾಜಿಕ ವ್ಯಕ್ತಿಗಳಲ್ಲಿ ಹೆಚ್ಚಿನವರು ತಮ್ಮ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಆಗುತ್ತಿರುವ ತೊಂದರೆ/ಕಿರುಕುಳ/ಸಾವು/ನೋವು/ಅಪಮಾನ/ಹಾನಿಯ ಬಗ್ಗೆ ಎಂದೂ ಯಾವುದೇ ಬಗೆಯ ಆತಂಕಕ್ಕೆ ಒಳಗಾಗುವುದಿಲ್ಲ ಹಾಗೂ ತಮ್ಮ ವರ್ತನೆಯಿಂದ ಉಂಟಾದ ಆಗುಹೋಗುಗಳನ್ನು ಒರೆಹಚ್ಚಿ ನೋಡಿಕೊಳ್ಳುವುದಿಲ್ಲ. ಆದರೆ ಇತರರಿಂದ ತಮಗೆ ನೋವು/ಹಾನಿಯು ಉಂಟಾದಾಗ, ಅದಕ್ಕಾಗಿ ಮನನೊಂದು ಒದ್ದಾಡುತ್ತಾರೆ/ಕಳವಳಗೊಳ್ಳುತ್ತಾರೆ. ಸಾಮಾಜಿಕ ವ್ಯಕ್ತಿಗಳಲ್ಲಿರುವ ಈ ಬಗೆಯ ಇಬ್ಬಂದಿತನದ ನಡವಳಿಕೆಯನ್ನು ಅಂದರೆ 'ತಮ್ಮಿಂದ ಇತರರಿಗೆ ಕೇಡಾದರೂ ಚಿಂತೆಯಿಲ್ಲ; ತಮಗೆ ಮಾತ್ರ ಯಾವ ಬಗೆಯಿಂದಲೂ ಕೇಡಾಗಬಾರದು' ಎಂಬುದನ್ನು ಮೂರು ಪ್ರಸಂಗಗಳ ಮೂಲಕ ಗುರುತಿಸಲಾಗಿದೆ.

ಚೂಪಾದ ಮೊನೆಯುಳ್ಳ ಲೋಹದ ಗಾಳಕ್ಕೆ ಎರೆಹುಳವನ್ನು ಸಿಕ್ಕಿಸಿ, ಅದನ್ನು ನೀರಿನಲ್ಲಿ ಇಳಿಬಿಟ್ಟು ಮೀನನ್ನು ಹಿಡಿಯುವ ಜಾಲಗಾರನಿಗೆ ಒಮ್ಮೆ ಮುಳ್ಳೊಂದು ಕಾಲಿಗೆ ಚುಚ್ಚಿದಾಗ, ನೋವನ್ನು ತಾಳಲಾರದೆ ನೊಂದುಕೊಳ್ಳುತ್ತಾನೆ. ಮುಳ್ಳಿನ ಮೊನೆಯಿಂದ ತನಗಾದ ನೋವಿಗೆ ಮಿಡುಕಾಡುವ ಅವನ ಮನಕ್ಕೆ ತನ್ನಿಂದ ಪ್ರತಿನಿತ್ಯವೂ ಗಾಳದ ಮೊನೆಗೆ ಸಿಲುಕಿ ಒದ್ದಾಡುವ ಎರೆಹುಳುವಿನ ನೋವಾಗಲಿ ಇಲ್ಲವೇ ಗಾಳದ ಕೊಕ್ಕೆಯು ಗಂಟಲಿನಲ್ಲಿ ಸಿಕ್ಕಿಕೊಂಡಾಗ ನೋವಿನಿಂದ ವಿಲವಿಲನೆ ಒದ್ದಾಡುವ ಮೀನಿನ ಸಂಕಟವಾಗಲಿ ತಟ್ಟುವುದಿಲ್ಲ.

ಕುರಿಕೋಳಿ ಮುಂತಾದ ಜೀವಿಗಳನ್ನು ಕೊಂದು ಮಾರಾಟಮಾಡುವ ಸೂನೆಗಾರನ ಮನೆಯಲ್ಲಿ ಒಂದು ದಿನ ಅವನ ಕುಟುಂಬಕ್ಕೆ ಸೇರಿದ ವ್ಯಕ್ತಿಯೊಬ್ಬರು ಸಾವನ್ನಪ್ಪಿದಾಗ, ಅವರ ಅಗಲಿಕೆಯನ್ನು ತಾಳಲಾರದೆ ಸೂನೆಗಾರನು ಸಂಕಟದಿಂದ ಕಣ್ಣೀರುಗರೆಯುತ್ತಾನೆ. ಆದರೆ ತಾನು ನಿತ್ಯವೂ ಹತ್ತಾರು ಜೀವಿಗಳ ಕೊರಳನ್ನು ಕತ್ತರಿಸಿ ಅವುಗಳ ಜೀವ ತೆಗೆದು

ಸಾಯಿಸುತ್ತಿರುವುದು ಅವನ ಮನವನ್ನು ಎಂದೂ ಕಾಡುವುದಿಲ್ಲ.

ಕಂಡಕಂಡವರ ಮನೆಯ ಗೋಡೆಯನ್ನು ಕೊರೆದು, ಒಳನುಗ್ಗಿ ಅವರ ಮನೆಯ ಒಡವೆವಸ್ತುಗಳನ್ನು ದೋಚಿ, ಅದರಿಂದಲೇ ಜೀವನ ನಡೆಸುವ ಕಳ್ಳನ ಮನೆಯಲ್ಲಿ ಒಮ್ಮೆ ಒಂದು ಚಿಕ್ಕ ಬಟ್ಟಲು ಕಳುವಾದಾಗ, ಅದನ್ನು ಕಳೆದುಕೊಂಡ ಸಂಕಟದಿಂದ ಆ ಕಳ್ಳನ ಮನ ತಳಮಳಗೊಳ್ಳುತ್ತದೆ. ಆದರೆ ತಾನು ಮಾಡುವ ಕನ್ನ ಕೊರೆಯುವ ಕಸುಬಿನಿಂದ ಹಾನಿಗೊಳಗಾಗಿ ಸಂಕಟಕ್ಕೆ ಒಳಗಾದವರ ಬಗ್ಗೆ ಒಂದು ಗಳಿಗೆಯಾದರೂ ಈ ಕಳ್ಳ ಎಂದೂ ಚಿಂತಿಸುವುದಿಲ್ಲ.

2) ಸಮಾಜದಲ್ಲಿನ ಜನಸಮುದಾಯದ ಬದುಕಿಗೆ ಹಾನಿಯನ್ನುಂಟು ಮಾಡಿ, ಅವರನ್ನು ಹಸಿವು, ಬಡತನ, ಅಪಮಾನದ ಸಂಕಟಕ್ಕೆ ಗುರಿಮಾಡಿ ಗೋಳಾಡಿಸುವುದಲ್ಲದೇ, ಅವರ ದುಡಿಮೆಯ ಗಳಿಕೆಯೆಲ್ಲವನ್ನೂ ದೋಚಿ ಕೂಡಿಟ್ಟ ಸಂಪತ್ತಿನಿಂದ ದೇವರ ಪೂಜೆಯನ್ನು ಮಾಡುವ ನಯವಂಚಕರನ್ನು/ಕ್ರೂರಿಗಳನ್ನು ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ತಿರಸ್ಕರಿಸಿದ್ದರು. ಏಕೆಂದರೆ ದೇವರನ್ನು ಪೂಜಿಸುವವರು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನು ಹೊಂದಿರಬೇಕೆಂಬ ನಿಲುವನ್ನು ಶಿವಶರಣಶರಣೆಯರು ತಳೆದಿದ್ದರು.

ಈ ಹಿನ್ನೆಲೆಯಲ್ಲಿ ಈ ವಚನದ ಕೊನೆಯ ಸಾಲಿನಲ್ಲಿ **"ಕಳ್ಳನು ಮಾಡುವ ಪೂಜೆಯನ್ನು ಗುಹೇಶ್ವರನು ಮೆಚ್ಚುವುದಿಲ್ಲ/ಒಪ್ಪುವುದಿಲ್ಲವೆಂದು"** ಹೇಳಲಾಗಿದೆ.

(ಜಾಲ+ಕಾರ=ಜಾಲಗಾರ; ಜಾಲ=ಕೆರೆಕಟ್ಟೆಹೊಳೆನದಿ ಮುಂತಾದ ನೀರಿನ ತಾಣದಲ್ಲಿ ವಾಸಿಸುವ ಮೀನು ಮತ್ತು ಇತರ ಜೀವಿಗಳನ್ನು ಹಿಡಿಯಲು ಬಳಸುವ ಬಲೆ/ಗಾಳ; ಕಾರ=ಮಾಡುವವನು/ತೊಡಗುವವನು; ಜಾಲಗಾರ=ನೂಲಿನಿಂದ ಮಾಡಿದ ಬಲೆ ಇಲ್ಲವೇ ಲೋಹದಿಂದ ಮಾಡಿದ ಕೊಕ್ಕೆಯನ್ನು ಬಳಸಿ ಜಲಚರಗಳನ್ನು ಹಿಡಿಯುವವನು/ಬೆಸ್ತ; ತಾಗಿ=ಚುಚ್ಚಿಕೊಂಡು/ಹೊಕ್ಕಿಕೊಂಡು; ಮುಳ್ಳು ತಾಗಿ=ಹರಿತವಾದ ಮೊನೆಯುಳ್ಳ ಮುಳ್ಳು ನಾಟಿಕೊಂಡು; ನೊಂದು+ಇತ್ತು+ಎಂಬ+ಅಂತೆ; ನೊಂದಿತ್ತು=ನೋವಾಯಿತು; ಎಂಬ=ಎನ್ನುವ; ಅಂತೆ=ಹಾಗೆ;

ಸೂನೆ+ಕಾರ=ಸೂನೆಗಾರ; ಸೂನೆ=ಪ್ರಾಣಿಗಳನ್ನು ಕೊಲ್ಲುವ ಜಾಗ/ಕಟುಕರ ಅಂಗಡಿ; ಸೂನೆಗಾರ=ಪ್ರಾಣಿಗಳ ಮಾಂಸವನ್ನು ಮಾರುವವನು/ಪ್ರಾಣಿಗಳನ್ನು ಕತ್ತರಿಸುವ ಕಸುಬುಳ್ಳವನು/ಕಟುಕ; ಹೆಣ ಹೋಗಿ=ವ್ಯಕ್ತಿಗೆ ಸಾವು ಉಂಟಾಗಿ; ಅಳುವ+ಅಂತೆ; ಅಳು=ಸಂಕಟಪಡು/ಕಣ್ಣೀರು ಸುರಿಸು;

ಕನ್ನ+ಕಳ್ಳ=ಕನ್ನಗಳ್ಳ; ಕನ್ನ=ಗೋಡೆಯಲ್ಲಿ ಕೊರೆದ ಕಂಡಿ/ಒಬ್ಬ ವ್ಯಕ್ತಿ ನುಗ್ಗಿ ಹೋಗಲು ಆಗುವಂತೆ ಗೋಡೆಯಲ್ಲಿ ಕೊರೆದಿರುವ ಜಾಗ; ಕನ್ನಗಳ್ಳ=ಮನೆಯ ಗೋಡೆಯನ್ನು ಕೊರೆದು, ಅದರ ಎಡೆಯಲ್ಲಿ ಮನೆಯೊಳಕ್ಕೆ ನುಗ್ಗಿ ಒಡವೆ ವಸ್ತುಗಳನ್ನು ದೋಚುವವನು; ಬಟ್ಟಲು=ಗುಂಡಾಗಿರುವ ಚಿಕ್ಕದಾದ ಪಾತ್ರೆ; ಬಟ್ಟಲು ಹೋಗಿ=ಬಟ್ಟಲು ಕಳುವಾಗಿ/ಕಳೆದುಹೋಗಿ; ಮರುಗುವ+ಅಂತೆ; ಮರುಗು= ಸಂಕಟಪಟು/ಕಳವಳಿಸು/ಚಿಂತಿಸು;

ಠಕ್ಕ=ಮೋಸಗಾರ/ವಂಚಕ/ಕಳ್ಳ/ನೀಚ; ಮೆಚ್ಚು=ಒಲಿಯುವುದು/ಒಪ್ಪುವುದು/ ಹೊಗಳುವುದು; ಮೆಚ್ಚುವನೆ=ಮೆಚ್ಚುತ್ತಾನೆಯೇ.)

❖

49. ತನು ಒಂದು ದ್ವೀಪ
ಮನ ಒಂದು ದ್ವೀಪ
ಆಪ್ಯಾಯನ ಒಂದು ದ್ವೀಪ
ವಚನ ಒಂದು ದ್ವೀಪ
ಇಂತೀ ನಾಲ್ಕು ದ್ವೀಪದೆಡೆಯ ಬೆಸೆಗೊಂಬಡೆ
ಗುಹೇಶ್ವರ ನಿಮ್ಮ ಸ್ಥಾನಂಗಳು.

ವ್ಯಕ್ತಿಯ ನಡೆನುಡಿಗಳನ್ನು ರೂಪಿಸುವುದರಲ್ಲಿ ಮಯ್, ಮನಸ್ಸು ಮತ್ತು ಮಾತುಗಳ ಪಾತ್ರ ದೊಡ್ಡದು. ಇವುಗಳ ನಡುವೆ ಪರಸ್ಪರ ಹೊಂದಾಣಿಕೆಯಿದ್ದಾಗ ಮಾತ್ರ ವ್ಯಕ್ತಿಯ ಬದುಕಿನಲ್ಲಿ ನೆಮ್ಮದಿ ದೊರೆಯುತ್ತದೆ. ನಿಸರ‍್ಗ ಸಹಜವಾದ ಸೆಳೆತ ಮತ್ತು ಸಮಾಜದ ಕಟ್ಟುಪಾಡುಗಳ ನಡುವೆ ಸಿಲುಕಿದ ವ್ಯಕ್ತಿಯು ತನ್ನ ಮಯ್ಯಲ್ಲಿ ಕೆರಳುವ ಕಾಮನೆಗಳನ್ನು, ಮನದಲ್ಲಿ ತುಡಿಯುವ ಒಳಮಿಡಿತಗಳನ್ನು ಮತ್ತು ಆಡುವ ಮಾತುಗಳೆಲ್ಲವನ್ನು ಬೇರೆಬೇರೆಯಾಗಿ ಬಿಡದೆ, ಒಳಿತಿನ ಕಡೆಗೆ ಒಗ್ಗೂಡಿಸುವುದರ ಮೂಲಕ ತನಗೆ ಮತ್ತು ಸಮಾಜಕ್ಕೆ ಹಿತವನ್ನುಂಟುಮಾಡುವ ನಡೆನುಡಿಗಳನ್ನು ರೂಪಿಸಿಕೊಳ್ಳಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ತನು=ಮಯ್/ದೇಹ/ಶರೀರ; ದ್ವೀಪ=ನೀರಿನಿಂದ ಸುತ್ತುವರಿದ ಭೂಪ್ರದೇಶ /ನಡುಗಡ್ಡೆ; ದ್ವೀಪ ಎಂಬ ಪದವನ್ನು 'ಪ್ರತ್ಯೇಕವಾಗಿರುವುದು/ಬೇರೆಯಾಗಿ ರುವುದು/ಒಂಟಿಯಾಗಿರುವುದು' ಎಂಬ ತಿರುಳಿನ ರೂಪಕವಾಗಿ ಬಳಸಲಾಗಿದೆ. ವ್ಯಕ್ತಿಯ ಮಯ್ಯಲ್ಲಿ ತುಡಿಯುವ ಕಾಮನೆಗಳು, ಮನಗಳಲ್ಲಿ ಮೂಡುವ ಬಯಕೆಗಳು ಮತ್ತು ಆಡುವ ಮಾತುಗಳ ನಡುವೆ ಹೊಂದಾಣಿಕೆಯಿಲ್ಲದಿರುವ ಬಗೆಯನ್ನು ದ್ವೀಪವೆಂಬ ರೂಪಕದ ಮೂಲಕ ಚಿತ್ರಿಸಲಾಗಿದೆ;

ಮನ=ಮನಸ್ಸು; ಆಪ್ಯಾಯನ=ನೆಮ್ಮದಿ/ನಲಿವು/ಹಿತ/ಮನಸ್ಸನ್ನು ಶಾಂತವಾಗಿ ರಿಸಿಕೊಳ್ಳುವಿಕೆ; ವಚನ=ಮಾತು/ನುಡಿ; ಇಂತು+ಈ; ಇಂತು=ಈ ರೀತಿಯಾಗಿ/ ಬಗೆಯಲ್ಲಿ; ದ್ವೀಪದ+ಎಡೆಯ; ಎಡೆ=ಜಾಗ/ನೆಲೆ; ಬೆಸೆ+ಕೊಂಬಡೆ; ಬೆಸೆ=ಕೂಡಿಸು/ಸೇರಿಸು; ಕೊಂಬಡೆ=ಪಡೆಯುವುದಾದರೆ/ಗಳಿಸುವುದಾದರೆ;

ನಾಲ್ಕು ದ್ವೀಪದೆಡೆಯ ಬೆಸೆಗೊಂಬಡೆ=ನಾಲ್ಕನ್ನು ಸೇರಿಸಿ ಒಂದು ಮಾಡಿದರೆ ಅಂದರೆ ವ್ಯಕ್ತಿಯ ತನುಮನವಚನಗಳು ಒಂದಾಗಿ ಬೆಸೆದುಕೊಂಡು ಒಳಿತಿನ

ನಡೆನುಡಿಗಳನ್ನು ಅಳವಡಿಸಿಕೊಂಡಾಗ ಮಾತ್ರ ಬದುಕಿಗೆ ನೆಮ್ಮದಿ ದೊರೆಯುತ್ತದೆ;

ಗುಹೇಶ್ವರ=ಅಲ್ಲಮನ ಮೆಚ್ಚಿನ ದೇವರು/ಶಿವ; ಸ್ಥಾನ=ಜಾಗ/ನೆಲೆ/ಎಡೆ; **ಗುಹೇಶ್ವರ ನಿಮ್ಮ ಸ್ಥಾನಂಗಳು**=ಮಯ್ ಮನಸ್ಸು ಮಾತುಗಳು ಜತೆಗೂಡಿ ನೆಮ್ಮದಿಯಿಂದ ಕೂಡಿದ ಒಳ್ಳೆಯ ನಡೆನುಡಿಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಗುಹೇಶ್ವರನು ಒಲಿಯುತ್ತಾನೆ.)

❖

50. ತನು ಬತ್ತಲೆಯಿದ್ದಡೇನೋ
ಮನಶುಚಿಯಾಗದನ್ನಕ್ಕರ
ಮಂಡೆ ಬೋಳಾದಡೇನೋ
ಭಾವ ಬಯಲಾಗದನ್ನಕ್ಕರ
ಭಸ್ಮವ ಪೂಸಿದಡೇನೋ
ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ
ಇಂತೀ ಆಶೆಯ ವೇಷದ ಭಾಷೆಗೆ
ಗುಹೇಶ್ವರ ನೀ ಸಾಕ್ಷಿಯಾಗಿ ಛೀ ಎಂಬೆನು.

ವ್ಯಕ್ತಿಯು ತನ್ನ ಮಯ್ ಮನಗಳಲ್ಲಿ ತುಡಿಯುವ ಕೆಟ್ಟಬಯಕೆಗಳನ್ನು ಹತ್ತಿಕ್ಕಿಕೊಂಡು ಒಳಿತಿನ ನಡೆನುಡಿಗಳಿಂದ ಬಾಳದೆ, ಹೊರನೋಟಕ್ಕೆ ಮಾತ್ರ ಎಲ್ಲ ಕಾಮನೆಗಳನ್ನು ತೊರೆದವನಂತೆ ತೋರಿಸಿಕೊಳ್ಳಲು ತಳೆದಿರುವ ಬಹುಬಗೆಯ ರೂಪಗಳನ್ನು ಈ ವಚನದಲ್ಲಿ ಅಲ್ಲಗಳೆಯಲಾಗಿದೆ.

(ತನು=ಮಯ್/ದೇಹ; ಬತ್ತಲೆ+ಇದ್ದಡೆ+ಏನೋ; ಬತ್ತಲೆ=ಮಯ್ ಮೇಲೆ ಉಡುಗೆ ತೊಡುಗೆಯಿಲ್ಲದಿರುವುದು/ಬರಿ ಮಯ್; ಇದ್ದಡೆ=ಇದ್ದರೆ; ಏನೋ=ಏನು ತಾನೆ ಪ್ರಯೋಜನ/ಏನನ್ನು ಪಡೆದಂತಾಗುತ್ತದೆ; ಮನ+ಶುಚಿ+ಆಗದ+ಅನ್ನಕ್ಕರ; ಮನ=ಮನಸ್ಸು; ಶುಚಿ=ಯಾವುದೇ ಬಗೆಯ ಕೊಳೆಯಾಗಲಿ/ಕಲೆಯಾಗಲಿ ಇಲ್ಲದಿರುವುದು; **ಮನಶುಚಿ**=ಮನದಲ್ಲಿ ಮೂಡುವಂತಹ ಬಯಕೆಗಳಲ್ಲಿ ಒಳಿತನ್ನು ಉಳಿಸಿಕೊಂಡು, ಕೆಡುಕಿನ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕೆಲಸ; ಆಗದ=ಉಂಟಾಗದಿರುವುದು/ಆಗದೆ ಹೋಗುವುದು; ಅನ್ನಕ್ಕರ=ಅಲ್ಲಿಯವರೆಗೆ/ಅಲ್ಲಿಯ ತನಕ; ಆಗದನ್ನಕ್ಕರ=ಆಗದಿರುವ ತನಕ;

ಮಂಡೆ=ತಲೆ/ತಲೆಬುರುಡೆ; ಬೋಳ್+ಆದಡೆ+ಏನೋ; ಬೋಳ್=ತಲೆಗೂದಲನ್ನು ತೆಗೆಸುವುದು/ದೇವರಿಗೆ ತಲೆಗೂದಲನ್ನು ಮುಡಿ ಕೊಡುವುದು; ಆದಡೆ=ಆದರೆ/ಹಾಗೆ ಮಾಡಿದರೆ; ಭಾವ=ಮನದೊಳಗೆ ತುಡಿಯುವಂತಹ ಒಳಮಿಡಿತಗಳು; ಬಯಲ್+ಆಗದ+ಅನ್ನಕ್ಕರ; ಬಯಲು=ಇಲ್ಲವಾಗುವುದು/ಲಯಗೊಳ್ಳುವುದು; **ಭಾವ ಬಯಲು**=ಮನದೊಳಗೆ ತುಡಿಯುವಂತಹ ನೂರಾರು ಒಳಮಿಡಿತಗಳಲ್ಲಿ ಕೆಟ್ಟ ಬಯಕೆಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ಬಯಕೆಗಳು ಅಂದರೆ ತನಗೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಒಳಮಿಡಿತಗಳನ್ನು ಮಾತ್ರ ಹೊಂದುವುದು;

ಭಸ್ಮ=ಬೂದಿ/ಯಾವುದಾದರೊಂದು ವಸ್ತುವನ್ನು ಬೆಂಕಿಯಿಂದ ಸುಟ್ಟಾಗ ದೊರೆಯುವ ಪುಡಿ/ಗೋವಿನ ಸಗಣಿಯನ್ನು ಒಣಗಿಸಿ ಬೆಂಕಿಯಲ್ಲಿ ಸುಟ್ಟಾಗ ದೊರೆಯುವ ಪುಡಿ/ವಿಭೂತಿ; ಪೂಸಿದಡೆ+ಏನೋ; ಪೂಸು=ಬಳಿದು ಕೊಳ್ಳುವುದು/ಲೇಪಿಸಿಕೊಳ್ಳುವುದು; **ಪೂಸಿದಡೆ**=ನೋಡುವವರ ಕಣ್ಣಿಗೆ ತಾವು ದೇವರಲ್ಲಿ ಒಲವು ಉಳ್ಳವರೆಂದು ತೋರಿಸಿಕೊಳ್ಳುವುದಕ್ಕಾಗಿ ಪವಿತ್ರವೆಂದು ನಂಬಿರುವ ವಿಭೂತಿಯನ್ನು ಹಣೆ/ಮಯ್ ಮೇಲೆ ಬಳಿದುಕೊಂಡರೆ; ಕರಣ+ಆದಿ; ಕರಣ=ಒಡಲು/ದೇಹ/ಮಯ್; ಆದಿ=ಮೊದಲು/ಮೂಲ; ಗುಣಂಗಳನ್+ಒತ್ತಿ; ಗುಣ=ನಡತೆ/ನಡೆನುಡಿ; ಒತ್ತಿ=ಅಮುಕಿ/ಅದುಮಿ; ಮೆಟ್ಟಿ=ತುಳಿದು; ಸುಡದ+ಅನ್ನಕ್ಕರ; ಸುಡು=ಸುಟ್ಟುಹಾಕು/ಇಲ್ಲವಾಗಿಸು/ ನಾಶಪಡಿಸು; ಸುಡದನ್ನಕ್ಕರ=ಸುಟ್ಟು ನಾಶಮಾಡದ ತನಕ;

ಕರಣಾದಿ ಗುಣಂಗಳನ್ನು ಒತ್ತಿ ಮೆಟ್ಟಿ ಸುಡುವುದು=ಕಣ್ಣು/ಕಿವಿ/ಮೂಗು/ ತೊಗಲು/ನಾಲಗೆ ಎಂಬ ಅಯ್ದು ಬಗೆಯ ಇಂದ್ರಿಯಗಳಿಂದ ಮಯ್ ಮನಗಳಲ್ಲಿ ತುಡಿಯುವಂತಹ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ, ಕೆಟ್ಟ ಕಾಮನೆಗಳನ್ನು ಮನದಲ್ಲಿಯೇ ಹತ್ತಿಕ್ಕಿ, ಅವನ್ನು ಹೊರಕ್ಕೆ ಬಿಡದಂತೆ ಎಚ್ಚರ ವಹಿಸುವುದು; ಇಂತು+ಈ; ಇಂತು=ಈ ರೀತಿಯಲ್ಲಿ/ಬಗೆಯಲ್ಲಿ; ಆಸೆ=ಕಾಮನೆ/ ಬಯಕೆ; ವೇಷ=ಉಡುಗೆ ತೊಡುಗೆ; ಭಾಷೆ=ಆಡುವ ನುಡಿ;

ಈ ಆಸೆಯ ವೇಷದ ಭಾಷೆಗೆ=ಮಯ್ ಮನಗಳಲ್ಲಿ ಅಪಾರವಾದ ಕೆಟ್ಟಕಾಮನೆ ಗಳನ್ನು ಇಟ್ಟುಕೊಂಡು, ತನ್ನೊಡನೆ ವ್ಯವಹರಿಸುವವರ ಕಣ್ಮನಗಳಲ್ಲಿ ಎಲ್ಲ ಬಗೆಯ ಕಾಮನೆಗಳನ್ನು ತೊರೆದವನಂತೆ ಕಾಣಿಸಿಕೊಳ್ಳಲೆಂದು ತಳೆದಿರುವ ರೂಪ ಮತ್ತು ನಡೆನುಡಿಗಳಿಗೆ; ಗುಹೇಶ್ವರ=ಶಿವನೇ/ದೇವರೇ; ನೀ=ನೀನು; ಸಾಕ್ಷಿ+ಆಗಿ; ಸಾಕ್ಷಿ=ಕಂಡದ್ದನ್ನು ಕಂಡಂತೆ ಹೇಳುವ ವ್ಯಕ್ತಿ; ಛೀ=ಕೆಟ್ಟದ್ದನ್ನು ಕಂಡಾಗ/ಗುರುತಿಸಿದಾಗ ತಿರಸ್ಕಾರ ಸೂಚಕವಾಗಿ ಆಡುವ ಮಾತು; ಎಂಬೆನು=ಎನ್ನುವೆನು.)

❖

51. ದೇಹದೊಳಗೆ ದೇವಾಲಯವಿದ್ದು
ಮತ್ತೆ ಬೇರೆ ದೇವಾಲಯವೇಕೆ
ಎರಡಕ್ಕೆ ಹೇಳಲಿಲ್ಲಯ್ಯ ಗುಹೇಶ್ವರ
ನೀನು ಕಲ್ಲಾದರೆ ನಾನೇನಪ್ಪೆನು.

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ದೇಗುಲವನ್ನು ನಿರಾಕರಿಸಿ, ದೇವರನ್ನು ಒಪ್ಪಿಕೊಂಡಿದ್ದರು. ಅವರ ದೇವರು "ಕಲ್ಲು/ಮಣ್ಣು/ಲೋಹ/ಮರದಿಂದ ಮಾಡಿದ" ಮೂರ್ತಿಯಾಗಿರಲಿಲ್ಲ. ವ್ಯಕ್ತಿಯ ಮಯ್-ಮನದಲ್ಲಿ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು ನೀಡುವ ಒಳದನಿಯನ್ನು ದೇವರೆಂದು ತಿಳಿದಿದ್ದರು. ವ್ಯಕ್ತಿಯು ಜೀವನದಲ್ಲಿ ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟು ಮಾಡುವಂತಹ ನಡೆನುಡಿಗಳಲ್ಲಿ ದೇವರನ್ನು ಕಾಣುತ್ತಿದ್ದರು. ಆದುದರಿಂದಲೇ ಅಲ್ಲಮನು ತನ್ನ ದೇಹವನ್ನೇ ದೇವರು ನೆಲೆಸಿರುವ ದೇವಾಲಯವೆಂದು ಈ ವಚನದಲ್ಲಿ ಹೇಳಿದ್ದಾನೆ.

(ದೇಹದ+ಒಳಗೆ; ದೇವ+ಆಲಯ+ಇದ್ದು; ದೇವ=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು 'ದೇವರು' ಎಂದು ಮಾನವ ಸಮುದಾಯ ನಂಬಿದೆ. ಆಲಯ=ನಿವಾಸ/ನೆಲೆಸಿರುವ ಜಾಗ; ದೇವಾಲಯ=ದೇವರ ವಿಗ್ರಹ ನೆಲೆಗೊಂಡಿರುವ ಜಾಗ/ನೆಲೆ; ಮತ್ತೆ=ತಿರುಗಿ/ಇನ್ನೊಮ್ಮೆ/ಆಮೇಲೆ; ಬೇರೆ=ಇನ್ನೊಂದು/ಮತ್ತೊಂದು; ದೇವಾಲಯ+ಏಕೆ;

ಎರಡು+ಅಕ್ಕೆ; ಅಕ್ಕೆ=ಆಗು/ಉಂಟಾಗು; ಎರಡಕ್ಕೆ=ಸುಮ್ಮನೆ/ಕಾರಣವಿಲ್ಲದೆ ಎಂಬ ತಿರುಳಿನಲ್ಲಿ ಬಳಕೆಯಾಗುವ ಒಂದು ನುಡಿಗಟ್ಟು; ಹೇಳ್+ಅಲ್+ಇಲ್ಲ+ಅಯ್ಯ; ಹೇಳಲಿಲ್ಲ+ಅಯ್ಯ; ಅಯ್ಯ=ಗಂಡಸರನ್ನು ಒಲವು ನಲಿವುಗಳಿಂದ ಮಾತನಾಡಿಸುವಾಗ ಬಳಸುವ ಪದ; ಗುಹೇಶ್ವರ=ಶಿವ; ಕಲ್ಲು+ಆದರೆ; ನೀನು ಕಲ್ಲಾದರೆ=ಜೀವ ಮತ್ತು ಮನದ ಒಳಮಿಡಿತಗಳಿಲ್ಲದ ಜಡವಸ್ತುವಾದ ಕಲ್ಲಿನ ರೂಪವನ್ನು ನೀನು ತಳೆದರೆ/ಹೊಂದಿದರೆ; ನಾನ್+ಏನ್+ಅಪ್ಪೆನು; ಅಪ್ಪೆನು=ಆಗುವೆನು; **ನಾನೇನಪ್ಪೆನು**=ನಾನು ಏನಾಗುವೆನು/ನಿನ್ನನ್ನೇ ನಂಬಿರುವ ನಾನು ಹೇಗೆ ತಾನೆ ಒಳ್ಳೆಯ ನಡೆನುಡಿಗಳುಳ್ಳ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಿ?)

❖

52. ನಾನು ಘನ ತಾನು ಘನವೆಂಬ
ಹಿರಿಯರುಂಟೆ ಜಗದೊಳಗೆ
ಹಿರಿದು ಕಿರಿದೆಂದಲ್ಲಿ ಏನಾಯಿತ್ತು
ಹಿರಿದು ಕಿರಿದೆಂಬ ಶಬ್ದವಡಗಿದರೆ
ಆತನೆ ಶರಣ ಗುಹೇಶ್ವರಾ.

ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ವ್ಯಕ್ತಿಗೆ ಹಿರಿಯತನವೆಂಬುದು ಅಯ್ದು ಕಾರಣಗಳಿಂದ ದೊರೆಯುತ್ತದೆ. ಇತರರಿಗಿಂತ ವಯಸ್ಸಿನಲ್ಲಿ ದೊಡ್ಡವನಾದ, ತಿಳುವಳಿಕೆಯಿಂದ ಕೂಡಿದ, ಜವಾಬ್ದಾರಿಯುತವಾದ ಗದ್ದುಗೆಯಲ್ಲಿರುವ, ಸಂಪತ್ತನ್ನು ಹೊಂದಿರುವ ಇಲ್ಲವೇ ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಯನ್ನು ಹಿರಿಯನೆಂದು ಜನರು ಒಪ್ಪಿಕೊಂಡು ಒಲವು ನಲಿವಿನಿಂದ ಕಾಣುತ್ತಾರೆ. ಆದ್ದರಿಂದ ಹಿರಿಯರು ಎನಿಸಿಕೊಂಡವರು ಯಾವುದೇ ಬಗೆಯ ಅಹಂಕಾರಕ್ಕೆ ಒಳಗಾಗದೆ, ಎಲ್ಲರೊಡನೆ ಒಂದಾಗಿ ಜತೆಗೂಡಿ, ಎಲ್ಲರನ್ನು ಸಮಾನವಾಗಿ ಕಾಣುತ್ತ, ಎಲ್ಲರ ಒಳಿತಿಗಾಗಿ ಬಾಳಬೇಕು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಘನ=ಉತ್ತಮವಾದುದು/ದೊಡ್ಡದು/ಹೆಚ್ಚು; ಘನ+ಎಂಬ; ಎಂಬ=ಎನ್ನುವ/ ಎಂದು ಹೇಳಿಕೊಳ್ಳುವ; ಹಿರಿಯರು+ಉಂಟೆ; ಹಿರಿಯರು=ವಯಸ್ಸಿನಲ್ಲಿ/ ತಿಳುವಳಿಕೆಯಲ್ಲಿ /ಗದ್ದುಗೆಯಲ್ಲಿ/ಸಂಪತ್ತಿನಲ್ಲಿ/ಒಳ್ಳೆಯ ನಡೆನುಡಿಯಲ್ಲಿ ದೊಡ್ಡವರು;

ಉಂಟೆ=ಇರುವರೇ/ಇದ್ದಾರೆಯೇ; ಹಿರಿಯರುಂಟೆ=ಹಿರಿಯರು ಇದ್ದಾರೆಯೇ; ಜಗದ+ಒಳಗೆ; ಜಗ=ಜಗತ್ತು/ಪ್ರಪಂಚ/ಇಳೆ; ಜಗದೊಳಗೆ=ಜಗತ್ತಿನಲ್ಲಿ;

ನಾನು ಘನ ತಾನು ಘನ="ನಾನೇ ಎಲ್ಲವನ್ನೂ ತಿಳಿದವನು/ನಾನೇ ಎಲ್ಲರಿಗಿಂತಲೂ ದೊಡ್ಡವನು/ನನ್ನಿಂದಲೇ ಈ ಜಗತ್ತಿನಲ್ಲಿ ಎಲ್ಲವೂ ನಡೆಯುತ್ತಿದೆ" ಎಂಬ ಅಹಂಕಾರದ ಒಳಮಿಡಿತಗಳಿಂದ ಕೂಡಿರುವ ವ್ಯಕ್ತಿ;

ನಾನು ಘನ ತಾನು ಘನವೆಂಬ ಹಿರಿಯರುಂಟೆ ಜಗದೊಳಗೆ=ಜಗತ್ತಿನಲ್ಲಿ ಅಹಂಕಾರದ ನಡೆನುಡಿಗಳಿಂದ ಕೂಡಿರುವ ವ್ಯಕ್ತಿಯು ಎಂದೆಂದಿಗೂ ಹಿರಿಯ ನಾಗಲಾರ. ಏಕೆಂದರೆ ಇಂತಹ ವ್ಯಕ್ತಿಯು ಇತರರ ಒಳ್ಳೆಯ ನಡೆನುಡಿಗಳನ್ನು ಕಡೆಗಣಿಸುತ್ತಾನೆ. ತನ್ನನ್ನು ತಾನೇ ಹೊಗಳಿಕೊಂಡು ಮೆರೆಯುತ್ತ, ಇತರರ ಬಗ್ಗೆ ಅಸೂಯೆ, ಅಸಹನೆ ಮತ್ತು ಕ್ರೂರತನದಿಂದ ನಡೆದುಕೊಳ್ಳುತ್ತಾನೆ;

ಹಿರಿದು=ದೊಡ್ಡದು; ಕಿರಿದು+ಎಂದ+ಅಲ್ಲಿ; ಕಿರಿದು=ಚಿಕ್ಕದು; ಎಂದ=ಹೇಳುವ; ಎಂದಲ್ಲಿ=ಹೇಳುವ ನೆಲೆಯಲ್ಲಿ; ಏನ್+ಆಯಿತ್ತು; ಏನ್=ಯಾವುದು; ಆಯಿತ್ತು=ಆದುದು;

ಹಿರಿದು ಕಿರಿದೆಂದಲ್ಲಿ ಏನಾಯಿತ್ತು=ಹಿರಿದು ಕಿರಿದು ಎಂದು ತಾರತಮ್ಯ ಮಾಡುವ ನೆಲೆಯಲ್ಲಿ ಯಾವುದೇ ಬಗೆಯ ಒಳಿತಿನ ಕೆಲಸಗಳು ನಡೆಯುವುದಿಲ್ಲ. ಏಕೆಂದರೆ ಕುಟುಂಬದಲ್ಲಾಗಲಿ ಇಲ್ಲವೇ ಸಾಮಾಜಿಕ ನೆಲೆಯಲ್ಲಾಗಲಿ ವ್ಯಕ್ತಿಗಳ ನಡುವೆ "ನಾನು ದೊಡ್ಡವನು-ಅವನು ಚಿಕ್ಕವನು; ನಾನು ಮೇಲು-ಅವನು ಕೀಳು" ಎಂಬ ತಾರತಮ್ಯ ಉಂಟಾದಾಗ, ನಾನು ದೊಡ್ಡವನು ಅಂದುಕೊಂಡ ವ್ಯಕ್ತಿಯು ಉಳಿದವರನ್ನು ತನ್ನ ಅಡಿಯಾಳುಗಳನ್ನಾಗಿ ಮಾಡಿಕೊಂಡು ದಬ್ಬಾಳಿಕೆಯ ನಡೆನುಡಿಗಳಿಂದ ಕಿರುಕುಳವನ್ನು ಕೊಡತೊಡಗುತ್ತಾನೆ. ಆಗ ವ್ಯಕ್ತಿಗಳ ನಡುವಣ ಒಲವು ನಲಿವಿನ ನಂಟು ಮುರಿದುಬಿದ್ದು, ಎಲ್ಲರ ನೆಮ್ಮದಿಯ ಹಾಳಾಗುತ್ತದೆ. ಆದ್ದರಿಂದ ಹಿರಿದು ಕಿರಿದೆಂಬ ತಾರತಮ್ಯದ ನಡೆನುಡಿಯು ಜೀವನದಲ್ಲಿ ಯಾರಿಗೂ ಒಳಿತನ್ನು ಉಂಟುಮಾಡುವುದಿಲ್ಲ;

ಹಿರಿದು+ಕಿರಿದು+ಎಂಬ;ಶಬ್ದ+ಅಡಗಿದಡೆ;ಶಬ್ದ=ಮಾತು/ಪದ/ನುಡಿ;

ಅಡಗು=ಮರೆಯಾಗು/ಕೊನೆಗೊಳ್ಳು/ಇಲ್ಲವಾಗು; ಅಡಗಿದಡೆ=ಅಡಗಿದರೆ/ ಇಲ್ಲವಾದರೆ/ಕೊನೆಗೊಂಡರೆ; ಆತನೆ=ಅಂತಹ ವ್ಯಕ್ತಿಯೇ; ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸು ವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು/ ಶಿವನಿಗೆ ಒಲಿದವನು; ಗುಹೇಶ್ವರ=ಶಿವ;

ಹಿರಿದು ಕಿರಿದೆಂಬ ಶಬ್ದವಡಗಿದಡೆ ಆತನೆ ಶರಣ=ನಾನೇ ದೊಡ್ಡವನು ಇತರರು ಕೀಳು ಎಂಬ ಅಹಂಕಾರದ ನಡೆನುಡಿಗಳನ್ನು ಬಿಟ್ಟು, ನಾನು ಯಾರಿಗಿಂತಲೂ ಮೇಲು ಅಲ್ಲ, ಕೀಳು ಅಲ್ಲ ಎಂಬ ಅರಿವನ್ನು ಪಡೆದುಕೊಂಡು, ಸಮಾನತೆಯಿಂದ ಎಲ್ಲರೊಡನೆ ಒಂದಾಗಿ ಬಾಳುವ ವ್ಯಕ್ತಿಯು ಶರಣನ ವ್ಯಕ್ತಿತ್ವವನ್ನು ಪಡೆಯುತ್ತಾನೆ.

❖

53. ನಾನೆಂಬಹಂಕಾರ ತಲೆದೋರಿದಲ್ಲಿ
ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು
ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು
ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ
ಅರುಹಿರಿಯರೆಲ್ಲರು ತಾಮಸಕ್ಕೊಳಗಾಗಿ
ಸೀಮೆದಪ್ಪಿ ಕೆಟ್ಟರು ಕಾಣಾ ಗೊಹೇಶ್ವರಾ.

ಎಲ್ಲ ರೀತಿಯಿಂದಲೂ ಇತರರಿಗಿಂತ ನಾನೇ ದೊಡ್ಡವನೆಂಬ... ನನ್ನಿಂದಲೇ ಎಲ್ಲವೂ ನಡೆಯುತ್ತಿದೆಯೆಂಬ... ನಾನಿಲ್ಲದೇ ಈ ಜಗತ್ತೇ ಇಲ್ಲವೆಂಬ ಅಹಂಕಾರದ ತುತ್ತತುದಿಯಲ್ಲಿ ಮೆರೆಯಲು ತೊಡಗುವ ವ್ಯಕ್ತಿಗಳು ಅರಿವನ್ನು ಕಳೆದುಕೊಂಡು ಹೇಗೆ ನೆಲಕಚ್ಚುತ್ತಾರೆ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ನಾನ್+ಎಂಬ+ಅಹಂಕಾರ; ನಾನ್=ನಾನು; ಎಂಬ=ಎನ್ನುವ; ಅಹಂಕಾರ= ನಾನೇ ದೊಡ್ಡವನು/ಒಳ್ಳೆಯವನು/ತಿಳಿದವನು/ಕಸುವುಳ್ಳವನು ಎಂಬ ಸೊಕ್ಕಿನ ನಡೆನುಡಿ; ತಲೆ+ತೋರಿದ+ಅಲ್ಲಿ; ತೋರು=ಕಂಡುಬರು/ಉಂಟಾಗು/ಗೋಚರಿಸು; ತಲೆ+ತೋರು=ತಲೆದೋರು=ಕಂಡುಬರುವುದು/ಗೋಚರಿಸುವುದು ಎಂಬ ತಿರುಳಿನ ಒಂದು ನುಡಿಗಟ್ಟು. ಬೇರೆ ಬೇರೆ ತಿರುಳುಳ್ಳ ಎರಡು ಪದಗಳು ಜತೆಗೂಡಿ ಹೊಸಬಗೆಯ ತಿರುಳನ್ನು ಸೂಚಿಸುವ ಪದರೂಪಕ್ಕೆ ನುಡಿಗಟ್ಟು ಎಂದು ಹೆಸರು;

ಅಟಮಟ=ಸುಳ್ಳು/ದಿಟವಲ್ಲದ್ದು; ಕುಟಿಲ=ವಂಚನೆ/ಮೋಸ; ಕುಹಕ+ಎಂಬ; ಕುಹಕ=ಮಾಯೆ/ಮಾಟ/ಕಣ್ಕಟ್ಟು/ಇಂದ್ರಜಾಲ; ಬಿರುಗಾಳಿ=ಬಿರುಸಾಗಿ/ ಜೋರಾಗಿ ಬೀಸುವ ಗಾಳಿ; ಹುಟ್ಟಿ+ಇತ್ತು; ಹುಟ್ಟು=ಮೂಡು/ಜನಿಸು/ಉಂಟಾಗು; ಹುಟ್ಟಿತ್ತು=ಮೂಡಿಬಂದಿತ್ತು;

ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು= ನಾನೇ ಎಲ್ಲರಿಗಿಂತಲೂ ದೊಡ್ಡವನು/ನನ್ನಿಂದಲೇ ಎಲ್ಲವೂ ನಡೆಯುತ್ತಿದೆ ಎಂಬ ನಾನತ್ವದ ಒಳಮಿಡಿತವು ವ್ಯಕ್ತಿಯ ಮನದಲ್ಲಿ ಹುಟ್ಟಿದಾಗ, ಆತನ ಸಾಮಾಜಿಕ ನಡೆನುಡಿಯಲ್ಲಿ ದೊಡ್ಡ ಬದಲಾವಣೆ ಉಂಟಾಗುತ್ತದೆ. ಅಹಂಕಾರದಿಂದ ಮೆರೆಯುವುದಕ್ಕಾಗಿ ಮತ್ತು ಅದನ್ನೇ ಉಳಿಸಿಕೊಳ್ಳುವುದಕ್ಕಾಗಿ ಬಗೆಬಗೆಯ ಸುಳ್ಳು/ಬೂಟಾಟಿಕೆ/ತಟವಟ/ ವಂಚನೆ/ಮೋಸ/ಕಣ್ಕಟ್ಟಿನ ಅಂದರೆ ಇಲ್ಲದ್ದನ್ನು ಇದೆಯೆಂದು ಇರುವುದನ್ನು ಇಲ್ಲವೆಂದು ನಂಬಿಸುವಂತೆ ಮಾಡುವ ಮಾತುಗಳು ಮತ್ತು ಕ್ರೂರತನದ

ನಡೆನುಡಿಗಳು ಅಹಂಕಾರಗೊಂಡ ವ್ಯಕ್ತಿಯಲ್ಲಿ ಕಂಡು ಬರುತ್ತವೆ ಎಂಬ ರೂಪಕದ ತಿರುಳಿನಲ್ಲಿ ಈ ವಾಕ್ಯ ಬಳಕೆಯಾಗಿದೆ;

ಹುಟ್ಟಲ್+ಒಡನೆ; ಒಡನೆ=ಕೂಡಲೇ/ಆ ಗಳಿಗೆಯಲ್ಲೇ; ಹುಟ್ಟಲೊಡನೆ= ಮೂಡುತ್ತಿದ್ದಂತೆಯೇ/ಗೋಚರಿಸುತ್ತಿದ್ದಂತೆಯೇ;

ಆ ಬಿರುಗಾಳಿ ಹುಟ್ಟಲೊಡನೆ= ಅಹಂಕಾರಿಯಾದ ವ್ಯಕ್ತಿಯ ದುರುಳತನದ ನಡೆನುಡಿಗಳಿಂದಾಗಿ; ಜ್ಞಾನ=ಅರಿವು/ತಿಳುವಳಿಕೆ/ಒಳಿತು ಕೆಡುಕುಗಳನ್ನು ವಿಂಗಡಿಸಿ ನೋಡುವ ವಿವೇಕ; ಜ್ಯೋತಿ=ಬೆಳಕು/ಕಾಂತಿ; **ಜ್ಞಾನಜ್ಯೋತಿ**= ವ್ಯಕ್ತಿಯನ್ನು ಒಳಿತನ ಕಡೆಗೆ ಅಡಿಯಿಡುವಂತೆ/ನಡೆಯುವಂತೆ ಮಾಡುವ ಅರಿವು; ಕೆಟ್ಟು+ಇತ್ತು; ಕೆಟ್ಟಿತ್ತು=ನಂದಿ ಹೋಯಿತು/ಆರಿ ಹೋಯಿತು/ಇಲ್ಲವಾಯಿತು; ಕೆಡಲ್+ಒಡನೆ; ಕೆಡು=ನಾಶವಾಗು/ಇಲ್ಲವಾಗು; ಕೆಡಲೊಡನೆ=ಇಲ್ಲವಾಗುತ್ತಿದ್ದಂತೆಯೇ/ಹಾಳಾಗುತ್ತಿದ್ದಂತೆಯೇ; ನಾ=ನಾನು; ಬಲ್ಲ್+ಎ; ಬಲ್ಲ=ತಿಳಿದ/ ಅರಿತ; ಬಲ್ಲೆ=ತಿಳಿದಿದ್ದೇನೆ/ಅರಿತಿದ್ದೇನೆ;

ಬಲ್ಲಿದ+ಅರ್+ಎಂಬ; ಬಲ್ಲಿದ=ಕಸುವುಳ್ಳವನು/ತಿಳಿದವನು; ಅರು ಹಿರಿಯರು+ಎಲ್ಲರು; ಬಲ್ಲಿದರು=ತಿಳಿದವರು/ಅರಿತವರು;

ಅರುಹಿರಿಯರು=ವಿದ್ಯೆಯನ್ನು ಗಳಿಸಿದವರು ಮತ್ತು ವಯಸ್ಸಿನಲ್ಲಿ ದೊಡ್ಡವರು; ತಾಮಸಕ್ಕೆ+ಒಳಗೆ+ ಆಗಿ; ತಾಮಸ=ತಿಳಿಗೇಡಿತನ/ಅರಿವನ್ನು ಕಳೆದುಕೊಳ್ಳುವಿಕೆ; ಒಳಗಾಗಿ= ಗುರಿಯಾಗಿ/ಸಿಲುಕಿ; ಸೀಮೆ+ತಪ್ಪು+ಇ; ಸೀಮೆ=ಎಲ್ಲೆ/ಮೇರೆ/ಗಡಿ; ತಪ್ಪು=ಬಿಡು/ಉಳಿ/ಕೆಡು;

ಸೀಮೆದಪ್ಪು=ಎಲ್ಲೆ ಮೀರುವುದು/ಮಿತಿಯನ್ನು ದಾಟುವುದು/ದಾರಿ ತಪ್ಪುವುದು ಎಂಬ ತಿರುಳಿನ ನುಡಿಗಟ್ಟು; ಕೆಟ್ಟರು= ಹಾಳಾದರು/ನಾಶವಾದರು;

ಸೀಮೆದಪ್ಪಿ ಕೆಟ್ಟರು=ಒಳ್ಳೆಯ ನಡೆನುಡಿಗಳನ್ನು ತೊರೆದು, ಕೆಟ್ಟ ನಡೆನುಡಿಗಳಿಗೆ ಒಳಗಾಗಿ ಹಾಳಾದರು; ಕಾಣ್+ಆ; ಕಾಣ್=ನೋಡು/ತಿಳಿ; ಕಾಣಾ=ಅರಿತು ನೋಡು/ತಿಳಿದು ನೋಡು; ಗೊಹೇಶ್ವರ>ಗುಹೇಶ್ವರ=ಶಿವ.)

54. ನಾ ದೇವನಲ್ಲದೆ ನೀ ದೇವನೇ
ನೀ ದೇವನಾದರೆ ಎನ್ನನೇಕೆ ಸಲಹೆ
ಆರೈದು ಒಂದು ಕುಡಿತೆ ಉದಕವನೆರೆವೆ
ಹಸಿದಾಗ ಒಂದು ತುತ್ತು ಓಗರವನಿಕ್ಕುವೆ
ನಾ ದೇವ ಕಾಣಾ ಗುಹೇಶ್ವರ.

“ದೇವರು ಎಂಬುವನು ಮಾನವನ ಮನದ ಕಲ್ಪನೆಯಿಂದ ಮೂಡಿರುವ ವ್ಯಕ್ತಿ/ಶಕ್ತಿಯೇ ಹೊರತು ಮತ್ತೇನಲ್ಲ” ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ನಾ=ನಾನು; ದೇವನ್+ಅಲ್ಲದೆ; **ದೇವ/ದೇವರು**=ಜೀವನದಲ್ಲಿ ಬರುವ ಎಡರುತೊಡರುಗಳನ್ನು ನಿವಾರಿಸಿ ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿ/ಶಕ್ತಿಯನ್ನು ‘ದೇವ/ದೇವರು‘ ಎಂದು ಮಾನವ ಸಮುದಾಯ ನಂಬಿದೆ; ನೀ=ನೀನು; ದೇವನ್+ಆದರೆ; ಎನ್ನನ್+ಏಕೆ; ಎನ್ನನ್=ನನ್ನನ್ನು; ಏಕೆ=ಯಾತಕ್ಕಾಗಿ/ಯಾವುದಕ್ಕಾಗಿ; ಸಲಹು=ಕಾಪಾಡು; ಎನ್ನನೇಕೆ ಸಲಹೆ=ನನ್ನನ್ನೇಕೆ ಕಾಪಾಡುವುದಿಲ್ಲ;

ಆರೈದು=ಕಾಳಜಿಯಿಂದ; ಕುಡಿತೆ= ಬೊಗಸೆ/ಅಂಗಯ್ಗಳನ್ನು ಜೋಡಿಸಿದಾಗ ಉಂಟಾಗುವ ಜಾಗ; ಉದಕವನ್+ ಎರೆವೆ; ಉದಕ=ನೀರು; ಎರೆ=ಸುರಿ/ಹಾಕು/ನೀಡು; ಎರೆವೆ=ನೀಡುತ್ತೇನೆ; ಓಗರ+ ಅನ್+ಇಕ್ಕುವೆ; ಓಗರ=ಅನ್ನ/ಅಟ್ಟ ಅಡುಗೆ/ತಿನಸು ಉಣಿಸು; ಅನ್=ಅನ್ನು; ಇಕ್ಕುವೆ=ಉಣಬಡಿಸುವೆ; ಕಾಣಾ=ತಿಳಿದು ನೋಡು; ಗುಹೇಶ್ವರ=ಶಿವ).

❖

55. ನಿಮ್ಮಲ್ಲಿ ನೀವು ತಿಳಿದು ನೋಡಿರೇ
ಅನ್ಯವಿಲ್ಲ ಕಾಣಿರಣ್ಣ
ಅರಿವು ನಿಮ್ಮಲ್ಲಿಯೇ ತದ್ಗತವಾಗಿಯದೆ
ಅನ್ಯಭಾವವ ನೆನೆಯದೆ
ತನ್ನೊಳಗೆ ತಾನೆಚ್ಚರಬಲ್ಲಡೆ
ತನ್ನಲ್ಲಿಯೆ ತನ್ಮಯ ಗುಹೇಶ್ವರ ಲಿಂಗವು.

ಒಂದೆಡೆ ನಿಸರ್ಗದ ಸೆಳೆತ, ಮತ್ತೊಂದೆಡೆ ಸಾಮಾಜಿಕ ಸಂಪ್ರದಾಯ ಮತ್ತು ಕಟ್ಟುಪಾಡುಗಳ ನಡುವೆ ಸಿಲುಕಿರುವ ಮಾನವ ಜೀವಿಯು ತನ್ನ ಮಯ್ ಮನಗಳನ್ನು ತಾನೇ ಹತೋಟಿಯಲ್ಲಿಟ್ಟುಕೊಂಡು, ತನ್ನ ಬದುಕನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಈ ವಚನದಲ್ಲಿ ಹೇಳಲಾಗಿದೆ.

(ನಿಮ್ಮ+ಅಲ್ಲಿ; ತಿಳಿ=ಅರಿ/ಕಲಿ/ಆಲೋಚಿಸು; **ನಿಮ್ಮಲ್ಲಿ ನೀವು ತಿಳಿದು ನೋಡಿರೇ**=ಪ್ರತಿಯೊಬ್ಬ ವ್ಯಕ್ತಿಯು ತನ್ನ ಮಯ್ ಮನಗಳಲ್ಲಿ ತುಡಿಯುವಂತಹ ಒಳಮಿಡಿತಗಳನ್ನು ಮತ್ತು ತನ್ನ ಸುತ್ತಮುತ್ತಣ ಸಮಾಜದಲ್ಲಿನ ಆಗುಹೋಗುಗಳನ್ನು ಪರಸ್ಪರ ಒರೆಹಚ್ಚಿ ನೋಡಿದಾಗ, ಸಾಮಾಜಿಕ ವ್ಯಕ್ತಿಯ ಇತಿಮಿತಿಗಳು ಏನೆಂಬುದು ತಿಳಿದುಬಂದು, ತನ್ನನ್ನು ಒಳಗೊಂಡಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಳಿತು/ಕೆಡುಕಿನ ನಡೆನುಡಿಗಳಿರುವುದು ಅರಿವಿಗೆ ಬರುತ್ತದೆ. ಈ ಬಗೆಯ ಒಳನೋಟದಿಂದ ಸದಾಕಾಲ ಜೀವನದ ಉದ್ದಕ್ಕೂ ನಮ್ಮನ್ನು ನಾವು ತಿದ್ದಿಕೊಂಡು ಬಾಳುತ್ತಿರಬೇಕು ಎಂಬ ಎಚ್ಚರ ಮತ್ತು ಅರಿವನ್ನು ಹೊಂದುವುದು;

ಅನ್ಯ+ಇಲ್ಲ; ಅನ್ಯ=ಬೇರೆ/ಇತರ; ಕಾಣಿರಿ+ಅಣ್ಣಾ; ಕಾಣ್=ನೋಡು/ತಿಳಿ/ಅರಿ; ಅರಿವು=ಯಾವುದು ಒಳ್ಳೆಯದು/ಕೆಟ್ಟದ್ದು ಯಾವುದು ಸರಿ/ತಪ್ಪು ಎಂಬುದರ ಬಗೆಗಿನ ತಿಳುವಳಿಕೆ; ನಿಮ್ಮ+ಅಲ್ಲಿಯೇ; ನಿಮ್ಮಲ್ಲಿಯೇ=ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ; ತದ್ಗತ+ಆಗಿ+ಅದೆ; ತದ್ಗತ=ಅದರಲ್ಲಿಯೇ ಲೀನವಾಗಿರುವುದು/ಅಡಗಿರುವುದು/ನೆಲೆಸಿರುವುದು; **ನಿಮ್ಮಲ್ಲಿಯೇ ತದ್ಗತವಾಗಿಯದೆ**=ಪ್ರತಿಯೊಬ್ಬ ವ್ಯಕ್ತಿಯ ಮಯ್ ಮನಗಳಲ್ಲಿ ನೆಲೆಸಿದೆ;

ಅನ್ಯಭಾವ=ಇನ್ನಿತರ ಸಂಗತಿ/ವಿಚಾರಗಳನ್ನು; ನೆನೆ=ಆಲೋಚಿಸು/ಚಿಂತಿಸು/ಕಲ್ಪಿಸು; **ಅನ್ಯಭಾವವ ನೆನೆಯದೆ**=ಮತ್ತೊಂದನ್ನು ಹುಡುಕದೆ ಇಲ್ಲವೇ ಹೊರಗಡೆ ಕಾಣಲು ತವಕಿಸದೆ; ತನ್ನ+ಒಳಗೆ; ತನ್ನೊಳಗೆ=ತನ್ನ ನಡೆನುಡಿಗಳಲ್ಲಿ/

ಆಲೋಚನೆಯಲ್ಲಿ; ತಾನ್+ಎಚ್ಚರ+ಬಲ್ಲಡೆ; ತಾನ್=ವ್ಯಕ್ತಿಯು; ಎಚ್ಚರ= ಜಾಗರೂಕತೆ/ಎಲ್ಲವನ್ನೂ ಗಮನಿಸುವ ಕುಶಲತೆ; ಬಲ್ಲಡೆ=ಶಕ್ತನಾದರೆ/ಕಸುವನ್ನು ಹೊಂದಿದರೆ;

ತನ್ನೊಳಗೆ ತಾನೆಚ್ಚರಬಲ್ಲಡೆ=ತನ್ನ ಮಯ್ ಮನಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳಲು ಶಕ್ತನಾದರೆ; ತನ್ನ+ಅಲ್ಲಿಯೆ; ತನ್ನಲ್ಲಿಯೆ=ವ್ಯಕ್ತಿಯಲ್ಲಿಯೆ; ತನ್ಮಯ=ಅದರಲ್ಲಿಯೇ ಮಗ್ನ/ಲೀನ/ ಒಳಗೊಂಡಿರುವುದು;

ತನ್ನಲ್ಲಿಯೆ ತನ್ಮಯ ಗುಹೇಶ್ವರ ಲಿಂಗವು=ತನ್ನನ್ನು ತಾನು ಅರಿತುಕೊಂಡು/ ತಿದ್ದಿಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರು ವಂತಹ ವ್ಯಕ್ತಿಯ ಮಯ್ ಮನಗಳಲ್ಲಿಯೇ ಗುಹೇಶ್ವರನು ನೆಲೆಸಿರುತ್ತಾನೆ. ದೇವರು ಮತ್ತು ವ್ಯಕ್ತಿಯ ಸಾಮಾಜಿಕ ಒಳ್ಳೆಯ ನಡೆನುಡಿಗಳು ಒಂದರೊಡನೊಂದು ಲೀನವಾಗಿರುತ್ತವೆ ಎಂಬುದು ಶಿವಶರಣಶರಣೆಯರ ನಿಲುವು.)

56. ಬಿರುಗಾಳಿ ಬೀಸಿ ಮರ ಮುರಿವಂತಹ ಸುಳುಹ ಸುಳಿಯದೆ
ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು
ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು
ನಿಂದಡೆ ನೆಟ್ಟನೆ ಭಕ್ತನಾಗಿ ನಿಲ್ಲಬೇಕು
ಸುಳಿದು ಜಂಗಮವಾಗಲರಿಯದ
ನಿಂದು ಭಕ್ತನಾಗಲರಿಯದ
ಉಭಯಭ್ರಷ್ಟರನೇನೆಂಬೆ ಗುಹೇಶ್ವರಾ.

ಬಹಿರಂಗದಲ್ಲಿ ಶರಣರಂತೆ ಮತ್ತು ಜಂಗಮರಂತೆ ಉಡುಗೆ ತೊಡುಗೆಗಳನ್ನು ತೊಟ್ಟು, ಸಮಾಜದ ಕಣ್ಣಿನಲ್ಲಿ ಒಳ್ಳೆಯ ನಡೆನುಡಿಯುಳ್ಳವರಂತೆ ಕಾಣಿಸಿಕೊಳ್ಳುತ್ತ, ಅಂತರಂಗದ ಜೀವನದಲ್ಲಿ ನೀಚತನದಿಂದ ಬಾಳುತ್ತಿರುವ ವ್ಯಕ್ತಿಗಳನ್ನು ಕುರಿತು ಕಟುವಾಗಿ ಟೀಕಿಸುವುದರ ಜತೆಗೆ, ಗುರುಹಿರಿಯರಾದವರ ನಡೆನುಡಿಗಳು ಸಹಮಾನವರ ಮತ್ತು ಸಮಾಜದ ಬದುಕಿಗೆ ಒಳಿತನ್ನು ಮಾಡುವಂತಿರಬೇಕೆ ಹೊರತು ಕೇಡನ್ನು ಬಗೆಯುವಂತಿರಬಾರದು ಎಂಬ ಸಂಗತಿಯನ್ನು 'ಬಿರುಗಾಳಿ ಮತ್ತು ತಂಗಾಳಿ' ರೂಪಕಗಳ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

(ಬಿರುಸು+ಗಾಳಿ; ಬಿರುಸು=ಜೋರು/ವೇಗವಾಗಿ ಚಲಿಸು; ಬಿರುಗಾಳಿ=ಜೋರಾಗಿ ಬೀಸುವ ಗಾಳಿ/ಚಂಡ ಮಾರುತ; ಬೀಸು=ಸುಳಿ/ತೀಡು; ಮುರಿ=ತುಂಡಾಗು/ಕತ್ತರಿಸು; ಸುಳುಹು=ಜಾಡು/ರೀತಿ/ಬಗೆ; ಸುಳಿ=ಕಾಣಿಸಿಕೊಳ್ಳು/ಗೋಚರವಾಗು/ಬೀಸುವುದು; ಸುಳಿಯದೆ=ಬೀಸದೆ;

ಬಿರುಗಾಳಿ ಬೀಸಿ ಮರ ಮುರಿವಂತಹ ಸುಳುಹ ಸುಳಿಯದೆ=ಮರವನ್ನು ಬುಡಸಮೇತ ಕಿತ್ತು ಎಸೆಯುವ ಬಿರುಗಾಳಿಯಂತೆ ಕಾಣಿಸಿಕೊಳ್ಳದೆ;

ತಂಗಾಳಿ=ತಣ್ಣನೆಯ+ಗಾಳಿ; ತಣ್=ತಂಪು, ತಣ್ಣಗಿರುವ; ಪರಿಮಳದ+ಒಡನೆ+ಕೂಡಿ; ಪರಿಮಳ=ಕಂಪು/ಒಳ್ಳೆಯ ವಾಸನೆ; ಒಡನೆ=ಜತೆಯಲ್ಲಿ; ಕೂಡು=ಸೇರು; ಒಡಗೂಡಿ=ಜತೆಸೇರಿಕೊಂಡು/ಒಂದಾಗಿ; ಸುಳಿವ+ಅಂತೆ; ಸುಳಿವ=ಕಂಡುಬರುವ/ಕಾಣಿಸಿಕೊಳ್ಳುವ; ಅಂತೆ=ಆ ರೀತಿಯಲ್ಲಿ/ಆ ಬಗೆಯಲ್ಲಿ; ಸುಳಿಯಬೇಕು=ಬೀಸಬೇಕು;

ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು=ನೂರಾರು ಬಗೆಯ ಮರಗಿಡಗಳಲ್ಲಿ ಅರಳಿರುವ ಹೂವುಗಳ ಕಂಪನ್ನು ತನ್ನಲ್ಲಿ ಒಳಗೊಂಡು

ಸುಳಿಯುವ ತಂಗಾಳಿಯಂತೆ ಬೀಸಬೇಕು;

ಸುಳಿದಡೆ=ಕಾಣಿಸಿಕೊಂಡರೆ; ನೆಟ್ಟನೆ=ನೇರವಾಗಿ/ಚೆನ್ನಾಗಿ/ಸರಿಯಾಗಿ; ಜಂಗಮ+ಆಗಿ; ಜಂಗಮ=ಒಳ್ಳೆಯ ನಡೆನುಡಿಗೆ ಪ್ರೇರಣೆಯಾಗುವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಜನಮನದಲ್ಲಿ ಮೂಡಿಸುತ್ತ ಎಲ್ಲಿಯೂ ಒಂದೆಡೆ ನಿಲ್ಲದೆ ಸದಾಕಾಲ ಸಂಚರಿಸುತ್ತಿರುವ ಶಿವಶರಣ; ಸುಳಿಯಬೇಕು= ಕಂಡುಬರಬೇಕು;

ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು=ಜಂಗಮನಾದವನು ಒಳ್ಳೆಯ ನಡೆನುಡಿಗಳಿಂದ ಜನಸಮುದಾಯಕ್ಕೆ ಒಳಿತನ್ನು ಮಾಡುತ್ತ ಬಾಳಬೇಕು;

ನಿಂದಡೆ=ನಿಂತುಕೊಂಡರೆ; ಭಕ್ತನ್+ಆಗಿ; ಭಕ್ತ=ಜನಸಮುದಾಯಕ್ಕೆ ಒಳಿತನ್ನು ಮಾಡುವ ನಡೆನುಡಿಗಳೇ ದೇವರೆಂದು ತಿಳಿದು ಬಾಳುತ್ತಿರುವವನು;

ನಿಂದಡೆ ನೆಟ್ಟನೆ ಭಕ್ತನಾಗಿ ನಿಲ್ಲಬೇಕು=ಶರಣನಾದವನು ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನೇ ಅನುಸರಿಸುತ್ತ ಬಾಳಬೇಕು;

ಜಂಗಮ+ಆಗಲ್+ಅರಿಯದ; ಅರಿ=ತಿಳಿ/ಕಲಿ; ಅರಿಯದ=ತಿಳಿಯದ; ಭಕ್ತನ್+ಆಗಲ್+ಅರಿಯದ; ಉಭಯ+ಭ್ರಷ್ಟರನ್+ಏನ್+ಎಂಬೆ; ಉಭಯ= ಎರಡು; ಭ್ರಷ್ಟ=ಒಳ್ಳೆಯ ನಡೆನುಡಿಯಿಲ್ಲದವನು; **ಉಭಯಭ್ರಷ್ಟರು**=ಎರಡು ನೆಲೆಗಳಲ್ಲೂ ಹೀನವಾದ ನಡೆನುಡಿಯುಳ್ಳವರು. ಅಂದರೆ ಇತ್ತ ತಮ್ಮ ವ್ಯಕ್ತಿಗತ ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಹೊಂದಿರದೆ, ಅತ್ತ ಸಮಾಜಕ್ಕೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಗಳು; ಏನ್=ಯಾವುದು; ಎಂಬೆ=ಎನ್ನುವೆ/ಹೇಳುವೆ;

ಸುಳಿದು ಜಂಗಮವಾಗಲರಿಯದ ನಿಂದು ಭಕ್ತನಾಗಲರಿಯದ ಉಭಯಭ್ರಷ್ಟರನೇನೆಂಬೆ=ಬಹಿರಂಗದಲ್ಲಿ ಶರಣರಂತೆ ಮತ್ತು ಜಂಗಮರಂತೆ ಕಾಣಿಸಿಕೊಳ್ಳುತ್ತ, ಅಂತರಂಗದ ಜೀವನದಲ್ಲಿ ನೀಚತನದಿಂದ ಬಾಳುತ್ತಿರುವ ವ್ಯಕ್ತಿಗಳು/ ತಮ್ಮ ಮಯ್ ಮನಕ್ಕೆ ತಾವೇ ವಂಚನೆಯನ್ನು ಮಾಡಿಕೊಂಡು ಕೆಟ್ಟತನದಿಂದ ಕೂಡಿರುವ ವ್ಯಕ್ತಿಗಳು;

ಬಿರುಗಾಳಿಯು ಹುಚ್ಚೆದ್ದು ಬೀಸತೊಡಗಿದಾಗ ಹೇಗೆ ನಿಸರ್ಗದಲ್ಲಿನ ಮರಗಿಡಗಳೆಲ್ಲವೂ ಬುಡಸಮೇತ ಕಿತ್ತು ಬಿದ್ದು ಹಾಳಾಗುತ್ತವೆಯೋ, ಅಂತೆಯೇ ಗುರು ಹಿರಿಯರು ಎನಿಸಿಕೊಂಡವರು ಜಾತಿ, ಮತ ಮತ್ತು ದೇವರ ಹೆಸರಿನಲ್ಲಿ ಕೆಟ್ಟ ಉದ್ದೇಶದಿಂದ ಆಡುವ ನುಡಿಗಳು ಮತ್ತು ಮಾಡುವ ಕೆಲಸಗಳು ಜನರ ಮನದಲ್ಲಿ

ಪರಸ್ಪರ ಅಪನಂಬಿಕೆ, ಅಸೂಯೆ ಮತ್ತು ಹಗೆತನವನ್ನುಂಟುಮಾಡಿ, ಇಡೀ ಸಮಾಜದ ಬದುಕನ್ನೇ ದುರಂತದತ್ತ ದೂಡುತ್ತವೆ.

ಆದ್ದರಿಂದ ಸಮಾಜದಲ್ಲಿ ಜವಾಬ್ದಾರಿಯುತವಾದ ಗದ್ದುಗೆಯಲ್ಲಿರುವ ವ್ಯಕ್ತಿಗಳು ಆಡುವ ನುಡಿಗಳು ಮತ್ತು ಮಾಡುವ ಕೆಲಸಗಳು ಪರಿಮಳದಿಂದ ಕೂಡಿದ ತಂಗಾಳಿಯಂತಿರಬೇಕು. ಅಂದರೆ ಜನರ ಮನದಲ್ಲಿ ಅರಿವು, ಒಲವು, ನಲಿವನ್ನು ಮೂಡಿಸಿ ಎಲ್ಲರೂ ಜತೆಗೂಡಿ ನೆಮ್ಮದಿಯಿಂದ ಬಾಳುವುದಕ್ಕೆ ದಾರಿ ತೋರಿಸುವಂತಿರಬೇಕು.)

❖

57. ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ
ಬಯಲು ಬತ್ತಲೆಯಿದ್ದರೆ ಏನನುಡಿಸುವರಯ್ಯ
ಭಕ್ತನು ಭವಿಯಾದಡೆ ಏನನುಪಮಿಸುವೆನಯ್ಯ
ಗುಹೇಶ್ವರ.

ಒಳ್ಳೆಯ ನಡೆನುಡಿಗಳಿಂದ ತಮ್ಮ ಜೀವನವನ್ನು ರೂಪಿಸಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕಾದ ಹೊಣೆಯನ್ನು ಹೊತ್ತಿರುವ ವ್ಯಕ್ತಿಗಳೇ ಕೆಟ್ಟಹಾದಿಯನ್ನು ಹಿಡಿದು, ಸಮಾಜವನ್ನು ಹಾಳುಮಾಡ ತೊಡಗಿದಾಗ, ಅವರನ್ನು ತಡೆಯಲು/ತಿದ್ದಿ ಸರಿಪಡಿಸಲು ಯಾರಿಂದಲೂ ಆಗುವುದಿಲ್ಲವೆಂಬ ಸಂಗತಿಯನ್ನು ಎರಡು ಶಬ್ದಚಿತ್ರಗಳ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

(ಚಳಿ+ಆದಡೆ; ಚಳಿ=ತಂಡಿ/ಶೀತ; ಆದಡೆ=ಆದರೆ; ಏನ=ಏನನ್ನು/ಯಾವುದನ್ನು; ಹೊದಿಸುವರ್+ಅಯ್ಯ; ಹೊದಿಸು=ಮುಚ್ಚು/ಮೇಲೆ ಹಾಕು; ಬಯಲು=ಸಮತಟ್ಟಾಗಿರುವ ನೆಲ/ಪ್ರದೇಶ; ಬತ್ತಲೆ+ಇದ್ದರೆ; ಬತ್ತಲೆ=ಬರಿದಾಗಿರುವುದು/ತೆರೆದುಕೊಂಡಿರುವುದು; ಏನ್+ಅನ್+ಉಡಿಸುವರ್+ಅಯ್ಯ; ಅನ್=ಅನ್ನು; ಏನನ್=ಏನನ್ನು/ಯಾವುದನ್ನು; ಉಡಿಸು=ಮಯ್/ವಸ್ತು/ಜಾಗವನ್ನು ಮರೆಮಾಡುವಂತೆ ಬಟ್ಟೆಯಿಂದ ಸುತ್ತುವುದು;

"ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ ಮತ್ತು ಬಯಲು ಬತ್ತಲೆಯಿದ್ದರೆ ಏನನುಡಿಸುವರಯ್ಯ" ಎಂಬ ಈ ಎರಡು ರೂಪಕಗಳು "ಈ ಬಗೆಯ ಕೆಲಸಗಳನ್ನು ಮಾಡಲು ಆಗುವುದಿಲ್ಲ" ಎಂಬ ತಿರುಳನ್ನು ಸೂಚಿಸುತ್ತವೆ; **ಭಕ್ತ=ಜಾತಿ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು ತನಗೆ ಒಳಿತನ್ನು ಬಯಸುವಂತೆಯೇ, ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಬಯಸುವವನು.**

ಭವಿ=ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವನ ಬದುಕಿನ ಆಗು ಹೋಗುಗಳಿಗೆ ಕರ್ಮಸಿದ್ಧಾಂತ ಮತ್ತು ಹಿಂದಿನ ಜನ್ಮದ ಪಾಪ ಪುಣ್ಯಗಳೇ ಕಾರಣವೆಂದು ನಂಬಿಕೊಂಡಿರುವ ವ್ಯಕ್ತಿ;

ಏನ್+ಅನ್+ ಉಪಮಿಸುವೆನ್+ ಅಯ್ಯ; ಉಪಮೆ=ಒಂದು ವಸ್ತು/ಜೀವಿ/ಸಂಗತಿಯನ್ನು ಮತ್ತೊಂದರ ಜತೆ ಹೋಲಿಸಿ ಬಣ್ಣಿಸುವುದು; ಏನನುಪಮಿಸುವೆನ್=ಏನೆಂದು ತಾನೆ ಹೇಳಲಿ; ❖

58. ಬೆವಸಾಯವ ಮಾಡಿ
ಮನೆಯ ಬೀಯಕ್ಕೆ ಬತ್ತವಿಲ್ಲದಿದ್ದರೆ
ಆ ಬೆವಸಾಯದ ಘೋರವೇತಕಯ್ಯ

ಕ್ರಯವಿಕ್ರಯವ ಮಾಡಿ
ಮನೆಯ ಸಂಚು ನಡೆಯದನ್ನಕ್ಕ
ಆ ಕ್ರಯವಿಕ್ರಯದ ಘೋರವೇತಕಯ್ಯ

ಒಡೆಯನನೋಲೈಸಿ
ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ
ಆ ಓಲಗದ ಘೋರವೇತಕಯ್ಯ

ಭಕ್ತನಾಗಿ ಭವಂ ನಾಸ್ತಿಯಾಗದಿದ್ದರೆ
ಆ ಉಪದೇಶವ ಕೊಟ್ಟ ಗುರು ಕೊಂಡ ಶಿಷ್ಯ
ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ
ಗುಹೇಶ್ವರಲಿಂಗವತ್ತಲೆ ಹೋಗಲಿ.

ಈ ವಚನದಲ್ಲಿ ಎರಡು ಸಂಗತಿಗಳನ್ನು ಹೇಳಲಾಗಿದೆ.

1) ಯಾವುದೇ ವ್ಯಕ್ತಿಯು ತಾನು ಮಾಡಿದ ಕೆಲಸದಿಂದ ತನ್ನ ಜೀವನಕ್ಕೆ ಬೇಕಾದುದನ್ನು ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಆ ಕೆಲಸಕ್ಕಾಗಿ ಮಾಡಿದ ದುಡಿಮೆ, ತೊಡಗಿಸಿದ ಹಣ ಮತ್ತು ಬಳಸಿದ ಸಮಯವೆಲ್ಲವೂ ಹಾಳಾಗುವುದಲ್ಲದೇ, ವ್ಯಕ್ತಿಗೆ ಹೆಚ್ಚಿನ ಆತಂಕ/ನಿರಾಶೆ/ಸಂಕಟವನ್ನು ನೀಡಿ ಬದುಕನ್ನು ಹಿಂಡುತ್ತದೆ. ಆದುದರಿಂದ ಯಾವುದೇ ಒಂದು ಕೆಲಸವನ್ನು ಕಯ್ಗೊಳ್ಳುವ ಮುನ್ನ, ಅದರ ಆಗುಹೋಗುಗಳ ಬಗ್ಗೆ ಮುನ್ನೆಚ್ಚರಿಕೆಯನ್ನು ಹೊಂದಿರಬೇಕೆಂಬುದನ್ನು ಮೂರು ಪ್ರಸಂಗಗಳ ಮೂಲಕ ಹೇಳಲಾಗಿದೆ.

ಗದ್ದೆಯನ್ನು ಉಳುಮೆ ಮಾಡಿ, ಹದಗೊಳಿಸಿ, ಬೀಜವನ್ನು ಬಿತ್ತಿ, ಒಟ್ಟಿಲನ್ನು ಹಾಕಿ, ಮೊಳಕೆಯೊಡೆದು ಬೆಳೆದ ಬತ್ತದ ಸಸಿ/ಪಯಿರುಗಳನ್ನು ಕಿತ್ತು, ಮತ್ತೆ ನಾಟಿ ಮಾಡಿ, ಹಗಲಿರುಳೆನ್ನದೆ ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿ ಬೆಳೆದ ಬತ್ತದ ಬೆಳೆಯಿಂದ

ಬೇಸಾಯಗಾರರ ಕುಟುಂಬದವರಿಗೆ ವರುಶಕ್ಕೆ ಬೇಕಾಗುವಷ್ಟು ಕೂಳು ದೊರೆಯದಿದ್ದರೆ, ಒಕ್ಕಲು ಮಕ್ಕಳು ಹಸಿವಿನ ಸಂಕಟದ ಜತೆಗೆ, ಸಾಲಸೋಲ ಮಾಡಿ ಬೇಸಾಯಕ್ಕೆಂದು ಸುರಿದಿದ್ದ ಹಣವನ್ನು ಕಳೆದುಕೊಂಡು ಬಡತನದ ಬೇಗೆಯಲ್ಲಿ ಬೇಯುತ್ತಾರೆ.

ತಮ್ಮಲ್ಲಿ ಇರುವ ಒಡವೆ ವಸ್ತುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ತಮಗೆ ಬೇಕಾದುದನ್ನು ತೆಗೆದುಕೊಂಡು ಜೀವನದಲ್ಲಿ ನಲಿವು ನೆಮ್ಮದಿಯನ್ನು ಪಡೆಯದಿದ್ದರೆ, ಅಂತಹ ವಹಿವಾಟಿನಿಂದ ಮನೆ ಮಂದಿಯೆಲ್ಲಾ ಇನ್ನೂ ಹೆಚ್ಚಿನ ಆತಂಕ/ದುಗುಡ/ಸಂಕಟಕ್ಕೆ ಒಳಗಾಗಿ ಪರಿತಪಿಸಬೇಕಾಗುತ್ತದೆ.

"ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ; ಆ ಓಲಗದ ಘೋರವೇತಕಯ್ಯ" ಎಂಬ ಈ ಮಾತುಗಳು ಈ ಕೆಳಕಂಡ ಎರಡು ಬಗೆಯ ತಿರುಳನ್ನು ನೀಡುತ್ತವೆ.

ಅ) ಸಿರಿಸಂಪದವುಳ್ಳ ಒಡೆಯನಿಗೆ ಎಲ್ಲಾ ರೀತಿಯಿಂದಲೂ ಒಳಿತಾಗುವಂತೆ ಊಳಿಗವನ್ನು ಮಾಡಿದ ಆಳು, ಅದಕ್ಕೆ ಬದಲಾಗಿ ಒಡೆಯನಿಂದ ತನ್ನ ಬದುಕಿನ ಒಲವು ನಲಿವಿಗೆ ಬೇಕಾದ ಒಡವೆ ವಸ್ತುಗಳನ್ನು ಪಡೆಯದಿದ್ದರೆ, ದುಡಿಮೆ ಮಾಡಿ ಬಸವಳಿದ ಆಳಿನ ಬಾಳು ಸಂಕಟಕ್ಕೆ ಗುರಿಯಾಗುತ್ತದೆ.

ಆ) ಗದ್ದುಗೆಯಲ್ಲಿ ಕುಳಿತಿರುವ ಅರಸನನ್ನು ಒಡ್ಡೋಲಗದಲ್ಲಿ ಇನ್ನಿಲ್ಲದ ರೀತಿಯಲ್ಲಿ ಹೊಗಳಿ ಕೊಂಡಾಡಿ, ಅವನಿಂದ ಬೆಲೆಬಾಳುವ ಒಡವೆವಸ್ತುಗಳನ್ನು ಉಡುಗೊರೆಯಾಗಿ ಪಡೆಯದಿದ್ದರೆ, ಒಡ್ಡೋಲಗದಿಂದ ಬರಿಗಯ್ಯಲ್ಲಿ ಹೊರಬರುವ ಸಂಕಟದಿಂದ ನರಳಬೇಕಾಗುತ್ತದೆ.

2) ಬದುಕಿನಲ್ಲಿ ಒಳ್ಳೆಯ ನಡೆನುಡಿಗಳ ಹಾದಿಯಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಗುರುವಿನ ಬಳಿಯಲ್ಲಿ ಮಾರ್ಗದರ್ಶನವನ್ನು ಪಡೆದ ಶಿಷ್ಯನು ಅದರಂತೆ ನಡೆದುಕೊಳ್ಳದಿದ್ದರೆ, ಆಗ ಗುರು ಮತ್ತು ಶಿಷ್ಯ– ಇವರಿಬ್ಬರ ವ್ಯಕ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲವಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಗಿದೆ. ಕೆಟ್ಟ ನಡೆನುಡಿಗಳನ್ನು ಹೊಂದಿರುವ ಶಿಷ್ಯ ಮತ್ತು ಅಂತಹವನಿಗೆ ವಿದ್ಯೆಯನ್ನು ಹೇಳಿಕೊಟ್ಟ ಗುರು– ಈ ಇಬ್ಬರ ಬಗೆಗೂ ಅಲ್ಲಮನು ತನ್ನ ಕೋಪದ ಒಳಮಿಡಿತವನ್ನು ಕಾರುತ್ತಾ "ಅವರಿಬ್ಬರ ಮನೆಗೆ ಮಾರಿ ನುಗ್ಗಲಿ" ಎಂಬ ಶಾಪದ ನುಡಿಯನ್ನು ಬಳಸಿದ್ದಾನೆ.

(ಬೆವಸಾಯ=ವ್ಯವಸಾಯ/ಬೇಸಾಯ/ಆರಂಬ; **ಬೆವಸಾಯವ ಮಾಡಿ**=ಹೊಲಗದ್ದೆ ತೋಟವನ್ನು ಉತ್ತು ಮಣ್ಣನ್ನು ಹದಗೊಳಿಸಿ, ಬೀಜವನ್ನು ಬಿತ್ತಿ/ಸಸಿಯನ್ನು ನೆಟ್ಟು ಬೆಳೆಯನ್ನು ತೆಗೆಯುವುದು; ಬೀಯ=ಅಕ್ಕಿ/ಆಹಾರ/ಉಣಿಸು ತಿನಸು;

ಮನೆಯ ಬೀಯಕ್ಕೆ=ಮನೆಯ ಜನಗಳ ವರುಶದ ಕೂಳಿಗೆ/ಮನೆ ಮಂದಿಯು ಹೊಟ್ಟೆತುಂಬ ತಿಂದು ಉಂಡು ನೆಮ್ಮದಿಯಾಗಿರುವುದಕ್ಕೆ; ಬತ್ತ+ ಇಲ್ಲದೆ+ಇದ್ದರೆ; ಬತ್ತ=ಒಂದು ಬಗೆಯ ದಿನಸಿ/ಕಾಳು/ಆಹಾರದ ವಸ್ತು; ಬತ್ತದ ಕಾಳಿನ ಸಿಪ್ಪೆಯನ್ನು ತೆಗೆದರೆ ಅಕ್ಕಿಯು ದೊರಕುತ್ತದೆ. ಈ ಅಕ್ಕಿಯನ್ನು ಬೇಯಿಸುವು ದರಿಂದ ಅನ್ನವನ್ನು ತಯಾರಿಸಲಾಗುತ್ತದೆ; ಘೋರ+ಏತಕೆ+ಅಯ್ಯ; **ಘೋರ**=ಆತಂಕ/ನಿರಾಶೆ/ನೋವು/ಬಡತನದ ಬೇಗೆ/ಹಸಿವಿನ ಸಂಕಟ/ಸಾಲದ ಹೊಡೆತ/ಸರೀಕರ ಮುಂದೆ ಆಗುವ ಅಪಮಾನಗಳೆಲ್ಲವನ್ನೂ ಒಳಗೊಂಡ ನೆಲೆ; ಏತಕೆ=ಯಾವುದಕ್ಕಾಗಿ; ಏತಕೆ ಅಯ್ಯ= ಇಂತಹ ದುಡಿಮೆಯ ಅಗತ್ಯವಾದರೂ ಏನು?

ಕ್ರಯ=ನಮಗೆ ಬೇಕಾಗಿರುವುದನ್ನು ಬೆಲೆ ಕೊಟ್ಟು ಕೊಳ್ಳುವುದು; ವಿಕ್ರಯ=ಮಾರಾಟ/ಬಿಕರಿ/ನಮ್ಮಲ್ಲಿರುವ ಒಡವೆ ವಸ್ತು ಆಸ್ತಿಪಾಸ್ತಿಯನ್ನು ಮಾರುವುದು; ಕ್ರಯವಿಕ್ರಯ ಮಾಡಿ=ಕೊಳ್ಳುವ–ಕೊಡುವ ವ್ಯವಹಾರವನ್ನು ಮಾಡಿ; ಸಂಚು=ಉದ್ದೇಶಪಟ್ಟಿದ್ದ ಕೆಲಸ/ಆಗಬೇಕಾಗಿದ್ದ ಅನುಕೂಲ; **ಮನೆಯ ಸಂಚು**=ಮನೆಗೆ ಒಳಿತನ್ನು ಉಂಟುಮಾಡುವ ವ್ಯವಹಾರ/ಮನೆಯ ಜನರ ನೋವುಬವಣೆಗಳ ನಿವಾರಣೆ; ನಡೆಯದ+ಅನ್ನಕ್ಕ; ನಡೆಯದ=ಈಡೇರದ/ನೆರವೇರದ; ಅನ್ನಕ್ಕ=ವರೆಗೆ/ತನಕ; ನಡೆಯದನ್ನಕ=ಆಗದಿದ್ದರೆ/ನೆರವೇರದಿದ್ದರೆ;

ಒಡೆಯನ್+ಅನ್+ಓಲೈಸಿ; ಒಡೆಯ=ಯಜಮಾನ/ಅರಸು/ದಣಿ; ಓಲೈಸಿ=ಸೇವೆಯನ್ನು ಮಾಡಿ/ಉಪಚರಿಸಿ/ಹೊಗಳಿ ಕೊಂಡಾಡಿ; ತನುವಿಂಗೆ=ತನುವಿಗೆ; ತನು=ಮಯ್/ಶರೀರ; ಅಷ್ಟ=ಎಂಟು; ಭೋಗ=ಒಲವು ನಲಿವನ್ನು ಹೊಂದಿ ಆನಂದಪಡುವುದು; ಅಷ್ಟಭೋಗ=ಮಯ್ ಮನಕ್ಕೆ ಮುದ ನೀಡುವ "ಮನೆ–ಹಾಸುಗೆ–ಬಟ್ಟೆ–ಒಡವೆ–ಹೆಣ್ಣು–ಹೂವು–ಚಂದನ–ತಾಂಬೂಲ" "ಕೂಳು–ನೀರು–ತಾಂಬೂಲ–ಹೂವು–ಚಂದನ–ಬಟ್ಟೆ–ಹಾಸುಗೆ–ಅಲಂಕಾರ" ಎಂಬ ಎಂಟು ಬಗೆಯ ಒಡವೆವಸ್ತುಗಳು; ಪಡೆಯದೆ+ಇದ್ದರೆ; ಪಡೆ=ಹೊಂದು/ಸ್ವೀಕರಿಸು/ದೊರಕಿಸಿಕೊಳ್ಳು;

ಭಕ್ತ+ಆಗಿ; ಭಕ್ತ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು/ಒಳ್ಳೆಯ ನಡೆನುಡಿಗಳೇ ದೇವರನ್ನು ಒಲಿಸಿಕೊಳ್ಳುವ ಆಚರಣೆಯೆಂದು ತಿಳಿದುಕೊಂಡು ಬಾಳುತ್ತಿರುವವನು; ಭವಂ+ ನಾಸ್ತಿ+ಆಗದೆ+ಇದ್ದರೆ; 'ಭವ' ಎಂದರೆ "ನಿಸರ್ಗದಲ್ಲಿನ ಜಡವಸ್ತು, ಜೀವಜಂತು, ಮಾನವಜೀವಿಗಳೆಲ್ಲವೂ ನೆಲೆಗೊಂಡಿರುವಂತಹ ಜಗತ್ತು. ಮಾನವ ಸಮುದಾಯದ ಎಲ್ಲಾ ಬಗೆಯ ಚಟುವಟಿಕೆಗಳ ನೆಲೆ; ನಾಸ್ತಿ=ಇಲ್ಲವಾಗುವುದು/ ಲಯವಾಗುವುದು;

ಭವಂ ನಾಸ್ತಿ=ಕೆಟ್ಟ ನಡೆನುಡಿಗಳಿಗೆ ಕಾರಣವಾಗುವಂತಹ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು ಇಲ್ಲವೇ ಹೋಗಲಾಡಿಸಿಕೊಂಡು, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿತ್ವವನ್ನು ಪಡೆದುಕೊಳ್ಳುವುದು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಟ್ಟು; ಆಗದಿದ್ದರೆ=ಆಗದೇ ಹೋದರೆ/ ಉಂಟಾಗದಿದ್ದರೆ; ಆ=ಅಂತಹ; ಉಪದೇಶ=ಅರಿವನ್ನು ನೀಡುವುದು/ ತಿಳುವಳಿಕೆಯನ್ನು ಹೇಳುವುದು; ಕೊಟ್ಟ=ಹೇಳಿದ/ನೀಡಿದ; ಗುರು=ವಿದ್ಯೆಯನ್ನು ಕಲಿಸುವ, ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವ ವ್ಯಕ್ತಿ; ಕೊಂಡ=ಪಡೆದ/ಕೇಳಿ ತಿಳಿದ/ ಶಿಷ್ಯಂಗೆ=ಶಿಷ್ಯನಿಗೆ; ಶಿಷ್ಯ=ವಿದ್ಯೆಯನ್ನು ಕಲಿಯುವ/ಹಂಬಲವುಳ್ಳವನು/ಶಿಷ್ಯ ಇವರು+ಇಬ್ಬರ;

ಇವರಿಬ್ಬರ=ಇಂತಹ ಗುರು ಮತ್ತು ಶಿಷ್ಯರ; ಮಾರಿ=ಜನಪದರ ದೇವತೆ; ಹೊಗಲಿ=ಒಳಕ್ಕೆ ಬರಲಿ/ಒಳನುಗ್ಗಲಿ; **ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ**= "ನಿನ್ ಮನೆಗೆ ಮಾರಿ ನುಗ್ಗ" ಎಂಬ ಶಾಪದ ನುಡಿಯು ಜನಪದರ ಮಾತುಕತೆಯಲ್ಲಿ ಬಳಕೆಯಲ್ಲಿದೆ. ಅಂದರೆ ಮಾರಿದೇವತೆಯ ಕ್ರೂರನೋಟಕ್ಕೆ ಗುರಿಯಾಗಿ ಗುರು–ಶಿಷ್ಯನ ಮನೆಮಂದಿಗೆಲ್ಲಾ ಸಾವುನೋವು ಉಂಟಾಗಲಿ ಎಂಬ ತಿರುಳನ್ನು ಈ ಶಾಪದ ನುಡಿಗಳು ಹೊಂದಿವೆ; ಗುಹೇಶ್ವರ+ಲಿಂಗ+ಅತ್ತಲೆ; ಗುಹೇಶ್ವರ=ಶಿವ; ಅತ್ತಲೆ=ಆ ಕಡೆ/ದೂರ; ಹೋಗಲಿ=ಹೋಗುವಂತಾಗಲಿ; **ಗುಹೇಶ್ವರಲಿಂಗವತ್ತಲೆ ಹೋಗಲಿ**=ಕೆಟ್ಟ ನಡೆನುಡಿಗಳುಳ್ಳ ವ್ಯಕ್ತಿಗಳಿಂದ ಗುಹೇಶ್ವರನು ದೂರ ಹೋಗುವಂತಾಗಲಿ.)

❖

59. ಮಠವೇಕೋ ಪರ್ವತವೇಕೋ
ಜನವೇಕೋ ನಿರ್ಜನವೇಕೋ
ಚಿತ್ತಸಮಾಧಾನವುಳ್ಳ ಶರಣಂಗೆ
ಮತ್ತೆ ಹೊರಗಣ ಚಿಂತೆ ಧ್ಯಾನ
ಮೌನ ಜಪ ತಪವೇಕೋ
ತನ್ನ ತಾನರಿದ ಶರಣಂಗೆ ಗುಹೇಶ್ವರ.

ಮನದಲ್ಲಿ ಮೂಡುವ ಕೆಟ್ಟ ಆಸೆಗಳನ್ನು ಹತ್ತಿಕ್ಕಿಕೊಂಡು, ಸಹಮಾನವರಿಗೆ ಮತ್ತು ಸಮಾಜಕ್ಕೆ ಸಮಚಿತ್ತದಿಂದ ಒಳಿತನ್ನು ಮಾಡುವ ವ್ಯಕ್ತಿಗೆ ದೇವರನ್ನು ಒಲಿಸಿಕೊಳ್ಳಲು ಮಾಡುವ ಆಚರಣೆಗಳ ಅಗತ್ಯವಿರುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಮಠ+ಏಕೋ; ಮಠ=ದೇವರು/ಜಾತಿ/ಮತದ ಹೆಸರುಗಳಲ್ಲಿ ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟ; ಏಕೋ=ಯಾತಕ್ಕೆ ಬೇಕು/ಅಗತ್ಯವಾದರೂ ಏನು; ಪರ್ವತ+ಏಕೋ; ಪರ್ವತ=ದೊಡ್ಡದಾಗಿರುವ ಬೆಟ್ಟಗುಡ್ಡಕಾಡುಮೇಡುಗಳಿಂದ ಕೂಡಿರುವ ಜಾಗ;

ಪರ್ವತವೇಕೋ=ನಾಡಿನಲ್ಲಿ ದೊರೆಯುವ ಎಲ್ಲಾ ಬಗೆಯ ಒಲವು ನಲಿವಿನ ಬದುಕನ್ನು ತೊರೆದು, ಕಾಡಿಗೆ ಹೋಗಿ ಎಲೆವನೆಯನ್ನು ಕಟ್ಟಿಕೊಂಡು ದೇವರ ನೆನಪಿನಲ್ಲಿ ತೊಡಗುವ ಅಗತ್ಯವೇನು?;

ಜನ+ಏಕೋ; ಜನ=ವ್ಯಕ್ತಿಗಳ ಗುಂಪು/ಜಂಗುಳಿ;

ಜನವೇಕೋ=ಹೆಚ್ಚು ಮಂದಿಯ ಜತೆಗೂಡಿ ದೇವರ ಹೆಸರಿನಲ್ಲಿ ಬಹುಬಗೆಯ ಆಚರಣೆಯಲ್ಲಿ ತೊಡಗುವ ಅಗತ್ಯವಾದರೂ ಏಕೆ?; ನಿರ್ಜನ+ಏಕೋ; ನಿರ್ಜನ=ಜನ ವಸತಿಯಿಲ್ಲ ದಿರುವಿಕೆ/ಯಾವೊಬ್ಬ ವ್ಯಕ್ತಿಯೂ ಇಲ್ಲದಿರುವ ತಾಣ;

ನಿರ್ಜನವೇಕೋ= ಒಬ್ಬಂಟಿಯಾಗಿದ್ದುಕೊಂಡು ದೇವರ ನೆನಪಿನಲ್ಲಿ ತೊಡಗಿರುವ ಅಗತ್ಯವೇನು ?

ಚಿತ್ತ+ಸಮಾಧಾನ+ಉಳ್ಳ; ಚಿತ್ತ=ಮನಸ್ಸು; ಸಮಾಧಾನ=ಯಾವುದೇ ಬಗೆಯ ಕಳವಳ/ತಳಮಳ/ಒತ್ತಡವಿಲ್ಲದಿರುವಿಕೆ; ಉಳ್ಳ=ಇರುವ/ಹೊಂದಿರುವ; ಚಿತ್ತ ಸಮಾಧಾನವುಳ್ಳ=ಒಲವು ನಲಿವು ತಾಳ್ಮೆ ನೆಮ್ಮದಿಯಿಂದ ಕೂಡಿರುವ ಮನಸ್ಸು;

ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವವನು/ಶಿವನಿಗೆ ಒಲಿದವನು; ಶರಣಂಗೆ=ಶರಣನಿಗೆ; ಮತ್ತೆ=ಒಂದರ ಜತೆಗೆ ಇನ್ನೊಂದು/ಬಳಿಕ/ನಂತರ/ಮರಳಿ; ಹೊರಗಣ=ಬಹಿರಂಗದಲ್ಲಿ/ಇತರರ ಕಣ್ಣಿಗೆ ಕಾಣುವಂತಹ ಬಗೆಯಲ್ಲಿ; ಚಿಂತೆ=ಆಲೋಚನೆ/ಕಳವಳ/ದುಗುಡ; ಧ್ಯಾನ= ದೇವರ ಹೆಸರನ್ನು ಕುರಿತು ಮತ್ತೆ ಮತ್ತೆ ಉಚ್ಚರಿಸುತ್ತಿರುವುದು; ಮೌನ= ಮಾತನಾಡದೆ ಸುಮ್ಮನಿರುವುದು;

ಜಪ=ತಾನು ಒಲಿದಿರುವ ದೇವರನ್ನು ಇಲ್ಲವೇ ಮೆಚ್ಚಿರುವ ಇನ್ನಿತರ ಸಂಗತಿಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿರುವುದು; ತಪ= ಉಪವಾಸ ಮತ್ತು ಇನ್ನಿತರ ದಂಡನೆಗಳಿಗೆ ಮಯ್ಯನ್ನು ಒಳಗುಮಾಡಿ ದೇವರನ್ನು ನೆನಪಿಸಿ ಕೊಳ್ಳುವುದು;

ಹೊರಗಣ ಚಿಂತೆ ಧ್ಯಾನ ಮೌನ ಜಪ ತಪವೇಕೋ=ಈ ಬಗೆಯ ಆಚರಣೆಗಳ ಅಗತ್ಯವೇನು?; ತನ್ನ=ತನ್ನನ್ನು; ತಾನ್+ಅರಿದ; ತಾನ್=ತಾನು; ಅರಿ=ತಿಳಿ;

"ತನ್ನನ್ನು ತಾನು ಅರಿಯುವುದು" ಎಂದರೆ ಪ್ರತಿಯೊಬ್ಬ ಮಾನವನು ತಾನು ಹುಟ್ಟಿ ಬೆಳೆದು ಬಾಳುವ ಪರಿಸರದಲ್ಲಿರುವ ನಿಸರ್ಗದಲ್ಲಿನ ಏರಿಳಿತಗಳಿಗೆ ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟು ವ್ಯವಹರಿಸುತ್ತಿರುತ್ತಾನೆ. ಇದರಿಂದಾಗಿ ಮಾನವ ಜೀವಿಯ ಮಯ್–ಮನಗಳು ಸದಾಕಾಲ ಒಳಿತು ಕೆಡುಕಿನ ಇಬ್ಬಗೆಯ ತೊಳಲಾಟದಲ್ಲಿ ಸಿಲುಕಿರುತ್ತವೆ ಎಂಬ ವಾಸ್ತವವನ್ನು ಅರಿತುಕೊಂಡು, ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿ, ಒಳ್ಳೆಯ ನಡೆನುಡಿಗಳಿಂದ ತನಗೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಎಚ್ಚರವನ್ನು ಹೊಂದಿರುವುದು; ಗುಹೇಶ್ವರ=ಶಿವ/ಅಲ್ಲಮನ ಮೆಚ್ಚಿನ ದೇವರು.)

60. ಮಣಿಯನೆಣಿಸಿ ಕಾಲವ ಕಳೆಯಬೇಡ
ಕಣಿಯ ಪೂಜಿಸಿ ಕಾಲವ ಕಳೆಯಬೇಡ
ಕ್ಷಣವಾದಡೆಯೂ ಆಗಲಿ ನಿಜದ ನೆನಹೇ ಸಾಕು
ಕ್ಷಣಾರ್ಧವಾದಡೆಯೂ ಆಗಲಿ ನಿಜದ ನೆನಹೇ ಸಾಕು
ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ ಗುಹೇಶ್ವರ.

ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳುವುದು ದೊಡ್ಡದೇ ಹೊರತು, ದೇವರ ಬಗೆಗಿನ ಒಲವನ್ನು ತೋರಿಸಿಕೊಳ್ಳುವುದಕ್ಕಾಗಿ ಮಾಡುವ ಆಚರಣೆಗಳಿಂದ ಇಲ್ಲವೇ ಪೂಜೆಯಿಂದ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಮಣಿ+ಅನ್+ಎಣಿಸಿ; ಮಣಿ=ಗುಂಡನೆಯ ಆಕಾರವುಳ್ಳ ರುದ್ರಾಕ್ಷಿ ಮರದ ಕಾಯಿ/ಹವಳ/ಮುತ್ತು; ಅನ್=ಅನ್ನು; ಮಣಿಯನ್=ದುಂಡನೆಯ ರುದ್ರಾಕ್ಷಿ ಕಾಯಿ/ಹವಳ/ಮುತ್ತುಗಳನ್ನು ದಾರವೊಂದಕ್ಕೆ ಪೋಣಿಸಿ ಮಾಡಿರುವ ಸರವನ್ನು; ಎಣಿಸಿ=ಲೆಕ್ಕ ಹಾಕುತ್ತ; ಕಾಲ=ಸಮಯ/ವೇಳೆ; ಕಳೆ=ಹಾಳು ಮಾಡು;

ಮಣಿಯನೆಣಿಸಿ ಕಾಲವ ಕಳೆಯಬೇಡ=ಮಣಿಗಳನ್ನು ಪೋಣಿಸಿರುವ ಮಾಲೆಯನ್ನು ಜಪಸರವನ್ನಾಗಿ ಮಾಡಿಕೊಂಡು, ಅದರಲ್ಲಿನ ಒಂದೊಂದು ಮಣಿಯನ್ನು ಮುಂದೆ ಮುಂದೆ ಜರುಗಿಸುತ್ತ, ಒಂದೊಂದು ಮಣಿಗೂ ದೇವರ ಹೆಸರನ್ನು ಉಚ್ಚರಿಸುವ ಕೆಲಸದಲ್ಲಿ ತೊಡಗಿ ಕಾಲವನ್ನು ಹಾಳುಮಾಡಬೇಡ;

ಕಣಿ=ಕಲ್ಲು/ಶಿಲೆ; ಪೂಜಿಸಿ=ಪೂಜೆಯನ್ನು ಮಾಡಿ; **ಕಣಿಯ ಪೂಜಿಸಿ ಕಾಲವ ಕಳೆಯಬೇಡ**=ಕಲ್ಲನ್ನು ಕಡೆದು ಮಾಡಿರುವ ದೇವರ ವಿಗ್ರಹವನ್ನು ಬಗೆಬಗೆಯ ಆಚರಣೆಗಳಿಂದ ಪೂಜಿಸುತ್ತ ಕಾಲವನ್ನು ಹಾಳುಮಾಡಬೇಡ; ಕ್ಷಣ+ ಆದಡೆಯೂ; ಕ್ಷಣ=ತುಸು ಕಾಲ/ಸಮಯ/ಗಳಿಗೆ; ಆದಡೆ=ಆದರೆ; ಆದಡೆಯೂ =ಆದರೂ; ನಿಜ=ದಿನನಿತ್ಯದ ಬದುಕಿನಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿ; ನೆನಹು=ನೆನಪು;

ನಿಜದ ನೆನಹು=ಒಳ್ಳೆಯ ನಡೆನುಡಿಗಳನ್ನು ಆಚರಣೆಗೆ ತರಬೇಕೆಂಬ ಎಚ್ಚರ ಮತ್ತು ಅದರಂತೆ ನಡೆಯುವುದು; ಕ್ಷಣ+ಅರ್ಧ+ಆದಡೆಯೂ; ಕ್ಷಣಾರ್ಧ=ಅರೆಗಳಿಗೆ; ಬೆಂಕಿ+ಒಳಗೆ+ಉಳ್ಳ; ಬೆಂಕಿ=ಉರಿ/ಕಿಚ್ಚು/ಅಗ್ನಿ;

ಉಳ್ಳ=ಇರುವ; ಗುಣ=ಶಕ್ತಿ/ಬಲ/ಸತ್ವ; ಬಿಸಿನೀರಲ್+ಉಂಟೇ; ನೀರಲ್=ನೀರಿನಲ್ಲಿ; ಉಂಟೇ=ಇದೆಯೇ; ಬಿಸಿನೀರು=ಸುಡುವ ನೀರು/ ಬೆಂಕಿಯಲ್ಲಿ ಕಾದು ಬೆಚ್ಚಗಿರುವ ನೀರು;

ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ ಎಂಬ ಸೊಲ್ಲು "ವ್ಯಕ್ತಿಯ ದಿನನಿತ್ಯದ ಸಾಮಾಜಿಕ ವ್ಯವಹಾರಗಳಲ್ಲಿ ಕಂಡುಬರುವ ಒಳ್ಳೆಯ ನಡೆನುಡಿಗಳಿಗೆ ಇರುವ ಬೆಲೆಯು, ವ್ಯಕ್ತಿಯು ಮಾಡುವ ತೋರಿಕೆಯ ಪೂಜೆಯ ಆಚರಣೆಗಳಿಗೆ ಇರುವುದಿಲ್ಲ" ಎಂಬ ತಿರುಳಿನಲ್ಲಿ ಬಳಕೆಯಾಗಿರುವ ರೂಪಕವಾಗಿದೆ; ಗುಹೇಶ್ವರ=ಅಲ್ಲಮನ ಮೆಚ್ಚಿನ ದೇವರು/ಶಿವ.)

❖

61. ಮರ್ತ್ಯಲೋಕದ ಮಾನವರು
ದೇಗುಲದೊಳಗೊಂದು ದೇವರ ಮಾಡಿದಡೆ
ಆನು ಬೆರಗಾದೆನಯ್ಯ
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ
ಭೋಗವ ಮಾಡುವರ ಕಂಡು
ನಾನು ಬೆರಗಾದೆನು
ಗುಹೇಶ್ವರ ನಿಮ್ಮ ಶರಣರು
ಹಿಂದೆ ಲಿಂಗವನಿರಿಸಿ ಹೋದರು.

ದೇಗುಲವನ್ನು ಕಟ್ಟಿ, ದೇವರ ಹೆಸರಿನಲ್ಲಿ ತಮಗೆ ಬೇಕಾದುದೆಲ್ಲವನ್ನೂ ಪಡೆದುಕೊಂಡು ಮೆರೆದು ನಲಿಯುವ ವ್ಯಕ್ತಿಗಳನ್ನು ಈ ವಚನದಲ್ಲಿ ಟೀಕಿಸಲಾಗಿದೆ.

(ಮರ್ತ್ಯಲೋಕ=ಮಾನವರು ಮತ್ತು ಇನ್ನುಳಿದ ಜೀವಜಂತುಗಳು ನೆಲೆಸಿರುವ ಜಾಗ/ಪ್ರಪಂಚ/ಜಗತ್ತು; ದೇಗುಲದ+ಒಳಗೆ+ಒಂದು; ದೇವ+ಕುಲ=ದೇಗುಲ; ಕುಲ=ಮನೆ/ಮಂದಿರ/ನೆಲೆ; ದೇಗುಲ=ದೇವರ ವಿಗ್ರಹ ಇರುವ ಮಂದಿರ; ದೇವರ=ದೇವರನ್ನು; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನೀವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು ದೇವರು ಎಂದು ಮಾನವ ಸಮುದಾಯ ನಂಬಿದೆ; ಮಾಡಿದಡೆ=ಮಾಡಿದರೆ/ನೆಲೆಗೊಳಿಸಿದರೆ;

ದೇವರ ಮಾಡಿದಡೆ=ದೇವರ ವಿಗ್ರಹವನ್ನು ನೆಲೆಗೊಳಿಸಿದರೆ; ಆನು=ನಾನು; ಬೆರಗು+ಆದೆನ್+ಅಯ್ಯ; ಬೆರಗು=ಅಚ್ಚರಿ/ಸೋಜಿಗ; ಆದೆನು= ಪಟ್ಟೆನು/ಹೊಂದಿದೆನು; ಅಯ್ಯ=ಗಂಡಸರನ್ನು ಒಲವು ನಲಿವುಗಳಿಂದ ಮಾತನಾಡಿಸುವಾಗ ಬಳಸುವ ಪದ;

ನಿಚ್ಚ=ನಿತ್ಯವೂ/ಪ್ರತಿದಿನವೂ; ನಿಚ್ಚಕ್ಕೆ ನಿಚ್ಚ=ಎಡೆಬಿಡದೆ/ಒಂದೇ ಸಮನೆ/ನಿರಂತರವಾಗಿ; ಅರ್ಚನೆ=ಪೂಜೆ/ಸೇವೆ; ಪೂಜನೆ=ಮಂಗಳಾರತಿಯನ್ನು ಬೆಳಗುತ್ತ ಮಾಡುವ ಆಚರಣೆ; ಭೋಗ=ಉಂಡು ತಿಂದು ಕುಡಿದು ಆನಂದದಿಂದ ಓಲಾಡುವುದು; ಮಾಡುವರ=ಮಾಡುವವರನ್ನು; ಕಂಡು=ನೋಡಿ;

ಭೋಗವ ಮಾಡುವವರು=ದೇವರ ಪೂಜೆಯ ನೆಪದಲ್ಲಿ ತಮ್ಮ ಮಯ್ ಮನಗಳ ಬಯಕೆ/ಆಸೆ/ಕಾಮನೆಗಳನ್ನು ಈಡೇರಿಸಿಕೊಂಡು ನಲಿಯುವವರು;

ಲಿಂಗವನ್+ಇರಿಸಿ; ಲಿಂಗ=ಶಿವನ ಸಂಕೇತದ ವಿಗ್ರಹ; ಇರಿಸಿ=ಇಟ್ಟು; ಶರಣ=ಶಿವನನ್ನು ಒಲಿದವನು/ಶಿವನನ್ನು ಮೆಚ್ಚಿದವನು;

ಶರಣರು ಹಿಂದೆ ಲಿಂಗವನಿರಿಸಿ ಹೋದರು=ಶಿವಶರಣ ಶರಣೆಯರಿಗೆ ವಿಗ್ರಹ ರೂಪದ ಶಿವಪೂಜೆಯಲ್ಲಿ ಯಾವುದೇ ನಂಬಿಕೆಯಾಗಲಿ ಇಲ್ಲವೇ ಆಸಕ್ತಿಯಾಗಲಿ ಇರಲಿಲ್ಲ. ಶಿವನು ಅವರ ಮಯ್–ಮನಗಳಲ್ಲಿಯೇ ನೆಲೆಗೊಂಡವನಾಗಿದ್ದ. ಆದುದರಿಂದಲೇ ವಿಗ್ರಹದ ರೂಪದ ಲಿಂಗದಿಂದ ಶಿವಶರಣಶರಣೆಯರು ದೂರಸರಿದರು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ಸೊಲ್ಲು.)

❖

62. ಮಾಡಿದ ಓಗರ ಮಾಡಿದಂತೆ ಇದ್ದಿತ್ತು
ನೀಡಿದ ಕೈಗಳೆಡೆಯಾಡುತ್ತಿದ್ದವು
ಲಿಂಗಕ್ಕರ್ಪಿತವ ಮಾಡಿದೆನೆಂಬರು
ಒಂದರಲೊಂದು ಸವೆಯದು ನೋಡಾ
ಲಿಂಗವಾರೋಗಣೆಯ ಮಾಡಿದನೆಂಬರು
ತಾವುಂಡು ನಿಮ್ಮ ದೂರುವರು
ಗುಹೇಶ್ವರ.

ದೇವರ ವಿಗ್ರಹದ ಮುಂದೆ ತಿನಸು ಉಣಿಸುಗಳನ್ನಿಟ್ಟು ಮಾಡುವ ಆಚರಣೆಯಲ್ಲಿನ ಬೂಟಾಟಿಕೆಯನ್ನು ಕುರಿತು ಈ ವಚನದಲ್ಲಿ ಹೇಳಲಾಗಿದೆ.

(ಮಾಡಿದ=ಅಣಿಗೊಳಿಸಿದ/ತಯಾರಿಸಿದ; ಓಗರ=ಅನ್ನ/ಅಟ್ಟ ಅಡುಗೆ/ತಿನಸು ಉಣಿಸು; ಮಾಡಿದ+ಅಂತೆ; ಇದ್ದು+ಇತ್ತು; ನೀಡಿದ=ಮುಂದೆ ಒಡ್ಡಿದ/ಚಾಚಿದ; ಕೈಗಳ್+ಎಡೆ+ಆಡುತ್ತ+ಇದ್ದವು; ಎಡೆ=ನಡುವೆ/ಹತ್ತಿರ; ಎಡೆಯಾಡು=ಅತ್ತಿತ್ತ ಅಲೆದಾಡು/ಚಲಿಸು; ಇದ್ದವು=ಇರುವುವು; **ಕೈಗಳ್ ಎಡೆಯಾಡುತ್ತಿದ್ದವು**= ತಿಂಡಿ ತಿನಸುಗಳುಳ್ಳ ತಟ್ಟೆಬಟ್ಟಲು ಮತ್ತು ಲಿಂಗದ ಬಾಯ ನಡುವೆ ಪೂಜಿಸುವವರ ಕಯ್ಗಳು ಲಿಂಗಕ್ಕೆ ತಿನಿಸುವಂತೆ ಅತ್ತಿತ್ತ ಹೋಗಿಬರುತ್ತಿದ್ದವು;

ಲಿಂಗಕ್ಕೆ+ಅರ್ಪಿತವ; ಲಿಂಗಕ್ಕೆ=ಶಿವನಿಗೆ; ಅರ್ಪಿತ=ನೀಡುವುದು/ಕೊಡುವುದು / ಒಪ್ಪಿಸುವುದು; ಮಾಡಿದೆನ್+ಎಂಬರು; ಎಂಬರು=ಎನ್ನುವರು; ಒಂದರಲ್+ ಒಂದು; ಸವೆ=ಕಡಿಮೆಯಾಗು/ಮುಗಿಯುವುದು; **ಒಂದರಲೊಂದು ಸವೆಯದು**= ಇತ್ತ ತಿಂಡಿ ತಿನಸಿನಲ್ಲಿ ತುಸುವಾದರೂ ಕಡಿಮೆಯಾಗಲಿಲ್ಲ; ಅತ್ತ ಲಿಂಗರೂಪಿಯಾದ ಶಿವನು ತನಗೆ ನೀಡಿದ ವಸ್ತುಗಳಲ್ಲಿ ಒಂದನ್ನಾದರೂ ರುಚಿ ನೋಡಲಿಲ್ಲ. ನೋಡಾ=ತಿಳಿದು/ಅರಿತು ನೋಡು;

ಲಿಂಗವು+ಆರೋಗಣೆಯ; ಲಿಂಗ=ಶಿವ/ಶಿವನ ಸಂಕೇತವಾದ ವಿಗ್ರಹ; ಆರೋಗಣೆ=ಊಟ/ಆಹಾರವನ್ನು ತೆಗೆದುಕೊಳ್ಳುವುದು; ಮಾಡಿದನ್+ಎಂಬರು; ಎಂಬರು=ಎನ್ನುತ್ತಾರೆ/ಮಾತನಾಡಿಕೊಳ್ಳುತ್ತಾರೆ: ತಾವ್+ಉಂಡು; **ತಾವುಂಡು**= ದೇವರಿಗೆ ತಿನ್ನಿಸುತ್ತೇವೆ ಎಂದು ಅಣಿಗೊಳಿಸಿದ್ದೆಲ್ಲವನ್ನೂ ತಾವು ಕಬಳಿಸಿ; **ನಿಮ್ಮ ದೂರುವರು**=ನಿಮ್ಮ ಮೇಲೆ ಅದರ ಹೊಣೆಯನ್ನು ಹೊರಿಸುವರು/ದೇವರು ಉಂಡನೆಂದು ಹೇಳುವರು.)

❖

63. ಮಿಂದು ದೇವರ ಪೂಜಿಸಿಹೆನೆಂಬ
ಸಂದೇಹಿ ಮಾನವ ನೀ ಕೇಳಾ
ಮೀಯದೆ ಮೀನು ಮೀಯದೆ ಮೊಸಳೆ
ತಾ ಮಿಂದು ತನ್ನ ಮನ ಮೀಯದನ್ನಕ್ಕರ
ಈ ಬೆಡಗಿನ ಮಾತ ಮೆಚ್ಚುವನೆ
ನಮ್ಮ ಗುಹೇಶ್ವರ ಲಿಂಗವು.

ಮನದೊಳಗಿನ ಕೊಳೆಯನ್ನು ತೊಳೆದುಕೊಳ್ಳದೆ, ಮಯ್ ಮೇಲಣ ಕೊಳೆಯನ್ನು ಮಾತ್ರ ತೊಳೆದು ಮಡಿಯುಟ್ಟು ಮಾಡುವ ಪೂಜೆಯನ್ನು ದೇವರು ಮೆಚ್ಚುವುದಿಲ್ಲವೆಂದು ಈ ವಚನದಲ್ಲಿ ಹೇಳಲಾಗಿದೆ.

ಮನದೊಳಗಿನ ಕೊಳೆಯನ್ನು ತೊಳೆಯುವುದು ಎಂದರೆ ಮನದೊಳಗೆ ಮೂಡುವ ಕೆಡುಕಿನ ಒಳಮಿಡಿತಗಳನ್ನು ಹೋಗಲಾಡಿಸಿಕೊಂಡು, ಒಳ್ಳೆಯ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

(ಮಿಂದು=ಸ್ನಾನ ಮಾಡಿ; ಮೀ=ಸ್ನಾನ ಮಾಡು/ಜಳಕ ಮಾಡು ಪೂಜಿಸಿ+ಇಹೆನ್+ಎಂಬ; ಪೂಜಿಸಿ=ಪೂಜೆಯನ್ನು ಮಾಡಿ; ಇಹೆನ್=ಇದ್ದೇನೆ; ಎಂಬ=ಎನ್ನುವ; **ಸಂದೇಹಿ ಮಾನವ**=ಒಳಿತು/ಕೆಡುಕು ಹಾಗೂ ಸರಿ/ತಪ್ಪುಗಳ ನಡುವೆ ತೊಳಲಾಡುವ ಮನಸ್ಸುಳ್ಳ ವ್ಯಕ್ತಿ; ನೀ=ನೀನು; ಕೇಳ್+ಆ; ಕೇಳಾ=ಕೇಳಿಸಿಕೊ/ತಿಳಿದುಕೊ/ಅರಿತುಕೊ;

ಮೀಯದೆ=ನೀರಿನಲ್ಲಿ ಮುಳುಗಿ ಮಡಿಯಾಗುವುದಿಲ್ಲವೇ; ತಾ=ತಾನು; ತನ್ನ=ಸ್ನಾನ ಮಾಡಿದ ವ್ಯಕ್ತಿಯ; ಮನ=ಮನಸ್ಸು; ಮೀಯದ+ಅನ್ನಕ್ಕರ; ಮೀಯದ=ಸ್ನಾನ ಮಾಡದ/ಕೊಳೆಯನ್ನು ತೊಳೆದುಕೊಳ್ಳದ; ಅನ್ನಕ್ಕರ= ಅಲ್ಲಿಯತನಕ/ಅಲ್ಲಿಯವರೆಗೆ; ಬೆಡಗು=ತಳುಕು/ಒಯ್ಯಾರ/ಚಮತ್ಕಾರ; **ಬೆಡಗಿನ ಮಾತು**=ಕೇಳುವವರ ಮನಸೆಳೆಯುವಂತಹ ಆದರೆ ಆಚರಣೆಯಲ್ಲಿ ಇಲ್ಲದ ತೋರಿಕೆಯ ಮಾತುಗಳು; ಮೆಚ್ಚು=ಒಪ್ಪು/ಬಯಸು/ಒಲಿಯುವುದು; ಮೆಚ್ಚುವನೆ =ಒಪ್ಪುತ್ತಾನೆಯೇ; ಗುಹೇಶ್ವರ ಲಿಂಗ=ಶಿವ/ದೇವರು.)

❖

64. ಮುಸುರೆಯ ಮಡಕೆಯ ನೊಣ ಮುತ್ತಿಕೊಂಡಿಪ್ಪಂತೆ
ಕಸವುಳ್ಳ ಹೊಲದಲ್ಲಿ ಪಶುಗಳು ನೆರೆದಿಪ್ಪಂತೆ
ಅನ್ನ ಉದಕ ಹೊನ್ನು ವಸ್ತ್ರವುಳ್ಳ ದೊರೆಯ ಬಾಗಿಲಲ್ಲಿ
ಬಹುಭಾಷೆಯ ಹಿರಿಯರುಗಳು ನೆರೆದುಕೊಂಡಿಪ್ಪರು
ಗುಹೇಶ್ವರಾ ನಿಮ್ಮ ಶರಣರು ಆಶಾಪಾಶವಿರಹಿತರು.

ಸಿರಿವಂತಿಕೆ ಮತ್ತು ಆಡಳಿತದ ದೊಡ್ಡ ಗದ್ದುಗೆಯಲ್ಲಿರುವವರನ್ನು ಹಾಡಿ ಹೊಗಳುತ್ತಾ, ತಮ್ಮತನವನ್ನು ಕಳೆದುಕೊಂಡು ಬಾಳುತ್ತಿರುವ ವ್ಯಕ್ತಿಗಳ ನಡೆನುಡಿಗಳನ್ನು ಈ ವಚನದಲ್ಲಿ ಹೇಳಲಾಗಿದೆ.

"ತಮ್ಮತನ/ತನ್ನತನ" ಎಂದರೆ ವ್ಯಕ್ತಿಯು ತಾನು ದುಡಿಯುತ್ತಿರುವ ನೆಲೆಯಲ್ಲಿನ ಒಡೆಯರ ನಡೆನುಡಿಯಲ್ಲಿ ತಪ್ಪುಗಳು ಕಂಡುಬಂದಾಗ, ಅವನ್ನು ತಿದ್ದಿಕೊಳ್ಳುವಂತೆ ತಿಳಿಯ ಹೇಳುವ ಎದೆಗಾರಿಕೆ; ತನ್ನ ಮಾತುಗಳಿಗೆ ಮನ್ನಣೆ ದೊರೆಯದಿದ್ದಾಗ, ಒಡೆಯರ ಎಡೆಯಿಂದ ದೂರ ಸರಿಯುವ ದಿಟ್ಟತನ; ಸುಳ್ಳುನುಡಿ ಇಲ್ಲವೇ ಚಾಡಿ ಮಾತುಗಳಿಂದ ಒಡೆಯರನ್ನು ಒಲಿಸಿಕೊಂಡು, ತಮಗೆ ಬೇಕಾದುದೆಲ್ಲವನ್ನೂ ಪಡೆದುಕೊಳ್ಳ ಬೇಕೆಂಬ ಕಪಟತನವಿಲ್ಲದಿರುವುದು; ಅತಿ ವಿನಯವನ್ನು ತೋರಿಸುತ್ತ ಮಯ್ ಮನಗಳನ್ನು ಕುಗ್ಗಿಸಿಕೊಳ್ಳದಿರುವುದು.

(ಮುಸುರೆ=ಅಕ್ಕಿಯನ್ನು ಬೇಯಿಸಿ ಅನ್ನವನ್ನು ಮಾಡಿದ ಇಲ್ಲವೇ ಮುದ್ದೆ ಮಾಡಲೆಂದು ರಾಗಿ ಹಿಟ್ಟನ್ನು ಬೇಯಿಸಿ, ಓನಿಸಿದ ಮಡಕೆಯ ಒಳಗಡೆ ಒರೆದುಕೊಂಡಿರುವ ಅನ್ನದ/ಹಿಟ್ಟಿನ ಕರಿ; ಅಡುಗೆ ಮಾಡಿದ ಮಡಕೆ/ಪಾತ್ರೆಯೊಳಗೆ ಅಂಟಿಕೊಂಡಿರುವ ಆಹಾರದ ಕಣಗಳು; ಮಡಕೆ=ನೀರನ್ನು ತುಂಬಿಡಲು ಇಲ್ಲವೇ ಅಡುಗೆಯನ್ನು ಮಾಡಲು ಬಳಸುವ ಮಣ್ಣಿನಿಂದ ಮಾಡಿರುವ ಪಾತ್ರೆ; **ಮುಸುರೆಯ ಮಡಕೆಯ**=ಮುಸುರೆಯಿಂದ ಕೂಡಿದ ಮಡಕೆಯನ್ನು;

ನೊಣ=ಮನೆಗಳಲ್ಲಿ/ಕಸಕಡ್ಡಿಗಳಿರುವ ಎಡೆಯಲ್ಲಿ/ಕೊಳಕಿನ ವಸ್ತುಗಳಿರುವ ಜಾಗದಲ್ಲಿ ಹಾರಾಡುವ ಕ್ರಿಮಿ; ಮುತ್ತಿಕೊಂಡು+ಇಪ್ಪ+ಅಂತೆ; ಮುತ್ತು= ಮೇಲೆ ಬೀಳು/ಸುತ್ತುವರಿ/ಆವರಿಸು/ಕವಿದುಕೊಳ್ಳು; ಇಪ್ಪ=ಇರುವ; ಅಂತೆ=ಹಾಗೆ; ಇಪ್ಪಂತೆ=ಇರುವ ರೀತಿಯಲ್ಲಿ; ಕಸ+ಉಳ್ಳ; ಕಸ=ಹೊಲಗದ್ದೆತೋಟಗಳಲ್ಲಿ ಬೆಳೆಯ ನಡುವೆ ತಾನಾಗಿ ಬೆಳೆದು ನಿಂತಿರುವ ಕಳೆಗಿಡಗಳು; ಉಳ್ಳ=ಇರುವ; ಹೊಲ+ಅಲ್ಲಿ; ಹೊಲ=ಜಮೀನು/ಬೆಳೆಗಳನ್ನು ಬೆಳೆಯುವ ಪ್ರದೇಶ;

ಕಸವುಳ್ಳ ಹೊಲದಲ್ಲಿ=ಬೆಳೆಗಿಂತ ಕಳೆಯೇ ಹೆಚ್ಚಾಗಿ ಬೆಳೆದು ನಿಂತಿರುವ ಹೊಲದಲ್ಲಿ; ಪಶು=ಹಸು/ಗೋವು/ದನ; ನೆರೆದು+ಇಪ್ಪ+ಅಂತೆ; ನೆರೆ=ಗುಂಪುಗೂಡು/ಒಟ್ಟಾಗಿ ಸೇರು/ಜತೆಗೂಡು; ನೆರೆದು=ಜತೆಗೂಡಿ/ಗುಂಪಾಗಿ/ಒಟ್ಟಾಗಿ;

ಅನ್ನ=ಆಹಾರ/ಉಣಿಸು/ತಿನಸು; ಉದಕ=ಅನ್ನ/ಹಿಟ್ಟು ಮುಂತಾದುವನ್ನು ಉಣ್ಣುವಾಗ, ಅದರೊಡನೆ ಬೆರೆಸಿಕೊಳ್ಳುವ ಸಾರು/ಹುಳಿ/ಸಾಂಬಾರು; ಹೊನ್ನು=ಚಿನ್ನ/ಸಂಪತ್ತು; ವಸ್ತ್ರ+ಉಳ್ಳ; ವಸ್ತ್ರ=ಬಟ್ಟೆ/ಅರಿವೆ; ದೊರೆ=ರಾಜ/ಅರಸ/ಒಡೆಯ; ಬಾಗಿಲು+ಅಲ್ಲಿ;

ದೊರೆಯ ಬಾಗಿಲಲ್ಲಿ=ಸಿರಿವಂತರ/ಗದ್ದುಗೆಯನ್ನೇರಿದವರ ಮನೆಯ ಮುಂದೆ/ಬಳಿಯಲ್ಲಿ/ಕಾಲ ಬುಡದಲ್ಲಿ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ;

ಬಹು=ಅನೇಕ/ಹಲವು/ಬಗೆಬಗೆಯ; ಹಿರಿಯರು=ವಯಸ್ಸಿನಲ್ಲಿ ಮತ್ತು ಅರಿವಿನಲ್ಲಿ ದೊಡ್ಡವರು;

ಬಹುಭಾಷೆಯ ಹಿರಿಯರು=ಎರಡು ಇಲ್ಲವೇ ಎರಡಕ್ಕಿಂತ ಹೆಚ್ಚಿನ ನುಡಿಗಳ ಕಲಿಕೆ ಮತ್ತು ಬಳಕೆಯಲ್ಲಿ ಚೆನ್ನಾಗಿ ಪರಿಣತರಾದವರು/ಕವಿಗಳು/ವಿದ್ವಾಂಸರು/ಕಲಾವಿದರು/ಮಾತಿನ ಚತುರರು/ಗಮಕಿಗಳು/ಹಾಸ್ಯಪಟುಗಳು; ನೆರೆದು+ಕೊಂಡು+ಇಪ್ಪರು; ಇಪ್ಪರು=ಇರುವರು;

ಶರಣ=ಶಿವನ ಬಗ್ಗೆ ಒಲವುಳ್ಳವನು/ಒಳ್ಳೆಯ ನಡೆನುಡಿಗಳಲ್ಲೇ ಶಿವನನ್ನು ಕಾಣುವಂತಹವನು; ಆಶಾ+ಪಾಶ+ವಿರಹಿತರು; ಆಶಾ=ಆಸೆ/ಬಯಕೆ/ಹಂಬಲ; ಪಾಶ=ಹಗ್ಗ/ಬಲೆ/ಜಾಲ/ಕೊರಳಿಗೆ ಹಾಕಿ ಎಳೆಯುವ ನೇಣಿನ ಕುಣಿಕೆ; ವಿರಹಿತ=ಇಲ್ಲದಿರುವವನು/ಬಿಟ್ಟವನು/ತೊರೆದವನು;

ಆಶಾಪಾಶವಿರಹಿತರು=ಹೆಚ್ಚಿನ ಬಯಕೆಗೆ/ಕೆಟ್ಟ ಆಸೆಗಳಿಗೆ ಬಲಿಯಾಗದವರು)

❖

65. ಶಬ್ದಸಂಭ್ರಮದಲ್ಲಿ ಹಿಂದುಗಾಣರು ಮುಂದುಗಾಣರು
ತಮ್ಮ ತಾವರಿಯರು ಇದು ಕಾರಣ
ಮೂರು ಲೋಕವೆಲ್ಲವು ಬರುಸೂರೆವೋಯಿತ್ತು
ಗುಹೇಶ್ವರ.

ದೊಡ್ಡ ದೊಡ್ಡ ಮಾತುಗಳನ್ನಾಡುತ್ತ, ಮಾತಿನ ಮೋಡಿಯಿಂದಲೇ ಎಲ್ಲರನ್ನೂ ತಮ್ಮತ್ತ ಸೆಳೆಯುತ್ತ, ಎಲ್ಲವನ್ನೂ ಗೆದ್ದೆವೆಂದು ಮೆರೆಯುವ ವ್ಯಕ್ತಿಗಳನ್ನು ಈ ವಚನದಲ್ಲಿ ಟೀಕಿಸಲಾಗಿದೆ.

(ಶಬ್ದ=ಮಾತು/ಪದ/ನುಡಿ; ಸಂಭ್ರಮ=ಆಡಂಬರ/ಬೊಬ್ಬೆ/ಸಡಗರ; **ಶಬ್ದ ಸಂಭ್ರಮದಲ್ಲಿ**=ಕೇಳುಗರ ಮನಸೆಳೆಯುವಂತಹ ಮಾತುಗಳನ್ನಾಡುವುದರಲ್ಲಿ ತೊಡಗಿ; ಹಿಂದು+ಕಾಣರು; ಹಿಂದು=ಈ ಮೊದಲು ನಡೆದಿರುವುದನ್ನು; ಕಾಣರು=ತಿಳಿಯರು; ಮುಂದು+ಕಾಣರು; ಮುಂದು=ಮುಂದಿನ ದಿನಗಳಲ್ಲಿ ಏನಾಗುವುದೆಂಬುದನ್ನು; ತಾವ್+ಅರಿಯರು; ತಾವ್=ತಾವು/ಅವರು/ಮಾತಿನ ಮಲ್ಲರು; ಅರಿ=ತಿಳಿ/ಗ್ರಹಿಸು; ಅರಿಯರು=ತಿಳಿಯಲಾರರು/ಗ್ರಹಿಸಿಕೊಳ್ಳಲಾರರು; **ತಮ್ಮ ತಾವರಿಯರು**=ತಮ್ಮ ನಡೆನುಡಿಯಲ್ಲಿನ ಇತಿಮಿತಿಗಳನ್ನು ತಿಳಿಯಲಾರರು;

"ತಮ್ಮನ್ನು ತಾವು ಅರಿಯುವುದು" ಎಂದರೆ ಪ್ರತಿಯೊಬ್ಬ ಮಾನವನು ತಾನು ಹುಟ್ಟಿ ಬೆಳೆದು ಬಾಳುವ ಪರಿಸರದಲ್ಲಿರುವ ನಿಸರ್ಗದಲ್ಲಿನ ಏರಿಳಿತಗಳಿಗೆ ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟು ವ್ಯವಹರಿಸುತ್ತಿರುತ್ತಾನೆ. ಆದುದರಿಂದಲೇ ಮಾನವ ಜೀವಿಯ ಮಯ್ ಮನಗಳು ಸದಾಕಾಲ ಒಳಿತು ಕೆಡುಕಿನ ಇಬ್ಬಗೆಯ ತೊಳಲಾಟದಲ್ಲಿ ಸಿಲುಕಿರುತ್ತವೆ ಎಂಬ ವಾಸ್ತವವನ್ನು ತಿಳಿದುಕೊಳ್ಳುವುದು;

ಇದು ಕಾರಣ=ಎಲ್ಲ ವ್ಯಕ್ತಿಗಳಲ್ಲಿಯೂ ಒಳಿತು ಕೆಡುಕಿನ ಒಳಮಿಡಿತಗಳು ಇರುತ್ತವೆ ಎಂಬ ವಾಸ್ತವವನ್ನು ತಿಳಿಯದೆ ಇರುವುದರಿಂದ; ಲೋಕ+ಎಲ್ಲವು; ಮೂರು ಲೋಕ=ದೇವಲೋಕ/ಭೂಲೋಕ/ಪಾತಾಳಲೋಕವೆಂಬ ಮೂರು ಲೋಕಗಳು ಇವೆಯೆಂಬ ನಂಬಿಕೆಯು ಪರಂಪರಾಗತವಾಗಿ ಜನಮನದಲ್ಲಿ ನೆಲೆಸಿದೆ; ಬರು+ಸೂರೆ+ಹೋಯಿತ್ತು; ಬರು=ಬರಿದು/ಕೇವಲ/ಏನೊಂದು ಪ್ರಯೋಜನವಿಲ್ಲದೆ; ಸೂರೆ=ಲೂಟಿ/ಕೊಳ್ಳೆ; **ಬರುಸೂರೆ ಹೋಯಿತ್ತು**= ಬೂಟಾಟಕೆಯ ನಡೆ ನುಡಿಗಳಲ್ಲೇ ಸಂಪೂರ್ಣವಾಗಿ ಹಾಳಾಗುತ್ತಿದೆ.)

❖

66. ಸುತ್ತಿ ಸುತ್ತಿ ಬಂದಡಿಲ್ಲ
ಲಕ್ಷಗಂಗೆಯ ಮಿಂದಡಿಲ್ಲ
ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ
ನಿತ್ಯ ನೇಮದಿಂದ ತನುವ ಮುಟ್ಟಿಕೊಂಡಡಿಲ್ಲ
ನಿಚ್ಚಕ್ಕೆ ನಿಚ್ಚ ನೆನೆವ ಮನವ
ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ
ಬಚ್ಚಬರಿಯ ಬೆಳಗು
ಗುಹೇಶ್ವರ ಲಿಂಗವು.

ಒಳ್ಳೆಯ ಮತ್ತು ಕೆಟ್ಟ ಬಯಕೆಗಳತ್ತ ಎಡೆಬಿಡದೆ ತುಡಿಯುವ ಮಯ್ ಮನಗಳ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳಿತಿನ ನಡೆನುಡಿಗಳತ್ತ ಮನವನ್ನು ಹರಿಸಿ ಬಾಳುವುದು, ಇನ್ನುಳಿದ ಎಲ್ಲಾ ಬಗೆಯ ಆಚರಣೆಗಳಿಗಿಂತ ದೊಡ್ಡದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಬಂದಡೆ+ಇಲ್ಲ; ಬಂದಡೆ=ಬಂದರೆ; **ಸುತ್ತಿ ಸುತ್ತಿ ಬಂದಡಿಲ್ಲ**=ದೇವರ ವಿಗ್ರಹಗಳ ಸುತ್ತ/ದೇವತೆಗಳು ನೆಲೆಸಿದ್ದಾರೆಂದು ಜನಸಮುದಾಯ ಪರಂಪರೆಯಿಂದಲೂ ನಂಬಿಕೊಂಡು ಬಂದಿರುವ ಮರಗಿಡಗಳ ಸುತ್ತ ಮೂರು ಸಲ ಇಲ್ಲವೇ ಅನೇಕ ಸಲ ಸುತ್ತುವುದರಿಂದ ಯಾವ ಪ್ರಯೋಜನವು ದೊರೆಯದು/ಏನನ್ನೂ ಪಡೆಯಲಾಗದು; ಲಕ್ಷ+ಗಂಗೆ; ಲಕ್ಷ=ನೂರು ಸಾವಿರ/ಲೆಕ್ಕಕ್ಕೆ ಸಿಗದ ಸಂಕೆ/ಹಲವು ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ; ಗಂಗೆ=ದೇಗುಲಗಳ ಬಳಿ ಹರಿಯುವ ತೊರೆಗಳ/ಇರುವ ಕೆರೆಕಟ್ಟೆಬಾವಿಗಳ ನೀರು; ಮಿಂದಡೆ+ಇಲ್ಲ; ಮೀ=ಸ್ನಾನ ಮಾಡು/ಮಯ್ ತೊಳೆ; ಮಿಂದಡೆ=ಸ್ನಾನ ಮಾಡಿದರೆ; **ಲಕ್ಷಗಂಗೆಯ ಮಿಂದಡಿಲ್ಲ**=ದೇಗುಲ ಇಲ್ಲವೇ ಪವಿತ್ರವಾದುದೆಂದು ಹೆಸರು ಪಡೆದಿರುವ ನೆಲೆಗಳಲ್ಲಿರುವ ಕೆರೆ/ಕೊಳ/ತೊರೆಗಳಲ್ಲಿ ಮಿಂದೇಳುವುದರಿಂದ ಯಾವ ಪ್ರಯೋಜನವೂ ದೊರೆಯದು;

ತುಟ್ಟತುದಿ=ಬಹಳ ಎತ್ತರದ ನೆಲೆ/ಮೇಲಿನ ಕೊನೆ; ಮೇರು=ಒಂದು ಪರ್ವತದ ಹೆಸರು; ಗಿರಿ=ಬೆಟ್ಟ/ಪರ್ವತ; ಮೆಟ್ಟಿ=ತುಳಿದು/ಮೇಲಿನ ತುದಿಗೆ ಹತ್ತಿಹೋಗಿ ನಿಂತುಕೊಂಡು; ಕೂಗಿದಡೆ+ಇಲ್ಲ; ಕೂಗು=ಎತ್ತರದ ದನಿಯಲ್ಲಿ ಪದಗಳನ್ನು

ಉಚ್ಚರಿಸುವುದು/ದೇವರ ನಾಮಸ್ಮರಣೆಯನ್ನು ದೊಡ್ಡ ದನಿಯಲ್ಲಿ ಮಾಡುವುದು; **ಕೂಗಿದಡಿಲ್ಲ**=ಎತ್ತರದ ದನಿಯಲ್ಲಿ ಗಟ್ಟಿಯಾಗಿ ದೇವರ ಹೆಸರನ್ನು ಉಚ್ಚರಿಸುತ್ತಾ ಮೊರೆಯಿಡುವುದರಿಂದ ಯಾವ ಪ್ರಯೋಜನವೂ ದೊರೆಯದು; ನಿತ್ಯ= ಸದಾಕಾಲ/ಯಾವಾಗಲೂ; ನೇಮ+ಇಂದ; ನೇಮ=ದೇವರ ಅನುಗ್ರಹವನ್ನು ಪಡೆಯಲೆಂದು ಮಾಡುವ ಬಹುಬಗೆಯ ಆಚರಣೆಗಳು; ತನು=ಮಯ್/ದೇಹ; ಮುಟ್ಟಿ+ಕೊಂಡಡೆ+ಇಲ್ಲ; ಮುಟ್ಟು=ಸೋಕುವುದು/ತಾಕುವುದು; ಕೊಂಡಡೆ= ಕೊಂಡರೆ;

ತನುವ ಮುಟ್ಟಿ ಕೊಂಡಿಲ್ಲ=ದೇವರ ವಿಗ್ರಹದ ಮುಂದೆ ದಿಂಡುರುಳುವುದು/ ದೇವರ ವಿಗ್ರಹದ ಸುತ್ತ ಉರುಳುಸೇವೆಯನ್ನು ಮಾಡುವುದು/ಉಪವಾಸ ಮುಂತಾದ ಆಚರಣೆಗಳ ಮೂಲಕ ಮಯ್ಯನ್ನು ದಂಡಿಸುವುದರಿಂದ ಯಾವ ಪ್ರಯೋಜನವೂ ದೊರೆಯದು;

ನಿಚ್ಚ=ನಿತ್ಯವೂ/ಪ್ರತಿದಿನವೂ; ನಿಚ್ಚಕ್ಕೆ ನಿಚ್ಚ=ಎಡೆಬಿಡದೆ/ಒಂದೇ ಸಮನೆ/ ನಿರಂತರವಾಗಿ; ನೆನೆವ=ನೆನಪಿಸಿಕೊಳ್ಳುವ; ಮನ=ಮನಸ್ಸನ್ನು; ಅಂದು+ಅಂದಿಗೆ; ಅಂದು=ಆ ದಿನ/ಆ ಸಮಯ; ಅಂದಿಗೆ= ಆ ದಿನಕ್ಕೆ/ಆ ಸಮಯಕ್ಕೆ; ಅತ್ತ+ಅಲ್ +ಇತ್ತ; ಅತ್ತಲ್=ಆ ಕಡೆ; ಇತ್ತ=ಈ ಕಡೆ; ಹರಿ=ಚಲಿಸು;

ಅಂದಂದಿಗೆ ಅತ್ತಲಿತ್ತ ಹರಿವ ಮನವ=ಜೀವನದ ಪ್ರತಿಗಳಿಗೆಯಲ್ಲೂ ಬಹುಬಗೆಯ ಚಂಚಲತೆಯಿಂದ ಒಳಿತು/ಕೆಡುಕಿನ ನಡುವೆ ಇಬ್ಬಗೆಯ ಸೆಳೆತದಲ್ಲಿ ಸಿಲುಕಿ ತೊಳಲಾಡುವ ಮನಸ್ಸನ್ನು;

ಚಿತ್ತ=ಮನಸ್ಸು/ಗುರಿ/ಉದ್ದೇಶ; ನಿಲಿಸ+ಬಲ್ಲಡೆ; ನಿಲಿಸ=ನಿಲ್ಲಿಸಲು; ಬಲ್ಲಡೆ= ತಿಳಿದಿದ್ದರೆ; **ಚಿತ್ತದಲ್ಲಿ ನಿಲಿಸಬಲ್ಲಡೆ**=ಒಳಿತಿನ ನಡೆನುಡಿಗಳತ್ತ ನೆಲೆಗೊಳಿಸುವ ಕಸುವು ದೊರೆತರೆ; ಬಚ್ಚಬರಿ=ಪರಿಪೂರ್ಣವಾದ/ಕೇವಲ;

ಬಚ್ಚಬರಿ ಬೆಳಗು=ಪರಿಪೂರ್ಣವಾದ ಅರಿವು ದೊರೆಯುವುದು ಎಂಬ ರೂಪಕದ ತಿರುಳನಲ್ಲಿ ಬಳಕೆಯಾಗಿದೆ; ಗುಹೇಶ್ವರ ಲಿಂಗ=ಶಿವ/ದೇವರು)

❖

67. ಹಗಲನಿರುಳ ಮಾಡಿ
ಇರುಳ ಹಗಲ ಮಾಡಿ
ಆಚಾರವ ಅನಾಚಾರವ ಮಾಡಿ
ಅನಾಚಾರವ ಆಚಾರವ ಮಾಡಿ
ಭಕ್ತನ ಭವಿಯ ಮಾಡಿ
ಭವಿಯ ಭಕ್ತನ ಮಾಡಿ
ನುಡಿವನ ಮಾತ ಕೇಳಲಾಗದು
ಗುಹೇಶ್ವರ.

ಮಾತಿನಲ್ಲೇ ಮಂಟಪವನ್ನು ಕಟ್ಟಿ ಜನರನ್ನು ಮರುಳುಮಾಡಿ ಸಮಾಜದ ಬದುಕನ್ನು ಹಾಳುಮಾಡುವ ನಯವಂಚಕರನ್ನು ಕುರಿತು ಈ ವಚನದಲ್ಲಿ ಕಟುವಾಗಿ ವಿಡಂಬಿಸಲಾಗಿದೆ.

(ಹಗಲ್+ಅನ್+ಇರುಳ್+ಅ; ಹಗಲು=ನಿಸರ್ಗದಲ್ಲಿ ಬೆಳಕು ಹರಡಿರುವ ಸಮಯ; ಅನ್=ಅನ್ನು; ಇರುಳ್+ಅ; ಇರುಳು=ರಾತ್ರಿ/ನಿಸರ್ಗದಲ್ಲಿ ಕತ್ತಲು ಕವಿದಿರುವ ಸಮಯ; ಇರುಳ=ರಾತ್ರಿಯನ್ನಾಗಿ; ಹಗಲ್+ಅ; ಹಗಲ=ಬೆಳಕು ಹರಡಿರುವ ಸಮಯವನ್ನಾಗಿ;

"ಹಗಲನಿರುಳ ಮಾಡಿ ಇರುಳ ಹಗಲ ಮಾಡಿ" ಎಂಬ ಪದಕಂತೆಗಳು "ಮಾತಿನ ಮೋಡಿಯಿಂದಲೇ ಕೇಳುವವರ ಮನವನ್ನು ತಮ್ಮತ್ತ ಸೆಳೆದುಕೊಂಡು, ತಾವಾಡುವ ಮಾತುಗಳನ್ನು ನಂಬುವಂತೆ ಮಾಡಿ, ನಿಜವನ್ನು ಸುಳ್ಳನ್ನಾಗಿಸಿ / ಸುಳ್ಳನ್ನು ನಿಜವನ್ನಾಗಿಸಿ ಜನರನ್ನು ವಂಚಿಸುವುದು" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ; ಆಚಾರ=ತನಗೆ ಮತ್ತು ಇತರರಿಗೆ ಒಳಿತನ್ನು ಉಂಟು ಮಾಡುವಂತಹ ನಡೆನುಡಿಗಳು; ಆಚಾರ+ಅ=ಆಚಾರವ=ಆಚಾರವನ್ನು; ಅನಾಚಾರ=ತನಗೆ ಮತ್ತು ಇತರರಿಗೆ ಕೆಡುಕನ್ನು ಉಂಟುಮಾಡುವಂತಹ ನಡೆನುಡಿಗಳು; ಅನಾಚಾರ+ಅ=ಅನಾಚಾರವ=ಅನಾಚಾರವನ್ನು;

"ಆಚಾರವ ಅನಾಚಾರವ ಮಾಡಿ ಅನಾಚಾರವ ಆಚಾರವ ಮಾಡಿ" ಎಂಬ ಪದಕಂತೆಗಳು "ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತಿರುವುದನ್ನೇ ಕೆಡುಕಿನ ನಡೆನುಡಿಗಳೆಂದು ಪ್ರಚಾರ ಮಾಡುತ್ತ, ಜನತೆಗೆ ಕೇಡನ್ನು ಬಗೆಯುತ್ತಿರುವ ಕೆಲಸಗಳನ್ನೇ ಒಳಿತೆಂದು ಹಾಡಿಹೊಗಳುತ್ತ, ತಪ್ಪು ಮಾಹಿತಿ

ಗಳನ್ನು ಹರಡುವುದರ ಮೂಲಕ ಜನಸಮುದಾಯದ ನೆಮ್ಮದಿಯ ಬದುಕನ್ನು ಕಲಕುವುದು/ಹಾಳುಮಾಡುವುದು” ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ;

ಭಕ್ತ= ಜಾತಿ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು ತನಗೆ ಒಳಿತನ್ನು ಬಯಸುವಂತೆಯೇ, ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಬಯಸುವವನು.

ಭವಿ=ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವನ ಬದುಕಿನ ಆಗು ಹೋಗುಗಳಿಗೆ ಕರ್ಮ ಸಿದ್ಧಾಂತ ಮತ್ತು ಹಿಂದಿನ ಜನ್ಮದ ಪಾಪ ಪುಣ್ಯಗಳೇ ಕಾರಣವೆಂದು ನಂಬಿಕೊಂಡಿರುವ ವ್ಯಕ್ತಿ;

“ಭಕ್ತನ ಭವಿಯ ಮಾಡಿ ಭವಿಯ ಭಕ್ತನ ಮಾಡಿ” ಎಂಬ ಪದಕಂತೆಗಳು “ಸಮಾಜಕ್ಕೆ ಒಳಿತನ್ನು ಮಾಡುವವನನ್ನೇ ಕೆಡುಕನೆಂದು ಹೇಳುತ್ತ, ಕೆಡುಕನನ್ನೇ ಸಮಾಜವನ್ನು ಕಾಪಾಡುವವನು ಎಂದು ಕೊಂಡಾಡುವುದು” ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ನುಡಿ=ಮಾತು; ನುಡಿವನ=ಮಾತನಾಡುವವನ; ಮಾತು+ಅ; ಮಾತ=ಮಾತುಗಳನ್ನು/ನುಡಿಗಳನ್ನು; ಕೇಳಲ್+ಆಗದು; ಕೇಳಲ್=ಕೇಳುವುದಕ್ಕೆ; ಆಗದು=ಆಗುವುದಿಲ್ಲ; ಗುಹೇಶ್ವರ=ಅಲ್ಲಮನ ಮೆಚ್ಚಿನ ದೇವರು/ಶಿವ.)

68. ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು
ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು
ದೇವರಿಲ್ಲ ಭಕ್ತರಿಲ್ಲ ನಾನೂ ಇಲ್ಲ ನೀನೂ ಇಲ್ಲ
ಗುಹೇಶ್ವರ
ಪೂಜಿಸುವರೂ ಇಲ್ಲ ಪೂಜೆಗೊಂಬವರೂ ಇಲ್ಲ.

ಶಿವಶರಣಶರಣೆಯರ ಪಾಲಿಗೆ ವಿಗ್ರಹದ ಮುಂದೆ ಮಾಡುವ ಎಲ್ಲಾ ಬಗೆಯ ಆಚರಣೆಗಳು ಕೇವಲ ತೋರಿಕೆಯ ಇಲ್ಲವೇ ಬೂಟಾಟಿಕೆಯ ಆಚರಣೆಗಳಾಗಿ ಕಂಡುಬರುತ್ತವೆ. ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನು ರೂಪಿಸಿಕೊಳ್ಳಲು ನೆರವಾಗುವ ಮನದೊಳಗಿನ ಶಿವನನ್ನು ಮಾತ್ರ ಶಿವಶರಣಶರಣೆಯರು ಒಪ್ಪಿದ್ದರು ಮತ್ತು ನಂಬಿದ್ದರು. ವಿಗ್ರಹದ ರೂಪಿನಲ್ಲಿರುವ ಇಲ್ಲವೇ ಗುಡಿಗೋಪುರಗಳಲ್ಲಿ ಪೂಜೆಗೊಳ್ಳುವ ದೇವರ ಇರುವಿಕೆಯನ್ನು ಅವರು ತಳ್ಳಿಹಾಕಿದ್ದರು. ದೇವರ ಹೆಸರಿನಲ್ಲಿ ನಡೆಯುವ ಆಚರಣೆಗಳನ್ನು ಈ ವಚನದಲ್ಲಿ ತಿರುಳಿಲ್ಲದ ಕೆಲಸಗಳೆಂದು ಅಲ್ಲಗಳೆಯಲಾಗಿದೆ.

(ಹಸಿವು=ಉಂಡು ತಿಂದು ಕುಡಿದು ಹೊಟ್ಟೆಯನ್ನು ತುಂಬಿಸಿ ಕೊಳ್ಳಬೇಕೆಂಬ ಬಯಕೆ/ಆಸೆ; ಪ್ರೇಮ=ಒಲವು/ಅಕ್ಕರೆ/ಅನುರಾಗ; **ಹಸಿವಿನ ಪ್ರೇಮಕ್ಕೆ**=ತಮ್ಮ ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳಲೆಂದು; ಬೋನ=ಓಗರ/ಅನ್ನ/ಆಹಾರ/ತಿನಿಸು ಉಣಿಸುಗಳು; ಬೋನವ ಹಿಡಿವರು=ಬಗೆಬಗೆಯ ತಿನಸು ಉಣಿಸುಗಳನ್ನು ದೇವರ ಮುಂದೆ ಎಡೆಯಾಗಿ ಇಡುವರು;

ತೃಷೆ=ಬಾಯಾರಿಕೆ/ಕಾಮನೆ/ಆಸೆ/ಬಯಕೆ; **ತೃಷೆಯ ಪ್ರೇಮಕ್ಕೆ**=ತಮ್ಮ ಕಾಮನೆಗಳನ್ನು ಪೂರಯಿಸಿಕೊಳ್ಳಬೇಕೆಂಬ ಉದ್ದೇಶದಿಂದ; ಮಜ್ಜನಕ್ಕೆ+ಎರೆವರು; ಮಜ್ಜನ=ಸ್ನಾನ/ಜಳಕ; ಎರೆ=ಸುರಿ/ಹೊಯ್ಯು; **ಮಜ್ಜನಕ್ಕೆರೆವರು**=ದೇವರ ವಿಗ್ರಹದ ಮೇಲೆ ನೀರು/ಹಾಲು/ಜೇನು ಮುಂತಾದುವನ್ನು ಸುರಿದು, ವಿಗ್ರಹವನ್ನು ತೊಳೆಯುವರು; ದೇವರ್+ಇಲ್ಲ;

ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನೀವಾರಿಸಿ, ತಮಗೆ ಒಲಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು ದೇವರು ಎಂದು ಮಾನವ ಸಮುದಾಯ ನಂಬಿದೆ. ಭಕ್ತರ್+ಇಲ್ಲ; ಭಕ್ತ=ಒಳ್ಳೆಯ ನಡೆನುಡಿಗಳಿಂದ

ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು; ಗುಹೇಶ್ವರ=ಶಿವ; ಪೂಜೆ+ಕೊಂಬವರೂ; ಕೊಂಬವರು=ಪಡೆಯುವವರು/ಕೊಳ್ಳುವವರು.)

❖

69. ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು
ಹಸಿವು ಹೋಹುದೇ
ಅಂಗದ ಮೇಲೆ ಲಿಂಗಸ್ವಾಯತವಾದರೇನು
ಭಕ್ತನಾಗಬಲ್ಲನೆ
ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ
ಆ ಕಲ್ಲು ಲಿಂಗವೆ
ಆ ಮೆಳೆ ಭಕ್ತನೆ
ಇಟ್ಟಾತ ಗುರುವೆ
ಇಂತಪ್ಪವರ ಕಂಡಡೆ ನಾಚುವೆನಯ್ಯ ಗುಹೇಶ್ವರ.

ಜೀವನದಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನು ಹೊಂದದೆ, ಮಯ್ ಮೇಲೆ ಲಿಂಗವನ್ನು ತೊಟ್ಟು ದೇವರಲ್ಲಿ ಒಲವುಳ್ಳವನಂತೆ ಕಾಣಿಸಿಕೊಳ್ಳುವ ವ್ಯಕ್ತಿಯ ತೋರಿಕೆಯ ಗುಣವನ್ನು ಈ ವಚನದಲ್ಲಿ ಕಟುವಾಗಿ ಟೀಕಿಸಲಾಗಿದೆ.

(ಕಟ್ಟು+ಓಗರದ; ಕಟ್ಟು=ಕೂಡಿಸು/ಸೇರಿಸು; ಓಗರ=ಅನ್ನ/ಅಟ್ಟ ಅಡುಗೆ/ತಿಂಡಿ ತಿನಸು; ಮೊಟ್ಟೆ=ಬುತ್ತಿ/ಗಂಟು/ಪೊಟ್ಟಣ;

ಕಟ್ಟೋಗರದ ಮೊಟ್ಟೆ=ಪಯಣದ ಸಮಯದಲ್ಲಿ ದಾರಿಯ ನಡುವೆ ತಂಗಿದಾಗ ಉಣಲೆಂದು ಕಟ್ಟಿಕೊಂಡು ತಂದಿರುವ ಉಣಿಸು ತಿನಸಿನ ವಸ್ತುಗಳುಳ್ಳ ಪೊಟ್ಟಣ; ಕಟ್ಟಿದರೆ+ಏನು; ಕಟ್ಟಿದರೆ=ಕಟ್ಟಿಕೊಂಡರೆ/ಬಿಗಿದುಕೊಂಡರೆ; ಏನು=ಯಾವ ಪ್ರಯೋಜನ; ಹಸಿವು=ಉಂಡು ತಿಂದು ಕುಡಿದು ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕೆಂಬ ಬಯಕೆ/ಆಸೆ; ಹೋಹುದೆ=ಹೋಗುವುದೆ/ನೀಗುವುದೆ/ತುಂಬುವುದೆ; ಅಂಗ=ಮಯ್/ಶರೀರ; ಲಿಂಗ+ಸ್ವಾಯತ+ಆದರೆ+ಏನು; ಲಿಂಗ=ಕಲ್ಲನ್ನು ಕೆತ್ತಿ ರೂಪಿಸಿರುವ ಶಿವನ ಸಂಕೇತದ ವಿಗ್ರಹ; ಸ್ವಾಯತ=ಕಟ್ಟಿಕೊಂಡಿರುವುದು/ಹಾಕಿಕೊಂಡಿರುವುದು;

ಅಂಗದ ಮೇಲೆ ಲಿಂಗಸ್ವಾಯತ=ಶಿವನಲ್ಲಿ ಒಲವುಳ್ಳವನು ಗುರುವಿನ ಮೂಲಕ ಶಿವಲಿಂಗವನ್ನು ಪಡೆದು, ತನ್ನ ಮಯ್ ಮೇಲೆ ತೊಟ್ಟುಕೊಳ್ಳುವುದು/ಕೊರಳಲ್ಲಿ ಹಾಕಿಕೊಳ್ಳುವುದು; ಭಕ್ತನ್+ಆಗ+ಬಲ್ಲನೆ; ಆಗ=ಆಗಲು; ಆಗಬಲ್ಲನೆ=ಆಗುತ್ತಾನೆಯೇ;

ಭಕ್ತನಾಗಬಲ್ಲನೆ=ಶಿವಶರಣಶರಣೆಯರ ನಿಲುವಿನಲ್ಲಿ ಯಾವುದೇ ವ್ಯಕ್ತಿಯು ತನ್ನ ಮಯ್ ಮೇಲೆ ಶಿವಲಿಂಗವನ್ನು ಕಟ್ಟಿಕೊಂಡ ಮಾತ್ರಕ್ಕೆ ಶರಣನಾಗುವುದಿಲ್ಲ. ಶರಣನಾಗಬೇಕಾದರೆ ತನಗೆ ಒಳಿತನ್ನು ಮಾಡಿಕೊಳ್ಳುವಂತೆಯೇ ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನು ಹೊಂದಿರಬೇಕು;

ಇಟ್ಟ=ಇಟ್ಟಿರುವ; **ಇಟ್ಟ ಕಲ್ಲು**=ಶಿವನಲ್ಲಿ ಒಲವು ಉಳ್ಳವನು ಮಯ್ ಮೇಲೆ ತೊಟ್ಟಿರುವ ಶಿವಲಿಂಗ; ಮೆಳೆ=ಹಾದಿಯ ಬದಿಯ ಬೇಲಿಯಲ್ಲಿ ಬೆಳೆದಿರುವ ಗಿಡಗಂಟೆಗಳ ಪೊದೆ; ಸಿಕ್ಕಿದಡೆ=ಸಿಕ್ಕಿಕೊಂಡರೆ/ನೇತು ಬಿದ್ದರೆ; ಇಟ್ಟ+ಆತ; ಆತ=ಅವನು; ಇಟ್ಟಾತ=ಇಟ್ಟವನು/ಶಿವಲಿಂಗವನ್ನು ತೊಡಿಸಿದ ವ್ಯಕ್ತಿ; ಇಂತು+ಅಪ್ಪ+ಅವರ; ಇಂತು=ಈ ರೀತಿ; ಅಪ್ಪ=ಆಗಿರುವ;

ಇಂತಪ್ಪವರ= ಇಂತಹ ವ್ಯಕ್ತಿಗಳನ್ನು/ಒಳ್ಳೆಯ ನಡೆನುಡಿಗಳಿಲ್ಲದ ಗುರು ಮತ್ತು ಶರಣರನ್ನು; ಕಂಡಡೆ=ನೋಡಿದರೆ; ನಾಚುವೆನ್+ಅಯ್ಯ; ನಾಚು=ಲಜ್ಜೆ/ತಲೆಬಾಗುವುದು; **ನಾಚುವೆನಯ್ಯ**=ಶಿವಶರಣರಂತೆ ನಟಿಸುತ್ತಾ, ಕೆಟ್ಟ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಗಳನ್ನು ಕಂಡು, ನೋವು ಮತ್ತು ಅಪಮಾನದಿಂದ ತಲೆಬಗ್ಗಿಸುತ್ತೇನೆ; ಗುಹೇಶ್ವರ=ಶಿವ/ದೇವರು.)

❖

70. ಹೊನ್ನು ಮಾಯೆಯೆಂಬರು
ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು
ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ
ಮಾಯೆ ಕಾಣಾ ಗುಹೇಶ್ವರ.

ಈ ವಚನದಲ್ಲಿ ಅಲ್ಲಮನು ಹೆಣ್ಣು ಸಮುದಾಯದ ಪರವಾಗಿ ದನಿಯೆತ್ತಿದ್ದಾನೆ. ಸಮಾಜದಲ್ಲಿ ನಡೆಯುವ ಎಲ್ಲಾ ಬಗೆಯ ದುರಂತಗಳಿಗೆ 'ಹೆಣ್ಣು–ಹೊನ್ನು–ಮಣ್ಣು' ಕಾರಣವೆಂಬ ನಾಣ್ಣುಡಿ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಹೊನ್ನು ಮತ್ತು ಮಣ್ಣು ಎಂಬುವು ಜಡವಸ್ತುಗಳು; ಆದರೆ ಹೆಣ್ಣು ಎಂಬುವಳು ಮಯ್ ಮನವನ್ನು ಹೊಂದಿರುವ ಮಾನವ ಜೀವಿ. ಈ ನುಡಿಗಟ್ಟಿನಲ್ಲಿ ಹೆಣ್ಣನ್ನು ಜಡವಸ್ತುಗಳ ಸಾಲಿನಲ್ಲಿ ಇಟ್ಟು ಗುರುತಿಸಲಾಗಿದೆ.

ಇದಕ್ಕೆ ಕಾರಣವೇನೆಂದರೆ ಸಮಾಜದಲ್ಲಿ ಗಂಡಸರ ಮತ್ತು ಹೆಂಗಸರ ಜನಸಂಕೆಯ ಪ್ರಮಾಣ ತುಸು ಹೆಚ್ಚುಕಡಿಮೆ ಸಮನಾಗಿದ್ದರೂ, ಜನಸಮುದಾಯಗಳ ಬದುಕು ಮತ್ತು ಕುಟುಂಬಗಳ ಆಗುಹೋಗುಗಳು 'ಇದೇ ಬಗೆಯಲ್ಲಿ ಇರಬೇಕು' ಎಂಬ ಕಟ್ಟುಪಾಡುಗಳನ್ನು ಹಾಕಿರುವ ಮತ್ತು ಜನರನ್ನು ಹತೋಟಿಯಲ್ಲಿಟ್ಟಿರುವ ಧರ್ಮ–ರಾಜಕಾರಣ–ತತ್ವಜ್ಞಾನ–ಕಾನೂನು–ವಿದ್ಯೆ–ವ್ಯಾಪಾರ ಮತ್ತು ಇನ್ನಿತರ ಸಾಮಾಜಿಕ ಒಕ್ಕೂಟಗಳೆಲ್ಲವೂ ಬಹುಪಾಲು ಗಂಡಸರಿಂದಲೇ ರಚನೆಗೊಂಡಿವೆ ಮತ್ತು ಗಂಡಸರಿಂದಲೇ ತುಂಬಿವೆ.

ಈ ಹಿನ್ನೆಲೆಯಲ್ಲಿ ಮಾನವಜೀವಿಗಳ ಗುಂಪಿನಿಂದ ಹೆಣ್ಣನ್ನು ಹೊರಗಿಟ್ಟಿರುವ 'ಹೆಣ್ಣು–ಮಣ್ಣು–ಹೊನ್ನು' ಎಂಬ ಈ ನುಡಿಗಟ್ಟು ಗಂಡಸರಿಂದಲೇ ರಚನೆಗೊಂಡಿದೆಯೆಂಬ ನಿಲುವನ್ನು ಹೆಂಗಸರ ಜೀವನದಲ್ಲಿ ಉಂಟಾಗುತ್ತಿರುವ ಏಳುಬೀಳುಗಳಿಗೆ ಕಾರಣಗಳನ್ನು ಹುಡುಕುತ್ತಿರುವ ಸಾಮಾಜಿಕ ಚಿಂತಕರು ತಳೆದಿದ್ದಾರೆ.

ನಮ್ಮ ಸಂಸ್ಕೃತಿಯ ನೆಲೆಯಲ್ಲಿ ಹೊನ್ನನ್ನು ಲಕ್ಷ್ಮಿ ಎಂಬ ದೇವತೆಯನ್ನಾಗಿ ಮತ್ತು ಮಣ್ಣನ್ನು ಭೂದೇವಿಯನ್ನಾಗಿ ಕಲ್ಪಿಸಿಕೊಳ್ಳಲಾಗಿದೆ. "ರಾಮಾಯಣ ನಡೆದದ್ದೇ ಸೀತೆಯೆಂಬ ಹೆಣ್ಣಿನಿಂದಾಗಿ; ಮಹಾಭಾರತ ನಡೆದದ್ದೇ ರಾಜ್ಯಲಕ್ಷ್ಮಿಯೆಂಬ ಹೊನ್ನು-ಮಣ್ಣಿನಿಂದಾಗಿ" ಎಂಬ ನುಡಿಗಳು ನಮ್ಮ ಸಾಮಾಜಿಕ ವ್ಯವಹಾರದ ಮಾತುಕತೆಗಳಲ್ಲಿ ಆಗಾಗ ಕೇಳಿಬರುತ್ತಿರುತ್ತವೆ. ಅಲ್ಲೆಲ್ಲೂ ಗಂಡಸರ ಪ್ರಸ್ತಾಪವೇ ಇಲ್ಲ.

ಅಲ್ಲಿ ನಡೆದ ಪ್ರಸಂಗಗಳಲ್ಲಿ ಗಂಡಸರು ತಪ್ಪುಗಳನ್ನು ಎಸಗಲು "ಹೆಣ್ಣು-ಹೊನ್ನು-ಮಣ್ಣುಗಳೇ ಕಾರಣ" ಎಂಬ ಆರೋಪವಿದೆ. ಜನಸಮುದಾಯದ ಮನದಾಳದಲ್ಲಿ ನಾಟಿಕೊಂಡಿರುವ ಈ ಬಗೆಯ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುತ್ತಾ, ಜೀವನದಲ್ಲಿ ನಡೆಯುವ ಆಗುಹೋಗುಗಳಿಗೆ ವ್ಯಕ್ತಿಯು ಗಂಡಸಾಗಿರಲಿ ಇಲ್ಲವೇ ಹೆಂಗಸಾಗಿರಲಿ ಅವರ ಮಯ್-ಮನದಲ್ಲಿ ತುಡಿಯುವ ಆಸೆಗಳೇ ಕಾರಣವೆಂಬ ವಾಸ್ತವವನ್ನು ಅಲ್ಲಮನು ಹೇಳುವುದರ ಜತೆಗೆ, ಗಂಡು ತಾನು ಮಾಡುವ ಕೆಟ್ಟ ಕೆಲಸಗಳಿಗೆ ಹೆಣ್ಣು/ಮಣ್ಣು/ಹೊನ್ನುಗಳ ಮೇಲೆ ಹೊರಿಸುತ್ತಿದ್ದ ಆರೋಪವನ್ನು ಅಲ್ಲಗಳೆದಿದ್ದಾನೆ.

(ಹೊನ್ನು=ಚಿನ್ನ/ಸಂಪತ್ತು/ಸಿರಿಸಂಪದ; ಮಾಯೆ+ಎಂಬರು; ಮಾಯೆ= ಮಯ್-ಮನಗಳಲ್ಲಿ ಬಯಕೆಗಳನ್ನು ಕೆರಳಿಸಿ ಅದರತ್ತ ಸೆಳೆಯುವ ವಸ್ತು/ಜೀವಿ/ ವ್ಯಕ್ತಿಗಳು; ಎಂಬರು=ಎನ್ನುವರು; ಮಾಯೆ+ಅಲ್ಲ; ಮನದ=ಮನಸ್ಸಿನ; ಮನ= ಮನಸ್ಸು; ಮುಂದಣ=ಮುಂದೆ ಇರುವ; ಆಶೆ=ಬಯಕೆ/ಪಡೆಯಬೇಕೆಂಬ ತುಡಿತ;

ಮನದ ಮುಂದಣ ಆಶೆ=ಯಾವುದೇ ವಸ್ತು/ಜೀವಿ/ವ್ಯಕ್ತಿಗಳನ್ನು ಕಂಡಾಗ ಅವನ್ನು ಪಡೆದು ಮಯ್-ಮನಗಳ ಒಳಮಿಡಿತಗಳ ಬಯಕೆಯನ್ನು ಈಡೇರಿಸಿಕೊಳ್ಳಬೇಕೆಂಬ ತವಕ; ಕಾಣ್+ಆ; ಕಾಣು=ನೋಡು/ಅರಿ/ತಿಳಿ; ಕಾಣಾ=ತಿಳಿದಿರುವೆಯಾ/ಕಂಡಿರುವೆಯಾ/ತಿಳಿದುನೋಡಿದಾಗ ಕಂಡುಬರುವ ವಾಸ್ತವ; ಗುಹೇಶ್ವರ=ಶಿವ /ಅಲ್ಲಮನ ಮೆಚ್ಚಿನ ದೇವರು).

❖

9. ಅವಸರದ ರೇಕಣ್ಣ

ದೊರೆತಿರುವ ವಚನಗಳು: 104
ವಚನಗಳ ಅಂಕಿತನಾಮ: ಸದ್ಯೋಜಾತಲಿಂಗ

71. ದಾಕ್ಷಿಣ್ಯದ ಭಕ್ತಿ ಕಲಿಕೆಯ ವಿರಕ್ತಿ
ಮಾತಿನ ಮಾಲೆಯ ಬೋಧೆ ತೂತ ಜ್ಞಾನಿಗಳ ಸಂಸರ್ಗ
ಬೀತಕುಂಭದಲ್ಲಿ ಅಮೃತವ ಹೊಯಿದಿರಿಸಲಿಕ್ಕೆ
ಅದು ಎಷ್ಟು ದಿವಸ ಇರಲಾಪುದು
ಇಂತಿವ ಕಳೆದುಳಿದು
ನಡೆನುಡಿ ಸಿದ್ಧಾಂತವಾಗಿ ಕೂಡಬೇಕು
ಸದ್ಯೋಜಾತಲಿಂಗವ.

ವ್ಯಕ್ತಿಯು ತೋರಿಕೆಯ, ಕಪಟತನದ ಮತ್ತು ಚಂಚಲ ಮನಸ್ಸಿನ ಕೆಟ್ಟ ನಡೆನುಡಿಗಳನ್ನು ತೊರೆದು, ತನ್ನ ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳಬೇಕೆಂಬ ಗಟ್ಟಿಯಾದ ನಿಲುವನ್ನು ತಳೆಯಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ದಾಕ್ಷಿಣ್ಯ=ಇನ್ನೊಬ್ಬರ ಮನಸ್ಸನ್ನು ಅನುಸರಿಸಿ ನಡೆದುಕೊಳ್ಳುವುದು; ಭಕ್ತಿ=ದೇವರಲ್ಲಿ ಒಲವು;

ದಾಕ್ಷಿಣ್ಯದ ಭಕ್ತಿ=ಇತರರ ಮೆಚ್ಚುಗೆಯನ್ನು ಗಳಿಸಿಕೊಳ್ಳುವುದಕ್ಕಾಗಿ ದೇವರಲ್ಲಿ ಒಲವು ಉಳ್ಳವನಂತೆ ನಟಿಸುವುದು;

ಕಲಿಕೆ=ಮತ್ತೊಬ್ಬರಿಂದ ಹೇಳಿಸಿಕೊಂಡು ಪಡೆದ ವಿದ್ಯೆ; ವಿರಕ್ತಿ=ವ್ಯಕ್ತಿಯು ತನ್ನ

ಮಯ್ ಮನದಲ್ಲಿ ತುಡಿಯುವಂತಹ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿ ಕೊಂಡು, ಒಳ್ಳೆಯದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿ;

ಕಲಿಕೆಯ ವಿರಕ್ತಿ=ವ್ಯಕ್ತಿಗೆ ವಿರಕ್ತಿಯೆಂಬುದು ತನ್ನ ಅರಿವಿನಿಂದ ಮೂಡಿ ಬಂದಿಲ್ಲ. ಅಕ್ಕರದ ವಿದ್ಯೆಯಿಂದ ತಿಳಿದ ಸಂಗತಿಗಳನ್ನು ಕಲಿತುಕೊಂಡು ಕಪಟತನದಿಂದ ವಿರಕ್ತನ ರೀತಿಯಲ್ಲಿ ನಟಿಸುವುದು;

ಮಾಲೆ=ಸರ/ಹಾರ; **ಮಾತಿನ ಮಾಲೆ**=ಕೇಳುವವರಿಗೆ ಬೇಕಾಗಿರಲಿ ಇಲ್ಲವೇ ಬೇಡವಾಗಿರಲಿ ಒಂದೇ ಸಮನೆ ಮಾತನಾಡುತ್ತಿರುವುದು; ಬೋಧೆ=ಕಲಿಸುವಿಕೆ/ ವಿದ್ಯೆ;

ಮಾತಿನ ಮಾಲೆಯ ಬೋಧೆ=ವ್ಯಕ್ತಿಯು ಸತ್ಯ ನೀತಿ ನ್ಯಾಯದ ವಿಚಾರಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳದೆ, ಇತರರನ್ನು ಮರುಳಗೊಳಿಸುವಂತೆ ಸೊಗಸಾದ ಮಾತುಗಳನ್ನಾಡುವುದು;

ತೂತು=ಕೊರತೆ/ಲೋಪ; ಜ್ಞಾನಿ=ಅರಿವುಳ್ಳವನು/ತಿಳುವಳಿಕೆಯುಳ್ಳವನು;

ತೂತಜ್ಞಾನಿ=ವಿದ್ಯಾವಂತನಾಗಿದ್ದರೂ ಒಳ್ಳೆಯ ನಡೆನುಡಿಯಲ್ಲಿ ಕೊರತೆಯುಳ್ಳ ವ್ಯಕ್ತಿ; ಸಂಸರ್ಗ=ಒಡನಾಟ/ಸಹವಾಸ:

ತೂತ ಜ್ಞಾನಿಗಳ ಸಂಸರ್ಗ=ಒಳ್ಳೆಯ ನಡೆನುಡಿಯ ಕೊರತೆಯುಳ್ಳ ವಿದ್ಯಾವಂತರ ಒಡನಾಟ;

ಬೀತ=ಒಡೆದ/ಬಿರುಕುಬಿಟ್ಟ; ಕುಂಭ=ಕೊಡ/ಮಣ್ಣಿನ ಪಾತ್ರೆ; ಬೀತಕುಂಭ= ಬಿರುಕುಬಿಟ್ಟ ಮಡಕೆ; ಅಮೃತ=ಒಂದು ಬಗೆಯ ಪಾನೀಯ/ಹಾಲು; ಹೊಯಿದು+ಇರಿಸಲಿಕ್ಕೆ; ಹೊಯ್=ಹಾಕು/ಸುರಿ; ಇರಿಸಲಿಕ್ಕೆ=ಇಟ್ಟರೆ; ಇರಲ್+ ಆಪುದು; ಆಪುದು=ಆಗುವುದು; ಇರಲಾಪುದು=ಇರಲು ಆಗುವುದು.ಅಂದರೆ ಎಲ್ಲವೂ ಸೋರಿಹೋಗುತ್ತದೆ;

ಬೀತಕುಂಭದಲ್ಲಿ ಅಮೃತವ ಹೊಯಿದಿರಿಸಲಿಕ್ಕೆ ಅದು ಎಷ್ಟು ದಿವಸ ಇರಲಾಪುದು=ಬಿರುಕುಬಿಟ್ಟ ಮಡಕೆಯಲ್ಲಿ ಹಾಲನ್ನು ಹಾಕಿಟ್ಟರೆ, ಸಮಯ ಕಳೆದಂತೆಲ್ಲಾ ಹಾಲು ಸೋರಿ ಹೋಗುತ್ತದೆ. ಇದು ಒಂದು ರೂಪಕವಾಗಿ ಬಳಕೆಯಾಗಿದೆ. ಹೇಗೆ ಬಿರುಕುಬಿಟ್ಟ ಮಡಕೆಯಲ್ಲಿ ಹಾಕಿಟ್ಟ ಹಾಲು ತುಸು ಸಮಯದಲ್ಲಿಯೇ ಸೋರಿಹೋಗಿ ಇಲ್ಲವಾಗುವುದೋ ಅಂತೆಯೇ ತೋರಿಕೆಯ ವ್ಯಕ್ತಿತ್ವವುಳ್ಳ, ಕಪಟತನವುಳ್ಳ, ಮಾತುಗಾರಿಕೆಯಿಂದಲೇ ಜನರನ್ನು ಮರುಳು

ಮಾಡುವ ಮತ್ತು ವಿದ್ಯಾವಂತನಾದರೂ ಒಳ್ಳೆಯತನವಿಲ್ಲದ ವ್ಯಕ್ತಿಗಳ ಒಡನಾಟದಿಂದ ಯಾರಿಗೂ ಒಳ್ಳೆಯದಾಗುವುದಿಲ್ಲವೆಂಬುದನ್ನು ಈ ರೂಪಕ ಸೂಚಿಸುತ್ತದೆ;

ಇಂತು+ಇವ; ಇಂತು=ಈ ರೀತಿ; ಇವ=ಇವನ್ನು; ಕಳೆದು+ಉಳಿದು; ಕಳೆ=ಬಿಡು/ತೊರೆ/ತೆಗೆ; ಉಳಿ=ಮಿಗು;

ಇಂತಿವ ಕಳೆದುಳಿದು=ಕೆಟ್ಟ ನಡೆನುಡಿಗಳನ್ನು ತೊರೆದು, ಒಳ್ಳೆಯದನ್ನು ಮಾತ್ರ ಅನುಸರಿಸಿ;

ನಡೆ=ಮಾಡುವ ಕೆಲಸ; ನುಡಿ=ಆಡುವ ಮಾತು; ಸಿದ್ಧಾಂತ+ಆಗಿ; ಸಿದ್ಧಾಂತ=ತತ್ವ/ಗಟ್ಟಿಯಾದ ನಿಲುವು; ಕೂಡಬೇಕು=ಸೇರಬೇಕು; ಸದ್ಯೋಜಾತ ಲಿಂಗ=ಶಿವನ ಮತ್ತೊಂದು ಹೆಸರು/ಅವಸರದ ರೇಕಣ್ಣನವರ ವಚನಗಳ ಅಂಕಿತನಾಮ;

ನಡೆ ನುಡಿ ಸಿದ್ಧಾಂತವಾಗಿ ಕೂಡಬೇಕು=ಒಳ್ಳೆಯ ನಡೆನುಡಿಗಳ ಪಾಲನೆಯೇ ವ್ಯಕ್ತಿಯ ಜೀವನದ ಗುರಿಯಾಗಬೇಕು;

❖

10. ಆದಯ್ಯ

ಊರು: ಸೌರಾಷ್ಟ್ರದಿಂದ ಕನ್ನಡ ನಾಡಿನ ಪುಲಿಗೆರೆಗೆ ಬಂದು ನೆಲೆಸಿದ್ದರು
ವಚನಗಳ ಅಂಕಿತನಾಮ: ಸೌರಾಷ್ಟ್ರ ಸೋಮೇಶ್ವರ
ದೊರೆತಿರುವ ವಚನಗಳು: 401

72. ಕಳವು ಪಾರದ್ವಾರ
ಜೀವಹಿಂಸೆಯೆಂಬಿವನತ್ತತ್ತಲೆ ಕೆಡೆನೂಂಕಿ
ಕ್ರೋಧ ಲೋಭ ಚಿತ್ತದಲ್ಲಿ ಮೊಳೆಯದೆ
ಕಪಟ ಕಳವಳ ಬುದ್ಧಿಯಲ್ಲಿ ಬೆಳೆಯದೆ
ಕುಂದು ನಿಂದೆಗಳಿಂದ ಕೆಡೆನುಡಿವ ವಾಕು ಮನದಲ್ಲಿ ಪಲ್ಲವಿಸದೆ
ಮದ ಮತ್ಸರ ಅಹಂಕಾರದಲ್ಲಿ ಮುಗುಳೊತ್ತದೆ
ಪ್ರಕೃತಿ ವಿಕೃತಿ ಭ್ರಾಂತು ಭಾವದಲ್ಲಿ ಫಲಿಸದೆ
ಸುಜ್ಞಾನದಿಂದ ಧರ್ಮಾಧರ್ಮಂಗಳ ವರ್ಮನರಿತು
ಮನಕ್ಕೆ ಮನಸ್ಸಾಕ್ಷಿಯಾಗಿ ಸದ್ವರ್ತನೆ ಸಮತೆ ಸಾರಹೃದಯ
ಅನಿಂದೆ ಅನುಬಂಧ ಅಕಪಟ ಪಟುತರವಾಗಿ
ಸಟೆಯಳಿದು ದಿಟ ಘಟಿಸಿ ನಿಜ ನಿರುಗೆಯಾದಲ್ಲಿ
ಸೌರಾಷ್ಟ್ರ ಸೋಮೇಶ್ವರನೆಡೆಬಿಡವಿಲ್ಲದಿಪ್ಪನು.

ವ್ಯಕ್ತಿಯು ತನ್ನ ಮಯ್ ಮನದಲ್ಲಿ ಸದಾಕಾಲ ತುಡಿಯುತ್ತಿರುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಜೀವನದಲ್ಲಿ

ಅಳವಡಿಸಿಕೊಂಡು ಬಾಳುತ್ತಿರುವ ಎಡೆಯಲ್ಲಿ ದೇವರಾದ ಶಿವನು ನೆಲೆಸಿರುತ್ತಾನೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ನಾಡಿನಲ್ಲಿರುವ ಜನಸಮುದಾಯವೆಲ್ಲವೂ ಜೀವನಕ್ಕೆ ಅಗತ್ಯವಾದ ' ಅನ್ನ-ಬಟ್ಟೆ-ವಸತಿ-ವಿದ್ಯೆ-ಉದ್ಯೋಗ-ಆರೋಗ್ಯ' ವನ್ನು ಪಡೆದು ಸರ್ವಸಮಾನತೆ ಯಿಂದ ಬಾಳಬೇಕಾದರೆ, ಪ್ರತಿಯೊಬ್ಬ ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ಹೊಂದಿರಬೇಕು ಎಂಬ ನಿಲುವನ್ನು ಹನ್ನೆರಡನೆಯ ಶತಮಾನದ ಶಿವಶರಣ ಶರಣೆಯರು ಹೊಂದಿದ್ದರು. ಆದ್ದರಿಂದಲೇ ಅವರು ದೇಗುಲಗಳನ್ನು ಮತ್ತು ದೇವರ ಕರುಣೆಯನ್ನು ಪಡೆಯಲು ಮಾಡುವ ಸಾಂಪ್ರದಾಯಿಕವಾದ ಆಚರಣೆ ಗಳನ್ನು ನಿರಾಕರಿಸಿದ್ದರು. ದೇವರನ್ನು ವ್ಯಕ್ತಿಯು ಆಡುವ ಒಳ್ಳೆಯ ನುಡಿಯಲ್ಲಿ ಮತ್ತು ಮಾಡುವ ಒಳ್ಳೆಯ ಕಾಯಕದಲ್ಲಿ ಕಾಣುತ್ತಿದ್ದರು.

ಕಳವು=ಕಳ್ಳತನ; ಪಾರದ್ವಾರ=ಹಾದರ; ಜೀವ+ಹಿಂಸೆ+ಎಂಬ+ಇವನ್+ಅತ್ತ+ಅತ್ತಲೆ; ಜೀವಹಿಂಸೆ=ಜೀವಿಗಳಿಗೆ ಸಾವು ನೋವನ್ನುಂಟುಮಾಡುವುದು; ಎಂಬ=ಎನ್ನುವ; ಇವನ್=ಇಂತಹ ಕೆಟ್ಟ ನಡೆನುಡಿಯನ್ನು; ಅತ್ತ=ಆ ಕಡೆ; ಅತ್ತತ್ತಲೆ=ಅತಿದೂರಕ್ಕೆ; ಕೆಡೆನೂಂಕಿ=ಕೆಳಕ್ಕೆ ಬೀಳುವಂತೆ ದಬ್ಬಿ/ತಳ್ಳಿ. ಅಂದರೆ ಅವುಗಳನ್ನು ದೂರವಿಟ್ಟು;

ಕಳವು ಪಾರದ್ವಾರ ಜೀವಹಿಂಸೆಯೆಂಬಿವನತ್ತತ್ತಲೆ ಕೆಡೆನೂಂಕಿ=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಕಳ್ಳತನ,ಹಾದರ ಮತ್ತು ಜೀವಿಗಳ ಕೊಲೆಸುಲಿಗೆಯಂತಹ ಕೆಟ್ಟಕೆಲಸಗಳನ್ನು ಮಾಡದೆ;

ಕ್ರೋಧ=ಸಿಟ್ಟು/ಕೋಪ; ಲೋಭ=ಅತಿಯಾಸೆ; ಚಿತ್ತ=ಮನಸ್ಸು; ಮೊಳೆ=ಮೂಡು/ಚಿಗುರು/ಕುಡಿಯೊಡೆಯುವುದು;

ಕ್ರೋಧ ಲೋಭ ಚಿತ್ತದಲ್ಲಿ ಮೊಳೆಯದೆ=ವ್ಯಕ್ತಿಯ ಮನದಲ್ಲಿ ಇತರರಿಗೆ ಕೇಡನ್ನು ಬಗೆಯಬೇಕೆಂಬ ಕೋಪದ, ಸೇಡಿನ, ಹಗೆತನದ ಒಳಮಿಡಿತ ಮತ್ತು ಇರುವ ಸಂಪತ್ತೆಲ್ಲವೂ ತನ್ನೊಬ್ಬನಲ್ಲಿಯೇ ಇರಬೇಕೆಂಬ ದುರಾಶೆಯು ಮೂಡದೆ;

ಕಪಟ=ವಂಚನೆ/ಮೋಸ; ಕಳವಳ=ತುಸುವಾದರೂ ನೆಮ್ಮದಿಯಿಲ್ಲದೆ ಸಂಕಟದಿಂದ ನರಳುವುದು; ಬುದ್ಧಿ=ಅರಿವು/ತಿಳಿವು; ಬೆಳೆ=ದೊಡ್ಡದಾಗುವುದು;

ಕಪಟ ಕಳವಳ ಬುದ್ಧಿಯಲ್ಲಿ ಬೆಳೆಯದೆ=ವ್ಯಕ್ತಿಯ ಮನದಲ್ಲಿ ಪರರನ್ನು ವಂಚಿಸಿ ನೆಮ್ಮದಿಯನ್ನು ಕಳೆದುಕೊಂಡು ಪರಿತಪಿಸುವಂತಹ ಕೆಟ್ಟಗುಣ ಉಂಟಾಗದೆ;

ಕುಂದು=ಕುಗ್ಗು/ತಗ್ಗು; ನಿಂದೆ=ತೆಗಳಿಕೆ/ಬಯ್ಯುವಿಕೆ; ಕೆಡೆನುಡಿ=ಕೆಟ್ಟ ಮಾತು; ವಾಕು=ಮಾತು; ಮನ=ಮನಸ್ಸು; ಪಲ್ಲವಿಸು=ಚಿಗುರು/ಕುಡಿಯಿಡು;

ಕುಂದು ನಿಂದೆಗಳಿಂದ ಕೆಡೆನುಡಿವ ವಾಕು ಮನದಲ್ಲಿ ಪಲ್ಲವಿಸದೆ=ಇತರರ ವ್ಯಕ್ತಿತ್ವವನ್ನು ಅಲ್ಲಗಳೆದು, ಅವರನ್ನು ಅಪಮಾನಿಸುವಂತಹ ಬಯ್ಗುಳದ ನುಡಿಗಳನ್ನಾಡಬೇಕೆಂಬ ಕೆಟ್ಟ ಆಲೋಚನೆಯು ವ್ಯಕ್ತಿಯ ಮನದಲ್ಲಿ ಮೂಡದೆ;

ಮದ=ಸೊಕ್ಕು/ಗರ್ವ; ಮತ್ಸರ=ಹೊಟ್ಟೆಕಿಚ್ಚು; ಅಹಂಕಾರ=ನಾನೇ ಎಲ್ಲರಿಗಿಂತ ದೊಡ್ಡವನು ಎಂಬ ಒಳಮಿಡಿತ; ಮುಗುಳ್+ಒತ್ತದೆ; ಮುಗುಳ್=ಮೂಡು/ಮೊಳೆ; ಒತ್ತು=ಆಕ್ರಮಿಸು/ಮುತ್ತು; ಮುಗುಳೊತ್ತು=ಉಂಟಾಗು/ಹೊರಹೊಮ್ಮು;

ಮದ ಮತ್ಸರ ಅಹಂಕಾರದಲ್ಲಿ ಮುಗುಳೊತ್ತದೆ=ವ್ಯಕ್ತಿಯ ನಡೆನುಡಿಯಲ್ಲಿ ಸೊಕ್ಕಿನ, ಹೊಟ್ಟೆಕಿಚ್ಚಿನ ಮತ್ತು ಅಹಂಕಾರದ ವರ್ತನೆಗಳು ಹೊರಹೊಮ್ಮದೆ;

ಪ್ರಕೃತಿ=ಕಣ್ಣ ಮುಂದಿನ ಜಗತ್ತಿನಲ್ಲಿರುವ ಎಲ್ಲ ಬಗೆಯ ಜಡವಸ್ತುಗಳು ಮತ್ತು ಜೀವರಾಶಿಗಳು; ವಿಕೃತಿ=ಬದಲಾವಣೆ/ವ್ಯತ್ಯಾಸ; ಭ್ರಾಂತು=ಇಲ್ಲದ್ದನ್ನು ಇದೆಯೆಂದು... ಇರುವುದನ್ನು ಇಲ್ಲವೆಂದು ತಿಳಿಯುವುದು; ಭಾವ=ಮನಸ್ಸಿನಲ್ಲಿ ಮೂಡುವ ಒಳಮಿಡಿತಗಳು; ಫಲಿಸು=ಒದಗು/ಈಡೇರು/ಉಂಟಾಗು;

ಪ್ರಕೃತಿ ವಿಕೃತಿ ಭ್ರಾಂತು ಭಾವದಲ್ಲಿ ಫಲಿಸದೆ=ನಿಸರ್ಗದಲ್ಲಿರುವ ವಸ್ತುಗಳಲ್ಲಿ ಮತ್ತು ಜೀವರಾಶಿಗಳಲ್ಲಿ ಯಾವುದನ್ನು ಮೇಲು ಕೀಳು ಎಂಬ ತಾರತಮ್ಯವನ್ನು ಮಾಡದೆ;

ಸುಜ್ಞಾನ+ಇಂದ; ಸುಜ್ಞಾನ=ಒಳ್ಳೆಯ ತಿಳುವಳಿಕೆ; ಧರ್ಮ+ಅಧರ್ಮ್+ಗಳ; ಧರ್ಮ=ಒಳ್ಳೆಯ ನಡೆನುಡಿ; ಅಧರ್ಮ=ಕೆಟ್ಟ ನಡೆನುಡಿ; ವರ್ಮನ್+ಅರಿತು; ವರ್ಮ=ಗುಟ್ಟು/ರಹಸ್ಯ; ಅರಿತು=ತಿಳಿದುಕೊಂಡು; ಮನಸ್ಸಾಕ್ಷಿ+ಆಗಿ; ಮನಸ್ಸಾಕ್ಷಿ=ವ್ಯಕ್ತಿಯ ತನ್ನ ಮನದಲ್ಲಿ ಉಂಟಾಗುವ ಒಳಮಿಡಿತಗಳಲ್ಲಿ ಕೆಟ್ಟದ್ದು ಯಾವುದು ಒಳ್ಳೆಯದು ಯಾವುದು ಎಂಬುದನ್ನು ತಾನೇ ಒರೆಹಚ್ಚಿ ತಿಳಿಯುವುದು;

ಸುಜ್ಞಾನದಿಂದ ಧರ್ಮಾಧರ್ಮಂಗಳ ವರ್ಮನರಿತು ಮನಕ್ಕೆ ಮನಸ್ಸಾಕ್ಷಿಯಾಗಿ=ವ್ಯಕ್ತಿಯು ನಿತ್ಯಜೀವನದಲ್ಲಿ ಒಳಿತು ಕೆಡುಕಿನ ಬಗೆಗಳನ್ನು ಅರಿತುಕೊಂಡು, ಮನದಲ್ಲಿ ಮೂಡುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯ ನಡೆನುಡಿಯಿಂದ ಬಾಳಬೇಕೆಂಬ ನಿಲುವನ್ನು ತಳೆದು;

ಸದ್ವರ್ತನೆ=ಒಳ್ಳೆಯ ನಡೆನುಡಿ; ಸಮತೆ=ಯಾರನ್ನು ಮೇಲು ಕೀಳು ಎಂದು ವಿಂಗಡಿಸದೆ, ಎಲ್ಲರನ್ನೂ ಸಮಾನವಾಗಿ ಕಾಣುವುದು; ಸಾರಹೃದಯ=ಒಳ್ಳೆಯ ಮನಸ್ಸು; ಅನಿಂದೆ=ಕೆಟ್ಟ ಮಾತುಗಳನ್ನಾಡದಿರುವುದು; ಅನುಬಂಧ=ಗೆಳೆತನ; ಅಕಪಟ=ವಂಚನೆಯಿಲ್ಲದಿರುವುದು; ಪಟುತರ+ಆಗಿ; ಪಟುತರ= ಅತಿಶಯವಾದ/ಕುಶಲತೆಯುಳ್ಳ;

ಸದ್ವರ್ತನೆ ಸಮತೆ ಸಾರಹೃದಯ ಅನಿಂದೆ ಅನುಬಂಧ ಅಕಪಟ ಪಟುತರವಾಗಿ= ವ್ಯಕ್ತಿಯು ತನ್ನ ನಿತ್ಯ ಜೀವನದ ವ್ಯವಹಾರಗಳಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುತ್ತ, ಯಾರನ್ನೂ ನಿಂದಿಸದೆ ಮತ್ತು ವಂಚಿಸದೆ, ಎಲ್ಲರೊಡನೆ ಒಲವು ನಲಿವು ಮತ್ತು ಗೆಳೆತನದ ಒಡನಾಟದಿಂದ ಬಾಳುವ ಕುಶಲತೆಯನ್ನು ಕರಗತಮಾಡಿಕೊಂಡು;

ಸಟೆ+ಅಳಿದು; ಸಟೆ=ಸುಳ್ಳು; ಅಳಿದು=ಇಲ್ಲವಾಗಿ/ನಾಶಗೊಂಡು; ದಿಟ=ನಿಜ; ಘಟಿಸಿ=ಕೂಡಿಕೊಂಡು/ಸೇರಿಕೊಂಡು; ನಿಜ=ವಾಸ್ತವ/ಸತ್ಯ; ನಿರುಗೆ+ಆದ+ಅಲ್ಲಿ; ನಿರುಗೆ=ನಡವಳಿಕೆ; ನಿರುಗೆಯಾದಲ್ಲಿ=ನಡವಳಿಕೆಯಾಗಿ ರೂಪುಗೊಂಡಾಗ;

ಸಟೆಯುಳಿದು ದಿಟ ಘಟಿಸಿ ನಿಜ ನಿರುಗೆಯಾದಲ್ಲಿ=ವ್ಯಕ್ತಿಯ ಜೀವನದ ವ್ಯವಹಾರಗಳಲ್ಲಿ ಸುಳ್ಳು ಇಲ್ಲವಾಗಿ, ನಿಜದ ನಡೆನುಡಿಗಳು ಆಚರಣೆಗೆ ಬಂದಾಗ;

ಸೌರಾಷ್ಟ್ರ=ಇಂದಿನ ಗುಜರಾತ್ ರಾಜ್ಯದಲ್ಲಿ ಹನ್ನೊಂದು ಜಿಲ್ಲೆಗಳಿಂದ ಕೂಡಿರುವ ಒಂದು ದೊಡ್ಡ ಪ್ರಾಂತ್ಯವನ್ನು ಸೂರತ್ ಎಂದು ಕರೆಯುತ್ತಾರೆ. ಇದಕ್ಕೆ ಮೊದಲು ಸೌರಾಷ್ಟ್ರ ಎಂಬ ಹೆಸರಿತ್ತು;

ಸೋಮೇಶ್ವರನ್+ಎಡೆ+ಬಿಡವೆ+ಇಲ್ಲದೆ+ಇಪ್ಪನು; ಸೋಮೇಶ್ವರ=ಶಿವ/ ಈಶ್ವರ; ಸೌರಾಷ್ಟ್ರ ಸೋಮೇಶ್ವರ=ಆದಯ್ಯನವರ ವಚನಗಳ ಅಂಕಿತನಾಮ;

ಎಡೆ=ಜಾಗ; ಬಿಡವೆ=ಬಿರುಕು/ಸೀಳು; ಎಡೆಬಿಡವಿಲ್ಲದೆ=ನಡುವೆ ಬಿರುಕಿಲ್ಲದೆ/ ಜೊತೆಗೂಡಿ; ಇಪ್ಪನು=ಇರುವನು;

ಸೌರಾಷ್ಟ್ರ ಸೋಮೇಶ್ವರನೆಡೆಬಿಡವಿಲ್ಲದಿಪ್ಪನು=ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಯ ಜೊತೆಯಲ್ಲಿಯೇ ಶಿವನು ಸದಾಕಾಲ ಇರುತ್ತಾನೆ ಎಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತಿವೆ.

❖

73. ಸತ್ಯವೆ ಜಲ ಸಮತೆಯೆ ಗಂಧ ಅರಿವೆ ಅಕ್ಷತೆ
ಭಾವ ಕುಸುಮ ಸ್ವತಂತ್ರ ಧೂಪ ನಿರಾಳ ದೀಪ
ಸ್ವಾನುಭಾವ ನೈವೇದ್ಯ ಸಾಧನ ಸಾಧ್ಯ ಕರ್ಪುರ ವೀಳೆಯ
ಇವೆಲ್ಲವ ನಿಮ್ಮ ಪೂಜೆಗೆಂದೆನ್ನಕರಣಂಗಳು ಪಡೆದಿರಲು
ಹೃದಯ ಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ
ಸೌರಾಷ್ಟ್ರ ಸೋಮೇಶ್ವರಾ.

ದೇವರನ್ನು ಪೂಜಿಸಲೆಂದು ಮಾಡುವ ಆಚರಣೆಗಳಿಗಿಂತ ಮತ್ತು ದೇವರಿಗೆ ಸಲ್ಲಿಸುವ ವಸ್ತುಗಳಿಗಿಂತ, ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುವುದು ದೊಡ್ಡದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ದೇವರ ವಿಗ್ರಹವನ್ನು ತೊಳೆಯುವ ನೀರು; ಲೇಪಿಸುವ ಗಂಧ; ಎರಚುವ ಅರಿಶಿನದ ಅಕ್ಕಿ; ಮುಡಿಸುವ ಹೂವು; ಎತ್ತುವ ದೂಪದ ಆರತಿ; ಬೆಳಗುವ ದೀಪ; ಮುಂದೆ ಇಡುವ ಹಣ್ಣು, ಹಾಲು, ತಿಂಡಿ,ತಿನಸು; ಉರಿಸುವ ಕರ್ಪೂರ; ಎಲೆ ಮತ್ತು ಅಡಕೆ ಮುಂತಾದುವುಗಳಿಂದ ದೇವರನ್ನು ಪೂಜಿಸುವ ಬದಲು, ವ್ಯಕ್ತಿಯು ತನ್ನ ದಿನನಿತ್ಯದ ಜೀವನದಲ್ಲಿ ನಿಜವನ್ನೇ ಆಡುವ; ಸಹಮಾನವರನ್ನು ಸಮಾನವಾಗಿ ಕಾಣುವ; ಒಳ್ಳೆಯ ಅರಿವನ್ನು ಪಡೆಯುವ; ಮನದಲ್ಲಿ ಒಳ್ಳೆಯ ಒಳಮಿಡಿತಗಳನ್ನು ಹೊಂದುವ; ಯಾರಿಗೂ ಅಡಿಯಾಳಾಗಿ ಬಾಳದಿರುವ; ತಾಳ್ಮೆ ಮತ್ತು ನೆಮ್ಮದಿಯಿಂದ ಕೂಡಿರುವ; ನಿಜ ಜೀವನದ ನೋವು ನಲಿವುಗಳಿಂದಲೇ ಒಳ್ಳೆಯದು ಯಾವುದು–ಕೆಟ್ಟದ್ದು ಯಾವುದು ಎಂಬುದನ್ನು ಅರಿಯುವ; ಕಾರ್ಯ ಕಾರಣಗಳನ್ನು ಒರೆಹಚ್ಚಿ ನೋಡುವ, ಒಳ್ಳೆಯ ಕಾಯಕದಲ್ಲಿ ತನ್ನ ಅಯ್ದು ಇಂದ್ರಿಯಗಳನ್ನು ತೊಡಗಿಸಿಕೊಳ್ಳುವ ನಡೆನುಡಿಗಳನ್ನು ಹೊಂದಿದ್ದರೆ, ಅಂತಹ ವ್ಯಕ್ತಿಯ ಮಯ್ ಮನದಲ್ಲಿ ದೇವರು ನೆಲೆಸಿರುತ್ತಾನೆ ಎಂಬ ನಿಲುವನ್ನು ಹನ್ನೆರಡನೆಯ ಶತಮಾನದ ವಚನಕಾರರು ತಳೆದಿದ್ದರು. ಏಕೆಂದರೆ ಅವರಿಗೆ ದೇವರು ಎನ್ನುವ ಕಲ್ಪನೆಯು ಮಾನವರ ಒಳ್ಳೆಯ ನಡೆನುಡಿಗಳನ್ನು ಅವಲಂಬಿಸಿತ್ತೇ ಹೊರತು ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿದ ವಿಗ್ರಹರೂಪಿಯಾದ ದೇವರನ್ನಲ್ಲ.

ಸತ್ಯ=ದಿಟ/ಸತ್ಯ; ಜಲ=ನೀರು; ಸಮತೆ=ಸಮಾನ; ಗಂಧ=ಚಂದನ ಮರದ ಕೊರಡಿಗೆ ನೀರನ್ನು ಹಾಕಿಕೊಂಡು ತೇಯ್ದಾಗ ಬರುವ ಸುವಾಸನೆಯ ವಸ್ತು. ಇದನ್ನು ದೇವರ ವಿಗ್ರಹಕ್ಕೆ ಬಳಿಯುತ್ತಾರೆ; ಅರಿವು=ತಿಳುವಳಿಕೆ; ಅಕ್ಷತೆ=ಅರಿಶಿನ ಸವರಿದ ಅಕ್ಕಿಯ ಕಾಳು. ಇದನ್ನು ಪೂಜೆಯ ಸಮಯದಲ್ಲಿ ದೇವರ ವಿಗ್ರಹದ ಮೇಲೆ ಎರಚುತ್ತಾರೆ; ಭಾವ=ವ್ಯಕ್ತಿಯ ಮನದೊಳಗೆ ತುಡಿಯುವ ಒಳಮಿಡಿತಗಳು; ಕುಸುಮ=ಹೂವು; ಸ್ವತಂತ್ರ=ಯಾರಿಗೂ ಅಡಿಯಾಳಾಗದೆ ಇರುವುದು; ಧೂಪ=ಹಾಲುಮಡ್ಡಿ, ಸಾಂಬ್ರಾಣಿ ಮುಂತಾದ ವಸ್ತುಗಳಿಂದ ಮಾಡಿದ ಪುಡಿಯನ್ನು ಕೆಂಡದ ಮೇಲೆ ಹಾಕಿದಾಗ ಹೊರಹೊಮ್ಮುವ ಹೊಗೆ. ದೇವರನ್ನು ಪೂಜಿಸುವಾಗ ದೂಪದ ಆರತಿಯನ್ನು ಎತ್ತುತ್ತಾರೆ;

ನಿರಾಳ=ನೆಮ್ಮದಿ/ಶಾಂತಿ; ದೀಪ=ಬೆಳಕಿನ ಕುಡಿ;

ಸ್ವಾನುಭಾವ=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಪಡೆದ ನೋವು ನಲಿವು; ನೈವೇದ್ಯ=ದೇವರ ವಿಗ್ರಹದ ಮುಂದೆ ಜೋಡಿಸಿಡುವ ಉಣಿಸು ತಿನಸು; ಸಾಧನ=ಸಲಕರಣೆ/ಉಪಕರಣ; ಸಾಧ್ಯ=ಕಾರ್ಯರೂಪಕ್ಕೆ ತರಬಹುದಾದುದು; ಕರ್ಪುರ=ಒಂದು ಬಗೆಯ ಸುವಾಸನೆಯ ವಸ್ತು. ಇದಕ್ಕೆ ಬೆಂಕಿ ಸೋಕಿದಾಗ ಉರಿಯತೊಡಗುತ್ತದೆ. ದೇವರಿಗೆ ಮಂಗಳಾರತಿಯನ್ನು ಮಾಡುವಾಗ ಕರ್ಪುರವನ್ನು ಹಚ್ಚುತ್ತಾರೆ; ವೀಳೆಯ=ಎಲೆ ಅಡಕೆ ಸುಣ್ಣ ಮೊದಲಾದುವುಗಳನ್ನು ಒಳಗೊಂಡ ತಾಂಬೂಲ; ಇವು+ಎಲ್ಲವ; ಪೂಜೆಗೆ+ಎಂದು+ಎನ್ನ+ಕರಣಂಗಳು; ಕರಣ=ಮಾನವ ದೇಹದಲ್ಲಿರುವ ಕಣ್ಣು-ಕಿವಿ-ಮೂಗು-ನಾಲಗೆ-ತೊಗಲು ಎಂಬ ಆಯ್ದು ಅಂಗಗಳು. ಈ ಆಯ್ದು ಬಗೆಯ ಕರಣಗಳಿಂದಲೇ ವ್ಯಕ್ತಿಯು ಎಲ್ಲಾ ಬಗೆಯ ಅರಿವನ್ನು ಮತ್ತು ನೋವು ನಲಿವನ್ನು ಹೊಂದುತ್ತಾನೆ; ಪಡೆದು+ಇರಲು; ಹೃದಯ=ಎದೆ; ಮಧ್ಯದಲ್ಲಿ+ಇದ್ದು; ಮಧ್ಯ=ನಡುವೆ; ಗಮ್ಮನೆ=ಸುಮ್ಮನೆ/ಮೌನವಾಗಿ; ಕೈಕೊಂಡೆ+ಅಲ್ಲಾ; ಕೈಕೊಂಡೆ=ಅಂಗೀಕರಿಸು/ ಸಮ್ಮತಿಸು; ಅಲ್ಲಾ=ಅಲ್ಲವೇ;

ನಿಮ್ಮ ಪೂಜೆಗೆಂದೆನ್ನಕರಣಂಗಳು ಪಡೆದಿರಲು ಹೃದಯ ಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ=ಯಾವ ವ್ಯಕ್ತಿಯು ತನ್ನ ಅಯ್ದು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುತ್ತಾನೆಯೋ, ಅಂತಹ ವ್ಯಕ್ತಿಯ ಎದೆಯಲ್ಲಿಯೇ ದೇವರು ನೆಲೆಗೊಳ್ಳುತ್ತಾನೆ ಎಂಬ ರೂಪಕದ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ;

11. ಆಯ್ದಕ್ಕಿ ಮಾರಯ್ಯ

ಊರು: ಅಮರೇಶ್ವರ ಗ್ರಾಮ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಹೆಂಡತಿ: ಆಯ್ದಕ್ಕಿ ಲಕ್ಕಮ್ಮ.

ಕಸುಬು: ಮಾರಯ್ಯನು ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯ ಅಂಗಳದಿಂದ ಆಯ್ದುಕೊಂಡು ತಂದ ಅಕ್ಕಿಯಿಂದ, ಉಣಿಸು ತಿನಸುಗಳನ್ನು ತಯಾರಿಸಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿ ಶಿವಶರಣಶರಣೆಯರಿಗೆ ದಾಸೋಹವನ್ನು ಮಾಡುತ್ತಿದ್ದರು.

ದೊರೆತಿರುವ ವಚನಗಳು: 31

ವಚನಗಳ ಅಂಕಿತನಾಮ: ಅಮರೇಶ್ವರಲಿಂಗ

74. ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

ವ್ಯಕ್ತಿಯು ತಾನು ಕಯ್ಗೊಂಡಿರುವ ಕಾಯಕದಲ್ಲಿ ತಲ್ಲೀನತೆಯಿಂದ ತೊಡಗಿಕೊಳ್ಳಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರ ನಿಲುವಿನಲ್ಲಿ 'ಕಾಯಕ' ಎಂದರೆ "ವ್ಯಕ್ತಿಯು ಮಾಡುವ ಕೆಲಸವು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತಂದುಕೊಡುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಿದ್ದು, ಒಟ್ಟು ಜನಸಮುದಾಯದ ಹಿತಕ್ಕೆ ನೆರವಾಗುವಂತಿರುವ ದುಡಿಮೆ."

(ಕಾಯಕ+ಅಲ್ಲಿ; ಕಾಯಕ=ಕಸುಬು/ಕೆಲಸ/ಗೆಯ್ಮೆ/ದುಡಿಮೆ; ನಿರತನ್+ ಆದಡೆ; ನಿರತ=ಮಗ್ನವಾಗುವುದು/ತಲ್ಲೀನಗೊಳ್ಳುವುದು/ತೊಡಗಿಸಿಕೊಳ್ಳುವುದು; ನಿರತನ್=ತಲ್ಲೀನಗೊಂಡವನು/ತೊಡಗಿಸಿಕೊಂಡವನು/ಮಗ್ನನಾದವನು; ಆದಡೆ=ಆದರೆ/ಆಗಿರುವಾಗ; **ಕಾಯಕದಲ್ಲಿ ನಿರತನಾದಡೆ**=ಕೆಲಸವೊಂದನ್ನು ಕಯ್ಗೊಂಡು, ಅದನ್ನು ಒಲವು ನಲಿವುಗಳಿಂದ ಮಾಡಬೇಕೆಂಬ ಆಸೆಯಿಂದ ಕೂಡಿ, ಅದರಲ್ಲಿಯೇ ತನ್ನ ಮಯ್ ಮನಗಳನ್ನು ತೊಡಗಿಸಿಕೊಂಡು ದುಡಿಯುತ್ತಿರುವಾಗ;

ಗುರುದರ್ಶನ+ಆದಡೂ; ಗುರು=ವಿದ್ಯೆಯನ್ನು ಕಲಿಸುವ/ಅರಿವನ್ನು ಮೂಡಿಸುವ/ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವ ವ್ಯಕ್ತಿ; ದರ್ಶನ=ನೋಡುವಿಕೆ/ ಕಾಣುವಿಕೆ; ಆದಡೂ=ಆದರೂ; ಮರೆ=ನೆನಪಿಲ್ಲದಿರುವುದು/ಗಮನವಿಲ್ಲ ದಿರುವುದು; **ಗುರುದರ್ಶನವಾದಡೂ ಮರೆಯಬೇಕು**=ದುಡಿಮೆಯ ಸಮಯದಲ್ಲಿ ಗುರು ತನ್ನ ಬಳಿ ಬಂದರೂ, ದುಡಿಮೆಯನ್ನು ಕಯ್ ಬಿಟ್ಟು, ಗುರುವನ್ನು ಉಪಚರಿಸಲು ಹೋಗಬಾರದು.ಏಕೆಂದರೆ ಗುರುಸೇವೆಗಿಂತಲೂ ಕಯ್ಗೊಂಡಿರುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವುದು ಮೊದಲ ಗುರಿಯಾಗಿರಬೇಕು ಎಂಬ ತಿರುಳಿನಲ್ಲಿ ಈ ಸೊಲ್ಲು ಬಳಕೆಯಾಗಿದೆ;

ಲಿಂಗ+ಪೂಜೆ+ಆದಡೂ; ಲಿಂಗ=ದೇವರೆಂದು ನಂಬಿರುವ ಶಿವನ ಸಂಕೇತದ ಕಲ್ಲು/ಮಣ್ಣು/ಮರ/ಲೋಹದ ವಿಗ್ರಹ; ಪೂಜೆ=ದೇವರನ್ನು ಒಲಿಸಿಕೊಳ್ಳಲು/ ದೇವರ ಬಗ್ಗೆ ಒಲವನ್ನು ತೋರಿಸಲು ಮಾಡುವ ಬಹುಬಗೆಯ ಆಚರಣೆಗಳು; **ಲಿಂಗಪೂಜೆಯಾದಡೂ ಮರೆಯಬೇಕು**=ಲಿಂಗವನ್ನು ಪೂಜಿಸುವುದಕ್ಕಿಂತಲೂ ಈಗ ಮಾಡುತ್ತಿರುವ ದುಡಿಮೆಯು ದೊಡ್ಡದು ಎಂಬುದನ್ನು ಅರಿತಿರಬೇಕು;

ಜಂಗಮ=ಶಿವನನ್ನು ಒಲಿದವನು/ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು

ನಂಬಿ ಜನಸಮುದಾಯದ ಒಳಿತಿಗಾಗಿ ಬಾಳುತ್ತಿರುವವನು; ಮುಂದೆ=ತನ್ನ ಎದುರಿಗೆ/ಬಳಿಯಲ್ಲಿ; ನಿಂದು+ಇದ್ದಡೂ; ನಿಂದು=ನಿಂತುಕೊಂಡು; ಇದ್ದಡೂ= ಇದ್ದರೂ; ಹಂಗು=ನಂಟು/ಒಡನಾಟ; ಹಂಗ=ಹಂಗನ್ನು/ಯಾವುದೇ ಬಗೆಯ ವ್ಯವಹಾರವನ್ನು/ಒಡನಾಟವನ್ನು/ನಂಟನ್ನು; ಹರಿ=ಕಡಿ/ಕತ್ತರಿಸು/ತುಂಡು ಮಾಡು; **ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು**=ಜಂಗಮನು ತನ್ನ ಬಳಿಸಾರಿ ಬಂದು ನಿಂದಿದ್ದರೂ, ಅವನೊಡನೆ ಯಾವುದೇ ಮಾತುಕತೆ ಯನ್ನಾಡದೆ, ಅವನತ್ತ ಗಮನ ಹರಿಸದೆ, ವ್ಯಕ್ತಿಯು ತಾನು ಮಾಡುತ್ತಿರುವ ಕೆಲಸದಲ್ಲಿ ತೊಡಗಿರಬೇಕು;

ಕಾಯಕವೆ=ಕಯ್ಗೊಂಡಿರುವ ಕೆಲಸವೇ/ಮಾಡುತ್ತಿರುವ ದುಡಿಮೆಯೇ; ಕೈಲಾಸ+ಆದ; ಕೈಲಾಸ=ಹಿಮಾಲಯ ಗಿರಿಯ ಸಾಲುಗಳಲ್ಲಿರುವ ಒಂದು ಬೆಟ್ಟ/ ಶಿವನನ್ನು ಪೂಜಿಸುವ ವ್ಯಕ್ತಿಗಳಿಗೆ, ಈ ಗಿರಿ ಪ್ರಾಂತ್ಯದಲ್ಲಿ ಶಿವನು ತನ್ನ ಗಣಗಳ ಜತೆಗೂಡಿ ನೆಲೆಸಿದ್ದಾನೆ. ಆದುದರಿಂದ ತಾವು ಸಾವನ್ನಪ್ಪಿದ ನಂತರ, ಶಿವನ ಬಳಿಸಾರಬೇಕೆಂಬ ಹಂಬಲವಿದೆ. ಏಕೆಂದರೆ ಇದು ಮಾನವಜೀವಿಗೆ ಒಲವು ನಲಿವು ನೆಮ್ಮದಿಯನ್ನು ನೀಡುವ ನೆಲೆ ಎಂಬ ನಂಬಿಕೆ ಜನಮನದಲ್ಲಿದೆ;

ಕಾಯಕವೇ ಕೈಲಾಸ=ಇದು ಒಂದು ನುಡಿಗಟ್ಟಾಗಿ ಬಳಕೆಯಲ್ಲಿದೆ. ವ್ಯಕ್ತಿಯು ತನ್ನ ಪಾಲಿನ ಕಾಯಕವನ್ನು ಒಲವು ನಲಿವು ಮತ್ತು ಪ್ರಾಮಾಣಿಕತನದಿಂದ ಮಾಡಿದರೆ, ಅದು ಅವನ ಬದುಕಿನ ಏಳಿಗೆಗೆ ಕಾರಣವಾಗುವುದರ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೂ ಒಳಿತನ್ನುಂಟುಮಾಡಿ, ಜನರು ವಾಸ ಮಾಡುತ್ತಿರುವ ನೆಲೆಯನ್ನೇ ನೆಮ್ಮದಿಯ ಬೀಡನ್ನಾಗಿ ಮಾಡುತ್ತದೆ ಎಂಬ ತಿರುಳನ್ನು ಒಳಗೊಂಡಿದೆ;

ಅಮರೇಶ್ವರಲಿಂಗ+ಆಯಿತ್ತು+ಆದಡೂ; ಅಮರೇಶ್ವರಲಿಂಗ=ಶಿವನ ಹೆಸರು/ ಆಯ್ದಕ್ಕಿ ಮಾರಯ್ಯನ ವಚನಗಳಲ್ಲಿ ಬಳಕೆಯಾಗಿರುವ ಅಂಕಿತನಾಮ/ಆಯ್ದಕ್ಕಿ ಮಾರಯ್ಯನ ಮೆಚ್ಚಿನ ದೇವರು; ಆಯಿತ್ತು=ಆಗಿರುವುದು; ಆಯಿತ್ತಾದಡೂ= ಆಗಿರುವುದಾದರೂ; ಕಾಯಕದ+ಒಳಗು; ಒಳಗು=ಒಳಪಟ್ಟಿದೆ/ಸೇರಿದೆ; **ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು**=ದೇವರಾದ ಅಮರೇಶ್ವರ ಲಿಂಗದ ಪೂಜೆಯಾಗಿದ್ದರೂ ಅದು ಕೂಡ ಮಾಡುವ ಕಾಯಕದಲ್ಲೇ ಸೇರಿಕೊಂಡಿದೆ. ಅಂದರೆ ಮಾಡುತ್ತಿರುವ ಕಾಯಕವನ್ನು ಬಿಟ್ಟು ಅಮರೇಶ್ವರಲಿಂಗವನ್ನು ಪೂಜಿಸಬೇಕಾದ ಅಗತ್ಯವಿಲ್ಲ.)

❖

12. ಆಯ್ದಕ್ಕಿ ಲಕ್ಕಮ್ಮ

ಊರು: ಅಮರೇಶ್ವರ ಗ್ರಾಮ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಗಂಡ: ಆಯ್ದಕ್ಕಿ ಮಾರಯ್ಯ.

ಕಸುಬು: ಆಯ್ದಕ್ಕಿ ಮಾರಯ್ಯನು ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯ ಅಂಗಳದಿಂದ ಆಯ್ದುಕೊಂಡು ತಂದ ಅಕ್ಕಿಯಿಂದ ಉಣಿಸುತಿನಸುಗಳನ್ನು ತಯಾರಿಸಿ ಶಿವಶರಣಶರಣೆಯರಿಗೆ ದಾಸೋಹ ಮಾಡುವುದು.

ದೊರೆತಿರುವ ವಚನಗಳು: 25

ವಚನಗಳ ಅಂಕಿತನಾಮ : ಮಾರಯ್ಯ ಪ್ರಿಯ ಅಮರೇಶ್ವರಲಿಂಗ

ಮಾರಯ್ಯನು ಆಯ್ದು ತಂದ ಅಕ್ಕಿಯಿಂದ ತಿನಸುಉಣಿಸುಗಳನ್ನು ತಯಾರು ಮಾಡಿ, ಪ್ರತಿದಿನ ತಮ್ಮ ಮನೆಗೆ ಬರುವ ಶಿವಶರಣಶರಣೆಯರಿಗೆ ದಾಸೋಹ ಮಾಡುವುದನ್ನೇ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ದಂಪತಿಗಳು ತಮ್ಮ ಕಾಯಕವನ್ನಾಗಿ ಮಾಡಿಕೊಂಡಿದ್ದರು. 'ದಾಸೋಹ' ಎಂದರೆ ಜಂಗಮರ ಸೇವೆಯನ್ನು ಮಾಡುವುದು/ಹಸಿದು ಬಂದವರಿಗೆ ಅನ್ನವನ್ನು ನೀಡುವುದು.

ಬತ್ತ/ರಾಗಿ ಮುಂತಾದ ಬೆಳೆಗಳನ್ನು ಕುಯ್ದು, ಅರಿಗಳನ್ನು ಒಣಗಿಸಿ, ಹೊರೆಗಳನ್ನು ಕಟ್ಟುವಾಗ ಹೊರೆಯಿಂದ ಕಳಚಿಕೊಂಡು ಹೊಲಗದ್ದೆಗಳಲ್ಲಿ ಬಿದ್ದಿರುವ

ತೆನೆಯನ್ನು " ಅಕ್ಕಲು " ಎಂದು ಕರೆಯುತ್ತಾರೆ. ಇಂತಹ ತೆನೆಗಳನ್ನು ಬಡವರು ಆಯ್ದುಕೊಂಡು ತಂದು ತಮ್ಮ ಹೊಟ್ಟೆಪಾಡನ್ನು ನೀಗಿಸಿಕೊಳ್ಳುತ್ತಾರೆ. ಈ ರೀತಿ ಬಿದ್ದಿರುವ ತೆನೆಗಳನ್ನು ಆಯ್ದುಕೊಳ್ಳುವ ಕೆಲಸವನ್ನು 'ಅಕ್ಕಲಾಯುವುದು' ಎನ್ನುತ್ತಾರೆ. ಚೆಲ್ಲಾಡಿ ಬಿದ್ದಿರುವ ಅಕ್ಕಿಯನ್ನು ಆಯ್ದು ತರುವುದು ಇದನ್ನೇ ಹೋಲುವಂತಹ ಒಂದು ಕಸುಬು ಆಗಿರಬಹುದು.

ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಗೆ ನಾಡಿನ ಎಲ್ಲಾ ಕಡೆಗಳಿಂದಲೂ ಬರುತ್ತಿದ್ದ ಸಾವಿರಾರು ಮಂದಿ ಶಿವಶರಣಶರಣೆಯರಿಗೆ ಪ್ರತಿನಿತ್ಯವೂ ದಾಸೋಹ ನಡೆಯುತ್ತಿತ್ತು. ಅಂತಹ ಸಮಯದಲ್ಲಿ ಅಲ್ಲಲ್ಲಿ ಹರಡಿಕೊಂಡಂತೆ ನೆಲದ ಮೇಲೆ ಚೆಲ್ಲಾಡಿ ಬಿದ್ದಿರುತ್ತಿದ್ದ ಅಕ್ಕಿಯನ್ನು ಆಯ್ದು ತರುತ್ತಿದ್ದ ಮಾರಯ್ಯನಿಗೆ ಆಯ್ದಕ್ಕಿ ಮಾರಯ್ಯನೆಂಬ ಹೆಸರು ಬಂದಿತ್ತು. ಅಮರೇಶ್ವರ ಗ್ರಾಮದವರಾದ ಈ ದಂಪತಿಗಳು ಕಲ್ಯಾಣ ಪಟ್ಟಣದಲ್ಲಿ ಬಸವಣ್ಣನವರು ಮಾಡುತ್ತಿದ್ದ ಸಾಮಾಜಿಕ ಒಳಿತಿನ ಕೆಲಸಗಳ ಸುದ್ದಿಯನ್ನು ಕೇಳಿ, ತಮ್ಮ ಊರನ್ನು ಬಿಟ್ಟು ಕಲ್ಯಾಣಕ್ಕೆ ಬಂದು ನೆಲಸಿದ್ದರು. ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯನವರ ಕುಟುಂಬದಲ್ಲಿ ಒಂದು ದಿನ ನಡೆದ ಪ್ರಸಂಗವೊಂದರ ಚಿತ್ರಣವು ಈ ಕೆಳಕಂಡ ನಾಲ್ಕು ವಚನಗಳಲ್ಲಿ ರೂಪುಗೊಂಡಿದೆ.

❖

75. ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ
ಭಾವಶುದ್ಧವಾಗಿ ಮಹಾಶರಣರ
ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ
ಬೇಗ ಹೋಗು ಮಾರಯ್ಯಾ.

ಬಸವಣ್ಣನವರ ಮಹಾಮನೆಯ ಅಂಗಳದಿಂದ ಎಂದಿನಂತೆ ಅಕ್ಕಿಯನ್ನು ಆಯ್ದು ತರಲು ಹೋಗಬೇಕಾಗಿದ್ದ ಮಾರಯ್ಯನು ಅಂದು ಹೋಗಿರಲಿಲ್ಲ. ಆಗ ಲಕ್ಕಮ್ಮನು ತನ್ನ ಗಂಡನಿಗೆ ಅಲ್ಲಿಗೆ ಹೋಗಿಬರಬೇಕಾಗಿರುವುದನ್ನು ನೆನಪಿಸುತ್ತಾಳೆ.

(ಕಾಯಕ=ದುಡಿಮೆ/ಕಸುಬು/ಕೆಲಸ; ನಿಂದು+ಇತ್ತು; ನಿಂದು=ನಡೆಯದೆ/ಮುಂದುವರಿಯದೆ/ಮುಂದೆ ಸಾಗದೆ; ಇತ್ತು=ಇರುವುದು; ನಿಂದಿತ್ತು=ನಿಂತು ಹೋಗಿದೆ; ಹೋಗು+ಅಯ್ಯಾ; ಹೋಗು=ತೆರಳು/ನಡೆ; ಅಯ್ಯಾ=ಗಂಡಸರನ್ನು ಒಲವು ನಲಿವುಗಳಿಂದ ಮಾತನಾಡಿಸುವಾಗ ಬಳಕೆಯಾಗುವ ಪದ; ಎನ್ನ+ಆಳ್ದನೆ; ಎನ್ನ=ನನ್ನನ್ನು; ಆಳ್=ಗಂಡಸು; ಆಳ್ದನ್=ಗಂಡ/ಪತಿ; ಆಳ್ದನೆ=ಆಳುತ್ತಿರುವವನೆ/ಒಡೆಯನೆ; ಭಾವಶುದ್ಧ+ಆಗಿ; ಭಾವ=ಮನಸ್ಸಿನ ಒಳಮಿಡಿತ/ಮನದೊಳಗೆ ಮೂಡುವ ಸಂಗತಿಗಳು/ಸಂವೇದನೆಗಳು; ಶುದ್ಧ=ಮಡಿ/ಶುಚಿ; ಭಾವಶುದ್ಧ=ಒಳ್ಳೆಯ ಒಳಮಿಡಿತಗಳಿಂದ ಕೂಡಿದ ಮನಸ್ಸು/ಒಳಿತನ್ನು ಮಾಡಬೇಕೆಂಬ ಇಂಗಿತದಿಂದ ಕೂಡಿರುವ ಮನಸ್ಸು; ಭಾವಶುದ್ಧವಾಗಿ=ಒಳ್ಳೆಯ ಮನಸ್ಸಿನಿಂದ/ಉದ್ದೇಶದಿಂದ ಕೂಡಿ; ಮಹಾ=ದೊಡ್ಡ/ಹಿರಿಯ;

ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು/ಶಿವನನ್ನು ಪೂಜಿಸುವವನು; ಮಹಾಶರಣ=ಬಸವಣ್ಣನವರನ್ನು 'ಮಹಾಶರಣ' ಎಂಬ ಹೆಸರಿನಿಂದ ಇತರರು ಕರೆಯುತ್ತಿದ್ದರು/ಹೆಸರಿಸಿದ್ದರು; ತಿಪ್ಪೆ=ದನಕರುಗಳ ಸಗಣಿಗಂಜಲವನ್ನು ಮತ್ತು ಕಸಕಡ್ಡಿಗಳನ್ನು ಹಾಕುವ ಜಾಗ/ಗುಂಡಿ; ತಪ್ಪಲ=ತೊಪ್ಪಲು/ಸೊಪ್ಪು/ಮರಗಿಡಗಳ ಎಲೆ ಚಿಗುರು;

"ತಿಪ್ಪೆಯ ತಪ್ಪಲು" ಎಂಬ ಪದಕಂತೆಯು "ಮನೆಯ ಮುಂದಣ ಅಂಗಳ/ಬಯಲಾಗಿರುವ ಎಡೆ/ತೆರೆದ ಜಾಗ' ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ಅಕ್ಕಿ=ಬತ್ತದ ಹೊಟ್ಟನ್ನು ತೆಗೆದ ನಂತರ ದೊರೆಯುವ ಕಾಳು;

ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿ=ಬಸವಣ್ಣನವರ ಮಹಾಮನೆಯ ಅಂಗಳದಲ್ಲಿ ಹರಡಿ ಕೊಂಡಂತೆ ಬಿದ್ದಿರುವ ಅಕ್ಕಿ; ತಂದು=ತೆಗೆದುಕೊಂಡು ಬಂದು/ಆಯ್ದುಕೊಂಡು ಬಂದು; ನಿಶ್ಚೈಸಿ=ನಿಶ್ಚಯಿಸಿ/ತೀರ್ಮಾನಿಸಿ/ಗೊತ್ತುಮಾಡಿ ಕೊಂಡು;

ನಿಶ್ಚೈಸಿ ಮಾಡಬೇಕು=ಮೊದಲೇ ಗೊತ್ತುಪಡಿಸಿಕೊಂಡಿರುವ ಕೆಲಸವನ್ನು ಮಾಡಬೇಕಾಗಿದೆ; ಮಾರಯ್ಯ=ಆಯ್ದಕ್ಕಿ ಲಕ್ಕಮ್ಮನ ಗಂಡನ ಹೆಸರು; ಪ್ರಿಯ=ನಲ್ಲ/ಒಲವು ನಲಿವಿನಿಂದ ಕೂಡಿರುವ ವ್ಯಕ್ತಿ; ಅಮರ+ಈಶ್ವರ; ಅಮರ= ಸಾವಿಲ್ಲದವನು/ದೇವತೆ; ಈಶ್ವರ=ಶಿವ/ಒಡೆಯ; ಅಮರೇಶ್ವರ=ಅಮರೇಶ್ವರ ಎಂಬ ಊರಿನಲ್ಲಿದ್ದ ಲಿಂಗದ ಹೆಸರು/ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳ ಮೆಚ್ಚಿನ ದೇವರ ಹೆಸರು; ಆಯ್ದಕ್ಕಿ ಲಕ್ಕಮ್ಮನು 'ಮಾರಯ್ಯಪ್ರಿಯ ಅಮರೇಶ್ವರಲಿಂಗ' ಎಂಬುದನ್ನು ತಾನು ರಚಿಸಿದ ವಚನಗಳಲ್ಲಿ ಅಂಕಿತನಾಮವನ್ನಾಗಿ ಬಳಸಿದ್ದಾಳೆ.)

❖

76. ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ.

ದಾಸೋಹಕ್ಕೆ ಬೇಕಾಗಿರುವುದಕ್ಕಿಂತಲೂ ಹೆಚ್ಚಾಗಿ ಅಕ್ಕಿಯನ್ನು ಆಯ್ದು ಕೊಂಡು, ಅಕ್ಕಿಯ ದೊಡ್ಡ ಗಂಟನ್ನು ಹೊತ್ತು ಮನೆಗೆ ಬಂದ ಮಾರಯ್ಯನನ್ನು ಕಂಡು ಅಚ್ಚರಿ ಹಾಗೂ ಆತಂಕದಿಂದ ಲಕ್ಕಮ್ಮನು ಶಿವಶರಣರಾದವರು ಈ ಬಗೆಯಲ್ಲಿ ಆಸೆಯ .... ಒಳಗಾಗಬಾರದೆಂಬ ಎಚ್ಚರಿಕೆಯನ್ನು ನೀಡುತ್ತಾಳೆ.

(ಆಸೆ+ಎಂಬುದು; ಆಸೆ=ಎಲ್ಲವನ್ನೂ ಹೆಚ್ಚುಹೆಚ್ಚಾಗಿ ಪಡೆಯಬೇಕೆಂಬ ಒಳಮಿಡಿತ/ಬಯಕೆ; ಎಂಬುದು=ಎನ್ನುವುದು; ಅರಸಂಗೆ+ಅಲ್ಲದೆ; ಅರಸಂಗೆ= ಅರಸನಿಗೆ; ಅರಸ=ರಾಜ; ಅಲ್ಲದೆ=ಹೊರತುಪಡಿಸಿ; ಶಿವಭಕ್ತರಿಗೆ+ಉಂಟೆ; ಭಕ್ತ= ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು; ಶಿವಭಕ್ತ=ಶಿವನನ್ನು ಪೂಜಿಸುವವನು/ಒಳ್ಳೆಯ ನಡೆನುಡಿಗಳಲ್ಲಿ ಶಿವನನ್ನು ಕಾಣುವವನು; ಉಂಟೆ=ಇರುತ್ತದೆಯೇ/ಇರುವುದೇ;

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ=ನಾಡಿಗೆ ಅರಸನಾದವನು ಸದಾಕಾಲ ನಾಡಿನ ಎಲ್ಲೆಗಳನ್ನು ವಿಸ್ತರಿಸುವ/ಇತರರನ್ನು ಸದೆಬಡಿದು ಚಿನ್ನಬೆಳ್ಳಿ ನಗನಾಣ್ಯಗಳನ್ನು ಒಟ್ಟುಗೂಡಿಸಿ ತನ್ನ ಬೊಕ್ಕಸದ ಸಂಪತ್ತನ್ನು ಹೆಚ್ಚುಮಾಡಿ ಕೊಳ್ಳುವ ಒಳಮಿಡಿತಗಳಿಂದ ಕೂಡಿರುತ್ತಾನೆ. ಆದುದರಿಂದ ಆಸೆಯೆಂಬುದು ಅರಸನಿಗೆ ಸಹಜವಾದ ಒಳಮಿಡಿತ. ಆದರೆ ಸಹಮಾನವರೊಡನೆ ಹಂಚಿ ಉಣ್ಣಬೇಕೆಂಬ/ಎಲ್ಲರ ಒಳಿತಿನೊಡನೆ ತನ್ನ ಒಳಿತನ್ನು ಕಾಣಬೇಕೆಂಬ ಒಳಮಿಡಿತಗಳಿಂದ ಕೂಡಿರುವ ಶಿವಶರಣರಿಗೆ ತಾನೊಬ್ಬನೇ ಎಲ್ಲವನ್ನೂ ಪಡೆದುಕೊಳ್ಳಬೇಕೆಂಬ ಆಸೆಯು ಇರಬಾರದು ಎಂಬ ತಿರುಳನ್ನು ಈ ಸೊಲ್ಲು ಒಳಗೊಂಡಿದೆ;

ರೋಷ+ಎಂಬುದು; ರೋಷ=ಸಿಟ್ಟು/ಕೋಪ/ಆಕ್ರೋಶ; ಯಮದೂತರಿಗೆ+ ಅಲ್ಲದೆ; ಯಮ=ಜಗತ್ತಿನಲ್ಲಿರುವ ಮಾನವ ಜೀವಿಗಳ ಪ್ರಾಣವನ್ನು ಕೊಂಡೊಯ್ದು, ಅವರು ತಮ್ಮ ಜೀವನದಲ್ಲಿ ಮಾಡಿರುವ ತಪ್ಪು/ಒಪ್ಪುಗಳಿಗೆ ತಕ್ಕಂತೆ ನರಕದಲ್ಲಿ ದಂಡನೆ ಇಲ್ಲವೇ ಸ್ವರ್ಗದಲ್ಲಿ ನಲಿವನ್ನು ನೀಡುವ ದೇವತೆ. ಈ ರೀತಿ ಒಬ್ಬ ದೇವತೆಯು ಮತ್ತೊಂದು ಲೋಕದಲ್ಲಿ ಇದ್ದಾನೆ ಎಂಬುದು ಜನಮನದಲ್ಲಿರುವ ಒಂದು ನಂಬಿಕೆಯಾಗದೆ; ದೂತ=ಸೇವಕ; ಯಮದೂತ=ಯಮನ ಆದೇಶಕ್ಕೆ ತಕ್ಕಂತೆ ಜಗದ ಜೀವಿಗಳ ಮಯ್ಯಲ್ಲಿರುವ ಪ್ರಾಣವನ್ನು ಸೆಳೆದು, ಯಮನ ಬಳಿಗೆ ಪ್ರಾಣವಾಯುವನ್ನು ಕೊಂಡೊಯ್ಯುವ ಸೇವಕ/ಆಳು; ಅಜಾತರಿಗೆ+ಉಂಟೆ; ಅಜಾತ=ಶಿವ/ಹುಟ್ಟುಸಾವಿಲ್ಲದವನು; ಉಂಟೆ=ಇದೆಯೇ/ಇರುವುದೇ?; "ಅಜಾತರಿಗುಂಟೆ" ಎಂಬ ಪದಕಂತೆಯು ಒಳ್ಳೆಯ ನಡೆನುಡಿಗಳನ್ನುಳ್ಳ ವ್ಯಕ್ತಿಗಳಲ್ಲಿ ಕೇಡುಗಳಿಗೆ/ತಪ್ಪುಗಳಿಗೆ ಕಾರಣವಾಗುವಂತಹ ಕೋಪದ ಒಳಮಿಡಿತಗಳು ಇರುವುದಿಲ್ಲವೆಂಬ ತಿರುಳನ್ನು ಹೊಂದಿದೆ;

ಈಸು+ಅಕ್ಕಿ+ಆಸೆ; ಈಸು=ಈ ಪ್ರಮಾಣದ/ಇಷ್ಟೊಂದು; ನಿಮಗೆ+ಏಕೆ; ಈಶ್ವರನು+ಒಪ್ಪ; ಈಶ್ವರ=ಶಿವ/ದೇವರು; ಒಪ್ಪು=ಸಮ್ಮತಿಸು/ಮೆಚ್ಚು; ಒಪ್ಪ=ಒಪ್ಪುವುದಿಲ್ಲ/ಮೆಚ್ಚುವುದಿಲ್ಲ; ಈಶ್ವರನೊಪ್ಪ=ಶಿವಶರಣಶರಣೆಯರ ಪಾಲಿಗೆ ಶಿವನ ಪೂಜೆ ಎಂಬುದು ಸಾಮಾಜಿಕವಾದ ಒಳ್ಳೆಯ ನಡೆನುಡಿಗಳಿಂದ ಕೂಡಿದ ವರ್ತನೆಯಾಗಿತ್ತು. ಯಾವ ಬಗೆಯ ಕಾಯಕವು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದೋ ಅಂತಹುದನ್ನು ಮಾತ್ರ ಶಿವನು ಒಪ್ಪುತ್ತಾನೆ. ಸಮಾಜಕ್ಕೆ ಒಳಿತನ್ನು ಮಾಡದ ಯಾವುದೇ ಕಾಯಕವನ್ನು ಶಿವನು ಒಪ್ಪುವುದಿಲ್ಲವೆಂಬ ನಿಲುವು ಶಿವಶರಣೆ ಶರಣೆಯರಲ್ಲಿತ್ತು; ದೂರ=ಸೇರದುದು/ ಹೊರತಾದುದು; ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ ದೂರ= ಅತಿಯಾಸೆಯಿಂದ ಮಾಡುವ ಯಾವುದೇ ಬಗೆಯ ಕೆಲಸವನ್ನು ದೇವರು ಒಪ್ಪುವುದಿಲ್ಲ.)

❖

77. ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೊ ಬಸವಣ್ಣನ ಅನುಮಾನದ ಚಿತ್ತವೊ
ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ.

ಆಸೆಯ ಸುಳಿಗೆ ಸಿಲುಕಿ ತನ್ನ ಗಂಡನು ಮಾಡಿರುವ ಕೆಲಸವನ್ನು 'ತಪ್ಪು' ಎಂದು ಗುರುತಿಸಿ ಹೇಳುವುದರ ಜತೆಗೆ, ಗಂಡನು ಮಾಡಿರುವ ತಪ್ಪನ್ನು ತಿದ್ದಿ ಸರಿಪಡಿಸುವುದಕ್ಕಾಗಿ, ಅವನು ಹೆಚ್ಚಾಗಿ ತಂದಿರುವ ಅಕ್ಕಿಯನ್ನು ಮತ್ತೆ ಕೊಂಡು ಹೋಗಿ ಬಸವಣ್ಣನವರ ಮಹಾಮನೆಯ ಅಂಗಳದಲ್ಲೇ ಸುರಿದು ಬರುವಂತೆ ಲಕ್ಕಮ್ಮನು ಸೂಚಿಸುತ್ತಾಳೆ.

(ಒರ್+ಮನ=ಒರ್ಮನ/ಒಮ್ಮನ; ಒರ್=ಒಂದು; ಮನ=ಮನಸ್ಸು; **ಒಮ್ಮನ**= ಚಂಚಲತೆಯಿಲ್ಲದೆ ಅಂದರೆ ಅತ್ತಿತ್ತ ತುಯ್ದಾಡದೆ ಮನಸ್ಸಿನಲ್ಲಿ ತಳೆಯುವ ಒಂದೇ ಬಗೆಯ ನಿಲುವು; ಮೀರಿ=ದಾಟಿ/ಕಡೆಗಣಿಸಿ; ಇಮ್ಮನದ+ಅಲ್ಲಿ; ಇರ್+ಮನ=ಇರ್ಮನ/ಇಮ್ಮನ; ಇರ್=ಎರಡು; **ಇಮ್ಮನ**=ಯಾವುದೇ ಒಂದು ಕೆಲಸವನ್ನು ಮಾಡುವುದೋ ಬೇಡವೋ ಎಂಬ ತೊಳಲಾಟದಿಂದ ಕೂಡಿದ ಮನಸ್ಸು; ತಂದಿರಿ= ತೆಗೆದುಕೊಂಡು ಬಂದಿರುವಿರಿ; **ಇದು ನಿಮ್ಮ ಮನವೊ**=ಈ ಕೆಲಸವನ್ನು ನೀವು ಉದ್ದೇಶಪಟ್ಟು ಮಾಡಿರುವಿರೋ;

ಅನುಮಾನ=ಸಂದೇಹ/ಸಂಶಯ/ಅಪನಂಬಿಕೆ; ಚಿತ್ತ=ಮನಸ್ಸು/ಉದ್ದೇಶ; **ಬಸವಣ್ಣನ ಅನುಮಾನದ ಚಿತ್ತವೊ**=ಬಸವಣ್ಣನವರು ನಿಮ್ಮ ನಡೆನುಡಿಯನ್ನು ಒರೆಹಚ್ಚಿ ನೋಡಲೆಂದು ಇಂತಹ ಕೆಲಸವನ್ನು ಮಾಡಿದ್ದಾರೆಯೋ ಅಂದರೆ ಹೆಚ್ಚು ಅಕ್ಕಿಯನ್ನು ಅಂಗಳದಲ್ಲಿ ಚೆಲ್ಲುವಂತೆ ಮಾಡಿ, ನಿಮ್ಮ ಮನದಲ್ಲಿ ಆಸೆಯೆಂಬುದು ಹತೋಟಿಯಲ್ಲಿ ಇರುವುದೋ/ಇಲ್ಲವೋ ಎಂಬುದನ್ನು ತಿಳಿಯಲೆಂದು ಬಸವಣ್ಣನವರೇ ಹೂಡಿರುವ ಹುನ್ನಾರ ಇದಾಗಿರಬಹುದೇ ಎಂಬ ತಿರುಳನ್ನು ಈ ಸೊಲ್ಲು ಒಳಗೊಂಡಿದೆ;

ಈ ಮಾತು=ಈ ಬಗೆಯ ನುಡಿಗಳು/ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ತಂದಿರುವೆನೆಂಬ ನುಡಿಗಳು; ಸಲ್ಲು=ತಕ್ಕುದಾಗಿರು/ಯೋಗ್ಯವಾಗಿರು; ಸಲ್ಲದ= ತಕ್ಕುದಲ್ಲದ/ಯೋಗ್ಯವಲ್ಲದ/ಒಪ್ಪಿಗೆಯಾದ/ಸಮ್ಮತವಲ್ಲದ; ಬೋನ=ಅನ್ನ/ ಆಹಾರ;

ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ಸಲ್ಲದ ಬೋನ=ಸಹಮಾನ ವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆದು ಸಂಪಾದಿಸಿದ ಸಂಪತ್ತಿನಲ್ಲಿ ಮಾಡುವ ಯಾವುದೇ ಬಗೆಯ ದೇವರ ಪೂಜೆ/ಜಂಗಮರ ಸೇವೆ/ದಾನದ ಕೆಲಸಗಳನ್ನು ದೇವರು ಮೆಚ್ಚುವುದಿಲ್ಲ; **ಅಲ್ಲಿಯೇ**=ಎಲ್ಲಿಂದ ಆಯ್ದು ತಂದಿರುವಿರೋ ಆ ಜಾಗದಲ್ಲಿಯೇ ಅಂದರೆ ಬಸವಣ್ಣನವರ ಮಹಾಮನೆಯ ಅಂಗಳದಲ್ಲಿಯೇ; ಸುರಿ=ಚೆಲ್ಲು/ಹಾಕು; ಸುರಿದು ಬನ್ನಿ=ಹಾಕಿ ಬನ್ನಿರಿ.)

❖

78. ಸಂದಣಿಗೊಂಡು ಮನ ಹರುಷದಿಂದ
ಬಸವಣ್ಣನ ಅಂಗಳಕ್ಕೆ ಹೋಗಿ
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ
ನಮಗೆ ಎಂದಿನಂದವೆ ಸಾಕು
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ
ಮಾರಯ್ಯಪ್ರಿಯ ಅಮರೇಶ್ವರಲಿಂಗ ಕೊಟ್ಟ
ಕಾಯಕವೆ ಸಾಕು ಮಾರಯ್ಯಾ.

ಈ ಮೊದಲು ನೀವು ಪ್ರತಿನಿತ್ಯವೂ ಬಸವಣ್ಣನವರ ಮನೆಯ ಅಂಗಳದಿಂದ ದಾಸೋಹಕ್ಕೆ ಬೇಕಾಗುವಷ್ಟು ಅಕ್ಕಿಯನ್ನು ಆಯ್ದು ತರುತ್ತಿದ್ದುದು ನಮಗೆ ಸಾಕಾಗುತ್ತಿತ್ತು ಮತ್ತು ಮನಸ್ಸಿಗೆ ನೆಮ್ಮದಿಯನ್ನೂ ನೀಡುತ್ತಿತ್ತು. ನಮ್ಮಂತೆಯೇ ಆಯ್ದಕ್ಕಿಯಿಂದ ಶಿವಶರಣಶರಣೆಯರ ದಾಸೋಹ ಮಾಡುವವರ ಪಾಲಿಗೆ ದೊರೆಯಬೇಕಾಗಿದ್ದ ಅಕ್ಕಿಯನ್ನು ಹೆಚ್ಚಿನ ಆಸೆಗೆ ಒಳಗಾಗಿ ನಾವು ತಂದು ಬಳಸುವುದು ಸರಿಯಲ್ಲ. ಹೆಚ್ಚಾದ ಅಕ್ಕಿಯನ್ನು ಅಲ್ಲಿಯೇ ಹಾಕಿಬನ್ನಿರೆಂದು ಮಾರಯ್ಯನಿಗೆ ಲಕ್ಕಮ್ಮನು ಸೂಚಿಸುತ್ತಾಳೆ.

(ಸಂದಣಿ+ಕೊಂಡು; ಸಂದಣಿ=ಸಡಗರ/ಉತ್ಸಾಹ; ಕೊಂಡು=ಹೊಂದಿ/ಪಡೆದು; ಸಂದಣಿಗೊಂಡು=ಸಡಗರದಿಂದ/ಉತ್ಸಾಹದಿಂದ ಕೂಡಿ; ಮನ=ಮನಸ್ಸು; ಹರುಷದ+ಇಂದ; ಹರುಷ=ಆನಂದ/ಹಿಗ್ಗು; ಅಂಗಳ=ಮನೆಯ ಮುಂದಿರುವ ದೊಡ್ಡದಾಗ ಜಾಗ/ಬಯಲು/ತೆರೆದ ಆವರಣ;

ಬಸವಣ್ಣನ ಅಂಗಳ=ಬಸವಣ್ಣನವರ ಮಹಾಮನೆಯ ಮುಂದಿನ ಬಯಲು/ಜಾಗ ತಿಪ್ಪೆಯ ತಪ್ಪಲು+ಅಲ್ಲಿ; ತಿಪ್ಪೆಯ ತಪ್ಪಲು=ಮನೆಯ ಮುಂದಣ ಅಂಗಳ/ಬಯಲಾಗಿರುವ ಜಾಗ; ಬಿದ್ದು+ಇದ್ದ; ಬಿದ್ದಿದ್ದ=ಬಿದ್ದಿರುವ; ತಂಡುಲ=ಅಕ್ಕಿ; ಕಟ್ಟಿಕೊಂಡು= ಸಂಗ್ರಹಿಸಿಕೊಂಡು; ಎಯಿದು+ಆಗಿ; ಎಯ್ದು=ಪಡೆ/ಹೊಂದು; ಎಯಿದಾಗಿ ತರಲು=ಪಡೆದುಕೊಂಡು ತರುತ್ತಿದ್ದಾಗ; ಬಂದಿತ್ತು+ಅಲ್ಲಾ; ಅಲ್ಲಾ=ಅಲ್ಲವೇ;

ಎಯಿದಾಗಿ ಬಂದಿತ್ತಲ್ಲಾ=ಎಲ್ಲವೂ ಚೆನ್ನಾಗಿತ್ತಲ್ಲವೇ; ಎಂದಿನ+ಅಂದವೆ; ಎಂದಿನ=ಪ್ರತಿದಿನದಂತೆ/ಎಲ್ಲಾ ದಿನಗಳಂತೆ; ಅಂದ=ರೀತಿ/ಬಗೆ;

ಎಂದಿನಂದವೆ ಸಾಕು=ಈ ಮೊದಲು ಪ್ರತಿನಿತ್ಯ ನಮಗೆ ಬೇಕಾದಷ್ಟನ್ನು ಮಾತ್ರ ತರುತ್ತಿದ್ದುದೇ ನೆಮ್ಮದಿಯಾಗಿತ್ತು; ಮತ್ತೆ=ತಿರುಗಿ/ಮರಳಿ; ಕೊಂಡು ಹೋಗಿ=ತೆಗೆದುಕೊಂಡು ಹೋಗಿ;

ಅಲ್ಲಿಯೆ=ಬಸವಣ್ಣನವರ ಮಹಾಮನೆಯ ಅಂಗಳದಲ್ಲಿಯೆ; ಸುರಿ=ಹಾಕು/ಚೆಲ್ಲು/ಹರಡು; ಕಾಯಕ=ಕಸುಬು/ಕೆಲಸ)

❖

13. ಉರಿಲಿಂಗಪೆದ್ದಿ

ಊರು: ಹುಟ್ಟಿದ್ದು ಆಂಧ್ರಪ್ರದೇಶ. ಅನಂತರ ಬಸವಣ್ಣನವರು ಇದ್ದ ಕಲ್ಯಾಣನಗರಕ್ಕೆ ಬಂದು ನೆಲಸುತ್ತಾರೆ.

ಹೆಂಡತಿ: ಕಾಳವ್ವೆ

ದೊರೆತಿರುವ ವಚನಗಳು: 358

ವಚನಗಳ ಅಂಕಿತನಾಮ: ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

79. ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ
ಕೆಲಬರಿಗೆ ಅಮೃತವಾಗಿ
ಕೆಲಬರಿಗೆ ವಿಷವಾಗದು ನೋಡಾ
ಎಂತು ಅಂತೆ
ಶ್ರೀಗುರು ಸರ್ವರಿಗೆಯೂ ಗುರುವಾಗಿರಬೇಕಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಗುರುವಾದವನು ತನ್ನ ಬಳಿ ಬಂದ ಮಕ್ಕಳನ್ನು ಜಾತಿ/ಮತ/ಲಿಂಗ/ಸಂಪತ್ತು/ಗದ್ದುಗೆ/ಪ್ರಾಂತ್ಯದ ಹಿನ್ನೆಲೆಯಲ್ಲಿ ಒಬ್ಬರು ಮೇಲು/ಮತ್ತೊಬ್ಬರು ಕೀಳು ಎಂದು ತಾರತಮ್ಯ ಮಾಡದೆ, ಎಲ್ಲರಿಗೂ ವಿದ್ಯೆಯನ್ನು ಒಲವಿನಿಂದ ಹೇಳಿಕೊಡಬೇಕು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಅಮೃತ=ಜನಮನದ ಕಲ್ಪನೆಯಲ್ಲಿ ರೂಪುಗೊಂಡಿರುವ ಒಂದು ಬಗೆಯ ಪಾನೀಯ. ಇದನ್ನು ಕುಡಿದ ವ್ಯಕ್ತಿಗಳು ಅಮರರಾಗುತ್ತಾರೆ ಅಂದರೆ ಸಾವಿಲ್ಲದವರಾಗುತ್ತಾರೆ ಎಂಬ ದಂತಕತೆಯು ಜನಸಮುದಾಯದ ಮನದಲ್ಲಿದೆ; ಸರ್ವ=ಎಲ್ಲವನ್ನು ಒಳಗೊಂಡಿರುವುದು; ಸರ್ವರಿಗೂ= ಎಲ್ಲರಿಗೂ; ಅಮೃತ+ಆಗಿ+ ಇಪ್ಪುದು+ಅಲ್ಲದೆ;

ಆಗು=ಇರು/ವರ್ತಿಸು; ಇಪ್ಪುದು=ಇರುವುದು; ಆಗಿರ್ಪುದು=ಆಗಿರುವುದು;

ಅಮೃತ ಸರ್ವರಿಗೂ ಅಮೃತವಾಗಿಪ್ಪುದು=ಕುಡಿದವರೆಲ್ಲರಿಗೂ ಅಮೃತವು ಒಳ್ಳೆಯದನ್ನೇ ಉಂಟುಮಾಡುತ್ತದೆ;

ಅಲ್ಲದೆ=ಅದಕ್ಕೆ ಹೊರತಾಗಿ/ಬದಲಾಗಿ; ಕೆಲ=ತುಸು/ಕೊಂಚ/ಸ್ವಲ್ಪ; ಕೆಲಬರಿಗೆ=ಕೆಲವರಿಗೆ ಮಾತ್ರ; ಅಮೃತ+ಆಗಿ; ವಿಷ+ಆಗದು; ವಿಷ=ನಂಜು/ ಸೇವಿಸಿದವರಿಗೆ ಸಾವನ್ನು ಉಂಟುಮಾಡುವ ವಸ್ತು; ಆಗದು=ಆಗುವುದಿಲ್ಲ; ನೋಡು=ಕಾಣು/ತಿಳಿ; ನೋಡಾ=ವಿಚಾರಿಸಿ ತಿಳಿಯುವುದು.

ಕೆಲಬರಿಗೆ ಅಮೃತವಾಗಿ ಕೆಲಬರಿಗೆ ವಿಷವಾಗದು=ಜನರೆಲ್ಲರೂ ಅಮೃತವನ್ನು ಕುಡಿದಾಗ, ಅದು ಕೆಲವರ ಪಾಲಿಗೆ ಅಮೃತವಾಗಿ, ಮತ್ತೆ ಕೆಲವರ ಪಾಲಿಗೆ ನಂಜಾಗುವುದಿಲ್ಲ. ಅಂದರೆ ಎಲ್ಲರಿಗೂ ಒಂದೇ ರೀತಿಯಲ್ಲಿ ಒಳಿತನ್ನುಂಟು ಮಾಡುತ್ತದೆ;

ಎಂತು=ಯಾವ ರೀತಿಯಲ್ಲಿ/ಬಗೆಯಲ್ಲಿ; ಅಂತೆ=ಅಂತೆ/ಹಾಗೆ;

ಶ್ರೀ+ಗುರು; ಶ್ರೀ=ಮಂಗಳಕರವಾದ/ಒಳಿತನ್ನುಂಟುಮಾಡುವ ಗುರು. ತನ್ನ ಬಳಿ ವಿದ್ಯೆಯನ್ನು ಕಲಿಯಲು ಬಂದ ವ್ಯಕ್ತಿಗೆ ತಿಳುವಳಿಕೆಯನ್ನು ನೀಡಿ, ಅವರ ನಡೆನುಡಿಗಳನ್ನು ತಿದ್ದಿತೀಡಿ, ಅವರನ್ನು ಒಳ್ಳೆಯ ಬಗೆಯಲ್ಲಿ ರೂಪಿಸುವ ವ್ಯಕ್ತಿ; ಶ್ರೀಗುರು=ಶಿಷ್ಯರಿಗೆ ಅರಿವನ್ನು ನೀಡಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವ ವ್ಯಕ್ತಿ; ಸರ್ವರಿಗೆಯೂ=ಎಲ್ಲರಿಗೂ ಎಲ್ಲರನ್ನೂ ಒಳಗೊಂಡು; ಗುರು+ಆಗಿ+ ಇರಬೇಕು+ಅಯ್ಯಾ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಶ್ರೀಗುರು ಸರ್ವರಿಗೂ ಗುರುವಾಗಿರಬೇಕು=ತನ್ನ ಬಳಿ ಬಂದ ಮಕ್ಕಳೆಲ್ಲರನ್ನೂ ಸಮಾನವಾದ ಒಲವು ನಲಿವಿನಿಂದ ಕಂಡು, ಎಲ್ಲರ ಏಳಿಗೆಗಾಗಿ ಮಿಡಿಯುವ ಮನಸ್ಸನ್ನು ಮತ್ತು ಎಲ್ಲರ ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ

ಹೊಣೆಗಾರಿಕೆಯನ್ನು ಹೊಂದಿರಬೇಕು; ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ=ಶಿವ/ ಉರಿಲಿಂಗ ಪೆದ್ದಿಯ ವಚನಗಳ ಅಂಕಿತನಾಮ;

"ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ ಕೆಲಬರಿಗೆ ಅಮೃತವಾಗಿ ಕೆಲಬರಿಗೆ ವಿಷವಾಗದು ನೋಡಾ"– ವಚನಕಾರನಿಗೆ ಈ ಬಗೆಯ ಚಿಂತನೆಯು ಮೂಡಲು ಕಾರಣ ಏನಿರಬಹುದೆಂಬುದನ್ನು ಮತ್ತೊಂದು ನೆಲೆಯಿಂದ ನೋಡಬಹುದಾಗಿದೆ.

ಇಂಡಿಯಾ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ "ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ" ಎಂಬ ವರ್ಣಗಳಿದ್ದವು. ದೇವರ ಮೊಗದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರರು ಹುಟ್ಟಿ ಬಂದಿದ್ದಾರೆ. ಪಾದವು ಹೇಗೆ ದೇಹದ ತೂಕವನ್ನು ಹೊರುತ್ತದೆಯೋ ಅಂತೆಯೇ, ಬ್ರಾಹ್ಮಣ/ಕ್ಷತ್ರಿಯ/ವೈಶ್ಯರ ಸೇವೆಯಲ್ಲಿಯೇ ಶೂದ್ರರು ತಮ್ಮ ಬದುಕನ್ನು ಕಳೆಯಬೇಕು ಎಂಬ ಸಾಮಾಜಿಕ ಕಟ್ಟಲೆಯು ಅಂದಿನ ಸಮಾಜದಲ್ಲಿತ್ತು.

ಈ ನಾಲ್ಕು ವರ್ಣದವರಲ್ಲಿ ಬ್ರಾಹ್ಮಣನು ಮೇಲಿನ ಹಂತದಲ್ಲಿದ್ದರೆ, ಶೂದ್ರನು ಕೆಳಹಂತದಲ್ಲಿದ್ದನು. ಇನ್ನುಳಿದ ಕ್ಷತ್ರಿಯ ಮತ್ತು ವೈಶ್ಯರು ನಡುವಣ ಹಂತದಲ್ಲಿದ್ದರು. ಕೆಳ ಹಂತದಲ್ಲಿದ್ದ ಶೂದ್ರನಿಗೆ **"ತಿಳುವಳಿಕೆಯನ್ನು ನೀಡಬಾರದು; ವೇದಗಳನ್ನು ಕಲಿಸಬಾರದು; ವೇದಗಳನ್ನು ಓದಲು ಬಿಡಬಾರದು; ಒಂದು ವೇಳೆ ಶೂದ್ರನು ಸ್ವಪ್ರಯತ್ನದಿಂದ ವೇದಗಳನ್ನು ಕಲಿತು ಓದಲು ತೊಡಗಿದರೆ, ಆತನ ನಾಲಿಗೆಯನ್ನು ಸೀಳಬೇಕು/ಕಿವಿಗಳಿಗೆ ಕಾದ ಎಣ್ಣೆಯನ್ನು ಸುರಿಯಬೇಕು/ ತಲೆಯನ್ನು ಕಡಿಯಬೇಕು"** ಎಂಬ ಸಾಮಾಜಿಕ ಹಾಗೂ ಮತೀಯ ನಿಯಮಗಳು ಜಾರಿಯಲ್ಲಿದ್ದುದನ್ನು ಪ್ರಾಚೀನ ಕಾಲದಲ್ಲಿ ರಚನೆಗೊಂಡಿದ್ದ ಹೊತ್ತಿಗೆಗಳಲ್ಲಿ ವಿವರಿಸಲಾಗಿದೆ.

'ವೇದ' ಎಂದರೆ ಅರಿವು/ತಿಳುವಳಿಕೆ/ಅಕ್ಕರದ ಮೂಲಕ ಪಡೆದುಕೊಳ್ಳುವ ವಿವೇಕ. ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳಿಗೂ ನಾಲ್ಕು ವೇದಗಳಲ್ಲಿನ ಅರಿವು ಬೇಕು. ಏಕೆಂದರೆ ಅರಿವನ್ನು ಪಡೆದ ವ್ಯಕ್ತಿಗೆ "ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದು ನೀತಿ–ಯಾವುದು ಅನೀತಿ; ಯಾವುದು ದಿಟ–ಯಾವುದು ಸಟೆ; ಏನನ್ನು ಮಾಡಬೇಕು–ಏನನ್ನು ಮಾಡಬಾರದು" ಎಂಬ ತಿಳುವಳಿಕೆ ಮೂಡುತ್ತದೆ. ಎಲ್ಲರಂತೆ ತಾನೂ ತಲೆಯೆತ್ತಿ ಬಾಳಬೇಕೆಂಬ ಹುಮ್ಮಸ್ಸು ಮತ್ತು ಕೆಚ್ಚು ಮನದಲ್ಲಿ ಹುಟ್ಟುತ್ತದೆ.

ಆದರೆ ಮೇಲು/ಕೀಳಿನ ವರ್ಣ ತಾರತಮ್ಯದ ಹೆಸರಿನಲ್ಲಿ ಶೂದ್ರರಿಗೆ ವಿದ್ಯೆಯನ್ನು ನಿರಾಕರಿಸಿದ್ದ ಪ್ರಾಚೀನ ಸಮಾಜದ ಕಟ್ಟುಪಾಡುಗಳು ಶೂದ್ರರನ್ನು ಮೇಲುವರ್ಣದವರ ಅಡಿಯಾಳುಗಳನ್ನಾಗಿ ಮಾಡಿದ್ದವು ಮತ್ತು ಶೂದ್ರರು ಮೇಲುಮಟ್ಟದ ಸಾಮಾಜಿಕ ಅಂತಸ್ತನ್ನು/ಗದ್ದುಗೆಯನ್ನು ಗಳಿಸದಂತೆ ಅಡೆತಡೆಗಳನ್ನು ಒಡ್ಡಿದ್ದವು.

ವಿದ್ಯೆಯ ಕಲಿಕೆಯಲ್ಲಿದ್ದ ಈ ಬಗೆಯ ಸಾಮಾಜಿಕ ತಾರತಮ್ಯವನ್ನು ಗಮನಿಸಿದ್ದ ವಚನಕಾರನು 'ಅಮೃತ'ವನ್ನು ಒಂದು ರೂಪಕವನ್ನಾಗಿ ಮಾಡಿ ಕೊಂಡು, ಅದನ್ನು ವಿದ್ಯೆಗೆ ಸಂಕೇತವನ್ನಾಗಿ ಮಾಡಿಕೊಂಡು ತನ್ನ ಚಿಂತನೆಯನ್ನು ವ್ಯಕ್ತಪಡಿಸಿದ್ದಾನೆ. ಮೇಲು ವರ್ಣದವರಿಗೆ 'ಅಮೃತ'ವಾಗುವ ವಿದ್ಯೆಯು ಕೆಳ ವರ್ಣದವರಿಗೆ ಏಕೆ/ಹೇಗೆ ನಂಜಾಗುತ್ತದೆ ಎಂಬ ಪ್ರಶ್ನೆಯು ವಚನಕಾರನನ್ನು ಕಾಡಿದೆ.

ಒಟ್ಟು ಜನಸಮುದಾಯದ ಸಂಕೆಯಲ್ಲಿ ಶೇ.80 ಕ್ಕಿಂತ ಹೆಚ್ಚು ಮೊತ್ತದಲ್ಲಿದ್ದ ಶೂದ್ರರು ಮತ್ತು ಎಲ್ಲ ವರ್ಣಗಳಿಗೆ ಸೇರಿದ ಹೆಂಗಸರು 'ವೇದವನ್ನು ಕಲಿಯದಂತೆ/ಕೇಳದಂತೆ/ಓದದಂತೆ ತಡೆಹಿಡಿದಿದ್ದ/ಒಟ್ಟಾರೆಯಾಗಿ ಅಕ್ಕರ ವಿದ್ಯೆಯನ್ನು ಕಲಿಯದಂತೆ' ಮಾಡಿ, ಅವರನ್ನು ಮಾನಸಿಕವಾಗಿ ಬೆಳೆಯದಂತೆ ಕಟ್ಟುಪಾಡುಗಳನ್ನು ಹಾಕಿದ್ದ ಪ್ರಾಚೀನ ಸಮಾಜದ ಆಚರಣೆಯಲ್ಲಿದ್ದ ಕ್ರೂರತನದ/ ವಂಚನೆಯ ಕಟ್ಟುಪಾಡುಗಳನ್ನು ವಚನಕಾರನು ಟೀಕಿಸುತ್ತಾ, ವಿದ್ಯೆಯನ್ನು ಹೇಳಿಕೊಡುವ ಗುರುವಿನ ವ್ಯಕ್ತಿತ್ವ ಹೇಗಿರಬೇಕೆಂಬುದನ್ನು ಸೂಚಿಸಿದ್ದಾನೆ.

❖

80. ವೇದ ಶಾಸ್ತ್ರ ಪುರಾಣಾಗಮ ಗ್ರಂಥಂಗಳ
ನೋಡಿದವರೆಲ್ಲರೇನು ಹಿರಿಯರೆಂಬೆನೆ
ಅಲ್ಲಲ್ಲ ನಿಲ್ಲು ಮಾಣು ಅವರೇ ಹಿರಿಯರಾದಡೆ
ನಟ್ಟುವೆ ಗಳೆಯಾಟ ಮಿಣಿಯಾಟ ಅದೃಶ್ಯಕರಣ ಅಗ್ನಿಸ್ತಂಭ
ಆಕರ್ಷಣ
ಚೌಷಷ್ಠಿ ಕಲಾ ವಿದ್ಯೆ ಸಾಧಿಸಿದ ಡೊಂಬನೇನು ಕಿರಿಯನೇ
ಇದು ಹಿರಿದು ಕಿರಿದಿನ ಪರಿಯಲ್ಲ
ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ
ಇದು ಉದರಪೋಷಣ ವಿದ್ಯೆ ಎನಿಸುವುದು
ಅವರನೆಂತು ಸರಿ ಎಂಬೆನಯ್ಯ
ಲಿಂಗವಂತಂಗೆ ಇದು ಕಾರಣ
ಗುಣ ಜ್ಞಾನ ಧರ್ಮ ಆಚಾರ ಶೀಲ ಸಾಧಿಸಿದಾತನೇ ಹಿರಿಯ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ನಿಜಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುತ್ತಿರುವ ವ್ಯಕ್ತಿಯು ಹಿರಿಯನೇ ಹೊರತು ಓದುಬರಹದ ವಿದ್ಯೆಯಲ್ಲಿ ಪರಿಣತನಾಗಿ ತನ್ನ, ತನ್ನ ಕುಟುಂಬದ ಮತ್ತು ತನ್ನ ಜಾತಿ ಮತ್ತು ವರ್ಗದ ಹಿತಕ್ಕಾಗಿ ಬಾಳುವವನು ಹಿರಿಯನಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಸಮಾಜದಲ್ಲಿ ವ್ಯಕ್ತಿಗೆ ಹಿರಿತನವೆಂಬುದು ಸಾಮಾನ್ಯವಾಗಿ “ವಯಸ್ಸು / ಜಾತಿ / ಸಂಪತ್ತು/ವಿದ್ಯೆ / ಆಡಳಿತದ ಗದ್ದುಗೆ” ಯಿಂದ ದೊರೆಯುತ್ತದೆ. ಹಿಂದಿನಿಂದಲೂ ಜನಮನದಲ್ಲಿರುವ ಸಾಮಾಜಿಕ ಮನ್ನಣೆಯ ಈ ಬಗೆಯ ಅಳತೆಗೋಲನ್ನು ಹನ್ನೆರಡನೆಯ ಶತಮಾನದ ಈ ವಚನಕಾರನು ನಿರಾಕರಿಸಿ, ಒಳ್ಳೆಯ ನಡೆನುಡಿಯುಳ್ಳವರು ಮಾತ್ರ ‘ ಹಿರಿಯರು ‘ ಎಂಬುದನ್ನು ಪ್ರತಿಪಾದಿಸಿದ್ದಾನೆ.

“ಒಳ್ಳೆಯ ನಡೆನುಡಿ” ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ತನ್ನ ಮತ್ತು ತನ್ನ ಕುಟುಂಬದ ಹಿತವನ್ನು ಕಾಪಾಡುವಂತೆಯೇ ಸಹಮಾನವರ ಮತ್ತು ಸಮಾಜದ ಹಿತವನ್ನು ಕಾಪಾಡುವುದು.

ವೇದ=ಋಗ್ವೇದ–ಯಜುರ್ವೇದ–ಸಾಮವೇದ–ಅಥರ್ವಣ ವೇದ ಎಂಬ ನಾಲ್ಕು ಬಗೆಯ ಹೊತ್ತಿಗೆಗಳು ಇವೆ. ಈ ಹೊತ್ತಿಗೆಗಳಲ್ಲಿ ಇಂಡಿಯಾ ದೇಶದಲ್ಲಿದ್ದ

ಪ್ರಾಚೀನ ಜನಸಮುದಾಯದವರು ನಿಸರ್ಗದಲ್ಲಿ ಕಂಡುಬರುವ ವಸ್ತು, ಜೀವಿ ಮತ್ತು ಕ್ರಿಯೆಗಳನ್ನು ದೇವತೆಗಳೆಂದು ಕಲ್ಪಿಸಿಕೊಂಡು, ಅವರಿಂದ ಅನುಗ್ರಹವನ್ನು ಪಡೆಯಲೆಂದು ಪೂಜಿಸುವಾಗ ಮಾಡುವ ಆಚರಣೆಗಳ ಮತ್ತು ಉಚ್ಚರಿಸುವ ನುಡಿಗಳ ವಿವರವಿದೆ;

ಶಾಸ್ತ್ರ=ದೇವತೆಗಳನ್ನು ಪೂಜಿಸುವಾಗ ಮತ್ತು ಹುಟ್ಟು ಮದುವೆ ಸಾವಿನ ಸನ್ನಿವೇಶಗಳಲ್ಲಿ ಚಾಚುತಪ್ಪದೆ ಅನುಸರಿಸಬೇಕಾದ ಕಟ್ಟುಪಾಡುಗಳು; ಪುರಾಣ+ ಆಗಮ;

ಪುರಾಣ=ಮಾನವ ಸಮುದಾಯದ ಜೀವನದ ವಾಸ್ತವ ಸಂಗತಿಗಳ ಜತೆಗೆ ಕಲ್ಪನೆಯ ವಿಚಾರಗಳನ್ನು ಹೆಣೆದು ಕಟ್ಟಿರುವ ಕತೆಗಳು. ಇಂಡಿಯಾ ದೇಶದ ಪ್ರಾಚೀನ ಜನಸಮುದಾಯದಲ್ಲಿ ಹದಿನೆಂಟು ಪುರಾಣಗಳು ರಚನೆಗೊಂಡಿವೆ;

ಆಗಮ=ಪ್ರಾಚೀನ ಜನಸಮುದಾಯದವರ ಸಂಪ್ರದಾಯಗಳನ್ನು, ನಂಬಿಕೆಗಳನ್ನು ಮತ್ತು ಆಚರಣೆಗಳನ್ನು ವಿವರಿಸುವ ಹೊತ್ತಿಗೆ; ನೋಡಿದವರು+ ಎಲ್ಲರು+ ಏನು; ನೋಡು=ವಿಚಾರಮಾಡು/ಆಲೋಚಿಸು; ಹಿರಿಯರು+ಎಂಬೆನೆ; ಹಿರಿಯರು=ದೊಡ್ಡವರು/ತಿಳಿದವರು/ಸಾಮಾಜಿಕವಾಗಿ ಮನ್ನಣೆಯನ್ನು ಪಡೆದವರು; ಎಂಬೆನೆ=ಎನ್ನುತ್ತೇನೆಯೆ;

ವೇದ ಶಾಸ್ತ್ರ ಪುರಾಣಾಗಮ ಗ್ರಂಥಗಳ ನೋಡಿದವರೆಲ್ಲರೇನು ಹಿರಿಯರೆಂಬೆನೆ= ವೇದ, ಶಾಸ್ತ, ಪುರಾಣ, ಆಗಮದ ಹೊತ್ತಿಗೆಗಳನ್ನು ಚೆನ್ನಾಗಿ ಓದಿ ತಿಳಿದುಕೊಂಡಿವವರನ್ನು ನಾನು ಹಿರಿಯರು ಎಂದು ಕರೆಯುತ್ತೇನೆಯೇ. ಅಂದರೆ ಓದಿನಲ್ಲಿ ಪರಿಣತಿಯನ್ನು ಪಡೆದ ಮಾತ್ರಕೆ ಅವರೆಲ್ಲರನ್ನೂ ನಾನು ಹಿರಿಯರೆಂದು ಒಪ್ಪಿಕೊಳ್ಳುವುದಿಲ್ಲ;

ಮಾಣು=ಸುಮ್ಮನಿರು; **ಅಲ್ಲಲ್ಲ ನಿಲ್ಲು ಮಾಣು**=ಓದು ಬರಹದಲ್ಲಿ ಪರಿಣತ ರಾದವರೆಲ್ಲರೂ ಹಿರಿಯರು ಎಂದು ತೀರ್ಮಾನಿಸುವುದಕ್ಕೆ ಆತುರಪಡಬೇಡ. ಅದಕ್ಕೆ ಮುಂಚೆ ಸ್ವಲ್ಪ ಯೋಚಿಸಿ ನೋಡು; ಹಿರಿಯರ್+ಆದಡೆ; ಆದಡೆ=ಆದರೆ;

ಅವರೇ ಹಿರಿಯರಾದಡೆ=ವೇದ ಶಾಸ್ತ್ರ ಪುರಾಣ ಆಗಮಗಳನ್ನು ಓದಿದವರನ್ನು ಹಿರಿಯರೆಂದು ಕರೆದು ಮನ್ನಣೆ ನೀಡುವುದಾದರೆ;

ನಟ್ಟುವೆ=ಕುಣಿತ; ಗಳೆ+ಆಟ; ಗಳೆ=ಬಿದಿರಿನ ಉದ್ದನೆಯ ಕೋಲು/ಗಳ; **ಗಳೆಯಾಟ**=ಬಿದಿರಿನ ಗಳವನ್ನು ಹಿಡಿದುಕೊಂಡು ನಾನಾ ವರಸೆಗಳಲ್ಲಿ

ನೆಗೆಯುವುದು/ಉದ್ದನೆಯ ಹಾಗೂ ಗಟ್ಟಿಯಾದ ಗಳವನ್ನು ನೆಲದಲ್ಲಿ ನೆಟ್ಟು, ಅದನ್ನು ಹತ್ತಿಹೋಗುವುದು;

ಮಿಣಿ+ಆಟ; ಮಿಣಿ=ತೊಗಲಿನ ಹಗ್ಗ/ಚರ್ಮವನ್ನು ಹದಗೊಳಿಸಿ ಮಾಡಿರುವ ಹುರಿ; **ಮಿಣಿಯಾಟ**=ಎರಡು ಮರದ ಕಂಬಗಳನ್ನು ದೂರ ದೂರ ನೆಟ್ಟು ಅವಕ್ಕೆ ಹಗ್ಗವನ್ನು ಕಟ್ಟಿ, ಹಗ್ಗದ ಮೇಲೆ ನಡೆಯುವ ಆಟ;

ಅದೃಶ್ಯಕರಣ=ಕಣ್ಣ ಮುಂದೆ ಇರುವ ವಸ್ತುಗಳು ಇದ್ದಕ್ಕಿದ್ದಂತೆಯೇ ಮಾಯವಾಗುವಂತೆ ಮಾಡಿ, ಮತ್ತೆ ಅವು ಕಾಣಿಸಿಕೊಳ್ಳುವಂತೆ ಮಾಡುವುದು; **ಅಗ್ನಿಸ್ತಂಭ**=ವ್ಯಕ್ತಿಯು ದಗದಗನೆ ಉರಿಯುತ್ತಿರುವ ಬೆಂಕಿಯ ಕುಂಡದ ನಡುವೆ ನಿಂತುಕೊಂಡಿದ್ದರೂ ಉರಿಯ ತಾಪ ತಟ್ಟದಿರುವುದು; **ಆಕರ್ಷಣ**=ಮತ್ತೊಬ್ಬ ವ್ಯಕ್ತಿಯ ಮಯ್ ಮನವನ್ನು ವಶಕ್ಕೆ ತೆಗೆದುಕೊಂಡು, ಅವನನ್ನು ತಮ್ಮ ಇಚ್ಚೆಗೆ ತಕ್ಕಂತೆ ಆಡಿಸುವುದು;

ಅದೃಶ್ಯಕರಣ/ಅಗ್ನಿಸ್ತಂಭ/ಆಕರ್ಷಣ–ಈ ಮೂರು ಬಗೆಯ ಆಟಗಳನ್ನು **‘**ಕಣ್ಕಟ್ಟು**’** ಎಂದು ಕರೆಯುತ್ತಾರೆ. ನೋಡುತ್ತಿರುವವರ ಕಣ್ಣಿಗೆ ವಾಸ್ತವ ಎಂಬುದು ಮರೆಯಾಗಿ, ಆಟವನ್ನು ಕಟ್ಟಿರುವವನ ಮಾತಿಗೆ ತಕ್ಕಂತಹ ನೋಟಗಳನ್ನೇ ನೋಡುಗರ ಕಣ್ಮನಗಳು ಕಾಣುತ್ತಿರುತ್ತವೆ;

ಚೌಷಷ್ಠಿ=ಅರವತ್ನಾಲ್ಕು; ಕಲಾ=ನಟನೆ, ಹಾಡು, ಚಿತ್ರ, ಶಿಲ್ಪ ಮುಂತಾದ ಕುಶಲ ಪ್ರಕಾರಗಳು; ಸಾಧಿಸು=ಪಡೆದುಕೊಳ್ಳುವುದು/ದೊರಕಿಸಿಕೊಳ್ಳುವುದು; ಡೊಂಬನ್+ಏನು; **ಡೊಂಬ**=ಬಿದಿರಿನ ಗಳು, ಬೊಂಬು, ತೊಗಲಿನ ಹಗ್ಗ ಮುಂತಾದ ವಸ್ತುಗಳನ್ನು ಬಳಸಿಕೊಂಡು ತನ್ನ ದೇಹವನ್ನು ಬಗೆಬಗೆಯಲ್ಲಿ ಬಳುಕಿಸುತ್ತ, ಹಗ್ಗದ ಮೇಲೆ ನಡೆಯುತ್ತ, ಡೋಲನ್ನು ಬಾರಿಸುತ್ತ, ಕಯ್ ಚಳಕದ ಮೂಲಕ ನೋಡುಗರ ಕಣ್ಮನಗಳನ್ನು ತಣಿಸುವಂತೆ ಆಟಗಳನ್ನು ಕಟ್ಟುವವನು; ಕಿರಿಯ=ಚಿಕ್ಕವನು/ಸಾಮಾಜಿಕ ಮನ್ನಣೆಯಿಲ್ಲದವನು;

ಡೊಂಬನೇನು ಕಿರಿಯನೇ=ಡೊಂಬನು ಸಾಮಾಜಿಕವಾಗಿ ಮನ್ನಣೆ ಯಿಲ್ಲದವನೇ; ಪರಿ+ಅಲ್ಲ; ಪರಿ=ರೀತಿ;

ಇದು ಹಿರಿದು ಕಿರಿದಿನ ಪರಿಯಲ್ಲ=ಈ ರೀತಿಯಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ಅವನು ಕಲಿತಿರುವ ವಿದ್ಯೆ ಇಲ್ಲವೇ ಮಾಡುತ್ತಿರುವ ಕಸುಬಿನಿಂದ ದೊಡ್ಡದು ಇಲ್ಲವೇ ಚಿಕ್ಕದು ಎಂದು ಅಳೆಯಬಾರದು;

ಕಾಣಿರಿ+ಅಣ್ಣಾ; ಕಾಣಿರಿ=ತಿಳಿಯಿರಿ;

ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ=ದೊಡ್ಡದು ಚಿಕ್ಕದು ಎನ್ನುವುದನ್ನು ಗೊತ್ತುಪಡಿಸುವ ರೀತಿಯೇ ಬೇರೆ ಎಂಬುದನ್ನು ತಿಳಿಯಿರಿ. ಅಂದರೆ ಹಿರಿದು ಕಿರಿದು ಎಂಬುದನ್ನು ವ್ಯಕ್ತಿಯು ಹೊಂದಿರುವ ಒಳ್ಳೆಯ ನಡೆನುಡಿಯಿಂದ ಮಾತ್ರ ಅಳೆಯಬೇಕು;

ಉದರ=ಹೊಟ್ಟೆ; ಪೋಷಣ=ಕಾಪಾಡುವುದು; ಉದರಪೋಷಣ= ಹೊಟ್ಟೆಪಾಡು;

ಇದು ಉದರಪೋಷಣ ವಿದ್ಯೆ ಎನಿಸುವುದು=ವೇದ ಶಾಸ್ತ್ರ ಪುರಾಣ ಆಗಮಗಳಲ್ಲಿ ಪರಿಣತರಾದವನು ಮತ್ತು ಅರವತ್ನಾಲ್ಕು ಬಗೆಯ ಡೊಂಬ ವಿದ್ಯೆಗಳಲ್ಲಿ ಕುಶಲನಾದನು–ಈ ಇಬ್ಬರು ಮಾಡುತ್ತಿರುವುದು ತಮ್ಮ ತಮ್ಮ ಹೊಟ್ಟೆಪಾಡನ್ನು ನೀಗಿಸಿಕೊಳ್ಳುವುದಕ್ಕಾಗಿಯೇ ಹೊರತು ಮತ್ತೇನು ಅಲ್ಲ.

ಅವರನ್+ಎಂತು; ಅವರನ್=ಓದುಬರಹ ಬಲ್ಲವರನ್ನು; ಎಂತು=ಯಾವ ರೀತಿ; ಎಂಬೆನ್+ಅಯ್ಯಾ;

ಅವರನೆಂತು ಸರಿ ಎಂಬೆನಯ್ಯ=ಪ್ರಾಚೀನ ಕಾಲದಿಂದಲೂ 'ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ' ಎಂಬ ಮೇಲು ಕೀಳಿನ ಮೆಟ್ಟಲುಗಳಿಂದ ಕೂಡಿದ ವರ್ಣವ್ಯವಸ್ಥೆಯು ನಮ್ಮ ಸಮಾಜದಲ್ಲಿತ್ತು. ಚಂಡಾಲರೆಂಬ ಮತ್ತೊಂದು ವರ್ಗದವರನ್ನು ಮಾನವ ಜೀವಿಗಳೆಂದೇ ನಮ್ಮ ಸಮಾಜ ಪರಿಗಣಿಸಿರಲಿಲ್ಲ. ವಿದ್ಯೆ, ಸಂಪತ್ತು ಮತ್ತು ಆಡಳಿತದ ಗದ್ದುಗೆಯು ಮೊದಲ ಮೂರು ವರ್ಣದವರಿಗೆ ಮಾತ್ರ ಮೀಸಲಾಗಿತ್ತು. ಶೂದ್ರರು ಮೊದಲ ಮೂರು ವರ್ಣದವರಿಗೆ ದಾಸರಾಗಿ ಸೇವೆಯನ್ನು ಮಾಡುವುದರಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕಿತ್ತು.

ವೇದ, ಶಾಸ್ತ್ರ, ಪುರಾಣ, ಆಗಮಗಳಲ್ಲಿ ಪರಿಣತಿಯನ್ನು ಪಡೆದಿದ್ದ ಮೇಲು ವರ್ಣದವರು ನಾಡಿನ ಒಟ್ಟು ಜನಸಮುದಾಯದಲ್ಲಿ ಶೇ. 80ರಷ್ಟಿದ್ದ ಶೂದ್ರರನ್ನು ಮತ್ತು ಚಂಡಾಲರನ್ನು ಹಸಿವು, ಬಡತನ ಮತ್ತು ಅಪಮಾನದ ಬದುಕಿನ ಕಡೆಗೆ ತಳ್ಳಿ, ಅವರ ದುಡಿಮೆಯ ಉತ್ಪನ್ನದಲ್ಲಿ ದೊಡ್ಡ ಪಾಲನ್ನು ತಮ್ಮದಾಗಿಸಿ ಕೊಳ್ಳುತ್ತಿದ್ದರು. ಇಂತಹ ವಂಚಕರನ್ನು 'ಹಿರಿಯರು' ಎಂದು ಕರೆಯಲು ವಚನಕಾರನ ಮನಸ್ಸು ಒಪ್ಪುತ್ತಿಲ್ಲ; ಜನಸಮುದಾಯಕ್ಕೆ ಕೇಡನ್ನು ಬಗೆಯುವವರು ಯಾವುದೇ ರೀತಿಯಿಂದಲೂ 'ಹಿರಿಯರಲ್ಲ' ಎಂಬ ನಿಲುವನ್ನು ಶಿವಶರಣ ಶರಣೆಯರು ಹೊಂದಿದ್ದರು;

ಲಿಂಗವಂತಂಗೆ=ಲಿಂಗವಂತನಿಗೆ; **ಲಿಂಗವಂತ**=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ತಿಳಿದು ಬಾಳುತ್ತಿರುವ ವ್ಯಕ್ತಿ; ಇದು ಕಾರಣ=ಈ ಹಿನ್ನೆಲೆಯಿಂದ ಗಮನಿಸಿದಾಗ;

ಜ್ಞಾನ=ತಿಳುವಳಿಕೆ; ಧರ್ಮ=ಒಲವು,ಕರುಣೆ ಮತ್ತು ಸಮಾನತೆಯಿಂದ ಕೂಡಿದ ನಡೆನುಡಿ; ಆಚಾರ=ಒಳ್ಳೆಯ ವರ್ತನೆ; ಶೀಲ=ಒಳ್ಳೆಯ ಗುಣ; ಕಾಣು=ನೋಡು; ಕಾಣಾ=ತಿಳಿದುನೋಡು;

ಗುಣ ಜ್ಞಾನ ಧರ್ಮ ಆಚಾರ ಶೀಲ ಸಾಧಿಸಿದಾತನೇ ಹಿರಿಯ ಕಾಣಾ= ಅರಿವನ್ನು ಪಡೆದುಕೊಂಡು ಒಳ್ಳೆಯ ನಡೆನುಡಿಗಳಿಂದ ಎಲ್ಲರ ಒಳಿತಿಗಾಗಿ ಬಾಳುತ್ತಿರುವವನೇ ' ಹಿರಿಯ' ಎಂಬುದನ್ನು ಮನಗಾಣು.

ವಿಶ್ವೇಶ್ವರ=ಶಿವನ ಮತ್ತೊಂದು ಹೆಸರು; ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ= ಉರಿಲಿಂಗಪೆದ್ದಿಯ ವಚನಗಳ ಅಂಕಿತನಾಮ;

❖

14. ಏಲೇಶ್ವರ ಕೇತಯ್ಯ

ಊರು: ಏಲೇಶ್ವರ, ಯಾದಗಿರಿ ಜಿಲ್ಲೆ.
ಕಸುಬು: ವ್ಯವಸಾಯ
ವಚನಗಳ ಅಂಕಿತನಾಮ: ಏಲೇಶ್ವರಲಿಂಗ
ದೊರೆತಿರುವ ವಚನಗಳು: 75

81. ಆವ ವ್ರತ ನೇಮವ ಹಿಡಿದಡೂ
ಆ ವ್ರತ ನೇಮದ ಭಾವ ಶುದ್ಧವಾಗಿರಬೇಕು
ಅಸಿ ಕೃಷಿ ವಾಚಕ ವಾಣಿಜ್ಯತ್ವದಿಂದ ಬಂದ ದ್ರವ್ಯಂಗಳಲಿ
ಬಾಹ್ಯದ ಬಳಕೆ ಅಂತರಂಗದ ನಿರಿಗೆ
ಉಭಯ ಶುದ್ಧವಾಗಿಪ್ಪ ಭಕ್ತನಂಗವೆ ಏಲೇಶ್ವರಲಿಂಗದಂಗ.

ವ್ಯಕ್ತಿಯು ಮಾಡುವ ದುಡಿಮೆಯು ಯಾವುದೇ ಆಗಿರಲಿ, ಅದರಲ್ಲಿ ತೊಡಗಿದಾಗ ಅವನ ಮಯ್ ಮನಸ್ಸು ಒಳ್ಳೆಯ ಉದ್ದೇಶ ಮತ್ತು ಗುರಿಯನ್ನು ಹೊಂದಿರಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಆವ=ಯಾವ/ಯಾವುದೇ ಬಗೆಯ; ವ್ರತ=ವ್ಯಕ್ತಿಯು ಮಿಂದು, ಮಡಿಯುಟ್ಟು, ಉಪವಾಸವಿದ್ದು, ದೇವರ ಹೆಸರನ್ನು ಜಪಿಸುತ್ತ, ಹೂ ಹಣ್ಣು ಕಾಯಿ ಅನ್ನ ಪಾನಗಳನ್ನು ದೇವರ ಮುಂದೆ ಎಡೆಯಾಗಿ ಇಟ್ಟು, ದೀಪ ದೂಪಗಳಿಂದ

ಬೆಳಗುತ್ತ, ದೇವರ ಅನುಗ್ರಹವನ್ನು ಪಡೆಯಲು ಮತ್ತು ದೇವರನ್ನು ಒಲಿಸಿಕೊಳ್ಳಲು ಮಾಡುವ ನಿಯಮಿತವಾದ ಆಚರಣೆಗಳನ್ನು ವ್ರತವೆಂದು ಕರೆಯುತ್ತಾರೆ. ವ್ರತವನ್ನು ಮಾಡುವಾಗ **"ಇಂತಹ ದೇವರಿಗೆ ಇಂತಹ ರೀತಿಯಲ್ಲಿಯೇ ಪೂಜೆಯನ್ನು ಮಾಡಬೇಕು"** ಎಂಬ ಕಟ್ಟುಕಟ್ಟಲೆಯಿರುತ್ತದೆ; ನೇಮ=ವ್ರತ/ನೋಂಪಿ; ಹಿಡಿ=ಕೈಕೊಳ್ಳು/ತೊಡಗು;

ಆವ ವ್ರತ ನೇಮವ ಹಿಡಿದಡೂ=ದೇವರ ಕರುಣೆ ಮತ್ತು ಅನುಗ್ರಹವನ್ನು ಪಡೆಯಲೆಂದು ವ್ಯಕ್ತಿಯು ಯಾವುದೇ ಬಗೆಯ ವ್ರತ ನೇಮಗಳನ್ನು ಮಾಡಲು ತೊಡಗಿದರೂ;

ಭಾವ=ಮನಸ್ಸು/ಮನದಲ್ಲಿ ಮೂಡುವ ಒಳಮಿಡಿತಗಳು; ಶುದ್ಧ+ಆಗಿರಬೇಕು; ಶುದ್ಧ=ಸರಿಯಾದುದು;

ಭಾವ ಶುದ್ಧವಾಗಿರಬೇಕು=ವ್ಯಕ್ತಿಯ ಮನದಲ್ಲಿ ಒಳ್ಳೆಯ ಆಲೋಚನೆ, ವಿಚಾರ ಮತ್ತು ನಿಲುವು ಇರಬೇಕು. ಅಂದರೆ ವ್ಯಕ್ತಿಯು ಆಡುವ ನುಡಿ ಮತ್ತು ಮಾಡುವ ಕಾಯಕವೆಲ್ಲವೂ ತನಗೆ, ತನ್ನ ಕುಟುಂಬಕ್ಕೆ ಒಳಿತನ್ನು ಉಂಟುಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಒಳ್ಳೆಯ ಉದ್ದೇಶ ಮತ್ತು ಗುರಿಯನ್ನು ಹೊಂದಿರುವುದು;

ಆ ವ್ರತ ನೇಮದ ಭಾವ ಶುದ್ಧವಾಗಿರಬೇಕು=ದೇವರ ಪೂಜೆಯಲ್ಲಿ ತೊಡಗುವ ವ್ಯಕ್ತಿಯ ಮನದಲ್ಲಿ ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಉದ್ದೇಶ ಮತ್ತು ಗುರಿಯಿರಬೇಕು;

ಅಸಿ=ಕತ್ತಿ. ಇದು ಒಂದು ರೂಪಕವಾಗಿ ಬಳಕೆಯಾಗಿದೆ. 'ಕತ್ತಿ' ಎಂಬ ಪದ ನಾಡಿನ ಗದ್ದುಗೆಯನ್ನೇರಿ ಆಡಳಿತವನ್ನು ನಡೆಸುವುದು ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ; ಕೃಷಿ=ಆರಂಬ/ಬೇಸಾಯ; ವಾಚಕ=ಲಿಪಿರೂಪದ ಹೊತ್ತಿಗೆಗಳನ್ನು ಓದುವವನು; ವಾಣಿಜ್ಯತ್ವ+ಇಂದ; ವಾಣಿಜ್ಯ=ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರ; ವಾಣಿಜ್ಯತ್ವ=ವ್ಯಾಪಾರದ ವಹಿವಾಟು; ದ್ರವ್ಯ=ಹಣ/ಸಂಪತ್ತು;

ಅಸಿ ಕೃಷಿ ವಾಚಕ ವಾಣಿಜ್ಯತ್ವದಿಂದ ಬಂದ ದ್ರವ್ಯಂಗಳಲಿ= ಜನಸಮುದಾಯವನ್ನು ಕಾಪಾಡುವ ಮತ್ತು ಮುನ್ನಡೆಸುವ ಗದ್ದುಗೆಯನ್ನೇರಿ ನಡೆಸುವ ಆಡಳಿತದಿಂದ; ಭೂಮಿಯನ್ನು ಉತ್ತು ಬಿತ್ತು ಬೆಳೆ ತೆಗೆಯುವ ಬೇಸಾಯದಿಂದ; ಹೊತ್ತಿಗೆಯಲ್ಲಿನ ಲಿಪಿರೂಪದ ನುಡಿರಚನೆಯನ್ನು ಓದಿ ಇತರರಿಗೆ ಹೇಳುವ ಗುರುತನದಿಂದ;

ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ವ್ಯಾಪಾರದಿಂದ ಗಳಿಸಿದ ಹಣದಲ್ಲಿ/ ಸಂಪತ್ತಿನಲ್ಲಿ;

ಬಾಹ್ಯ=ಹೊರಗಡೆ/ಬಹಿರಂಗದಲ್ಲಿ; ಬಳಕೆ=ಉಪಯೋಗಿಸುವಿಕೆ;

ಬಾಹ್ಯದ ಬಳಕೆ=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಬಹಿರಂಗವಾಗಿ ಮಾಡುವ ವ್ಯವಹಾರಗಳು;

ಅಂತರಂಗ=ಒಳಗೆ; ನಿರಿ=ಸ್ವರೂಪ/ರೀತಿ; **ಅಂತರಂಗದ ನಿರಿಗೆ**=ವ್ಯಕ್ತಿಯ ಮನದಲ್ಲಿ ಸದಾಕಾಲ ಮೂಡಿಬರುತ್ತಿರುವ ಒಳಮಿಡಿತಗಳ ರೀತಿ;

ಉಭಯ=ಎರಡು; ಶುದ್ಧ+ಆಗಿ+ಇಪ್ಪ; ಇಪ್ಪ=ಇರುವ; ಆಗಿಪ್ಪ=ಆಗಿರುವ;

ಉಭಯ ಶುದ್ಧವಾಗಿಪ್ಪ=ವ್ಯಕ್ತಿಯ ಮನಸ್ಸು ಮತ್ತು ಕ್ರಿಯೆಗಳೆರಡು ಸರಿಯಾಗಿರುವುದು; ವ್ಯಕ್ತಿಯ ಅಂತರಂಗದ ಮನಸ್ಸಿನಲ್ಲಿ ಮೂಡುವ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯದನ್ನು ಮಾತ್ರ ಬಹಿರಂಗದ ವ್ಯವಹಾರಗಳಲ್ಲಿ ಆಚರಣೆಗೆ ತರುವಂತಹ ನಡೆನುಡಿಯಿರುವ;

ಭಕ್ತನ+ಅಂಗವೆ; ಭಕ್ತ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ತಿಳಿದು ಬಾಳುತ್ತಿರುವವನು; ಅಂಗ=ದೇಹ/ಶರೀರ;

ಭಕ್ತನ ಅಂಗ=ಭಕ್ತನ ನಡೆನುಡಿ/ವ್ಯಕ್ತಿತ್ವ; ಏಲೇಶ್ವರಲಿಂಗದ+ಅಂಗ; ಏಲೇಶ್ವರಲಿಂಗ=ಶಿವನ ಮತ್ತೊಂದು ಹೆಸರು. ಏಲೇಶ್ವರ ಕೇತಯ್ಯನವರ ವಚನಗಳ ಅಂಕಿತನಾಮ;

ಭಕ್ತನ ಅಂಗವೆ ಏಲೇಶ್ವರ ಲಿಂಗದ ಅಂಗ=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ವ್ಯಕ್ತಿಯು ತನ್ನ ದುಡಿಮೆಯಿಂದ ಸಂಪಾದನೆ ಮಾಡುವ ಹಣ ಮತ್ತು ಅದನ್ನು ವೆಚ್ಚ ಮಾಡುವ ರೀತಿಯು ಪ್ರಾಮಾಣಿಕವಾಗಿರಬೇಕು. ಅಂದರೆ ಸಹಮಾನವರನ್ನು ಮತ್ತು ಸಮಾಜವನ್ನು ವಂಚಿಸಿ ಹಣವನ್ನು ಸಂಪಾದಿಸ ಬಾರದು ಮತ್ತು ಜನಸಮುದಾಯಕ್ಕೆ ಕೇಡನ್ನು ಬಗೆಯಬಾರದು. ಈ ರೀತಿ ಒಳ್ಳೆಯ ವ್ಯಕ್ತಿತ್ವವುಳ್ಳವನ ದೇಹದಲ್ಲಿಯೇ ಏಲೇಶ್ವರಲಿಂಗ ನೆಲೆಸಿದ್ದಾನೆ.

ಹನ್ನೆರಡನೆಯ ಶತಮಾನದ ವಚನಕಾರರು ದೇವರ ಇರುವಿಕೆಯನ್ನು ವ್ಯಕ್ತಿಯ ಅಂತರಂಗದ ಒಳ್ಳೆಯ ಮನಸ್ಸು ಮತ್ತು ಬಹಿರಂಗದ ಒಳ್ಳೆಯ ಕ್ರಿಯೆಗಳಲ್ಲಿ ಕಾಣುತ್ತಿದ್ದರು.

❖

82. ಮನಕ್ಕೆ ವ್ರತವ ಮಾಡಿ
ತನುವಿಗೆ ಕ್ರೀಯ ಮಾಡಬೇಕು
ಇಂದ್ರಿಯಂಗಳಿಗೆ ಕಟ್ಟನಿಕ್ಕಿ
ಆತ್ಮನ ಸಂದೇಹವ ಬಿಡಿಸಿ ಕ್ರೀಯ ಮಾಡಬೇಕು
ಹೀಂಗಲ್ಲದೆ ವ್ರತಾಚಾರಿಯಲ್ಲ
ಮನಕ್ಕೆ ಬಂದಂತೆ ಹರಿದು
ಬಾಯಿಗೆ ಬಂದಂತೆ ನುಡಿದು
ಇಂತೀ ನಾ ವ್ರತಿಯೆಂದರೆ
ಮೂಗನರಿಯದೆ ಮಾಣ ಏಲೇಶ್ವರಲಿಂಗನು.

ಜಪ ತಪ ಉಪವಾಸ ಮುಂತಾದ ಹಲವು ಬಗೆಯ ಕಟ್ಟುನಿಟ್ಟಿನ ಆಚರಣೆ ಗಳಿಂದ ದೇವರನ್ನು ಪೂಜಿಸುವವನು ವ್ರತಾಚಾರಿಯಲ್ಲ. ತನ್ನ ನಿತ್ಯ ಜೀವನದಲ್ಲಿ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುವವನು ವ್ರತಾಚಾರಿಯೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ವ್ರತಾಚಾರಿ=ವ್ರತವನ್ನು ಮಾಡುವವನು; ಮನ=ಮನಸ್ಸು; ವ್ರತ=ವ್ಯಕ್ತಿಯು ಮಿಂದು, ಮಡಿಯುಟ್ಟು, ಉಪವಾಸವಿದ್ದು, ದೇವರ ಹೆಸರನ್ನು ಜಪಿಸುತ್ತ, ಹೂ ಹಣ್ಣು ಕಾಯಿ ಅನ್ನ ಪಾನಗಳನ್ನು ದೇವರ ಮುಂದೆ ಎಡೆಯಾಗಿ ಇಟ್ಟು, ದೀಪ ದೂಪಗಳಿಂದ ಬೆಳಗುತ್ತ, ದೇವರ ಅನುಗ್ರಹವನ್ನು ಪಡೆಯಲು ಮತ್ತು ದೇವರನ್ನು ಒಲಿಸಿಕೊಳ್ಳಲು ಮಾಡುವ ನಿಯಮಿತವಾದ ಆಚರಣೆಗಳು/ನೋಂಪಿ/ನೇಮ;

ಮನಕ್ಕೆ ವ್ರತ=ವ್ಯಕ್ತಿಯ ಮನದಲ್ಲಿ ಸದಾಕಾಲ ಮೂಡಿಬರುವ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಮಾತ್ರ ನಡೆನುಡಿಗಳಲ್ಲಿ ಆಚರಣೆಗೆ ತರಬೇಕೆಂಬ ಅರಿವು ಮತ್ತು ಎಚ್ಚರವನ್ನು ಹೊಂದಿರುವುದು; ಜೀವನದ ಕೊನೆಯ ಉಸಿರು ಇರುವ ತನಕ ವ್ಯಕ್ತಿಯು ತನ್ನ ಮನಸ್ಸಿಗೆ ನೀಡುವ ತರಬೇತಿ; ಇದನ್ನು ಗೌತಮ ಬುದ್ಧರು 'ಮಾನಸಿಕ ತರಬೇತಿ' ಎಂದು ಕರೆದಿದ್ದಾರೆ.

ತನು=ದೇಹ; ಕ್ರೀ=ಕ್ರಿಯೆ/ಕೆಲಸ/ದುಡಿಮೆ;

ಮನಕ್ಕೆ ವ್ರತವ ಮಾಡಿ, ತನುವಿಗೆ ಕ್ರೀಯ ಮಾಡಬೇಕು=ವ್ಯಕ್ತಿಯು ತನ್ನ ಮನದಲ್ಲಿ ಒಳ್ಳೆಯ ಉದ್ದೇಶ ಮತ್ತು ಗುರಿಯನ್ನು ಇಟ್ಟುಕೊಂಡು, ಅದಕ್ಕೆ

ಅನುಗುಣವಾಗಿ ತನ್ನ ದೇಹದಿಂದ ಕಾಯಕವನ್ನು ಮಾಡಬೇಕು;

ಕಾಯಕ ಎಂದರೆ ವ್ಯಕ್ತಿಯು ಮಾಡುವ ದುಡಿಮೆಯು ಅವನಿಗೆ, ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವಂತಿರಬೇಕು;

ಇಂದ್ರಿಯಗಳು=ಕಣ್ಣು, ಕಿವಿ, ಮೂಗು, ನಾಲಗೆ, ತೊಗಲು ಎಂಬ ಅಯ್ದು ಬಗೆಯ ಅಂಗಗಳು; ಕಟ್ಟನ್+ಇಕ್ಕಿ; ಕಟ್ಟು=ಹತೋಟಿ/ನಿಯಂತ್ರಣ; ಇಕ್ಕಿ= ಹಾಕುವುದು/ಇಡುವುದು;

ಇಂದ್ರಿಯಂಗಳಿಗೆ ಕಟ್ಟನಿಕ್ಕಿ=ವ್ಯಕ್ತಿಯ ದೇಹ ಮತ್ತು ಮನದಲ್ಲಿ ಒಳಿತು ಕೆಡುಕಿನ ಕಾಮನೆಗಳು ಮೂಡುವುದಕ್ಕೆ ಕಾರಣವಾಗುವ ಕಣ್ಣು, ಕಿವಿ, ಮೂಗು, ನಾಲಗೆ, ತೊಗಲನ್ನು ಹತೋಟಿಯಲ್ಲಿಟ್ಟುಕೊಂಡು; ಅಂದರೆ ಕಣ್ಣಿನಿಂದ ನೋಡುವ ನೋಟ; ಕಿವಿಯಿಂದ ಕೇಳುವ ಮಾತು; ಮೂಗಿನಿಂದ ಗ್ರಹಿಸುವ ವಾಸನೆ; ನಾಲಗೆಯಿಂದ ಸವಿಯುವ ರುಚಿ; ತೊಗಲಿನಿಂದ ಪಡೆಯುವ ನಂಟು–ಇವೆಲ್ಲವೂ ಕೆಟ್ಟದ್ದರ ಕಡೆಗೆ ಹೋಗದಂತೆ ಮನಸ್ಸನ್ನು ತಡೆದಿಟ್ಟುಕೊಂಡು;

ಆತ್ಮ=ಮನಸ್ಸು; ಸಂದೇಹ=ಅನುಮಾನ/ಸಂಶಯ; ಆತ್ಮನ ಸಂದೇಹ= ಮನದಲ್ಲಿ ಮೂಡುವ ಒಳಿತು ಕೆಡುಕಿನ ಒಳಮಿಡಿತಗಳ ಇಬ್ಬಗೆಯ ತಾಕಲಾಟ/ ಯಾವುದನ್ನು ಮಾಡಲಿ–ಯಾವುದನ್ನು ಬಿಡಲಿ ಎಂಬ ದ್ವಂದ್ವ;

ಬಿಡಿಸಿ=ನಿವಾರಿಸಿ/ಹೋಗಲಾಡಿಸಿ;

ಆತ್ಮನ ಸಂದೇಹವ ಬಿಡಿಸಿ ಕ್ರೀಯ ಮಾಡಬೇಕು=ಮನದಲ್ಲಿ ಮೂಡುವ ಕೆಟ್ಟ ಒಳಮಿಡಿತಗಳನ್ನು ನಿವಾರಿಸಿಕೊಂಡು, ತನ್ನನ್ನು ಒಳಗೊಂಡಂತೆ ಎಲ್ಲರ ಒಳಿತಿಗೆ ನೆರವಾಗುವಂತಹ ಒಳ್ಳೆಯ ಕಾಯಕವನ್ನು ಮಾಡಬೇಕು;

ಹೀಂಗೆ+ಅಲ್ಲದೆ; ಹೀಂಗೆ=ಈ ರೀತಿ/ಈ ಬಗೆ; ವ್ರತ+ಆಚಾರಿ+ಅಲ್ಲ; ಆಚಾರಿ=ಆಚಾರವುಳ್ಳವನು; ವ್ರತಾಚಾರಿ=ವ್ರತವನ್ನು ಮಾಡುವವನು;

ಹೀಂಗಲ್ಲದೆ ವ್ರತಾಚಾರಿಯಲ್ಲ=ತನು ಮತ್ತು ಮನವನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳದವನು ವ್ರತಾಚಾರಿಯಲ್ಲ;

ಹರಿ=ಸಾಗು/ಚಲಿಸು; ನುಡಿ=ಮಾತಾಡು;

ಮನಕ್ಕೆ ಬಂದಂತೆ ಹರಿದು, ಬಾಯಿಗೆ ಬಂದಂತೆ ನುಡಿದು=ವ್ಯಕ್ತಿಯು ತನ್ನ ಮನದಲ್ಲಿ ಮೂಡಿಬಂದ ಕೆಟ್ಟ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳದೆ

ಮತ್ತು ಇತರರೊಡನೆ ಯಾವ ಮಾತುಗಳನ್ನು ಆಡಬೇಕು ಇಲ್ಲವೇ ಆಡಬಾರದು ಎಂಬ ಎಚ್ಚರವಿಲ್ಲದೆ, ಜನರ ಮನಸ್ಸನ್ನು ಗಾಸಿಗೊಳಿಸುವಂತಹ ಹಾಗೂ ಕೇಡನ್ನು ಬಗೆಯುವಂತಹ ಕೆಟ್ಟ ಮಾತನಾಡುವುದು; ಇಂತು+ಈ; ನಾ=ನಾನು; ವ್ರತಿ+ಎಂದರೆ; ವ್ರತಿ=ವ್ರತವನ್ನು ಮಾಡುವವನು;

ಇಂತೀ ನಾ ವ್ರತಿಯೆಂದರೆ=ಈ ರೀತಿಯಲ್ಲಿ ವ್ಯಕ್ತಿಯು ಸಹಮಾನವರ ಬಗ್ಗೆ ಕೆಟ್ಟ ಮಾತನ್ನಾಡುತ್ತ ಮತ್ತು ಸಮಾಜದಲ್ಲಿ ಕೇಡಿನ ಕೆಲಸಗಳನ್ನು ಮಾಡುತ್ತ, "ನಾನು ದೇವರ ವ್ರತವನ್ನು ಕ್ರಮತಪ್ಪದೆ ಮಾಡುವ ವ್ರತಾಚಾರಿ" ಎಂದು ಹೇಳಿಕೊಂಡರೆ; ಅಂದರೆ ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳದೆ, ದೇವರ ಹೆಸರಿನಲ್ಲಿ ದೊಡ್ಡದಾಗಿ ವ್ರತವನ್ನು ಮಾಡುತ್ತ ಮೆರೆಯುತ್ತಿದ್ದರೆ;

ಮೂಗನ್+ಅರಿಯದೆ; ಅರಿ=ಕತ್ತರಿಸು; **ಮೂಗನ್ನು ಅರಿಯುವುದು**= ಮೂಗನ್ನು ಕತ್ತರಿಸುವುದು. ಇದೊಂದು ನುಡಿಗಟ್ಟು. ಅಹಂಕಾರದಿಂದ ಮೆರೆಯು ತ್ತಿರುವ ಇಲ್ಲವೇ ಕಪಟತನದ ನಡೆನುಡಿಗಳಿಂದ ಜನರನ್ನು ವಂಚಿಸುತ್ತಿರುವ ವ್ಯಕ್ತಿಯ ಅಹಂಕಾರವನ್ನು ಅಡಗಿಸುವುದು ಇಲ್ಲವೇ ಅವನ ಕೆಟ್ಟ ನಡೆನುಡಿಗಳಿಗೆ ತಕ್ಕ ದಂಡನೆಯನ್ನು ನೀಡುವುದು ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ;

ಮಾಣ್=ಸುಮ್ಮನಿರು; ಮಾಣ=ಅವನು ಸುಮ್ಮನಿರುವುದಿಲ್ಲ/ಅವನು ಬಿಡುವುದಿಲ್ಲ;

ಏಲೇಶ್ವರಲಿಂಗ=ಶಿವನ ಮತ್ತೊಂದು ಹೆಸರು; ಏಲೇಶ್ವರ ಕೇತಯ್ಯನ ವಚನಗಳ ಅಂಕಿತ ನಾಮ;

ಮೂಗನರಿಯದೆ ಮಾಣ ಏಲೇಶ್ವರಲಿಂಗನು=ವ್ರತಾಚಾರಿಯೆಂದು ಹೇಳಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಯನ್ನು ಶಿವನು ದಂಡಿಸದೆ ಬಿಡುವುದಿಲ್ಲ ಎಂಬ ರೂಪಕದ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ. ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿಯು ಮಾಡುವ ಪೂಜೆಯನ್ನು ಶಿವನು ಒಪ್ಪಿಕೊಳ್ಳುವುದಿಲ್ಲವೆಂಬ ನಿಲುವನ್ನು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಹೊಂದಿದ್ದರು. ಏಕೆಂದರೆ ಅವರ ಕಲ್ಪನೆಯ ಶಿವನು "ಒಳ್ಳೆಯ ನಡೆನುಡಿಗಳ ಸಂಕೇತವಾಗಿದ್ದನು."

❖

15. ಒಕ್ಕಲಿಗ ಮುದ್ದಣ್ಣ

ಕಸುಬು: ಹೊಲಗದ್ದೆತೋಟದಲ್ಲಿ ಉತ್ತು ಬಿತ್ತು ಬೆಳೆತೆಗೆಯುವ ಒಕ್ಕಲುತನ/ಬೇಸಾಯ

ವಚನಗಳ ಅಂಕಿತನಾಮ: ಕಾಮಭೀಮ ಜೀವಧನದೊಡೆಯ

ದೊರೆತಿರುವ ವಚನಗಳು: 12

83. ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ
ಕ್ರಿಯ ಬಿಡಲಿಲ್ಲ ಅರಿವ ಮರೆಯಲಿಲ್ಲ
ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ
ಫಲವ ಹೊತ್ತ ಪೈರಿನಂತೆ
ಪೈರನೊಳಕೊಂಡ ಫಲದಂತೆ
ಅರಿವು ಆಚರಣೆಯೆಲ್ಲ ನಿಂದು
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮ ಜೀವಧನನೊಡೆಯನೆಂಬುದ ಭಾವಿಸಲಿಲ್ಲ.

ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ಅರಿವು ಮತ್ತು ಒಳ್ಳೆಯ ಕ್ರಿಯೆಯು ಒಂದರೊಡನೆ ಮತ್ತೊಂದು ಜತೆಗೂಡಿದಾಗ ವ್ಯಕ್ತಿಗೆ ಯಶಸ್ಸು ದೊರಕುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಪೈರು=ಹೊಲಗದ್ದೆಗಳಲ್ಲಿ ಧಾನ್ಯಗಳ ಬೀಜವನ್ನು ಬಿತ್ತಿದಾಗ ಬೆಳೆಯುವ ಸಸ್ಯ; ಬೇಕು+ಎಂಬ+ಅಲ್ಲಿ;

ಅಲ್ಲಿ=ಆ ಸಮಯದಲ್ಲಿ/ಕಾಲದಲ್ಲಿ; ಉಚಿತ+ಅನ್+ಅರಿದು; ಉಚಿತ= ಸರಿಯಾದ ಪ್ರಮಾಣದಲ್ಲಿ; ಅನ್=ಅನ್ನು; ಅರಿದು=ತಿಳಿದು; ಬಿಡಬೇಕು= ಹಾಯಿಸಬೇಕು; ಕ್ರೀ=ಕ್ರಿಯೆ/ಕೆಲಸ; ಕ್ರೀಗೆ=ಕ್ರಿಯೆಗೆ; ಅರಿವು=ತಿಳುವಳಿಕೆ; ಉಭಯ+ಅನ್+ಅರಿದು; ಉಭಯ=ಎರಡು; ಘಟಿಸು=ಹೊಂದಿಕೊಳ್ಳು/ಸೇರು;

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು... ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು=ಹೊಲಗದ್ದೆಗಳಲ್ಲಿ ಬೆಳೆಯುತ್ತಿರುವ ಬಗೆಬಗೆಯ ದವಸ ಧಾನ್ಯಗಳ ಸಣ್ಣ ಪಯಿರುಗಳಿಗೆ ನೀರನ್ನು ಹಾಯಿಸುವಾಗ. ಪಯಿರುಗಳಿಗೆ ಹಾನಿಯಾಗದಂತೆ ಅಂದರೆ ಒಂದೇ ಬಾರಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಾಯಿಸಿದರೆ ಪಯಿರುಗಳು ಬುಡಸಮೇತ ಕೊಚ್ಚಿಹೋಗುತ್ತವೆ ಇಲ್ಲವೇ ಅತಿ ಕಡಿಮೆ ಪ್ರಮಾಣದಲ್ಲಿ ನೀರನ್ನು ಹಾಯಿಸಿದರೆ ಪಯಿರುಗಳ ಬೆಳವಣಿಗೆ ಕುಗ್ಗುತ್ತದೆ. ಆದ್ದರಿಂದ ಪಯಿರುಗಳು ಉಳಿದು ಚೆನ್ನಾಗಿ ತೆಂಡೆಯೊಡೆದು ಬೆಳೆಯುವುದಕ್ಕೆ ಅಗತ್ಯವಾದ ರೀತಿಯಲ್ಲಿ ನೀರನ್ನು ಹಾಯಿಸಬೇಕು ಎಂಬ ಅರಿವು ಮತ್ತು ಎಚ್ಚರವನ್ನು ಹೊಂದಿರಬೇಕು;

ಒಕ್ಕಲಿಗನು ಬೇಸಾಯ ಮಾಡುವಾಗ ಸಣ್ಣ ಪಯಿರುಗಳಿಗೆ ನೀರನ್ನು ಉಣಿಸುವ ಕ್ರಿಯೆಯನ್ನು ಒಂದು ರೂಪಕವನ್ನಾಗಿ ಚಿತ್ರಿಸುತ್ತಾ, ವ್ಯಕ್ತಿಯು ಯಾವುದೇ ಕೆಲಸವನ್ನು ಮಾಡುವಾಗ ಅದನ್ನು ಹೇಗೆ ಮಾಡಬೇಕು ಎಂಬುದನ್ನು ಮೊದಲು ಚೆನ್ನಾಗಿ ಅರಿತುಕೊಂಡು, ಅನಂತರ ಸನ್ನಿವೇಶಕ್ಕೆ ತಕ್ಕಂತೆ ಕ್ರಿಯೆಯಲ್ಲಿ ತೊಡಗಬೇಕು. ಹೀಗೆ ಅರಿವು ಮತ್ತು ಕ್ರಿಯೆಯು ಒಳ್ಳೆಯ ಉದ್ದೇಶದಿಂದ ಸರಿಯಾದ ರೀತಿಯಲ್ಲಿ ಒಂದಕ್ಕೊಂದು ಪೂರಕವಾಗಿದ್ದಾಗ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂಬುದನ್ನು ಹೇಳಲಾಗಿದೆ;

ಏರಿ=ಹರಿದು ಹೋಗುತ್ತಿರುವ ಹೆಚ್ಚಿನ ಪ್ರಮಾಣದ ನೀರನ್ನು ತಡೆಹಿಡಿದು ಕೆರೆಯನ್ನು ಕಟ್ಟುವಾಗ ನಿರ್ಮಿಸುವ ಕಟ್ಟೆ; ಹಿಡಿ+ಅನ್ನಕ್ಕ; ಹಿಡಿ=ಒಳಗೊಳ್ಳು; ಅನ್ನಕ=ವರೆಗೆ; ಸುಖ+ಅಲ್ಲದೆ; ಸುಖ=ನೆಮ್ಮದಿ/ಒಳ್ಳೆಯದು; ಅಲ್ಲದೆ=ಹಾಗೆ ಮಾಡದೆ; ಮೀರಿದರೆ+ಉಂಟೆ; ಮೀರು=ಕಡೆಗಣಿಸು; ಮೀರಿದರುಂಟೆ= ಕಡೆಗಣಿಸಿದರೆ ಆಗುತ್ತದೆಯೇ;

ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ=ಕಟ್ಟೆಯ ಕಸುವಿಗೆ ತಕ್ಕಂತೆ ಕೆರೆಯಲ್ಲಿ ನೀರನ್ನು ತುಂಬಿಸಿದರೆ ಸರಿ. ಇಲ್ಲದಿದ್ದರೆ ಏರಿಯು ಹಾಳಾಗುತ್ತದೆ; ಅಂದರೆ ಕೆರೆಯಲ್ಲಿ ಹೆಚ್ಚಾದ ನೀರು ಹರಿದುಹೋಗಲು ಕೋಡಿಯನ್ನು ನಿರ್ಮಿಸದೆ, ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕೆರೆಯಲ್ಲಿ ತುಂಬಿಸಿದರೆ, ಕಟ್ಟೆಯು ಬಿರುಕುಬಿಟ್ಟು ಕೆಲವೇ ದಿನಗಳಲ್ಲಿ ಏರಿಯು ಒಡೆದು ಹೋಗುತ್ತದೆ. ಆದ್ದರಿಂದ ಕಟ್ಟೆಯು ಹಾಳಾಗದಂತೆ ನೀರನ್ನು ತುಂಬಿಸಬೇಕು ಎಂಬ ಅರಿವು ಮತ್ತು ಎಚ್ಚರವಿರಬೇಕು;

ಕ್ರಿಯೆಯ ಬಿಡಲಿಲ್ಲ... ಅರಿವ ಮರೆಯಲಿಲ್ಲ=ಕೆರೆಗೆ ಏರಿಯನ್ನು ಕಟ್ಟುವಾಗ ವ್ಯಕ್ತಿಯು ವಹಿಸುವ ಎಚ್ಚರದಂತೆಯೇ ಜೀವನದಲ್ಲಿ ಯಾವುದೇ ದುಡಿಮೆಯನ್ನು ಮಾಡುವಾಗ, ಆ ದುಡಿಮೆಯ ಬಗ್ಗೆ ಮೊದಲು ಒಳ್ಳೆಯ ತಿಳುವಳಿಕೆಯನ್ನು ತನ್ನದಾಗಿಸಿಕೊಳ್ಳಬೇಕು. ಅನಂತರ ಅರಿವನ್ನು ಅಳವಡಿಸಿಕೊಂಡು ಕೆಲಸವನ್ನು ಮಾಡಬೇಕು. ಅಂದರೆ ಅರಿವು ಮತ್ತು ಆಚರಣೆಗಳು ಒಂದರೊಡನೆ ಮತ್ತೊಂದು ಸಮಪ್ರಮಾಣದಲ್ಲಿ ಜತೆಗೂಡಿರಬೇಕು; ಅರಿವಿಲ್ಲದೆ ಮಾಡುವ ಕ್ರಿಯೆಯಿಂದ ಇಲ್ಲವೇ ಕ್ರಿಯೆಯಲ್ಲಿ ತೊಡಗದೆ ಕೇವಲ ಅರಿವನ್ನು ಪಡೆದ ಮಾತ್ರದಿಂದಲೇ ಜೀವನದಲ್ಲಿ ಯಶಸ್ಸು ದೊರೆಯುವುದಿಲ್ಲ;

ಕೊಯ್=ಕತ್ತರಿಸು/ಕೊಯ್ಯು; ಕಾವಲು=ಕಾಯುವಿಕೆ/ಇತರರು ಕಳವು ಮಾಡದಂತೆ ಮತ್ತು ಹಕ್ಕಿಗಳು ಹಾಗೂ ಇನ್ನಿತರ ಪ್ರಾಣಿಗಳಿಂದ ವಸ್ತುಗಳನ್ನು ಕಾಪಾಡುವುದು;

ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ=ತೆನೆ ತುಂಬಿ ಹಣ್ಣಾದ ಪಯಿರನ್ನು ಕುಯ್ದು ಒಕ್ಕಣೆ ಮಾಡಿ ಬೆಳೆಯನ್ನು ಪಡೆದ ನಂತರ, ಯಾವ ಬೆಳೆಯೂ ಇಲ್ಲದ ಹೊಲವನ್ನು ಕಾಯಬೇಕಾದ ಅಗತ್ಯವಿಲ್ಲ; ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ. ಹೊಲಗದ್ದೆಯಲ್ಲಿ ಬೆಳೆಯನ್ನು ಒಡ್ಡಿದಾಗ ಬೇಸಾಯಗಾರನು ಎಚ್ಚರದಿಂದ ಇರುವಂತೆಯೇ ಯಾವುದೇ ಒಂದು ಕ್ರಿಯೆಯಲ್ಲಿ ವ್ಯಕ್ತಿಯು ತೊಡಗಿದಾಗ, ಅದು ಮುಗಿದು ಕಯ್ಗೂಡುವ ತನಕ ಎಚ್ಚರದಿಂದ ಇರಬೇಕು;

ಫಲ=ಹಣ್ಣಾದ ಬೆಳೆ; ಹೊರು=ತಳೆ/ಹೊಂದು; ಪೈರು+ಅಂತೆ;

ಫಲವ ಹೊತ್ತ ಪೈರಿನಂತೆ=ತೆನೆತುಂಬಿ ಬೆಳೆದು ಕುಯ್ಲಿಗೆ ಬಂದಿರುವ ಪಯಿರಿನಂತೆ;

ಪೈರನು+ಒಳಕೊಂಡ; ಫಲ+ಅಂತೆ;

ಪೈರನೊಳಕೊಂಡ ಫಲದಂತೆ=ಪಯಿರಿನ ತುತ್ತತುದಿಯಲ್ಲಿ ಕಂಗೊಳಿಸುತ್ತಿರುವ ಹಣ್ಣಾದ ಬೆಳೆಯಂತೆ;

ಆಚರಣೆ+ಎಲ್ಲ; ಆಚರಣೆ=ಕ್ರಿಯೆ; ನಿಂದು=ನೆಲೆಗೊಂಡು; ಲೇಪನ+ಆದ; ಲೇಪನ=ಬಳಿಯುವಿಕೆ/ಹಚ್ಚುವಿಕೆ/ಸೇರುವಿಕೆ; ಮತ್ತೆ=ಪುನಃ/ನಂತರ ತರುವಾಯ;

ಫಲವ ಹೊತ್ತ ಪೈರಿನಂತೆ ಪೈರನೊಳಕೊಂಡ ಫಲದಂತೆ ಅರಿವು ಆಚರಣೆಯೆಲ್ಲ ನಿಂದು ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ=ಬೆಳೆದು ಹಣ್ಣಾದ ಪಯಿರಿನಲ್ಲಿ ತುಂಬಿದ ತೆನೆಯು ಒಂದಾಗಿರುವಂತೆ ಅರಿವು ಮತ್ತು ಆಚರಣೆಗಳು ಒಂದರೊಡನೆ ಮತ್ತೊಂದು ಜತೆಗೂಡಿದ ನಂತರ;

ಕಾಮಭೀಮಜೀವಧನ+ಅನ್+ಒಡೆಯನ್+ಎಂಬುದ; ಭಾವಿಸು+ಇಲ್ಲ; ಕಾಮಭೀಮಜೀವಧನದೊಡೆಯ=ಶಿವನಿಗಿದ್ದ ಮತ್ತೊಂದು ಹೆಸರು; ಎಂಬುದ=ಎನ್ನುವುದನ್ನು; ಭಾವಿಸು=ತಿಳಿ/ಆಲೋಚಿಸು;

ಕಾಮಭೀಮ ಜೀವಧನದೊಡೆಯನೆಂಬುದ ಭಾವಿಸಲಿಲ್ಲ=ವ್ಯಕ್ತಿಯ ಬದುಕಿನಲ್ಲಿ ಅರಿವು ಮತ್ತು ಆಚರಣೆಗಳು ಜತೆಗೂಡಿರುವ ಎಡೆಯಲ್ಲಿ ಶಿವನಿದ್ದಾನೆಯೇ ಹೊರತು ಕಲ್ಲು/ಮಣ್ಣು/ಮರ/ಲೋಹದ ವಿಗ್ರಹ ರೂಪದಲ್ಲಿ ಇಲ್ಲವೆಂಬ ನಿಲುವನ್ನು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಹೊಂದಿದ್ದರು ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ;

❖

16. ಕೋಲ ಶಾಂತಯ್ಯ

ಕಸುಬು: ಕಟ್ಟಿಗೆ ಇಲ್ಲವೇ ಕೋಲನ್ನು ಹಿಡಿದು ಕಾಯಕವನ್ನು ಮಾಡುವುದು
ದೊರೆತಿರುವ ವಚನಗಳು: 103
ವಚನಗಳ ಅಂಕಿತನಾಮ: ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.

84. ಜಡೆ ಮುಡಿ ಬೋಳು ಹೇಗಿದ್ದರೇನೊ
ನಡೆ ನುಡಿ ಸಿದ್ಧಾಂತವಾದಡೆ ಸಾಕು
ಆತ ಪರಂಜ್ಯೋತಿ ಗುರುವಹ
ಆ ಇರವ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.

ವ್ಯಕ್ತಿಯು ಜಗತ್ತಿನಲ್ಲಿರುವ ಯಾವುದೇ ಜಾತಿ, ಮತ, ದೇವರ ಬಗೆಗಿನ ಸಂಪ್ರದಾಯದ ಆಚರಣೆಯಲ್ಲಿ ತೊಡಗಿದ್ದರೂ, ತನ್ನ ನಿತ್ಯ ಜೀವನದಲ್ಲಿ ಸಾಮಾಜಿಕವಾಗಿ ಒಳ್ಳೆಯ ನಡೆನುಡಿಯಿಂದ ಬಾಳುವುದು ಎಲ್ಲಕ್ಕಿಂತ ದೊಡ್ಡದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

"ಒಳ್ಳೆಯ ನಡೆನುಡಿ" ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ಅವನ ಮತ್ತು ಅವನ ಕುಟುಂಬದ ಹಿತವನ್ನು ಕಾಪಾಡುವಂತೆಯೇ ಸಹಮಾನವರ ಮತ್ತು ಸಮಾಜದ ಹಿತವನ್ನು ಕಾಪಾಡುವುದು.

ಜಡೆ=ತಲೆಯ ಕೂದಲನ್ನು ಹೆಣೆದು ಕಟ್ಟಿ ಬೆನ್ನಿನ ಮೇಲೆ ಉದ್ದಕ್ಕೆ ಬಿಡುವುದು; ಮುಡಿ=ತಲೆಯ ಕೂದಲನ್ನು ಗಂಟುಹಾಕಿ ತಲೆಯ ಮೇಲೆ ಉದ್ದಕ್ಕೆ ಎತ್ತಿ ಕಟ್ಟುವುದು; ಬೋಳು=ತಲೆಯ ಕೂದಲನ್ನು ತೆಗೆಸಿ, ಬೋಳುಬುಂಡೆಯನ್ನು ಬಿಡುವುದು; ಹೇಗೆ+ಇದ್ದರೆ+ಏನೋ; ಹೇಗೆ=ಯಾವ ಬಗೆಯಲ್ಲಿ/ಯಾವ ರೀತಿಯಲ್ಲಿ;

ಜಡೆ ಮುಡಿ ಬೋಳು ಹೇಗಿದ್ದರೇನೋ=ಜನರು ತಾವು ಎಲ್ಲಾ ಬಗೆಯ ಆಸೆಗಳನ್ನು ತೊರೆದವರು ಎಂಬುದರ ಸಂಕೇತವಾಗಿ ಬಹುಬಗೆಯ ಆಚರಣೆ ಗಳಲ್ಲಿ ತೊಡಗಿ, ಅದಕ್ಕೆ ತಕ್ಕಂತೆ ಉಡುಗೆ ತೊಡುಗೆಗಳನ್ನು ತೊಡುತ್ತಾರೆ. ಕೆಲವರು ತಲೆಗೂದಲನ್ನು ಹೆಣೆದು ಉದ್ದನೆಯ ಜಡೆಯನ್ನಾಗಿ ಬಿಟ್ಟಿರುತ್ತಾರೆ; ಮತ್ತೆ ಕೆಲವರು ತಲೆಗೂದಲನ್ನು ಗಂಟುಹಾಕಿ, ತಲೆಯ ಮೇಲೆ ಉದ್ದಕ್ಕೆ ಎತ್ತಿಕಟ್ಟಿರುತ್ತಾರೆ; ಇನ್ನು ಕೆಲವರು ತಲೆಗೂದಲನ್ನು ತೆಗೆಸಿ, ಮಂಡೆಬೋಳಾಗಿರುತ್ತಾರೆ. ಈ ರೀತಿ ತಲೆಗೂದಲನ್ನು ಗಂಟುಕಟ್ಟುವ ಇಲ್ಲವೇ ತಲೆಗೂದಲನ್ನು ತೆಗೆಸುವ ರೀತಿಯು ಸಂಪ್ರದಾಯದ ಆಚರಣೆಯೇ ಹೊರತು, ಇದಕ್ಕೂ ವ್ಯಕ್ತಿಯ ಒಳ್ಳೆಯ ನಡೆನುಡಿಗೂ ಯಾವುದೇ ನಂಟಿಲ್ಲ;

ನಡೆ=ಮಾಡುವ ಕೆಲಸ; ನುಡಿ=ಆಡುವ ಮಾತು; ಸಿದ್ಧಾಂತ+ಆದಡೆ; ಸಿದ್ಧಾಂತ=ತತ್ವ/ಗಟ್ಟಿಯಾದ ನಿಲುವು; ಆದಡೆ=ಆದರೆ/ಆಗಿದ್ದರೆ;

ನಡೆ ನುಡಿ ಸಿದ್ಧಾಂತವಾದಡೆ ಸಾಕು=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ತನ್ನ ಮತ್ತು ತನ್ನ ಕುಟುಂಬದ ಒಲವು, ನಲಿವು, ನೆಮ್ಮದಿಗಾಗಿ ಬಾಳುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳಬೇಕು ಎಂಬ ಗಟ್ಟಿಯಾದ ನಿಲುವನ್ನು ತಳೆದು, ಅದರಂತೆಯೇ ಬಾಳುತ್ತಿದ್ದರೆ, ಅದು ಬಹು ದೊಡ್ಡದು . ಮಾನವ ಸಮುದಾಯದ ನೆಮ್ಮದಿಯ ಬದುಕಿಗೆ ಬೇಕಾಗಿರುವುದು ಜನರ ಒಳ್ಳೆಯ ನಡೆನುಡಿಗಳೇ ಹೊರತು, ಸಂಪ್ರದಾಯದ ಆಚರಣೆಗಳಲ್ಲವೆಂಬ ವಾಸ್ತವವನ್ನು ಈ ನುಡಿಗಳು ಸೂಚಿಸುತ್ತಿವೆ;

ಆತ=ಅವನು; ಪರಂಜ್ಯೋತಿ=ದಿವ್ಯವಾದ ತೇಜಸ್ಸು/ಕಾಂತಿ/ಬೆಳಕು; ಗುರು+ಅಹ; ಗುರು=ತನ್ನ ಬಳಿ ವಿದ್ಯೆಯನ್ನು ಕಲಿಯಲು ಬಂದವರ ವ್ಯಕ್ತಿತ್ವವನ್ನು ಒಳ್ಳೆಯ ನಡೆನುಡಿಗಳಿಂದ ರೂಪಿಸುವವನು; ಅಹ=ಆಗುವನು;

ಆತ ಪರಂಜ್ಯೋತಿ ಗುರುವಹ=ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ. ಯಾವ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ

ದುಡಿಮೆಯು ಜಗತ್ತಿನಲ್ಲಿರುವ ಎಲ್ಲರಿಗೂ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ನೀಡುವುದಕ್ಕೆ ನೆರವಾಗುತ್ತದೆಯೋ, ಅಂತಹ ವ್ಯಕ್ತಿಯ ನಡೆನುಡಿಗಳೇ ಲೋಕಕ್ಕೆ ಒಳಿತಿನ ದಾರಿದೀಪವಾಗುತ್ತವೆ;

ಇರವು=ರೀತಿ/ಬಗೆ; ನೀನ್+ಅರಿ; ಅರಿ=ತಿಳಿ;

ಆ ಇರವ ನಿನ್ನ ನೀನರಿ=ಆ ರೀತಿಯ ಸತ್ಯವನ್ನು ನೀನು ತಿಳಿ. ಅಂದರೆ ಬಹಿರಂಗದ ಉಡುಗೆ ತೊಡುಗೆ ಮತ್ತು ಸಂಪ್ರದಾಯದ ಆಚರಣೆಗಳನ್ನು ಕಂಡು ಯಾವುದೇ ವ್ಯಕ್ತಿಯನ್ನು ಒಳ್ಳೆಯವನೆಂದು ತಿಳಿಯಬೇಡ. ಜೀವನದಲ್ಲಿ ಜಾತಿ ಮತ ದೇವರ ಸಂಪ್ರದಾಯದ ಆಚರಣೆಗಳನ್ನು ಪಾಲಿಸುವುದು ದೊಡ್ಡದಲ್ಲ, ಒಳ್ಳೆಯ ನಡೆನುಡಿಗಳಿಂದ ಬಾಳುವುದು ದೊಡ್ಡದು ಎಂಬ ದಿಟವನ್ನು ಮನಗಂಡು, ಅದರಂತೆ ನಿನ್ನ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊ;

ಭೀಮೇಶ್ವರಲಿಂಗ=ಶಿವನ ಮತ್ತೊಂದು ಹೆಸರು;

ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ=ಕೋಲಶಾಂತಯ್ಯನ ವಚನಗಳ ಅಂಕಿತನಾಮ;

❖

17. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

ವಚನಕಾರ್ತಿಯ ಹೆಸರು ತಿಳಿದುಬಂದಿಲ್ಲ.

ಗಂಡ: ಗಜೇಶ ಮಸಣಯ್ಯ

ವಚನಗಳ ಅಂಕಿತನಾಮ: ಮಸಣಪ್ರಿಯ ಗಜೇಶ್ವರ

ದೊರೆತಿರುವ ವಚನಗಳು: 10

85. ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ
ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇದು ಕಾರಣ

ಪರಂಜ್ಯೋತಿ ಪರಮ ಕರುಣಿ ಪರಮ ಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು ಮರೆದಡೆ
ಕಾಣಬಾರದು
ಅರಿವಿಂದ ಕಂಡೊದಗಿದ ಸುಖವು ಮಸಣಪ್ರಿಯ ಗಜೇಶ್ವರಾ.

ಒಳ್ಳೆಯ ಅರಿವನ್ನು ಪಡೆದು, ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟು ಕೊಂಡು ಒಳ್ಳೆಯ ಕಾಯಕದ ಮೂಲಕ ತನ್ನ ಜೀವನವನ್ನು ರೂಪಿಸಿಕೊಳ್ಳುವ ವ್ಯಕ್ತಿಯು ಯಾವುದೇ ಬಗೆಯ ವಿರಕ್ತಿಯನ್ನು ಹೊಂದದೆ, ಜಗತ್ತಿನಲ್ಲಿ ಎಲ್ಲದರೊಡನೆ ಮತ್ತು ಎಲ್ಲರೊಡನೆ ಜತೆಗೂಡಿ ಬಾಳಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ವಿರಕ್ತಿ' ಎಂದರೆ "ಹೆಣ್ಣು ಹೊನ್ನು ಮಣ್ಣುಗಳಿಂದ ದೂರವಿರುವುದು; ದೇಹದಲ್ಲಿ ತುಡಿಯುವ ಪಂಚೇಂದ್ರಿಯಗಳನ್ನು ದಮನ ಮಾಡಿ ಉಪವಾಸ, ಜಾಗರಣೆ, ಜಪತಪಗಳಿಂದ ದೇಹವನ್ನು ದಂಡಿಸುವುದು; ಜಗತ್ತಿನ ಜನಸಮುದಾಯ ದೊಡನೆ ಜತೆಗೂಡದೆ ಏಕಾಂಗಿಯಾಗಿ ಇರುವುದು."

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಇಂತಹ ವಿರಕ್ತಿಯನ್ನು ನಿರಾಕರಿಸಿದ್ದರು. ಏಕೆಂದರೆ ಈ ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಒಳ್ಳೆಯ ನಡೆ ನುಡಿಗಳಿಂದ ಕೂಡಿ ಕ್ರಿಯಾಶೀಲನಾಗಿ ಬಾಳುವಂತಾಗಬೇಕೆ ಹೊರತು ವಿರಕ್ತನಾಗಿ ಲೋಕ ವ್ಯವಹಾರಗಳಿಂದ ದೂರಸರಿಯಬಾರದು ಎಂಬ ನಿಲುವನ್ನು ಹೊಂದಿದ್ದರು.

ಆದ್ದರಿಂದಲೇ ಅವರ ಪಾಲಿನ ದೇವರಾದ ಶಿವನು ಕಲ್ಲು, ಮಣ್ಣು, ಮರ, ಲೋಹದಿಂದ ಮಾಡಿದ ವಿಗ್ರಹ ರೂಪಿಯಾಗಿರಲಿಲ್ಲ. ಜನರು ನಿತ್ಯ ಜೀವನದಲ್ಲಿ ಆಚರಿಸುವ ಒಳ್ಳೆಯ ನಡೆನುಡಿಗಳಲ್ಲಿ ಶಿವನ ಪ್ರತಿರೂಪವನ್ನು ಅವರು ಕಾಣುತ್ತಿದ್ದರು. ಆದ್ದರಿಂದಲೇ ಶಿವಶರಣಶರಣೆಯರು ಹೆಣ್ಣು ಹೊನ್ನು ಮಣ್ಣನ್ನು ನಿರಾಕರಿಸದೆ, ಅವುಗಳೊಡನೆ ಜತೆಗೂಡಿ ಸಾಮರಸ್ಯದಿಂದ ಬಾಳಿದರು.

ಜಗತ್ತಿನಲ್ಲಿ ಮನುಕುಲ ಉಳಿದು ಬೆಳೆದು ಬಾಳುವುದಕ್ಕೆ ಗಂಡು ಮತ್ತು ಹೆಣ್ಣು ಇಬ್ಬರೂ ಇರಲೇ ಬೇಕು; ಪ್ರತಿಯೊಬ್ಬ ಮಾನವ ಜೀವಿಯು ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ ಮತ್ತು ಆರೋಗ್ಯವನ್ನು ಪಡೆಯಬೇಕಾದರೆ, ಎಲ್ಲ ಬಗೆಯ ದವಸ ಧಾನ್ಯಗಳನ್ನು ಕೊಡುವ 'ಮಣ್ಣು' ಅಂದರೆ 'ಭೂಮಿ' ಬೇಕೇ ಬೇಕು ಮತ್ತು

ಮನುಕುಲದ ವ್ಯವಹಾರ ನಡೆಯಬೇಕಾದರೆ ಹೊನ್ನು ಅಂದರೆ ಸಂಪತ್ತು ಬೇಕು.

"ಹೆಣ್ಣು ಹೊನ್ನು ಮಣ್ಣನ್ನು ಬೇಡ" ಎನ್ನುವವರಲ್ಲಿ ಬಹುತೇಕ ಮಂದಿ ಹೊರನೋಟಕ್ಕೆ ವಿರಕ್ತರಂತೆ ನಟಿಸುತ್ತ, ತಮ್ಮ ಒಳ ಬದುಕಿನಲ್ಲಿ ಇವೆಲ್ಲಕ್ಕೂ ಹಂಬಲಿಸುತ್ತ, ಜನರನ್ನು ಮರುಳುಮಾಡುವುದರ ಜತೆಗೆ ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತ, ನಿತ್ಯ ಜೀವನದಲ್ಲಿ ಕಪಟಿಗಳಾಗಿ ಬಾಳುತ್ತಿರುತ್ತಾರೆ. ಮಾನವ ಸಹಜವಾದ ನಡೆನುಡಿಗಳಿಂದ ದೂರವಾಗಿ, ಬದುಕಿನ ಉದ್ದಕ್ಕೂ ವಿರಕ್ತಿಯ ಮೊಗವಾಡವನ್ನು ತೊಟ್ಟುಕೊಂಡು 'ಹೊರಗೊಂದು-ಒಳಗೊಂದು' ಎಂಬ ಇಬ್ಬಗೆಯ ಬದುಕನ್ನು ನಡೆಸುತ್ತಿರುತ್ತಾರೆ. ವಿರಕ್ತಿಯ ಉಡುಗೆ ತೊಡುಗೆಯನ್ನು ತೊಟ್ಟು, ಜಾತಿಮತದ ಒಕ್ಕೂಟಗಳನ್ನು ಮುನ್ನಡೆಸುತ್ತಿರುವ ವ್ಯಕ್ತಿಗಳು ದೊಡ್ಡ ಪ್ರಮಾಣದ ಆಸ್ತಿಪಾಸ್ತಿಗಳ ಜವಾಬ್ದಾರಿಯನ್ನು ಹೊತ್ತುಕೊಂಡು ಆಡಂಬರದ ಜೀವನಕ್ಕೆ ಮನಸೋತಿದ್ದಾರೆ.

ಯಾವೊಬ್ಬ ಮಾನವ ಜೀವಿಯು ಹುಟ್ಟಿನಿಂದ ಸಾವಿನ ಕೊನೆಗಳಿಗೆಯ ತನಕ ಪಂಚೇಂದ್ರಿಯಗಳ ಸಂವೇದನೆಗೆ ಒಳಗಾಗದೆ ಇರಲು ಆಗುವುದಿಲ್ಲ. ಆದ್ದರಿಂದ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುವುದನ್ನು ಕಲಿಯಬೇಕೆ ಹೊರತು, "ಇಂದ್ರಿಯಗಳ ಸಂವೇದನೆಗಳಿಗೆ ನಾನು ಒಳಗಾಗುವುದಿಲ್ಲ" ಎಂಬುದು ಬೂಟಾಟಿಕೆಯ ಮಾತಾಗುತ್ತದೆ. ಇದೆಲ್ಲವನ್ನೂ ಗಮನಿಸಿದ್ದ ಶಿವಶರಣಶರಣೆಯರು "ವ್ಯಕ್ತಿಯ ಒಳ್ಳೆಯ ನಡೆನುಡಿಗಳಿಗೆ ಹೆಣ್ಣು ಮಣ್ಣು ಹೊನ್ನು ಎಂದಿಗೂ ಅಡ್ಡಿಯಾಗುವುದಿಲ್ಲ. ಅವುಗಳೊಡನೆ ಹಿತಮಿತವಾಗಿ ಸಂಯಮದಿಂದ ಬಾಳುವ ಅರಿವು ಮತ್ತು ಎಚ್ಚರವನ್ನು ಹೊಂದಿರಬೇಕು" ಎಂಬ ನಿಲುವನ್ನು ತಳೆದಿದ್ದರು.

ಜಗತ್ತಿನಲ್ಲಿ ಮಾನವ ಸಮುದಾಯವು ಒಲವು ನಲಿವು ನೆಮ್ಮದಿಯಿಂದ ಬಾಳಬೇಕಾದರೆ ಅಗತ್ಯವಾಗಿ ಬೇಕಾಗಿರುವುದು "ಪರಸ್ಪರ ಪ್ರೀತಿ, ಕರುಣೆ ಮತ್ತು ಗೆಳೆತನದಿಂದ ಕೂಡಿದ ನಡೆನುಡಿ" ಎಂಬುದನ್ನು ಶಿವಶರಣಶರಣೆಯರು ಅರಿತು ಆಚರಿಸುತ್ತಿದ್ದರು. ಆದ್ದರಿಂದಲೇ ಅವರ ಲಿಂಗವನ್ನು ಅಂದರೆ ಶಿವನನ್ನು "ಕೋಪತಾಪಗಳಿಲ್ಲದ, ಕರುಣೆಯಿಂದ ಕೂಡಿದ ಶಾಂತರೂಪದ ಜನರ ನಡೆನುಡಿಗಳಲ್ಲಿ ಕಾಣುತ್ತಾರೆ."

ಹೊನ್ನು=ಚಿನ್ನ/ಸಂಪತ್ತು; ಬಿಟ್ಟು=ತ್ಯಜಿಸಿ/ತೊರೆದು; ಲಿಂಗವನು+ಒಲಿಸಬೇಕು +ಎಂಬರು; ಲಿಂಗ=ಶಿವ; ಒಲಿಸು=ಮೆಚ್ಚಿಸು;

ಲಿಂಗವನು ಒಲಿಸಿಕೊಳ್ಳುವುದು=ವ್ಯಕ್ತಿಯು ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳುವುದರ ಮೂಲಕ ಲಿಂಗದ ಮೆಚ್ಚುಗೆಗೆ ಪಾತ್ರನಾಗುವುದು; ಎಂಬರು=ಎನ್ನುವರು; ವಿರುದ್ಧ=ಬೇರೆಯಾದುದು/ಅಡ್ಡಿಯಾಗಿರುವುದು;

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು... ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ=ಲಿಂಗವನ್ನು ಒಲಿಸಿಕೊಳ್ಳಲು ಹೊನ್ನನ್ನು ಬಿಡಬೇಕೆಂದು ಎನ್ನುತ್ತಾರಲ್ಲ... ಲಿಂಗವನ್ನು ಒಲಿಸಿಕೊಳ್ಳುವಾಗ ಹೊನ್ನು ಹೇಗೆ ತಾನೆ ಅಡ್ಡಬರುತ್ತದೆ; ಹೆಣ್ಣು=ಹೆಂಗಸು; ಮಣ್ಣು=ಭೂಮಿ;

ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು... ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ=ಲಿಂಗವನ್ನು ಒಲಿಸಿಕೊಳ್ಳಲು ಹೆಣ್ಣನ್ನು ಬಿಡಬೇಕೆಂದು ಎನ್ನುತ್ತಾರಲ್ಲ... ಲಿಂಗವನ್ನು ಒಲಿಸಿಕೊಳ್ಳುವಾಗ ಹೆಣ್ಣು ಹೇಗೆ ತಾನೆ ಅಡ್ಡಬರುತ್ತದೆ;

ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು... ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ= ಲಿಂಗವನ್ನು ಒಲಿಸಿಕೊಳ್ಳಲು ಮಣ್ಣನ್ನು ಬಿಡಬೇಕೆಂದು ಎನ್ನುತ್ತಾರಲ್ಲ ಲಿಂಗವನ್ನು ಒಲಿಸಿಕೊಳ್ಳುವಾಗ ಮಣ್ಣು ಹೇಗೆ ತಾನೆ ಅಡ್ಡಬರುತ್ತದೆ;

ಅಂಗ=ದೇಹ; ಇಂದ್ರಿಯಗಳು=ನೋಡುವ ಕಣ್ಣು, ಕೇಳುವ ಕಿವಿ, ಸವಿಯುವ ನಾಲಗೆ, ಮುಟ್ಟುವ ತೊಗಲು, ವಾಸನೆಯನ್ನು ಗ್ರಹಿಸುವ ಮೂಗು ಎಂಬ ಅಯ್ದು ಬಗೆಯ ಅವಯವಗಳು;

ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು... ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ=ಲಿಂಗವನ್ನು ಒಲಿಸಿಕೊಳ್ಳಲು ದೇಹವನ್ನು ಬಿಡಬೇಕೆಂದು ಎನ್ನುತ್ತಾರಲ್ಲ... ಲಿಂಗವನ್ನು ಒಲಿಸಿಕೊಳ್ಳುವಾಗ ದೇಹ ಹೇಗೆ ತಾನೆ ಅಡ್ಡಬರುತ್ತದೆ;

ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ=ಲಿಂಗವನ್ನು ಒಲಿಸಿಕೊಳ್ಳಲು ಪಂಚೇಂದ್ರಿಯಗಳನ್ನು ಬಿಡಬೇಕೆಂದು ಎನ್ನುತ್ತಾರಲ್ಲ...ಲಿಂಗವನ್ನು ಒಲಿಸಿಕೊಳ್ಳುವಾಗ ಇಂದ್ರಿಯಗಳು ಹೇಗೆ ತಾನೆ ಅಡ್ಡಬರುತ್ತವೆ;

ಜಗ=ಪ್ರಪಂಚ/ಜೀವನದಲ್ಲಿನ ವ್ಯವಹಾರ;

ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ=ಲಿಂಗವನ್ನು ಒಲಿಸಿಕೊಳ್ಳಲು ಜಗವನ್ನು ಬಿಡಬೇಕೆಂದು ಎನ್ನುತ್ತಾರಲ್ಲ... ಲಿಂಗವನ್ನು ಒಲಿಸಿಕೊಳ್ಳುವಾಗ ಜಗತ್ತು ಹೇಗೆ ತಾನೆ ಅಡ್ಡಬರುತ್ತದೆ;

ಪರಂಜ್ಯೋತಿ=ಅಪಾರವಾದ ತೇಜಸ್ಸುಳ್ಳವನು; ಪರಮ=ಅತ್ಯುತ್ತಮ; ಕರುಣಿ=ದಯೆಯುಳ್ಳವನು; ಶಾಂತ=ತಳಮಳವಿಲ್ಲದಿರುವುದು; ಶಾಂತನು=ತಳಮಳವಿಲ್ಲದೆ ನೆಮ್ಮದಿಯಿಂದಿರುವವನು;

ಪರಂಜ್ಯೋತಿ ಪರಮ ಕರುಣಿ ಪರಮ ಶಾಂತನೆಂಬ ಲಿಂಗವು=ಲಿಂಗದ ಚೇತನವು ಕಲ್ಲು/ಮಣ್ಣು/ಲೋಹ/ಮರದ ರೂಪದ ವಿಗ್ರಹದಲ್ಲಿಲ್ಲ. ಮಾನವರ ಪರಸ್ಪರ ಒಲವು, ಕರುಣೆ, ಗೆಳೆತನದಿಂದ ಕೂಡಿದ ಶಾಂತಚಿತ್ತದ ನಡೆನುಡಿಗಳ ರೂಪದಲ್ಲಿ ನೆಲೆಸಿದೆ;

ಕೋಪ=ಸಿಟ್ಟು; ಮುನಿಸು+ಅನ್+ಅರಿದಡೆ; ಮುನಿಸು=ಇತರರಿಂದ ದೂರವಿರುವುದು; ಅನ್=ಅನ್ನು; ಅರಿದಡೆ=ತಿಳಿದರೆ; ಕಾಣು=ನೋಡು/ಚಿಂತಿಸಿ ತಿಳಿ; ಮರೆದಡೆ=ಮರೆತುಬಿಟ್ಟರೆ;

ಕೋಪದ ಮುನಿಸನರಿದಡೆ ಕಾಣಬಹುದು=ವ್ಯಕ್ತಿಯ ಕೋಪತಾಪದ ನಡೆನುಡಿಗಳಿಗೆ ಕಾರಣವಾದ ಸಂಗತಿಗಳನ್ನು ಮತ್ತು ಅದರಿಂದ ಉಂಟಾಗುವ ಕೆಟ್ಟ ಪರಿಣಾಮಗಳನ್ನು ಅರಿತುಕೊಂಡಾಗ ಜೀವನದಲ್ಲಿನ ಎಲ್ಲ ಬಗೆಯ ಸಂಕಟಕ್ಕೆ ವ್ಯಕ್ತಿಯ ಮನಸ್ಸಿನಲ್ಲಿ ಮೂಡುವ ಒಳಮಿಡಿತಗಳೇ ಕಾರಣ ಎಂಬ ದಿಟದ ಅರಿವಾಗುತ್ತದೆ;

ಮರೆದಡೆ ಕಾಣಬಾರದು=ವ್ಯಕ್ತಿಯು ತನ್ನ ನಡೆನುಡಿಗಳನ್ನು ತಾನೇ ಒರೆಹಚ್ಚಿ ನೋಡಿಕೊಳ್ಳುವುದನ್ನು ಮರೆತರೆ, ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದು ಒಳಿತು–ಯಾವುದು ಕೆಡುಕು ಎಂಬುದನ್ನು ತಿಳಿಯಲು ಆಗುವುದಿಲ್ಲ;

ಅರಿವಿಂದ=ತಿಳುವಳಿಕೆಯಿಂದ; ಕಂಡು+ಒದಗಿದ; ಒದಗು=ಉಂಟಾಗು/ದೊರಕು; ಸುಖ=ಒಲವು ನಲಿವು ನೆಮ್ಮದಿಯ ಬದುಕು;

ಅರಿವಿಂದ ಕಂಡೊದಗಿದ ಸುಖವ=ವ್ಯಕ್ತಿಯು ಒಳ್ಳೆಯ ಅರಿವನ್ನು ಪಡೆದುಕೊಂಡು, ಅದನ್ನು ಜೀವನದಲ್ಲಿ ಆಚರಣೆಗೆ ತಂದಾಗ ಮಾತ್ರ, ಒಲವು ನಲಿವು ನೆಮ್ಮದಿಯ ಬದುಕನ್ನು ಪಡೆಯುತ್ತಾನೆ. ಇಂತಹ ಜೀವನಕ್ಕೆ ಹೆಣ್ಣು ಮಣ್ಣು ಹೊನ್ನು ಪೂರಕವಾಗಿ ಬರುತ್ತವೆಯೇ ಹೊರತು ಅಡ್ಡಿಯಾಗುವುದಿಲ್ಲ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು;

ಮಸಣಪ್ರಿಯ ಗಜೇಶ್ವರಾ=ಶಿವನ ಮತ್ತೊಂದು ಹೆಸರು/ವಚನಕಾರ್ತಿಯ ವಚನಗಳ ಅಂಕಿತನಾಮ; ❖

18. ಗಾವುದಿ ಮಾಚಯ್ಯ

ದೊರೆತಿರುವ ವಚನಗಳು: 11
ವಚನಗಳ ಅಂಕಿತನಾಮ: ತ್ರಿಪುರಾಂತಕ ಲಿಂಗ

86. ತನ್ನ ದೇಹ ತನಗೆ ಹೊರೆಯಾದ ಮತ್ತೆ ತಾ ಹೊರುವುದೇನು
ತಾ ಹೇಳುವ ಅರಿವು ತನಗೆ ಮರವೆಯಾದ ಮತ್ತೆ ತಾನರಿವುದೇನು
ಇದು ಕಾರಣ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ.

ಮಯ್ ಬಗ್ಗಿಸಿ ದುಡಿಯದೆ ಸೋಂಬೇರಿಯಾಗಿರುವ ಮತ್ತು ಪಡೆದ ಅರಿವನ್ನು ಮನನ ಮಾಡಿಕೊಳ್ಳದೆ ಎಚ್ಚರಗೇಡಿಯಾಗಿರುವ ವ್ಯಕ್ತಿಯು ಜೀವನದಲ್ಲಿ ಏನನ್ನೂ ಪಡೆಯಲಾರನು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ತನ್ನ=ವ್ಯಕ್ತಿಯ; ದೇಹ=ಶರೀರ/ಮಯ್; ಹೊರೆ+ಆದ; ಹೊರೆ=ತೂಕ/ಭಾರ; ಮತ್ತೆ=ಆಮೇಲೆ/ಬಳಿಕ; ತಾ=ತಾನು; ಹೊರುವುದು+ಏನು; ಹೊರುವುದು= ಹೊಣೆಗಾರಿಕೆಯಿಂದ ಕೆಲಸವನ್ನು ಮಾಡುವುದು;

ತನ್ನ ದೇಹ ತನಗೆ ಹೊರೆಯಾದ ಮತ್ತೆ ತಾ ಹೊರುವುದೇನು=ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ. ವ್ಯಕ್ತಿಗೆ ತನ್ನ ಮಯ್ಯೇ ತನಗೆ ಭಾರವಾದರೆ ಅಂದರೆ ಯಾವೊಂದು ಕೆಲಸವನ್ನು ಮಾಡಲು ತೊಡಗದೆ ಜಡವಾದರೆ, ಅಂತಹ

ವ್ಯಕ್ತಿಯು ಯಾವೊಂದು ಜವಾಬ್ದಾರಿಯನ್ನು ಹೊರಲಾರ. ಕುಟುಂಬಕ್ಕೆ ಮತ್ತು ಸಮಾಜಕ್ಕೆ ಹೊರೆಯಾಗುತ್ತಾನೆ;

ಅರಿವು="ಜೀವನದಲ್ಲಿ ಯಾವುದು ಒಳ್ಳೆಯದು-ಯಾವುದು ಕೆಟ್ಟದ್ದು; ಯಾವುದು ವಾಸ್ತವ-ಯಾವುದು ಕಲ್ಪಿತ; ಯಾವುದನ್ನು ಮಾಡಬೇಕು-ಯಾವುದನ್ನು ಮಾಡಬಾರದು" ಎಂಬ ಎಚ್ಚರ ಮತ್ತು ತನಗೆ, ತನ್ನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ಬಯಸುವಂತೆಯೇ ಸಹಮಾನವರ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ತಿಳುವಳಿಕೆ;

ತಾ ಹೇಳುವ=ವ್ಯಕ್ತಿಯು ಇತರರಿಗೆ ಹೇಳುವಂತಹ ಅರಿವಿನ ನುಡಿಗಳು;

ಮರವೆ+ಆದ; ಮರವೆ=ಮರವು/ನೆನಪಿಲ್ಲದಿರುವುದು; ತಾನ್+ಅರಿವುದು+ಏನು; ಅರಿವುದು=ತಿಳಿಯುವುದು/ತಿಳುವಳಿಕೆಯನ್ನು ಪಡೆಯುವುದು; ಅರಿವುದೇನು=ತಿಳುವಳಿಕೆಯನ್ನು ಪಡೆದಿದ್ದರೂ ಅದರಿಂದ ಉಂಟಾದ ಪ್ರಯೋಜನವೇನು;

ತಾ ಹೇಳುವ ಅರಿವು ತನಗೆ ಮರವೆಯಾದ ಮತ್ತೆ ತಾನರಿವುದೇನು=ವ್ಯಕ್ತಿಯು ತಾನು ಇತರರಿಗೆ ಹೇಳುವಂತಹ ತಿಳುವಳಿಕೆಯ ನುಡಿಗಳನ್ನು ತಾನೇ ನೆನಪಿಗೆ ತಂದುಕೊಳ್ಳದೆ ಅಂದರೆ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳದಿದ್ದರೆ, ಅವನು ಪಡೆದ ಅರಿವಿನಿಂದ ಉಂಟಾದ ಪ್ರಯೋಜನವೇನು;

ಇದು ಕಾರಣ=ವ್ಯಕ್ತಿಯು ತನ್ನ ದೇಹವನ್ನು ದಂಡಿಸಿ ಒಳ್ಳೆಯ ಕಾಯಕವನ್ನು ಮಾಡಬೇಕು ಮತ್ತು ತಾನು ಪಡೆದ ಅರಿವಿನಿಂದ ಒಳ್ಳೆಯ ನಡೆನುಡಿ ಯಾವುದೆಂಬುದನ್ನು ತಿಳಿದುಕೊಂಡು ಬಾಳಬೇಕೆಂಬ ಎಚ್ಚರವನ್ನು ಹೊಂದಿರುವುದು;

ತ್ರಿಪುರಾಂತಕ ಲಿಂಗ=ದೇವರಾದ ಶಿವನ ಮತ್ತೊಂದು ಹೆಸರು/ಗಾವುದಿ ಮಾಚಯ್ಯನವರ ವಚನಗಳ ಅಂಕಿತನಾಮ; ಹೇಳಿದುದ=ಹೇಳುತ್ತಿರುವುದನ್ನು; ದಿಟ+ಎನ್ನಿರಿ+ಅಣ್ಣಾ; ದಿಟ=ನಿಜ/ಸತ್ಯ/ವಾಸ್ತವ; ಅಣ್ಣ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ದಿಟವೆನ್ನಿರಣ್ಣಾ=ನಿಜವೆಂದು ಹೇಳಿರಿ. ಅಂದರೆ ವ್ಯಕ್ತಿಯ ಜೀವನದಲ್ಲಿ ಪರಿಶ್ರಮದ ದುಡಿಮೆ ಮತ್ತು ಎಚ್ಚರದಿಂದ ಬಾಳುವ ಅರಿವು ದೊಡ್ಡದು ಎಂಬ ವಾಸ್ತವವನ್ನು ಮನಗಾಣಿರಿ;

❖

19. ಗುಪ್ತ ಮಂಚಣ್ಣ

ಕಸುಬು: ಬಿಜ್ಜಳ ದೊರೆಯ ಕೋಶಾಗಾರದಲ್ಲಿ ಕರಣಿಕನಾಗಿದ್ದನು.

ದೊರೆತಿರುವ ವಚನಗಳು: 100

ವಚನಗಳ ಅಂಕಿತನಾಮ: ನಾರಾಯಣಪ್ರಿಯ ರಾಮನಾಥ

87. ಉಳಿಯ ಹಿಡಿಯಲ್ಲಿ ಕಲೆ ಮಾಡಿಸಿಕೊಂಡ ದೇವರಿಗೆ
ಅಳಿವು ಉಳಿವಲ್ಲದೆ
ಉಳಿಗೆ ಹೊರಗಾದ ಅಳಿಯದವನನರಿಯಾ
ನಾರಾಯಣಪ್ರಿಯ ರಾಮನಾಥ.

ವಿಗ್ರಹರೂಪದಲ್ಲಿ ದೇವರನ್ನು ಕಾಣುವ ಬದಲು, ಜನರ ದಿನ ನಿತ್ಯದ ಒಳ್ಳೆಯ ನಡೆನುಡಿಯಲ್ಲಿ ದೇವರನ್ನು ಕಾಣಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಉಳಿ=ಕಲ್ಲಿನ ಬಂಡೆಗಳನ್ನು ಸೀಳಲು, ಕಲ್ಲು ಚಪ್ಪಡಿಗಳ ಮೇಲೆ ಅಕ್ಕರಗಳನ್ನು ಕೆತ್ತಲು ಮತ್ತು ಕಲ್ಲಿನ ಬಂಡೆಗಳಲ್ಲಿ ಬಗೆಬಗೆಯ ವಿಗ್ರಹಗಳನ್ನು ಕೆತ್ತಿ, ಶಿಲೆಯಿಂದ ಶಿಲ್ಪವನ್ನು ನಿರ್ಮಿಸಲು ಕಲ್ಲುಕುಟಿಗರು ಬಳಸುವ ಚೂಪಾದ ಮೊನೆಯುಳ್ಳ ಕಬ್ಬಿಣದ ಉಪಕರಣ; ಈ ಉಪಕರಣವನ್ನು 'ಚಾಣ/ಟಂಕ' ಎಂಬ ಹೆಸರಿನಿಂದಲೂ ಕರೆಯುತ್ತಾರೆ;

ಹಿಡಿ+ಅಲ್ಲಿ; ಹಿಡಿ=ಕೆಳ ತುದಿಯಲ್ಲಿ ಚೂಪಾದ ಮೊನೆಯಿಂದ ಕೂಡಿರುವ ಉಳಿಯನ್ನು ಹಿಡಿದುಕೊಳ್ಳಲು ಮಾಡಿರುವ ಮೇಲಿನ ತುದಿ/ಹಿಡಿಕೆ; ಕಲೆ=ಶಿಲೆಯಿಂದ ರೂಪುಗೊಂಡಿರುವ ಶಿಲ್ಪ/ಕಲ್ಲಿನಿಂದ ಕೆತ್ತಿರುವ ವಿಗ್ರಹ; ದೇವರು=ಜೀವನದಲ್ಲಿನ ಎಡರುತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು 'ದೇವರು' ಎಂದು ಜನಸಮುದಾಯ ಕಲ್ಪಿಸಿಕೊಂಡಿದೆ ಮತ್ತು ನಂಬಿಕೊಂಡಿದೆ;

ಉಳಿಯ ಹಿಡಿಯಲ್ಲಿ ಕಲೆ ಮಾಡಿಸಿಕೊಂಡ ದೇವರು= ಕಲ್ಲು ಬಂಡೆಯನ್ನು ಉಳಿಯ ಮೊನೆಯ ಪೆಟ್ಟುಗಳಿಂದ ಶಿಲ್ಪಿಯು ಕುಶಲತೆಯಿಂದ ಕೆತ್ತಿದಾಗ ರೂಪುಗೊಂಡ ದೇವರ ಶಿಲ್ಪ;

ಅಳಿವು=ನಾಶವಾಗುವುದು; ಉಳಿವು+ಅಲ್ಲದೆ; ಉಳಿವು=ನಾಶವಾಗದೆ ಇರುವುದು;

ಉಳಿಯ ಹಿಡಿಯಲ್ಲಿ ಕಲೆ ಮಾಡಿಸಿಕೊಂಡ ದೇವರಿಗೆ ಅಳಿವು ಉಳಿವು= ಮಾನವರಿಂದ ನಿರ್ಮಾಣಗೊಂಡ ದೇವರ ವಿಗ್ರಹಗಳು ಚಿರಕಾಲ ಉಳಿಯು ವುದಿಲ್ಲ. ಏಕೆಂದರೆ ಸಾವಿರಾರು ವರುಶಗಳು ಉರುಳುತ್ತಿದ್ದಂತೆಯೇ ಮಾನವ ಸಮುದಾಯಗಳಲ್ಲಿರುವ ಬೇರೆ ಬೇರೆ ಮತಗಳ ನಡುವೆ ಉಂಟಾಗುವ ಪರಸ್ಪರ ಹಗೆತನದಿಂದಲೋ ಇಲ್ಲವೇ ರಾಜಕೀಯ ಕಾರಣಗಳಿಂದಲೋ ಇಲ್ಲವೇ ಈ ದೇವರಿಗಿಂತ ಆ ದೇವರು ಹೆಚ್ಚು ಎಂಬ ನಂಬಿಕೆಯಿಂದಲೋ, ಮೊದಲು ಇದ್ದ ದೇವರ ವಿಗ್ರಹ ನಾಶಗೊಂಡು, ಅದರ ಜಾಗದಲ್ಲಿ ಮತ್ತೊಂದು ದೇವರ ವಿಗ್ರಹ ನೆಲೆಗೊಳ್ಳುತ್ತದೆ. ಈ ರೀತಿ ಹೊಸದಾಗಿ ನೆಲೆಗೊಂಡ ದೇವರ ವಿಗ್ರಹವೂ ಮುಂದೊಂದು ದಿನ ಮತ್ತೊಂದು ಕಾರಣದಿಂದ ನಾಶವಾಗುತ್ತದೆ. ಕಾಲಾನುಗತಿಯಲ್ಲಿ ಮಾನವರಿಂದ ನಿರ್ಮಾಣಗೊಂಡ ವಿಗ್ರಹರೂಪದ ದೇವರು ಮಾನವರಿಂದಲೇ ಇಲ್ಲವಾಗುತ್ತಿರುತ್ತದೆ;

ಅಲ್ಲದೆ=ಹೊರತುಪಡಿಸಿ; ಹೊರಗೆ+ಆದ; ಹೊರಗಾದ=ಉಳಿಯ ಪೆಟ್ಟಿನಿಂದ ರೂಪುಗೊಳ್ಳದ;

ಅಳಿಯದ+ಅವನ್+ಅನ್+ಅರಿಯಾ; ಅಳಿಯದ=ನಾಶವಾಗದ; ಅನ್=ಅನ್ನು; ಅಳಿಯದವನ್=ಎಂದೆಂದಿಗೂ ನಾಶವಾಗದವನು;

ಅರಿ=ತಿಳಿ; ಅರಿಯಾ=ತಿಳಿದುನೋಡು/ವಾಸ್ತವವನ್ನು ಒರೆಹಚ್ಚಿ ನೋಡು;

ಉಳಿಗೆ ಹೊರಗಾದ ಅಳಿಯದವನು=ಉಳಿಯ ಪೆಟ್ಟುಗಳಿಂದ ರೂಪುಗೊಳ್ಳದ ದೇವರು. ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ. ಜನರ ಒಳ್ಳೆಯ ನಡೆನುಡಿಗಳಲ್ಲಿ ದೇವರು ಶಾಶ್ವತವಾಗಿ ಇರುತ್ತಾನೆಯೆ ಹೊರತು ಕಲ್ಲಿನಿಂದ ಕೆತ್ತಿದ ವಿಗ್ರಹರೂಪದಲ್ಲಿ ದೇವರಿಲ್ಲ ಎಂಬ ತಿರುಳನ್ನು ಸೂಚಿಸುತ್ತವೆ;

ರಾಮನಾಥ=ಶಿವನಿಗೆ ಇದ್ದ ಮತ್ತೊಂದು ಹೆಸರು; ನಾರಾಯಣಪ್ರಿಯ ರಾಮನಾಥ= ಗುಪ್ತ ಮಂಚಣ್ಣನ ವಚನಗಳ ಅಂಕಿತನಾಮ;

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ದೇವರಾದ ಶಿವನನ್ನು ಕಲ್ಲು, ಮಣ್ಣು, ಮರ, ಲೋಹದಿಂದ ಮಾಡಿದ ವಿಗ್ರಹ ರೂಪದಲ್ಲಿ ಕಾಣುತ್ತಿರಲಿಲ್ಲ. ಜನರು ನಿತ್ಯ ಜೀವನದಲ್ಲಿ ಆಚರಿಸುವ ಒಳ್ಳೆಯ ನಡೆನುಡಿಗಳಲ್ಲಿ ಶಿವನ ಪ್ರತಿರೂಪವನ್ನು ಕಾಣುತ್ತಿದ್ದರು.

‘ಒಳ್ಳೆಯ ನಡೆನುಡಿ’ ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸಗಳು, ತನಗೆ ಮತ್ತು ತನ್ನ ಕುಟುಂಬಕ್ಕೆ ಒಲವು, ನಲಿವು, ನೆಮ್ಮದಿಯನ್ನು ನೀಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

❖

20. ಗುರುಪುರದ ಮಲ್ಲಯ್ಯ

ದೊರೆತಿರುವ ವಚನಗಳು: 4

ವಚನಗಳ ಅಂಕಿತನಾಮ: ಪುರದ ಮಲ್ಲಯ್ಯ

88. ಹೊತ್ತಿಗೊಂದು ಪರಿಯಹ ಮನವ ಕಂಡು
ದಿನಕ್ಕೊಂದು ಪರಿಯಹ ತನುವ ಕಂಡು
ಅಂದಂದಿಗೆ ಭಯದೋರುತ್ತಿದೆ
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು
ಅಂದಂದಿಗೆ ಭಯವಾಗುತ್ತಿದೆ
ಈ ಮನ ನಿಮ್ಮ ನೆನೆಯಲೀಯದು
ಮನ ಹಗೆಯಾದುದಯ್ಯಾ
ಸದ್ಗುರುವೆ ಪುರದ ಮಲ್ಲಯ್ಯಾ

ಕಾಲದ ಉರುಳುವಿಕೆಯ ಪ್ರತಿಯೊಂದು ಗಳಿಗೆಯಲ್ಲಿಯೂ ವ್ಯಕ್ತಿಯ ಮಯ್ ಮನದಲ್ಲಿ ಉಂಟಾಗುವ ತಲ್ಲಣಗಳನ್ನು ಮತ್ತು ಬದಲಾವಣೆಗಳನ್ನು ಕುರಿತು ಈ ವಚನದಲ್ಲಿ ಹೇಳಲಾಗಿದೆ.

(ಹೊತ್ತು+ಗೆ+ಒಂದು; ಹೊತ್ತು=ಕಾಲ/ಸಮಯ/ವೇಳೆ; ಹೊತ್ತಿಗೆ=ಕಾಲಕ್ಕೆ/ಸಮಯಕ್ಕೆ/ವೇಳೆಗೆ; ಪರಿ+ಅಹ; ಪರಿ=ರೀತಿ/ಬಗೆ; ಅಹ=ಆಗುವ/ಉಂಟಾಗುವ; ಮನ=ಮನಸ್ಸು; ಕಂಡು=ನೋಡಿ/ಅರಿತು/ತಿಳಿದು;

ಹೊತ್ತಿಗೊಂದು ಪರಿಯಹ ಮನವ ಕಂಡು=ಜೀವನದ ಪ್ರತಿಯೊಂದು ಗಳಿಗೆಯಲ್ಲೂ ಹಿಂದೆ ನಡೆದಿರುವ ಮತ್ತು ಮುಂದೆ ನಡೆಯಲಿರುವ ಒಳಿತು ಕೆಡುಕಿನ ಆಗುಹೋಗುಗಳನ್ನು ಕುರಿತು ಆತಂಕ/ತಲ್ಲಣ/ಹೆದರಿಕೆ/ಹಿಂಜರಿಕೆ/ಕೋಪ/ತಾಪ/ಆನಂದ/ಉಲ್ಲಾಸ/ಸೇಡು/ಹಗೆತನ/ಒಲವು/ನಲಿವು ಮುಂತಾದ ನೂರೆಂಟು ಬಗೆಯ ಒಳಮಿಡಿತಗಳಿಂದ ತನ್ನ ಮನಸ್ಸು ಚಡಪಡಿಸುತ್ತಿರುತ್ತದೆ ಎಂಬುದನ್ನು ವ್ಯಕ್ತಿಯು ಅರಿತುಕೊಳ್ಳುವುದು ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ದಿನ+ಕ್ಕೆ+ಒಂದು; ದಿನ=ಒಂದು ಹಗಲು ಮತ್ತು ಒಂದು ರಾತ್ರಿಯನ್ನು ಒಳಗೊಂಡ ಇಪ್ಪತ್ತನಾಲ್ಕು ಗಂಟೆಗಳ ಸಮಯ; ತನು=ಮಯ್/ದೇಹ/ಶರೀರ; **ದಿನಕ್ಕೊಂದು ಪರಿಯಹ ತನುವ ಕಂಡು**=ಹುಟ್ಟಿನಿಂದ ಸಾವಿನ ತನಕ ವ್ಯಕ್ತಿಯ ತನುವಿನ ಆಕಾರ, ಕಳೆ ಮತ್ತು ಶಕ್ತಿಯು ಬಾಲ್ಯ/ಹರೆಯ/ಮುಪ್ಪಿನ ಹಂತಗಳಲ್ಲಿ ಬದಲಾಗುತ್ತಿರುವುದನ್ನು ಅರಿತುಕೊಳ್ಳುವುದು ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ;

ಅಂದು+ಅಂದು+ಇಗೆ; ಅಂದು=ಆ ದಿನ/ಆ ವೇಳೆ; ಅಂದಿಗೆ=ಆ ಕಾಲಕ್ಕೆ; ಅಂದಂದಿಗೆ=ಆಯಾಯ ಕಾಲಕ್ಕೆ/ಸಮಯಕ್ಕೆ/ವೇಳೆಗೆ; ಭಯ+ತೋರುತ್ತ+ಇದೆ; ಭಯ=ಹೆದರಿಕೆ/ಅಂಜಿಕೆ; ತೋರು=ಗೋಚರಿಸು/ಉಂಟಾಗು; ತೋರುತ್ತಿದೆ= ಉಂಟಾಗುತ್ತಿದೆ/ಕಂಡುಬರುತ್ತಿದೆ;

ಅಂದಂದಿಗೆ ಭಯದೋರುತ್ತಿದೆ=ಕಾಲ ಉರುಳಿದಂತೆಲ್ಲಾ ಮಯ್ಯಲ್ಲಿನ ಕಸುವು ಕುಗ್ಗುತ್ತಿರುವುದು ಮತ್ತು ಮನದಲ್ಲಿ ಎಡೆಬಿಡದೆ ಒಂದೇ ಸಮನೆ ತುಡಿಯುತ್ತಿರುವ ಒಳಮಿಡಿತಗಳಿಂದಾಗಿ ವ್ಯಕ್ತಿಯ ಜೀವನದಲ್ಲಿ ಯಾವುದೊಂದೂ ಇದ್ದಂತೆಯೇ ಇರುವುದಿಲ್ಲ, ಎಲ್ಲವೂ ಬದಲಾಗುತ್ತಿದೆಯೆಂಬ ಮತ್ತು ಹುಟ್ಟಿದ್ದೆಲ್ಲವೂ ಅಳಿಯುತ್ತದೆ ಎಂಬ ವಾಸ್ತವದ ಸಂಗತಿಯು ಅರಿವಿಗೆ ಬಂದು ಹೆದರಿಕೆಯುಂಟಾಗುತ್ತಿದೆ;

ನಿಮಿಷ+ಕ್ಕೆ+ಅನಂತ+ಅನ್+ಎ; ನಿಮಿಷ=ಕಣ್ಣಿನ ರೆಪ್ಪೆಯನ್ನು ಒಮ್ಮೆ ಮಿಟುಕಿಸುವುದು/ಒಂದು ಸಲ ಕಣ್ಣ ರೆಪ್ಪೆಯನ್ನು ಹೊಡೆಯಲು ತೆಗೆದುಕೊಳ್ಳುವ ಕಾಲ; ನಿಮಿಷಕ್ಕೆ=ಒಂದು ಗಳಿಗೆಗೆ; ಅನಂತ=ಕೊನೆಯಿಲ್ಲದ/ಮೇರೆಯಿಲ್ಲದ; ಅನ್=ಅನ್ನು; ನೆನೆ=ಹಿಂದೆ ನಡೆದ ಸಂಗತಿಗಳನ್ನು ಮನದಲ್ಲಿ ಮತ್ತೆ ಸ್ಮರಿಸುವುದು/ಕುರಿತು ಚಿಂತಿಸುವುದು; ನೆನೆವ=ನೆನೆದುಕೊಳ್ಳುವ;

ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು=ಎಚ್ಚರವಿದ್ದ ಸಮಯದಲ್ಲಿ ವ್ಯಕ್ತಿಯ ಮನಸ್ಸು ಒಳಮಿಡಿತಗಳಿಂದ ತುಡಿಯದೆ ಒಂದು ಗಳಿಗೆಯೂ ಇರಲಾರದು. ಅಗತ್ಯವಾದಾಗ ಇತರರೊಡನೆ ಬಹಿರಂಗದಲ್ಲಿ ಮಾತಿನ ಮೂಲಕ ವ್ಯವಹರಿಸುವಂತೆಯೇ, ವ್ಯಕ್ತಿಯು ತನ್ನ ಅಂತರಂಗದ ಮನದಲ್ಲಿ ತಾನೇ ಬಹು ಬಗೆಯ ಆಲೋಚನೆ/ಕಲ್ಪನೆಗಳಿಗೆ ಒಳಗಾಗುತ್ತಿರುತ್ತಾನೆ. ಇತರರ ಕಲ್ಪನೆಗೂ ಬಾರದಿರುವಂತಹ ಒಳಿತು ಕೆಡುಕಿನ ನೂರಾರು ಬಗೆಯ ಒಳಮಿಡಿತಗಳು ಯಾವುದೇ ಹತೋಟಿಯಿಲ್ಲದೆ ಒಂದೇ ಸಮನೆ ಮನದಲ್ಲಿ ಮೂಡುತ್ತಿರುತ್ತವೆ ಎಂಬುದನ್ನು ಅರಿತುಕೊಳ್ಳುವುದು ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ; ಭಯ+ಆಗುತ್ತ+ಇದೆ; ಆಗು=ಉಂಟಾಗು/ಜರುಗು/ನಡೆ;

ಈ ಮನ=ಈ ರೀತಿ ಪ್ರತಿಯೊಂದು ಗಳಿಗೆಯಲ್ಲೂ ಒಳಮಿಡಿತಗಳಿಂದ ಕೂಡಿ ನೂರೆಂಟು ಬಗೆಯ ತುಡಿತಗಳಿಂದ ಕೂಡಿರುವ ಮನಸ್ಸು/ಒಳಿತು ಕೆಡುಕಿನ ನಡುವೆ ಸಿಲುಕಿ ಇಬ್ಬಗೆಯಲ್ಲಿ ಹೊಯ್ದಾಡುತ್ತಿರುವ ಮನಸ್ಸು; ನಿಮ್ಮ=ದೇವರಾದ ನಿಮ್ಮನ್ನು/ದೇವರನ್ನು; ನೆನೆ+ಅಲ್+ಈ+ಅದು; ನೆನೆಯಲ್=ನೆನೆದುಕೊಳ್ಳಲು; ಈ/ಈಯು=ಕೊಡು/ಅವಕಾಶವನ್ನು ನೀಡು; ಈಯದು=ಬಿಡುತ್ತಿಲ್ಲ/ಕೊಡುತ್ತಿಲ್ಲ;

ಈ ಮನ ನಿಮ್ಮ ನೆನೆಯಲೀಯದು=ದೇವರನ್ನು ನೆನೆಯುವುದು ಎಂದರೆ ವ್ಯಕ್ತಿಯು ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನು ಹೊಂದಿರುವುದು. ಆದರೆ ಸದಾಕಾಲ ಒಂದಲ್ಲ ಒಂದು ಬಗೆಯ ಕಲ್ಪನೆ/ಆಲೋಚನೆಗಳಲ್ಲಿ ತೊಡಗಿರುವ ವ್ಯಕ್ತಿಯ ಮನಸ್ಸು ಒಳಿತು ಕೆಡುಕುಗಳ ನಡುವೆ ತುಯ್ದಾಡುತ್ತಿರುವುದರಿಂದ ಒಳಿತಿನ ಹಾದಿಯಲ್ಲಿ ನಡೆಯಲು ಆಗುತ್ತಿಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಹಗೆ+ಆದುದು+ಅಯ್ಯಾ; ಹಗೆ=ಶತ್ರು; ಆದುದು=ಆಗಿದೆ/ಆಗಿರುವುದು; **ಮನ ಹಗೆಯಾದುದಯ್ಯಾ**=ಒಳಿತಿನ ನಡೆನುಡಿಗಳನ್ನು ಹೊಂದದಿರಲು ಮನಸ್ಸಿನಲ್ಲಿ ತುಡಿಯುತ್ತಿರುವ ಕೆಡುಕಿನ ಒಳಮಿಡಿತಗಳೇ ಕಾರಣವಾಗಿವೆ ಎಂಬ ಸಂಕಟವನ್ನು ಈ ನುಡಿಗಳು ಸೂಚಿಸುತ್ತಿವೆ;

ಸದ್ಗುರು=ಒಳ್ಳೆಯ ಗುರು/ಒಳ್ಳೆಯ ನಡೆನುಡಿಗಳನ್ನು ತನ್ನ ಶಿಷ್ಯರ ವ್ಯಕ್ತಿತ್ವದಲ್ಲಿ ರೂಪಿಸುವ ವ್ಯಕ್ತಿ; ಪುರ=ಪಟ್ಟಣ/ನಗರ/ಕೋಟೆ; ಮಲ್ಲಯ್ಯ=ಶಿವನ ಹೆಸರು; ಪುರದ ಮಲ್ಲಯ್ಯ=ಗುರುಪುರದ ಮಲ್ಲಯ್ಯನ ವಚನಗಳ ಅಂಕಿತನಾಮ) ❖

21. ಗೊಗ್ಗವ್ವೆ

ಊರು: ಕೇರಳದ ಆವಲೂರು

ಕಸುಬು: ಶಿವಶರಣರಿಗೆ ದೂಪ ನೀಡುವುದು

ಅಂಕಿತನಾಮ: ನಾಸ್ತಿನಾಥ

ದೊರೆತಿರುವ ವಚನಗಳು: 6

89. ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ.

"ಹೆಣ್ಣು-ಗಂಡು ಜೀವಿಗಳಲ್ಲಿ ಯಾವುದೇ ಒಂದು ಮೇಲು ಅಲ್ಲ; ಕೀಳು ಅಲ್ಲ. ಮಾನವ ಸಮುದಾಯ ಒಲವು ನಲಿವು ನೆಮ್ಮದಿಯಿಂದ ಬೆಳೆದು ಉಳಿದು ಬಾಳಬೇಕಾದರೇ ಎರಡು ಜೀವಿಗಳು ಒಂದಕ್ಕೆ ಮತ್ತೊಂದು ಪೂರಕ" ಎಂಬ ಲಿಂಗ ಸಮಾನತೆಯ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಮೊಲೆ=ಹುಟ್ಟಿದ ಮಗುವಿಗೆ ಎದೆಹಾಲನ್ನು ಉಣಿಸಲು ಹೆಣ್ಣಿನ ದೇಹದಲ್ಲಿರುವ ಇರುವ ಅಂಗ; ಮುಡಿ=ಉದ್ದನೆಯ ತಲೆಗೂದಲು/ಜಡೆ; ಬಂದಡೆ=ಬಂದರೆ; ಹೆಣ್+ಎಂಬರು; ಎಂಬರು=ಎನ್ನುವರು;

ಮೊಲೆ ಮುಡಿ ಬಂದಡೆ ಹೆಣ್ಣೆಂಬರು=ಮೊಲೆ ಮುಡಿಯನ್ನುಳ್ಳ ಜೀವಿಯನ್ನು 'ಹೆಣ್ಣು' ಎಂದು ಜನರು ಕರೆಯುತ್ತಾರೆ;

ಮೀಸೆ=ಗಂಡಸಿನ ಮೂಗಿನ ಕೆಳಗಡೆಯ ಜಾಗದಲ್ಲಿ ಬೆಳೆಯುವ ಕೂದಲು; ಕಾಸೆ=ಹುಟ್ಟಿದ ಮಗು ಗಂಡು ಎಂಬುದನ್ನು ಸೂಚಿಸುವ ಅಂಗ/ಶಿಶ್ನ; ಗಂಡ್+ ಎಂಬರು;

ಮೀಸೆ ಕಾಸೆ ಬಂದಡೆ ಗಂಡೆಂಬರು=ಮೀಸೆ ಮತ್ತು ಶಿಶ್ನವನ್ನುಳ್ಳ ಜೀವಿಯನ್ನು 'ಗಂಡು' ಎಂದು ಜನರು ಕರೆಯುತ್ತಾರೆ;

ಉಭಯ=ಎರಡು; ಜ್ಞಾನ=ಅರಿವು/ತಿಳುವಳಿಕೆ; ನಾಸ್ತಿನಾಥ=ಶಿವನ ಮತ್ತೊಂದು ಹೆಸರು/ವಚನಕಾತಿ ಗೊಗ್ಗವ್ವೆಯ ವಚನಗಳ ಅಂಕಿತನಾಮ;

ಈ ಉಭಯದ ಜ್ಞಾನ ಹೆಣ್ಣೊ ಗಂಡೊ=ಮಾನವ ಸಮುದಾಯದಲ್ಲಿ ದೇಹದ ಅಂಗಗಳ ಚಹರೆಯನ್ನು ಗುರುತಿಸಿ ಹೆಣ್ಣು/ಗಂಡು ಎಂದು ಹೇಳಬಹುದಲ್ಲದೆ, ಈ ಎರಡು ಬಗೆಯ ಜೀವಿಗಳು ಹೊಂದಿರುವ ಅರಿವಿನಲ್ಲಿ ಅಂದರೆ ಮನದಲ್ಲಿ ಮಿಡಿಯುವ ಒಳಿತು ಕೆಡುಕಿನ ಒಳಮಿಡಿತಗಳು ಮತ್ತು ಲೋಕದ ಜೀವನದಲ್ಲಿ ಪಡೆಯುವಂತಹ ಒಲವು ನಲಿವು ನೋವಿನ ಸಂಗತಿಗಳು ಇಬ್ಬರಿಗೂ ಒಂದೇ ಬಗೆಯಲ್ಲಿರುತ್ತವೆ;

ನಿಸರ್ಗದ ನೆಲೆಯಲ್ಲಿ ಹೆಣ್ಣು–ಗಂಡು 'ಅದು ಒಂದು ಜೀವಿ... ಇದು ಒಂದು ಜೀವಿ' ಎಂಬ ಸಮಾನತೆಯನ್ನು ಹೊಂದಿದ್ದರೂ, ಸಾಮಾಜಿಕ ನೆಲೆಯಲ್ಲಿ ಗಂಡು ಮೊದಲ ಮನ್ನಣೆಗೆ ಪಾತ್ರನಾದರೆ, ಹೆಣ್ಣು ಎರಡನೆಯ ನೆಲೆಯನ್ನು ಹೊಂದಿದ್ದಾಳೆ. ಜಗತ್ತಿನಲ್ಲಿರುವ ಎಲ್ಲಾ ಸಮಾಜಗಳಲ್ಲಿಯೂ 'ಗಂಡು ಮೇಲು; ಹೆಣ್ಣು ಕೀಳು' ಎಂಬ ತಾರತಮ್ಯದ ನಿಲುವು ಜನಮನದಲ್ಲಿದೆ. ಇಂತಹ ನಿಲುವಿಗೆ ಕಾರಣ ಏನೆಂಬುದನ್ನು ತಿಳಿಯಬೇಕಾದರೆ ಮಾನವ ಸಮಾಜ ರೂಪುಗೊಂಡ ಸಾಮಾಜಿಕ ಇತಿಹಾಸವನ್ನು ನೋಡಬೇಕು.

ಶಿಲಾಯುಗದಲ್ಲಿ ಇತರ ಪ್ರಾಣಿಗಳಂತೆಯೇ ಅಲೆಮಾರಿಯಾಗಿದ್ದ ಮಾನವ ಗುಂಪುಗಳು ಕಾಲಕ್ರಮೇಣ ಒಂದೆಡೆ ನಿಂತು ಬೇಸಾಯವನ್ನು ಮಾಡತೊಡಗಿದಾಗ ಕುಟುಂಬಗಳು ರಚನೆಗೊಂಡವು. ಈ ಕುಟುಂಬಗಳಲ್ಲಿ ತಾಯಿಯೇ ಮೇಟಿ ಯಾಗಿದ್ದಳು. ಹುಟ್ಟುವ ಮಕ್ಕಳು ಮತ್ತು ಉಳುಮೆ ಮಾಡುವ ಭೂಮಿಯು ಸಮುದಾಯದ ಒಟ್ಟು ಆಸ್ತಿಯಾಗಿತ್ತು. ತಾಯಿಯ ಹೆಸರಿನ ಕುಲಕ್ಕೆ ಮಕ್ಕಳು ಸೇರಿದವರಾಗಿದ್ದು, ಆ ಕುಲದ ಹೆಸರನ್ನು ಮಕ್ಕಳು ಪಡೆಯುತ್ತಿದ್ದರು. ಮಕ್ಕಳು ಹುಟ್ಟುವಲ್ಲಿ ತಂದೆಯು ಯಾರು ಎಂಬುದು ದೊಡ್ಡ ಸಂಗತಿಯಾಗಿರಲಿಲ್ಲ. ಹೆಣ್ಣು –ಗಂಡಿನ ಕಾಮದ ನಂಟಿಗೆ ಯಾವುದೇ ಬಗೆಯ ಕಟ್ಟುಪಾಡುಗಳು ಇರಲಿಲ್ಲ.

ಅನಂತರದ ಸಾವಿರಾರು ವರುಶಗಳ ಜನಜೀವನದಲ್ಲಿ ಅನೇಕ ಪಲ್ಲಟಗಳು ಉಂಟಾಗಿ, ಉಳುವ ಬೂಮಿಯ ಒಡೆತನವು ಒಟ್ಟು ಸಮುದಾಯದಿಂದ ಕಯ್ ತಪ್ಪಿಹೋಗಿ, ಗಂಡಸರ ಹಿಡಿತಕ್ಕೆ ಸಿಲುಕಿದಾಗ, ಆಸ್ತಿಯ ಮೇಲೆ ಗಂಡಿನ ಒಡೆತನ ಉಂಟಾಯಿತು. ಗಂಡು ತನ್ನ ಬೀಜದಿಂದ ಹುಟ್ಟುವ ಮಕ್ಕಳಿಗೆ ಆಸ್ತಿಯ ಒಡೆತನದ ಹಕ್ಕು ದೊರೆಯಬೇಕೆಂಬ ಉದ್ದೇಶಕ್ಕೆ ಒಳಗಾಗಿ, ಹೆಣ್ಣಿಗೆ ಶೀಲದ ಚೌಕಟ್ಟನ್ನು ಹಾಕಿ, ಹೆಣ್ಣನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ.

ಹೆಣ್ಣಿನ ಕಾಮದ ನಂಟಿಗೆ ಬಹು ಬಗೆಯ ಕಟ್ಟುಪಾಡುಗಳನ್ನು ಹಾಕಿ, ಹೆಣ್ಣಿನ ಚಲನವಲನಗಳನ್ನು ನಿಯಂತ್ರಿಸಿ, ಹೆಣ್ಣಿಗೆ ಯಾವುದೇ ಬಗೆಯ "ಮಾತಿನ ಸ್ವಾತಂತ್ರ್ಯ–ಚಲನ ಸ್ವಾತಂತ್ರ್ಯ–ಇಚ್ಚಾ ಸ್ವಾತಂತ್ರ್ಯ" ಇಲ್ಲದಂತೆ ಮಾಡಿ, ಹೆಣ್ಣನ್ನು ತನ್ನ ಅಡಿಯಾಳನ್ನಾಗಿ ಮಾಡಿಕೊಂಡ. ಈ ರೀತಿ ಆಸ್ತಿ ಹಾಗೂ ಹೆಣ್ಣಿನ ಮೇಲಿನ ವ್ಯಕ್ತಿಗತ ಒಡೆತನ ಮತ್ತು ಗಂಡು ಮೇಲುಗಯ್ ಆಗಿರುವ ಕುಟುಂಬದ ರಚನೆಯ ಕಾರಣದಿಂದಾಗಿ, ಸಾಮಾಜಿಕ ನೆಲೆಯಲ್ಲಿ ಗಂಡು–ಹೆಣ್ಣಿನಲ್ಲಿ ಲಿಂಗ ತಾರತಮ್ಯ ಉಂಟಾಯಿತು.

❖

22. ಘಟ್ಟಿವಾಳಯ್ಯ

ದೊರೆತಿರುವ ವಚನಗಳು: 147
ವಚನಗಳ ಅಂಕಿತನಾಮ: ಚಿಕ್ಕಯ್ಯಪ್ರಿಯ ಸಿದ್ಧಲಿಂಗ

90. ಒಡೆದ ಮಡಕೆಗೆ ಸರಿಯಿಂದ ಸಂದು ಕೂಡುವುದೆ
ದಗ್ಧವಾದ ಪಟ ಅಗಸರ ಕಲ್ಲಿಗೆ ಹೊದ್ದುವುದೆ
ಬದ್ಧ ಭವಿಗಳೆಂದು ಬಿಟ್ಟ ಮತ್ತೆ ಸಮಯದ ಹೊದ್ದಿಗೆ ಏಕೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.

ಜಾತಿ ಪದ್ಧತಿಯನ್ನು ಒಪ್ಪಿಕೊಂಡಿರುವ ಮತ್ತು ಕರ್ಮಸಿದ್ಧಾಂತವನ್ನು ನಂಬಿಕೊಂಡಿರುವ ವ್ಯಕ್ತಿಗಳ ವರ್ತನೆಯಲ್ಲಿ ಸಹಮಾನವರ ಬಗ್ಗೆ ಪ್ರೀತಿ ಮತ್ತು ಕರುಣೆಯ ನಡೆನುಡಿಗಳು ಕಂಡುಬರುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಜಾತಿ ಪದ್ಧತಿ=ಹನ್ನೆರಡನೆಯ ಶತಮಾನದಲ್ಲಿ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಎಂಬ ನಾಲ್ಕು ವರ್ಣಗಳು ಮತ್ತು ಈ ವರ್ಣಗಳಿಂದ ಕವಲುಗೊಂಡ ನೂರಾರು ಜಾತಿ ಮತ್ತು ಉಪಜಾತಿಗಳಿಂದ ಕನ್ನಡ ಸಮಾಜ ರೂಪುಗೊಂಡಿತ್ತು. ಬ್ರಾಹ್ಮಣ–ಕ್ಷತ್ರಿಯ–ವೈಶ್ಯ ವರ್ಣದವರಿಗೆ ವಿದ್ಯೆಯನ್ನು ಕಲಿಯುವ, ನಾಡನ್ನು

ಆಳುವ, ಸಂಪತ್ತಿಗೆ ಒಡೆಯರಾಗುವ ಅವಕಾಶ ಮತ್ತು ಹಕ್ಕುಗಳಿದ್ದವು. ಆದರೆ ಶೂದ್ರ ವರ್ಣದವರಿಗೆ ಮತ್ತು ಶೂದ್ರರಿಗಿಂತಲೂ ಕೆಳಸ್ತರದಲ್ಲಿದ್ದ ಪಂಚಮರಿಗೆ ಈ ಅವಕಾಶವಾಗಲಿ ಇಲ್ಲವೇ ಹಕ್ಕುಗಳಾಗಲಿ ಇರಲಿಲ್ಲ. ಇಂತಹ ಜಾತಿ ಪದ್ಧತಿಯಿಂದಾಗಿ ಕೋಟಿಗಟ್ಟಲೆ ಜನರು 'ಅನ್ನ–ಬಟ್ಟೆ–ವಸತಿ–ವಿದ್ಯೆ–ಉದ್ಯೋಗ–ಆರೋಗ್ಯ'ದಿಂದ ವಂಚಿತರಾಗಿ ಹಸಿವು, ಬಡತನ ಮತ್ತು ಅಪಮಾನದಲ್ಲಿ ನರಳುತ್ತಿದ್ದರು.

ಕರ್ಮ ಸಿದ್ಧಾಂತ=ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಪಡೆಯುತ್ತಿರುವ ನೋವು ನಲಿವುಗಳಿಗೆ ಆತ/ಆಕೆಯು ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪ ಪುಣ್ಯಗಳೇ ಕಾರಣ. ಹಿಂದಿನ ಜನ್ಮದಲ್ಲಿ ಒಳ್ಳೆಯದನ್ನು ಮಾಡಿದವರು ಈ ಜನ್ಮದಲ್ಲಿ ಮೇಲು ವರ್ಣ/ಮೇಲು ಜಾತಿಯಲ್ಲಿ ಹುಟ್ಟಿ ವಿದ್ಯೆ ಸಂಪತ್ತು ಮತ್ತು ಉನ್ನತವಾದ ಗದ್ದುಗೆಯನ್ನು ಪಡೆದು ನೆಮ್ಮದಿಯಿಂದಿರುತ್ತಾರೆ. ಹಿಂದಿನ ಜನ್ಮದಲ್ಲಿ ಕೆಟ್ಟದ್ದನ್ನು ಮಾಡಿದವರು ಈ ಜನ್ಮದಲ್ಲಿ ಕೆಳ ವರ್ಣ/ಕೆಳ ಜಾತಿಯಲ್ಲಿ ಹುಟ್ಟಿ ಹಸಿವು, ಬಡತನ ಮತ್ತು ಅಪಮಾನದ ಬೇಗೆಯಲ್ಲಿ ಬೇಯುತ್ತಾರೆ. ಆದ್ದರಿಂದ ನಮ್ಮ ಕಣ್ಣ ಮುಂದಿನ ಸಮಾಜದಲ್ಲಿ ಹಸಿವು, ಬಡತನ, ರೋಗ, ಅಂಗಹೀನತೆ ಮತ್ತು ಅಪಮಾನದಿಂದ ಬಳಲುತ್ತಿರುವವರೆಲ್ಲರೂ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕೆ ತಕ್ಕ ದಂಡನೆಯನ್ನು ಈ ಜನ್ಮದಲ್ಲಿ ಪಡೆಯುತ್ತಿದ್ದಾರೆ ಎಂಬ ನಂಬಿಕೆ;

ಒಡೆ=ಸೀಳು/ಬಿರಿ; ಮಡಕೆ=ಮಣ್ಣಿನ ಪಾತ್ರೆ; ಸರಿ+ಇಂದ; ಸರಿ=ಅಂಟು/ಜಿಗುಟಾದ ವಸ್ತು; ಸಂದು=ಬಿರುಕುಬಿಟ್ಟಿರುವ ಎಡೆ; ಕೂಡು=ಸೇರು/ಜತೆಯಾಗು; ಕೂಡುವುದೆ=ಸೇರುವುದೆ. ಅಂದರೆ ಮೊದಲಿನಂತೆ ಇರುವುದಕ್ಕೆ ಆಗುವುದಿಲ್ಲ;

ಒಡೆದ ಮಡಕೆಗೆ ಸರಿಯಿಂದ ಸಂದು ಕೂಡುವುದೆ=ಒಡೆದುಹೋಗಿರುವ ಮಡಕೆಯೊಂದರ ಚೂರುಗಳನ್ನು ಗೋಂದಿನಿಂದ ಅಂಟಿಸಿದರೆ, ಅವು ಒಂದರೊಡನೆ ಮತ್ತೊಂದು ಕೂಡಿಕೊಂಡು ಮಡಕೆಯು ಮೊದಲಿನಂತಾಗುವುದೆ;

ದಗ್ಧ+ಆದ; ದಗ್ಧ=ಸುಟ್ಟ; ದಗ್ಧವಾದ=ಬೆಂಕಿಯಲ್ಲಿ ಸುಟ್ಟುಹೋಗಿರುವ; ಪಟ=ಬಟ್ಟೆ; ಅಗಸ=ಕೊಳೆಯಾದ ಬಟ್ಟೆಗಳನ್ನು ಒಗೆದು ತೊಳೆದು ಮಡಿ ಮಾಡುವ ಕಸುಬಿನವನು; ಅಗಸರ ಕಲ್ಲು=ಅಗಸರು ಬಟ್ಟೆಯನ್ನು ಎತ್ತಿ ಒಗೆದು ಮಡಿ ಮಾಡಲು ಬಳಸುವ ಕಲ್ಲಿನ ಹಾಸು; ಹೊದ್ದು=ಸರಿಹೊಂದು; ಹೊದ್ದುವುದೆ=ಸರಿಹೊಂದುವುದೆ. ಅಂದರೆ ಸರಿಯಾಗುವುದಿಲ್ಲ;

ದಗ್ಧವಾದ ಪಟ ಅಗಸರ ಕಲ್ಲಿಗೆ ಹೊದ್ದುವುದೆ=ಬೆಂಕಿಯಲ್ಲಿ ಸುಟ್ಟು ಅಲ್ಲಲ್ಲಿ ಕರಿಕಲಾಗಿರುವ ಹಾಗೂ ಚಿಂದಿಯಾಗಿರುವ ಬಟ್ಟೆಯನ್ನು ಅಗಸರವನು ಒಗೆದು ಮಡಿಮಾಡಲಾಗುವುದಿಲ್ಲ. ಏಕೆಂದರೆ ಕಲ್ಲಿನ ಮೇಲೆ ಬಟ್ಟೆಯನ್ನು ಒಗೆಯುತ್ತಿದ್ದಂತೆಯೇ ಇನ್ನುಳಿದ ಬಟ್ಟೆಯು ಹರಿದು ತುಂಡು ತುಂಡಾಗುತ್ತದೆ;

ಬದ್ಧ=ಕಟ್ಟಲೆ/ನಿಯಮ; ಭವಿ+ಗಳ್+ಎಂದು; ಭವಿ=ಮೇಲು ಕೀಳಿನ ಜಾತಿ ಪದ್ಧತಿಯನ್ನು ಒಪ್ಪಿಕೊಂಡವನು ಮತ್ತು ಕರ್ಮಸಿದ್ಧಾಂತದಲ್ಲಿ ನಂಬಿಕೆಯಿರುವವನು; ಬಿಡು=ತೊರೆ/ತ್ಯಜಿಸು; ಮತ್ತೆ=ಆಮೇಲೆ/ನಂತರ; ಸಮಯ=ಸತ್ಯ ನೀತಿ ನ್ಯಾಯದಿಂದ ಕೂಡಿದ ಧರ್ಮ; ಹೊದ್ದಿಗೆ=ನಂಟು/ಸಹವಾಸ; ಸಮಯದ ಹೊದ್ದಿಗೆ=ಧರ್ಮದ/ ಒಳ್ಳೆಯ ನಡೆನುಡಿಯ ನಂಟು;

ಏಕೆ=ಯಾತಕ್ಕೆ; ಸಿದ್ಧಲಿಂಗ=ಶಿವನ ಮತ್ತೊಂದು ಹೆಸರು; **ಚಿಕ್ಕಯ್ಯಪ್ರಿಯ** ಸಿದ್ಧಲಿಂಗ=ಘಟ್ಟಿವಾಳಯ್ಯನವರ ವಚನಗಳ ಅಂಕಿತನಾಮ;

ಬದ್ಧ ಭವಿಗಳೆಂದು ಬಿಟ್ಟ ಮತ್ತೆ ಸಮಯದ ಹೊದ್ದಿಗೆ ಏಕೆ... ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ=ಹೇಗೆ ಒಡೆದ ಮಡಕೆಯ ಚೂರುಗಳನ್ನು ಅಂಟಿಸಿ ಮಡಕೆಯನ್ನು ಮೊದಲಿನಂತೆ ಮಾಡಲಾಗುವುದಿಲ್ಲವೋ... ಬೆಂದುಹೋಗಿರುವ ಬಟ್ಟೆಯನ್ನು ಮತ್ತೆ ಒಗೆದು ಮಡಿಮಾಡಲಾಗುವುದಿಲ್ಲವೋ ಅಂತೆಯೇ ಜಾತಿ ಪದ್ಧತಿ ಮತ್ತು ಕರ್ಮಸಿದ್ಧಾಂತದಲ್ಲಿ ನಂಬಿಕೆಯಿಟ್ಟಿರುವ ವ್ಯಕ್ತಿಯ ಮನದಲ್ಲಿ ಸಹಮಾನವರ ಬಗ್ಗೆ ಪ್ರೀತಿ ಮತ್ತು ಕರುಣೆಯನ್ನು ಕಾಣಲಾಗದು. ಏಕೆಂದರೆ ಭವಿಯು ಬಡವರನ್ನು, ರೋಗಿಗಳನ್ನು ಮತ್ತು ಅಂಗವಿಕಲರನ್ನು ಮತ್ತು ಬಡತನದಲ್ಲಿ ನರಳುತ್ತಿರುವವನ್ನು ಕಂಡಾಗ, ಅವರಿಗೆ ನೆರವನ್ನು ನೀಡುವ ಬದಲು "ಅದು ಅವರವರ ಕರ್ಮ; ಅನುಭವಿಸಿ ನರಳಲಿ... ಸಾಯಲಿ. ನನಗೇನು" ಎಂದು ಸುಮ್ಮನಾಗುತ್ತಾನೆ;

ಹನ್ನೆರಡನೆಯ ಶತಮಾನದಲ್ಲಿ ರಚನೆಗೊಂಡ ವಚನಗಳಲ್ಲಿ 'ಭಕ್ತ' ಮತ್ತು 'ಭವಿ' ಎಂಬ ಪದಗಳು ಮತ್ತೆ ಮತ್ತೆ ಬಳಕೆಯಾಗುತ್ತವೆ.

ಶಿವಶರಣಶರಣೆಯರ ನಿಲುವಿನಲ್ಲಿ ಭಕ್ತ ಎಂದರೆ "ಜಾತಿ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಬಯಸುವವನು."

ಭವಿ ಎಂದರೆ "ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವರ ಬದುಕಿನ ನೋವು ನಲಿವುಗಳಿಗೆ ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ ಪುಣ್ಯಗಳಿಂದ ಕೂಡಿದ ಕರ್ಮಸಿದ್ಧಾಂತದಲ್ಲಿ ನಂಬಿಕೆಯಿರುವ ವ್ಯಕ್ತಿ."

ಒಮ್ಮೆ ಜಾತಿಯ ಕಟ್ಟುಪಾಡುಗಳಿಂದ ಹೊರಬಂದು ಶಿವಶರಣರಾದ ವ್ಯಕ್ತಿಗಳು ಮತ್ತೆ ಯಾವುದೇ ಕಾರಣದಿಂದಲೂ ಭವಿಯ ಜತೆಯಲ್ಲಿ ನಂಟನ್ನು ಹೊಂದಬಾರದೆಂಬ ನಿಯಮವನ್ನು ವಚನಕಾರರು ಪಾಲಿಸುತ್ತಿದ್ದರು.

❖

23. ಚಂದಿಮರಸ

ಊರು: ಚಿಮ್ಮಲಿಗೆ ಗ್ರಾಮ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಕಸುಬು: ತಿಳಿದು ಬಂದಿಲ್ಲ.
ದೊರೆತಿರುವ ವಚನಗಳು: 157
ವಚನಗಳ ಅಂಕಿತನಾಮ: ಸಿಮ್ಮಲಿಗೆಯ ಚೆನ್ನರಾಮಾ.

91. ತನ್ನದಾದಡೇನೋ ಕನ್ನಡಿ
ಅನ್ಯರದಾದಡೇನೋ ಕನ್ನಡಿ
ತನ್ನ ರೂಪ ಕಂಡಡೆ ಸಾಲದೆ
ಸದ್ಗುರು ಆವನಾದಡೇನೋ
ತನ್ನನರುಹಿಸಿದಡೆ ಸಾಲದೆ
ಸಿಮ್ಮಲಿಗೆಯ ಚೆನ್ನರಾಮಾ.

ಮಾನವರ ಬದುಕಿನಲ್ಲಿ "ಯಾವುದು ಸರಿ/ಯಾವುದು ತಪ್ಪು, ಯಾವುದು ಒಳ್ಳೆಯದು/ಯಾವುದು ಕೆಟ್ಟದ್ದು" ಎಂಬುದನ್ನು ವಿಂಗಡಿಸಿ ತಿಳಿಯಬಲ್ಲ ಅರಿವನ್ನು ಮೂಡಿಸಿ; ಒಳಿತಿನ ಹಾದಿಯಲ್ಲಿ ನಡೆಯುವಂತೆ ಮಾಡಿ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಗುರುವನ್ನು ಜಾತಿ, ಮತ, ಲಿಂಗ, ಸಂಪತ್ತಿನ ನೆಲೆಯಿಂದ ನೋಡಬಾರದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

"ಜಾತಿ, ಮತ, ಲಿಂಗ, ಸಂಪತ್ತಿನ ನೆಲೆಯಿಂದ ನೋಡುವುದು" ಎಂದರೆ

ಮೇಲು ಜಾತಿ/ನಡುವಣ ಜಾತಿ/ಕೆಳ ಜಾತಿ; ನಮ್ಮದು ಈ ಮತ / ಬೇರೆಯವರದು ಮತ್ತೊಂದು ಮತ; ಹೆಣ್ಣು/ಗಂಡು; ಸಿರಿವಂತ/ಬಡವ ಎಂಬ ತಾರತಮ್ಯದಿಂದ ನೋಡಿ, ಯಾವುದೇ ವ್ಯಕ್ತಿಯನ್ನು ನಮ್ಮವನೆಂದು ಮೆರೆಸುವುದು ಇಲ್ಲವೇ ಬೇರೆಯವನೆಂದು ಕಡೆಗಣಿಸುವುದು.

(ತನ್ನದು+ಆದಡೆ+ಏನೋ; ತನ್ನದು=ತನಗೆ ಸೇರಿದ್ದು/ತನ್ನದೇ ಆಗಿರುವುದು; ಆದಡೆ=ಆಗಿದ್ದರೆ; ಏನೋ=ಏನು ಅನುಕೂಲ/ತೊಂದರೆ; ಕನ್ನಡಿ= ಪ್ರತಿಬಿಂಬವನ್ನು ನೋಡಲು ಬಳಸುವ ಗಾಜು/ಕಂಚಿನ ಉಪಕರಣ; ಅನ್ಯರದು+ ಆದಡೆ+ಏನೋ; ಅನ್ಯ=ಇತರ/ಬೇರೆಯ; ಅನ್ಯರದು=ಇತರರದು/ಬೇರೆಯವರದು;

ತನ್ನದಾದಡೇನೋ ಕನ್ನಡಿ ಅನ್ಯರದಾದಡೇನೋ ಕನ್ನಡಿ= ಕನ್ನಡಿಯ ಒಡೆತನ ಯಾರಿಗೆ ಸೇರಿದ್ದರೆ ತಾನೆ ಏನು/ಕನ್ನಡಿಯು ಯಾರದಾಗಿದ್ದರೆ ತಾನೆ ಏನು; ತನ್ನ=ಕನ್ನಡಿಯಲ್ಲಿ ನೋಡಿಕೊಳ್ಳುವ ವ್ಯಕ್ತಿಯ; ರೂಪ=ಆಕಾರ/ಪಡಿಯಚ್ಚು; ಕಂಡಡೆ=ಕಾಣಿಸಿದರೆ/ಕಾಣುವಂತಾದರೆ; ಸಾಲು=ಸಾಕು/ಅಗತ್ಯ ಪೂರಯಿಸುವುದು; ಸಾಲದೆ=ಸಾಕಲ್ಲವೇ/ಅಗತ್ಯ ಈಡೇರುವುದಿಲ್ಲವೇ;

ಸದ್ಗುರು=ಒಳ್ಳೆಯ ಗುರು/ಜೀವನದಲ್ಲಿ ಒಳಿತಿನ ನಡೆನುಡಿಗಳನ್ನು ತಿಳಿಯ ಹೇಳಿ, ಶಿಷ್ಯನ ವ್ಯಕ್ತಿತ್ವವನ್ನು ರೂಪಿಸುವವರು; ಆವನ್+ಆದಡೆ+ಏನೋ; ಆವನ್=ಯಾವನು; ತನ್ನನ್+ಅರುಹಿಸಿದಡೆ; ತನ್ನನ್=ವಿದ್ಯೆಯನ್ನು ಕಲಿಯಲು ಆಸೆ/ಹಂಬಲವುಳ್ಳ ವ್ಯಕ್ತಿಯನ್ನು; ಅರುಹು=ತಿಳಿಸು/ಮನದಟ್ಟುಮಾಡು; **ಅರುಹಿಸಿದಡೆ**=ಮನದಟ್ಟು ಮಾಡಿಕೊಳ್ಳುವಂತೆ ತಿಳಿಯ ಹೇಳಿದರೆ/ಅರಿತು ಬಾಳುವಂತೆ ಹೇಳಿದರೆ; ಸಿಮ್ಮಲಿಗೆಯ ಚೆನ್ನರಾಮಾ=ಚಂದಿಮರಸನ ಮೆಚ್ಚಿನ ದೇವರು.)

❖

92. ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ
ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು
ನಾಲ್ಕೂ ದೆಸೆಯಲಟ್ಟುತ ಬರೆ
ಕಂಡು ಭಯದಿಂದ ಹೋಗ ದೆಸೆಯಿಲ್ಲದೆ
ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ
ಹಾವ ಕಂಡು ಇಲಿಗಡಿದ ಬಳ್ಳಿಯ ಹಿಡಿದು ನಿಲೆ
ಜೇನುಹುಳು ಮೈಯನೂರುವಾಗ
ಮೂಗಿನ ತುದಿಯಲೊಂದು ಹನಿ ಮಧು ಬಂದು ಬೀಳೆ
ಆ ಮಧುವ ಕಂಡು ಹಿರಿದಪ್ಪ ದುಃಖವೆಲ್ಲವೆಲ್ಲವ ಸೈರಿಸಿ
ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ
ಈ ಸಂಸಾರ ಸುಖ ವಿಚಾರಿಸಿ ನೋಡಿದಡೆ ದುಃಖದಾಗರ
ಇದನರಿದು ಸಕಲ ವಿಷಯಂಗಳಲ್ಲಿ ಸುಖವಿಂತುಟೆಂದು
ನಿರ್ವಿಷಯನಾಗಿ ನಿಂದ ನಿಲವು ನೀನೇ
ಸಿಮ್ಮಲಿಗೆಯ ಚೆನ್ನರಾಮಾ.

ಈ ಜಗತ್ತಿನಲ್ಲಿ ಹುಟ್ಟಿ ಬೆಳೆದು ಬಾಳಿ ಸಾಯುತ್ತಿರುವ ಮಾನವರಲ್ಲಿ ಬಹುತೇಕ ಮಂದಿಯ ಬದುಕಿನಲ್ಲಿ ನಾನಾ ರೀತಿಯ ಸಂಕಟ/ವೇದನೆ/ಸೋಲು/ಅಪಮಾನ/ನೋವಿನ ಪ್ರಸಂಗಗಳೇ ಹೆಚ್ಚಾಗಿದ್ದರೂ, ಇವುಗಳ ನಡುವೆಯೇ ತಮ್ಮ ಜೀವನದಲ್ಲಿ ದೊರೆಯುವ ಒಲವು ನಲಿವಿನ ಅವಕಾಶವನ್ನು ಕಳೆದುಕೊಳ್ಳದೆ, ಅದನ್ನು ಪಡೆದು ಆನಂದಪಡುವಂತಹ ಆಸಕ್ತಿಯನ್ನು ಮನದಲ್ಲಿ ಹೊಂದಿರಬೇಕೆಂಬುದನ್ನು ಶಬ್ದಚಿತ್ರವೊಂದರ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

(ಬಟ್ಟೆ+ಕೊಂಡು; ಬಟ್ಟೆ=ದಾರಿ/ಮಾರ್ಗ; ಕೊಂಡು=ಹಿಡಿದು; ಹೋಗುತ+ಇಪ್ಪ; ಹೋಗು=ನಡೆ/ತೆರಳು; ಇಪ್ಪ=ಇರುವ; ಮನುಜನ್+ಒಬ್ಬ; ಮನುಜ=ಮಾನವ/ವ್ಯಕ್ತಿ; **ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ**= ದಟ್ಟವಾದ ಕಾಡಿನ ಹಾದಿಯಲ್ಲಿ ಒಬ್ಬ ವ್ಯಕ್ತಿಯು ನಡೆದುಕೊಂಡು ಹೋಗುತ್ತಿದ್ದಾಗ;

ಹುಲಿ=ಕಾಡಿನಲ್ಲಿ ನೆಲೆಸಿರುವ ಪ್ರಾಣಿ; ಕಾಡು+ಕಿಚ್ಚು; ಕಾಡು=ಅಡವಿ/ಕಾನನ/ಅರಣ್ಯ; ಕಿಚ್ಚು=ಬೆಂಕಿ/ಅಗ್ನಿ; ಕಾಡುಗಿಚ್ಚು=ಕಾಡಿನ ಮರಗಿಡಪೊದೆಬಳ್ಳಿಗಳಿಗೆ ಬೆಂಕಿ ತಗುಲಿ, ಅದು ಎಲ್ಲೆಡೆಯಲ್ಲಿಯೂ ಹಬ್ಬಿ, ದಗದಗನೆ ಹತ್ತಿಕೊಂಡು ಮುಗಿಲನ್ನು ಮುಟ್ಟುವಂತೆ ಬೆಂಕಿಯು ದೊಡ್ಡದಾಗಿ ಉರಿಯುತ್ತಿರುವುದು; ರಕ್ಕಸಿ=ಕಾಡಿನಲ್ಲಿ

ನೆಲೆಸಿರುವ ಬುಡಕಟ್ಟಿನ ಸಮುದಾಯಕ್ಕೆ ಸೇರಿದ ಹೆಣ್ಣು. ರಕ್ಕಸ ಬುಡಕಟ್ಟಿನ ಸಮುದಾಯದ ವ್ಯಕ್ತಿಗಳು ಮಾನವರನ್ನು ತಿನ್ನುತ್ತಿದ್ದರು ಎಂಬ ಒಂದು ಕಲ್ಪನೆಯು ಜನಮನದಲ್ಲಿತ್ತು; ಕಾಡು+ಆನೆ+ಗಳು; ಆನೆ=ಕಾಡಿನಲ್ಲಿ ನೆಲೆಸಿರುವ ಒಂದು ಪ್ರಾಣಿ; ದೆಸೆಯಲ್+ಅಟ್ಟುತ; ದೆಸೆ=ದಿಕ್ಕು; ದೆಸೆಯಲ್=ದಿಕ್ಕಿನಲ್ಲಿ/ದಿಕ್ಕಿನಿಂದ; ಅಟ್ಟು=ಮೇಲೆ ನುಗ್ಗು/ಬೆನ್ನು ಹತ್ತಿ ಬರುವುದು; **ನಾಲ್ಕೂ ದೆಸೆಯಲಟ್ಟುತ ಬರೆ**= ನಾಲ್ಕು ದಿಕ್ಕಿಗಳಿಂದಲೂ ಸುತ್ತುವರಿದು ಬೆನ್ನಟ್ಟಿಬರಲು / ಮಯ್ ಮೇಲೆ ನುಗ್ಗುತ್ತಿರಲು;

ಕಂಡು=ನೋಡಿ; ಭಯ+ಇಂದ; ಭಯ=ಹೆದರಿಕೆ; ಹೋಗ=ತಪ್ಪಿಸಿಕೊಳ್ಳಲು/ ಪಾರಾಗಲು; ದೆಸೆ+ಇಲ್ಲದೆ; ದೆಸೆ=ದಿಕ್ಕು; **ಹೋಗ ದೆಸೆಯಿಲ್ಲದೆ**=ತಪ್ಪಿಸಿಕೊಳ್ಳಲು ದಾರಿ ಕಾಣದೆ/ಅವಕಾಶವಿಲ್ಲದೆ/ದಿಕ್ಕು ತೋಚದೆ; ಬಾವಿ=ನೀರಿನಿಂದ ತುಂಬಿರುವ ದೊಡ್ಡ ಗುಂಡಿ/ಕೂಪ; ತಲೆ+ಅನ್+ಊರಿ; ಊರಿ=ಇಟ್ಟು/ಒಡ್ಡಿ/ಮಡಗಿ; **ತಲೆಯನೂರಿ**=ತಲೆಯನ್ನು ಬಗ್ಗಿಸಿಕೊಂಡು/ತಲೆ ಮರೆಸಿಕೊಂಡು/ಮೇಲೆ ಬೀಳಲು ಬಂದವರ ಕಣ್ಣು ತಪ್ಪಿಸಿ; ಬೀಳುವ+ಅಲ್ಲಿ; ಬೀಳುವಲ್ಲಿ=ಬಾವಿಯ ಒಳಕ್ಕೆ ಇಳಿಯುವ ಸಮಯದಲ್ಲಿ/ಜಾಗದಲ್ಲಿ; ಹಾವು=ನಂಜಿನಿಂದ ಕೂಡಿದ ಒಂದು ಪ್ರಾಣಿ; ಕಂಡು=ನೋಡಿ; ಇಲಿ+ಕಡಿದ; ಇಲಿ=ಒಂದು ಬಗೆಯ ಪ್ರಾಣಿ; ಕಡಿದ=ಅಗಿದ/ಕಚ್ಚಿರುವ; ಬಳ್ಳಿ=ಹಂಬು/ಲತೆ/ಗಾತ್ರದಲ್ಲಿ ಸಣ್ಣನೆಯದಾಗಿದ್ದು ಉದ್ದವಾಗಿ ಹಬ್ಬಿರುವ ಸಸ್ಯ; **ಇಲಿಗಡಿದ ಬಳ್ಳಿ**=ಇಲಿಯ ಕಡಿತದಿಂದ ಇನ್ನೇನು ಕತ್ತರಿಸಿ ತುಂಡಾಗುವ ರೀತಿಯಲ್ಲಿದ್ದ ಬಳ್ಳಿ; ಹಿಡಿದು=ಹಿಡಿದುಕೊಂಡು/ ಅವಲಂಬಿಸಿ/ಆಶ್ರಯಿಸಿ/ನೆಚ್ಚಿಕೊಂಡು; ನಿಲೆ=ನಿಲ್ಲಲು/ಜೋತಾಡುತ್ತಿರಲು/ ಬಾವಿಯ ಒಳಗಡೆ ನೇತಾಡುತ್ತಿರಲು;

ಜೇನುಹುಳು=ಮರದ ಕೊಂಬೆರೆಂಬೆಗಳ ಮೇಲೆ/ಕಲ್ಲಿನ ಪೊಟರೆಗಳಲ್ಲಿ ಗೂಡನ್ನು ಕಟ್ಟಿ ಹೂವುಗಳ ಮಕರಂದವನ್ನು ಹೀರಿ ತಂದು ಸಿಹಿಯಾದ ತುಪ್ಪವನ್ನು ತಯಾರಿಸುವ ಒಂದು ಬಗೆಯ ಹುಳು; ಮೈಯನು+ಊರುವಾಗ; ಮೈಯನು=ದೇಹವನ್ನು/ಶರೀರವನ್ನು; ಊರು=ಕಚ್ಚು/ಚುಚ್ಚು; **ಮೈಯ ನೂರುವಾಗ**=ಜೇನುಹುಳು ತನ್ನ ಚೂಪಾದ ಹಾಗೂ ಹರಿತವಾದ ಮುಳ್ಳಿನ ಮೊನೆಯಂತಹ ಕೊಂಡಿಯಿಂದ ಮಯ್ಯನ್ನು ಕಚ್ಚುವಾಗ; **ಇಲಿಗಡಿದ ಬಳ್ಳಿಯ ಹಿಡಿದು ನಿಲೆ ಜೇನುಹುಳು ಮೈಯನೂರುವಾಗ**=ಇಲಿಯ ಕಡಿತದಿಂದ ಇನ್ನೇನು ತುಂಡಾಗುವಂತೆ ಹಿಂಜಿಹೋಗುತ್ತಿದ್ದ ಬಳ್ಳಿಯನ್ನೇ ಹಿಡಿದುಕೊಂಡು ನೇತಾಡುತ್ತಿದ್ದಾಗ ಉಂಟಾದ ಸದ್ದುಗದ್ದಲದಿಂದ/ಅಲುಗಾಟದಿಂದ, ಬಾವಿಯ

ದಡದ ಅಂಚಿನಲ್ಲಿ ಕಟ್ಟಿದ್ದ ಜೇನುಗೂಡಿನಲ್ಲಿದ್ದ ಜೇನುಹುಳುಗಳು ಕೆರಳಿ ಹೊರಬಂದು ಅವನ ಮಯ್ಯನ್ನು ಕಚ್ಚತೊಡಗಿದವು. ಆಗ ಜೇನಿನ ಹುಟ್ಟಿಯಿಂದ ಜೇನುತುಪ್ಪವು ಹನಿಹನಿಯಾಗಿ ಬೀಳತೊಡಗಿತು; ತುದಿಯಲ್+ಒಂದು; ತುದಿ=ಕೊನೆ/ಅಂಚು; ಹನಿ=ತೊಟ್ಟು/ಒಂದು ಬಿಂದು; ಮಧು=ಜೇನು ತುಪ್ಪ/ ಸಿಹಿಯಾದ ಜೇನು; **ಮೂಗಿನ ತುದಿಯಲೊಂದು ಹನಿ ಮಧು ಬಂದು ಬೀಳೆ**= ನೇತಾಡುತ್ತಿದ್ದ ವ್ಯಕ್ತಿಯ ಮೂಗಿನ ತುದಿಯ ಮೇಲೆ ಜೇನುತುಪ್ಪದ ಹನಿಯೊಂದು ಬೀಳಲು;

ಹಿರಿದು+ಅಪ್ಪ; ಹಿರಿ=ದೊಡ್ಡದು/ಹೆಚ್ಚಿನದು; ಅಪ್ಪ=ಆಗಿರುವ/ಆದಂತಹ; ದುಃಖ+ಎಲ್ಲವ; ದುಃಖ=ಸಂಕಟ/ತೊಂದರೆ/ಕಳವಳ; **ಹಿರಿದಪ್ಪ ದುಃಖವೆಲ್ಲವ**= ಹಿಡಿದುಕೊಂಡಿರುವ ಬಳ್ಳಿಯು ತುಂಡಾದರೆ ಬಾವಿಯ ಒಳಕ್ಕೆ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳವಂತಹ ನೆಲೆಗೆ ಒಳಗಾಗಿ, ಅತಿ ಹೆಚ್ಚಿನ ಅಪಾಯಕ್ಕೆ ಗುರಿಯಾಗಿ ಒದ್ದಾಡುತ್ತಿರುವ ಸಂಕಟವನ್ನು; ಸೈರಿಸಿ=ಸಹಿಸಿಕೊಂಡು/ತಾಳಿಕೊಂಡು; **ನಾಲಗೆಯ ತುದಿಯಲ್ಲಿ**=ನಾಲಗೆಯ ತುದಿಯಿಂದ ಜೇನಿನ ಹನಿಯಿರುವ ಮೂಗಿನ ಜಾಗವನ್ನು; ಸೇವಿಸುವ+ಅಂತೆ; ಸೇವಿಸು=ನೆಕ್ಕು/ತಿನ್ನು; ಅಂತೆ=ಹಾಗೆ/ಆ ರೀತಿಯಲ್ಲಿ; ಸಂಸಾರ=ಮಾನವ ಬದುಕು; ಸುಖ=ಮಾನವನ ಬದುಕಿನಲ್ಲಿ ದೊರೆಯುವ ಒಲವು ನಲಿವು/ಮಯ್ ಮನಗಳಿಗೆ ಉಂಟಾಗುವ ಆನಂದ; ವಿಚಾರಿಸಿ=ಚೆನ್ನಾಗಿ/ಸರಿಯಾಗಿ ಮನನ ಮಾಡಿ; ನೋಡಿದಡೆ=ನೋಡಿದರೆ/ ತಿಳಿದರೆ; ದುಃಖದ+ಆಗರ; ಆಗರ=ಮೂಲ ನೆಲೆ/ಜಾಗ; ಇದನ್+ಅರಿದು; ಇದನು=ಇದನ್ನು/ಈ ಸಂಗತಿಯನ್ನು; ಅರಿ=ತಿಳಿ; ಅರಿದು=ತಿಳಿದುಕೊಂಡು/ ಅರಿತುಕೊಂಡು; ಸಕಲ=ಎಲ್ಲಾ/ಎಲ್ಲವನ್ನೂ ಒಳಗೊಂಡಂತೆ; ವಿಷಯಂಗಳ್+ಅಲ್ಲಿ; ವಿಷಯ=ಜೀವನದ ಆಗುಹೋಗುಗಳು/ನೋವುನಲಿವಿನ ಪ್ರಸಂಗಗಳು;

ಸುಖ+ಇಂತುಟು+ಎಂದು; ಇಂತುಟು=ಈ ರೀತಿಯದು/ಬಗೆಯದು; ನಿರ್ವಿಷಯನ್+ಆಗಿ; ನಿರ್ವಿಷಯ=ಜೀವನದ ಆಗುಹೋಗುಗಳ/ನೋವು ನಲಿವುಗಳ ಬಗ್ಗೆ ಹೆಚ್ಚಿನ ಮೋಹ/ಆತಂಕಕ್ಕೆ ಒಳಗಾಗದಿರುವುದು; ನಿಂದ=ತಳೆದ/ ಹೊಂದಿದ; ನಿಲವು=ಮನದಲ್ಲಿ ತಳೆಯುವ ತೀರ್ಮಾನ/ನಿರ್ಣಯ; **ನಿರ್ವಿಷಯನಾಗಿ ನಿಂದ ನಿಲುವು**=ಮಾನವನ ಬದುಕಿನಲ್ಲಿ ನೋವು ನಲಿವುಗಳು ವಾಸ್ತವವೆಂಬುದನ್ನು ಅರಿತುಕೊಂಡು, ಸಂಕಟ ಬಂದಾಗ ನಿರಾಶೆಗೊಂಡು ಕುಗ್ಗಿಹೋಗದೆ, ನಲಿವು ಉಂಟಾದಾಗ ಅದನ್ನು ಪಡೆದು ಬಾಳುವಂತಹ

ಆಸೆಯನ್ನು ಹೊಂದಿರುವುದು/ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳದೆ ಬಾಳುವಂತಹ ಗಟ್ಟಿಮನಸ್ಸನ್ನು ಹೊಂದಿರುವುದು; ನೀನೇ=ಬದುಕಿನಲ್ಲಿ ಎದುರಾದ ಸಂಗತಿಗಳಿಗೆ ಹೊಂದಿಕೊಂಡು ಬಾಳುವುದನ್ನು ಕಲಿಸಿದವನು ನೀನಾಗಿರುವೆ/ಶಿವಶರಣಶರಣೆಯರು ಒಳ್ಳೆಯ ನಡೆನುಡಿಗಳಿಂದ ಬಾಳುವುದಕ್ಕೆ ಕಾರಣವಾಗುವ ಅರಿವನ್ನೇ ದೇವರೆಂದು ನಂಬಿದ್ದರು; ಸಿಮ್ಮಲಿಗೆಯ ಚೆನ್ನರಾಮಾ=ದೇವರ ಹೆಸರು/ಚಂದಿಮರಸನ ಮೆಚ್ಚಿನ ದೇವರು/ಚಂದಿಮರಸನ ವಚನಗಳ ಅಂಕಿತನಾಮ)

❖

93. ಹುಲ್ಲ ಮನುಷ್ಯನ ಕಂಡು ಹುಲ್ಲೆ ತಾ ಬೆದರುವಂತೆ
ಇಲ್ಲದ ಶಂಕೆಯನುಂಟೆಂಬನ್ನಕ್ಕ
ಅದರಲ್ಲಿಯೇ ರೂಪಾಯಿತ್ತು
ಹೇಡಿಗಳನೇಡಿಸಿ ಕಾಡಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಭಾವದ ಗಸಣಿ.

ಇಲ್ಲದ್ದನ್ನು ಇದೆಯೆಂದು... ಇರುವುದನ್ನು ಇಲ್ಲವೆಂದು ಮನದಲ್ಲಿ ಕಲ್ಪಿಸಿಕೊಂಡು, ಜೀವನದ ಪ್ರತಿಯೊಂದು ಗಳಿಗೆಯಲ್ಲೂ ಕಳವಳ/ಅನುಮಾನ/ಗಾಬರಿ/ಆತಂಕಕ್ಕೆ ಒಳಗಾಗಿ ಮಾನಸಿಕ ಜಂಜಾಟದಿಂದ ನರಳುತ್ತಿರುವ ಹೇಡಿಗಳಿಗೆ ಜೀವನದಲ್ಲಿ ಎಂದೆಂದಿಗೂ ನೆಮ್ಮದಿ ದೊರೆಯುವುದಿಲ್ಲವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಹುಲ್ಲ್+ಅ=ಹುಲ್ಲ; ಹುಲ್ಲ=ಹುಲ್ಲನ್ನು; ಹುಲ್ಲು=ರಾಗಿ ಇಲ್ಲವೇ ಬತ್ತದ ಬೆಳೆಯ ಒಣಗಿದ ಕಡ್ಡಿ/ರಾಗಿ ಹುಲ್ಲು/ಬತ್ತದ ಹುಲ್ಲು; ಮನುಷ್ಯ=ಮಾನವ/ವ್ಯಕ್ತಿ; **ಹುಲ್ಲ ಮನುಷ್ಯ**=ಬೆದರುಗೊಂಬೆ/ಬೆದರುಬೊಂಬೆ; ಮಡಕೆಯೊಂದರ ಮೇಲೆ ಕಣ್ಣು ಕಿವಿ ಮೂಗುಗಳನ್ನು ಸುಣ್ಣದಿಂದ ಬರೆದು, ಅದನ್ನು ಮಾನವನ ತಲೆಯಂತೆ ಸಿಂಗರಿಸಿ, ಅದರ ಇಕ್ಕೆಲಗಳಲ್ಲಿ ಕೋಲುಗಳನ್ನು ಬಿಗಿದು ಕಟ್ಟಿ, ಕೋಲುಗಳ ಸುತ್ತ ರಾಗಿ/ಬತ್ತದ ಹುಲ್ಲುಗಳನ್ನು ತುಂಬಿ, ಅದರ ಮೇಲೆ ಅಂಗಿ ಚಡ್ಡಿ ಬಟ್ಟೆಯನ್ನು ಬಿಗಿದುಕಟ್ಟಿ, ವ್ಯಕ್ತಿಯೊಬ್ಬನು ನಿಂತಿರುವಂತೆ ಗೊಂಬೆ/ಬೊಂಬೆಯೊಂದನ್ನು ಮಾಡಿ, ಬೆಳೆಗಳ ನಡುವೆ ಹೊಲಗದ್ದೆತೋಟಗಳಲ್ಲಿ ನಿಲ್ಲಿಸಿರುತ್ತಾರೆ. ಕಯ್ಗೆ ಬರಲಿರುವ ಬೆಳೆಯನ್ನು ಹಕ್ಕಿಗಳಿಂದ/ಪ್ರಾಣಿಗಳಿಂದ ಕಾಪಾಡಿಕೊಳ್ಳುವುದಕ್ಕಾಗಿ ಈ ರೀತಿಯಾದ ಬೊಂಬೆಯನ್ನು ಬೇಸಾಯಗಾರರು ಮಾಡಿರುತ್ತಾರೆ;

ಕಂಡು=ನೋಡಿ; ಹುಲ್ಲೆ=ಜಿಂಕೆ; ತಾ=ತಾನು; ಬೆದರುವ+ಅಂತೆ; ಬೆದರು=ಹೆದರು; ಅಂತೆ=ಹಾಗೆ/ರೀತಿ; **ಹುಲ್ಲ ಮನುಷ್ಯನ ಕಂಡು ಹುಲ್ಲೆ ತಾ ಬೆದರುವಂತೆ**=ಬೆದರುಗೊಂಬೆಯನ್ನೇ ಜೀವಂತನಾದ ವ್ಯಕ್ತಿಯೆಂದು ತಪ್ಪಾಗಿ ತಿಳಿದುಕೊಂಡು ಜಿಂಕೆಯು ಹೆದರಿಕೆಯಿಂದ ಕಂಗಾಲಾಗಿ ಓಡುವಂತೆ; ಇಲ್ಲದ=ವಾಸ್ತವದಲ್ಲಿ ಕಂಡುಬರದ/ದಿಟವಾಗಿರದ; ಶಂಕೆ+ಅನ್+ಉಂಟು+ಎಂಬ+ಅನ್ನಕ್ಕ; ಶಂಕೆ=ಕೇಡಾಗಬಹುದೆಂದು ಮನದಲ್ಲಿ ಹೆದರಿಕೆ; ಅನ್=ಅನ್ನು; ಉಂಟು=ಇದೆ; ಎಂಬ=ಎನ್ನುವ; ಅನ್ನಕ್ಕ=ವರೆಗೆ/ತನಕ;

ಇಲ್ಲದ ಶಂಕೆಯನುಂಟೆಂಬನ್ನಕ್ಕ=ವಾಸ್ತವವಾಗಿ ಇಲ್ಲದ ಅಪಾಯವನ್ನು ಇದೆಯೆಂದು ಊಹಿಸಿಕೊಂಡು, ಹೆದರಿಕೆಯಿಂದ ನಡುಗುತ್ತ ತಲ್ಲಣಗೊಂಡಿರುವ ತನಕ; ಅದರಲ್ಲಿಯೇ=ಮನದಲ್ಲಿ ಮೂಡಿದ ಕೇಡಾಗುವುದೆಂಬ ಒಳಮಿಡಿತಗಳಿಂದಲೇ; ರೂಪು+ಆಯಿತ್ತು; ರೂಪು=ಆಕಾರ;

ರೂಪು ಆಯಿತ್ತು=ಮನದ ಹೆದರಿಕೆಯೇ ಒಂದು ರೂಪವನ್ನು ಪಡೆದು, ನಿಜವಾಗಿ ಎದುರಿಗೆ ಬಂದಂತೆ ಆಗುತ್ತದೆ; ಹೇಡಿಗಳನ್+ಏಡಿಸಿ; ಹೇಡಿ= ಅಂಜುಬುರುಕ/ಹೆದರಿಕೆಯಿಂದ ತತ್ತರಿಸುತ್ತಾ, ಎಲ್ಲ ಸನ್ನಿವೇಶಗಳಲ್ಲೂ/ ಸಂಗತಿಗಳಲ್ಲಿಯೂ ಮುಂದಕ್ಕೆ ಅಡಿಯಿಡಲು ಹಿಂಜರಿಯುವನು/ಪುಕ್ಕಲುತನ ವುಳ್ಳವನು; ಏಡಿಸು=ಹೀಯಾಳಿಸು/ನಿಂದಿಸು/ಅವಹೇಳನ ಮಾಡು/ಕಡೆಗಣಿಸು; ಕಾಡು+ಇತ್ತು; ಕಾಡು=ಪೀಡಿಸು/ತೊಂದರೆಯನ್ನು ಕೊಡು/ನರಳುವಂತೆ ಮಾಡು; ಇತ್ತು=ಇರುವುದು; ಭಾವ=ಮನದಲ್ಲಿ ಮೂಡುವ ಒಳಮಿಡಿತ; ಗಸಣಿ=ತೊಂದರೆ/ ಕಾಟ/ಹಿಂಸೆ/ತಿಕ್ಕಾಟ/ಕೋಟಲೆ;

ಭಾವದ ಗಸಣಿ=ಮನದೊಳಗೆ ಮೂಡುವಂತಹ ಕೆಟ್ಟದ್ದಾಗುವುದೆಂಬ ಒಳಮಿಡಿತಗಳ ತುಡಿತ; ಸಿಮ್ಮಲಿಗೆಯ ಚೆನ್ನರಾಮನ್+ ಎಂಬ; ಎಂಬ=ಎನ್ನುವ; ಸಿಮ್ಮಲಿಗೆಯ ಚೆನ್ನರಾಮಾ=ದೇವರ ಹೆಸರು/ಚಂದಿಮರಸನ ಮೆಚ್ಚಿನ ದೇವರು/ ಚಂದಿಮರಸನ ವಚನಗಳ ಅಂಕಿತನಾಮ)

❖

94. ಜಾಣನಯ್ಯಾ ಸದ್ಗುರುವ ನಂಬುವಲ್ಲಿ
ಜಾಣನಯ್ಯಾ ವಿಷಯಂಗಳ ಬಿಡುವಲ್ಲಿ
ಜಾಣನಯ್ಯಾ ಅವಿದ್ಯವ ಗೆಲ್ಲುವಲ್ಲಿ
ಜಾಣನಯ್ಯಾ ತನ್ನ ತಾನರಿವಲ್ಲಿ
ಜಾಣನಯ್ಯಾ ನಿಜಗುಣನ ಶ್ರೀಪಾದವ ಪಿಡಿವಲ್ಲಿ
ಜಾಣನಯ್ಯಾ ನಮ್ಮ ಸಿಮ್ಮಲಿಗೆಯ ಚೆನ್ನರಾಮಾ.

ವ್ಯಕ್ತಿಯು ತನ್ನ ನಡೆನುಡಿಗಳನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಂಡು ಬಾಳುವುದಕ್ಕಾಗಿ ಜಾಣತನದಿಂದ ಆಯ್ಕೆಗಳನ್ನು ಹೇಗೆ ಮಾಡಿಕೊಂಡಿರುತ್ತಾನೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಜಾಣನ್+ಅಯ್ಯಾ; ಜಾಣ=ಚತುರ/ಬುದ್ಧಿವಂತ; ಅಯ್ಯಾ=ಗಂಡಸನ್ನು ಉದ್ದೇಶಿಸಿ ಮಾತನಾಡುವಾಗ ಬಳಸುವ ಪದ; ಸದ್ಗುರು=ಒಳ್ಳೆಯ ಗುರು. ವಿದ್ಯೆಯನ್ನು ಕಲಿಯಲೆಂದು ತನ್ನ ಬಳಿ ಬಂದ ವ್ಯಕ್ತಿಗಳಿಗೆ ಅಕ್ಕರದ ತಿಳಿವು ಮತ್ತು ಹತಾರಗಳ ಬಳಕೆಯ ತರಬೇತಿಯನ್ನು ನೀಡುವುದರ ಜತೆಗೆ, ಅವರ ವ್ಯಕ್ತಿತ್ವದಲ್ಲಿ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಮೂಡಿಸುವ ಗುರುವನ್ನು 'ಸದ್ಗುರು' ಎಂದು ಕರೆಯುತ್ತಾರೆ;

'ಸಾಮಾಜಿಕ ಅರಿವು' ಎಂದರೆ 'ಲೋಕಜೀವನದಲ್ಲಿ ಯಾವುದು ಸರಿ/ಯಾವುದು ತಪ್ಪು; ಯಾವುದು ನೀತಿ/ಯಾವುದು ಅನೀತಿ; ಯಾವುದು ವಾಸ್ತವ/ಯಾವುದು ಕಲ್ಪಿತ' ಎಂಬುದನ್ನು ಒರೆಹಚ್ಚಿ ನೋಡಿ, ತನ್ನನ್ನು ಒಳಗೊಂಡಂತೆ ಲೋಕದ ಜನಸಮುದಾಯಕ್ಕೆ ಒಳಿತನ್ನು ಮಾಡುವ ಮಾತಿನ ಮತ್ತು ದುಡಿಮೆಯ ಸ್ವರೂಪವನ್ನು ತಿಳಿಯುವುದು:

'ಸಾಮಾಜಿಕ ಎಚ್ಚರ' ಎಂದರೆ ಜಾತಿ, ಮತ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಆಚರಣೆಗಳಿಂದ ಮಾನವರ ಬದುಕಿನಲ್ಲಿ ಉಂಟಾಗುತ್ತಿರುವ ಪರಿಣಾಮಗಳನ್ನು ಸರಿಯಾಗಿ ಗಮನಿಸಿ, ಯಾವ ಬಗೆಯ ಆಚರಣೆಗಳು ಮಾನವ ಸಮುದಾಯದ ಸಂಕಟಗಳಿಗೆ ಕಾರಣವಾಗಿವೆ ಎಂಬುದನ್ನು ಅರಿತುಕೊಂಡು, ಅಂತಹ ಆಚರಣೆಗಳಿಂದ ದೂರವಿರುವುದು.

ನಂಬು=ನೆಚ್ಚು/ಅವಲಂಬಿಸು; ನಂಬುವಲ್ಲಿ=ನಂಬುವುದರಲ್ಲಿ;

ಜಾಣನಯ್ಯಾ ಸದ್ಗುರುವ ನಂಬುವಲ್ಲಿ=ವ್ಯಕ್ತಿಯ ಹುಟ್ಟಿಗೆ ತಂದೆತಾಯಿ ಕಾರಣರಾಗಿದ್ದರೆ, ವ್ಯಕ್ತಿಯ ವ್ಯಕ್ತಿತ್ವ ಒಳ್ಳೆಯ ರೀತಿಯಲ್ಲಿ ರೂಪುಗೊಳ್ಳಲು ಒಳ್ಳೆಯ ಗುರು ನೆರವಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸದ್ಗುರುವನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ವ್ಯಕ್ತಿಯು ಜಾಣನಾಗಿದ್ದಾನೆ;

ವಿಷಯ=ಮಯ್ ಮನದಲ್ಲಿ ನಿರಂತರವಾಗಿ ತುಡಿಯುತ್ತಿರುವ ಒಳಿತು ಕೆಡುಕಿನ ಒಳಮಿಡಿತಗಳು; ಬಿಡು=ತೊರೆ/ತ್ಯಜಿಸು; ಬಿಡುವಲ್ಲಿ=ಬಿಡುವುದರಲ್ಲಿ;

ಜಾಣನಯ್ಯಾ ವಿಷಯಂಗಳ ಬಿಡುವಲ್ಲಿ=ವ್ಯಕ್ತಿಯು ತನ್ನ ಮನದಲ್ಲಿ ತುಡಿಯುತ್ತಿರುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ತ್ಯಜಿಸಿ, ತನ್ನ ಮಯ್ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದರಲ್ಲಿ ಜಾಣನಾಗಿದ್ದಾನೆ;

ವಿದ್ಯೆ=ಅರಿವು/ತಿಳುವಳಿಕೆ; ಅವಿದ್ಯೆ=ಕೆಟ್ಟ ವಿದ್ಯೆ. ವ್ಯಕ್ತಿಯು ತಾನು ಕಲಿತ ವಿದ್ಯೆಯಿಂದ ಸಹಮಾನವರನ್ನು ವಂಚಿಸಿ, ಸಮಾಜಕ್ಕೆ ಕೇಡನ್ನು ಬಗೆಯುತ್ತಿದ್ದರೆ, ಅಂತಹ ವಿದ್ಯೆಯು ಅವಿದ್ಯೆಯಾಗುತ್ತದೆ;

ಗೆಲ್ಲು=ಜಯಿಸು/ವಿಜಯ; ಗೆಲ್ಲುವಲ್ಲಿ=ಗೆಲ್ಲುವುದರಲ್ಲಿ;

ಜಾಣನಯ್ಯಾ ಅವಿದ್ಯವ ಗೆಲ್ಲುವಲ್ಲಿ=ವ್ಯಕ್ತಿಯು ತಾನು ಕಲಿತ ವಿದ್ಯೆಯಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯದೆ, ಒಳಿತನ್ನು ಮಾಡುವುದರಲ್ಲಿ ಎಚ್ಚರದಿಂದಿದ್ದು, ತನ್ನ ಕೆಲಸದಲ್ಲಿ ಯಶಸ್ಸನ್ನು ಪಡೆಯುವುದರಲ್ಲಿ ಜಾಣನಾಗಿದ್ದಾನೆ.

ತನ್ನ=ತನ್ನನ್ನು; ತಾನ್+ಅರಿವಲ್ಲಿ; ಅರಿವಲ್ಲಿ=ತಿಳಿಯುವುದರಲ್ಲಿ;

"ತನ್ನನ್ನು ತಾನು ಅರಿಯುವುದು" ಎಂದರೆ ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುತ್ತಿರುವ ಒಳಿತು ಕೆಡುಕಿನ ಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲ ಕ್ರಿಯೆಗಳಿಗೂ ನಿಸರ್ಗ ಮತ್ತು ಮಾನವರ ನಡೆನುಡಿಗಳೇ ಕಾರಣವೆಂಬ ವಾಸ್ತವವನ್ನು ಅರಿತುಕೊಂಡು ಒಳ್ಳೆಯ ನಡೆನುಡಿಯಿಂದ ಬಾಳುವುದು;

ಜಾಣನಯ್ಯಾ ತನ್ನ ತಾನರಿವಲ್ಲಿ=ಮಾನವ ಜೀವಿಯ ವ್ಯಕ್ತಿತ್ವದ ಇತಿಮಿತಿಗಳನ್ನು ಮತ್ತು ಜಗತ್ತಿನ ವಾಸ್ತವವನ್ನು ಅರಿತುಕೊಂಡು ಬಾಳುವುದರಲ್ಲಿ ವ್ಯಕ್ತಿಯು ಜಾಣನಾಗಿದ್ದಾನೆ;

ನಿಜಗುಣ=ದೇವರು/ಶಿವನ ಮತ್ತೊಂದು ಹೆಸರು; ಶ್ರೀಪಾದ=ಮಂಗಳಕರವಾದ ಪಾದ; ಪಿಡಿ=ಹಿಡಿ;

ಜಾಣನಯ್ಯಾ ನಿಜಗುಣನ ಶ್ರೀಪಾದವ ಪಿಡಿವಲ್ಲಿ=ಒಳ್ಳೆಯ ನಡೆನುಡಿಗಳ ಸಂಕೇತವಾದ ಶಿವನನ್ನು ಆಶ್ರಯಿಸುವಲ್ಲಿ ಜಾಣನಾಗಿದ್ದಾನೆ;

ಸಿಮ್ಮಲಿಗೆಯ ಚೆನ್ನರಾಮ=ಶಿವನ ಮತ್ತೊಂದು ಹೆಸರು/ಚಂದಿಮರಸನ ವಚನಗಳ ಅಂಕಿತನಾಮ;

❖

24. ಚೆನ್ನಬಸವಣ್ಣ

ದೊರೆತಿರುವ ವಚನಗಳು: 1776

ವಚನಗಳ ಅಂಕಿತನಾಮ: ಕೂಡಲಚೆನ್ನಸಂಗಯ್ಯ / ಕೂಡಲಚೆನ್ನಸಂಗಮದೇವ

95. ಅರ್ಥ ಮದ ಅಹಂಕಾರ ಮದ ಕುಲ ಮದ ಬಿಡದೆ
ಸಮಯಾಚಾರ ಸಮಯ ಭಕ್ತಿ
ಇನ್ನಾರಿಗೆಯೂ ಅಳವಡದು ನೋಡಾ
ಮಾತಿನ ಮಾತಿನ ಮಿಂಚಿನ ಡಾಳಕರಿಗೆ
ಸಮಯ ಭಕ್ತಿ ಇನ್ನೆಲ್ಲಿಯದೊ ಕೂಡಲ ಚೆನ್ನಸಂಗಯ್ಯಾ.

ಸಿರಿವಂತಿಕೆಯ ಸೊಕ್ಕು, ಜಾತಿ ಮೇಲರಿಮೆಯ ಹಮ್ಮು ಮತ್ತು ನಾವೇ ದೊಡ್ಡವರೆಂಬ ಅಹಂಕಾರವುಳ್ಳ ವ್ಯಕ್ತಿಗಳು ಒಳ್ಳೆಯ ನಡೆನುಡಿಯನ್ನು ಹೊಂದಿರುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಜಾತಿ ಮೇಲರಿಮೆ' ಎಂದರೆ ನನ್ನ ಜಾತಿಯೇ ಇನ್ನುಳಿದ ಜಾತಿಗಳಿಗಿಂತ ಮೇಲು ಎಂಬ ಒಳಮಿಡಿತ; ಅರ್ಥ=ಹಣ/ಸಂಪತ್ತು/ಆಸ್ತಿ/ಒಡವೆ ವಸ್ತು; ಮದ=ಸೊಕ್ಕು/ಗರ್ವ; **ಅರ್ಥ ಮದ**=ಅಪಾರವಾದ ಸಂಪತ್ತಿಗೆ ತಾನು ಒಡೆಯನಾಗಿದ್ದೇನೆ ಎಂಬ ಸೊಕ್ಕಿನ ನಡೆನುಡಿ;

ಅಹಂಕಾರ=ಹಮ್ಮು; **ಅಹಂಕಾರ ಮದ**=ಎಲ್ಲರಿಗಿಂತ ನಾನೇ ದೊಡ್ಡವನು/ನಾನೇ ತಿಳಿದವನು/ನಾನೇ ಸಂಪತ್ತುಳ್ಳವನು/ನಾನೇ ಉನ್ನತ ಗದ್ದುಗೆಯಲ್ಲಿರುವವನು/ನನ್ನಿಂದಲೇ ಎಲ್ಲವೂ ನಡೆಯುತ್ತಿದೆ ಎಂಬ ಸೊಕ್ಕಿನ ನಡೆನುಡಿ;

ಕುಲ=ಜಾತಿ; **ಕುಲ ಮದ**=ನೂರೆಂಟು ಬಗೆಯ ಜಾತಿಗಳ ಮೆಟ್ಟಿಲುಗಳಿಂದ ಕೂಡಿರುವ ಸಮಾಜದಲ್ಲಿ ತಾನು ಹುಟ್ಟಿ ಬೆಳೆದು ಬಾಳುತ್ತಿರುವ ಜಾತಿಯೇ ಇನ್ನುಳಿದ ಜಾತಿಗಳಿಗಿಂತ ಮೇಲು ಎಂಬ ಸೊಕ್ಕಿನ ನಡೆನುಡಿ;

ಅರ್ಥ ಮದ... ಅಹಂಕಾರ ಮದ... ಕುಲ ಮದ ಬಿಡದೆ=ವ್ಯಕ್ತಿಯು ಸಿರಿವಂತಿಕೆಯ, ನಾನತ್ವದ ಮತ್ತು ಜಾತಿ ಮೇಲರಿಮೆಯ ಸೊಕ್ಕಿನ ನಡೆನುಡಿಗಳನ್ನು ಬಿಟ್ಟು, ಸಮಾಜದಲ್ಲಿ ಎಲ್ಲರನ್ನು ಸಮಾನವಾಗಿ ಕಾಣುತ್ತ, ಎಲ್ಲರೊಡನೆ ಪ್ರೀತಿ, ಕರುಣೆ ಮತ್ತು ಗೆಳೆತನದಿಂದ ಜತೆಗೂಡಿ ಬಾಳದಿದ್ದರೆ;

ಸಮಯ+ಆಚಾರ; ಸಮಯ=ಧರ್ಮ; ಆಚಾರ=ನಡೆನುಡಿ;

ಸಮಯಾಚಾರ=ಧರ್ಮದ ನಡೆನುಡಿ. ಅಂದರೆ ವ್ಯಕ್ತಿಯು ತನ್ನ ಮತ್ತು ತನ್ನ ಕುಟುಂಬದ ಒಳಿತಿಗಾಗಿ ಬಾಳುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿಯೂ ಒಳ್ಳೆಯ ನಡೆನುಡಿಯಿಂದ ಬಾಳುವುದು; ಭಕ್ತಿ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ತಿಳಿದು ಬಾಳುವುದು;

ಇನ್ನು+ಆರಿಗೆಯೂ; ಆರು=ಯಾರು; ಆರಿಗೆಯೂ=ಯಾರೊಬ್ಬರಿಗೂ; ಅಳವಡು=ಒಪ್ಪು/ಹೊಂದಿಕೆಯಾಗು; ನೋಡಾ=ಯಾವುದು ಸರಿ–ಯಾವುದು ತಪ್ಪು ಎಂಬುದನ್ನು ಒರೆಹಚ್ಚಿ ನೋಡು;

ಸಮಯಾಚಾರ ಸಮಯ ಭಕ್ತಿ ಇನ್ನಾರಿಗೆಯೂ ಅಳವಡದು ನೋಡಾ=ನಿಜ ಜೀವನದಲ್ಲಿ ಯಾರು ಸೊಕ್ಕಿನ ನಡೆನುಡಿಯಿಂದ ಕೂಡಿರುತ್ತಾರೆಯೋ ಅಂತಹ ವ್ಯಕ್ತಿಗಳ ನಡೆನುಡಿಯಲ್ಲಿ ಪ್ರೀತಿ ಕರುಣೆ ಗೆಳೆತನದ ಮಾನವೀಯ ಗುಣಗಳು ಕಂಡುಬರುವುದಿಲ್ಲ;

ಮಿಂಚು=ಹೊಳೆ/ಪ್ರಕಾಶಿಸು; ಡಾಳಕ=ತೋರಿಕೆಯ ನಡೆನುಡಿಯುಳ್ಳವನು/ಹೊರಗೊಂದು ಒಳಗೊಂದು ಬಗೆಯ ಗುಣವುಳ್ಳ ವಂಚಕ/ಮೋಸಗಾರ;

ಮಾತಿನ ಮಾತಿನ ಮಿಂಚಿನ ಡಾಳಕರು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ಜನರು ಮೆಚ್ಚುವಂತೆ ಸೊಗಸಾದ ಮಾತುಗಳನ್ನು ಆಡುತ್ತ, ಜನರನ್ನು ಮರುಳುಮಾಡಿ, ಅವರನ್ನು ವಂಚಿಸುವ ಕಲೆಯಲ್ಲಿ ಪರಿಣತರಾದವರು:

ಇನ್ನು+ಎಲ್ಲಿಯದೊ; ಎಲ್ಲಿಯದೊ=ಎಲ್ಲಿಂದ ದೊರಕುತ್ತದೆ/ಯಾವ ರೀತಿ ದೊರೆಯುತ್ತದೆ;

ಮಾತಿನ ಮಾತಿನ ಮಿಂಚಿನ ಡಾಳಕರಿಗೆ ಸಮಯ ಭಕ್ತಿ ಇನ್ನೆಲ್ಲಿಯದೊ= ಮಾತಿನ ಮೋಡಿಯಿಂದಲೇ ಸುಳ್ಳನ್ನೇ ನಿಜವೆಂದು ಜನರನ್ನು ನಂಬಿಸಿ, ವಂಚಿಸುವ ನೀಚ ವ್ಯಕ್ತಿಗಳು ಯಾವ ರೀತಿಯಿಂದಲೂ ಒಳ್ಳೆಯ ನಡೆನುಡಿಯನ್ನು ಹೊಂದಿರುವುದಿಲ್ಲ;

ಕೂಡಲಚನ್ನಸಂಗಯ್ಯ=ಶಿವ/ಚೆನ್ನಬಸವಣ್ಣನವರ ವಚನಗಳ ಅಂಕಿತನಾಮ;

❖

96. ತನು ಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ತಂದು
ಗುರುಲಿಂಗಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ
ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ
ಅದೇಕೆಂದರೆ
ಅವ ಪರಧನ ಚೋರಕ ಅವ ಪಾಪಿ
ಅವಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ
ಅವನ ಕಾಯಕವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ
ಇಂತಹರ ಬದುಕು ಹುಲಿ ಕಪಿಲೆಯ ತಿಂದು
ಮಿಕ್ಕುದ ನರಿ ಬಂದು ತಿಂಬಂತೆ ಕಾಣಾ
ಕೂಡಲಚೆನ್ನಸಂಗಮದೇವಾ.

ವ್ಯಕ್ತಿಯು ತನ್ನ ಪಾಲಿನ ದುಡಿಮೆಯನ್ನು ಪ್ರಾಮಾಣಿಕವಾಗಿ ಮಾಡದೆ, ಜನರನ್ನು ವಂಚಿಸಿ ಲೂಟಿ ಹೊಡೆದು ಇಟ್ಟಿರುವ ಹಣದಿಂದ ಮಾಡಿದ ಅನ್ನದಾನ/ಗುರು ಸೇವೆ/ದೇವರ ಪೂಜೆಯು ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆದ ಕೆಲಸವಾಗಿದೆ ಹಾಗೂ ಇಂತಹ ಕಳ್ಳ ಹಣವಂತರ ಜತೆ ಕಯ್ ಜೋಡಿಸಿದ ಗುರುಹಿರಿಯರು ನಯವಂಚಕರಾಗಿದ್ದಾರೆ ಎಂಬ ವಾಸ್ತವದ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ತನು=ಮಯ್/ದೇಹ; ಮನ=ಮನಸ್ಸು/ಚಿತ್ತ; ಬಳಲು=ದಣಿಯುವುದು/ಆಯಾಸಗೊಳ್ಳುವುದು;

ತನು ಮನ ಬಳಲದೆ=ವ್ಯಕ್ತಿಯು ತನ್ನ ಪಾಲಿನ ಕೆಲಸದಲ್ಲಿ ಮಯ್ ಮನವನ್ನು ತಲ್ಲೀನತೆಯಿಂದ ತೊಡಗಿಸಿಕೊಂಡು ಪ್ರಾಮಾಣಿಕವಾಗಿ ದುಡಿಯದೆ;

ಉದ್ದಂಡ+ವೃತ್ತಿ+ಅಲ್ಲಿ; ಉದ್ದಂಡ=ಹಿಂಸೆ/ಉಗ್ರ; ವೃತ್ತಿ=ಕಸುಬು/ಕೆಲಸ/ಉದ್ಯೋಗ; ಉದ್ದಂಡವೃತ್ತಿ=ಇತರರಿಗೆ ಸಂಕಟ/ನೋವು/ಹಿಂಸೆಯನ್ನು ನೀಡುವ ಕ್ರೂರತನದ ಕೆಲಸ; ಧನ=ಹಣ/ಸಂಪತ್ತು/ಒಡವೆ/ವಸ್ತು;

ಗಳಿಸು=ಸಂಪಾದಿಸುವುದು/ಪಡೆಯುವುದು/ಹೊಂದುವುದು;

ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ=ದುಡಿಯುವ ಜನರಿಗೆ ದೊರೆಯ ಬೇಕಾಗಿದ್ದ ಅನ್ನ/ಬಟ್ಟೆ/ವಸತಿ /ಆಸ್ತಿಪಾಸ್ತಿ/ಒಡವೆವಸ್ತುಗಳನ್ನು ವ್ಯಕ್ತಿಯು ವಂಚನೆ/

ದಬ್ಬಾಳಿಕೆ/ಅಟ್ಟಹಾಸದ ನಡೆನುಡಿಗಳಿಂದ ಸುಲಿಗೆ ಮಾಡಿ ಇಟ್ಟಿರುವ ಸಂಪತ್ತು; ತಂದು=ಜನ ಸಮುದಾಯಕ್ಕೆ ದ್ರೋಹವನ್ನು ಬಗೆದು/ಸಮಾಜಕ್ಕೆ ಹಾನಿಯನ್ನು ಉಂಟುಮಾಡಿ ಗಳಿಸಿರುವ ಹಣವನ್ನು ತೆಗೆದುಕೊಂಡು ಬಂದು;

ಗುರು=ಶಿಷ್ಯರಿಗೆ ಅರಿವನ್ನು ನೀಡಿ, ಅವರ ವ್ಯಕ್ತಿತ್ವವನ್ನು ಒಳ್ಳೆಯ ನಡೆನುಡಿಗಳಿಂದ ರೂಪಿಸುವ ವ್ಯಕ್ತಿ; ಲಿಂಗ=ಶಿವನ ಸಂಕೇತವಾಗಿರುವ ವಿಗ್ರಹ/ದೇವರು; ಜಂಗಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಲ್ಲಿ ಶಿವನನ್ನು ಕಾಣುವವನು ಮತ್ತು ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯಾಗುವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಜನರಲ್ಲಿ ಮೂಡಿಸುವವನು; ವೆಚ್ಚ=ವ್ಯಯ/ವಿತರಣೆ;

ಗುರುಲಿಂಗಜಂಗಮಕ್ಕೆ ವೆಚ್ಚಿಸಿ=ಗುರುಲಿಂಗಜಂಗಮರನ್ನು ಒಲವು ನಲಿವುಗಳಿಂದ ಪೂಜಿಸಿ ಮೆರೆಸಲೆಂದು ಹಣವನ್ನು ವಿನಿಯೋಗಿಸಿ;

ದಾಸೋಹ=ಜಂಗಮರಿಗೆ ಮತ್ತು ಹಸಿದು ಬಂದವರಿಗೆ ಅನ್ನವನ್ನು ನೀಡುವುದು; ಭಕ್ತರ್+ಆದೆವು+ಎಂಬ+ಅವರನ್+ಎನಗೆ; ಭಕ್ತ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು; ಆದೆವು=ಆಗಿದ್ದೇವೆ/ಆಗಿರುವೆವು; ಎಂಬ=ಎಂದು ಹೇಳುವ/ಎನ್ನುವ; ಅವರನ್=ಅವರನ್ನು/ಅಂತಹ ವ್ಯಕ್ತಿಗಳನ್ನು; ಎನಗೆ=ನನಗೆ; ತೋರದಿರು+ಅಯ್ಯಾ; ತೋರು=ಕಾಣಿಸು/ಕಣ್ಣಿಗೆ ಬೀಳುವಂತೆ ಮಾಡು; ತೋರದಿರು=ತೋರಿಸಬೇಡ/ಕಾಣಿಸಬೇಡ;

ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ=ಜನಸಮುದಾಯಕ್ಕೆ ಕೇಡನ್ನು ಬಗೆದು ಗಳಿಸಿದ ಹಣವನ್ನು ಗುರುಲಿಂಗಜಂಗಮದ ಸೇವೆಗೆ ಬಳಸಿ, ದೇವರಲ್ಲಿ/ಗುರುಹಿರಿಯರಲ್ಲಿ ಒಲವನ್ನು ಹೊಂದಿರುವ ವ್ಯಕ್ತಿಗಳು ತಾವೆಂದು ಹೇಳಿಕೊಂಡು ಮೆರೆಯುವ ವಂಚಕರನ್ನು/ನೀಚರನ್ನು/ಕೇಡಿಗಳನ್ನು ನನ್ನ ಮುಂದೆ ತೋರಿಸದಿರು/ಅಂತಹ ವ್ಯಕ್ತಿಗಳ ಜತೆಯಲ್ಲಿ ಯಾವುದೇ ಬಗೆಯ ಒಡನಾಟ/ವ್ಯವಹಾರ/ಸಂಪರ್ಕವಿಲ್ಲದಂತೆ ಮಾಡು;

ಅದು+ಏಕೆ+ಎಂದರೆ; ಏಕೆ=ಯಾವ ಕಾರಣಕ್ಕಾಗಿ/ಯಾವುದಕ್ಕಾಗಿ; ಅವ=ಅವನು/ಅಂತಹವನು; ಪರ=ಇತರ/ಬೇರೆಯ; ಪರಧನ=ಬೇರೆಯವರ ಸಂಪತ್ತು/ಆಸ್ತಿಪಾಸ್ತಿ/ಒಡವೆವಸ್ತು/ಹಣಕಾಸು; ಚೋರ=ಕಳ್ಳ/ಕಳ್ಳತನವನ್ನು

ಕಸುಬನ್ನಾಗಿ ಮಾಡಿಕೊಂಡಿರುವವನು; ಚೋರಕ=ಕಳ್ಳ; ಪಾಪಿ=ಕೆಟ್ಟ ನಡೆನುಡಿಗಳಿಂದ ಇತರರಿಗೆ ಸಂಕಟವನ್ನು ಉಂಟುಮಾಡುವವನು;

ಅವಗೆ=ಅವನಿಗೆ/ಅಂತಹವನಿಗೆ; ವಿಚಾರಿಸು=ಯಾವುದು ಸರಿ/ಯಾವುದು ತಪ್ಪು'; 'ಯಾವುದು ದಿಟ/ಯಾವುದು ಸಟೆ' ಯಾವುದು ನ್ಯಾಯ/ಯಾವುದು ಅನ್ಯಾಯ? ಯಾರು ಒಳ್ಳೆಯವರು/ಯಾರು ಕೆಟ್ಟವರು ಎಂಬ ಸಂಗತಿಗಳನ್ನು ಒರೆಹಚ್ಚಿ ನೋಡಿ ತಿಳಿಯುವುದು; ಉಪದೇಶ=ತಿಳಿವಳಿಕೆಯನ್ನು ಹೇಳುವುದು/ಕೊಡು=ನೀಡು; ಕೊಟ್ಟ=ನೀಡಿದ; ಗುರುವಿಂಗೆ=ಗುರುವಿಗೆ; ರೌರವ=ಹೆಚ್ಚಿನ ಹಿಂಸೆ/ಸಂಕಟ; ನರಕ=ಜನಸಮುದಾಯದ ಮನದಲ್ಲಿ ನೆಲೆಗೊಂಡಿರುವ ಮತ್ತೊಂದು ಲೋಕದಲ್ಲಿರುವ ಕಲ್ಪಿತ ಜಾಗ. ಇಲ್ಲಿ ಅಂದರೆ ನಾವು ಇರುವ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು, ಅನಂತರ ತಾನು ಮಾಡಿದ ಕೆಟ್ಟಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಕದಲ್ಲಿ ನರಳುತ್ತಾನೆ. ಜನರಿಗೆ ಕೇಡನ್ನು ಮಾಡಿದವರು ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿದೆ; ರೌರವ ನರಕ=ಹೆಚ್ಚಿನ ದಂಡನೆಯನ್ನು ನೀಡುವ ಒಂದು ನರಕದ ಹೆಸರು;

ಅವಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ= ಗುರುವಾದವನು ತನ್ನ ಬಳಿಗೆ ಬಂದ ವ್ಯಕ್ತಿಗಳಲ್ಲಿ ಯಾರು ಒಳ್ಳೆಯವರು/ಯಾರು ಕೆಟ್ಟವರು ಎಂಬುದನ್ನು ತಿಳಿದಿರಬೇಕು. ಒಳ್ಳೆಯವರು ಎಂದರೆ "ಜನಸಮುದಾಯಕ್ಕೆ ಒಳಿತನ್ನು ಉಂಟುಮಾಡುವವರು." ಕೆಟ್ಟವರು ಎಂದರೆ "ಜನಸಮುದಾಯಕ್ಕೆ ಕೇಡನ್ನು ಬಗೆಯುವವರು." ಸಮಾಜದ್ರೋಹಿಗಳ ಜತೆಯಲ್ಲಿ ಗುರುವಾದವನು ವ್ಯವಹಾರವನ್ನು ಇಟ್ಟುಕೊಳ್ಳಬಾರದು. ತನ್ನ ಬಳಿ ಉಪದೇಶವನ್ನು ಪಡೆಯಲು ಬಂದಿರುವ ವ್ಯಕ್ತಿಯು ಸಮಾಜಕ್ಕೆ/ಜನಸಮುದಾಯಕ್ಕೆ ಹಾನಿಯನ್ನುಂಟುಮಾಡಿ ಹಣವಂತನಾಗಿರುವುದನ್ನು ಅರಿತಿದ್ದರೂ, ಅವನು ತನ್ನ ಜಾತಿಯವನು/ತನ್ನ ಮತದವನು ಎಂಬ ಕಾರಣಕ್ಕಾಗಿ ಒಡನಾಟವನ್ನು ಇಟ್ಟುಕೊಂಡರೆ, ಅಂತಹ ವ್ಯಕ್ತಿಯು ಗುರು ಆಗುವುದಕ್ಕೆ ಯೋಗ್ಯನಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ; ಅವನ=ಅಂತಹ ವ್ಯಕ್ತಿಯ/ಕೆಟ್ಟ ನಡೆನುಡಿಗಳುಳ್ಳ ವ್ಯಕ್ತಿಯ;

ಕಾಯಕ=ಕಸುಬು/ಕೆಲಸ; ಮನೆ+ಅಲ್ಲಿ; ಹೋಗು=ಒಳಸೇರು/ಪ್ರವೇಶಿಸು; ಹೊಕ್ಕು=ಒಳಕ್ಕೆ ಹೋಗಿ; ಲಿಂಗ+ಅರ್ಚನೆಯ; ಅರ್ಚನೆ=ಪೂಜೆ/ದೇವರನ್ನು

ಪೂಜಿಸುವಾಗ ಮಾಡುವ ಆಚರಣೆಗಳು; ಪಾತಕ=ಕೆಟ್ಟ ಕೆಲಸ/ಪಾಪದ ನಡೆನುಡಿ; ಏಳನೆಯ ಪಾತಕ=ಕಳ್ಳತನ;

ಏಳು ಪಾತಕಗಳು=1) ಹಾದರ 2) ಜೂಜು 3) ಬೇಟೆ 4) ಕುಡಿತ 5) ಬಿರುನುಡಿ 6) ದಂಡನೆ 7) ಕಳ್ಳತನ ಎಂಬ ಈ ಏಳು ಬಗೆಯ ನಡೆನುಡಿಗಳನ್ನು "ಸಪ್ತ ಪಾತಕಗಳು" ಎಂದು ಜನಸಮುದಾಯ ಹೆಸರಿಸಿದೆ;

ಅವನ ಕಾಯಕವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ=ಶಿವನನ್ನು ಪೂಜಿಸಲು ಬಯಸುವ ಸಿರಿವಂತನಾದ ವ್ಯಕ್ತಿಯ ಮನೆಯಲ್ಲಿ ಲಿಂಗಪೂಜೆಯಲ್ಲಿ ತೊಡಗುವ ಜಂಗಮನು, ಅಲ್ಲಿಗೆ ಹೋಗುವುದಕ್ಕೆ ಮೊದಲೇ ಆ ಮನೆಯೊಡೆಯನ ಮಾಡುವ ಕಾಯಕ ವೇನೆಂಬುದನ್ನು ತಿಳಿದುಕೊಂಡಿರಬೇಕು. ಏಕೆಂದರೆ ಶಿವಶರಣಶರಣೆಯರ ಪಾಲಿಗೆ 'ಕಾಯಕ' ಎನ್ನುವುದು ಕೇವಲ ಯಾವುದೋ ಒಂದು ಕೆಲಸ ಮಾತ್ರ ಆಗಿರಲಿಲ್ಲ. ಅವರ ಪಾಲಿಗೆ ಕಾಯಕವೆಂದರೆ "ವ್ಯಕ್ತಿಯು ಮಾಡುವ ಕೆಲಸವು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತಂದುಕೊಡುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಿದ್ದು, ಒಟ್ಟು ಜನಸಮುದಾಯದ ಹಿತಕ್ಕೆ ನೆರವಾಗು ವಂತಿರುವ ದುಡಿಮೆ".

ಸಿರಿವಂತನಾದ ವ್ಯಕ್ತಿಯು ಮಾಡುವ ಕಾಯಕದಿಂದ ಜನರಿಗೆ ಮತ್ತು ಸಮಾಜಕ್ಕೆ ಕೇಡಾಗುತ್ತಿದ್ದರೆ, ಅಂತಹವನ ಮನೆಯಲ್ಲಿ ಜಂಗಮನು ಪೂಜೆಯನ್ನು ಮಾಡಬಾರದು. ಹಾಗೆ ಮಾಡಿದ ಜಂಗಮನು ಕಳ್ಳ ಹಣಕ್ಕೆ ಕಯ್ ಒಡ್ಡಿದವನಾಗಿ ಕಳ್ಳತನವೆಂಬ ಏಳನೆಯ ಪಾತಕವನ್ನು ಮಾಡುತ್ತಾನೆ;

ಇಂತಹರ=ಈ ರೀತಿ ಸಮಾಜವನ್ನು/ಜನಸಮುದಾಯವನ್ನು ವಂಚಿಸಿ ಸಂಪತ್ತನ್ನು ಸಂಪಾದಿಸಿರುವ ಹಣವಂತ, ಇಂತಹ ಕಳ್ಳ ಹಣವಂತನೊಡನೆ ಒಡನಾಡುವ ಗುರು ಮತ್ತು ಜಂಗಮ–ಈ ಮೂವರು ವ್ಯಕ್ತಿಗಳ; ಬದುಕು= ಜೀವನ/ಬಾಳು; ಹುಲಿ=ಜೀವಿಗಳನ್ನು ಕೊಂದು ತಿನ್ನುವ ಕಾಡು ಪ್ರಾಣಿ; ಕಪಿಲೆ= ಹಸು/ಕಂದು ಬಣ್ಣದ ದನ; ತಿನ್ನು=ಉಣ್ಣು/ಕಬಳಿಸು; ಮಿಕ್ಕು=ಉಳಿಯುವುದು/ ಉಳಿದುಕೊಂಡಿರುವುದು; ತಿಂದು ಮಿಕ್ಕುದ=ತಿಂದು ಬಳಿಕ ಉಳಿದಿರುವುದನ್ನು; ನರಿ=ಕಾಡು ಪ್ರಾಣಿ/ವ್ಯಕ್ತಿಯ ಕಪಟತನ ಮತ್ತು ಕುತಂತ್ರದ ನಡೆನುಡಿಗಳನ್ನು ಸೂಚಿಸಲು ನರಿಯ ಹೆಸರನ್ನು ಜನರು ಒಂದು ರೂಪಕವಾಗಿ ಬಳಸುತ್ತಾರೆ;

ತಿಂಬ+ಅಂತೆ; ತಿಂಬ=ತಿನ್ನುವ; ಅಂತೆ=ಹಾಗೆ/ಆ ರೀತಿ; ಕಾಣ್=ನೋಡು/ತಿಳಿ; ಕಾಣಾ=ಕಂಡೆಯಾ/ತಿಳಿದಿರುವೆಯಾ;

ಇಂತಹರ ಬದುಕು ಹುಲಿ ಕಪಿಲೆಯ ತಿಂದು ಮಿಕ್ಕುದ ನರಿ ಬಂದು ತಿಂಬಂತೆ ಕಾಣಾ=ಹುಲಿಯು ಹಸುವಿನ ನೆತ್ತರನ್ನು ಹೀರಿ, ಮಾಂಸವನ್ನು ಹೊಟ್ಟೆಯ ತುಂಬಾ ತಿಂದ ನಂತರ, ಅದು ಬಿಟ್ಟು ಹೋಗಿದ್ದ ಮಾಂಸವನ್ನು ತಿನ್ನುವುದಕ್ಕಾಗಿ ಹೊಂಚು ಹಾಕುತ್ತಿದ್ದ ನರಿಯು ಹಸುವಿನ ಮಾಂಸವನ್ನು ತಿನ್ನುವ ಪ್ರಸಂಗವನ್ನು ಒಂದು ರೂಪಕವಾಗಿ ವಚನಕಾರನು ಚಿತ್ರಿಸಿದ್ದಾನೆ.

ಜನಸಮುದಾಯವನ್ನು ವಂಚಿಸಿ ಸಂಪತ್ತಿಗೆ ಒಡೆಯನಾಗುವ ಹಣವಂತನು ಹುಲಿಯಂತೆ ಕ್ರೂರಿಯಾಗಿದ್ದಾನೆ. ಅಂದರೆ ಅವನಲ್ಲಿ ಸಹಮಾನವರ ಬಗ್ಗೆ ಯಾವುದೇ ಬಗೆಯ ಒಲವು/ಕರುಣೆ/ಕಾಳಜಿ ಇರುವುದಿಲ್ಲ. ಇಂತಹ ವ್ಯಕ್ತಿಯ ಹಣದಿಂದ ಪೂಜೆಗೊಳ್ಳುವ/ಸೇವೆಯನ್ನು ಪಡೆಯುವ/ಅನುಕೂಲಗಳನ್ನು ಹೊಂದುವ ಜಾತಿ ಜಗದ್ಗುರುಗಳು/ದೇವ ಮಾನವರು/ಗುರುಹಿರಿಯರು ನರಿಯಂತೆ ಅಂದರೆ ಬೂಟಾಟಿಕೆಯ, ಸೋಗಲಾಡಿತನದ ವ್ಯಕ್ತಿಗಳಾಗಿರುವು ದಲ್ಲದೆ, ಜನಸಮುದಾಯವನ್ನು/ಸಮಾಜವನ್ನು ಕೊಳ್ಳೆ ಹೊಡೆದ ಕಳ್ಳಸಂಪತ್ತಿನ ಪಾಲುದಾರರಾಗಿದ್ದಾರೆ ಎಂಬ ವಾಸ್ತವವನ್ನು ಈ ರೂಪಕ ಸೂಚಿಸುತ್ತದೆ.

ಕೂಡಲಚೆನ್ನಸಂಗಮ+ದೇವಾ; ಕೂಡಲು=ಎರಡು ನದಿಗಳು ಜತೆಗೂಡುವ ಜಾಗ; ಚೆನ್ನ=ಸುಂದರ/ಸೊಗಸು/ಚೆಲುವು; ಸಂಗಮ=ಶಿವ/ಈಶ್ವರ; ಕೂಡಲ ಚೆನ್ನಸಂಗಮದೇವಾ=ಎರಡು ನದಿಗಳು ಜತೆಗೂಡುವ ನೆಲೆಯಲ್ಲಿರುವ ಶಿವಲಿಂಗ/ಈಶ್ವರ; ಕೂಡಲಚೆನ್ನಸಂಗಮದೇವ=ವಚನಕಾರ ಚೆನ್ನಬಸವಣ್ಣನ ವಚನಗಳ ಅಂಕಿತನಾಮ.)

❖

97. ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ
ಸತ್ಯವುಳ್ಳಾತಂಗೆ ತತ್ವ ವಿಚಾರದ ಹಂಗೇಕೆ
ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ
ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ
ಭಾವಶುದ್ಧವುಳ್ಳವಂಗೆ ಹೂವಿನ ಹಂಗೇಕೆ
ಕೂಡಲಚೆನ್ನಸಂಗಯ್ಯಾ
ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ

ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಗೆ ದೇವರನ್ನು ಪೂಜಿಸುವ ಇಲ್ಲವೇ ದೇವರ ಇರುವಿಕೆಯ ಬಗೆಗಿನ ಸಂಗತಿಗಳನ್ನು ಮನನ ಮಾಡಿಕೊಳ್ಳುವ ಅಗತ್ಯವಿಲ್ಲ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

"ಒಳ್ಳೆಯ ನಡೆನುಡಿ" ಎಂದರೆ ಜೀವನದಲ್ಲಿ ವ್ಯಕ್ತಿಯು ತನಗೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವಂತಹ ನಡೆನುಡಿಗಳನ್ನು ಹೊಂದಿರುವುದು.

(ನಿಷ್ಠೆ+ಉಳ್ಳ್+ಆತಂಗೆ; ನಿಷ್ಠೆ=ಒಳ್ಳೆಯ ನಡೆನುಡಿಗಳಲ್ಲಿ ಬಲವಾದ ನಂಬಿಕೆಯನ್ನು ಇಟ್ಟುಕೊಂಡು ಪ್ರಾಮಾಣಿಕತನದಿಂದ ಬಾಳುವುದು; ಉಳ್ಳ್/ಉಳ್=ಇರು/ಹೊಂದು/ಪಡೆ; ಆತಂಗೆ=ಅಂತಹ ವ್ಯಕ್ತಿಗೆ; ನಿತ್ಯ=ಪ್ರತಿದಿನ ನೇಮ=ಹೀಗೆಯೇ ಇರಬೇಕು/ಮಾಡಬೇಕು/ನಡೆದುಕೊಳ್ಳಬೇಕು ಎಂಬ ಕಟ್ಟಲೆ; ನಿತ್ಯನೇಮ=ದೇವರ ಕರುಣೆಗೆ ಪಾತ್ರರಾಗಲು ಪ್ರತಿದಿನವೂ ಜಪ/ತಪ/ಪೂಜೆ/ಉಪವಾಸ/ಜಾಗರಣೆ ಮುಂತಾದ ಆಚರಣೆಗಳನ್ನು ಚಾಚೂತಪ್ಪದೆ ನಿರಂತರವಾಗಿ ಮಾಡುತ್ತಿರುವುದು; ಹಂಗು+ಏಕೆ; ಹಂಗು=ಅವಲಂಬನೆ; ಏಕೆ=ಯಾತಕ್ಕಾಗಿ/ಯಾವುದಕ್ಕಾಗಿ; ಹಂಗೇಕೆ= ಅವಲಂಬಿಸಬೇಕಾದ ಅಗತ್ಯವಿಲ್ಲ;

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ=ಜೀವನದ ವ್ಯವಹಾರಗಳಲ್ಲಿ ಸಹಮಾನವರ ಒಲವು ನಲಿವು ನಂಬಿಕೆಗೆ ಪಾತ್ರನಾಗಿ ಪ್ರಾಮಾಣಿಕತನದ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಗೆ ಯಾವುದೇ ಬಗೆಯ ಜಪ ತಪ ಪೂಜೆಗಳ ಮೂಲಕ ದೇವರನ್ನು ಪೂಜಿಸಬೇಕಾದ ಅಗತ್ಯವಿಲ್ಲ;

ಸತ್ಯ+ಉಳ್ಳ್+ಆತಂಗೆ; ಸತ್ಯ=ದಿಟ/ನಿಜ/ವಾಸ್ತವ; ತತ್ವ=ದೇವರ ಇರುವಿಕೆಯನ್ನು ಕುರಿತ ಚಿಂತನೆ; ವಿಚಾರ=ಯಾವುದು ಸರಿ–ಯಾವುದು ತಪ್ಪು;

ಯಾವುದು ನಿಜ/ಯಾವುದು ಸಟೆ/ ಯಾವುದು ಕಲ್ಪಿತ–ಯಾವುದು ವಾಸ್ತವ ಎಂಬುದನ್ನು ಕುರಿತು ಮಾಡುವ ಆಲೋಚನೆ/ವಿವೇಚನೆ/ವಿವೇಕ;

ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ=ದಿನನಿತ್ಯದ ಜೀವನದಲ್ಲಿ ಕೆಟ್ಟದ್ದನ್ನು/ಸುಳ್ಳನ್ನು/ಕಪಟತನದ ನಡೆನುಡಿಗಳನ್ನು ಬಿಟ್ಟು, ತನ್ನ ವ್ಯಕ್ತಿತ್ವದ ಇತಿಮಿತಿಗಳನ್ನು ಚೆನ್ನಾಗಿ ಅರಿತುಕೊಂಡು ಒಳ್ಳೆಯತನದಿಂದ ಬಾಳುತ್ತಿರುವ ವ್ಯಕ್ತಿಗೆ ದೇವರ ಬಗ್ಗೆ ಕೇವಲ ಮಾತಿನ ಆಡಂಬರಕ್ಕಾಗಿ ಮಾಡುವ ತರ್ಕ ಇಲ್ಲವೇ ಒಣಚರ್ಚೆಗಳ ಅಗತ್ಯವಿರುವುದಿಲ್ಲ. ಏಕೆಂದರೆ ಜನಸಮುದಾಯಕ್ಕೆ ಒಳಿತನ್ನು ಮಾಡುವ ವ್ಯಕ್ತಿಯ ನಡೆನುಡಿಗಳು ದೇವರ ವಿಚಾರಕ್ಕಿಂತಲೂ ದೊಡ್ಡದಾಗಿರುತ್ತವೆ;

ಅರಿವು+ಉಳ್ಳ್+ಆತಂಗೆ; ಅರಿವು=ತಿಳಿವಳಿಕೆ/ವಿವೇಕ/ಎಚ್ಚರ; ಅಗ್ಘವಣಿ=ದೇವರ ವಿಗ್ರಹದ ಮೇಲೆ ಹಾಕುವ ನೀರು. ದೇವರನ್ನು ಪೂಜಿಸುವಾಗ ನಿತ್ಯವೂ ವಿಗ್ರಹದ ಮೇಲೆ ನೀರನ್ನು ಎರೆದು ಮಾಡುವ ಒಂದು ಬಗೆಯ ಆಚರಣೆ;

ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ=ಜೀವನದಲ್ಲಿ ಇತರರಿಗೆ ಒಳಿತನ್ನು ಮಾಡಬೇಕೆ ಹೊರತು ಯಾವುದೇ ಬಗೆಯಿಂದಲೂ ಕೆಡುಕನ್ನು ಮಾಡಬಾರದು ಎಂಬ ಎಚ್ಚರದಿಂದ ಬಾಳುವ ವ್ಯಕ್ತಿಯ ಪಾಲಿಗೆ ಅರಿವಿನ ನಡೆನುಡಿಯೇ ದೇವರಿಗೆ ಮಾಡುವ ಮಜ್ಜನವಾಗಿರುತ್ತದೆ(ಮಜ್ಜನ=ಸ್ನಾನ/ನೀರನ್ನು ಎರೆಯುವುದು);

ಮನ+ಶುದ್ಧ+ಉಳ್ಳ್+ಅವಂಗೆ; ಮನ=ಮನಸ್ಸು/ಚಿತ್ತ; ಶುದ್ಧ=ಶುಚಿಯಾಗಿರುವುದು/ಮಡಿಯಾಗಿರುವುದು/ಚೊಕ್ಕಟವಾಗಿರುವುದು; ಮನಶುದ್ಧವುಳ್ಳವನು =ಮನದಲ್ಲಿ ಮೂಡುವಂತಹ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಮಾತ್ರ ಕಯ್ಗೊಂಡು, ತನ್ನ ಮನಸ್ಸನ್ನು ಸದಾ ಕಾಲ ಹತೋಟಿಯಲ್ಲಿಟ್ಟುಕೊಂಡು ಬಾಳುತ್ತಿರುವವನು; ಮಂತ್ರ=ದೇವತೆಗಳನ್ನು ಒಲಿಸಿಕೊಳ್ಳುವುದಕ್ಕಾಗಿ ಇಲ್ಲವೇ ದೇವತೆಗಳ ಕರುಣೆಗೆ ಪಾತ್ರರಾಗುವುದಕ್ಕಾಗಿ, ಅವರ ಶಕ್ತಿ ಮತ್ತು ಪವಾಡಗಳನ್ನು ಹೊಗಳಿ ಕೊಂಡಾಡುವಂತಹ ನುಡಿ/ಶ್ಲೋಕ;

ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ=ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ರೀತಿಯಲ್ಲಿ ಬಾಳುತ್ತಿರುವ ವ್ಯಕ್ತಿಗೆ ಯಾವುದೇ ದೇವರನ್ನು/ದೇವತೆಯನ್ನು ಗುಣಗಾನ ಮಾಡಬೇಕಾದ ಅಗತ್ಯವಿರುವುದಿಲ್ಲ;

ಭಾವ+ಶುದ್ಧ+ಉಳ್ಳ್+ಅವಂಗೆ; ಭಾವ=ಮನದಲ್ಲಿ ಮೂಡುವ ಒಳಮಿಡಿತ/ಸಂವೇದನೆ/ಚಿಂತನೆ; ಭಾವಶುದ್ಧ=ವ್ಯಕ್ತಿಯು ತನಗೆ ಒಳಿತನ್ನು ಬಯಸು

ವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಚಿಂತನೆಗಳಿಂದ ಕೂಡಿರುವುದು; ಹೂವು=ಕುಸುಮ/ಅರಳು;

ಭಾವಶುದ್ಧವುಳ್ಳವಂಗೆ ಹೂವಿನ ಹಂಗೇಕೆ=ಒಳ್ಳೆಯ ಮನಸ್ಸಿನಿಂದ ಕೂಡಿ ಎಲ್ಲರಿಗೂ ಒಳಿತನ್ನು ಮಾಡುವಂತಹ ವ್ಯಕ್ತಿಯು ದೇವರಿಗೆ ಹೂವನ್ನು ಮುಡಿಸಿ ಪೂಜಿಸಬೇಕಾದ ಅಗತ್ಯವಿಲ್ಲ. ಏಕೆಂದರೆ ಅವನ ಒಳ್ಳೆಯತನದಿಂದ ಕೂಡಿದ ಮನಸ್ಸೇ ದೇವರಿಗೆ ನಿತ್ಯವೂ ನೀಡುವ ಹೂವಾಗಿರುತ್ತದೆ;

ನಿಮ್ಮನ್+ಅರಿದ+ಆತಂಗೆ; ನಿಮ್ಮನ್=ಕೂಡಲಚೆನ್ನಸಂಗಯ್ಯನನ್ನು; ಅರಿದ= ತಿಳಿದ; ಅರಿದಾತಂಗೆ=ತಿಳಿದವನಿಗೆ; ನಿಮ್ಮ=ದೇವರ/ಶಿವನ/ಕೂಡಲ ಚೆನ್ನಸಂಗಯ್ಯನ;

ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ=ಶಿವಶರಣಶರಣೆಯರ ಪಾಲಿಗೆ ದೇವರು ಇಲ್ಲವೇ ಶಿವನು ಮರ/ಮಣ್ಣು/ಕಲ್ಲಿನ ವಿಗ್ರಹದ ರೂಪದಲ್ಲಿರಲಿಲ್ಲ. ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನೇ ಅವರು ದೇವರೆಂದು ತಿಳಿದಿದ್ದರು. ಆದುದರಿಂದಲೇ ದೇವರನ್ನು ಪೂಜಿಸುವ ಬಹುಬಗೆಯ ಆಚರಣೆಗಳು ಮಾನವನ ಒಳ್ಳೆಯ ಬದುಕಿಗೆ ಅಗತ್ಯವಾದ ಸಂಗತಿಗಳಾಗಿ ಅವರಿಗೆ ಕಂಡುಬರಲಿಲ್ಲ.

ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಗೆ ದೇವರ ಕರುಣೆಯ ಅಗತ್ಯವಿಲ್ಲ ಎನ್ನುವ ದಿಟ್ಟತನದ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು).

❖

98. ಭಕ್ತ ಶಾಂತನಾಗಿರಬೇಕು
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು
ಭೂತಹಿತವಹ ವಚನವ ನುಡಿಯಬೇಕು
ಗುರು ಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು
ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು
ತನು ಮನ ಧನವ ಗುರು ಲಿಂಗ ಜಂಗಮಕ್ಕೆ ಸವೆಸಲೇಬೇಕು
ಅಪಾತ್ರ ದಾನವ ಮಾಡಲಾಗದು
ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು
ಇದೇ ಮೊದಲಲ್ಲಿ ಬೇಹ ಶೌಚ ನೋಡಾ
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ
ಎನಗಿದೇ ಸಾಧನ ಕೂಡಲ ಚೆನ್ನಸಂಗಮದೇವಾ.

ದೇವರನ್ನು ಪೂಜಿಸಿ ಪ್ರಸಾದವನ್ನು ಪಡೆಯಬೇಕಾದರೆ ವ್ಯಕ್ತಿಯ ನಡೆ ನುಡಿಗಳು ನಿತ್ಯ ಜೀವನದಲ್ಲಿ ಹೇಗಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಭಕ್ತ=ಒಳ್ಳೆಯ ನಡೆನುಡಿಗಳಿಂದ ಬಾಳುವುದೇ ದೇವರಿಗೆ ಮಾಡುವ ಪೂಜೆಯೆಂದು ತಿಳಿದಿರುವವನು; ಶಾಂತನ್+ಆಗಿರಬೇಕು; ಶಾಂತ= ಮಾನಸಿಕವಾಗಿ ತಾಳ್ಮೆ ಮತ್ತು ನೆಮ್ಮದಿಯಿಂದ ಇರುವವನು;

ಭಕ್ತ ಶಾಂತನಾಗಿರಬೇಕು=ದೇವರನ್ನು ನಂಬಿರುವ ವ್ಯಕ್ತಿಯು ಮಾನಸಿಕವಾಗಿ ಯಾವುದೇ ಬಗೆಯ ಉದ್ವೇಗ, ಕೋಪ ತಾಪಕ್ಕೆ ಒಳಗಾಗದೆ ಎಲ್ಲರೊಡನೆ ಪ್ರೀತಿ ಮತ್ತು ಕರುಣೆಯಿಂದ ನಡೆದುಕೊಳ್ಳಬೇಕು;

ತನ್ನ=ತನ್ನನ್ನು/ವ್ಯಕ್ತಿಯನ್ನು; ಕುರಿತು=ಗಮನಿಸಿ/ಉದೇಶಿಸಿ; ಠಾವು+ಅಲ್ಲಿ; ಠಾವು=ಜಾಗ/ನೆಲೆ;

ತನ್ನ ಕುರಿತು ಬಂದ ಠಾವು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ಪ್ರತಿಯೊಬ್ಬ ವ್ಯಕ್ತಿಯು ಕುಟುಂಬದ ನೆಲೆ–ದುಡಿಮೆಯ ನೆಲೆ–ಸಾರ್ವಜನಿಕ ನೆಲೆ ಎಂಬ ಮೂರು ನೆಲೆಗಳಲ್ಲಿ ಸಹಮಾನವರೊಡನೆ ಪ್ರತಿನಿತ್ಯ ವ್ಯವಹರಿಸುತ್ತಾನೆ; ಸತ್ಯನ್+ಆಗಿರಬೇಕು;

ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು=ವ್ಯಕ್ತಿಯು ತಾನು

ಬಾಳುತ್ತಿರುವ ಮೂರು ನೆಲೆಗಳಲ್ಲೂ ಪ್ರಾಮಾಣಿಕತನದ ನಡೆನುಡಿಗಳಿಂದ ಬಾಳುತ್ತಿರಬೇಕು;

ಭೂತ+ಹಿತ+ಅಹ; ಭೂತ=ಮಾನವ ಜೀವಿಯನ್ನು ಒಳಗೊಂಡಂತೆ ಪ್ರಪಂಚದಲ್ಲಿರುವ ಎಲ್ಲಾ ಬಗೆಯ ಕ್ರಿಮಿ ಕೀಟ ಹಕ್ಕಿ ಪ್ರಾಣಿಗಳು; ಹಿತ=ಒಳ್ಳೆಯದು; ಅಹ=ಆಗಿರುವ; ವಚನ=ನುಡಿ/ಮಾತು;

ಭೂತಹಿತವಹ ವಚನವ ನುಡಿಯಬೇಕು=ಸಕಲ ಜೀವರಾಶಿಗಳಿಗೂ ಒಳಿತನ್ನುಂಟುಮಾಡುವಂತಹ ಒಲವು, ಕರುಣೆ ಮತ್ತು ಗೆಳೆತನದ ನುಡಿಗಳನ್ನಾಡಬೇಕು. ಯಾವೊಂದು ಜೀವಿಗೂ ಕೇಡನ್ನು ಬಯಸುವಂತಹ ನುಡಿಗಳನ್ನಾಡಬಾರದು;

ಗುರು=ತನ್ನ ಬಳಿ ಬಂದವರಿಗೆ ಅರಿವನ್ನು ನೀಡಿ, ಅವರ ವ್ಯಕ್ತಿತ್ವವನ್ನು ಒಳ್ಳೆಯ ನಡೆನುಡಿಗಳಿಂದ ರೂಪಿಸುವ ವ್ಯಕ್ತಿ; ಲಿಂಗ=ಶಿವನ ಸಂಕೇತವಾಗಿರುವ ವಿಗ್ರಹ/ದೇವರು; ಜಂಗಮ=ಒಳ್ಳೆಯ ನಡೆನುಡಿಯಲ್ಲಿ ಶಿವನನ್ನು ಕಾಣುತ್ತ, ಜನ ಸಮುದಾಯದ ಮನದಲ್ಲಿ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಮೂಡಿಸುತ್ತ, ನಿತ್ಯ ಸಂಚಾರಿಯಾಗಿರುವ ವ್ಯಕ್ತಿ; ನಿಂದೆ+ಇಲ್ಲದಿರಬೇಕು; ನಿಂದೆ=ತೆಗಳಿಕೆ/ಬಯ್ಯುವಿಕೆ;

ಗುರು ಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು=ಗುರು ಲಿಂಗ ಜಂಗಮವನ್ನು ತೆಗಳಬಾರದು/ಕಡೆಗಣಿಸಬಾರದು;

ತನ್ನ+ಅಂತೆ; ಅಂತೆ=ಹಾಗೆ/ಅದೇ ರೀತಿ; ಭಾವಿಸು=ತಿಳಿ/ಆಲೋಚಿಸು;

ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು=ವ್ಯಕ್ತಿಯು ಜೀವನದಲ್ಲಿ ಯಾವ ರೀತಿ ತನ್ನ ಮಾನ ಪ್ರಾಣಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಮತ್ತು ನಲಿವು ನೆಮ್ಮದಿಯನ್ನು ಪಡೆಯುವುದಕ್ಕಾಗಿ ಹಂಬಲಿಸುತ್ತಾನೆಯೋ ಅದೇ ರೀತಿ ಇತರ ಜೀವಿಗಳಿಗೂ ಒಳಿತಾಗಲಿ ಎಂಬುದನ್ನು ಅರಿತುಕೊಂಡು ಬಾಳಬೇಕು;

ತನು=ದೇಹ/ಶರೀರ; ಮನ=ಮನಸ್ಸು; ಧನ=ಹಣ/ಒಡವೆ ವಸ್ತು; ಸವೆಸು=ವಿನಿಯೋಗಿಸು/ನೀಡು;

ತನು ಮನ ಧನವ ಗುರು ಲಿಂಗ ಜಂಗಮಕ್ಕೆ ಸವೆಸಲೇಬೇಕು=ರೂಪಕದ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ. ವ್ಯಕ್ತಿಯು ತನ್ನ ದೇಹ ಮತ್ತು ಮನಸ್ಸನ್ನು ಒಗ್ಗೂಡಿಸಿ ಮಾಡಿದ ಒಳ್ಳೆಯ ಕಾಯಕದಿಂದ ಬಂದ ಸಂಪತ್ತಿನಲ್ಲಿ ಸ್ವಲ್ಪ

ಪಾಲನ್ನು ಆಸ್ತಿಪಾಸ್ತಿಗಳಿಲ್ಲದೆ ಮತ್ತು ಒಡವೆ ವಸ್ತುಗಳಿಲ್ಲದೆ ಹಸಿವಿನಿಂದ ನರಳುತ್ತಿರುವ ದುಡಿಯುವ ವರ್ಗದ ಕಡುಬಡವರಾದ ಜನರಿಗೆ ನೀಡಬೇಕು;

ಪಾತ್ರ=ಯೋಗ್ಯವಾದುದು/ಸರಿಯಾಗಿರುವುದು; ಅಪಾತ್ರ=ಯೋಗ್ಯವಲ್ಲದ್ದು/ ಕೆಟ್ಟರೀತಿಯಲ್ಲಿರುವುದು; ದಾನ=ಕೊಡುಗೆ/ಕಾಣಿಕೆ; ಮಾಡಲ್+ಆಗದು;

ಅಪಾತ್ರ ದಾನವ ಮಾಡಲಾಗದು=ಯೋಗ್ಯರಲ್ಲದ ವ್ಯಕ್ತಿಗಳಿಗೆ ಅಂದರೆ ಯಾವುದೇ ದುಡಿಮೆಯನ್ನು ಮಾಡದೆ, ಸೋಂಬೇರಿಯಾಗಿ ಇಲ್ಲವೇ ಕೆಟ್ಟ ನಡೆನುಡಿಯಿಂದ ಇತರರಿಗೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಗಳಿಗೆ ದಾನವನ್ನು ನೀಡಬಾರದು;

ಸಕಲ+ಇಂದ್ರಿಯಗಳ; ಇಂದ್ರಿಯ=ಕೇಳುವ ಕಿವಿ–ನೋಡುವ ಕಣ್ಣು–ವಾಸಿಸುವ ಮೂಗು–ರುಚಿಯನ್ನು ತಿಳಿಯುವ ನಾಲಗೆ–ಸೋಕುವಿಕೆಯ ಅರಿವನ್ನು ಪಡೆಯುವ ತೊಗಲು ಎಂಬ ಅಯ್ದು ಬಗೆಯ ಅಂಗಾಂಗಗಳು; ವಶ=ಹತೋಟಿ;

ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು=ವ್ಯಕ್ತಿಯ ಮಯ್ ಮನದಲ್ಲಿ ಒಳಿತು ಕೆಡುಕಿನ ಒಳಮಿಡಿತಗಳು ಮೂಡುವುದಕ್ಕೆ ಕಾರಣವಾಗಿರುವ ಕಣ್ಣು, ಕಿವಿ, ಮೂಗು, ನಾಲಗೆ, ತೊಗಲಿನ ಸಂವೇದನೆಗಳನ್ನು ಹತೋಟಿಯಲ್ಲಿಟ್ಟುಕೊಂಡು, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಅನುಸರಿಸಿ ಬಾಳಬೇಕು;

ಬೇಹ=ಅಗತ್ಯವಾಗಿರುವದು/ಬೇಕಾಗಿರುವುದು; ಶೌಚ=ಶುಚಿಯಾಗಿರುವುದು/ ಕೊಳಕಿಲ್ಲದಿರುವುದು; ಶೌಚ ಎಂಬ ಪದಕ್ಕೆ ' ಒಳ್ಳೆಯ ನಡೆನುಡಿಯಿಂದ ಕೂಡಿದ ವ್ಯಕ್ತಿತ್ವ' ಎಂಬ ರೂಪಕದ ತಿರುಳಿದೆ; ಬೇಹ ಶೌಚ=ಅಗತ್ಯವಾಗಿ ಇರಲೇಬೇಕಾದ ಒಳ್ಳೆಯ ವ್ಯಕ್ತಿತ್ವ; ನೋಡಾ=ತಿಳಿದು ನೋಡು/ಒರೆಹಚ್ಚಿ ನೋಡು;

ಇದೇ ಮೊದಲಲ್ಲಿ ಬೇಹ ಶೌಚ ನೋಡಾ=ವ್ಯಕ್ತಿಗೆ ಜೀವನದಲ್ಲಿ ಮೊಟ್ಟ ಮೊದಲು ಬೇಕಾಗಿರುವುದು ಒಳ್ಳೆಯ ನಡೆನುಡಿ ಎಂಬುದನ್ನು ಅರಿತುಕೊಳ್ಳಬೇಕು;

ಪ್ರಸಾದ=ದೇವರ ವಿಗ್ರಹವನ್ನು ಹೂವು, ಹಣ್ಣು, ಒಡವೆ, ವಸ್ತುಗಳಿಂದ ಸಿಂಗರಿಸಿ, ವಿಗ್ರಹದ ಮುಂದೆ ರುಚಿಕರವಾದ ಉಣಿಸು ತಿನಸುಗಳನ್ನು ಇಟ್ಟು, ದೂಪದೀಪಗಳನ್ನು ಬೆಳಗಿದ ನಂತರ, ದೇವರಿಗೆ ಮುಡಿಸಿದ್ದ ಹೂವು ಹಣ್ಣುಗಳನ್ನು, ದೇವರ ಮುಂದೆ ಇಟ್ಟಿದ್ದ ನೀರು ಮತ್ತು ಉಣಿಸು ತಿನಿಸನ್ನು ಪೂಜಾರಿಯು ವ್ಯಕ್ತಿಗಳಿಗೆ ನೀಡುತ್ತಾನೆ ಇಲ್ಲವೇ ದೇವರನ್ನು ಪೂಜಿಸಿದ ವ್ಯಕ್ತಿಯು ತಾನೇ ತೆಗೆದುಕೊಳ್ಳುತ್ತಾನೆ. ಇದನ್ನು ಪ್ರಸಾದವೆಂದು ಕರೆಯುತ್ತಾರೆ;

ಪಡೆ=ಹೊಂದು/ಸ್ವೀಕರಿಸು;

ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ=ಲಿಂಗವನ್ನು ಪೂಜಿಸಿ ಪ್ರಸಾದವನ್ನು ಪಡೆಯಬೇಕಾದರೆ;

ಎನಗೆ+ಇದೇ; ಎನಗೆ=ನನಗೆ/ವ್ಯಕ್ತಿಗೆ; ಸಾಧನ=ಉಪಕರಣ/ಸಲಕರಣೆ; ಕೂಡಲ ಚೆನ್ನಸಂಗಮದೇವ=ಶಿವನ ಹೆಸರು/ಚೆನ್ನಬಸವಣ್ಣನವರ ವಚನಗಳ ಅಂಕಿತನಾಮ;

ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇ ಸಾಧನ ಕೂಡಲ ಚೆನ್ನಸಂಗಮದೇವಾ=ಶಿವನ ಅನುಗ್ರಹಕ್ಕೆ ವ್ಯಕ್ತಿಯು ಪಾತ್ರನಾಗಲು ಇರುವ ಒಂದೇ ಒಂದು ದಾರಿಯೆಂದರೆ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರುವುದು. ಅಂದರೆ ಜೀವನದ ಉದ್ದಕ್ಕೂ ಒಳ್ಳೆಯ ನಡೆನುಡಿಯಿಂದ ಬಾಳುವುದು;

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರ ಪಾಲಿಗೆ 'ಪ್ರಸಾದ' ವೆಂದರೆ ದೇವರನ್ನು ಪೂಜಿಸಿದ ನಂತರ ಪಡೆಯುವ ಹೂವು ಹಣ್ಣುಗಳಲ್ಲ/ತಿನಸು ಉಣಿಸುಗಳಲ್ಲ/ಒಡವೆ ವಸ್ತುಗಳಲ್ಲ. ನಿತ್ಯ ಜೀವನದಲ್ಲಿ ಆಡುವ ಒಳ್ಳೆಯ ನುಡಿ ಮತ್ತು ಮಾಡುವ ಒಳ್ಳೆಯ ಕೆಲಸದಿಂದ ದೊರೆಯುವ ಒಲವು ನಲಿವು ನೆಮ್ಮದಿಯ ಜೀವನವೇ ಪ್ರಸಾದವಾಗಿತ್ತು.

❖

25. ಜಗಳಗಂಟ ಕಾಮಣ್ಣ

ಹೆಸರು: ಜಗಳಗಂಟ ಕಾಮಣ್ಣ
(‘ಜಗಳಗಂಟ’ ಎಂದರೆ “ಮಾತುಕತೆಯ ಸನ್ನಿವೇಶಗಳಲ್ಲಿ ಒಂದಲ್ಲ ಒಂದು ಬಗೆಯ ತಂಟೆ ತಕರಾರುಗಳನ್ನು ಮುಂದೊಡ್ಡಿ ವಾದದಲ್ಲಿ ತೊಡಗುವವನು’. ಜನಜೀವನದಲ್ಲಿ ಕಂಡು ಬರುತ್ತಿದ್ದ ಅರೆಕೊರೆಗಳನ್ನು ಇಲ್ಲವೇ ತಪ್ಪುಗಳನ್ನು ಕೆದಕಿ ನೇರವಾದ ಮಾತುಗಳಿಂದ ಟೀಕಿಸುತ್ತಿದ್ದ ಕಾಮಣ್ಣನೆಂಬ ವ್ಯಕ್ತಿಗೆ ಅಡ್ಡಹೆಸರು ಬಂದಿರಬಹುದೆಂದು ಊಹಿಸಲಾಗಿದೆ.)

ವಚನಗಳ ಅಂಕಿತನಾಮ: ಕಾಮೇಶ್ವರ

ದೊರೆತಿರುವ ವಚನಗಳು: 4

99. ಸಾವ ದೇವರನೊಲ್ಲೆ
ಭಾವವಳಿಯದ ಭಕ್ತಿಯನೊಲ್ಲೆ
ಆವಾವ ಪರಿಯಲ್ಲೂ ವಿಧಿಯನೊಲ್ಲೆ
ಕಾಮೇಶ್ವರನೆಂಬುದನೊಂದನೆ ಬಲ್ಲೆ.

ವ್ಯಕ್ತಿಯ ಜೀವನದಲ್ಲಿ ಉಂಟಾಗುವ ಒಳಿತು ಕೆಡುಕಿಗೆ ‘ದೇವರ ಇಚ್ಛೆ ಮತ್ತು ಹಣೆಬರಹ’ ಕಾರಣವೆಂಬ ಜನಮನದಲ್ಲಿರುವ ನಂಬಿಕೆಯನ್ನು ಈ ವಚನದಲ್ಲಿ ನಿರಾಕರಿಸಲಾಗಿದೆ.

ಸಾವ=ಸಾಯುವ/ಇಲ್ಲವಾಗುವ; ದೇವರನ್+ಒಲ್ಲೆ; ದೇವರು=ವ್ಯಕ್ತಿಯ ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ಒಳ್ಳೆಯದನ್ನು

ಮಾಡುವ ವ್ಯಕ್ತಿ/ಶಕ್ತಿಯನ್ನು ದೇವರೆಂದು ನಂಬಲಾಗಿದೆ; ಒಲ್ಲೆ=ಬೇಕಾಗಿಲ್ಲ/ ಒಪ್ಪಿಕೊಳ್ಳುವುದಿಲ್ಲ;

ಸಾವ ದೇವರನೊಲ್ಲೆ=ಸಾಯುವ ದೇವರನ್ನು ನಾನು ಒಪ್ಪಿಕೊಳ್ಳುವುದಿಲ್ಲ; ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಕಲ್ಲು/ಮರ/ಲೋಹ/ ಮಣ್ಣಿನಿಂದ ಮಾಡಿದ ಜಡರೂಪಿಯಾದ ವಿಗ್ರಹದಲ್ಲಿ ದೇವರಾದ ಶಿವನನ್ನು ಕಾಣುತ್ತಿರಲಿಲ್ಲ. ತಮ್ಮ ನಿತ್ಯ ಜೀವನದ ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯನ್ನು ನೀಡುವ ಚೇತನರೂಪಿಯಾಗಿ ದೇವರನ್ನು ಕಾಣುತ್ತಿದ್ದರು. ಆದ್ದರಿಂದಲೇ ಅವರು ವಿಗ್ರಹಗಳಿಂದ ಕೂಡಿರುವ ದೇಗುಲವನ್ನು ನಿರಾಕರಿಸಿದ್ದರು. ವಿಗ್ರಹರೂಪ ದಲ್ಲಿರುವ ಜಡರೂಪಿ ದೇವರು ಇಂದಲ್ಲ ನಾಳೆ ಕಾಲದ ಉರುಳುವಿಕೆಯಲ್ಲಿ ನಾಶ ವಾಗುವುದರಿಂದ, ಅದನ್ನು 'ಸಾವ ದೇವರು' ಎಂದು ಶಿವಶರಣಶರಣೆಯರು ಕರೆದಿದ್ದಾರೆ; ಭಾವ+ಅಳಿಯದ; ಭಾವ=ವ್ಯಕ್ತಿಯ ಮನದಲ್ಲಿ ಮೂಡುವ ಒಳಿತು ಕೆಡುಕಿನ ಒಳಮಿಡಿತ, ಅಳಿ=ನಾಶವಾಗುವುದು/ಇಲ್ಲವಾಗುವುದು; ಭಕ್ತಿ=ಒಳ್ಳೆಯ ನಡೆ ನುಡಿಯಿಂದ ಬಾಳುವುದೇ ದೇವರಿಗೆ ಮಾಡುವ ಪೂಜೆಯೆಂದು ನಂಬಿರುವುದು; **ಭಾವವಳಿಯದ ಭಕ್ತಿ**=ಕೆಟ್ಟ ನಡೆನುಡಿಯನ್ನು ಬಿಡದೆ, ದೇವರನ್ನು ಪೂಜಿಸುವುದು. ಇಂತಹ ಪೂಜೆಯು ಕೇವಲ ಬೂಟಾಟಿಕೆಯಿಂದ ಕೂಡಿರುತ್ತದೆ. ಇದು ಒಳ್ಳೆಯದಲ್ಲ;

ಭಾವವಳಿಯದ ಭಕ್ತಿಯನೊಲ್ಲೆ=ಶಿವನನ್ನು ಒಲಿದು ಪೂಜಿಸುವ ವ್ಯಕ್ತಿಯು ತನ್ನ ಮಯ್ ಮನದಲ್ಲಿ ನಿರಂತರವಾಗಿ ತುಡಿಯುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಇಲ್ಲವೇ ನಾಶಪಡಿಸಿಕೊಂಡು, ಒಳ್ಳೆಯದನ್ನು ಆಚರಣೆಗೆ ತರಬೇಕು. ಇಂತಹ ಅರಿವು ಮತ್ತು ಎಚ್ಚರವಿಲ್ಲದ ನಡೆನುಡಿಯನ್ನು ನಾನು ಒಪ್ಪುವುದಿಲ್ಲ;

ಆವ+ಆವ; ಆವ=ಯಾವ; ಪರಿ=ರೀತಿ/ಬಗೆ; ವಿಧಿ+ಅನ್+ಒಲ್ಲೆ; ವಿಧಿ=ಹಣೆಬರಹ; ಅನ್=ಅನ್ನು;

ಆವಾವ ಪರಿಯಲ್ಲೂ ವಿಧಿಯನೊಲ್ಲೆ=ಯಾವುದೇ ಕಾರಣದಿಂದಲೂ ನಾನು ಹಣೆಬರಹವೆಂಬುದನ್ನು ಒಪ್ಪುವುದಿಲ್ಲ;

ಸಾವಿರಾರು ವರುಶಗಳಿಂದಲೂ ಜನಮನದಲ್ಲಿ 'ಹಣೆಬರಹ/ವಿಧಿ ಬರಹ' ಎಂಬ ಒಂದು ನಂಬಿಕೆಯು ನೆಲೆಯೂರಿದೆ. ಈ ಜಗತ್ತಿನಲ್ಲಿರುವ ಎಲ್ಲಾ ಬಗೆಯ ಜೀವರಾಶಿಗಳ ಹುಟ್ಟಿಗೆ ಕಾರಣನಾಗಿರುವ ಬ್ರಹ್ಮನೆಂಬ ದೇವರು " ವ್ಯಕ್ತಿಯು

ಹುಟ್ಟಿದಂದಿನಿಂದ ಸಾಯುವ ತನಕ ಅವನ/ಅವಳ ಜೀವನದಲ್ಲಿ ನಡೆಯಲಿರುವ ಎಲ್ಲಾ ಬಗೆಯ ನೋವು ನಲಿವುಗಳನ್ನು ಹುಟ್ಟಿದಾಗಲೇ ಅವರ ಹಣೆಯಲ್ಲಿ ಬರೆದಿರುತ್ತಾನೆ. ಅದರಂತೆಯೇ ಎಲ್ಲವೂ ನಡೆಯುತ್ತದೆ. ಮಾನವರ ಬದುಕಿನ ಹಸಿವು ಅಪಮಾನ ನೋವು ನಲಿವು ಸಂತಸಕ್ಕೆ ವಿಧಿ ಇಲ್ಲವೇ ಹಣೆಬರಹವೇ ಕಾರಣ". ಈ ಬಗೆಯ ಜನಮನದ ನಂಬಿಕೆಯನ್ನು ಶಿವಶರಣ ಶರಣೆಯರು ನಿರಾಕರಿಸಿದ್ದರು.

ಮಾನವರ ಬದುಕಿನ ನೋವು ನಲಿವಿಗೆ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳಾದ ಮಳೆಗಾಲ, ಬರಗಾಲ, ಭೂಕಂಪ ಮತ್ತು ಮಾನವರ ಒಳಿತು ಕೆಡುಕಿನ ನಡೆನುಡಿಗಳೇ ಕಾರಣ. ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನಕ್ಕೆ ಅಗತ್ಯವಾದ "ಅನ್ನ-ಬಟ್ಟೆ-ವಸತಿ-ವಿದ್ಯೆ-ಉದ್ಯೋಗ-ಆರೋಗ್ಯ" ವನ್ನು ಪಡೆದು ಒಲವು ನಲಿವು ನೆಮ್ಮದಿಯಿಂದ ಬಾಳಬೇಕಾದರೆ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳು ಮತ್ತು ಮಾನವರ ನಡೆನುಡಿಗಳು ಉತ್ತಮವಾಗಿರಬೇಕು. ಆದ್ದರಿಂದ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ಅವನ, ಅವನ ಕುಟುಂಬಕ್ಕೆ ಒಳಿತನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡಬೇಕು ಎಂಬ ನಿಲುವನ್ನು ಶಿವಶರಣ ಶರಣೆಯರು ಹೊಂದಿದ್ದರು;

ಕಾಮೇಶ್ವರನ್+ಎಂಬುದನ್+ಒಂದನೆ; ಕಾಮೇಶ್ವರ=ಶಿವನಿಗೆ ಇದ್ದ ಮತ್ತೊಂದು ಹೆಸರು/ಜಗಳಗಂಟ ಕಾಮಣ್ಣನ ವಚನಗಳ ಅಂಕಿತನಾಮ; ಎಂಬುದನ್ನು=ಎನ್ನುವುದನ್ನು; ಒಂದನೆ=ಅದನ್ನು ಮಾತ್ರ; ಬಲ್ಲೆ=ತಿಳಿದಿದ್ದೇನೆ;

ಕಾಮೇಶ್ವರನೆಂಬುದನೊಂದನೆ ಬಲ್ಲೆ=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ಕಾಮೇಶ್ವರನೆಂಬ ಒಬ್ಬ ದೇವರನ್ನು ನಾನು ಚೆನ್ನಾಗಿ ಅರಿತಿದ್ದೇನೆ. ನಾನು ಒಲಿದು ನಂಬಿ ಪೂಜಿಸುವ ಈ ನನ್ನ ದೇವರು ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯನ್ನು ಕೊಡುವ ಚೇತನರೂಪಿಯಾಗಿ ನನ್ನ ಮಯ್ ಮನದಲ್ಲಿಯೇ ನೆಲೆಸಿದ್ದಾನೆ;

❖

26. ಜೇಡರ ದಾಸಿಮಯ್ಯ

ಊರು: ಮುದನೂರು, ಗುಲ್ಬರ್ಗ ಜಿಲ್ಲೆ.
ಹೆಂಡತಿ: ದುಗ್ಗಳೆ.
ಕಸುಬು: ನೆಯ್ಗೆಯ ಕಾಯಕ
ದೊರೆತಿರುವ ವಚನಗಳು: 176
ವಚನಗಳ ಅಂಕಿತನಾಮ: ರಾಮನಾಥ

100. ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದವ ರಾಮನಾಥ.

ಮಾನವರ ಜೀವನವು ಒಳ್ಳೆಯ ರೀತಿಯಲ್ಲಿ ರೂಪುಗೊಳ್ಳಲು 'ಅರಿವು ಮತ್ತು ಕಾಯಕ' ಒಂದರೊಡನೊಂದು ಜತೆಗೂಡಿರಬೇಕು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಅರಿವು' ಎಂದರೆ "ಮಾನವರ ಜೀವನದಲ್ಲಿ ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ವಾಸ್ತವ–ಯಾವುದು ಕಲ್ಪಿತ; ಯಾವುದು ದಿಟ–ಯಾವುದು ಸಟೆ; ಯಾವುದನ್ನು ಮಾಡಬೇಕು–ಯಾವುದನ್ನು ಮಾಡಬಾರದು" ಎಂಬ ತಿಳುವಳಿಕೆ;

‘ಕಾಯಕ’ ಎಂದರೆ “ದುಡಿಮೆ/ಕೆಲಸ” . ವ್ಯಕ್ತಿಯು ಮಾಡುವ ದುಡಿಮೆಯು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತರುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವಂತಿರಬೇಕು;

ಅಗ್ನಿ=ಬೆಂಕಿ; ಸುಡಲ್+ಅಲ್ಲದೆ; ಸುಡು=ಬೆಂಕಿಯಲ್ಲಿ ಬೇಯಿಸು; ಅಲ್ಲದೆ=ಹೊರತು; ಸುಳಿಯಲ್+ಅರಿದು; ಸುಳಿ=ಬೀಸು/ತಿರುಗು/ಚಲಿಸು; ಅರಿಯದು=ತಿಳಿಯದು;

ಅಗ್ನಿ ಸುಡಲಲ್ಲದೆ ಸುಳಿಯಲರಿಯದು=ಬೆಂಕಿಯು ತಾನು ಉರಿಯುತ್ತಿರುವ ಎಡೆಯಲ್ಲಿ ಇರುವುದನ್ನು ಸುಡಬಲ್ಲುದೆ ಹೊರತು ಅತ್ತಿತ್ತ ತಾನಾಗಿಯೇ ಚಲಿಸಲಾರದು;

ವಾಯು=ಗಾಳಿ; ಸುಳಿವುದು+ಅಲ್ಲದೆ; ಸುಡಲ್+ಅರಿಯದು;

ವಾಯು ಸುಳಿವುದಲ್ಲದೆ ಸುಡಲರಿಯದು=ಗಾಳಿಯು ಎಲ್ಲ ಕಡೆಯೂ ಬೀಸುತ್ತ ಚಲಿಸಬಲ್ಲುದೆ ಹೊರತು, ಯಾವುದನ್ನು ಸುಡಲಾರದು;

ಕೂಡಿದ+ಅಲ್ಲದೆ; ಕೂಡು=ಸೇರು/ಜತೆಯಾಗು; ಅಡಿ+ಇಡಲ್+ಅರಿಯದು; ಅಡಿ=ಹೆಜ್ಜೆ; ಅಡಿಯಿಡು=ಮುಂದಕ್ಕೆ ಹೋಗು;

ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು=ಉರಿಯುತ್ತಿರುವ ಬೆಂಕಿಯು ಗಾಳಿಯ ಜತೆಗೂಡದಿದ್ದರೆ, ಬೆಂಕಿಯು ಎಲ್ಲ ಕಡೆ ಹರಡುವುದಿಲ್ಲ. ಅಂದರೆ ಬೆಂಕಿಯು ಉರಿಯುತ್ತಿರುವಾಗ ಗಾಳಿಯು ಬೀಸದಿದ್ದರೆ, ಬೆಂಕಿಯು ಇದ್ದ ಎಡೆಯಲ್ಲಿನ ವಸ್ತುಗಳೆಲ್ಲವೂ ಸುಟ್ಟು ಕರಕಲು ಆಗುತ್ತಿದ್ದಂತೆಯೇ, ಬೆಂಕಿಯು ನಂದಿಹೋಗುತ್ತದೆ;

ಪರಿ+ಅಂತೆ; ಪರಿ=ರೀತಿ/ಬಗೆ; ಅಂತೆ=ಹಾಗೆ; ನರರ್+ಅರಿವರೆ; ನರ=ಮಾನವ; ಅರಿವರೆ=ತಿಳಿಯುತ್ತಾರೆಯೇ/ಅರಿಯಬಲ್ಲರೇ; ಕ್ರಿಯಾ+ಜ್ಞಾನ+ಭೇದವ; ಕ್ರಿಯಾ=ದುಡಿಮೆ/ಕಾಯಕ/ಕೆಲಸ; ಜ್ಞಾನ=ಅರಿವು/ತಿಳುವಳಿಕೆ; ಭೇದ=ವ್ಯತ್ಯಾಸ; ರಾಮನಾಥ=ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದವ=ಸುಡುವ ಕಸುವುಳ್ಳ ಬೆಂಕಿ ಮತ್ತು ಬೀಸುವ ಕಸುವುಳ್ಳ ಗಾಳಿಯು ಜತೆಗೂಡಿದಾಗ ಮಾತ್ರ ಬೆಂಕಿಯು ಎಲ್ಲ

ಕಡೆಯೂ ಹತ್ತಿಕೊಂಡು ಉರಿಯುವ ಪ್ರಸಂಗವು ಒಂದು ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ;

ಮಾನವರು ಜೀವನದಲ್ಲಿ ಒಲವು ನಲಿವು ನೆಮ್ಮದಿಯಿಂದ ಬಾಳಬೇಕಾದರೆ, ಅವರಲ್ಲಿ ಅರಿವು ಮತ್ತು ಕ್ರಿಯೆ ಜತೆಗೂಡಿರಬೇಕು . ಜನರು ಕೇವಲ ಅರಿವನ್ನು ಪಡೆದ ಮಾತ್ರದಿಂದಲೇ ಜೀವನಕ್ಕೆ ಅಗತ್ಯವಾದ " ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯ " ದೊರಕುವುದಿಲ್ಲ. ಇವನ್ನೆಲ್ಲಾ ಪಡೆಯಬೇಕಾದರೆ ಅದಕ್ಕೆ ತಕ್ಕಂತೆ ಕಾಯಕವನ್ನು ಮಾಡಬೇಕು;

ಅರಿವಿಲ್ಲದೆ ಮಾಡುವ ಕಾಯಕದಿಂದಾಗಲಿ ಇಲ್ಲವೇ ಕಾಯಕವನ್ನು ಮಾಡದ ಅರಿವಿನಿಂದಾಗಲಿ ಮಾನವ ಸಮುದಾಯಕ್ಕೆ ಒಳಿತಾಗುವುದಿಲ್ಲವೆಂಬ ಎಚ್ಚರವನ್ನು ಈ ರೂಪಕ ಸೂಚಿಸುತ್ತಿದೆ;

❖

101. ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರ
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ ರಾಮನಾಥ.

ಚೇತನ ರೂಪಿಯಾದ ಮಾನವ ಜೀವಿಯ ಬದುಕಿನಲ್ಲಿ ಉಂಟಾಗುವ ಹಸಿವಿನ ಸಂಕಟವಾಗಲಿ ಇಲ್ಲವೇ ಸುಳ್ಳು ಹಾಗೂ ನಿಜದ ನಡುವಣ ಇಬ್ಬಗೆಯ ತೊಳಲಾಟವಾಗಲಿ ಜಡ ರೂಪಿಯಾದ ದೇವರಿಗಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ಪಾಲಿಗೆ ದೇವರು ಎನ್ನುವ ವ್ಯಕ್ತಿಯು ಕಲ್ಲು/ಮರ/ಮಣ್ಣು/ಲೋಹದ ವಿಗ್ರಹವಾಗಿ ಇಲ್ಲವೇ ಪವಾಡ ಗಳನ್ನು ಮಾಡುವ ದಿವ್ಯ ಶಕ್ತಿಯಾಗಿ ಕಾಣುತ್ತಿರಲಿಲ್ಲ. "ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಯನ್ನು ದೇವರು" ಎಂದು ತಿಳಿದಿದ್ದರು; ದೇವರು ಎಂಬ ವ್ಯಕ್ತಿ ಇಲ್ಲವೇ ಶಕ್ತಿಯು ಕೇವಲ ಮಾನವ ಸಮುದಾಯದ ಕಲ್ಪನೆಯೇ ಹೊರತು ವಾಸ್ತವವಲ್ಲ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

ಒಡಲು+ಕೊಂಡವ; ಒಡಲು=ದೇಹ/ಹೊಟ್ಟೆ; ಕೊಳ್=ಹೊಂದು/ಪಡೆ; ಕೊಂಡವ=ಪಡೆದವನು/ಹೊಂದಿದವನು; ಹಸಿ/ಹಸಿವು=ಆಹಾರವನ್ನು ಉಣ್ಣುವ ಬಯಕೆ;

ಒಡಲುಗೊಂಡವ ಹಸಿವ=ದೇಹವನ್ನು ಪಡೆದು ಜೀವಂತನಾಗಿರುವ ವ್ಯಕ್ತಿಯು ಸಾಯುವ ಕೊನೆಗಳಿಗೆಯ ತನಕ ಹೊಟ್ಟೆಯ ಹಸಿವಿಗೆ ಒಳಗಾಗುತ್ತಿರುತ್ತಾನೆ. ಏಕೆಂದರೆ ದೇಹವು ಗಟ್ಟಿಮುಟ್ಟಾಗಿ ಉಳಿಯಬೇಕಾದರೆ ದಿನನಿತ್ಯ ನಿಯಮಿತ ಕಾಲದಲ್ಲಿ ಆಹಾರವನ್ನು ಉಣ್ಣುವ ತಿನ್ನುವ ಕುಡಿಯುವ ಕ್ರಿಯೆಯಲ್ಲಿ ಮಾನವ ಜೀವಿಯು ತೊಡಗಿರಲೇಬೇಕು;

ಹುಸಿ=ಸುಳ್ಳು; ಹುಸಿವ=ಸುಳ್ಳನ್ನು ಹೇಳುತ್ತಾನೆ; ಸುಳ್ಳು=ಇರುವುದನ್ನು ಇಲ್ಲವೆಂದು, ಇಲ್ಲದ್ದನ್ನು ಇದೆಯೆಂದು ಹೇಳುವುದು; ಕಂಡಿದ್ದನ್ನು ಕಾಣೆನೆಂದು,

ಕಾಣದ್ದನ್ನು ಕಂಡೆನೆಂದು ಹೇಳುವುದು; ಮಾಡಿದ್ದನ್ನು ಮಾಡಿಲ್ಲವೆಂದು, ಮಾಡಿಲ್ಲದ್ದನ್ನು ಮಾಡಿದೆನೆಂದು ಹೇಳುವುದು;

ಒಡಲುಗೊಂಡವ ಹುಸಿವ=ವ್ಯಕ್ತಿಯು ಸಾಯುವ ಕೊನೆಗಳಿಗೆಯ ತನಕ ಒಂದಲ್ಲ ಒಂದು ಕಾರಣಕ್ಕಾಗಿ ಸುಳ್ಳನ್ನು ಹೇಳುತ್ತಿರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯು ಬಹುತೇಕ ಸನ್ನಿವೇಶಗಳಲ್ಲಿ ತನ್ನ ಪ್ರಯೋಜನಕ್ಕಾಗಿ ಸುಳ್ಳನ್ನು ಹೇಳಿದರೆ, ಕೆಲವೊಮ್ಮೆ ಇತರರಿಗೆ ಉಂಟಾಗಲಿರುವ ಕೇಡನ್ನು ತಪ್ಪಿಸುವುದಕ್ಕಾಗಿಯೂ ಸುಳ್ಳನ್ನು ಹೇಳುತ್ತಾನೆ;

ಒಡಲು+ಕೊಂಡವನು+ಎಂದು; ಒಡಲುಗೊಂಡವನು=ದೇಹವನ್ನು ಪಡೆದಿರುವವನು; ನೀನ್+ಎನ್ನ; ನೀನು=ದೇವರಾದ ನೀನು; ನನ್ನ= ಮಾನವನಾದ ನನ್ನನ್ನು; ಜಡಿದು+ಒಮ್ಮೆ; ಜಡಿದು=ಗದರಿಸು/ಬೆದರಿಸು; ಒಮ್ಮೆ= ಒಂದು ಬಾರಿ; ನುಡಿಯದಿರ=ಹೇಳಬೇಡ;

ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರ=ಹಸಿವು ಮತ್ತು ಹುಸಿಯಿಂದ ಕೂಡಿದ ದೇಹವನ್ನುಳ್ಳ ಜೀವರೂಪಿಯಾದ ನನ್ನನ್ನು, ಜಡರೂಪಿಯಾದ ನೀನು ಕಡೆಗಣಿಸಿ ನುಡಿಯಬೇಡ;

ನೀನ್+ಎನ್ನ+ಅಂತೆ; ಅಂತೆ=ಹಾಗೆ/ಅದೇ ಬಗೆಯಲ್ಲಿ; ಒಡಲುಗೊಂಡು= ದೇಹವನ್ನು ಪಡೆದು, ಅಂದರೆ ಮಾನವ ಜೀವಿಯಾಗಿ ಹುಟ್ಟಿ; ನೋಡು=ತಿಳಿ/ ಕಾಣು; ನೋಡಾ=ತಿಳಿದುಕೊ/ಅರಿತುಕೊ; ರಾಮನಾಥ=ಶಿವ/ಜೇಡರ ದಾಸಿಮಯ್ಯನವರ ವಚನಗಳ ಅಂಕಿತನಾಮ;

ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ, ರಾಮನಾಥ=ಶಿವನೇ, ನೀನು ನನ್ನಂತೆ ದೇಹವನ್ನು ಪಡೆದು ನೋಡು, ಆಗ ನಿನಗೆ ಮಾನವ ಜೀವಿಯ ಸಂಕಟ ಮತ್ತು ಮಾನವ ಜೀವನದ ಇತಿಮಿತಿಗಳ ಅರಿವಾಗುತ್ತದೆ;

ಈ ವಚನದಲ್ಲಿ ಜೇಡರ ದಾಸಿಮಯ್ಯನು ದೇವರಿಗೆ ಸವಾಲನ್ನು ಹಾಕುವುದರ ಮೂಲಕ ಮಾನವರ ಬದುಕಿನಲ್ಲಿ ಕಾಡುವ ಎರಡು ಸಂಗತಿಗಳನ್ನು ನಿರೂಪಿಸುತ್ತ, ಮಾನವ ಜೀವಿಯ ಬದುಕಿನ ವಾಸ್ತವವನ್ನು ಮನಗಾಣಿಸಿದ್ದಾನೆ.

ಮಾನವ ಜೀವಿಗೆ **'ಹಸಿವು'** ಎಂಬುದು ನಿಸರ್ಗ ಸಹಜವಾದುದು. ವ್ಯಕ್ತಿಯು ಬದುಕಿರುವ ತನಕ ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿರಲೇಬೇಕು, ಇಲ್ಲದಿದ್ದರೆ ಸಾವು ಉಂಟಾಗುತ್ತದೆ.

ಮಾನವ ಜೀವಿಗೆ 'ಹುಸಿ' ಎನ್ನುವುದು ಸಾಮಾಜಿಕವಾದುದು. ಜೀವಮಾನದಲ್ಲಿ ಒಮ್ಮೆಯಾದರೂ ಸುಳ್ಳನ್ನಾಡದ ವ್ಯಕ್ತಿಯು ಜಗತ್ತಿನಲ್ಲಿ ಇಲ್ಲವೇ ಇಲ್ಲ. ಏಕೆಂದರೆ ಜಗತ್ತಿನಲ್ಲಿ ಹುಟ್ಟಿ ಬೆಳೆದು ಬಾಳುವ ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ಬಗೆಯ ಜಾತಿ/ಮತ/ಬುಡಕಟ್ಟಿಗೆ ಸೇರಿರುತ್ತಾನೆ. ಅವನ/ಅವಳ ನಡೆನುಡಿಗಳನ್ನು ಆಯಾಯ ಜಾತಿಯ, ಮತದ ಮತ್ತು ಬುಡಕಟ್ಟಿನ ಆಚರಣೆಗಳು, ಸಂಪ್ರದಾಯಗಳು, ಕಟ್ಟುಪಾಡುಗಳು ರೂಪಿಸುತ್ತವೆ. ಇದರ ಜತೆಗೆ ನಾಡಿನ ಆಳ್ವಿಕೆಯ ಕಾನೂನು ಕಟ್ಟಲೆಗಳು ವ್ಯಕ್ತಿಯ ನಡೆನುಡಿಯನ್ನು ನಿಯಂತ್ರಿಸು ತ್ತಿರುತ್ತವೆ. ಆದ್ದರಿಂದ ಯಾವುದೇ ವ್ಯಕ್ತಿಯು ಸರ್ವ ಸ್ವತಂತ್ರನಲ್ಲ. ಇವೆಲ್ಲವು ಗಳಿಂದಾಗಿ ವ್ಯಕ್ತಿಯು ತನ್ನ ಬದುಕಿನ ಉದ್ದಕ್ಕೂ ನೂರೆಂಟು ಸನ್ನಿವೇಶಗಳಲ್ಲಿ ಸುಳ್ಳನ್ನು ಆಡುತ್ತಲೇ ಇರುತ್ತಾನೆ. ಆದ್ದರಿಂದಲೇ ಮಾನವ ಸಮುದಾಯದ ಮಾತಿನಲ್ಲಿ "ಯಾವುದು ನಿಜ/ಯಾವುದು ಸುಳ್ಳು" ಎಂಬುದನ್ನು ವಿಂಗಡಿಸಿ ತಿಳಿಯಲಾರದಂತಹ ರೀತಿಯಲ್ಲಿ ಸುಳ್ಳು ಹಾಸುಹೊಕ್ಕಾಗಿದೆ;

❖

102. ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ
ಕಡೆಗೀಲು ಬಂಡಿಗಾಧಾರ
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ
ಕಡೆಗೀಲು ಕಾಣಾ ರಾಮನಾಥ.

ಹಾದಿಯಲ್ಲಿ ಸಾಗುತ್ತಿರುವಾಗ ಬಂಡಿಯ ಚಕ್ರಗಳು ಕೆಳಕ್ಕೆ ಉರುಳದಂತೆ ತಡೆಯಲು ಕಡಾಣಿಗಳು ಇರುವಂತೆಯೇ, ವ್ಯಕ್ತಿಯ ಮಯ್ ಮನದಲ್ಲಿ ತುಡಿಯುವ ಕೆಟ್ಟ ಒಳ ಮಿಡಿತಗಳನ್ನು ತಡೆದು, ವ್ಯಕ್ತಿಯು ತನ್ನ ಜೀವನದಲ್ಲಿ ಒಳ್ಳೆಯ ಹಾದಿಯಲ್ಲಿ ನಡೆಯಲು ಅಗತ್ಯವಾದ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಮೂಡಿಸುವ ಕಸುವು ಶಿವಶರಣ ಶರಣೆಯರ ನುಡಿಗಳಲ್ಲಿದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

‘ಸಾಮಾಜಿಕ ಅರಿವು’ ಎಂದರೆ ವ್ಯಕ್ತಿಯು ತನ್ನ ನಡೆನುಡಿಗಳಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಮಾಡಿಕೊಳ್ಳುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕು ಎಂಬ ತಿಳುವಳಿಕೆ.

‘ಸಾಮಾಜಿಕ ಎಚ್ಚರ’ ಎಂದರೆ ಜಾತಿ, ಮತ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಆಚರಣೆಗಳಿಂದ ಮಾನವರ ಬದುಕಿನಲ್ಲಿ ಉಂಟಾಗುತ್ತಿರುವ ಪರಿಣಾಮಗಳನ್ನು ಸರಿಯಾಗಿ ಗಮನಿಸಿ, ಯಾವ ಬಗೆಯ ಆಚರಣೆಗಳು ಮಾನವ ಸಮುದಾಯದ ಸಂಕಟಗಳಿಗೆ ಕಾರಣವಾಗಿವೆ ಎಂಬುದನ್ನು ಅರಿತುಕೊಂಡು, ಅಂತಹ ಆಚರಣೆಗಳಿಂದ ದೂರವಿರುವುದು.

ಕಡೆ+ಕೀಲು+ಇಲ್ಲದ; ಕಡೆ=ಅಂಚು/ಕೊನೆ; ಕೀಲು=ಗೂಟ/ಬೆಣೆ; ಕಡೆಗೀಲು=ಗಾಡಿ, ತೇರು ಮತ್ತು ಇತರ ವಾಹನಗಳ ಅಚ್ಚಿನ ಕೊನೆಯಲ್ಲಿ ಚಕ್ರಗಳು ಉರುಳಿ ಕೆಳಕ್ಕೆ ಬೀಳದಂತೆ ಹಾಕಿರುವ ಕಬ್ಬಿಣದ ಗೂಟ/ಕಡಾಣಿ; ಬಂಡಿ=ಗಾಡಿ; ಹೊಡೆ+ಕೆಡೆ+ಅದೆ; ಹೊಡೆ=ಒಡಲು/ಹೊಟ್ಟೆ; ಕೆಡೆ=ಬೀಳು/ಕುಸಿ; ಹೊಡೆಗೆಡೆ=ಮಗುಚಿಬೀಳು/ಬೋರಲಾಗಿ ಬೀಳು; ಮಾಣ್=ಸುಮ್ಮನಿರು/ತಪ್ಪಿಹೋಗು;

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ=ಚಕ್ರಗಳಿಗೆ ಕಡಾಣಿಯಿಲ್ಲದ ಬಂಡಿಯು ದಾರಿಯಲ್ಲಿ ಸಾಗುತ್ತಿರುವಾಗ ಒಂದಲ್ಲ ಒಂದು ಎಡೆಯಲ್ಲಿ ಉರುಳಿ ಬೀಳದಿರುವುದೇ, ಅಂದರೆ ಗಾಡಿಯು ಬಿದ್ದೇ ಬೀಳುವುದು ನಿಶ್ಚಿತ; ಬಂಡಿಗೆ+ಆಧಾರ; ಆಧಾರ=ಅವಲಂಬನ;

ಕಡೆಗೀಲು ಬಂಡಿಗಾಧಾರ=ಗಾಡಿಯು ಎಲ್ಲಿಯೂ ಬೀಳದಂತೆ ಸಾಗಬೇಕಾದರೆ ಕಡಾಣಿಯು ಬೇಕೇ ಬೇಕು;

ಕಡು+ದರ್ಪ+ಏರಿದ; ಕಡು=ಹೆಚ್ಚು; ದರ್ಪ=ಸೊಕ್ಕು; ಏರು=ಉಂಟಾಗು/ಒದಗು; ಒಡಲ್+ಎಂಬ; ಒಡಲು=ದೇಹ; ಎಂಬ=ಎನ್ನುವ;

ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ=ರೂಪ, ಸಂಪತ್ತು, ವಿದ್ಯೆ, ಉನ್ನತವಾದ ಗದ್ದುಗೆ ಮತ್ತು ಜಾತಿಮತದ ಮೇಲರಿಮೆಯ ಸೊಕ್ಕಿನಿಂದ ಮೆರೆಯುತ್ತಿರುವ ಈ ದೇಹವೆಂಬ ಬಂಡಿಗೆ;

ಮೃಢ=ಶಿವ; ಭಕ್ತ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ಅರಿತು ಬಾಳುವವನು; ಮೃಢಭಕ್ತರು=ವಚನಕಾರರು/ಶಿವನನ್ನು ಪೂಜಿಸುವವರು; ನುಡಿ+ಗಡಣವೆ; ನುಡಿ=ಮಾತು; ಗಡಣ=ಸಮೂಹ/ರಾಶಿ;

ಮೃಢಭಕ್ತರ ನುಡಿಗಡಣ=ವಚನಕಾರರು ರಚಿಸಿರುವ ಸೂಳ್ನುಡಿಗಳು. ವಚನ ಗಳನ್ನು 'ಸೂಳ್ನುಡಿ' ಎಂದು ಕರೆಯುತ್ತಾರೆ. ಸೂಳ್ ಮತ್ತು ನುಡಿ ಎಂಬ ಎರಡು ಪದಗಳು ಸೇರಿ 'ಸೂಳ್ನುಡಿ' ಎಂದಾಗಿದೆ. 'ಸೂಳ್' ಎಂದರೆ ಸರದಿ, ವ್ಯಕ್ತಿಯ ಪಾಲಿಗೆ ದೊರೆತ ಅವಕಾಶ; 'ನುಡಿ' ಎಂದರೆ ಮಾತು. ಸರದಿಯ ಪ್ರಕಾರ ಆಡಿದ ಮಾತಿಗೆ 'ಸೂಳ್ನುಡಿ' ಎಂದು ಹೆಸರು.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಸಾಮಾಜಿಕ ಆಂದೋಲನದ ಸನ್ನಿವೇಶದಲ್ಲಿ ತಮ್ಮ ವ್ಯಕ್ತಿಗತವಾದ ನಡೆನುಡಿಗಳನ್ನು ಒರೆಹಚ್ಚಿ ನೋಡಿಕೊಳ್ಳುವಾಗ ಮತ್ತು ಸಮಾಜದ ಅರೆಕೊರೆಗಳನ್ನು ಕುರಿತು ಒಬ್ಬರು ಮತ್ತೊಬ್ಬರೊಡನೆ ಚರ್ಚಿಸುವಾಗ ಆಡಿದ ನುಡಿಗಳೇ ವಚನಗಳಾಗಿ ರೂಪುಗೊಂಡಿವೆ ಎಂಬುದನ್ನು 'ಸೂಳ್ನುಡಿ' ಎಂಬ ಪದ ಸೂಚಿಸುತ್ತದೆ;

ಕಾಣ್=ನೋಡು/ತಿಳಿ; ಕಾಣಾ=ತಿಳಿದುಕೊ; ರಾಮನಾಥ=ಶಿವನಿಗೆ ಇದ್ದಂತಹ ಮತ್ತೊಂದು ಹೆಸರು. ವಚನಕಾರ ಜೇಡರ ದಾಸಿಮಯ್ಯನವರ ವಚನಗಳಲ್ಲಿ ಕಂಡು ಬರುವ ಅಂಕಿತನಾಮ;

ಮೃಢಭಕ್ತರ ನುಡಿಗಡಣವೆ ಕಡೆಗೀಲು=ವ್ಯಕ್ತಿಯ ಮಯ್ ಮನದಲ್ಲಿ ತುಡಿಯುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಜೀವನದಲ್ಲಿ ಆಚರಣೆಗೆ ತಂದು ಒಳ್ಳೆಯ ನಡೆನುಡಿಗಳಿಂದ ಬಾಳಲು ವ್ಯಕ್ತಿಗೆ ವಚನಕಾರರ ಸೂಳ್ನುಡಿಗಳು ನೆರವಾಗುತ್ತವೆ.

❖

103. ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ
ಒಂದರೆಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥ.

ಎಲ್ಲ ಬಗೆಯ ಸಿರಿಸಂಪದಗಳಿಗಿಂತಲೂ ವ್ಯಕ್ತಿಯ ಒಳ್ಳೆಯ ನಡೆನುಡಿಗೆ ಪ್ರೇರಣೆಯನ್ನು ನೀಡುವ ಶಿವಶರಣಶರಣೆಯರ ವಚನಗಳು ಮಿಗಿಲಾದುವು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

“ಒಳ್ಳೆಯ ನಡೆನುಡಿ” ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸಗಳು, ತನಗೆ ಮತ್ತು ತನ್ನ ಕುಟುಂಬಕ್ಕೆ ಒಲವು, ನಲಿವು, ನೆಮ್ಮದಿಯನ್ನು ನೀಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು.

ಕರಿ+ಅನ್+ಇತ್ತಡೆ; ಕರಿ=ಆನೆ; ಅನ್=ಅನ್ನು; ಇತ್ತಡೆ=ಕೊಟ್ಟರೆ/ನೀಡಿದರೆ; ಒಲ್ಲೆ=ಬೇಡ/ಬೇಕಾಗಿಲ್ಲ;

ಕರಿಯನಿತ್ತಡೆ ಒಲ್ಲೆ=ಇತರರು ನನಗೆ ಆನೆಯನ್ನು ಉಡುಗೊರೆಯಾಗಿ ನೀಡಿದರೆ, ಅದು ನನಗೆ ಬೇಕಾಗಿಲ್ಲ; ಇದೊಂದು ರೂಪಕವಾಗಿ ಬಳಕೆಯಾಗಿದೆ. ಆನೆಯು ರಾಜಪದವಿಯ ಸಂಕೇತವಾಗಿದೆ. ರಾಜನ ಪಟ್ಟವೇ ದೊರೆತರೂ, ಅದು ನನಗೆ ಬೇಡ;

ಸಿರಿ+ಅನ್+ಇತ್ತಡೆ; ಸಿರಿ=ಚಿನ್ನ, ಬೆಳ್ಳಿ, ನಗ, ನಾಣ್ಯ, ಮನೆ, ಹೊಲ, ಗದ್ದೆ, ತೋಟಗಳಿಂದ ಕೂಡಿರುವ ಹೆಚ್ಚಿನ ಸಂಪತ್ತು;

ಸಿರಿಯನಿತ್ತಡೆ ಒಲ್ಲೆ=ಇತರರು ನನಗೆ ದೊಡ್ಡ ಪ್ರಮಾಣದ ಸಂಪತ್ತನ್ನು ಉಡುಗೊರೆಯಾಗಿ ನೀಡಿದರೆ, ಅದನ್ನು ನನಗೆ ಬೇಡ;

ಹಿರಿದು+ಅಪ್ಪ; ಹಿರಿದು=ದೊಡ್ಡದು; ಅಪ್ಪ=ಆಗಿರುವ; ರಾಜ್ಯ+ಅನ್+ಇತ್ತಡೆ; ರಾಜ್ಯ=ರಾಜನ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯ;

ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ=ಇತರರು ನನಗೆ ದೊಡ್ಡ ರಾಜ್ಯವನ್ನು ಕೊಟ್ಟರೆ, ಅದು ನನಗೆ ಬೇಡ;

ಶರಣ=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ಅರಿತು ಬಾಳುತ್ತಿರುವ ವ್ಯಕ್ತಿ; ಸೂಳ್+ನುಡಿ=ಸೂಳ್ನುಡಿ; ಸೂಳ್ನುಡಿ=ವಚನ; ವಚನಗಳನ್ನು 'ಸೂಳ್ನುಡಿ' ಎಂದು ಕರೆಯುತ್ತಾರೆ. 'ಸೂಳ್' ಎಂದರೆ "ಸರದಿ/ವ್ಯಕ್ತಿಯ ಪಾಲಿಗೆ ದೊರೆತ ಅವಕಾಶ". 'ನುಡಿ' ಎಂದರೆ "ಮಾತು/ಸೊಲ್ಲು". ಸರದಿಯ ಪ್ರಕಾರ ಆಡಿದ ಮಾತಿಗೆ ಸೂಳ್ನುಡಿ ಎಂದು ಹೆಸರು. ಶಿವಶರಣಶರಣೆಯರು ಸಾಮಾಜಿಕ ಆಂದೋಲನದ ಸಮಯದಲ್ಲಿ ತಮ್ಮ ವ್ಯಕ್ತಿಗತವಾದ ನಡೆನುಡಿಗಳನ್ನು ತಾವೇ ಒರೆಹಚ್ಚಿ ನೋಡಿಕೊಳ್ಳುವಾಗ ಮತ್ತು ಸಮಾಜದ ಅರೆಕೊರೆಗಳನ್ನು ಒಬ್ಬರು ಮತ್ತೊಬ್ಬರೊಡನೆ ಚರ್ಚಿಸುವಾಗ ಆಡಿದ ಸಾಮಾಜಿಕ ಅರಿವು ಮತ್ತು ಎಚ್ಚರದ ನುಡಿಗಳು ವಚನಗಳಾಗಿ ರೂಪುಗೊಂಡಿರಬಹುದು ಎಂಬುದನ್ನು 'ಸೂಳ್ನುಡಿ' ಎಂಬ ಪದ ಸೂಚಿಸುತ್ತದೆ;

'ಸಾಮಾಜಿಕ ಅರಿವು' ಎಂದರೆ "ಜೀವನದಲ್ಲಿ ವ್ಯಕ್ತಿಯು ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ವಾಸ್ತವ–ಯಾವುದು ಕಲ್ಪಿತ; ಯಾವುದನ್ನು ಮಾಡಬೇಕು–ಯಾವುದನ್ನು ಮಾಡಬಾರದು" ಎಂಬ ತಿಳುವಳಿಕೆ ಮತ್ತು ತನಗೆ, ತನ್ನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ಬಯಸುವಂತೆಯೇ ಸಹಮಾನವರ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ತಿಳುವಳಿಕೆ;

'ಸಾಮಾಜಿಕ ಎಚ್ಚರ' ಎಂದರೆ ಜಾತಿ, ಮತ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಆಚರಣೆಗಳಿಂದ ಮಾನವರ ಬದುಕಿನಲ್ಲಿ ಉಂಟಾಗುತ್ತಿರುವ ಪರಿಣಾಮಗಳನ್ನು ಸರಿಯಾಗಿ ಗಮನಿಸಿ, ಯಾವ ಬಗೆಯ ಆಚರಣೆಗಳು ಮಾನವ ಸಮುದಾಯದ ಸಂಕಟಗಳಿಗೆ ಕಾರಣವಾಗಿವೆ ಎಂಬುದನ್ನು ಅರಿತುಕೊಂಡು, ಅಂತಹ ಆಚರಣೆಗಳಿಂದ ದೂರವಿರುವುದು;

ಒಂದು+ಅರೆಘಳಿಗೆ+ಇತ್ತಡೆ; ಅರೆಘಳಿಗೆ=ತುಸು ಸಮಯ/ಸ್ವಲ್ಪ ಕಾಲ; ನಿಮ್ಮನ್+ಇತ್ತೆ; ನಿಮ್ಮನ್=ದೇವರಾದ ಶಿವನನ್ನು; ಇತ್ತೆ=ಕೊಡುತ್ತೇನೆ; ಕಾಣ್=ನೋಡು; ಕಾಣಾ=ತಿಳಿದಿರುವೆಯಾ; ರಾಮನಾಥ=ಶಿವನಿಗೆ ಇದ್ದ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ=ಶಿವಶರಣಶರಣೆಯರ ವಚನಗಳಲ್ಲಿನ ಸಂಗತಿಗಳನ್ನು ತುಸು ಸಮಯ ಕೇಳುವಂತಾದರೆ, ನನ್ನ ಮೆಚ್ಚಿನ ದೇವರಾದ ಶಿವನನ್ನೇ ಬಿಟ್ಟುಕೊಡುತ್ತೇನೆ; ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯ ಪಾಲಿಗೆ “ದೇವರು ಎನ್ನುವ ಕಲ್ಪನೆ ಇಲ್ಲವೇ ನಂಬಿಕೆಯು ಮರ/ಮಣ್ಣು/ಲೋಹ/ಕಲ್ಲಿನ ರೂಪದ್ದಾಗಿರಲಿಲ್ಲ”. ಅವರ ದೇವರು ವ್ಯಕ್ತಿಯಲ್ಲಿ ಒಳ್ಳೆಯ ನಡೆನುಡಿಯನ್ನು ರೂಪಿಸಿಕೊಳ್ಳಲು ನೆರವಾಗುವ ಅರಿವಿನ ರೂಪದಲ್ಲಿತ್ತು. ಆದ್ದರಿಂದಲೇ ದೇವರನ್ನು ಪೂಜಿಸುವ ಎಲ್ಲ ಬಗೆಯ ಆಚರಣೆಗಳಿಗಿಂತಲೂ ಅರಿವನ್ನು ಮೂಡಿಸುವ ವಚನಗಳೇ ಮಿಗಿಲಾದುವು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು;

❖

104. ತೊಡೆಯಲ್ಲಿ ಮುದ್ರೆಯನೊತ್ತಿದಡೇನು
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ
ಮಡಿಲಲ್ಲಿ ಲಿಂಗವ ಕಟ್ಟಿದಡೇನೊ
ಲೋಕದ ಅಜ್ಞಾನಿತನ ಬಿಡುವುದೆ
ನಡೆ ನುಡಿ ಸತ್ಯಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ ರಾಮನಾಥ.

ದೇವರ ಹೆಸರಿನಲ್ಲಿ ವ್ಯಕ್ತಿಯು ಕೆಲವು ಬಗೆಯ ವಸ್ತುಗಳನ್ನು ತೊಟ್ಟ ಮಾತ್ರಕ್ಕೆ ಇಲ್ಲವೇ ಪೂಜೆಯ ಆಚರಣೆಗಳಲ್ಲಿ ತೊಡಗಿದ ಮಾತ್ರಕ್ಕೆ, ಅವನ ಮಯ್ ಮನದಲ್ಲಿರುವ ಕೆಟ್ಟತನ ಹೋಗುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ತೊಡೆ+ಅಲ್ಲಿ; ತೊಡೆ=ದೇಹದ ಒಂದು ಅಂಗ; ಮುದ್ರೆ+ಅನ್+ಒತ್ತಿದಡೆ+ಏನು; ಮುದ್ರೆ=ಗುರುತು/ಚಿಹ್ನೆ/ಸಂಕೇತ; ಅನ್=ಅನ್ನು; ಒತ್ತು=ಲೇಪಿಸು/ಹಾಕು; ಒತ್ತಿದಡೆ=ಒತ್ತಿದರೆ;

ತೊಡೆಯಲ್ಲಿ ಮುದ್ರೆಯನ್ನು ಒತ್ತುವುದು=ಇದೊಂದು ಬಗೆಯ ಆಚರಣೆ. ವ್ಯಕ್ತಿಯು ತಾನು ಪೂಜಿಸುವ ಕುಲದೇವರ ಸಂಕೇತವಾಗಿ ಕೆಲವು ಬಗೆಯ ಗುರುತುಗಳನ್ನು ತನ್ನ ಮಯ್ ಮೇಲೆ ಹಾಕಿಕೊಳ್ಳುತ್ತಾನೆ. ಉದಾಹರಣೆ: ಗಂಧದ ಮರದ ಕೊರಡನ್ನು ನೀರಿನಲ್ಲಿ ತೇಯ್ದಾಗ ಬರುವ ಗಂಧದ ಹಸಿಯಿಂದ ದೇವರ ತೊಡುಗೆಗಳಾದ ಶಂಕ, ಚಕ್ರ, ಗದೆ, ತಾವರೆಯ ಹೂವು ಮುಂತಾದ ವಸ್ತುಗಳ ಆಕಾರದ ಚಿಹ್ನೆಗಳನ್ನು ತನ್ನ ಹಣೆ, ಎದೆ, ತೋಳು ಮತ್ತು ತೊಡೆಗಳ ಮೇಲೆ ಹಾಕಿಕೊಳ್ಳುತ್ತಾನೆ; ಕೆಲವೊಮ್ಮೆ ತನ್ನ ಕುಲಗುರುಗಳಿಂದ ಲೋಹದ ಮುದ್ರೆಯಿಂದ ಈ ಬಗೆಯ ಚಿಹ್ನೆಗಳನ್ನು ಹಾಕಿಸಿಕೊಳ್ಳುವುದುಂಟು;

ನಡೆ+ಅಲ್ಲಿ; ನಡೆ=ವರ್ತನೆ/ನಡವಳಿಕೆ; ಶುಚಿ+ಆಗಬಲ್ಲುದೆ; ಶುಚಿ=ಕೊಳಕಿಲ್ಲದಿರುವುದು; ಆಗಬಲ್ಲುದೆ=ಆಗುತ್ತದೆಯೆ;

ನಡೆಯಲ್ಲಿ ಶುಚಿಯಾಗುವುದು=ವ್ಯಕ್ತಿಯು ತನ್ನ ಮಯ್ ಮನದಲ್ಲಿ ನಿರಂತರವಾಗಿ ಮೂಡುತ್ತಿರುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಒಳ್ಳೆಯದನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದು;

ತೊಡೆಯಲ್ಲಿ ಮುದ್ರೆಯನೊತ್ತಿದಡೇನು.... ಅದು ನಡೆಯಲ್ಲಿ ಶುಚಿಯಾಗ ಬಲ್ಲುದೆ=ವ್ಯಕ್ತಿಯು ತೊಡೆಯಲ್ಲಿ ಮುದ್ರೆಯನ್ನು ಒತ್ತಿಸಿಕೊಂಡ ಮಾತ್ರಕ್ಕೆ, ಅವನ ವರ್ತನೆಯಲ್ಲಿ ಒಳ್ಳೆಯತನ ಮೂಡುವುದಿಲ್ಲ. ಏಕೆಂದರೆ ತೊಡೆಯ ಮೇಲಿನ ಮುದ್ರೆಯು ಬಹಿರಂಗದ ಆಚರಣೆಯೇ ಹೊರತು ಅಂತರಂಗದ ಮನಸ್ಸಿನ ಕ್ರಿಯೆಯಲ್ಲ; ಆದ್ದರಿಂದ ತೊಡೆಯ ಮುದ್ರೆಗೂ ವ್ಯಕ್ತಿಯ ಒಳ್ಳೆಯತನಕ್ಕೂ ಯಾವುದೇ ನಂಟಿಲ್ಲ. ವ್ಯಕ್ತಿಯ ಮನಸ್ಸಿನಲ್ಲಿ ಮೂಡುವ ಅರಿವು ಮತ್ತು ಎಚ್ಚರದಿಂದ ಮಾತ್ರ ಒಳ್ಳೆಯ ನಡೆನುಡಿಯು ರೂಪುಗೊಳ್ಳುತ್ತದೆ;

'ಅರಿವು' ಎಂದರೆ "ಲೋಕಜೀವನದಲ್ಲಿ ಯಾವುದು ಸರಿ/ಯಾವುದು ತಪ್ಪು; ಯಾವುದು ನೀತಿ/ಯಾವುದು ಅನೀತಿ; ಯಾವುದು ವಾಸ್ತವ/ಯಾವುದು ಕಲ್ಪಿತ" ಎಂಬುದನ್ನು ಒರೆಹಚ್ಚಿ ನೋಡಿ, ತನ್ನನ್ನು ಒಳಗೊಂಡಂತೆ ಲೋಕದ ಜನಸಮುದಾಯಕ್ಕೆ ಒಳಿತನ್ನು ಮಾಡುವ ಮಾತಿನ ಮತ್ತು ದುಡಿಮೆಯ ಸ್ವರೂಪವನ್ನು ತಿಳಿಯುವುದು:

'ಎಚ್ಚರ' ಎಂದರೆ ಜಾತಿ, ಮತ, ದೇವರ ಹೆಸರಿನಲ್ಲಿ ನಡೆಯುತ್ತಿರುವ ಆಚರಣೆಗಳಿಂದ ಮಾನವರ ಬದುಕಿನಲ್ಲಿ ಉಂಟಾಗುತ್ತಿರುವ ಪರಿಣಾಮಗಳನ್ನು ಸರಿಯಾಗಿ ಗಮನಿಸಿ, ಯಾವ ಬಗೆಯ ಆಚರಣೆಗಳು ಮಾನವ ಸಮುದಾಯದ ಸಂಕಟಗಳಿಗೆ ಕಾರಣವಾಗಿವೆ ಎಂಬುದನ್ನು ಅರಿತುಕೊಂಡು, ಅಂತಹ ಆಚರಣೆಗಳಿಂದ ದೂರವಿರುವುದು.

ಮಡಿಲು+ಅಲ್ಲಿ; ಮಡಿಲು=ಸೊಂಟ/ನಡು; ಲಿಂಗ=ದೇವರಾದ ಶಿವನ ಸಂಕೇತವಾದ ವಸ್ತು; ಕಟ್ಟಿದಡೆ+ಏನೊ; ಕಟ್ಟು=ತೊಡು; ಕಟ್ಟಿದಡೆ= ತೊಟ್ಟುಕೊಂಡರೆ; ಏನೊ=ಏನಾಗುವುದು;

ಮಡಿಲಲ್ಲಿ ಲಿಂಗವನ್ನು ಕಟ್ಟಿಕೊಳ್ಳುವುದು=ವ್ಯಕ್ತಿಯು ತಾನೊಬ್ಬ ಶಿವಶರಣ ನೆಂದು ಸಮಾಜಕ್ಕೆ ತಿಳಿಸುವುದಕ್ಕಾಗಿ ಶಿವನ ಸಂಕೇತವಾದ ಲಿಂಗವನ್ನು ಸೊಂಟದಲ್ಲಿ ಇಲ್ಲವೇ ಕೊರಳಿನಲ್ಲಿ ಕಟ್ಟಿಕೊಳ್ಳುವುದು;

ಲೋಕ=ಜಗತ್ತು/ಪ್ರಪಂಚ; ಅಜ್ಞಾನ=ತಿಳುವಳಿಕೆಯಿಲ್ಲದಿರುವುದು; ಅಜ್ಞಾನಿತನ= ತಿಳುವಳಿಕೆಯಿಲ್ಲದ ನಡೆನುಡಿ; ಲೋಕದ ಅಜ್ಞಾನಿತನ=ವ್ಯಕ್ತಿಯು ದಿನನಿತ್ಯದ ಜೀವನದಲ್ಲಿ ಕೆಟ್ಟ ನಡೆನುಡಿಯಿಂದ ಬಾಳುತ್ತಿರುವುದು; ಬಿಡು=ತೊರೆ/ತ್ಯಜಿಸು;

ಮಡಿಲಲ್ಲಿ ಲಿಂಗವ ಕಟ್ಟಿದಡೇನೊ ಲೋಕದ ಅಜ್ಞಾನಿತನ ಬಿಡುವುದೆ=ವ್ಯಕ್ತಿಯು ಮಡಿಲಲ್ಲಿ ಲಿಂಗವನ್ನು ಕಟ್ಟಿಕೊಂಡ ಮಾತ್ರಕ್ಕೆ ಅವನಲ್ಲಿರುವ ಕೆಟ್ಟ ನಡೆನುಡಿಗಳು

ತೊಲಗುವುದಿಲ್ಲ. ಏಕೆಂದರೆ ಲಿಂಗವೆಂಬುದು ಒಂದು ಸಂಕೇತದ ವಸ್ತುವೇ ಹೊರತು ಮತ್ತೇನಲ್ಲ. ವ್ಯಕ್ತಿಯು ಲಿಂಗವನ್ನು ಒಳ್ಳೆಯ ನಡೆನುಡಿಗಳಿಗೆ ಒಂದು ಪ್ರೇರಣೆಯನ್ನಾಗಿ ಪಡೆದು, ಸದಾಕಾಲ ಅರಿವು ಮತ್ತು ಎಚ್ಚರದಿಂದ ಬಾಳಲು ತೊಡಗಿದಾಗ ಮಾತ್ರ ಅವನ ಮಯ್ ಮನದಲ್ಲಿರುವ ಕೆಟ್ಟತನ ಇಲ್ಲವಾಗುತ್ತದೆ;

ನುಡಿ=ಮಾತು; ಸತ್ಯ=ದಿಟ/ನಿಜ; ಸದಾಚಾರಿ=ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿ; ಎಡೆ+ಎಡೆಗೆ+ಒಬ್ಬರು; ಎಡೆ=ಜಾಗ/ನೆಲೆ; ಎಡೆಯೆಡೆಗೆ=ಅಲ್ಲಲ್ಲಿ/ಕೆಲವು ಕಡೆಗಳಲ್ಲಿ ಮಾತ್ರ; ಕಾಣ್=ನೋಡು; ಕಾಣಾ=ತಿಳಿದು ನೋಡು; ರಾಮನಾಥ= ದೇವರಾದ ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ನಡೆ ನುಡಿ ಸತ್ಯಸದಾಚಾರಿಗಳು ಎಡೆಯೆಡೆಗೊಬ್ಬರು ಕಾಣಾ=ದೇವರನ್ನು ಬಹಿರಂಗದಲ್ಲಿ ಬಹುಬಗೆಗಳಲ್ಲಿ ಪೂಜಿಸುವ ವ್ಯಕ್ತಿಗಳು ಹೆಚ್ಚಾಗಿ ಕಾಣಿಸುತ್ತಾರೆಯೇ ಹೊರತು ಒಳ್ಳೆಯ ನಡೆನುಡಿಯುಳ್ಳವರ ಸಂಕೆಯು ಯಾವಾಗಲೂ ಕಡಿಮೆಯಿರುತ್ತದೆ. ಏಕೆಂದರೆ ಜನಸಮುದಾಯದಲ್ಲಿ ಹೆಚ್ಚಿನವರ ಪಾಲಿಗೆ ದೇವರು "ತಮ್ಮ ಜೀವನದಲ್ಲಿನ ಸಂಕಟಗಳನ್ನು ಪರಿಹರಿಸಿ, ಸಂಪತ್ತನ್ನು ಕೊಡುವವನಾಗಿದ್ದಾನೆಯೇ ಹೊರತು, ತಮ್ಮ ನಡೆನುಡಿಯಲ್ಲಿನ ಕೆಟ್ಟತನವನ್ನು ಹೋಗಲಾಡಿಸಿಕೊಳ್ಳಲು ನೆರವಾಗುವ ವ್ಯಕ್ತಿಯಾಗಿಲ್ಲ" ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ;

❖

105. ಭಕ್ತಿಯ ಬಲ್ಲವರಿಗೆ
ಸತ್ಯ ಸದಾಚಾರವ ಹೇಳಿದಡೆ
ನಂಬುವರು ನಚ್ಚುವರು ಮಚ್ಚುವರು
ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ
ಸತ್ಯ ಸದಾಚಾರವ ಹೇಳಿದಡೆ
ಕಚ್ಚುವರು ಬಗುಳುವರು
ಕಾಣಾ ರಾಮನಾಥ.

ಒಳ್ಳೆಯ ವ್ಯಕ್ತಿಗಳಿಗೆ ವಿವೇಕದ ನುಡಿಗಳನ್ನು ಹೇಳಬಹುದೇ ಹೊರತು, ಕೆಟ್ಟ ವ್ಯಕ್ತಿಗಳಿಗೆ ಹೇಳುವುದಕ್ಕೆ ಆಗುವುದಿಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಒಳ್ಳೆಯ ವ್ಯಕ್ತಿ=ತಾನು ಆಡುವ ಮಾತಿನಿಂದ, ಮಾಡುವ ಕೆಲಸದಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಒಲವು, ನಲಿವು ಮತ್ತು ನೆಮ್ಮದಿಯನ್ನು ಪಡೆಯುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವ ನಡೆನುಡಿಯುಳ್ಳವನು;

ಕೆಟ್ಟ ವ್ಯಕ್ತಿ=ತಾನು ಆಡುವ ಮಾತಿನಿಂದ ಮತ್ತು ಮಾಡುವ ಕೆಲಸದಿಂದ ತನ್ನನ್ನು ಒಳಗೊಂಡಂತೆ ಎಲ್ಲರಿಗೂ ಕೇಡು/ಹಾನಿ/ದುರಂತವನ್ನು ಉಂಟು ಮಾಡುವ ನಡೆನುಡಿಯುಳ್ಳವನು;

ಭಕ್ತಿ=ದೇವರನ್ನು ಪೂಜಿಸಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ಬಲ್ಲವರಿಗೆ=ತಿಳಿದವರಿಗೆ/ಅರಿತವರಿಗೆ; ಸತ್ಯ=ನಿಜ/ದಿಟ/ವಾಸ್ತವ; ಸದಾಚಾರ=ಒಳ್ಳೆಯ ನಡೆನುಡಿ; ಹೇಳಿದಡೆ=ಹೇಳಿದರೆ; ನಂಬು=ಒಪ್ಪು/ಸಮ್ಮತಿಸು; ನಚ್ಚು=ನಂಬು; ಮಚ್ಚು=ಮೆಚ್ಚು/ಹೊಗಳು/ಕೊಂಡಾಡು;

ಭಕ್ತಿಯ ಬಲ್ಲವರಿಗೆ ಸತ್ಯ ಸದಾಚಾರವ ಹೇಳಿದಡೆ ನಂಬುವರು ನಚ್ಚುವರು ಮಚ್ಚುವರು=ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುವುದೇ ದೇವರಿಗೆ ಮಾಡುವ ಪೂಜೆಯೆಂದು ಅರಿತವರಿಗೆ ವಾಸ್ತವದ ಸಂಗತಿಗಳನ್ನು ಹೇಳಿದರೆ ಒಪ್ಪುತ್ತಾರೆ, ಹೊಗಳುತ್ತಾರೆ, ಅದರಂತೆ ನಡೆಯಲು ಬಯಸುತ್ತಾರೆ,;

ಹೊಲಬು+ಅನ್+ಅರಿಯದ; ಹೊಲಬು=ದಾರಿ/ಹಾದಿ;

ಭಕ್ತಿಯ ಹೊಲಬು=ದೇವರನ್ನು ಪೂಜಿಸಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿಯ ರೀತಿ ನೀತಿ; ಅರಿ=ತಿಳಿ; ಅರಿಯದ=ತಿಳಿಯದ; ವ್ಯರ್ಥ=ಪ್ರಯೋಜನವಿಲ್ಲದ; ವ್ಯರ್ಥರು=ಒಳ್ಳೆಯದನ್ನು ಕಡೆಗಣಿಸುವವರು;

ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ ಸತ್ಯ ಸದಾಚಾರವ ಹೇಳಿದಡೆ=ಒಳ್ಳೆಯ ನಡೆನುಡಿಯ ರೀತಿ ನೀತಿಯನ್ನು ಅರಿಯದ ಮತ್ತು ಕಡೆಗಣಿಸುವ ವ್ಯಕ್ತಿಗಳಿಗೆ ಸತ್ಯದ ಸಂಗತಿಗಳನ್ನು ಹೇಳಿದರೆ;

ಕಚ್ಚು=ಹಲ್ಲಿನಿಂದ ಕಡಿ; ಬಗುಳು=ನಾಯಿಯಂತೆ ಕೂಗು/ಬಾಯಿಗೆ ಬಂದಂತೆ ಮಾತನಾಡು/ಕೆಟ್ಟ ಮಾತನ್ನಾಡು; ಕಾಣ್=ನೋಡು; ಕಾಣಾ=ತಿಳಿದು ನೋಡು; ರಾಮನಾಥ=ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ಕಚ್ಚುವರು ಬಗುಳುವರು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಗಳಿಗೆ ಸತ್ಯದ ಮತ್ತು ಒಳ್ಳೆಯ ನಡೆನುಡಿಗಳ ರೀತಿ ನೀತಿಯನ್ನು ಹೇಳಲು ತೊಡಗಿದರೆ, ಅವರು ಅದನ್ನು ನಿರಾಕರಿಸುವುದಲ್ಲದೆ, ಹೇಳಿದವರನ್ನೇ ಬಯ್ಯುತ್ತಾರೆ ಮತ್ತು ಹೇಳಿದವರ ಮಯ್ ಮೇಲೆ ಹಲ್ಲೆ ಮಾಡಿ, ಗಾಸಿಗೊಳಿಸುತ್ತಾರೆ;)

❖

106. ಮಂಡೆಯ ಬೋಳಿಸಿಕೊಂಡು
ಮಡಿದು ಗೋಸಿಯ ಕಟ್ಟಿದಡೇನು
ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ.

ದುಡಿಮೆಯನ್ನು ಮಾಡದೆ, ಇತರರ ಮುಂದೆ ಕಯ್ ಒಡ್ಡಿ ಬೇಡಿ ಪಡೆದು, ಜೀವನವನ್ನು ನಡೆಸುವ ವ್ಯಕ್ತಿಗಳನ್ನು ಈ ವಚನದಲ್ಲಿ ಟೀಕಿಸಲಾಗಿದೆ.

ಮಂಡೆ=ತಲೆ; ಬೋಳಿಸು=ಕೂದಲನ್ನು ತೆಗೆಸು; ಮಡಿ=ಮಡಿಕೆಗಳನ್ನಾಗಿ ಜೋಡಿಸಿ; ಮಡಿದು=ತುಂಡು ಬಟ್ಟೆಯೊಂದನ್ನು ಮಡಿಕೆಗಳನ್ನಾಗಿ ಮಾಡಿ ಜೋಡಿಸಿ ಕೊಂಡು; ಗೋಸಿ=ಲಂಗೋಟಿ/ಕಚ್ಚೆಪಡೆ; ಕಟ್ಟಿದಡೆ+ಏನು; ಕಟ್ಟು=ತೊಡು;

ಮಂಡೆಯ ಬೋಳಿಸಿಕೊಂಡು ಮಡಿದು ಗೋಸಿಯ ಕಟ್ಟಿದಡೇನು=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ತಲೆಯ ಕೂದಲನ್ನು ಬೋಳಿಸಿಕೊಂಡು, ಮಯ್ ಮೇಲೆ ಉಟ್ಟಿರುವ ಬಟ್ಟೆಯೆಲ್ಲವನ್ನೂ ಕಳಚಿ, ಲಂಗೋಟಿಯನ್ನು ಕಟ್ಟಿಕೊಂಡ ಮಾತ್ರಕ್ಕೆ ವ್ಯಕ್ತಿಯ ನಡೆನುಡಿಯಲ್ಲಿ ಯಾವುದೇ ಬದಲಾವಣೆಯು ಉಂಟಾಗುವುದಿಲ್ಲ. ಏಕೆಂದರೆ ಇಂತಹ ಲಂಗೋಟಿ ಉಡುಗೆಯು ವ್ಯಕ್ತಿಯು ತನ್ನನ್ನು ತಾನು "ಸರ್ವಸಂಗ ಪರಿತ್ಯಾಗಿ ಯಾವುದೇ ಕಾಮನೆಗಳಿಲ್ಲದವನು" ಎಂಬುದನ್ನು ಸಮಾಜದಲ್ಲಿ ತೋರಿಸಿಕೊಳ್ಳುವುದಕ್ಕಾಗಿ ಬಹಿರಂಗದಲ್ಲಿ ಮಾಡಿಕೊಂಡಿರುವ ಬದಲಾವಣೆಯೇ ಹೊರತು, ಅವನ ಅಂತರಂಗದಲ್ಲಿ ಯಾವುದೇ ಬದಲಾವಣೆಯಾಗಿಲ್ಲ;

ಕಂಡಕಂಡವರು=ಇತರರು/ಸಮಾಜದಲ್ಲಿನ ಜನರು; ಕಯ್+ಒಡ್ಡಿ; ಒಡ್ಡು=ಮುಂದೆ ಇಡು/ಎದುರಿಗೆ ಹಿಡಿ; ಕಯ್ಯೊಡ್ಡಿ=ಕಯ್ ಅನ್ನು ಚಾಚಿ; ಬೇಡು= ಯಾಚಿಸು/ಕೇಳು; ಭಂಡರನ್+ಒಲ್ಲನ್+ಎಮ್ಮ; ಭಂಡ=ನಾಚಿಕೆಯಿಲ್ಲದವನು/ ಲಜ್ಜೆಗೇಡಿ; ಒಲಿ=ಒಪ್ಪು/ಮೆಚ್ಚು; ಒಲ್ಲನ್=ಅವನು ಒಪ್ಪಿಕೊಳ್ಳುವುದಿಲ್ಲ/ಅವನು ಮೆಚ್ಚಿಕೊಳ್ಳುವುದಿಲ್ಲ; ಎಮ್ಮ=ನಮ್ಮ; ರಾಮನಾಥ=ದೇವರಾದ ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ ಭಂಡರನೊಲ್ಲನೆಮ್ಮ ರಾಮನಾಥ= ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ವ್ಯಕ್ತಿಯು ತನ್ನ ಮಯ್ ಮನವನ್ನು ಒಗ್ಗೂಡಿಸಿ ಕಾಯಕವನ್ನು ಮಾಡಿ, ತನ್ನ ಅನ್ನವನ್ನು ತಾನು ಗಳಿಸಿ,

ಸ್ವಾವಲಂಬಿಯಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳದೆ, ಇತರರ ಮುಂದೆ ಅಂಗಲಾಚಿ ಬೇಡುವುದು ನಾಚಿಕೆಗೇಡಿನ ಬದುಕಾಗುತ್ತದೆ. ದುಡಿದು ತಿನ್ನದ ಮಯ್ಗಳ್ಳರನ್ನು ದೇವರು ಮೆಚ್ಚುವುದಿಲ್ಲ.

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ವ್ಯಕ್ತಿಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಕೂಡಿದ ಕಾಯಕದ ಬದುಕಿಗೆ ಮಹತ್ವವನ್ನು ನೀಡಿದ್ದರು. ಅವರ ಪಾಲಿಗೆ 'ಕಾಯಕ' ಎನ್ನುವುದು ಯಾವುದೋ ಒಂದು ಕಸುಬು/ಕೆಲಸ/ದುಡಿಮೆ ಮಾತ್ರ ಆಗಿರಲಿಲ್ಲ. ವ್ಯಕ್ತಿಯು ಮಾಡುವ ದುಡಿಮೆಯು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತಂದುಕೊಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ರೀತಿಯಲ್ಲಿರಬೇಕು. ವ್ಯಕ್ತಿಯು ತನ್ನ ಬದುಕನ್ನು ಕಾಯಕದ ಮೂಲಕ ಕಟ್ಟಿಕೊಳ್ಳಬೇಕೆ ಹೊರತು, ಮತ್ತೊಬ್ಬರನ್ನು ಆಶ್ರಯಿಸಿ ಬಾಳಬಾರದು ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

❖

107. ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ
ಕಾಣಾ ರಾಮನಾಥ.

"ಹೆಣ್ಣು-ಗಂಡು ಜೀವಿಗಳಲ್ಲಿ ಯಾವುದೇ ಒಂದು ಮೇಲು ಅಲ್ಲ; ಕೀಳು ಅಲ್ಲ. ಮಾನವ ಸಮುದಾಯ ಒಲವು ನಲಿವು ನೆಮ್ಮದಿಯಿಂದ ಬೆಳೆದು ಉಳಿದು ಬಾಳಬೇಕಾದರೇ ಎರಡು ಜೀವಿಗಳು ಒಂದಕ್ಕೆ ಮತ್ತೊಂದು ಪೂರಕ" ಎಂಬ ಲಿಂಗ ಸಮಾನತೆಯ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಸುಳಿವ=ನೆಲೆಗೊಂಡಿರುವ; ಆತ್ಮ=ಜೀವ/ಪ್ರಾಣ/ಉಸಿರು; ಕಾಣ್=ನೋಡು/ತಿಳಿ; ಕಾಣಾ=ತಿಳಿದುನೋಡು; ರಾಮನಾಥ=ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನ ವಚನಗಳ ಅಂಕಿತನಾಮ;

ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ=ದೇಹದ ಚಹರೆಗಳಲ್ಲಿ ಹೆಣ್ಣು-ಗಂಡು ಬೇರೆ ಬೇರೆಯಾಗಿ ಕಂಡು ಬಂದರೂ, ಇಬ್ಬರಲ್ಲಿಯೂ ನೆಲೆಸಿರುವ "ಜೀವ" ಎಂಬುದು ಒಂದೇ ಆಗಿದೆ. ಅಂದರೆ ವಾಸ್ತವವನ್ನು ಒರೆಹಚ್ಚಿ ನೋಡಿದಾಗ ನಿಸರ್ಗದ ನೆಲೆಯಲ್ಲಿ ಹೆಣ್ಣು-ಗಂಡು ಸಮಾನ ಜೀವಿಗಳಾಗಿದ್ದಾರೆ ಎಂಬುದು ತಿಳಿದುಬರುತ್ತದೆ;

ನಿಸರ್ಗದ ನೆಲೆಯಲ್ಲಿ ಹೆಣ್ಣು-ಗಂಡು "ಅದು ಒಂದು ಜೀವಿ... ಇದು ಒಂದು ಜೀವಿ" ಎಂಬ ಸಮಾನತೆಯನ್ನು ಹೊಂದಿದ್ದರೂ, ಸಾಮಾಜಿಕ ನೆಲೆಯಲ್ಲಿ ಗಂಡು ಮೊದಲ ಮನ್ನಣೆಗೆ ಪಾತ್ರನಾದರೆ, ಹೆಣ್ಣು ಎರಡನೆಯ ನೆಲೆಯನ್ನು ಹೊಂದಿದ್ದಾಳೆ. ಜಗತ್ತಿನಲ್ಲಿರುವ ಎಲ್ಲಾ ಸಮಾಜಗಳಲ್ಲಿಯೂ "ಗಂಡು ಮೇಲು; ಹೆಣ್ಣು ಕೀಳು" ಎಂಬ ತಾರತಮ್ಯದ ನಿಲುವು ಜನಮನದಲ್ಲಿದೆ. ಇಂತಹ ನಿಲುವಿಗೆ ಕಾರಣ ಏನೆಂಬುದನ್ನು ತಿಳಿಯಬೇಕಾದರೆ ಮಾನವ ಸಮಾಜ ರೂಪುಗೊಂಡ ಸಾಮಾಜಿಕ ಇತಿಹಾಸವನ್ನು ನೋಡಬೇಕು.

ಶಿಲಾಯುಗದಲ್ಲಿ ಇತರ ಪ್ರಾಣಿಗಳಂತೆಯೇ ಅಲೆಮಾರಿಯಾಗಿದ್ದ ಮಾನವ ಗುಂಪುಗಳು ಕಾಲಕ್ರಮೇಣ ಒಂದೆಡೆ ನಿಂತು ಬೇಸಾಯವನ್ನು ಮಾಡತೊಡಗಿದಾಗ ಕುಟುಂಬಗಳು ರಚನೆಗೊಂಡವು. ಈ ಕುಟುಂಬಗಳಲ್ಲಿ

ತಾಯಿಯೇ ಮೇಟಿಯಾಗಿದ್ದಳು. ಹುಟ್ಟುವ ಮಕ್ಕಳು ಮತ್ತು ಉಳುಮೆ ಮಾಡುವ ಭೂಮಿಯು ಸಮುದಾಯದ ಒಟ್ಟು ಆಸ್ತಿಯಾಗಿತ್ತು. ತಾಯಿಯ ಹೆಸರಿನ ಕುಲಕ್ಕೆ ಮಕ್ಕಳು ಸೇರಿದವರಾಗಿದ್ದು, ಆ ಕುಲದ ಹೆಸರನ್ನು ಮಕ್ಕಳು ಪಡೆಯುತ್ತಿದ್ದರು. ಮಕ್ಕಳು ಹುಟ್ಟುವಲ್ಲಿ ತಂದೆಯು ಯಾರು ಎಂಬುದು ದೊಡ್ಡ ಸಂಗತಿಯಾಗಿರಲಿಲ್ಲ. ಹೆಣ್ಣು-ಗಂಡಿನ ಕಾಮದ ನಂಟಿಗೆ ಯಾವುದೇ ಬಗೆಯ ಕಟ್ಟುಪಾಡುಗಳು ಇರಲಿಲ್ಲ.

ಅನಂತರದ ಸಾವಿರಾರು ವರುಶಗಳ ಜನಜೀವನದಲ್ಲಿ ಅನೇಕ ಪಲ್ಲಟಗಳು ಉಂಟಾಗಿ, ಉಳುವ ಭೂಮಿಯ ಒಡೆತನವು ಒಟ್ಟು ಸಮುದಾಯದಿಂದ ಕಯ್ ತಪ್ಪಿಹೋಗಿ, ಗಂಡಸರ ಹಿಡಿತಕ್ಕೆ ಸಿಲುಕಿದಾಗ, ಆಸ್ತಿಯ ಮೇಲೆ ಗಂಡಿನ ಒಡೆತನ ಉಂಟಾಯಿತು. ಗಂಡು ತನ್ನ ಬೀಜದಿಂದ ಹುಟ್ಟುವ ಮಕ್ಕಳಿಗೆ ಆಸ್ತಿಯ ಒಡೆತನದ ಹಕ್ಕು ದೊರೆಯಬೇಕೆಂಬ ಉದ್ದೇಶಕ್ಕೆ ಒಳಗಾಗಿ, ಹೆಣ್ಣಿಗೆ ಶೀಲದ ಚೌಕಟ್ಟನ್ನು ಹಾಕಿ, ಹೆಣ್ಣನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಹೆಣ್ಣಿನ ಕಾಮದ ನಂಟಿಗೆ ಬಹು ಬಗೆಯ ಕಟ್ಟುಪಾಡುಗಳನ್ನು ಹಾಕಿ, ಹೆಣ್ಣಿನ ಚಲನವಲನಗಳನ್ನು ನಿಯಂತ್ರಿಸಿ, ಹೆಣ್ಣಿಗೆ ಯಾವುದೇ ಬಗೆಯ "ಮಾತಿನ ಸ್ವಾತಂತ್ರ್ಯ-ಚಲನ ಸ್ವಾತಂತ್ರ್ಯ-ಇಚ್ಚಾ ಸ್ವಾತಂತ್ರ್ಯ" ಇಲ್ಲದಂತೆ ಮಾಡಿ, ಹೆಣ್ಣನ್ನು ತನ್ನ ಅಡಿಯಾಳನ್ನಾಗಿ ಮಾಡಿಕೊಂಡ. ಈ ರೀತಿ ಆಸ್ತಿ ಹಾಗೂ ಹೆಣ್ಣಿನ ಮೇಲಿನ ವ್ಯಕ್ತಿಗತ ಒಡೆತನ ಮತ್ತು ಗಂಡು ಮೇಲುಗಯ್ ಆಗಿರುವ ಕುಟುಂಬದ ರಚನೆಯ ಕಾರಣದಿಂದಾಗಿ, ಸಾಮಾಜಿಕ ನೆಲೆಯಲ್ಲಿ ಗಂಡು-ಹೆಣ್ಣಿನಲ್ಲಿ ಲಿಂಗ ತಾರತಮ್ಯ ಉಂಟಾಯಿತು.

❖

108. ಸತಿಯರ ಸಂಗವನು
ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ
ಹೆರರ ಕೈಯಿಂದ ಮಾಡಿಸುವರೆ
ರಾಮನಾಥ.

ವ್ಯಕ್ತಿಯು ದೇವರ ಪೂಜೆಯನ್ನು ತಾನು ಮಾಡಬೇಕೆ ಹೊರತು, ಪೂಜಾರಿಯಿಂದ ಮಾಡಿಸಬಾರದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಪೂಜಾರಿ=ದೇಗುಲದ ಗರ್ಭಗುಡಿಯಲ್ಲಿ ನೆಲೆಗೊಂಡಿರುವ ವಿಗ್ರಹ ರೂಪಿಯಾದ ದೇವರನ್ನು ಬಹುಬಗೆಯಲ್ಲಿ ಸಿಂಗರಿಸಿ, ದೂಪ ದೀಪಗಳನ್ನು ಬೆಳಗಿ, ಮಂಗಳಾರತಿಯನ್ನು ಎತ್ತಿ, ಅನಂತರ ಗರ್ಭಗುಡಿಯ ಹೊಸ್ತಿಲಿನಿಂದಾಚೆ ನಿಂತಿರುವ ವ್ಯಕ್ತಿಗಳ ಮುಂದೆ ಮಂಗಳಾರತಿಯ ತಟ್ಟೆಯನ್ನು ಒಡ್ಡುವ ಮತ್ತು ತೀರ್ಥ ಹೂವು ಹಣ್ಣು ಉಣಿಸು ತಿನಸುಗಳನ್ನು ದೇವರ ಪ್ರಸಾದವೆಂದು ಜನರಿಗೆ ನೀಡುವವನು;

ಸತಿ=ಹೆಂಡತಿ; ಸಂಗ=ಒಡನಾಟ/ಕೂಟ/ಕಾಮದ ನಂಟು;

ಸತಿಯರ ಸಂಗವನು=ವ್ಯಕ್ತಿಯು ತನ್ನ ಹೆಂಡತಿಯ ದೇಹದೊಡನೆ ಪಡೆಯುವ ಕಾಮದ ನಂಟನ್ನು;

ಅತಿಶಯ=ಹೆಚ್ಚಳ/ತುಂಬಾ ಅಗತ್ಯವಾದ; ಗ್ರಾಸ=ಅನ್ನ/ಆಹಾರ/ಊಟ;

ಅತಿಶಯ ಗ್ರಾಸವನು=ವ್ಯಕ್ತಿಯು ತನ್ನ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳುವಾಗ ತುಂಬಾ ಅಗತ್ಯವಾಗಿ ಅನ್ನ ಉಣ್ಣುವುದನ್ನು/ಊಟ ಮಾಡುವುದನ್ನು;

ಪೃಥ್ವಿಗೆ+ಈಶ್ವರನ; ಪೃಥ್ವಿ=ಭೂಮಿ; ಈಶ್ವರ=ಒಡೆಯ; ಪೃಥ್ವಿಗೀಶ್ವರ=ಶಿವ; ಪೂಜೆ=ದೇವರ ವಿಗ್ರಹವನ್ನು ಹೂವು ಹಣ್ಣು ಉಡುಗೆ ತೊಡುಗೆಗಳಿಂದ ಸಿಂಗರಿಸಿ ದೂಪ ದೀಪಗಳಿಂದ ಆರತಿಯನ್ನು ಬೆಳಗುವುದು/ದೇವರನ್ನು ಒಲಿಸಿಕೊಳ್ಳಲು ಮಾಡುವ ಬಹುಬಗೆಯ ಆಚರಣೆಗಳು;

ಪೃಥ್ವಿಗೀಶ್ವರನ ಪೂಜೆಯನು=ವ್ಯಕ್ತಿಯು ಭೂಮಿಗೆ ಒಡೆಯನಾದ ಶಿವನ ಪೂಜೆ ಮಾಡುವುದನ್ನು;

ಅರಿವು+ಉಳ್ಳಡೆ; ಅರಿವು="ಜೀವನದಲ್ಲಿ ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ವಾಸ್ತವ–ಯಾವುದು ಕಲ್ಪಿತ; ಯಾವುದನ್ನು ಮಾಡಬೇಕು–ಯಾವುದನ್ನು ಮಾಡಬಾರದು" ಎಂಬ ಎಚ್ಚರ ಮತ್ತು ತನಗೆ, ತನ್ನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ಬಯಸುವಂತೆಯೇ ಸಹಮಾನವರ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ತಿಳುವಳಿಕೆ;

ಉಳ್ಳಡೆ=ಇದ್ದರೆ; ಅರಿವುಳ್ಳಡೆ=ವ್ಯಕ್ತಿಯು ಅರಿವನ್ನು ಹೊಂದಿದ್ದರೆ; ಹೆರರ=ಇತರರ/ಬೇರೆಯವರ/ಅನ್ಯರ; ರಾಮನಾಥ=ಶಿವನ ಮತ್ತೊಂದು ಹೆಸರು/ಜೇಡರ ದಾಸಿಮಯ್ಯನವರ ವಚನಗಳ ಅಂಕಿತನಾಮ;

ಹೆರರ ಕೈಯಿಂದ ಮಾಡಿಸುವರೆ=ಬೇರೆಯವರಿಂದ ಮಾಡಿಸುತ್ತಾರೆಯೆ; ಈ ನುಡಿಗಳು ವ್ಯಕ್ತಿ ಮತ್ತು ದೇವರ ನಡುವೆ ಪೂಜಾರಿಯು ಇರುವುದನ್ನು ಬಹಳ ಕಟುವಾಗಿ ಟೀಕಿಸುತ್ತಿವೆ.

ವ್ಯಕ್ತಿಯು ತನ್ನ ಹೊಟ್ಟೆ ಹಸಿದಾಗ ತಾನು ಮಾಡಬೇಕಾದ ಊಟವನ್ನು ಮತ್ತು ತನ್ನ ದೇಹದಲ್ಲಿ ಉಂಟಾಗುವ ಕಾಮದ ಬಯಕೆಯನ್ನು ಈಡೇರಿಸಿಕೊಳ್ಳಲು ತನ್ನ ಹೆಂಡತಿಯೊಡನೆ ಕೂಡುವುದನ್ನು ತಾನಾಗಿ ಮಾಡದೆ, ಈ ಎರಡು ಬಗೆಯ ಕ್ರಿಯೆಗಳನ್ನು ಬೇರೆಯವರಿಂದ ಮಾಡಿಸುತ್ತಾರೆಯೆ... ಹಾಗೆ ಮಾಡಿಸುವುದರಿಂದ ವ್ಯಕ್ತಿಯ ಹಸಿವು ಮತ್ತು ಕಾಮ ಹಿಂಗುವುದೆ...

ಈ ಬಗೆಯ ಪ್ರಶ್ನೆಯನ್ನು ಕೇಳುವುದರ ಮೂಲಕ "ಹೊಟ್ಟೆಯ ಹಸಿವು ಮತ್ತು ದೇಹದ ಕಾಮ" ಎಂಬುವು ಹೇಗೆ ವ್ಯಕ್ತಿಯ ಮಯ್ ಮನಕ್ಕೆ ಸೇರಿದ ಸಂಗತಿಗಳೋ ಅಂತೆಯೇ ಶಿವಪೂಜೆಯೂ ವ್ಯಕ್ತಿಗತವಾದುದು. ಆದ್ದರಿಂದ ದೇವರು ಮತ್ತು ವ್ಯಕ್ತಿಯ ನಡುವೆ ಪೂಜಾರಿ ಇರುವುದು ತಿಳಿಗೇಡಿತನದ ಸಂಗತಿ ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣ ಶರಣೆಯರ ಪಾಲಿಗೆ 'ದೇವರು' ಎಂದರೆ "ವ್ಯಕ್ತಿಗೆ ಜೀವನದಲ್ಲಿ ನೋವನ್ನು ಪರಿಹರಿಸಿ, ನಲಿವನ್ನು ಅನುಗ್ರಹಿಸುವ ವ್ಯಕ್ತಿ/ಶಕ್ತಿಯಾಗಿರಲಿಲ್ಲ". ವಚನಕಾರರ ಪಾಲಿಗೆ 'ದೇವರು' ಎಂದರೆ "ಜೀವನದ ಉದ್ದಕ್ಕೂ ವ್ಯಕ್ತಿಯ ಮಯ್ ಮನದಲ್ಲಿ ಮೂಡುವ ಕೆಟ್ಟ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯ ನಡೆನುಡಿಯಿಂದ ಬಾಳಲು ಪ್ರೇರಣೆಯನ್ನು ನೀಡುವ ಅರಿವಿನ ಸಂಕೇತವಾಗಿತ್ತು."

ಆದ್ದರಿಂದಲೇ ವಚನಕಾರರು ದೇಗುಲದಲ್ಲಿ ನೆಲೆಗೊಂಡಿರುವ ವಿಗ್ರಹರೂಪಿಯಾದ ಶಿವನನ್ನು ನಿರಾಕರಿಸುವುದರ ಜತೆಗೆ ಶಿವನಿಗೂ ಮತ್ತು ವ್ಯಕ್ತಿಗೂ ನಡುವೆ ಬರುವ ಪೂಜಾರಿಯನ್ನು ನಿರಾಕರಿಸಿ, ತಮ್ಮ ಅಂಗಯ್ ಮೇಲೆ ಚಿಕ್ಕದಾದ ಶಿವಲಿಂಗವನ್ನು ಇಟ್ಟುಕೊಂಡು ತಾವೇ ನೇರವಾಗಿ ಪೂಜಿಸುತ್ತಿದ್ದರು.

ದೇವರು ಮತ್ತು ವ್ಯಕ್ತಿಗಳ ನಡುವೆ ಪೂಜಾರಿಯ ಇರುವಿಕೆಯನ್ನು ವಚನಕಾರರು ನಿರಾಕರಿಸಲು ಮತ್ತೊಂದು ಕಾರಣವೆಂದರೆ...

ಪೂಜಾರಿಯನ್ನು ಹೊರತುಪಡಿಸಿ ಇನ್ನುಳಿದ ವ್ಯಕ್ತಿಗಳು ಗರ್ಭಗುಡಿಯ ಒಳಕ್ಕೆ ಹೋಗಲು ಅನುಮತಿಯಿಲ್ಲ. ದೇವರ ಮುಂದೆಯೇ ಪೂಜಾರಿಯು ಇನ್ನಿತರ ವ್ಯಕ್ತಿಗಳಿಗಿಂತ ಮೇಲುಸ್ತರದಲ್ಲಿರುತ್ತಾನೆ. ದೇಗುಲದಲ್ಲಿ ವ್ಯಕ್ತಿಗಳ ನಡುವೆ ಈ ಬಗೆಯ ಮೇಲುಕೀಳಿನ ತಾರತಮ್ಯವಿರುತ್ತದೆ. 'ತಾನು ದೇವರ ಪ್ರತಿನಿಧಿ' ಎಂಬಂತೆ ಪೂಜಾರಿಯ ನಡೆನುಡಿಗಳಿರುತ್ತವೆ. ಆದ್ದರಿಂದಲೇ ಪೂಜಾರಿಯು ಆಡುವ ಮಾತುಗಳನ್ನು ವೇದವಾಕ್ಯವೆಂದು ನಂಬಿ, ಅವನು ಹೇಳುವ ಎಲ್ಲ ಬಗೆಯ ಆಚರಣೆಗಳನ್ನು ವ್ಯಕ್ತಿಗಳು ಚಾಚು ತಪ್ಪದೆ ಮಾಡುತ್ತಾರೆ.

ಪೂಜಾರಿಯು ದೇವರನ್ನು ಪೂಜಿಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ವೆಚ್ಚಮಾಡುವಂತಹ ಅನೇಕ ಬಗೆಯ ಆಚರಣೆಗಳನ್ನು ಹೇಳುತ್ತಾನೆಯೇ ಹೊರತು, ಯಾವುದೇ ವ್ಯಕ್ತಿಗೆ "ನಿನ್ನ ಮಯ್ ಮನದಲ್ಲಿರುವ ಕೆಟ್ಟ ನಡೆನುಡಿಗಳನ್ನು ಬಿಟ್ಟು, ಒಳ್ಳೆಯ ನಡೆನುಡಿಯಿಂದ ಬಾಳಿದರೆ ನಿನ್ನನ್ನೂ ಒಳಗೊಂಡಂತೆ ಎಲ್ಲರಿಗೂ ಒಳ್ಳೆಯದಾಗುತ್ತದೆಯೆಂಬ ಸಾಮಾಜಿಕ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು ಮೂಡಿಸುವುದಿಲ್ಲ."

❖

109. ಬರು ಸಠಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ.

ಸುಳ್ಳು/ಕಪಟತನ/ವಂಚನೆಯ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಾ, ಜನಮೆಚ್ಚುಗೆಯನ್ನು ಪಡೆಯಲೆಂದು ದೇವರಲ್ಲಿ ಒಲವುಳ್ಳವನಂತೆ ಬಹುಬಗೆಯ ಪೂಜೆಗಳಲ್ಲಿ ತೊಡಗಿರುವ ವ್ಯಕ್ತಿಯನ್ನು ಒಳ್ಳೆಯ ವನೆಂದು ನಂಬಬಾರದು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

(ಬರು=ಬರಿದು/ಏನೂ ಇಲ್ಲದಿರುವುದು/ಪೊಳ್ಳು; ಶಠಗ>ಸಠಗ=ಕಪಟಿ/ ವಂಚಕ/ಮೋಸಗಾರ; ಶಠ=ಮೋಸ/ವಂಚನೆ; ಭಕ್ತಿ=ದೇವರನ್ನು ಪೂಜಿಸಲು/ ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ;

ಬರು ಸಠಗನ ಭಕ್ತಿ=ಸುಳ್ಳು/ವಂಚಕತನ/ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಯು ದೇವರ ಪೂಜೆ/ಆಚರಣೆಗಳಲ್ಲಿ ಒಲವು ಉಳ್ಳವನಂತೆ ಮಾಡುವ ನಟನೆ; ದಿಟ+ಎಂದು; ದಿಟ=ಸತ್ಯ/ನಿಜ/ವಾಸ್ತವ; ನಚ್ಚು=ನಂಬುವುದು/ಮೆಚ್ಚುವುದು/ ತಿಳಿಯುವುದು; ನಚ್ಚಲು ಬೇಡ=ತಿಳಿಯಬೇಡ/ನಂಬದಿರು/ಮೆಚ್ಚದಿರು;

ಮಠದ+ಒಳಗಣ; ಮಠ=ಜಾತಿ/ಮತ/ದೇವರ ಹೆಸರಿನಲ್ಲಿ ಜನರು ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟ; ಒಳಗಣ=ಒಳಗಡೆಯಿರುವ/ಒಳಗಿರುವ; ಬೆಕ್ಕು=ಕೊತ್ತಿ/ಮನೆಗಳಲ್ಲಿ ಹಾಗೂ ಇನ್ನಿತರ ಜನವಸತಿಯಿರುವ ಕಡೆಗಳಲ್ಲಿ ಬೆಕ್ಕನ್ನು ಸಾಕುಪ್ರಾಣಿಯಾಗಿ ಬೆಳೆಸಿ, ಮುದ್ದಿನಿಂದ ನೋಡಿಕೊಳ್ಳುತ್ತಾರೆ; ಇಲಿ=ಮನೆಗಳಲ್ಲಿ ಹಾಗೂ ಜನವಸತಿಯಿರುವ ಕಡೆಗಳಲ್ಲಿ ಬಿಲ/ಪೊಟರೆಯಲ್ಲಿ ನೆಲೆಸಿರುವ ಪ್ರಾಣಿ; ಕಂಡು=ನೋಡಿ; ಪುಟನೆಗೆದ+ಅಂತೆ+ಆಯಿತ್ತು; ಪುಟ=ಮೇಲಕ್ಕೆ ಚಿಮ್ಮು/ಹಾರು; ನೆಗೆ=ಜಿಗಿ/ಎಗರು/ಹಾರು; ಪುಟನೆಗೆ=ಇದ್ದ ಎಡೆಯಿಂದ ಒಂದೇ ಬಾರಿಗೆ ಮೇಲಕ್ಕೆ ಚಿಮ್ಮುವುದು/ಎಗರುವುದು/ಮತ್ತೊಂದರ ಮೇಲೆ ಜಿಗಿದು ಬೀಳುವುದು; ಅಂತೆ=ಹಾಗೆ/ಆ ರೀತಿಯಲ್ಲಿ; ಆಯಿತ್ತು=ನಡೆಯಿತು/ಉಂಟಾಯಿತು/ಜರುಗಿತು;

ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆಯುವುದು=ಇಲಿಯನ್ನು ಕಂಡ ಕೂಡಲೇ ಬೆಕ್ಕು ಅದರ ಮೇಲೆ ಹಾರಿ, ತನ್ನ ಪಂಜ/ಕಾಲಿನ ಉಗುರುಗಳಿಂದ ಅದನ್ನು ಹಿಡಿದುಕೊಂಡು, ಬೇಟೆಯಾಡಿ ಕೊಂದು ತಿನ್ನುತ್ತದೆ. ಬೆಕ್ಕು ತನ್ನ

ಹಸಿವನ್ನು ನೀಗಿಸಿಕೊಳ್ಳಲು ಇಲಿಯನ್ನು ಕೊಂದು ತಿನ್ನುವುದು ನಿಸರ್ಗದಲ್ಲಿ ನಡೆಯುವ ಒಂದು ಸಹಜವಾದ ಕ್ರಿಯೆ.

ಮಠದಲ್ಲಿರುವ ಗುರುಗಳು/ದೇವ ಮಾನವರು ಸರ್ವಸಂಗ ಪರಿತ್ಯಾಗಿಗಳಾಗಿ ತಮ್ಮ ಮಯ್ ಮನಗಳಲ್ಲಿ ತುಡಿಯುವ ಎಲ್ಲಾ ಬಗೆಯ ಕಾಮನೆಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಯುಳ್ಳವರಾಗಿರುತ್ತಾರೆ ಎಂಬ ನಂಬಿಕೆಯು ಜನಸಮುದಾಯದಲ್ಲಿದೆ. ಆದುದರಿಂದ ಮಠದ ಆವರಣದಲ್ಲಿರುವ ಸಕಲ ಜೀವಿಗಳು ಒಳ್ಳೆಯವೇ ಆಗಿರುತ್ತವೆ ಎಂಬುದು ಜನಮನದ ನಂಬಿಕೆ ಯಾಗಿದೆ. ಈ ನಂಬಿಕೆಯನ್ನು ಹುಸಿಯಾಗಿಸುವ ರೀತಿಯಲ್ಲಿ ಮಠದೊಳಗಣ ಬೆಕ್ಕು ಇಲಿಯನ್ನು ಕೊಂದು ತಿನ್ನುತ್ತದೆ.

ಬೆಕ್ಕು ತನ್ನ ಹುಟ್ಟುಗುಣವನ್ನು ಬಿಡದಂತೆ ಕಪಟತನದ ನಡೆನುಡಿಯುಳ್ಳ ವ್ಯಕ್ತಿಯು ದೇವರಲ್ಲಿ ಒಲವುಳ್ಳವನಂತೆ ನಟಿಸಿದರೂ, ತನ್ನ ಕೆಟ್ಟಗುಣವನ್ನು ಎಂದೆಂದಿಗೂ ಬಿಡುವುದಿಲ್ಲವೆಂಬ ವಾಸ್ತವದ ಸಂಗತಿಯನ್ನು ಈ ರೂಪಕವು ಸೂಚಿಸುತ್ತಿದೆ.

ರೂಪಕ ಎಂದರೆ ಶಬ್ದಗಳ ಮೂಲಕವೇ ಒಂದು ಸಂಗತಿಯನ್ನು ಓದುಗರ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು; ಕಾಣ್+ಅ; ಕಾಣ್=ನೋಡು/ತಿಳಿ; ಕಾಣಾ=ತಿಳಿದು ನೋಡು/ಅರಿತುಕೊಳ್ಳು; ರಾಮನಾಥ=ದೇವರಾದ ಶಿವ/ಜೇಡರ ದಾಸಿಮಯ್ಯನ ವಚನಗಳಲ್ಲಿ ಕಂಡು ಬರುವ ಅಂಕಿತನಾಮ)

❖

110. ಸತ್ಯದ ನುಡಿ ತೀರ್ಥ ಭಕ್ತಿಯ ನಡೆ ತೀರ್ಥ
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ
ಹರಿವ ನದಿ ಎತ್ತಣಾ ತೀರ್ಥ ರಾಮನಾಥ.

ದೇಗುಲಗಳ ಬಳಿ ಹರಿಯುತ್ತಿರುವ ನದಿ/ತೊರೆಗಳ ನೀರು ಇಲ್ಲವೇ ದೇಗುಲದ ಪೂಜಾರಿಯು ಕೊಡುವ ನೀರನ್ನು ಪವಿತ್ರವೆಂದು ನಂಬಿರುವ ಜನರಿಗೆ, ಯಾವುದು ಪವಿತ್ರವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಸತ್ಯ=ದಿಟ/ನಿಜ/ವಾಸ್ತವ; ನುಡಿ=ಮಾತು; ಸತ್ಯದ ನುಡಿ=ತನ್ನನ್ನು ಒಳಗೊಂಡಂತೆ ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟು ಮಾಡುವ ಮಾತುಗಳು; ತೀರ್ಥ=ಪವಿತ್ರವಾದುದು/ಉತ್ತಮವಾದುದು/ಒಳ್ಳೆಯದನ್ನು ಮಾಡುವಂತಹುದು; ತೀರ್ಥ=ದೇವರ ಪೂಜೆಯ ನಂತರ, ಪೂಜಾರಿಯು ದೇಗುಲಕ್ಕೆ ಬಂದಿರುವ ಜನಗಳಿಗೆ ನೀಡುವ ನೀರು. ಇದನ್ನು ಕುಡಿಯುವುದರಿಂದ ಜೀವನದಲ್ಲಿ ಒಳಿತಾಗುವುದೆಂಬ ನಂಬಿಕೆಯು ಜನಮನದಲ್ಲಿದೆ; ಭಕ್ತಿ=ದೇವರನ್ನು ಪೂಜಿಸಲು/ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ನಡೆ=ಆಚರಣೆ/ವರ್ತನೆ; ಭಕ್ತಿಯ ನಡೆ=ತನಗೆ ಒಳಿತನ್ನು ಬಯಸುವಂತೆಯೇ ಇತರರ ಒಳಿತಿಗೂ ನೆರವಾಗುವಂತಹ ಸಾಮಾಜಿಕ ವರ್ತನೆ;

ಮುಕ್ತಿ=ಹುಟ್ಟು ಬದುಕು ಸಾವಿನ ಸರಪಣಿಯಿಂದ ಜೀವವು ಬಿಡುಗಡೆಯನ್ನು ಪಡೆಯುತ್ತದೆ ಎಂಬ ನಂಬಿಕೆ; ಪ್ರಸಂಗ=ಸನ್ನಿವೇಶ/ಸಂಗತಿ; **ಮುಕ್ತಿಯ ಪ್ರಸಂಗ**=ಮಯ್ ಮನಗಳಲ್ಲಿ ತುಡಿಯುವಂತಹ ಕೆಟ್ಟ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು/ಹೋಗಲಾಡಿಸಿಕೊಂಡು, ಅವುಗಳಿಂದ ಬಿಡುಗಡೆಯನ್ನು ಹೊಂದಿ, ಒಳ್ಳೆಯ ರೀತಿಯಲ್ಲಿ ಬದುಕಲು ಪ್ರೇರಣೆಯನ್ನು ನೀಡುವಂತಹ ಸಂಗತಿ; ಉಳ್ಳಡೆ=ಇದ್ದರೆ/ಹೊಂದಿದರೆ; **ಹರಿವ ನದಿ**= ಹರಿಯುತ್ತಿರುವ ನದಿ/ತೊರೆಗಳ ನೀರು; ಎತ್ತಣ+ಆ; ಎತ್ತಣ=ಯಾವ ಕಡೆ/ ಯಾವ ರೀತಿ/ಯಾವ ಬಗೆ; **ಹರಿವ ನದಿ ಎತ್ತಣಾ ತೀರ್ಥ**=ಯಾವ ರೀತಿಯಿಂದ ನೋಡಿದರು ನದಿ/ತೊರೆಗಳ ನೀರು, ಅದು ಕೇವಲ ನೀರೇ ಹೊರತು ಮತ್ತೇನು ಅಲ್ಲ; ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆ ನುಡಿಗಳೇ ಒಳ್ಳೆಯದು/ಪವಿತ್ರವೆಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತವೆ)

❖

111. ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ.

ಈ ವಚನದಲ್ಲಿ 'ಅಳಿಮನದವನು' ಎಂಬ ಪದವನ್ನು 'ಮನದಲ್ಲಿ ಕೆಟ್ಟ ಉದ್ದೇಶವನ್ನುಳ್ಳ ವ್ಯಕ್ತಿ/ಚಂಚಲಮನದ ವ್ಯಕ್ತಿ' ಎಂಬ ಎರಡು ಬಗೆಯ ತಿರುಳಿನ ನೆಲೆಗಳಲ್ಲಿ ಗ್ರಹಿಸಿಕೊಂಡಾಗ, ಎರಡು ರೀತಿಗಳಲ್ಲಿ ವಚನದ ಇಂಗಿತವನ್ನು ಮನಗಾಣಬಹುದು.

1) ಮನದಲ್ಲಿ ಕೆಟ್ಟ ಉದ್ದೇಶವನ್ನು ಹೊಂದಿ, ಹೊರನೋಟಕ್ಕೆ ದೇವರಲ್ಲಿ ಒಲವುಳ್ಳವನಂತೆ ನಟಿಸುತ್ತಾ, ಜನರನ್ನು ಮತ್ತು ಸಮಾಜವನ್ನು ವಂಚಿಸುವ ವ್ಯಕ್ತಿಯು ಕಟ್ಟಕಡೆಗೆ ಜೀವನದಲ್ಲಿ ಏನನ್ನೂ ಗಳಿಸಲಾಗದೆ, ತನ್ನಲ್ಲಿರುವುದನ್ನೂ ಕಳೆದುಕೊಳ್ಳುತ್ತಾನೆ.

2) ಇತ್ತ ಒಳಿತನ್ನು ಮಾಡಲಾಗದೆ, ಅತ್ತ ಕೆಟ್ಟದ್ದನ್ನು ಬಿಡಲಾಗದೆ, ಅತ್ತಿತ್ತ ತುಯ್ದಾಡುವ ಚಂಚಲಮನಸ್ಸಿನ ವ್ಯಕ್ತಿಯು ಜೀವನದಲ್ಲಿ ಏನನ್ನೂ ಪಡೆಯಲಾಗದೆ, ತನಗೆ ತಾನೆ ಕೇಡನ್ನು ಬಗೆದುಕೊಳ್ಳುತ್ತಾನೆ.

(ಹರಿದ=ಅಲ್ಲಲ್ಲಿ ತೂತು ಬಿದ್ದಿರುವ/ಕಿತ್ತುಹೋಗಿರುವ; ಗೋಣಿಯಲ್+ಒಬ್ಬ; ಗೋಣಿ=ಸೆಣಬಿನ ನೂಲು ಇಲ್ಲವೇ ಇನ್ನಿತರ ದಾರದ ಎಳೆಗಳನ್ನು ಹೆಣೆದು ಮಾಡಿರುವ ಚೀಲ; ಗೋಣಿಯಲ್=ಚೀಲದಲ್ಲಿ; ಒಬ್ಬ=ಒಬ್ಬ ವ್ಯಕ್ತಿಯು; ಕಳವೆ= ಬತ್ತ/ನೆಲ್ಲು; ತುಂಬಿದ=ಚೀಲದೊಳಗೆ ತುಸುವು ಎಡೆಯಿಲ್ಲದಂತೆ ಬತ್ತವನ್ನು ಹಾಕಿದ; ಇರುಳ್+ಎಲ್ಲಾ; ಇರುಳು=ರಾತ್ರಿ; ನಡೆದನ್+ಆ;

ಇರುಳೆಲ್ಲಾ ನಡೆದನ್=ಒಂದು ಊರಿನಿಂದ ಇನ್ನೊಂದು ಊರಿಗೆ ಇಡೀ ರಾತ್ರಿಯೆಲ್ಲಾ ಪಯಣಿಸಿದನು; ಆ=ಕೊಡಬೇಕಾದ; ಸುಂಕಕೆ+ಅಂಜಿ; ಸುಂಕ= ಸರಕುಗಳ/ವಸ್ತುಗಳ ಸಾಗಾಣಿಕೆಗಾಗಿ ರಾಜ್ಯದ ಬೊಕ್ಕಸಕ್ಕೆ ತೆರಬೇಕಾದ ಕಂದಾಯದ ಹಣ/ತೆರಿಗೆ; ಅಂಜು=ಹೆದರು/ದಿಗಿಲುಗೊಂಡು/ಹಿಂಜರಿದು;

ಸುಂಕಕಂಜಿ=ಸುಂಕವನ್ನು ಕೊಡಬೇಕಲ್ಲ ಎಂಬ ಸಂಕಟದಿಂದ/ಸುಂಕವನ್ನು ವಸೂಲು ಮಾಡುವ ಆಡಳಿತಗಾರರ ಕಯ್ಗೆ ಸಿಕ್ಕಿಬಿದ್ದರೆ, ಸುಂಕದ ಹಣವನ್ನು ಕೊಡಬೇಕಾಗುತ್ತದೆಯಲ್ಲ ಎಂಬ ಹೆದರಿಕೆಯಿಂದ;

ಕಳವೆ+ಎಲ್ಲಾ; **ಕಳವೆಯೆಲ್ಲಾ ಹೋಗಿ**=ತೂತಾಗಿದ್ದ ಚೀಲಕ್ಕೆ ತುಂಬಿದ್ದ ಬತ್ತವೆಲ್ಲವೂ ದಾರಿಯುದ್ದಕ್ಕೂ ಚೆಲ್ಲಿಹೋಗಿ; ಬರಿ=ಬರಿದು/ಏನೂ ಇಲ್ಲದಿರುವುದು; **ಬರಿಗೋಣಿ ಉಳಿಯಿತ್ತು**=ಚೀಲವು ಬರಿದಾಗಿತ್ತು/ಚೀಲದಲ್ಲಿ ಬತ್ತವು ಇರಲಿಲ್ಲ; ಅಳಿ=ಕೆಡು/ನಾಶವಾಗು/ಸಣ್ಣತನ/ಹೀನತನ; ಮನ=ಮನಸ್ಸು; ಭಕ್ತಿ=ದೇವರನ್ನು ಪೂಜಿಸಲು/ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ;

ಅಳಿಮನದವನ ಭಕ್ತಿ=ಮನದೊಳಗೆ ಕೆಟ್ಟ ಒಳಮಿಡಿತಗಳಿಂದ ಕೂಡಿದ/ ಚಂಚಲವಾದ ಮನಸ್ಸಿನ ವ್ಯಕ್ತಿಯು ಮಾಡುವ ಪೂಜೆ; ಇಂತು+ಆಯಿತ್ತು; ಇಂತು=ಈ ರೀತಿ/ ಈ ಬಗೆಯಲ್ಲಿ; ಆಯಿತ್ತು=ಉಂಟಾಯಿತು/ಕಂಡುಬಂದಿತು;

ಕಾನೂನಿಗೆ ಅನುಗುಣವಾಗಿ ಕಟ್ಟಬೇಕಾಗಿದ್ದ ಸುಂಕವನ್ನು ತಪ್ಪಿಸಲು ಹೋಗಿ, ತನ್ನಲ್ಲಿದ್ದ ಬತ್ತವೆಲ್ಲವನ್ನೂ ಕಳೆದುಕೊಂಡ ರೂಪಕವು ಇತರರನ್ನು ಇಲ್ಲವೇ ಸಮಾಜವನ್ನು ವಂಚಿಸಲು ಪ್ರಯತ್ನಿಸುವ ವ್ಯಕ್ತಿಯು ಕಟ್ಟಕಡೆಯಲ್ಲಿ ತನಗೆ ತಾನೆ ಕೇಡುಬಗೆದುಕೊಳ್ಳುತ್ತಾನೆ ಎಂಬ ಇಂಗಿತವನ್ನು ಸೂಚಿಸುತ್ತದೆ.)

❖

112. ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥ.

ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳಲು ಬೇಕಾದ ಉಣಿಸು ತಿನಸುಗಳು ದೊರೆಯದೆ, ದಿನನಿತ್ಯವೂ ಹಸಿವಿನ ಬೇಗೆಯಲ್ಲಿ ಬೇಯುತ್ತಿರುವ ಕೋಟಿಗಟ್ಟಲೆ ಜನರ ಹಸಿವಿನ ಸಂಕಟವನ್ನು ತಣಿಸುವ ಕೆಲಸವು ಜಗತ್ತಿನಲ್ಲಿ ಬಹುದೊಡ್ಡ ಸವಾಲಿನದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಹಸಿವು+ಎಂಬ; ಹಸಿವು=ಉಂಡು ತಿಂದು ಕುಡಿದು ಹೊಟ್ಟೆಯನ್ನು ತುಂಬಿಸಿ ಕೊಳ್ಳಬೇಕೆಂಬ ಬಯಕೆ/ಆಸೆ. ಜೀವಿಯು ಉಳಿದು ಬೆಳೆದು ಬಾಳುವುದಕ್ಕೆ ಪ್ರತಿನಿತ್ಯವೂ ಹಸಿವನ್ನು ತಣಿಸಿಕೊಳ್ಳುವುದು ಅತ್ಯಗತ್ಯ; ಎಂಬ=ಎನ್ನುವ; ಪಿರಿದಾದ+ಪಾವು=ಪೆರ್ಬಾವು>ಪೆಬ್ಬಾವು>ಹೆಬ್ಬಾವು; ಪಿರಿದು=ದೊಡ್ಡದು; ಪಿರಿದಾದ=ದೊಡ್ಡಗಾತ್ರದ; ಪಾವು=ಹಾವು/ಸರ್ಪ; ಹೆಬ್ಬಾವು=ದೊಡ್ಡಗಾತ್ರದ ಹಾವು; ಬಸುರು=ಹೊಟ್ಟೆ/ಉದರ;

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ=ಬಡತನ ಇಲ್ಲವೇ ಇನ್ನಿತರ ಕಾರಣಗಳಿಂದ ಉಣಿಸು ತಿನಸುಗಳು ದೊರೆಯದೆ ಹೊಟ್ಟೆಯ ಹಸಿವಿನ ಅತಿಯಾದ ಸಂಕಟದಿಂದ ನರಳುವುದು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ರೂಪಕ; ವಿಷ+ಏರಿತ್ತು+ಅಯ್ಯಾ; ವಿಷ=ನಂಜು/ಗರಳ; ಏರು=ಹರಡು; ಪಾದ=ಕಾಲು/ಅಡಿ; ಮಸ್ತಕ=ತಲೆ/ಶಿರ; **ಆಪಾದಮಸ್ತಕಕ್ಕೆ**=ಅಡಿಯಿಂದ ಹಿಡಿದು ಮುಡಿಯವರೆಗೆ / ಕಾಲಿನಿಂದ ಹಿಡಿದು ತಲೆಯತನಕ;

ಹಸಿವಿಗೆ+ಅನ್ನ+ಅನ್+ಇಕ್ಕಿ; ಅನ್ನ=ಆಹಾರವಾಗಿ ತಿನ್ನುವ ಉಣ್ಣುವ ಎಲ್ಲಾ ಬಗೆಯ ಉಣಿಸು ತಿನಸುಗಳು; ಅನ್=ಅನ್ನು; ಇಕ್ಕಿ=ನೀಡಿ/ಹಾಕಿ/ಕೊಟ್ಟು; ವಿಷ+ಅನ್+ಇಳುಹ+ಬಲ್ಲಡೆ; ಇಳುಹು=ನೀಗಿಸುವುದು, ಹೋಗಲಾಡಿಸುವುದು; ಬಲ್ಲ=ತಿಳಿದ/ಅರಿತ; ಬಲ್ಲಡೆ=ತಿಳಿದಿದ್ದರೆ/ಅರಿತಿದ್ದರೆ/ಕಸುವುಳ್ಳವನಾದರೆ; **ವಿಷವನಿಳುಹಬಲ್ಲಡೆ**=ಜನಸಮುದಾಯದ ಹಸಿವಿನ ಸಂಕಟವನ್ನು ನೀಗಿಸಬಲ್ಲವನಾದರೆ/ಹಸಿವನ್ನು ತಣಿಸಬಲ್ಲವನಾದರೆ; ವಸುಧೆ+ಒಳಗೆ;

ವಸುಧೆ=ಜಗತ್ತು/ಪ್ರಪಂಚ/ಲೋಕ/ಭೂಮಂಡಲ; ಒಳಗೆ=ಅಲ್ಲಿ; ಆತನೆ=ಅವನೆ/ಅಂತಹ ವ್ಯಕ್ತಿಯೇ;

ಗಾರುಡಿಗ=ಹಾವು ಕಚ್ಚಿ, ಮಯ್ಯೆಲ್ಲಾ ನಂಜು ಏರಿ, ಸಾಯುತ್ತಿರುವ ವ್ಯಕ್ತಿಯನ್ನು ಗುಣಪಡಿಸಿ, ಬದುಕುಳಿಯುವಂತೆ ಮಾಡುವವನು/ಮಾಟಮಂತ್ರದಿಂದ ಏನನ್ನೂ ಬೇಕಾದರೂ ಮಾಡಬಲ್ಲ ಕಸುವುಳ್ಳವನು ಎಂಬ ನಂಬಿಕೆಯು ಜನಮನದಲ್ಲಿದೆ; ಕಾಣ್+ಆ; ಕಾಣ್=ನೋಡು; ಕಾಣಾ=ತಿಳಿದು ನೋಡು.)

❖

27. ಡಕ್ಕೆಯ ಬೊಮ್ಮಣ್ಣ

ಕಸುಬು: ಡಕ್ಕೆಯನ್ನು ಬಾರಿಸುವುದು (ಡಕ್ಕೆ=ತಮಟೆ/ತೊಗಲಿನಿಂದ ಮಾಡಿರುವ ಒಂದು ಬಗೆಯ ಚರ್ಮ ವಾದ್ಯ. ಊರ ಬೀದಿಗಳಲ್ಲಿ ದೇವರ ಮೆರವಣಿಗೆಯನ್ನು ಮಾಡುವಾಗ/ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಹೊತ್ತು ಮಸಣಕ್ಕೆ ಸಾಗಿಸುವಾಗ ಮತ್ತು ಊರಿನ ಜನರೆಲ್ಲರಿಗೂ ಸುದ್ದಿಯೊಂದನ್ನು ತಿಳಿಸುವಾಗ ತಮಟೆಯನ್ನು ಬಾರಿಸಲಾಗುತ್ತಿತ್ತು.)

ದೊರೆತಿರುವ ವಚನಗಳು: 90

ವಚನಗಳ ಅಂಕಿತ ನಾಮ: ಕಾಲಾಂತಕ ಭೀಮೇಶ್ವರಲಿಂಗ

113. ಕವಿಯ ಹುಗತೆ ಗಮಕಿಯ ಸಂಚ
ವಾದಿಯ ಚೊಕ್ಕೆಹ ವಾಗ್ಮಿಯ ಚೊಕ್ಕೆಹ
ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು
ಭಕ್ತಿಯನರಿಯಬೇಕು ಸತ್ಯದಲ್ಲಿ ನಡೆಯಬೇಕು
ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು
ಈ ಗುಣ ಡಕ್ಕೆಯ ಬೊಮ್ಮನ ಭಕ್ತಿ
ಕಾಲಾಂತಕ ಭೀಮೇಶ್ವರಲಿಂಗವನರಿವವನ ಸದ್ಭಕ್ತಿಯುಕ್ತಿ.

ಓದುಗರಿಗೆ/ಕೇಳುಗರಿಗೆ ಅರಿವು ಮತ್ತು ಆನಂದವನ್ನು ಉಂಟುಮಾಡುವ ಉದ್ದೇಶದಿಂದ ವ್ಯಕ್ತಿಯು ಬಹು ನಿಪುಣತೆಯಿಂದ ನುಡಿಯನ್ನು ಬಳಸುತ್ತ ಕಟ್ಟುವ ಕವಿತೆ, ಹಾಡುವ ಗಮಕ, ಮಾಡುವ ತರ್ಕ, ಆಡುವ ಇಂಪಾದ ಮಾತುಗಳಿಗಿಂತ ನಿಜ

ಜೀವನದಲ್ಲಿ ಆತನು ಒಳ್ಳೆಯ ನಡೆನುಡಿಗಳಿಂದ ಬಾಳಬೇಕು. ಏಕೆಂದರೆ ಎಲ್ಲ ಬಗೆಯ ಸಾಹಿತ್ಯ, ಸಂಗೀತ ಮತ್ತು ಕಲೆಗಳಿಗಿಂತಲೂ ವ್ಯಕ್ತಿಯ ಬದುಕು ದೊಡ್ಡದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

'ದೊಡ್ಡ ಬದುಕು' ಎಂದರೆ ವ್ಯಕ್ತಿಯು ತನಗೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಿಂದ ಕೂಡಿ ಬಾಳುವುದು.

(ಕವಿ=ಕಾವ್ಯವನ್ನು ರಚಿಸುವವನು ಕಬ್ಬಿಗ; ಹುಗತೆ=ಪ್ರವೇಶ/ಒಳಹೋಗುವಿಕೆ; **ಕವಿಯ ಹುಗತೆ**=ಕವಿಯು ಕಾವ್ಯವನ್ನು ರಚಿಸುವ ಬಗೆ. ಕವಿಯು ತನ್ನ ಕಣ್ಣ ಮುಂದಿನ ಲೋಕದ ವಾಸ್ತವ ಸಂಗತಿಗಳನ್ನು ಮತ್ತು ತನ್ನ ಮನದಲ್ಲಿ ಮೂಡುವ ಕಲ್ಪನೆ/ಚಿಂತನೆ/ಆಲೋಚನೆಗಳನ್ನು ಪರಸ್ಪರ ಹೆಣೆದು, ನುಡಿ ಸಾಮಗ್ರಿಗಳಾದ ಅಕ್ಕರ–ಪದ–ವಾಕ್ಯ–ತಿರುಳನ್ನು ಕಲಾತ್ಮಕವಾದ ರೀತಿಯಲ್ಲಿ ಹೊಂದಿಸಿ ಕಾವ್ಯವನ್ನು ರಚಿಸುತ್ತಾನೆ. ಆದುದರಿಂದಲೇ ಕಾವ್ಯದಲ್ಲಿ ಲೋಕಸತ್ಯ ಮತ್ತು ಕಾವ್ಯಸತ್ಯಗಳು ಜತೆಗೂಡಿ ಓದುಗರ/ಕೇಳುಗರ ಮನಕ್ಕೆ ಮುದವನ್ನು ನೀಡುತ್ತವೆ;

ಗಮಕ=ಕಾವ್ಯ ಪ್ರಸಂಗಗಳನ್ನು ಆಲಿಸುತ್ತಿರುವ/ಕೇಳುತ್ತಿರುವ ವ್ಯಕ್ತಿಗಳ ಮನದಲ್ಲಿ ಮತ್ತೊಮ್ಮೆ ಅವು ಚಿತ್ರಣಗೊಳ್ಳುವಂತೆ ಇಂಪಾದ ದನಿಯಿಂದ ರಾಗವಾಗಿ ಕಾವ್ಯವನ್ನು ಹಾಡುವ/ವಾಚಿಸುವ ಕಲೆ; ಕಾವ್ಯ ಪ್ರಸಂಗಗಳಲ್ಲಿ ನವರಸಗಳು ಅಡಕಗೊಂಡಿರುತ್ತವೆ; ನವ=ಒಂಬತ್ತು; ರಸ=ಕಾವ್ಯವನ್ನು ಓದುವಾಗ/ಕೇಳುವಾಗ ವ್ಯಕ್ತಿಯ ಮನದಲ್ಲಿ ಆಯಾಯ ಪ್ರಸಂಗಗಳಿಗೆ ತಕ್ಕಂತೆ ಮೂಡುವಂತಹ ಒಳ ಮಿಡಿತಗಳು; ನವರಸಗಳು='ಶೃಂಗಾರ/ಹಾಸ್ಯ/ಕರುಣ/ರೌದ್ರ/ವೀರ/ಭಯಾನಕ/ಬೀಭತ್ಸ/ಅದ್ಭುತ/ಶಾಂತ' ಎಂಬ ಒಂಬತ್ತು ಬಗೆಯ ರಸಗಳು; ಗಮಕಿ=ಕಾವ್ಯ ಪ್ರಸಂಗಗಳಿಗೆ ತಕ್ಕಂತೆ ತನ್ನ ಕೊರಳಿಂದ ಹೊರಹೊಮ್ಮುವ ದನಿಯಲ್ಲಿ ಏರಿಳಿತಗಳನ್ನು ಮಾಡುತ್ತಾ, ನವರಸಗಳು ಮತ್ತೆ ಕೇಳುಗರ ಮನದಲ್ಲಿ ಮೂಡುವಂತೆ ಕಾವ್ಯವನ್ನು ವಾಚಿಸುವವನು/ಹಾಡುವವನು; ಸಂಚು=ನಿಪುಣತೆ/ಕುಶಲ ಕಲೆ;

ಗಮಕಿಯ ಸಂಚ=ಕೇಳುಗರ ಕಣ್ಣಿಗೆ ಕಟ್ಟುವಂತೆ ಅಂದರೆ ಮನದಲ್ಲಿ ಮತ್ತೊಮ್ಮೆ ಮೂಡುವಂತೆ ಅತ್ಯಂತ ಕಲಾತ್ಮಕವಾದ ರೀತಿಯಲ್ಲಿ ಕಾವ್ಯವನ್ನು ವಾಚಿಸುವ/ಹಾಡುವ ನಿಪುಣತೆ/ಕುಶಲತೆ;

ವಾದ=ಇಬ್ಬರು ಇಲ್ಲವೇ ಅನೇಕರ ನಡುವೆ ಯಾವುದೇ ಸಂಗತಿಯನ್ನು ಕುರಿತು ಮಾತಿನ ಮೂಲಕ ನಡೆಯುವ ಚರ್ಚೆ/ಸಂಗತಿಯೊಂದರ ಸರಿ–

ತಪ್ಪುಗಳನ್ನು ಕುರಿತು ಮಾತನಾಡುವಾಗ ತಾವು ಹೇಳುತ್ತಿರುವುದೇ ಸರಿಯೆಂದು ಪ್ರತಿಪಾದಿಸುವುದು; ವಾದಿ=ತಾನು ಹೇಳುತ್ತಿರುವ ಸಂಗತಿಯೇ ನಿಜ/ಸತ್ಯ/ವಾಸ್ತವ ಎಂದು ಪಟ್ಟು ಹಿಡಿದು ಹೇಳುವವನು; ಚೊಕ್ಕೆಹ=ಚತುರತೆ/ಉಪಾಯ/ಜಾಣತನ;

ವಾದಿಯ ಚೊಕ್ಕೆಹ=ವಾದದಲ್ಲಿ ತೊಡಗಿದಾಗ ಎದುರಾಳಿಯು ತಕ್ಕ ಉತ್ತರಗಳನ್ನು ಕೊಡಲಾಗದೆ ಸೋಲುವಂತೆ/ಮಣಿಯುವಂತೆ ಮಾಡುವ ಬಗೆಯಲ್ಲಿ ವ್ಯಕ್ತಿಯು ತನ್ನ ವಿಚಾರಗಳನ್ನು ಮಂಡಿಸುವ ಜಾಣತನ;

ವಾಗ್ಮಿ=ಮಾತುಗಾರ/ಮಾತಿನ ಮಲ್ಲ/ಯಾವುದೇ ಒಂದು ಸಂಗತಿಯನ್ನಾಗಲಿ ಇತರರಿಗೆ ಹೇಳುವಾಗ, ಅದನ್ನು ಕೇಳುತ್ತಿರುವ ವ್ಯಕ್ತಿಗಳ ಮನವನ್ನು ತನ್ನತ್ತ ಸೆಳೆದುಕೊಂಡು, ಅವರು ಮೆಚ್ಚಿ ತಲೆದೂಗುವಂತೆ ಸೊಗಸಾಗಿ ಮಾತನಾಡುವವನು; ಚೇತನ=ಚಟುವಟಿಕೆ/ಯಾವ ಸಂಗತಿಯನ್ನು ಹೇಗೆ ಹೇಳಬೇಕು ಎಂಬ ಅರಿವು ಮತ್ತು ಎಚ್ಚರ;

ವಾಗ್ಮಿಯ ಚೇತನ=ಆಡುವ ಮಾತುಗಳ ಮೂಲಕವೇ ಕೇಳುವವರಿಗೆ ಮೋಡಿಯನ್ನು ಮಾಡುವ/ಕೇಳುಗರು ತಮ್ಮ ಮಯ್ ಮನಗಳನ್ನು ಮರೆತು ತಲ್ಲೀನರಾಗುವಂತೆ ಮಾಡುವ ಚತುರತೆ;

ಇಂತು+ಈ; ಇಂತು=ಹೀಗೆ; ಚತುಷ್ಟಯ+ಅಲ್ಲಿ; ಚತುಷ್ಟಯ=ನಾಲ್ಕರ ಗುಂಪು/ನಾಲ್ಕು ಸಂಗತಿಗಳು; ಯುಕ್ತಿವಂತನ್+ಆದಡೆ+ಏನು; ಯುಕ್ತಿ=ತಾನು ಉದ್ದೇಶಪಟ್ಟಿರುವುದನ್ನು ಈಡೇರಿಸಿಕೊಳ್ಳಲೆಂದು ಮಾಡುವ ತಂತ್ರ; ಯುಕ್ತಿವಂತ= ಉಪಾಯಗಳ ಮೂಲಕವೇ ತನ್ನ ಕೆಲಸವನ್ನು ಆಗುಮಾಡಿಕೊಳ್ಳುವ ನಿಪುಣ; ಆದಡೆ=ಆದರೆ/ಆಗಿದ್ದರೆ; ಏನು=ಯಾವುದು ಪರಿಣಾಮ ಯಾವುದು;

ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು=ಕೇವಲ ನುಡಿಯನ್ನು ಸೊಗಸಾಗಿ ಬಳಸುವ ಕಲೆಗಳಲ್ಲಿ ಪರಿಣಿತನಾಗುವುದರಿಂದ ಸಹಮಾನವರಿಗಾಗಲಿ ಇಲ್ಲವೇ ಸಮಾಜಕ್ಕಾಗಲಿ ಯಾವುದೇ ಬಗೆಯಲ್ಲೂ ಪ್ರಯೋಜನವಿಲ್ಲ. ಏಕೆಂದರೆ ಆಡುವ ಮಾತಿಗಿಂತ ಮಿಗಿಲಾಗಿ ವ್ಯಕ್ತಿಯು ಮಾಡುವ ಕೆಲಸ ಒಳ್ಳೆಯ ರೀತಿಯಲ್ಲಿರಬೇಕು;

ಭಕ್ತಿ+ಅನ್+ಅರಿಯಬೇಕು; ಭಕ್ತಿ=ದೇವರನ್ನು ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ಅನ್=ಅನ್ನು; ಅರಿ=ತಿಳಿ/ಕಲಿ; ಬೇಕು= ಅಗತ್ಯ; ಅರಿಯಬೇಕು=ತಿಳಿದುಕೊಳ್ಳಬೇಕು/ಗೊತ್ತು ಮಾಡಿಕೊಳ್ಳಬೇಕು/

ಮನದಟ್ಟು ಮಾಡಿಕೊಳ್ಳಬೇಕು; **ಭಕ್ತಿಯನರಿಯಬೇಕು**=ಒಳ್ಳೆಯ ನಡೆನುಡಿಗಳಿಂದ ವ್ಯಕ್ತಿಯು ತನ್ನ ಬದುಕನ್ನು ರೂಪಿಸಿಕೊಳ್ಳಬೇಕು;

ಸತ್ಯ+ಅಲ್ಲಿ; ಸತ್ಯ=ದಿಟ/ನಿಜ/ವಾಸ್ತವ; ನಡೆ=ಆಚರಣೆ/ನಡವಳಿಕೆ; **ಸತ್ಯದಲ್ಲಿ ನಡೆಯಬೇಕು**=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಕೆಲಸದಲ್ಲಿ ತೊಡಗಬೇಕು; ವಿರಕ್ತಿ+ಅಲ್ಲಿ; ವಿರಕ್ತಿ=ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವಂತಹ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿರುವ ನಿಲುವು; ವಿಚಾರಿಸಿ= ಸರಿ–ತಪ್ಪುಗಳನ್ನು ಒರೆಹಚ್ಚಿ ನೋಡಿ/ಒಳ್ಳೆಯದು ಯಾವುದು–ಕೆಟ್ಟದ್ದು ಯಾವುದು ಎಂಬುದನ್ನು ತಿಳಿದುಕೊಂಡು; ನಿಲ್ಲಬೇಕು=ಜೀವನವನ್ನು ರೂಪಿಸಿಕೊಳ್ಳಬೇಕು;

ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು=ವ್ಯಕ್ತಿಯು ತನ್ನ ಮಯ್ ಮನಗಳನ್ನು ತಾನು ಹತೋಟಿಯಲ್ಲಿಟ್ಟುಕೊಂಡು ಒಳಿತಿನ ನಡೆನುಡಿಗಳಿಂದ ಕೂಡಿ ಬಾಳಬೇಕು;

ಗುಣ=ನಡತೆ/ಸಜ್ಜನಿಕೆ; ಈ ಗುಣ=ಇಂತಹ ಒಳ್ಳೆಯ ನಡವಳಿಕೆ/ಈ ಬಗೆಯ ಸಜ್ಜನಿಕೆ; **ಈ ಗುಣ ಡಕ್ಕೆಯ ಬೊಮ್ಮನ ಭಕ್ತಿ**=ವಚನಕಾರನಾದ ಡಕ್ಕೆಯ ಬೊಮ್ಮಣ್ಣನು ಈ ಬಗೆಯ ಒಳ್ಳೆಯ ನಡೆನುಡಿಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳುತ್ತಿದ್ದನು;

ಕಾಲ+ಅಂತಕ; ಕಾಲ=ಸಮಯ/ವೇಳೆ; ಅಂತಕ=ಯಮ/ಸಾವಿನ ದೇವತೆ; ಕಾಲಾಂತಕ=ಹುಟ್ಟಿದ ಸಕಲಜೀವಿಗಳ ಪ್ರಾಣವನ್ನು ಒಂದಲ್ಲ ಒಂದು ದಿನ ಕೊಂಡೊಯ್ಯುವ ದೇವತೆಯಾದ ಯಮ; ನೀರು–ಬೆಂಕಿ–ನೆಲ–ಮರಗಿಡ– ಹಣ–ವಿದ್ಯೆ ಎಲ್ಲಕ್ಕೂ ಒಬ್ಬೊಬ್ಬ ದೇವತೆಯನ್ನು ಕನ್ನಡ ಜನಸಮುದಾಯವು ಕಲ್ಪಿಸಿಕೊಂಡಿರು ವಂತೆಯೇ ಸಾವಿಗೂ ಯಮನೆಂಬ ಹೆಸರಿನ ದೇವತೆಯನ್ನು ಕಲ್ಪಿಸಿಕೊಂಡಿದೆ; ಭೀಮೇಶ್ವರಲಿಂಗ+ಅನ್+ಅರಿವವನ; ಭೀಮೇಶ್ವರಲಿಂಗ=ಈಶ್ವರ/ದೇವರು; **ಕಾಲಾಂತಕ ಭೀಮೇಶ್ವರಲಿಂಗ**=ಡಕ್ಕೆಯ ಬೊಮ್ಮಣ್ಣನ ವಚನಗಳ ಅಂಕಿತನಾಮ; ಅರಿವವನ=ತಿಳಿದುಕೊಳ್ಳುವ ವ್ಯಕ್ತಿಯ/ ಅರಿತುಕೊಳ್ಳುವವನ; ಸದ್ಭಕ್ತಿ=ಒಳ್ಳೆಯ ನಡೆನುಡಿ;

ಕಾಲಾಂತಕ ಭೀಮೇಶ್ವರಲಿಂಗವನರಿವವನ ಸದ್ಭಕ್ತಿ=ಶಿವನನ್ನು ಪೂಜಿಸುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ನಡೆನುಡಿಗಳಿಂದ ತನಗೆ ಒಳಿತನ್ನು ಮಾಡಿಕೊಳ್ಳು ವಂತೆಯೇ ಸಹಮಾನವರ ಮತ್ತು ಸಮಾಜದ ಹಿತಕ್ಕಾಗಿ ತಾನು ಬಾಳಬೇಕೆಂಬುದನ್ನು ಅರಿತಿರುತ್ತಾನೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ.)

114. ತಾನರಿಯದೆ ಮಾಡಿದ ದೋಷಕ್ಕೆ
ತನಗೆ ಅಘೋರವಿಲ್ಲ ಅದು ಜಗದ ಹುದುಗು
ತಾನರಿದು ಅಲ್ಲ ಅಹುದೆಂದು ಎಲ್ಲರಿಗೆ ಹೇಳಿ
ಪರಧನದಲ್ಲಿ ಪರಸತಿಯಲ್ಲಿ ಅನ್ಯರ ನಿಂದೆಯಲ್ಲಿ
ವ್ರತಾಚಾರ ಭಂಗಿತರಲ್ಲಿ
ಇದನರಿದು ಅನುಸರಣೆಯ ಮಾಡಿದಡೆ
ಕುಂಭೀನರಕದಲ್ಲಿ ಹಿಂಗದಿರ್ಪನು
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿ ದೂರಸ್ಥನು.

ನಡೆನುಡಿಗಳಲ್ಲಿ ಯಾವುದು ಒಳ್ಳೆಯದು/ಯಾವುದು ಕೆಟ್ಟದ್ದು ಎಂಬುದನ್ನು ಎಲ್ಲರಿಗೂ ಮನದಟ್ಟಾಗುವಂತೆ ತಾನೇ ಹೇಳುತ್ತಾ, ತಾನು ಮಾತ್ರ ಕೆಟ್ಟ ನಡೆನುಡಿಗಳಲ್ಲಿ ತೊಡಗಿರುವ ವ್ಯಕ್ತಿಯ ಬದುಕು ಆತಂಕ/ಅಪಮಾನ/ಸಂಕಟ/ಸೋಲು/ಸಾವಿನಲ್ಲಿ ಕೊನೆಗೊಳ್ಳುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ತಾನ್+ಅರಿಯದೆ; ತಾನ್=ವ್ಯಕ್ತಿಯು; ಅರಿ=ತಿಳಿ/ಕಲಿ; ಅರಿಯದೆ=ತಿಳಿಯದೆ/ಗೊತ್ತಿಲ್ಲದೆ; ಮಾಡು=ನಡೆದುಕೊಳ್ಳು/ಆಚರಿಸು; ದೋಷ=ತಪ್ಪು/ಕೆಟ್ಟದ್ದು/ಕುಂದು; ತನಗೆ=ವ್ಯಕ್ತಿಗೆ; ಅಘೋರ+ಇಲ್ಲ; ಘೋರ=ಉಗ್ರವಾದುದು/ಬಲವಾದುದು; ಅಘೋರ=ದೊಡ್ಡದಲ್ಲ/ಕ್ರೂರವಾದುದಲ್ಲ; ಅದು=ಅಂತಹ ನಡವಳಿಕೆ; ಜಗ=ಜಗತ್ತು/ಲೋಕ/ಪ್ರಪಂಚ; ಹುದುಗು=ಹಾಸುಹೊಕ್ಕಾಗಿರುವುದು ಕೂಡಿ ಕೊಂಡಿರುವುದು; **ಜಗದ ಹುದುಗು**=ಮಾನವ ಸಮುದಾಯದ ಜೀವನದಲ್ಲಿ ಸೇರಿಕೊಂಡಿದೆ;

ತಾನರಿಯದೆ ಮಾಡಿದ ದೋಷಕ್ಕೆ ತನಗೆ ಅಘೋರವಿಲ್ಲ ಅದು ಜಗದ ಹುದುಗು=ವ್ಯಕ್ತಿಯು ತನ್ನ ನಡೆನುಡಿಗಳಿಂದ, ಇತರರಿಗೆ ಕೇಡಾಗುತ್ತಿದೆ ಎಂಬುದನ್ನು ಅರಿಯದೆ ನಡೆದುಕೊಂಡರೆ ಅದು ಅಂತಹ ದೊಡ್ಡ ತಪ್ಪೇನಲ್ಲ. ಏಕೆಂದರೆ ನಿಸರ್ಗ ಸಹಜವಾದ ಹಸಿವು ಮತ್ತು ಕಾಮ ಹಾಗೂ ಮಾನವ ಸಮುದಾಯವೇ ಕಟ್ಟಿಕೊಂಡಿರುವ ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಿಲುಕಿರುವ ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಒಂದಲ್ಲ ಒಂದು ಬಗೆಯ ತಪ್ಪನ್ನು ಮಾಡುತ್ತಾನೆ. ಈ ರೀತಿ ತಮಗೆ ಅರಿವಿಲ್ಲದೆಯೇ ತಪ್ಪನ್ನು ಮಾಡುವುದು

ಎಲ್ಲ ವ್ಯಕ್ತಿಗಳ ಬದುಕಿನ ಸಾಮಾಜಿಕ ನಡೆನುಡಿಯಲ್ಲಿ ಹಾಸುಹೊಕ್ಕಾಗಿದೆ. ಅಂದರೆ ಜೀವನದಲ್ಲಿ ತಪ್ಪನ್ನು ಮಾಡದಿರುವ ವ್ಯಕ್ತಿಯೇ ಇಲ್ಲ;

ತಾನ್+ಅರಿದು; ಅರಿದು=ತಿಳಿದುಕೊಂಡಿದ್ದು/ಬಲ್ಲವನಾಗಿದ್ದು/ಯಾವುದು ಒಳ್ಳೆಯದು/ಯಾವುದು ಕೆಟ್ಟದ್ದು-ಯಾವುದನ್ನು ಮಾಡಬೇಕು/ಯಾವುದನ್ನು ಮಾಡಬಾರದು ಎಂಬ ಅರಿವನ್ನು ಹೊಂದಿದವನಾಗಿದ್ದು; ಅಲ್ಲ=ಇದು ಕೆಟ್ಟುದ್ದು/ ಇದನ್ನು ಮಾಡಬಾರದು; ಅಹುದು+ಎಂದು; ಅಹುದು=ಇದು ಸರಿ/ಇದು ಒಳ್ಳೆಯದು/ಇದನ್ನು ಮಾಡಬೇಕು; ಎಲ್ಲರಿಗೆ=ಪ್ರತಿಯೊಬ್ಬರಿಗೂ; ಹೇಳಿ= ಮನದಟ್ಟು ಮಾಡಿಸಿ; ಪರಧನ+ಅಲ್ಲಿ; ಪರ=ಬೇರೆ/ಇತರ; ಧನ=ಹಣ/ಸಂಪತ್ತು/ ಆಸ್ತಿಪಾಸ್ತಿ/ಒಡವೆ ವಸ್ತು; ಪರಧನ=ಬೇರೆಯವರ ಸಂಪತ್ತು/ಒಡವೆ ವಸ್ತು/ ಆಸ್ತಿಪಾಸ್ತಿ; ಪರಸತಿ+ಅಲ್ಲಿ; ಸತಿ=ಹೆಂಡತಿ/ಹೆಂಗಸು; ಪರಸತಿ=ಮತ್ತೊಬ್ಬನ ಹೆಂಡತಿಯನ್ನು/ಮತ್ತೊಬ್ಬ ಹೆಂಗಸನ್ನು;

ಅನ್ಯ=ಬೇರೆ/ಇತರ; ನಿಂದೆ+ಅಲ್ಲಿ; ನಿಂದೆ=ತೆಗಳಿಕೆ/ಬಯ್ಯುವಿಕೆ; ವ್ರತ+ ಆಚಾರ; ವ್ರತ=ಒಲಿಸಿಕೊಳ್ಳಲು/ದೇವರ ಕರುಣೆಗೆ ಪಾತ್ರರಾಗಲೆಂದು ದೇಹವನ್ನು ದಂಡಿಸುವ ಮತ್ತು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ನಿಯಮಿತವಾದ ನಡೆನುಡಿಗಳು; ಆಚಾರ=ಕಟ್ಟುಪಾಡು/ಸಂಪ್ರದಾಯ/ಒಳ್ಳೆಯ ನಡತೆ; ವ್ರತಾಚಾರ=ವ್ರತವನ್ನು ಕಟ್ಟುನಿಟ್ಟಾಗಿ ಆಚರಿಸುವುದು; ಭಂಗಿತರು+ಅಲ್ಲಿ; ಭಂಗ=ಹಾಳು/ನಾಶ ಭಂಗಿತರು=ಹಾಳು ಮಾಡುವವರು/ನಾಶಪಡಿಸುವವರು/ ಮುರಿಯುವವರು; ಇದನ್+ಅರಿದು; ಇದನ್=ಇದನ್ನು; ಇದನರಿದು=ವ್ಯಕ್ತಿಗಳು ಕೆಟ್ಟ ನಡೆನುಡಿ ಯವರು ಎಂಬುದನ್ನು ಚೆನ್ನಾಗಿ ತಿಳಿದಿದ್ದರೂ; ಅನುಸರಣೆ= ಹೊಂದಿಕೊಂಡು ಹೋಗುವುದು/ಒಡನಾಡುವುದು; ಮಾಡಿದಡೆ=ಮಾಡಿದರೆ;

ಪರಧನದಲ್ಲಿ ಪರಸತಿಯಲ್ಲಿ ನಿಂದೆಯಲ್ಲಿ ವ್ರತಾಚಾರ ಭಂಗಿತರಲ್ಲಿ ಇದನರಿದು ಅನುಸರಣೆಯ ಮಾಡಿದಡೆ=ಇತರರ ಸಂಪತ್ತನ್ನು ಕಪಟತನದಿಂದ ದೋಚುವ, ಇತರರ ಮಡದಿಯರೊಡನೆ ಕಾಮದ ನಂಟನ್ನು ಪಡೆಯುವ, ಇತರರನ್ನು ನಿಂದಿಸುವ ಮತ್ತು ಒಳ್ಳೆಯ ನಡೆನುಡಿಗಳನ್ನು ಪಾಲಿಸದೆ ಹಾಳಾಗಿರುವ ವ್ಯಕ್ತಿಗಳ ಕೆಟ್ಟತನವನ್ನು ಚೆನ್ನಾಗಿ ತಿಳಿದಿದ್ದರೂ, ಅಂತಹವರೊಡನೆ ಗೆಳೆತನ ಬೆಳೆಸಿಕೊಂಡು ಅವರ ಹಾಗೆಯೇ ತಾನೂ ಕೂಡ ಕೆಟ್ಟ ನಡೆನುಡಿಗಳಲ್ಲಿ ತೊಡಗಿದರೆ;

ಕುಂಭೀನರಕ+ಅಲ್ಲಿ; ನರಕ=ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು, ಅನಂತರ ತಾನು ಮಾಡಿದ ಕೆಟ್ಟ ಕೆಲಸಗಳಿಗೆ ತಕ್ಕಂತೆ

ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಮತ್ತೊಂದು ಲೋಕದಲ್ಲಿರುವ ಜಾಗ. ಜನರಿಗೆ ಕೇಡನ್ನು ಮಾಡಿದವರು ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿದೆ; ಕುಂಭೀನರಕ=ಹೆಚ್ಚಿನ ದಂಡನೆಯನ್ನು ನೀಡುವ ಹಾಗೂ ವೇದನೆಯ ನೆಲೆಯಾದ ಒಂದು ನರಕದ ಹೆಸರು; ಹಿಂಗದೆ+ಇರ್ಪನು; ಹಿಂಗು=ಕುಗ್ಗು; ಹಿಂಗದೆ=ಬಿಡದೆ /ತ್ಯಜಿಸದೆ; ಇರ್ಪನು=ಇರುವನು;

ಕುಂಭೀನರಕದಲ್ಲಿ ಹಿಂಗದಿರ್ಪನು=ನಿಶ್ಚಯವಾಗಿಯೂ ಕುಂಬೀನರಕದಲ್ಲಿ ಬಿದ್ದು ಅತಿ ಹೆಚ್ಚಿನ ಯಾತನೆಗೆ ಒಳಗಾಗಿ ನರಳುವನು;

ಕಾಲ+ಅಂತಕ; ಕಾಲ=ಸಮಯ/ವೇಳೆ; ಅಂತಕ=ಯಮ/ಸಾವಿನ ದೇವತೆ; ಕಾಲಾಂತಕ=ಹುಟ್ಟಿದ ಸಕಲಜೀವಿಗಳ ಪ್ರಾಣವನ್ನು/ಉಸಿರನ್ನು ಒಂದಲ್ಲ ಒಂದು ದಿನ ಕೊಂಡೊಯ್ಯುವ ದೇವತೆಯಾದ ಯಮ. ಭೀಮೇಶ್ವರಲಿಂಗ=ಈಶ್ವರ/ಶಿವ/ದೇವರು; **ಕಾಲಾಂತಕ ಭೀಮೇಶ್ವರಲಿಂಗ**=ಡಕ್ಕೆಯ ಬೊಮ್ಮಣ್ಣನ ವಚನಗಳ ಅಂಕಿತನಾಮ; ಸ್ವಪ್ನ+ಅಲ್ಲಿ; ಸ್ವಪ್ನ=ಕನಸು; ದೂರ=ಎರಡು ವಸ್ತು/ಇಬ್ಬರು ವ್ಯಕ್ತಿಗಳ ನಡುವಣ ಅಂತರ; ದೂರಸ್ಥನು=ದೂರದಲ್ಲಿರುವವನು;

ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿ ದೂರಸ್ಥನು=ತಿಳಿದು ತಿಳಿದು ಕೆಟ್ಟ ಸಹವಾಸವನ್ನು ಮಾಡಿ, ನೀಚ ಕೆಲಸಗಳಲ್ಲಿ ತೊಡಗುವ ವ್ಯಕ್ತಿಯು ಎಂದೆಂದಿಗೂ ದೇವರಿಂದ ದೂರವಿರುತ್ತಾನೆ.

ವ್ಯಕ್ತಿಯು ಒಳ್ಳೆಯ ನಡೆನುಡಿಗಳಿಂದ ತನಗೆ ಒಳಿತನ್ನು ಮಾಡಿಕೊಳ್ಳುವುದರ ಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನೇ ದೇವರೆಂದು ನಂಬಿದ್ದ ಶಿವಶರಣಶರಣೆಯರು ಕೆಟ್ಟ ವ್ಯಕ್ತಿಗಳು ದೇವರ ಬಳಿಸಾರುವುದಕ್ಕೆ ಯೋಗ್ಯರಲ್ಲವೆಂಬ ನಿಲುವನ್ನು ಹೊಂದಿದ್ದರು.)

❖

115. ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು.

ಕುಟುಂಬದ ಆಗುಹೋಗುಗಳಿಗೆ ಗಂಡ ಹೆಂಡತಿ ಇಬ್ಬರೂ ಸಮಾನ ಹೊಣೆಗಾರರು ಮತ್ತು ಪಾಲುದಾರರು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಸತಿ=ಹೆಂಡತಿ; ಗುಣ=ಸಜ್ಜನಿಕೆ/ನಡೆನುಡಿ; ಸತಿಯ ಗುಣ=ಹೆಂಡತಿಯ ನಡೆನುಡಿ; ಪತಿ=ಗಂಡ/ಯಜಮಾನ; ನೋಡಬೇಕು +ಅಲ್ಲದೆ; ನೋಡು=ಕಾಣು/ಗಮನಿಸು; ಬೇಕು=ಅಗತ್ಯ; ನೋಡಬೇಕು= ನೋಡುವುದು ಅಗತ್ಯ; ಅಲ್ಲದೆ=ಹಾಗೆ ಮಾಡದೆ; ಪತಿಯ ಗುಣ=ಗಂಡನ ನಡೆನುಡಿ; ನೋಡಬಹುದೆ=ನೋಡುವುದು ಸರಿಯೇ; ಎಂಬರು=ಎನ್ನುತ್ತಾರೆ/ಎನ್ನುವರು;

ಸತಿಯ ಗುಣವ ಪತಿ ನೋಡಬೇಕಲ್ಲದೆ ಪತಿಯ ಗುಣವ ಸತಿ ನೋಡಬಹುದೆ ಎಂಬರು=ಕುಟುಂಬದ ಆಗುಹೋಗುಗಳಲ್ಲಿ ಹೆಂಡತಿಯು ಹೇಗೆ ನಡೆದು ಕೊಳ್ಳುತ್ತಿದ್ದಾಳೆ... ಅಂದರೆ ಮನೆಮಂದಿಯ ಜತೆಯಲ್ಲಿ ಯಾವ ರೀತಿಯಲ್ಲಿ ಹೊಂದಿಕೊಂಡು ಬಾಳುತ್ತಿದ್ದಾಳೆ... ಕುಟುಂಬದ ಒಳಿತು ಕೆಡುಕುಗಳಲ್ಲಿ/ಏರಿಳಿತಗಳಲ್ಲಿ ಹೇಗೆ ಒಂದಾಗಿದ್ದಾಳೆ... ಅವಳ ನಡೆನುಡಿಗಳಿಂದ ಕುಟುಂಬದಲ್ಲಿ ನೆಮ್ಮದಿ ನೆಲೆಸಿದೆಯೆ... ಇವೇ ಮುಂತಾದ ಸಂಗತಿಗಳೆಲ್ಲವನ್ನೂ ಒರೆಹಚ್ಚಿ ನೋಡಿ ತಿಳಿದುಕೊಳ್ಳುವುದು ಗಂಡನ ಪಾಲಿಗೆ ಅತ್ಯಗತ್ಯವಾಗಿರುತ್ತದೆ. ಆದರೆ ಹೆಂಡತಿಯು ತನ್ನ ಗಂಡನ ಬಗ್ಗೆ ಈ ರೀತಿಯಲ್ಲಿ ಆಲೋಚಿಸಿ ಗಂಡನ ಗುಣಾವಗುಣಗಳನ್ನು ಒರೆಹಚ್ಚಿ ನೋಡುವುದು ಸರಿಯಲ್ಲವೆಂದು ಜನರು ಹೇಳುತ್ತಾರೆ. ಏಕೆಂದರೆ ಮನೆಗೆ ಸೊಸೆಯಾಗಿ ಬಂದ ಹೆಣ್ಣಿನ ನಡೆನುಡಿಗಳಿಂದ ಒಂದು ಕುಟುಂಬ ಉಳಿಯುತ್ತದೆ ಇಲ್ಲವೇ ಅಳಿಯುತ್ತದೆ ಎಂಬ ಒಳಮಿಡಿತವು ಜನಸಮುದಾಯದ ಮನದಲ್ಲಿ ನೆಲೆಗೊಂಡಿದೆ.

ಈ ಬಗೆಯ ನಿಲುವನ್ನು ಜಗತ್ತಿನಲ್ಲಿರುವ ಎಲ್ಲಾ ಬಗೆಯ ಜಾತಿ/ಮತ/ ಜನಾಂಗದ ಜನಸಮುದಾಯಗಳು ಹೊಂದಿವೆ. ಇಂತಹ ನಿಲುವನ್ನು ತಳೆಯುವುದಕ್ಕೆ ಕಾರಣವಾದ ಸಂಗತಿಯನ್ನು ತಿಳಿದಾಗ ಮಾತ್ರ ಹೆಣ್ಣಿನ ಜೀವನದ ಇತಿಮಿತಿಗಳು ಗೋಚರಿಸುತ್ತವೆ.

ಮಾನವ ಸಮುದಾಯದಲ್ಲಿ ಹುಟ್ಟುವ ಮಕ್ಕಳನ್ನು ಜೀವದ ನೆಲೆಯಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ಬಗೆಗಳಲ್ಲಿ ಗುರುತಿಸಲಾಗುತ್ತದೆ. ಮನುಕುಲದ ಮುಂದುವರಿಕೆಗೆ ಈ ಎರಡು ಜೀವಿಗಳ ಕೂಡುವಿಕೆಯು ಅಗತ್ಯವಾಗಿದೆ. ಜೀವದ ನೆಲೆಯಲ್ಲಿ ಗಂಡು ಮತ್ತು ಹೆಣ್ಣಿಗೆ ಸಮಾನತೆಯಿದೆ. ಆದರೆ ಸಾಮಾಜಿಕ ನೆಲೆಯಲ್ಲಿ 'ಗಂಡು ಮೇಲು – ಹೆಣ್ಣು ಕೀಳು' ಎಂಬ ತಾರತಮ್ಯವನ್ನು ಎತ್ತಿಹಿಡಿಯಲಾಗಿದೆ. ಈ ರೀತಿಯ ಮೇಲು–ಕೀಳಿನ ತರತಮವನ್ನು ಮಾನವ ಸಮಾಜವೇ ರೂಪಿಸಿದೆ.

ಮಾನವ ಚರಿತ್ರೆಯ ಮೊದಲ ಹಂತದಲ್ಲಿ ಅಲೆಮಾರಿಯಾಗಿದ್ದ ಮಾನವ ಗುಂಪುಗಳು ಒಂದೆಡೆ ನಿಂತು ಬೇಸಾಯವನ್ನು ಮಾಡತೊಡಗಿದಾಗ ಕುಟುಂಬಗಳು ರಚನೆಗೊಂಡವು. ಈ ಕುಟುಂಬಗಳಲ್ಲಿ ತಾಯಿಯೇ ಮೇಟಿಯಾಗಿದ್ದಳು. ಹುಟ್ಟುವ ಮಕ್ಕಳು ಮತ್ತು ಉಳುಮೆ ಮಾಡುವ ಭೂಮಿಯು ಸಮುದಾಯದ ಒಟ್ಟು ಆಸ್ತಿಯಾಗಿದ್ದವು. ಮಕ್ಕಳು ತಾಯಿಯ ಹೆಸರಿನ ಕುಲಕ್ಕೆ ಸೇರಿದವರಾಗಿದ್ದು, ಆ ಕುಲದ ಹೆಸರನ್ನು ಪಡೆಯುತ್ತಿದ್ದರು. ಮಕ್ಕಳು ಹುಟ್ಟುವಲ್ಲಿ ತಂದೆಯು ಯಾರು ಎಂಬುದು ಗುರುತರವಾದ ಸಂಗತಿಯಾಗಿರಲಿಲ್ಲ. ಹೆಣ್ಣಿನ ಕಾಮದ ನಂಟಿಗೆ ಆಗ ಯಾವುದೇ ಬಗೆಯ ಕಟ್ಟುಪಾಡುಗಳು ಇರಲಿಲ್ಲ.

ಅನಂತರದ ವರುಶಗಳಲ್ಲಿ ಮಾನವ ಸಮುದಾಯದ ಸಾಮಾಜಿಕ ಜೀವನ ದಲ್ಲಿ ಅನೇಕ ಪಲ್ಲಟಗಳು ಉಂಟಾಗಿ ಉಳುವ ಭೂಮಿಯ ಒಡೆತನವು ಒಟ್ಟು ಸಮುದಾಯದಿಂದ ಕಯ್ ತಪ್ಪಿಹೋಗಿ, ಕೇವಲ ಕೆಲವೇ ಗಂಡಸರ ಹಿಡಿತಕ್ಕೆ ಸಿಲುಕಿದಾಗ, ಆಸ್ತಿಯ ಮೇಲೆ ಗಂಡಸಿನ ಒಡೆತನ ಉಂಟಾಯಿತು. ಗಂಡು ತನ್ನ ಬೀಜದಿಂದ ಹುಟ್ಟುವ ಮಕ್ಕಳಿಗೆ ಆಸ್ತಿಯ ಒಡೆತನದ ಹಕ್ಕು ದೊರೆಯಬೇಕೆಂಬ ಉದ್ದೇಶಕ್ಕೆ ಒಳಗಾಗಿ, ಹೆಣ್ಣಿನ ಮಯ್ ಮನಕ್ಕೆ ಶೀಲದ ಹೆಸರಿನಲ್ಲಿ ಬೇಡಿಯನ್ನು ತೊಡಿಸಿ, ಅವಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಹೆಣ್ಣಿನ ಕಾಮದ ನಂಟಿಗೆ ನೀತಿಯ ಕಟ್ಟುಪಾಡುಗಳನ್ನು ಹಾಕಿ, ಅವಳ ಚಲನವಲನಗಳನ್ನು ನಿಯಂತ್ರಿಸಿ, ಹೆಣ್ಣಿಗೆ ಯಾವುದೇ ಬಗೆಯ 'ಮಾತಿನ ಸ್ವಾತಂತ್ರ್ಯ–ಚಲನ ಸ್ವಾತಂತ್ರ್ಯ ಇಚ್ಚೆಯ ಸ್ವಾತಂತ್ರ್ಯ' ಇಲ್ಲದಂತೆ ಮಾಡಿ, ಅವಳನ್ನು ತನ್ನ ಗುಲಾಮಳನ್ನಾಗಿಸಿ ಕೊಂಡ. ಈ

ರೀತಿ ಆಸ್ತಿ ಹಾಗೂ ಹೆಣ್ಣಿನ ಮೇಲಿನ ವ್ಯಕ್ತಿಗತ ಒಡೆತನ ಮತ್ತು ಗಂಡು ಮೇಲುಗಯ್ಯಾಗಿರುವ ಕುಟುಂಬದ ರಚನೆಯ ಕಾರಣದಿಂದಾಗಿ, ಸಾಮಾಜಿಕ ನೆಲೆಯಲ್ಲಿ ಗಂಡು–ಹೆಣ್ಣಿನಲ್ಲಿ ಲಿಂಗ ತಾರತಮ್ಯವುಂಟಾಯಿತು.

ಮನೆಯ ಹೊರಗೆ ದುಡಿಯುವ ಗಂಡಸಿಗೆ ಆಡಳಿತದ ಗದ್ದುಗೆ, ಹಣ ಮತ್ತು ಸಾಮಾಜಿಕ ಅಂತಸ್ತು ದೊರೆತರೆ, ಮನೆಯ ಒಳಗೆ ದುಡಿಯುವ ಹೆಣ್ಣು ಇವೆಲ್ಲದರಿಂದ ವಂಚಿತಳಾದಳು. ಅವಳ ದೇಹವು ನಿಸರ್ಗ ನಿಯಮದಂತೆ ಮುಟ್ಟು, ಬಸಿರು, ಹೆರಿಗೆ ಮತ್ತು ಮಕ್ಕಳನ್ನು ಸಾಕಿ ಸಲಹಿ ಬೆಳೆಸುವುದರಲ್ಲಿ ಜರ್ಜರಿತವಾಯಿತು. ಹೆಣ್ಣು ತನ್ನ ಮಯ್ ಮನಗಳ ಅಗತ್ಯ ಮತ್ತು ಬಯಕೆಗಳನ್ನು ಈಡೇರಿಸಿಕೊಳ್ಳಲು ಗಂಡಸಿನ ಮುಂದೆ ಕಯ್ ಒಡ್ಡಿ ಬಾಳುವಂತಾಯಿತು. ಮನೆಯೊಳಗೆ ಅಡುಗೆಯ ವಸ್ತುಗಳನ್ನು ಬೇಯಿಸಿ ತಿನಸು ಉಣಿಸುಗಳನ್ನು ತಯಾರಿಸುವ, ಮನೆಯವರೆಲ್ಲರಿಗೂ ಅದನ್ನು ಉಣಬಡಿಸುವ, ಅವರು ಚೆಲ್ಲಿದ ಎಂಜಲನ್ನು ಎತ್ತುವ, ಪಾತ್ರೆಗಳ ಮುಸುರೆಯನ್ನು ತೊಳೆಯುವ, ಮನೆಯೊಳಗೆ ಬೀಳುವ ಕಸಕೊಳೆಯನ್ನು ಗುಡಿಸಿ ತೆಗೆಯುವ ಮತ್ತು ಮಕ್ಕಳನ್ನು ಹೆರುವ ಯಂತ್ರವಾದಳು.

ಜಗತ್ತಿನ ಎಲ್ಲಾ ನುಡಿ ಸಮುದಾಯಗಳಲ್ಲಿಯೂ ಹೆಣ್ಣಿನ ಸಾಮಾಜಿಕ ಅಂತಸ್ತು ಗಂಡಿಗಿಂತ ಕಡಿಮೆ ಮಟ್ಟದಲ್ಲಿದೆ. ಈ ಎಲ್ಲಾ ಕಾರಣಗಳಿಂದಾಗಿ ಹೆಣ್ಣನ್ನು 'ಸೆಕೆಂಡ್ ಸೆಕ್ಸ್' ಎಂದು ಗುರುತಿಸುತ್ತಾರೆ. ಅಂದರೆ, ಮಾನವ ಸಮಾಜದಲ್ಲಿ ಗಂಡಸು ಮೊದಲ ದರ್ಜೆಯ ಪ್ರಜೆಯಾದರೆ, ಹೆಂಗಸು ಎರಡನೆ ದರ್ಜೆಯ ಪ್ರಜೆಯಾಗಿದ್ದಾಳೆ. ಇತ್ತೀಚಿನ ವರುಶಗಳಲ್ಲಿ ಹೆಣ್ಣು ವಿದ್ಯಾವಂತೆಯಾಗಿ, ಉದ್ಯೋಗವನ್ನು ಪಡೆದು, ಹಣಕಾಸಿನಲ್ಲಿ ಸ್ವಾವಲಂಬಿಯಾಗಿದ್ದರೂ, ಕುಟುಂಬದಲ್ಲಿ ಅವಳ ಅಂತಸ್ತು ಗಂಡನಿಗಿಂತ ಕಡಿಮೆಯಾಗಿರುತ್ತದೆ. ಆದುದರಿಂದಲೇ ಕುಟುಂಬದಲ್ಲಿ ನಡೆಯುವ ಯಾವುದೇ ಬಗೆಯ ಆಚರಣೆಗಳಲ್ಲಿ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಗಂಡಸರ ಮಾತಿಗೆ ಇರುವಷ್ಟು ಬೆಲೆಯು ಹೆಂಗಸರ ಮಾತಿಗೆ ಇರುವುದಿಲ್ಲ. ಎಲ್ಲ ಬಗೆಯ ಮಾತುಕತೆಗಳಲ್ಲಿಯೂ ಕೊನೆಯ ಮಾತು ಗಂಡಸರದೇ ಆಗಿರುತ್ತದೆ.

ಈ ರೀತಿ ಗಂಡನ ಅಡಿಯಾಳಾಗಿ ಬಾಳುತ್ತಿರುವ ಹೆಂಡತಿಯ ಒಳಿತು ಕೆಡುಕಿನ ನಡೆನುಡಿಗಳನ್ನು ಒರೆಹಚ್ಚಿ ನೋಡುವ ಹಕ್ಕು ಗಂಡನಿಗೆ ಇದೆಯೇ ಹೊರತು, ತನ್ನ ಒಡೆಯ/ಯಜಮಾನನಾಗಿರುವ ಗಂಡನ ನಡೆನುಡಿಯಲ್ಲಿ ಕಂಡುಬರುವ

ಯಾವುದೇ ಬಗೆಯ ತಪ್ಪುಗಳನ್ನು ಹೆಂಡತಿಯು ಬೆರಳು ಮಾಡಿ ತೋರಿಸುವಂತಿಲ್ಲ, ಕಟು ನುಡಿಗಳಿಂದ ಎತ್ತಿ ಆಡುವಂತಿಲ್ಲ ಎಂಬ ನಿಲುವನ್ನು ಬಹುತೇಕ ಮಂದಿ ಹೊಂದಿದ್ದಾರೆ;

ಸತಿ+ಇಂದ; ಬಂದ=ಉಂಟಾದ; ಸೋಂಕು=ಅಂಟು ಜಾಡ್ಯ; ಕೇಡು+ಅಲ್ಲವೆ; ಕೇಡು=ಅಪಾಯ/ಆಪತ್ತು/ಹಾನಿ/ನಾಶ; ಅಲ್ಲವೆ=ತಗಲುವುದಿಲ್ಲವೇ/ಹರಡುವುದಿಲ್ಲವೆ; ಪತಿ+ಇಂದ;

ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ=ಮಯ್ ಮನಗಳ ನಂಟನ್ನು ಹೊಂದಿರುವ ಗಂಡ ಹೆಂಡತಿಯಲ್ಲಿ ಒಬ್ಬರಿಗೆ ಕಾಯಿಲೆ ಬಂದರೂ ಅದು ಮತ್ತೊಬ್ಬರಿಗೆ ಬಹುಬೇಗ ಅಂಟಿಕೊಂಡು, ಇಬ್ಬರಿಗೂ ಕೇಡು ಉಂಟಾಗುತ್ತದೆ; ಇದೇ ಬಗೆಯಲ್ಲಿ ಗಂಡ–ಹೆಂಡತಿಯಲ್ಲಿ ಯಾರೊಬ್ಬರು ಕೆಟ್ಟ ನಡೆ ನುಡಿಗಳನ್ನು ಹೊಂದಿದ್ದರೂ, ಅದು ಕುಟುಂಬದ ಮೇಲೆ ಕೆಟ್ಟ ಪರಿಣಾಮವನ್ನು ಬೀರಿ, ಇಬ್ಬರ ಜೀವನಕ್ಕೂ ಹಾನಿಯನ್ನುಂಟುಮಾಡುವುದಲ್ಲದೇ, ಇಡೀ ಕುಟುಂಬದ ನಾಶಕ್ಕೆ ಕಾರಣವಾಗುತ್ತದೆ. ವಚನಕಾರ ಡಕ್ಕೆ ಬೊಮ್ಮಣ್ಣನು ಈ ಪ್ರಸಂಗವನ್ನು ಒಂದು ರೂಪಕವಾಗಿ ಚಿತ್ರಿಸುತ್ತಾ, ಹೆಣ್ಣಿನ ಗುಣವನ್ನು ಮಾತ್ರ ಒರೆಹಚ್ಚಿ ನೋಡುತ್ತಿರುವ/ಕುಟುಂಬದ ಅಳಿವು ಉಳಿವಿಗೆ ಹೆಣ್ಣೊಬ್ಬಳನ್ನೇ ಹೊಣೆಗಾತಿಯನ್ನಾಗಿ ಮಾಡಿ ನಿಂದಿಸುತ್ತಿರುವ ಸಾಮಾಜಿಕ ನಿಲುವನ್ನು ಕಟುವಾಗಿ ವಿಡಂಬಿಸುತ್ತ, ಕುಟುಂಬವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವಂತಹ ಜವಾಬ್ದಾರಿಯು ಗಂಡ–ಹೆಂಡತಿಯಲ್ಲಿ ಸಮಾನವಾಗಿ ಇರಬೇಕು ಎಂಬುದನ್ನು ಹೇಳುತ್ತಿದ್ದಾನೆ;

ಒಂದು+ಅಂಗದ; ಅಂಗ=ಮಯ್/ದೇಹ/ಶರೀರ; ಕಣ್ಣು=ನೋಡಿ ತಿಳಿಯಲು ನೆರವಾಗುವ ಇಂದ್ರಿಯ; ಉಭಯ+ಅಲ್ಲಿ; ಉಭಯ= ಎರಡು; ಉಭಯದಲ್ಲಿ=ಎರಡರಲ್ಲಿ/ಎರಡು ಕಣ್ಣುಗಳಲ್ಲಿ; ಹಿಂಗಲು+ಇಕ್ಕೆ; ಹಿಂಗು=ಸೊರಗು/ಕಾಣದಂತಾಗು; ಹಿಂಗಲಿಕ್ಕೆ=ಕಾಣದಂತಾದರೆ/ನೋಟದ ಕಸುವನ್ನು ಕಳೆದು ಕೊಂಡರೆ/ಕಣ್ಣಿನ ಗುಡ್ಡೆಯು ಹಾಳಾದರೆ; ಭಂಗ+ಆರಿಗೆ+ಎಂಬುದ; ಭಂಗ=ತೊಂದರೆ/ಹಾನಿ; ಆರು=ಯಾರು; ಆರಿಗೆ=ಯಾರಿಗೆ/ಯಾವ ವ್ಯಕ್ತಿಗೆ; ಎಂಬುದ=ಎನ್ನುವುದನ್ನು; ತಿಳಿ+ಅಲ್ಲಿಯೆ; ತಿಳಿ=ಗೊತ್ತುಮಾಡಿಕೊಳ್ಳುವುದು; ತಿಳಿದಲ್ಲಿಯೆ=ಗೊತ್ತುಮಾಡಿಕೊಂಡಾಗ/ಮನದಟ್ಟು ಮಾಡಿಕೊಂಡಾಗ;

ಕಾಲ+ಅಂತಕ; ಕಾಲ=ಸಮಯ/ವೇಳೆ; ಅಂತಕ=ಯಮ/ಸಾವಿನ ದೇವತೆ;

ಕಾಲಾಂತಕ=ಹುಟ್ಟಿದ ಸಕಲಜೀವಿಗಳ ಪ್ರಾಣವನ್ನು/ಉಸಿರನ್ನು ಒಂದಲ್ಲ ಒಂದು ದಿನ ಕೊಂಡೊಯ್ಯುವ ದೇವತೆಯಾದ ಯಮ; ಭೀಮೇಶ್ವರಲಿಂಗ=ಈಶ್ವರ/ದೇವರು; **ಕಾಲಾಂತಕ ಭೀಮೇಶ್ವರಲಿಂಗ**=ಡಕ್ಕೆಯ ಬೊಮ್ಮಣ್ಣನ ವಚನಗಳ ಅಂಕಿತನಾಮ;

ಸಲೆ=ನಿಜವಾಗಿ; ಸಂದು+ಇತ್ತು; ಸಂದು=ಕೂಡು ಉಂಟಾಗು; ಸಂದಿತ್ತು=ಒದಗಿರುವುದು/ಕೂಡಿರುವುದು;

ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ ಭಂಗವಾರಿಗೆಂಬುದ ತಿಳಿದಲ್ಲಿಯೆ ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು=ಒಬ್ಬ ವ್ಯಕ್ತಿಯ ಮಯ್ಯಲ್ಲಿರುವ ಎರಡು ಕಣ್ಣುಗಳಲ್ಲಿ ಯಾವುದೇ ಒಂದು ಕಣ್ಣು ಹಾಳಾದರೂ, ಆ ವ್ಯಕ್ತಿಯ ನೋಟದ ಕಸುವು ಕುಗ್ಗುವಂತೆ ಒಂದು ಕುಟುಂಬದಲ್ಲಿ ಗಂಡ ಇಲ್ಲವೇ ಹೆಂಡತಿ ಈ ಇಬ್ಬರಲ್ಲಿ ಒಬ್ಬರು ಕೆಟ್ಟ ನಡೆನುಡಿಯುಳ್ಳವರಾದರೂ, ಕುಟುಂಬದ ಬೆಳವಣಿಗೆಗೆ ಹಾನಿಯುಂಟಾಗುತ್ತದೆ ಎಂಬ ವಾಸ್ತವವನ್ನು ಅರಿತುಕೊಂಡು ಗಂಡ ಹೆಂಡತಿಯು ಬಾಳುವಂತಾದಾಗ ಮಾತ್ರ ಕುಟುಂಬ ಉಳಿದು ಬೆಳೆದು ಬಾಳುತ್ತದೆ. ಗಂಡ ಹೆಂಡತಿಯು ಪರಸ್ಪರ ಒಬ್ಬರನ್ನು ಮತ್ತೊಬ್ಬರು ಅರಿತುಕೊಂಡು ಒಳ್ಳೆಯ ನಡೆನುಡಿಗಳಿಂದ ಕೂಡಿ ಹೊಣೆಗಾರಿಕೆಯಿಂದ ಬಾಳುವ ರೀತಿಯು ದೇವರ ಮೆಚ್ಚುಗೆಗೆ ಪಾತ್ರವಾಗುತ್ತದೆ ಎನ್ನುವ ತಿರುಳನ್ನು ಈ ರೂಪಕದ ನುಡಿಗಳು ಸೂಚಿಸುತ್ತಿವೆ.

❖

28. ತುರುಗಾಹಿ ರಾಮಣ್ಣ

ಕಸುಬು: ಊರಿನ ದನಗಳನ್ನು ಮುಂಜಾನೆ ಕೊಂಡೊಯ್ದು ಸಂಜೆಯ ತನಕ ಮೇಯಿಸುತ್ತಿದ್ದು ಮತ್ತೆ ಅವನ್ನು ಅವುಗಳ ಒಡೆಯರ ದೊಡ್ಡಿಗೆ ತಂದು ಕೂಡುವುದು. ಈ ಕಸುಬಿನಿಂದ ಬಂದ ಸಂಪಾದನೆಯಿಂದ ಜೀವನವನ್ನು ನಡೆಸುತ್ತಿದ್ದನು.

(ತುರುಗಾಹಿ=ತುರು+ಕಾಹಿ; ತುರು=ಹಸು/ದನ/ಗೋವು; ಕಾಪು> ಕಾಹು; ಕಾಪು/ಕಾಹು=ಕಾಯುವಿಕೆ/ಪಹರೆ/ಎಚ್ಚರದಿಂದ ಕಾಪಾಡುವುದು; ಕಾಹಿ=ಕಾವಲು ಕಾಯುವವನು; ತುರುಗಾಹಿ= ದನಗಳನ್ನು ಮೇಯಿಸುವವನು ಮತ್ತು ಕಾಪಾಡುವವನು/ದನ ಕಾಯುವವನು)

ದೊರೆತಿರುವ ವಚನಗಳು : 46

ವಚನಗಳ ಅಂಕಿತ ನಾಮ : ಗೋಪತಿನಾಥ ವಿಶ್ವೇಶ್ವರಲಿಂಗ

116. ಅಯ್ಯಾ ಏನನಹುದೆಂಬೆ
ಏನನಲ್ಲಾ ಎಂಬೆ
ಕಾಯವುಳ್ಳನ್ನಕ್ಕ ಕರ್ಮ ಬಿಡದು
ಜೀವವುಳ್ಳನ್ನಕ್ಕ ಕಾರ್ಪಣ್ಯ ಕೆಡದು
ಆರ ಕೇಳಿ ಆರಿಗೆ ಹೇಳಿಹೆನೆಂದಡೂ
ಭಾವದ ಭ್ರಮೆ ಬಿಡದು
ಮಹಾಸಮುದ್ರವನೀಜುವವನಂತೆ ಕರ ಕಾಲು ಆಡುವನ್ನಕ್ಕ
ಜೀವಭ್ರಮೆ ನಿಂದಲ್ಲಿ ನಿಂದಿತ್ತು

ಭಾವಭ್ರಮೆ ಒಂದನರಿತು ಒಂದನರಿದೆಹೆನೆಂಬನ್ನಕ್ಕ
ಬಂದಿತ್ತು ದಿನ ಅಂಗವ ಹರಿವುದಕ್ಕೆ
ಈ ಸಂದೇಹದ ಸಂದಿಯಲ್ಲಿ ಕೆಡಹದೆ
ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರ ಲಿಂಗ.

'ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ; ಯಾವುದು ನೀತಿ–ಯಾವುದು ಅನೀತಿ' ಎಂಬುದನ್ನು ಗೆರೆ ಹೊಡೆದಂತೆ ವಿಂಗಡಿಸಿ ನೋಡಿ ತಿಳಿಯಲಾಗದೆ ಜೀವನದ ಉದ್ದಕ್ಕೂ ವ್ಯಕ್ತಿಯು ಕಂಗಾಲಾಗಿ ತೊಳಲಾಡುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಅಯ್ಯಾ=ಗಂಡಸರನ್ನು ಒಲವು ನಲಿವುಗಳಿಂದ ಮಾತನಾಡಿಸುವಾಗ ಬಳಸುವ ಪದ; ಏನ್+ಅನ್+ಅಹುದು+ಎಂಬೆ; ಏನ್=ಯಾವುದು; ಅನ್=ಅನ್ನು; ಏನನ್=ಯಾವುದೇ ಒಂದು ಸಂಗತಿಯನ್ನು; ಅಹುದು=ನಿಜ/ವಾಸ್ತವ; ಎಂಬೆ=ಹೇಳುವೆ/ನುಡಿಯುವೆ; ಏನ್+ಅನ್+ಅಲ್ಲಾ; ಅಲ್ಲ=ಆ ರೀತಿಯಲ್ಲಿ ಇಲ್ಲ;

ಏನನಹುದೆಂಬೆ ಏನನಲ್ಲಾ ಎಂಬೆ=ಮಾನವ ಸಮುದಾಯದ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಜಾತಿ/ಮತ/ದೇವರುಗಳ ಬಗ್ಗೆ ಹತ್ತಾರು ಬಗೆಯ ನಿಲುವುಗಳು ಮತ್ತು ನೂರಾರು ಬಗೆಯ ಆಚರಣೆಗಳು ಹಾಗೂ ಸಾವಿರಾರು ಬಗೆಯ ಸಾಮಾಜಿಕ ಕಟ್ಟುಪಾಡುಗಳಿವೆ. ಪ್ರತಿಯೊಂದು ಜಾತಿ/ಮತದ ಸಮುದಾಯದವರು 'ತಮ್ಮ ಜಾತಿ ಮತ್ತೊಂದಕ್ಕಿಂತ ಮೇಲು/ತಮ್ಮ ಮತ ಮತ್ತೊಂದಕ್ಕಿಂತ ಉತ್ತಮ/ತಮ್ಮ ದೇವರು ಮತ್ತೊಂದು ದೇವರಿಗಿಂತ ದೊಡ್ಡವನು' ಎಂಬ ಗ್ರಹಿಕೆ/ನಂಬಿಕೆಯನ್ನು ಹೊಂದಿದ್ದಾರೆ. ಇಂತಹ ನಿಲುವು/ಆಚರಣೆ/ಕಟ್ಟುಪಾಡುಗಳಲ್ಲಿ ಯಾವುದನ್ನು ಸರಿ ಎಂದು ಒಪ್ಪಿಕೊಳ್ಳಲಿ... ಯಾವುದನ್ನು ನಿರಾಕರಿಸಲಿ;

ಕಾಯ+ಉಳ್ಳ್+ಅನ್ನಕ್ಕ; ಕಾಯ=ಮಯ್/ದೇಹ; ಉಳ್/ಉಳ್ಳ್=ಇರು; ಅನ್ನಕ್ಕ=ತನಕ/ವರೆಗೆ; ಉಳ್ಳನ್ನಕ್ಕ=ಇರುವ ತನಕ; ಕರ್ಮ=ಕೆಲಸ/ಕ್ರಿಯೆ; ಬಿಡು=ತೊರೆ/ತ್ಯಜಿಸು; ಬಿಡದು= ಬಿಡುವುದಿಲ್ಲ/ತೊರೆಯುವುದಿಲ್ಲ;

ಕಾಯವುಳ್ಳನ್ನಕ್ಕ ಕರ್ಮ ಬಿಡದು=ವ್ಯಕ್ತಿಯು ದೇಹವನ್ನು ಹೊಂದಿರುವ ತನಕ, ಒಂದಲ್ಲ ಒಂದು ಬಗೆಯ ದುಡಿಮೆಯಲ್ಲಿ ತೊಡಗಿರುತ್ತಾನೆ;

ಜೀವ+ಉಳ್ಳ್+ಅನ್ನಕ್ಕ; ಜೀವ=ಪ್ರಾಣ/ಉಸಿರು; ಕಾರ್ಪಣ್ಯ=ಬಡತನ/

ದರಿದ್ರತನ/ ಬಹುಬಗೆಯ ಸಂಕಟ/ವೇದನೆ; ಕೆಡು=ಅಳಿ/ನಾಶವಾಗು; ಕೆಡದು=ಕೆಡುವುದಿಲ್ಲ/ಇಲ್ಲವಾಗದು/ಕಳೆದುಹೋಗದು;

ಜೀವವುಳ್ಳನ್ನಕ್ಕ ಕಾರ್ಪಣ್ಯ ಕೆಡದು=ವ್ಯಕ್ತಿಯು ಜೀವಂತವಾಗಿರುವ ತನಕ ಬಹುಬಗೆಯ ನೋವು/ಸಂಕಟ/ವೇದನೆಯು ಇದ್ದೇ ಇರುತ್ತದೆ;

ಆರ್+ಅ; ಆರ್=ಯಾರು; ಆರ=ಯಾರನ್ನು; ಕೇಳಿ=ಇತರರು ಆಡಿದ ಮಾತು ಗಳನ್ನು ಆಲಿಸಿ/ವಿಚಾರಿಸಿ; ಆರಿಗೆ=ಯಾರಿಗೆ; ಹೇಳ್+ ಇಹೆನ್+ ಎಂದಡೂ; ಹೇಳು=ತಿಳಿಸು/ವಿವರಿಸು; ಇಹೆನ್=ಇದ್ದೇನೆ; ಎಂದಡೂ=ಎಂದರೂ; ಭಾವ=ಮನದಲ್ಲಿ ತುಡಿಯುವ ಕೋಪ/ತಾಪ/ಒಲವು/ನಲಿವು/ಹತಾಶೆ/ಆಕ್ರೋಶ ಮುಂತಾದ ಹತ್ತಾರು ಬಗೆಯ ಒಳಮಿಡಿತಗಳು; ಭ್ರಮೆ=ಇಲ್ಲದ್ದನ್ನು ಇದೆಯೆಂಬ/ ಇರುವುದನ್ನು ಇಲ್ಲವೆಂಬ ಒಳಮಿಡಿತಗಳಿಂದ ಕೂಡಿರುವ ಮನಸ್ಸು/ತಪ್ಪು ಗ್ರಹಿಕೆ; ಭಾವದ ಭ್ರಮೆ/ಭಾವಭ್ರಮೆ=ತನ್ನನ್ನೂ ಒಳಗೊಂಡಂತೆ ಸಹಮಾನವರ ಮತ್ತು ಸಮಾಜದ ಬಗ್ಗೆ ವ್ಯಕ್ತಿಯು ಹೊಂದಿರುವ ನೂರೆಂಟು ಬಗೆಯ ಒಳಮಿಡಿತಗಳು;

ಆರ ಕೇಳಿ ಆರಿಗೆ ಹೇಳಿಹೆನೆಂದಡೂ ಭಾವದ ಭ್ರಮೆ ಬಿಡದು=ಇತರರನ್ನು ಕೇಳಿ/ ವಿಚಾರಿಸಿ ತಿಳಿದುಕೊಂಡಿರುವ ವಾಸ್ತವದ ಸಂಗತಿಗಳನ್ನು, ಬೇರೆಯವರಿಗೆ ಮತ್ತೆ ಹೇಳುತ್ತಿದ್ದರೂ ವ್ಯಕ್ತಿಯು ತನ್ನಲ್ಲಿಯೇ ಊಹಿಸಿಕೊಂಡಿರುವ ಒಳಮಿಡಿತಗಳು ಮಾತ್ರ ಮನದೊಳಗೆ ಇದ್ದೇ ಇರುತ್ತವೆ;

ಮಹಾ+ಸಮುದ್ರ+ಅನ್+ಈಜುವ+ಅವನನ್+ಅಂತೆ; ಮಹಾ= ದೊಡ್ಡದಾಗಿ ರುವ/ವಿಸ್ತಾರವಾಗಿರುವ; ಸಮುದ್ರ=ಕಡಲು/ಸಾಗರ; ಈಜು=ನೀರಿನಲ್ಲಿ ಕಯ್ ಕಾಲುಗಳನ್ನು ಆಡಿಸುತ್ತ, ನೀರಿನ ಅಲೆಗಳನ್ನು ಸೀಳಿಕೊಂಡು, ನೀರಿನಲ್ಲಿ ಮುಳುಗಿ ಹೋಗದೆ, ತೇಲುತ್ತಾ ಮುಂದೆ ಮುಂದೆ ಸಾಗುವ ಕಲೆ; ಈಜುವ= ಈಜುತ್ತಿರುವ; ಅವನನ್=ವ್ಯಕ್ತಿಯನ್ನು; ಅಂತೆ=ಹಾಗೆ; ಕರ=ಕಯ್/ಹಸ್ತ; ಕಾಲು=ಪಾದ/ಅಡಿ; ಆಡುವ+ಅನ್ನಕ್ಕ; ಆಡು=ಅಲುಗು/ಚಲಿಸು; **ಕರ ಕಾಲು ಆಡುವನ್ನಕ್ಕ**=ನಡೆದಾಡಲು ಕೆಲಸಮಾಡಲು ಕಯ್ ಕಾಲುಗಳಲ್ಲಿ ಕಸುವು ಇರುವ ತನಕ;

ಜೀವಭ್ರಮೆ=ಜೀವವನ್ನು ಉಳಿಸಿಕೊಳ್ಳಬೇಕೆಂಬ ಕಾತರ; ನಿಂತು=ಒಂದು ಕಡೆ ನಿಲ್ಲುವುದು; ನಿಂದಲ್ಲಿ=ನಿಂತ ಕಡೆಯಲ್ಲಿ; ನಿಂತು+ಇತ್ತು;

ಮಹಾಸಮುದ್ರವನೀಜುವವನಂತೆ ಕರ ಕಾಲು ಆಡುವನ್ನಕ್ಕ ಜೀವಭ್ರಮೆ ನಿಂದಲ್ಲಿ ನಿಂದಿತ್ತು=ದೊಡ್ಡದಾದ ಸಾಗರದಲ್ಲಿ ಈಜುತ್ತಿರುವ ವ್ಯಕ್ತಿಯು ತನ್ನ ಜೀವದ ಉಳಿವಿಗಾಗಿ ಪ್ರತಿಗಳಿಗೆಯಲ್ಲೂ ಕಯ್ ಕಾಲುಗಳನ್ನು ಒಂದೇ ಸಮನೆ

ಆಡಿಸುತ್ತಿರುವಂತೆ ಬದುಕಿನ ಉದ್ದಕ್ಕೂ ತನ್ನ ಜೀವದ ಮೇಲಣ ಮೋಹ/ ಒಳಮಿಡಿತಗಳು ವ್ಯಕ್ತಿಯಲ್ಲಿ ನೆಲೆಗೊಂಡಿರುತ್ತವೆ;

ಒಂದ್+ಅನ್+ಅರಿತು; ಅರಿ=ತಿಳಿ/ಕಲಿ; ಅರಿತು=ತಿಳಿದುಕೊಂಡು; ಒಂದು+ ಅನ್+ಅರಿದೆಹೆನ್+ಎಂಬ+ಅನ್ನಕ್ಕ; ಅರಿದೆಹೆನ್=ತಿಳಿದುಕೊಂಡೆನು/ಅರಿತು ಕೊಂಡೆನು; ಎಂಬ=ಎನ್ನುವ; ಎಂಬನ್ನಕ್ಕ=ಎನ್ನುತ್ತಿದ್ದಂತೆಯೇ/ ಅಂದುಕೊಳ್ಳುತ್ತಿದ್ದಂತೆಯೇ;

ಬಂದು+ಇತ್ತು; ಬಂದು=ಒದಗು/ಉಂಟಾಗು; ಅಂಗ=ಮಯ್/ದೇಹ/ ಶರೀರ; ಹರಿ=ಕೀಳು/ಕತ್ತರಿಸು/ತೀರು; ಅಂಗವ ಹರಿವುದಕ್ಕೆ=ದೇಹದೊಳಗಿನ ಪ್ರಾಣವನ್ನು ತೆಗೆಯುವುದಕ್ಕೆ;

ಭಾವಭ್ರಮೆ ಒಂದನರಿತು ಒಂದನರಿದೆಹೆನೆಂಬನ್ನಕ್ಕ ಬಂದಿತ್ತು ದಿನ ಅಂಗವ ಹರಿವುದಕ್ಕೆ=ಮನದೊಳಗೆ ತುಡಿಯುವ ನೂರೆಂಟು ಬಗೆಯ ಒಳಮಿಡಿತಗಳಲ್ಲಿ ಯಾವುದು ವಾಸ್ತವ... ಯಾವುದು ವಾಸ್ತವವಲ್ಲ ಎಂಬುದನ್ನು ಅರಿತುಕೊಂಡೆನು ಎನ್ನುವ ಹಂತದಲ್ಲಿಯೇ ಒಂದು ದಿನ ದೇಹದಲ್ಲಿನ ಜೀವ ಹೋಗಿ ಸಾವುಂಟಾಗುತ್ತದೆ;

ಸಂದೇಹ=ಅನುಮಾನ/ಸಂಶಯ; ಸಂದಿ+ಅಲ್ಲಿ; ಸಂದಿ=ಬಿರುಕು; ಕೆಡಹು=ಕೆಳಕ್ಕೆ ಬೀಳಿಸು/ತಳ್ಳು; ನಿಜದ+ಅಂಗವ; ನಿಜ=ದಿಟ/ಸತ್ಯ/ವಾಸ್ತವ; ಅಂಗ=ರೀತಿ/ಕ್ರಮ; **ನಿಜದಂಗ**=ಒಂದು ಕಡೆ ನಿಸರ್ಗ ಸಹಜವಾದ ಹಸಿವು ಮತ್ತು ಕಾಮ, ಮತ್ತೊಂದು ಕಡೆ ಮಾನವನೇ ಕಟ್ಟಿಕೊಂಡಿರುವ ಸಾಮಾಜಿಕ ಕಟ್ಟುಪಾಡು ಹಾಗೂ ಕಲ್ಪಿಸಿಕೊಂಡಿರುವ ನಂಬಿಕೆಗಳ ನಡುವೆ ವ್ಯಕ್ತಿಯ ಜೀವನ ನಡೆಯುತ್ತಿದೆ ಎಂಬ ವಾಸ್ತವ;

ತೋರು=ಕಾಣುವಂತೆ ಮಾಡು; ಗೋಪತಿನಾಥ ವಿಶ್ವೇಶ್ವರಲಿಂಗ=ಈಶ್ವರ/ ದೇವರು/ತುರುಗಾಹಿ ರಾಮಣ್ಣನ ವಚನಗಳ ಅಂಕಿತನಾಮ;

ಈ ಸಂದೇಹದ ಸಂದಿಯಲ್ಲಿ ಕೆಡಹದೆ ನಿಜದಂಗವ ತೋರು=ಇಬ್ಬಗೆಯ ತೊಳಲಾಟದಲ್ಲಿ ಸಿಲುಕಿರುವ ಮನಸ್ಸಿಗೆ ಬದುಕಿನಲ್ಲಿ ಯಾವುದು ವಾಸ್ತವ ಎಂಬುದನ್ನು ಅರಿತು ಬಾಳುವಂತೆ ಮಾಡು ಎಂದು ದೇವರಲ್ಲಿ ಮೊರೆಯಿಡುವುದನ್ನು ಈ ನುಡಿಗಳು ಸೂಚಿಸುತ್ತಿವೆ.)

❖

29. ನಗೆಯ ಮಾರಿತಂದೆ

ಕಸುಬು: ಜನರನ್ನು ನಕ್ಕುನಲಿಯುವಂತೆ ಮಾಡುವ ಕಲೆಯಲ್ಲಿ ನಿಪುಣತೆ
ದೊರೆತಿರುವ ವಚನಗಳು : 99
ವಚನಗಳ ಅಂಕಿತನಾಮ: ಆತುರವೈರಿ ಮಾರೇಶ್ವರ

117. ಎನ್ನ ಕೈಯಲ್ಲಿ ಕೊಟ್ಟುದ ದೇವರೆಂದಿದ್ದೆ
ಇದು ಮೆಲ್ಲಮೆಲ್ಲನೆ ಕಲ್ಲಾಗಿ ಬರುತ್ತಿದೆ
ಇದ ನಾನೊಲ್ಲೆ
ಬಲ್ಲವರು ಹೇಳಿ
ಉಂಬಡೆ ಬಾಯಿಲ್ಲ
ನೋಡುವಡೆ ಕಣ್ಣಿಲ್ಲ
ಎನ್ನ ಬಡತನಕ್ಕೆ ಬೇಡುವಡೆ ಏನೂ ಇಲ್ಲ
ಆತುರ ವೈರಿ ಮಾರೇಶ್ವರಾ.

ಮಾನವನ ಬದುಕಿನಲ್ಲಿ ಬಡತನದಿಂದ ಉಂಟಾಗುವ ನೋವು, ಅಪಮಾನ ಮತ್ತು ಸಂಕಟಗಳ ನಿವಾರಣೆಯು ದೇವರಿಂದ ಆಗುವುದಿಲ್ಲ. ಏಕೆಂದರೆ ದೇವರು ಎಂಬುವನು ಮಾನವನ ಮನದ ಕಲ್ಪನೆಯಿಂದ ಮೂಡಿರುವ ವ್ಯಕ್ತಿ ಇಲ್ಲವೇ ಶಕ್ತಿಯೇ ಹೊರತು ವಾಸ್ತವದಲ್ಲಿ ಇಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಕಾರ್ಯ ಕಾರಣದ ನೆಲೆಯಲ್ಲಿ ಒರೆಹಚ್ಚಿ ನೋಡಲಾಗಿದೆ.

‘ಕಾರ್ಯ ಕಾರಣದ ನೆಲೆ’ ಎಂದರೆ ನಾವು ಹುಟ್ಟಿ ಬೆಳೆದು ಬಾಳಿ ಸಾಯುತ್ತಿರುವ ಈ ಲೋಕದಲ್ಲಿ ಯಾವುದೇ ಒಂದು ಕಾರ್ಯ ನಡೆಯಬೇಕಾದರೆ, ಅದಕ್ಕೆ ಕಾರಣವಾಗುವ ವ್ಯಕ್ತಿ/ಜೀವಿ/ವಸ್ತುಗಳು ಇರಲೇಬೇಕು ಮತ್ತು ಅವುಗಳ ನಡುವೆ ನಂಟು ಉಂಟಾಗಲೇಬೇಕು.

ನಮ್ಮ ಕಣ್ಣ ಮುಂದಿನ ನಿಸರ್ಗದಲ್ಲಿ ನಿತ್ಯನಿರಂತರವಾಗಿ ನಡೆಯುತ್ತಿರುವ ಪ್ರತಿಯೊಂದು ಕ್ರಿಯೆಗೆ ಎರಡು ಇಲ್ಲವೇ ಅನೇಕ ವಸ್ತುಗಳ ಕೂಡುವಿಕೆ ಕಾರಣವಾಗಿರುತ್ತದೆ. ಮಾನವ ಸಮುದಾಯದ ಬದುಕಿನಲ್ಲಿ ಉಂಟಾಗುತ್ತಿರುವ ಆಗುಹೋಗುಗಳಿಗೆ ವ್ಯಕ್ತಿ/ಜೀವಿ/ವಸ್ತುಗಳ ನಡುವಣ ನಂಟು ಮತ್ತು ಮಾನವನ ನಡೆನುಡಿಗಳೇ ಕಾರಣವಾಗಿರುತ್ತವೆ.

ಮಾನವರ ಬದುಕಿನಲ್ಲಿ ಮತ್ತು ನಿಸರ್ಗದ ಸಂಗತಿಗಳಲ್ಲಿ ಕಾರ್ಯ ಕಾರಣಗಳ ನಂಟನ್ನು ನೇರವಾಗಿ ಕಾಣಲಾಗುತ್ತದೆ. ಆದರೆ ಇದೇ ರೀತಿಯಲ್ಲಿ ಮಾನವ ಮತ್ತು ದೇವರ ನಡುವಣ ನಂಟಿನಲ್ಲಿ ಯಾವುದೇ ಬಗೆಯ ಕಾರ್ಯ ಕಾರಣಗಳನ್ನು ಕಾಣಲಾಗದು ಎಂಬುದು ವಚನಕಾರನ ನಿಲುವು.

(ಎನ್ನ=ನನ್ನ; ಕೈ+ಅಲ್ಲಿ; ಕೈ=ಕರ/ಹಸ್ತ; ಕೊಟ್ಟುದ=ಕೊಟ್ಟಿರುವುದನ್ನು; ದೇವರು+ಎಂದು+ಇದ್ದೆ; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು ಇಲ್ಲವೇ ಶಕ್ತಿಯನ್ನು ದೇವರೆಂದು ಮಾನವ ಸಮುದಾಯ ನಂಬಿದೆ; ಎಂದಿದ್ದೆ=ಎಂದು ತಿಳಿದುಕೊಂಡಿದ್ದೆ;

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ತಮ್ಮ ಅಂಗಯ್ ಮೇಲೆ ಚಿಕ್ಕದಾದ ಲಿಂಗವನ್ನು ಇಟ್ಟುಕೊಂಡು ಪೂಜಿಸುತ್ತಿದ್ದರು. ಇದನ್ನು ಇಷ್ಟಲಿಂಗವೆಂದು ಕರೆಯಲಾಗುತ್ತಿತ್ತು; ಇದು=ನನ್ನ ಕಯ್ಯಲ್ಲಿರುವ ಶಿವನ ಸಂಕೇತವಾದ ಲಿಂಗ; ಮೆಲ್=ಸಾವಕಾಶ/ನಿಧಾನ; ಮೆಲ್ಲನೆ=ವಿರಾಮವಾಗಿ/ ತಡವಾಗಿ/ನಿದಾನವಾಗಿ; ಮೆಲ್ಲಮೆಲ್ಲನೆ=ಚೆನ್ನಾಗಿ ಗಮನಿಸಲು ತೊಡಗಿದಾಗ/ ಏನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಾಗ; ಕಲ್ಲ್+ಆಗಿ; ಕಲ್ಲು=ಶಿಲೆ; **ಕಲ್ಲಾಗಿ ಬರುತ್ತಿದೆ**=ಕೇವಲ ಕಲ್ಲಾಗಿ ಮಾತ್ರ ಕಾಣುತ್ತಿದೆ. ಅಂದರೆ ಇದರಲ್ಲಿ ದೇವರ ಇರುವಿಕೆಯು ಕಂಡುಬರುತ್ತಿಲ್ಲ;

ಇದ=ಕಲ್ಲಿನ ರೂಪದಲ್ಲಿರುವ ವಸ್ತುವನ್ನು; ನಾನ್+ಒಲ್ಲೆ; ನಾನ್=ನಾನು; ಒಲ್ಲೆ=ಒಲ್+ಎ; ಒಲ್=ಒಪ್ಪು/ಪಡೆಯುವುದು; ಒಲ್ಲೆ=ಒಪ್ಪಿಕೊಳ್ಳುವುದಿಲ್ಲ/

ಸ್ವೀಕರಿಸುವುದಿಲ್ಲ/ಪಡೆಯುವುದಿಲ್ಲ; **ಇದ ನಾನೊಲ್ಲೆ**=ನನ್ನ ಬದುಕಿನ ಆಗುಹೋಗುಗಳಿಗೆ ವಿಗ್ರಹ ರೂಪಿಯಾದ ದೇವರ ಅಗತ್ಯವಿಲ್ಲ; 'ಶಿವಶರಣ–ಶರಣೆಯರು ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಸಾಮಾಜಿಕ ನಡೆನುಡಿಗಳಲ್ಲಿ ದೇವರನ್ನು ಕಾಣುತ್ತಿದ್ದರು' ಎಂಬ ನಿಲುವನ್ನು ಈ ಸೊಲ್ಲು ಸೂಚಿಸುತ್ತಿದೆ;

ಬಲ್ಲ+ಅವರು; ಬಲ್=ತಿಳಿ/ಅರಿ; ಬಲ್ಲವರು=ತಿಳಿದವರು/ಅರಿತವರು; ಹೇಳಿ=ಉತ್ತರಿಸಿ/ತಿಳಿಸಿ; ಉಣ್=ತಿನ್ನು/ಊಟ ಮಾಡು; ಉಂಬಡೆ=ಉಣಿಸು ತಿನಸುಗಳನ್ನು ತಿನ್ನಬೇಕೆಂದರೆ/ಉಣ್ಣಬೇಕೆಂದರೆ; ಬಾಯ್+ಇಲ್ಲ; ನೋಡುವಡೆ=ನೋಡಬೇಕೆಂದರೆ; ಕಣ್ಣ್+ಇಲ್ಲ; ಎನ್ನ=ನನ್ನ; ಬಡತನ=ಆಸ್ತಿಪಾಸ್ತಿ/ಹಣಕಾಸು/ಒಡವೆ ವಸ್ತುಗಳಿಲ್ಲದೆ ಉಣಲು, ಉಡಲು, ವಾಸಿಸಲು ಬೇಕಾದ ವಸ್ತುಗಳಿಂದ ವಂಚಿತರಾಗಿ ನೋವು ಅಪಮಾನ ಸಂಕಟಗಳಿಂದ ಕೂಡಿರುವುದು; ಬೇಡು=ಕೇಳು/ಬಯಸು; ಬೇಡುವಡೆ=ಯಾಚಿಸಿದರೆ/ಕೇಳಿಕೊಂಡರೆ/ಬಯಸಿದರೆ; ಏನೂ ಇಲ್ಲ=ಬಯಸಿದ/ಬೇಡಿದ/ಯಾಚಿಸಿದ ಯಾವೊಂದು ವಸ್ತುವೂ ದೊರೆಯುವುದಿಲ್ಲ;

ಉಂಬಡೆ ಬಾಯಿಲ್ಲ ನೋಡುವಡೆ ಕಣ್ಣಿಲ್ಲ=ವಿಗ್ರಹರೂಪಿ ಲಿಂಗಕ್ಕೆ ನನ್ನಂತೆ ಜೀವವಾಗಲಿ ಮತ್ತು ಯಾವುದೇ ಬಗೆಯ ಒಳಮಿಡಿತಗಳಾಗಲಿ ಇಲ್ಲ; **ಎನ್ನ ಬಡತನಕ್ಕೆ ಬೇಡುವಡೆ ಏನೂ ಇಲ್ಲ**=ಬಡತನದ ಕಾರಣದಿಂದ ತಿನ್ನಲು ಅನ್ನವಿಲ್ಲದೆ, ತೊಡಲು ಬಟ್ಟೆಯಿಲ್ಲದೆ, ಇರಲು ಮನೆಯಿಲ್ಲದೆ ನರಳುತ್ತಿರುವ ನನ್ನ ನೋವಿಗೆ ದೇವರು ಎಂದು ಪೂಜಿಸುವ ಈ ಲಿಂಗದಿಂದ ಯಾವುದೇ ಬಗೆಯ ಪರಿಹಾರವೂ ದೊರೆಯುವುದಿಲ್ಲ.

ಆತುರ=ಅವಸರ/ಅತಿಯಾದ ಆಸೆ; ವೈರಿ=ಶತ್ರು/ಹಗೆ; ಮಾರೇಶ್ವರ=ಶಿವ/ದೇವರು; ಆತುರವೈರಿ ಮಾರೇಶ್ವರ=ನಗೆಯ ಮಾರಿತಂದೆಯ ವಚನಗಳ ಅಂಕಿತನಾಮ.

❖

118 ಕಲ್ಲಿಯ ಹಾಕಿ ನೆಲ್ಲವ ತುಳಿದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ ಮಾತಿನ ಮರೆ
ಆತುರ ವೈರಿ ಮಾರೇಶ್ವರಾ.

ಮಾತಿನ ಮೋಡಿಯಿಂದಲೇ ಜನರ ಮಯ್ ಮನಗಳನ್ನು ಮರುಳುಗೊಳಿಸಿ, ತನಗೆ ಬೇಕಾದುದೆಲ್ಲವನ್ನೂ ದೋಚುವ ನಯ ವಂಚಕರನ್ನು ಈ ವಚನದಲ್ಲಿ ಟೀಕಿಸಲಾಗಿದೆ.

'ಮಾತಿನ ಮೋಡಿ' ಎಂದರೆ, 'ವ್ಯಕ್ತಿಯು ತಾನಾಡುವ ಮಾತುಗಳಿಂದಲೇ ಜನಮನವನ್ನು ತನ್ನತ್ತ ಸೆಳೆದುಕೊಂಡು, ಅವರನ್ನು ಮುದಗೊಳಿಸಿ, ತಾನು ಹೇಳಿದುದೆಲ್ಲವನ್ನೂ ದಿಟವೆಂದು ನಂಬಿ ನಡೆಯುವಂತೆ ಪ್ರಚೋದಿಸುವ/ಜಾಣತನ'.

(ಕಲ್ಲಿ=ನೂಲು/ಹಗ್ಗದಿಂದ ಹೆಣೆದು ಮಾಡಿದ ಬಲೆ/ಪ್ರಾಣಿಗಳನ್ನು ಹಕ್ಕಿಗಳನ್ನು ಹಿಡಿಯುವುದಕ್ಕಾಗಿ ಮಾಡಿರುವ ಬಲೆ; ಹಾಕಿ=ಒಡ್ಡಿ/ಎಸೆದು/ನೆಟ್ಟು; **ಕಲ್ಲಿಯ ಹಾಕಿ**=ಬಲೆಯನ್ನು ಒಡ್ಡಿ/ಹಾಕಿ; ನೆಲ್ಲು+ಅ; ನೆಲ್ಲು=ಬತ್ತ/ಒಂದು ಬಗೆಯ ಧಾನ್ಯ/ಕಾಳು; ನೆಲ್ಲವ=ಬತ್ತದ ಕಾಳುಗಳನ್ನು; ತುಳಿದು=ನೆಟ್ಟು/ನಾಟಿಸಿ/ನೆಲದ ಮೇಲೆ ಹರಡಿ; ಗುಬ್ಬಿ=ಒಂದು ಬಗೆಯ ಹಕ್ಕಿ; ಸಿಕ್ಕಿಸುವ=ಸೆರೆ ಹಿಡಿಯುವ/ಬಲೆಗೆ ಬೀಳುವಂತೆ ಮಾಡುವ; ಕಳ್ಳನ್+ಅಂತೆ; ಕಳ್ಳ=ಜನಗಳ ಒಡವೆ ವಸ್ತುಗಳನ್ನು ಕದಿಯುವವನು; ಅಂತೆ=ಹಾಗೆ/ಆ ರೀತಿಯಲ್ಲಿ;

ವಾಕ್+ಅದ್ವೈತ=ವಾಗದ್ವೈತ; ವಾಕ್=ನುಡಿ/ಮಾತು; ಅದ್ವೈತ=ಜೀವಾತ್ಮ ಮತ್ತು ಪರಮಾತ್ಮ ಎಂಬುವು ಬೇರೆ ಬೇರೆಯಲ್ಲ, ಅವೆರಡೂ ಒಂದೇ ಎಂಬ ನಿಲುವು; **ವಾಗದ್ವೈತವ ಕಲಿತು**= 'ಯಾವುದೇ ಸಂಗತಿಯನ್ನು ಕುರಿತ ಚರ್ಚೆಯ ಸನ್ನಿವೇಶದಲ್ಲಿ ಎದುರಾಳಿಯನ್ನು ಮನವನ್ನು ಸೆಳೆಯುವಂತಹ/ಸೋಲಿಸುವಂತಹ ಮಾತುಗಾರಿಕೆಯನ್ನು ಹೊಂದಿರುವುದು. ತನ್ನ ನಿಜಜೀವನದಲ್ಲಿ ಆಚರಿಸಿ ತೋರಿಸದ ದೊಡ್ಡ ದೊಡ್ಡ ಆದರ್ಶದ ನುಡಿಗಳನ್ನಾಡುವುದರಲ್ಲಿ ಚತುರತೆಯನ್ನು ಗಳಿಸಿರುವುದು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಟ್ಟು;

ಸಂಸ್ಕೃತ=ಇಂಡಿಯಾ ದೇಶದ ಪ್ರಾಚೀನ ಜನಸಮುದಾಯದ ಸಂಸ್ಕೃತಿ, ನಾಗರಿಕತೆ ಮತ್ತು ಸಾಮಾಜಿಕ ಜೀವನದ ಸಂಗತಿಗಳನ್ನು ನಿರೂಪಿಸುವ ವೇದ, ಉಪನಿಷತ್ತು, ವಾಲ್ಮೀಕಿ ರಾಮಾಯಣ, ವ್ಯಾಸ ಮಹಾಭಾರತ, ಭಗವದ್ಗೀತೆ ಮತ್ತು ಪುರಾಣಗಳೆಲ್ಲವೂ ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿವೆ. ಸಂಸ್ಕೃತವನ್ನು ಕೆಲವರು ದೇವನುಡಿಯೆಂದು ನಂಬಿ ಹೆಮ್ಮೆಯಿಂದ ಕೊಂಡಾಡುತ್ತಾರೆ;

ಮಾತು=ನುಡಿ/ಸೊಲ್ಲು; **ಸಂಸ್ಕೃತದ ಮಾತು**=ವೇದ/ಉಪನಿಷತ್ತು/ ರಾಮಾಯಣ/ಮಹಾಭಾರತ/ಭಗವದ್ಗೀತೆ/ಪುರಾಣಗಳಲ್ಲಿ ಮಾನವ ಸಮುದಾಯದ ಒಳಿತಿನ ನಡೆನುಡಿಗಳಿಗೆ ದಾರಿ ತೋರುವ ನೀತಿ, ನಿಯಮ ಮತ್ತು ಆದರ್ಶವನ್ನು ನಿರೂಪಣೆ ಮಾಡಿರುವ ಪ್ರಸಂಗಗಳಿಂದ ಆಯ್ದು ಕೊಂಡಿರುವ ಮಾತುಗಳು/ಹೇಳಿಕೆಗಳು; ಪಸರ=ಅಂಗಡಿ/ಅಂಗಡಿಯ ಸರಕು; ಮುಂದೆ=ಎದುರಿಗೆ/ಮುಂದುಗಡೆ; ಇಕ್ಕಿ+ಕೊಂಡು; ಇಕ್ಕು=ಇರಿಸು/ಹರಡು; ಇಕ್ಕಿಕೊಂಡು=ಹರಡಿಕೊಂಡು;

ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು=ಕೇಳುಗರ ಗಮನವನ್ನು ತಮ್ಮತ್ತ ಸೆಳೆಯಲು/ಕೇಳುಗರು ತಮ್ಮ ಮಾತುಗಳನ್ನು ನಂಬುವಂತೆ ಮಾಡಲೆಂದು ಸಂಸ್ಕೃತದ ಹೊತ್ತಿಗೆಗಳಿಂದ ಆದರ್ಶದ ಬಾಳ್ವೆಯನ್ನು ನಿರೂಪಿಸುವ ಹೇಳಿಕೆಗಳನ್ನು ಪದೇ ಪದೇ ಬಳಸುತ್ತಾ; ವ್ಯಾಪಾರಿಯು ತನ್ನ ವಸ್ತುಗಳ ಮಾರಾಟಕ್ಕಾಗಿ ಅಂಗಡಿಯನ್ನು ತೆರೆದಂತೆ ಜಾತಿ/ಮತದ ಒಕ್ಕೂಟಗಳಲ್ಲಿ ನೇತಾರರಾಗಿರುವ ಜಾತಿ ಜಗದ್ಗುರುಗಳು, ದೇವಮಾನವರು ಮತ್ತು ವಂಚನೆಯ ಉದ್ದೇಶವನ್ನು ಹೊಂದಿರುವ ಕೆಲ ಗುರುಹಿರಿಯರು ಜನರನ್ನು ಮರಳುಗೊಳಿಸಿ ಸಂಪತ್ತನ್ನು ಸಂಪಾದಿಸಲೆಂದು ಸಂಸ್ಕೃತದ ನುಡಿಯನ್ನು ವ್ಯಾಪಾರದ ಸರಕನ್ನಾಗಿ ಮಾಡಿಕೊಂಡಿದ್ದಾರೆ ಎಂಬ ರೂಪಕದ ತಿರುಳಿನಲ್ಲಿ ಈ ಸೊಲ್ಲು ಬಳಕೆಯಾಗಿದೆ;

ಮತ್ಸ್ಯ=ಮೀನು; ವಕ್ತ್ರ+ಅಲ್ಲಿ; ವಕ್ತ್ರ=ಬಾಯಿ; ಗ್ರಾಸ=ಆಹಾರ/ಊಟ/ತುತ್ತು; ಹಾಕು+ಅವನ್+ಅಂತೆ; **ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವುದು**=ಕೆರೆಕಟ್ಟೆಬಾವಿ, ಹೊಳೆ–ನದಿ–ಕಡಲಿನಲ್ಲಿರುವ ಜಲಚರವಾದ ಮೀನನ್ನು ಹಿಡಿಯುವಾಗ, ಗಾಳದ ತುದಿಗೆ ಎರೆಹುಳವನ್ನು ಇಲ್ಲವೇ ಇನ್ನಿತರ ಕಡ್ಡಿಕಾಳುಗಳನ್ನು ಸಿಕ್ಕಿಸುತ್ತಾರೆ. ಗಾಳದ ತುದಿಯಲ್ಲಿರುವ ಆಹಾರದ ತುಣುಕನ್ನು ಕಂಡು ಆಸೆಯಿಂದ ಅದರತ್ತ ಬಂದು ಮೀನು ತನ್ನ ನಾಲಗೆಯನ್ನು/ಬಾಯನ್ನು ಹಾಕುತ್ತಿದ್ದಂತೆಯೇ, ಗಾಳದ ಕೊಂಡಿಗೆ ಸಿಕ್ಕಿ ಬಲಿಯಾಗುತ್ತದೆ; ಮನಸೆಳೆಯುವ ಮಾತುಗಳಿಂದಲೇ ಜನರನ್ನು

ಮೋಸಗೊಳಿಸಿ, ತಮ್ಮ ಹಿತಕ್ಕಾಗಿ ಜನರನ್ನು ಬಲಿ ತೆಗೆದುಕೊಳ್ಳುವ ವಂಚಕರ ವರ್ತನೆಯನ್ನು ಈ ರೂಪಕದ ಮೂಲಕ ಚಿತ್ರಿಸಲಾಗಿದೆ;

ಅದು+ಏತರ; ಅದು=ತನ್ನ ಹಿತಕ್ಕಾಗಿ ಇತರರನ್ನು ವಂಚಿಸುವುದು; ಏತರ=ಯಾವ ಬಗೆಯದು/ಯಾವ ರೀತಿಯದು; **ಅದೇತರ ನುಡಿ**=ಇಂತಹ ಮಾತುಗಳಿಂದ ಒಳಿತು ಹೇಗೆ ಉಂಟಾಗುತ್ತದೆ; ಮರೆ=ಮುಚ್ಚು/ಗುಟ್ಟು/ಮೋಸ; **ಮಾತಿನ ಮರೆ**=ಒಳ್ಳೆಯತನದ/ಆದರ್ಶದ/ನೀತಿಯ/ನಿಯಮದ ಮಾತುಗಳ ಹಿಂದೆ ಕಪಟತನದ ಆಲೋಚನೆಗಳನ್ನು ಮನದಲ್ಲಿ ಅಡಗಿಸಿಕೊಂಡಿರುವುದು; ಆತುರವೈರಿ ಮಾರೇಶ್ವರಾ=ನಗೆಯ ಮಾರಿತಂದೆಯ ವಚನಗಳ ಅಂಕಿತನಾಮ)

❖

30. ಬಸವಣ್ಣ

ಹುಟ್ಟಿದ ಊರು: ಬಾಗೇವಾಡಿ, ಬಿಜಾಪುರ ಜಿಲ್ಲೆ.

ತಂದೆ: ಮಾದರಸ

ತಾಯಿ: ಮಾದಲಾಂಬಿಕೆ

ಹೆಂಡತಿಯರು: ಗಂಗಾಂಬಿಕೆ, ನೀಲಾಂಬಿಕೆ

ಗುರು: ಜಾತವೇದ ಮುನಿ

ವಿದ್ಯೆ: ಕೂಡಲ ಸಂಗಮ, ಹುನಗುಂದ ತಾಲ್ಲೂಕು. ಬಿಜಾಪುರ ಜಿಲ್ಲೆ.

ಕಸುಬು: 1) ಕರಣಿಕ (ಲೆಕ್ಕ ಬರೆಯುವವನು)

2) ರಾಜ್ಯ ಬೊಕ್ಕಸದ ಹಣಕಾಸಿನ ಆಡಳಿತಗಾರ.

ಬಸವಣ್ಣನವರು ಮೊದಲು ಮಂಗಳವಾಡದಲ್ಲಿ (ಸೊಲ್ಲಾಪುರ ಜಿಲ್ಲೆ, ಮಹಾರಾಷ್ಟ್ರ ರಾಜ್ಯ) ಮಾಂಡಲಿಕನಾಗಿದ್ದ ಬಿಜ್ಜಳನ ಬಳಿಯಲ್ಲಿ ಕರಣಿಕನಾಗಿ ಕೆಲಸ ಮಾಡಿದರು. ಅನಂತರ ರಾಜನಾದ ಬಿಜ್ಜಳನು ಕಲ್ಯಾಣವನ್ನು (ಬಸವ ಕಲ್ಯಾಣ, ಬೀದರ ಜಿಲ್ಲೆ) ತನ್ನ 'ರಾಜಧಾನಿ' ಯನ್ನಾಗಿ ಮಾಡಿಕೊಂಡಾಗ, ಅಲ್ಲಿ ಬಿಜ್ಜಳನ ಬೊಕ್ಕಸದ ಹಣಕಾಸಿನ ಆಡಳಿತಗಾರನಾಗಿ ಕೆಲಸ ಮಾಡಿದರು.]

ದೊರೆತಿರುವ ವಚನಗಳು: 1406

ವಚನಗಳ ಅಂಕಿತನಾಮ: ಕೂಡಲಸಂಗಮದೇವ

118. ಇನ್ನೇವೆನಿನ್ನೇವೆನಯ್ಯಾ
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು
ಎನ್ನ ನಿಂದಲ್ಲಿ ನಿಲಲೀಯದು
ಎನ್ನ ಕುಳಿತಲ್ಲಿ ಕುಳ್ಳಿರಲೀಯದು
ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ
ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ
ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ
ಕೂಡಲಸಂಗಮದೇವಾ
ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ
ಎಂದು ನಿಮ್ಮನೊಡಗೂಡುವೆನಯ್ಯಾ.

ನೂರೆಂಟು ಬಗೆಯ ಒಳಮಿಡಿತಗಳಿಂದ ಅತ್ತ... ಇತ್ತ... ಎತ್ತೆತ್ತಲೋ ತುಡಿಯುತ್ತಿರುವ ಮನಸ್ಸನ್ನು ವ್ಯಕ್ತಿಯು ತನ್ನ ಹತೋಟಿಗೆ ತಂದುಕೊಂಡು, ಅದನ್ನು ಒಳಿತಿನ ನಡೆನುಡಿಗಳಲ್ಲಿ ನೆಲೆಗೊಳಿಸಬೇಕೆಂಬ ಹಂಬಲದಿಂದ ಪರಿತಪಿಸುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ.

ಇನ್ನು+ಏವೆನ್+ಇನ್ನು+ಏವೆನ್+ಅಯ್ಯಾ; ಇನ್ನು=ಮತ್ತೆ/ಬೇರೆ; ಏವೆನ್=ಏನು ಮಾಡಲಿ/ಏನು ತಾನೆ ಮಾಡುವೆನು; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ಎನ್ನ=ನನ್ನ; ಮನ+ಎಂಬ; ಮನ=ಮನಸ್ಸು; ಎಂಬ=ಎನ್ನುವ; ಮರ್ಕಟ=ಕೋತಿ/ಮಂಗ/ಕಪಿ; ದಾಳಿ=ಲಗ್ಗೆ/ಮುತ್ತಿಗೆ ಘನ+ಆಯಿತ್ತು; ಘನ=ದೊಡ್ಡದು/ಹೆಚ್ಚಿನ ಕಸುವುಳ್ಳದ್ದು/ದಟ್ಟವಾದುದು; ಆಯಿತ್ತು=ಆಗಿರುವುದು;

ಇನ್ನೇವೆನಿನ್ನೇವೆನಯ್ಯಾ=ಇನ್ನು ಮುಂದೆ ನಾನು ಏನು ತಾನೆ ಮಾಡಲಿ/ಏನನ್ನು ಮಾಡಲಾಗದ ನೆಲೆಯಲ್ಲಿ ನಾನು ಸಿಲುಕಿ ಒದ್ದಾಡುತ್ತಿದ್ದೇನೆ;

ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು=ನನ್ನ ಮನಸ್ಸಿನಲ್ಲಿ ನೂರಾರು ಬಗೆಯ ಒಳಮಿಡಿತಗಳ ತಾಕಲಾಟ ಹೆಚ್ಚಾಗಿದೆ. ಒಲವು/ನಲಿವು/ಕೋಪ/ತಾಪ/ಹೆದರಿಕೆ/ನಿರಾಶೆ/ಹಿಂಜರಿಕೆ/ಸೇಡು/ಅಸೂಯೆ ಮುಂತಾದ ಬಗೆ ಬಗೆಯ ಒಳಮಿಡಿತಗಳು ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿ ನಿರಂತರವಾಗಿ ಮೂಡುತ್ತಿರುತ್ತವೆ. ಇವುಗಳನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುವುದು

ವ್ಯಕ್ತಿಯ ಪಾಲಿಗೆ ಬಹು ದೊಡ್ಡ ಸವಾಲಿನ ಕೆಲಸವಾಗಿರುತ್ತದೆ. ಒಂದು ಗಳಿಗೆಯಾದರೂ ಇದ್ದ ಕಡೆಯಲ್ಲಿ ಇರಲಾರದೆ ಅತ್ತಿತ್ತ ನೆಗೆದಾಡುತ್ತ, ಯಾವುದಾದರೊಂದು ಬಗೆಯ ಕ್ರಿಯೆಯಲ್ಲಿ ತೊಡಗಿರುವ ಕೋತಿಯ ವರ್ತನೆಯನ್ನು ಮಾನವ ಜೀವಿಯ ಮನಸ್ಸಿನ ತಾಕಲಾಟವನ್ನು ಸೂಚಿಸುವುದಕ್ಕೆ ಒಂದು ರೂಪಕವಾಗಿ ಚಿತ್ರಿಸಲಾಗಿದೆ;

ನಿಂದ+ಅಲ್ಲಿ; ನಿಂದ=ನಿಂತುಕೊಂಡ; ನಿಂದಲ್ಲಿ=ನಿಂತುಕೊಂಡಿರುವ ನೆಲೆಯಲ್ಲಿ; ನಿಲ್+ಅಲ್+ಈಯದು; ನಿಲ್=ನಿಂತುಕೊಳ್ಳುವುದು; ನಿಲ್ಲಲ್=ನಿಂತುಕೊಳ್ಳಲು; ಈ=ಕೊಡು/ಅವಕಾಶವನ್ನು ನೀಡುವುದು; ಈಯದು=ಕೊಡುತ್ತಿಲ್ಲ/ಬಿಡುತ್ತಿಲ್ಲ; ಕುಳಿತ+ಅಲ್ಲಿ; ಕುಳ್=ಕುಳಿತುಕೊಳ್ಳುವುದು; ಕುಳಿತ=ಕುಂತಿರುವ; ಅಲ್ಲಿ=ನೆಲೆಯಲ್ಲಿ; ಕುಳ್ಳಿರಲ್+ಈಯದು; ಕುಳ್ಳಿರಲ್=ಕುಳಿತುಕೊಂಡಿರಲು;

ಎನ್ನ ನಿಂದಲ್ಲಿ ನಿಲ್ಲಲೀಯದು ಎನ್ನ ಕುಳಿತಲ್ಲಿ ಕುಳ್ಳಿರಲೀಯದು=ಯಾವುದೇ ಒಳ್ಳೆಯ ಕೆಲಸದಲ್ಲಿ ತೊಡಗಲು ಬಿಡುತ್ತಿಲ್ಲ/ಮನದಲ್ಲಿ ಸದಾಕಾಲ ಒಂದಲ್ಲ ಒಂದು ಬಗೆಯ ಒತ್ತಡ/ಕಳವಳ/ಸಂಕಟ/ಹಿಂಜರಿಕೆಯ ಒಳಮಿಡಿತಗಳೇ ತುಂಬಿಕೊಂಡು ಒಳ್ಳೆಯ ಕೆಲಸವನ್ನು ಮಾಡಲು ಆಗುತ್ತಿಲ್ಲ;

ಕ್ಷಣ+ಅಲ್ಲಿ; ಕ್ಷಣ=ಗಳಿಗೆ/ಕಾಲದ ಚಿಕ್ಕ ಪ್ರಮಾಣ; ಕ್ಷಣದಲ್ಲಿ=ಗಳಿಗೆಯಲ್ಲಿ; ಪಾತಾಳ=ದೇವಲೋಕ/ಭೂಲೋಕ/ಪಾತಾಳ ಲೋಕ ಎಂಬ ಮೂರು ಲೋಕಗಳು ಇರುವುದಾಗಿಯೂ, ಭೂಲೋಕದ ಮೇಲುಗಡೆಯಲ್ಲಿ ದೇವ ಲೋಕವು ಮತ್ತು ಭೂಲೋಕದ ಕೆಳಗಡೆಯಲ್ಲಿ ಪಾತಾಳ ಲೋಕವಿದೆಯೆಂಬ ಕಲ್ಪನೆಯು ಜನಮನದಲ್ಲಿದೆ; ಐದುತ್ತ+ಇದೆ;

ಎಯ್ದು>ಐದು=ಬರು/ಸಮೀಪಿಸು; ಐದುತ್ತ=ಬರುತ್ತ/ಬಳಿಸಾರುತ್ತ; ಇದೆ=ಇರುವುದು; ಆಕಾಶ=ಗಗನ; ದಿಕ್+ದೆಸೆ; ದಿಕ್ಕು=ಸೀಮೆ; ದೆಸೆ=ದಿಕ್ಕು; ದಿಗ್ದೆಸೆಗೆ=ಎಲ್ಲಾ ಕಡೆಗೆ/ನೆಲೆಗೆ;

ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ=ಮನಸ್ಸಿನ ಒಳಮಿಡಿತಗಳಾದ ಒಲವು/ನೋವು/ನಲಿವು/ಕಾಮ/ಕೋಪ/ತಾಪ/ಅಂಜಿಕೆ/ಹಿಂಜರಿಕೆಗಳೆಲ್ಲವೂ ಹೇಗೆ ವೇಗವಾಗಿ ಒಂದು ಸಂಗತಿಯಿಂದ ಮತ್ತೊಂದು ಸಂಗತಿಯತ್ತ ತುಡಿಯುತ್ತಿರುತ್ತವೆ ಎಂಬುದನ್ನು ಪಾತಾಳ/ಆಕಾಶ/ದಿಕ್ಕುಗಳ ವಿಸ್ತಾರವಾದ ನೆಲೆಯಲ್ಲಿ ಹಾರಾಡುವ/ರೂಪಕದ

ಮೂಲಕ ವಿವರಿಸಲಾಗಿದೆ. ವ್ಯಕ್ತಿಯ ಮನದೊಳಗೆ ಮೂಡುವ ಒಳಮಿಡಿತಗಳಿಗೆ ಯಾವುದೇ ಕೊನೆ ಎಂಬುದು ಇರುವುದಿಲ್ಲ. ಎಲ್ಲಿಂದ ಎಲ್ಲಿಗೆ ಬೇಕಾದರೂ ಅರೆಗಳಿಗೆಯಲ್ಲಿ ಹೋಗುವ ಮನಸ್ಸಿನ ವೇಗವನ್ನು ಈ ನುಡಿಗಳು ಸೂಚಿಸುತ್ತಿವೆ;

ಕೂಡಲಸಂಗಮದೇವ=ಶಿವ/ಬಸವಣ್ಣನ ಮೆಚ್ಚಿನ ದೇವರು/ಬಸವಣ್ಣನ ವಚನಗಳ ಅಂಕಿತನಾಮ; ದಾಳಿ+ಅನ್+ಎಂದಿಗೆ; ದಾಳಿಯನ್=ಆಕ್ರಮಣವನ್ನು/ಮುತ್ತಿಗೆಯನ್ನು; ಎಂದಿಗೆ=ಯಾವಾಗ/ಯಾವ ಕಾಲಕ್ಕೆ; ನೀಗಿ=ಪರಿಹರಿಸಿ/ನಿವಾರಿಸಿ; ಎಂದು=ಯಾವ ದಿನ/ಯಾವ ಕಾಲ; ನಿಮ್ಮನ್+ ಒಡಗೂಡುವೆನ್+ ಅಯ್ಯಾ; ನಿಮ್ಮನ್ನು=ಶಿವನನ್ನು/ದೇವರನ್ನು/ಈಶ್ವರನನ್ನು; ಒಡಗೂಡು= ಜತೆಸೇರು; ಒಡಗೂಡುವೆನ್= ಜತೆಸೇರುವೆನು;

ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ ಎಂದು ನಿಮ್ಮನೊಡ ಗೂಡುವೆನಯ್ಯಾ=ಅತ್ತಿತ್ತ ತುಯ್ದಾಡುವ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಮನದಲ್ಲಿ ಮೂಡುವ ಕೆಟ್ಟ ಒಳಮಿಡಿತಗಳನ್ನು ಹೋಗಲಾಡಿಸಿಕೊಂಡು, ಒಳ್ಳೆಯ ನಡೆನುಡಿಗಳ ಮೂಲಕ ಬಾಳಲು ವ್ಯಕ್ತಿಯ ಮನಸ್ಸು ಹಂಬಲಿಸುತ್ತಿದೆ. ಜೀವನದಲ್ಲಿ ಒಳ್ಳೆಯತನದಿಂದ ಬಾಳುವುದರ ಮೂಲಕ ದೇವರನ್ನು ಕಾಣಲು ಬಯಸುತ್ತಿದ್ದ ಶಿವಶರಣಶರಣೆಯರ ನಿಲುವನ್ನು ಈ ನುಡಿಗಳು ಸೂಚಿಸುತ್ತಿವೆ.

❖

120. ಉಳ್ಳವರು ಶಿವಾಲಯ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರ ಹೊನ್ನಕಲಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

ಜಡರೂಪಿಯಾದ ಶಿವನಿಗಾಗಿ ಉಳ್ಳವರು ದೇವಾಲಯವನ್ನು ಕಟ್ಟಿಸಿದ್ದರೆ, ಚೇತನರೂಪಿಯಾದ ಶಿವನಿಗಾಗಿ ವ್ಯಕ್ತಿಯು ತನ್ನ ಮಯ್ ಮನವನ್ನೇ ದೇವಾಲಯ ವನ್ನಾಗಿ ಮಾಡಿಕೊಂಡಿರುವ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಜಡರೂಪಿಯಾದ ಶಿವ' ಎಂದರೆ ಕಲ್ಲು/ಮಣ್ಣು/ಲೋಹ/ಮರದಿಂದ ಮಾಡಿರುವ ಶಿವನ ವಿಗ್ರಹ.

'ಚೇತನರೂಪಿಯಾದ ಶಿವ' ಎಂದರೆ ವ್ಯಕ್ತಿಯ ಅರಿವು ಮತ್ತು ಎಚ್ಚರದ ನಡೆನುಡಿಗಳ ಸಂಕೇತವಾಗಿರುವ ಶಿವ.

(ಉಳ್=ಇರು/ಹೊಂದು; ಉಳ್ಳವರು=ಆಸ್ತಿಪಾಸ್ತಿಯನ್ನು ಹೊಂದಿರುವವರು/ಹಣಕಾಸು ಒಡವೆ ವಸ್ತುಗಳನ್ನು ಇಟ್ಟಿರುವವರು; ಶಿವ+ಆಲಯ; ಶಿವ= ಈಶ್ವರ/ದೇವರು; ಆಲಯ=ಮಂದಿರ; ಶಿವಾಲಯ=ಲಿಂಗದ ಆಕಾರವುಳ್ಳ ಶಿವನ ವಿಗ್ರಹವನ್ನು ಇಟ್ಟು ಕಟ್ಟಿಸಿರುವ ದೇವಮಂದಿರ; ಮಾಡು=ಎಸಗು/ನಿರ್ಮಿಸು/ ಕಟ್ಟಿಸು; ಇಹರು=ಇರುವವರು; ಮಾಡಿಹರು=ಮಾಡಿರುವವರು/ಮಾಡಿದ್ದಾರೆ;

ಉಳ್ಳವರು ಶಿವಾಲಯ ಮಾಡಿಹರು=ದೊಡ್ಡ ಗದ್ದುಗೆಯನ್ನು ಏರಿದವರು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತನ್ನು ಗಳಿಸಿರುವ ಸಿರಿವಂತರು ಶಿವನ ವಿಗ್ರಹವನ್ನು ನೆಲೆಗೊಳಿಸಿ ದೇಗುಲವನ್ನು ಕಟ್ಟಿಸಿದ್ದಾರೆ;

ನಾನ್+ಏನ್+ಅ; ಏನ್=ಯಾವುದು; ಏನ=ಯಾವುದನ್ನು ತಾನೆ; ಮಾಡುವೆ=ಮಾಡಲಿ; ಬಡವನ್+ಅಯ್ಯಾ; ಬಡವ=ಆಸ್ತಿಪಾಸ್ತಿ ಹಣಕಾಸು ಒಡವೆ ವಸ್ತುಗಳಿಲ್ಲದವನು; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ನಾನೇನ ಮಾಡುವೆ ಬಡವನಯ್ಯಾ=ಬಡವನಾದ ನಾನು ಸಿರಿವಂತರು ಕಟ್ಟಿಸಿರುವಂತೆ ಶಿವನಿಗಾಗಿ ದೇಗುಲವನ್ನು ಕಟ್ಟಿಸಲಾರೆನು;

ಎನ್ನ=ನನ್ನ; ಕಾಲ್+ಏ; ಕಾಲೇ=ಕಾಲುಗಳೇ; ಕಂಬ=ದೇಗುಲದ ಮಾಳಿಗೆಗೆ ಆಸರೆಯಾಗಿ ನಿಲ್ಲಿಸಿರುವ ಕಲ್ಲಿನ ದಪ್ಪನೆಯ ಮತ್ತು ಉದ್ದನೆಯ ಉಪಕರಣ; ದೇಹ=ಮಯ್/ಶರೀರ; ದೇಗುಲ=ದೇವ+ಕುಲ; ಕುಲ=ಮನೆ/ಮಂದಿರ; ದೇಗುಲ=ದೇವಾಲಯ/ದೇವಮಂದಿರ; ಶಿರ=ತಲೆ/ರುಂಡ; ಹೊನ್ನಕಲಶ+ ಅಯ್ಯಾ; ಹೊನ್ನು=ಚಿನ್ನ/ಬಂಗಾರ; ಕಲಶ=ದೇವಾಲಯದ ಗೋಪುರಕ್ಕೆ ಹಾಕಿರುವ ಕಂಚು/ಹಿತ್ತಾಳೆ/ತಾಮ್ರ/ಚಿನ್ನದ ತಗಡಿನಿಂದ ಮಾಡಿರುವ ಹೊದಿಕೆ; ಹೊನ್ನಕಲಶ=ಚಿನ್ನದ ಕಲಶ;

ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರ ಹೊನ್ನಕಲಶವಯ್ಯಾ=ನನ್ನ ಕಾಲುಗಳೇ ದೇಗುಲದ ಕಂಬಗಳಾಗಿವೆ. ನನ್ನ ದೇಹವೇ ದೇಗುಲವಾಗಿದೆ. ನನ್ನ ತಲೆಯೇ ದೇವಾಲಯದ ಗೋಪುರದ ತುತ್ತತುದಿಯಲ್ಲಿ ಹೊಳೆಹೊಳೆಯುತ್ತಿರುವ ಚಿನ್ನದ ಕಲಶವಾಗಿದೆ. ನನ್ನ ಮನದ ಒಳಗುಡಿಯಲ್ಲಿ ಅರಿವಿನ ಮತ್ತು ಎಚ್ಚರದ ನಡೆನುಡಿಯ ದಾರಿದೀಪವಾಗಿ ಚೇತನರೂಪಿಯಾದ ಶಿವನು ನೆಲೆಸಿದ್ದಾನೆ;

ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಕೇಳ್+ಅಯ್ಯಾ; ಕೇಳ್=ಆಲಿಸು; ಕೇಳಯ್ಯಾ=ಕೇಳುವಂತಹವನಾಗು/ಮನಸ್ಸಿಟ್ಟು ಕೇಳಿಸಿಕೊ;

ಸ್ಥಾವರಕ್ಕೆ+ಅಳಿವು+ಉಂಟು; ಸ್ಥಾವರ=ಚಲನೆಯಿಲ್ಲದ್ದು/ದೇಗುಲದೊಳಗೆ ಮಣ್ಣು/ಮರ/ಕಲ್ಲು/ಲೋಹದಿಂದ ಮಾಡಿ ಇಟ್ಟಿರುವ ಲಿಂಗದ ವಿಗ್ರಹ; ಅಳಿ= ನಾಶವಾಗುವುದು; ಅಳಿವು=ನಾಶ/ಹಾನಿ; ಉಂಟು=ಇದೆ/ಇರುವುದು; ಅಳಿವುಂಟು= ಹಾಳಾಗುವುದು/ನಾಶವಾಗುವುದು/ಇಲ್ಲವಾಗುವುದು; ಜಂಗಮಕ್ಕೆ+ಅಳಿವು+ಇಲ್ಲ; ಜಂಗಮ=ಚಲನೆಯುಳ್ಳದ್ದು/ಯಾವ ಊರಿನಲ್ಲಿಯೂ ಹೆಚ್ಚು ಕಾಲ ನೆಲೆನಿಲ್ಲದೆ, ಸದಾಕಾಲ ಸಂಚರಿಸುತ್ತ, ಒಳ್ಳೆಯ ನಡೆ ನುಡಿಗಳಿಂದ ಬಾಳುವಂತೆ ಜನರಿಗೆ ತಿಳಿಯಹೇಳುವ ವ್ಯಕ್ತಿ; ಅಳಿವಿಲ್ಲ=ನಾಶವಿಲ್ಲ/ಹಾನಿಯಿಲ್ಲ;

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ=ಸಾವಿರಾರು ವರುಶಗಳ ಕಾಲಮಾನದಲ್ಲಿ ಜಡರೂಪದ ಶಿವನ ವಿಗ್ರಹವನ್ನುಳ್ಳ ಶಿವಾಲಯ ಪಾಳುಬಿದ್ದು ಇಲ್ಲವಾಗುತ್ತದೆ/ಹಾಳಾಗುತ್ತದೆ. ಆದರೆ ಅರಿವು ಮತ್ತು ಎಚ್ಚರದ ನಡೆನುಡಿಗಳನ್ನು ಜನಮನದಲ್ಲಿ ಮೂಡಿಸುವ ಜಂಗಮನ ಕೆಲಸವು ತಲೆಮಾರಿನಿಂದ ತಲೆಮಾರಿಗೆ ಆಯಾಯ ಕಾಲದಲ್ಲಿ ಬದುಕಿ ಬಾಳುತ್ತಿರುವ ಒಳ್ಳೆಯ ವ್ಯಕ್ತಿಗಳಿಂದ ಮುಂದುವರಿಯುತ್ತಿರುತ್ತದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.

ಶಿವನನ್ನು ದೇವರನ್ನಾಗಿ ಒಪ್ಪಿಕೊಂಡಿರುವ ಶಿವಶರಣಶರಣೆಯರು ಶಿವಾಲಯವನ್ನು ನಿರಾಕರಿಸುವುದಕ್ಕೆ ಅನೇಕ ಕಾರಣಗಳಿವೆ.

1) ವಿಗ್ರಹ ರೂಪದಲ್ಲಿ ಕಡೆದಿರುವ ದೇವರನ್ನು ದೇಗುಲದ ಒಳಗುಡಿಯಲ್ಲಿ ನೆಲೆಗೊಳಿಸುತ್ತಿದ್ದಂತೆಯೇ, ವಿಗ್ರಹದ ಹತ್ತಿರಕ್ಕೆ ಹೋಗಿ ಪೂಜಿಸಲು ಪೂಜಾರಿಯು ಮಾತ್ರ ಯೋಗ್ಯನಾಗುತ್ತಾನೆ. ಇನ್ನುಳಿದವರು ಒಳಗುಡಿಯಿಂದ ಹೊರ ನಿಲ್ಲಬೇಕಾಗುತ್ತದೆ. ಇಲ್ಲಿಂದಲೇ ಮಾನವರಲ್ಲಿ ಮೇಲು–ಕೀಳಿನ ವಿಂಗಡಣೆಯು ಮೊದಲಾಗುತ್ತದೆ. ಮೇಲು/ಕೀಳಿನ ಜಾತಿ ಮೆಟ್ಟಲುಗಳಿಂದ ಕೂಡಿರುವ ನಮ್ಮ ಸಮಾಜದ ಜಾತಿರಚನೆಯ ಕಟ್ಟುಪಾಡುಗಳನ್ನು ದೇಗುಲದಲ್ಲಿ ನಡೆಯುವ ಆಚರಣೆಗಳು ಮುಂದುವರಿಸಿಕೊಂಡು ಬರುತ್ತಿವೆ. ಮೇಲು ಜಾತಿಯವರಿಗೆ ಮತ್ತು ಮೇಲು ವರ್ಗದವರಿಗೆ ಅಂದರೆ ಸಿರಿವಂತರಿಗೆ ಹಾಗೂ ದೊಡ್ಡ ದೊಡ್ಡ ಗದ್ದುಗೆಯಲ್ಲಿರುವವರಿಗೆ ಮೊದಲ ಮನ್ನಣೆಯನ್ನು ನೀಡುವ ದೇಗುಲದ ಆಚರಣೆಗಳು, ಕೆಳ ಜಾತಿ ಮತ್ತು ಕೆಳ ವರ್ಗದ ಅಂದರೆ ಹಣವಿಲ್ಲದ/ಸಂಪತ್ತಿಲ್ಲದ/ಗದ್ದುಗೆಯಿಲ್ಲದ ಜನಸಮುದಾಯವನ್ನು ಕಡೆಗಣಿಸಿವೆ. ಈ ರೀತಿ ಮೇಲು/ಕೀಳಿನ ತರತಮವು ಮುಂದುವರಿದುಕೊಂಡು ಹೋಗಲು ಕಾರಣವಾಗಿರುವ ಮತ್ತು ನೆರವಾಗಿರುವ ದೇಗುಲದ ನೆಲೆಯಿಂದ ಶಿವಶರಣಶರಣೆಯರು ದೂರಸರಿದಿದ್ದಾರೆ.

2) ಉಳ್ಳವರು ಶಿವಾಲಯವನ್ನು/ಇನ್ನಿತರ ದೇವರಿಗೆ ದೇಗುಲವನ್ನು ಕಟ್ಟಿಸಲು ಕಾರಣವೇನೆಂಬುದನ್ನು ತಿಳಿಯಬೇಕಾದರೆ, ಮಾನವನ ಮನದಲ್ಲಿ ದೇವರು ರೂಪುಗೊಂಡ ಚರಿತ್ರೆಯನ್ನು ಮೊದಲು ಅರಿಯಬೇಕು. ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಕಣ್ಣ ಮುಂದಿನ ನಿಸರ್ಗದಲ್ಲಿನ ಮಳೆ/ಗುಡುಗು/ಸಿಡಿಲು/ಕಾಳ್ಗಿಚ್ಚು/ಬಿರುಗಾಳಿ/ಭೂಕಂಪ/ಪ್ರವಾಹ/ಕಾಡು ಪ್ರಾಣಿಗಳಿಂದ ಉಂಟಾಗುವ ಅವಗಡಗಳಿಂದ ಪಾರಾಗಿ ಜೀವವನ್ನು ಉಳಿಸಿಕೊಳ್ಳಲು ಒಂದೊಂದು ಸಂಗತಿಗೂ ಒಬ್ಬೊಬ್ಬ ದೇವತೆಯನ್ನು ಕಲ್ಪಿಸಿಕೊಂಡು ಬಗೆಬಗೆಯ ಆಚರಣೆಗಳ ಮೂಲಕ ಪೂಜಿಸತೊಡಗಿದನು. ಅನಂತರದ ಕಾಲಮಾನದಲ್ಲಿ ಅಲೆಮಾರಿಯಾಗಿದ್ದ ಮಾನವ ಗುಂಪುಗಳು ಬೇಸಾಯದ ಮೂಲಕ ಒಂದೆಡೆ ನೆಲೆಯೂರಿ ನಿಂತು ಸಮಾಜ ರಚನೆಗೊಂಡಾಗ, ವರ್ಣ ಮತ್ತು ಜಾತಿಗಳ ಜತೆಗೆ ಆಸ್ತಿಯ ಹಕ್ಕು ದೊರೆತು ಸಿರಿವಂತರು ಮತ್ತು ಬಡವರು ಎಂಬ ವರ್ಗ ರೂಪುಗೊಂಡಿತು. ಬಡವರು ತಮ್ಮ ದಿನನಿತ್ಯದ ಅಗತ್ಯಗಳಾದ ಅನ್ನ. ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯಕ್ಕಾಗಿ ದೇವರಲ್ಲಿ ಮೊರೆಯಿಟ್ಟು, ಅವನ್ನು ಪಡೆಯುವುದಕ್ಕಾಗಿ

ಪೂಜಿಸತೊಡಗಿದರೆ, ಜೀವನಕ್ಕೆ ಅಗತ್ಯವಾದುದೆಲ್ಲವನ್ನೂ ಹೊಂದಿರುವ ಸಿರಿವಂತರು ಮತ್ತು ದೊಡ್ಡ ದೊಡ್ಡ ಗದ್ದುಗೆಯನ್ನು ಏರಿ ಕುಳಿತವರು ತಮ್ಮ ಬಳಿಯಿರುವ ಸಂಪತ್ತನ್ನು ಕಾಪಾಡಿಕೊಂಡು, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತನ್ನು ಗೋರಿಗುಡ್ಡೆ ಹಾಕಿಕೊಳ್ಳಲು ಮತ್ತು ತಮ್ಮ ಗದ್ದುಗೆಯನ್ನು ಉಳಿಸಿಕೊಳ್ಳುವುದಕ್ಕಾಗಿ ದೇವರನ್ನು ಪೂಜಿಸತೊಡಗಿದರು.

ಜನಸಮುದಾಯದ ಎಲ್ಲರ ಅಗತ್ಯಗಳಿಗೆ ಬಳಕೆಯಾಗಬೇಕಾಗಿದ್ದ ನಿಸರ್ಗ ಸಂಪತ್ತು ಮತ್ತು ಮಾನವ ದುಡಿಮೆಯಿಂದ ಉತ್ಪನ್ನಗೊಂಡ ವಸ್ತುಗಳು ಕೆಲವೇ ಸಿರಿವಂತರ ಕಯ್ ಸೇರಿ, ಹೆಚ್ಚಿನ ಸಂಕೆಯ ಬಡಜನರು ತಮ್ಮ ಪಾಲಿನದನ್ನು ಪಡೆಯಲಾಗದೆ ಹಸಿವು/ಬಡತನ/ಅಪಮಾನಗಳಿಂದ ನರಳತೊಡಗಿದರು. ಬಡವರಾಗಿರುವ ಜನರ ಸಂಕಟಗಳಿಗೆ ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ ಪುಣ್ಯಗಳೇ ಕಾರಣವೆಂಬ ನಂಬಿಕೆಯನ್ನು ದೇವರು ಮತ್ತು ಧರ್ಮದ ಹೆಸರಿನಲ್ಲಿ ಸಿರಿವಂತರು ಮತ್ತು ಅಕ್ಕರವಂತರಾದ ಮೇಲು ಜಾತಿಯ ಜನರು ಕಲೆ, ಸಾಹಿತ್ಯ, ಸಂಗೀತಗಳ ಮೂಲಕ ಜನಮನದಲ್ಲಿ ಬಿತ್ತಿದರು.

ಸಮಾಜದ ರಚನೆಯಲ್ಲಿರುವ ಜಾತಿ/ವರ್ಗ ತಾರತಮ್ಯದ ಕಟ್ಟುಪಾಡುಗಳು ಮತ್ತು ಉಳ್ಳವರು ಮಾಡುತ್ತಿರುವ ವಂಚನೆ/ಕಪಟತನ/ಕ್ರೂರತನದ ನಡೆನುಡಿಗಳು ತಮ್ಮ ಬಾಳಿನ ನೋವು/ಸಂಕಟ/ಯಾತನೆಗಳಿಗೆ ಕಾರಣವೆಂಬುದನ್ನು ಬಡವರು ಅರಿಯಲಾಗದೆ, ದೇವರನ್ನೇ ತಮ್ಮ ಬದುಕಿನ ಆಗುಹೋಗುಗಳಿಗೆ ಹೊಣೆಗಾರ ನನ್ನಾಗಿ ಮಾಡಿಕೊಂಡರು. ಇದರಿಂದಾಗಿ ದುಡಿಯುವ ಸಮುದಾಯಕ್ಕೆ ಸೇರಿದ ಬಡವರು ತಮ್ಮ ದುಡಿಮೆಯ ಸಂಪತ್ತನ್ನು ಕೊಳ್ಳೆ ಹೊಡೆದು ಸುಲಿಗೆ ಮಾಡುತ್ತಿರುವ ಉಳ್ಳವರನ್ನು ಮತ್ತು ಗದ್ದುಗೆಯಲ್ಲಿರುವ ವ್ಯಕ್ತಿಗಳನ್ನು ತಮ್ಮ ಹಗೆಗಳೆಂದು ಗುರುತಿಸಲಾಗಲಿಲ್ಲ.

ಸಿರಿವಂತರು ದೇಗುಲಗಳನ್ನು ಕಟ್ಟಿಸುವ ಮೂಲಕ ಬಡವರ ಮನದಲ್ಲಿ ದೇವರ ಬಗೆಗೆ ಇದ್ದ ನಂಬಿಕೆಯನ್ನು ಹೆಚ್ಚುಮಾಡಿದರು. ಇದರಿಂದ ಸಿರಿವಂತರ ಸುಲಿಗೆಯು ಯಾವುದೇ ಅಡಚಣೆಗಳಿಲ್ಲದೆ ಮುಂದುವರಿಯಲು ಅನುಕೂಲ ವಾಯಿತು. ದುಡಿಯುವ ವರ್ಗದ ಬಡವರೆಲ್ಲರೂ ಒಂದಾಗಿ ಜತೆಗೂಡಿ ಸಿರಿವಂತರ ಎದುರು ಹೋರಾಡಿ ತಮ್ಮ ದುಡಿಮೆಯ ನ್ಯಾಯಯುತವಾದ ಪಾಲನ್ನು ಪಡೆಯದಂತೆ ಬಡವರನ್ನು ತಡೆಗಟ್ಟಿರುವ ಶಕ್ತಿಯೇ ದೇವರಾಗಿದೆ. ಏಕೆಂದರೆ ದೇವರನ್ನು ನಂಬಿದ ಬಡವರು ತಮ್ಮ ಈ ಜನ್ಮದ ಸಂಕಟಗಳಿಗೆ ತಾವು

ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ-ಪುಣ್ಯಗಳೇ ಕಾರಣವೆಂದು ತಿಳಿದು, ಅದಕ್ಕೆ ತಕ್ಕಂತೆ ತಮ್ಮ ಹಣೆಯಲ್ಲಿ ಬ್ರಹ್ಮನು ಬರೆದಿರುವ ವಿಧಿಬರಹವನ್ನು ಇಲ್ಲವೇ ಹಣೆ ಬರಹವನ್ನು ಅಳಿಸಲಾಗದು/ಬದಲಾಯಿಸಲಾಗದು ಎಂದು ನಂಬಿದ್ದಾರೆ. ತಾವು ಈಗಿರುವ ನೆಲೆಯಲ್ಲಿಯೇ ಬದುಕನ್ನು ಕಳೆಯುವುದು ಅನಿವಾರ್ಯವೆಂದು ಒಪ್ಪಿ ಕೊಂಡು ಹಸಿವು/ಬಡತನ/ಅಪಮಾನದಲ್ಲಿಯೇ ಬೆಂದು ಬೂದಿಯಾಗುತ್ತಿದ್ದಾರೆ.

ಉಳ್ಳವರ ವಂಚನೆ/ಕ್ರೂರತನ/ಸುಲಿಗೆಯು ಹೆಚ್ಚಾದಂತೆಲ್ಲಾ ನಾಡಿನ ಉದ್ದಗಲದಲ್ಲಿ ಹೊಸ ಹೊಸ ದೇವಾಲಯಗಳ ಕಟ್ಟುವಿಕೆ ಮತ್ತು ಇರುವ ದೇವಾಲಯಗಳನ್ನು ಬೆಲೆಬಾಳುವ ವಸ್ತುಗಳಿಂದ ಅಲಂಕರಿಸಿ ಒಳಗುಡಿ ಯಲ್ಲಿರುವ ವಿಗ್ರಹಕ್ಕೆ ಚಿನ್ನ ಬೆಳ್ಳಿ ವಜ್ರ ವೈಡೂರ್ಯಗಳ ಒಡವೆಗಳನ್ನು ತೊಡಿಸಿ ದೇವರನ್ನು ಮೆರೆಸುವ ಆಚರಣೆಗಳು ಕಂಗೊಳಿಸುತ್ತವೆ. ಏಕೆಂದರೆ ಕೋಟಿಗಟ್ಟಲೆ ಜನರ ದಿನನಿತ್ಯದ ಬದುಕಿಗೆ ಅಗತ್ಯವಾದ ಸಂಪತ್ತನ್ನು ಲೂಟಿ ಮಾಡಿಟ್ಟಿರುವ ಹಣದಲ್ಲಿ ಒಂದು ಪಾಲನ್ನು ಈ ರೀತಿ ದೇವರ ಹೆಸರಿನಲ್ಲಿ ಉಳ್ಳವರು ವೆಚ್ಚಮಾಡಿ ಸಮಾಜದ ಮನ್ನಣೆಗೆ ಪಾತ್ರರಾಗುತ್ತಿದ್ದಾರೆ.

ಆದ್ದರಿಂದ ದೇಗುಲದ ನಿರ್ಮಾಣವು ಬಡವರಿಗೆ ಕೆಡುಕನ್ನುಂಟು ಮಾಡುತ್ತಿದ್ದರೆ, ಮೇಲು ಜಾತಿ ಮತ್ತು ಮೇಲು ವರ್ಗಕ್ಕೆ ಸೇರಿದ ಉಳ್ಳವರ ಮತ್ತು ಎತ್ತರದ ಗದ್ದುಗೆಯಲ್ಲಿ ಕುಳಿತು ಆಡಳಿತ ನಡೆಸುತ್ತಿರುವ ವ್ಯಕ್ತಿಗಳ ಹಿತವನ್ನು ಕಾಪಾಡುತ್ತಿದೆ.

3) ತಮ್ಮ ಅಂಗಯ್ ಮೇಲೆ ಸಣ್ಣ ಆಕಾರದ ಲಿಂಗವನ್ನು ಇಟ್ಟುಕೊಂಡು ಪೂಜಿಸುತ್ತಿದ್ದ ಶಿವಶರಣಶರಣೆಯರ ಪಾಲಿಗೆ ದೇವರು ಎನ್ನುವುದು ವ್ಯಕ್ತಿಯ ಮಯ್ ಮನದಲ್ಲಿ ನಿರಂತರವಾಗಿ ಮೂಡುತ್ತಿರುವ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಸಾಮಾಜಿಕವಾಗಿ ಒಳ್ಳೆಯ ನಡೆ ನುಡಿಯಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವುದರ ಸಂಕೇತವಾಗಿತ್ತು.

ಉಳ್ಳವರು, ಮೇಲು ಜಾತಿಯವರು ಮತ್ತು ಅಕ್ಕರವಂತರು ದೇವರ ಹೆಸರಿನಲ್ಲಿ ಬಡವರ ಮನದಲ್ಲಿ ತಲೆತಲಾಂತರದಿಂದ ನಾಟಿಸಿದ್ದ ಕೀಳರಿಮೆ ಮತ್ತು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ವ್ಯಕ್ತಿಯು ಒಳ್ಳೆಯ ನಡೆನುಡಿ ಮತ್ತು ಕಾಯಕವನ್ನು ಪ್ರಾಮಾಣಿಕವಾಗಿ ಮಾಡುವುದರ ಮೂಲಕ ತನ್ನ ಒಳಿತಿನ ಜತೆ ಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬಹುದೆಂಬುದನ್ನು ಶಿವಶರಣಶರಣೆಯರು ತಮ್ಮ ನಡೆನುಡಿಗಳ ಮೂಲಕ ಮನಗಾಣಿಸಿದರು.

ಜನರ ಆಸೆಗಳನ್ನು ಈಡೇರಿಸುವ ಜಡವಸ್ತುವನ್ನಾಗಿ ದೇವರನ್ನು ಕಾಣದೆ, ಜನರಿಗೆ ಸತ್ಯ/ನೀತಿ/ನ್ಯಾಯದಿಂದ ಬಾಳಲು ಅಗತ್ಯವಾದ ಅರಿವನ್ನು ನೀಡುವ ಚೇತನವನ್ನಾಗಿ ಶಿವಶರಣೆಯರು ದೇವರನ್ನು ಕಂಡರು. ಕಲ್ಲು ಚಪ್ಪಡಿಗಳ ತಳಹದಿಯ ಮೇಲೆ ಕಟ್ಟುವ ದೇಗುಲದ ಬದಲು, ಒಳ್ಳೆಯ ನಡೆನುಡಿಗಳಿಂದ ಕೂಡಿದ ಸಾಮಾಜಿಕ ವ್ಯಕ್ತಿತ್ವದ ತಳಹದಿಯ ಮೇಲೆ ದೇವರನ್ನು ನೆಲೆಗೊಳಿಸಿದರು.

❖

121. ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ
ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲಸಂಗಮದೇವನೊಳಗಿಪ್ಪನಯ್ಯಾ.

ವ್ಯಕ್ತಿಯು ತನ್ನ ನಡೆನುಡಿಗಳನ್ನು ತಾನೇ ಒರೆಹಚ್ಚಿ ನೋಡಿಕೊಳ್ಳುತ್ತ, ತಾನು ಆಡುವ ಒಳ್ಳೆಯ ಮಾತಿಗೆ ತಕ್ಕಂತೆ ಒಳ್ಳೆಯ ಕೆಲಸವನ್ನು ಮಾಡಲಾಗದೆ ಪರಿತಪಿಸುತ್ತ, ಒಳ್ಳೆಯ ನಡೆನುಡಿಗಳ ಮೂಲಕ ಬದುಕನ್ನು ರೂಪಿಸಿಕೊಳ್ಳುವ ಹಂಬಲದಿಂದ ಕಾತರಿಸುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ.

ಎನ್ನ=ನನ್ನ; ನಡೆ+ಒಂದು; ನಡೆ=ನಡವಳಿಕೆ; ಪರಿ=ರೀತಿ/ಬಗೆ; ನುಡಿ+ಒಂದು; ನುಡಿ=ಮಾತು/ಸೊಲ್ಲು;

ಎನ್ನ ನಡೆಯೊಂದು ಪರಿ ಎನ್ನ ನುಡಿಯೊಂದು ಪರಿ=ನಾನು ಆಡುವ ಮಾತು ಗಳಿಗೂ ನಾನು ಮಾಡುವ ಕೆಲಸಗಳಿಗೂ ಯಾವುದೇ ನಂಟಿಲ್ಲ. ಹೇಳುವುದು ಒಂದು, ಮಾಡುವುದು ಮತ್ತೊಂದು; ಬಾಯಲ್ಲಿ ಒಳ್ಳೆಯ ಮಾತುಗಳನ್ನಾಡುತ್ತ, ನಿತ್ಯ ಜೀವನದಲ್ಲಿ ಕೆಟ್ಟ ಕೆಲಸಗಳಲ್ಲಿ ತೊಡಗಿದ್ದೇನೆ;

ಎನ್ನ+ಒಳಗೆ+ಏನೂ; ಒಳಗೆ=ಅಂತರಂಗದಲ್ಲಿ/ಮನದಲ್ಲಿ; ಏನೂ= ಯಾವುದೇ ಬಗೆಯ/ರೀತಿಯ; ಶುದ್ಧ+ಇಲ್ಲ; ಶುದ್ಧ=ಸರಿಯಾದುದು; ಶುದ್ಧವಿಲ್ಲ= ಸರಿಯಾಗಿಲ್ಲ/ಚೊಕ್ಕಟವಾಗಿಲ್ಲ; ನೋಡು+ಅಯ್ಯಾ; ನೋಡು=ಕಾಣು/ತಿಳಿ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ=ನನ್ನ ಮನದಲ್ಲಿ ಒಳ್ಳೆಯ ಆಲೋಚನೆ/ಕಲ್ಪನೆ ಮೂಡುವುದರ ಜತೆಜತೆಗೆ ಕೆಟ್ಟ ಆಲೋಚನೆ/ಕಲ್ಪನೆ ಸೇರಿಕೊಂಡು, ನನ್ನ ಮನಸ್ಸು ಗೊಂದಲಕ್ಕೆ ಗುರಿಯಾಗಿದೆ;

ಎನ್ನ ನಡೆಯೊಂದು ಪರಿ ಎನ್ನ ನುಡಿಯೊಂದು ಪರಿ ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ=ಪ್ರತಿಯೊಬ್ಬ ವ್ಯಕ್ತಿಯು ತನಗೆ ಅರಿವು ಬಂದ ಗಳಿಗೆಯಿಂದ ಸಾಯುವ ತನಕ ಜೀವನದ ಹಲವಾರು ಸನ್ನಿವೇಶಗಳಲ್ಲಿ ಆಡುವ ಮಾತು ಒಂದಾದರೆ, ಮಾಡುವ ಕೆಲಸ ಮತ್ತೊಂದಾಗಿರುತ್ತದೆ. ವ್ಯಕ್ತಿಯ ಇಂತಹ

ಇಬ್ಬಗೆಯ ವರ್ತನೆಗೆ ಕಾರಣವೇನೆಂಬುದನ್ನು ನಿಸರ್ಗ ಮತ್ತು ಸಮಾಜದ ನೆಲೆಗಳಿಂದ ನೋಡಬೇಕು.

ಜಗತ್ತಿನಲ್ಲಿ ಹುಟ್ಟಿ ಬೆಳೆದು ಬಾಳಿ ಅಳಿಯುವ ಜೀವಿಗಳಲ್ಲಿ ಮಾನವ ಜೀವಿಯನ್ನು ಹೊರತುಪಡಿಸಿ, ಇನ್ನುಳಿದ ಪ್ರಾಣಿ, ಹಕ್ಕಿ, ಕ್ರಿಮಿಕೀಟಗಳೆಲ್ಲವೂ ನಿಸರ್ಗದ ನೆಲೆಯಲ್ಲಿ ಬೆತ್ತಲೆಯಾಗಿ ಅಂದರೆ ಮಯ್ ಮೇಲೆ ಯಾವುದೇ ಬಗೆಯ ಬಟ್ಟೆಯನ್ನು ತೊಡದೆ, ಬೆತ್ತಲೆಯಾಗಿಯೇ ಬಾಳಿ ಅಳಿಯುತ್ತವೆ. ಆದರೆ ಮಯ್ ಮೇಲೆ ಬಟ್ಟೆಯನ್ನು ತೊಟ್ಟಿರುವ ಮಾನವ ಜೀವಿಯು ಮಾತ್ರ ನಿಸರ್ಗದ ನೆಲೆಯಲ್ಲಿ ಇತ್ತ ಒಂದು ಪ್ರಾಣಿಯಾಗಿ, ಅತ್ತ ತಾನೇ ಕಟ್ಟಿಕೊಂಡಿರುವ ಸಮಾಜದ ನೆಲೆಯಲ್ಲಿ ಒಬ್ಬ ಸಾಮಾಜಿಕ ವ್ಯಕ್ತಿಯಾಗಿ ಬಾಳುತ್ತಿದ್ದಾನೆ. ಒಂದು ಕಡೆ ಅವನ ಮಯ್ ಮನಗಳು ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳಲು ಮತ್ತು ಕಾಮದ ನಂಟನ್ನು ಪಡೆಯಲು ತುಡಿಯುತ್ತಿದ್ದರೆ, ಮತ್ತೊಂದು ಎಡೆಯಲ್ಲಿ ಜಾತಿಮತಗಳ ಕಟ್ಟುಪಾಡು, ಸಂಪ್ರದಾಯ, ಆಡಳಿತದ ಕಾನೂನುಗಳಿಗೆ ವ್ಯಕ್ತಿಯ ನಡೆನುಡಿಗಳು ಒಳಪಟ್ಟಿರುತ್ತವೆ. ಆದುದರಿಂದ ನಿಸರ್ಗ ಸಹಜವಾದ ಹಸಿವನ್ನು, ಮಯ್ಯಿನ ಕಾಮವನ್ನು ಮನದ ಬಯಕೆಯನ್ನು ಸಮಾಜ ಮತ್ತು ಆಡಳಿತದ ನೀತಿನಿಯಮಗಳ ಎಲ್ಲೆಯೊಳಗೆ ಪೂರಯಿಸಿಕೊಳ್ಳಬೇಕಾಗಿದೆ.

ಇತರ ಜೀವಿಗಳ ಬದುಕಿನಲ್ಲಿ ಎದುರಾಗದ 'ಒಳಿತು/ಕೆಡುಕು, ಸರಿ/ತಪ್ಪು, ನೀತಿ/ಅನೀತಿ, ನ್ಯಾಯ/ಅನ್ಯಾಯದ ನಡೆನುಡಿಗಳೆಂಬ ಇಬ್ಬಗೆಯ ತಾಕಲಾಟಗಳು' ಮಾತು ಬಲ್ಲ ಮಾನವ ಜೀವಿಯನ್ನು ಕಾಡುತ್ತಿವೆ. ಮಾತು ಎಂಬುದು ಮಾನವ ಜೀವಿಯು ತನ್ನ ಮನದ ಒಳಮಿಡಿತಗಳನ್ನು ಮರೆಮಾಚಲು/ಮುಚ್ಚಿಡಲು ಬಳಸುವ ಒಂದು ಉಪಕರಣವಾಗಿಯೂ ಬಳಕೆಯಾಗುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಪಡೆಯುವ ಅರಿವು, ಆಡುವ ಮಾತು ಮತ್ತು ಮಾಡುವ ಕೆಲಸದ ನಡುವೆ ಹಲವಾರು ಸನ್ನಿವೇಶಗಳಲ್ಲಿ ಯಾವುದೇ ಬಗೆಯ ಹೊಂದಾಣಿಕೆಯಿಲ್ಲದೆ, ಅವೆಲ್ಲವೂ ಬೇರೆ ಬೇರೆಯಾಗಿರುತ್ತವೆ. ಇಂತಹ ಇಬ್ಬಗೆಯ ವ್ಯಕ್ತಿತ್ವವು ಮಾನವ ಸಮುದಾಯದಲ್ಲಿ ಗಂಡು ಹೆಣ್ಣು ಎನ್ನದೆ ಪ್ರತಿಯೊಬ್ಬರಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಇದ್ದೇ ಇರುತ್ತದೆ;

ನುಡಿಗೆ=ಆಡುವ ಮಾತುಗಳಿಗೆ; ತಕ್ಕ=ಸರಿಯಾದ/ಸಮನಾದ; ನಡೆಯ=ವರ್ತನೆಯನ್ನು/ಕೆಲಸವನ್ನು; ಕಾಣ್=ನೋಡು/ತಿಳಿ; ಕಂಡಡೆ=ನೋಡಿದರೆ/

ತಿಳಿದುಕೊಂಡರೆ; ಕೂಡಲ ಸಂಗಮದೇವನ್+ ಒಳಗೆ+ಇಪ್ಪನ್+ ಅಯ್ಯಾ; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಇಪ್ಪನ್=ಇರುವನು;

ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲಸಂಗಮ ದೇವನೊಳಗಿಪ್ಪನಯ್ಯಾ = ವ್ಯಕ್ತಿಯು ಆಡುವ ಒಳ್ಳೆಯ ಮಾತಿಗೆ ತಕ್ಕಂತೆ ಅವನು ಒಳ್ಳೆಯ ಕೆಲಸವನ್ನು ಮಾಡಿದರೆ, ಅಂತಹವರನ್ನು ದೇವರು ಮೆಚ್ಚಿಕೊಳ್ಳುತ್ತಾನೆ. ಶಿವಶರಣಶರಣೆಯರು 'ವ್ಯಕ್ತಿಯ ಒಳ್ಳೆಯ ನಡೆನುಡಿಗಳೇ ದೇವರು' ಎಂಬ ನಿಲುವನ್ನು ಹೊಂದಿದ್ದರು)

❖

122. ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ
ಹೊಗಳಿ ಹೊಗಳಿ
ಎನ್ನ ಹೊಗಳತೆ ಎನ್ನನಿಮ್ಮೈಗೊಂಡಿತ್ತಲ್ಲಾ
ಅಯ್ಯೋ ನೊಂದೆನು ಸೈರಿಸಲಾರೆನು
ಅಯ್ಯಾ ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತಲ್ಲಾ
ಅಯ್ಯೋ ನೊಂದೆನು ಸೈರಿಸಲಾರೆನು
ಕೂಡಲಸಂಗಮದೇವಾ
ನೀನೆನಗೆ ಒಳ್ಳಿದನಾದಡೆ
ಎನ್ನ ಹೊಗಳತೆಗಡ್ಡ ಬಾರಾ ಧರ್ಮಿ.

ತನ್ನ ನಡೆನುಡಿಗಳನ್ನು ಕುರಿತು ಸುತ್ತಮುತ್ತಣ ಜನರು ಹೊಗಳಿಕೆಯ ಮಾತುಗಳನ್ನು ಎಡೆಬಿಡದೆ ಒಂದೇ ಸಮನೆ ಆಡತೊಡಗಿದಾಗ, ಹೊಗಳಿಕೆಗೆ ಗುರಿಯಾದ ವ್ಯಕ್ತಿಯು ತನ್ನ ಮನದಲ್ಲಿ ಉಂಟಾಗುತ್ತಿರುವ ತಲ್ಲಣಗಳನ್ನು ಈ ವಚನದಲ್ಲಿ ಹೇಳಿಕೊಂಡಿದ್ದಾನೆ.

ಎನ್ನ್+ಅರ್+ಒಲಿದು; ಎನ್=ನಾನು; ಎನ್ನ=ನನ್ನ; ಎನ್ನವರ್=ನನ್ನವರು/ನನ್ನೊಡನೆ ನಂಟನ್ನು ಹೊಂದಿರುವ ವ್ಯಕ್ತಿಗಳು; ಒಲಿ=ಮೆಚ್ಚು/ಪ್ರೀತಿಸು; ಒಲಿದು=ಮೆಚ್ಚಿಕೊಂಡು/ಪ್ರೀತಿಸುತ್ತ; ಎನ್ನವರೊಲಿದು=ನನ್ನೊಡನೆ ನಂಟನ್ನು ಹೊಂದಿರುವ ವ್ಯಕ್ತಿಗಳು ನನ್ನನ್ನು ಬಹಳವಾಗಿ ಮೆಚ್ಚಿಕೊಂಡು/ಪ್ರೀತಿಸುತ್ತ;

ಹೊನ್ನಶೂಲ+ಅಲ್ಲಿ+ಇಕ್ಕಿದರ್+ಎನ್ನ; ಹೊನ್ನು=ಚಿನ್ನ; ಶೂಲ=ಮರಣ ದಂಡನೆಗೆ ಗುರಿಯಾದವರ ಕೊರಳಿಗೆ ಹಾಕುವ ಉರುಳಿನಿಂದ ಕೂಡಿದ ನೇಣುಗಂಬ. ಈ ನೇಣುಗಂಬವನ್ನು ಮರ ಇಲ್ಲವೇ ಕಬ್ಬಿಣದ ಕಂಬ ಮತ್ತು ತೊಲೆಗಳಿಂದ ಮಾಡಿರುತ್ತಾರೆ; ಹೊನ್ನಶೂಲ=ಚಿನ್ನದ ಹೊರಕವಚದಿಂದ ಕೂಡಿದ ಕಂಬ ಮತ್ತು ತೊಲೆಗಳಿಂದ ಮಾಡಿರುವ ಶೂಲ; ಇಕ್ಕು=ಹಾಕು/ಇಡು; ಇಕ್ಕಿದರ್=ಹಾಕಿದರು/ಏರಿಸಿದರು;

ಹೊಗಳು=ಯಾವುದೇ ವಸ್ತು-ಜೀವಿ-ವ್ಯಕ್ತಿಯ ಬಗ್ಗೆ ಮಾತನಾಡುವಾಗ, ಅದರಲ್ಲಿ/ಅವನಲ್ಲಿ ಕಂಡುಬರುವ ವಾಸ್ತವ ಸಂಗತಿಗಳ ಜತೆಗೆ ಇಲ್ಲಸಲ್ಲದ ಸಂಗತಿಗಳನ್ನು ಸೇರಿಸಿಕೊಂಡು ಅತಿಯಾಗಿ ಗುಣಗಾನ ಮಾಡುವುದು; ಹೊಗಳಿ=ಹೊಗಳುತ್ತ/ಕೊಂಡಾಡುತ್ತ/ಬಣ್ಣಿಸುತ್ತ;

ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ=ನನ್ನ ನಡೆನುಡಿಗಳನ್ನು ಮೆಚ್ಚಿಕೊಂಡ ವ್ಯಕ್ತಿಗಳು ಎಡೆಬಿಡದೆ ಗುಣಗಾನ ಮಾಡತೊಡಗಿ ನನ್ನನ್ನು ಹೊನ್ನಶೂಲಕ್ಕೇರಿಸಿದರು;

'ಹೊನ್ನಶೂಲ' ಎಂಬ ಪದ ಮತ್ತು 'ಹೊನ್ನಶೂಲದಲ್ಲಿಕ್ಕಿದರು' ಎಂಬ ಪದಕಂತೆಯು ರೂಪಕವಾಗಿ ಬಳಕೆಗೊಂಡಿವೆ.

ಹೊನ್ನಶೂಲದ ಉರುಳಿಗೆ ವ್ಯಕ್ತಿಯ ಕೊರಳನ್ನಿಕ್ಕಿ ವ್ಯಕ್ತಿಯ ಜೀವವನ್ನು ತೆಗೆಯುವ ಕ್ರಿಯೆಯನ್ನು ವ್ಯಕ್ತಿಯನ್ನು ಬಣ್ಣಬಣ್ಣದ ಮಾತುಗಳಿಂದ ಹೊಗಳಿ ಕೊಂಡಾಡುವ ಕ್ರಿಯೆಯೊಡನೆ ಜೋಡಿಸಲಾಗಿದೆ. ಶೂಲವು ಹೊನ್ನಿನಿಂದ ನಿರ್ಮಾಣಗೊಂಡಿದ್ದರೂ ಅದರ ಪರಿಣಾಮ ಮಾತ್ರ ಇನ್ನುಳಿದ ಮರದ/ಕಬ್ಬಿಣದ ಶೂಲದಂತೆಯೇ ಇರುತ್ತದೆ.

ನೋಡುವ ಕಣ್ಣುಗಳಿಗೆ ಹೊನ್ನಿನ ಕಾಂತಿಯಿಂದ ಶೂಲ ಕಂಗೊಳಿಸುವಂತೆ, ವ್ಯಕ್ತಿಯ ಬಗ್ಗೆ ಆಡುತ್ತಿರುವ ಹೊಗಳಿಕೆಯ ಮಾತುಗಳು ವ್ಯಕ್ತಿಗೆ ಅಪಾರವಾದ ಆನಂದ ಮತ್ತು ಹೆಮ್ಮೆಯನ್ನುಂಟುಮಾಡುತ್ತವೆ. ಚಿನ್ನದ ಶೂಲವಾಗಿದ್ದರೂ ಸಾವು ತಪ್ಪುವುದಿಲ್ಲ. ಚಿನ್ನದ ಶೂಲಕ್ಕೆ ಹಾಕಿದ ವ್ಯಕ್ತಿಯು ಜೀವವನ್ನು ಕಳೆದುಕೊಂಡರೆ, ಹೊಗಳಿಕೆಯ ನುಡಿಗಳಿಗೆ ಮರುಳಾದ ವ್ಯಕ್ತಿಯು ತನ್ನಲ್ಲಿದ್ದ ಒಳ್ಳೆಯ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಏಕೆಂದರೆ ತನ್ನನ್ನು ಮೆಚ್ಚಿಕೊಂಡವರು ಆಡುವ ಹೊಗಳಿಕೆಯ ನುಡಿಯನ್ನು ಕೇಳಕೇಳುತ್ತಿದ್ದಂತೆಯೇ, ವ್ಯಕ್ತಿಯ ಮನದಲ್ಲಿ ತಾನು ಇತರರಿಗಿಂತ ಹೆಚ್ಚಾಗಿ ತಿಳಿದವನು/ದೊಡ್ಡವನು/ಒಳ್ಳೆಯವನು/ನನ್ನಿಂದಲೇ ಎಲ್ಲವೂ ಆಗುತ್ತಿದೆ ಎಂಬ ಅಹಂಕಾರದ ಒಳಮಿಡಿತಗಳು ಮೂಡತೊಡಗುತ್ತವೆ.

ಹೊಗಳಿಕೆಯ ಮಾತಿನ ಗುಂಗಿನಲ್ಲಿ ಸಿಲುಕಿದ ವ್ಯಕ್ತಿಯು ತನ್ನ ಹೆಸರು ಮತ್ತು ತಾನು ಮಾಡುತ್ತಿರುವ ಕೆಲಸವು ಜನಮನದಲ್ಲಿ ಸದಾಕಾಲ ಶಾಶ್ವತವಾಗಿ ನೆಲಸುತ್ತದೆಯೆಂಬ ಕೀರ್ತಿಶನಿಗೆ ಒಳಗಾಗುತ್ತಾನೆ. ಹೊಗಳಿಕೆಯ ನುಡಿಗಳಿಂದ ಮಯ್ ಮರೆತು, ಸೊಕ್ಕಿನ ನಡೆನುಡಿಗಳಿಂದ ತನ್ನನ್ನು ತಾನೇ ಮೆರೆಸಿಕೊಳ್ಳುವುದರಲ್ಲಿ ಮಗ್ನನಾಗುತ್ತಾನೆ. ಆದ್ದರಿಂದ ಸದ್ದುಗದ್ದಲವಿಲ್ಲದೆ ತನ್ನ ಪಾಡಿಗೆ ತಾನು ಜನಸಮುದಾಯಕ್ಕೆ ಒಳಿತನ್ನುಂಟು ಮಾಡುತ್ತಿದ್ದ ವ್ಯಕ್ತಿಯ ಪಾಲಿಗೆ ಹೊಗಳಿಕೆಯೆಂಬುದು ಕೇಡನ್ನು ಬಗೆಯುವ ಸಂಗತಿಯಾಗುತ್ತದೆ;

ಹೊಗಳತೆ=ಹೊಗಳಿಕೆ/ಮೆಚ್ಚುಗೆಯ ನುಡಿಗಳು; ಎನ್ನ ಹೊಗಳತೆ=ನನ್ನನ್ನು ಕುರಿತು ಆಡಿದ ಮೆಚ್ಚುಗೆಯ/ಗುಣಗಾನದ ಮಾತುಗಳು;

ಎನ್+ಅನ್+ಇಮ್ಮೈ+ಕೊಂಡು+ಇತ್ತು+ಅಲ್ಲಾ; ಎನ್ನನ್=ನನ್ನನ್ನು; ಎರಡು+ಮೆಯ್=ಇಮ್ಮೈ; ಮೆಯ್=ದೇಹ/ಶರೀರ; ಇಮ್ಮೈ=ಎರಡು ತುಂಡಾದ ದೇಹ; ಕೊಳ್=ಕಡಿ; ಕೊಂಡಿತ್ತು=ಕತ್ತರಿಸಿತ್ತು/ಕಡಿದು ತುಂಡರಿಸಿತ್ತು; ಇಮ್ಮೈಗೊಂಡಿತ್ತು=ಒಂದು ದೇಹವು ಎರಡು ತುಂಡುಗಳಾದವು;

ಅಲ್ಲಾ=ಆ ರೀತಿಯಲ್ಲಿ/ಬಗೆಯಲ್ಲಿ ಆಯಿತು; ಅಯ್ಯೋ=ಯಾತನೆಯ ಒಳಮಿಡಿತವನ್ನು ಹೊರಹಾಕುವಾಗ ಬಳಸುವ ಪದ; ನೊಂದೆನು=ಸಂಕಟಕ್ಕೆ ಒಳಗಾಗಿ ನರಳುತ್ತಿರುವೆನು; ಸೈರಿಸಲ್+ಆರೆನು; ಸೈರಿಸು=ತಾಳು/ಸಹಿಸು; ಆರ್=ಶಕ್ತನಾಗು/ಕಸುವುಳ್ಳವನು/ಬಲವುಳ್ಳವನು; ಆರೆನು=ನನ್ನಲ್ಲಿ ಬಲವಿಲ್ಲ/ಶಕ್ತಿಯಿಲ್ಲ; ಸೈರಿಸಲಾರೆನು=ನನ್ನಿಂದ ತಡೆದುಕೊಳ್ಳಲು ಆಗುತ್ತಿಲ್ಲ/ಸಹಿಸುವುದಕ್ಕೆ ಆಗುತ್ತಿಲ್ಲ;

ಎನ್ನ ಹೊಗಳತೆ ಎನ್ನನಿಮ್ಮೈಗೊಂಡಿತ್ತಲ್ಲಾ ಅಯ್ಯೋ ನೊಂದೆನು ಸೈರಿಸಲಾರೆನು= ನನ್ನ ಬಗ್ಗೆ ಆಡುತ್ತಿರುವ ಹೊಗಳಿಕೆಯ ನುಡಿಗಳು ನನ್ನ ದೇಹವನ್ನು ಎರಡು ತುಂಡಾಗಿ ಸೀಳುತ್ತಿವೆ. ದೇಹವು ಎರಡು ಹೋಳುಗಳಾಗುವ ಕ್ರಿಯೆಯನ್ನು ವ್ಯಕ್ತಿಯ ವ್ಯಕ್ತಿತ್ವದಲ್ಲಿ ಉಂಟಾಗುವ ಒಡಕಿಗೆ ಒಂದು ರೂಪಕವಾಗಿ ಬಳಸಲಾಗಿದೆ.

'ವ್ಯಕ್ತಿತ್ವದಲ್ಲಿ ಒಡಕು ಉಂಟಾಗುವುದು' ಎಂದರೆ ವ್ಯಕ್ತಿಯ ಮನದಲ್ಲಿ ಇಬ್ಬಗೆಯ ಒಳಮಿಡಿತಗಳು ಮೂಡುವುದು. ಇದುವರೆಗೂ ಒಳ್ಳೆಯ ಉದ್ದೇಶ ಗಳಿಂದ ಕೂಡಿದ್ದ ವ್ಯಕ್ತಿಯ ಮನದಲ್ಲಿ ಈಗ ಕೆಟ್ಟ ಒಳಮಿಡಿತಗಳು ತುಡಿಯ ತೊಡಗುತ್ತವೆ. ಈಗ ವ್ಯಕ್ತಿಯು ಬಾಯಲ್ಲಿ ಹೇಳುವುದು ಒಂದಾದರೆ, ಕಯ್ಯಲ್ಲಿ ಮಾಡುವುದು ಮತ್ತೊಂದಾಗುತ್ತದೆ. ಇದರಿಂದಾಗಿ ವ್ಯಕ್ತಿಯ ನಡೆನುಡಿಯಲ್ಲಿ ಹೊಂದಾಣಿಕೆಯು ತಪ್ಪುತ್ತದೆ. ಹೊಗಳಿಕೆಯ ನುಡಿಗಳಿಗೆ ಮನಗೊಟ್ಟಂತೆಲ್ಲಾ ವ್ಯಕ್ತಿ ಯಲ್ಲಿದ್ದ ಒಳ್ಳೆಯ ವ್ಯಕ್ತಿತ್ವ ಹಾಳಾಗತೊಡಗುತ್ತದೆ. ತನ್ನ ವ್ಯಕ್ತಿತ್ವದಲ್ಲಿ ಆಗುತ್ತಿರುವ ಇಂತಹ ಬದಲಾವಣೆಯ ಬಗ್ಗೆ ಎಚ್ಚರವನ್ನುಳ್ಳ ವ್ಯಕ್ತಿಯು ಹೊಗಳಿಕೆಯಿಂದ ಉಂಟಾದ ಈ ಬಗೆಯ ಪೆಟ್ಟನ್ನು ತನ್ನಿಂದ ತಡೆದುಕೊಳ್ಳಲಾಗುತ್ತಿಲ್ಲವೆಂದು ಕಂಗಾಲಾಗಿದ್ದಾನೆ.

ನಿಮ್ಮ=ಹೊಗಳುತ್ತಿರುವ ವ್ಯಕ್ತಿಗಳ; ಮನ್ನಣೆ=ಮರ್ಯಾದೆ/ಹೆಚ್ಚಿನ ಒಲವು; ಮಸೆದ+ಅಲಗು+ಆಗಿ; ಮಸೆ=ಲೋಹದಿಂದ ಮಾಡಿರುವ ಕತ್ತಿ/ಚಾಕು/ಚೂರಿ ಮುಂತಾದ ಹತಾರಗಳ ಅಂಚನ್ನು ಹರಿತಗೊಳಿಸಲೆಂದು ಕಲ್ಲಿನ ಮೇಲೆ ಉಜ್ಜುವುದು; ಮಸೆದ=ಹರಿತಗೊಳಿಸಿದ/ಚೂಪನ್ನಾಗಿಸಿದ; ಅಲಗು=ಕತ್ತಿ;

ಮಸೆದಲಗು=ಹರಿತಗೊಳಿಸಿರುವ ಕತ್ತಿ; ತಾಗು+ಇತ್ತು+ಅಲ್ಲಾ; ತಾಗು=ಚುಚ್ಚು; ತಾಗಿತ್ತಲ್ಲಾ=ಚುಚ್ಚಿಕೊಂಡಿರುವುದು/ನಾಟಿಕೊಂಡಿರುವುದು;

ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲಾ ಅಯ್ಯೋ ನೊಂದೆನು ಸೈರಿಸಲಾರೆನು=ಹಾಡಿ ಹೊಗಳುತ್ತಿರುವವರು ಮಾಡುತ್ತಿರುವ ಗುಣಗಾನ/ ಸುತ್ತಮುತ್ತಲಿನವರು ನೀಡುತ್ತಿರುವ ಹೆಚ್ಚಿನ ಮನ್ನಣೆಯು ವ್ಯಕ್ತಿಯನ್ನು ಹರಿತವಾದ ಕತ್ತಿಯಿಂದ ಚುಚ್ಚಿ ತಿವಿದು ಗಾಸಿಗೊಳಿಸಿದಂತೆ ಯಾತನೆಯನ್ನುಂಟುಮಾಡುತ್ತಿದೆ. ಈ ಬಗೆಯ ಮಾನಸಿಕ ಯಾತನೆಯನ್ನು ವ್ಯಕ್ತಿಗೆ ಸಹಿಸಿಕೊಳ್ಳಲಾಗುತ್ತಿಲ್ಲ; ಮಸೆದಲಗು ತಾಗಿದಾಗ ಉಂಟಾಗುವ ಪರಿಣಾಮವನ್ನು ಹೊಗಳಿಕೆಯಿಂದ ಉಂಟಾಗುವ ಯಾತನೆಗೆ ಒಂದು ರೂಪಕವಾಗಿ ಬಳಸಲಾಗಿದೆ;

ಕೂಡಲಸಂಗಮದೇವ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ;

ನೀನ್+ಎನಗೆ; ನೀನು=ದೇವರಾದ ಶಿವ; ಎನಗೆ=ನನಗೆ; ಒಳ್ಳಿದನ್+ ಆದಡೆ; ಒಳ್=ಒಳ್ಳೆಯದು; ಒಳ್ಳಿದನ್=ಒಳ್ಳೆಯವನು; ಆದಡೆ=ಆಗಿದ್ದರೆ; ಹೊಗಳತೆಗೆ+ ಅಡ್ಡ; ಅಡ್ಡ=ತಡೆಗಟ್ಟುವುದು/ಆಗದಂತೆ ತಡೆಯುವುದು; ಬರ್=ಬರುವುದು; ಬಾರಾ=ಬರುವಂತಹ ವನಾಗು; ಧರ್ಮಿ=ಕರುಣೆಯುಳ್ಳವನು/ಒಲವಿನಿಂದ ಕಾಪಾಡುವವನು;

ಕೂಡಲಸಂಗಮದೇವಾ ನೀನೆನಗೆ ಒಳ್ಳಿದನಾದಡೆ ಎನ್ನ ಹೊಗಳತೆಗೆ ಅಡ್ಡ ಬಾರಾ ಧರ್ಮಿ=ಹೊಗಳಿಕೆಯಿಂದ ತನ್ನನ್ನು ಕಾಪಾಡುವಂತೆ ಒಳಿತಿನ ನಡೆ ನುಡಿಗಳ ಸಂಕೇತವಾಗಿರುವ ಕೂಡಲಸಂಗಮನಲ್ಲಿ ವ್ಯಕ್ತಿಯು ಮೊರೆಯಿಡುತ್ತಿದ್ದಾನೆ.

❖

123. ಏನಿ ಬಂದಿರಿ ಹದುಳಿದ್ದಿರೆ ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೆ
ಕುಳ್ಳಿರೆಂದಡೆ ನೆಲ ಕುಳಿ ಹೋಹುದೆ
ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಬನೆ
ಕೂಡಲಸಂಗಮದೇವಯ್ಯ.

ತನ್ನ ಬಳಿಗೆ ಸಹಾಯವನ್ನು ಪಡೆಯುವುದಕ್ಕಾಗಿ ಬಂದವರನ್ನು ವ್ಯಕ್ತಿಯು ಹೇಗೆ ಕಾಣಬೇಕು ಮತ್ತು ಅವರೊಡನೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಏನ್=ಯಾವುದು; ಏನಿ=ವ್ಯಕ್ತಿಯನ್ನು ಒಲವು ನಲಿವಿನಿಂದ ಮಾತನಾಡಿಸುವಾಗ 'ಏನ್ರಿ' ಎಂಬ ಬಹುವಚನರೂಪದ ಪದವನ್ನು ಬಳಸಲಾಗುತ್ತದೆ/ಮಾತಿನ ಸನ್ನಿವೇಶದಲ್ಲಿ ಉಚ್ಚಾರಣೆಗೊಳ್ಳುವಾಗ 'ಏನ್ರಿ' ಎಂಬುದು 'ಏನಿ' ಎಂದಾಗಿದೆ; ಬಂದಿರಿ=ಬಂದಿದ್ದೀರಿ; ಏನಿ ಬಂದಿರಿ=ಯಾತಕ್ಕಾಗಿ ಬಂದಿರಿ/ನಿಮ್ಮ ಬರುವಿಕೆಯ ಉದ್ದೇಶವೇನು?

ಹದುಳ+ಇದ್ದಿರೆ; ಹದುಳ=ನೆಮ್ಮದಿ/ಆರೋಗ್ಯ; ಇದ್ದಿರೆ=ಇದ್ದೀರಾ/ಇರುವಿರಾ?; ಹದುಳಿದ್ದಿರೆ=ಚೆನ್ನಾಗಿದ್ದೀರಾ/ಆರೋಗ್ಯವಾಗಿದ್ದೀರಾ; ಎಂದಡೆ=ಎಂದು ಕೇಳಿದರೆ; ನಿಮ್ಮ+ಐಸಿರಿ; ಐಶ್ವರ್ಯ>ಐಸಿರಿ; ಐಸಿರಿ=ಸಿರಿವಂತಿಕೆ/ಆಸ್ತಿಪಾಸ್ತಿ/ಗದ್ದುಗೆ; ನಿಮ್ಮೈಸಿರಿ=ನಿಮ್ಮ ಆಸ್ತಿಪಾಸ್ತಿ/ಒಡವೆ ವಸ್ತು/ಗದ್ದುಗೆ; ಹಾರು= ಕಳೆದುಹೋಗು/ಹಾಳಾಗು; ಹೋಹುದೆ=ಹೋಗುವುದೆ; ಹಾರಿ ಹೋಹುದೆ= ಹಾಳಾಗುವುದೇ/ಕಳೆದು ಹೋಗುವುದೇ;

ಏನಿ ಬಂದಿರಿ ಹದುಳಿದ್ದಿರೆ ಎಂದಡೆ ನಿಮ್ಮೈಸಿರಿ ಹಾರಿ ಹೋಹುದೆ=ಇತರರು ತಮ್ಮ ಜೀವನದ ಸಂಕಟವನ್ನು ನಿಮ್ಮೊಡನೆ ಹೇಳಿಕೊಂಡು, ತಮ್ಮ ಯಾತನೆಯ ನಿವಾರಣೆಗೆ ನಿಮ್ಮಿಂದ ಪರಿಹಾರವನ್ನು ಪಡೆಯಲೆಂದು ನಿಮ್ಮ ಬಳಿಗೆ ಬಂದಾಗ, ಅವರನ್ನು 'ಏನು ಬಂದಿರಿ, ಚೆನ್ನಾಗಿದ್ದೀರಾ' ಎಂದು ಒಲವಿನಿಂದ ಮಾತನಾಡಿಸಿದ ಮಾತ್ರಕ್ಕೆ, ನಿಮ್ಮ ಸಿರಿವಂತಿಕೆಯೆಲ್ಲವೂ ಹಾಳಾಗಿ ಹೋಗುತ್ತದೆಯೇ;

ಕುಳ್ಳಿರಿ+ಎಂದಡೆ; ಕುಳ್ಳಿರಿ=ಕುಳಿತುಕೊಳ್ಳಿ; ನೆಲ=ಜಾಗ/ಎಡೆ; ಕುಳಿ=ಗುಣಿ/

ಹಳ್ಳ; **ಕುಳ್ಳಿರೆಂದಡೆ ನೆಲ ಕುಳಿಹೋಹುದೆ**=ಕುಳಿತುಕೊಳ್ಳಿ ಎಂದು ಹೇಳಿದರೆ, ಅವರು ಕುಳಿತುಕೊಳ್ಳುವ ಜಾಗದಲ್ಲಿ ಗುಳಿ ಬೀಳುವುದೆ/ನೆಲ ಕುಸಿಯುವುದೆ;

ಒಡನೆ=ಕೂಡಲೇ; ನುಡಿ=ಮಾತು/ಸೊಲ್ಲು; ಒಡನೆ ನುಡಿದರೆ=ಅವರು ನಿಮ್ಮ ಬಳಿಗೆ ಬರುತ್ತಿದ್ದಂತೆಯೇ/ ಅವರನ್ನು ಮಾತನಾಡಿಸಿದರೆ; ಶಿರ>ಸಿರ; ಸಿರ=ತಲೆ; ಹೊಟ್ಟೆ+ಒಡೆವುದೆ; ಹೊಟ್ಟೆ=ಒಡಲು/ಉದರ; ಒಡೆ=ಸೀಳು/ಬಿರಿ; **ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ**=ಅವರು ನಿಮ್ಮ ಬಳಿಗೆ ಬರುತ್ತಿದ್ದಂತೆಯೇ ಮಾತನಾಡಿಸಿದರೆ, ನಿಮ್ಮ ತಲೆಯೊಡೆದು ಹೊಟ್ಟೆ ಹೋಳಾಗುವುದೆ;

ಕೊಡಲ್+ಇಲ್ಲದೆ+ಇದ್ದಡೆ+ಒಂದು; ಕೊಡು=ನೀಡು/ದಾನಮಾಡು; ಇದ್ದಡೆ=ಇದ್ದರೆ; ಇಲ್ಲದಿದ್ದಡೆ=ಇಲ್ಲದಿದ್ದರೆ; ಗುಣ+ಇಲ್ಲದೆ+ಇದ್ದಡೆ; ಗುಣ= ಒಳ್ಳೆಯತನ/ಸಜ್ಜನಿಕೆ/ನಡತೆ; ಒಂದು ಗುಣ=ಬಳಿ ಬಂದವರ ಮನಸ್ಸನ್ನು ನೋಯಿಸದೆ/ಅವರನ್ನು ಕಡೆಗಣಿಸದೆ, ಅವರನ್ನು ಒಲವು ಕರುಣೆಯಿಂದ ಕಂಡು ಮಾತನಾಡಿಸುವ ಗುಣ;

ಮೂಗ=ಮೂಗನ್ನು; ಕೊಯ್=ಕತ್ತರಿಸು/ಸೀಳು; ಕೊಯ್ವುದ= ಕೊಯ್ಯುವುದನ್ನು/ಕತ್ತರಿಸುವುದನ್ನು; **ಮೂಗ ಕೊಯ್ವುದ**=ಮೂಗು ಕೊಯ್ಯುವುದನ್ನು; ಮಾಣ್=ಬಿಡು/ತ್ಯಜಿಸು; ಮಾಣ್ಬನೆ>ಮಾಬನೆ; ಮಾಬನೆ=ಮಾಡದೆ ಬಿಡುತ್ತಾನೆಯೇ; **ಮೂಗ ಕೊಯ್ವುದ ಮಾಬನೆ**=ಮೂಗನ್ನು ತುಂಡರಿಸದೆ/ ಕತ್ತರಿಸದೆ ಬಿಡುತ್ತಾನೆಯೇ; **ಮೂಗು ಕೊಯ್ಯುವುದು**=ಇದು ಒಂದು ನುಡಿಗಟ್ಟು. ವ್ಯಕ್ತಿಯನ್ನು ಅಪಮಾನಗೊಳಿಸುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಕೂಡಲಸಂಗಮದೇವ+ಅಯ್ಯ; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದಡೆ ಮೂಗ ಕೊಯ್ವುದ ಮಾಬನೆ ಕೂಡಲ ಸಂಗಮದೇವಯ್ಯ=ನೆರವಾಗುವುದಕ್ಕೆ ನಿಮಗೆ ಮನಸ್ಸಿಲ್ಲದಿದ್ದರೂ/ಬಳಿ ಬಂದವರನ್ನು ಒಲವು/ಕರುಣೆಯಿಂದ ಕಾಣುವ ಮತ್ತು ಮಾತನಾಡಿಸುವ ಗುಣವನ್ನು ಹೊಂದಿರಬೇಕು. ಬೇಡಿ/ನೆರವು ಕೋರಿ ಬಂದವರನ್ನು ಅಹಂಕಾರದಿಂದ ಕಡೆಗಣಿಸುವ/ವ್ಯಕ್ತಿಗಳನ್ನು ಕೂಡಲಸಂಗಮ ದೇವನು ದಂಡಿಸುತ್ತಾನೆ.

"ಸಹಮಾನವರ ಬಗ್ಗೆ ಒಲವು ಮತ್ತು ಕರುಣೆ ಇಲ್ಲದಿದ್ದರೆ, ಅಂತಹವರಿಗೆ ಶಿವನು ಒಲಿಯುವುದಿಲ್ಲ" ಎಂಬ ಶಿವಶರಣಶರಣೆಯರ ನಿಲುವನ್ನು ಈ ನುಡಿಗಳು ಸೂಚಿಸುತ್ತವೆ. ❖

124. ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ.

ವ್ಯಕ್ತಿಯು ತಾನು ಕಾಪಾಡಬೇಕಾಗಿರುವುದನ್ನು ತಾನೇ ಹಾಳುಮಾಡಲು ತೊಡಗಿದಾಗ, ಅದನ್ನು ತಡೆಗಟ್ಟಲು ಯಾರಿಂದಲೂ ಆಗುವುದಿಲ್ಲವೆಂಬ ವಾಸ್ತವವನ್ನು ರೂಪಕಗಳ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

(ಒಲೆ=ಅಡುಗೆಯನ್ನು ಮಾಡಲು/ನೀರನ್ನು ಕಾಯಿಸಲು/ವಸ್ತುಗಳನ್ನು ಬೇಯಿಸಲು ಬೇಕಾದ ಬೆಂಕಿಯನ್ನು ಉರಿಸಲು ಕಟ್ಟಿರುವ ಗೂಡು; ಹತ್ತು= ಬೆಂಕಿಯು ಹೊತ್ತಿಕೊಳ್ಳುವುದು; ಉರಿ=ಬೆಂಕಿಯ ತಾಪ/ಸುಡುವಿಕೆ; ಉರಿದಡೆ= ದಗದಗನೆ ಉರಿಯ ತೊಡಗಿದರೆ/ಬೆಂಕಿಯ ಕೆನ್ನಾಲಿಗೆಯು ಹರಡಿಕೊಂಡರೆ; ನಿಲಬಹುದು+ಅಲ್ಲದೆ; ನಿಲ್=ನಿಂತುಕೊಳ್ಳುವುದು; ಬಹುದು=ಆಗುವುದು; ಅಲ್ಲದೆ=ಅದನ್ನು ಬಿಟ್ಟು/ಹೊರತುಪಡಿಸಿ; ಧರೆ=ಭೂಮಂಡಲ/ಇಡೀ ಜಗತ್ತು; ನಿಲಲು=ನಿಂತುಕೊಳ್ಳಲು; ಬಾರದು=ಆಗುವುದಿಲ್ಲ;

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲು ಬಾರದು= ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿಯು ಇದ್ದಕ್ಕಿದ್ದಂತೆಯೇ 'ದಗ್' ಎಂದು ಹತ್ತಿಕೊಂಡು, ಉರಿಯ ಕೆನ್ನಾಲಿಗೆಯನ್ನು ಚಾಚುತ್ತ ಸುತ್ತಮುತ್ತ ಹಬ್ಬಲು ತೊಡಗಿದಾಗ, ಒಲೆಯ ಬೆಂಕಿಯ ಜಳದಿಂದ ದೂರ ಸರಿದು ನಿಂತು ಪಾರಾಗ ಬಹುದು. ಆದರೆ ಇಡೀ ಜಗತ್ತೆಲ್ಲವೂ ಹತ್ತಿಕೊಂಡು ಉರಿಯತೊಡಗಿದಾಗ, ಬೆಂಕಿಯ ತಾಪದಿಂದ ಪಾರಾಗಿ ನಿಲ್ಲಲು ಯಾವೊಂದು ಎಡೆಯೂ ಇರುವುದಿಲ್ಲ. ಅಂದರೆ ಬೆಂಕಿಯ ತಾಪದಿಂದ ಸುಟ್ಟು ಕರಕಲಾಗಬೇಕಾಗುತ್ತದೆ;

ಏರಿ=ಮಳೆ ನೀರನ್ನು ಇಲ್ಲವೇ ತೊರೆಗಳಲ್ಲಿ ಹರಿದು ಹೋಗು ತ್ತಿರುವ ನೀರನ್ನು ಒಂದೆಡೆ ಕೂಡಿಹಾಕಲೆಂದು ಕಟ್ಟಿರುವ ಅಣೆ/ಕಟ್ಟೆ; ನೀರ್+ಉಂಬಡೆ; ಉಣ್=ಕುಡಿ/ಹೀರು; ಉಂಬಡೆ=ಹೀರಿಕೊಂಡರೆ/ಕುಡಿದರೆ;

ಏರಿ ನೀರುಂಬಡೆ=ಬೇಸಾಯಕ್ಕೆ ಬಳಸಲೆಂದು ಮತ್ತು ಕುಡಿಯುವ ನೀರಿನ

ಅಗತ್ಯವನ್ನು ಪೂರಯಿಸಿಕೊಳ್ಳುವುದಕ್ಕಾಗಿ ಹರಿಯುತ್ತಿದ್ದ ನೀರನ್ನು ಒಂದಡೆ ನಿಲ್ಲಿಸಲೆಂದು ಕಟ್ಟಿರುವ ಏರಿಯೇ ನೀರೆಲ್ಲವನ್ನೂ ಹೀರಿಕೊಂಡರೆ;

ಬೇಲಿ=ಹೊಲ/ಗದ್ದೆ/ತೋಟದಲ್ಲಿ ಒಡ್ಡಿರುವ ಬೆಳೆಯನ್ನು ಕಾಪಾಡಿ ಕೊಳ್ಳುವುದಕ್ಕಾಗಿ ಜಮೀನಿನ ಸುತ್ತಲೂ ಹಾಕಿರುವ ಮುಳ್ಳಿನ ಗಿಡಗಳ ಪೊದೆ; ಕೆಯ್=ಹೊಲ/ಗದ್ದೆ/ತೋಟ/ಜಮೀನು; ಕೆಯ್ಯ=ಹೊಲ/ಗದ್ದೆ/ತೋಟದಲ್ಲಿರುವ ಬೆಳೆಯನ್ನು; ಮೇ/ಮೆಯ್= ತಿನ್ನು/ಕಬಳಿಸು; ಮೇವಡೆ=ತಿಂದರೆ/ಕಬಳಿಸಿದರೆ;

ಬೇಲಿ ಕೆಯ್ಯ ಮೇವಡೆ=ಬೆಳೆಯನ್ನು ಬೇಲಿಯೇ ತಿಂದುಕೊಂಡರೆ/ಮೇಯ ತೊಡಗಿದರೆ;

ನಾರಿ=ಹೆಂಗಸು; ತನ್ನ=ತನಗೆ ಸೇರಿದ; ಮನೆ+ಅಲ್ಲಿ; ಮನೆ=ವಾಸದ ನೆಲೆ; ಕಳ್=ಒಡವೆ ವಸ್ತುಗಳನ್ನು ಅಪಹರಿಸುವುದು; ಕಳುವಡೆ=ಕಳವು ಮಾಡಲು ತೊಡಗಿದರೆ;

ನಾರಿ ತನ್ನ ಮನೆಯಲ್ಲಿ ಕಳುವಡೆ=ಮನೆಯೊಡತಿಯು ತನ್ನ ಮನೆಯ ಒಡವೆ ವಸ್ತುಗಳನ್ನು ತಾನೇ ಕದಿಯತೊಡಗಿದರೆ/ಅಪಹರಿಸಿದರೆ;

ತಾಯ್=ಮಗುವನ್ನು ಹಡೆದವಳು; ಮೊಲೆ+ಪಾಲು; ಮೊಲೆ=ಎದೆ/ಕುಚ; ಪಾಲು=ಹಾಲು; ನಂಜು+ಆಗಿ; ನಂಜು=ಸೇವಿಸಿದವರಿಗೆ ಸಾವನ್ನುಂಟು ಮಾಡುವ ವಿಷ; ಕೊಲ್=ಜೀವ ತೆಗೆ/ಸಾಯಿಸು; ಕೊಲುವಡೆ=ಸಾಯಿಸಿದರೆ/ ಜೀವ ತೆಗೆದರೆ;

ತಾಯ ಮೊಲೆವಾಲು ನಂಜಾಗಿ ಕೊಲುವಡೆ=ಹೆತ್ತ ತಾಯಿಯ ಎದೆ ಹಾಲು ಮಗುವಿನ ಪಾಲಿಗೆ ನಂಜಾಗಿ, ಮಗುವಿನ ಸಾವಿಗೆ ಕಾರಣವಾದರೆ;

ಇನ್ನು+ಆರಿಗೆ; ಇನ್ನು=ಮತ್ತೆ/ಬೇರೆ; ಆರ್=ಯಾರು/ಯಾವ ವ್ಯಕ್ತಿ; ಆರಿಗೆ= ಯಾರಿಗೆ/ಯಾವ ವ್ಯಕ್ತಿಗೆ; ದೂರು=ವ್ಯಕ್ತಿಯ ಇತರರಿಂದ ಒದಗಿ ಬಂದಿರುವ ಆಪತ್ತಿನಿಂದ ಪಾರುಮಾಡುವಂತೆ ಆಡಳಿತದ ಹೊಣೆಹೊತ್ತವರಿಗೆ ಮೊರೆಯಿಡುವುದು;

ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ=ಯಾರ ಮುಂದೆ ನನ್ನ ಸಂಕಟವನ್ನು ಹೇಳಿಕೊಳ್ಳಲಿ.

ಇಡೀ ಜಗತ್ತಿಗೆ ಬೆಂಕಿಯು ಹರಡಿಕೊಂಡು ಉರಿಯತೊಡಗುವ... ಏರಿಯೇ ಕೆರೆಯ ನೀರೆಲ್ಲವನ್ನೂ ಹೀರಿಕೊಳ್ಳುವ... ಬೇಲಿಯೇ ಬೆಳೆಯೆಲ್ಲವನ್ನೂ ಮೇಯುವ... ಮನೆಯೊಡತಿಯೇ ತನ್ನ ಮನೆಯ ಒಡವೆ ವಸ್ತುಗಳನ್ನು ಕದಿಯುವ... ತಾಯಿಯ ಎದೆಹಾಲೇ ಮಗುವಿನ ಸಾವಿಗೆ ಕಾರಣವಾಗುವ– ಈ ಆಯ್ದು ರೂಪಕಗಳ ಮೂಲಕ ವಚನಕಾರನು ಸಾಮಾಜಿಕ ಒಕ್ಕೂಟಗಳ ನಡುವೆ ಸಿಲುಕಿ ತೊಳಲಾಡುವ ವ್ಯಕ್ತಿಯ ಮೂಕವೇದನೆಯನ್ನು ಚಿತ್ರಿಸಿದ್ದಾನೆ.

ಜನಸಮುದಾಯದ ಒಳಿತಿಗೆಂದು ಮಾನವರೇ ಕಟ್ಟಿಕೊಂಡಿರುವ ಜಾತಿ/ಮತ/ಕುಟುಂಬ/ವಿದ್ಯೆ/ಆರೋಗ್ಯ/ನ್ಯಾಯ/ಆಡಳಿತದ ನೆಲೆಗಳನ್ನು ಸಾಮಾಜಿಕ ಒಕ್ಕೂಟಗಳೆಂದು ಕರೆಯುತ್ತಾರೆ. ಇವನ್ನು ಮುನ್ನಡೆಸುವ ಹೊಣೆಗಾರಿಕೆಯನ್ನು ಹೊತ್ತಿರುವ ವ್ಯಕ್ತಿಗಳು ನೀಚರಾಗಿ/ಕ್ರೂರಿಗಳಾಗಿ/ವಂಚಕರಾಗಿ ನಡೆದುಕೊಳ್ಳ ತೊಡಗಿದಾಗ ವ್ಯಕ್ತಿಯ/ಜನಸಮುದಾಯದ ಬದುಕು ನೂರೆಂಟು ಬಗೆಯ ಸಂಕಟಗಳಿಗೆ ಗುರಿಯಾಗಿ ನರಳತೊಡಗುತ್ತದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.

ಓದುಗರಿಗೆ/ಕೇಳುಗರಿಗೆ ಚೆನ್ನಾಗಿ ಮನದಟ್ಟಾಗುವಂತೆ ತಿಳಿಸಬೇಕೆಂಬ ಉದ್ದೇಶದಿಂದ ಕವಿಯು ತಾನು ಹೇಳಬೇಕಾದ ಸಂಗತಿಯನ್ನು ಮತ್ತೊಂದು ಸಂಗತಿಯೊಡನೆ ಜತೆಗೂಡಿಸಿ ಬಣ್ಣಿಸುವ ನುಡಿರಚನೆಯನ್ನು "ರೂಪಕ/ಶಬ್ದಚಿತ್ರ" ಎಂದು ಕರೆಯುತ್ತಾರೆ.

❖

125. ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯ
ನಮ್ಮ ಕೂಡಲಸಂಗನ ಶರಣರ ಕಂಡು
ಉದಾಸೀನವ ಮಾಡಿದಡೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಜನರು ತಮ್ಮ ನಿತ್ಯ ಜೀವನದಲ್ಲಿ ನಂಬಿಕೆ ಮತ್ತು ವಾಸ್ತವದ ನಡುವೆ ತೊಳಲಾಡುವಾಗ, ಅವರಲ್ಲಿ ಕಂಡು ಬರುವ ಇಬ್ಬಗೆಯ ನಡೆನುಡಿಗಳನ್ನು ಈ ವಚನದಲ್ಲಿ ಹೇಳಲಾಗಿದೆ.

“ನಂಬಿಕೆ**”** ಎಂದರೆ ಜನರು ಕಲ್ಪಿಸಿಕೊಂಡಿರುವ ಸಂಗತಿಗಳು ಮತ್ತು ಮಾಡುತ್ತಿರುವ ಆಚರಣೆಗಳು.

“ವಾಸ್ತವ**”** ಎಂದರೆ ನಿಸರ್ಗದಲ್ಲಿರುವ ಎಲ್ಲಾ ಬಗೆಯ ವಸ್ತುಗಳು ಮತ್ತು ಜೀವರಾಶಿಗಳು.

(ಕಲ್ಲು=ಶಿಲೆ; ನಾಗರು=ನಾಗರ ಹಾವು; ಕಲ್ಲ ನಾಗರ=ಕಲ್ಲಿನಿಂದ ಮಾಡಿರುವ ನಾಗರ ಹಾವಿನ ವಿಗ್ರಹ/ಪ್ರತಿಮೆ; ಕಾಣ್=ನೋಡು; ಕಂಡಡೆ=ನೋಡಿದರೆ; ಹಾಲ್+ಅನ್+ಎರೆ+ ಎಂಬರು; ಹಾಲ್=ಹಾಲು; ಅನ್=ಅನ್ನು; ಎರೆ=ಸುರಿ/ಹಾಕು; ಎಂಬರು=ಎನ್ನುವರು/ಎಂದು ಹೇಳುವರು; ದಿಟ=ನಿಜ/ಸತ್ಯ/ವಾಸ್ತವ; ದಿಟದ ನಾಗರ=ಜೀವಂತವಾಗಿರುವ ನಾಗರಹಾವನ್ನು; ಕೊಲ್+ ಎಂಬರ್+ ಅಯ್ಯ; ಕೊಲ್=ಸಾಯಿಸು;

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ=ನಾಗರಹಾವು ಜನಸಮುದಾಯದ ಮನದ ಕಲ್ಪನೆಯಲ್ಲಿ ನಾಗದೇವತೆಯಾಗಿ ನೆಲೆಗೊಂಡಿದೆ. ಜೀವಂತವಾಗಿರುವ ನಾಗರಹಾವನ್ನು ಹೊಡೆದು ಕೊಂದರೆ ಇಲ್ಲವೇ ಅದಕ್ಕೆ ಪೆಟ್ಟನ್ನು ಮಾಡಿ ನೋಯಿಸಿದರೆ, ಹಾಗೆ ಮಾಡಿದ ವ್ಯಕ್ತಿ ಇಲ್ಲವೇ ಅವನ ಕುಟುಂಬದವರು ಜೀವನದಲ್ಲಿ ಚರ್ಮದ ರೋಗಗಳಿಂದ ಮತ್ತು ಹೆಂಗಸರು ಬಂಜೆತನದಿಂದ ನರಳಬೇಕಾಗುತ್ತದೆ ಎಂಬ ಹೆದರಿಕೆಯು ಜನಮನದಲ್ಲಿದೆ. ಆದುದರಿಂದ ನಾಗದೇವತೆಯ

ಪ್ರತಿರೂಪದಂತಿರುವ ಕಲ್ಲ ನಾಗರಕ್ಕೆ ಹಾಲನ್ನು ಎರೆದು ಪೂಜಿಸುತ್ತಾರೆ. ಈ ಬಗೆಯ ಆಚರಣೆಯಿಂದ ಚರ್ಮದ ಕಾಯಿಲೆಗಳು ಗುಣವಾಗುವುದೆಂಬ/ ಬಂಜೆತನ ನಿವಾರಣೆಯಾಗುವುದೆಂಬ/ವ್ಯಕ್ತಿಯ ಜೀವನದಲ್ಲಿ ಎಲ್ಲಾ ರೀತಿಯಿಂದಲೂ ಒಳಿತು ಉಂಟಾಗುವುದೆಂಬ ನಂಬಿಕೆಯು ಜನಮನದಲ್ಲಿದೆ. ಈ ನೆಲೆಯಲ್ಲಿ ಕಲ್ಲ ನಾಗರದ ಪೂಜೆಯು ಜನಸಮುದಾಯದ "ನಂಬಿಕೆಯ ಜಗತ್ತನ್ನು" ಸೂಚಿಸುತ್ತದೆ.

ಜೀವಂತವಾಗಿರುವ ನಾಗರ ಹಾವು ಜನರ ಮುಂದೆ ಕಾಣಿಸಿಕೊಂಡಾಗ, ಅದು ಒಂದು ವೇಳೆ ಕಚ್ಚಿದರೆ, ಅದರ ನಂಜಿನಿಂದ ಸಾವು ಉಂಟಾಗುವುದೆಂಬ ಹೆದರಿಕೆಯಿಂದ ನಡುಗುತ್ತ ನಾಗರಹಾವನ್ನು "ಕೊಲ್ಲಿ/ಹೊಡಿಯಿರಿ/ಹೊಡೆದು ಸಾಯಿಸಿ" ಎಂದು ಜನರು ಅರಚುತ್ತಾರೆ. ಈ ನೆಲೆಯಲ್ಲಿ ಜನರ ಅರಚುವಿಕೆಯು "ವಾಸ್ತವ ಜಗತ್ತನ್ನು" ಸೂಚಿಸುತ್ತದೆ. ಏಕೆಂದರೆ ನಾಗರ ನಂಜಿನಿಂದ ಸಾವು ನಿಶ್ಚಿತ.

ನಿಸರ್ಗದ ವಸ್ತು ಮತ್ತು ಜೀವಿಗಳಿಂದ ತುಂಬಿರುವ **'ವಾಸ್ತವ ಜಗತ್ತು'** ಮತ್ತು ಜನರು ತಾವಾಗಿಯೇ ಕಲ್ಪಿಸಿಕೊಂಡು ಆಚರಿಸುತ್ತಿರುವ **'ನಂಬಿಕೆಯ ಜಗತ್ತು'**– ಇವು ಎರಡರ ನಡುವೆ ಜನರು ಬಾಳುತ್ತಿರುವುದರಿಂದ, ಇಂತಹ ಇಬ್ಬಗೆಯ ನಡೆನುಡಿಗಳು ಜನರ ಬದುಕಿನಲ್ಲಿ ಸಹಜವಾಗಿ ಕಂಡುಬರುತ್ತವೆ.

ಉಣ್=ತಿನ್ನು/ಮೆಲ್ಲು/ಸೇವಿಸು; ಉಂಬ=ಊಟ ಮಾಡುವ; ಜಂಗಮ= ವ್ಯಕ್ತಿಗೆ/ಸಹಮಾನವರಿಗೆ/ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿ ಗಳನ್ನು ಜನರಿಗೆ ತಿಳಿಯ ಹೇಳುತ್ತಾ, ಒಂದೆಡೆಯಿಂದ ಮತ್ತೊಂದೆಡೆಗೆ ನಿರಂತರ ವಾಗಿ ಸಂಚರಿಸುತ್ತಿರುವ ಶಿವಶರಣ; ಬಂದಡೆ=ಬಂದರೆ; ನಡೆ+ಎಂಬರು; ನಡೆ=ಮುಂದಕ್ಕೆ ಹೋಗು; ಉಣ್ಣದ=ತಿನ್ನದ/ಮೆಲ್ಲದ/ಸೇವಿಸಿದ; ಲಿಂಗ=ಈಶ್ವರನ ಸಂಕೇತವಾದ ವಿಗ್ರಹ; ಬೋನ=ಅನ್ನ/ಆಹಾರ; ಹಿಡಿ+ಎಂಬರ್+ಅಯ್ಯಾ; ಹಿಡಿ=ಮುಂದೆ ಇಡು/ನೀಡು;

ಉಂಬ ಜಂಗಮ ಬಂದಡೆ ನಡೆಯೆಂಬರಯ್ಯ ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯ=ಹಸಿವನ್ನು ನೀಗಿಸಿಕೊಳ್ಳಲೆಂದು ತಮ್ಮ ಮನೆಯ ಬಳಿಗೆ ಬರುವ ಜಂಗಮನಿಗೆ ಉಣಲಿಕ್ಕದೆ, ಜನರು ಅವನನ್ನು ಹೊರಹಾಕುವರು/ 'ಮುಂದಕ್ಕೆ ಹೋಗು' ಎಂದು ಹೇಳಿ ಸಾಗಹಾಕುವರು.

ಆದರೆ ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿರುವ ವಿಗ್ರಹರೂಪದ ಲಿಂಗದ ಮುಂದೆ ಉಣಿಸು ತಿನಸುಗಳನ್ನು ಜನರು ಎಡೆಯಾಗಿ ಇಡುವರು.

ಏಕೆಂದರೆ ಜೀವಂತ ಜಂಗಮನಿಗಿಂತ ಜಡರೂಪಿಯಾದ ದೇವರೇ ಜನರ ಪಾಲಿಗೆ ದೊಡ್ಡವನಾಗಿರುತ್ತಾನೆ. ಸಹಮಾನವರ ಹಸಿವು/ಬಡತನ/ಸಂಕಟವನ್ನು ಕಡೆಗಣಿಸಿ ದೇವರನ್ನು ದೊಡ್ಡದಾಗಿ ಮೆರೆಸುವ ಜನರ ನಿಲುವನ್ನು ವಚನಕಾರನು ಈ ಬಗೆಯ ನಡೆನುಡಿಗಳಲ್ಲಿ ಗುರುತಿಸಿದ್ದಾನೆ.

ಕೂಡಲಸಂಗ=ಈಶ್ವರ; ಶರಣ=ಒಳ್ಳೆಯ ನಡೆನುಡಿಗಳಿಂದ ಶಿವನನ್ನು ಪೂಜಿಸುವವನು; ಉದಾಸೀನ=ಅಸಡ್ಡೆ/ಕಡೆಗಣಿಸುವಿಕೆ; ಮಾಡಿದಡೆ=ಮಾಡಿದರೆ; ಕಲ್ಲ=ಕಲ್ಲನ್ನು; ತಾಗು=ಅಪ್ಪಳಿಸು; ಮಿಟ್ಟೆ+ ಅಂತೆ+ಅಪ್ಪರ್+ಅಯ್ಯ; ಮಿಟ್ಟೆ=ಮಣ್ಣಿನ ಉಂಡೆ/ಹೆಂಟೆ; **ಕಲ್ಲ ತಾಗಿದ ಮಿಟ್ಟೆ**=ಕಲ್ಲಿಗೆ ಬಡಿದ ಮಣ್ಣಿನ ಉಂಡೆಯು ಪುಡಿಪುಡಿಯಾಗುತ್ತದೆ; ಅಂತೆ=ಹಾಗೆ/ಆ ರೀತಿ; ಅಪ್ಪರ್=ಆಗುವರು/ಆಗುತ್ತಾರೆ;

ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ತಿಳಿದು, ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುತ್ತಿರುವ ಶಿವಶರಣರನ್ನು ಕಡೆಗಣಿಸುವ ವ್ಯಕ್ತಿಗಳು ಸಂಕಟಕ್ಕೆ ಗುರಿಯಾಗುತ್ತಾರೆ ಎಂಬ ಎಚ್ಚರಿಕೆಯ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ)

❖

126. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯ ಬೇಡ ಅನ್ಯರಿಗೆ ಅಸಹ್ಯಬಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ
ಇದೇ ಬಹಿರಂಗ ಶುದ್ಧಿ
ನಮ್ಮ ಕೂಡಲಸಂಗನದೇವರನೊಲಿಸುವ ಪರಿ.

ನಿತ್ಯದ ಬದುಕಿನಲ್ಲಿ ಮಾನವ ಸಮುದಾಯವು ಒಲವು ನಲಿವು ನೆಮ್ಮದಿಯಿಂದ ಬಾಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರಬೇಕಾದ ಒಳ್ಳೆಯ ನಡೆನುಡಿಗಳನ್ನು ಈ ವಚನದಲ್ಲಿ ಹೇಳಲಾಗಿದೆ.

(ಕಳ್=ಎಗರಿಸು/ಅಪಹರಿಸು; ಬೇಡ=ಬೇಕಾಗಿಲ್ಲ/ಸಲ್ಲದು; ಕಳಬೇಡ= ಇತರರ ಒಡವೆ ವಸ್ತು/ಆಸ್ತಿಪಾಸ್ತಿ/ಹಣಕಾಸನ್ನು ಕದಿಯಬೇಡ; ಕೊಲ್=ಜೀವ ತೆಗೆ/ಸಾಯಿಸು/ಪ್ರಾಣ ತೆಗೆ; ಕೊಲಬೇಡ=ಜೀವಿಗಳನ್ನು ಕೊಲ್ಲಬೇಡ; ಹುಸಿ=ಸುಳ್ಳು/ಸಟೆ/ಇಲ್ಲದ್ದನ್ನು ಇದೆಯೆಂದು ಹೇಳುವುದು–ಇರುವುದನ್ನು ಇಲ್ಲವೆಂದು ಹೇಳುವುದು; ನುಡಿ=ಮಾತು/ಸೊಲ್ಲು; **ಹುಸಿಯ ನುಡಿಯಲು ಬೇಡ**= ಸುಳ್ಳನ್ನು ಆಡಬೇಡ; ಮುನಿ=ಸಿಟ್ಟಾಗು/ಕೋಪಗೊಳ್ಳು/ಆಕ್ರೋಶಪಡು; **ಮುನಿಯ ಬೇಡ**=ಕೋಪದಿಂದ ಕೆರಳಬೇಡ;

ಅನ್ಯ=ಮತ್ತೊಂದು/ಮತ್ತೊಬ್ಬ; ಅನ್ಯರು=ಇತರರು/ಬೇರೆಯವರು; ಅಸಹ್ಯ+ ಪಡಬೇಡ; ಅಸಹ್ಯ=ತಿರಸ್ಕಾರ/ಕೀಳಾಗಿ ಕಾಣುವುದು; ಪಡು= ಹೊಂದು/ತಾಳು/ ತಳೆ; ಪಡಬೇಡ=ತಳೆಯ ಬೇಡ/ಹೊಂದಬೇಡ; **ಅನ್ಯರಿಗೆ ಅಸಹ್ಯಬಡಬೇಡ**= ಇತರರನ್ನು/ಬೇರೆಯವರನ್ನು ಕೀಳಾಗಿ ಕಾಣಬೇಡ ಮತ್ತು ನಡೆಸಿಕೊಳ್ಳಬೇಡ; ತನ್ನ=ನಿನ್ನನ್ನು ನೀನು; ಬಣ್ಣನೆ=ಹೊಗಳಿಕೆ/ಸ್ತುತಿ; **ತನ್ನ ಬಣ್ಣಿಸಬೇಡ**=ನಿನ್ನ ನಡೆನುಡಿಗಳನ್ನೇ ದೊಡ್ಡದಾಗಿ ಹೇಳಿಕೊಂಡು, ಎಲ್ಲರಿಗಿಂತ ನೀನೇ ಮೇಲು ಎಂದು ಹೊಗಳಿಕೊಳ್ಳಬೇಡ;

ಇದಿರ=ನಿನ್ನ ಮುಂದಿರುವವರನ್ನು/ವ್ಯವಹರಿಸುವವರನ್ನು; ಹಳಿ=ನಿಂದಿಸು/ ತೆಗಳು/ಬಯ್ಯುವುದು; **ಇದಿರ ಹಳಿಯಲು ಬೇಡ**=ನಿನ್ನ ಜತೆ ಒಡನಾಡುವವರನ್ನು/ ವ್ಯವಹರಿಸುವವರನ್ನು ಕಡೆಗಣಿಸಿ ನಿಂದಿಸಬೇಡ/ಬಯ್ಯಬೇಡ;

ಇದೇ=ಈ ಬಗೆಯ ನಡೆನುಡಿಗಳೇ/ಈ ರೀತಿಯ ನಡವಳಿಕೆಯೇ;

ಅಂತರಂಗ=ಮನಸ್ಸು; ಶುದ್ಧಿ=ಚೊಕ್ಕಟವಾಗಿರುವುದು; **ಅಂತರಂಗ ಶುದ್ಧಿ**= ಮನಸ್ಸನ್ನು ಚೊಕ್ಕಟವಾಗಿ ಇಟ್ಟುಕೊಂಡಿರುವುದು ಎಂದರೆ ಮನದಲ್ಲಿ ಮೂಡುವ ಕೆಟ್ಟ ವಿಚಾರಗಳನ್ನು ನಿವಾರಿಸಿಕೊಂಡು, ಒಳ್ಳೆಯ ವಿಚಾರಗಳನ್ನು ಎಚ್ಚರದಿಂದ ಕಾಪಾಡಿಕೊಳ್ಳುವುದು;

ಬಹಿರಂಗ=ಹೊರಗಡೆ/ಹೊರಗಿನದು; **ಬಹಿರಂಗ ಶುದ್ಧಿ**=ವ್ಯಕ್ತಿಯು ಸಾಮಾಜಿಕವಾಗಿ ಇತರರೊಡನೆ ವ್ಯವಹರಿಸುವಾಗ ತನಗೆ ಒಳಿತನ್ನು ಬಯಸುವಂತೆಯೇ ಇತರರ ಒಳಿತಿಗಾಗಿಯೂ ದುಡಿಯುವುದು; ಕೂಡಲ ಸಂಗಮದೇವರ್+ಅನ್+ಒಲಿಸುವ; ಕೂಡಲಸಂಗಮದೇವ=ಶಿವ/ಬಸವಣ್ಣನ ಮೆಚ್ಚಿನ ದೇವರು/ಬಸವಣ್ಣನ ವಚನಗಳ ಅಂಕಿತ ನಾಮ; ಅನ್=ಅನ್ನು; ಒಲಿ=ಮೆಚ್ಚು/ಒಪ್ಪು/ಪ್ರೀತಿಸು; ಒಲಿಸುವ =ಮೆಚ್ಚುಗೆಯನ್ನು ಪಡೆಯುವ/ ಒಪ್ಪುವಂತೆ ಮಾಡುವ; ಪರಿ=ರೀತಿ/ಕ್ರಮ;

ನಮ್ಮ ಕೂಡಲಸಂಗಮದೇವರನೊಲಿಸುವ ಪರಿ=ಕೂಡಲ ಸಂಗಮ ದೇವನನ್ನು ಒಲಿಸಿಕೊಳ್ಳಬೇಕಾದರೆ, ವ್ಯಕ್ತಿಯ ಮಯ್ ಮನದಲ್ಲಿ ಮೂಡುವ ವಿಚಾರಗಳು ಮತ್ತು ದಿನನಿತ್ಯದ ವ್ಯವಹಾರಗಳಲ್ಲಿ ಮಾಡುವ ಕೆಲಸಗಳೆಲ್ಲವೂ ತನಗೆ ಒಳಿತನ್ನುಂಟು ಮಾಡುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಿರಬೇಕು. ಸಾಮಾಜಿಕವಾಗಿ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರುವುದೇ ದೇವರನ್ನು ಒಲಿಸಿಕೊಳ್ಳಲು ಇರುವ ದಾರಿ ಎಂಬುದನ್ನು ವಚನಕಾರನು ಈ ನುಡಿಗಳಲ್ಲಿ ಸೂಚಿಸಿದ್ದಾನೆ.)

❖

127. ಕಾಲಲಿ ಕಟ್ಟಿದ ಗುಂಡು ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು ಮುಳುಗಲೀಯದು ಬೆಂಡು
ಇಂತಪ್ಪ ಸಂಸಾರಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ ಕೂಡಲಸಂಗಯ್ಯಾ.

ಇತ್ತ ನಿಸರ್ಗದ ನೆಲೆಯಲ್ಲಿ ಒಂದು ಪ್ರಾಣಿಯಾಗಿ, ಅತ್ತ ಸಾಮಾಜಿಕ ನೆಲೆಯಲ್ಲಿ ಒಬ್ಬ ಮಾನವ ಜೀವಿಯಾಗಿ ಬಾಳುತ್ತಿರುವ ವ್ಯಕ್ತಿಯ ಮಯ್ ಮನದ ತೊಳಲಾಟವನ್ನು ಈ ವಚನದಲ್ಲಿ ಹೇಳಲಾಗಿದೆ.

'ನಿಸರ್ಗದ ನೆಲೆ' ಎಂದರೆ ಜೀವಿಗಳು ಹುಟ್ಟಿ ಬೆಳೆದು ಬಾಳಿ ಅಳಿಯುತ್ತಿರುವ ಪ್ರಪಂಚ.

'ಸಾಮಾಜಿಕ ನೆಲೆ' ಎಂದರೆ ಮಾನವ ಸಮುದಾಯವು ಕಟ್ಟಿಕೊಂಡಿರುವ ಜಾತಿ, ಮತ, ಕುಟುಂಬ, ವಿದ್ಯೆ, ಕಾನೂನು. ಆಡಳಿತ ಮುಂತಾದ ಸಾಮಾಜಿಕ ಒಕ್ಕೂಟಗಳು.

(ಕಾಲ್+ಅಲ್+ಇ; ಕಾಲಲಿ=ಕಾಲಿನಲ್ಲಿ; ಕಟ್ಟು=ಬಿಗಿದು/ತೊಡಿಸು; ಕಟ್ಟಿದ= ಬಿಗಿದಿರುವ/ತೊಡಿಸಿರುವ; ಗುಂಡು=ದುಂಡಗೆ ಮತ್ತು ದಪ್ಪಗಿರುವ ಕಲ್ಲು; ಕೊರಳ್+ಅಲಿ; ಕೊರಳ್/ಕೊರಳು=ಕತ್ತು/ಕುತ್ತಿಗೆ; ಕೊರಳಲಿ=ಕತ್ತಿನಲ್ಲಿ/ ಕುತ್ತಿಗೆಯಲ್ಲಿ; ಬೆಂಡು=ಜೋಳದ ದಂಟು/ಸೋರೆಕಾಯಿಯ ಒಣಗಿದ ಬುಂಡೆ/ ನೀರಿನಲ್ಲಿ ಮುಳುಗದೆ ಮೇಲೆ ಮೇಲೆ ತೇಲುವ ದಂಟು/ಈಜುಗಾರರು ಬಳಸುವ ಬುರುಡೆ;

ತೇಲ್+ಅಲ್+ಈಯದು; ತೇಲ್/ತೇಲು=ನೀರಿನಲ್ಲಿ ಮುಳುಗದೆ ಮೇಲೆಯೇ ಇರುವುದು/ಚಲಿಸುವುದು; ತೇಲಲು=ನೀರಿನ ಮೇಲೆಯೇ ಇರಲು/ಚಲಿಸಲು;

ಈ=ಕೊಡು/ಅವಕಾಶವನ್ನು ನೀಡು; ಈಯದು=ಕೊಡುವುದಿಲ್ಲ/ಬಿಡುವುದಿಲ್ಲ;

ಕಾಲಲಿ ಕಟ್ಟಿದ ಗುಂಡು ಕೊರಳಲಿ... ಕಟ್ಟಿದ ಬೆಂಡು... ತೇಲಲೀಯದು ಗುಂಡು... ಮುಳಗಲೀಯದು ಬೆಂಡು=ಒಬ್ಬ ವ್ಯಕ್ತಿಯ ಕಾಲಿಗೆ ಅತ್ತ ದೊಡ್ಡ ಕಲ್ಲೊಂದನ್ನು ಬಿಗಿದು ಕಟ್ಟಿ, ಇತ್ತ ಅವನ ಕೊರಳಿಗೆ ಬೆಂಡನ್ನು ಬಿಗಿದು ನೀರಿನಿಂದ ತುಂಬಿರುವ ಆಳವಾದ ಕೆರೆಯೊಳಕ್ಕೆ ಅವನನ್ನು ಎಸೆಯಲಾಗಿದೆ. ಕಾಲಲ್ಲಿ ಕಟ್ಟಿರುವ ದೊಡ್ಡ ಕಲ್ಲಿನ ಗುಂಡು ಅವನ ದೇಹವನ್ನು ನೀರಿನ ಒಳಕ್ಕೆ ಎಳೆದುಕೊಳ್ಳುತ್ತಿದ್ದರೆ, ಕೊರಳಿಗೆ

ಕಟ್ಟಿರುವ ಬೆಂಡು ಅವನ ದೇಹವನ್ನು ನೀರಿನೊಳಗೆ ಮುಳುಗಲು ಬಿಡದೆ ಮೇಲಕ್ಕೆ ಎಳೆಯುತ್ತಿದೆ. ಇತ್ತ ಬದುಕಲು ಬಿಡದೆ, ಅತ್ತ ಸಾಯಲು ಬಿಡದೆ ಗುಂಡು/ಬೆಂಡುಗಳು ಅವನ ಮಯ್ಯನ್ನು ತಮ್ಮತ್ತ ಸೆಳೆಯುತ್ತಿರುವ ಈ ಪ್ರಸಂಗವನ್ನು ನಿಸರ್ಗ ಮತ್ತು ಸಮಾಜದ ನೆಲೆಗಳ ನಡುವೆ ಬಾಳುತ್ತಿರುವ ವ್ಯಕ್ತಿಯ ಮಯ್ ಮನದ ತೊಳಲಾಟವನ್ನು ನಿರೂಪಿಸಲು ಒಂದು ರೂಪಕವಾಗಿ ವಚನಕಾರನು ಚಿತ್ರಿಸಿದ್ದಾನೆ.

ಹೊಟ್ಟೆಯ ಹಸಿವು ಮತ್ತು ದೇಹದ ಕಾಮದ ಒಳಮಿಡಿತಗಳು ವ್ಯಕ್ತಿಯನ್ನು ಜೀವನದ ಉದ್ದಕ್ಕೂ ನಿರಂತರವಾಗಿ ಕಾಡುತ್ತಿರುತ್ತವೆ. ಅಂತೆಯೇ ವ್ಯಕ್ತಿಯು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜದ ಕಟ್ಟುಪಾಡುಗಳು/ಸಂಪ್ರದಾಯಗಳು/ಆಚರಣೆಗಳು ಮತ್ತು ಆಡಳಿತದ ಕಾನೂನುಗಳು ಅವನನ್ನು "ಹೀಗೆ ಮಾಡಬೇಕು/ಹೀಗೆ ಮಾಡಬಾರದು" ಎಂದು ನಿಯಂತ್ರಿಸುತ್ತಿವೆ.

ನಿಸರ್ಗ ಸಹಜವಾದ ಹಸಿವು, ಕಾಮದ ಸೆಳೆತ ಮತ್ತು ಮಾನವ ನಿರ್ಮಿತ ಕಟ್ಟುಪಾಡುಗಳ ನಡುವೆ ಸಿಲುಕಿರುವ ವ್ಯಕ್ತಿಯು ಸದಾಕಾಲ ಇಬ್ಬಗೆಯ ತುಯ್ದಾಡುವಿಕೆಯಲ್ಲಿ ಒದ್ದಾಡುತ್ತಿರುತ್ತಾನೆ. ಒಂದು ಕಡೆ ದೇಹದ ಕಾಮನೆಯು ತನ್ನ ಆಸೆಯನ್ನು ಪೂರಯಿಸಿಕೊಳ್ಳಲು ಹಂಬಲಿಸುತ್ತಿದ್ದರೆ, ಮತ್ತೊಂದೆಡೆ ಅದನ್ನು ಬಂದ ಹಾಗೆಯೇ ಹರಿಯಬಿಡದಂತೆ ಸಮಾಜದ ಕಟ್ಟಲೆಗಳು ತಡೆಹಿಡಿದಿವೆ. ಆದುದರಿಂದಲೇ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದ ಅನೇಕ ಸನ್ನಿವೇಶಗಳಲ್ಲಿ "ಯಾವುದು ಸರಿ/ಯಾವುದು ತಪ್ಪು; ಯಾವುದು ನೀತಿ/ಯಾವುದು ಅನೀತಿ; ಯಾವುದು ನ್ಯಾಯ/ಯಾವುದು ಅನ್ಯಾಯ" ಎಂಬುದನ್ನು ಸರಿಯಾಗಿ ನಿರ್ಣಯಿಸಲಾಗದೆ, ಇಬ್ಬಗೆಯ ಸಂಕಟಕ್ಕೆ ಒಳಗಾಗಿ ತೊಳಲಾಡುತ್ತ, ಒಳಿತು ಕೆಡುಕಿನ ಒಳಮಿಡಿತಗಳಿಂದ ಪರಿತಪಿಸುತ್ತಿರುತ್ತಾನೆ ಎಂಬ ತಿರುಳನ್ನು ಈ ರೂಪಕವು ಸೂಚಿಸುತ್ತಿದೆ.

ಇಂತು+ಅಪ್ಪ; ಇಂತು=ಈ ರೀತಿ/ಬಗೆ; ಅಪ್ಪ=ಆಗಿರುವ; ಇಂತಪ್ಪ=ಈ ರೀತಿಯಲ್ಲಿರುವ/ಬಗೆಯಲ್ಲಿರುವ; ಸಂಸಾರ=ಬದುಕು/ಲೋಕದ ಜೀವನ; ಶರಧಿ=ಕಡಲು; ಸಂಸಾರ ಶರಧಿ=ಮಾನವರ ಬದುಕಿನಲ್ಲಿ ಉಂಟಾಗುವ ಏಳಿಳಿತ ಗಳಿಗೆ ಮತ್ತು ಒಲವು ನಲಿವು ಸಾವು ನೋವಿನಿಂದ ಕೂಡಿದ ಆಗುಹೋಗುಗಳಿಗೆ/ಪ್ರಸಂಗಗಳಿಗೆ ಮೊದಲಿಲ್ಲ ಕಡೆಯಿಲ್ಲ. ಆದ್ದರಿಂದ ಒಂದೇ ನೋಟದಲ್ಲಿ ತುದಿ ಮೊದಲನ್ನು ಕಾಣಲಾಗದ ಸಾಗರದ ವಿಸ್ತಾರಕ್ಕೆ/ಆಳಕ್ಕೆ ಮಾನವರ ಜೀವನವನ್ನು ಹೋಲಿಸುತ್ತಾರೆ;

ದಾಂಟು=ಹಾರು/ನೆಗೆ/ಜಿಗಿ; ದಾಂಟಿಸಿ=ದಾಟಿಹೋಗುವಂತೆ ಮಾಡಿ; ಕಾಲ+ ಅಂತಕ; ಕಾಲ=ಯಮ; ಅಂತಕ=ಕೊಂದವನು/ವಿನಾಶಕ; ಕಾಲಾಂತಕ= ಶಿವ/ ಯಮನನ್ನು ಕೊಂದವನು; ಕಾಯ್=ಕಾಪಾಡು; ಕೂಡಲಸಂಗ+ಅಯ್ಯಾ; ಕೂಡಲಸಂಗ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ಸಂಸಾರಶರಧಿಯ ದಾಂಟಿಸಿ ಕಾಲಾಂತಕನೆ ಕಾಯೋ ಕೂಡಲ ಸಂಗಯ್ಯಾ=ಜೀವನದಲ್ಲಿ ಕೆಟ್ಟ ನಡೆನುಡಿಗಳಿಗೆ ಬಲಿಯಾಗದೆ, ಅರಿವು ಮತ್ತು ಎಚ್ಚರದ ನಡೆನುಡಿಗಳಿಂದ ಬಾಳುವಂತೆ ಮಾಡು ಎಂದು ವ್ಯಕ್ತಿಯು ಶಿವನಲ್ಲಿ ಮೊರೆಯಿಡುತ್ತಿದ್ದಾನೆ.)

❖

128. ಕೊಂಬೆಯ ಮೇಲಣ ಮರ್ಕಟನಂತೆ
ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು
ಕೂಡಲಸಂಗಮದೇವಾ
ನಿಮ್ಮ ಚರಣಕಮಲದಲ್ಲಿ
ಭ್ರಮರನಾಗಿರಿಸು ನಿಮ್ಮ ಧರ್ಮ.

ವ್ಯಕ್ತಿಯ ಮನದಲ್ಲಿ ನಿರಂತರವಾಗಿ ಉಂಟಾಗುತ್ತಿರುವ ಒಳಮಿಡಿತಗಳ ತೊಳಲಾಟವನ್ನು ಈ ವಚನದಲ್ಲಿ ಹೇಳಲಾಗಿದೆ. ಇದು ಮೇಲು ನೋಟಕ್ಕೆ ಬಸವಣ್ಣನ ಮನದ ತೊಳಲಾಟದಂತೆ ಕಂಡುಬಂದರೂ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿಯೂ ಉಂಟಾಗುವ ಹೊಯ್ದಾಟವಾಗಿದೆ.

(ಕೊಂಬೆ=ರೆಂಬೆ/ಟೊಂಗೆ; ಮೇಲಣ=ಮೇಲಿರುವ/ತುದಿಯಲ್ಲಿರುವ; ಮರ್ಕಟನ+ಅಂತೆ; ಮರ್ಕಟ=ಕೋತಿ/ಮಂಗ; ಅಂತೆ=ಹಾಗೆ/ಆ ರೀತಿ; ಲಂಘಿಸುವುದು+ಎನ್ನ; ಲಂಘನ=ಹಾರುವಿಕೆ/ಜಿಗಿತ; ಲಂಘಿಸುವುದು= ಹಾರುವುದು/ಜಿಗಿಯುವುದು; ಎನ್ನ=ನನ್ನ; ಮನ=ಮನಸ್ಸು;

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು=ಮರದ ಕೊಂಬೆಯ ಮೇಲೆ ಕುಳಿತಿರುವ ಕೋತಿಯು ಒಂದು ಗಳಿಗೆಯಾದರೂ ತಾನಿದ್ದ ಕಡೆಯಲ್ಲಿ ಇರದೆ, ಮರದಲ್ಲಿರುವ ಹಲವಾರು ಕೊಂಬೆರೆಂಬೆಗಳ ಮೇಲೆ ಪದೇ ಪದೇ ನೆಗೆದಾಡುತ್ತಿರುವಂತೆ ನನ್ನ ಮನಸ್ಸು ಹತ್ತಾರು ಸಂಗತಿಗಳ ಕಡೆಗೆ ಆಸೆಯಿಂದ ಹಂಬಲಿಸುತ್ತ/ಕಳವಳಿಸುತ್ತ/ಹೆದರಿಕೆಯಿಂದ ತತ್ತರಿಸುತ್ತ/ಕೋಪದಿಂದ ಕೆರಳುತ್ತ/ಹಿಂಜರಿಕೆಯಿಂದ ನರಳುತ್ತ ನೂರಾರು ಬಗೆಯ ಒಳಮಿಡಿತಗಳಿಂದ ತುಡಿಯುತ್ತಿದೆ;

ನಿಂದ+ಅಲ್ಲಿ; ನಿಂದ=ನಿಂತುಕೊಂಡ; ಅಲ್ಲಿ=ಎಡೆ/ಜಾಗ; ನಿಂದಲ್ಲಿ= ನಿಂತಿರುವ ಎಡೆಯಲ್ಲಿ/ಇರುವ ನೆಲೆಯಲ್ಲಿ; ನಿಲ್+ಅಲ್+ಈಯದು+ಎನ್ನ; ನಿಲ್= ನಿಂತುಕೊಳ್ಳುವುದು; ನಿಲಲ್=ನಿಂತುಕೊಂಡಿರಲು/ಇದ್ದ ಕಡೆಯಲ್ಲಿಯೇ ಇರಲು; ಈ=ಕೊಡು/ಅವಕಾಶವನ್ನು ನೀಡು; ಈಯದು=ಕೊಡುವುದಿಲ್ಲ/ಬಿಡುವುದಿಲ್ಲ; **ನಿಂದಲ್ಲಿ ನಿಲಲೀಯದೆನ್ನ ಮನವು**=ಯಾವುದೇ ವಿಚಾರವನ್ನು ಕುರಿತು ಒಂದು

ನಿರ್ಣಯಕ್ಕೆ ಬರಲಾಗದೆ ನನ್ನ ಮನಸ್ಸು ಇಬ್ಬಗೆಯ ಸೆಳೆತದಲ್ಲಿ ತುಯ್ದಾಡುತ್ತಿದೆ/ತೊಳಲಾಡುತ್ತಿದೆ;

ಹೊಂದಿದ+ಅಲ್ಲಿ; ಹೊಂದು=ಪಡೆ/ಗಳಿಸು; ಹೊಂದಿದಲ್ಲಿ= ಪಡೆದುಕೊಂಡಿರುವುದರಲ್ಲಿ/ಗಳಿಸಿರುವುದರಲ್ಲಿ; ಹೊಂದಲು+ಈಯದು+ ಎನ್ನ; ಹೊಂದಲು=ಪಡೆಯಲು/ಸೇರಲು;

ಹೊಂದಿದಲ್ಲಿ ಹೊಂದಲೀಯದೆನ್ನ ಮನವು=ಬಾಳುತ್ತಿರುವ ನೆಲೆಯಲ್ಲಿ ನೆಮ್ಮದಿಯಿಂದ ಇರಲು ನನ್ನ ಮನಸ್ಸು ಅವಕಾಶವನ್ನು ನೀಡುತ್ತಿಲ್ಲ. ಬದುಕಿನ ಆಗುಹೋಗುಗಳಲ್ಲಿ ಒಂದಲ್ಲ ಒಂದು ಬಗೆಯ ಅರೆಕೊರೆಗಳನ್ನು ಕಾಣುತ್ತ, ಸದಾ ಕಾಲ ಒತ್ತಡ/ಆತಂಕ/ತಲ್ಲಣ/ಕೋಪ/ತಾಪಗಳಿಂದ ಮನಸ್ಸು ತತ್ತರಿಸುತ್ತಿದೆ.

ಕೂಡಲು=ಎರಡು ನದಿಗಳು ಜತೆಗೂಡುವ ಜಾಗ; ಸಂಗಮ=ಶಿವ/ಈಶ್ವರ; ಕೂಡಲ ಸಂಗಮ=ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಒಂದು ಊರು. ಕೃಷ್ಣ ಮತ್ತು ಮಲಪ್ರಭಾ ಎಂಬ ಹೆಸರಿನ ಎರಡು ನದಿಗಳು ಇಲ್ಲಿ ಜತೆಗೂಡುತ್ತವೆ. ನದಿಗಳು ಕೂಡುವ ಜಾಗದ ದಂಡೆಯಲ್ಲಿ ಸಂಗಮೇಶ್ವರ ದೇವಾಲಯವಿದೆ. ಆದ್ದರಿಂದ ಈ ಊರಿಗೆ 'ಕೂಡಲ ಸಂಗಮ' ಎಂಬ ಹೆಸರು ಬಂದಿದೆ. ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ನಿಮ್ಮ=ದೇವರ/ಶಿವನ/ಈಶ್ವರನ; ಚರಣ=ಪಾದ; ಕಮಲ=ತಾವರೆ; ಭ್ರಮರನ್+ಆಗಿ+ಇರಿಸು; ಭ್ರಮರ=ದುಂಬಿ; ಇರಿಸು=ಇಡು/ಇರುವಂತೆ ಮಾಡು; 'ಚರಣಕಮಲ' ಮತ್ತು 'ಭ್ರಮರ' ಎಂಬ ಪದಗಳು ರೂಪಕಗಳಾಗಿ ಬಳಕೆಗೊಂಡಿವೆ; ಶಿವನ ಪಾದವನ್ನು ಕಮಲವೆಂದು ಮತ್ತು ಶಿವಶರಣನಾದ ವಚನಕಾರನು ತನ್ನನ್ನು ತಾನು ಭ್ರಮರವೆಂದು ಚಿತ್ರಿಸಿಕೊಂಡಿದ್ದಾನೆ; ಧರ್ಮ=ಕರುಣೆ/ದಯೆ/ಅನುಗ್ರಹ;

ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ=ದುಂಬಿಯು ಹೇಗೆ ತಾವರೆಯ ಹೂವಿನಲ್ಲಿರುವ ಮಕರಂದವನ್ನು ಹೀರಿಕೊಂಡು ಬಾಳುತ್ತದೆಯೋ ಅಂತೆಯೇ ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಪಡೆದುಕೊಂಡು ನೆಮ್ಮದಿಯಿಂದ ಬಾಳುವಂತೆ ನನ್ನ ಮನಸ್ಸಿಗೆ ಪ್ರೇರಣೆಯನ್ನು ನೀಡು ಎಂದು ಶಿವನಲ್ಲಿ ವಚನಕಾರನು ಮೊರೆಯಿಡುತ್ತಿದ್ದಾನೆ.)

❖

129. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು ಅವರಿಗಾದ ಚೇಗೆಯೇನು
ತನುವಿನ ಕೋಪ ತನ್ನ ಹಿರಿಯತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ.

ಜೀವನದ ಆಗುಹೋಗುಗಳಲ್ಲಿ ನಾನಾ ಕಾರಣಗಳಿಂದಾಗಿ ವ್ಯಕ್ತಿಯ ಮಯ್ ಮನದಲ್ಲಿ ಕೆರಳುವ ಕೋಪವನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುವುದು ಒಳ್ಳೆಯದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ತನಗೆ=ವ್ಯಕ್ತಿಗೆ; ಮುನಿ=ಸಿಟ್ಟಾಗು/ಕೋಪಗೊಳ್ಳು; ತನಗೆ ಮುನಿವರಿಗೆ=ತನ್ನ ನಡೆನುಡಿಗಳನ್ನು ಕಂಡು ಕೋಪಗೊಳ್ಳುವ ವ್ಯಕ್ತಿಯ ಬಗ್ಗೆ; ತಾ=ತಾನು/ವ್ಯಕ್ತಿಯು; ಮುನಿ+ಅಲ್+ಏಕೆ+ಅಯ್ಯಾ; ಮುನಿಯಲ್=ಸಿಟ್ಟುಗೊಳ್ಳುವುದು/ಕೋಪ ಗೊಳ್ಳುವುದು; ಏಕೆ=ಯಾವುದಕ್ಕಾಗಿ;

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ=ತನ್ನ ಬಗ್ಗೆ ಕೋಪಗೊಂಡು ಕೆಟ್ಟರೀತಿಯಿಂದ ನಡೆದುಕೊಳ್ಳುತ್ತಿರುವ ವ್ಯಕ್ತಿಯ ಬಗ್ಗೆ ತಾನೂ ಅದೇ ಬಗೆಯಲ್ಲಿ ಕೋಪಗೊಳ್ಳುವುದರಿಂದ ಏನು ತಾನೆ ಪ್ರಯೋಜನ. ಅಂದರೆ ಇಬ್ಬರೂ ಕೋಪಗೊಳ್ಳುವುದರಿಂದ ಆ ಸನ್ನಿವೇಶದಲ್ಲಿ ಉಂಟಾಗಿರುವ ಸಮಸ್ಯೆ ತಂತಾನೇ ನಿವಾರಣೆಯಾಗುವುದಿಲ್ಲ;

ತನಗೆ+ಆದ; ಆಗು+ಏನು; ಆಗು=ದೊರಕುವುದು/ಒದಗಿ ಬರುವುದು/ ಜರುಗುವುದು; ಏನು=ಯಾವುದು; ಅವರಿಗೆ+ಆದ; ಚೇಗೆ+ಏನು; ಚೇಗೆ=ಕೇಡು/ ಹಾನಿ;

ತನಗಾದ ಆಗೇನು ಅವರಿಗಾದ ಚೇಗೆಯೇನು=ಕೋಪಗೊಂಡ ವ್ಯಕ್ತಿಯ ಎದುರಾಗಿ ತಾನು ಕೋಪವನ್ನು ಮಾಡಿಕೊಳ್ಳುವುದರಿಂದ ತನಗೆ ಉಂಟಾದ ಒಳಿತೇನು, ಅವರಿಗೆ ಆದ ಕೇಡೇನು. ಅಂದರೆ ಕೋಪಗೊಂಡ ಮಾತ್ರದಿಂದಲೇ ವ್ಯಕ್ತಿಗೆ ಒಳಿತಾಗಲೀ, ಎದುರಾಳಿಗೆ ಕೇಡಾಗಲೀ ತಟ್ಟುವುದಿಲ್ಲ;

ತನು=ದೇಹ; ಕೋಪ=ಸಿಟ್ಟು/ಮುನಿಸು;

ಕೋಪ ಎಂಬ ಒಳಮಿಡಿತವು ವ್ಯಕ್ತಿಯ ಮಯ್ ಮನದಲ್ಲಿ ಹೇಗೆ

ಮೂಡುತ್ತದೆ ಮತ್ತು ಅದರಿಂದ ಉಂಟಾಗುವ ಪರಿಣಾಮಗಳೇನೆಂಬುದನ್ನು ತಿಳಿದುಕೊಂಡಾಗ, ಕೋಪದ ಜತೆಜತೆಯಲ್ಲಿಯೇ ಒದಗಿ ಬರುವ ಸಂಕಟ/ಬೇಗೆ/ಬವಣೆ/ಸಾವು/ನೋವು ಗಮನಕ್ಕೆ ಬರುತ್ತವೆ. ವ್ಯಕ್ತಿಯು ತಾನು ಆಸೆಪಟ್ಟಿದ್ದನ್ನು ಪಡೆಯುವುದಕ್ಕೆ ಇಲ್ಲವೇ ತಾನು ಮಾಡುವ ಕೆಲಸಕ್ಕೆ ಅಡ್ಡಿ ಆತಂಕಗಳು ಉಂಟಾದಾಗ, ಅದಕ್ಕೆ ಕಾರಣವಾದ ವಸ್ತು/ಜೀವಿ/ವ್ಯಕ್ತಿಯ ಮೇಲೆ ಮರುಗಳಿಗೆಯಲ್ಲಿಯೇ ಮನದಲ್ಲಿ ಮೂಡುವ ಒಳಮಿಡಿತವೇ ಕೋಪ. ಕೋಪದಿಂದ ಕೆರಳಿದ ವ್ಯಕ್ತಿಯು ಕೋಪಕ್ಕೆ ಕಾರಣವಾದ ವಸ್ತು/ಜೀವಿ/ವ್ಯಕ್ತಿಯ ಮೇಲೆ ಹಲ್ಲೆ ಮಾಡಲು ಮುನ್ನುಗ್ಗುತ್ತಾನೆ. ಈ ದಾಳಿಯು ಮಾತಿನ ರೂಪದ ಬಯ್ಗುಳವಾಗಿರಬಹುದು ಇಲ್ಲವೇ ಹೊಡೆಯುವ ಏಟುಗಳಾಗಿರಬಹುದು.

ಹೊಡೆತದಿಂದ ವಸ್ತುಗಳು ಹಾಳಾದರೆ, ಬಯ್ಗುಳ ಇಲ್ಲವೇ ಹೊಡೆತ ತಿಂದ ವ್ಯಕ್ತಿಯ ಜತೆಯ ನಂಟು ಮುರಿದುಬೀಳುತ್ತದೆ ಇಲ್ಲವೇ ಆ ವ್ಯಕ್ತಿಯ ಜತೆಯಲ್ಲಿ ಹೊಡೆದಾಟ ನಡೆದು ಹಲವು ರೀತಿಯಲ್ಲಿ ಇಬ್ಬರಿಗೂ ಹಾನಿಯುಂಟಾಗುತ್ತದೆ. ಅರೆಗಳಿಗೆಯ ಕೋಪವು ವ್ಯಕ್ತಿಯ ಬದುಕನ್ನೇ ದುರಂತದತ್ತ ದೂಡಬಲ್ಲದ್ದಾಗಿರುತ್ತದೆ.

ತನ್ನ=ಕೋಪಗೊಂಡ ವ್ಯಕ್ತಿಯ; ಹಿರಿದು=ದೊಡ್ಡದು;

ಹಿರಿಯತನ=ದೊಡ್ಡತನ/ವಯಸ್ಸಿನಲ್ಲಿ ಇತರರಿಗಿಂತ ದೊಡ್ಡವನು/ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುವ ಗುಣ;

ತನುವಿನ ಕೋಪ ತನ್ನ ಹಿರಿಯತನದ ಕೇಡು=ಯಾವುದೇ ಸನ್ನಿವೇಶದಲ್ಲಿ ವ್ಯಕ್ತಿಯು ಕೋಪದಿಂದ ಕೆರಳಿ, ಕೋಪಕ್ಕೆ ಕಾರಣವಾದ ವಸ್ತುವನ್ನು ಒಡೆದು/ತುಳಿದು ಹಾಳುಮಾಡಿದರೆ/ವ್ಯಕ್ತಿಯ ಮಯ್ ಮೇಲೆ ಕಯ್ ಮಾಡಿ ಹಲ್ಲೆಯನ್ನು ನಡೆಸಿ, ಸಾವು ನೋವುಗಳಿಗೆ ಕಾರಣನಾದರೆ, ಆಗ ಅಂತಹ ವ್ಯಕ್ತಿಯು ತನ್ನ ಒಳ್ಳೆಯತನದ ವ್ಯಕ್ತಿತ್ವಕ್ಕೆ ಕುಂದನ್ನು ತಂದುಕೊಳ್ಳುತ್ತಾನೆ; ನೋಡುವವರ ಕಣ್ಣಿಗೆ ಮಾನಸಿಕವಾಗಿ ಸಮತೋಲನವನ್ನು ಕಳೆದುಕೊಂಡ ವ್ಯಕ್ತಿಯಾಗಿ ಕಂಡುಬರುತ್ತಾನೆ/ಅವನ ಹಿರಿಯತನದ ವ್ಯಕ್ತಿತ್ವಕ್ಕೆ ಹಾನಿಯುಂಟಾಗುತ್ತದೆ;

ಮನ=ಮನಸ್ಸು/ಚಿತ್ತ; ಅರಿವು=ತಿಳುವಳಿಕೆ/ವಿವೇಕ;

ಮನದ ಕೋಪ ತನ್ನ ಅರಿವಿನ ಕೇಡು=ನಡೆದ ಪ್ರಸಂಗದಿಂದ ಕೆರಳಿದ ವ್ಯಕ್ತಿಯು ತನ್ನ ಮನದೊಳಗೆ ಕೋಪದಿಂದ ಆಕ್ರೋಶಗೊಂಡು ಕುದಿಯತೊಡಗಿದರೆ, ಅದು ಆ ವ್ಯಕ್ತಿಯು ಅರಿವಿಲ್ಲದವನು ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಕೋಪ

ಬಂದಾಗ, ವ್ಯಕ್ತಿಯು ಅದನ್ನು ಹತೋಟಿಯಲ್ಲಿಟ್ಟುಕೊಂಡು, ಕೋಪಕ್ಕೆ ಕಾರಣವಾದ ವಸ್ತು/ಜೀವಿ/ವ್ಯಕ್ತಿಗಳ ಮೇಲೆ ಹಲ್ಲೆ ಮಾಡದೆ, ಕೋಪಕ್ಕೆ ಕಾರಣವಾದ ಸಂಗತಿಗಳನ್ನು ಗಮನಿಸಿ, ಅದರಲ್ಲಿನ ತಪ್ಪುಗಳನ್ನು ಗುರುತಿಸಿ, ತಪ್ಪು ತನ್ನಿಂದ ಆಗಿದ್ದರೆ ಅದನ್ನು ತಿದ್ದಿ ಸರಿಪಡಿಸಿಕೊಂಡು, ಇತರರಿಂದ ಆಗಿದ್ದರೆ ಅದನ್ನು ಮತ್ತೆ ಮಾಡದಂತೆ ಅವರಿಗೆ ತಿಳಿಯ ಹೇಳಬೇಕು. ಇಂತಹ ಅರಿವಿನ ನಡೆನುಡಿಯಿಂದ ಕೋಪವು ಇಲ್ಲವಾಗಿ, ಕೋಪದಿಂದ ಉಂಟಾಗಬಹುದಾಗಿದ್ದ ಕೇಡು ತಪ್ಪುತ್ತದೆ. ಆದುದರಿಂದ ಕೋಪವನ್ನು ನಿಯಂತ್ರಿಸಿಕೊಳ್ಳುವ ಬಗೆಯನ್ನು ವ್ಯಕ್ತಿಯು ಅರಿತಿರಬೇಕು;

ಮನೆ+ಒಳಗಣ; ಮನೆ=ವ್ಯಕ್ತಿಗಳು ವಾಸಿಸುವ ಜಾಗ; ಒಳಗಣ= ಒಳಗಡೆಯಿರುವ; ಕಿಚ್ಚು=ಬೆಂಕಿ/ಅಗ್ನಿ/ತಾಪ; ಸುಟ್ಟು+ಅಲ್ಲದೆ; ಸುಡು=ಬೆಂಕಿಯಲ್ಲಿ ಬೇಯಿಸು; ಅಲ್ಲದೆ=ಹಾಗೆ ಮಾಡದೆ;

ನೆರೆ=ಪಕ್ಕ/ಮಗ್ಗುಲು; ನೆರೆಮನೆ=ಪಕ್ಕದ ಮನೆ; ಸುಡದು=ಸುಡುವುದಿಲ್ಲ/ ಬೆಂಕಿಗೆ ಆಹುತಿ ತೆಗೆದುಕೊಳ್ಳುವುದಿಲ್ಲ;

ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು=ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ. ಮನೆಯೊಳಗೆ ಹತ್ತಿಕೊಂಡು ಉರಿಯತೊಡಗಿದ ಬೆಂಕಿಯು ಮೊದಲು ತಾನು ಹತ್ತಿಕೊಂಡ ಜಾಗದಲ್ಲಿದ್ದ ವಸ್ತುಗಳನ್ನು ಮತ್ತು ಮನೆಯನ್ನು ಸಂಪೂರ್ಣವಾಗಿ ಸುಟ್ಟು ಕರಕಲು ಮಾಡಿದ ನಂತರವೇ ಪಕ್ಕದ ಮನೆಗೆ ಹಬ್ಬುತ್ತದೆ.

ಅಂತೆಯೇ ವ್ಯಕ್ತಿಯ ಮನದೊಳಗೆ ಮೂಡಿದ ಕೋಪದ ಒಳಮಿಡಿತವು ಇತರರ ಬಗ್ಗೆ ಹೊಟ್ಟೆಕಿಚ್ಚಾಗಿ/ಮತ್ಸರವಾಗಿ/ತಿರಸ್ಕಾರವಾಗಿ/ಅಸೂಯೆಯಾಗಿ/ ಸೇಡಾಗಿ ರೂಪುಗೊಂಡು ವ್ಯಕ್ತಿಯ ಮಯ್ ಮನವನ್ನೆಲ್ಲಾ ಆವರಿಸಿಕೊಂಡು, ಕೋಪಗೊಂಡ ವ್ಯಕ್ತಿಯ ಬದುಕಿನ ನೆಮ್ಮದಿಯನ್ನು ಹಾಳುಮಾಡುತ್ತದೆ/ಜೀವನಕ್ಕೆ ಮಾರಕವಾಗುತ್ತದೆ/ಸುತ್ತಮುತ್ತಣ ವ್ಯಕ್ತಿಗಳ ಜತೆಯ ನಂಟನ್ನು ಮುರಿಯುತ್ತದೆ. ಕೋಪವೆಂಬುದು ಇತರರಿಗೆ ಕೇಡನ್ನು ಉಂಟುಮಾಡುವುದಕ್ಕಿಂತಲೂ ಹೆಚ್ಚಾಗಿ, ಕೋಪಗೊಂಡ ವ್ಯಕ್ತಿಗೆ ಮಾನಸಿಕವಾಗಿ ಹೆಚ್ಚು ಹಾನಿಯನ್ನು ಉಂಟುಮಾಡುತ್ತದೆ. ಆದುದರಿಂದ ಕೋಪವನ್ನು ಹತ್ತಿಕ್ಕಿಕೊಂಡು ಬಾಳುವುದು ಒಳಿತೆಂಬ ಅರಿವನ್ನು ಈ ರೂಪಕ ಸೂಚಿಸುತ್ತಿದೆ; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ.)

❖

130. ತನು ಮನ ಧನವ ಹಿಂದಿಕ್ಕಿಕೊಂಡು
ಮಾತಿನ ಬಣಬೆಯ ಮುಂದಿಟ್ಟುಕೊಂಡು
ಒಳಲೊಟ್ಟೆಯ ನುಡಿವವರು
ನೀವೆಲ್ಲರೂ ಕೇಳಿರೆ
ತಲಹಿಲ್ಲದ ಕೋಲು
ಹೊಳ್ಳ ಹಾರುವುದಲ್ಲದೆ
ಗುರಿಯ ತಾಗಬಲ್ಲುದೆ
ಮಾಯಾಪಾಶ ಹಿಂಗಿ
ಮನದ ಗಂಟು ಬಿಡದನ್ನಕ್ಕ
ಕೂಡಲಸಂಗಮದೇವನೆಂತೊಲಿವನಯ್ಯಾ.

ಜನಸಮುದಾಯವು ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ ವಸ್ತುಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗದೆ, ಜಾಣ್ಮೆಯ ನುಡಿಗಳನ್ನಾಡುತ್ತ ಜನರನ್ನು ಮರುಳುಮಾಡುವ ಮಾತಿನ ಮಲ್ಲರಿಂದ ಯಾವುದೇ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

"ಜನಸಮುದಾಯಕ್ಕೆ ಅಗತ್ಯವಾದ ವಸ್ತುಗಳು" ಎಂದರೆ ಅನ್ನ/ಬಟ್ಟೆ/ವಸತಿ/ ವಿದ್ಯೆ/ಕೆಲಸ/ಆರೋಗ್ಯ.

'ಜನರನ್ನು ಮರುಳುಮಾಡುವುದು' ಎಂದರೆ ವ್ಯಕ್ತಿಯು ತನ್ನ ಮಾತಿನ ಮೋಡಿ ಯಿಂದ ತಾನು ಹೇಳಿದ್ದೆಲ್ಲವನ್ನೂ ಜನರು ನಂಬುವಂತೆ ಮಾಡುವುದು. ಇಂತಹ ಮಾತುಗಾರನ ಮನಸೆಳೆಯುವಂತಹ ನುಡಿಗಳ ಕುಶಲತೆಗೆ ಒಳಗಾದ ಜನರು, ತಾವು ಕೇಳುತ್ತಿರುವ ಸಂಗತಿಗಳಲ್ಲಿ "ಯಾವುದು ಸರಿ–ಯಾವುದು ತಪ್ಪು/ ಯಾವುದು ದಿಟ–ಯಾವುದು ಸಟೆ/ಯಾವುದು ಒಳಿತು–ಯಾವುದು ಕೆಟ್ಟದ್ದು" ಎಂಬುದನ್ನು ಒರೆಹಚ್ಚಿ ನೋಡುವ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ.

(ತನು=ಮಯ್/ದೇಹ; ಮನ=ಮನಸ್ಸು; ಧನ=ಸಂಪತ್ತು/ಒಡವೆ ವಸ್ತು/ ಆಸ್ತಿಪಾಸ್ತಿ/ಹಣಕಾಸು; ಧನವ=ಧನವನ್ನು/ಸಂಪತ್ತನ್ನು; ಹಿಂದೆ+ಇಕ್ಕಿಕೊಂಡು; ಹಿಂದೆ=ಹಿಂಬದಿಯಲ್ಲಿ/ಹಿಂದುಗಡೆ; ಇಕ್ಕು=ಮಡಗು/ಇಡು; ಅಂತೆ=ಹಾಗೆ/ಆ ರೀತಿಯಲ್ಲಿ/ಆ ಬಗೆಯಲ್ಲಿ;

ಹಿಂದಿಕ್ಕಿಕೊಂಡು=ಮರೆಮಾಡಿಕೊಂಡು/ಅಡಗಿಸಿಕೊಂಡು; "ತನು ಮನ ಧನವ

ಹಿಂದಿಕ್ಕಿಕೊಂಡು” ಎಂಬ ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ;

ತನುವ ಹಿಂದಿಕ್ಕಿಕೊಂಡು=ಮಯ್ ಮುರಿದು ದುಡಿಮೆಯನ್ನು ಮಾಡದೆ/ಮಯ್ಗಳ್ಳನಾಗಿ;

ಮನವ ಹಿಂದಿಕ್ಕಿಕೊಂಡು=ಸಮುದಾಯದ ಜನರೆಲ್ಲರ ಹಿತಕ್ಕೆ ನೆರವಾಗುವಂತಹ ವಿಚಾರಗಳನ್ನು ಮನಸ್ಸಿನಲ್ಲಿ ಎಣಿಸದೆ, ತನ್ನ ಮತ್ತು ತನ್ನವರ ಹಿತವನ್ನು ಮಾತ್ರ ಚಿಂತಿಸುತ್ತ;

ಧನವ ಹಿಂದಿಕ್ಕಿಕೊಂಡು=ಸಮಾಜದ ಮತ್ತು ಜನಸಮುದಾಯದ ಒಳಿತಿಗಾಗಿ ತನ್ನ ಬಳಿಯಿರುವ ಹೆಚ್ಚಿನ ಸಂಪತ್ತನ್ನು ಬಳಸದೆ;

ತನು ಮನ ಧನವ ಹಿಂದಿಕ್ಕಿಕೊಂಡು=ವ್ಯಕ್ತಿಯು ತನ್ನ ತನುವಿನಿಂದ ಒಳ್ಳೆಯ ದುಡಿಮೆಯನ್ನು ಮಾಡದೆ, ಮನದಿಂದ ಒಳ್ಳೆಯ ಆಲೋಚನೆ ಮಾಡದೆ ಮತ್ತು ಸಂಪತ್ತಿನಿಂದ ಸಮಾಜಕ್ಕೆ ಒಳಿತನ್ನು ಮಾಡದೆ;

ಮಾತು=ನುಡಿ/ಸೊಲ್ಲು; ಬಣಬೆ=ಎಮ್ಮೆ ದನ ಮತ್ತು ಇತರ ಪ್ರಾಣಿಗಳ ಮೇವಿಗೆ ಬಳಕೆಯಾಗುವ ರಾಗಿ/ಬತ್ತ/ಜೋಳದ ಒಣಗಿದ ಕಡ್ಡಿಗಳನ್ನು ಒಂದೆಡೆಯಲ್ಲಿ ಒಟ್ಟಿರುವುದು/ಮೆದೆ;

ಮಾತಿನ ಬಣಬೆ=ಇದೊಂದು ನುಡಿಗಟ್ಟು. ವ್ಯಕ್ತಿಯು ಇತರರಿಗೆ ಒಳಿತನ್ನು ಉಂಟುಮಾಡುವಂತಹ ಯಾವೊಂದು ಕೆಲಸವನ್ನೂ ಮಾಡದೆ, ಕೇವಲ ಮಾತಿನಲ್ಲೇ ತೊಡಗಿರುವುದು; ಮುಂದೆ+ಇಟ್ಟುಕೊಂಡು; ಮುಂದೆ=ಎದುರಿನಲ್ಲಿ/ಮುಂದುಗಡೆಯಲ್ಲಿ; ಇಟ್ಟುಕೊಂಡು=ಇರಿಸಿಕೊಂಡು; ಒಳಲೊಟ್ಟೆ=ಕೆಲಸಕ್ಕೆ ಬಾರದ್ದು/ಪ್ರಯೋಜನವಿಲ್ಲದ್ದು; ನುಡಿ=ಮಾತು/ಸೊಲ್ಲು; ಒಳಲೊಟ್ಟೆಯ ನುಡಿ=ಪೊಳ್ಳು ಮಾತು/ಕೆಲಸಕ್ಕೆ ಬಾರದ ಮಾತು;

ಮಾತಿನ ಬಣಬೆಯ ಮುಂದಿಟ್ಟುಕೊಂಡು ಒಳಲೊಟ್ಟೆಯ ನುಡಿವವರು=ಜನಸಮುದಾಯಕ್ಕೆ ಬೇಕಾದ ಅನ್ನ/ಬಟ್ಟೆ/ವಸತಿ/ವಿದ್ಯೆ/ಕೆಲಸ/ಆರೋಗ್ಯವೆಲ್ಲವನ್ನೂ ಮಾತಿನ ಮೋಡಿಯಿಂದಲೇ ಉತ್ಪಾದನೆ ಮಾಡಿ ಕೊಡುವವರಂತೆ ನುಡಿಯುವ ಸುಳ್ಳುಗಾರರು/ಕಪಟಿಗಳು/ವಂಚಕರು;

ನೀವ್+ಎಲ್ಲರೂ; ಕೇಳ್=ಆಲಿಸು; **ನೀವೆಲ್ಲರೂ ಕೇಳಿರೆ**=ಮಾತನ್ನೇ ದೊಡ್ಡದೆಂದು ತಿಳಿದು, ಜನರನ್ನು ಮಾತಿನಿಂದಲೇ ಮರುಳು ಮಾಡಿ, ಅವರನ್ನು ವಂಚಿಸುವ ಕಲೆಯಲ್ಲಿ ಪರಿಣಿತರಾಗಿರುವ ವ್ಯಕ್ತಿಗಳೇ ನೀವೆಲ್ಲರೂ ಮನವಿಟ್ಟು ಕೇಳಿರಿ;

ತಲಹು+ಇಲ್ಲದ; ತಲುಪು/ತಲಪು>ತಲಹು; ತಲಹು=ಮುಟ್ಟು/ಸೇರು; ಕೋಲು=ಬಾಣ; ತಲಹಿಲ್ಲದ ಕೋಲು=ಒಂದು ನಿಶ್ಚಿತ ಗುರಿಯನ್ನು ಹೊಂದದೆ ಹೂಡುವ ಬಾಣ; ಪೊಳ್ಳು>ಹೊಳ್ಳು; ಹೊಳ್ಳು=ಹೊಟ್ಟು/ಜೊಳ್ಳು; ಹಾರುವುದು+ ಅಲ್ಲದೆ; ಹಾರು=ಜಿಗಿತ/ನೆಗೆತ/ಹಾರಿಕೆ; ಹೊಳ್ಳು ಹಾರುವುದು=ಎತ್ತೆತ್ತಲೋ/ ಎಲ್ಲೋ ಒಂದು ಕಡೆಗೆ ಹಾರಿ ಹೋಗಿ ಬೀಳುವುದು; ಅಲ್ಲದೆ=ಹಾಗೆ ಮಾಡದೆ; ಗುರಿ=ಸೇರಬೇಕಾದ ಎಡೆ/ಜಾಗ/ಎಲ್ಲೆ; ತಾಗ+ಬಲ್ಲುದೆ; ತಾಗು=ಮುಟ್ಟು/ನಾಟು; ಬಲ್=ತಿಳಿ/ಅರಿ; ಬಲ್ಲುದೆ=ತಿಳಿದಿದೆಯೆ/ಅರಿತಿದೆಯೆ;

ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ ಗುರಿಯ ತಾಗಬಲ್ಲುದೆ= ವ್ಯಕ್ತಿಯು ಬಿಲ್ಲಿಗೆ ಬಾಣವನ್ನು ಹೂಡುವಾಗ ಒಂದು ಗೊತ್ತಾದ ಗುರಿಯತ್ತ ತೊಡದೆ, ಸುಮ್ಮನೆ ಬಾಣವನ್ನು ಬಿಟ್ಟಾಗ, ಅದು ಹಾರಿ ಹೋಗಿ ಎಲ್ಲೋ ಒಂದು ಕಡೆ ಬೀಳುತ್ತದೆ. ಗುರಿಯಿಡದೆ ಬಾಣವನ್ನು ಬಿಡುವ ಮತ್ತು ಅದರಿಂದ ಏನನ್ನು ಪಡೆಯದಿರುವುದನ್ನು ತಿಳಿಸುವ ಈ ಶಬ್ದಚಿತ್ರದ ಮೂಲಕ ಕೇವಲ ತೋರಿಕೆಗಾಗಿ ಆಡುವ ಮಾತುಗಳಿಂದ ಸಮಾಜಕ್ಕಾಗಲಿ/ಸಹಮಾನವರಿಗಾಗಲಿ ಯಾವುದೇ ಪ್ರಯೋಜನವಿಲ್ಲವೆಂಬ ಮತ್ತು ಅಂತಹ ಮಾತುಗಾರಿಕೆಯೆಲ್ಲವೂ ಪೊಳ್ಳುತನದಿಂದ ಕೂಡಿರುತ್ತದೆ ಎಂಬುದನ್ನು ಸೂಚಿಸುತ್ತದೆ;

ಮಾಯಾ=ಮಾಯೆ/ವ್ಯಕ್ತಿಯ ಮಯ್ ಮನದಲ್ಲಿ ಆಸೆಯನ್ನು/ಹಂಬಲ ಮೂಡಿಸಿ ತನ್ನತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿ; ಪಾಶ=ಹಗ್ಗ/ಪ್ರಾಣಿಗಳನ್ನು ಮತ್ತು ಹಕ್ಕಿಗಳನ್ನು ಹಿಡಿಯಲು ನೂಲಿನಿಂದ ಹೆಣೆದು ಮಾಡಿರುವ ವಸ್ತು ಕುಣಿಕೆ; ಮಾಯಾಪಾಶ=ವ್ಯಕ್ತಿಯು ತಾನು ಪಡೆಯಲು ಹಂಬಲಿಸುತ್ತಿರುವ ವಸ್ತು/ಜೀವಿ/ ವ್ಯಕ್ತಿಯನ್ನು ತನ್ನದಾಗಿಸಿಕೊಳ್ಳಲು ಹೆಣಗುತ್ತಿರುವುದು; ಪಿಂಗು>ಹಿಂಗು; ಹಿಂಗು= ಕಡಿಮೆಯಾಗು;

ಮಾಯಾಪಾಶ ಹಿಂಗಿ=ಮನದೊಳಗೆ ತುಡಿಯುತ್ತಿರುವ ಕೆಟ್ಟ ಆಸೆ/ಬಯಕೆಯು ತಗ್ಗಿ/ಕುಗ್ಗಿ; ಗಂಟು=ಹಗ್ಗ/ದಾರದ ಎಳೆಗಳಿಂದ ಕಟ್ಟಿರುವುದು/ಕೂಡಿರುವುದು/ ಕಟ್ಟು; ಮನದ ಗಂಟು=ವ್ಯಕ್ತಿಯ ಮನದಲ್ಲಿ ಒಂದರೊಡನೆ ಮತ್ತೊಂದು ಬೆಸೆದು ಕೊಂಡಿರುವ ಒಳಿತು ಕೆಡುಕಿನ ಒಳಮಿಡಿತಗಳು/ತುಡಿತಗಳು; ಬಿಡದ+ಅನ್ನಕ್ಕ; ಬಿಡು=ತೊರೆ/ತ್ಯಜಿಸು; ಅನ್ನಕ್ಕ=ವರೆಗೆ/ ಆ ತನಕ/ಅಲ್ಲಿಯವರೆಗೆ;

ಮನದ ಗಂಟು ಬಿಡುವುದು=ಮನದಲ್ಲಿ ತುಡಿಯುವ ಕೆಟ್ಟ ಒಳಮಿಡಿತಗಳನ್ನು ಗುರುತಿಸಿ, ಅವನ್ನು ತೊರೆಯುವುದು/ಬಿಡುವುದು/ಹತ್ತಿಕ್ಕಿಕೊಳ್ಳುವುದು;

ಕೂಡಲಸಂಗಮದೇವನ್+ಎಂತು+ಒಲಿ+ಅನ್+ಅಯ್ಯಾ; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಎಂತು=ಯಾವ ರೀತಿಯಲ್ಲಿ/ಯಾವ ಬಗೆಯಲ್ಲಿ; ಒಲಿ=ಮೆಚ್ಚು/ಪ್ರೀತಿಸು/ಬಯಸು;

ಕೂಡಲಸಂಗಮದೇವನೆಂತೊಲಿವನಯ್ಯಾ=ಕೂಡಲಸಂಗಮದೇವನು ಹೇಗೆ ತಾನೇ ಒಲಿಯುತ್ತಾನೆ/ಮೆಚ್ಚಿಕೊಳ್ಳುತ್ತಾನೆ;

ಮನದಲ್ಲಿ ತುಡಿಯುವ ಕೆಟ್ಟ ಬಯಕೆಗಳನ್ನು ಹತ್ತಿಕ್ಕಿಕೊಂಡು ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಂಡು ಬಾಳುವಂತಾದಾಗ ಮಾತ್ರ ಕೂಡಲಸಂಗಮದೇವನು ಒಲಿಯುತ್ತಾನೆ ಎಂಬ ನಿಲುವನ್ನು ಶಿವಶರಣ ಶರಣೆಯರು ಹೊಂದಿದ್ದರು ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ;

❖

131. ತೊರೆಯ ಮೀವ ಅಣ್ಣಗಳಿರಾ
ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂ ಭೋ ತೊರೆಯಿಂ ಭೋ
ಪರನಾರಿಯರ ಸಂಗವ ತೊರೆಯಿಂ ಭೋ
ಪರಧನದಾಮಿಷವ ತೊರೆಯಿಂ ಭೋ
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು ಕೂಡಲಸಂಗಮದೇವಾ.

ಸಮಾಜ ಒಪ್ಪಿತವಲ್ಲದ ರೀತಿಯಲ್ಲಿ ಕಾಮದ ನಂಟನ್ನು ಹೊಂದಿರುವ ಮತ್ತು ಜನಸಮುದಾಯದ ಸಂಪತ್ತನ್ನು ಲೂಟಿ ಹೊಡೆಯುತ್ತಿರುವ ವ್ಯಕ್ತಿಗಳು ಮಾಡುವ ದೇವರ ಪೂಜೆಯು ಪೊಳ್ಳುತನದಿಂದ ಕೂಡಿದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಸಮಾಜ ಒಪ್ಪಿತವಲ್ಲದ ಕಾಮದ ನಂಟು' ಎಂದರೆ ಜಗತ್ತಿನಲ್ಲಿರುವ ಪ್ರತಿಯೊಂದು ಮಾನವ ಸಮುದಾಯದ ನಡಾವಳಿಯಲ್ಲಿ ಗಂಡಸು ಮತ್ತು ಹೆಂಗಸು ಒಬ್ಬರು ಮತ್ತೊಬ್ಬರೊಡನೆ ದೇಹದ ನಂಟನ್ನು ಹೊಂದುವುದಕ್ಕೆ ಹಲವಾರು ಕಟ್ಟುಪಾಡು ಸಂಪ್ರದಾಯಗಳಿವೆ. ಇವಕ್ಕೆ ಹೊರತಾಗಿ ಗಂಡು ಮತ್ತು ಹೆಣ್ಣು ಜತೆಗೂಡಿದರೆ ಅದನ್ನು ಸಮಾಜ ಒಪ್ಪಿತವಲ್ಲದ ಕಾಮದ ನಂಟು ಎಂದು ಕರೆಯುತ್ತಾರೆ. ಜಗತ್ತಿನಲ್ಲಿರುವ ಎಲ್ಲಾ ಸಮುದಾಯಗಳು ಕಾಮದ ನಂಟಿನ ಬಗ್ಗೆ ತಮ್ಮ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ತಮ್ಮದೇ ಆದ ರೀತಿಯ ಕಟ್ಟುಪಾಡುಗಳನ್ನು ಹಾಕಿಕೊಂಡಿರುತ್ತವೆ.

(ತೊರೆ=ನದಿ/ಹೊಳೆ; ಮೀ=ಸ್ನಾನ ಮಾಡು; ಮೀವ=ಸ್ನಾನ ಮಾಡುವ; ತೊರೆಯಲ್ಲಿ ಮೀಯುವುದು=ದೇಗುಲಗಳ ಬಳಿ ಹರಿಯುವ ಹೊಳೆಯಲ್ಲಿ ಮಿಂದೇಳುವುದರಿಂದ ವ್ಯಕ್ತಿಯು ತನ್ನ ಜೀವನದ ವ್ಯವಹಾರಗಳಲ್ಲಿ ಮಾಡಿರುವ ಪಾಪಗಳು ನಿವಾರಣೆಗೊಂಡು, ಇನ್ನು ಮುಂದೆ ಒಳಿತಾಗುವುದೆಂಬ ನಂಬಿಕೆಯು ಜನಮನದಲ್ಲಿ ನೆಲೆಗೊಂಡಿದೆ;

ಅಣ್ಣ=ಗಂಡಸನ್ನು ಒಲವು ನಲಿವು ಆದರದಿಂದ ಮಾತನಾಡಿಸುವಾಗ ಬಳಸುವ ಪದ/ಆಸ್ತಿಪಾಸ್ತಿ ಒಡವೆ ವಸ್ತು ಮತ್ತು ಗದ್ದುಗೆಯನ್ನು ಹೊಂದಿ ಸಮಾಜದಲ್ಲಿ ಎತ್ತರದ ಅಂತಸ್ತನ್ನು ಹೊಂದಿರುವ ವ್ಯಕ್ತಿಯನ್ನು 'ಅಣ್ಣ' ಎಂದು

ಕರೆಯುತ್ತಾರೆ; ಅಣ್ಣಗಳಿರಾ=ಅಣ್ಣಂದಿರಾ/ಅಣ್ಣಂದಿರೇ; ಸ್ವಾಮಿ=ಒಡೆಯ/ಜಾತಿ ಮತದ ಒಕ್ಕೂಟಗಳ ಗುರು; ಸ್ವಾಮಿಗಳಿರಾ=ಸ್ವಾಮಿಗಳೇ/ದೊಡ್ಡವರೇ/ಹಿರಿಯರೇ;

ತೊರೆ+ಇಂ; ತೊರೆ=ಬಿಡು/ತ್ಯಜಿಸು/ವರ್ಜಿಸು; ತೊರೆಯಿಂ=ತೊರೆಯಿರಿ/ಬಿಡಿರಿ/ತ್ಯಜಿಸಿರಿ/ಮಾಡಬೇಡಿ; ಭೋ=ಗುರುತರವಾದ ಸಂಗತಿಯೊಂದನ್ನು ಇತರರಿಗೆ ಹೇಳುವಾಗ ಅವರ ಗಮನವನ್ನು ತಮ್ಮತ್ತ ಸೆಳೆದುಕೊಳ್ಳಲೆಂದು ಎತ್ತರದ ದನಿಯಲ್ಲಿ ಹೇಳುವ ಪದ/ಕೇಳುವಂತಹವರಾಗಿ;

ತೊರೆಯಿಂ ಭೋ ತೊರೆಯಿಂ ಭೋ=ಬಿಡ್ರಪ್ಪ ಬಿಡಿ/ಎಂದೆಂದಿಗೂ ಮಾಡಬೇಡಿ;

ಪರ=ಇತರ/ಬೇರೆಯ; ನಾರಿ=ಹೆಂಗಸು; ಪರನಾರಿಯರು=ಇತರ ಹೆಂಗಸರು; ಸಂಗ=ಒಡನಾಟ/ಕೂಡುವಿಕೆ/ಸೇರುವಿಕೆ; ಸಂಗವ=ಸಂಗವನ್ನು;

ಪರನಾರಿಯರ ಸಂಗವ ತೊರೆಯಿಂ ಭೋ=ಸಮಾಜ ಒಪ್ಪಿತವಲ್ಲದ ರೀತಿಯಲ್ಲಿ ಬೇರೆಯ ಹೆಣ್ಣುಗಳ ಜತೆಯಲ್ಲಿ ಕಾಮದ ನಂಟನ್ನು ಪಡೆಯಬೇಡಿ. ಏಕೆಂದರೆ ಇಂತಹ ನಂಟಿನಿಂದ ವ್ಯಕ್ತಿಯ ಮತ್ತು ಹೆಣ್ಣಿನ ಕುಟುಂಬಗಳೆರಡರ ನೆಮ್ಮದಿಯು ಹಾಳಾಗುವುದಲ್ಲದೆ, ಎರಡು ಕುಟುಂಬಗಳಿಗೆ ಸೇರಿದ ವ್ಯಕ್ತಿಗಳ ಬದುಕು ಸಾವು ನೋವುಗಳಿಗೆ ಗುರಿಯಾಗುತ್ತದೆ;

ಧನ=ಸಂಪತ್ತು/ಆಸ್ತಿಪಾಸ್ತಿ/ಒಡವೆ ವಸ್ತು/ಹಣಕಾಸು; ಪರಧನ=ಬೇರೆಯವರಿಗೆ ಸೇರಿದ ಸಂಪತ್ತು; ಆಮಿಷ=ಪಡೆಯಬೇಕೆಂಬ ಹಂಬಲ;

ಪರಧನದಾಮಿಷವ ತೊರೆಯಿಂ ಭೋ=ಮತ್ತೊಬ್ಬರ ಒಡವೆ/ಸಂಪತ್ತು/ಆಸ್ತಿಪಾಸ್ತಿಯನ್ನು ಲಪಟಾಯಿಸಬೇಕೆಂಬ ಕೆಟ್ಟ ಆಸೆಯನ್ನು ಬಿಡಿರಿ. ಏಕೆಂದರೆ ಕೆಲವೇ ವ್ಯಕ್ತಿಗಳು ಇತರರಿಗೆ ಮತ್ತು ಸಮಾಜಕ್ಕೆ ಸೇರಿದ ಸಂಪತ್ತನ್ನು ಕೊಳ್ಳೆ ಹೊಡೆದು ಗೋರಿ ಗುಡ್ಡೆ ಹಾಕಿಕೊಳ್ಳತೊಡಗಿದಾಗ, ಜನಸಮುದಾಯದಲ್ಲಿ ಕೋಟಿಗಟ್ಟಲೆ ಮಂದಿ ಜೀವನಕ್ಕೆ ಅಗತ್ಯವಾದ ಅನ್ನ/ಬಟ್ಟೆ/ವಸತಿ/ವಿದ್ಯೆ/ಉದ್ಯೋಗ/ಆರೋಗ್ಯದಿಂದ ವಂಚಿತರಾಗಿ ಹಸಿವು/ಬಡತನ/ಅಪಮಾನದ ಬೇಗೆಯಲ್ಲಿ ಬೆಂದು ಬಸವಳಿಯತೊಡಗುತ್ತಾರೆ. ಸಂಪತ್ತಿನ ಸಂಗ್ರಹದಲ್ಲಿ ತೊಡಗುವ ಕೆಲವೇ ವ್ಯಕ್ತಿಗಳ ದುರಾಶೆಯು ಇಡೀ ಸಮಾಜವನ್ನು ಸಂಕಟಕ್ಕೆ ಗುರಿಮಾಡಿ, ಮಾನವ ಸಮುದಾಯದ ಬದುಕನ್ನೇ ದುರಂತದತ್ತ ತಳ್ಳುತ್ತದೆ;

ಇವ=ಇವನ್ನು/ಇಂತಹ ನಡೆನುಡಿಗಳನ್ನು; ತೊರೆಯದೆ=ಬಿಡದೆ/ತ್ಯಜಿಸದೆ; ಇವ ತೊರೆಯದೆ=ಇಂತಹ ಕೆಟ್ಟ ಚಾಳಿಯನ್ನು/ನೀಚತನವನ್ನು ಬಿಡದೆ; ಹೋಗಿ=ದೇವರ ವಿಗ್ರಹಗಳು ನೆಲೆಗೊಂಡಿರುವ ಜಾಗದ ದಡದಲ್ಲಿರುವ ನದಿ/ಹೊಳೆಯ ಬಳಿಸಾರಿ; **ತೊರೆಯ ಮಿಂದಡೆ**=ಅಲ್ಲಿ ಹರಿಯುತ್ತಿರುವ ನದಿ/ಹೊಳೆಯಲ್ಲಿ ಮುಳುಗಿ ಎದ್ದರೆ; ಸ್ನಾನ ಮಾಡಿದರೆ; ಬರು+ ತೊರೆ; ಬರು=ಬರಿದು/ಏನೂ ಇಲ್ಲದಿರುವುದು; **ಬರುದೊರೆ**=ಯಾವ ತೊರೆಯಲ್ಲಿ ಮಿಂದರೆ ಪಾಪಗಳು ಪರಿಹಾರಗೊಂಡು, ಒಳಿತಾಗುವುದೆಂಬ ನಂಬಿಕೆಯು ಜನಮನದಲ್ಲಿತ್ತೋ, ಅಂತಹ ನಂಬಿಕೆಯು ಇಂತಹ ನೀಚ ವ್ಯಕ್ತಿಗಳ ಪಾಲಿಗೆ ಅನ್ವಯವಾಗುವುದಿಲ್ಲ;

ಹೋಹುದು=ಹರಿಯುತ್ತಿರುವುದು/ಸಾಗುತ್ತಿರುವುದು; **ಬರುದೊರೆ ಹೋಹುದು**=ನದಿ/ಹೊಳೆಯಲ್ಲಿ ನೀರು ತನ್ನ ಪಾಡಿಗೆ ತಾನು ಹರಿಯುತ್ತಿರುವುದು; ಕೂಡಲಸಂಗಮದೇವಾ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ;

ಇವ ತೊರೆಯದೆ ಹೋಗಿ ತೊರೆಯ ಮಿಂದಡೆ ಬರುದೊರೆ ಹೋಹುದು ಕೂಡಲಸಂಗಮದೇವಾ=ವ್ಯಕ್ತಿಗಳು ತಮ್ಮ ನಿಜಜೀವನದಲ್ಲಿನ ಕೆಟ್ಟ ನಡೆನುಡಿಗಳನ್ನು ತೊರೆಯದೆ ಹೊಳೆಯಲ್ಲಿ ಮಿಂದ ಮಾತ್ರಕ್ಕೆ, ಅವರ ಬದುಕಿನಲ್ಲಿ ಏನೊಂದು ಬದಲಾವಣೆಯಾಗುವುದಿಲ್ಲ. ಅವರು ಮೊದಲಿನಂತೆಯೇ ಸಮಾಜಕ್ಕೆ ಕೇಡನ್ನು ಬಗೆಯುವ ವ್ಯಕ್ತಿಗಳಾಗಿರುತ್ತಾರೆ. ತೊರೆಗಳಲ್ಲಿ ಮಿಂದೆದ್ದ ಮಾತ್ರಕ್ಕೆ ವ್ಯಕ್ತಿಯಲ್ಲಿರುವ ಕೆಟ್ಟತನ/ನೀಚತನ ಹೋಗುವುದಿಲ್ಲವೆಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.)

❖

132. ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಮಾನವನ ಜೀವನದಲ್ಲಿ ಧರ್ಮವೆಂಬುದು ವ್ಯಕ್ತಿಯ ಅರಿವು, ಹೊಣೆಗಾರಿಕೆ ಮತ್ತು ಒಲವಿನಿಂದ ಕೂಡಿದ ಕರುಣೆಯ ನಡೆನುಡಿಯನ್ನು ತಳಹದಿಯನ್ನಾಗಿ ಹೊಂದಿರಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ದಯ+ಇಲ್ಲದ; ದಯ=ಇತರರ ನೋವು–ಸಂಕಟವನ್ನು ಕಂಡು ಮರುಗಿ, ಅದನ್ನು ನಿವಾರಿಸಲು ನೆರವು ನೀಡುವುದು; ಇಲ್ಲ=ಯಾವುದೇ ಒಂದು ವಸ್ತು/ಜೀವಿ/ಸಂಗತಿಯು ಕಾಣದಿರುವುದು; ಧರ್ಮ+ಅದು+ಏವುದು+ಅಯ್ಯಾ; ಧರ್ಮ=ಆಚಾರ/ಸಂಪ್ರದಾಯ/ಕಟ್ಟುಪಾಡು;

ಏವುದು=ಯಾವುದು/ಏನು ಪ್ರಯೋಜನ; ಅಯ್ಯಾ=ಗಂಡಸರೊಡನೆ ಒಲವು ನಲಿವಿನಿಂದ ಮಾತನಾಡುವಾಗ ಬಳಸುವ ಪದ;

ದಯವಿಲ್ಲದ ಧರ್ಮವದೇವುದಯ್ಯಾ=ಕರುಣೆಯ ನಡೆ ನುಡಿಗಳನ್ನು ವ್ಯಕ್ತಿಯು ತನ್ನ ನಿತ್ಯ ಜೀವನದ ವ್ಯವಹಾರದಲ್ಲಿ ಅಳವಡಿಸಿಕೊಂಡು ಬಾಳದಿದ್ದರೆ/ಧರ್ಮದ ಹೆಸರಿನಲ್ಲಿ ಇತರ ಧರ್ಮದವರನ್ನು ಕ್ರೂರವಾಗಿ ಸಾವು ನೋವುಗಳಿಗೆ ಗುರಿಮಾಡಿದರೆ ಅಂತಹ ಧರ್ಮದಿಂದ ಏನು ತಾನೇ ಪ್ರಯೋಜನ/ಯಾವ ಬಗೆಯಲ್ಲಿ ಒಳ್ಳೆಯದಾಗುತ್ತದೆ;

ಬೇಕು=ಅಗತ್ಯ/ಅವಶ್ಯ; ಸರ್ವ+ಪ್ರಾಣಿ+ಗಳ್+ಎಲ್ಲರ್+ಅಲ್ಲಿ; ಸರ್ವ=ಎಲ್ಲ/ಸಕಲ/ಸಮಸ್ತ; ಪ್ರಾಣಿ=ಜೀವಿ/ಜೀವವುಳ್ಳ ಕ್ರಿಮಿಕೀಟಗಳು/ಜಂತುಗಳು/ಮಾನವರು; ಎಲ್ಲ=ಸಕಲ ಸರ್ವವನ್ನು ಒಳಗೊಂಡು;

ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ=ಜಗತ್ತಿನಲ್ಲಿರುವ ಎಲ್ಲಾ ಜೀವರಾಶಿಗಳನ್ನು ಕರುಣೆಯಿಂದ ಕಾಣಬೇಕು/ಯಾವೊಂದು ಜೀವಿಯನ್ನು ಕೊಲ್ಲಬಾರದು;

ಮೂಲ+ಅಯ್ಯಾ; ಮೂಲ=ಹುಟ್ಟುವ ಜಾಗ/ನೆಲೆ;

ದಯವೇ ಧರ್ಮದ ಮೂಲ=ಕರುಣೆಯ ನಡೆನುಡಿಯು ಧರ್ಮದ ಅಡಿಪಾಯವಾಗಬೇಕು. ಕರುಣೆಯ ನಡೆನುಡಿ ಎಂದರೆ ಇತರರೊಡನೆ

ಸಹನೆಯಿಂದ ನಡೆದುಕೊಳ್ಳುವುದು/ಸಹಮಾನವನ ನೋವು–ಸಂಕಟ–ಹಸಿವು–ಅಪಮಾನ–ಬಡತನವನ್ನು ಕಂಡಾಗ, ಅದಕ್ಕಾಗಿ ಮರುಗಿ, ಅದನ್ನು ನಿವಾರಿಸುವುದಕ್ಕಾಗಿ ತನ್ನ ಕಯ್ಯಲ್ಲಾದ ನೆರವನ್ನು ನೀಡುವುದು.

ಕೂಡಲಸಂಗಯ್ಯನ್+ಅಂತು+ಅಲ್ಲದೆ+ಒಲ್ಲನ್+ಅಯ್ಯಾ; ಕೂಡಲ ಸಂಗಯ್ಯ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಅಂತು=ಆ ರೀತಿಯಲ್ಲಿ/ಆ ಬಗೆಯಲ್ಲಿ; ಅಂತಲ್ಲದೆ=ಆ ರೀತಿಯಲ್ಲಿ ಇರದಿದ್ದರೆ; ಒಲ್=ಮೆಚ್ಚು/ಒಪ್ಪು; ಒಲ್ಲನ್=ಮೆಚ್ಚುವುದಿಲ್ಲ/ನಿರಾಕರಿಸುತ್ತಾನೆ;

ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ=ದೇವರ ಮೆಚ್ಚುಗೆಗೆ ಪಾತ್ರನಾಗ ಬೇಕಾದರೆ ಮಾನವೀಯ ಗುಣಗಳಲ್ಲಿ ಬಹು ದೊಡ್ಡದು ಎನಿಸಿರುವ ಕರುಣೆಯ ನಡೆನುಡಿಗಳು ವ್ಯಕ್ತಿಯಲ್ಲಿ ಇರಬೇಕು ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.

ಜನರು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಏನಾದರೂ ತಂಟೆ ತಕರಾರುಗಳು ಉಂಟಾದಾಗ 'ಒಸಿ ದರ್ಮ ಕರ್ಮ ನೋಡಿ ಮಾತಾಡಪ್ಪ' ಎನ್ನುತ್ತಾರೆ. ಆಗ ಧರ್ಮ ಎಂಬ ಪದ 'ಸರಿ/ನ್ಯಾಯ/ದಿಟ/ನೀತಿ' ಮತ್ತು ಕರ್ಮ ಎಂಬ ಪದ 'ತಪ್ಪು/ಅನ್ಯಾಯ/ಸುಳ್ಳು/ಅನೀತಿ' ಎಂಬ ತಿರುಳಿನಲ್ಲಿ ಬಳಕೆಗೊಳ್ಳುತ್ತವೆ.

ಜಗತ್ತಿನಲ್ಲಿರುವ ಮಾನವ ಸಮುದಾಯಗಳಲ್ಲಿ ಬೇರೆ ಬೇರೆ ಬಗೆಯ ಹೆಸರಿನ ಧರ್ಮಗಳು ಆಚರಣೆಯಲ್ಲಿವೆ. ಇವು ಜನರು ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟಗಳಾಗಿವೆ. ಪ್ರತಿಯೊಂದು ಧರ್ಮವೂ ತನ್ನದೇ ಆದ ಸಂಪ್ರದಾಯ/ಕಟ್ಟುಪಾಡುಗಳನ್ನು ಹೊಂದಿರುತ್ತದೆ. ಒಂದು ಧರ್ಮದ ಸಮುದಾಯದಲ್ಲಿ ಹುಟ್ಟಿ ಬೆಳೆದ ಇಲ್ಲವೇ ಆ ಧರ್ಮಕ್ಕೆ ಹೊಸದಾಗಿ ಸೇರಿದ ವ್ಯಕ್ತಿಯು ಯಾವ ದೇವರನ್ನು ಪೂಜಿಸಬೇಕು/ಪೂಜಿಸಬಾರದು; ದೇವರನ್ನು ಪೂಜಿಸುವ ಆಚರಣೆಗಳು ಯಾವ ರೀತಿಯಲ್ಲಿರಬೇಕು/ಇರಬಾರದು; ದೇಗುಲದೊಳಕ್ಕೆ ಯಾರು ಹೋಗಬೇಕು/ಹೋಗಬಾರದು; ಯಾವ ಬಗೆಯ ಉಣಿಸು ತಿನಸುಗಳನ್ನು ತಿನ್ನಬೇಕು/ತಿನ್ನಬಾರದು; ಯಾರೊಡನೆ ಕುಳಿತು ಉಣ್ಣಬೇಕು/ಉಣ್ಣಬಾರದು; ಯಾರೊಡನೆ ಮದುವೆಯಾಗಬೇಕು/ಮದುವೆಯಾಗಬಾರದು; ಯಾವ ಬಗೆಯ ಉಡುಗೆ ಗಳನ್ನು ತೊಡಬೇಕು/ತೊಡಬಾರದು; ಯಾವ ವ್ಯಕ್ತಿಯನ್ನು ಮುಟ್ಟಿಸಿಕೊಳ್ಳ ಬಹುದು/ಮುಟ್ಟಿಸಿಕೊಳ್ಳಬಾರದು; ಸತ್ತಾಗ ವ್ಯಕ್ತಿಯ ದೇಹವನ್ನು ಯಾವ ಮಸಣದಲ್ಲಿ ಸುಡಬೇಕು/ಸುಡಬಾರದು, ಹೂಳಬೇಕು/ಹೂಳಬಾರದು ಎಂಬೆಲ್ಲಾ ಕಟ್ಟುಪಾಡುಗಳಿರುತ್ತವೆ.

ಆಯಾ ಧರ್ಮಕ್ಕೆ ಸೇರಿದ ವ್ಯಕ್ತಿಗಳು ತಂತಮ್ಮ ಧರ್ಮದಲ್ಲಿರುವ ಸಂಪ್ರದಾಯಗಳನ್ನು ತಮ್ಮ ದಿನನಿತ್ಯದ ಬದುಕಿನ ವ್ಯವಹಾರಗಳಲ್ಲಿ ಕಡ್ಡಾಯವಾಗಿ ಪಾಲಿಸುತ್ತಿರಬೇಕೆಂಬ ಕಟ್ಟಳೆಯಿರುತ್ತದೆ. ತಮ್ಮ ಧರ್ಮದ ಸಂಪ್ರದಾಯ/ನಿಯಮಗಳ ಎಲ್ಲೆಯನ್ನು ಮೀರಬಾರದೆಂಬ ಕಟ್ಟುಪಾಡುಗಳಿರುತ್ತವೆ. ಧರ್ಮದ ಎಲ್ಲೆಯನ್ನು ದಾಟಿ ನಡೆದವರನ್ನು ಸಮುದಾಯದಿಂದ ಹೊರಹಾಕುವ/ದಂಡನೆಯನ್ನು ನೀಡುವ ಕಸುವನ್ನು ಆಯಾಯ ಧರ್ಮದ ನೇತಾರರು ಹೊಂದಿರುತ್ತಾರೆ.

ಈ ರೀತಿ ಧರ್ಮದ ನೆಲೆಯಲ್ಲಿ ಹುಟ್ಟಿ ಬೆಳೆದು, ಅದರಲ್ಲಿನ ಆಚಾರ ವಿಚಾರಗಳಿಗೆ ತಕ್ಕಂತೆ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ವ್ಯಕ್ತಿಗಳು ಸಮಾಜದಲ್ಲಿ ತಮ್ಮ ನೆರೆಹೊರೆಯಲ್ಲಿ ಬಾಳುತ್ತಿರುವ ಇತರ ಧರ್ಮಗಳ ಜನರ ಬಗ್ಗೆ ಅಸಹನೆ/ಅಪನಂಬಿಕೆ/ಅಸೂಯೆ/ಹಗೆತನದ ಒಳಮಿಡಿತಗಳನ್ನು ಹೊಂದಿರುತ್ತಾರೆ. ಇದಕ್ಕೆ ಕಾರಣವೇನೆಂದರೆ ಇತರ ಧರ್ಮದವರು ಹೊಂದಿರುವ ಆಸ್ತಿಪಾಸ್ತಿ/ಸಂಪತ್ತು/ರಾಜಕೀಯ ಗದ್ದುಗೆ/ಸಾಮಾಜಿಕ ಅಂತಸ್ತು.

ಪ್ರತಿಯೊಂದು ಧರ್ಮದಲ್ಲಿಯೂ ಜಾತಿ/ಉಪಜಾತಿಗಳು/ಬಡವ ಬಲ್ಲಿದರೆಂಬ ವರ್ಗಗಳು ಇರುತ್ತವೆ. ಇವು ಒಂದಕ್ಕಿಂತ ಮತ್ತೊಂದು ಮೇಲು ಇಲ್ಲವೇ ಕೀಳು ಎಂಬ ಸಾಮಾಜಿಕ ಅಂತಸ್ತಿನ ಮೆಟ್ಟಿಲುಗಳಿಂದ ಕೂಡಿರುತ್ತವೆ. ಒಂದು ಧರ್ಮಕ್ಕೆ ಸೇರಿದ ಜನಸಮುದಾಯದಲ್ಲಿಯೇ ಮೇಲು ಜಾತಿ/ಮೇಲು ವರ್ಗಕ್ಕೆ ಸೇರಿದ ಜನರು ಕೆಳಜಾತಿ/ಕೆಳವರ್ಗಕ್ಕೆ ಸೇರಿದ ಜನರ ಮೇಲೆ ಕ್ರೂರತನದಿಂದ ದಬ್ಬಾಳಿಕೆಯನ್ನು ನಡೆಸುವುದಲ್ಲದೆ, ಅವರನ್ನು ಕೀಳಾಗಿ ಕಾಣುತ್ತಾರೆ.

ಈ ರೀತಿ ಸಾಮಾಜಿಕ ಒಕ್ಕೂಟವಾಗಿ ರಚನೆಗೊಂಡಿರುವ 'ಧರ್ಮ' ಎನ್ನುವುದು ಜನಸಮುದಾಯಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ವಿಂಗಡಿಸುವ, ಪರಸ್ಪರ ಒಂದರ ಎದುರಾಗಿ ಮತ್ತೊಂದನ್ನು ಎತ್ತಿಕಟ್ಟುವ ಮತ್ತು ಇತರ ಧರ್ಮದವರನ್ನು ಯಾವ ಹಿಂಜರಿಕೆಯೂ ಇಲ್ಲದೆ/ಆಡಳಿತದ ಕಾನೂನು ಕಟ್ಟಲೆಗಳನ್ನು ಲೆಕ್ಕಿಸದೆ ಧರ್ಮದ ಹೆಸರಿನಲ್ಲಿ ಕೊಲೆ ಸುಲಿಗೆ ಮಾಡಲು ಬಳಸಿಕೊಳ್ಳುವ ಹರಿತವಾದ ಹತಾರವಾಗಿದೆ.

ಈ ಹಿನ್ನೆಲೆಯಿಂದ ನೋಡಿದಾಗ ಜಗತ್ತಿನ ಜನಸಮುದಾಯಗಳಲ್ಲಿ/ದೇಶಗಳಲ್ಲಿ/ರಾಜ್ಯಗಳಲ್ಲಿ ಆಚರಣೆಯಲ್ಲಿರುವ ಬಹುಬಗೆಯ ಧರ್ಮಗಳು ಜನರು ಪರಸ್ಪರ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳುವುದಕ್ಕೆ ನೂರಾರು ಬಗೆಯ ಅಡೆತಡೆಗಳನ್ನು ಒಡ್ಡಿವೆ.

ರಾಜ ಮಹಾರಾಜರು ಆಳುತ್ತಿದ್ದ ಕಾಲದಲ್ಲಿ ರಾಜ್ಯಗಳ ವಿಸ್ತರಣೆಗಾಗಿ ನಡೆದ ಕದನಗಳಲ್ಲಿ ಹರಿದ ಮಾನವ ರಕ್ತಕ್ಕಿಂತಲೂ ಧರ್ಮದ ಹೆಸರಿನಲ್ಲಿ ನಡೆದ ಕೊಲೆ ಸುಲಿಗೆಯಲ್ಲಿ ಹರಿದ ನೆತ್ತರಿನ ಪ್ರಮಾಣವೇ ಹೆಚ್ಚು ಎಂಬುದು ಜಗತ್ತಿನ ಚರಿತ್ರೆಯ ಉದ್ದಕ್ಕೂ ಕಂಡುಬರುತ್ತದೆ. ಆದ್ದರಿಂದ ಧರ್ಮವೆಂಬುದು ಬಹಿರಂಗದಲ್ಲಿ ಮಾನವ ಸಮುದಾಯಗಳ ಜೀವನದ ಆಚರಣೆ/ಸಂಪ್ರದಾಯ/ಕಟ್ಟುಪಾಡುಗಳ ಪಾಲನೆಯಂತೆ ಕಂಡುಬಂದರೆ, ಅಂತರಂಗದಲ್ಲಿ ಮಾನವ ಸಮುದಾಯಗಳನ್ನು ನೂರಾರು ಬಗೆಯ ಸಾವು/ನೋವುಗಳಿಗೆ ಗುರಿಮಾಡುವ ಸಂಗತಿಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಧರ್ಮದ ಆಚರಣೆಯಲ್ಲಿ ಕರುಣೆಯ ನಡೆನುಡಿಗಳು ತುಂಬಾ ದೊಡ್ಡ ಪಾತ್ರವನ್ನು ವಹಿಸಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.)

❖

133. ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೆ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೆ ಸ್ವರ್ಗ ಅನಾಚಾರವೆ ನರಕ
ಕೂಡಲಸಂಗಮದೇವಾ ನೀವೆ ಪ್ರಮಾಣು.

ಅರಿವು, ಒಲವು, ನಲಿವುಗಳಿಂದ ಕೂಡಿದ ನೆಮ್ಮದಿಯ ಜೀವನಕ್ಕೆ ಇಲ್ಲವೇ ಕೋಪ ತಾಪ ಹತಾಶೆಗಳಿಂದ ಹದಗೆಟ್ಟ ಸಂಕಟದ ಜೀವನಕ್ಕೆ ವ್ಯಕ್ತಿಗಳ ನಡೆನುಡಿಗಳೇ ಕಾರಣ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ದೇವ=ದೇವತೆ; ಲೋಕ=ಜಗತ್ತು/ಪ್ರಪಂಚ; ದೇವಲೋಕ=ಜನಮನದ ಕಲ್ಪನೆಯಲ್ಲಿ ರೂಪುಗೊಂಡಿರುವ ದೇವತೆಗಳು ನೆಲೆಸಿರುವ ಲೋಕ/ ಜನಸಮುದಾಯದ ಮನದಲ್ಲಿ ತಾವು ವಾಸಮಾಡುತ್ತಿರುವ ಇಹಲೋಕದ ಮೇಲುಗಡೆಯಲ್ಲಿ ದೇವತೆಗಳು ನೆಲೆಸಿರುವ ದೇವಲೋಕ ಮತ್ತು ಕೆಳಗಡೆಯಲ್ಲಿ ನಾಗಸರ್ಪಗಳು ನೆಲೆಸಿರುವ ಪಾತಾಳಲೋಕವಿದೆ ಮತ್ತು ದೇವತೆಗಳು ಸಾವು ನೋವುಗಳಿಲ್ಲದೆ ದೇವಲೋಕದಲ್ಲಿ ನೆಮ್ಮದಿಯಿಂದಿದ್ದಾರೆ ಎಂಬ ಕಲ್ಪನೆಯಿದೆ;

ಮರ್ತ್ಯಲೋಕ+ಎಂಬುದು; ಮರ್ತ್ಯ=ಮಾನವ/ಮನುಜ/ನರ; ಮರ್ತ್ಯಲೋಕ =ಮಾನವರು ಹುಟ್ಟಿ ಬೆಳೆದು ಬಾಳಿ ಸಾಯುತ್ತಿರುವ ಲೋಕ; ಎಂಬುದು= ಎನ್ನುವುದು; ಬೇರೆ+ಇಲ್ಲ; ಬೇರೆ=ಮತ್ತೊಂದು ರೀತಿಯಲ್ಲಿರುವುದು/ ಬಗೆಯಲ್ಲಿರುವುದು; ಬೇರಿಲ್ಲ=ಮತ್ತೊಂದಿಲ್ಲ/ಇನ್ನೊಂದಿಲ್ಲ; ಕಾಣ್=ತಿಳಿ/ಅರಿ; ಕಾಣಿರೋ=ತಿಳಿದುಕೊಳ್ಳಿರಿ/ಅರಿತುಕೊಳ್ಳಿರಿ;

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ=ದೇವಲೋಕ ಮತ್ತು ಮರ್ತ್ಯಲೋಕವೆಂಬ ಎರಡು ಬೇರೆಬೇರೆಯಾಗಿರುವ ಲೋಕಗಳು ವಾಸ್ತವದಲ್ಲಿ ಇಲ್ಲ. ದೇವಲೋಕವೆಂಬುದು ಮಾನವರ ಮನದ ಕಲ್ಪನೆಯ ಲೋಕ. ಇರುವುದು ಒಂದೇ ಲೋಕ. ಅದು ಮರ್ತ್ಯಲೋಕ ಎಂಬುದನ್ನು ಮೊದಲು ಮನಗಾಣಿರಿ;

ಸತ್ಯ=ಇರುವುದನ್ನು ಅದು ಇರುವಂತೆಯೇ ಕಾಣುವುದು/ತಿಳಿಯುವುದು; ಸತ್ಯವ=ಸತ್ಯವನ್ನು; ನುಡಿ=ಹೇಳು/ಉಚ್ಚರಿಸು; ನುಡಿವುದೆ= ಮಾತನಾಡುವುದೆ/ ಹೇಳುವುದೆ; ಮಿಥ್ಯ=ಹುಸಿ/ಸುಳ್ಳು/ಇರುವುದನ್ನು ಇಲ್ಲವೆಂದು–ಇಲ್ಲದ್ದನ್ನು

ಇದೆಯೆಂದು ತಿಳಿಯುವುದು; ಮಿಥ್ಯೆಯ=ಮಿಥ್ಯೆಯನ್ನು;

ಸತ್ಯವ ನುಡಿವುದೆ ದೇವಲೋಕ=ಒಳಿತನ್ನುಂಟುಮಾಡುವ ಉದ್ದೇಶದಿಂದ ವ್ಯಕ್ತಿಗಳು ಸತ್ಯವನ್ನು ನುಡಿಯುವುದರಿಂದ ಸಮಾಜದಲ್ಲಿ ಎಲ್ಲ ವ್ಯಕ್ತಿಗಳಿಗೂ ಅಗತ್ಯವಾದ ಅನ್ನ/ಬಟ್ಟೆ/ವಸತಿ/ವಿದ್ಯೆ/ಉದ್ಯೋಗ/ಆರೋಗ್ಯ ದೊರಕುವಂತಾಗಿ, ನೆಮ್ಮದಿಯ ಬದುಕು ನೆಲೆಗೊಳ್ಳುತ್ತದೆ. 'ದೇವಲೋಕ' ಎಂಬ ಪದವನ್ನು ಒಲವು ನಲಿವು ನೆಮ್ಮದಿಯಿಂದ ತುಂಬಿದ ಬದುಕಿಗೆ ಒಂದು ರೂಪಕವಾಗಿ ಬಳಸಲಾಗಿದೆ;

ಮಿಥ್ಯವ ನುಡಿವುದೆ ಮರ್ತ್ಯಲೋಕ=ಕೇಡನ್ನು ಬಗೆಯಲೆಂದು ವ್ಯಕ್ತಿಗಳು ಹುಸಿಯನ್ನಾಡಲು ತೊಡಗಿದಾಗ, ಜನಸಮುದಾಯದಲ್ಲಿ ವಂಚನೆ/ಕೊಲೆ/ಸುಲಿಗೆಗಳು ಹೆಚ್ಚಾಗಿ ಜನರ ಬದುಕು ಹಸಿವು/ಬಡತನ/ಅಪಮಾನದಿಂದ ಕೂಡಿ ಸಂಕಟಕ್ಕೆ ಗುರಿಯಾಗಿ ನರಳುತ್ತದೆ. 'ಮರ್ತ್ಯಲೋಕ' ಎಂಬ ಪದವನ್ನು ವಂಚನೆ/ಕ್ರೂರತನ/ಸಾವು/ನೋವುಗಳಿಗೆ ಒಂದು ರೂಪಕವಾಗಿ ಬಳಸಲಾಗಿದೆ;

ಆಚಾರ=ಒಳ್ಳೆಯ ನಡೆನುಡಿಗಳಿಂದ ಕೂಡಿದ ಒಳ್ಳೆಯ ನಡತೆ; ಅನಾಚಾರ=ಕೆಟ್ಟ ನಡೆನುಡಿಗಳಿಂದ ಕೂಡಿದ ಕೆಟ್ಟ ನಡತೆ;

ಸ್ವರ್ಗ–ನರಕ=ಮಾನವನ ಕಲ್ಪನೆಯಲ್ಲಿ ರೂಪುಗೊಂಡಿರುವ ಎರಡು ನೆಲೆಗಳು. ಸ್ವರ್ಗವು ನಲಿವಿನ ತಾಣ ಮತ್ತು ನರಕವು ನೋವಿನ ತಾಣವೆಂಬ ಕಲ್ಪನೆಯು ಜನಮನದಲ್ಲಿದೆ.

ಸ್ವರ್ಗವೆನ್ನುವುದು ಈ ಲೋಕದಲ್ಲಿ ಜನರಿಗೆ ಒಳಿತನ್ನು ಮಾಡಿದ ವ್ಯಕ್ತಿಯು ಸತ್ತ ನಂತರ ಹೋಗಿ ನೆಲಸುವ ಜಾಗ. ಸ್ವರ್ಗಕ್ಕೆ ಹೋದ ವ್ಯಕ್ತಿಗಳಿಗೆ ಎಲ್ಲ ಬಗೆಯ ಆನಂದ ಮತ್ತು ನೆಮ್ಮದಿ ನಿರಂತರವಾಗಿ ದೊರೆಯುತ್ತದೆ ಎಂಬ ಕಲ್ಪನೆಯು ಜನಮನದಲ್ಲಿದೆ.

ನರಕವೆನ್ನುವುದು ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು, ಅನಂತರ ತಾನು ಮಾಡಿದ ಕೆಟ್ಟ ಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಜಾಗ.

ಸ್ವರ್ಗ ಎಂಬ ಪದವನ್ನು " ಆನಂದ/ನೆಮ್ಮದಿ/ಒಲವು/ನಲಿವು " ಗಳಿಗೆ ಒಂದು ರೂಪಕವಾಗಿ ಬಳಸಲಾಗಿದೆ;

'ನರಕ' ಎಂಬ ಪದವನ್ನು "ಸಂಕಟ/ನೋವು/ಯಾತನೆ/ಕೋಪತಾಪ"ಗಳಿಗೆ ಒಂದು ರೂಪಕವಾಗಿ ಬಳಸಲಾಗಿದೆ;

ಆಚಾರವೇ ಸ್ವರ್ಗ=ಯಾವ ವ್ಯಕ್ತಿಗಳು ಒಳ್ಳೆಯ ನಡೆನುಡಿಗಳಿಂದ ಬಾಳ್ವೆಯನ್ನು ನಡೆಸುತ್ತಾರೆಯೋ, ಅವರ ಜೀವನವು ಒಲವು, ನಲಿವು, ನೆಮ್ಮದಿಯಿಂದ ಕೂಡಿರುತ್ತದೆ;

ಅನಾಚಾರವೆ ನರಕ=ಯಾವ ವ್ಯಕ್ತಿಗಳು ಕೆಟ್ಟ ನಡೆನುಡಿಗಳಿಂದ ಬಾಳ್ವೆಯನ್ನು ನಡೆಸುತ್ತಾರೆಯೋ, ಅವರ ಜೀವನವು ಸಾವು/ನೋವು/ಸಂಕಟ/ಒತ್ತಡ/ಅಪಮಾನಗಳ ಬೇಗುದಿಯಲ್ಲಿ ಬೇಯುತ್ತದೆ;

ಕುಟುಂಬದ ನೆಲೆಯಲ್ಲಿ/ದುಡಿಮೆಯ ನೆಲೆಯಲ್ಲಿ/ಸಾರ್ವಜನಿಕ ನೆಲೆಯಲ್ಲಿ ಸಂಕಟ/ಅಪಮಾನ/ದುಗುಡ/ಸಾವು/ನೋವಿನ ಸನ್ನಿವೇಶಗಳು ಉಂಟಾದಾಗ/ವ್ಯಕ್ತಿಯು ಕೆಲವೊಮ್ಮೆ ತನಗೆ ತಾನೇ ಇಲ್ಲವೇ ಇತರರೊಡನೆ ಮಾತನಾಡುವಾಗ "ನನ್ನ ಜೀವನವೇ ನರಕವಾಗಿದೆ. ನಮ್ಮ ಮನೆಯೇ ನರಕವಾಗಿದೆ. ನಾನು ಕೆಲಸ ಮಾಡುವ ಜಾಗವೇ ನರಕವಾಗಿದೆ. ನಮ್ಮೂರೇ ನರಕವಾಗಿದೆ" ಎಂದು ಹೇಳುವುದನ್ನು ನಾವೆಲ್ಲರೂ ಕೇಳುತ್ತಿರುತ್ತೇವೆ. ಮಾನವ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಆಗುಹೋಗುಗಳು ಇತರ ವ್ಯಕ್ತಿಗಳ ನಡೆನುಡಿಯನ್ನು ಅವಲಂಬಿಸಿರುವುದರಿಂದ ಒಬ್ಬ ವ್ಯಕ್ತಿಯ ಕೆಟ್ಟ ನಡೆನುಡಿಯು ಅವನನ್ನು ಹಾಳು ಮಾಡುವುದರ ಜತೆಜತೆಗೆ, ಅವನನ್ನು ಅವಲಂಬಿಸಿರುವ ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಗಳನ್ನು ಬಲಿತೆಗೆದುಕೊಳ್ಳುತ್ತದೆ/ಸಮಾಜಕ್ಕೂ ಕೇಡನ್ನುಂಟುಮಾಡುತ್ತದೆ.

ಆದುದರಿಂದ ಜನರ ಬದುಕನ್ನು ಸ್ವರ್ಗದಂತೆ ಆನಂದಮಯವಾಗಿ ಅಂದ ಚಂದದಿಂದ ರೂಪಿಸುವ ಇಲ್ಲವೇ ನರಕದಂತೆ ಸಂಕಟಮಯವಾಗಿ ಹಾಳು ಗೆಡಹುವ ಕ್ರಿಯೆಯು ವ್ಯಕ್ತಿಗಳ ಒಳಿತು/ಕೆಡುಕಿನ ನಡೆನುಡಿಯನ್ನು ಅವಲಂಬಿಸಿದೆ ಎಂಬ ವಿಚಾರವನ್ನು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬ ನುಡಿಗಳು ಸೂಚಿಸುತ್ತಿವೆ. ಒಬ್ಬ ವ್ಯಕ್ತಿಯ ಜೀವನದಲ್ಲಿನ ಏಳುಬೀಳುಗಳಿಂದ ತೊಡಗಿ ಒಂದು ಕುಟುಂಬ/ಒಂದು ಸಮಾಜ/ಒಂದು ದೇಶ/ಒಟ್ಟಾರೆಯಾಗಿ ಮಾನವ ಜಗತ್ತಿನ ಆಗುಹೋಗುಗಳಿಗೆ ಈ ನುಡಿಗಳು ಅನ್ವಯವಾಗುತ್ತವೆ;

ಕೂಡಲಸಂಗಮದೇವಾ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ನೀವೆ=ದೇವರಾದ ನೀವು; ಪ್ರಮಾಣು=ಸರಿ ತಪ್ಪುಗಳನ್ನು ಅಳೆದು ನೋಡುವುದು;

ಕೂಡಲಸಂಗಮದೇವಾ ನೀವೆ ಪ್ರಮಾಣು=ವ್ಯಕ್ತಿಗಳ ಒಳಿತು ಕೆಡುಕಿನ ನಡೆನುಡಿಗಳನ್ನು ಸದಾಕಾಲ ಕೂಡಲಸಂಗಮನು ಒರೆಹಚ್ಚಿ ನೋಡುತ್ತಿರುತ್ತಾನೆ ಎಂಬ ನಂಬಿಕೆಯಿಂದ ಕೂಡಿದ್ದ ಶಿವಶರಣಶರಣೆಯರು ಜೀವನದ ಉದ್ದಕ್ಕೂ ಒಳಿತಿನ ನಡೆನುಡಿಗಳಿಂದ ಬಾಳಬೇಕೆಂಬ ಎಚ್ಚರವನ್ನು ಹೊಂದಿದ್ದರು.) ❖

134. ನಾನೊಂದ ನೆನೆದಡೆ ತಾನೊಂದ ನೆನೆವುದು
ನಾನಿತ್ತಲೆಳದಡೆ ತಾನತ್ತಲೆಳುವುದು
ತಾ ಬೇರೆ ಎನ್ನನಳಲಿಸಿ ಕಾಡಿತ್ತು
ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು
ಕೂಡಲಸಂಗನ ಕೂಡಿಹೆನೆಂದಡೆ
ತಾನೆನ್ನ ಮುಂದುಗೆಡೆಸಿತ್ತು ಮಾಯೆ.

ತನ್ನ ಮನದೊಳಗೆ ತುಡಿಯುತ್ತಿರುವ ಒಳಿತು/ಕೆಡುಕಿನ ಬಯಕೆಗಳ ನಡುವೆ ಸಿಲುಕಿ ಕಂಗಾಲಾಗಿರುವ ವ್ಯಕ್ತಿಯು, ಕೆಡುಕಿನಿಂದ ಪಾರಾಗಿ ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಂಡು ಬಾಳಲು ಹಂಬಲಿಸುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ.

(ನಾನ್+ಒಂದ; ನಾನ್=ವ್ಯಕ್ತಿಯು; ಒಂದ=ಒಂದು ಸಂಗತಿಯನ್ನು/ವಿಚಾರವನ್ನು; ನೆನೆ=ಆಲೋಚಿಸು/ಚಿಂತಿಸು; ನೆನೆದಡೆ=ಮಾಡಬೇಕೆಂದು ಬಯಸಿದರೆ; ತಾನ್+ಒಂದ; ತಾನ್=ವ್ಯಕ್ತಿಯ ಮನದಲ್ಲಿಯೇ ಮತ್ತೊಂದು ಬಗೆಯ ಆಲೋಚನೆ/ಚಿಂತನೆ; ನೆನೆವುದು=ಉಂಟಾಗುವುದು/ಬರುವುದು;

ನಾನೊಂದ ನೆನೆದಡೆ ತಾನೊಂದ ನೆನೆವುದು=ಯಾವುದೇ ಒಂದು ಕೆಲಸದಲ್ಲಿ ತೊಡಕು ಉಂಟಾದಾಗ ವ್ಯಕ್ತಿಯ ಮನಸ್ಸು ಇಬ್ಬಗೆಯ ತೊಳಲಾಟಕ್ಕೆ ಗುರಿಯಾಗುತ್ತದೆ/ಹೀಗೆ ಮಾಡಿದರೆ ಸರಿ ಎಂದು ಒಂದು ಮನಸ್ಸು ಹೇಳಿದರೆ, ಹಾಗೆ ಮಾಡುವುದು ಸರಿಯಲ್ಲವೆಂದು ಮತ್ತೊಂದು ಮನಸ್ಸು ಎದುರಾಗುತ್ತದೆ;

ನಾನ್+ಇತ್ತಲ್+ಎಳೆದಡೆ; ಇತ್ತ=ಈ ಕಡೆ; ಇತ್ತಲ್=ಈ ಕಡೆಗೆ; ಎಳೆ=ಸೆಳೆಯುವುದು/ಜಗ್ಗುವುದು; ಎಳೆದಡೆ=ಸೆಳೆದರೆ/ಜಗ್ಗಿದರೆ; ತಾನ್+ಅತ್ತಲ್+ಎಳೆವುದು; ಅತ್ತ=ಆ ಕಡ್ಡೆ; ಅತ್ತಲ್=ಆ ಕಡೆಗೆ; ಎಳೆವುದು= ಎಳೆಯುತ್ತದೆ;

ನಾನಿತ್ತಲೆಳದಡೆ ತಾನತ್ತಲೆಳುವುದು=ಮನದಲ್ಲಿ ಉಂಟಾದ ಇಬ್ಬಗೆಯ ತುಯ್ದಾಡುವಿಕೆಯು ವ್ಯಕ್ತಿಯನ್ನು ಒಳಿತು/ಕೆಡುಕಿನ ಗೊಂದಲಕ್ಕೆ ಗುರಿ ಮಾಡಿ, ಏನೊಂದನ್ನು ಮಾಡಲಾಗದೆ ಮಿಲಮಿಲನೆ ಒದ್ದಾಡುವಂತೆ ಮಾಡುತ್ತದೆ;

ತಾ=ಮನದಲ್ಲಿನ ಮತ್ತೊಂದು ಬಗೆಯ ಚಿಂತನೆ/ಆಲೋಚನೆ; ಬೇರೆ=ಜತೆಗೆ/ಕೂಡ; ಎನ್ನನ್+ಅಳಲಿಸಿ; ಎನ್ನನ್ನು=ನನ್ನನ್ನು; ಅಳಲು=ಸಂಕಟ; ಅಳಲಿಸಿ=ಸಂಕಟಕ್ಕೆ ಗುರಿ ಮಾಡಿ; ಕಾಡು+ಇತ್ತು; ಕಾಡು=ಹಿಂಸಿಸು/ಪೀಡಿಸು;

ಇತ್ತು=ಇರುವುದು/ಇದೆ; ಕಾಡಿತ್ತು=ನೋಯಿಸುತ್ತಿದೆ/ಪೀಡಿಸುತ್ತಿದೆ; ಎನ್ನ=ನನ್ನನ್ನು; ಬಳಲು=ದಣಿಯುವುದು; ಬಳಲಿಸಿ=ದಣಿಯುವಂತೆ ಮಾಡಿ;

ತಾ ಬೇರೆ ಎನ್ನನಳಲಿಸಿ ಕಾಡಿತ್ತು ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು=ಮನದಲ್ಲಿ ಉಂಟಾದ ಇಬ್ಬಗೆಯ ತಾಕಲಾಟದಲ್ಲಿ ಏನನ್ನು ಮಾಡಬೇಕು/ಏನನ್ನು ಮಾಡ ಬಾರದು ಎಂಬುದನ್ನು ತೀರ್ಮಾನಿಸಲಾಗದೆ ವ್ಯಕ್ತಿಯು ಮಾನಸಿಕ ಒತ್ತಡಕ್ಕೆ ಗುರಿಯಾಗಿ ನರಳತೊಡಗುತ್ತಾನೆ;

ಕೂಡಲಸಂಗ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಕೂಡಿ+ಇಹೆನ್+ ಎಂದಡೆ; ಕೂಡಿ=ಸೇರಿ/ಜತೆಯಾಗಿ; ಇಹೆನ್=ಇರುವೆನು; ಎಂದಡೆ= ಎಂದುಕೊಂಡರೆ;

ಕೂಡಲಸಂಗನ ಕೂಡಿಹೆನೆಂದಡೆ=ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳುವುದರ ಮೂಲಕ ಕೂಡಲಸಂಗನ ಜತೆಗೂಡಬೇಕೆಂದು ಬಯಸಿದರೆ;

ತಾನ್+ಎನ್ನ; ಮುಂದು+ಕೆಡಿಸಿ+ಇತ್ತು; ಮುಂದು=ಎದುರಿನಲ್ಲಿರುವುದು; ಕೆಡು=ಇಲ್ಲವಾಗು/ನಾಶವಾಗು; ಇತ್ತು=ಇರುವುದು/ಇದೆ; ಮುಂದು ಗೆಡಿಸಿತ್ತು=ಮುಂದಿನ ದಾರಿಯೇ ಕಾಣದಂತೆ ಮಾಡಿದೆ/ಏನನ್ನು ಮಾಡಬೇಕೆಂದು ತೋಚದೆ ಕಂಗಾಲಾಗುವಂತೆ ಮಾಡಿದೆ; ಮಾಯೆ=ವ್ಯಕ್ತಿಯ ಮಯ್ ಮನದಲ್ಲಿ ಬಯಕೆಯನ್ನು ಕೆರಳಿಸಿ ತಮ್ಮತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿಗಳು;

ತಾನೆನ್ನ ಮುಂದುಗೆಡಿಸಿತ್ತು ಮಾಯೆ=ಮಯ್ ಮನದಲ್ಲಿ ಬಹುಬಗೆಯ ಕೆಟ್ಟ ಬಯಕೆಗಳನ್ನು ಮೂಡಿಸುವ ವಸ್ತು/ಜೀವಿ/ಸಂಗತಿಯು ವ್ಯಕ್ತಿಯ ನಡೆನುಡಿಯಲ್ಲಿ ಏರುಪೇರುಗಳನ್ನು ಉಂಟುಮಾಡುತ್ತ, ಅಡೆತಡೆಗಳನ್ನು ಒಡ್ಡುತ್ತ, ವ್ಯಕ್ತಿಯ ಬದುಕು ಸರಿಯಾದ ಹಾದಿಯಲ್ಲಿ ಸಾಗದಂತೆ ಮಾಡಿದೆ;

‘ಕೆಟ್ಟ ಬಯಕೆ’ಎಂದರೆ ತನಗೆ ಒಲವು ನಲಿವನ್ನು ನೀಡಿದರೂ, ಇತರರಿಗೆ ಮತ್ತು ಸಮಾಜಕ್ಕೆ ಹಾನಿಯನ್ನು ಉಂಟುಮಾಡುವುದು.

‘ಒಳ್ಳೆಯ ಬಯಕೆ’ ಎಂದರೆ ತನಗೆ ಒಲವು ನಲಿವನ್ನು ನೀಡುವಂತೆಯೇ ಇತರರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವುದು.)

❖

135. ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲಸಂಗಮದೇವನೆಂತೊಲಿವನಯ್ಯಾ.

ವ್ಯಕ್ತಿಯು ಆಡುವ ಮಾತು ಕೇಳುಗರ ಮನಕ್ಕೆ ಅರಿವು ಮತ್ತು ಆನಂದವನ್ನು ನೀಡುವಂತಿದ್ದು, ವ್ಯಕ್ತಿಗಳ ನಡುವಣ ನಂಟನ್ನು ಪರಸ್ಪರ ಒಲವು ನಲಿವಿನಿಂದ ಬೆಸೆದು, ನೆಮ್ಮದಿಯಿಂದ ಎಲ್ಲರೂ ಜೊತೆಗೂಡಿ ಬಾಳುವುದಕ್ಕೆ ನೆರವಾಗುವಂತಿರಬೇಕೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ನುಡಿ=ಮಾತು/ಸೊಲ್ಲು; ನುಡಿದಡೆ=ಮಾತನಾಡಿದರೆ/ಏನನ್ನಾದರೂ ಹೇಳಿದರೆ; ಮುತ್ತು=ನವರತ್ನಗಳಲ್ಲಿ ಒಂದು ಬಗೆಯದು;

'ವಜ್ರ/ವೈಡೂರ್ಯ/ಗೋಮೇದಕ/ಪುಷ್ಯರಾಗ/ನೀಲ/ಮರಕತ/ಮಾಣಿಕ್ಯ/ಹವಳ/ಮುತ್ತು' ಎಂಬ ಒಂಬತ್ತು ಬಗೆಯ ವಸ್ತುಗಳನ್ನು ನವರತ್ನಗಳೆಂದು ಕರೆಯುತ್ತಾರೆ; ಹಾರ+ಅಂತೆ+ಇರಬೇಕು; ಹಾರ=ಮಾಲೆ/ಸರ; ಅಂತೆ=ಆ ರೀತಿಯಲ್ಲಿ; ಮುತ್ತಿನ ಹಾರ=ಬಿಡಿ ಬಿಡಿ ಮುತ್ತುಗಳನ್ನು ದಾರದ ಎಳೆ ಇಲ್ಲವೇ ಚಿನ್ನ ಬೆಳ್ಳಿ ಮುಂತಾದ ಲೋಹದ ತಂತಿಗೆ ಪೋಣಿಸಿ ಕಟ್ಟಿರುವ ಮಾಲೆ/ಸರ;

ಮಾಣಿಕ್ಯ=ಕೆಂಪು ಹರಳು/ಕೆಂಪು ಬಣ್ಣದ ರತ್ನ/ನವರತ್ನಗಳಲ್ಲಿ ಒಂದು; ದೀಪ್ತಿ+ಅಂತೆ+ಇರಬೇಕು; ದೀಪ್ತಿ=ಬೆಳಕು/ಕಾಂತಿ; ಮಾಣಿಕ್ಯದ ದೀಪ್ತಿ=ಮಾಣಿಕ್ಯದ ಕಾಂತಿ;

ಸ್ಫಟಿಕ=ಬಿಳಿಯ ಬಣ್ಣದ ಕಾಂತಿಯಿಂದ ಕೂಡಿರುವ ಒಂದು ಬಗೆಯ ಹರಳು; ಸಲಾಕೆ+ಅಂತೆ+ಇರಬೇಕು; ಸಲಾಕೆ=ಸರಳು/ಈಟಿ; **ಸ್ಫಟಿಕದ ಸಲಾಕೆ**=ಈಟಿಯ ಹತಾರದಂತೆ ನೋಡುವ ಕಣ್ಣುಗಳಿಗೆ ಕೋರಯಿಸುತ್ತಿರುತ್ತವೆ;

'ಮುತ್ತಿನ ಹಾರ/ಮಾಣಿಕ್ಯದ ದೀಪ್ತಿ/ಸ್ಫಟಿಕದ ಸಲಾಕೆ'– ಈ ಮೂರು ವಸ್ತುಗಳು ಉಪಮೆಯಾಗಿ ಬಳಕೆಯಾಗಿವೆ.

ನುಡಿದಡೆ ಮುತ್ತಿನ ಹಾರದಂತಿರಬೇಕು... ಮಾಣಿಕ್ಯದ ದೀಪ್ತಿಯಂತಿರಬೇಕು...

ಸ್ಫಟಿಕದ ಸಲಾಕೆಯಂತಿರಬೇಕು=ಮುತ್ತಿನ ಹಾರದ ಸೊಗಸು... ಮಾಣಿಕ್ಯದ ಕಾಂತಿ... ಸ್ಫಟಿಕದ ಕಿರಣಗಳು ನೋಡುವವರ ಕಣ್ಮನಗಳನ್ನು ತಣಿಸುತ್ತವೆ ಮತ್ತು ಅವನ್ನು ಒಡವೆಯನ್ನಾಗಿ ತೊಟ್ಟಿರುವ ವ್ಯಕ್ತಿಗಳ ಅಂದಚೆಂದವನ್ನು ಇಮ್ಮಡಿಗೊಳಿಸಿ ಕಂಗೊಳಿಸುವಂತೆ ಮಾಡುತ್ತವೆ. ಈ ಮೂರು ಬಗೆಯ ವಸ್ತುಗಳ ಚೆಲುವಿನಂತೆಯೇ ವ್ಯಕ್ತಿಯು ಆಡುವ ಮಾತುಗಳು... ಆಡಿದವನಿಗೂ ಮತ್ತು ಕೇಳಿದವರಿಗೂ ಅರಿವು ಮತ್ತು ಆನಂದವನ್ನು ನೀಡಿ ಒಳಿತನ್ನುಂಟುಮಾಡುವಂತಿರಬೇಕು.

ಲಿಂಗ=ಶಿವ; ಮೆಚ್ಚು=ಒಪ್ಪು; ಅಹುದು+ಅಹುದು+ಎನಬೇಕು; ಅಹುದು= ಯಾವುದೇ ಒಂದು ಸಂಗತಿಯನ್ನು ಸರಿಯಾಗಿದೆ ಮತ್ತು ಸತ್ಯವಾಗಿದೆ ಎಂದು ಒಪ್ಪಿಗೆಯನ್ನು ಸೂಚಿಸುವುದು; ಎನಬೇಕು=ಎಂದು ಹೇಳಬೇಕು/ನುಡಿಯಬೇಕು;

ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು=ವ್ಯಕ್ತಿಯು ಆಡುವ ನುಡಿಗಳು ತನಗೆ ಒಳಿತನ್ನು ಉಂಟುಮಾಡುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಿರಬೇಕು. ಬೇರೆ ಬೇರೆ ಮತ/ಜನಾಂಗ/ಜಾತಿ ಸಮುದಾಯಗಳಿಂದ ಕೂಡಿರುವ ಸಮಾಜದಲ್ಲಿ ಎಲ್ಲರೊಡನೆ ಹೊಂದಿಕೊಂಡು ಬಾಳುವಂತಹ ಒಲವು ನಲಿವಿನಿಂದ ಕೂಡಿದ ಒಳ್ಳೆಯ ಮಾತುಗಳನ್ನಾಡಬೇಕು. ಆಡುವ ಮಾತುಗಳು ಕೇಳುಗರ ಮನಸ್ಸನ್ನು ಗಾಸಿಗೊಳಿಸುವಂತೆ ಇಲ್ಲವೇ ಇತರರ ವ್ಯಕ್ತಿತ್ವವನ್ನು ಅಲ್ಲಗಳೆಯುವಂತೆ ಇರಬಾರದು ಎಂಬ ಎಚ್ಚರವನ್ನು ಮತ್ತು ಅರಿವನ್ನು ವ್ಯಕ್ತಿಯು ಹೊಂದಿರಬೇಕು. ಆಗ ವ್ಯಕ್ತಿಯು ಆಡಿದ ಮಾತುಗಳಿಗೆ ಒಂದು ಬೆಲೆ ಬರುತ್ತದೆ ಎಂಬ ತಿರುಳಿನಲ್ಲಿ ಈ ವಾಕ್ಯ ಬಳಕೆಯಾಗಿದೆ.

ದಿನನಿತ್ಯದ ಮಾತುಕತೆಗಳಲ್ಲಿ ಯಾರಾದರೂ ಒಂದು ಕೆಟ್ಟ ಮಾತನ್ನಾಡಿದಾಗ 'ಹೀಗೆಲ್ಲಾ ಮಾತನಾಡಬೇಡ. ನಾಲ್ಕು ಜನ ಮೆಚ್ಚುವಂತಹ/ದೇವರು ಒಪ್ಪುವಂತಹ ಮಾತನ್ನಾಡು' ಎಂದು ಎಚ್ಚರಿಕೆಯನ್ನು ನೀಡುವ ಪ್ರಸಂಗಗಳು ಕನ್ನಡ ನುಡಿಸಮುದಾಯದಲ್ಲಿ ಕಂಡುಬರುತ್ತವೆ;

ನುಡಿ+ಒಳಗೆ+ಆಗಿ; ಒಳಗೆ=ಸೇರಿಕೊಂಡು; ನಡೆಯದೆ+ಇದ್ದಡೆ; ನಡೆ=ನಡವಳಿಕೆ; ನಡೆಯದೆ=ಆಚರಿಸದೆ/ವರ್ತಿಸದೆ/ಮಾಡದೆ; ಇದ್ದಡೆ=ಇದ್ದರೆ; **ನುಡಿಯೊಳಗಾಗಿ ನಡೆಯದಿದ್ದಡೆ**=ವ್ಯಕ್ತಿಯ ತಾನು ಆಡುವ ಸತ್ಯ/ನೀತಿ/ನ್ಯಾಯದ ನುಡಿಗಳಿಗೆ ತಕ್ಕಂತೆ ತನ್ನ ಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡದಿದ್ದರೆ/ ಆಡುವುದೇ ಒಂದು ಮಾಡುವುದೇ ಮತ್ತೊಂದಾದರೆ/ಬಾಯಲ್ಲಿ ಒಳ್ಳೆಯ ಮಾತುಗಳನ್ನಾಡುತ್ತ ಕಯ್ಯಲ್ಲಿ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದರೆ;

ಕೂಡಲಸಂಗಮದೇವನ್+ಎಂತು+ಒಲಿವನ್+ಅಯ್ಯಾ; ಕೂಡಲ ಸಂಗಮ ದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ; ಎಂತು=ಯಾವ ರೀತಿಯಲ್ಲಿ; ಒಲಿ=ಒಪ್ಪು/ಸಮ್ಮತಿಸು/ಅಂಗೀಕರಿಸು/ಮೆಚ್ಚು; ಒಲಿವನ್=ಮೆಚ್ಚುವನು/ಒಪ್ಪುವನು; ಅಯ್ಯಾ=ಗಂಡಸರನ್ನು ಒಲವು ನಲಿವುಗಳಿಂದ ಮಾತನಾಡಿಸುವಾಗ ಬಳಸುವ ಪದ;

ನುಡಿಯೊಳಗಾಗಿ ನಡೆಯದಿದ್ದಡೆ ಕೂಡಲಸಂಗಮದೇವನೆಂತೊಲಿವನಯ್ಯಾ= ಒಳ್ಳೆಯ ನುಡಿಗಳನ್ನಾಡುವಂತೆಯೇ ಒಳ್ಳೆಯ ಕೆಲಸಗಳನ್ನು ಮಾಡದಿದ್ದರೆ, ಅಂತಹ ವ್ಯಕ್ತಿಯನ್ನು ದೇವರು ಒಪ್ಪಿಕೊಳ್ಳುವುದಿಲ್ಲ .ಏಕೆಂದರೆ ದೇವರನ್ನು ಒಲಿಸಿಕೊಳ್ಳಲು ಮಾಡುವ ಎಲ್ಲಾ ಬಗೆಯ ಪೂಜೆ/ಆಚರಣೆ/ವ್ರತಗಳಿಗಿಂತಲೂ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳೇ ದೊಡ್ಡದು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು;

ಉಪಮೆ ಎಂದರೆ ಹೋಲಿಕೆ. ಕವಿಯು ತಾನು ಹೇಳಬೇಕಾದ ಸಂಗತಿಯನ್ನು ಓದುಗರಿಗೆ/ಕೇಳುಗರಿಗೆ ಚೆನ್ನಾಗಿ ಮನದಟ್ಟು ಮಾಡಲೆಂದು ಮತ್ತೊಂದು ವಸ್ತು/ ಪ್ರಸಂಗದೊಡನೆ ಹೋಲಿಸುವುದನ್ನು ಉಪಮೆಯೆಂದು ಕರೆಯುತ್ತಾರೆ.

❖

136. ನೂರನೋದಿ ನೂರ ಕೇಳಿ ಏನು
ಆಸೆ ಬಿಡದು ರೋಷ ಪರಿಯದು
ಮಜ್ಜನಕ್ಕೆರೆದು ಫಲವೇನು
ಮಾತಿನಂತೆ ಮನವಿಲ್ಲದ
ಜಾತಿ ಡಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ.

ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಳ್ಳದ ಮತ್ತು ಮನದಲ್ಲಿ ಒಳ್ಳೆಯ ಉದ್ದೇಶವನ್ನು ಹೊಂದಿರದ ವ್ಯಕ್ತಿಯು ಕಲಿಯುವ ಅಕ್ಕರದ ವಿದ್ಯೆಯಿಂದ/ಆಡುವ ಮಾತಿನಿಂದ/ಮಾಡುವ ಆಚರಣೆಯಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ನೂರ್+ಅನ್+ಓದಿ; ನೂರು=ಅಂಕಿಯನ್ನು ಸೂಚಿಸುವ ಪದ/ಹತ್ತನ್ನು ಹತ್ತರಿಂದ ಗುಣಿಸಿದಾಗ ಬರುವ ಮೊತ್ತ; ಅನ್=ಅನ್ನು; ಓದು=ಲಿಪಿ ರೂಪದಲ್ಲಿರುವ ಬರಹದಲ್ಲಿನ ವಿಚಾರಗಳನ್ನು ಕಣ್ಣಿನ ಮೂಲಕ ನೋಡಿ ತಿಳಿದುಕೊಳ್ಳುವುದು; ನೂರ=ನೂರನ್ನು; ಕೇಳು=ಆಲಿಸು/ಇತರರು ಆಡುವ ಮಾತುಗಳನ್ನು ಕಿವಿಯ ಮೂಲಕ ಆಲಿಸಿ ಗ್ರಹಿಸಿಕೊಳ್ಳುವುದು; ಏನು=ಯಾವುದು;

ನೂರನೋದಿ=ವಿಚಾರಗಳನ್ನು ತಿಳಿಸುವಂತಹ ಹಲವು ರೀತಿಯ ಪುಸ್ತಕಗಳನ್ನು ಓದುವುದರಿಂದ ಬರುವ ತಿಳುವಳಿಕೆ/ವಿವೇಕ/ಪಾಂಡಿತ್ಯ;

ನೂರ ಕೇಳಿ=ಸತ್ಯ/ನೀತಿ/ನ್ಯಾಯದ ನಡೆನುಡಿಗಳನ್ನು ಕುರಿತು ಗುರು ಹಿರಿಯರು ಆಡುತ್ತಿರುವ ನೂರಾರು ಬಗೆಯ ಮಾತುಗಳನ್ನು ಕೇಳುವುದರಿಂದ ಬರುವ ತಿಳುವಳಿಕೆ; ಆಸೆ=ಬಯಕೆ/ಹಂಬಲ;

ಆಸೆಯಲ್ಲಿ ಎರಡು ಬಗೆಗಳಿವೆ.

1) ಒಳ್ಳೆಯ ಆಸೆ=ಇತರರಿಗೆ ಹಾನಿಯನ್ನುಂಟಾಗದ ರೀತಿಯಲ್ಲಿ ತನ್ನ ಮನದ ಬಯಕೆಯನ್ನು ಈಡೇರಿಸಿಕೊಳ್ಳುವುದು.

2) ಕೆಟ್ಟ ಆಸೆ= ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಇತರರಿಗೆ ಸಂಕಟವನ್ನುಂಟುಮಾಡುವುದು;

ಬಿಡು=ತೊರೆ/ತ್ಯಜಿಸು; ರೋಷ=ಸಿಟ್ಟು/ಕೋಪ/ಆಕ್ರೋಶ; ಪರಿ=ಬಿಡು/

ತ್ಯಜಿಸು; ಆಸೆ ಬಿಡದು=ಕೆಟ್ಟ ಆಸೆಗಳು ಬಿಟ್ಟುಹೋಗುವುದಿಲ್ಲ; ರೋಷ ಪರಿಯದು=ಸಿಟ್ಟು ಸೆಡವುಗಳು ಇಲ್ಲವಾಗುವುದಿಲ್ಲ;

ನೂರನೋದಿ ನೂರ ಕೇಳಿ... ಏನು ಆಸೆ ಬಿಡದು ರೋಷ ಪರಿಯದು= ನೂರಾರು ಬಗೆಯ ವಿಚಾರಗಳನ್ನು ಒಳಗೊಂಡ ಬರಹಗಳನ್ನು ಓದುವುದರಿಂದ ಮತ್ತು ಗುರುಹಿರಿಯರು ಆಡಿದ ಮಾತುಗಳನ್ನು ಕೇಳಿ ಪಡೆದ ಅರಿವಿನಿಂದ ವ್ಯಕ್ತಿಯು ತನ್ನ ಜೀವನದಲ್ಲಿ ಇತರರಿಗೆ ಕೇಡನ್ನು ಬಗೆಯುವ ಕೆಟ್ಟ ಆಸೆಯನ್ನು ಬಿಟ್ಟು ಮತ್ತು ಮನದಲ್ಲಿ ಕೆರಳುವ ಕೋಪತಾಪವನ್ನು ಹತ್ತಿಕ್ಕಿಕೊಂಡು ಒಳ್ಳೆಯ ವ್ಯಕ್ತಿಯಾಗಿ ಬಾಳುವುದನ್ನು ಕಲಿಯದಿದ್ದರೆ, ಅಂತಹ ಅರಿವಿನ ಗಳಿಕೆಯಿಂದ ಯಾವ ಪ್ರಯೋಜನವೂ ಇಲ್ಲ.

ಏಕೆಂದರೆ ವ್ಯಕ್ತಿಯು ತಾನು ಪಡೆದ ಅರಿವಿನಿಂದ ತನ್ನ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಂಡು ಸಮಾಜಕ್ಕೆ ಒಳಿತನ್ನು ಮಾಡದಿದ್ದಾಗ, ಓದು ಎಂಬುದು ಇತರರ ಮುಂದೆ ತೋರಿಸಿಕೊಳ್ಳುವ ಪಾಂಡಿತ್ಯವಾಗುತ್ತದೆಯೇ ಹೊರತು, ಅದರಿಂದ ಯಾರಿಗೂ ಏನೊಂದು ಬಗೆಯಲ್ಲಿಯೂ ಪ್ರಯೋಜನ ವಾಗುವುದಿಲ್ಲವೆಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ; 'ಪಾಂಡಿತ್ಯ' ಎಂದರೆ ವ್ಯಕ್ತಿಯು ತಾನು ಓದಿ/ಕೇಳಿ ತಿಳಿದಿರುವ ನುಡಿಗಳನ್ನು ಮತ್ತೆ ಮತ್ತೆ ಅದೇ ರೀತಿಯಲ್ಲಿ ಉಚ್ಚರಿಸುತ್ತಿರುವುದು;

ಮಜ್ಜನಕ್ಕೆ+ಎರೆದು; ಮಜ್ಜನ=ಸ್ನಾನ; ಎರೆ=ಸುರಿ/ಹೊಯ್ಯಿ; ಎರೆದು= ಸುರಿದು/ಹೊಯ್ದು; ಮಜ್ಜನಕ್ಕೆರೆ=ದೇವರ ವಿಗ್ರಹವನ್ನು ತೊಳೆಯುವುದಕ್ಕಾಗಿ ನೀರು/ಹಾಲು/ಜೇನು ಮುಂತಾದುವನ್ನು ಸುರಿಯುವುದು/ದೇವರ ಪೂಜೆಯಲ್ಲಿನ ಒಂದು ಆಚರಣೆ; ಫಲ+ಏನು; ಫಲ=ಪ್ರಯೋಜನ/ಉಪಯೋಗ/ಪರಿಣಾಮ;

ಮಜ್ಜನಕ್ಕೆರೆದು ಫಲವೇನು=ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ತನ್ನ ದಿನನಿತ್ಯದ ಜೀವನದಲ್ಲಿ ಆಚರಿಸದೆ ಮಾಡುವ ದೇವರ ಪೂಜೆಯಿಂದ/ ಆಚರಣೆಯಿಂದ ಯಾವ ಪ್ರಯೋಜನವೂ ಇಲ್ಲ; ಮಾತು+ಅಂತೆ; ಮಾತು= ನುಡಿ/ಸೊಲ್ಲು; ಅಂತೆ=ಹಾಗೆ/ಆ ರೀತಿ; ಮನ+ಇಲ್ಲದ; ಮನ=ಮನಸ್ಸು; ಮನವಿಲ್ಲದ=ಮನಸ್ಸಿನಲ್ಲಿ ಇಲ್ಲದ;

ಮಾತಿನಂತೆ ಮನ=ಸಾಮಾಜಿಕ ವ್ಯವಹಾರದಲ್ಲಿ ವ್ಯಕ್ತಿಯು ಇತರರೊಡನೆ ತಾನು ಆಡುವ ಒಳ್ಳೆಯ ಮಾತುಗಳಂತೆಯೇ, ತನ್ನ ಮನಸ್ಸಿನಲ್ಲಿಯೂ ಒಳ್ಳೆಯ ಉದ್ದೇಶ ಹೊಂದಿರುವುದು;

ಜಾತಿ=ಗುಂಪು/ವರ್ಗ; ಡಂಬ=ಮೋಸ/ಬೂಟಾಟಿಕೆ/ಸೋಗಿನ ನಡೆನುಡಿ; ಡಂಬರು=ವಂಚಕರು/ಮೋಸಗಾರರು/ಒಳಗೊಂದು ಹೊರಗೊಂದು ಬಗೆಯ ನಡೆನುಡಿಯುಳ್ಳ ತಳುಕಿನ ವ್ಯಕ್ತಿಗಳು;

ಜಾತಿ ಡಂಬರು=ಜನರಿಗೆ ಮೋಸಮಾಡುವುದರಲ್ಲಿ/ಕಪಟತನದ ನಡೆನುಡಿಗಳಲ್ಲಿ ನಿಪುಣರು/ಅತಿ ನೀಚ ವ್ಯಕ್ತಿಗಳು;

ಮಾತಿನಂತೆ ಮನವಿಲ್ಲದ ಜಾತಿ ಡಂಬರು=ಮನದೊಳಗೆ ಕೆಟ್ಟ ಉದ್ದೇಶದಿಂದ ಕೂಡಿ, ಮಾತಿನಲ್ಲಿ ಸತ್ಯ/ನೀತಿ/ನ್ಯಾಯದ ನುಡಿಗಳನ್ನಾಡುತ್ತಾ ಜನರನ್ನು ವಂಚಿಸುತ್ತಿರುವ ಸೋಗಲಾಡಿತನದ ವ್ಯಕ್ತಿಗಳು;

ನೋಡಿ=ಕಂಡು; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ಮಾತಿನಂತೆ ಮನವಿಲ್ಲದ ಜಾತಿ ಡಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವ=ಸಹಮಾನವರನ್ನು ಮತ್ತು ಸಮಾಜವನ್ನು ವಂಚಿಸುವ ನಯವಂಚಕರು ಅದೇ ಸಮಯದಲ್ಲಿ ತಮ್ಮ ವ್ಯಕ್ತಿತ್ವವನ್ನು ಹಾಳು ಮಾಡಿಕೊಳ್ಳುತ್ತಿರುತ್ತಾರೆ. ಇಂದಲ್ಲ ನಾಳೆ ಎಂದಾದರೂ ಒಂದು ದಿನ ಇವರ ಕಪಟತನದ ನಡೆನುಡಿಗಳು ಬಯಲಾಗಿ ಜನಸಮುದಾಯದ ನಗೆಪಾಟಲಿಗೆ ಇಂತಹ ವ್ಯಕ್ತಿಗಳು ಗುರಿಯಾಗುತ್ತಾರೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ.)

❖

137. ನೀರ ಕಂಡಲ್ಲಿ ಮುಳುಗುವರಯ್ಯಾ
ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ ಒಣಗುವ ಮರನ ಮಚ್ಚಿದವರು
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ.

ತಮ್ಮ ಬದುಕನ್ನು ಉತ್ತಮವಾದ ರೀತಿಯಲ್ಲಿ ರೂಪಿಸಿಕೊಂಡು ಮುನ್ನಡೆಸಲು ಒಳ್ಳೆಯ ನಡೆನುಡಿಗಳು ಅಗತ್ಯವೆಂಬುದನ್ನು ತಿಳಿಯದ ಜನರು ದೇವರನ್ನು ಬಹುಬಗೆಯ ಆಚರಣೆಗಳ ಮೂಲಕ ಪೂಜಿಸುತ್ತಿರುವುದನ್ನು ಈ ವಚನದಲ್ಲಿ ಟೀಕಿಸಲಾಗಿದೆ.

(ನೀರು=ಜಲ/ಉದಕ; ಕಾಣ್=ನೋಡು; ಕಂಡು+ಅಲ್ಲಿ; ಅಲ್ಲಿ=ಆ ಎಡೆ/ಜಾಗ; ಕಂಡಲ್ಲಿ=ಕಂಡ ಕಡೆಯಲ್ಲಿ; ಮುಳುಗುವರ್+ಅಯ್ಯಾ; ಮುಳುಗು=ನೀರಿನೊಳಗೆ ಮಯ್ಯನ್ನು ಅದ್ದುವುದು; ಮುಳುಗುವರು=ಮೀಯುತ್ತಾರೆ/ಸ್ನಾನ ಮಾಡುತ್ತಾರೆ;

ನೀರ ಕಂಡಲ್ಲಿ ಮುಳುಗುವರಯ್ಯಾ= ದೇಗುಲ ಇಲ್ಲವೇ ಪವಿತ್ರವಾದುದೆಂದು ಹೆಸರನ್ನು ಪಡೆದಿರುವ ಊರಿನಲ್ಲಿರುವ ನದಿಗಳಲ್ಲಿ ಸ್ನಾನ ಮಾಡುವರು; ಇಂತಹ ನೀರಿನ ತಾಣಗಳಲ್ಲಿ ಮುಳುಗೇಳುವುದರಿಂದ ಜೀವನದಲ್ಲಿನ ರೋಗರುಜಿನಗಳು ನಿವಾರಣೆಗೊಂಡು, ಬಯಸಿದ ಆಸೆಗಳೆಲ್ಲವೂ ಈಡೇರುವುವು ಮತ್ತು ವ್ಯಕ್ತಿಯು ತಿಳಿದು ಇಲ್ಲವೇ ತಿಳಿಯದೇ ಮಾಡಿದ ಕೆಟ್ಟ ಕೆಲಸಗಳಿಂದ ಬದುಕಿಗೆ ಅಂಟಿಕೊಂಡಿರುವ ಪಾಪದ ಕೊಳೆಯು ತೊಳೆದುಹೋಗಿ ಪುಣ್ಯ ದೊರೆಯುತ್ತದೆ ಎಂಬ ನಂಬಿಕೆಯು ತಲತಲಾಂತರಗಳಿಂದಲೂ ಜನಮನದಲ್ಲಿ ನೆಲೆಯೂರಿದೆ;

ಮರ=ತರು/ಹಚ್ಚಹಸಿರಿನ ರೆಂಬೆಕೊಂಬೆಗಳಿಂದ ಕೂಡಿರುವ ದೊಡ್ಡ ಗಿಡ; ಸುತ್ತುವರ್+ಅಯ್ಯಾ: ಸುತ್ತು=ಬಳಸು/ತಿರುಗು/; ಸುತ್ತುವರು=ಬಳಸುತ್ತಾರೆ/ತಿರುಗುತ್ತಾರೆ;

ಮರನ ಕಂಡಲ್ಲಿ ಸುತ್ತುವರಯ್ಯಾ=ಮರದ ಬುಡದ ಸುತ್ತಲೂ ಹೆಜ್ಜೆಗಳನ್ನಿಡುತ್ತ ಮೂರು/ಏಳು/ಒಂಬತ್ತು/ಹನ್ನೊಂದು ಬಾರಿ ತಿರುಗುವರು; ಕೆಲವು ಬಗೆಯ ಮರಗಿಡಗಳಲ್ಲಿ ದೇವತೆಗಳು ನೆಲೆಸಿದ್ದಾರೆ ಎಂಬ ನಂಬಿಕೆಯು ಜನಮನದಲ್ಲಿದೆ. ದೇವರ ಅನುಗ್ರಹಕ್ಕೆ ಪಾತ್ರರಾಗಿ ತಮ್ಮ ಬದುಕಿನಲ್ಲಿ ಒಳಿತನ್ನು ಹೊಂದುವ ಬಯಕೆಯಿಂದ ದೇವರ ಹೆಸರನ್ನು ಉಚ್ಚರಿಸುತ್ತಾ ಮರವನ್ನು ಸುತ್ತುವ

ಆಚರಣೆಯು ಜನಸಮುದಾಯದಲ್ಲಿ ಕಂಡುಬರುತ್ತದೆ. ಕನ್ನಡ ಜನಸಮುದಾಯದಲ್ಲಿ ಅರಳಿ ಮರ/ಬಿಲ್ವ ಪತ್ರೆಯ ಮರ/ಬೇವಿನ ಮರ/ಎಕ್ಕದ ಗಿಡದ ಬಳಿಯಲ್ಲಿ ಈ ಬಗೆಯ ಆಚರಣೆಯು ಕಂಡು ಬರುತ್ತದೆ.

ಇನ್ನು ಕೆಲವರು ತಮ್ಮ ಜೀವನದ ಆಸೆಗಳನ್ನು ಈಡೇರಿಸುವಂತೆ ದೇವರ ಹೆಸರಿನಲ್ಲಿ ಹರಕೆಯನ್ನು ಕಟ್ಟಿಕೊಂಡು, ಅದರ ಸಂಕೇತವಾಗಿ ನಾನಾ ಬಗೆಯ ವಸ್ತುಗಳನ್ನು ಬಟ್ಟೆಯ ತುಂಡಿನಲ್ಲಿ ಕಟ್ಟಿ ಮರಗಿಡಗಳ ಕೊಂಬೆ ರೆಂಬೆಗಳಿಗೆ ಬಿಗಿಯುತ್ತಾರೆ. ತಮ್ಮ ಕೋರಿಕೆಯು ಈಡೇರಿದರೆ, ದೇವರಿಗೆ ತಾವು ತಂದೊಪ್ಪಿಸುವುದಾಗಿ ಹೆಸರಿಸಿದ್ದ ಕಾಣಿಕೆಯನ್ನು ನೀಡುತ್ತಾರೆ. ಈ ಆಚರಣೆಗಳೆಲ್ಲವೂ ಜನಸಮುದಾಯದ ನಂಬಿಕೆ ಮತ್ತು ಸಂಪ್ರದಾಯಕ್ಕೆ ಒಳಪಟ್ಟಿವೆ;

ಬತ್ತು=ಒಣಗು/ಬರಿದಾಗು/ಇಲ್ಲವಾಗು; ಜಲ=ನೀರು/ಉದಕ; ಒಣಗು =ನೀರಿನ ಅಂಶ/ಜೀವರಸ ಇಲ್ಲದಂತಾಗುವುದು; ಬತ್ತುವ ಜಲ=ಬೇಸಿಗೆಯ ತಾಪದಲ್ಲಿ ನೀರು ಹಿಂಗಿಹೋಗಿ ಕೆರೆಕಟ್ಟೆಗಳು ಬರಿದಾಗುವುದು/ನೀರಿನ ಒರತೆಯು ಕಡಿಮೆಯಾಗಿ ನದಿ ತೊರೆಗಳಲ್ಲಿ ಹರಿಯುತ್ತಿದ್ದ ನೀರು ನಿಂತುಹೋಗುವುದು; ಒಣಗುವ ಮರ=ನೀರಿನ ಆಸರೆಯಿಲ್ಲದೆ ಇಲ್ಲವೇ ವಯಸ್ಸಾದ ಕಾರಣದಿಂದ ಬೇರುಗಳ ಕಸುವು ಕುಗ್ಗಿ ಜೀವರಸವನ್ನು ಕಳೆದುಕೊಂಡು ಮರ ಒಣಗುವುದು;

ಮಚ್ಚು=ಮೆಚ್ಚು/ಒಲಿ; ಮಚ್ಚಿದವರು=ಒಲಿದವರು/ನಂಬಿದವರು; ನಿಮ್ಮನ್+ಎತ್ತ; ನಿಮ್ಮನ್=ಶಿವನನ್ನು; ಎತ್ತ=ಯಾವ ಕಡೆ/ಯಾವ ರೀತಿ; ಬಲ್=ತಿಳಿ/ಅರಿ; ಬಲ್ಲರು=ತಿಳಿದಿರುವವರು/ಅರಿತಿರುವವರು; ಕೂಡಲಸಂಗಮ ದೇವಾ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ವಚನಕಾರ ಬಸವಣ್ಣನನ್ನು ಒಳಗೊಂಡಂತೆ ಶಿವಶರಣಶರಣೆಯರೆಲ್ಲರ ಪಾಲಿಗೆ ದೇವರು ಎಂಬುವ ಶಕ್ತಿ ಇಲ್ಲವೇ ವ್ಯಕ್ತಿಯು ಮರ/ಕಲ್ಲು/ಮಣ್ಣು/ಲೋಹದಿಂದ ರೂಪುಗೊಂಡಿದ್ದಾಗಿರಲಿಲ್ಲ. ದೇವರನ್ನು ಅವರು ವ್ಯಕ್ತಿಯ ಒಳ್ಳೆಯ ನಡೆನುಡಿಗಳಲ್ಲಿ ಕಾಣುತ್ತಿದ್ದರು. 'ಒಳ್ಳೆಯ ನಡೆನುಡಿಗಳು' ಎಂದರೆ ವ್ಯಕ್ತಿಯು ತನ್ನ ಜೀವನದಲ್ಲಿ ಆನಂದ/ನೆಮ್ಮದಿ/ಒಳಿತನ್ನು ಬಯಸುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗೆ ಪೂರಕವಾಗುವ ರೀತಿಯ ನಡೆನುಡಿಗಳನ್ನು ಹೊಂದಿರುವುದು.

ಜನಸಮುದಾಯವೆಲ್ಲವೂ "ಅನ್ನ/ಬಟ್ಟೆ/ವಸತಿ/ವಿದ್ಯೆ/ಉದ್ಯೋಗ/ಆರೋಗ್ಯ" ಹೊಂದಿ, ಎಲ್ಲರೂ ಒಡಗೂಡಿ ಬಾಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯು

ಇತರರನ್ನು ವಂಚಿಸದ/ಇತರರಿಗೆ ಕೇಡನ್ನೆಣಿಸದ ನಡೆನುಡಿಗಳನ್ನು ಹೊಂದಿರಬೇಕು. ಆಗ ಒಂದು ಒಳ್ಳೆಯ ಸಮಾಜ ರೂಪುಗೊಂಡು ಪ್ರತಿಯೊಬ್ಬ ವ್ಯಕ್ತಿಯ ಜೀವನ ಒಲವು ನಲಿವು ನೆಮ್ಮದಿಯಿಂದ ಕೂಡಿರುತ್ತದೆ. ಕೂಡಲಸಂಗಮದೇವನನ್ನು ಅರಿಯುವುದು ಎಂದರೆ ಸಾಮಾಜಿಕ ವ್ಯಕ್ತಿಯಾಗಿ ಒಳ್ಳೆಯ ರೀತಿಯಲ್ಲಿ ಬಾಳುವುದನ್ನು ಕಲಿಯುವುದು;

ಬತ್ತುವ ಜಲವ... ಒಣಗುವ ಮರನ ಮಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲ ಸಂಗಮದೇವಾ=ಹಿಂಗಿಹೋಗುವ ನೀರನ್ನು, ಒಣಗಿಹೋಗುವ ಮರವನ್ನು ದೇವರೆಂದು ನಂಬಿರುವ ಜನರು ಒಳ್ಳೆಯ ನಡೆನುಡಿಯ ಸಂಕೇತವಾಗಿರುವ ನಿನ್ನನ್ನು ಹೇಗೆ ತಾನೆ ತಿಳಿಯಬಲ್ಲರು. ಒಳ್ಳೆಯ ನಡೆನುಡಿಗಳೇ ದೇವರು ಎಂದು ಅರಿತಾಗ ಮಾತ್ರ ಜನರು ಬಹು ಹಿಂದಿನಿಂದಲೂ ಸಂಪ್ರದಾಯವಾಗಿ ಬಂದಿರುವ ಆಚರಣೆಗಳನ್ನು ತೊರೆದು, ತಮ್ಮ ಬದುಕನ್ನು ಒಳ್ಳೆಯ ನಡೆನುಡಿಗಳಿಂದ ಉತ್ತಮವಾಗಿ ರೂಪಿಸಕೊಳ್ಳಬಲ್ಲರು ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ;

❖

138. ನೋಡುವರುಳ್ಳಡೆ ಮಾಡುವೆ ದೇಹಾರವ
ಎನಗೊಂದು ನಿಜವಿಲ್ಲ ಎನಗೊಂದು ನಿಷ್ಪತ್ತಿಯಿಲ್ಲ
ಲಿಂಗವ ತೋರಿ ಉದರವ ಹೊರೆವ ಭಂಗಗಾರ ನಾನು
ಕೂಡಲಸಂಗಮದೇವಾ.

ತನ್ನ ದಿನನಿತ್ಯದ ವ್ಯವಹಾರಗಳಲ್ಲಿ ಒಳ್ಳೆಯ ನಡೆನುಡಿಗಳನ್ನು ಹೊಂದಿರದ ವ್ಯಕ್ತಿಯು ಮಾಡುವ ದೇವರ ಪೂಜೆಯು ಇತರರನ್ನು ಒಲಿಸಿಕೊಂಡು ಹೊಟ್ಟೆಯನ್ನು ಹೊರೆದುಕೊಳ್ಳುವ ಬೂಟಾಟಿಕೆಯ ಕೆಲಸವಾಗಿರುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ನೋಡು+ಅರ್+ಉಳ್ಳಡೆ; ನೋಡು=ಕಾಣು/ಗಮನಿಸು; ಉಳ್=ಇರು; ಉಳ್ಳಡೆ=ಇದ್ದರೆ; ನೋಡುವರುಳ್ಳಡೆ=ನೋಡುವವರು ಇದ್ದಾಗ; ಮಾಡು= ಆಚರಿಸು/ನಡೆದುಕೊಳ್ಳು; ಮಾಡುವೆ=ಮಾಡುತ್ತೇನೆ; ದೇಹಾರ= ಪೂಜೆ/ದೇವರಿಗೆ ಎಡೆಯನ್ನು ನೀಡುವ ಆಚರಣೆ; ದೇಹಾರವ=ದೇವರ ಪೂಜೆಯನ್ನು;

ನೋಡುವರುಳ್ಳಡೆ ಮಾಡುವೆ ದೇಹಾರವ=ಇತರರು ನನ್ನನ್ನು ಗಮನಿಸುತ್ತಿದ್ದಾರೆ ಎಂಬುದನ್ನು ತಿಳಿದಾಗ, ದೇವರಲ್ಲಿ ಅಪಾರವಾದ ಒಲವು ನಲಿವು ನಂಬಿಕೆಗಳನ್ನು ಇಟ್ಟಿರುವ ವ್ಯಕ್ತಿಯಂತೆ ಪೂಜೆಯಲ್ಲಿ ತೊಡಗುತ್ತೇನೆ. ಏಕೆಂದರೆ ನೋಡುವವರ ಮೆಚ್ಚುಗೆಗೆ ಪಾತ್ರನಾಗಿ, ಅವರಿಂದ ನನಗೆ ಅಗತ್ಯವಾದುದನ್ನು ಪಡೆಯಬೇಕೆಂಬ ಉದ್ದೇಶ ನನ್ನದಾಗಿರುತ್ತದೆ;

ಎನಗೆ+ಒಂದು; ಎನಗೆ=ನನಗೆ; ನಿಜ+ಇಲ್ಲ; ನಿಜ=ದಿಟ/ಸತ್ಯ/ವಾಸ್ತವ;

ಎನಗೊಂದು ನಿಜವಿಲ್ಲ=ದಿನನಿತ್ಯದ ಜೀವನದ ವ್ಯವಹಾರಗಳಲ್ಲಿ ದಿಟದ ನಡೆನುಡಿಗಳಿಂದ ನಾನು ಬಾಳುತ್ತಿಲ್ಲ;

ನಿಷ್ಪತ್ತಿ+ಇಲ್ಲ; ನಿಷ್ಪತ್ತಿ=ನಿರ್ಣಯ/ನಿಲುವು;

ಎನಗೊಂದು ನಿಷ್ಪತ್ತಿಯಿಲ್ಲ=ಬದುಕಿನಲ್ಲಿ ಯಾವುದು ಒಳಿತು–ಯಾವುದು ಕೆಡುಕು ಎಂಬುದನ್ನು ಅರಿತುಕೊಂಡು, ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಅನುಸರಿಸಬೇಕೆಂಬ ಗಟ್ಟಿಯಾದ ನಿಲುವನ್ನು ನಾನು ಹೊಂದಿಲ್ಲ;

ಲಿಂಗ=ಶಿವನ ಸಂಕೇತವಾದ ವಿಗ್ರಹ; ತೋರು=ಇತರರು ಕಾಣುವಂತೆ ಮಾಡು/ಇತರರ ಕಣ್ಣಿಗೆ ಬೀಳುವಂತೆ ಮಾಡು; ಉದರ=ಹೊಟ್ಟೆ/ಒಡಲು;

ಹೊರೆ=ಕಾಪಾಡು/ಸಲಹು;

ಲಿಂಗವ ತೋರಿ ಉದರವ ಹೊರೆವುದು=ದೇವರ ಪೂಜೆಯ ನೆಪದಲ್ಲಿ ಹೊಟ್ಟೆಯ ಪಾಡನ್ನು ನೀಗಿಸಿಕೊಳ್ಳುವುದು/ಹಣವನ್ನು ಸಂಪಾದನೆ ಮಾಡುವುದು;

ಭಂಗ=ಕಪಟ/ಮೋಸ/ವಂಚನೆ; ಭಂಗಗಾರ=ಕಪಟಿ/ಮೋಸಗಾರ/ವಂಚಕ; ಕೂಡಲಸಂಗಮದೇವ=ಶಿವ/ಬಸವಣ್ಣನ ವಚನಗಳ ಅಂಕಿತನಾಮ;

ಲಿಂಗವ ತೋರಿ ಉದರವ ಹೊರೆವ ಭಂಗಗಾರ ನಾನು ಕೂಡಲ ಸಂಗಮದೇವಾ=ಶಿವಶರಣಶರಣೆಯರ ಪಾಲಿಗೆ ಲಿಂಗ ಎಂಬುದು ಒಳ್ಳೆಯ ನಡೆನುಡಿಗಳಿಗೆ ಒಂದು ಸಂಕೇತವಾಗಿತ್ತು. ವ್ಯಕ್ತಿಯು ಆಡುವ ಒಳ್ಳೆಯ ಮಾತು ಮತ್ತು ಮಾಡುವ ಒಳ್ಳೆಯ ಕಾಯಕವೇ ಲಿಂಗದ ಪೂಜೆಯಾಗಿತ್ತು. ಆದರೆ ಜನಸಮುದಾಯದಲ್ಲಿ ಬಹುತೇಕ ಮಂದಿ ತಂತಮ್ಮ ಬಯಕೆಗಳ ಈಡೇರಿಕೆಗಾಗಿ ದೇವರನ್ನು ಪೂಜಿಸುತ್ತಿದ್ದಾರೆಯೇ ಹೊರತು ಒಳ್ಳೆಯ ನಡೆನುಡಿಗಳ ಆಚರಣೆಯೇ ದೇವರು ಎಂಬ ಅರಿವನ್ನು ಹೊಂದಿಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ.)

❖

139. ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ
ತನುವಿನಲ್ಲಿ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
ಮನದೊಳಗೆ ಮನದೊಡೆಯನಿಲ್ಲ ಕೂಡಲಸಂಗಮದೇವಾ.

ಸುಳ್ಳು, ತಟವಟ, ಮೋಸ, ಕೆಟ್ಟ ಕಾಮನೆಗಳಿಂದ ಕೂಡಿದ ಕ್ರೂರತನದ ನಡೆನುಡಿಯುಳ್ಳ ವ್ಯಕ್ತಿಯ ಮಯ್ ಮನದಲ್ಲಿ ದೇವರು ನೆಲೆಸಿರುವುದಿಲ್ಲ ಎಂಬ ಸಂಗತಿಯನ್ನು ರೂಪಕವೊಂದರ ಮೂಲಕ ಈ ವಚನದಲ್ಲಿ ಹೇಳಲಾಗಿದೆ.

ವ್ಯಕ್ತಿಯು ಪಡೆದುಕೊಂಡಿರುವ ಅರಿವು ಮತ್ತು ಎಚ್ಚರದ ನಡೆನುಡಿಯನ್ನು ದೇವರೆಂದು ಶಿವಶರಣಶರಣೆಯರು ತಿಳಿದಿದ್ದರು.

ಅರಿವು ಎಂದರೆ "ಜೀವನದಲ್ಲಿ ಯಾವುದು ಒಳ್ಳೆಯದು/ಯಾವುದು ಕೆಟ್ಟದ್ದು–ಯಾವುದು ಸರಿ/ಯಾವುದು ತಪ್ಪು?–ಯಾವುದು ದಿಟ/ಯಾವುದು ಸಟೆ" ಎಂಬ ತಿಳುವಳಿಕೆ.

ಎಚ್ಚರದ ನಡೆನುಡಿ ಎಂದರೆ "ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವ ಕೆಟ್ಟ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು ತನ್ನನ್ನು ಒಳಗೊಂಡಂತೆ ಸಹಮಾನವರ ಮತ್ತು ಸಮಾಜದ ಒಳಿತಿಗೆ ಪೂರಕವಾಗುವಂತೆ ಬಾಳುವುದು."

(ಮನೆ+ಒಳಗೆ; ಮನೆ=ಜನರು ವಾಸಿಸುವ ಜಾಗ; ಒಳಗೆ=ಆ ನೆಲೆಯಲ್ಲಿ/ಬೀಡಿನಲ್ಲಿ; ಮನೆ+ಒಡೆಯನ್+ಇದ್ದಾನೊ; ಒಡೆಯ=ಯಜಮಾನ/ಮನೆಯನ್ನು ಚೆನ್ನಾಗಿ ಕಾಪಾಡಿಕೊಳ್ಳುವ ಹೊಣೆಯನ್ನು ಹೊತ್ತಿರುವ ವ್ಯಕ್ತಿ; ಇರು=ವಾಸಮಾಡು; ಇದ್ದಾನೊ=ಇರುವನೋ/ವಾಸಮಾಡುತ್ತಿರುವನೋ/ನೆಲೆಸಿರುವನೋ; ಇಲ್ಲವೋ=ವಾಸಮಾಡುತ್ತಿಲ್ಲವೋ/ನೆಲೆಸಿಲ್ಲವೋ;

ಹೊಸ್ತಿಲು=ಮನೆಯ ಮುಂದುಗಡೆಯ ಬಾಗಿಲಿನ ಚವುಕಟ್ಟಿನಲ್ಲಿರುವ ಕೆಳಗಿನ ದಪ್ಪನೆಯ ಪಟ್ಟಿ; ಹುಲ್ಲು=ಗರಿಕೆ/ಹಲವಾರು ಬಗೆಯ ಕಳೆ/ಹಂಬು/ಗಿಡಗಳು; ಹುಟ್ಟು=ಬೆಳೆ; ರಜ=ದೂಳು/ಕಸಕಡ್ಡಿ/ದುಂಬು/ಕೊಳಕು ವಸ್ತುಗಳು; ತುಂಬು=ಹರಡು/ವ್ಯಾಪಿಸು;

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ ಮನೆಯೊಡೆಯನಿದ್ದಾನೊ ಇಲ್ಲವೋ=ಮನೆಯ ಮುಂದುಗಡೆಯ ಹೊಸ್ತಿಲ ಎಡೆಯಲ್ಲಿ ಹುಲ್ಲು ಹುಟ್ಟಿ ಮನೆಯ ಒಳಗಡೆ ರಜ ತುಂಬಿಕೊಂಡಿದ್ದರೆ, ಆ ಮನೆಯ ಒಡೆಯನಾಗಲಿ ಇಲ್ಲವೇ ಇನ್ನಿತರ ವ್ಯಕ್ತಿಗಳಾಗಲಿ ವಾಸವಾಗಿಲ್ಲವೆಂದು ಮೇಲುನೋಟಕ್ಕೆ ಗೊತ್ತಾಗುತ್ತದೆ. ಅಂತಹ ಮನೆಯಲ್ಲಿ ಯಾರೊಬ್ಬರೂ ವಾಸವಾಗಿಲ್ಲವೆಂಬುದನ್ನು ಮನೆಯ ಹೊಸ್ತಿಲಲ್ಲಿ ಬೆಳೆದು ಹಬ್ಬಿರುವ ಹಸಿರಿನ ಪಯಿರು ಮತ್ತು ಒಳಗೆ ತುಂಬಿಕೊಂಡಿರುವ ಕಸಕಡ್ಡಿಗಳೇ ಸೂಚಿಸುತ್ತಿವೆ;

ತನು+ಇನ್+ಅಲ್ಲಿ; ತನು=ಮಯ್/ಶರೀರ; ತನುವಿನಲ್ಲಿ=ಮಯ್ಯಲ್ಲಿ/ದೇಹದಲ್ಲಿ; ಹುಸಿ=ಸುಳ್ಳು/ಹುಸಿ/ಇರುವುದನ್ನು ಇಲ್ಲವೆಂದು–ಇಲ್ಲದ್ದನ್ನು ಇದೆಯೆಂದು ಹೇಳುವುದು;

ತನುವಿನೊಳಗೆ ಹುಸಿ ತುಂಬಿ=ದಿನನಿತ್ಯದ ವ್ಯವಹಾರಗಳಲ್ಲಿ ಸುಳ್ಳನ್ನಾಡಿ ತನ್ನ ಹಿತಕ್ಕಾಗಿ ಇತರರನ್ನು ವಂಚಿಸಿ, ಕೇಡನ್ನು ಬಗೆಯುತ್ತಿರುವ ನಡೆನುಡಿಗಳಿಂದ ಕೂಡಿ;

ಮನದ+ಒಳಗೆ; ಮನ=ಮನಸ್ಸು; ಮನದೊಳಗೆ=ಮನಸ್ಸಿನಲ್ಲಿ; ವಿಷಯ=ಆಯ್ದು ಇಂದ್ರಿಯಗಳಾದ ಕಣ್ಣು/ಕಿವಿ/ಮೂಗು/ತೊಗಲು/ನಾಲಗೆಯು ಬಯಸಿದ್ದೆಲ್ಲವನ್ನೂ ಎಂತಾದರೂ ಮಾಡಿ ಪಡೆದುಕೊಳ್ಳಬೇಕೆಂಬ ತುಡಿತ;

ಮನದೊಳಗೆ ವಿಷಯ ತುಂಬಿ=ಕೆಟ್ಟ ಕಾಮನೆಗಳನ್ನು/ಕೆಟ್ಟ ಆಸೆಗಳನ್ನು ಮನದಲ್ಲಿ ತುಂಬಿಕೊಂಡು;

ಮನದ+ಒಡೆಯನ್+ಇಲ್ಲ; ಮನದೊಡೆಯ=ಅರಿವು ಮತ್ತು ಎಚ್ಚರದ ನಡೆನುಡಿಯ ಸಂಕೇತನಾದ ದೇವರು;

ಕೂಡಲಸಂಗಮದೇವ=ಈಶ್ವರ/ಬಸವಣ್ಣನ ವಚನಗಳ ಅಂಕಿತ ನಾಮ;

ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ ಮನದೊಳಗೆ ಮನದೊಡೆಯನಿಲ್ಲ ಕೂಡಲಸಂಗಮದೇವಾ=ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವಂತಹ ಸುಳ್ಳುಗಾರನ ಮತ್ತು ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಯ ಮನದಲ್ಲಿ ದೇವರು ನೆಲೆಯಾಗಿರುವುದಿಲ್ಲ.

ದಿನನಿತ್ಯವೂ ಮನೆಯ ಮುಂದಿನ ಜಾಗದ ಕಸವನ್ನು ತೆಗೆದು ಹೊಸ್ತಿಲನ್ನು ತೊಳೆದು ಮತ್ತು ಮನೆಯ ಒಳಗಿನ ದೂಳುದುಂಬನ್ನು ಗುಡಿಸಿ ಮನೆಯನ್ನು

ಒಪ್ಪವಾಗಿ ಇಟ್ಟುಕೊಳ್ಳಬೇಕಾದ ಒಡೆಯನು ವಾಸವಾಗಿಲ್ಲದಿರುವುದರಿಂದ ಮನೆಯ ಹೊಸ್ತಿಲಲ್ಲಿ ಹುಲ್ಲು ಬೆಳೆದು ಮನೆಯೊಳಗೆ ಕಸಕಡ್ಡಿ ದೂಳು ತುಂಬಿ ಕೊಂಡಿದೆ.

ಈ ರೂಪಕದ ಮೂಲಕ ವಚನಕಾರನು ವ್ಯಕ್ತಿಯು ತನ್ನ ಜೀವನದ ಉದ್ದಕ್ಕೂ ಪ್ರತಿಗಳಿಗೆಯಲ್ಲಿಯೂ ತನ್ನ ಮಯ್ ಮನದಲ್ಲಿ ತುಡಿಯುವಂತಹ ಒಳಿತು ಮತ್ತು ಕೆಡುಕಿನ ಒಳಮಿಡಿತಗಳಲ್ಲಿ, ಕೆಡುಕಿನ ಒಳಮಿಡಿತಗಳನ್ನು ಕಿತ್ತೊಗೆಯುತ್ತ, ಒಳ್ಳೆಯತನದಿಂದ ಬಾಳುತ್ತಿರಬೇಕು ಎಂಬುದನ್ನು ಸೂಚಿಸಿದ್ದಾನೆ. ವ್ಯಕ್ತಿಯು ಜೀವನದ ಉದ್ದಕ್ಕೂ ನಿರಂತರವಾಗಿ ಅರಿವನ್ನು ಪಡೆದುಕೊಳ್ಳುತ್ತ, ಎಚ್ಚರದ ನಡೆನುಡಿಗಳಿಂದ ಬಾಳದಿದ್ದರೆ ಒಡೆಯನಿಲ್ಲದ ಮನೆಯು ಹಾಳುಬಿದ್ದಿರುವಂತೆ ವ್ಯಕ್ತಿಯು ಬದುಕು ಹಾಳಾಗುತ್ತದೆ ಎಂಬ ತಿರುಳನ್ನು ಈ ರೂಪಕ ಸೂಚಿಸುತ್ತದೆ.)

❖

140. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಕೂಡಲಸಂಗಮದೇವಾ.

ಜನರು ನೆಲೆಸಿರುವ ವಾಸ್ತವ ಲೋಕ ಮತ್ತು ಜನಮನದಲ್ಲಿರುವ ಕಲ್ಪನೆಯ ಲೋಕಗಳಲ್ಲಿ, ಯಾವ ಲೋಕದಲ್ಲಿ ಜನರು ಒಳ್ಳೆಯ ಜೀವನವನ್ನು ಮೊದಲು ನಡೆಸಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಒಳ್ಳೆಯ ಜೀವನ ಎಂದರೆ ವ್ಯಕ್ತಿಯು ತನ್ನನ್ನು ಒಳಗೊಂಡಂತೆ ಸಹಮಾನವರ ಮತ್ತು ಸಮಾಜದ ಹಿತಕ್ಕಾಗಿ ಒಳ್ಳೆಯ ನಡೆನುಡಿಗಳಿಂದ ಬಾಳುವುದು.

(ಮರ್ತ್ಯ+ಲೋಕ+ಎಂಬುದು; ಮರ್ತ್ಯ=ಮಾನವ; ಲೋಕ=ಜಗತ್ತು/ಪ್ರಪಂಚ; ಮರ್ತ್ಯಲೋಕ=ಮಾನವರು ಹುಟ್ಟಿ ಬೆಳೆದು ಬಾಳಿ ಸಾಯುತ್ತಿರುವ ಲೋಕ; ಎಂಬುದು=ಎನ್ನುವುದು; ಕರ್ತಾರ=ಬ್ರಹ್ಮ/ಜಗತ್ತನ್ನು ನಿರ್ಮಿಸಿದ ದೇವತೆ; ಕಮ್ಮಟ+ಅಯ್ಯಾ; ಕಮ್ಮಟ=ಟಂಕಸಾಲೆ/ನಾಣ್ಯಗಳನ್ನು ಮುದ್ರಿಸುವ ಮನೆ; ನಾಡನ್ನು ಆಳುವ ರಾಜನು ಚಿನ್ನ/ಬೆಳ್ಳಿ/ಇನ್ನಿತರ ಲೋಹದಿಂದ ಮಾಡಿದ ನಾಣ್ಯಗಳ ಮೇಲೆ ತನ್ನ ಆಡಳಿತದ ಮುದ್ರೆಯನ್ನು ಒತ್ತಿ, ಜನಸಮುದಾಯದ ವ್ಯಾಪಾರ ವ್ಯವಹಾರಗಳಿಗಾಗಿ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ಬಿಡುತ್ತಿದ್ದನು. ರಾಜಮುದ್ರೆಯುಳ್ಳ ಲೋಹದ ನಾಣ್ಯಕ್ಕೆ ಮಾತ್ರ ಸಮಾಜದಲ್ಲಿ ಬೆಲೆಯಿರುತ್ತಿತ್ತು; ಕರ್ತಾರನ ಕಮ್ಮಟ=ಬ್ರಹ್ಮನ ಟಂಕಸಾಲೆ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ='ಕರ್ತಾರನ ಕಮ್ಮಟ' ಎಂಬ ನುಡಿಗಟ್ಟನ್ನು ಒಂದು ರೂಪಕವಾಗಿ ವಚನಕಾರನು ಬಳಸಿದ್ದಾನೆ.

ಮಾನವರು ನೆಲೆಸಿರುವ ಈ ಜಗತ್ತು ಎನ್ನುವುದು ಬ್ರಹ್ಮನು ನಿರ್ಮಿಸಿರುವ ಒಂದು ಟಂಕಸಾಲೆಯಾಗಿದೆ. ದೇವಲೋಕದಲ್ಲಿರುವ ಬ್ರಹ್ಮನೆಂಬ ದೇವತೆಯು ಮಾನವಜೀವಿಗಳ ಹುಟ್ಟಿಗೆ ಕಾರಣನಾಗಿದ್ದಾನೆ. ಬ್ರಹ್ಮನ ಕುಶಲ ಕಯ್ ಚಳಕದಿಂದಾಗಿ ಮಾನವರೆಲ್ಲರೂ ಈ ಜಗತ್ತಿನಲ್ಲಿ ರೂಪುಗೊಂಡಿದ್ದಾರೆ. ಇಲ್ಲಿ ಹುಟ್ಟಿ ಬೆಳೆದು ಬಾಳಿ ಸಾವನ್ನಪ್ಪಿದ ಮಾನವರಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳಿದವರು ನೇರವಾಗಿ ದೇವಲೋಕದಲ್ಲಿರುವ ಸ್ವರ್ಗಕ್ಕೆ ಹೋಗುತ್ತಾರೆ; ಕೆಟ್ಟ

ನಡೆನುಡಿಗಳಿಂದ ಬಾಳಿದವರನ್ನು ನರಕಕ್ಕೆ ದೂಡಲಾಗುತ್ತದೆ ಎಂಬ ಕಲ್ಪನೆಯು ತಲೆತಲಾಂತರದಿಂದಲೂ ಜನಮನದಲ್ಲಿ ಹಾಸುಹೊಕ್ಕಾಗಿ ಬಂದಿದೆ.

ಇಲ್ಲಿ=ಈ ಜಗತ್ತಿನಲ್ಲಿ; ಸಲ್=ತಕ್ಕುದಾಗಿರು/ಯೋಗ್ಯವಾಗಿರು/ಸರಿಯಾಗಿರು; ಸಲ್ಲುವರು=ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಮನ್ನಣೆಯನ್ನು ಪಡೆಯುವವರು; ಅಲ್ಲಿ=ಆ ಜಾಗ/ದೇವಲೋಕದಲ್ಲಿ/ಸ್ವರ್ಗದಲ್ಲಿ; ಸಲ್ಲುವರ್+ಅಯ್ಯಾ;

ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ= ಟಂಕಸಾಲೆಯಲ್ಲಿ ರಾಜನ ಆಡಳಿತ ಮುದ್ರೆಯೊಡನೆ ತಯಾರಾದ ನಾಣ್ಯವು ಹೇಗೆ ನಾಡಿನಲ್ಲಿ ನಡೆಯುವ ವ್ಯವಹಾರಗಳಲ್ಲಿ ಸಲ್ಲುತ್ತದೆಯೋ ಅಂತೆಯೇ ಯಾರು ಈ ಜಗತ್ತಿನಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳನ್ನು ನಡೆಸಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಿ ತಮ್ಮ ಬದುಕಿಗೆ ಒಂದು ಮನ್ನಣೆಯನ್ನು ಪಡೆಯುತ್ತಾರೆಯೋ ಅಂತಹವರು ಸಾವನ್ನಪ್ಪಿದ ನಂತರ ದೇವಲೋಕ/ಸ್ವರ್ಗವನ್ನು ಸೇರಿ ಒಲವು ನಲಿವನ್ನು ಹೊಂದಲು ತಕ್ಕವರಾಗುತ್ತಾರೆ; ಸಲ್ಲದವರು= ಒಳ್ಳೆಯ ನಡೆನುಡಿಗಳಿಂದ ಬಾಳದವರು/ಮಾನವ ಸಮುದಾಯಕ್ಕೆ ಕೇಡನ್ನು ಬಗೆದು ಹಾನಿಯನ್ನು ಉಂಟುಮಾಡಿದವರು; ಸಲ್ಲರು=ಯೋಗ್ಯರಾಗುವುದಿಲ್ಲ/ಇರಲು ತಕ್ಕವರಲ್ಲ; ಕೂಡಲಸಂಗಮದೇವಾ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ;

ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಕೂಡಲಸಂಗಮದೇವಾ= ಈ ಜಗತ್ತಿನಲ್ಲಿ ತಮ್ಮ ಬದುಕನ್ನು ಯಾರು ಒಳ್ಳೆಯ ರೀತಿಯಲ್ಲಿ ನಡೆಸುವುದಿಲ್ಲವೋ ಅಂತಹ ವ್ಯಕ್ತಿಗಳು ದೇವಲೋಕದಲ್ಲಿಯೂ/ಸ್ವರ್ಗದಲ್ಲಿಯೂ ನೆಲಸಲು ಯೋಗ್ಯರಲ್ಲ;

ಈ ಮಾತಿನಲ್ಲಿ ಜನಮನದಲ್ಲಿರುವ ಮರ್ತ್ಯಲೋಕ/ದೇವಲೋಕಗಳ ಕಲ್ಪನೆಯನ್ನು ಅಲ್ಲಗಳೆಯದೆ, ಅದರ ಮೂಲಕವೇ ಮಾನವ ಬದುಕಿನಲ್ಲಿ ಒಳ್ಳೆಯ ನಡೆನುಡಿಯು ಎಲ್ಲಕ್ಕಿಂತ ದೊಡ್ಡದೆಂಬುದನ್ನು ಹೇಳಲಾಗಿದೆ.

ವ್ಯಕ್ತಿಯ ತನ್ನ ಜೀವಮಾನದ ಉದ್ದಕ್ಕೂ ಕೆಟ್ಟ ನಡೆನುಡಿಯುಳ್ಳವನಾಗಿದ್ದರೂ, ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆದು ಸಂಪಾದಿಸಿದ ಹಣದಿಂದ ದೇವರ ಸೇವೆಯನ್ನು ಮಾಡಿದರೆ/ಸಾಯುವ ಕೊನೆಗಳಿಗೆಯಲ್ಲಿ ದೇವರ ಹೆಸರನ್ನು ಉಚ್ಚರಿಸಿದರೆ/ಸಾಯುವಾಗ ಗಂಗಾ ಜಲವನ್ನು ಕುಡಿದರೆ ಮಾಡಿದ ಪಾಪವೆಲ್ಲವೂ ಹೊರಟುಹೋಗಿ, ಪುಣ್ಯವು ದೊರಕಿ ನೇರವಾಗಿ ಸ್ವರ್ಗಕ್ಕೆ ಹೋಗುತ್ತಾನೆ ಎಂಬ ನಂಬಿಕೆಯು ಜನಮನದಲ್ಲಿದೆ.

ಆದರೆ ಇಂತಹ ಯಾವುದೇ ಬಗೆಯ ಆಚರಣೆಗಳಿಂದ ವ್ಯಕ್ತಿಯು ಸ್ವರ್ಗಕ್ಕೆ ಹೋಗಲಾರನು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು. ಏಕೆಂದರೆ ಇಹಲೋಕದಲ್ಲಿ ಒಳ್ಳೆಯ ಬದುಕನ್ನು ನಡೆಸಿದ ವ್ಯಕ್ತಿಗೆ ಮಾತ್ರ ಪರಲೋಕದಲ್ಲಿ ಒಳ್ಳೆಯದು ದೊರೆಯುತ್ತದೆ. ರಾಜಮುದ್ರೆಯಿಲ್ಲದ ನಾಣ್ಯಕ್ಕೆ ಸಮಾಜದಲ್ಲಿ ಬೆಲೆಯಿಲ್ಲದಂತೆ ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿಯ ಬದುಕಿಗೆ ಯಾವ ಲೋಕದಲ್ಲಿಯೂ ಬೆಲೆಯಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ 'ಕರ್ತಾರನ ಕಮ್ಮಟ' ರೂಪಕದ ಮೂಲಕ ಹೇಳಲಾಗಿದೆ.) ❖

141. ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ
ಅವರಾರಾಧನೆ ದಂಡ
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನು ಒಲ್ಲ
ಕೂಡಲಸಂಗಮದೇವ ಭೂಮಿಭಾರಕರ.

ನಿತ್ಯ ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ನಡೆ ನುಡಿಯಿಲ್ಲದ ವ್ಯಕ್ತಿಗಳು ಮಾಡುವ ಪೂಜೆಯನ್ನು ದೇವರು ಒಪ್ಪಿಕೊಳ್ಳುವುದಿಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಒಳ್ಳೆಯ ನಡೆನುಡಿ ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸವು ತನಗೆ ಒಳಿತನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವಂತಿರುವುದು.

(ಸದಾಚಾರ=ಒಳ್ಳೆಯ ನಡತೆ/ಒಳ್ಳೆಯ ವರ್ತನೆ; ಸದ್ಭಕ್ತಿ+ಇಲ್ಲದ+ ಅವರನ್+ ಒಲ್ಲನ್+ಅಯ್ಯಾ; ಸದ್ಭಕ್ತಿ=ದೇವರನ್ನು ಪೂಜಿಸಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ಅವರನ್=ಅವರನ್ನು/ಅಂತಹ ವ್ಯಕ್ತಿಗಳನ್ನು; ಒಲ್=ಒಪ್ಪು/ಮೆಚ್ಚು; ಒಲ್ಲನ್=ಒಪ್ಪುವುದಿಲ್ಲ/ಮೆಚ್ಚುವುದಿಲ್ಲ;

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ=ಕುಟುಂಬದ ನೆಲೆ/ದುಡಿಮೆಯ ನೆಲೆ/ಸಾರ್ವಜನಿಕ ನೆಲೆಗಳಲ್ಲಿ ಸಹಮಾನವರೊಡನೆ ಒಳ್ಳೆಯ ನಡೆನುಡಿಗಳಿಂದ ನಡೆದುಕೊಳ್ಳದ ವ್ಯಕ್ತಿಗಳನ್ನು ದೇವರು ಮೆಚ್ಚುವುದಿಲ್ಲ.

ಏಕೆಂದರೆ ಶಿವಶರಣಶರಣೆಯರ ಪಾಲಿನ ದೇವರು ಕಲ್ಲು/ಮಣ್ಣು/ಲೋಹ/ಮರದಿಂದ ಮಾಡಿದ ವಿಗ್ರಹವಾಗಿರಲಿಲ್ಲ. ವ್ಯಕ್ತಿಯ ಮಯ್ ಮನದಲ್ಲಿ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು ನೀಡುವ ಒಳದನಿಯನ್ನು ದೇವರೆಂದು ಅವರು ತಿಳಿದಿದ್ದರು. ವ್ಯಕ್ತಿಯು ಜೀವನದಲ್ಲಿ ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ಒಳ್ಳೆಯ ನಡೆನುಡಿಗಳಲ್ಲಿ ದೇವರನ್ನು ಕಾಣುತ್ತಿದ್ದರು;

ಅವರ್+ಆರಾಧನೆ; ಅವರ=ಅಂತಹ ವ್ಯಕ್ತಿಗಳ; ಆರಾಧನೆ=ಪೂಜೆ/ಸೇವೆ; ದಂಡ=ಉಪಯೋಗವಿಲ್ಲದುದು/ಪ್ರಯೋಜನವಿಲ್ಲದುದು;

ಅವರಾರಾಧನೆ ದಂಡ=ಒಳ್ಳೆಯ ನಡೆನುಡಿಯಿಲ್ಲದ ವ್ಯಕ್ತಿಗಳು ಮಾಡುವ ದೇವರ ಪೂಜೆಯಿಂದ ಯಾರಿಗೂ ಯಾವೊಂದು ಬಗೆಯ ಪ್ರಯೋಜನವೂ ಇಲ್ಲ

ನಿಚ್ಚ=ಪ್ರತಿದಿನ/ಪ್ರತಿನಿತ್ಯ; ನಿಚ್ಚ ನಿಚ್ಚ=ಸದಾಕಾಲ/ನಿರಂತರವಾಗಿ; ಪ್ರಾಯಶ್ಚಿತ್ತ=ವ್ಯಕ್ತಿಯು ತಾನು ಮಾಡಿದ ತಪ್ಪನ್ನು ತಾನೇ ಅರಿತುಕೊಂಡು, ತನ್ನನ್ನು ತಾನೆ ದಂಡಿಸಿಕೊಂಡು, ಮತ್ತೆ ಅಂತಹ ತಪ್ಪನ್ನು ಮಾಡುವುದಿಲ್ಲವೆಂದು ತೀರ್ಮಾನಿಸುವುದು; ಪ್ರಾಯಶ್ಚಿತ್ತರನು=ತಮ್ಮನ್ನು ತಾವೇ ದಂಡಿಸಿಕೊಳ್ಳುವವರನ್ನು; **ನಿಚ್ಚ ನಿಚ್ಚ ಪ್ರಾಯಶ್ಚಿತ್ತರನು**=ಪದೇ ಪದೇ ಪ್ರಾಯಶ್ಚಿತ್ತ ಮಾಡಿಕೊಳ್ಳುವವರನ್ನು; ಒಲ್ಲ=ನಿರಾಕರಿಸುತ್ತಾನೆ, ಒಪ್ಪಿಕೊಳ್ಳುವುದಿಲ್ಲ;

ಕೂಡಲಸಂಗಮದೇವ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ; ಭೂಮಿ=ಇಳೆ/ಲೋಕ; ಭಾರ=ಹೊರೆ/ತೂಕ/ಹೆಚ್ಚಿನ ತೂಕವುಳ್ಳದ್ದು; ಭಾರಕರು=ಹೊರೆಯಾದವರು;

ಭೂಮಿಭಾರಕ=ಭೂಮಿಗೆ ಭಾರವಾದವನು. ಅಂದರೆ ಲೋಕದಲ್ಲಿ ಬಾಳಲು ಯೋಗ್ಯನಲ್ಲದವನು. ಇದೊಂದು ಬಯ್ಗುಳದ ನುಡಿಗಟ್ಟು. ಬಳಕೆಯಾದ ಸನ್ನಿವೇಶಕ್ಕೆ ತಕ್ಕಂತೆ ಈ ಬಯ್ಗುಳ ಪದ ಹಲವು ತಿರುಳುಗಳನ್ನು ಹೊಂದುತ್ತದೆ.

1) ಏನೊಂದು ಕೆಲಸವನ್ನು ಮಾಡದೆ, ತಾನು ತಿನ್ನುವ ಅನ್ನ/ತೊಡುವ ಬಟ್ಟೆ/ವಾಸಿಸುವ ಮನೆ ಮೊದಲುಗೊಂಡು ಜೀವನಕ್ಕೆ ಅಗತ್ಯವಾದುದೆಲ್ಲಕ್ಕೂ ಇತರರನ್ನು ಅವಲಂಬಿಸಿರುವ ವ್ಯಕ್ತಿ;

2) ಸಹಮಾನವರಿಗೆ ಮತ್ತು ಸಮಾಜಕ್ಕೆ ಯಾವಾಗಲೂ ಕೇಡನ್ನು ಬಗೆಯುತ್ತಿರುವ ವ್ಯಕ್ತಿ.

3) ತನ್ನ ವ್ಯಕ್ತಿತ್ವದ ಬಗ್ಗೆ ಕಿಂಚಿತ್ತು ಎಚ್ಚರವಿಲ್ಲದೆ ಬೇಜವಾಬ್ದಾರಿಯಿಂದ ಬಾಳುತ್ತಿರುವ ವ್ಯಕ್ತಿ.

ನಿಚ್ಚ ನಿಚ್ಚ ಪ್ರಾಯಶ್ಚಿತ್ತರನು ಒಲ್ಲ ಕೂಡಲಸಂಗಮದೇವ ಭೂಮಿಭಾರಕರ= ಮತ್ತೆ ಮತ್ತೆ ಮಾಡಿದ ತಪ್ಪನ್ನೇ ಮಾಡುತ್ತ, ಅದರ ಜತೆಗೆ ಇನ್ನೂ ಹೊಸಬಗೆಯ ತಪ್ಪುಗಳನ್ನು ಮಾಡುತ್ತ, ಪದೇ ಪದೇ ಪಶ್ಚಾತ್ತಾಪಗೊಂಡವನಂತೆ ನಟಿಸುವ ವ್ಯಕ್ತಿಯು ಎಂದಿಗೂ ಒಳ್ಳೆಯವನಾಗಿ ಬಾಳಲಾರ. ಇಂತಹ ಕೆಟ್ಟ ವ್ಯಕ್ತಿಗಳನ್ನು ದೇವರು ಒಪ್ಪುವುದಿಲ್ಲ.

ತಪ್ಪನ್ನು ಮಾಡಿದ ವ್ಯಕ್ತಿಯು ಅದಕ್ಕೆ ದೇಹದಂಡನೆ ಇಲ್ಲವೇ ಇನ್ನಿತರ ಬಗೆಯ ಆಚರಣೆಗಳಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದರಿಂದ ಮಾಡಿದ ತಪ್ಪು ನಿವಾರಣೆಯಾಗುವುದಿಲ್ಲ. ಜೀವನದಲ್ಲಿ ಒಂದಲ್ಲ ಒಂದು ಬಗೆಯ ತಪ್ಪನ್ನು

ಮಾಡದ ವ್ಯಕ್ತಿಯೇ ಇಲ್ಲ. ಆದ್ದರಿಂದ ತಪ್ಪನ್ನು ಮಾಡಿದ ವ್ಯಕ್ತಿಯು ತನ್ನ ದೇಹ ದಂಡನೆಗೆ ಬದಲಾಗಿ ಮತ್ತೆ ಅಂತಹ ತಪ್ಪನ್ನು ಮಾಡದಿರುವ ತೀರ್ಮಾನವನ್ನು ಕಯ್ಗೊಂಡು, ತನ್ನ ನಡೆನುಡಿಗಳ ಬಗ್ಗೆ ಎಚ್ಚರವನ್ನು ಹೊಂದಿ, ಮತ್ತೊಮ್ಮೆ ಯಾವುದೇ ಬಗೆಯ ತಪ್ಪುಗಳು ತನ್ನಿಂದ ಆಗದಂತೆ ಒಳ್ಳೆಯ ನಡೆನುಡಿಗಳಿಂದ ಬಾಳುವ ರೀತಿಯು ನಿಜವಾದ ಪ್ರಾಯಶ್ಚಿತ್ತವಾಗುತ್ತದೆ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.)

❖

142. ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯಾ ಕೂಡಲಸಂಗಮದೇವಾ.

ಅಪಾರವಾದ ಆಸ್ತಿಪಾಸ್ತಿ/ಹಣಕಾಸು/ಒಡವೆ ವಸ್ತುಗಳಿಗೆ ಒಡೆಯರಾಗಿ ಸಿರಿವಂತಿಕೆಯಿಂದ ಮೆರೆಯುತ್ತಿದ್ದ ವ್ಯಕ್ತಿಗಳ ಅಹಂಕಾರದ ವರ್ತನೆಯು ಯಾವಾಗ ಅಡಗುತ್ತದೆ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಹಾವು=ಉರಗ/ಸರ್ಪ; ತಿನ್=ಕಚ್ಚು/ಕಡಿ; ತಿಂದವರ=ಕಚ್ಚಿದವರನ್ನು; ಹಾವು ತಿಂದವರ=ಹಾವು ಕಚ್ಚಿದವರನ್ನು; ನುಡಿ=ಮಾತು/ಸೊಲ್ಲು; ನುಡಿಸು= ಮಾತನಾಡಿಸು; ಬಹುದು=ಆಗುವುದು;

ಹಾವು ತಿಂದವರ ನುಡಿಸಬಹುದು=ಹಾವು ಕಚ್ಚಿ, ಮಯ್ಯೆಲ್ಲೆಲ್ಲಾ ನಂಜು ಹರಡುತ್ತ, ಸಾವು ಬದುಕಿನ ನಡುವೆ ಸಿಲುಕಿ ಕಂಗಾಲಾಗಿರುವ ವ್ಯಕ್ತಿಯನ್ನು ಮಾತನಾಡಿಸಿದರೆ, ಅಂತಹ ಸಂಕಟದ ಸಮಯದಲ್ಲಿಯೂ ಅವನು ನಮ್ಮೊಡನೆ ಒಂದೆರಡು ಮಾತನಾಡುತ್ತಾನೆ;

ಗರ=ದೆವ್ವ/ಪಿಶಾಚಿ/ಆಯುಸ್ಸು ಪೂರ್ತಿಯಾಗದೆ ಹರೆಯ ಇಲ್ಲವೇ ನಡುವಯಸ್ಸಿನಲ್ಲಿ ಅವಗಡದಿಂದಾಗಿ ಸತ್ತವರ ಜೀವವು ದೆವ್ವವಾಗಿ ಅಲೆಯುತ್ತಿರುತ್ತದೆ. ಬದುಕಿರುವ ವ್ಯಕ್ತಿಗಳ ಮಯ್ ಮನವನ್ನು ದೆವ್ವವು ಹೊಕ್ಕು, ತಾನು ಜೀವಂತ ವ್ಯಕ್ತಿಯಾಗಿದ್ದಾಗ ಆಸೆಪಟ್ಟಿದ್ದೆಲ್ಲವನ್ನೂ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತದೆಯೆಂಬ ನಂಬಿಕೆಯು ಜನಮನದಲ್ಲಿ ನೆಲೆಸಿದೆ. ಈ ರೀತಿಯಾದಾಗ ಅವನಿಗೆ/ಅವಳಿಗೆ ಗರ ಮೆಟ್ಕೊಂಡಿದೆ/ದೆವ್ವ ಹಿಡ್ಕೊಂಡಿದೆ ಎಂದು ಜನರು ಮಾತನಾಡಿಕೊಂಡು, ವ್ಯಕ್ತಿಗೆ ಹಿಡಿದಿರುವ ದೆವ್ವವನ್ನು ಮಾಟಕೂಟಗಳ ಆಚರಣೆಯಿಂದ ಓಡಿಸಲು ಪ್ರಯತ್ನಿಸುತ್ತಾರೆ. ಆದರೆ ಆರೋಗ್ಯ ವಿಜ್ಞಾನದ ನೆಲೆಯಿಂದ ನೋಡಿದಾಗ ವ್ಯಕ್ತಿಯು ನಾನಾ ಕಾರಣಗಳಿಂದಾಗಿ ಮಾನಸಿಕ ರೋಗಿಯಾಗಿ ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗದೆ ಪರಿತಪಿಸುತ್ತಿರುವುದನ್ನು 'ದೆವ್ವ ಮೆಟ್ಟುಕೊಂಡಿದೆ' ಎಂದು ಜನರು ತಪ್ಪಾಗಿ ತಿಳಿದಿರುವುದು ಕಂಡುಬಂದಿದೆ;

ಹೊಡಿ=ಮಯ್ ಮೇಲೆ ಬರುವುದು/ಮೆಟ್ಟಿಕೊಳ್ಳುವುದು; ಗರ ಹೊಡೆದವರ=ದೆವ್ವ ಮೆಟ್ಟಿಕೊಂಡವರನ್ನು/ಪಿಶಾಚಿ ಹಿಡಿದುಕೊಂಡವರನ್ನು;

ಗರ ಹೊಡೆದವರ ನುಡಿಸಬಹುದು=ತನ್ನ ಮಯ್ ಮನದ ಮೇಲಣ ಹತೋಟಿಯನ್ನು ಕಳೆದುಕೊಂಡು, ತನ್ನ ಸುತ್ತಲೂ ಏನು ನಡೆಯುತ್ತಿದೆ ಎಂಬ ಅರಿವು ಮತ್ತು ಎಚ್ಚರವಿಲ್ಲದೆ ಬಾಯಿಗೆ ಬಂದಂತೆ ಅರಚಾಡುತ್ತಿರುವ/ಎದ್ದು ಬಿದ್ದು ಒದ್ದಾಡುತ್ತಿರುವ ದೆವ್ವ ಹಿಡಿದ ವ್ಯಕ್ತಿಯನ್ನು ಮಾತನಾಡಿಸಿದರೆ, ತಾನು ಯಾರೆಂಬುದನ್ನೇ ಮರೆತಿರುವ ಆ ವ್ಯಕ್ತಿಯು ಕೂಡ ನಮ್ಮೊಡನೆ ಒಂದೆರಡು ನುಡಿಗಳನ್ನಾಡುತ್ತಾನೆ;

ಸಿರಿ=ಸಂಪತ್ತು/ಹಣಕಾಸು/ಒಡವೆ ವಸ್ತು/ಆಸ್ತಿಪಾಸ್ತಿ; ಸಿರಿಗರ=ಸಿರಿ ಎಂಬ ದೆವ್ವ/ಪಿಶಾಚಿ; ನುಡಿಸಲು=ಮಾತನಾಡಿಸಲು; ಬಾರದು=ಆಗುವುದಿಲ್ಲ; ನೋಡು+ಅಯ್ಯಾ; ನೋಡು=ಗಮನಿಸು/ವಿಚಾರಮಾಡು/ತಿಳಿ/ಅರಿ;

ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ=ಸಿರಿಯೆಂಬ ದೆವ್ವ ಮೆಟ್ಟಿಕೊಂಡವರನ್ನು/ಸಿರಿ ಬಂದು ಓಲಾಡುವವರನ್ನು ಮಾತನಾಡಿಸಲು ಆಗುವುದಿಲ್ಲ. ಸಿರಿವಂತರಾಗಿ ಬಾಳುತ್ತಿರುವ ವ್ಯಕ್ತಿಗಳಲ್ಲಿ ಬಹುತೇಕ ಮಂದಿ ಅಹಂಕಾರದ ನಡೆನುಡಿಗಳಿಂದ ಕೂಡಿರುವ ವಾಸ್ತವ ಸಂಗತಿಯು ಸಮಾಜದ ಎಲ್ಲೆಡೆಯಲ್ಲಿಯೂ ಕಂಡುಬರುತ್ತದೆ.

'ಸಿರಿಗರ' ಎಂಬ ಈ ನುಡಿಗಟ್ಟು ಒಂದು ರೂಪಕವಾಗಿ ಬಳಕೆಯಾಗಿದೆ. ಸಿರಿಯೆಂಬುದೇ ಒಂದು ಗರವಾಗಿದೆ/ದೆವ್ವವಾಗಿದೆ. ಅಂದರೆ ಸಿರಿವಂತಿಕೆಯನ್ನು ಹೊಂದಿರುವ ವ್ಯಕ್ತಿಯು ನಾನೇ ಎಲ್ಲರಿಗಿಂತ ದೊಡ್ಡವನು... ನನ್ನ ಬಳಿ ಇರುವ ಸಂಪತ್ತಿನಿಂದ ಏನನ್ನು ಬೇಕಾದರೂ ಮಾಡಬಲ್ಲೆನು... ಹಣದ ಮುಂದೆ ಬೇರೆಯದೆಲ್ಲವೂ ಸೊನ್ನೆ... ಯಾವುದೇ ವಸ್ತುವನ್ನು ಇಲ್ಲವೇ ಯಾವ ವ್ಯಕ್ತಿಯನ್ನು ಬೇಕಾದರೂ ಕೊಂಡುಕೊಳ್ಳಬಲ್ಲೆನು ಎಂಬ ಒಳಮಿಡಿತಗಳಿಂದ ಕೂಡಿ ಸೊಕ್ಕಿನಿಂದ ಎಲ್ಲರನ್ನೂ ಕಡೆಗಣಿಸಿ, ಮನಬಂದಂತೆ ಮಾತನಾಡುತ್ತಾನೆ ಮತ್ತು ನಡೆದುಕೊಳ್ಳುತ್ತಾನೆ. ಸಿರಿವಂತಿಕೆಯಿಂದ ಮೆರೆಯುತ್ತಿರುವ ವ್ಯಕ್ತಿಯು ದೆವ್ವ ಮೆಟ್ಟಿಕೊಂಡವನು ಹೇಗೆ ತನ್ನ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗದೆ ವರ್ತಿಸುತ್ತಾನೆಯೋ ಅಂತೆಯೇ ಸಿರಿಗರ ಹೊಡೆದ ವ್ಯಕ್ತಿಯು ಯಾರ ಅಂಕೆಶಂಕೆಯಿಲ್ಲದೆ/ಯಾರನ್ನು ಲೆಕ್ಕಿಸದೆ ಮನ ಬಂದಂತೆ ವರ್ತಿಸುತ್ತಾನೆ. ಇಂತಹ ವ್ಯಕ್ತಿಯ ಜತೆ ಮಾತನಾಡಲು ಆಗುವುದಿಲ್ಲ;

ಬಡತನ+ಎಂಬ; ಬಡತನ=ಉಣಲಿಲ್ಲದೆ, ಉಡಲಿಲ್ಲದೆ, ವಾಸಿಸಲು ನೆಲೆಯಿಲ್ಲದೆ ವ್ಯಕ್ತಿಯು ಹಸಿವು ಮತ್ತು ಅಪಮಾನದ ಸಂಕಟದಿಂದ ಇರುವುದು; ಎಂಬ=ಎನ್ನುವ; ಮಂತ್ರ=ದೇವರು ಇಲ್ಲವೇ ಅಗೋಚರ ಶಕ್ತಿಯ ಸ್ವರೂಪ,ಗುಣ ಮತ್ತು ಮಹಿಮೆಯನ್ನು ಕೊಂಡಾಡುವ ನುಡಿಗಳು; ಮಂತ್ರವಾದಿ=ಮಂತ್ರಗಳನ್ನು ಉಚ್ಚರಿಸುತ್ತ, ಕೆಲವು ಬಗೆಯ ಆಚರಣೆಗಳ ಮೂಲಕ ವ್ಯಕ್ತಿಗೆ ಹಿಡಿದಿರುವ ದೆವ್ವವನ್ನು ಓಡಿಸುವವನು/ಮಂತ್ರ ತಂತ್ರ, ಮಾಟಕೂಟಗಳ ಮೂಲಕ ಇರುವುದನ್ನು ಇಲ್ಲವಾಗಿಸುವ, ಇಲ್ಲದ್ದನ್ನು ಕಣ್ಣೆದುರಿಗೆ ಬರುವಂತೆ ಮಾಡುವ ಕಸುವುಳ್ಳವನು ಮಂತ್ರವಾದಿ ಎಂಬ ನಂಬಿಕೆಯು ಜನಮನದಲ್ಲಿದೆ.

ಆದರೆ ವಾಸ್ತವದಲ್ಲಿ ಮಂತ್ರವಾದಿಯು ಇಂದ್ರಜಾಲ/ಕಣ್ಕಟ್ಟಿನ ವಿದ್ಯೆಯ ಮೂಲಕ ಈ ರೀತಿ ನೋಡುವವರು ನಂಬುವ ರೀತಿಯಲ್ಲಿ ಕ್ರಿಯೆಗಳನ್ನು ಮಾಡುವ ಕಯ್ ಚಳಕವನ್ನು ಹೊಂದಿರುತ್ತಾನೆ; ಹೊಗು=ಒಳಸೇರು; ಹೊಗಲು= ಬಂದು ಸೇರಿಕೊಂಡಾಗ/ಮೇಲೆ ಬಿದ್ದಾಗ; ಒಡನೆ=ಮರು ಗಳಿಗೆಯಲ್ಲಿ/ಕೂಡಲೆ; ನುಡಿವರ್+ಅಯ್ಯಾ; ನುಡಿವರ್=ಮಾತನಾಡುತ್ತಾರೆ;

ಬಡತನವೆಂಬ ಮಂತ್ರವಾದಿ ಹೊಗಲು=ಈ ಪದಕಂತೆಯು ಒಂದು ರೂಪಕವಾಗಿ ಬಳಕೆಯಾಗಿದೆ. ಸಿರಿವಂತಿಕೆಯಿಂದ ಮಯ್ ಮರೆತು ಮೆರೆಯುತ್ತಿದ್ದ ವ್ಯಕ್ತಿಯ ಜೀವನದಲ್ಲಿ ಕೆಲವೊಮ್ಮೆ ನಡೆದ ಪ್ರಸಂಗಗಳಿಂದಾಗಿ ಅವನ ಸಂಪತ್ತೆಲ್ಲವೂ ಕಯ್ ಬಿಟ್ಟುಹೋಗಿ, ಇದ್ದುದೆಲ್ಲವನ್ನೂ ಕಳೆದುಕೊಂಡು ಕಡುಬಡತನದ ನೆಲೆಗೆ ಬರುತ್ತಾನೆ; ಕೂಡಲಸಂಗಮದೇವಾ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ;

ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರಯ್ಯಾ ಕೂಡಲ ಸಂಗಮದೇವಾ=ಸಿರಿವಂತಿಕೆಯಿದ್ದಾಗ ಇತರರನ್ನು ಒಲವು ನಲಿವುಗಳಿಂದ ಕಂಡು ಮಾತನಾಡಿಸದೇ ಇದ್ದ ವ್ಯಕ್ತಿಯು ಬಡತನಕ್ಕೆ ಸಿಲುಕಿದಾಗ, ಅವನಲ್ಲಿದ್ದ ಅಹಂಕಾರದ ವರ್ತನೆಗಳೆಲ್ಲವೂ ಇಲ್ಲವಾಗಿ, ಇತರರೊಡನೆ ಸಹಜವಾಗಿ ಮತ್ತು ಸರಳವಾಗಿ ನಡೆದುಕೊಳ್ಳತೊಡಗುತ್ತಾನೆ ಎಂಬ ಸಾಮಾಜಿಕ ವಾಸ್ತವವನ್ನು ವಚನಕಾರನು ಗುರುತಿಸಿದ್ದಾನೆ.)

❖

143. ಹಾವಾಡಿಗನು ಮೂಕೊರತಿಯು ತನ್ನ ಕೈಯಲ್ಲಿ ಹಾವು
ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ
ತನ್ನ ಸತಿ ಮೂಕೊರತಿ ತನ್ನ ಕೈಯಲ್ಲಿ ಹಾವು ತಾನು ಮೂಕೊರೆಯ
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ.

ಈ ವಚನವನ್ನು ಎರಡು ನೆಲೆಗಳಲ್ಲಿ ವಿವರಿಸಿಕೊಳ್ಳಬಹುದು.

1) ತನ್ನಲ್ಲಿರುವ ಅರೆಕೊರೆಗಳನ್ನು ತಾನು ಅರಿತುಕೊಳ್ಳದೆ, ಇತರರ ಅರೆಕೊರೆಗಳನ್ನು ಎತ್ತಿ ಆಡುವ ವ್ಯಕ್ತಿಯ ಇಬ್ಬಂದಿತನವನ್ನು ಈ ವಚನದಲ್ಲಿ ಹೇಳಲಾಗಿದೆ.

'ಇಬ್ಬಂದಿತನ' ಎಂದರೆ ತನಗೆ ಒಂದು ನೀತಿ... ಬೇರೆಯವರಿಗೆ ಮತ್ತೊಂದು ನೀತಿ ಎಂಬ ನಿಲುವನ್ನು ಹೊಂದಿರುವುದು.

2) ತಲೆತಲಾಂತರಗಳಿಂದಲೂ ಜನಮನದಲ್ಲಿರುವ ನಂಬಿಕೆಗೆ ತಕ್ಕಂತೆ ನಡೆದುಕೊಳ್ಳುತ್ತಿರುವ ವ್ಯಕ್ತಿಯ ತಿಳಿಗೇಡಿತನದ ವರ್ತನೆಗಳನ್ನು ಈ ವಚನದಲ್ಲಿ ಹೇಳಲಾಗಿದೆ.

(ಹಾವು+ಆಡಿಗ; ಹಾವು=ಉರಗ/ಸರ್ಪ; ಆಡಿಗ=ಆಡಿಸುವವನು; ಹಾವಾಡಿಗ=ಜನಗಳ ಮುಂದೆ ಹಾವು ಆಡಿಸುವುದನ್ನು ಒಂದು ಕಸುಬನ್ನಾಗಿ ಮಾಡಿಕೊಂಡಿರುವವನು; ಮೂಗು+ಕೊರತಿ; ಮೂಗು=ಉಸಿರಾಡಲು ಮತ್ತು ವಾಸನೆಯನ್ನು ಗ್ರಹಿಸುವ ಒಂದು ಅಂಗ; ಕೊರೆ=ಅಯ್ಬು/ಕುಂದು; ಕೊರತಿ= ಅಯ್ಬುಳ್ಳವಳು/ಕುಂದುಳ್ಳವಳು; ಮೂಕೊರತಿ=ಮೂಗಿನ ಆಕಾರ ಸರಿಯಿಲ್ಲದಿರುವ ಹೆಂಗಸು/ಅಪ್ಪಚ್ಚಿಯಾದಂತಿರುವ ಮೂಗಿನವಳು; ತನ್ನ=ಹಾವಾಡಿಗನ; ಮಗ=ಪುತ್ರ/ತನುಜ;

ಮದುವೆ=ವಿವಾಹ/ಲಗ್ನ; ಶಕುನ=ಯಾವುದೇ ಒಂದು ಕೆಲಸವು ಆಗುತ್ತದೆ/ ಆಗುವುದಿಲ್ಲ ಎಂಬ ಸೂಚನೆಯನ್ನು ನೀಡುವುದು. ವ್ಯಕ್ತಿಯು ಒಂದು ಕೆಲಸಕ್ಕೆ ಹೊರಟಾಗ ಅವನ ಎದುರಿನಲ್ಲಿ ಕೆಲವು ಬಗೆಯ ವಸ್ತು/ಜೀವಿ/ವ್ಯಕ್ತಿಗಳು ಕಾಣಿಸಿಕೊಂಡರೆ, ತಾನು ಹೋಗುತ್ತಿರುವ ಕೆಲಸ ಚೆನ್ನಾಗಿ ನೆರವೇರುತ್ತದೆ ಇಲ್ಲವೇ ನೆರವೇರುವುದಿಲ್ಲ ಎಂಬ ನಂಬಿಕೆಯು ತಲೆತಲಾಂತರಗಳಿಂದಲೂ ಜನಮನದಲ್ಲಿದೆ. ಇಂತಹ ನಂಬಿಕೆಗೆ ಒಳಗಾದ ವ್ಯಕ್ತಿಗಳು ಕೆಟ್ಟದ್ದೆಂದು ನಂಬಿರುವ ಶಕುನ

ಕಂಡುಬಂದರೆ ತಾವು ಕಯ್ಗೊಂಡಿರುವ ಕೆಲಸವನ್ನು ಅಂದಿನ ಮಟ್ಟಿಗೆ ಕಯ್ ಬಿಟ್ಟು, ಕೆಲಸವನ್ನು ಮತ್ತೊಂದು ದಿನಕ್ಕೆ ಮುಂದೂಡುತ್ತಾರೆ. ಕೆಲವರು ಆ ಕೆಲಸವನ್ನು ಮತ್ತೆ ಮಾಡಲು ಹೋಗುವುದಿಲ್ಲ. ಇದು ಕೇವಲ ಜನಮನದ ನಂಬಿಕೆಯೇ ಹೊರತು, ವಾಸ್ತವದ ಸಂಗತಿಯಲ್ಲ; ನೋಡ ಹೋಹಾಗ= ನೋಡಲು ಹೋಗುವಾಗ;

ಮಗನ ಮದುವೆಗೆ ಶಕುನವ ನೋಡ ಹೋಹಾಗ=ಮಗನ ಮದುವೆಯನ್ನು ಮಾಡಲು ಒಳ್ಳೆಯ ಕಾಲ ಮತ್ತು ದಿನವನ್ನು ಗೊತ್ತುಪಡಿಸಲೆಂದು ಪಂಚಾಂಗವನ್ನು ನೋಡಿ ಹೇಳುವ ಪುರೋಹಿತರ ಬಳಿಗೆ ಹೋಗುತ್ತಿದ್ದಾಗ;

ಇದರಲಿ+ಒಬ್ಬ; ಇದಿರ್=ಎದುರಾಗಿ/ಮುಂದುಗಡೆ; ಇದಿರಲಿ=ಎದುರಿನಲ್ಲಿ/ ಮುಂದುಗಡೆಯಲ್ಲಿ; ಕಂಡು=ನೋಡಿ/ಗಮನಿಸಿ; ಹೊಲ್+ಎಂಬ; ಹೊಲ್=ಕೆಟ್ಟದ್ದು/ಒಳ್ಳೆಯದಲ್ಲದ್ದು; ಎಂಬ=ಎನ್ನುವ/ಎಂದು ಹೇಳುವ;

ಶಕುನ ಹೊಲ್ಲೆಂಬ=ಕೆಟ್ಟ ಶಕುನ/ಅಪಶಕುನವಾಯಿತು ಎಂದು ಹೇಳುವ;

ಚದುರ=ತಿಳುವಳಿಕೆಯುಳ್ಳವನು/ಜಾಣ; ನೋಡು=ಕಾಣು/ಗಮನಿಸು; ನೋಡಾ=ನೋಡುವಂತಹವನಾಗು;

ಶಕುನ ಹೊಲ್ಲೆಂಬ ಚದುರನ ನೋಡಾ=ಕೆಟ್ಟ ಶಕುನವಾಯಿತೆಂದು ಹೇಳುತ್ತಿರುವ ಚದುರನನ್ನು ನೋಡು. ಈ ಸನ್ನಿವೇಶದಲ್ಲಿ 'ಚದುರ' ಎಂಬ ಪದವು 'ತಿಳಿಗೇಡಿ/ಅರಿವಿಲ್ಲದವನು' ಎಂಬ ತಿರುಳಿನಲ್ಲಿ ಬಳಕೆಯಾಗಿದೆ.

ಏಕೆಂದರೆ ಯಾವುದೇ ಒಂದು ವಸ್ತು/ಜೀವಿ/ವ್ಯಕ್ತಿಯು ಎದುರಾಗಿ ಬರುವುದಕ್ಕೂ ಮುಂದೆ ನಡೆಯಲಿರುವ ಕೆಲಸಕ್ಕೂ ಯಾವುದೇ ಬಗೆಯ ನಂಟು ಇರುವುದಿಲ್ಲ. ಕಾರ್ಯಕಾರಣಗಳ ನಂಟನ್ನು ಅರಿಯದೆ, ಹಿಂದಿನಿಂದಲೂ ಕೇಳಿಕೊಂಡು ಬಂದಿರುವ ಮಾತುಗಳಲ್ಲಿರುವ ಸರಿ/ತಪ್ಪನ್ನು ಇಲ್ಲವೇ ನಿಜ/ ಸುಳ್ಳನ್ನು ಒರೆಹಚ್ಚಿ ನೋಡದೆ ಇರುವುದರಿಂದ ಜನರು ಈ ರೀತಿ ತಿಳಿಗೇಡಿತನದಿಂದ ನಡೆದುಕೊಳ್ಳುತ್ತಿದ್ದಾರೆ.

ಈ ಪ್ರಸಂಗದಲ್ಲಿ ಎದುರಿಗೆ ಬಂದ ಹಾವಾಡಿಗ ಮತ್ತು ಮೂಕೊರತಿಯನ್ನು ಅಪಶಕುನದ ಸಂಕೇತಗಳೆಂದು ನಂಬಲಾಗಿದೆ. ಹಾವಾಡಿಗನು ಹಾವನ್ನಾಡಿಸುವ ಕಸುಬಿನ ಮೂಲಕ ತನ್ನ ಜೀವನವನ್ನು ರೂಪಿಸಿಕೊಂಡಿರುವ ವ್ಯಕ್ತಿ. ಆತನ ಕಯ್ಯಲ್ಲಿರುವ ಹಾವನ್ನು ನಾಗದೇವತೆಯೆಂದು ಜನಸಮುದಾಯವು

ಪೂಜಿಸುತ್ತದೆ. ಮೂಕೊರತಿಯ ಮೂಗಿನ ಆಕಾರವು ಆಕೆಯ ಹುಟ್ಟಿನಿಂದಲೇ ಬಂದಿರಬಹುದು ಇಲ್ಲವೇ ಆಕೆಯ ಜೀವನದಲ್ಲಿ ನಡೆದ ಅವಗಡದಿಂದ ಮೂಗಿಗೆ ದೊಡ್ಡ ಪೆಟ್ಟು ಬಿದ್ದು ಅಪ್ಪಚ್ಚಿಯಾಗಿರಬಹುದು.

ವಾಸ್ತವದ ಸಂಗತಿಗಳು ಹೀಗಿರುವಾಗ, ಹಾವಾಡಿಗ ಮತ್ತು ಮೂಕೊರತಿಯನ್ನು ಅಪಶಕುನವೆಂದು ಜನಸಮುದಾಯವು ನಂಬಿರುವುದಕ್ಕೆ ಕಾರಣವನ್ನು ತಿಳಿಯಬೇಕಾದರೆ ನಮ್ಮ ಸಮಾಜದ ರಚನೆಯನ್ನು ನೋಡಬೇಕಾಗುತ್ತದೆ. ನಮ್ಮ ಸಮಾಜವು ಮೇಲು/ಕೀಳಿನ ಮೆಟ್ಟಿಲುಗಳಿಂದ ಕೂಡಿರುವ ಜಾತಿ ತಾರತಮ್ಯದಿಂದ ಕೂಡಿದೆ. ಈ ಜಾತಿ ತಾರತಮ್ಯವು ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿಯೂ " ನಾನು ಇನ್ನೊಬ್ಬನಿಗಿಂತ ಮೇಲು ಎಂಬ ಇಲ್ಲವೇ ಕೀಳು" ಎಂಬ ಮೇಲರಿಮೆ/ ಕೀಳರಿಮೆಯ ಒಳಮಿಡಿತವನ್ನು ಯಾವಾಗಲೂ ಮೂಡಿಸುತ್ತಿರುತ್ತದೆ. ಇದೇ ರೀತಿಯಲ್ಲಿ ಕಸುಬುಗಳಲ್ಲಿಯೂ ಕೆಲವನ್ನು ಒಳ್ಳೆಯದು/ಉತ್ತಮವೆಂದು, ಮತ್ತೆ ಕೆಲವನ್ನು ಕೆಟ್ಟದ್ದು/ಹೊಲಸು ಎಂಬ ನಿಲುವನ್ನು ಹೊಂದಲಾಗಿದೆ. ಜನಸಮುದಾಯವು ಹಾವಾಡಿಗನ ಜಾತಿಯನ್ನು ಮತ್ತು ಕಸುಬನ್ನು ಕೀಳು ಎಂದು ಪರಿಗಣಿಸಿರುವುದರಿಂದ ಅವನು ಅಪಶಕುನದ ಸಂಕೇತವಾಗಿದ್ದಾನೆ.

ವ್ಯಕ್ತಿಯ ದೇಹದ ಆಕಾರದಲ್ಲಿ ಕಂಡುಬರುವ ಅರೆಕೊರೆಗಳಿಗೆ ಹಿಂದಿನ ಜನ್ಮದ ಪಾಪಪುಣ್ಯಗಳು ಕಾರಣವೆಂಬ ನಂಬಿಕೆಯು ಜನಮನದಲ್ಲಿದೆ. ಆದ್ದರಿಂದ ಮೂಕೊರತಿಯು ಅಪಶಕುನದ ಸಂಕೇತವಾಗಿದ್ದಾಳೆ. ಸಮಾಜದಲ್ಲಿನ ಈ ಬಗೆಯ ನಂಬಿಕೆಗಳ ನೆಲೆಯಲ್ಲಿ ಬೆಳೆದುಬಂದಿರುವ ಹಾವಾಡಿಗನ ವರ್ತನೆಯು ತನ್ನ ಬಗ್ಗೆ ತಾನು ಹೊಂದಿರುವ ಕೀಳರಿಮೆ ಮಾತ್ರವಲ್ಲದೆ, ತಿಳಿಗೇಡಿತನದಿಂದ ಕೂಡಿದೆ. ಜಾತಿಯ ಮೇಲು/ಕೀಳು, ಪುನರ್ ಜನ್ಮ ಮತ್ತು ಕರ್ಮಸಿದ್ಧಾಂತಗಳು ಜನಮನದಲ್ಲಿ ಇಂತಹ ನೂರಾರು ಬಗೆಯ ಕೀಳರಿಮೆಯನ್ನು ನೆಲೆಗೊಳಿಸಿರುವುದನ್ನು ಈ ಬಗೆಯ ಪ್ರಸಂಗದಲ್ಲಿ ಕಾಣಬಹುದು;

ಸತಿ=ಹೆಂಡತಿ; **ತನ್ನ ಸತಿ ಮೂಕೊರತಿ**=ತನ್ನ ಹೆಂಡತಿಯೂ ಮೂಕೊರೆಯಳಾಗಿದ್ದಾಳೆ; **ತಾನು ಮೂಕೊರೆಯ**=ತಾನು ಕೂಡ ಅಯ್ಯಾಗಿರುವ ಮೂಗುಳ್ಳವನು; ಭಿನ್ನ+ಅನ್+ಅರಿಯದೆ; ತನ್ನ=ಹಾವಾಡಿಗನಾದ ಮತ್ತು ಮೂಕೊರೆಯನಾದ ವ್ಯಕ್ತಿ; ಭಿನ್ನ=ಕುಂದು/ಲೋಪ; ಅನ್=ಅನ್ನು; ಅರಿ=ತಿಳಿ; ಅರಿಯದೆ=ತಿಳಿಯದೆ/ಗಮನಿಸಿದೆ;

ತನ್ನ ಭಿನ್ನವನರಿಯದೆ=ತನ್ನಲ್ಲಿರುವ ಕುಂದುಕೊರತೆಗಳನ್ನು ಗಮನಿಸದೆ/ ಅನ್ಯರನ್+ಎಂಬ; ಅನ್ಯ=ಬೇರೆಯ/ಮತ್ತೊಬ್ಬ; ಅನ್ಯರನ್=ಇತರರನ್ನು/ ಬೇರೆಯವರನ್ನು; ಕುನ್ನಿ+ಅನ್+ಏನ್+ಎಂಬೆ; ಕುನ್ನಿ=ನಾಯಿ/ನಾಯಿ ಮರಿ. ಕುನ್ನಿ ಎಂಬ ಪದ ಒಂದು ಬಯ್ಗುಳವಾಗಿ ಬಳಕೆಯಾಗಿದೆ. ಇತರ ವ್ಯಕ್ತಿಯ ನಡೆನುಡಿಯಲ್ಲಿನ ಕೆಟ್ಟದ್ದನ್ನು ನಿಂದಿಸುವಾಗ, ಆತನನ್ನು ನಾಯಿಗೆ ಹೋಲಿಸಿ ಬಯ್ಯುತ್ತಾರೆ;

ಅನ್ಯರನೆಂಬ ಕುನ್ನಿಯನ್=ಇತರರನ್ನು ಕೀಳಾಗಿ ಕಾಣುವ ನೀಚವ್ಯಕ್ತಿಯನ್ನು/ ಇತರರಲ್ಲಿರುವ ಅರೆಕೊರೆಗಳನ್ನು ಎತ್ತಿ ನಿಂದಿಸುವ ಕೆಟ್ಟವ್ಯಕ್ತಿಯನ್ನು;

ಏನ್=ಯಾವ ರೀತಿಯಲ್ಲಿ; ಎಂಬೆ=ಹೇಳುವೆ; ಏನೆಂಬೆ=ಏನೆಂದು ತಾನೆ ಹೇಳಲಿ/ಇಂತಹ ತಿಳಿಗೇಡಿತನದ ವರ್ತನೆಯನ್ನು ಹೇಳಲು ಪದಗಳೇ ಇಲ್ಲ; ಕೂಡಲಸಂಗಮದೇವಾ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ.

ತನ್ನ ಭಿನ್ನವನರಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲ ಸಂಗಮದೇವಾ=ಹಾವಾಡಿಗನು ತನ್ನಂತೆ ಮತ್ತು ತನ್ನ ಹೆಂಡತಿಯಂತೆಯೇ ಇರುವ ಮತ್ತೊಂದು ಜೋಡಿಯನ್ನು ಕಂಡು ಅಪಶಕುನವಾಯಿತೆಂಬ ಆತಂಕಕ್ಕೆ ಒಳಪಟ್ಟಿದ್ದಾನೆ. ಇದು ಆತನ ತಿಳಿಗೇಡಿತನವನ್ನು ಸೂಚಿಸುವುದು ಮಾತ್ರವಲ್ಲ, ಒಂದು ಸಮಾಜದ ನಡಾವಳಿಯು ಇಲ್ಲವೇ ಜನಸಮುದಾಯದ ನಂಬಿಕೆಯು ಹೇಗೆ ಕೋಟಿಗಟ್ಟಲೆ ಜನಮನದಲ್ಲಿ ಕೀಳರಿಮೆಯನ್ನು ನಾಟುವಂತೆ ಮಾಡಿ, ವ್ಯಕ್ತಿಗಳ ಬದುಕನ್ನು ಹಲವಾರು ಬಗೆಯ ಯಾತನೆಗೆ ಗುರಿಮಾಡುತ್ತವೆ ಎಂಬುದನ್ನು ತಿಳಿಸುತ್ತದೆ. ಈ ಪ್ರಸಂಗದಲ್ಲಿ ಹಾವಾಡಿಗನ ನಂಬಿಕೆಯಿಂದಾಗಿ ನಡೆಯಬೇಕಾಗಿದ್ದ ಮಗನ ಮದುವೆಯ ಮುರಿದುಬಿದ್ದಿತು.

ಶಿವಶರಣ ಶರಣೆಯರು ಎಲ್ಲಾ ಬಗೆಯ ಶಕುನಗಳನ್ನು ತಿರಸ್ಕರಿಸಿದ್ದರು ಮತ್ತು ಜೀವನದ ಆಗುಹೋಗುಗಳಿಗೆ/ಒಳಿತು ಕೆಡುಕುಗಳಿಗೆ ವ್ಯಕ್ತಿಗಳ ನಡೆನುಡಿಗಳೇ ಕಾರಣ ಎಂಬ ನಿಲುವನ್ನು ಹೊಂದಿದ್ದರು ಎಂಬುದನ್ನು ಈ ವಚನದ ತಿಳಿಸುತ್ತದೆ.)

❖

144. ಹೊರಗೆ ಹೂಸಿ ಏವೆನಯ್ಯಾ ಒಳಗೆ ಶುದ್ಧವಿಲ್ಲದನ್ನಕ್ಕ
ಮಣಿಯ ಕಟ್ಟಿ ಏವೆನಯ್ಯಾ ಮನಮುಟ್ಟದನ್ನಕ್ಕ
ನೂರನೋದಿ ಏವೆನಯ್ಯಾ
ನಮ್ಮ ಕೂಡಲಸಂಗಮದೇವರ
ಮನ ಮುಟ್ಟದನ್ನಕ್ಕ.

ಒಳ್ಳೆಯ ನಡೆನುಡಿಗಳಿಂದ ಬಾಳಬೇಕೆಂಬ ಅರಿವನ್ನು ಮತ್ತು ಎಚ್ಚರವನ್ನು ಮನದಲ್ಲಿ ಹೊಂದಿರದ ವ್ಯಕ್ತಿಯು ಮಾಡುವ ದೇವರ ಪೂಜೆ ಇಲ್ಲವೇ ಕಲಿಯುವ ಅಕ್ಕರ ವಿದ್ಯೆಯಿಂದ ಯಾವುದೇ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಅರಿವು ಎಂದರೆ ಜೀವನದಲ್ಲಿ “ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ; ಯಾವುದು ನಿಸರ್ಗ ಸಹಜ–ಯಾವುದು ಮಾನವ ನಿರ್ಮಿತ; ಯಾವುದು ವಾಸ್ತವ–ಯಾವುದು ಕಲ್ಪಿತ” ಎಂಬ ತಿಳುವಳಿಕೆ.

ಎಚ್ಚರ ಎಂದರೆ “ಒಳಿತು ಕೆಡುಕಿನ ಒಳಮಿಡಿತಗಳಿಂದ ಕೂಡಿರುವ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ತನಗೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವ ನಡೆನುಡಿಗಳನ್ನು ಹೊಂದಿರುವುದು”.

(ಹೊರಗೆ=ಬಹಿರಂಗವಾಗಿ/ಹೊರಗಡೆಯಲ್ಲಿ/ಎಲ್ಲರಿಗೂ ಕಾಣುವಂತೆ; ಪೂಸು >ಹೂಸು=ಬಳಿದುಕೊಳ್ಳುವುದು/ಲೇಪಿಸಿಕೊಳ್ಳುವುದು; ಹೂಸಿ=ವಿಭೂತಿಯನ್ನು/ಗಂಧದ ಕೊರಡನ್ನು ನೀರಿನಿಂದ ತೇಯ್ದಾಗ ಬರುವ ಗಂಧದ ಹಸಿಯನ್ನು ಹಣೆ/ತೋಳು/ಹೊಟ್ಟೆಯ ಮೇಲೆ ಬಳಿದುಕೊಳ್ಳುವುದು; ಏವು=ಏನು ಮಾಡುವುದು; ಏವೆನ್=ಏನು ಮಾಡಿದಂತಾಯಿತು/ಪ್ರಯೋಜನವೇನು; ಒಳಗೆ=ಒಳಗಡೆ/ಮನದಲ್ಲಿ; ಶುದ್ಧ+ಇಲ್ಲದ+ ಅನ್ನಕ್ಕ; ಶುದ್ಧ=ಚೊಕ್ಕಟವಾದ/ಕೊಳಕು ಇಲ್ಲದಿರುವ; ಅನ್ನಕ್ಕ= ತನಕ/ವರೆಗೆ; ಶುದ್ಧವಿಲ್ಲದನ್ನಕ್ಕ= ಶುದ್ಧವಿಲ್ಲದಿರುವ ತನಕ;

ಹೊರಗೆ ಹೂಸಿ ಏವೆನಯ್ಯಾ ಒಳಗೆ ಶುದ್ಧವಿಲ್ಲದನ್ನಕ್ಕ=ಅಂತರಂಗದ ಮನದಲ್ಲಿ ಒಳ್ಳೆಯ ಆಲೋಚನೆ ಇಲ್ಲದಿರುವಾಗ, ಬಹಿರಂಗದಲ್ಲಿ ಮಯ್ ಮೇಲೆ ವಿಭೂತಿ/ಗಂಧವನ್ನು ಬಳಿದುಕೊಂಡು, ನೋಡುವವರ ಕಣ್ಣಿನಲ್ಲಿ ದೇವರಲ್ಲಿ ಒಲವು ಉಳ್ಳವನಂತೆ ಕಾಣಿಸಿಕೊಳ್ಳುವುದರಿಂದ ಏನು ತಾನೇ ಪ್ರಯೋಜನ;

ಮಣಿ=ದುಂಡನೆಯ ಹವಳ/ಮುತ್ತು; ಕಟ್ಟು=ಒಡವೆ ವಸ್ತುಗಳನ್ನು ತೊಟ್ಟು ಕೊಳ್ಳುವುದು; ಮನ+ಮುಟ್ಟದ+ಅನ್ನಕ್ಕ; ಮನ=ಮನಸ್ಸು/ಚಿತ್ತ; ಮುಟ್ಟು=ಸೇರು/ತಾಕು; ಮನಮುಟ್ಟು=ಮನಸ್ಸಿಗೆ ಚೆನ್ನಾಗಿ/ಸರಿಯಾಗಿ ತಿಳಿಯುವುದು; ಮುಟ್ಟದ=ಸೇರದ/ಹೊಂದದ/ಪಡೆಯದ; ಮನಮುಟ್ಟದನ್ನಕ್ಕ=ಮನದಲ್ಲಿ ಒಳ್ಳೆಯ ಆಲೋಚನೆಯು ಇಲ್ಲದಿರುವ ತನಕ;

ಮಣಿಯ ಕಟ್ಟಿ ಏವೆನಯ್ಯಾ ಮನಮುಟ್ಟದನ್ನಕ್ಕ=ಮನಸ್ಸಿನಲ್ಲಿ ಒಳ್ಳೆಯ ಒಳಮಿಡಿತಗಳನ್ನು ಹೊಂದಿಲ್ಲದಿರುವಾಗ ಮಣಿಗಳಿಂದ ಮಾಡಿರುವ ಮಾಲೆಯನ್ನು ಕೊರಳಲ್ಲಿ/ತೋಳುಗಳಲ್ಲಿ ಹಾಕಿಕೊಳ್ಳುವುದರಿಂದ ಏನನ್ನು ತಾನೆ ಪಡೆದಂತಾಯಿತು;

ನೂರನ್+ಓದಿ; ನೂರು=ಹತ್ತರಿಂದ ಹತ್ತನ್ನು ಗುಣಿಸಿದಾಗ ಬರುವ ಸಂಕೆ/ಅನೇಕ/ಬಹಳ; ಓದು=ಲಿಪಿರೂಪದಲ್ಲಿ ರಚನೆಗೊಂಡಿರುವ ಹೊತ್ತಿಗೆಯಲ್ಲಿನ ವಿಚಾರಗಳನ್ನು ತಿಳಿಯುವುದು/ಕಲಿಯುವುದು/ಉಚ್ಚರಿಸುವುದು; ಕೂಡಲ ಸಂಗಮದೇವ=ಈಶ್ವರ/ಬಸವಣ್ಣನ ವಚನಗಳ ಅಂಕಿತನಾಮ;

ನೂರನೋದಿ ಏವೆನಯ್ಯಾ ನಮ್ಮ ಕೂಡಲಸಂಗಮದೇವರ ಮನ ಮುಟ್ಟದನ್ನಕ್ಕ=ಹಲವಾರು ಹೊತ್ತಿಗೆಗಳ ಓದಿನಿಂದ ಜೀವನದಲ್ಲಿ ಎಲ್ಲ ಬಗೆಯ ದೇವರ ಪೂಜೆಗಿಂತಲೂ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಯೇ ದೊಡ್ಡದು ಎಂಬುದು ನನ್ನ ಮನಸ್ಸಿಗೆ ಅರಿವಾಗದಿದ್ದರೆ, ಅಂತಹ ಓದಿನಿಂದ ಬಂದ ಪ್ರಯೋಜನವಾದರೂ ಏನು;

ಶಿವಶರಣಶರಣೆಯರು ದೇವರನ್ನು ಕಲ್ಲು/ಮರ/ಮಣ್ಣು/ಲೋಹದ ಆಕಾರ ದಲ್ಲಿದ್ದ ಲಿಂಗದಲ್ಲಿ ಕಾಣುತ್ತಿರಲಿಲ್ಲ. ಅವರ ಪಾಲಿಗೆ ಒಳ್ಳೆಯ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದೇ ದೇವರನ್ನು ಒಲಿಸಿಕೊಳ್ಳುವ ದಾರಿಯಾಗಿತ್ತು. ಅರಿವು ಮತ್ತು ಎಚ್ಚರದ ನೆಲೆಯಲ್ಲಿ ಮನಸ್ಸನ್ನು ಯಾವಾಗಲೂ ಇಟ್ಟುಕೊಂಡಿರಬೇಕೆಂಬ ಶಿವ ಶರಣಶರಣೆಯರ ನಿಲುವನ್ನು 'ಕೂಡಲ ಸಂಗಮದೇವರ ಮನಮುಟ್ಟುವುದು' ಎಂಬ ನುಡಿಗಟ್ಟು ಸೂಚಿಸುತ್ತದೆ.

ವ್ಯಕ್ತಿಯ ಮನಸ್ಸನ್ನು ಅರಿವು ಮತ್ತು ಎಚ್ಚರದ ಸಂಕೇತವೆಂದು ಹೇಳುವ ಕತೆಯೊಂದು ಬೌದ್ಧಧರ್ಮದ ತ್ರಿಪಿಟಿಕದ ಕತೆಯೊಂದರಲ್ಲಿ ನಿರೂಪಣೆಗೊಂಡಿದೆ. ಒಬ್ಬ ಗುರು ತನ್ನ ಹತ್ತು ಮಂದಿ ಗುಡ್ಡರಿಗೆ ತಲಾ ಒಂದೊಂದು ಮಾವಿನ ಹಣ್ಣನ್ನು ನೀಡಿ "ಯಾರೂ ಕಾಣದ ಎಡೆಯಲ್ಲಿ ತಿಂದು ಬನ್ನಿ" ಎಂದು ಹೇಳಿ

ಕಳುಹಿಸುತ್ತಾನೆ. ಕೆಲ ಸಮಯದ ನಂತರ ಹಿಂತಿರುಗಿ ಬಂದ ಗುಡ್ಡರನ್ನು ಕೇಳಿದಾಗ, ಒಬ್ಬನನ್ನು ಹೊರತುಪಡಿಸಿ, ಉಳಿದವರೆಲ್ಲರೂ ತಾವು ಹಣ್ಣನ್ನು ಯಾರೂ ಇಲ್ಲದ ಎಡೆಯಲ್ಲಿ ತಿಂದ ಸನ್ನಿವೇಶವನ್ನು ವಿವರಿಸುತ್ತಾರೆ. ಹಣ್ಣನ್ನು ಕಯ್ಯಲ್ಲಿಯೇ ಹಿಡಿದು ತಂದಿದ್ದ ಗುಡ್ಡನನ್ನು ಗುರು 'ಏಕೆ ನಿನಗೆ ಯಾರೂ ಇಲ್ಲದ ಎಡೆಯೇ ಸಿಗಲಿಲ್ಲವೇ ?' ಎಂದಾಗ ಗುಡ್ಡನು 'ನಾನು ಹೋದ ಎಡೆಯಲ್ಲಿ ಬೇರೆ ವ್ಯಕ್ತಿಗಳಿಲ್ಲದಿದ್ದರೂ ನನ್ನ ಮನಸ್ಸು ನಾನು ಮಾಡುವುದೆಲ್ಲವನ್ನೂ ಯಾವಾಗಲೂ ನೋಡುತ್ತಿರುತ್ತದೆ. ಆದ್ದರಿಂದ ನನ್ನ ಮನಸ್ಸಿಗೆ ಮರೆಮಾಚಿ ಹಣ್ಣನ್ನು ತಿನ್ನಲಾಗಲಿಲ್ಲ' ಎನ್ನುತ್ತಾನೆ.

❖

31. ಬಹುರೂಪಿ ಚೌಡಯ್ಯ

ಊರು: ರೇಕಳಿಕೆ

ಕಸುಬು: ಕಲಾವಿದ

ವಚನಗಳ ಅಂಕಿತನಾಮ: ರೇಕಣ್ಣಪ್ರಿಯ ನಾಗಿನಾಥ

ದೊರೆತಿರುವ ವಚನಗಳು: 66

145. ಆಡುವಡೆ ಸದಾಚಾರಿಗಳ ಕೂಡೆ ಆಡುವುದು
ನುಡಿವಡೆ ಜಂಗಮ ಪ್ರೇಮಿಯ ಕೂಡೆ ನುಡಿವುದು
ಮಾತಾಡುವಡೆ ಪ್ರಸಾದಿಯ ಕೂಡೆ ಮಾತನಾಡುವುದು
ಭಕ್ತಿಹೀನನ ಕಂಡಡೆ ಮನ ಮುನಿಸ ಮಾಡಿಸಾ
ರೇಕಣ್ಣಪ್ರಿಯ ನಾಗಿನಾಥಾ.

ವ್ಯಕ್ತಿಯು ಜೀವನದಲ್ಲಿ ಯಾವುದೇ ವ್ಯವಹಾರವನ್ನು ಮಾಡಿದರೂ ಒಳ್ಳೆಯ ನಡೆನುಡಿಯುಳ್ಳವರ ಜೊತೆಯಲ್ಲಿ ಒಡನಾಡುತ್ತ, ಕೆಟ್ಟ ನಡೆನುಡಿಯುಳ್ಳವರಿಂದ ದೂರವಿರಬೇಕು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಆಡು=ವ್ಯವಹರಿಸು/ವಹಿವಾಟು ನಡೆಸು; ಆಡುವಡೆ=ವ್ಯವಹರಿಸುವುದಾದರೆ; ಸದಾಚಾರಿ=ಒಳ್ಳೆಯ ನಡೆನುಡಿಯುಳ್ಳವನು; ವ್ಯಕ್ತಿಯು ತಾನಾಡುವ ಮಾತಿನಿಂದ ಮತ್ತು ಮಾಡುವ ದುಡಿಮೆಯಿಂದ ತನ್ನ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಮಾಡಿಕೊಳ್ಳುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು; ಕೂಡೆ=ಜೊತೆಯಲ್ಲಿ;

ಆಡುವಡೆ ಸದಾಚಾರಿಗಳ ಕೂಡೆ ಆಡುವುದು=ವ್ಯಕ್ತಿಯು ತನ್ನ ಸಾಮಾಜಿಕ ಜೀವನದಲ್ಲಿ ಯಾವುದೇ ವ್ಯವಹಾರವನ್ನು ಮಾಡಿದರೂ ಒಳ್ಳೆಯ ನಡೆನುಡಿಯುಳ್ಳವರ ಜೊತೆಯಲ್ಲಿಯೇ ಮಾಡುವುದು. ಏಕೆಂದರೆ ಸದಾಚಾರಿಯಾದವನು ಪರರಿಗೆ ಒಳಿತನ್ನು ಮಾಡುತ್ತಾನೆಯೇ ಹೊರತು ಎಂದಿಗೂ ಕೇಡನ್ನು ಬಗೆಯುವುದಿಲ್ಲ;

ನುಡಿ=ಹೇಳು; ನುಡಿವಡೆ=ಹೇಳುವುದಾದರೆ; ಜಂಗಮ=ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ; ಯಾವುದು ನೀತಿ–ಯಾವುದು ಅನೀತಿ ಎಂಬ ಸಾಮಾಜಿಕ ಅರಿವನ್ನು ಜನಮನದಲ್ಲಿ ಮೂಡಿಸಿ, ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಬಾಳಬೇಕೆಂಬ ಎಚ್ಚರವನ್ನು ಜನರಲ್ಲಿ ಮೂಡಿಸುತ್ತ, ಎಲ್ಲ ಕಡೆ ಸಂಚರಿಸುತ್ತಿರುವ ಶಿವಶರಣ; ಪ್ರೇಮ=ಒಲವು/ಅನುರಾಗ; ಜಂಗಮ ಪ್ರೇಮಿ=ಜಂಗಮರ ವ್ಯಕ್ತಿತ್ವವನ್ನು ಮೆಚ್ಚಿಕೊಂಡವನು/ಸಜ್ಜನ;

ನುಡಿವಡೆ ಜಂಗಮ ಪ್ರೇಮಿಯ ಕೂಡೆ ನುಡಿವುದು=ಏನನ್ನಾದರೂ ಹೇಳಬೇಕೆಂದರೆ ಜಂಗಮರಿಂದ ಅರಿವನ್ನು ಪಡೆದುಕೊಂಡು ಜೀವನದಲ್ಲಿ ಒಳ್ಳೆಯ ರೀತಿಯಲ್ಲಿ ಬಾಳುತ್ತಿರುವ ವ್ಯಕ್ತಿಯೊಡನೆ ಹೇಳಿಕೊಳ್ಳುವುದು. ಏಕೆಂದರೆ ಸಜ್ಜನರೊಡನೆ ನಡೆಸುವ ಮಾತುಕತೆಯಿಂದ ಒಳ್ಳೆಯ ಸಂಗತಿಗಳು ತಿಳಿದುಬರುತ್ತವೆ;

ಮಾತಾಡುವಡೆ=ಮಾತನಾಡಬೇಕೆಂದರೆ; ಪ್ರಸಾದ=ದೇವರನ್ನು ಪೂಜಿಸುವಾಗ ದೇವರ ವಿಗ್ರಹದ ಮುಂದಿಡುವ ಉಣಿಸು ತಿನಸನ್ನು ಪೂಜೆಯ ನಂತರ ದೇವರ ಅನುಗ್ರಹವೆಂದು ತಿಳಿದು ಅದನ್ನು ಸ್ವೀಕರಿಸುವುದು;

ಪ್ರಸಾದಿ=ತನ್ನ ಒಳ್ಳೆಯತನದ ನಡೆನುಡಿಯಿಂದ ಶಿವನನ್ನು ಪೂಜಿಸುತ್ತ, ಶಿವನ ಅನುಗ್ರಹಕ್ಕೆ ಪಾತ್ರನಾಗಿರುವ ಶಿವಶರಣ/ಶರಣೆ; **ಮಾತಾಡುವಡೆ ಪ್ರಸಾದಿಯ ಕೂಡೆ ಮಾತನಾಡುವುದು**=ಮಾತನಾಡಬೇಕೆಂಬ ಆಸೆಯಾದರೆ ಶಿವಶರಣ ಶರಣೆಯರ ಜತೆಯಲ್ಲಿ ಮಾತಾಡುವುದು. ಏಕೆಂದರೆ ಶಿವಶರಣಶರಣೆಯರು ಪ್ರಾಮಾಣಿಕತನದ ಕಾಯಕವನ್ನು ಮಾಡಿ ಮತ್ತು ಕಾಯಕದಿಂದ ಬಂದ ಸಂಪತ್ತಿನಿಂದ ಹಸಿದು ಬಂದವರಿಗೆ ಅನ್ನದಾಸೋಹವನ್ನು ಮಾಡುತ್ತಾರೆ;

ಭಕ್ತಿ=ನಿಜ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುವುದೇ ಶಿವನ ಪೂಜೆಯೆಂದು ತಿಳಿದಿರುವುದು; ಹೀನ=ತೊರೆದ/ತ್ಯಜಿಸಿದ; ಭಕ್ತಿಹೀನ=ನಿತ್ಯ ಜೀವನದಲ್ಲಿ ಕೆಟ್ಟ ನಡೆನುಡಿಯಿಂದ ಬಾಳುತ್ತಿರುವ ವ್ಯಕ್ತಿ; ಕಂಡಡೆ=ನೋಡಿದರೆ;

ಮನ=ಮನಸ್ಸು; ಮುನಿಸು=ಜುಗುಪ್ಸೆ/ಬೇಸರ/ಕೋಪ; **ಮನ ಮುನಿಸು=** ಕನ್ನಡ ನುಡಿ ಸಮುದಾಯದಲ್ಲಿ 'ಮೊಕ ಮುನಿಸು' ಎಂಬ ಒಂದು ನುಡಿಗಟ್ಟು ಬಳಕೆಯಲ್ಲಿದೆ. ಇಬ್ಬರು ವ್ಯಕ್ತಿಗಳ ನಡುವಣ ನಂಟು ಮುರಿದುಬಿದ್ದಾಗ, ಕೋಪ ಗೊಂಡ ಇಲ್ಲವೇ ಬೇಸರಗೊಂಡ ವ್ಯಕ್ತಿಗಳು ಪರಸ್ಪರ ಒಬ್ಬರ ಮೊಕವನ್ನು ಮತ್ತೊಬ್ಬರು ನೋಡದೆ, ದೂರ ದೂರವಿರುತ್ತಾರೆ. ಇದನ್ನು 'ಮೊಕ ಮುನಿಸು' ಎಂದು ಕರೆಯುತ್ತಾರೆ. ಇದೇ ರೀತಿಯಲ್ಲಿ 'ಮನ ಮುನಿಸು' ಎಂಬ ನುಡಿಗಟ್ಟು ರೂಪುಗೊಂಡಿದೆ.

ಮನ ಮುನಿಸು=ಕೆಟ್ಟ ವ್ಯಕ್ತಿಯ ಆಲೋಚನೆಗಳಿಗೆ ಕಿವಿಗೊಡದೆ, ಅವರ ನುಡಿಗಳಿಗೆ ಓಗೊಡದೆ ಅಂತಹ ವ್ಯಕ್ತಿಯಿಂದ ಮಾನಸಿಕವಾಗಿ ದೂರವಿರುವುದು; ಮಾಡಿಸಾ=ಮಾಡಿಸುವಂತಹವನಾಗು;

ಭಕ್ತಿಹೀನನ ಕಂಡಡೆ ಮನ ಮುನಿಸ ಮಾಡಿಸಾ=ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಯೊಡನೆ ವ್ಯವಹರಿಸುವ ಸನ್ನಿವೇಶ ಎದುರಾದರೆ, ಅಂತಹ ನೀಚ ವ್ಯಕ್ತಿಯ ಜತೆಯಲ್ಲಿ ಯಾವುದೇ ಬಗೆಯಲ್ಲಿಯೂ ಒಡನಾಡದಂತೆ ನನ್ನನ್ನು ದೂರವಿರಿಸು. ಏಕೆಂದರೆ ಕೆಟ್ಟ ವ್ಯಕ್ತಿಯ ಆಲೋಚನೆ, ಮಾತು ಮತ್ತು ಕೆಲಸಗಳು ಅವನೊಡನೆ ಒಡನಾಡುವ ವ್ಯಕ್ತಿಯನ್ನು ದುರಂತಕ್ಕೆ ಈಡುಮಾಡುತ್ತವೆ;

ರೇಕಣ್ಣಪ್ರಿಯ ನಾಗಿನಾಥಾ=ಶಿವನ ಮತ್ತೊಂದು ಹೆಸರು/ಬಹುರೂಪಿ ಚೌಡಯ್ಯನವರ ವಚನಗಳ ಅಂಕಿತನಾಮ;

❖

32. ಬಾಲಸಂಗಯ್ಯ

ದೊರೆತಿರುವ ವಚನಗಳು: 920
ವಚನಗಳ ಅಂಕಿತನಾಮ: ಅಪ್ರಮಾಣ ಕೂಡಲಸಂಗಮದೇವಾ.

146. ಕಲ್ಲದೇವರು ದೇವರಲ್ಲ
ಮಣ್ಣದೇವರು ದೇವರಲ್ಲ
ಮರದೇವರು ದೇವರಲ್ಲ
ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ

ಸೇತುರಾಮೇಶ್ವರ ಗೋಕರ್ಣ
ಕಾಶಿ ಕೇದಾರ ಮೊದಲಾಗಿ
ಅಷ್ಟಾಷಷ್ಠಿಕೋಟಿ ಪುಣ್ಯಕ್ಷೇತ್ರಂಗಳಲ್ಲಿಹ
ದೇವರು ದೇವರಲ್ಲ

ತನ್ನ ತಾನರಿದು
ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ
ಅಪ್ರಮಾಣ ಕೂಡಲಸಂಗಮದೇವಾ.

ವ್ಯಕ್ತಿಯು ತನ್ನ ವ್ಯಕ್ತಿತ್ವದ ಇತಿಮಿತಿಗಳನ್ನು ಅರಿತುಕೊಂಡು, ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಾದರೆ, ಆತನೇ ದೇವರಾಗುತ್ತಾನೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ನಮ್ಮ ಜೀವನದಲ್ಲಿ ಯಾವುದೇ ಬಗೆಯ ಕಷ್ಟ ಬಂದಾಗ ನಮಗೆ ನೆರವನ್ನು ನೀಡಿ ಕಾಪಾಡುವ ವ್ಯಕ್ತಿಯನ್ನು, 'ನೀವು ನಮ್ಮ ಪಾಲಿಗೆ ದೇವರಾಗಿ ಬಂದಿರಿ/ ನೀವೇ ನಮ್ಮ ದೇವರು' ಎಂಬ ಮಾತನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಒಂದಲ್ಲ ಒಂದು ಸಾರಿ ಆಡುತ್ತಿರುತ್ತೇವೆ. ಈ ಹಿನ್ನೆಲೆಯಲ್ಲಿ ಒಳ್ಳೆಯ ನಡೆನುಡಿಗಳಿಂದ ಜನಸಮುದಾಯಕ್ಕೆ ಒಳಿತನ್ನು ಮಾಡುವ ವ್ಯಕ್ತಿಯನ್ನು ದೇವರಂತೆ ಕಾಣುವ ಜನಪದರ ನಂಬಿಕೆಯನ್ನು, 'ತಾನೇ ದೇವ ನೋಡಾ' ಎಂಬ ಮಾತುಗಳು ಸೂಚಿಸುತ್ತಿವೆ.

(ಕಲ್ಲ್+ಅ; ಕಲ್ಲು=ಬಂಡೆ; ಕಲ್ಲ=ಕಲ್ಲಿನ/ಕಲ್ಲಿನಿಂದ ಮಾಡಿರುವ; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿ/ಶಕ್ತಿಯನ್ನು 'ದೇವರು/ದೇವ' ಎಂದು ಮಾನವ ಸಮುದಾಯ ನಂಬಿದೆ; ಕಲ್ಲದೇವರು=ಶಿಲೆಯನ್ನು ಉಳಿ ಮತ್ತು ಸುತ್ತಿಗೆಯಿಂದ ಕೆತ್ತಿ ಕೊರೆದು ಮಾಡಿರುವ ದೇವರ ವಿಗ್ರಹ; ದೇವರ್+ಅಲ್ಲ; ಮಣ್ಣ್+ಅ; ಮಣ್ಣ=ಮಣ್ಣಿನಿಂದ ಮಾಡಿರುವ; ಮಣ್ಣದೇವರು=ಮಣ್ಣಿನಿಂದ ಮಾಡಿರುವ ದೇವರು/ಮಣ್ಣಿನ ಹಸಿಮುದ್ದೆಯನ್ನು ಮಿದ್ದಿ ತಿದ್ದಿ ತೀಡಿ ಮಾಡಿರುವ ದೇವರ ವಿಗ್ರಹ;

ಪಂಚ=ಅಯ್ದು; ಲೋಹ=ಕಬ್ಬಿಣ/ತಾಮ್ರ/ಚಿನ್ನ/ಕಂಚು/ಹಿತ್ತಾಳೆ ಮುಂತಾದ ವಸ್ತುಗಳು; ಪಂಚಲೋಹ=ತಾಮ್ರ, ಹಿತ್ತಾಳೆ, ತವರ, ಸೀಸ, ಕಬ್ಬಿಣ ಎಂಬ ಅಯ್ದು ಬಗೆಯ ಲೋಹಗಳು; **ಪಂಚಲೋಹದಲ್ಲಿ ಮಾಡಿದ ದೇವರು**=ಅಯ್ದು ಬಗೆಯ ಲೋಹಗಳನ್ನು ಕಾಯಿಸಿ/ಕುದಿಸಿ/ಕರಗಿಸಿ ಎರಕ ಹೊಯ್ದು ಮಾಡಿರುವ ದೇವರ ವಿಗ್ರಹ;

ಸೇತು=ನೀರಿನಿಂದ ತುಂಬಿ ಹರಿಯುತ್ತಿರುವ ನದಿ/ಹಳ್ಳ/ತೊರೆಗಳಲ್ಲಿ ಒಂದು ದಡದಿಂದ ಮತ್ತೊಂದು ದಡಕ್ಕೆ ಹಾದುಹೋಗುವುದಕ್ಕಾಗಿ ಅವುಗಳ ಮೇಲೆ ಕಟ್ಟಿರುವ ಸೇತುವೆ; **ರಾಮೇಶ್ವರ**=ತಮಿಳುನಾಡು ರಾಜ್ಯದ ಪೂರ್ವ ತೀರದಲ್ಲಿ ಬಂಗಾಳ ಕೊಲ್ಲಿ ಮತ್ತು ಹಿಂದೂ ಮಹಾಸಾಗರಗಳು ಕೂಡಿರುವ ನೆಲೆಯ ದಡದಲ್ಲಿರುವ ಒಂದು ಪಟ್ಟಣ. ಈ ಪಟ್ಟಣದ ದೇವಾಲಯದಲ್ಲಿರುವ ಶಿವಲಿಂಗವನ್ನು 'ರಾಮಲಿಂಗ/ರಾಮೇಶ್ವರ' ಎಂಬ ಹೆಸರಿನಿಂದ ಕರೆಯುತ್ತಾರೆ; **ಸೇತುರಾಮೇಶ್ವರ**=ಈ ಪಟ್ಟಣದ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿನ ಪ್ರಸಂಗವೊಂದು ಜನಮನದಲ್ಲಿ ನೆಲೆಸಿದೆ. ರಾವಣನ ಸೆರೆಯಲ್ಲಿದ್ದ ಸೀತೆಯನ್ನು

ಬಿಡಿಸಿಕೊಂಡು ಬರಲು ಲಂಕೆಗೆ ವಾನರಸೇನೆಯೊಡನೆ ರಾಮನು ಹೊರಡುವಾಗ, ಹಿಂದೂ ಮಹಾಸಾಗರವನ್ನು ದಾಟಲೆಂದು ಸೇತುವೆಯನ್ನು ಕಟ್ಟಲು ತನ್ನ ಬಿಲ್ಲಿನ ತುದಿಯಿಂದ ಇಲ್ಲಿ ಜಾಗವನ್ನು ಗುರುತುಹಾಕಿದನೆಂಬ ದಂತಕತೆಯು ಜನರ ಮಾತುಕತೆಯಲ್ಲಿ ಕಂಡುಬರುತ್ತದೆ. ಆದುದರಿಂದ ಈ ಊರಿಗೆ 'ಸೇತುರಾಮೇಶ್ವರ' ಎಂಬ ಹೆಸರು ಬಂದಿದೆ;

ಗೋಕರ್ಣ=ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಅರಬ್ಬೀ ಸಮುದ್ರದ ದಡದಲ್ಲಿರುವ ಒಂದು ಊರು. ಇಲ್ಲಿರುವ ಶಿವಲಿಂಗವನ್ನು 'ಮಹಾಬಲೇಶ್ವರ/ಆತ್ಮಲಿಂಗ' ಎಂಬ ಹೆಸರಿನಿಂದ ಕರೆಯುತ್ತಾರೆ;

ಕಾಶಿ=ಉತ್ತರ ಪ್ರದೇಶ ರಾಜ್ಯದ ವಾರಣಾಸಿ ಜಿಲ್ಲೆಯಲ್ಲಿ ಗಂಗಾ ತಟದಲ್ಲಿರುವ ಪಟ್ಟಣ. ಈ ಪಟ್ಟಣಕ್ಕೆ 'ವಾರಣಾಸಿ/ಬನಾರಸ್/ಕಾಶಿ' ಎಂಬ ಮೂರು ಬಗೆಯ ಹೆಸರುಗಳಿವೆ. ಇಲ್ಲಿರುವ ಶಿವಲಿಂಗವನ್ನು 'ವಿಶ್ವನಾಥ' ಎಂಬ ಹೆಸರಿನಿಂದ ಕರೆಯುತ್ತಾರೆ;

ಕೇದಾರ=ಹಿಮಾಲಯ ಪರ್ವತ ಶ್ರೇಣಿಯಲ್ಲಿರುವ ಉತ್ತರಕಾಂಡ ರಾಜ್ಯದ ಚಮೋಲಿ ಜಿಲ್ಲೆಯಲ್ಲಿ ಮಂದಾಕಿನಿ ನದಿಯ ದಂಡೆಯ ಮೇಲೆ ನಿರ್ಮಾಣಗೊಂಡಿರುವ ಶಿವನ ದೇವಾಲಯವಿರುವ ನೆಲೆ. ಇಲ್ಲಿನ ಲಿಂಗವನ್ನು 'ಕೇದಾರನಾಥ' ಎಂಬ ಹೆಸರಿನಿಂದ ಕರೆಯುತ್ತಾರೆ;

ಮೊದಲ್+ಆಗಿ; ಮೊದಲಾಗಿ=ಮೊದಲುಗೊಂಡು/ಎಲ್ಲವನ್ನೂ ಒಳಗೊಂಡು; ಅಷ್ಟ=ಎಂಟು; ಷಷ್ಠಿ=ಅರವತ್ತು; ಕೋಟಿ=ಒಂದು ನೂರು ಲಕ್ಷ; ಅಷ್ಟಾಷಷ್ಠಿಕೋಟಿ =ಅರವತ್ತೆಂಟು ಕೋಟಿ/ಎಣಿಕೆಗೆ ಸಿಗಲಾರದಷ್ಟು ಸಂಕೆಯಲ್ಲಿರುವುದು ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿರುವ ಪದ; ಪುಣ್ಯ+ಕ್ಷೇತ್ರಂಗಳ್+ಅಲ್ಲಿ+ಇಹ; ಪುಣ್ಯ=ಮಂಗಳಕರ/ಪವಿತ್ರ/ಪಾವನ; ಕ್ಷೇತ್ರ=ಪ್ರದೇಶ/ಪ್ರಾಂತ್ಯ; ಪುಣ್ಯಕ್ಷೇತ್ರ= ದೇಗುಲಗಳನ್ನು ಕಟ್ಟಿ, ದೇವರಿಗೆ ಪ್ರತಿದಿನವೂ ಬಹುಬಗೆಯ ಪೂಜೆಯ ಆಚರಣೆಗಳು ನಡೆಯುತ್ತಿರುವ ನೆಲೆ. ಇಂತಹ ನೆಲೆಗೆ ಬಂದು ದೇವರ ದರ್ಶನ ಮತ್ತು ಪೂಜೆಗಳಲ್ಲಿ ತೊಡಗುವವರಿಗೆ ಜೀವನದಲ್ಲಿನ ಎಲ್ಲಾ ಬಗೆಯ ಎಡರು ತೊಡರುಗಳು ನಿವಾರಣೆಗೊಂಡು, ಅವರ ಬಯಕೆಗಳು ಈಡೇರಿ ಒಳಿತಾಗುವುದೆಂಬ ನಂಬಿಕೆಯು ಜನಮನದಲ್ಲಿದೆ; ಪುಣ್ಯಕ್ಷೇತ್ರಂಗಳಲ್ಲಿ=ಪುಣ್ಯಕ್ಷೇತ್ರಗಳಲ್ಲಿ; ಇಹ=ಇರುವ/ನೆಲೆಗೊಂಡಿರುವ;

ತನ್ನ=ತನ್ನನ್ನು; ತಾನ್+ಅರಿದು; ತಾನು=ವ್ಯಕ್ತಿಯು; ಅರಿ=ತಿಳಿ/ಕಲಿ; ಅರಿದು=ತಿಳಿದುಕೊಂಡು; ತಾನ್+ಆರ್+ಎಂದು; ಆರ್=ಯಾರು; ತಾನಾರು=ತಾನು ಯಾರು; ತಿಳಿ=ಅರಿ/ಕಲಿ/ಗ್ರಹಿಸು; ತಿಳಿದಡೆ=ಮನದಟ್ಟು ಮಾಡಿಕೊಂಡರೆ/ಅರಿತುಕೊಂಡರೆ/ಗ್ರಹಿಸಿಕೊಂಡರೆ;

'ತನ್ನ ತಾನರಿದು ತಾನಾರೆಂದು ತಿಳಿಯುವುದು' ಎಂದರೆ ಪ್ರತಿಯೊಬ್ಬ ಮಾನವನು ತಾನು ಹುಟ್ಟಿ ಬೆಳೆದು ಬಾಳುವ ಪರಿಸರದಲ್ಲಿರುವ ನಿಸರ್ಗದಲ್ಲಿನ ಏರಿಳಿತಗಳಿಗೆ ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟು ವ್ಯವಹರಿಸುತ್ತಿರುತ್ತಾನೆ. ಇದರಿಂದಾಗಿ ಮಾನವ ಜೀವಿಯ ಮಯ್-ಮನಗಳು ಸದಾಕಾಲ ಒಳಿತು ಕೆಡುಕಿನ ಇಬ್ಬಗೆಯ ತೊಳಲಾಟದಲ್ಲಿ ಸಿಲುಕಿರುತ್ತವೆ ಎಂಬ ವಾಸ್ತವವನ್ನು ಅರಿತುಕೊಂಡು, ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿ, ಒಳ್ಳೆಯ ನಡೆನುಡಿಗಳಿಂದ ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಅರಿವನ್ನು ಹೊಂದಿರುವುದು;

ತಾನೇ=ವ್ಯಕ್ತಿಯೇ/ಅವನೇ; ನೋಡು+ಆ; ನೋಡು=ಕಾಣು/ತಿಳಿ; **ತಾನೇ ದೇವ ನೋಡಾ**=ಒಳ್ಳೆಯ ನಡೆನುಡಿಗಳಿಂದ ಬಾಳುವವನೇ ದೇವರಾಗಿ ಕಂಡುಬರುತ್ತಾನೆ/ಗೋಚರಿಸುತ್ತಾನೆ;

ಅಪ್ರಮಾಣ=ದೊಡ್ಡದಾದ/ಅಳತೆಗೆ ನಿಲುಕದ; ಕೂಡಲ್/ಕೂಡಲು=ಸೇರುವಿಕೆ/ಜತೆಗೂಡುವುದು; ಸಂಗಮ=ಕೂಡಿಕೊಳ್ಳುವುದು/ಜತೆಗೂಡುವುದು; ಸಂಗಮ=ಬೇರೆ ಬೇರೆಯಾಗಿ ಹರಿಯುತ್ತಿರುವ ಎರಡು ನದಿಗಳು ಒಂದಾಗಿ ಜತೆಗೂಡುವ ಜಾಗ/ನೆಲೆ; **ಕೂಡಲಸಂಗಮ**=ಬಿಜಾಪುರ ಜಿಲ್ಲೆಯ ಹುನುಗುಂದ ತಾಲ್ಲೂಕಿಗೆ ಸೇರಿದ ಒಂದು ಊರು. ಇಲ್ಲಿ ಕೃಷ್ಣ ಮತ್ತು ಮಲಪ್ರಭಾ ನದಿಗಳು ಕೂಡುವುದರಿಂದ ಈ ಹೆಸರು ಬಂದಿದೆ. ಇಲ್ಲಿಯ ದೇವರನ್ನು 'ಸಂಗಮೇಶ್ವರ/ಸಂಗಮನಾಥ/ಕೂಡಲಸಂಗಮದೇವ' ಎಂಬ ಹೆಸರಿನಿಂದ ಕರೆಯುತ್ತಾರೆ; ಅಪ್ರಮಾಣ ಕೂಡಲಸಂಗಮದೇವಾ=ವಚನಕಾರ ಬಾಲಸಂಗಯ್ಯನ ವಚನಗಳಲ್ಲಿ ಕಂಡುಬರುವ ಅಂಕಿತನಾಮ)

❖

33. ಬಾಹೂರ ಬೊಮ್ಮಣ್ಣ

ಊರು:	ಬಾಹೂರು, ಮುದ್ದೆಬಿಹಾಳ ತಾಲ್ಲೂಕು, ಬಿಜಾಪುರ ಜಿಲ್ಲೆ.
ಕಸುಬು:	ತೋಟದ ಬೆಳೆಗಾರ/ತೋಟಗಾರಿಕೆ
ದೊರೆತಿರುವ ವಚನಗಳು:	41
ವಚನಗಳ ಅಂಕಿತನಾಮ:	ಬ್ರಹ್ಮೇಶ್ವರ ಲಿಂಗ

147. ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾರಚನೆಗಳಿಂದ
ಮಾತಿನ ಮಾಲೆಯ ಎಷ್ಟು ನುಡಿದಡೇನು
ಹೆಂಡದಂತೆ ಮೃತಘಟದಂತೆ ಶಿಥಿಲಫಳದಂತೆ
ಅದಾರಿಗೆ ಯೋಗ್ಯ
ಸಂಗನ ಬಸವಣ್ಣ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವು ಅವರಲ್ಲಿ ನಿಲ್ಲನಾಗಿ.

ಒಳ್ಳೆಯ ನಡತೆಯಿಲ್ಲದ ವ್ಯಕ್ತಿಯು ಆಡುವ ಸೊಗಸಾದ ಮನಮೋಹಕವಾದ ಮಾತುಗಳಿಂದ ಸಹಮಾನವರಿಗೆ ಯಾವುದೇ ರೀತಿಯ ಪ್ರಯೋಜನವಿಲ್ಲ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಸದ್ಭಕ್ತಿ+ಇಲ್ಲದ; ಸದ್ಭಕ್ತಿ=ದೇವರನ್ನು ಪೂಜಿಸಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ವಿಶ್ವಾಸ=ನಂಬಿಕೆ/ಒಲವು; ಹೀನ=ಕೆಟ್ಟದ್ದು/

ಕಳಪೆಯಾದುದು; ವಿಶ್ವಾಸಹೀನ=ನಂಬಿಕೆಗೆ ಯೋಗ್ಯನಲ್ಲದ ವ್ಯಕ್ತಿ; **ಸದ್ಭಕ್ತಿಯಿಲ್ಲದ ವಿಶ್ವಾಸಹೀನ**=ಒಳ್ಳೆಯ ನಡೆನುಡಿಗಳಿಲ್ಲದ ನಂಬಿಕೆದ್ರೋಹಿ/ವಂಚಕ/ಕೇಡಿ;

ವಾಚಾ+ರಚನೆ+ಗಳ್+ಇಂದ; ವಚಿಸು=ಹೇಳು/ವಿವರಿಸು; ವಾಚಾ= ಮಾತುಗಳಲ್ಲಿ ಹೇಳಿರುವುದು; ರಚನೆ=ಕಟ್ಟುವಿಕೆ/ನಿರ್ಮಿಸುವಿಕೆ/ಬರೆಯುವಿಕೆ; ವಾಚಾ ರಚನೆ=ಮಾನವನ ಮನಸ್ಸಿಗೆ ಅರಿವು ಮತ್ತು ಆನಂದವನ್ನು ನುಡಿರೂಪದಲ್ಲಿ ನೀಡಲೆಂದು ರಚನೆಗೊಂಡಿರುವ ಕಾವ್ಯ/ನಾಟಕ/ಗದ್ಯ/ಪದ್ಯ/ಶಾಸ್ತ್ರ ಮುಂತಾದ ಹೊತ್ತಿಗೆಗಳು; ಮಾತು=ನುಡಿ/ಸೊಲ್ಲು; ಮಾಲೆ=ಸಾಲು/ಸರ; ಮಾತಿನ ಮಾಲೆ=ಒಂದೇ ಸಮನೆ ಮಾತನಾಡುತ್ತಿರುವುದು/ಕೇವಲ ಮಾತುಗಾರಿಕೆಯಲ್ಲೇ ತೊಡಗಿರುವುದು; ಎಷ್ಟು=ಯಾವ ಪ್ರಮಾಣದಲ್ಲಿ/ಯಾವ ಸಂಕೆಯಲ್ಲಿ; ನುಡಿದಡೆ+ಏನು; ನುಡಿ=ಹೇಳು/ಮಾತಾಡು; ನುಡಿದಡೆ=ಮಾತನಾಡಿದರೆ/ಹೇಳಿದರೆ; ಏನು=ಯಾವುದು/ಯಾವ ಪ್ರಯೋಜನ;

ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾರಚನೆಗಳಿಂದ ಮಾತಿನ ಮಾಲೆಯ ಎಷ್ಟು ನುಡಿದಡೇನು=ನಿತ್ಯ ಜೀವನದ ವ್ಯವಹಾರಗಳಲ್ಲಿ ಜನರಿಗೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಯು ಕವಿಗಳು ತಮ್ಮ ಹೊತ್ತಿಗೆಗಳಲ್ಲಿ ಹೇಳಿರುವ ನುಡಿಗಳನ್ನು ಚೆನ್ನಾಗಿ ಕಲಿತುಕೊಂಡು, ಸತ್ಯ/ನೀತಿ/ನ್ಯಾಯದ ಸಂಗತಿಗಳಿಂದ ಕೂಡಿದ ಆದರ್ಶದ ಪ್ರಸಂಗಗಳನ್ನು/ಸಂಗತಿಗಳನ್ನು ಕೇಳುಗರ ಮನಸೆಳೆಯುವಂತೆ ಬಣ್ಣಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಹೇಳುತ್ತಿರುವ ವ್ಯಕ್ತಿಯು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳದಿರುವ ಆದರ್ಶದ ಮಾತು ಜನರನ್ನು ವಂಚಿಸುವ ಒಂದು ಹತಾರವಾಗಿ ಮಾತ್ರ ಬಳಕೆಯಾಗುತ್ತದೆ;

ಹೆಂಡದ+ಅಂತೆ; ಹೆಂಡ=ಮಾದಕ ಪಾನೀಯ/ಅಮಲೇರಿಸುವ ಪಾನೀಯ; ಅಂತೆ=ಹಾಗೆ/ಆ ರೀತಿ;

ಮೃತ+ಘಟದ+ಅಂತೆ; ಮೃತ=ಸಾವನ್ನಪ್ಪಿರುವ/ಮರಣ ಹೊಂದಿದ; ಘಟ=ದೇಹ/ಶರೀರ; ಮೃತಘಟ=ಹೆಣ;

ಶಿಥಿಲ+ಫಳದ+ಅಂತೆ; ಶಿಥಿಲ=ಹಾಳಾದ/ಕೊಳೆತು ನಾರುತ್ತಿರುವ; ಫಳ/ಫಲ=ಹಣ್ಣು; ಶಿಥಿಲಫಳ=ಹೆಚ್ಚು ಕಾಲ ಇಟ್ಟಿದ್ದರಿಂದ ಕೊಳೆತು ನಾರುತ್ತಿರುವ ಹಣ್ಣು; ಅದು+ಆರಿಗೆ; ಅದು=ಈ ರೀತಿ ಹಾಳಾಗಿರುವ ವಸ್ತು; ಆರು=ಯಾರು/ಯಾವ ವ್ಯಕ್ತಿ; ಆರಿಗೆ=ಯಾರಿಗೆ/ಯಾವ ವ್ಯಕ್ತಿಗೆ; ಯೋಗ್ಯ=ಹಿತವಾದುದು.

ಹೆಂಡದಂತೆ ಮೃತಘಟದಂತೆ ಶಿಥಿಲಫಲದಂತೆ ಅದಾರಿಗೆ ಯೋಗ್ಯ= ಕುಡಿದಾಗ ಅಮಲು ಏರಿ ವ್ಯಕ್ತಿಯು ತನ್ನ ಮಯ್ ಮನದ ಮೇಲಣ ಹಿಡಿತವನ್ನು ಕಳೆದುಕೊಂಡು ಕೆಟ್ಟ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಕಾರಣವಾಗುವ ಹೆಂಡ... ಉಸಿರಿಲ್ಲದೆ ಚಲನವಲನಗಳನ್ನು ಕಳೆದುಕೊಂಡು ಬಿದ್ದಿರುವ ಹೆಣ... ಕೊಳೆತು ನಾರುತ್ತ ತಿನ್ನುವುದಕ್ಕೆ ಆಗದಿರುವ ಹಣ್ಣು – ಇವು ಹೇಗೆ ಯಾರೊಬ್ಬರಿಗೂ ಹಿತವನ್ನುಂಟುಮಾಡುವುದಿಲ್ಲವೋ ಅಂತೆಯೇ ನಯವಂಚಕನಾದ/ನಂಬಿಕೆ ದ್ರೋಹಿಯಾದ/ಕೇಡಿಗತನವುಳ್ಳ ವ್ಯಕ್ತಿಯು ಆಡುವ ಆದರ್ಶದ ನುಡಿಗಳು ಸಹಮಾನವರಿಗಾಗಲಿ ಇಲ್ಲವೇ ಸಮಾಜಕ್ಕಾಗಲಿ ಬೇಕಾಗಿಲ್ಲ. ಏಕೆಂದರೆ ಅಂತಹ ಮಾತುಗಳ ಹಿಂದೆ ಜನರಿಗೆ ಕೇಡನ್ನು ಬಗೆದು, ಆಸ್ತಿಪಾಸ್ತಿ/ಒಡವೆವಸ್ತು/ ಹಣಕಾಸು/ಗದ್ದುಗೆಯನ್ನು ಪಡೆಯಬೇಕೆಂಬ ಕುತಂತ್ರದ ಕೆಟ್ಟ ಉದ್ದೇಶವಿರುತ್ತದೆ:

ಸಂಗ=ಕೂಡಲಸಂಗಮದ ನೆಲೆಯಲ್ಲಿರುವ ಲಿಂಗದ ಹೆಸರು/ಶಿವ; ಸಂಗನ ಬಸವಣ್ಣ=ಕೂಡಲಸಂಗನ ನೆಲೆಯಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಂಡ ಶಿವಶರಣ ಬಸವಣ್ಣ; ಸಾಕ್ಷಿ+ಆಗಿ; ಸಾಕ್ಷಿ=ಕಂಡಿದ್ದನ್ನು ಕಂಡಹಾಗೆಯೇ ಹೇಳುವುದು; ಬ್ರಹ್ಮೇಶ್ವರಲಿಂಗ=ಶಿವ/ ಬಾಹೂರ ಬೊಮ್ಮಣ್ಣನ ವಚನಗಳ ಅಂಕಿತನಾಮ; ಅವರ್+ಅಲ್ಲಿ; ಅವರು=ನಂಬಿಕೆದ್ರೋಹಿಗಳಾದವರು; ನಿಲ್ಲನ್+ಆಗಿ; ನಿಲ್ಲು=ನೆಲಸು /ತಂಗು/ಉಳಿದುಕೊಳ್ಳು;

ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವು ಅವರಲ್ಲಿ ನಿಲ್ಲನಾಗಿ= ನಯವಂಚನೆಯ ನುಡಿಗಳಿಂದ ಜನರನ್ನು ಮರುಳುಗೊಳಿಸಿ ಕೇಡನ್ನು ಬಗೆಯುವ ವ್ಯಕ್ತಿಗಳನ್ನು ದೇವರು ಮೆಚ್ಚುವುದಿಲ್ಲ ಎಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತವೆ. ಏಕೆಂದರೆ ಶಿವಶರಣಶರಣೆಯರ ಪಾಲಿಗೆ ವ್ಯಕ್ತಿಯ ಒಳ್ಳೆಯ ನಡೆನುಡಿಗಳೇ ದೇವರಾಗಿದ್ದವು.)

❖

34. ಮಡಿವಾಳ ಮಾಚಿದೇವರು

ಊರು: ಹುಟ್ಟಿದ್ದು ದೇವರ ಹಿಪ್ಪರಗಿ, ಬಿಜಾಪುರ(ಜಿಲ್ಲೆ).
ಅನಂತರ ಬಸವಣ್ಣನವರು ಇದ್ದ ಕಲ್ಯಾಣನಗರಕ್ಕೆ ಬಂದು ನೆಲಸುತ್ತಾರೆ

ಕಸುಬು: ಬಟ್ಟೆಗಳ ಕೊಳೆಯನ್ನು ತೆಗೆದು ಮಡಿಮಾಡುವುದು..

ದೊರೆತಿರುವ ವಚನಗಳು: 339

ವಚನಗಳ ಅಂಕಿತನಾಮ: ಕಲಿದೇವರದೇವ.

148. ಆಶಾಪಾಶವ ಬಿಟ್ಟಡೇನಯ್ಯಾ
ರೋಷಪಾಶವ ಬಿಡದನ್ನಕ್ಕರ
ರೋಷಪಾಶವ ಬಿಟ್ಟಡೇನಯ್ಯಾ
ಮಾಯಾಪಾಶವ ಬಿಡದನ್ನಕ್ಕರ
ಇಂತೀ ತ್ರಿವಿಧಪಾಶವ ಹರಿದು
ನಿಜನಿಂದ ಲಿಂಗೈಕ್ಯರ ತೋರಾ ಕಲಿದೇವರದೇವಾ.

ವ್ಯಕ್ತಿಯು ತನ್ನ ಮನದಲ್ಲಿ ಮೂಡುವ ಆಸೆ/ಕೋಪ/ಮೋಹದ ಒಳಮಿಡಿತಗಳೆಲ್ಲವನ್ನೂ ಒಟ್ಟಾಗಿ ಹತೋಟಿಯಲ್ಲಿಟ್ಟುಕೊಂಡಾಗ ಮಾತ್ರ, ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ರೂಪಿಸಿಕೊಳ್ಳಲು ಆಗುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಆಶಾ=ಇಚ್ಚಿಸಿದ್ದನ್ನು ಪಡೆಯಬೇಕೆಂಬ ಹಂಬಲ; ಪಾಶ=ಹಗ್ಗ/ಬಲೆ/ ಪ್ರಾಣಿಗಳನ್ನು ಮತ್ತು ಹಕ್ಕಿಗಳನ್ನು ಹಿಡಿಯಲು ನೂಲಿನಿಂದ ಹೆಣೆದು ಮಾಡಿರುವ ವಸ್ತು; ಆಶಾಪಾಶ=ಆಶೆಯೆಂಬ ಬಲೆ.

ವ್ಯಕ್ತಿಯ ಮನದಲ್ಲಿ ಮೂಡುವ ಆಸೆಗಳಲ್ಲಿ 'ಒಳ್ಳೆಯ ಆಸೆ' ಮತ್ತು 'ಕೆಟ್ಟ ಆಸೆ' ಗಳೆಂಬ ಎರಡು ಬಗೆಗಳಿವೆ. 'ಒಳ್ಳೆಯ ಆಸೆ' ಎಂಬುದು ವ್ಯಕ್ತಿಗೆ ಒಲವು ನಲಿವನ್ನು ತಂದುಕೊಡುವುದರ ಜತೆಗೆ ಇತರರಿಗೂ ಒಳಿತನ್ನು ಉಂಟುಮಾಡುವಂತೆ ಇರುತ್ತದೆ.

'ಕೆಟ್ಟ ಆಸೆ' ಎಂಬುದು ವ್ಯಕ್ತಿಯ ಮನದ ಹಂಬಲವನ್ನು ಈಡೇರಿಸಿದರೂ, ಅದರಿಂದ ಇತರರಿಗೆ ಕೇಡು/ಹಾನಿ/ನೋವು ತಟ್ಟುತ್ತದೆ. ಆದ್ದರಿಂದ ವ್ಯಕ್ತಿಯು ಕೆಟ್ಟ ಆಸೆಯ ಬಲೆಗೆ ಬೀಳಬಾರದು;

ಬಿಟ್ಟಡೆ+ಏನ್+ ಅಯ್ಯಾ; ಬಿಡು=ತೊರೆ/ತ್ಯಜಿಸು/ಕಳಚು; ಬಿಟ್ಟಡೆ=ಬಿಟ್ಟರೆ/ ತೊರೆದರೆ/ತ್ಯಜಿಸದರೆ; ಏನ್=ಯಾವುದು; ಏನಯ್ಯಾ=ಪ್ರಯೋಜನವೇನು/ ಪರಿಣಾಮವೇನು; ರೋಷ=ಕೋಪ/ಮುನಿಸು/ಆಕ್ರೋಶ; ಬಿಡದ+ಅನ್ನಕ್ಕರ; ಬಿಡದ= ತೊರೆಯದ; ಅನ್ನಕ್ಕರ=ಅಲ್ಲಿಯವರೆಗೆ/ಅಲ್ಲಿಯ ತನಕ;

ಆಶಾಪಾಶವ ಬಿಟ್ಟಡೇನಯ್ಯಾ ರೋಷಪಾಶವ ಬಿಡದನ್ನಕ್ಕರ=ವ್ಯಕ್ತಿಯು ಕೆಟ್ಟ ಆಸೆಗಳನ್ನು ಬಿಡುವುದರ ಜತೆಗೆ, ಮನದಲ್ಲಿ ಕೆರಳುವ ಕೋಪತಾಪದ ನಡೆನುಡಿ ಗಳನ್ನು ಹತ್ತಿಕ್ಕಿಕೊಂಡು ಬಾಳಬೇಕು. ಕೆಟ್ಟ ಆಸೆಗಳ ಜತೆಗೆ ಕೆಟ್ಟ ಕೋಪವನ್ನು ಬಿಡದಿದ್ದರೆ ಜೀವನದಲ್ಲಿ ಒಳಿತನ್ನು ಪಡೆಯಲಾಗುವುದಿಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.

ಮಾಯಾ=ವ್ಯಕ್ತಿಯ ಮಯ್-ಮನದಲ್ಲಿ ಆಸೆಯನ್ನು ಕೆರಳಿಸಿ ತನ್ನತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿಗಳು; ಮಾಯಾಪಾಶ=ವ್ಯಕ್ತಿಯು ತಾನು ಪಡೆಯಲು ಹಂಬಲಿಸುತ್ತಿರುವ ವಸ್ತು/ಜೀವಿ/ವ್ಯಕ್ತಿಯನ್ನು ತನ್ನದನ್ನಾಗಿಸಿಕೊಳ್ಳಲು ಹೆಣಗುತ್ತಿರುವುದು;

ರೋಷಪಾಶವ ಬಿಟ್ಟಡೇನಯ್ಯಾ ಮಾಯಾಪಾಶವ ಬಿಡದನ್ನಕ್ಕರ=ವ್ಯಕ್ತಿಯು ತನ್ನನ್ನು ತೀವ್ರವಾಗಿ ಕಾಡುತ್ತಿರುವ ವಸ್ತು/ಜೀವಿ/ವ್ಯಕ್ತಿಗಳನ್ನು ಮನಸ್ಸಿನಿಂದ ಹೊರಹಾಕದೆ, ಕೇವಲ ಕೋಪವನ್ನು ತ್ಯಜಿಸಿದ ಮಾತ್ರದಿಂದಲೇ ಒಳಿತಿನ ನಡೆನುಡಿಗಳನ್ನು ರೂಪಿಸಿಕೊಳ್ಳಲು ಆಗುವುದಿಲ್ಲ;

ಇಂತು+ಈ; ಇಂತು=ಈ ರೀತಿ/ಬಗೆ; ತ್ರಿ=ಮೂರು; ವಿಧ=ಬಗೆ/ರೀತಿ; ಈ ತ್ರಿವಿಧ ಪಾಶ=1) ಕೆಟ್ಟ ಆಸೆ. 2) ಕೋಪದ ನಡೆನುಡಿ. 3)ವಸ್ತು/ಜೀವಿ/ವ್ಯಕ್ತಿಗಳ ಬಗೆಗಿನ ಮೋಹ; ಹರಿ=ಕೀಳು/ಕತ್ತರಿಸು; ನಿಜ=ದಿಟ/ವಾಸ್ತವ/ಸತ್ಯ; ನಿಜನಿಂದ= ದಿಟದ/ಸತ್ಯದ ನಡೆನುಡಿಗಳಿಂದ ಬಾಳುತ್ತಿರುವುದು; ಲಿಂಗ=ಶಿವ/ದೇವರು; ಐಕ್ಯ=ಒಂದಾಗು/ಕೂಡಿಕೊಳ್ಳುವುದು; ಲಿಂಗೈಕ್ಯರು=ಒಳ್ಳೆಯ ನಡೆನುಡಿಗಳಿಂದ ಶಿವನನ್ನು ಪೂಜಿಸುತ್ತಿರುವವರು; ತೋರು=ಕಾಣುವಂತೆ ಮಾಡು; ಕಲಿದೇವರ ದೇವಾ=ಶಿವ/ಈಶ್ವರ/ಮಡಿವಾಳ ಮಾಚಿದೇವನ ವಚನಗಳ ಅಂಕಿತನಾಮ;

ಇಂತೀ ತ್ರಿವಿಧಪಾಶವ ಹರಿದು ನಿಜನಿಂದ ಲಿಂಗೈಕ್ಯರ ತೋರಾ=ತಮ್ಮ ನಿಜ ಜೀವನದಲ್ಲಿ ಕೆಟ್ಟ ಆಸೆಗಳನ್ನು ತೊರೆದು... ಕೋಪತಾಪಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು... ಮನದಲ್ಲಿ ಮೂಡುವ ಮೋಹದ ಒಳಮಿಡಿತಗಳನ್ನು ತೊರೆದು ಬಾಳುತ್ತಿರುವ ಗುಣವಂತರನ್ನು ನನಗೆ ತೋರಿಸು ಎಂದು ವಚನಕಾರನು ದೇವರಲ್ಲಿ ಮೊರೆಯಿಡುತ್ತಿದ್ದಾನೆ.)

❖

35. ಮಧುವಯ್ಯ

ದೊರೆತಿರುವ ವಚನಗಳು: 102

ವಚನಗಳ ಅಂಕಿತನಾಮ: ಅರ್ಕೇಶ್ವರಲಿಂಗ

149. ತನು ನಿರ್ವಾಣ ಮನ ಸಂಸಾರ
ಮಾತು ಬ್ರಹ್ಮ ನೀತಿ ಅಧಮ
ಅದೇತರ ಅರಿವು
ಘಾತಕನ ಕೈಯ ಕತ್ತಿಯಂತೆ ಇದು ನಿಹಿತವಲ್ಲ
ಅರ್ಕೇಶ್ವರಲಿಂಗವನರಿವುದಕ್ಕೆ.

ಬಹಿರಂಗದಲ್ಲಿ ಜನರ ಕಣ್ಣಿಗೆ ವಿರಕ್ತನಂತೆ ಕಾಣಿಸಿಕೊಳ್ಳುತ್ತ, ಅಂತರಂಗದ ಮನದಲ್ಲಿ ಕೆಟ್ಟ ಕಾಮನೆಗಳಿಂದ ಕೂಡಿರುವ ವ್ಯಕ್ತಿಯ ಕಪಟತನದ ನಡೆನುಡಿಯನ್ನು ಈ ವಚನದಲ್ಲಿ ಟೀಕಿಸಲಾಗಿದೆ.

ವಿರಕ್ತ=ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ತನ್ನ ನಡೆನುಡಿಯಲ್ಲಿ ಅಳವಡಿಸಿಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು;

ತನು=ದೇಹ/ಶರೀರ; ನಿರ್ವಾಣ=ಬೆತ್ತಲೆ/ಮಯ್ ಮೇಲೆ ಯಾವುದೇ ಬಗೆಯ ಉಡುಗೆ ತೊಡುಗೆಯಿಲ್ಲದಿರುವುದು;

ತನು ನಿರ್ವಾಣ=ಬೆತ್ತಲೆಯಾಗಿರುವುದು. ಇದು ಒಂದು ರೂಪಕವಾಗಿ ಬಳಕೆಗೊಂಡಿದೆ. ವ್ಯಕ್ತಿಯು ತನ್ನ ದೇಹದ ಅಂದಚೆಂದದ ಬಗ್ಗೆ ಯಾವುದೇ ಮೋಹವಿಲ್ಲದಿರುವುದು;

ಮನ=ಮನಸ್ಸು; ಸಂಸಾರ=ಲೋಕದ ಜೀವನ/ಬದುಕು;

ಮನ ಸಂಸಾರ=ಇದೊಂದು ರೂಪಕವಾಗಿ ಬಳಕೆಯಾಗಿದೆ. ಮನಸ್ಸಿನಲ್ಲಿ ಬಹು ಬಗೆಯ ಬಯಕೆಗಳು ತುಂಬಿಕೊಂಡು, ಅವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹಂಬಲಿಸುತ್ತಿರುವುದು;

ತನು ನಿರ್ವಾಣ... ಮನ ಸಂಸಾರ=ಬಹಿರಂಗದಲ್ಲಿ ಸಂನ್ಯಾಸಿ. ಅಂತರಂಗದಲ್ಲಿ ಕಾಮಿ;

ಬ್ರಹ್ಮ=ದೇವರು/ವೇದಾಂತದ ವಿಚಾರ/ಸತ್ಯ ನೀತಿ ನ್ಯಾಯದ ಸಂಗತಿ;

ಮಾತು ಬ್ರಹ್ಮ=ವ್ಯಕ್ತಿಯು ಆಡುವ ಮಾತೆಲ್ಲವೂ ಸತ್ಯ ನೀತಿ ನ್ಯಾಯದ ಸಂಗತಿಗಳಿಂದ ಕೂಡಿರುವುದು;

ನೀತಿ=ನಡೆನುಡಿ; ಅಧಮ=ಕೀಳು/ಕೆಳಮಟ್ಟದ್ದು; ನೀತಿ ಅಧಮ=ವ್ಯಕ್ತಿಯ ನಡೆನುಡಿಯು ತುಂಬಾ ಕೀಳುಮಟ್ಟದಲ್ಲಿರುವುದು;

ಮಾತು ಬ್ರಹ್ಮ... ನೀತಿ ಅಧಮ=ಆಡುವುದು ವೇದಾಂತ; ಮಾಡುವುದು ಕೀಳು ಕೆಲಸ;

ಅದು+ಏತರ; ಏತರ=ಯಾವ ಬಗೆಯ/ಯಾವ ರೀತಿಯ; ಅರಿವು=ತಿಳುವಳಿಕೆ;

ಅದೇತರ ಅರಿವು=ಕಾಣುವುದೊಂದು ರೀತಿ–ಬಾಳುವುದೊಂದು ರೀತಿ; ಆಡುವುದೊಂದು ರೀತಿ–ಮಾಡುವುದೊಂದು ರೀತಿ. ಇಂತಹ ಇಬ್ಬಗೆಯ ನಡೆನುಡಿಯನ್ನು ಅರಿವು ಎಂದು ಕರೆಯಲಾಗದು;

ಘಾತಕ=ಕೊಲೆಗಾರ; ನಿಹಿತ+ಅಲ್ಲ; ನಿಹಿತ=ಸರಿಯಾಗಿ ರೂಪುಗೊಂಡಿರುವುದು; ನಿಹಿತವಲ್ಲ=ಸರಿಯಾದುದಲ್ಲ;

ಘಾತಕನ ಕೈಯ ಕತ್ತಿಯಂತೆ ಇದು ನಿಹಿತವಲ್ಲ=ಕೊಲೆಗಾರನ ಕಯ್ಯಲ್ಲಿರುವ ಕತ್ತಿಯು ಹೇಗೆ ಜೀವಿಗಳನ್ನು ಕೊಲ್ಲುತ್ತದೆಯೋ ಅಂತೆಯೇ ಬಹಿರಂಗದಲ್ಲಿ ಒಳ್ಳೆಯವರಂತೆ ನಟಿಸುತ್ತ, ಅಂತರಂಗದಲ್ಲಿ ಕೆಟ್ಟ ನಡೆನುಡಿಯಿಂದ ಬಾಳುತ್ತಿರುವ ವ್ಯಕ್ತಿಗಳು ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಾರೆ.

ಆದ್ದರಿಂದ ಒಳಗೊಂದು ಹೊರಗೊಂದು ಬಗೆಯ ಕಪಟತನದ ನಡೆನುಡಿಗಳು ಒಳ್ಳೆಯದಲ್ಲ;

ಅರ್ಕೇಶ್ವರಲಿಂಗ+ಅನ್+ಅರಿವುದಕ್ಕೆ; ಅರ್ಕೇಶ್ವರಲಿಂಗ=ಶಿವನ ಮತ್ತೊಂದು ಹೆಸರು/ಮಧುವಯ್ಯನವರ ವಚನಗಳ ಅಂಕಿತನಾಮ; ಅನ್=ಅನ್ನು; ಅರಿವುದಕ್ಕೆ=ತಿಳಿಯುವುದಕ್ಕೆ;

"ಅರ್ಕೇಶ್ವರಲಿಂಗವನ್ನು ಅರಿಯುವುದು" ಎಂದರೆ ವ್ಯಕ್ತಿಯ ಒಳ್ಳೆಯ ನಡೆನುಡಿಗೆ ಶಿವನೇ ಮಾರ್ಗದಾತನೆಂದು ನಂಬಿ ಬಾಳುವುದು;

ಅರ್ಕೇಶ್ವರಲಿಂಗವನರಿವುದಕ್ಕೆ ಇದು ನಿಹಿತವಲ್ಲ=ಶಿವನನ್ನು ಅರಿತು ಬಾಳಬೇಕೆಂದರೆ ವ್ಯಕ್ತಿಯು ಕಪಟತನದ ನಡೆನುಡಿಯಿಂದ ಕೂಡಿರಬಾರದು;

❖

36. ಮುಕ್ತಾಯಕ್ಕ

ಊರು: ಲಕ್ಕುಂಡಿ
ದೊರೆತಿರುವ ವಚನಗಳು: 37
ಅಂಕಿತನಾಮ: ಅಜಗಣ್ಣ ತಂದೆ

150. ನುಡಿಯಲುಬಾರದು ಕೆಟ್ಟ ನುಡಿಗಳ
ನಡೆಯಲುಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು
ಹಿಡಿದ ವ್ರತ ಬಿಡದಿರಲು
ಅದೆ ಮಹಾ ಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ.

ವ್ಯಕ್ತಿಯು ತಾನು ಪಡೆದ ಅರಿವಿನಿಂದ ಕೆಟ್ಟ ನಡೆನುಡಿಗಳನ್ನು ತೊರೆದು, ಒಳ್ಳೆಯವನಾಗಿ ಬಾಳುವುದೇ ಎಲ್ಲಕ್ಕಿಂತಲೂ ದೊಡ್ಡದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಅರಿವು' ಎಂದರೆ "ಜೀವನದಲ್ಲಿ ವ್ಯಕ್ತಿಯು ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ವಾಸ್ತವ–ಯಾವುದು ಕಲ್ಪಿತ; ಯಾವುದನ್ನು ಮಾಡಬೇಕು–ಯಾವುದನ್ನು ಮಾಡಬಾರದು" ಎಂಬ ತಿಳುವಳಿಕೆ. ತನಗೆ, ತನ್ನ ಕುಟುಂಬಕ್ಕೆ

ಒಲವು ನಲಿವು ನೆಮ್ಮದಿಯನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ತಿಳುವಳಿಕೆ;

ನುಡಿ=ಮಾತು; ನುಡಿಯಲುಬಾರದು=ಮಾತನಾಡಬಾರದು; ಕೆಟ್ಟ=ಕೇಡುಕನ್ನು ಮಾಡುವ/ಒಳ್ಳೆಯದಲ್ಲದ; ಕೆಟ್ಟನುಡಿ=ಕೆಟ್ಟ ಮಾತು;

ನುಡಿಯಲುಬಾರದು ಕೆಟ್ಟ ನುಡಿಗಳ=ಸಹಮಾನವರ ಮನಸ್ಸಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ಕೆಟ್ಟ ಮಾತುಗಳನ್ನು ಆಡಬಾರದು / ಜಾತಿ ಮತ ದೇವರ ಹೆಸರಿನಲ್ಲಿ ಸುಳ್ಳುಸುದ್ದಿಗಳನ್ನು ಹಬ್ಬಿಸಿ ಜನಮನದಲ್ಲಿ ಪರಸ್ಪರ ಅನುಮಾನ, ಅಸೂಯೆ ಮತ್ತು ಹಗೆತನವನ್ನು ಉಂಟುಮಾಡುವಂತಹ ಇಲ್ಲಸಲ್ಲದ ನುಡಿಗಳನ್ನಾಡಬಾರದು/ಇತರರ ವ್ಯಕ್ತಿತ್ವವನ್ನು ಗಾಸಿಗೊಳಿಸುವಂತಹ ಕೆಟ್ಟ ನುಡಿಗಳನ್ನಾಡಬಾರದು;

ನಡೆ=ನಡತೆ/ನಡವಳಿಕೆ; ಕೆಟ್ಟ ನಡೆ=ಕೆಟ್ಟ ನಡವಳಿಕೆ;

ನಡೆಯಲುಬಾರದು ಕೆಟ್ಟ ನಡೆಗಳ=ಸಹಮಾನವರ ಬದುಕಿಗೆ ಕೇಡನ್ನು ಬಗೆಯುವ ಮತ್ತು ಸಾವುನೋವನ್ನುಂಟುಮಾಡುವ ಕೆಲಸಗಳನ್ನು ಮಾಡ ಬಾರದು/ಜನಸಮುದಾಯಕ್ಕೆ ಅತ್ಯಗತ್ಯವಾದ "ಅನ್ನ–ಬಟ್ಟೆ–ವಸತಿ–ವಿದ್ಯೆ–ಉದ್ಯೋಗ–ಆರೋಗ್ಯ" ಎಲ್ಲರಿಗೂ ದೊರೆಯದಂತೆ ಅಡೆತಡೆಗಳನ್ನು ಒಡ್ಡುವ ಕೆಟ್ಟ ಕೆಲಸಗಳನ್ನು ಮಾಡಬಾರದು;

ನುಡಿದಡೆ+ಏನು; ನುಡಿದಡೆ=ಮಾತನಾಡಿದರೆ; ಏನು=ಯಾವುದು; ನುಡಿಯದೆ+ಇರ್ದಡೆ+ಏನು; ಇರ್ದಡೆ=ಇದ್ದರೆ; ನುಡಿಯದಿರ್ದಡೆ= ಮಾತನಾಡದೆ ಸುಮ್ಮನಿದ್ದರೆ;

ನುಡಿದಡೇನು ನುಡಿಯದಿರ್ದಡೇನು= ಮಾತನಾಡಿದರೇನು... ಮಾತನಾಡ ದಿದ್ದರೇನು. ಅಂದರೆ ವ್ಯಕ್ತಿಯು ಆಡುವ ಮಾತುಗಳಾಗಲಿ ಇಲ್ಲವೇ ಸುಮ್ಮನಿರುವು ದಾಗಲಿ ದೊಡ್ಡ ಸಂಗತಿಯಲ್ಲ. ನಿತ್ಯ ಜೀವನದಲ್ಲಿ ವ್ಯಕ್ತಿಯು ಮಾಡುವ ದುಡಿಮೆ ಮತ್ತು ಅವನು ಇತರರೊಂದಿಗೆ ಪ್ರೀತಿ, ಕರುಣೆ, ಗೆಳೆತನದಿಂದ ನಡೆದುಕೊಳ್ಳುವ ರೀತಿಯು ಒಳ್ಳೆಯತನದಿಂದ ಕೂಡಿರಬೇಕು;

ಹಿಡಿ=ತೊಡಗು; ವ್ರತ=ದೇವರನ್ನು ಪೂಜಿಸುವಾಗ ಹಿಂದಿನಿಂದಲೂ ಬಂದ ಸಂಪ್ರದಾಯದ ಕ್ರಿಯೆಗಳಾದ ಉಪವಾಸ, ದೇವರ ನಾಮ ಸ್ಮರಣೆ, ದಿಂಡುರುಳುವುದು, ನಿದ್ರೆ ಮಾಡದೆ ಇರುಳೆಲ್ಲಾ ಎಚ್ಚರದಿಂದಿರುವುದು ಮತ್ತು

ಇನ್ನಿತರ ಆಚರಣೆಗಳು; ಬಿಡದೆ+ಇರಲು; ಬಿಡದಿರಲು=ನಿಲ್ಲಿಸದೆ ನಿರಂತರವಾಗಿ ಮುಂದುವರೆಸಿಕೊಂಡು ಬರುವುದು;

ಹಿಡಿದ ವ್ರತ ಬಿಡದಿರಲು=ವ್ಯಕ್ತಿಯು ಕೆಟ್ಟ ನುಡಿಯನ್ನಾಡಬಾರದು ಮತ್ತು ಕೆಟ್ಟ ಕೆಲಸವನ್ನು ಮಾಡಬಾರದು ಎಂಬ ನಿಲುವನ್ನು ತಳೆದು, ಜೀವನದ ಉದ್ದಕ್ಕೂ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಬಾಳುವುದನ್ನೇ ವ್ರತದಂತೆ ಆಚರಿಸುತ್ತಿರುವುದು; ಶಿವಶರಣಶರಣೆಯರು ನಿತ್ಯ ಜೀವನದ ಒಳ್ಳೆಯ ನಡೆನುಡಿಗಳಲ್ಲಿ ದೇವರನ್ನು ಕಾಣುತ್ತಿದ್ದರೆ ಹೊರತು, ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿದ ವಿಗ್ರಹರೂಪದಲ್ಲಿ ಕಾಣುತ್ತಿರಲಿಲ್ಲ. ಆದ್ದರಿಂದಲೇ ಅವರ ಪಾಲಿಗೆ ವ್ರತವೆಂದರೆ ದೇವರನ್ನು ಪೂಜಿಸುವಾಗ ಮಾಡುವ ಆಚರಣೆಗಳಾಗಿರಲಿಲ್ಲ. ಒಳ್ಳೆಯ ನಡೆನುಡಿಗಳೇ ವ್ರತವಾಗಿದ್ದವು;

ಅದೆ=ಅಂತಹ ಒಳ್ಳೆಯ ನಡೆನುಡಿಗಳೇ; ಮಹಾ=ದೊಡ್ಡದು; ಜ್ಞಾನದ+ಆಚರಣೆ; ಜ್ಞಾನ=ಅರಿವು; ಆಚರಣೆ=ಬಹುಬಗೆಯ ಕೆಲಸಗಳನ್ನು ಮಾಡುವುದು; ಜ್ಞಾನದಾಚರಣೆ=ವ್ಯಕ್ತಿಯು ತಾನು ಪಡೆದ ಅರಿವನ್ನು ತನ್ನ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳುವುದು; ಎಂಬೆನು=ಎನ್ನುತ್ತೇನೆ;

ಅದೆ ಮಹಾ ಜ್ಞಾನದಾಚರಣೆ=ಶಿವಶರಣಶರಣೆಯರ ಪಾಲಿಗೆ ಅರಿವು ಮತ್ತು ಆಚರಣೆಗಳೆರಡು ಒಂದಕ್ಕೊಂದು ಎಡೆಬಿಡದೆ ಜತೆಗೂಡಿರುವ ಸಂಗತಿಗಳಾಗಿದ್ದವು. ಕೇವಲ ಅರಿವೇ ದೊಡ್ಡದಲ್ಲ. ಅರಿವು ಎಂಬುದು ನಿತ್ಯ ಜೀವನದಲ್ಲಿ ಆಚರಣೆಗೆ ಬಂದಾಗಲೇ ಅದಕ್ಕೆ ಬೆಲೆ ಬರುತ್ತದೆ ಎಂಬ ನಿಲುವನ್ನು ತಳೆದು ಬಾಳುತ್ತಿದ್ದರು;

ಅಜಗಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ ಮತ್ತು ವಚನಕಾರ. ಈತನು ಮುಕ್ತಾಯಕ್ಕನ ಅಣ್ಣ; ತಂದೆ=ಹಿರಿಯವನು;

ಅಜಗಣ್ಣ ತಂದೆ=ಮುಕ್ತಾಯಕ್ಕನವರು ತಮ್ಮ ವಚನಗಳಲ್ಲಿ ತಮ್ಮ ಅಣ್ಣನ ಹೆಸರನ್ನು ಅಂಕಿತನಾಮವನ್ನಾಗಿ ಬಳಸಿದ್ದಾರೆ.

❖

37. ಮೆರೆಮಿಂಡಯ್ಯ

151. ಅಸಿಯಾಗಲಿ ಕೃಷಿಯಾಗಲಿ
ವಾಚಕ ವಾಣಿಜ್ಯ ಮಸಿಯಾಗಲಿ
ಮಾಡುವಲ್ಲಿ ಹುಸಿಯಿಲ್ಲದಿರಬೇಕು
ಅದು ಅಸಮಾಕ್ಷನ ಬರವು
ಪಶುಪತಿಯ ಇರವು
ಐಘಟದೂರ ರಾಮೇಶ್ವರಲಿಂಗ ತಾನೆ.

ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಮಾಡುವ ದುಡಿಮೆಯು ಯಾವುದೇ ಆಗಿರಲಿ, ಅದು ಎಲ್ಲರಿಗೂ ಪ್ರಯೋಜನಕಾರಿಯಾಗಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಅಸಿ+ಆಗಲಿ; ಅಸಿ=ಕತ್ತಿ; ಕೃಷಿ+ಆಗಲಿ; ಕೃಷಿ=ಆರಂಬ/ಬೇಸಾಯ; ವಾಚಕ= ಲಿಪಿರೂಪದ ಹೊತ್ತಿಗೆಗಳನ್ನು ಓದುವವನು; ವಾಣಿಜ್ಯ=ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರ; ಮಸಿ+ಆಗಲಿ; ಮಸಿ=ಬರೆಯಲು ಬಳಸುವ ಕಪ್ಪು ಬಣ್ಣದ ದ್ರವರೂಪದ ವಸ್ತು/ಶಾಯಿ;

ಅಸಿಯಾಗಲಿ ಕೃಷಿಯಾಗಲಿ ವಾಚಕ ವಾಣಿಜ್ಯ ಮಸಿಯಾಗಲಿ=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ವ್ಯಕ್ತಿಯು ಮಾಡುವ ಕಾಯಕವು... ಅದು ರಣರಂಗದಲ್ಲಿ ಕತ್ತಿಯನ್ನು ಹಿಡಿದು ಮಾಡುವ ಹೋರಾಟವಾಗಿರಲಿ... ಭೂಮಿಯನ್ನು ಉತ್ತು ಬಿತ್ತು ಬೆಳೆ ತೆಗೆಯುವ ಬೇಸಾಯವಾಗಿರಲಿ... ಹೊತ್ತಿಗೆಯಲ್ಲಿನ ಲಿಪಿರೂಪದ ನುಡಿರಚನೆಯನ್ನು ಓದಿ ಇತರರಿಗೆ ಹೇಳುವುದಾಗಿರಲಿ...

ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ವ್ಯಾಪಾರವಾಗಿರಲಿ... ಮಸಿಯನ್ನು ಬಳಸಿ ಮಾಡುವ ಬರಹವಾಗಿರಲಿ;

ಮಾಡುವಲ್ಲಿ=ದುಡಿಮೆಯನ್ನು ಮಾಡುವ ನೆಲೆಯಲ್ಲಿ; ಹುಸಿ+ಇಲ್ಲದೆ+ ಇರಬೇಕು; ಹುಸಿ=ಪೊಳ್ಳು/ಉಪಯುಕ್ತವಲ್ಲದ್ದು; ಹುಸಿಯಿಲ್ಲದೆ=ಪೊಳ್ಳುತನ ವಿಲ್ಲದೆ ಅಂದರೆ ಪ್ರಯೋಜನಕ್ಕೆ ಬರುವ ರೀತಿಯಲ್ಲಿ/ಉಪಯೋಗವಾಗುವ ರೀತಿಯಲ್ಲಿ;

ಮಾಡುವಲ್ಲಿ ಹುಸಿಯಿಲ್ಲದಿರಬೇಕು=ವ್ಯಕ್ತಿಯು ಮಾಡುವ ದುಡಿಮೆಯು ಒಂದಲ್ಲ ಒಂದು ಬಗೆಯಲ್ಲಿ ಜನಸಮುದಾಯಕ್ಕೆ ಒಳಿತನ್ನುಂಟು ಮಾಡುವಂತೆ ಇರಬೇಕೆ ಹೊರತು ಕೆಡುಕನ್ನು ಮಾಡಬಾರದು/ಯಾವುದೇ ದುಡಿಮೆಯನ್ನು ಮಾಡಿದರೂ ವ್ಯಕ್ತಿಯು ಒಳ್ಳೆಯ ಉದ್ದೇಶವನ್ನು ಹೊಂದಿರಬೇಕು;

ಅಸಮ=ಸಮವಲ್ಲದಿರುವುದು; ಅಕ್ಷಿ=ಕಣ್ಣು; ಅಕ್ಷ=ಕಣ್ಣುಳ್ಳವನು; ಅಸಮಾಕ್ಷ= ದೇವರಾದ ಶಿವ; ಶಿವನಿಗೆ ಮೂರು ಕಣ್ಣುಗಳಿವೆ ಎಂಬ ಕಲ್ಪನೆಯು ಜನಮನದಲ್ಲಿದೆ. ಶಿವನ ಹಣೆಯಲ್ಲಿ ಮೂರನೆಯ ಕಣ್ಣು ಇರುವುದರಿಂದ ‘ ಅಸಮಾಕ್ಷ’ ಎಂಬ ಹೆಸರು ಬಂದಿದೆ.

ಬರವು=ಆಗಮನ; **ಅದು ಅಸಮಾಕ್ಷನ ಬರವು**=ಜನರು ಮಾಡುವ ದುಡಿಮೆ ಯಿಂದ ಜನಸಮುದಾಯದ ನಿತ್ಯ ಜೀವನಕ್ಕೆ ಅಗತ್ಯವಾದ “ಅನ್ನ–ಬಟ್ಟೆ–ವಸತಿ–ವಿದ್ಯೆ–ಆರೋಗ್ಯ” ದೊರೆಯುತ್ತದೆಯೋ ಅಂತಹ ಎಡೆಗೆ ಶಿವನು ಬರುತ್ತಾನೆ; ಪಶುಪತಿ=ಜಗತ್ತಿನ ಎಲ್ಲ ಜೀವಿಗಳ ಒಡೆಯನಾದ ಶಿವ; ಇರವು=ಇರುವಿಕೆ; ಪಶುಪತಿಯ ಇರವು=ಶಿವನು ನೆಲೆಸಿದ್ದಾನೆ;

ಅದು ಅಸಮಾಕ್ಷನ ಬರವು... ಪಶುಪತಿಯ ಇರವು=ಈ ನುಡಿಗಳು ರೂಪಕವಾಗಿ ಬಳಕೆಯಾಗಿವೆ. ಹನ್ನೆರಡನೆಯ ಶತಮಾನದ ಶಿವಶರಣ ಶರಣೆಯರು ದೇಗುಲದಲ್ಲಿರುವ ಕಲ್ಲು/ಮಣ್ಣು/ಮರ/ಲೋಹದ ವಿಗ್ರಹಗಳಲ್ಲಿ ಶಿವನನ್ನು ಕಾಣುತ್ತಿರಲಿಲ್ಲ. ವ್ಯಕ್ತಿಯು ತನಗೆ, ತನ್ನ ಕುಟುಂಬಕ್ಕೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತಿರುವ ದುಡಿಮೆಯ ನೆಲೆಗಳಲ್ಲಿ ಶಿವನನ್ನು ಕಾಣುತ್ತಿದ್ದರು;

ಐಘಟದೂರ ರಾಮೇಶ್ವರಲಿಂಗ=ಶಿವನಿಗೆ ಇದ್ದ ಮತ್ತೊಂದು ಹೆಸರು; ಮೆರೆಮಿಂಡಯ್ಯನವರು ಈ ಹೆಸರನ್ನು ತಮ್ಮ ವಚನಗಳ ಅಂಕಿತನಾಮವನ್ನಾಗಿ ಬಳಸಿದ್ದಾರೆ; ತಾನೆ=ಅವನೇ/ ಆ ಶಿವನೇ; ❖

38. ಮೋಳಿಗೆ ಮಾರಯ್ಯ

ಊರು: ಹುಟ್ಟಿದ್ದು ಕಾಶ್ಮೀರ. ಅನಂತರ ಬಸವಣ್ಣನವರು ಇದ್ದ ಕಲ್ಯಾಣ ನಗರದಲ್ಲಿ ಬಂದು ನೆಲೆಸಿದರು.

ಕಸುಬು: ಕಟ್ಟಿಗೆ/ಸವುದೆಯ ಹೊರೆಯನ್ನು ಹೊತ್ತು ಮಾರುವುದು. (ಮೋಳಿಗೆ=ಸವುದೆಯ ಕಟ್ಟು/ಒಣಗಿದ ಮರದ ಕೊಂಬೆರೆಂಬೆಗಳನ್ನು ಸೀಳಿದಾಗ ದೊರೆಯುವ ತುಂಡುಗಳ ಹೊರೆ.)

ದೊರೆತಿರುವ ವಚನಗಳು: 816

ವಚನಗಳ ಅಂಕಿತನಾಮ: ನಿಃಕಳಂಕ ಮಲ್ಲಿಕಾರ್ಜುನ

152. ಕದ್ದ ಕಳವ ಮರೆಸಿಕೊಂಡು ನಾ ಸಜ್ಜನನೆಂಬಂತೆ
ಇದ್ದ ಗುಣವ ನೋಡಿ ಹೊದ್ದಿ ಸೋದಿಸಲಾಗಿ
ಕದ್ದ ಕಳವು ಕೈಯಲ್ಲಿದ್ದ ಮತ್ತೆ ಸಜ್ಜನತನವುಂಟೆ
ಇಂತೀ ಸಜ್ಜನಗಳ್ಳರ ಕಂಡು ಹೊದ್ದದೆ ಹೋದ
ನಿಃಕಳಂಕ ಮಲ್ಲಿಕಾರ್ಜುನ.

ಜನಸಮುದಾಯದ ಸಂಪತ್ತನ್ನು ಲೂಟಿಮಾಡಿ ಸಿರಿವಂತರಾಗಿದ್ದರೂ, ತಮ್ಮನ್ನು ತಾವೇ 'ಒಳ್ಳೆಯವರು/ಗುಣವಂತರು/ಸತ್ಯವಂತರು' ಎಂದು ಹೇಳಿಕೊಂಡು ಮೆರೆಯುತ್ತಿರುವ ವ್ಯಕ್ತಿಗಳ ಲಜ್ಜೆಗೇಡಿತನದ ವರ್ತನೆಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಕಳ್+ದ್+ಅ=ಕಳ್ದ>ಕದ್ದ; ಕಳ್=ಅಪಹರಿಸು/ಲಪಟಾಯಿಸು/ದೋಚು/ ಎಗರಿಸು; ಕದ್ದ=ಅಪಹರಿಸಿದ/ದೋಚಿದ/ಲಪಟಾಯಿಸಿದ; ಕಳವ=ಕಳ್ಳತನ ಮಾಡಿದ ಒಡವೆ ವಸ್ತು/ಸಂಪತ್ತನ್ನು; ಮರೆಸು=ಇತರರ ಕಣ್ಣಿಗೆ ಕಾಣದಂತೆ/ ಅಡಗಿಸಿಡು; ಮರೆಸಿಕೊಂಡು=ಅಡಗಿಸಿಟ್ಟು ಕೊಂಡು/ಬಚ್ಚಿಟ್ಟುಕೊಂಡು:

ನಾ=ನಾನು; ಸಜ್ಜನನ್+ಎಂಬ+ಅಂತೆ; ಸಜ್ಜನ=ಒಳ್ಳೆಯ ನಡೆನುಡಿಗಳುಳ್ಳ ವ್ಯಕ್ತಿ; ಸಜ್ಜನನ್=ಒಳ್ಳೆಯವನು/ಗುಣವಂತ; ಎಂಬ=ಎನ್ನುವ/ಎಂದು ಹೇಳುವ; ಅಂತೆ=ಹಾಗೆ/ಆ ರೀತಿ/ ಆ ಬಗೆ;

ಕದ್ದ ಕಳವ ಮರೆಸಿಕೊಂಡು ನಾ ಸಜ್ಜನನೆಂಬಂತೆ=ಕದ್ದಿರುವ ಒಡವೆವಸ್ತು ಗಳನ್ನು ಅಡಗಿಸಿಟ್ಟುಕೊಂಡು, ತಾನೊಬ್ಬ ಒಳ್ಳೆಯ ನಡೆನುಡಿಯುಳ್ಳವನು ಎಂದು ಇತರರ ಮುಂದೆ ಹೇಳಿಕೊಳ್ಳುವ ವ್ಯಕ್ತಿಯು ಜನಸಮುದಾಯದ ಕಣ್ಣಿಗೆ ಮಣ್ಣೆರಚುವ ಪ್ರಯತ್ನದಲ್ಲಿ ತೊಡಗಿರುತ್ತಾನೆ;

ಇರ್+ದ್+ಅ=ಇರ್ದ > ಇದ್ದ; ಇದ್ದ=ಇರುವ; ಗುಣ=ವ್ಯಕ್ತಿಯ ನಡೆನುಡಿ ಯಲ್ಲಿನ ರೀತಿನೀತಿ; ನೋಡಿ=ಕಂಡು/ತಿಳಿದು; ಹೊದ್ದು=ಹತ್ತಿರಕ್ಕೆ ಹೋಗುವುದು/ ಸಮೀಪಿಸುವುದು; ಹೊದ್ದಿ=ಹತ್ತಿರಕ್ಕೆ ಹೋಗಿ; ಸೋದಿಸಲ್+ಆಗಿ; ಶೋಧ > ಸೋದ; ಶೋಧ=ಹುಡುಕುವುದು/ಕಂಡು ಹಿಡಿಯುವುದು;

ಇದ್ದ ಗುಣವ ನೋಡಿ ಹೊದ್ದಿ ಸೋದಿಸಲಾಗಿ=ತನ್ನನ್ನು ತಾನೇ ಸಜ್ಜನನೆಂದು ಹೇಳಿಕೊಳ್ಳುವ ವ್ಯಕ್ತಿಯ ಮಾತಿನ ದಿಟವನ್ನು ಇಲ್ಲವೇ ಸಟೆಯನ್ನು ತಿಳಿಯಲೆಂದು, ಬಳಿಸಾರಿ ಅವನು ತೊಟ್ಟಿದ್ದ ಬಟ್ಟೆಬರೆಗಳ ಒಳಗು ಹೊರಗನ್ನು ತಡಕಾಡಿ ನೋಡಿದಾಗ;

ಕದ್ದ ಕಳವು=ಕಳ್ಳತನ ಮಾಡಿದ್ದ ಒಡವೆವಸ್ತು; ಕೈ+ಅಲ್ಲಿ+ಇದ್ದ; ಕೈಯಲ್ಲಿದ್ದ= ಅವನಲ್ಲಿಯೇ ಇತ್ತು/ಅವನ ಬಳಿಯಲ್ಲೇ ಇತ್ತು;

ಮತ್ತೆ=ಮಾಡಿದ್ದ ಕಳ್ಳತನದ ವಸ್ತುವಿನ ಸಮೇತ ಸಿಕ್ಕಿಬಿದ್ದ ಮೇಲೆ; ಸಜ್ಜನತನ+ಉಂಟೆ; ಸಜ್ಜನತನ=ಒಳ್ಳೆಯತನ/ಒಳ್ಳೆಯ ವ್ಯಕ್ತಿತ್ವ; ಉಂಟೆ= ಇರುವುದೇ;

ಕದ್ದ ಕಳವು ಕೈಯಲ್ಲಿದ್ದ ಮೇಲೆ ಸಜ್ಜನತನವುಂಟೆ=ಕದ್ದ ಮಾಲು ಅವನ ಬಳಿಯಲ್ಲೇ ಸಿಕ್ಕಿದ ನಂತರವೂ ಅವನಲ್ಲಿ ಒಳ್ಳೆಯತನವನ್ನು ಕಾಣಲು ಆಗುತ್ತದೆಯೇ/ಅವನನ್ನು ಗುಣವಂತನೆಂದು ತಿಳಿಯಬಹುದೇ. ಅಂದರೆ ಆತ ಕಳ್ಳನೆಂಬುದು ದಿಟ;

ಇಂತು+ಈ; ಇಂತು=ಈ ರೀತಿಯಲ್ಲಿ/ಈ ಬಗೆಯಲ್ಲಿ; ಸಜ್ಜನ+ಕಳ್ಳರು; ಸಜ್ಜನಗಳ್ಳರು=ಜನರ ಮುಂದೆ ತಮ್ಮನ್ನು ತಾವೇ ಒಳ್ಳೆಯವರೆಂದು ಹೇಳಿಕೊಳ್ಳುತ್ತ, ನಿಜಜೀವನದಲ್ಲಿ ಜನಸಮುದಾಯದ ಸಂಪತ್ತನ್ನು ದೋಚುತ್ತಿರುವ ಕ್ರೂರಿಗಳು;

ಕಂಡು=ನೋಡಿ; ಹೊದ್ದದೆ=ಹತ್ತಿರಕ್ಕೆ ಬಾರದೆ; ಹೋದ=ಹೋದನು; ಕಳಂಕ=ಕುಂದು/ಕೊರತೆ/ತಪ್ಪು; ನಿಃಕಳಂಕ=ಯಾವುದೇ ಬಗೆಯ ತಪ್ಪು/ಕೊರತೆ/ ಕುಂದುಗಳು ಇಲ್ಲದವನು; ಮಲ್ಲಿಕಾರ್ಜುನಲಿಂಗ=ಶಿವ; ನಿಃಕಳಂಕ ಮಲ್ಲಿಕಾರ್ಜುನಲಿಂಗ=ಮೋಳಿಗೆ ಮಾರಯ್ಯನ ವಚನಗಳ ಅಂಕಿತನಾಮ;

ಇಂತೀ ಸಜ್ಜನಗಳ್ಳರ ಕಂಡು ಹೊದ್ದದೆ ಹೋದ ನಿಃಕಳಂಕ ಮಲ್ಲಿಕಾರ್ಜುನ ಲಿಂಗ=ಜನಸಮುದಾಯದ ಸಂಪತ್ತನ್ನು ದೋಚಿ, ಜನರಿಗೆ ಕೇಡನ್ನು ಬಗೆಯುವ ವ್ಯಕ್ತಿಗಳಿಂದ ದೇವರು ದೂರವಿರುತ್ತಾನೆ. ಜನಸಮುದಾಯಕ್ಕೆ ಒಳಿತನ್ನು ಮಾಡುವ ನಡೆನುಡಿಯುಳ್ಳವರಿಗೆ ಮಾತ್ರ ದೇವರು ಒಲಿಯುತ್ತಾನೆ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು ಎಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತವೆ.)

❖

153. ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ
ವೇದ ಶಾಸ್ತ್ರ ಪುರಾಣ ಆಗಮ ಶ್ರುತಿ ಸ್ಮೃತಿ ತತ್ವದಿಂದ
ಇದಿರಿಗೆ ಬೋಧಿಸಿ ಹೇಳುವ ಹಿರಿಯರೆಲ್ಲರೂ ಹಿರಿಯರಪ್ಪರೆ
ನುಡಿದಂತೆ ನಡೆದು ನಡೆದಂತೆ ನುಡಿದು
ನಡೆನುಡಿ ಸಿದ್ಧಾಂತವಾಗಿಯಲ್ಲದೆ ಅರುಹಿರಿಯರಾಗಬಾರದು
ಗೆಲ್ಲ ಸೋಲಕ್ಕೆ ಹೋರಿ ಬಲ್ಲಿದರಾದೆವೆಂದು
ತನ್ನಲ್ಲಿದ್ದ ಹುಸಿಯ ಹುಸಿವ ಕಲ್ಲೆದೆಯವನ ನೋಡಾ
ಇವರೆಲ್ಲರ ಬಲ್ಲತನವ ಕಂಡು ನಿಲ್ಲದೆ ಹೋದ
ನಿಃಕಳಂಕ ಮಲ್ಲಿಕಾರ್ಜುನ.

ವ್ಯಕ್ತಿಗಳಿಗೆ ಹಿರಿಯತನವೆಂಬುದು ಒಳ್ಳೆಯ ನಡೆನುಡಿಗಳಿಂದ ಬರುತ್ತದೆಯೇ ಹೊರತು, ಕೇವಲ ವಯಸ್ಸು, ವಿದ್ಯೆ ಇಲ್ಲವೇ ಆಡಳಿತದ ಉನ್ನತ ಗದ್ದುಗೆಯಿಂದ ದೊರೆಯುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯ ಆಡುವ ಮಾತು, ಮಾಡುವ ದುಡಿಮೆ ಮತ್ತು ಸಹಮಾನವರೊಡನೆ ನಡೆದುಕೊಳ್ಳುವ ರೀತಿಯು ಅವನಿಗೆ, ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ತರುವಂತಿರುವುದು.

ಭೂಮಿ+ಅಲ್ಲಿ; ಭೂಮಿ=ಜಗತ್ತು/ಪ್ರಪಂಚ; ಪೂಜಿಸಿಕೊಂಬ=ಪೂಜಿಸಿ ಕೊಳ್ಳುವ; ಅಂದರೆ ಜನರಿಂದ ಅತಿ ಹೆಚ್ಚಿನ ಒಲವು ಮತ್ತು ಮೆಚ್ಚುಗೆಯನ್ನು ಪಡೆಯುವ; ಅರುಹಿರಿಯರು+ಎಲ್ಲರೂ; ಅರುಹು+ಹಿರಿಯರು=ಅರು ಹಿರಿಯರು; ಅರುಹು=ತಿಳಿಸು/ಹೇಳು; ಹಿರಿಯರು=ವಯಸ್ಸಿನಲ್ಲಿ ದೊಡ್ಡವರು/ ಆಡಳಿತದಲ್ಲಿ ದೊಡ್ಡ ಹುದ್ದೆಯಲ್ಲಿ ಇರುವವರು/ಅಕ್ಕರದ ವಿದ್ಯೆಯಲ್ಲಿ ಪಾಂಡಿತ್ಯವನ್ನು ಪಡೆದವರು/ಜಾತಿಮತಗಳ ಉನ್ನತ ಗದ್ದುಗೆಯಲ್ಲಿ ಕುಳಿತವರು; ಅರುಹಿರಿಯರು=ಉಪದೇಶವನ್ನು ಮಾಡುವವರು/ತಿಳಿಯ ಹೇಳುವವರು;

ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ=ವಯಸ್ಸಿನ/ಆಡಳಿತದ ಗದ್ದುಗೆಯ/ಅಕ್ಕರ ವಿದ್ಯೆಯ ಪಾಂಡಿತ್ಯದ/ಜಾತಿಮತದ ಗದ್ದುಗೆಯ ಕಾರಣ ದಿಂದಾಗಿ ಜಗತ್ತಿನ ಜನಸಮುದಾಯದಿಂದ ಅತಿ ಹೆಚ್ಚಿನ ಮನ್ನಣೆಗೆ ಪಾತ್ರರಾಗಿ ಜನರಿಗೆ ಉಪದೇಶವನ್ನು ಮಾಡುತ್ತಿರುವ ಗುರುಹಿರಿಯರೆಲ್ಲರೂ;

ವೇದ=ಇಂಡಿಯಾ ದೇಶದಲ್ಲಿದ್ದ ಪ್ರಾಚೀನ ಜನಸಮುದಾಯದವರು ನಿಸರ್ಗ ದೇವತೆಗಳನ್ನು ಪೂಜಿಸುತ್ತಿದ್ದ ಆಚರಣೆಗಳ ವಿವರವನ್ನು ಒಳಗೊಂಡ 'ಋಗ್ವೇದ–ಯಜುರ್ವೇದ–ಅಥರ್ವಣ ವೇದ–ಸಾಮವೇದ ' ಎಂಬ ನಾಲ್ಕು ಹೊತ್ತಿಗೆಗಳು;

ಶಾಸ್ತ್ರ=ದೇವತೆಗಳ ಪೂಜೆಯಲ್ಲಿ ಅನುಸರಿಸಬೇಕಾದ ಸಂಪ್ರದಾಯಗಳನ್ನು ಮತ್ತು ವ್ಯಕ್ತಿಯ ಹುಟ್ಟು, ಮದುವೆ, ಸಾವಿನ ಸನ್ನಿವೇಶಗಳಲ್ಲಿ ಮಾಡಬೇಕಾದ ಆಚರಣೆಗಳನ್ನು ವಿವರಿಸುವ ಹೊತ್ತಿಗೆ;

ಪುರಾಣ=ಜಗತ್ತಿನ ಹುಟ್ಟು, ಜೀವರಾಶಿಗಳ ಉಗಮ, ದೇವರ ಇರುವಿಕೆ ಮತ್ತು ಮಾನವ ಸಮುದಾಯದ ಬೆಳವಣಿಗೆಯ ಬಗ್ಗೆ ಜನಮನದ ಕಲ್ಪನೆಯಲ್ಲಿ ರೂಪುಗೊಂಡಿರುವ ಸಂಗತಿಯನ್ನೊಳಗೊಂಡ ದಂತ ಕತೆ. ಇಂಡಿಯಾದ ಜನಸಮುದಾಯದ ಮನದಲ್ಲಿ ಹದಿನೆಂಟು ಪುರಾಣಗಳು ರೂಪುಗೊಂಡಿವೆ;

ಆಗಮ=ವೇದಗಳಲ್ಲಿನ ವಿಚಾರವನ್ನು ಒಳಗೊಂಡ ಹೊತ್ತಿಗೆ; ಶ್ರುತಿ=ವೇದಗಳ ಮಂತ್ರಗಳನ್ನು ಕೇಳುವುದು; ಸ್ಮೃತಿ=ವೇದಗಳ ಮಂತ್ರಗಳನ್ನು ನೆನಪಿನಲ್ಲಿಟ್ಟು ಕೊಂಡು ಮತ್ತೆ ಮತ್ತೆ ಉಚ್ಚರಿಸುತ್ತಿರುವುದು; ತತ್ವ+ಇಂದ; ತತ್ವ=ತಿರುಳು/ನಿಯಮ; ಇದಿರಿಗೆ=ಇತರರಿಗೆ/ಇತರರ ಮುಂದೆ; ಬೋಧಿಸು=ತಿಳಿಸು/ಹೇಳು;

ವೇದ ಶಾಸ್ತ್ರ ಪುರಾಣ ಆಗಮ ಶ್ರುತಿ ಸ್ಮೃತಿ ತತ್ವದಿಂದ ಇದಿರಿಗೆ ಬೋಧಿಸಿ ಹೇಳುವ ಹಿರಿಯರೆಲ್ಲರೂ=ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ವೇದ, ಶಾಸ್ತ್ರ, ಪುರಾಣ, ಆಗಮ, ಶ್ರುತಿ ಮತ್ತು ಸ್ಮೃತಿಯಲ್ಲಿರುವ ಆಚರಣೆಗಳನ್ನು ಮತ್ತು ಸಂಪ್ರದಾಯಗಳನ್ನು ಇತರರ ಮುಂದೆ ಸೊಗಸಾಗಿ ಬಣ್ಣಿಸಿ ಹೇಳುವ ಹಿರಿಯರೆಲ್ಲರೂ;

ಹಿರಿಯರು+ಅಪ್ಪರೆ; ಅಪ್ಪರೆ=ಆಗುತ್ತಾರೆಯೇ;

ಹಿರಿಯರಪ್ಪರೆ=ಹಿರಿಯರಾಗುತ್ತಾರೆಯೇ; ಅಂದರೆ ಕೇವಲ ಹೊತ್ತಿಗೆಗಳಲ್ಲಿ ಬರೆದಿರುವ ಶ್ಲೋಕಗಳನ್ನು, ಮಂತ್ರಗಳನ್ನು ಮತ್ತು ಆಚರಣೆಯ ಸಂಗತಿಗಳನ್ನು ಮಾತಿನಲ್ಲಿ ಸೊಗಸಾಗಿ ಆಡಿದ ಮಾತ್ರಕ್ಕೆ ಯಾರೊಬ್ಬರೂ ಹಿರಿಯವರಾಗುವುದಿಲ್ಲ. ವ್ಯಕ್ತಿಯು ಆಡುವ ಮಾತುಗಳಿಂದಲೇ ಯಾರನ್ನೂ ಹಿರಿಯರೆಂದು ತಿಳಿಯಬಾರದು ಹಾಗೂ ನಂಬಬಾರದು;

ನುಡಿ=ಮಾತು; ನಡೆ=ವರ್ತನೆ; ಸಿದ್ಧಾಂತ+ಆಗಿ+ಅಲ್ಲದೆ; ಸಿದ್ಧಾಂತ=ನಿರ್ಣಾಯಕ ವಿಚಾರ/ನಿಯಮಗಳ ಒಟ್ಟು ಸಾರ; ಆಗಿಯಲ್ಲದೆ=ಕಾರ್ಯರೂಪಕ್ಕೆ

ಬಾರದೆ/ನಿಜ ಜೀವನದಲ್ಲಿ ಆಚರಣೆಗೆ ತಾರದೆ; ಅರುಹಿರಿಯರು+ಆಗಬಾರದು; ಆಗಬಾರದು=ಆಗುವುದಕ್ಕೆ ಬರುವುದಿಲ್ಲ;

ನುಡಿದಂತೆ ನಡೆದು... ನಡೆದಂತೆ ನುಡಿದು... ನಡೆನುಡಿ ಸಿದ್ಧಾಂತವಾಗಿ ಯಲ್ಲದೆ... ಅರುಹಿರಿಯರಾಗಬಾರದು=ಇತರರಿಗೆ ಉಪದೇಶ ಮಾಡುವ ವ್ಯಕ್ತಿಯು ಮೊದಲು ತನ್ನ ನಿತ್ಯ ಜೀವನದಲ್ಲಿ ತಾನಾಡುವ ಒಳ್ಳೆಯ ನುಡಿಗೆ ತಕ್ಕಂತೆ, ಒಳ್ಳೆಯ ದುಡಿಮೆಯನ್ನು ಮಾಡಬೇಕು ಮತ್ತು ಸಹಮಾನವರೊಡನೆ ಒಲವು, ಕರುಣೆ ಮತ್ತು ಗೆಳೆತನದಿಂದ ಜತೆಗೂಡಿ ಬಾಳಬೇಕು. ಆಡುವ ಒಳ್ಳೆಯ ಮಾತಿಗೆ ತಕ್ಕಂತೆ ಸಾಮಾಜಿಕವಾಗಿ ಒಳ್ಳೆಯ ವರ್ತನೆಯನ್ನು ಹೊಂದಿರದ ವ್ಯಕ್ತಿಗಳು ಇತರರಿಗೆ ಉಪದೇಶವನ್ನು ಮಾಡಲು ತಕ್ಕವರಲ್ಲ ಹಾಗೂ ಯೋಗ್ಯರಲ್ಲ;

ಗೆಲ್ಲ=ಗೆಲುವು; ಸೋಲ=ಸೋಲು; ಹೋರು=ಬಡಿದಾಡು/ಗುದ್ದಾಡು; ಬಲ್ಲಿದರು+ಆದೆವು+ಎಂದು; ಬಲ್ಲಿದ=ಅತಿ ಹೆಚ್ಚಿನ ಶಕ್ತಿಯುಳ್ಳವನು; ಆದೆವು= ಆಗಿದ್ದೇವೆ;

ಗೆಲ್ಲ ಸೋಲಕ್ಕೆ ಹೋರಿ ಬಲ್ಲಿದರಾಗುವುದು=ರಾಜನ ಒಡ್ಡೋಲಗದಲ್ಲಿ ಇಲ್ಲವೇ ವಿದ್ವಾಂಸರ ಸಭೆಗಳಲ್ಲಿ ತಮ್ಮ ತಮ್ಮ ಪಾಂಡಿತ್ಯವನ್ನು ಮೆರೆಯುತ್ತಾ, ಎದುರಾಳಿಯನ್ನು ತಮ್ಮ ಮಾತಿನ ಚತುರತೆಯಿಂದಲೇ ಸೋಲಿಸಿ, ಗೆಲುವನ್ನು ಪಡೆದು, ಅಕ್ಕರದ ವಿದ್ಯೆಯಲ್ಲಿ ದೊಡ್ಡವರೆಂದು ಕೀರ್ತಿಯನ್ನು ಪಡೆಯುವುದು;

ತನ್ನಲ್ಲಿ+ಇದ್ದ; ತನ್ನಲ್ಲಿದ್ದ=ತನ್ನ ವ್ಯಕ್ತಿತ್ವದಲ್ಲಿರುವ; ಹುಸಿ=ಸುಳ್ಳು; ಹುಸಿವ= ಸುಳ್ಳನ್ನಾಡುವ; ಕಲ್ಲ್+ಎದೆಯವನ; ಎದೆ=ಮನಸ್ಸು; ಕಲ್ಲೆದೆಯವನು=ಇತರರ ಬಗ್ಗೆ ತುಸುವಾದರೂ ಪ್ರೀತಿ ಕರುಣೆಯಿಲ್ಲದೆ ಕ್ರೂರತನದಿಂದ ನಡೆದುಕೊಳ್ಳು ವವನು; ನೋಡು=ಕಾಣು; ನೋಡಾ=ಅಂತಹ ವಂಚಕರ ಹಾಗೂ ಕ್ರೂರಿಗಳ ಮಾತಿನಲ್ಲಿ ಮತ್ತು ವರ್ತನೆಯಲ್ಲಿರುವ ಇಬ್ಬಗೆಯ ಸಂಗತಿಗಳನ್ನು ಒರೆಹಚ್ಚಿ ತಿಳಿ;

ತನ್ನಲ್ಲಿದ್ದ ಹುಸಿಯ ಹುಸಿವ ಕಲ್ಲೆದೆಯವನು=ಗೆಲುವನ್ನು ಪಡೆಯಲೆಂದು ಸುಳ್ಳಿನ ಸಂಗತಿಗಳನ್ನೇ ದಿಟದ ಸಂಗತಿಗಳು ಎನ್ನುವಂತೆ ನುಡಿಯುವ ವ್ಯಕ್ತಿಯು ಕಲ್ಲೆದೆಯವನಾಗಿರುತ್ತಾನೆ. ಅಂದರೆ ಅಕ್ಕರ ವಿದ್ಯೆಯನ್ನು ಕಲಿತು ಅಹಂಕಾರಿ ಯಾಗಿರುವ ವ್ಯಕ್ತಿಯ ಮನದಲ್ಲಿ ಸಹಮಾನವರ ಬಗ್ಗೆ ಯಾವುದೇ ಬಗೆಯ ಒಲವಾಗಲಿ ಇಲ್ಲವೇ ಕರುಣೆಯಾಗಲಿ ಇರುವುದಿಲ್ಲ. ಮಾತಿನ ಮೋಡಿಯಲ್ಲಿ ಸುಳ್ಳುಗಳನ್ನೇ ಹೆಣೆದು, ಸಹಮಾನವರನ್ನು ನಂಬಿಸಿ, ಜಗತ್ತನ್ನೇ ವಂಚಿಸುವ ಕ್ರೂರಿಯಾಗಿರುತ್ತಾನೆ;

ಬಲ್ಲತನ=ಅತಿ ಹೆಚ್ಚಾದ ಶಕ್ತಿ; ನಿಲ್ಲದೆ ಹೋದ=ಒಂದು ಕಡೆ ನೆಲಸದೆ ಹೋದನು; ನಿಃಕಳಂಕ=ಯಾವುದೇ ಬಗೆಯ ಕಳಂಕವಿಲ್ಲದ; ಮಲ್ಲಿಕಾರ್ಜುನ= ಶಿವ/ಒಳ್ಳೆಯ ನಡೆನುಡಿಗಳ ಸಂಕೇತವಾದ ದೇವರು; ನಿಃಕಳಂಕ ಮಲ್ಲಿಕಾರ್ಜುನ=ಮೋಳಿಗೆ ಮಾರಯ್ಯನವರ ವಚನಗಳ ಅಂಕಿತನಾಮ;

ಇವರೆಲ್ಲರ ಬಲ್ಲತನವ ಕಂಡು... ನಿಲ್ಲದೆ ಹೋದ ನಿಃಕಳಂಕ ಮಲ್ಲಿಕಾರ್ಜುನ= ಮನದೊಳಗೆ ಸುಳ್ಳು, ಕಪಟ ಮತ್ತು ಕ್ರೂರತನದ ಒಳಮಿಡಿತಗಳನ್ನುಳ್ಳ ಆದರೆ ಮಾತಿನಲ್ಲಿ ಮಾತ್ರ ಸತ್ಯ ನೀತಿ ನ್ಯಾಯದ ಸಂಗತಿಗಳನ್ನು ಉಪದೇಶ ಮಾಡುವ ವ್ಯಕ್ತಿಗಳೇ ಜನಸಮೂಹದ ನಡುವೆ ಹಿರಿಯರೆಂದು ಮನ್ನಣೆ ಪಡೆದು ಮೆರೆಯುತ್ತಿರುವುದನ್ನು ಕಂಡು ಮಲ್ಲಿಕಾರ್ಜುನ ದೇವರು ಅಂತಹ ವ್ಯಕ್ತಿಗಳಿಂದ ದೂರಸರಿದ;

ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ಪೊಳ್ಳು ಮತ್ತು ಸುಳ್ಳು ಉಪದೇಶ ಮಾಡುವ ವಂಚಕರೇ ಸಮಾಜದಲ್ಲಿ ದೊಡ್ಡ ದೊಡ್ಡ ಗದ್ದುಗೆಗಳಲ್ಲಿ ಹಿರಿಯರಾಗಿ ಮೆರೆಯುತ್ತ, ಪ್ರಾಮಾಣಿಕವಾಗಿ ದುಡಿಯುವ ಬಡವರ್ಗದ ಜನಸಮುದಾಯವನ್ನು ನಿರಂತರವಾಗಿ ವಂಚಿಸುತ್ತ, ಕ್ರೂರತನದಿಂದ ಜನರನ್ನು ಸುಲಿಗೆ ಮಾಡುತ್ತಿರುವ ಕಡೆಯಲ್ಲಿ ಸತ್ಯ ನೀತಿ ಮತ್ತು ಸಾಮಾಜಿಕ ನ್ಯಾಯ ಇರುವುದಿಲ್ಲ ಎಂಬ ವಾಸ್ತವವನ್ನು "ನಿಲ್ಲದೆ ಹೋದ ನಿಃಕಳಂಕ ಮಲ್ಲಿಕಾರ್ಜುನ" ಎಂಬ ನುಡಿಗಳು ಸೂಚಿಸುತ್ತಿವೆ;

❖

154. ಸದ್ಭಕ್ತಿಯೆ ದೈವವೆಂದು ಅರ್ಚಿಸುವ ಠಾವಿನಲ್ಲಿ
ಮತ್ತತ್ವ ದುಶ್ಚರಿತ್ರ ಪಗುಡಿ ಪರಿಹಾಸಕತನ
ಚೆಲ್ಲಾಟ ಗೆಲ್ಲ ಸೋಲತನ ಇವೆಲ್ಲವ ಬಿಡಬೇಕು
ಇದೇ ಸದ್ಭಕ್ತಿ ಸದಾತ್ಮ ಯುಕ್ತಿ
ನಿಃಕಳಂಕ ಮಲ್ಲಿಕಾರ್ಜುನಾ.

ತನ್ನ ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯನ್ನೇ ದೇವರೆಂದು ತಿಳಿದು ಆಚರಿಸುತ್ತಿರುವ ವ್ಯಕ್ತಿಯು ಯಾವ ಬಗೆಯ ಕೆಟ್ಟ ನಡೆನುಡಿಗಳನ್ನು ತೊರೆದು ಬಾಳಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

'ಒಳ್ಳೆಯ ನಡೆನುಡಿ' ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ಅವನ ಮತ್ತು ಅವನ ಕುಟುಂಬದ ಹಿತವನ್ನು ಕಾಪಾಡುವಂತೆಯೇ ಸಹಮಾನವರ ಮತ್ತು ಸಮಾಜದ ಹಿತವನ್ನು ಕಾಪಾಡುವುದು.

ಸದ್ಭಕ್ತಿ=ಒಳ್ಳೆಯ ನಡೆನುಡಿ; ದೈವ+ಎಂದು; ದೈವ=ದೇವರು; ಅರ್ಚಿಸು= ಪೂಜಿಸು; ಠಾವು+ಅಲ್ಲಿ; ಠಾವು=ಎಡೆ/ಠಾಣ/ಜಾಗ;

ಸದ್ಭಕ್ತಿಯೆ ದೈವವೆಂದು ಅರ್ಚಿಸುವ ಠಾವಿನಲ್ಲಿ=ಒಳ್ಳೆಯ ನಡೆನುಡಿಯನ್ನೇ ದೇವರೆಂದು ತಿಳಿದು ಬಾಳುತ್ತಿರುವ ಎಡೆಯಲ್ಲಿ;

ಮತ್ತತ್ವ= "ನಾನೊಬ್ಬನೇ ಪ್ರಾಮಾಣಿಕ... ನನ್ನಿಂದಲೇ ಎಲ್ಲವೂ ನಡೆಯುತ್ತಿದೆ... ನನ್ನ ಮಾತನ್ನು ಎಲ್ಲರೂ ಪಾಲಿಸಬೇಕು" ಎಂಬ ಅಹಂಕಾರದ ನಡೆನುಡಿ;

ಚರಿತ್ರ=ನಡವಳಿಕೆ; **ದುಶ್ಚರಿತ್ರ**=ಕೆಟ್ಟ ನಡವಳಿಕೆ;

ಪಗುಡಿ=ಇತರರ ನಡೆನುಡಿಯನ್ನು ಕುರಿತು ಕೆಟ್ಟ ಮಾತನ್ನಾಡುವುದು/ಲೇವಡಿ ಮಾಡುವುದು/ಕುಚೋದ್ಯ ಮಾಡುವುದು;

ಪರಿಹಾಸ=ಗೇಲಿ/ಅಣಕ; **ಪರಿಹಾಸಕತನ**=ಇತರರ ನಡೆನುಡಿಯನ್ನು ಅಣಕ ಮಾಡಿ, ನಾಲ್ಕು ಜನರ ಮುಂದೆ ಅವರನ್ನು ಅಪಮಾನಗೊಳಿಸುವುದು;

ಚೆಲ್ಲಾಟ=ಇತರರ ನಡೆನುಡಿಯ ಬಗ್ಗೆ ಇಲ್ಲಸಲ್ಲದ ಕತೆ ಕಟ್ಟಿ, ಅವರ ಜೀವನದಲ್ಲಿ ಸಂಕಟವನ್ನು ಉಂಟುಮಾಡುವುದು;

ಗೆಲ್ಲ ಸೋಲತನ=ವ್ಯಕ್ತಿಯು ಯಾವುದೇ ಸಂಗತಿಯನ್ನು ಕುರಿತು ಇತರರೊಡನೆ ಚರ್ಚೆ ಮಾಡುವಾಗ, ತನ್ನ ಮಾತಿನ ಮೋಡಿಯಿಂದ ಮತ್ತು ಕುತಂತ್ರ

ದಿಂದ ಎದುರಾಳಿಯನ್ನು ಸೋಲಿಸಿ, ತಾನು ಗೆಲ್ಲಲೇಬೇಕೆಂಬ ಹಟಮಾರಿತನ. ಇದಕ್ಕಾಗಿ ಯಾವುದೇ ಬಗೆಯ ಸುಳ್ಳನ್ನು ನುಡಿಯಲು ಹಿಂಜರಿಯದಿರುವುದು. ಇಂತಹ ವ್ಯಕ್ತಿಗೆ ತನ್ನ ಗೆಲುವು ದೊಡ್ಡದಾಗುತ್ತದೆಯೇ ಹೊರತು, ನಿಜದ ಸಂಗತಿಯು ಬೇಕಾಗುವುದಿಲ್ಲ;

ಮತ್ತತ್ವ-ದುಶ್ಚರಿತ್ರ-ಪಗುಡಿ-ಪರಿಹಾಸಕತನ-ಚೆಲ್ಲಾಟ-ಗೆಲ್ಲ ಸೋಲತನ ಇವೆಲ್ಲವ ಬಿಡಬೇಕು=ಸಹಮಾನವರನ್ನು ಕಡೆಗಣಿಸುವ/ಅಪಮಾನಿಸುವ/ಸಂಕಟಕ್ಕೆ ಗುರಿ ಮಾಡುವ ಈ ಬಗೆಯ ಕೆಟ್ಟ ನಡೆನುಡಿಗಳನ್ನು ಬಿಡಬೇಕು;

ಇದೇ ಸದ್ಭಕ್ತಿ=ವ್ಯಕ್ತಿಯು ಕೆಟ್ಟ ನಡೆನುಡಿಗಳನ್ನು ಬಿಟ್ಟು ಬಾಳುವುದೇ ದೇವರಿಗೆ ಮಾಡುವ ಉತ್ತಮವಾದ ಪೂಜೆ;

ಸತ್+ಆತ್ಮ; ಸತ್=ಒಳ್ಳೆಯ; ಆತ್ಮ=ಮನಸ್ಸು; ಸದಾತ್ಮ=ಒಳ್ಳೆಯ ಮನಸ್ಸು; ಯುಕ್ತಿ=ಆಚರಣೆ;

ಸದಾತ್ಮ ಯುಕ್ತಿ=ಒಳ್ಳೆಯ ಮನಸ್ಸಿನಿಂದ ಮಾಡುವ ಆಚರಣೆ;

ನಿಃಕಳಂಕ=ಯಾವುದೇ ಬಗೆಯ ಕಳಂಕವಿಲ್ಲದವನು; ಮಲ್ಲಿಕಾರ್ಜುನ=ಶಿವ; ನಿಃಕಳಂಕ ಮಲ್ಲಿಕಾರ್ಜುನ=ಮೋಳಿಗೆ ಮಾರಯ್ಯನವರ ವಚನಗಳ ಅಂಕಿತನಾಮ;

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ದೇವರಾದ ಶಿವನನ್ನು 'ಕಲ್ಲು/ಮಣ್ಣು/ಮರ/ಲೋಹದ ವಿಗ್ರಹರೂಪದಲ್ಲಿ' ಕಾಣುತ್ತಿರಲಿಲ್ಲ. ತಮ್ಮ ನಿತ್ಯ ಜೀವನದಲ್ಲಿ ಕೆಟ್ಟ ನಡೆನುಡಿಯನ್ನು ಬಿಟ್ಟು, ಒಳ್ಳೆಯ ನಡೆನುಡಿಯಿಂದ ಬಾಳುವುದೇ ದೇವರ ಪೂಜೆಯೆಂಬ ನಿಲುವನ್ನು ತಳೆದು, ಅದರಂತೆಯೇ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದರು. ಆದ್ದರಿಂದಲೇ ಮನೆಯಲ್ಲಿ ಇಲ್ಲವೇ ದೇಗುಲದಲ್ಲಿ ದೇವರನ್ನು ಬಹುಬಗೆಯಲ್ಲಿ ಅಲಂಕಾರ ಮಾಡಿ ಪೂಜಿಸುವ, ಮೆರೆಸುವ, ದೇವರ ಹೆಸರಿನಲ್ಲಿ ಯಾಗವನ್ನು ಮಾಡುವ ಮತ್ತು ಹತ್ತಾರು ಬಗೆಯ ವ್ರತಗಳನ್ನು ಆಚರಿಸುವ ಕ್ರಿಯೆಗಳನ್ನು ನಿರಾಕರಿಸಿದ್ದರು.

❖

39. ಲದ್ದೆಯ ಸೋಮಯ್ಯ

ದೊರೆತಿರುವ ವಚನ: ಒಂದು
ವಚನದ ಅಂಕಿತನಾಮ: ಲದ್ದೆಯ ಸೋಮ

155. ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು
ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು
ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಯಿ
ಇದಕ್ಕಾ ದೇವರ ಹಂಗೇಕೆ
ಭಾಪು ಲದ್ದೆಯ ಸೋಮ.

ವ್ಯಕ್ತಿಯು ತನ್ನ ಜೀವನದಲ್ಲಿ ಬರುವ ಎಡರುತೊಡರುಗಳನ್ನು ದಿಟ್ಟತನದಿಂದ ಮತ್ತು ತಾಳ್ಮೆಯಿಂದ ತಾನೇ ಎದುರಿಸಿ ಪರಿಹಾರವನ್ನು ಕಂಡುಕೊಂಡು ಬಾಳಬೇಕೆ ಹೊರತು, ಯಾವುದಕ್ಕೂ ದೇವರನ್ನು ಅವಲಂಬಿಸಬಾರದು ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ತಮ್ಮ ಜೀವನದಲ್ಲಿ ಬರುವ ಎಲ್ಲ ಬಗೆಯ ಸಂಕಟಗಳನ್ನು ಪರಿಹರಿಸಿ, ತಮ್ಮ ಮಯ್ ಮನದ ಬಯಕೆಗಳೆಲ್ಲವನ್ನೂ ಈಡೇರಿಸಿ, ತಮ್ಮನ್ನು ಕಾಪಾಡುವ ಒಬ್ಬ ವ್ಯಕ್ತಿಯನ್ನಾಗಿ ಇಲ್ಲವೇ ಒಂದು ಶಕ್ತಿಯನ್ನಾಗಿ ದೇವರನ್ನು ಮಾನವರು ಕಲ್ಪಿಸಿಕೊಂಡು, ದೇವರ ಅನುಗ್ರಹವನ್ನು ಪಡೆಯಲೆಂದು ನೂರಾರು ಬಗೆಯ

ಪೂಜೆಯ ಆಚರಣೆಯಲ್ಲಿ ತೊಡಗಿದ್ದಾರೆ. ದೇವರ ಬಗೆಗಿನ ಇಂತಹ ಕಲ್ಪನೆ, ನಂಬಿಕೆ ಮತ್ತು ಆಚರಣೆಯನ್ನು ಕ್ರಿ.ಶ.ಹನ್ನೆರಡನೆಯ ಶತಮಾನದ ಶಿವಶರಣ ಶರಣೆಯರು ನಿರಾಕರಿಸಿದ್ದರು.

ಏಕೆಂದರೆ ಮಾನವರ ಬದುಕಿನ ನೋವು ನಲಿವಿಗೆ ಮತ್ತು ಒಳಿತು ಕೆಡುಕಿಗೆ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳಾದ ಅತಿ ಹೆಚ್ಚಾದ ಮಳೆ ಇಲ್ಲವೇ ಮಳೆಯೇ ಇಲ್ಲದಿರುವುದು; ಬಿರುಗಾಳಿ; ಭೂಕಂಪ; ಅಗ್ನಿಪರ್ವತದಿಂದ ಲಾವಾರಸ ಉಕ್ಕೆದ್ದು ಹರಿಯುವುದು; ಕ್ರಿಮಿಕೀಟಗಳಿಂದ ರೋಗರುಜಿನಗಳ ಹರಡುವಿಕೆ ಮತ್ತು ಮಾನವರ ಒಳ್ಳೆಯ ಇಲ್ಲವೇ ಕೆಟ್ಟ ನಡೆನುಡಿಗಳೇ ಕಾರಣವೆಂಬ ವಾಸ್ತವವನ್ನು ಅರಿತುಕೊಂಡು ಬಾಳುತ್ತಿದ್ದರು. ಆದ್ದರಿಂದಲೇ ಅವರು ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿದ ವಿಗ್ರಹರೂಪಿಯಾದ ದೇವರಿಂದ ಮತ್ತು ದೇವಾಲಯಗಳಿಂದ ದೂರಸರಿದು, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳನ್ನೇ ದೇವರೆಂದು ತಿಳಿದು ಬಾಳುತ್ತಿದ್ದರು.

ಆವ=ಯಾವ/ಯಾವುದೇ ಬಗೆಯ; ಕಾಯಕ+ಆದಡೂ; ಕಾಯಕ=ದುಡಿಮೆ /ಕೆಲಸ; ಆದಡೂ=ಆದರೂ/ಆಗಿದ್ದರೂ; ಸ್ವಕಾಯಕ=ತನ್ನ ಪಾಲಿಗೆ ಬಂದ ಕೆಲಸ/ತಾನು ಮಾಡಬೇಕಾದ ಕೆಲಸ;

ಆವ ಕಾಯಕವಾದಡೂ ಸ್ವಕಾಯಕವ ಮಾಡಿ=ಶಿವಶರಣಶರಣೆಯರ ಪಾಲಿಗೆ 'ಕಾಯಕ' ಎನ್ನುವುದು ಜೀವನದಲ್ಲಿ ಬಹು ದೊಡ್ಡ ಸಂಗತಿಯಾಗಿತ್ತು. ಕಾಯಕ ಎಂದರೆ ಅದು ಕೇವಲ ದುಡಿಮೆಯಲ್ಲ. ವ್ಯಕ್ತಿಯು ಮಾಡುವ ದುಡಿಮೆಯು ಅವನಿಗೆ ಮತ್ತು ಅವನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯನ್ನು ತರುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟು ಮಾಡುವಂತಿರಬೇಕು. ಅಂತಹ ಒಳ್ಳೆಯ ದುಡಿಮೆಯನ್ನು ಮಾತ್ರ ಅವರು 'ಕಾಯಕ' ಎಂದು ಪರಿಗಣಿಸಿದ್ದರು. ಆದ್ದರಿಂದ ವ್ಯಕ್ತಿಯು ಜೀವನದಲ್ಲಿ ಒಳ್ಳೆಯ ಉದ್ದೇಶ ಮತ್ತು ಪ್ರಾಮಾಣಿಕತನದಿಂದ ತನ್ನ ಕಾಯಕದಲ್ಲಿ ತೊಡಗಿ;

ಗುರು=ಒಳ್ಳೆಯ ನಡೆನುಡಿಗಳನ್ನು ಕಲಿಸುವ ವ್ಯಕ್ತಿ; ಲಿಂಗ=ನಿಜದ ನಡೆನುಡಿಗಳಿಗೆ ಸಂಕೇತವಾಗಿರುವ ದೇವರಾದ ಶಿವ; ಜಂಗಮ=ಸಮಾಜದ ವ್ಯವಸ್ಥೆಯಲ್ಲಿ ಮತ್ತು ಜನರ ನಡೆನುಡಿಗಳಲ್ಲಿ "ಯಾವುದು ಸರಿ/ಯಾವುದು ತಪ್ಪು; ಯಾವುದು ವಾಸ್ತವ/ಯಾವುದು ಕಲ್ಪನೆ; ಯಾವುದು ದಿಟ/ಯಾವುದು ಸಟೆ" ಎಂಬ ಸಾಮಾಜಿಕ ಅರಿವನ್ನು ಮತ್ತು "ಯಾವುದನ್ನು ಮಾಡಬೇಕು/ಯಾವುದನ್ನು

ಮಾಡಬಾರದು” ಎಂಬ ಎಚ್ಚರವನ್ನು ಜನಸಮುದಾಯದ ಮನದಲ್ಲಿ ಮೂಡಿಸುತ್ತ, ಎಲ್ಲಿಯೂ ಒಂದೆಡೆ ನೆಲಸದೆ ನಿರಂತರವಾಗಿ ಸಂಚರಿಸುತ್ತಿರುವ ವ್ಯಕ್ತಿ; ಮುಂದೆ+ಇಟ್ಟು;

ಗುರು ಲಿಂಗ ಜಂಗಮದ ಮುಂದಿಟ್ಟು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ವ್ಯಕ್ತಿಯು ತಾನು ಮಾಡುವ ಕಾಯಕಕ್ಕೆ ಗುರು ಲಿಂಗ ಜಂಗಮವನ್ನೇ ಸಾಕ್ಷಿಯನ್ನಾಗಿ ಇಟ್ಟುಕೊಂಡು; ಅಂದರೆ ಕೆಟ್ಟದ್ದನ್ನು ನುಡಿಯಬಾರದು ಮತ್ತು ಕೆಟ್ಟ ಕೆಲಸವನ್ನು ಮಾಡಬಾರದು ಎಂಬ ಎಚ್ಚರವನ್ನು ಸದಾಕಾಲ ಹೊಂದಿದವನಾಗಿ;

ಒಕ್ಕು=ಬಲಿತ ತೆನೆಯಿಂದ ಕೂಡಿರುವ ಬತ್ತ ರಾಗಿ ಜೋಳ ಮುಂತಾದ ಪಯಿರಿನಿಂದ ಕಾಳನ್ನು ಹೊರತೆಗೆಯುವುದು; ಹಾರೈಸು=ಬಯಸು; ಮಿಕ್ಕು= ಉಳಿದುದ್ದು; ಕೈಕೊಂಡು=ಪಡೆದು;

ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು=ಪಯಿರಿನಿಂದ ತೆನೆಯನ್ನು ಬೇರ್ಪಡಿಸಿ, ಮತ್ತೆ ತೆನೆಯಿಂದ ಕಾಳನ್ನು ಬಿಡಿಸಿ, ಅನಂತರ ಕಾಳುಗಳಲ್ಲಿರುವ ಜಳ್ಳನ್ನು ಹೊರಹಾಕಿ, ಉಳಿದ ಗಟ್ಟಿಯಾದ ಕಾಳನ್ನು ಪಡೆದುಕೊಂಡು; ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ವ್ಯಕ್ತಿಯು ತಾನು ಪರಿಶ್ರಮ ಮತ್ತು ಪ್ರಾಮಾಣಿಕತನದಿಂದ ಮಾಡುವ ಯಾವುದೇ ಬಗೆಯ ಒಳ್ಳೆಯ ಕಾಯಕದಿಂದ ತಾನು ಬಯಸಿದ್ದನ್ನು ಪಡೆದುಕೊಂಡು ಬಾಳುವುದನ್ನು ಕಲಿಯಬೇಕು;

ವ್ಯಾಧಿ=ರೋಗ/ಕಾಯಿಲೆ; ಬಂದಡೆ=ಬಂದರೆ; ನರಳು=ಮಯ್ ಮನಸ್ಸಿಗೆ ತೊಂದರೆಯಾದಾಗ ಸಂಕಟದ ದನಿಯಿಂದ ಮುಲುಕುವುದು; ಬೇನೆ=ತೊಂದರೆ/ ಸಂಕಟ; ಒರಲು=ಅರಚು/ಚೀರು; ಜೀವ=ಉಸಿರು/ಪ್ರಾಣ; ಹೋದಡೆ= ಹೋದರೆ; ಸಾಯಿ=ಉಸಿರನ್ನು ಬಿಡು/ಸಾವನ್ನು ಅಪ್ಪು; ಇದಕ್ಕೆ+ಆ; ಇದಕ್ಕೆ= ಇಂತಹ ರೋಗ, ಬೇನೆ, ಸಾವುಗಳಿಗೆ; ದೇವರು=ವಾಸ್ತವದಲ್ಲಿ ಇಲ್ಲದ ಕೇವಲ ಮನದ ಕಲ್ಪನೆಯಲ್ಲಿರುವ ವ್ಯಕ್ತಿ ಇಲ್ಲವೇ ಶಕ್ತಿ; ಹಂಗು+ಏಕೆ; ಹಂಗು= ಅವಲಂಬನೆ/ರುಣ;

ವ್ಯಾಧಿ ಬಂದಡೆ ನರಳು... ‘ಬೇನೆ ಬಂದಡೆ ಒರಲು’... ಜೀವ ಹೋದಡೆ ಸಾಯಿ ಇದಕ್ಕೆ ಆ ದೇವರ ಹಂಗೇಕೆ=ಈ ಜಗತ್ತಿನಲ್ಲಿ ಹುಟ್ಟಿದ ಜೀವಿಗಳೆಲ್ಲವೂ ‘ಪ್ರಾಣಿಗಳಾಗಿರಲಿ/ಕ್ರಿಮಿಕೀಟಗಳಾಗಿರಲಿ/ಗಿಡಮರಗಳಾಗಿರಲಿ/ಮಾನವರಾಗಿರಲಿ’ ಒಂದಲ್ಲ ಒಂದು ಬಗೆಯ ರೋಗಕ್ಕೆ, ಸಂಕಟಕ್ಕೆ ಮತ್ತು ಕಟ್ಟಕಡೆಯಲ್ಲಿ ಸಾವಿಗೆ ಒಳಗಾಗಲೇಬೇಕು. ಅದು ನಿಸರ್ಗದ ನಿಯಮ.

ಭೂಮಿ, ಬೆಂಕಿ, ವಾಯು ಮತ್ತು ನೀರಿನಿಂದ ಕೂಡಿದ ನಿಸರ್ಗದಲ್ಲಿ ನಡೆಯುವ ರಾಸಾಯನಿಕ ಪ್ರಕ್ರಿಯೆಗಳಿಂದ ಜೀವಿಗಳು ಹುಟ್ಟುತ್ತವೆ, ಬೆಳೆಯುತ್ತವೆ, ಸಾಯುತ್ತವೆ. ಈ ಕ್ರಿಯೆಗಳಿಗೂ ದೇವರಿಗೂ ಯಾವುದೇ ನಂಟು ಇಲ್ಲ. ಏಕೆಂದರೆ ನಿಸರ್ಗವೆಂಬುದು ವಾಸ್ತವ; ದೇವರು ಎನ್ನುವುದು ಮಾನವನ ಮನದಲ್ಲಿ ಮೂಡಿರುವ ಕಲ್ಪನೆ. ಆದ್ದರಿಂದ ಮಾನವನು ನಿಸರ್ಗದ ಆಗುಹೋಗುಗಳೊಡನೆ ಹೊಂದಿಕೊಂಡು ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕು; ಮಾನವನು ತನ್ನ ಬದುಕಿಗೆ ಅಗತ್ಯವಾದ "ಅನ್ನ. ಬಟ್ಟೆ. ವಸತಿ. ವಿದ್ಯೆ, ಉದ್ಯೋಗ, ಆರೋಗ್ಯ" ವನ್ನು ನಿಸರ್ಗದಿಂದ ಮತ್ತು ತನ್ನ ಪರಿಶ್ರಮದಿಂದ ಪಡೆಯುತ್ತಾನೆಯೇ ಹೊರತು ದೇವರಿಂದಲ್ಲ. ಆದ್ದರಿಂದ ಮಾನವನು ದೇವರ ಅನುಗ್ರಹಕ್ಕಾಗಿ ಇಲ್ಲವೇ ದೇವರ ಕರುಣೆಗಾಗಿ ಹಾತೊರೆಯಬಾರದು;

ಭಾಪು=ಮೆಚ್ಚುಗೆಯನ್ನು/ಆನಂದವನ್ನು ಸೂಚಿಸುವಾಗ ಆಡುವ ಪದ; ಲದ್ದೆ=ಹೊರೆ/ಹೇರು; ಹುಲ್ಲಿನ ಹೊರೆಯನ್ನು ಮಾರುವ ಕಾಯಕವನ್ನು ಲದ್ದೆಯ ಸೋಮಯ್ಯನವರು ಮಾಡುತ್ತಿದ್ದರು ಎಂಬ ಊಹೆಯಿದೆ;

ಲದ್ದೆಯ ಸೋಮ=ವಚನಕಾರರು ತಮ್ಮ ಹೆಸರನ್ನೇ ತಾವು ರಚಿಸಿದ ವಚನದ ಅಂಕಿತನಾಮವಾಗಿ ಬಳಸಿದ್ದಾರೆ.

❖

40 ಲಿಂಗಮ್ಮ

ಸಾಹಿತ್ಯ ಚರಿತ್ರೆಕಾರರು ಈಕೆಯು ರಚಿಸಿರುವ ವಚನಗಳನ್ನು "ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ಬೋಧೆಯ ವಚನಗಳು" ಎಂದು ಕರೆದು, ಈ ಕೆಳಕಂಡ ವಿವರಣೆಗಳನ್ನು ನಮೂದಿಸಿದ್ದಾರೆ. ಪುಣ್ಯಸ್ತ್ರೀ ಎಂದರೆ ಹೆಂಡತಿ; ಬೋಧೆ ಎಂದರೆ ತಿಳುವಳಿಕೆ.

ಗಂಡ: ಹಡಪದ ಅಪ್ಪಣ್ಣ.

ಅಪ್ಪಣ್ಣನು ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯಲ್ಲಿ ವೀಳ್ಯವನ್ನು ವಿತರಣೆ ಮಾಡುವ ಕಾಯಕವನ್ನು ಮಾಡುತ್ತಿದ್ದುದರಿಂದ, ಈತನಿಗೆ ಹಡಪದ ಅಪ್ಪಣ್ಣ ಎಂಬ ಹೆಸರು ಬಂದಿತು. ವೀಳ್ಯ ಎಂದರೆ ಎಲೆ ಅಡಕೆ ಸುಣ್ಣ ಮೊದಲಾದುವುಗಳನ್ನು ಒಳಗೊಂಡ ತಾಂಬೂಲ.

ಹಡಪ ಎಂಬ ಪದಕ್ಕೆ ಎರಡು ಬಗೆಯ ತಿರುಳುಗಳಿವೆ:

ಹಡಪ / ಅಡಪ / ಅಡೆಪ = 1) ಎಲೆ ಅಡಕೆಗಳನ್ನು ಇಟ್ಟುಕೊಳ್ಳುವ ಚೀಲ

2) ಗಡ್ಡ ಮೀಸೆ ತಲೆಗೂದಲನ್ನು ಅಂದವಾಗಿ ಕತ್ತರಿಸುವ ಇಲ್ಲವೇ ಕೂದಲನ್ನು ತೆಗೆಯುವ ಕೆಲಸಕ್ಕಾಗಿ ಬಳಸುವ ಸಲಕರಣೆಗಳನ್ನು ಇಟ್ಟುಕೊಳ್ಳುವ ಚೀಲ/ಚಿಕ್ಕ ಪೆಟ್ಟಿಗೆ.

ದೊರೆತಿರುವ ವಚನಗಳ ಸಂಖ್ಯೆ: 114 (ಒಂದು ನೂರ ಹದಿನಾಲ್ಕು)

ವಚನಗಳ ಅಂಕಿತನಾಮ: ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

156. ಕಾಮವಿಲ್ಲ ಕ್ರೋಧವಿಲ್ಲ ಲೋಭವಿಲ್ಲ
ಮೋಹವಿಲ್ಲ ಮದವಿಲ್ಲ ಮತ್ಸರವಿಲ್ಲ
ಎಂಬ ಅಣ್ಣಗಳಿರಾ ನೀವು ಕೇಳಿರೊ ಹೇಳಿಹೆನು
ಕಾಮವಿಲ್ಲದವಂಗೆ ಕಳವಳವುಂಟೆ
ಕ್ರೋಧವಿಲ್ಲದವಂಗೆ ರೋಷವುಂಟೆ
ಲೋಭವಿಲ್ಲದವಂಗೆ ಆಸೆಯುಂಟೆ
ಮೋಹವಿಲ್ಲದವಂಗೆ ಪಾಶವುಂಟೆ
ಮದವಿಲ್ಲದವಂಗೆ ತಾಮಸವುಂಟೆ
ಮತ್ಸರವಿಲ್ಲದವನು ಮನದಲ್ಲಿ ಮತ್ತೊಂದ ನೆನೆವನೆ
ಇವು ಇಲ್ಲವೆಂದು ಮನವ ಕದ್ದು ನುಡಿವ
ಅಬದ್ಧರ ಮಾತ ಮೆಚ್ಚುವನೆ
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

ಹರೆಯಕ್ಕೆ ಕಾಲಿಟ್ಟ ಪ್ರತಿಯೊಂದು ಗಂಡು ಹೆಣ್ಣಿನ ಮಯ್ ಮನಗಳಲ್ಲಿ ನಿಸರ್ಗ ಸಹಜವಾದ ಕಾಮವೆಂಬುದು ತುಡಿಯುತ್ತಿರುತ್ತದೆ. ವ್ಯಕ್ತಿಯು ಹುಟ್ಟಿ ಬೆಳೆಯುವ ಕುಟುಂಬ ಮತ್ತು ಸಮಾಜದಲ್ಲಿನ ಸಂಪ್ರದಾಯಗಳು, ಕಟ್ಟುಪಾಡುಗಳು, ಆಚರಣೆಗಳು, ಆಸ್ತಿಪಾಸ್ತಿ ಹಣಕಾಸುಗಳ ಒಡೆತನ ಮತ್ತು ಹೊಂದಿರುವ ಹುದ್ದೆಗಳು ಮಾನವಜೀವಿಯ ಮನದಲ್ಲಿ "ಕಾಮ/ಕೋಪ/ದುರಾಸೆ/ಮೋಹ/ಮದ/ಮತ್ಸರ" ಎಂಬ ಒಳಮಿಡಿತಗಳು ಮೂಡುವುದಕ್ಕೆ ಕಾರಣವಾಗುವ ಸಾಮಾಜಿಕ ಸಂಗತಿಗಳಾಗಿರುತ್ತವೆ. ಮಾನವಜೀವಿಯ ನಡೆನುಡಿಗಳನ್ನು ನಿಸರ್ಗ ಮತ್ತು ಸಾಮಾಜಿಕ ಸಂಗತಿಗಳ ಹಿನ್ನೆಲೆಯಲ್ಲಿ ನೋಡಿದಾಗ ಸಾವಿನ ಕೊನೆಗಳಿಗೆಯ ತನಕ ಪ್ರತಿಯೊಬ್ಬರಲ್ಲಿಯೂ ಈ ಎಲ್ಲಾ ಬಗೆಯ ಒಳಮಿಡಿತಗಳು ಇದ್ದೇ ಇರುತ್ತವೆ.

ವ್ಯಕ್ತಿಯು ತನ್ನ ಮತ್ತು ಸಹಮಾನವರ ಒಳಿತಿಗಾಗಿ ಹಾಗೂ ಹೊಂದಾಣಿಕೆಯಿಂದ ಕೂಡಿದ ನೆಮ್ಮದಿಯ ಬದುಕಿಗಾಗಿ ಮಯ್ ಮನಗಳಲ್ಲಿ ತುಡಿಯುತ್ತಿರುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು ಸಮಾಜದ ನೀತಿನಿಯಮಗಳ ಎಲ್ಲೆಯೊಳಗೆ ಬಾಳಲು ಆಗುತ್ತದೆಯೇ ಹೊರತು, ಅಂತಹ ಒಳಮಿಡಿತಗಳೇ "ನನ್ನಲ್ಲಿ ಇಲ್ಲ" ಎಂದು ಹೇಳಲು ಆಗುವುದಿಲ್ಲ. ಯಾರಾದರೂ "ನನ್ನ ಮಯ್ ಮನಗಳಲ್ಲಿ ಕಾಮ/ಕೋಪ/ದುರಾಸೆ/ಮೋಹ/ಮದ/ಮತ್ಸರವಿಲ್ಲ" ಎಂದು ಹೇಳಿಕೊಂಡು ಮೆರೆದರೆ, ಅಂತಹ ವ್ಯಕ್ತಿಗಳು ತಮ್ಮ ನಯವಾದ

ಮಾತುಗಾರಿಕೆಯಿಂದ ಸುಳ್ಳನ್ನೇ ದಿಟವೆಂದು ಜನರು ನಂಬುವಂತೆ ಮಾಡಿ, ಸಮಾಜವನ್ನು ವಂಚಿಸುವ ಕಲೆಯಲ್ಲಿ ಚೆನ್ನಾಗಿ ಪಳಗಿರುತ್ತಾರೆ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ಕಾಮ+ಇಲ್ಲ; ಕಾಮ=ಬಯಕೆ/ಗಂಡು ಹೆಣ್ಣಿನ ಮಯ್ ಮನಗಳು ಒಂದನ್ನೊಂದು ಜತೆಗೂಡಲು ಹಂಬಲಿಸುವ ಒಳಮಿಡಿತ; ಇಲ್ಲ=ಗೋಚರಿಸದು/ಕಂಡುಬರದು; ಕ್ರೋಧ+ಇಲ್ಲ; ಕ್ರೋಧ=ಆಕ್ರೋಶ/ವ್ಯಕ್ತಿಯು ಆಸೆಪಟ್ಟ ವಸ್ತುಗಳು ದೊರೆಯದಿದ್ದಾಗ ಇಲ್ಲವೇ ಆತನ ಎಣಿಕೆಯಂತೆ ಕೆಲಸಗಳು ನಡೆಯದಿದ್ದಾಗ ಮಯ್ ಮನಗಳಲ್ಲಿ ಕೆರಳುವ ಒಳಮಿಡಿತ; ಲೋಭ+ಇಲ್ಲ; ಲೋಭ=ಅತಿಯಾಸೆ/ದುರಾಸೆ/ಜಿಪುಣತನ/ಆಸ್ತಿಪಾಸ್ತಿ ಹಣಕಾಸು ಒಡವೆ ವಸ್ತುಗಳೆಲ್ಲವನ್ನೂ ಹೆಚ್ಚು ಹೆಚ್ಚಾಗಿ ಗಳಿಸಿ ಕೂಡಿಡಬೇಕೆಂಬ ಆಸೆ;

ಮೋಹ+ಇಲ್ಲ; ಮೋಹ=ಯಾವುದೇ ಒಂದು ವಸ್ತು/ವ್ಯಕ್ತಿ/ಜಾಗ/ಕೆಲಸದ ಬಗ್ಗೆ ಅತಿಯಾದ ಒಲವು/ಸೆಳೆತಕ್ಕೆ ಒಳಗಾಗಿರುವುದು; ಮದ=ಸೊಕ್ಕು/ನಾನೇ ಎಲ್ಲವನ್ನೂ ತಿಳಿದವನು–ನಾನೇ ಎಲ್ಲರಿಗಿಂತ ದೊಡ್ಡವನು–ನನ್ನಿಂದಲೇ ಎಲ್ಲವೂ ನಡೆಯುತ್ತಿದೆ ಎಂಬ ಒಳಮಿಡಿತ; ಮತ್ಸರ+ಇಲ್ಲ; ಮತ್ಸರ= ಹೊಟ್ಟೆಕಿಚ್ಚು/ಕರುಬು/ಇತರರಿಗೆ ಉಂಟಾದ ಒಳಿತನ್ನು ಕಂಡು ತನಗೆ ಅಂತಹುದು ದೊರೆಯಲಿಲ್ಲವೆಂಬ ಸಂಕಟದಿಂದ ಮನದಲ್ಲಿ ಕುದಿಯುವ ಒಳಮಿಡಿತ;

ಎಂಬ=ಎನ್ನುವ/ಎಂದು ಹೇಳುವ; ಅಣ್ಣಗಳು=ಸಮಾಜದಲ್ಲಿ ದೊಡ್ಡದೊಡ್ಡ ಗದ್ದುಗೆಯಲ್ಲಿರುವ ವ್ಯಕ್ತಿಗಳು / ಗುರುಹಿರಿಯರು / ಜಾತಿ ಜಗದ್ಗುರುಗಳು / ದೇವ ಮಾನವರು; ಅಣ್ಣಗಳಿರಾ=ಗುರುಹಿರಿಯರಾದ ವ್ಯಕ್ತಿಗಳನ್ನು ಕುರಿತು ಮಾತನಾಡುವಾಗ ಬಳಸುವ ಪದ; ಕೇಳಿರೊ=ಕೇಳಿಸಿಕೊಳ್ಳಿ; ಹೇಳಿ+ಇಹೆನು; ಇಹೆನು=ಇರುವೆನು; ಹೇಳಿಹೆನು=ಹೇಳುತ್ತಿದ್ದೇನೆ; ಕಾಮ+ಇಲ್ಲದ+ಅವಂಗೆ; ಅವಂಗೆ=ಅವನಿಗೆ; **ಕಾಮವಿಲ್ಲದವಂಗೆ**=ಕಾಮವಿಲ್ಲದವನಿಗೆ; ಕಳವಳ+ಉಂಟೆ; ಕಳವಳ=ತಳಮಳ/ಏನಾಗುವುದೋ ಎಂಬ ಗಾಬರಿ/ತಲ್ಲಣ; ಉಂಟೆ= ಇರುತ್ತದೆಯೇ/ಇರುವುದೇ; ಕ್ರೋಧ+ಇಲ್ಲದ+ಅವಂಗೆ; **ಕ್ರೋಧವಿಲ್ಲದವಂಗೆ**= ಕ್ರೋಧವಿಲ್ಲದವನಿಗೆ; ರೋಷ+ಉಂಟೆ; ರೋಷ=ಸಿಟ್ಟು/ಕೋಪ/ಆಕ್ರೋಶ;

ಲೋಭ+ಇಲ್ಲದ+ಅವಂಗೆ; **ಲೋಭವಿಲ್ಲದವಂಗೆ**=ಲೋಭವಿಲ್ಲದವನಿಗೆ; ಆಸೆ+ಉಂಟೆ; ಆಸೆ=ಬಯಕೆ/ಏನನ್ನಾದರೂ ಪಡೆಯಬೇಕೆಂಬ ಹಂಬಲ; ಮೋಹ+ಇಲ್ಲದ+ಅವಂಗೆ; **ಮೋಹವಿಲ್ಲದವಂಗೆ**=ಮೋಹವಿಲ್ಲದವನಿಗೆ;

ಪಾಶ+ಉಂಟೆ; ಪಾಶ=ಹಗ್ಗ ಯಾವುದೇ ವಸ್ತು–ವ್ಯಕ್ತಿ–ಸಂಗತಿಯ ಬಗ್ಗೆ ಅತಿ ಹೆಚ್ಚಿನ ಸೆಳೆತ/ತುಡಿತ; ಮದ+ಇಲ್ಲದ+ಅವಂಗೆ; **ಮದವಿಲ್ಲದವಂಗೆ**= ಮದವಿಲ್ಲದವನಿಗೆ; ತಾಮಸ+ಉಂಟೆ; ತಾಮಸ=ಕತ್ತಲೆ/ ತಿಳಿವಳಿಕೆಯಿಲ್ಲದಿರುವುದು/ನೀಚತನ/ಕೆಟ್ಟನಡೆನುಡಿ;

ಮತ್ಸರ+ಇಲ್ಲದ+ಅವನು; ಮನದ+ಅಲ್ಲಿ; ಮನದಲ್ಲಿ=ಮನಸ್ಸಿನಲ್ಲಿ; ಮತ್ತು+ ಒಂದ; ಮತ್ತೊಂದ=ಇನ್ನೊಂದನ್ನು/ಬೇರೆಯದನ್ನು; ನೆನೆ=ಕಲ್ಪಿಸಿಕೊಳ್ಳುವುದು/ ಸ್ಮರಿಸಿಕೊಳ್ಳುವುದು/ಬಯಸುವುದು; ನೆನೆವನೆ=ನೆನೆಯುತ್ತಾನೆಯೇ/ಬಯಸು ತ್ತಾನೆಯೇ; **ಮನದಲ್ಲಿ ಮತ್ತೊಂದ ನೆನೆವನೆ**=ಇತರರ ಮುಂದೆ ಬಾಯಲ್ಲಿ ಬಹು ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಾ, ತಾನು ಗುಣವಂತನೆಂದು ತನ್ನನ್ನು ತಾನೇ ಹಾಡಿಹೊಗಳಿಕೊಳ್ಳುತ್ತಾ, ಮನದಲ್ಲಿ ಬಹುಬಗೆಯ ಒಳಮಿಡಿತಗಳಿಂದ ಕೂಡಿರುವವನು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಳು;

ಇಲ್ಲ+ಎಂದು; **ಇವು ಇಲ್ಲವೆಂದು**=ಕಾಮ/ಕೋಪ/ದುರಾಸೆ/ಮೋಹ/ಮದ/ ಮತ್ಸರಗಳೆಂಬ ಒಳಮಿಡಿತಗಳು ನನ್ನ ಮಯ್ ಮನಗಳಲ್ಲಿ ಇಲ್ಲವೆಂದು; ಮನವ=ಮನಸ್ಸನ್ನು; **ಮನವ ಕದ್ದು ನುಡಿವ**=ಮನದಲ್ಲಿ ಉಂಟಾಗುತ್ತಿರುವ ಒಳಮಿಡಿತಗಳನ್ನು ಮರೆಮಾಚಿ, ಬಹಿರಂಗದಲ್ಲಿ ಅವು ಇಲ್ಲವೆಂದು ಹೇಳುತ್ತಿರುವ /ತನ್ನ ಮನಸ್ಸಿಗೆ ತಾನೇ ವಂಚನೆ ಮಾಡಿಕೊಂಡು ಮಾತನಾಡುತ್ತಿರುವ; ಅಬದ್ಧ= ಸುಳ್ಳು/ದಿಟವಲ್ಲದ; ಬದ್ಧ=ಸತ್ಯ/ದಿಟ/ನಿಜ; ಅಬದ್ಧರು=ಸುಳ್ಳುಗಾರರು/ ಕಪಟಿಗಳು; ಮಾತ=ಮಾತುಗಳನ್ನು/ನುಡಿಗಳನ್ನು; ಮೆಚ್ಚು=ಒಪ್ಪು/ಸಮ್ಮತಿಸು; ಮೆಚ್ಚುವನೆ=ಮೆಚ್ಚುತ್ತಾನೆಯೆ/ಮೆಚ್ಚಿಕೊಳ್ಳುತ್ತಾನೆಯೆ;

ಅಪ್ಪಣ್ಣ=ಶಿವಶರಣೆ ಲಿಂಗಮ್ಮನ ಗಂಡ; ಅಪ್ಪಣ್ಣಪ್ರಿಯ=ಅಪ್ಪಣ್ಣನಿಗೆ ಪ್ರಿಯನಾದ/ಆಪ್ತನಾದ/ಒಲವಿಗೆ ಪಾತ್ರನಾದ; ಚೆನ್ನಬಸವಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ; ಅಪ್ಪಣ್ಣಪ್ರಿಯ ಚೆನ್ನಬಸವಣ್ಣ=ಲಿಂಗಮ್ಮನು ರಚಿಸಿದ ವಚನಗಳಲ್ಲಿ ಬಳಕೆಯಾಗಿರುವ ಅಂಕಿತನಾಮ;

ಅಬದ್ಧರ ಮಾತ ಮೆಚ್ಚುವನೆ ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ= ಮನದೊಳಗಿನ ಬಹುಬಗೆಯ ಒಳಮಿಡಿತಗಳನ್ನು ಮುಚ್ಚಿಟ್ಟುಕೊಂಡು, ಜನರನ್ನು ವಂಚಿಸುತ್ತಾ, ಸುಳ್ಳನ್ನಾಡುವ ಕಪಟ ವ್ಯಕ್ತಿಗಳನ್ನು ಒಪ್ಪಿಕೊಳ್ಳಬಾರದೆಂಬ/ಅಂತಹ ನೀಚ ವ್ಯಕ್ತಿಗಳಿಂದ ದೂರವಿರ ಬೇಕೆಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.

ಯಾವುದೇ ಒಬ್ಬ ವ್ಯಕ್ತಿಯು ಸಂಸಾರಿಯಾಗಿರಲಿ ಇಲ್ಲವೇ ಸಂನ್ಯಾಸಿಯಾಗಿರಲಿ ಇಲ್ಲವೇ ಮತ್ತೇನೆ ಆಗಿದ್ದರೂ ತನ್ನ ಜೀವನದ ಉದ್ದಕ್ಕೂ ಒಂದಲ್ಲ ಒಂದು ಕಾರಣದಿಂದಾಗಿ ಬಹುಬಗೆಯ ಒಳಮಿಡಿತಗಳಿಂದ ಪರಿತಪಿಸುತ್ತಿರುತ್ತಾನೆ. ಬೀಸುತ್ತಿರುವ ಗಾಳಿಯ ಹೊಡೆತಕ್ಕೆ ತಕ್ಕಂತೆ ಕಡಲಿನಲ್ಲಿ ನೀರಿನ ಅಲೆಗಳು ಹೇಗೆ ಸದಾಕಾಲ ಹಿಂದಕ್ಕೂ ಮುಂದಕ್ಕೂ ಚಲಿಸುತ್ತಾ, ಒಂದಲ್ಲ ಒಂದು ರೀತಿಯಲ್ಲಿ ಏರಿಳಿತಕ್ಕೆ ಒಳಗಾಗುತ್ತಿರುತ್ತವೆಯೋ ಅಂತೆಯೇ ಮಾನವ ಜೀವಿಯ ಮನದಲ್ಲಿ ಒಳಮಿಡಿತಗಳು ನಿರಂತರವಾಗಿ ತುಡಿಯುತ್ತಿರುತ್ತವೆ ಎಂಬ ವಾಸ್ತವವನ್ನು ಈ ವಚನವು ತಿಳಿಸುತ್ತದೆ.) ❖

157. ನೆನೆವುತ್ತಿದೆ ಮನ
ದುರ್ವಾಸನೆಗೆ ಹರಿವುತ್ತಿದೆ ಮನ
ಕೊನೆಗೊಂಬೆಗೆ ಎಳೆವುತ್ತಿದೆ ಮನ
ಕಟ್ಟಿಗೆ ನಿಲ್ಲದು ಮನ
ಬಿಟ್ಟಡೆ ಹೋಗದು ಮನ
ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು ಗೊತ್ತಿಗೆ ನಿಲಿಸಿ
ಬಚ್ಚ ಬರಿಯ ಬಯಲಿನೊಳಗೆ ಓಲಾಡುವ
ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.

ನೂರೆಂಟು ಬಗೆಯ ಒಳಮಿಡಿತಗಳಿಂದ ಕೂಡಿ ಚಂಚಲತೆಯಿಂದ ತುಯ್ದಾಡುತ್ತಿರುವ ತನ್ನ ಮನಸ್ಸನ್ನು ವ್ಯಕ್ತಿಯು ಒಂದು ಹತೋಟಿಗೆ ತಂದುಕೊಂಡು, ಶಿವಶರಣರ ಒಡನಾಟದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ನೆನೆ+ಉತ್ತ+ಇದೆ; ನೆನೆ=ಊಹಿಸು/ಬಯಸು/ಆಲೋಚಿಸು; ಮನ= ಮನಸ್ಸು;

ನೆನೆವುತ್ತಿದೆ ಮನ=ವ್ಯಕ್ತಿಯ ಮನದಲ್ಲಿ ನೂರೆಂಟು ಬಗೆಯ ಬಯಕೆ/ ಆಲೋಚನೆ/ಕಲ್ಪನೆ/ಆತಂಕದ ಒಳಮಿಡಿತಗಳು ಎಡೆಬಿಡದೆ ತಾಕಲಾಡುತ್ತಿರುತ್ತಿವೆ;

ದುರ್ವಾಸನೆ=ಕೆಟ್ಟ ವಾಸನೆ. ಹರಿ+ಉತ್ತ+ಇದೆ; ಹರಿ=ಚಲಿಸು/ಸಾಗು;

ದುರ್ವಾಸನೆಗೆ ಹರಿವುತ್ತಿದೆ ಮನ='ದುರ್ವಾಸನೆ' ಎಂಬ ಪದವು ಒಂದು ರೂಪಕವಾಗಿ ಬಳಕೆಗೊಂಡಿದೆ. ವ್ಯಕ್ತಿಯು ತನ್ನ ಮಯ್ ಮನದಲ್ಲಿ ತುಡಿಯುವ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಇತರರಿಗೆ ಕೇಡನ್ನು ಬಗೆಯುವ ಕೆಟ್ಟ ಆಲೋಚನೆಗಳಲ್ಲಿ ತೊಡಗುತ್ತಾನೆ; ಕೊನೆ+ಕೊಂಬೆ; ಕೊಂಬೆ=ಮರದ ರೆಂಬೆ/ ಟೊಂಗೆ; ಕೊನೆಗೊಂಬೆ=ಮರದ ಕೊಂಬೆಯ ತುತ್ತ ತುದಿ; ಎಳೆ+ಉತ್ತ+ಇದೆ; ಎಳೆ=ತನ್ನ ಕಡೆಗೆ ಸೆಳೆದುಕೊಳ್ಳುವುದು;

ಕೊನೆಗೊಂಬೆಗೆ ಎಳೆವುತ್ತಿದೆ ಮನ=ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳು ತುಂಬಿ ಕೊಂಡು, ವ್ಯಕ್ತಿಯನ್ನು ಸಾವು ನೋವಿನ ಕಡೆಗೆ ಎಳೆದೊಯ್ಯುತ್ತಿವೆ; **'ಕೊನೆಗೊಂಬೆ'** ಎಂಬ ಪದವು ಒಂದು ರೂಪಕವಾಗಿ ಬಳಕೆಗೊಂಡಿದೆ. ದೊಡ್ಡ ಮರದ ಕೊಂಬೆಯ ತುತ್ತತುದಿಗೆ ಯಾವುದೇ ವ್ಯಕ್ತಿಯು ಹೋದರೆ, ಆಯತಪ್ಪಿ

ಕೆಳಕ್ಕೆ ಬಿದ್ದು ಅವನಿಗೆ ಸಾವು ನೋವು ಉಂಟಾಗುತ್ತದೆ. ‘ಕೊನೆಗೊಂಬೆ’ ಎಂಬ ಪದ “ದುರಂತ/ಕೇಡು/ಹಾನಿ/ಸಾವು ನೋವು” ಎಂಬ ರೂಪಕದ ತಿರುಳನ್ನು ಹೊಂದಿದೆ;

ಕಟ್ಟು=ಹತೋಟಿ/ಸಂಯಮ;

ಕಟ್ಟಿಗೆ ನಿಲ್ಲದು ಮನ=ನೂರೆಂಟು ಬಗೆಯ ಕಾಮನೆ/ಚಿಂತೆ/ಆಲೋಚನೆ ಗಳಿಂದ ತುಯ್ದಾಡುತ್ತಿರುವ ಮನಸ್ಸನ್ನು ಹತೋಟಿಯಲ್ಲಿಡಲು ವ್ಯಕ್ತಿಗೆ ಆಗುತ್ತಿಲ್ಲ;

ಬಿಡು=ತೊರೆ/ತ್ಯಜಿಸು; **ಬಿಟ್ಟಡೆ ಹೋಗದು ಮನ**=ಮನವನ್ನು ಎಡೆಬಿಡದೆ ಕಾಡುತ್ತಿರುವ ಕೆಟ್ಟ ಕೆಟ್ಟ ಕಾಮನೆಗಳನ್ನು/ಆಲೋಚನೆಗಳನ್ನು ಬಿಡಬೇಕೆಂದರೂ ಆಗುತ್ತಿಲ್ಲ. ವ್ಯಕ್ತಿಯ ಮನಸ್ಸು ಚಂಚಲತೆಯಿಂದ ನರಳುತ್ತಿದೆ. ಮನಸ್ಸಿನಿಂದ ಕೆಟ್ಟ ಒಳಮಿಡಿತಗಳು ತೊಲಗುತ್ತಿಲ್ಲ; ಮಾನಸಿಕ ಚಂಚಲತೆ ಎಂದರೆ “ಯಾವುದನ್ನು ಮಾಡಲಾಗದೆ ಇಲ್ಲವೇ ಯಾವುದನ್ನು ಬಿಡಲಾಗದೆ” ಇಬ್ಬಗೆಯ ಆಲೋಚನೆಯಲ್ಲಿ ತೊಡಗುವುದು;

ತನ್ನ+ಇಚ್ಚೆ+ಅಲ್+ಆಡುವ; ಇಚ್ಚೆ=ಆಸೆ/ಬಯಕೆ; ಆಡು=ಚಲಿಸು/ವರ್ತಿಸು;

ತನ್ನಿಚ್ಛೆಯಲಾಡುವ ಮನ=ಮಾನವನ ಮನದಲ್ಲಿ ಯಾವ ಯಾವ ಬಗೆಯ ಒಳಮಿಡಿತಗಳು ತುಡಿಯುತ್ತಿರುತ್ತವೆ ಎಂದು ಹೇಳಲು ಯಾರಿಂದಲೂ ಆಗದು; ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿ ಪ್ರತಿಗಳಿಗೆಯಲ್ಲಿಯೂ ನೂರಾರು ಬಗೆಯ ಒಳಮಿಡಿತಗಳು ತಮಗೆ ತಾವೆ ಮೂಡುತ್ತಿರುತ್ತವೆ; ಒಳಮಿಡಿತಗಳು ಎಂದರೆ “ಆಸೆ, ಆಕ್ರೋಶ, ಆತಂಕ, ಸೇಡು, ಹಗೆತನ, ಹೊಟ್ಟೆಕಿಚ್ಚು, ಅಸೂಯೆ, ಹೆದರಿಕೆ, ಹಿಂಜರಿಕೆ” ಮುಂತಾದುವು;

ಕಟ್ಟಿಗೆ ತಂದು=ಹತೋಟಿಯಲ್ಲಿಟ್ಟುಕೊಂಡು; ಗೊತ್ತು=ನೆಲೆ/ನಿಶ್ಚಿತವಾದ ಒಂದು ಜಾಗ;

ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು ಗೊತ್ತಿಗೆ ನಿಲಿಸಿ=ವ್ಯಕ್ತಿಯ ಹಿಡಿತಕ್ಕೆ ಸಿಲುಕದೆ ಎಡೆಬಿಡದೆ ತುಡಿಯುತ್ತಿರುವ ಕೆಟ್ಟ ಆಲೋಚನೆಗಳೆಲ್ಲವನ್ನೂ ಒಂದು ಹತೋಟಿಗೆ ತಂದುಕೊಂಡು, ಮನಸ್ಸಿನಲ್ಲಿ ಮತ್ತೆ ಮತ್ತೆ ಚಂಚಲತೆಯು ಉಂಟಾಗದಂತೆ ಎಚ್ಚರವನ್ನು ವಹಿಸಿ, ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳು ಮೂಡುವಂತೆ ಮಾಡಿ;

ಬಚ್ಚ ಬರಿಯ=ಏನೂ ಇಲ್ಲದ; ಬಯಲು+ಇನ್+ಒಳಗೆ; ಬಯಲು=

ಮರಗಿಡಗಳಾಗಲಿ ಇಲ್ಲವೇ ಕಲ್ಲು ಬಂಡೆಗಳಾಗಲಿ ಇಲ್ಲದ ಬರಿದಾದ ವಿಸ್ತಾರವಾದ ಜಾಗ;

ಬಚ್ಚ ಬರಿಯ ಬಯಲು=ಇದೊಂದು ನುಡಿಗಟ್ಟು. ಮನದಲ್ಲಿ ಕೆಟ್ಟ ಕಾಮನೆ/ಕೆಟ್ಟ ಆಲೋಚನೆಗಳು ಇಲ್ಲದಿರುವುದು; ಓಲಾಡು=ನಲಿ/ಹಿಗ್ಗು/ಮೆರೆದಾಡು; ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು ಶಿವನನ್ನು ಪೂಜಿಸುವವನು; ನಾ=ನಾನು; ಬೆಚ್ಚ+ಅಂತೆ+ಇದ್ದೆನ್+ಅಯ್ಯಾ; ಬೆಚ್ಚ=ಹೊಂದಿಸು/ಜತೆಗೂಡಿಸು; ಬೆಚ್ಚಂತೆ=ಜತೆಗೂಡಿದಂತೆ;

ಬಚ್ಚ ಬರಿಯ ಬಯಲಿನೊಳಗೆ ಓಲಾಡುವ ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ=ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ. ಒಳಿತಿನ ನಡೆನುಡಿಗಳಿಂದ ಕೂಡಿ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತ, ಒಲವು ನಲಿವು ನೆಮ್ಮದಿಯಿಂದ ಬಾಳುತ್ತಿರುವ ಶಿವಶರಣರ ಜತೆಗೂಡಿ ನಾನು ಮಾನಸಿಕ ತೊಳಲಾಟವಿಲ್ಲದೆ ನೆಮ್ಮದಿಯಾಗಿ ಬಾಳುತ್ತಿದ್ದೇನೆ;

ಅಪ್ಪಣ್ಣ=ಶಿವಶರಣೆ ಲಿಂಗಮ್ಮನ ಗಂಡ; ಅಪ್ಪಣ್ಣ ಪ್ರಿಯ=ಅಪ್ಪಣ್ಣನಿಗೆ ಆಪ್ತನಾದ; ಚೆನ್ನಬಸವಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ;

ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ=ಲಿಂಗಮ್ಮನು ರಚಿಸಿರುವ ವಚನಗಳ ಅಂಕಿತನಾಮ

❖

158. ಮದ ಮತ್ಸರ ಬಿಡದು ಮನದ ಕನಲು ನಿಲ್ಲದು
ಒಡಲ ಗುಣ ಹಿಂಗದು ಇವ ಮೂರನು ಬಿಡದೆ
ನಡಸುವನ್ನಕ್ಕ ಘನವ ಕಾಣಬಾರದು
ಘನವ ಕಾಂಬುದಕ್ಕೆ ಮದ ಮತ್ಸರವನೆ ಬಿಟ್ಟು
ಮನದ ಕನಲನೆ ನಿಲಿಸಿ ಒಡಲ ಗುಣ ಹಿಂಗಿ
ತಾ ಮೃಡರೂಪಾದಲ್ಲದೆ ಘನವ ಕಾಣಬಾರದೆಂದರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

ವ್ಯಕ್ತಿಯು ತನ್ನ ಮಯ್ ಮನದಲ್ಲಿ ಯಾವಾಗಲೂ ತುಡಿಯುತ್ತಿರುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳಿದಾಗ ಮಾತ್ರ, ಅವನ ಬದುಕು ಉತ್ತಮವಾಗಿ ರೂಪುಗೊಳ್ಳುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಮದ=ಸೊಕ್ಕು/ಗರ್ವ; ಮೇಲು–ಕೀಳು ಎಂಬ ಜಾತಿ ವ್ಯವಸ್ಥೆ ಮತ್ತು ಬಡವ–ಬಲ್ಲಿದ ಎಂಬ ವರ್ಗ ತಾರತಮ್ಯದ ಕಾರಣದಿಂದಾಗಿ ಸಮಾಜದಲ್ಲಿರುವ ಬಹುತೇಕ ವ್ಯಕ್ತಿಗಳ ನಡೆನುಡಿಯಲ್ಲಿ ' ಜಾತಿ ಮದ ' ಮತ್ತು ' ಹಣ ಮದ ' ತುಂಬಿ ತುಳುಕುತ್ತಿರುತ್ತದೆ;

ಮಾದಿಗ ಜಾತಿಯಿಂದ ತೊಡಗಿ ಬ್ರಾಹ್ಮಣ ಜಾತಿಯವರೆಗೆ ಮೇಲು ಕೀಳಿನ ಮೆಟ್ಟಲುಗಳಿಂದ ಕೂಡಿರುವ ನೂರೆಂಟು ಬಗೆಯ ಜಾತಿಗಳಲ್ಲಿ, ಪ್ರತಿಯೊಬ್ಬ ವ್ಯಕ್ತಿಯು ತನಗಿಂತ ಕೆಳಹಂತದಲ್ಲಿರುವ ಜಾತಿಯ ಜನರನ್ನು ಕೀಳಾಗಿ ಕಾಣುತ್ತ, 'ತಾನು ಮೇಲು ಜಾತಿಯವನು' ಎಂಬ ಸೊಕ್ಕಿನಿಂದ ಕೂಡಿರುತ್ತಾನೆ. ಆದ್ದರಿಂದ 'ಜಾತಿಮದ' ಎಂಬುದು ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿಯೂ ನಾನಾ ಪ್ರಮಾಣದಲ್ಲಿ ಅಂದರೆ ಕೆಲವರಲ್ಲಿ ಹೆಚ್ಚಾಗಿ, ಮತ್ತೆ ಕೆಲವರಲ್ಲಿ ಕಡಿಮೆಯ ಪ್ರಮಾಣದಲ್ಲಿ ನೆಲೆಗೊಂಡಿರುತ್ತದೆ;

ವರ್ಗ ತಾರತಮ್ಯದಿಂದಾಗಿ ಬಡತನ ಮತ್ತು ಸಿರಿವಂತಿಕೆಯು ಸಮಾಜದಲ್ಲಿ ನೆಲೆಗೊಂಡಿದೆ. ಚಿನ್ನ ಬೆಳ್ಳಿ ಒಡವೆ ವಸ್ತು ಆಸ್ತಿ ಪಾಸ್ತಿಗಳನ್ನು ಹೇರಳವಾಗಿ ಹೊಂದಿರುವ ಸಿರಿವಂತರು ಬಡವರ ಮುಂದೆ ಸೊಕ್ಕಿನಿಂದ ಮೆರೆಯುತ್ತಾರೆ;

ಮತ್ಸರ=ಹೊಟ್ಟೆಕಿಚ್ಚು. ಇತರರಿಗೆ ಹಣ/ಆಸ್ತಿ/ವಿದ್ಯೆ/ಹುದ್ದೆಯು ದೊರೆತಾಗ ವ್ಯಕ್ತಿಯು ಅದನ್ನು ಕಂಡು ಸಂಕಟಕ್ಕೆ ಗುರಿಯಾಗುವುದು; ಬಿಡು=ತೊರೆ/ತ್ಯಜಿಸು;

ಮದ ಮತ್ಸರ ಬಿಡದು=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಮದ ಮತ್ಸರದ ಕೆಟ್ಟ ನಡೆನುಡಿಗಳನ್ನು ಬಿಡದೆ, ಅತ್ಯಂತ ನೀಚನಾಗಿ ಬಾಳುತ್ತಿರುವುದು;

ಮನ=ಮನಸ್ಸು; ಕನಲು=ತಳಮಳ/ಕುದಿ.

ಮನದ ಕನಲು ಬಿಡದು=ವ್ಯಕ್ತಿಯ ಮನದಲ್ಲಿ ನೂರಾರು ಬಗೆಯ ಆಸೆ, ಆತಂಕ, ಆಕ್ರೋಶ, ಹೆದರಿಕೆ, ಹಿಂಜರಿಕೆ, ಹಗೆತನದ ಒಳಮಿಡಿತಗಳು ತುಂಬಿಕೊಂಡು, ಸದಾಕಾಲ ಒಂದಲ್ಲ ಒಂದು ಬಗೆಯ ಸಂಕಟದಲ್ಲಿ ವ್ಯಕ್ತಿಯು ನರಳುತ್ತಿರುವುದು/ಚಡಪಡಿಸುತ್ತಿರುವುದು;

ಒಡಲು=ದೇಹ; ಗುಣ=ನಡತೆ; ಒಡಲ ಗುಣ=ವ್ಯಕ್ತಿಯ ಮಯ್ ಮನದಲ್ಲಿರುವ ಒಳಿತು ಕೆಡುಕಿನ ಒಳಮಿಡಿತಗಳು; ಹಿಂಗು=ಕಡಿಮೆಯಾಗು/ತಗ್ಗು; **ಒಡಲ ಗುಣ ಹಿಂಗದು**=ವ್ಯಕ್ತಿಯು ಜೀವಂತವಾಗಿರುವ ಕೊನೆಯ ಗಳಿಗೆಯವರೆಗೂ ಒಂದಲ್ಲ ಒಂದು ಬಗೆಯ ಕೆಟ್ಟ ಒಳಮಿಡಿತಗಳು ಇದ್ದೇ ಇರುತ್ತವೆ. ಅವು ಸಂಪೂರ್ಣವಾಗಿ ನಾಶವಾಗುವುದಿಲ್ಲ;

ನಡಸು+ಅನ್ನಕ್ಕ; ನಡಸು=ಆಚರಿಸು; ಅನ್ನಕ್ಕ=ವರೆಗೆ/ತನಕ; ಘನ=ದೊಡ್ಡದು/ ಉತ್ತಮವಾದುದು; ಕಾಣ್=ನೋಡು/ಹೊಂದು/ಪಡೆ;

ಘನವ ಕಾಣು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ದೊಡ್ಡದನ್ನು ಇಲ್ಲವೇ ಉತ್ತಮವಾದುದನ್ನು ಕಾಣುವುದು ಎಂದರೆ ವ್ಯಕ್ತಿಯು ತನ್ನ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಳ್ಳುವುದು;

ಇವ ಮೂರನು ಬಿಡದೆ ನಡಸುವನ್ನಕ್ಕ ಘನವ ಕಾಣಬಾರದು=ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಮದ– ಮತ್ಸರ–ಮನದ ತಳವಳವನ್ನು ಬಿಡುವ ತನಕ, ಅವನ ವ್ಯಕ್ತಿತ್ವ ಒಳ್ಳೆಯ ರೀತಿಯಲ್ಲಿ ರೂಪುಗೊಳ್ಳುವುದಿಲ್ಲ. ಅವನು ಬದುಕು ಹಸನಾಗುವುದಿಲ್ಲ;

ಕಾಂಬುದಕ್ಕೆ=ಕಾಣುವುದಕ್ಕೆ/ಪಡೆಯುವುದಕ್ಕೆ; **ಘನವ ಕಾಂಬುದಕ್ಕೆ**=ಒಳ್ಳೆಯ ವ್ಯಕ್ತಿತ್ವವನ್ನು ಪಡೆಯುವುದಕ್ಕೆ;

ಮನದ ಕನಲನೆ ನಿಲಿಸಿ=ಮನದ ತಳಮಳವನ್ನು ಹೋಗಲಾಡಿಸಿಕೊಂಡು, ಮನದಲ್ಲಿ ಒಳ್ಳೆಯ ನಿಲುವನ್ನು ತಳೆದು;

ತಾ=ತಾನು/ವ್ಯಕ್ತಿ; ಮೃಡ+ರೂಪ+ಆದಲ್ಲದೆ; ಮೃಡ=ಶಿವ; ರೂಪ=ಆಕಾರ; ಮೃಡರೂಪ=ಶಿವನ ರೂಪ. ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು

ಕಲ್ಲು–ಮಣ್ಣು–ಮರ–ಲೋಹದಿಂದ ಮಾಡಿದ ಲಿಂಗದ ಆಕಾರದಲ್ಲಿ ಶಿವನ ರೂಪವನ್ನು ಕಾಣುತ್ತಿರಲಿಲ್ಲ. ಸಹಮಾನವರಿಗೆ ಮತ್ತು ಸಮಾಜಕ್ಕೆ ಜನರು ಮಾಡುವ ಒಳಿತಿನ ನಡೆನುಡಿಗಳಲ್ಲಿ ಶಿವನ ರೂಪವನ್ನು ಕಾಣುತ್ತಿದ್ದರು.

ಕಾಣಬಾರದು+ಎಂದರು;

ತಾ ಮೃಡರೂಪಾದಲ್ಲದೆ ಘನವ ಕಾಣಬಾರದೆಂದರು=ವ್ಯಕ್ತಿಯು ಒಳ್ಳೆಯ ನಡೆನುಡಿಯನ್ನು ಹೊಂದದಿದ್ದರೆ, ಆತನ ವ್ಯಕ್ತಿತ್ವ ಉತ್ತಮಗೊಳ್ಳುವುದಿಲ್ಲ ಮತ್ತು ಅವನು ಶಿವನನ್ನು ಕಾಣಲಾರ. ಅಂದರೆ ಕೆಟ್ಟ ನಡೆನುಡಿಯುಳ್ಳವರಿಗೆ ಶಿವನು ಒಲಿಯುವುದಿಲ್ಲ;

ಅಪ್ಪಣ್ಣ=ಶಿವಶರಣೆ ಲಿಂಗಮ್ಮನ ಗಂಡ; ಅಪ್ಪಣ್ಣ ಪ್ರಿಯ=ಅಪ್ಪಣ್ಣನಿಗೆ ಆಪ್ತನಾದ; ಚೆನ್ನಬಸವಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ;

ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ=ಲಿಂಗಮ್ಮನು ರಚಿಸಿರುವ ವಚನಗಳ ಅಂಕಿತನಾಮ;

❖

41. ಶಿವಲೆಂಕ ಮಂಚಣ್ಣ

ದೊರೆತಿರುವ ವಚನಗಳು: 132
ವಚನಗಳ ಅಂಕಿತನಾಮ: ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ

159. ಗುರು ವೈಭವಕ್ಕೆ ಸಿಕ್ಕಿದಾಗಲೆ ಶಿಷ್ಯಂಗೆ ನರಕ ಪ್ರಾಪ್ತಿ
ಲಿಂಗ ಭಜನೆಗೆ ಸಿಕ್ಕಿದಾಗಲೆ ಮರಣಕ್ಕೊಳಗು
ಜಂಗಮ ಜಂಗುಳಿಯಾಗಿ ಕಂಡಕಂಡವರಂಗಳಕ್ಕೆ
ಜಂಘೆಯನಿಕ್ಕಲಾಗಿ ನಿರಂಗಕ್ಕೆ ಹೊರಗು
ಇಂತೀ ಇವರು ನಿಂದುದಕ್ಕೆ ಬಂಧವಿಲ್ಲದಿರಬೇಕು
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ.

ಯಾವುದನ್ನಾಗಲಿ ಆಡಂಬರದಿಂದ/ಬೂಟಾಟಿಕೆಯಿಂದ/ಡಂಬಾಚಾರದಿಂದ ಹೊತ್ತು ಮೆರೆಸುವುದಕ್ಕೆ ತೊಡಗಿದಾಗ, ಅದು ತನ್ನ ನಿಜಗುಣವನ್ನು ಕಳೆದುಕೊಳ್ಳುತ್ತದೆ ಎಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

‘ನಿಜಗುಣ’ ಎಂದರೆ ಯಾವುದೇ ಒಂದು ವಸ್ತು/ಜೀವಿ/ವ್ಯಕ್ತಿಯಲ್ಲಿ ವಾಸ್ತವವಾಗಿ ಇರುವ ರೂಪ/ಗುಣ.

(ಗುರು=ವಿದ್ಯೆಯನ್ನು ಕಲಿಸುವ/ಅರಿವನ್ನು ಮೂಡಿಸುವ/ಒಳ್ಳೆಯ ನಡೆನುಡಿಗಳನ್ನು ರೂಪಿಸುವ ವ್ಯಕ್ತಿ; ವೈಭವ=ಸಿರಿವಂತಿಕೆಯ ಪ್ರದರ್ಶನ/ಆಡಂಬರದಿಂದ ಮೆರೆಯುವುದು/ನೋಡುವವರ ಕಣ್ಮನಗಳನ್ನು ಸೆಳೆದು, ಅವರಲ್ಲಿ ಅಚ್ಚರಿಯನ್ನು

ಮೂಡಿಸುವಂತೆ ತಮ್ಮ ಸಿರಿಸಂಪದವನ್ನು ಮೆರೆಸುವುದು; ಸಿಕ್ಕಿದ+ಆಗಲೆ; ಸಿಕ್ಕು=ಒಳಗಾಗು/ಈಡಾಗು; ಆಗಲೆ=ಅಂತಹ ಸನ್ನಿವೇಶದಲ್ಲಿಯೇ;

ಶಿಷ್ಯ=ವಿದ್ಯೆಯನ್ನು ಕಲಿಯುವವನು/ಅರಿವನ್ನು ಪಡೆಯುವ ಹಂಬಲವುಳ್ಳವನು; ನರಕ=ಜನಮನದ ಕಲ್ಪನೆಯಲ್ಲಿ ರೂಪು ಗೊಂಡಿರುವ ಜಾಗದ ಹೆಸರು. ನಮ್ಮ ಕಣ್ಣ ಮುಂದಿನ ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು, ಅನಂತರ ತಾನು ಮಾಡಿದ ಪಾಪದ ಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಮತ್ತೊಂದು ಲೋಕದ ಜಾಗ. ಜನರಿಗೆ ಕೇಡನ್ನು ಬಗೆದವರು ಸತ್ತ ನಂತರ ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು ಆನಂದದ ನೆಲೆಯಾದ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಸಮುದಾಯದ ಮನದಲ್ಲಿದೆ;

ಪ್ರಾಪ್ತಿ=ಉಂಟಾಗುವುದು/ದೊರೆಯುವುದು;

ಗುರು ವೈಭವಕ್ಕೆ ಸಿಲುಕಿದಾಗಲೆ ಶಿಷ್ಯಂಗೆ ನರಕ ಪ್ರಾಪ್ತಿ=ಶಿಷ್ಯನಿಗೆ ತಿಳುವಳಿಕೆಯನ್ನು ಹೇಳಬೇಕಾದ ಗುರು, ತಾನು ಇತರರಿಗಿಂತ ದೊಡ್ಡವನು/ತಿಳಿದವನು ಎಂಬ ಅಹಂಕಾರಕ್ಕೆ ಒಳಗಾಗಿ ತನ್ನತನವನ್ನು ಮೆರೆಯಲು ತೊಡಗಿದಾಗ, ಶಿಷ್ಯನ ಬದುಕು ಬಹುಬಗೆಯ ಸಂಕಟಗಳಿಗೆ ಗುರಿಯಾಗುತ್ತದೆ. ಏಕೆಂದರೆ ಅಂತಹ ಸನ್ನಿವೇಶದಲ್ಲಿ ಗುರುವಾದವನು ಆತ್ಮಗೌರವ ನಡೆನುಡಿಗಳನ್ನು ಮರೆತು ಸಿರಿವಂತರ ಮತ್ತು ಸಾಮಾಜಿಕವಾಗಿ ಎತ್ತರದ ಗದ್ದುಗೆಯಲ್ಲಿರುವ ವ್ಯಕ್ತಿಗಳ ಹಿಂಬಾಲಕನಾಗುತ್ತಾನೆ. ಈ ರೀತಿ ಸಂಪತ್ತಿನ ಅಡಿಯಾಳಾದ ಮತ್ತು ಅಹಂಕಾರಿಯಾದ ಗುರುವಿನಿಂದ ಶಿಷ್ಯನು ಒಳ್ಳೆಯ ನಡೆನುಡಿಗಳನ್ನು ಕಲಿಯಲಾಗದೆ/ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಾಗದೆ, ಸಂಕಟಕ್ಕೆ ಗುರಿಯಾಗಿ ನರಳತೊಡಗುತ್ತಾನೆ;

ಲಿಂಗ=ಶಿವ/ಶಿವನ ಸಂಕೇತವಾದ ವಿಗ್ರಹ; ಭಜನೆ=ವಾದ್ಯಗಳನ್ನು ನುಡಿಸುತ್ತ/ಚಪ್ಪಾಳೆಯನ್ನು ತಟ್ಟುತ್ತ ದೇವರ ಹೆಸರನ್ನು ಉಚ್ಚರಿಸುವುದು/ದೇವರ ಮಹಿಮೆಯನ್ನು ಕುರಿತು ಹಾಡುವುದು; ಮರಣಕ್ಕೆ+ಒಳಗು; ಮರಣ=ಸಾವು/ಜೀವ ಹೋಗುವುದು; ಒಳಗು=ಸಿಲುಕುವುದು/ವಶವಾಗುವುದು; ಮರಣಕ್ಕೊಳಗು=ಇಲ್ಲವಾಗುವುದು;

ಲಿಂಗ ಭಜನೆಗೆ ಸಿಕ್ಕಿದಾಗಲೆ ಮರಣಕ್ಕೊಳಗು=ವ್ಯಕ್ತಿಯು ತನ್ನ ನಿಜ ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ನಡೆನುಡಿಗಳನ್ನು ತೊರೆದು, ಲಿಂಗದ ಹೆಸರನ್ನು/

ಮಹಿಮೆಯನ್ನು ಬಾಯಿಮಾತಿನಲ್ಲಿ ಕೊಂಡಾಡುವುದಕ್ಕೆ ತೊಡಗಿದಾಗ ದೇವರು ಅಂತಹ ವ್ಯಕ್ತಿಯ ಪಾಲಿಗೆ ತೋರಿಕೆಯ ವಸ್ತುವಾಗುತ್ತಾನೆ ಇಲ್ಲವೇ ಅವನ ಪಾಲಿಗೆ ಇಲ್ಲವಾಗುತ್ತಾನೆ. ಏಕೆಂದರೆ ಲಿಂಗಕ್ಕೆ ಮೆಚ್ಚುಗೆಯಾಗುವುದು ವ್ಯಕ್ತಿಯ ಒಳ್ಳೆಯ ನಡೆನುಡಿಗಳೇ ಹೊರತು ಯಾವುದೇ ಬಗೆಯ ಪೂಜೆ/ಆಚರಣೆಗಳಲ್ಲ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಜಂಗಮ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಲ್ಲಿ ಶಿವನನ್ನು ಕಾಣುವವನು/ಒಳ್ಳೆಯ ನಡೆನುಡಿಗೆ ಪ್ರೇರಣೆಯಾಗು ವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಜನಮನದಲ್ಲಿ ಮೂಡಿಸು ವವನು; ಜಂಗುಳಿ+ಆಗಿ; ಜಂಗುಳಿ=ಕೀಳು/ಹೀನ/ಕೆಟ್ಟ; ಜಂಗುಳಿಯಾಗಿ=ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಯಾಗಿ; ಕಂಡ+ಕಂಡವರ+ಅಂಗಳಕ್ಕೆ; ಕಾಣ್=ನೋಡು; ಕಂಡ=ಕಣ್ಣಿಗೆ ಕಾಣಿಸಿದ; ಕಂಡಕಂಡವರ=ಕಣ್ಣಿಗೆ ಕಂಡವರ/ಕಣ್ಣಿಗೆ ಬಿದ್ದವರ; ಅಂಗಳ=ಮನೆಗೆ ಸೇರಿಕೊಂಡಂತೆ ಇರುವ ತೆರೆದ ಜಾಗ/ಆವರಣ;

ಜಂಘೆ+ಅನ್+ಇಕ್ಕಲಾಗಿ; ಜಂಘೆ=ಕಣಕಾಲು/ಮಂಡಿಚಿಪ್ಪಿನಿಂದ ಕೆಳಗೆ ಕಂಡುಬರುವ ಕಾಲು; ಅನ್=ಅನ್ನು; ಇಡು=ಇರಿಸು/ಹಾಕು/ಮಡಗು; ಇಕ್ಕಲಾಗಿ= ಇಡಲಾಗಿ/ಹಾಕಲಾಗಿ; **ಜಂಘೆಯನಿಕ್ಕುವುದು**=ತಂಗುವುದು/ಬಿಡಾರ ಹೂಡುವುದು/ಇಳಿದುಕೊಳ್ಳುವುದು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ಒಂದು ನುಡಿಗಟ್ಟು; ನಿರಂಗ=ಮಯ್ ಮನದಲ್ಲಿ ಮೂಡುವ ಕೆಡುಕಿನ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ನಡೆನುಡಿಗಳಿಂದ ಬಾಳುವುದು; ಹೊರಗು=ದೂರವಿರುವುದು/ಹೊರಗಡೆ ಇರುವುದು; **ನಿರಂಗಕ್ಕೆ ಹೊರಗು**= ಒಳ್ಳೆಯತನದಿಂದ ದೂರವಾಗುವುದು/ಮಯ್ ಮನದ ಮೇಲಣ ಹತೋಟಿಯನ್ನು ಕಳೆದುಕೊಳ್ಳುವುದು;

ಜಂಗಮ ಜಂಗುಳಿಯಾಗಿ ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ ನಿರಂಗಕ್ಕೆ ಹೊರಗು=ಜನಮನದಲ್ಲಿ ಒಳಿತಿನ ನಡೆನುಡಿಗಳ ಬಗ್ಗೆ ತಿಳಿವನ್ನು ಮೂಡಿಸುತ್ತ, ಎಲ್ಲಿಯೂ ಒಂದೆಡೆ ನಿಲ್ಲದೆ, ಯಾವುದೇ ಬಗೆಯ ಕೆಟ್ಟ ಒಳಮಿಡಿತಗಳಿಗೆ ಒಳಗಾಗದೆ ನಿರಂತರವಾಗಿ ಸಂಚರಿಸುತ್ತಿರಬೇಕಾದ ಜಂಗಮನು, ತನ್ನ ಉದ್ದೇಶವನ್ನು ಮರೆತು ಊಟೋಪಚಾರಗಳ ಆಸೆಯಿಂದ ಸಿರಿವಂತರ ಮನೆಗಳಲ್ಲಿ ತಂಗುವುದಕ್ಕೆ ತೊಡಗಿದಾಗ ತನ್ನ ಮಯ್ ಮನಗಳ ಮೇಲಣ ಹತೋಟಿಯನ್ನು ಕಳೆದುಕೊಂಡು ಕೆಟ್ಟ ಬಯಕೆಗಳಿಗೆ ಬಲಿಯಾಗುತ್ತಾನೆ;

ಇಂತು+ಈ; ಇಂತು=ಈ ರೀತಿಯಲ್ಲಿ/ಈ ಬಗೆಯಲ್ಲಿ;

ಈ ಇವರು=ಈ ಮೂವರು.

1) ಗುರು

2) ಲಿಂಗವನ್ನು ಪೂಜಿಸುವವನು.

3) ಜಂಗಮ

ನಿಲ್=ಜೀವಿಸು/ಬದುಕ್ಕು; ನಿಂದುದಕ್ಕೆ=ಬದುಕುವುದಕ್ಕೆ/ಜೀವಿಸುವುದಕ್ಕೆ; ಬಂಧ+ಇಲ್ಲದೆ+ಇರಬೇಕು; ಬಂಧ=ಕಟ್ಟು/ಪಾಶ/ಮೋಹ; **ಬಂಧವಿಲ್ಲದಿರಬೇಕು**= ಕೆಟ್ಟ ನಡೆನುಡಿಗಳಿಗೆ ಒಳಗಾಗಬಾರದು;

ಮಲ್ಲಿಕಾರ್ಜುನಲಿಂಗ+ಅನ್+ಅರಿವುದಕ್ಕೆ; ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗ=ಶಿವ/ಶಿವಲೆಂಕ ಮಂಚಣ್ಣನ ವಚನಗಳ ಅಂಕಿತನಾಮ; ಅರಿ=ತಿಳಿ/ಕಲಿ; ಅರಿವುದಕ್ಕೆ=ತಿಳಿದುಕೊಳ್ಳುವುದಕ್ಕೆ;

ಇಂತೀ ಇವರು ನಿಂದುದಕ್ಕೆ ಬಂಧವಿಲ್ಲದಿರಬೇಕು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ=ಒಳ್ಳೆಯ ನಡೆನುಡಿಗಳ ಸಂಕೇತವಾದ ಮಲ್ಲಿಕಾರ್ಜುನಲಿಂಗವನ್ನು ತಿಳಿಯಬೇಕಾದರೆ ಈ ಮೂವರು ಅಂದರೆ ಗುರುವಾದವನು/ಲಿಂಗದಲ್ಲಿ ಒಲವುಳ್ಳವನು/ಜಂಗಮನಾದವನು ತಮ್ಮ ಜೀವನದಲ್ಲಿ ಯಾವುದೇ ಬಗೆಯ ಅಹಂಕಾರದ ಪ್ರದರ್ಶನಕ್ಕೆ/ತೋರಿಕೆಯ ನಡೆನುಡಿಗಳಿಗೆ/ಕೆಟ್ಟ ಬಯಕೆಗಳಿಗೆ ಒಳಗಾಗಬಾರದು.)

❖

42. ಸಕಲೇಶ ಮಾದರಸ

ದೊರೆತಿರುವ ವಚನಗಳು: 134
ವಚನಗಳ ಅಂಕಿತನಾಮ: ಸಕಲೇಶ್ವರದೇವ/ಸಕಳೇಶ್ವರದೇವ

160. ಎನ್ನ ಮನದಲ್ಲಿ ದಿಟವಿಲ್ಲ ಪೂಜಿಸಿ ಏವೆನು
ಹೃದಯದಲ್ಲೊಂದು ವಚನದಲ್ಲೊಂದು ಎನಗೆ ನೋಡಾ
ಎನ್ನ ಕಾಯ ಭಕ್ತ ಮನ ಭವಿ
ಸಕಲೇಶ್ವರದೇವಾ.

ವ್ಯಕ್ತಿಯು ತನ್ನ ನಡೆನುಡಿಗಳನ್ನು ತಾನೇ ಒರೆಹಚ್ಚಿ ನೋಡಿಕೊಳ್ಳುತ್ತ, ತನ್ನ ಮನದೊಳಗಿನ ಒಳಮಿಡಿತಗಳಿಗೂ ಬಹಿರಂಗದ ನಡೆನುಡಿಗಳಿಗೂ ಇರುವ ಅಂತರವನ್ನು ಕುರಿತು ಪರಿತಪಿಸುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ.

ಎನ್ನ=ನನ್ನ; ಮನದಲ್ಲಿ=ಮನಸ್ಸಿನಲ್ಲಿ; ದಿಟ+ಇಲ್ಲ; ದಿಟ=ನಿಜ/ಸತ್ಯ/ವಾಸ್ತವ;

ಎನ್ನ ಮನದಲ್ಲಿ ದಿಟವಿಲ್ಲ=ನನ್ನ ಮನದಲ್ಲಿ ಒಳ್ಳೆಯ ನಡೆನುಡಿಗಳ ಬಗ್ಗೆ ಚಿಂತನೆಯಿಲ್ಲ. ಕೆಟ್ಟ ಕಾಮನೆಗಳೇ ನನ್ನ ಮನದಲ್ಲಿ ತುಂಬಿವೆ;

ಪೂಜಿಸಿ=ಪೂಜೆಯನ್ನು ಮಾಡಿ; ಏವೆನು=ಏನು ಮಾಡಲಿ;

ಎನ್ನ ಮನದಲ್ಲಿ ದಿಟವಿಲ್ಲ; ಪೂಜಿಸಿ ಏವೆನು=ಅಂತರಂಗದ ಮನದಲ್ಲಿ ಕೆಟ್ಟ ಕಾಮನೆಗಳನ್ನು ಹೊಂದಿರುವ ನಾನು, ಬಹಿರಂಗದಲ್ಲಿ ಶಿವನನ್ನು ಪೂಜಿಸುತ್ತಿರುವುದರಿಂದ ಏನು ತಾನೆ ಪ್ರಯೋಜನ. ಅಂದರೆ ಒಳ್ಳೆಯದನ್ನು ಪಡೆಯಲಾರೆನು;

ಹೃದಯ+ಅಲ್ಲಿ+ಒಂದು; ಹೃದಯ=ಎದೆ/ಮನಸ್ಸು; ವಚನ+ಅಲ್ಲಿ+ಒಂದು; ವಚನ=ಮಾತು/ನುಡಿ;

ಹೃದಯದಲ್ಲೊಂದು ವಚನದಲ್ಲೊಂದು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ನನ್ನ ಮನದಲ್ಲಿ ಕೆಟ್ಟ ಒಳಮಿಡಿತಗಳು ತುಡಿಯುತ್ತಿವೆ. ಆದರೆ ಅವೆಲ್ಲವನ್ನು ಮುಚ್ಚಿಟ್ಟುಕೊಂಡು, ಬಹಿರಂಗದ ಸಾಮಾಜಿಕ ವ್ಯವಹಾರಗಳಲ್ಲಿ ಇತರರ ಮುಂದೆ ಸತ್ಯ, ನೀತಿ, ನ್ಯಾಯದ ನುಡಿಗಳನ್ನಾಡುತ್ತಿದ್ದೇನೆ;

ಕಾಯ=ಶರೀರ/ದೇಹ/ಮಯ್;

ಭಕ್ತ=ಮೇಲು ಕೀಳಿನ ಜಾತಿ ಕಟ್ಟುಪಾಡುಗಳಿಂದ ಹೊರಬಂದು, ಒಳ್ಳೆಯ ನಡೆನುಡಿಗಳಿಂದ ಬಾಳುವುದೇ ಶಿವಪೂಜೆಯೆಂದು ತಿಳಿದು, ಒಳ್ಳೆಯ ಕಾಯಕದ ಮೂಲಕ ತನಗೆ ಒಳಿತನ್ನು ಬಯಸುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು;

ಭವಿ=ಮೇಲು ಕೀಳಿನ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಮಾನವ ಬದುಕಿನ ಆಗುಹೋಗುಗಳಿಗೆ ಕರ್ಮ ಸಿದ್ಧಾಂತ ಮತ್ತು ಹಿಂದಿನ ಜನ್ಮದ ಪಾಪ ಪುಣ್ಯಗಳೇ ಕಾರಣವೆಂದು ನಂಬಿಕೊಂಡಿರುವ ವ್ಯಕ್ತಿ;

ಎನ್ನ ಕಾಯ ಭಕ್ತ; ಮನ ಭವಿ=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ಸಮಾಜದ ಕಣ್ಣಿಗೆ ನಾನು ಬಹಳ ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತಿದ್ದೇನೆ. ಆದರೆ ನನ್ನ ಮನದೊಳಗೆ ಅತ್ಯಂತ ಕೆಟ್ಟ ಕಾಮನೆಗಳು ತುಂಬಿವೆ;

ಸಕಲೇಶ್ವರದೇವ=ಶಿವನಿಗೆ ಇದ್ದ ಮತ್ತೊಂದು ಹೆಸರು. ಸಕಲೇಶ ಮಾದರಸರ ವಚನಗಳ ಅಂಕಿತನಾಮ;

ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಳಗೊಂದು ಮತ್ತು ಹೊರಗೊಂದು ರೀತಿಯ ಇಬ್ಬಗೆಯ ವ್ಯಕ್ತಿತ್ವ ಬೇರೆ ಬೇರೆ ಪ್ರಮಾಣದಲ್ಲಿ ಇದ್ದೇ ಇರುತ್ತದೆ. ವ್ಯಕ್ತಿಯ ಇಂತಹ ಇಬ್ಬಗೆಯ ವರ್ತನೆಗೆ ಕಾರಣವೇನೆಂಬುದನ್ನು ನಿಸರ್ಗದ ಮತ್ತು ಸಮಾಜದ ನೆಲೆಗಳಿಂದ ನೋಡಬೇಕು.

ಜಗತ್ತಿನಲ್ಲಿ ಹುಟ್ಟಿ ಬೆಳೆದು ಬಾಳಿ ಅಳಿಯುತ್ತಿರುವ ಜೀವಿಗಳಲ್ಲಿ ಮಾನವ ಜೀವಿಯನ್ನು ಹೊರತುಪಡಿಸಿ, ಇನ್ನುಳಿದ ಪ್ರಾಣಿ, ಹಕ್ಕಿ, ಕ್ರಿಮಿಕೀಟಗಳೆಲ್ಲವೂ ನಿಸರ್ಗದ ನೆಲೆಯಲ್ಲಿ ಬೆತ್ತಲೆಯಾಗಿ ಅಂದರೆ ಮಯ್ ಮೇಲೆ ಯಾವುದೇ

ಬಗೆಯ ಬಟ್ಟೆಯನ್ನು ತೊಡದೆ, ಬೆತ್ತಲೆಯಾಗಿಯೇ ನಿಸರ್ಗದೊಂದಿಗೆ ಜತೆಗೂಡಿ ಬಾಳಿ ಅಳಿಯುತ್ತವೆ. ಆದರೆ ಮಯ್ ಮೇಲೆ ಬಟ್ಟೆಯನ್ನು ತೊಟ್ಟಿರುವ ಮಾನವ ಜೀವಿಯು ಮಾತ್ರ ನಿಸರ್ಗದ ನೆಲೆಯಲ್ಲಿ ಇತ್ತ ಒಂದು ಪ್ರಾಣಿಯಾಗಿ; ಅತ್ತ ತಾನೇ ಕಟ್ಟಿಕೊಂಡಿರುವ ಸಮಾಜದ ನೆಲೆಯಲ್ಲಿ ಒಬ್ಬ ಸಾಮಾಜಿಕ ವ್ಯಕ್ತಿಯಾಗಿ ಬಾಳುತ್ತಿದ್ದಾನೆ. ನಿಸರ್ಗ ಸಹಜವಾದ ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳಲು ಮತ್ತು ಕಾಮದ ನಂಟನ್ನು ಪಡೆಯಲು ಅವನ ಮಯ್ ಮನಸ್ಸು ಒಂದು ನೆಲೆಯಲ್ಲಿ ತುಡಿಯುತ್ತಿದ್ದರೆ, ಮತ್ತೊಂದು ಕಡೆ ಜಾತಿ ಮತದ ಕಟ್ಟುಪಾಡು, ಸಂಪ್ರದಾಯದ ಆಚರಣೆ ಮತ್ತು ರಾಜ್ಯಾಡಳಿತದ ಕಾನೂನು ವ್ಯಕ್ತಿಯ ನಡೆನುಡಿಗಳನ್ನು ರೂಪಿಸಿ ಸಮಾಜದ ನೆಲೆಯಲ್ಲಿ ನಿಯಂತ್ರಿಸುತ್ತಿರುತ್ತವೆ.

ಈ ರೀತಿ ನಿಸರ್ಗ ಮತ್ತು ಸಮಾಜದ ನಡುವೆ ಜೀವಿಸುತ್ತಿರುವ ಮಾನವ ಜೀವಿಯನ್ನು ಇತರ ಜೀವಿಗಳ ಬದುಕಿನಲ್ಲಿ ಎದುರಾಗದ "ಒಳಿತು/ಕೆಡುಕು; ಸರಿ/ತಪ್ಪು; ನೀತಿ/ಅನೀತಿ; ನ್ಯಾಯ/ಅನ್ಯಾಯದ ನಡೆನುಡಿಗಳೆಂಬ ಇಬ್ಬಗೆಯ ತಾಕಲಾಟಗಳು" ನಿರಂತರವಾಗಿ ಬದುಕಿನ ಕೊನೆಗಳಿಗೆಯ ತನಕವೂ ಕಾಡುತ್ತಿರುತ್ತವೆ.

ಆದ್ದರಿಂದಲೇ ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ಜೀವನದ ಉದ್ದಕ್ಕೂ ತಮ್ಮ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು, ತಮ್ಮ ನಡೆನುಡಿಯನ್ನು ತಾವೇ ಗಮನಿಸುತ್ತ, ಸಾಮಾಜಿಕವಾಗಿ ಒಳ್ಳೆಯತನದಿಂದ ಬಾಳಬೇಕೆಂಬ ಅರಿವು ಮತ್ತು ಎಚ್ಚರವನ್ನು ಹೊಂದಿದ್ದರು.

❖

161. ಕಂಡುದ ನುಡಿದಡೆ ಕಡುಪಾಪಿಯೆಂಬರು
ಸುಮ್ಮನಿದ್ದಡೆ ಮುಸುಕುರ್ಮಿಯೆಂಬರು
ಎನಲುಬಾರದು ಎನದಿರಲುಬಾರದು
ಸಟೆ ಕುಹಕ ಪ್ರಪಂಚಿಗಲ್ಲದೆ ಭಜಿಸರು
ಸಕಲೇಶ್ವರದೇವಾ ನಿಮ್ಮಾಣೆ.

ಸುಳ್ಳು/ತಟವಟ/ಮೋಸ/ವಂಚನೆಗಳಿಂದ ಜನರನ್ನು ಮರುಳುಮಾಡುವ ವ್ಯಕ್ತಿಗೆ ನಮ್ಮ ಕಣ್ಣ ಮುಂದಿನ ಸಮಾಜದಲ್ಲಿ ದೊರಕುವ ಜನಮನ್ನಣೆಯು ನೇರವಾದ ನಡೆನುಡಿಯುಳ್ಳ ಸತ್ಯವಂತರಿಗೆ ದೊರೆಯುವುದಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ಕಾಣ್/ಕಾಣು=ನೋಡು/ಅರಿತುಕೊ/ತಿಳಿದಿಕೊ; ಕಂಡುದ=ಕಂಡಿದ್ದನ್ನು/ತಿಳಿದಿರುವುದನ್ನು; ನುಡಿ=ಹೇಳು/ಮಾತನಾಡು; ನುಡಿದಡೆ= ಹೇಳಿದರೆ; **ಕಂಡುದ ನುಡಿದಡೆ**=ವ್ಯಕ್ತಿಯು ತಾನು ಕಂಡಿರುವ/ವಾಸ್ತವದ ಸಂಗತಿಯನ್ನು ಹೇಳಿದರೆ; ಕಡು+ಪಾಪಿ+ ಎಂಬರು; ಕಡು=ಹೆಚ್ಚಾಗಿ/ಅತಿಯಾಗಿ; ಪಾಪ=ಕೆಟ್ಟ ಕೆಲಸ; ಪಾಪಿ=ಕೆಟ್ಟವನು/ನೀಚ; ಕಡುಪಾಪಿ=ಕೆಟ್ಟ ನಡೆನುಡಿಗಳಲ್ಲೇ ತೊಡಗಿದವನು/ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವವನು; ಎಂಬರು=ಎನ್ನುತ್ತಾರೆ/ಎಂದು ಕರೆಯುತ್ತಾರೆ;

ಸುಮ್ಮನೆ+ಇದ್ದಡೆ; ಸುಮ್ಮನೆ=ಮಾತನಾಡದಿರುವುದು ಮತ್ತು ಯಾವೊಂದು ಬಗೆಯ ಪ್ರತಿಕ್ರಿಯೆಯನ್ನು ತೋರಿಸದಿರುವುದು; ಇದ್ದಡೆ=ಇದ್ದರೆ; ಮುಸುಕುರ್ಮಿ+ಎಂಬರು; ಮುಸುಕುರ್ಮಿ/ಮುಸುಕರ್ಮಿ=ಇತರರ ಕಣ್ಣಿಗೆ ಕಾಣದಂತೆ ಇಲ್ಲವೇ ತಿಳಿಯದಂತೆ ಒಳಗೊಳಗೆ ಕೆಟ್ಟಕೆಲಸಗಳಲ್ಲಿ ತೊಡಗಿದವನು/ಗುಮ್ಮನ ಗುಸುಕ/ಯಾರೊಂದಿಗೂ ಬೆರೆಯದಿರುವವನು;

ಎನ್+ಅಲ್+ಬಾರದು; ಎನ್+ಅಲು=ಎನಲು; ಎನ್=ಹೇಳು; ಎನಲು= ಹೇಳಲು/ಮಾತನಾಡಲು; ಬಾರದು= ಆಗುವುದಿಲ್ಲ; ಎನದೆ+ಇರಲು+ಬಾರದು; ಎನದೆ=ಹೇಳದೆ; ಮಾತನಾಡದೆ; ಎನಲುಬಾರದು=ಹೇಳಲಾಗುವುದಿಲ್ಲ; ಎನದಿರಲುಬಾರದು=ಹೇಳದೇ ಇರಲು ಆಗದು;

ಎನಲುಬಾರದು... ಎನದಿರಲುಬಾರದು=ವ್ಯಕ್ತಿಯು ತಾನು ಕಂಡಿರುವ ಸಂಗತಿಯನ್ನು ನೇರವಾಗಿ ಹೇಳುವಂತೆಯೂ ಇಲ್ಲ... ಹೇಳದೆ ಇರುವಂತೆಯೂ

ಇಲ್ಲ. ವ್ಯಕ್ತಿಯು ಹೇಗೆ ನಡೆದುಕೊಂಡರು ಸುತ್ತಮುತ್ತಲಿನ ಜನರಲ್ಲಿ ಕೆಲವರಾದರೂ ಒಂದಲ್ಲ ಒಂದು ಬಗೆಯ ತಪ್ಪನ್ನು ಕಂಡುಹಿಡಿದು ತೆಗಳುತ್ತಾರೆ ಎಂಬ ತಿರುಳಿನಲ್ಲಿ ಬಳಕೆಯಾಗಿರುವ ಪದಕಂತೆ;

ಸಟೆ=ಸುಳ್ಳು/ಇರುವುದನ್ನು ಇಲ್ಲವೆಂದು, ಇಲ್ಲದಿರುವುದನ್ನು ಇದೆಯೆಂದು ಹೇಳುವುದು; ಕುಹಕ=ಮೋಸ/ಕಪಟ/ವಂಚನೆ; ಪ್ರಪಂಚಿ+ಗೆ+ಅಲ್ಲದೆ; ಪ್ರಪಂಚಿ= ನಿತ್ಯಜೀವನದ ವ್ಯವಹಾರಗಳಲ್ಲಿ ಕುಶಲನಾದವನು/ತನ್ನ ಹಿತಕ್ಕಾಗಿ ಯಾವುದೇ ಬಗೆಯ ಕೆಲಸವನ್ನು ಮಾಡಲು ಹಿಂಜರಿಯದ ಮತ್ತು ಯಾರನ್ನು ಬೇಕಾದರೂ ಹಾಳುಮಾಡುವ ಕೆಟ್ಟ ನಡೆನುಡಿಗಳನ್ನು ಹೊಂದಿರುವವನು; ಅಲ್ಲದೆ=ಮಾತ್ರ/ ಕೇವಲ; ಭಜಿಸು=ಪೂಜಿಸು/ಹೊಗಳು;

ಸಟೆ ಕುಹಕ ಪ್ರಪಂಚಿಗಲ್ಲದೆ ಭಜಿಸರು=ಸುಳ್ಳುಗಾರ/ಕಪಟಿ/ವಂಚಕ/ಕ್ರೂರಿ/ ಮೋಸಗಾರನನ್ನು ಜನಸಮುದಾಯದಲ್ಲಿ ಹೆಚ್ಚಿನ ಮಂದಿ ಮೆಚ್ಚಿಕೊಂಡು ಕೊಂಡಾಡುತ್ತಾರೆಯೇ ಹೊರತು ಒಳ್ಳೆಯ ನಡೆನುಡಿಯುಳ್ಳವರನ್ನು ಒಂದಲ್ಲ ಒಂದು ಬಗೆಯ ಕೊಂಕುನುಡಿಗಳ ಮೂಲಕ ತೆಗಳುತ್ತಾರೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಸಕಲೇಶ್ವರದೇವ=ಶಿವ/ಸಕಲೇಶ ಮಾದರಸನ ವಚನಗಳಲ್ಲಿ ಕಂಡು ಬರುವ ಅಂಕಿತನಾಮ; ನಿಮ್ಮ+ಆಣೆ; ಆಣೆ=ವ್ಯಕ್ತಿಯು ತಾನು ಹೇಳುತ್ತಿರುವ ಸಂಗತಿಯು ಸತ್ಯವಾದುದೆಂದು ಪ್ರತಿಪಾದಿಸಲು ದೇವರನ್ನು/ತನ್ನ ಮಯ್ಯಿನ ಅಂಗಾಂಗಗಳನ್ನು/ ಪವಿತ್ರವೆಂದು ನಂಬಿರುವ ವಸ್ತುಗಳನ್ನು/ತನ್ನ ಒಲವಿಗೆ ಪಾತ್ರರಾಗಿರುವ ವ್ಯಕ್ತಿಗಳ ಹೆಸರನ್ನು ಹೇಳುತ್ತಾ ಮಾತನಾಡುವ ಬಗೆಯನ್ನು ಆಣೆಯಿಡುವುದು ಎಂದು ಕರೆಯುತ್ತಾರೆ; ನಿಮ್ಮ ಆಣೆ=ವಚನಕಾರನು ತಾನು ಹೇಳುತ್ತಿರುವ ನುಡಿಗಳು ನಿಜವೆಂದು ತಿಳಿಸಲು ಸಕಲೇಶ್ವರದೇವರನ್ನೇ ಹೆಸರಿಸಿದ್ದಾನೆ.)

❖

162. ಜನಮೆಚ್ಚೆ ಶುದ್ಧನಲ್ಲದೆ ಮನಮೆಚ್ಚೆ ಶುದ್ಧನಲ್ಲವಯ್ಯಾ
ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯಾ
ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯಾ
ಧನ ದೊರಕದಿದ್ದಡೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯಾ
ಏಕಾಂತ ದ್ರೋಹಿ ಗುಪ್ತ ಪಾತಕ ಯುಕ್ತಿ ಶೂನ್ಯಂಗೆ
ಸಕಲೇಶ್ವರದೇವ ಒಲಿ ಒಲಿಯೆಂದಡೆ ಎಂತೊಲಿವನಯ್ಯಾ.

ನಿಸರ್ಗ ಸಹಜವಾದ ಹೊಟ್ಟೆಯ ಹಸಿವು, ದೇಹದ ಕಾಮ ಮತ್ತು ಮಾನವ ನಿರ್ಮಿತವಾದ ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಿಲುಕಿರುವ ಮಾನವ ಜೀವಿಯ ಮಯ್ ಮನಗಳ ಇಬ್ಬಗೆಯ ತೊಳಲಾಟವನ್ನು ಈ ವಚನದಲ್ಲಿ ಹೇಳಲಾಗಿದೆ.

ಜಗತ್ತಿನ ಜೀವರಾಶಿಗಳಲ್ಲಿ ಮಾನವಜೀವಿಯನ್ನು ಹೊರತುಪಡಿಸಿ, ಇನ್ನುಳಿದ ಪ್ರಾಣಿ/ಹಕ್ಕಿ/ಕ್ರಿಮಿ/ಕೀಟಗಳೆಲ್ಲವೂ ನಿಸರ್ಗದ ನೆಲೆಯಲ್ಲಿ ಹುಟ್ಟಿ ಬೆಳೆದು ಬಾಳಿ ಬೆತ್ತಲೆಯಾಗಿಯೇ ಸಾಯುತ್ತವೆ. ತನ್ನ ಮಯ್ಯನ್ನು ಬಟ್ಟೆಯಿಂದ ಮುಚ್ಚಿಕೊಂಡಿರುವ ಮಾನವ ಜೀವಿಯು ಮಾತ್ರ, ಇತ್ತ ನಿಸರ್ಗದ ನೆಲೆಯಲ್ಲಿ ಒಂದು ಪ್ರಾಣಿಯಾಗಿ, ಅತ್ತ ತಾನೇ ಕಟ್ಟಿಕೊಂಡಿರುವ ಕುಟುಂಬ, ಜಾತಿ, ಮತ, ವಿದ್ಯೆ, ಕಾನೂನು ಮುಂತಾದ ಒಕ್ಕೂಟಗಳ ನೆಲೆಯಲ್ಲಿ ಸಾಮಾಜಿಕ ಮಾನವ ಪ್ರಾಣಿಯಾಗಿದ್ದಾನೆ. ಆದುದರಿಂದಲೇ ಬದುಕಿನ ಉದ್ದಕ್ಕೂ " ಸರಿ/ತಪ್ಪು, ನೀತಿ/ಅನೀತಿ, ನ್ಯಾಯ/ಅನ್ಯಾಯ, ಒಳ್ಳೆಯದು/ಕೆಟ್ಟದ್ದು " ಎಂಬ ನಡೆನುಡಿಗಳ ನಡುವೆ ಹೊಯ್ದಾಡುತ್ತಿರುತ್ತಾನೆ.

(ಜನ=ಸಮಾಜದಲ್ಲಿರುವ ವ್ಯಕ್ತಿಗಳು/ಮಾನವರು; ಮೆಚ್ಚು=ಒಲಿ/ಬಯಸು/ಹೊಗಳು/ಒಪ್ಪು; ಶುದ್ಧನ್+ಅಲ್ಲದೆ; ಶುದ್ಧ=ಚೊಕ್ಕಟ/ಶುಚಿ/ಕೊಳೆಯಿಲ್ಲದಿರುವುದು; ಶುದ್ದನ್=ಯಾವುದೇ ಬಗೆಯ ಕೆಟ್ಟ ನಡೆನುಡಿಗಳಿಲ್ಲದೆ, ಒಳ್ಳೆಯತನದಿಂದ ಬಾಳುತ್ತಿರುವವನು; ಅಲ್ಲದೆ=ಮಾತ್ರ/ಕೇವಲ; ಮನ=ಮನಸ್ಸು/ಚಿತ್ತ; ಶುದ್ಧನ್+ಅಲ್ಲ+ಅಯ್ಯಾ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಜನಮೆಚ್ಚಿ ಶುದ್ಧನಲ್ಲದೆ ಮನಮೆಚ್ಚಿ ಶುದ್ಧನಲ್ಲವಯ್ಯಾ=ನೋಡುವವರ ಕಣ್ಣಿಗೆ ನಾನು ಒಳ್ಳೆಯ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತ ನಯವಂಚನೆಯ ನಡೆನುಡಿಗಳಿಂದ ಜನರನ್ನು ಮರುಳುಮಾಡುತ್ತಿದ್ದೇನೆ. ಆದರೆ ನನ್ನ ಮನದೊಳಗೆ

ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವಂತಹ ಕೆಟ್ಟ ಒಳಮಿಡಿತಗಳು ಒಂದೇ ಸಮನೆ ತುಡಿಯುತ್ತಿವೆ.

ನುಡಿ+ಅಲ್ಲಿ; ನುಡಿ=ಮಾತು/ಸೊಲ್ಲು; ನುಡಿಯಲ್ಲಿ=ಆಡುವ ಮಾತುಗಳಲ್ಲಿ; ಜಾಣನ್+ಅಲ್ಲದೆ; ಜಾಣ=ಚತುರನಾದವನು; ನಡೆ+ಅಲ್ಲಿ; ನಡೆ=ದಿನನಿತ್ಯ ಮಾಡುವ ಕೆಲಸ/ವ್ಯವಹಾರ/ಆಚರಣೆ; ಜಾಣನ್+ಅಲ್ಲ+ಅಯ್ಯಾ;

ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯಾ=ಕೇಳುವವರು ಮರುಳಾಗುವಂತೆ ಚೆನ್ನಾಗಿ ಮಾತನಾಡುತ್ತೇನೆಯೇ ಹೊರತು, ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವಂತಹ ಯಾವುದೇ ಕೆಲಸವನ್ನು ಮಾಡುತ್ತಿಲ್ಲ;

ವೇಷ+ಅಲ್ಲಿ; ವೇಷ=ಉಡುಗೆ ತೊಡುಗೆ/ಉಟ್ಟು ಕೊಳ್ಳುವ ಬಟ್ಟೆ ತೊಟ್ಟು ಕೊಳ್ಳುವ ಒಡವೆ; ವೇಷದಲ್ಲಿ=ಮಯ್ಯನ್ನು ಸಿಂಗರಿಸಿಕೊಳ್ಳುವ ಉಡುಗೆ ತೊಡುಗೆಗಳಲ್ಲಿ; ಅಧಿಕನ್+ಅಲ್ಲದೆ; ಅಧಿಕನ್=ಹೆಚ್ಚಿನವನು/ಉತ್ತಮನಾದವನು; ಭಾಷೆ+ಅಲ್ಲಿ; ಭಾಷೆ=ಮಾತು/ನುಡಿ/ಸೊಲ್ಲು;

ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲ=ಮಯ್ ಮೇಲೆ ತೊಟ್ಟಿರುವ ಬೆಲೆಬಾಳುವ ಉಡುಗೆ ತೊಡುಗೆಗಳಿಂದ ನೋಡುವವರ ಕಣ್ಮನಗಳಿಗೆ ಸಿರಿವಂತನಂತೆ/ದೊಡ್ಡ ಗದ್ದುಗೆಯಲ್ಲಿರುವ ವ್ಯಕ್ತಿಯಂತೆ ಕಾಣುತ್ತಿದ್ದೇನೆ. ಆದರೆ ನಾನು ಆಡುವ ಮಾತುಗಳು ನಿಜದಿಂದ ಕೂಡಿಲ್ಲ;

ಧನ=ಸಂಪತ್ತು/ಹಣ/ಆಸ್ತಿಪಾಸ್ತಿ/ಒಡವೆವಸ್ತು; ದೊರಕದೆ+ಇದ್ದಡೆ; ದೊರಕು=ಸಿಗುವುದು/ಸಿಕ್ಕುವುದು; ದೊರಕದೆ=ಸಿಗದೆ/ಸಿಕ್ಕದೆ; ಇದ್ದಡೆ=ಇದ್ದರೆ; ನಿಸ್ಪೃಹನ್+ಅಲ್ಲದೆ; ನಿಸ್ಪೃಹನ್=ಕೆಟ್ಟ ಆಸೆಗಳಿಲ್ಲದವನು/ಕೆಟ್ಟ ಬಯಕೆಗಳಿಲ್ಲದವನು/ಪ್ರಾಮಾಣಿಕ ವ್ಯಕ್ತಿ/ಇತರರ ಒಡವೆವಸ್ತುಗಳನ್ನು ದೋಚಿಕೊಳ್ಳಬೇಕೆಂಬ ಉದ್ದೇಶವಿಲ್ಲದವನು; ದೊರಕಿ=ಸಿಕ್ಕಾಗ/ತನ್ನ ವಶಕ್ಕೆ ದೊರೆತಾಗ; ನಿಸ್ಪೃಹನ್+ಅಲ್ಲ+ಅಯ್ಯಾ; **ಧನ ದೊರಕದಿದ್ದಡೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯಾ**=ಹಣಕಾಸಿನ ವ್ಯವಹಾರಗಳೇ ಇಲ್ಲದಿದ್ದಾಗ ನಾನು ತುಂಬಾ ಪ್ರಾಮಾಣಿಕನಾಗಿದ್ದೆ. ಆದರೆ ಹಣಕಾಸಿನ ವ್ಯವಹಾರವನ್ನು ನಡೆಸಲು ಅವಕಾಶ ದೊರೆತಾಗ ನನ್ನ ಮನಸ್ಸು ಬಹುಬಗೆಯ ಆಸೆಗಳಿಗೆ ಒಳಗಾಗಿ, ಇತರರ/ಜನಸಮುದಾಯದ/ಸಮಾಜದ ಸಂಪತ್ತನ್ನು ದೋಚತೊಡಗಿದ್ದೇನೆ;

ಹಣಕಾಸಿನ ವ್ಯವಹಾರ ತಮ್ಮ ಕಯ್ಯಿಗೆ ಬಂದಾಗ ಮಾನವ ಸಮುದಾಯದಲ್ಲಿ ಬಹುತೇಕ ಮಂದಿ ಸಾಮಾಜಿಕ ಅಂತಸ್ತಿಗೆ ಕಾರಣವಾದ ಅಪಾರವಾದ ಆಸ್ತಿಪಾಸ್ತಿಯನ್ನು ಗಳಿಸಿಕೊಂಡು, ತಾವು ಮತ್ತು ತಮ್ಮ ಕುಟುಂಬದ ಮಂದಿ ಮುದದಿಂದ ಬಾಳುವುದಕ್ಕಾಗಿ ಇತರರ ಸಂಪತ್ತನ್ನು ಲಪಟಾಯಿಸಲು ತೊಡಗುತ್ತಾರೆ ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಳು;

ಏಕಾಂತ=ಒಬ್ಬಂಟಿಯಾಗಿರುವುದು/ಇತರರಿಂದ ದೂರವಿರುವುದು; ದ್ರೋಹಿ= ವಂಚಕ/ಕೇಡಿಗ/ಮೋಸಗಾರ/ನಂಬಿದವರಿಗೆ ಹಾನಿಯನ್ನುಂಟುಮಾಡುವವನು; ಏಕಾಂತದ್ರೋಹಿ=ಇತರರಿಗೆ ತಿಳಿಯದಂತೆ ಕೆಟ್ಟ ಕೆಲಸಗಳಲ್ಲಿ ತೊಡಗಿದವನು;

ಗುಪ್ತ=ಗುಟ್ಟು/ರಹಸ್ಯ; ಪಾತಕ=ಪಾಪದ ಕೆಲಸ/ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ನಡೆನುಡಿ; ಗುಪ್ತ ಪಾತಕ=ಇತರರಿಗೆ ಕಾಣದಂತೆ/ ತಿಳಿಯದಂತೆ ಕೆಟ್ಟಕೆಲಸಗಳಲ್ಲಿ ತೊಡಗಿದವನು;

ಯುಕ್ತಿ=ಯಾವುದೇ ಒಂದು ಕೆಲಸವನ್ನು ಮಾಡಲು ಅಗತ್ಯವಾದ ಕುಶಲತೆ/ ನಿಪುಣತೆ/ಉಪಾಯ; ಶೂನ್ಯ=ಬರಿದಾದುದು/ಏನು ಇಲ್ಲದಿರುವುದು; ಶೂನ್ಯಂಗೆ= ಶೂನ್ಯನಿಗೆ; ಯುಕ್ತಿಶೂನ್ಯನು=ಒಳ್ಳೆಯ ನಡೆನುಡಿಗಳಿಂದ ತನಗೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಹಂಬಲವಿಲ್ಲದವನು;

ಸಕಲೇಶ್ವರದೇವ=ಶಿವ/ದೇವರು; ಒಲಿ=ಒಪ್ಪು/ಮೆಚ್ಚು; ಒಲಿ+ಎಂದಡೆ; ಎಂದಡೆ=ಎಂದರೆ; ಎಂತು+ಒಲಿವನ್+ಅಯ್ಯಾ; ಎಂತು=ಹೇಗೆ ತಾನೆ/ಯಾವ ರೀತಿಯಲ್ಲಿ/ಯಾವ ಬಗೆಯಲ್ಲಿ; ಒಲಿವನ್=ಮೆಚ್ಚುವನು/ಒಪ್ಪುವನು;

ಸಕಲೇಶ್ವರ ದೇವ ಒಲಿ ಒಲಿಯೆಂದಡೆ ಎಂತೊಲಿವನಯ್ಯಾ=ದೇವರು ಮೆಚ್ಚುವಂತೆ ವ್ಯಕ್ತಿಯು ಬಾಳಬೇಕಾದರೆ, ಅವನಲ್ಲಿ ಒಳ್ಳೆಯ ನಡೆನುಡಿಗಳು ಇರಬೇಕು. ಆದರೆ ಮಾನವಜೀವಿಯು ನಿಸರ್ಗದ ಸೆಳೆತ ಮತ್ತು ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಿಲುಕಿರುವುದರಿಂದ, ಜೀವನದಲ್ಲಿ ಹೆಜ್ಜೆಹೆಜ್ಜೆಗೂ ಒಳಿತು ಕೆಡುಕುಗಳ ನಡುವೆ ತೊಳಲಾಡುತ್ತಿದ್ದಾನೆ ಎಂಬ ವಾಸ್ತವವನ್ನು ಈ ನುಡಿಗಳು ಸೂಚಿಸುತ್ತಿವೆ.)

❖

43. ಸಿದ್ಧರಾಮೇಶ್ವರ

ಊರು: ಹುಟ್ಟಿದ ಊರು ಯಾವುದೆಂಬುದು ತಿಳಿದುಬಂದಿಲ್ಲ.

ಕಸುಬು: ಸೊನ್ನಲಿಗೆ/ಸೊನ್ನಲಾಪುರದಲ್ಲಿ ಜನರನ್ನು ಒಗ್ಗೂಡಿಸಿಕೊಂಡು ಸಮುದಾಯದ ಬದುಕಿಗೆ ಒಳಿತನ್ನು ಉಂಟುಮಾಡುವ ಕೆರೆಕಟ್ಟೆ, ಬಾವಿ, ಅರವಟ್ಟಿಗೆ ಮತ್ತು ಇತರ ಕೆಲಸಗಳನ್ನು ಮಾಡುವ ನೇತಾರನಾಗಿದ್ದನು.

ದೊರೆತಿರುವ ವಚನಗಳು: 1965

ವಚನಗಳ ಅಂಕಿತನಾಮ: ಕಪಿಲಸಿದ್ಧಮಲ್ಲಿಕಾರ್ಜುನಲಿಂಗ

163. ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ
ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನುಡಿಯ ಬ್ರಹ್ಮಂಗಳಿಂದಪ್ಪುದೇನೊ.

ವಾದದಲ್ಲಿ ಎದುರಾಳಿಗಳನ್ನು ಸೋಲಿಸಲೆಂದೇ ತರ್ಕ ವಿತರ್ಕವನ್ನು ಒಡ್ಡುವ ಕುಶಲತೆಯ ಮಾತುಗಳಿಂದಾಗಲಿ ಇಲ್ಲವೇ ಕೇಳುಗರ ಮನಸೆಳೆಯುವ ಮೋಡಿಯ ಮಾತುಗಳಿಂದಾಗಲಿ ಯಾವ ಪ್ರಯೋಜನವೂ ಇಲ್ಲ; ಜೀವನದಲ್ಲಿ ಕೇವಲ ಮಾತಿನ ಜಾಣ್ಮೆಯನ್ನು ಮೆರೆಯುವುದರ ಬದಲು, ವ್ಯಕ್ತಿಯು ತಾನಾಡುವ ಮಾತುಗಳಿಗೆ ತಕ್ಕಂತೆ ಒಳ್ಳೆಯ ಕೆಲಸಗಳನ್ನು ಮಾಡಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

‘ಒಳ್ಳೆಯ ಕೆಲಸ‘ ಎಂದರೆ ತನ್ನ ಏಳಿಗೆಗೆ ಮತ್ತು ನೆಮ್ಮದಿಗೆ ನೆರವಾಗುವಂತೆಯೇ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಕೆಲಸ.

(ನಡೆ+ನುಡಿ+ಗಳ್+ಒಂದು+ಆದ+ಅವರಿಗೆ+ಒಲಿವೆ; ನಡೆ=ನಡವಳಿಕೆ; ನುಡಿ=ಆಡುವ ಮಾತು; **ನಡೆನುಡಿಗಳೊಂದಾದವರಿಗೆ**=ಆಡುವ ಒಳ್ಳೆಯ ನುಡಿಗಳಿಗೆ ತಕ್ಕಂತೆ ಒಳ್ಳೆಯ ಕೆಲಸಗಳನ್ನು ಮಾಡುವವರಿಗೆ/ಇತರರಿಗೆ ಹೇಳುವ ನೀತಿನಿಯಮಗಳ ನುಡಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳುತ್ತಿರುವವರಿಗೆ; ಒಲ್+ಇ; ಒಲಿ=ಮೆಚ್ಚು/ಬಯಸು; ಒಲಿವೆ=ಮೆಚ್ಚಿಕೊಳ್ಳುವೆ/ಒಪ್ಪಿಕೊಳ್ಳುವೆ; ಕಂಡು+ ಅಯ್ಯ; ಕಂಡು=ನೋಡಿ/ಕಾಣು; ಕಂಡಯ್ಯ=ಅರಿತು ನೋಡು/ತಿಳಿದು ನೋಡು;

ನುಡಿಯೆ=ಮಾತುಗಳೇ; ಬ್ರಹ್ಮ+ಆದವರ; ಬ್ರಹ್ಮ=ಜಗತ್ತಿನಲ್ಲಿರುವ ಎಲ್ಲಾ ಬಗೆಯ ಜೀವರಾಶಿಗಳ ಹುಟ್ಟಿಗೆ ಕಾರಣನೆಂದು ಜನಸಮುದಾಯವು ನಂಬಿರುವ ದೇವತೆ/ಓದು ಬರಹದಿಂದ ಪಡೆದಿರುವ ತಿಳುವಳಿಕೆ; ಆದವರ= ಆಗಿರುವವರನ್ನು; ನೀನ್+ಒಲ್ಲೆ+ಅಯ್ಯ; ನೀನು=ದೇವರಾದ ನೀನು; ಒಲ್+ಎ; ಒಲ್ಲೆ=ಒಪ್ಪುವುದಿಲ್ಲ/ಮೆಚ್ಚುವುದಿಲ್ಲ;

ನುಡಿಯೆ ಬ್ರಹ್ಮವಾದವರು=ದೇಹವನ್ನು ದಂಡಿಸಿ ಯಾವುದೇ ಒಂದು ಬಗೆಯ ದುಡಿಮೆಯನ್ನು ಮಾಡದೆ, ಕೇವಲ ಮಾತಿನ ಚತುರತೆಯಿಂದಲೇ ಎಲ್ಲರನ್ನೂ ಮರುಳುಮಾಡಿ ವಂಚಿಸುತ್ತಾ, ತಮಗೆ ಬೇಕಾದುದೆಲ್ಲವನ್ನು ಪಡೆದುಕೊಳ್ಳುವ ವ್ಯಕ್ತಿಗಳು/ಅಕ್ಕರ ವಿದ್ಯೆಯ ಪಾಂಡಿತ್ಯದಿಂದ ಎದುರಾಳಿಗಳನ್ನು ಮಾತಿನ ಕುಶಲತೆಯಿಂದಲೇ ಸೋಲಿಸುವವರು/ಮಾತನ್ನೇ ಬಂಡವಾಳ ಮಾಡಿಕೊಂಡಿರುವವರು ಎಂಬ ತಿರುಳಿನಲ್ಲಿ ಬಳಕೆಯಾಗಿರುವ ಪದಕಂತೆ; **ನೀನೊಲ್ಲೆ**=ದೇವರಾದ ನೀನು ಮೆಚ್ಚುವುದಿಲ್ಲ;

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಕಾಯಕದಲ್ಲಿ ದೇವರನ್ನು ಕಾಣುತ್ತಿದ್ದರು. ಆದುದರಿಂದ ಕಾಯಕವಿಲ್ಲದ ಬರಿ ಮಾತಿನ ಜಾಣ್ಮೆಯಿಂದ/ಅಕ್ಕರ ವಿದ್ಯೆಯ ಪಾಂಡಿತ್ಯವನ್ನು ಮೆರೆಯುವುದರಿಂದ ಸಹಮಾನವರಿಗಾಗಲಿ ಇಲ್ಲವೇ ಸಮಾಜಕ್ಕಾಗಲಿ ಒಳಿತಾಗುವುದಿಲ್ಲವೆಂಬ ನಿಲುವನ್ನು ಹೊಂದಿದ್ದರು.

ಮೃಡ=ಶಿವ; ಮೃಡನೆ=ಶಿವನೇ; ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗ= ವಚನಕಾರನಾದ ಸಿದ್ದರಾಮೇಶ್ವರನ ಮೆಚ್ಚಿನ ದೇವರು/ಸಿದ್ದರಾಮೇಶ್ವರನ ವಚನಗಳ ಅಂಕಿತನಾಮ; ನುಡಿಯ=ಮಾತಿನ; ಬ್ರಹ್ಮಂ+ಗಳ್+ಇಂದ+ ಅಪ್ಪುದು+ಏನೊ; ಅಪ್ಪುದು=ಆಗುವುದು/ನೆರವೇರುವುದು/ಉಂಟಾಗುವುದು; ಏನೊ=ಏನು ತಾನೆ/ಯಾವುದು ತಾನೆ; ಅಪ್ಪುದೇನೊ=ಏನಾಗುತ್ತದೆ/ಏನೊಂದು ಆಗುವುದಿಲ್ಲ;

'ನುಡಿಯ ಬ್ರಹ್ಮ' ಎಂಬುದು 'ಶಬ್ದಬ್ರಹ್ಮ' ಎಂಬ ಪದಕ್ಕೆ ಬದಲಾಗಿ ಬಳಸಿರುವ ಒಂದು ನುಡಿಗಟ್ಟಾಗಿದೆ. ಕೇವಲ ಮಾತುಗಾರಿಕೆಯಿಂದಲೇ/ಓದುಬರಹದ ಪಾಂಡಿತ್ಯ ದಿಂದಲೇ ಲೋಕವನ್ನು ಗೆಲ್ಲಬಲ್ಲನೆಂಬ/ಎಲ್ಲರನ್ನೂ ಮರುಳು ಮಾಡುವನೆಂಬ ವ್ಯಕ್ತಿಗಳನ್ನು ಶಬ್ದಬ್ರಹ್ಮರೆಂದು ಕರೆಯಲಾಗುತ್ತಿತ್ತು;

ನುಡಿಯ ಬ್ರಹ್ಮಂಗಳಿಂದಪ್ಪುದೇನೊ=ವ್ಯಕ್ತಿಯು ತನ್ನ ನಿತ್ಯಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡದೆ, ಕೇವಲ ಮಾತಿನ ಜಾಣ್ಮೆಯನು ಮತ್ತು ಓದು ಬರಹದ ಪಾಂಡಿತ್ಯವನ್ನು ಹೊಂದಿದ್ದರೆ, ಅಂತಹ ಬದುಕಿನಿಂದ ಯಾವ ಪ್ರಯೋಜನವೂ ಇಲ್ಲವೆಂಬ ಇಂಗಿತವನ್ನು ಈ ಸೊಲ್ಲು ಸೂಚಿಸುತ್ತದೆ.)

❖

164. ನುಡಿಯಬಹುದು ಅದ್ವೈತವನೊಂದು ಕೋಟಿ ವೇಳೆ
ಒಮ್ಮೆ ನಡೆಯಬಹುದೆ ನಿರ್ಧರವಾಗಿ ಸದ್ಭಕ್ತಿ ಸದಾಚಾರವ
ನುಡಿದಂತೆ ನಡೆವ ನಡೆದಂತೆ ನುಡಿವ
ಸದ್ಭಕ್ತಿ ಸದಾಚಾರಯುಕ್ತರ ಮಹಾತ್ಮರ
ಪಾದವ ಹಿಡಿದು ಬದುಕಿಸಯ್ಯಾ ಪ್ರಭುವೆ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಒಳ್ಳೆಯ ನಡೆನುಡಿಗಳ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಎಡೆಬಿಡದೆ ಆಡುತ್ತಿರಬಹುದು. ಆದರೆ ಆಡಿದ ನುಡಿಗಳಿಗೆ ತಕ್ಕಂತೆ ವ್ಯಕ್ತಿಯು ತನ್ನ ನಿತ್ಯ ಜೀವನದ ಸಾಮಾಜಿಕ ವ್ಯವಹಾರಗಳಲ್ಲಿ ನಡೆದುಕೊಳ್ಳುವುದು ಬಹು ದೊಡ್ಡ ಜವಾಬ್ದಾರಿಯ ಕೆಲಸವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ನುಡಿ=ಆಡುವ ಮಾತು; ಅದ್ವೈತ+ಅನ್+ಒಂದು; ಅದ್ವೈತ=ಜೀವಾತ್ಮ ಮತ್ತು ಪರಮಾತ್ಮ ಬೇರೆಬೇರೆಯಲ್ಲ, ಅವೆರಡೂ ಒಂದೇ ಎಂಬ ನಿಲುವು; ಅನ್=ಅನ್ನು; ಕೋಟಿ=ಒಂದು ನೂರು ಲಕ್ಷ; ವೇಳೆ=ಸಮಯ/ಕಾಲ; ಒಂದು ಕೋಟಿ ವೇಳೆ= ಲೆಕ್ಕಕ್ಕೆ ಸಿಗದಂತೆ ಅನೇಕ ಬಾರಿ/ನಿರಂತರವಾಗಿ; **ನುಡಿಯಬಹುದು ಅದ್ವೈತವನೊಂದು ಕೋಟಿ ವೇಳೆ**=ಜೀವಾತ್ಮ ಪರಮಾತ್ಮ ಒಂದೇ ಎಂಬ ಸಂಗತಿಯನ್ನು ಕುರಿತು ಇಲ್ಲವೇ ನೀತಿನಿಯಮಗಳನ್ನು ಸಾರುವ ದೊಡ್ಡ ದೊಡ್ಡ ಮಾತುಗಳನ್ನು ಸದಾಕಾಲ ಆಡುತ್ತಿರಬಹುದು;

ಒಮ್ಮೆ=ಒಂದು ಸಲ/ಒಂದು ಬಾರಿ; ನಡೆ=ನಡವಳಿಕೆ; ನಡೆಯಬಹುದೆ= ಆಚರಿಸಿ ತೋರಿಸಲು ಆಗುತ್ತದೆಯೇ/ಮಾಡಲು ಆಗುತ್ತದೆಯೇ; ನಿರ್ಧರ+ಆಗಿ; ನಿರ್ಧರ=ಒಂದೇ ಮನಸ್ಸು/ಚಂಚಲತೆಯಿಲ್ಲದಿರುವಿಕೆ; ಸದ್ಭಕ್ತಿ=ಒಳ್ಳೆಯ ನಡೆನುಡಿಯಲ್ಲಿ ದೇವರನ್ನು ಕಾಣುವುದು/ಒಳ್ಳೆಯ ನಡೆನುಡಿಗಳಿಂದ ದೇವರನ್ನು ಒಲಿಸಿಕೊಳ್ಳುವುದು; ಸದಾಚಾರ=ತನ್ನನ್ನು ಒಳಗೊಂಡಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ಒಳ್ಳೆಯ ನಡೆನುಡಿ;

ಒಮ್ಮೆ ನಡೆಯಬಹುದೆ ನಿರ್ಧರವಾಗಿ ಸದ್ಭಕ್ತಿ ಸದಾಚಾರವ=ವ್ಯಕ್ತಿಯು ಜೀವನದಲ್ಲಿ ಒಳ್ಳೆಯದನ್ನು ಮಾಡುತ್ತಾ ಒಳ್ಳೆಯವನಾಗಿ ಬಾಳಬೇಕಾದರೆ ಸದಾಕಾಲ ತನ್ನ ಮಯ್ ಮನಗಳಲ್ಲಿ ತುಡಿಯುವ ಒಳಮಿಡಿತಗಳನ್ನು ಹತೋಟಿಯಲ್ಲಿಟ್ಟು ಕೊಂಡು, ಕೆಟ್ಟದ್ದನ್ನು ಮಾಡಬಾರದೆಂಬ ಎಚ್ಚರದಿಂದ

ಕೂಡಿದವನಾಗಿರಬೇಕು ಎಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ;

ನುಡಿದ+ಅಂತೆ; ನುಡಿದ=ಹೇಳಿದ/ಆಡಿದ ಮಾತು; ಅಂತೆ=ಹಾಗೆ/ರೀತಿ; ನಡೆವ=ಜೀವನದಲ್ಲಿ ಕೆಲಸಗಳನ್ನು ಮಾಡುವ; ನಡೆದ+ಅಂತೆ;

ನುಡಿದಂತೆ ನಡೆವ=ವ್ಯಕ್ತಿಯು ತಾನು ಆಡುವ ಆದರ್ಶದ ಮಾತುಗಳಿಗೆ ತಕ್ಕಂತೆ ಒಳ್ಳೆಯತನದ ಕೆಲಸಗಳನ್ನು ಜೀವನದಲ್ಲಿ ಮಾಡುವುದು;

ನಡೆದಂತೆ ನುಡಿವ=ಜೀವನದಲ್ಲಿ ತಾನು ಮೊದಲು ಒಳ್ಳೆಯತನದ ಕೆಲಸಗಳನ್ನು ಮಾಡಿ, ಅನಂತರ ಅವನ್ನು ಇತರರಿಗೆ ಮಾಡುವಂತೆ ಹೇಳುವುದು;

ಯುಕ್ತ=ಕೂಡಿದ/ಹೊಂದಿದ/ಪಡೆದ;

ಸದ್ಭಕ್ತಿ ಸದಾಚಾರಯುಕ್ತರು=ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಗಳು; ಮಹಾತ್ಮ= ಜನಸಮುದಾಯದ ಒಳಿತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರು/ ನುಡಿದಂತೆ ನಡೆದು ಲೋಕಕ್ಕೆ ಒಳಿತನ್ನು ಎಸಗಿದವರು; ಪಾದ=ಕಾಲು/ಚರಣ; ಹಿಡಿ=ಮುಟ್ಟು; ಬದುಕಿಸು+ಅಯ್ಯಾ; ಬದುಕಿಸು=ಉಳಿದು ಬಾಳುವಂತೆ ಮಾಡು; ಪ್ರಭು=ಒಡೆಯ/ಯಜಮಾನ; ಕಪಿಲಸಿದ್ಧ ಮಲ್ಲಿಕಾರ್ಜುನಾ=ಈಶ್ವರ;

ಪಾದವ ಹಿಡಿದು ಬದುಕಿಸಯ್ಯಾ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ= ಒಳ್ಳೆಯವರ ಜೀವನದಲ್ಲಿನ ನಡೆನುಡಿಗಳನ್ನು ವ್ಯಕ್ತಿಯು ತನ್ನ ಬದುಕಿನಲ್ಲಿ ಅಳವಡಿಸಿಕೊಂಡು ಬಾಳುವಂತಹ ಅರಿವು ಮೂಡುವಂತಾಗಲಿ ಎಂಬ ಇಂಗಿತವನ್ನು ಈ ಸೊಲ್ಲು ಸೂಚಿಸುತ್ತಿದೆ.)

❖

165. ವೇಷದಲ್ಲಿ ಭಕ್ತನಾದಡೇನು
ವೇಷದಲ್ಲಿ ಮಹೇಶನಾದಡೇನು
ಗುಣವಿಲ್ಲದನ್ನಕ್ಕರ

ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟು
ರುಚಿಯಿಂದಲ್ಲದೆ ರೂಪದಿಂದವೆ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಒಳ್ಳೆಯ ನಡೆನುಡಿಗಳನ್ನು ಹೊಂದಿಲ್ಲದ ವ್ಯಕ್ತಿಯು, ದೇವರಲ್ಲಿ ಒಲವು ಉಳ್ಳವನಂತೆ ಬಗೆ ಬಗೆಯ ಉಡುಗೆ ತೊಡುಗೆಗಳನ್ನು ತೊಟ್ಟುಕೊಂಡು, ಬಹುಬಗೆಯ ಆಚರಣೆಗಳಲ್ಲಿ ತೊಡಗುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

(ವೇಷ+ಅಲ್ಲಿ; ವೇಷ=ಉಡುಗೆ/ತೊಡುಗೆ/ಒಡವೆ/ವಸ್ತ್ರ/ಅಲಂಕಾರ ಮಾಡಿಕೊಳ್ಳುವುದು/ಸಿಂಗರಿಸಿಕೊಳ್ಳುವುದು; ಭಕ್ತನ್+ಆದಡೆ+ಏನು; ಭಕ್ತ=ಒಳ್ಳೆಯ ನಡೆನುಡಿಗಳಲ್ಲಿ ದೇವರನ್ನು ಕಾಣುವವನು; ಆದಡೆ=ಆದರೆ; ಏನು=ಯಾವುದು;

ವೇಷದಲ್ಲಿ ಭಕ್ತನಾದಡೇನು=ನಿತ್ಯದ ಬದುಕಿನ ಸಾಮಾಜಿಕ ವ್ಯವಹಾರದ ನಡೆನುಡಿಗಳಲ್ಲಿ ಒಳ್ಳೆಯವನಾಗಿ ಬಾಳುತ್ತಿರದೆ, ನೋಡುವವರ ಕಣ್ಣಿಗೆ ದೇವರಲ್ಲಿ ಒಲವುಳ್ಳವನಂತೆ ಹೊರನೋಟಕ್ಕೆ ಕಾಣಿಸಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ;

ಮಹೇಶನ್+ಆದಡೆ+ಏನು; ಮಹೇಶ=ಶಿವ; ಗುಣ+ಇಲ್ಲದ+ ಅನ್ನಕ್ಕರ; ಗುಣ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ನಡೆನುಡಿ; ಅನ್ನಕ್ಕರ=ಅಲ್ಲಿಯವರೆಗೆ/ಅಲ್ಲಿಯ ತನಕ; **ಗುಣವಿಲ್ಲದನ್ನಕ್ಕರ**=ಗುಣವಿಲ್ಲದಿರುವ ತನಕ/ ಒಳ್ಳೆಯ ನಡೆನುಡಿಗಳಿರದಿದ್ದರೆ ಯಾವ ರೀತಿಯಲ್ಲಿ ಕಾಣಿಸಿಕೊಂಡರು ಪ್ರಯೋಜನವಿಲ್ಲ;

ಕ್ಷೀರ=ಹಾಲು; ತಕ್ರ=ಮಜ್ಜಿಗೆ; ಭೇದ+ಏನ್+ಉಂಟು; ಭೇದ=ವ್ಯತ್ಯಾಸ/ಅಂತರ/ಬೇರೆ ಬಗೆ/ರೀತಿ; ಉಂಟು=ಇದೆ; ರುಚಿ+ಇಂದ+ಅಲ್ಲದೆ; ರುಚಿ=ಯಾವುದೇ ಬಗೆಯ ಉಣಿಸುತಿನಸುಗಳನ್ನು ಸೇವಿಸಿದಾಗ ನಾಲಗೆಯ ಮೂಲಕ

ಉಂಟಾಗುವ ಸಂವೇದನೆ; ರೂಪ+ಇಂದವೆ; ರೂಪ=ಆಕಾರ/ಹೊರನೋಟಕ್ಕೆ ಕಂಡು ಬರುವ ರೀತಿ; **ರುಚಿಯಿಂದಲ್ಲದೆ ರೂಪದಿಂದವೆ**=ರುಚಿಯಿಂದ ತಿಳಿದು ಬರುತ್ತದೆಯೇ ಹೊರತು ರೂಪದಿಂದಲ್ಲ;

ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟು ರುಚಿಯಿಂದಲ್ಲದೆ ರೂಪದಿಂದವೆ= ಹೊರನೋಟಕ್ಕೆ ಹಾಲು ಮತ್ತು ಮಜ್ಜಿಗೆಯ ಬಣ್ಣ ಬೆಳ್ಳಗೆ ಒಂದೇ ರೀತಿಯಲ್ಲಿ ಕಂಡುಬರುತ್ತದೆ. ಆದರೆ ನಾಲಿಗೆಯಿಂದ ಸವಿದಾಗ, ಅವೆರಡರ ರುಚಿ ಬೇರೆ ಬೇರೆಯಾಗಿರುವುದು ತಿಳಿದುಬರುತ್ತದೆ;

ಯಾವುದೇ ವ್ಯಕ್ತಿಗಳನ್ನು ಅವರು ತೊಟ್ಟಿರುವ ಉಡುಗೆ ತೊಡುಗೆಗಳ ಮೂಲಕ ಒಳ್ಳೆಯವರು ಇಲ್ಲವೇ ಕೆಟ್ಟವರು ಎಂದು ಅಳೆಯಬಾರದು. ಅವರು ಮಾಡುವ ಕೆಲಸಗಳ ಮೂಲಕ ಅವರ ವ್ಯಕ್ತಿತ್ವವನ್ನು ತಿಳಿಯಬೇಕೆಂಬ ಅರಿವನ್ನು/ಎಚ್ಚರವನ್ನು ಹಾಲು ಮತ್ತು ಮಜ್ಜಿಗೆಯ ಬಣ್ಣ ಮತ್ತು ರುಚಿಯ ರೂಪಕದ ಮೂಲಕ ಸೂಚಿಸಲಾಗಿದೆ; ಕಪಿಲಸಿದ್ಧ ಮಲ್ಲಿಕಾರ್ಜುನಾ=ಶಿವ;)

❖

166. ಪುಣ್ಯವ ಮಾಡಬೇಕೆಂದು ಮರುಗಬೇಡ
ಪಾಪವ ಮಾಡದಿದ್ದಡೆ ಪುಣ್ಯ ದಿಟ
ಬೇರೆ ತೀರ್ಥ ಬೇಡ
ಸತ್ಯವ ನುಡಿವಲ್ಲಿ ಸಂದಿಲ್ಲದಿಹನು
ಕಪಿಲಸಿದ್ಧಮಲ್ಲಿಕಾರ್ಜುನ
ಹುಸಿಗೆ ಹುರುಡಿಗನು.

ತನ್ನ ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುತ್ತಿರುವ ವ್ಯಕ್ತಿಯು ಪುಣ್ಯವನ್ನು ಪಡೆಯಲೆಂದು ಇಲ್ಲವೇ ಪಾಪವನ್ನು ಕಳೆಯಲೆಂದು ದೇವರಿಗೆ ಮೊರೆ ಹೋಗಬೇಕಾದ ಅಗತ್ಯವಿಲ್ಲವೆಂಬ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

"ದೇವರಿಗೆ ಮೊರೆ ಹೋಗುವುದು" ಎಂದರೆ ದೇವಾಲಯಗಳಿಗೆ ಹೋಗಿ, ನದಿತೊರೆಗಳಲ್ಲಿ ಮಿಂದು, ಅನೇಕ ವ್ರತಗಳನ್ನು ಆಚರಿಸುತ್ತ, ಪುಣ್ಯದ ಗಳಿಕೆಗಾಗಿ ಇಲ್ಲವೇ ಪಾಪದ ನಿವಾರಣೆಗಾಗಿ ಹಂಬಲಿಸುವುದು;

ಪುಣ್ಯ=ವ್ಯಕ್ತಿಯು ಒಳ್ಳೆಯ ನಡೆನುಡಿಯಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವುದು; ಮರುಗು=ತಳಮಳ/ಕಳವಳ;

ಪುಣ್ಯವ ಮಾಡಬೇಕೆಂದು ಮರುಗಬೇಡ=ಸಹಮಾನವರಿಗೆ ಮತ್ತು ಸಮಾಜಕ್ಕೆ ಯಾವ ರೀತಿಯಿಂದಲಾದರೂ ಒಳ್ಳೆಯದನ್ನು ಮಾಡಬೇಕೆಂದು ಮನದಲ್ಲಿಯೇ ತಳಮಳಿಸುತ್ತಿರಬೇಡ;

ಪಾಪ=ವ್ಯಕ್ತಿಯು ಕೆಟ್ಟ ನಡೆನುಡಿಯಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನು ಉಂಟುಮಾಡುವುದು; ಮಾಡದಿದ್ದಡೆ=ಮಾಡದಿದ್ದರೆ;

ಪಾಪವ ಮಾಡದಿದ್ದಡೆ=ವ್ಯಕ್ತಿಯು ಸಹಮಾನವರ ಬದುಕಿಗೆ ಅಗತ್ಯವಾದ 'ಅನ್ನ-ಬಟ್ಟೆ-ವಸತಿ-ವಿದ್ಯೆ-ಉದ್ಯೋಗ-ಆರೋಗ್ಯಕ್ಕೆ' ಹಾನಿ ತಟ್ಟುವಂತಹ ಕೇಡಿನ ಕೆಲಸವನ್ನು ಮಾಡದಿದ್ದರೆ;

ದಿಟ=ಸತ್ಯ/ನಿಜ;

ಪುಣ್ಯ ದಿಟ=ವ್ಯಕ್ತಿಯು ತನ್ನ ಜೀವನದಲ್ಲಿ ಇತರರಿಗೆ ಒಳ್ಳೆಯದನ್ನು ಮಾಡದಿದ್ದರೂ ಚಿಂತೆಯಿಲ್ಲ, ಕೇಡನ್ನು ಮಾಡದಿದ್ದರೆ ಸಾಕು. ಅದೇ ನಿಜವಾಗಿಯೂ ಬದುಕಿನಲ್ಲಿ ಪುಣ್ಯವನ್ನು ಮಾಡಿದಂತಾಗುತ್ತದೆ;

ತೀರ್ಥ=ದೇವಾಲಯಗಳಲ್ಲಿ ದೇವರ ಪೂಜೆಯ ನಂತರ ನೀಡುವ ನೀರು. ಇದನ್ನು ಕುಡಿದರೆ ಮತ್ತು ತಲೆಯ ಮೇಲೆ ಚಿಮುಕಿಸಿಕೊಂಡರೆ ಒಳಿತಾಗುವುದೆಂಬ ನಂಬಿಕೆ ಜನಮನದಲ್ಲಿದೆ;

ಬೇರೆ ತೀರ್ಥ ಬೇಡ=ಈ ನುಡಿಗಳು ರೂಪಕವಾಗಿ ಬಳಕೆಗೊಂಡಿವೆ. ಪಾಪವನ್ನು ಮಾಡದಿರುವ ವ್ಯಕ್ತಿಯು ದೇವರ ಕರುಣೆಗಾಗಿ ಮೊರೆಯಿಡಬೇಕಾಗಿಲ್ಲ ಇಲ್ಲವೇ ದೇವರನ್ನು ಪೂಜಿಸಬೇಕಾಗಿಲ್ಲ. ಏಕೆಂದರೆ ಇತರರಿಗೆ ಕೇಡನ್ನು ಮಾಡದಿರುವ ಅವನ ನಡೆನುಡಿಯೇ ದೇವರ ಪೂಜೆಗೆ ಸಮನಾಗಿರುತ್ತದೆ;

ಸತ್ಯ=ದಿಟ/ವಾಸ್ತವ; ನುಡಿ+ಅಲ್ಲಿ; ನುಡಿ=ಹೇಳು; ಸಂದು+ಇಲ್ಲದೆ+ಇಹನು; ಸಂದು=ಬಿರುಕು/ಸೀಳು/ಎಡೆ; ಇಹನು=ಇರುವನು;

ಸಂದಿಲ್ಲದಿಹನು=ಎಡೆಬಿಡದೆ ಇರುವನು/ನೆಲೆಸಿದ್ದಾನೆ; ಕಪಿಲಸಿದ್ಧ ಮಲ್ಲಿಕಾರ್ಜುನ=ಶಿವನ ಮತ್ತೊಂದು ಹೆಸರು. ಸಿದ್ಧರಾಮೇಶ್ವರ ಅವರ ವಚನಗಳ ಅಂಕಿತನಾಮ;

ಹುಸಿ=ಸುಳ್ಳು; ಹುರುಡಿಗ=ಎದುರಾಳಿ/ಒಲ್ಲದವನು; ಹುಸಿಗೆ ಹುರುಡಿಗನು= ಸುಳ್ಳಿನ ನಡೆನುಡಿಗಳನ್ನು ಒಪ್ಪದವನು;

ಸತ್ಯವ ನುಡಿವಲ್ಲಿ ಸಂದಿಲ್ಲದಿಹನು ಕಪಿಲಸಿದ್ಧ ಮಲ್ಲಿಕಾರ್ಜುನ ಹುಸಿಗೆ ಹುರುಡಿಗನು= ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. "ಜನರು ಸತ್ಯದ ನುಡಿಯನ್ನಾಡುತ್ತ, ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಿರುವ ಎಡೆಯಲ್ಲಿ ಶಿವನು ನೆಲೆಸಿದ್ದಾನೆ. ಸುಳ್ಳನ್ನು ಆಡುವ ವ್ಯಕ್ತಿಗಳನ್ನು ಶಿವನು ಒಪ್ಪುವುದಿಲ್ಲ. ದೇವರಾದ ಶಿವನು ಕಲ್ಲು/ಮಣ್ಣು/ಮರ/ಲೋಹದ ರೂಪಿನ ವಿಗ್ರಹದಲ್ಲಿಲ್ಲ. ಜನರ ಒಳ್ಳೆಯ ನಡೆನುಡಿಗಳು ಇರುವ ಎಡೆಯಲ್ಲಿ ಶಿವನು ಇರುತ್ತಾನೆ" ಎಂಬ ನಿಲುವನ್ನು ಹೊಂದಿದ್ದ ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ತಮ್ಮ ಬದುಕಿನ ಒಳಿತಿಗಾಗಿ ಬಯಸುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವಂತಹ ಕಾಯಕದಲ್ಲಿ ತೊಡಗಿದ್ದರು.

❖

167. ಮನದ ಮಲಿನವನು ಕಳೆಯಾ ಅಯ್ಯಾ
ಮನವೇ ಶುದ್ಧನಾಗು ಮನವೇ ಸಿದ್ಧನಾಗು
ಮನವೇ ಪ್ರಸಿದ್ಧನಾಗಯ್ಯಾ
ಮನದೊಡೆಯ ಮಹಾದೇವ ಕಪಿಲಸಿದ್ಧಮಲ್ಲಿನಾಥ
ಮನದ ಸರ್ವಾಂಗ ನೀನಾಗಯ್ಯಾ.

ಜೀವನದಲ್ಲಿನ ಎಲ್ಲಾ ಬಗೆಯ ಒಳಿತು ಕೆಡುಕಿಗೆ ಕಾರಣವಾಗುವ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ರೀತಿಯಲ್ಲಿ ಬಾಳುವಂತಹ ಕಸುವನ್ನು ತನಗೆ ನೀಡುವಂತೆ ದೇವರಾದ ಶಿವನಲ್ಲಿ ವ್ಯಕ್ತಿಯು ಮೊರೆಯಿಡುತ್ತಿರುವ ಸಂಗತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

ಮನ=ಮನಸ್ಸು; ಮಲಿನ=ಕೊಳೆ/ಹೊಲಸು; ಕಳೆ=ಹೋಗಲಾಡಿಸು/ತೆಗೆ;

ಮನದ ಮಲಿನವನು ಕಳೆಯಾ ಅಯ್ಯಾ=ಮನಸ್ಸಿನಲ್ಲಿ ನಿರಂತರವಾಗಿ ಮೂಡುತ್ತಿರುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹೋಗಲಾಡಿಸಿ, ಒಳ್ಳೆಯದನ್ನು ಅನುಸರಿಸಿ ಬಾಳುವಂತೆ ಮಾಡು;

ಶುದ್ಧನ್+ಆಗು; ಶುದ್ಧ=ಚೊಕ್ಕಟ/ಶುಚಿ;

ಮನವೇ ಶುದ್ಧನಾಗು=ವ್ಯಕ್ತಿಯು ತನ್ನ ಮನದಲ್ಲಿ ಕೆರಳುವ ಕೆಟ್ಟ ಬಯಕೆಗಳನ್ನು ಮತ್ತು ಆಲೋಚನೆಗಳನ್ನು ತೊಡೆದುಹಾಕಿ, ಮನದಲ್ಲಿ ಒಳ್ಳೆಯ ಬಯಕೆಗಳು ಮತ್ತು ಆಲೋಚನೆಗಳು ನೆಲೆಗೊಳ್ಳುವಂತೆ ಮಾಡುವುದು;

ಸಿದ್ಧನ್+ಆಗು; ಸಿದ್ಧ=ಅಣಿಯಾದ/ತಯಾರಾದ;

ಮನವೇ ಸಿದ್ಧನಾಗು=ನಿತ್ಯದ ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ರೀತಿಯಲ್ಲಿ ಬದುಕನ್ನು ನಡೆಸಲು ಮಾನಸಿಕವಾಗಿ ತಯಾರಾಗುವುದು;

ಪ್ರಸಿದ್ಧನ್+ಆಗು+ಅಯ್ಯಾ; ಪ್ರಸಿದ್ಧ=ಹೆಸರುವಾಸಿಯಾದ;

ಮನವೇ ಪ್ರಸಿದ್ಧನಾಗಯ್ಯಾ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳ್ಳೆಯದನ್ನು ಮಾಡುವುದರ ಮೂಲಕ ದೊಡ್ಡ ಹೆಸರನ್ನು ಪಡೆಯುವುದು;

ಮನದ+ಒಡೆಯ; ಒಡೆಯ=ಯಜಮಾನ; ಮಹಾದೇವ=ಶಿವ; ಕಪಿಲಸಿದ್ಧ ಮಲ್ಲಿನಾಥ=ಶಿವನ ಮತ್ತೊಂದು ಹೆಸರು. ಸಿದ್ದರಾಮೇಶ್ವರ ಅವರ ವಚನಗಳ ಅಂಕಿತನಾಮ;

ಮನದೊಡೆಯ ಮಹಾದೇವ ಕಪಿಲಸಿದ್ಧಮಲ್ಲಿನಾಥಾ=ಮನಸ್ಸಿಗೆ ಒಡೆಯನಾದ ಶಿವ. ಅಂದರೆ ತನ್ನ ಮನದಲ್ಲಿ ಸದಾಕಾಲ ಅರಿವು ಮತ್ತು ಎಚ್ಚರವನ್ನು ಮೂಡಿಸುವವನು;

ಸರ್ವ+ಅಂಗ; ಸರ್ವ=ಸಕಲ/ಎಲ್ಲ; **ಅಂಗ**=ದೇಹ/ರೀತಿ; ನೀನ್+ಆಗು+ಅಯ್ಯಾ;

ಮನದ ಸರ್ವಾಂಗ ನೀನಾಗಯ್ಯಾ=ಒಳ್ಳೆಯ ನಡೆನುಡಿಗಳಿಂದ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ತನ್ನ ಮಯ್ ಮನದಲ್ಲಿಯೇ ಶಿವನು ನೆಲೆಸುವಂತಾಗಲೆಂದು ವ್ಯಕ್ತಿಯು ಹಂಬಲಿಸುತ್ತಿದ್ದಾನೆ;

ವ್ಯಕ್ತಿಯು ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಬಹುಬಗೆಯ ವ್ಯಾಯಾಮಗಳ ಮೂಲಕ ತನ್ನ ದೇಹಕ್ಕೆ ತರಬೇತಿಯನ್ನು ನೀಡುವಂತೆಯೇ, ಒಳ್ಳೆಯ ನಡೆನುಡಿಯಿಂದ ಬಾಳುವುದಕ್ಕಾಗಿ ಜೀವನದ ಕೊನೆ ಗಳಿಗೆಯ ತನಕ ತನ್ನ ಮನಸ್ಸಿಗೆ ತರಬೇತಿಯನ್ನು ನೀಡುತ್ತಿರಬೇಕೆಂದು ಕ್ರಿ.ಪೂ.ಅಯ್ದನೆಯ ಶತಮಾನದಲ್ಲಿದ್ದ ಗೌತಮ ಬುದ್ಧರು ಹೇಳಿದ್ದಾರೆ.

ಕ್ರಿ.ಶ.ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ಗೌತಮ ಬುದ್ಧರಂತೆಯೇ ವ್ಯಕ್ತಿಯ ನಡೆನುಡಿಗಳೇ ಜೀವನದ ಆಗುಹೋಗುಗಳಿಗೆ ಕಾರಣವೆಂಬುದನ್ನು ಗುರುತಿಸಿ, ಸಹಮಾನವರ ಮತ್ತು ಸಮಾಜದ ಒಳಿತಿಗೆ ಪ್ರತಿಯೊಬ್ಬ ವ್ಯಕ್ತಿಯು ಮಾನಸಿಕವಾಗಿ ಒಳ್ಳೆಯ ತರಬೇತಿಯನ್ನು ಪಡೆಯಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ.

❖

44. ಸೊಡ್ಡಳ ಬಾಚರಸ

ಕಸುಬು : ಬಿಜ್ಜಳನ ಅರಮನೆಯ ಕಣಜದಿಂದ ದಿನಸಿಯನ್ನು ಅಳೆದು ಕೊಡುವ ಮತ್ತು ಅಳೆದು ಕೊಟ್ಟಿದ್ದರ ಲೆಕ್ಕವನ್ನು ಬರೆಯುವ ಕಾಯಕ.

ವಚನಗಳ ಅಂಕಿತನಾಮ: ಮಹಾದಾನಿ ಸೊಡ್ಡಳ ಲಿಂಗ/ಸೊಡ್ಡಳ ದೇವ

168. ಉದ್ದವಾಗಿ ಕೂದಲು ನಿಮಿರ್ದು ಗಡ್ಡಂಗಳು ಬೆಳೆದಡೇನು ಹೇಳಾ
ಗಡ್ಡಂಗಳು ಬೆಳೆಯವೆ ಹೇಳಿರಣ್ಣಾ
ದೊಡ್ಡದಾಗಿ ಬೆಳೆದ ಗಡ್ಡ ಹೋತಗಳಿಗೆ
ಗಡ್ಡದ ವೃದ್ಧ ವೈಶಿಕರ ಮೆಚ್ಚ ಮಹಾದೇವ ಸೊಡ್ಡಳ
ಭಕ್ತಿ ಸಜ್ಜನರಲ್ಲದವರ.

ಅಂತರಂಗದ ಮನದಲ್ಲಿ ಕಪಟಿಗಳಾಗಿದ್ದು, ಬಹಿರಂಗದಲ್ಲಿ ಜನರ ಮುಂದೆ ತೋರಿಕೆಯ ರೂಪದಲ್ಲಿ ಗುರುಹಿರಿಯರಂತೆ ಕಾಣಿಸಿಕೊಳ್ಳುವ ವ್ಯಕ್ತಿಗಳನ್ನು ಈ ವಚನದಲ್ಲಿ ಟೀಕಿಸಲಾಗಿದೆ.

ನಿಮಿರ್=ಬೆಳೆ/ಹರಡು/ಹೆಚ್ಚಾಗು; ಗಡ್ಡ=ಗಂಡಸರ ಮೊಗದಲ್ಲಿ ಗದ್ದದ ಮೇಲೆ ಬೆಳೆಯುವ ಉದ್ದನೆಯ ಕೂದಲು; ಬೆಳೆದಡೆ+ಏನು; ಬೆಳೆದಡೆ=ಬೆಳೆದರೆ; ಹೇಳಾ=ಹೇಳಿರಿ;

ಉದ್ದವಾಗಿ ಕೂದಲು ನಿಮಿರ್ದು ಗಡ್ಡಂಗಳು ಬೆಳೆದಡೇನು ಹೇಳಾ=ವ್ಯಕ್ತಿಯ ಮೊಗದಲ್ಲಿ ಉದ್ದವಾಗಿ ಕೂದಲು ಬೆಳೆದ ಮಾತ್ರಕ್ಕೆ, ಆತ ವಿರಾಗಿಯೋ ಸಂನ್ಯಾಸಿಯೋ ಆಗುವುದಿಲ್ಲ. ಬಹಿರಂಗದಲ್ಲಿ ಬೆಳೆದಿರುವ ಉದ್ದನೆಯ ಗಡ್ಡಕ್ಕೂ ವ್ಯಕ್ತಿಯ ಮನದೊಳಗಿನ ಚಿಂತನೆಗಳಿಗೂ ಯಾವುದೇ ನಂಟಿಲ್ಲ;

ಹೇಳಿರಿ+ಅಣ್ಣಾ; ಹೇಳಿರಣ್ಣಾ=ಆಲೋಚನೆ ಮಾಡಿ, ವಾಸ್ತವವನ್ನು ತಿಳಿದು ಹೇಳಿರಿ; ಹೋತ=ಗಂಡು ಆಡು/ ಮೇಕೆ;

ಗಡ್ಡಂಗಳು ಬೆಳೆಯವೆ ಹೇಳಿರಣ್ಣಾ... ದೊಡ್ಡದಾಗಿ ಬೆಳೆದ ಗಡ್ಡ ಹೋತಗಳಿಗೆ= ವಯಸ್ಸಾಗುತ್ತಿದ್ದಂತೆಯೇ ಹೋತಗಳಿಗೆ ಉದ್ದನೆಯ ಗಡ್ಡ ತಾನಾಗಿಯೇ ಬೆಳೆಯುತ್ತದೆ. ಗಡ್ಡ ಬೆಳೆಯುವುದು ನಿಸರ್ಗ ಸಹಜವಾದ ಒಂದು ಕ್ರಿಯೆಯೇ ಹೊರತು ಮತ್ತೇನು ಅಲ್ಲ;

ವೃದ್ಧ=ವಯಸ್ಸಾದ ವ್ಯಕ್ತಿ/ಹಿರಿಯನಾದ ವ್ಯಕ್ತಿ; ವೈಶಿಕ=ಕಪಟತನ/ವಂಚಕತನ/ ಮೋಸ; ವೈಶಿಕರು=ಕಪಟಿಗಳು/ವಂಚಕರು/ಮೋಸಗಾರರು; ಮೆಚ್ಚು=ಒಪ್ಪು/ಒಲಿ;

ಮಹಾದೇವ ಸೊಡ್ಡಳ=ದೇವರಾದ ಶಿವನ ಮತ್ತೊಂದು ಹೆಸರು/ಸೊಡ್ಡಳ ಬಾಚರಸರ ವಚನಗಳ ಅಂಕಿತನಾಮ;

ಭಕ್ತಿ=ಒಳ್ಳೆಯ ನಡೆನುಡಿಯ ಆಚರಣೆಯೇ ದೇವರೆಂದು ತಿಳಿದು ಬಾಳುವುದು; ಸಜ್ಜನರ್+ಅಲ್ಲದವರ; ಸಜ್ಜನ=ಒಳ್ಳೆಯ ನಡೆನುಡಿಯುಳ್ಳವನು;

ಭಕ್ತಿ ಸಜ್ಜನರಲ್ಲದವರು=ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳದವರು;

ಗಡ್ಡದ ವೃದ್ಧ ವೈಶಿಕರ ಭಕ್ತಿ ಸಜ್ಜನರಲ್ಲದವರ ಮೆಚ್ಚ ಮಹಾದೇವ ಸೊಡ್ಡಳ= ಎಲ್ಲ ಬಗೆಯ ಕಾಮನೆಗಳನ್ನು ತೊರೆದವರಂತೆ ಜನಗಳ ಮುಂದೆ ಬಹಿರಂಗದಲ್ಲಿ ಕಾಣಿಸಿಕೊಳ್ಳುತ್ತ, ಅಂತರಂಗದ ಜೀವನದಲ್ಲಿ ಜನರನ್ನು ವಂಚಿಸುತ್ತಿರುವ ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಗಳಿಗೆ ಶಿವನು ಒಲಿಯುವುದಿಲ್ಲ. ಏಕೆಂದರೆ "ಶಿವನು ಕಲ್ಲು/ ಮಣ್ಣು/ಲೋಹ/ಮರದಿಂದ ಮಾಡಿದ ವಿಗ್ರಹರೂಪಿಯಲ್ಲ. ವ್ಯಕ್ತಿಗಳು ತಮ್ಮ ನಿತ್ಯ ಜೀವನದಲ್ಲಿ ಆಚರಿಸುವ ಒಳ್ಳೆಯ ನಡೆನುಡಿಯಲ್ಲಿ ನೆಲೆಸಿರುತ್ತಾನೆ" ಎಂಬ ನಿಲುವನ್ನು ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣಶರಣೆಯರು ತಳೆದಿದ್ದರು;

ಜಾತಿ ಮತ ದೇವರ ಹೆಸರಿನಲ್ಲಿ ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟ ಗಳಲ್ಲಿರುವ ಕೆಲವು ವ್ಯಕ್ತಿಗಳು 'ತಾವು ಮಯ್ ಮನವನ್ನು ಹತೋಟಿಯಲ್ಲಿ

ಇಟ್ಟುಕೊಂಡು ಎಲ್ಲ ಬಗೆಯ ಕಾಮನೆಗಳನ್ನು ತೊರೆದವರು' ಎಂಬುದನ್ನು ತೋರಿಸಿಕೊಳ್ಳುವಂತೆ ಉದ್ದನೆಯ ಗಡ್ಡವನ್ನು ಬಿಟ್ಟಿರುತ್ತಾರೆ. ಹೊರನೋಟಕ್ಕೆ ಉಡುಗೆ ತೊಡುಗೆಯಲ್ಲಿ ವಿರಾಗಿಗಳಂತೆ ಕಂಡುಬಂದರೂ ಅಂತರಂಗದ ಮನದಲ್ಲಿ ತುಸುವಾದರೂ ಕರುಣೆಯಿಲ್ಲದೆ ಜನರನ್ನು ವಂಚಿಸುವ ಕಲೆಯಲ್ಲಿ ಪರಿಣತರಾಗಿರುತ್ತಾರೆ. ನೂರಾರು ಬಗೆಯ ಜಾತಿ, ಮತ ಮತ್ತು ದೇವರುಗಳ ಹೆಣಿಗೆಯಿಂದ ಕೂಡಿರುವ ಸಮಾಜದಲ್ಲಿನ ಒಟ್ಟು ಜನಸಮುದಾಯದ ನೆಮ್ಮದಿಯ ಬದುಕಿಗೆ ಇಂತಹ ಕಪಟಿಗಳ ನಡೆನುಡಿಯಿಂದ ಹಾನಿಯುಂಟಾಗು ವುದನ್ನು ಈ ವಚನದಲ್ಲಿ ಗುರುತಿಸಲಾಗಿದೆ.

❖

45. ಹಡಪದ ಅಪ್ಪಣ್ಣ

ಹೆಂಡತಿ: ಲಿಂಗಮ್ಮ

ಕಸುಬು: ವೀಳ್ಯವನ್ನು ನೀಡುವುದು.

(ಕಲ್ಯಾಣ ಪಟ್ಟಣದಲ್ಲಿದ್ದ ಬಸವಣ್ಣನವರ ಮಹಾಮನೆಯಲ್ಲಿ ಅಪ್ಪಣ್ಣನು ವೀಳ್ಯವನ್ನು ವಿತರಣೆ ಮಾಡುವ ಕಾಯಕವನ್ನು ಮಾಡುತ್ತಿದ್ದುದರಿಂದ, ಈತನನ್ನು ಹಡಪದ ಅಪ್ಪಣ್ಣ ಎಂದು ಕರೆಯುತ್ತಿದ್ದರು. ವೀಳ್ಯ ಎಂದರೆ ಎಲೆ ಅಡಕೆ ಸುಣ್ಣ ಮೊದಲಾದುವುಗಳನ್ನು ಒಳಗೊಂಡ ತಾಂಬೂಲ.

ಹಡಪ ಎಂಬ ಪದಕ್ಕೆ ಎರಡು ಬಗೆಯ ತಿರುಳುಗಳಿವೆ:

ಹಡಪ/ಅಡಪ/ಅಡೆಪ

1) ಎಲೆ ಅಡಕೆಗಳನ್ನು ಇಟ್ಟುಕೊಳ್ಳುವ ಚೀಲ.

2) ಗಡ್ಡ ಮೀಸೆ ತಲೆಗೂದಲನ್ನು ಅಂದವಾಗಿ ಕತ್ತರಿಸುವ ಇಲ್ಲವೇ ಕೂದಲನ್ನು ತೆಗೆಯುವ ಕೆಲಸಕ್ಕಾಗಿ ಬಳಸುವ ಸಲಕರಣೆಗಳನ್ನು ಇಟ್ಟುಕೊಳ್ಳುವ ಚೀಲ/ಚಿಕ್ಕ ಪೆಟ್ಟಿಗೆ)

ದೊರೆತಿರುವ ವಚನಗಳು: 251

ವಚನಗಳ ಅಂಕಿತನಾಮ: ಬಸವಪ್ರಿಯ ಕೂಡಲ ಚೆನ್ನಬಸವಣ್ಣ

169. ವಂದನೆಗೆ ನಿಲ್ಲಬೇಡ
ನಿಂದೆಗಂಜಿ ಓಡಲಿಬೇಡ
ಹಿಂದು ಮುಂದು ಆಡಲಿಬೇಡ
ಸಂದೇಹಗೊಳಲಿಬೇಡ
ದ್ವಂದ್ವಬುದ್ಧಿಯ ಕಳೆದು ನಿಂದಿರೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ವ್ಯಕ್ತಿಯು ತನ್ನ ಜೀವನದಲ್ಲಿ ಒಳ್ಳೆಯ ನಡೆನುಡಿಯನ್ನು ಅಳವಡಿಸಿಕೊಂಡು ಬಾಳಲು ಬೇಕಾದ ರೀತಿನೀತಿಯನ್ನು ಈ ವಚನದಲ್ಲಿ ಹೇಳಲಾಗಿದೆ.

(ವಂದನೆ=ಹೊಗಳಿಕೆ/ಸ್ತುತಿ/ನಮನ; ನಿಲ್ಲು=ಇರು/ತಂಗು/ಜೀವಿಸು/ಬದುಕು; ಬೇಡ=ಬೇಕಾಗಿಲ್ಲ/ಕೂಡದು;

ವಂದನೆಗೆ ನಿಲ್ಲಬೇಡ=ತನ್ನ ಬಗ್ಗೆ ಇತರರು ಆಡುವ ಹೊಗಳಿಕೆಯ ನುಡಿಯನ್ನು ಕೇಳಿಸಿಕೊಳ್ಳುತ್ತಿದ್ದಂತೆಯೇ, ವ್ಯಕ್ತಿಯ ಮನದಲ್ಲಿ ತಾನು ಇತರರಿಗಿಂತ ಹೆಚ್ಚಾಗಿ ತಿಳಿದವನು/ದೊಡ್ಡವನು/ಒಳ್ಳೆಯವನು ಎಂಬ ಅಹಂಕಾರ ಮೂಡುತ್ತದೆ. ಹೊಗಳಿಕೆಯ ಮಾತಿನ ಗುಂಗಿನಲ್ಲಿ ಸಿಲುಕಿದ ವ್ಯಕ್ತಿಯು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಬದಲು, ಇನ್ನುಳಿದ ಜೀವನದ ಉದ್ದಕ್ಕೂ ತನ್ನನ್ನು ತಾನು ಮೆರೆಸಿಕೊಳ್ಳುವುದರಲ್ಲಿಯೇ ಮಗ್ನನಾಗುತ್ತಾನೆ. ಆದ್ದರಿಂದ ಹೊಗಳಿಕೆಯ ನುಡಿಗಳನ್ನು ಕೇಳಿದಾಗ ವ್ಯಕ್ತಿಯು ಮಯ್ ಮರೆಯಬಾರದು/ ಸೊಕ್ಕಬಾರದು;

ನಿಂದೆಗೆ+ಅಂಜಿ; ನಿಂದೆ=ಬಯ್ಯುವಿಕೆ/ಮೂದಲಿಕೆ; ಅಂಜು=ಹೆದರು/ ಹಿಂಜರಿ; ಓಡು=ಪಲಾಯನ ಮಾಡು/ಹೊರಟುಹೋಗು;

ನಿಂದೆಗಂಜಿ ಓಡಲಿಬೇಡ=ಜೀವನದ ಆಗುಹೋಗುಗಳಲ್ಲಿ ಇತರರಿಂದ ನಿಂದೆ/ ಮೂದಲಿಕೆ/ತಿರಸ್ಕಾರಕ್ಕೆ ಗುರಿಯಾದಾಗ, ನಿನ್ನ ನಡೆನುಡಿಗಳಲ್ಲಿ ತಪ್ಪಾಗಿದ್ದರೆ, ಅದನ್ನು ಒಪ್ಪಿಕೊಂಡು ಆಗಿರುವ ತಪ್ಪನ್ನು ಸರಿಪಡಿಸಿಕೊಂಡು ಬಾಳು. ಒಂದು ವೇಳೆ ನಿನ್ನಿಂದ ಯಾವ ತಪ್ಪು ಆಗದೆ, ಇತರರು ನಿನಗೆ ತೊಡಕನ್ನು/ಕೇಡನ್ನು/ ಅಪಮಾನವನ್ನು ಮಾಡಬೇಕೆಂಬ ಕೆಟ್ಟ ಉದ್ದೇಶದಿಂದ ತೆಗಳುತ್ತಿದ್ದರೆ, ಅದನ್ನು ಲೆಕ್ಕಿಸದೆ/ಕಿವಿಯ ಮೇಲೆ ಹಾಕಿಕೊಳ್ಳದೆ ಗಟ್ಟಿಮನಸ್ಸಿನಿಂದ ಜೀವನದಲ್ಲಿ ಅಡಿಗಳನ್ನು ಇಡುತ್ತ ಮುಂದೆ ಸಾಗು;

ಹಿಂದೆ=ಹಿಂಬದಿಯಲ್ಲಿ/ಹಿಂದುಗಡೆ; ಮುಂದೆ=ಮುಂಬದಿಯಲ್ಲಿ/ಮುಂದುಗಡೆ; ಆಡಲಿ+ಬೇಡ; ಆಡು=ನುಡಿ/ಹೇಳು;

ಹಿಂದು ಮುಂದು ಆಡುವುದು=ವ್ಯಕ್ತಿಯೊಬ್ಬನು ತಮ್ಮ ಮುಂದಿದ್ದಾಗ, ಅವನೊಡನೆ ಒಲವು ನಲಿವಿನಿಂದ ತುಂಬಾ ಚೆನ್ನಾಗಿ ಮಾತನಾಡುತ್ತ, ಅವನು ಅಲ್ಲಿಂದ ಹೋದನಂತರ, ಇತರರ ಮುಂದೆ ಆತನ ಬಗ್ಗೆ ಕೆಟ್ಟನುಡಿಗಳನ್ನಾಡುವುದು ಸಾಮಾನ್ಯವಾಗಿ ಎಲ್ಲ ವ್ಯಕ್ತಿಗಳ ಜೀವನದಲ್ಲಿಯೂ ಒಂದಲ್ಲ ಒಂದು ಬಾರಿ ಕಂಡುಬರುತ್ತದೆ. ಇದಕ್ಕೆ ಆ ವ್ಯಕ್ತಿಯೊಡನೆ ಹೊಂದಿರುವ ನಂಟು/ಅವನ ಸಾಮಾಜಿಕ ಅಂತಸ್ತು/ಅಂದಿನ ಸಾಮಾಜಿಕ ಸನ್ನಿವೇಶ ಕಾರಣವಾಗಿರುತ್ತದೆ. ಆದರೆ ಈ ರೀತಿ 'ಮುಂದೊಂದು ಮಾತು, ಹಿಂದೊಂದು ಮಾತನ್ನಾಡುವುದನ್ನೇ' ಚಟವನ್ನಾಗಿ ಮಾಡಿಕೊಳ್ಳಬಾರದು. ಇದನ್ನೇ ಚಟವನ್ನಾಗಿಸಿಕೊಂಡ ವ್ಯಕ್ತಿಯು ಕೆಲವೇ ದಿನಗಳಲ್ಲಿ 'ನಂಬಿಕೆಗೆ ಯೋಗ್ಯನಲ್ಲ' ಎಂಬ ಕೆಟ್ಟಹೆಸರನ್ನು ಪಡೆಯುತ್ತಾನೆ. ಆದುದರಿಂದ ಒಳ್ಳೆಯ ನಡೆನುಡಿಗಳನ್ನು ರೂಪಿಸಿಕೊಳ್ಳುವ ವ್ಯಕ್ತಿಯು ಈ ಬಗೆಯ ಮಾತಿನ ವರ್ತನೆಯಿಂದ ದೂರವಿರಬೇಕು ಇಲ್ಲವೇ ಈ ರೀತಿ ಮಾತನಾಡುವುದನ್ನು ಪ್ರಯತ್ನಪೂರ್ವಕವಾಗಿ ಬಿಡಬೇಕು;

ಹಿಂದು ಮುಂದು ಆಡಲಿಬೇಡ=ವ್ಯಕ್ತಿಯು ತನ್ನ ಮುಂದೆ ಇದ್ದಾಗ ಒಂದು ರೀತಿ ಮಾತನಾಡುತ್ತಿದ್ದು, ಅವನು ಇಲ್ಲದ ಸಮಯದಲ್ಲಿ ಮತ್ತೊಂದು ಬಗೆಯ ಮಾತನಾಡಬೇಡ;

ಸಂದೇಹ=ಅನುಮಾನ/ಸಂಶಯ; ಸಂದೇಹಗೊಳ್ಳುವುದು=ಸಂಶಯವನ್ನು/ಅನುಮಾನವನ್ನು ಹೊಂದುವುದು. ಕುಟುಂಬದ ನೆಲೆಯಲ್ಲಿ/ದುಡಿಮೆಯ ನೆಲೆಯಲ್ಲಿ/ಸಾರ್ವಜನಿಕ ನೆಲೆಯಲ್ಲಿ ಜೀವನದ ಉದ್ದಕ್ಕೂ ವ್ಯಕ್ತಿಗಳೊಡನೆ ನಾವು ವ್ಯವಹರಿಸುವಾಗ/ಜೊತೆಗೂಡಿ ಬಾಳುವಾಗ ಒಬ್ಬರು ಮತ್ತೊಬ್ಬರನ್ನು ನಂಬಬೇಕು. ನಂಬಿಕೆ ಎಂದರೆ ವ್ಯಕ್ತಿಗಳು ಪರಸ್ಪರ ಒಲವನ್ನು ಹೊಂದಿರುವುದು ಮತ್ತು ಒಬ್ಬರಿಗೊಬ್ಬರು ಒಳಿತನ್ನು ಮಾಡುವುದು/ನೆರವಾಗುವುದು. ಇಂತಹ ನಂಬಿಕೆಯಿಂದಲೇ ಮಾನವನ ಬದುಕು ನಡೆಯುತ್ತಿದೆ. ನಾವು ವ್ಯವಹರಿಸುತ್ತಿರುವ ವ್ಯಕ್ತಿಗಳ ಬಗ್ಗೆ ನಂಬಿಕೆಯನ್ನು ಕಳೆದುಕೊಂಡು ಅವರ ನಡೆನುಡಿಗಳನ್ನು ಸಂಶಯದಿಂದ ಕಾಣತೊಡಗಿದಾಗ, ವ್ಯಕ್ತಿಗಳ ನಡುವಣ ನಂಟು ಮುರಿದು ಬೀಳುತ್ತದೆ ಮತ್ತು ಯಾವೊಂದು ಕೆಲಸಗಳು ಸರಿಯಾಗಿ ನಡೆಯುವುದಿಲ್ಲ.

ಸಂಶಯಗೊಳಲಿ ಬೇಡ=ಜೀವನದಲ್ಲಿ ಎಲ್ಲವನ್ನೂ/ಎಲ್ಲರನ್ನೂ ಸಂಶಯ

ದಿಂದ ಕಾಣುವಂತಹ ಗುಣವನ್ನು ಬೆಳೆಸಿಕೊಳ್ಳಬೇಡ. ಇದರಿಂದ ನಿನಗೂ ಕೇಡಾಗುತ್ತದೆ ಮತ್ತು ನಿನ್ನನ್ನು ಅವಲಂಬಿಸಿದವರಿಗೂ ಹಾನಿಯುಂಟಾಗುತ್ತದೆ. ಏಕೆಂದರೆ ಸಂಶಯದ ನಡೆನುಡಿಯು ವ್ಯಕ್ತಿಯ ಮನದಲ್ಲಿ ಸದಾಕಾಲ ಆತಂಕ/ತಲ್ಲಣ/ಒತ್ತಡಗಳನ್ನು ಉಂಟುಮಾಡಿ ಎಲ್ಲರ ಬದುಕನ್ನು ನರಕಗೊಳಿಸುತ್ತದೆ;

ದ್ವಂದ್ವ=ಎರಡು/ಇಬ್ಬಗೆ; ಬುದ್ಧಿ=ಅರಿವು/ವಿವೇಕ; ದ್ವಂದ್ವ ಬುದ್ಧಿ= ಇಬ್ಬಗೆಯಾದ/ಪರಸ್ಪರ ಎದುರುಬದುರಾದ ಇಲ್ಲವೇ ಬೇರೆ ಬೇರೆಯಾಗಿರುವ ಆಲೋಚನೆ/ಚಿಂತನೆ/ವಿಚಾರಗಳು; ಕಳೆ=ಬಿಡು/ತೊರೆ/ತ್ಯಜಿಸು/ಹೋಗಲಾಡಿಸು/ನಾಶಪಡಿಸು; ನಿಂದಿರೆ= ಇರಲು/ವ್ಯವಹರಿಸಲು;

ದ್ವಂದ್ವ ಬುದ್ಧಿಯ ಕಳೆದು ನಿಂದಿರೆ=ಯಾವುದೇ ಕೆಲಸಕ್ಕೆ ತೊಡಗುವ ಮುನ್ನ ಇಲ್ಲವೇ ಕೆಲಸವನ್ನು ಮಾಡುವಾಗ 'ಮಾಡುವುದೋ/ಬೇಡವೋ?... 'ಒಳಿತಾಗುವುದೋ/ಕೇಡಾಗುವುದೋ?'...'ಕೊನೆಮುಟ್ಟುವುದೋ/ಇಲ್ಲವೋ' ಮುಂತಾದ ಇಬ್ಬಗೆಯ ಒಳಮಿಡಿತಗಳಿಗೆ ಒಳಗಾಗಿ ತೊಳಲಾಡಬಾರದು. ಕೆಲಸದಲ್ಲಿ ತೊಡಗುವಾಗ ಒಳ್ಳೆಯ ಉದ್ದೇಶವನ್ನು ಹೊಂದಿರಬೇಕು ಮತ್ತು ಅದರ ಆಗುಹೋಗುಗಳನ್ನು ಕುರಿತು ಆಲೋಚಿಸಿ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಆ ಕೆಲಸಕ್ಕೆ ಕಯ್ ಹಾಕಿದ ನಂತರ ಹೆಚ್ಚಿನ ಆಸಕ್ತಿಯನ್ನು ತಳೆದು ಪ್ರಾಮಾಣಿಕತನದಿಂದ ಕಾಲದ ಮಿತಿಯೊಳಗೆ ಒಂದೇ ಮನಸ್ಸಿನಿಂದ ಮಾಡಿ ಮುಗಿಸಬೇಕು. ಈ ರೀತಿ ಕಯ್ಗೊಂಡ ಕೆಲಸಗಳು ಯಾವುದೇ ಬಗೆಯ ಎಡರುತೊಡರುಗಳಿಲ್ಲದೆ ಚೆನ್ನಾಗಿ ನಡೆಯುತ್ತವೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಬಸವಪ್ರಿಯ=ಶಿವಶರಣ ಬಸವಣ್ಣನವರ ಮೆಚ್ಚುಗೆಗೆ/ಒಲವಿಗೆ ಪಾತ್ರನಾದವನು; ಕೂಡಲು=ಎರಡು ನದಿಗಳು ಜತೆಗೂಡುವ ಜಾಗ; ಚೆನ್ನಬಸವಣ್ಣ=ಹನ್ನೆರಡನೆಯ ಶತಮಾನದಲ್ಲಿದ್ದ ಒಬ್ಬ ಶಿವಶರಣ;

ಬಸವಪ್ರಿಯ ಕೂಡಲ ಚೆನ್ನಬಸವಣ್ಣ=ಹಡಪದ ಅಪ್ಪಣ್ಣನ ವಚನಗಳ ಅಂಕಿತನಾಮ.)

❖

46. ಹಾವಿನಹಾಳ ಕಲ್ಲಯ್ಯ

ಕಸುಬು: ಚಿನ್ನ ಬೆಳ್ಳಿ ಮುಂತಾದ ಲೋಹದಿಂದ ಒಡವೆಗಳನ್ನು ಮಾಡುವ ಅಕ್ಕಸಾಲೆ.

ಅಂಕಿತನಾಮ: ಮಹಾಲಿಂಗ ಕಲ್ಲೇಶ್ವರ

ದೊರೆತಿರುವ ವಚನಗಳು: 105

170. ತನ್ನ ಗುಣವ ಹೊಗಳಬೇಡ ಇದಿರ ಗುಣವ ಹಳಿಯಬೇಡ
ಕೆಮ್ಮನೊಬ್ಬರ ನುಡಿಯಬೇಡ ನುಡಿದು ನುಂಪಿತನಾಗಬೇಡ
ಇದಿರ ಮುನಿಯಿಸಬೇಡ ತಾ ಮುನಿಯಬೇಡ
ತಾನು ಬದುಕವೈಸುದಿನ ಸಮತೆ ಸಮಾಧಾನ ತುಂಬಿ
ತುಳುಕದಿರಬೇಕು ಮಹಾಲಿಂಗ ಕಲ್ಲೇಶ್ವರದೇವರ
ನಿಚ್ಚಳ ನಿಜವರಿದಡೆ
ಬಚ್ಚಬರಿಯ ಸಹಜ ಸಮಾಧಾನವಳವಟ್ಟಿರಬೇಕು.

ವ್ಯಕ್ತಿಯು ಒಲವು, ನಲಿವು ಮತ್ತು ನೆಮ್ಮದಿಯಿಂದ ಕೂಡಿದ ಜೀವನವನ್ನು ನಡೆಸಲು ಯಾವ ಬಗೆಯ ಅರಿವು ಮತ್ತು ಎಚ್ಚರದ ನಡೆನುಡಿಗಳನ್ನು ಹೊಂದಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಗುಣ=ನಡತೆ/ನಡೆನುಡಿ; ಹೊಗಳು=ಕೊಂಡಾಡು/ಬಣ್ಣಿಸು;

ತನ್ನ ಗುಣವ ಹೊಗಳಬೇಡ=ಇತರರ ಮುಂದೆ ನಿನ್ನ ನಡೆನುಡಿಯನ್ನೇ ಬಲು

ದೊಡ್ಡದೆಂದು ಬಣ್ಣಿಸಬೇಡ. ಏಕೆಂದರೆ ಹಾಗೆ ಹೊಗಳಿಕೊಳ್ಳುವುದರಿಂದ 'ಇತರರಿಗಿಂತ ನೀನೊಬ್ಬನೇ ಉತ್ತಮನೆಂಬ ಅಹಂಕಾರವನ್ನು ಮೆರೆಸಿದಂತಾಗುತ್ತದೆ';

ಇದಿರ=ಇತರರ/ಮತ್ತೊಬ್ಬರ/ಬೇರೆಯವರ; ಹಳಿ=ನಿಂದಿಸು/ತೆಗಳು/ ಹೀಯಾಳಿಸು;

ಇದಿರ ಗುಣವ ಹಳಿಯಬೇಡ=ಇತರರ ನಡೆನುಡಿಯಲ್ಲಿ ಕಂಡುಬರುವ ಸಂಗತಿಗಳನ್ನು ಎತ್ತಿ ಹಿಡಿದು ತೆಗಳಬೇಡ. ಏಕೆಂದರೆ ಮತ್ತೊಬ್ಬರನ್ನು ನಿಂದಿಸು ವಾಗ ನೀನು ಆಡುವ ಮಾತುಗಳು ಅವರ ಮನಸ್ಸಿಗೆ ನೋವನ್ನು ಉಂಟು ಮಾಡುವುದರ ಜತೆಗೆ ಅವರ ವ್ಯಕ್ತಿತ್ವವನ್ನೇ ಗಾಸಿಗೊಳಿಸುತ್ತವೆ;

ಕೆಮ್ಮನೆ+ಒಬ್ಬರ; ಕೆಮ್ಮನೆ=ಸುಮ್ಮನೆ/ಕಾರಣವೇ ಇಲ್ಲದೆ; ನುಡಿ=ಹೇಳು/ ಮಾತನಾಡು;

ಕೆಮ್ಮನೊಬ್ಬರ ನುಡಿಯಬೇಡ=ಯಾವುದೇ ವ್ಯಕ್ತಿಯ ಬಗ್ಗೆ ಇಲ್ಲಸಲ್ಲದ ಕತೆಯನ್ನು ಕಟ್ಟಿ, ಸುಮ್ಮಸುಮ್ಮನೆ ಕೆಟ್ಟ ಮಾತುಗಳನ್ನಾಡಬೇಡ. ಏಕೆಂದರೆ ಇಂತಹ ಕಟ್ಟುಕತೆಗಳಿಂದ ವ್ಯಕ್ತಿಗಳ ನಡುವೆ ಇರಬೇಕಾದ ಪರಸ್ಪರ ನಂಬಿಕೆಯೇ ಹಾಳಾಗಿ, ವ್ಯಕ್ತಿಗಳ ಮನದಲ್ಲಿ ಅನುಮಾನ, ಆತಂಕ ಮತ್ತು ಹಗೆತನದ ಒಳಮಿಡಿತಗಳು ಕಾಡತೊಡಗಿ, ಇಡೀ ಸಮಾಜದ ನೆಮ್ಮದಿಯೇ ಹಾಳಾಗುತ್ತದೆ;

ನುಡಿದು=ಮಾತನಾಡಿ/ಒಬ್ಬರಿಗೆ ವಾಗ್ದಾನವನ್ನು ನೀಡಿ; ನುಂಪಿತನ್+ ಆಗ ಬೇಡ; ನುಂಪಿತ=ಹಿಂಜರಿಯುವುದು/ನುಣುಚಿಕೊಳ್ಳುವುದು;

ನುಡಿದು ನುಂಪಿತನಾಗಬೇಡ=ಇತರರಿಗೆ ನೆರವನ್ನು ನೀಡುವ ಮಾತುಗಳನ್ನಾಡಿ, ಅನಂತರ ಕೊಟ್ಟ ಮಾತಿಗೆ ತಪ್ಪಿ ನಡೆಯಬೇಡ. ಏಕೆಂದರೆ ನೀನು ಆಡಿದ ಮಾತಿಗೆ ನೀನೇ ಜವಾಬ್ದಾರನಾಗದೆ ನುಣುಚಿಕೊಂಡರೆ, ಅದರಿಂದ ಮುಂದಿನ ದಿನಗಳಲ್ಲಿ ನೀನು ಆಡುವ ಮಾತಿಗೆ ಯಾವುದೇ ಬೆಲೆಯಿಲ್ಲವಾಗುತ್ತದೆ. ಅಂತಿಮವಾಗಿ ನಿನ್ನ ವ್ಯಕ್ತಿತ್ವಕ್ಕೂ ಬೆಲೆಯಿಲ್ಲವಾಗುತ್ತದೆ;

ಮುನಿ=ಕೋಪ/ಆಕ್ರೋಶ; ಮುನಿಯಿಸು=ಕೋಪಗೊಳ್ಳುವಂತೆ ಮಾಡು / ಸಿಟ್ಟನ್ನು ತರಿಸು; ತಾ=ತಾನು/ನೀನು;

ಇದಿರ ಮುನಿಯಿಸಬೇಡ ತಾ ಮುನಿಯಬೇಡ=ಇತರರು ಕೋಪಗೊಳ್ಳುವಂತೆ ಮಾಡಬೇಡ ಅಂತೆಯೇ ನೀನೂ ಕೋಪಗೊಳ್ಳಬೇಡ. ಏಕೆಂದರೆ ವ್ಯಕ್ತಿಗಳ

ಮನದಲ್ಲಿ ಕೆರಳುವ ಕೋಪವು ಜೀವನದ ಎಲ್ಲಾ ಬಗೆಯ ದುರಂತಗಳಿಗೆ ನಾಂದಿಯಾಗುತ್ತದೆ. ಕೋಪಗೊಂಡ ಗಳಿಗೆಯಲ್ಲಿ ವ್ಯಕ್ತಿಗಳು 'ಯಾವ ನುಡಿಗಳನ್ನು ಆಡಬೇಕು/ಆಡಬಾರದು; ಯಾವುದನ್ನು ಮಾಡಬೇಕು/ಮಾಡಬಾರದು' ಎಂಬ ವಿವೇಕವನ್ನು ಕಳೆದುಕೊಂಡು ಒಬ್ಬರು ಮತ್ತೊಬ್ಬರ ಮೇಲೆ ಹಲ್ಲೆ ಮಾಡತೊಡಗುವುದರಿಂದ ಸಾವು ನೋವು ಉಂಟಾಗುತ್ತದೆ;

ತಾನು=ವ್ಯಕ್ತಿಯು; ಬದುಕುವ+ಏಸು+ದಿನ; ಏಸು=ಎಷ್ಟು; ಏಸುದಿನ=ಎಷ್ಟು ದಿನಗಳ ಕಾಲ/ವರುಶಗಳ ಕಾಲ;

ತಾನು ಬದುಕವೈಸುದಿನ=ನೀನು ಬದುಕಿರುವಷ್ಟು ದಿನ; ಸಾವು ಬರುವ ಕೊನೆ ಗಳಿಗೆಯವರೆಗೂ ಅಂದರೆ ಜೀವನದ ಉದ್ದಕ್ಕೂ;

ಸಮತೆ=ಯಾವುದನ್ನೂ ಇಲ್ಲವೇ ಯಾರನ್ನೂ ಮೇಲು/ಕೀಳು ಎಂದು ತಾರತಮ್ಯ ಮಾಡದೆ ಸಮಾನವಾಗಿ ಕಾಣುವುದು; ಸಮಾಧಾನ=ತಾಳ್ಮೆ/ಸಹನೆ/ ಕೋಪವನ್ನು ಹತ್ತಿಕ್ಕಿಕೊಂಡು ತಾಪವನ್ನು ಸಹಿಸಿಕೊಂಡು ಬಾಳುವುದು; ತುಂಬಿ=ಕೂಡಿಕೊಂಡು/ಪೂರ್ಣವಾಗಿ ಪಡೆದುಕೊಂಡು; ತುಳುಕು=ಪಾತ್ರೆಗಳಲ್ಲಿ ಇಲ್ಲವೇ ಕೆರೆಕಟ್ಟೆಬಾವಿಗಳಲ್ಲಿ ನೀರು ತುಂಬಿ ಹೊರಚೆಲ್ಲುವುದು;

ತುಳುಕದಿರಬೇಕು=ವ್ಯಕ್ತಿಯು ತನ್ನ ಜೀವನದ ಯಾವುದೇ ಸನ್ನಿವೇಶದಲ್ಲಿಯೂ ಜಾತಿ/ಮತ/ರೂಪ/ವಿದ್ಯೆ/ಸಂಪತ್ತು/ಆಡಳಿತದ ಗದ್ದುಗೆಯ ಕಾರಣದಿಂದ ಇತರರ ಜತೆಯಲ್ಲಿ ಸೊಕ್ಕಿನಿಂದ ನಡೆದುಕೊಳ್ಳಬಾರದು;

ಸಮತೆ ಸಮಾಧಾನ ತುಂಬಿ ತುಳುಕದಿರಬೇಕು=ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ. ಪ್ರತಿಯೊಬ್ಬ ವ್ಯಕ್ತಿಯು ಇತರರನ್ನು ಜಾತಿ, ಮತ, ಲಿಂಗ, ಪ್ರಾಂತ್ಯ, ಬಡತನ ಇಲ್ಲವೇ ಸಿರಿತನದ ಕಾರಣಕ್ಕಾಗಿ ತಾರತಮ್ಯದಿಂದ ನೋಡದೆ, ಎಲ್ಲರೊಡನೆ ಹೊಂದಿಕೊಂಡು ಬಾಳುವಂತಹ ತಾಳ್ಮೆಯ ನಡೆನುಡಿಗಳನ್ನು ಹೊಂದಿರಬೇಕು. ಯಾವುದೇ ಸನ್ನಿವೇಶದಲ್ಲಿಯೂ ವ್ಯಕ್ತಿಯು 'ತಾನೇ ದೊಡ್ಡವನು/ತಾನೊಬ್ಬನೇ ಉತ್ತಮ' ಎಂಬ ಅಹಂಕಾರದಿಂದ ನಡೆದುಕೊಳ್ಳಬಾರದು;

ಮಹಾಲಿಂಗ ಕಲ್ಲೇಶ್ವರದೇವ=ದೇವರಾದ ಶಿವನ ಮತ್ತೊಂದು ಹೆಸರು/ ಹಾವಿನಹಾಳ ಕಲ್ಲಯ್ಯನವರ ವಚನಗಳ ಅಂಕಿತನಾಮ; ನಿಚ್ಚಳ=ಸರಿಯಾಗಿ ಮತ್ತು ಚೆನ್ನಾಗಿ ಕಾಣುವ; ನಿಜ+ಅನ್+ಅರಿದಡೆ; ನಿಜ=ವಾಸ್ತವ/ದಿಟ/ಸತ್ಯ; ಅನ್=ಅನ್ನು; ಅರಿ=ತಿಳಿ; ಅರಿದಡೆ=ತಿಳಿದರೆ;

ಮಹಾಲಿಂಗ ಕಲ್ಲೇಶ್ವರದೇವರ ನಿಚ್ಚಳ ನಿಜವನರಿದಡೆ=ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ನಿಜದ ನಡೆನುಡಿಯನ್ನೇ ಶಿವನೆಂದು ಅರಿತು ಬಾಳುತ್ತಿದ್ದರು. ಅವರ ಪಾಲಿನ ದೇವರು ಕಲ್ಲು/ಮಣ್ಣು/ಮರ/ಲೋಹದ ವಿಗ್ರಹ ರೂಪದ ಶಿವನಾಗಿರಲಿಲ್ಲ. ಆದ್ದರಿಂದಲೇ ಅವರು ಸರ್ವಸಮಾನತೆಯ ಸಮಾಜ ರೂಪುಗೊಳ್ಳುವುದಕ್ಕೆ ವ್ಯಕ್ತಿಗಳ ಒಳ್ಳೆಯ ನಡೆನುಡಿಗಳು ಅಗತ್ಯವೇ ಹೊರತು ದೇವರ ಪೂಜೆ ಇಲ್ಲವೇ ಯಾಗ ಮುಂತಾದ ಆಚರಣೆಗಳ ಅಗತ್ಯವಿಲ್ಲವೆಂಬ ನಿಲುವನ್ನು ಹೊಂದಿದ್ದರು; 'ಸರ್ವಸಮಾನತೆಯ ಸಮಾಜ' ಎಂದರೆ ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯ ದೊರೆಯುವಂತಹ ಸಾಮಾಜಿಕ ಮತ್ತು ಹಣಕಾಸಿನ ವ್ಯವಸ್ಥೆಯು ಇರುವುದು;

ಬಚ್ಚಬರಿಯ=ಕೇವಲ/ಅಷ್ಟು ಮಾತ್ರ; ಸಹಜ=ದಿಟ/ವಾಸ್ತವ; ಸಮಾಧಾನವು+ ಅಳವಟ್ಟಿರಬೇಕು;

ಅಳವಡು=ಸೇರು/ಒಪ್ಪು/ಹೊಂದಿಕೆಯಾಗು;

ಬಚ್ಚಬರಿಯ ಸಹಜ ಸಮಾಧಾನವಳವಟ್ಟಿರಬೇಕು=ಮಾನವ ಸಮುದಾಯದ ಬದುಕು ನೆಮ್ಮದಿಯಿಂದ ಕೂಡಿರಬೇಕಾದರೆ ವ್ಯಕ್ತಿಯ ಮಯ್ ಮನಸ್ಸು ತಿಳಿಯಾಗಿರಬೇಕು. ಈ ರೀತಿ ಇರಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಲವು ನಲಿವು ನೆಮ್ಮದಿಯ ಬದುಕನ್ನು ಬಯಸುವಂತೆಯೇ ಸಹಮಾನವರಿಗೂ ಅವೆಲ್ಲವೂ ದೊರೆಯುಂತಹ ರೀತಿಯಲ್ಲಿ ಒಳ್ಳೆಯ ನಡೆನುಡಿಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿರಬೇಕು. ಅಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ದುಡಿಮೆಯು ಅವನನ್ನು ಒಳಗೊಂಡಂತೆ ಎಲ್ಲರಿಗೂ ಒಳಿತನ್ನುಂಟುಮಾಡುವಂತಿರಬೇಕು.

❖

ವಚನದಿಂದ ಆಯ್ದ ಸಾಲುಗಳ ಓದು

ಸೂಚನೆ : ಪ್ರತಿಯೊಂದು ಸಾಲಿನ ಕೊನೆಯಲ್ಲಿ ಹಾಕಿರುವ ಎರಡು ಅಂಕಿಗಳಲ್ಲಿ ಮೊದಲನೆಯದು ವಚನದ ಅಂಕಿಯನ್ನು ಮತ್ತು ಎರಡನೆಯದು ಬಸವಯುಗದ ವಚನ ಮಹಾಸಂಪುಟ-ಒಂದರಲ್ಲಿನ ಪುಟದ ಅಂಕಿಯನ್ನು ತಿಳಿಸುತ್ತವೆ.

೧. ಅಂಬಿಗರ ಚೌಡಯ್ಯ

**1. ನೆರೆದಿರ್ದ ಪಾಪವ ಹೊನಲಿನಲ್ಲಿ ಕಳೆದೆನೆಂಬ
ಅಣ್ಣಗಳ ಬೆಡಗು ಬೇಡೆಂದಾತನಂಬಿಗ ಚೌಡಯ್ಯ. (195-963)**

ನೆರೆದು+ಇರ್ದ; ನೆರೆ=ಒಟ್ಟುಗೂಡು/ತುಂಬಿಕೊಳ್ಳು; ಇರ್ದ=ಇದ್ದ; ನೆರೆದಿರ್ದ =ಕೂಡಿಕೊಂಡಿದ್ದ/ಒಟ್ಟುಗೂಡಿದ್ದ; ಪಾಪ=ಕೆಟ್ಟ ಕೆಲಸವನ್ನು ಮಾಡುವುದರಿಂದ ವ್ಯಕ್ತಿಗೆ ಸುತ್ತಿಕೊಳ್ಳುತ್ತದೆ; ಪುಣ್ಯ=ಒಳ್ಳೆಯ ಕೆಲಸವನ್ನು ಮಾಡುವುದರಿಂದ ವ್ಯಕ್ತಿಯು ಪಡೆದುಕೊಳ್ಳುವುದು;

ಒಳ್ಳೆಯ ನಡೆನುಡಿಯಿಂದ ವ್ಯಕ್ತಿಗೆ 'ಪುಣ್ಯ' ಬಂದು ಜೀವನದಲ್ಲಿ ಒಲವು ನಲಿವು ನೆಮ್ಮದಿಯು ದೊರಕುವುದೆಂದೂ, ಕೆಟ್ಟ ನಡೆನುಡಿಯಿಂದ 'ಪಾಪ' ತುಂಬಿ ಕೊಂಡು ಸಾವು ನೋವು ಉಂಟಾಗುವುದೆಂಬ ನಂಬಿಕೆಯು ಜನಸಮುದಾಯದ ಮನದಲ್ಲಿ ನೆಲೆಗೊಂಡಿದೆ;

ಪಾಪವ=ಪಾಪವನ್ನು; ಹೊನಲು+ಅಲ್ಲಿ; ಹೊನಲು=ಹರಿಯುತ್ತಿರುವ ನೀರಿನ ಪ್ರವಾಹ/ತೊರೆ; ಕಳೆದೆನ್+ಎಂಬ; ಕಳೆ=ಹೋಗಲಾಡಿಸು; ಕಳೆದೆನ್= ನಿವಾರಿಸಿಕೊಂಡೆನು/ಪರಿಹರಿಸಿ ಕೊಂಡೆನು; ಎಂಬ=ಎನ್ನುವ/ಎಂದು ಹೇಳುವ;

ಅಣ್ಣ=ವಯಸ್ಸಿನಲ್ಲಿ ಹಿರಿಯನಾದ ವ್ಯಕ್ತಿ ಇಲ್ಲವೇ ಸಾಮಾಜಿಕವಾಗಿ ದೊಡ್ಡ ಗದ್ದುಗೆಯಲ್ಲಿರುವ ವ್ಯಕ್ತಿ; ಮತ್ತೊಬ್ಬ ವ್ಯಕ್ತಿಯ ನಡೆನುಡಿಗಳಲ್ಲಿನ ತಪ್ಪುಗಳನ್ನು ಕುರಿತು ಅಣಕ ಮಾಡುವಾಗ ಕೆಲವೊಮ್ಮೆ 'ಅಣ್ಣ' ಎಂಬ ಪದವನ್ನು ಬಳಸುತ್ತಾರೆ;

ಅಣ್ಣಗಳ=ಅಣ್ಣಂದಿರ; ಬೆಡಗು=ಚತುರತೆ/ಚಮತ್ಕಾರ;

ಅಣ್ಣಗಳ ಬೆಡಗು=ಅಣ್ಣಂದಿರ ಚಮತ್ಕಾರದ ಮಾತು/ತಮ್ಮನ್ನು ತಾವೇ ವಂಚಿಸಿಕೊಳ್ಳುವ ಮಾತು; ಬೇಡ+ಎಂದ+ಆತನ್+ಅಂಬಿಗ; ಬೇಡ=ಅಗತ್ಯವಿಲ್ಲ/ಬೇಕಾಗಿಲ್ಲ; ಎಂದ=ಹೇಳಿದ; ಆತನ್=ಅವನು; **ಬೇಡೆಂದಾತನ್**=ಬೇಡವೆಂದು ಹೇಳಿದವನು; ಅಂಬಿಗ=ನದಿಯಲ್ಲಿ ದೋಣಿಯನ್ನು ನಡೆಸುವುದನ್ನು ಕಸುಬನ್ನಾಗಿ ಮಾಡಿಕೊಂಡಿರುವ ವ್ಯಕ್ತಿ; ಚೌಡಯ್ಯ=ಹನ್ನೆರಡನೆಯ ಶತಮಾನದ ಒಬ್ಬ ವಚನಕಾರ; ಅಂಬಿಗ ಚೌಡಯ್ಯ=ಅಂಬಿಗ ಚೌಡಯ್ಯನ ವಚನಗಳ ಅಂಕಿತನಾಮ;

ದೇಗುಲವಿರುವ ಇಲ್ಲವೇ ಪವಿತ್ರವಾದ ನೆಲೆಯೆಂದು ಹೆಸರು ಪಡೆದಿರುವ ಊರಿನ ಬಳಿ ಹರಿಯುತ್ತಿರುವ ತೊರೆಯಲ್ಲಿ ಮಿಂದೇಳುವುದರಿಂದ ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಮಾಡಿದ್ದ ಪಾಪವೆಲ್ಲ ಹೊರಟುಹೋಗುತ್ತದೆ ಎಂಬ ನಂಬಿಕೆಯು ಜನಮನದಲ್ಲಿದೆ. ಈ ಬಗೆಯ ನಂಬಿಕೆಯು ಕೇವಲ ಬೆಡಗಿನ ಮಾತೇ ಹೊರತು, ನಿಜಕ್ಕೂ ವಾಸ್ತವವಲ್ಲ. ಏಕೆಂದರೆ ನೀರಿನಲ್ಲಿ ಮುಳುಗಿ ಏಳುವುದರಿಂದ ಮಯ್ಯಿನ ಕೊಳೆ ಹೋಗಬಹುದೇ ಹೊರತು ವ್ಯಕ್ತಿಯು ಮಾಡಿದ ಪಾಪ ಪರಿಹಾರವಾಗುವುದಿಲ್ಲ.

ಪಾಪವೆಂಬುದು ವ್ಯಕ್ತಿಯ ಕೆಟ್ಟ ನಡೆನುಡಿಯಿಂದ ಅವನ ವ್ಯಕ್ತಿತ್ವಕ್ಕೆ ಅಂಟಿರುವ ಕಳಂಕ. ವ್ಯಕ್ತಿಯು ತನ್ನ ಕೆಟ್ಟತನಕ್ಕಾಗಿ ಮನನೊಂದು, ಮತ್ತೆ ಅಂತಹ ತಪ್ಪುಗಳನ್ನು ಮಾಡದಿರುವ ನಿಲುವನ್ನು ತಳೆದು, ಒಳ್ಳೆಯ ನಡೆನುಡಿಗಳಿಂದ ಬಾಳಲು ತೊಡಗಿದಾಗ ಮಾತ್ರ ಮಾಡಿದ ಪಾಪ ನಿವಾರಣೆಯಾಗುತ್ತದೆ ಎಂಬುದು ವಚನಕಾರನ ಇಂಗಿತವಾಗಿದೆ. ❖

2. ಲಿಂಗವಿದ್ದಲ್ಲಿ ಫಲವೇನು ಆಚಾರವಿಲ್ಲದನ್ನಕ್ಕ.(243–968)

ಲಿಂಗ+ಇದ್ದಲ್ಲಿ; ಲಿಂಗ=ಶಿವನ ಸಂಕೇತವಾದ ವಿಗ್ರಹ. ಲಿಂಗ ವಿದ್ದಲ್ಲಿ=ಅಂಗಯ್ ಮೇಲೆ ಇಟ್ಟುಕೊಂಡು ಪೂಜಿಸುವ ಇಷ್ಟಲಿಂಗ ಇಲ್ಲವೇ ಕೊರಳಲ್ಲಿ ಕಟ್ಟಿಕೊಳ್ಳುವ ಲಿಂಗವನ್ನು ವ್ಯಕ್ತಿಯು ಹೊಂದಿದ್ದರೆ; ಫಲ+ಏನು; ಫಲ=ಪ್ರಯೋಜನ/ಪರಿಣಾಮ; ಏನು=ಯಾವುದು; ಆಚಾರ+ಇಲ್ಲದ+ಅನ್ನಕ್ಕ; ಆಚಾರ=ಒಳ್ಳೆಯ ನಡೆನುಡಿ/ಒಳ್ಳೆಯ ನಡವಳಿಕೆ; ಅನ್ನಕ್ಕ=ವರೆಗೆ/ತನಕ; ಇಲ್ಲದನ್ನಕ್ಕ=ಇಲ್ಲದಿದ್ದರೆ/ಇಲ್ಲದಿರುವ ತನಕ;

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ಪಾಲಿಗೆ ದೇವರ ಪ್ರತಿರೂಪವಾದ ಲಿಂಗವೆಂಬುದು 'ಕಲ್ಲು/ಮರ/ಮಣ್ಣು/ಲೋಹ'ದಿಂದ ಮಾಡಿದ ವಿಗ್ರಹವಾಗಿರಲಿಲ್ಲ. ವ್ಯಕ್ತಿಯ ಮಯ್ ಮನದಲ್ಲಿ ಅರಿವು ಮತ್ತು ಸಾಮಾಜಿಕ ಎಚ್ಚರವನ್ನು ಮೂಡಿಸುವ ಒಳದನಿಯನ್ನು ಲಿಂಗವೆಂದು ತಿಳಿದಿದ್ದರು. ಆದ್ದರಿಂದಲೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಎಸಗದಿರುವ ವ್ಯಕ್ತಿಯು ಮಾಡುವ ಲಿಂಗ ಪೂಜೆಯಿಂದ ಯಾವುದೇ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ನುಡಿಗಳು ಸೂಚಿಸುತ್ತಿವೆ.

3. ಲೋಭವೆಂಬ ಗ್ರಹಣ ಹಿಡಿದವರ ಏತರಿಂದಲೂ ನಿಲ್ಲಿಸಲಾಗದು.(176–962)

ಲೋಭ+ಎಂಬ; ಲೋಭ=ಅತಿಯಾಸೆ/ದುರಾಸೆ/ಜಿಪುಣತನ; ಎಂಬ= ಎನ್ನುವ; ಗ್ರಹಣ=ಹಿಡಿಯುವುದು/ಆವರಿಸಿಕೊಳ್ಳುವುದು/ವಶಪಡಿಸಿಕೊಳ್ಳುವುದು; ಗ್ರಹಣ=ಭೂಮಿ, ಸೂರ್ಯ ಹಾಗೂ ಚಂದ್ರ... ಇವು ಮೂರು ಒಂದೇ ಗೆರೆಯಲ್ಲಿ ಬಂದಾಗ ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಇಲ್ಲವೇ ಸೂರ್ಯ ಬಿಂಬಕ್ಕೆ ಚಂದ್ರ ಬಿಂಬ ಅಡ್ಡವಾಗಿ ಉಂಟಾಗುವ ಕತ್ತಲೆಯ ಆವರಣ;

ಏತರಿಂದಲೂ=ಯಾವುದರಿಂದಲೂ/ಯಾವುದೇ ಬಗೆಯಿಂದಲೂ; ನಿಲ್ಲಿಸಲ್+ಆಗದು; ನಿಲ್ಲಿಸಲ್=ತಡೆಯಲು/ಹತೋಟಿಯಲ್ಲಿಡಲು/ತಿದ್ದಿ ಸರಿಪಡಿಸಲು; ಆಗದು=ಆಗುವುದಿಲ್ಲ;

'ಗ್ರಹಣ ಹಿಡಿಯುವುದು' ಎಂಬ ನುಡಿಗಟ್ಟು ಒಂದು ರೂಪಕವಾಗಿ

ಬಳಕೆಯಾಗಿದೆ. ಚಂದ್ರಗ್ರಹಣದಲ್ಲಿ ಹೇಗೆ ಚಂದ್ರನ ಕಾಂತಿಯು ಮಸುಕಾಗುವುದೋ ಹಾಗೂ ಸೂರ್ಯ ಗ್ರಹಣದಲ್ಲಿ ಹೇಗೆ ಸೂರ್ಯನ ಪ್ರಕಾಶ ಕುಗ್ಗುವುದೋ ಅಂತೆಯೇ ವ್ಯಕ್ತಿಯ ಮಯ್ ಮನದಲ್ಲಿ ಅತಿಯಾಸೆ ಎಂಬುದು ತುಂಬಿಕೊಂಡಾಗ ಅವನ ವ್ಯಕ್ತಿತ್ವಕ್ಕೆ ಕಪ್ಪುಮಸಿಯು ಬಳಿದುಕೊಳ್ಳುತ್ತದೆ.

"ಲೋಕದಲ್ಲಿರುವ ಸಂಪತ್ತು, ಆಡಳಿತದ ಗದ್ದುಗೆ ಮತ್ತು ಚೆನ್ನಾಗಿರುವುದೆಲ್ಲವೂ ತನ್ನೊಬ್ಬನದೇ ಆಗಬೇಕು ಮತ್ತು ಎಂದೆಂದಿಗೂ ಅದೆಲ್ಲವೂ ತನ್ನಲ್ಲಿಯೇ ಇರಬೇಕು" ಎಂಬ ದುರಾಸೆಯು ವ್ಯಕ್ತಿಯನ್ನು ಗ್ರಹಣದಂತೆ ಹಿಡಿಯುತ್ತದೆ. ಇಂತಹ ವ್ಯಕ್ತಿಗೆ ತಿಳಿಯ ಹೇಳಿ, ಅವನ ದುರಾಸೆಯನ್ನು ತಗ್ಗಿಸಿ, ಅವನನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಲು ಯಾರಿಂದಲೂ ಆಗುವುದಿಲ್ಲ.

ಏಕೆಂದರೆ ಮಿತಿಯಿಲ್ಲದ ಆಸೆಗೆ ಒಳಗಾಗಿರುವ ವ್ಯಕ್ತಿಯಲ್ಲಿ ಸಾಮಾಜಿಕ ಜವಾಬ್ದಾರಿಯಾಗಲಿ, ನಾಲ್ಕು ಜನ ತನ್ನನ್ನು ಏನೆಂದಾರು ಎಂಬ ಹೆದರಿಕೆಯಾಗಲಿ ಇಲ್ಲವೇ ನಾಚಿಕೆಯಾಗಲಿ ಇರುವುದಿಲ್ಲ. ತನ್ನ ದುರಾಸೆಯ ಈಡೇರಿಕೆಗಾಗಿ ಯಾವುದನ್ನು ಬೇಕಾದರೂ ಹಾಳು ಮಾಡಲು, ಯಾರನ್ನು ಬೇಕಾದರೂ ಬಲಿಕೊಡಲು ಇಲ್ಲವೇ ಬಲಿ ತೆಗೆದುಕೊಳ್ಳಲು ಅವನು ತಯಾರಾಗಿರುತ್ತಾನೆ.

❖

2. ಅಕ್ಕಮಹಾದೇವಿ

4. ಎಲ್ಲ ಎಲ್ಲವನರಿದು ಫಲವೇನಯ್ಯಾ ತನ್ನ ತಾನರಿಯಬೇಕು. (112–798)

ಎಲ್ಲ=ಸಕಲ/ಸಂಪೂರ್ಣ; ಎಲ್ಲ+ಅನ್+ಅರಿದು; ಅನ್=ಅನ್ನು; ಅರಿದು=ತಿಳಿದುಕೊಂಡು/ಕಲಿತುಕೊಂಡು; ಫಲ+ಏನ್+ಅಯ್ಯಾ; ಫಲ= ಪ್ರಯೋಜನ/ಪರಿಣಾಮ; ಏನ್=ಯಾವುದು; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ತಾನ್+ಅರಿಯ+ಬೇಕು; ತನ್ನ ತಾನ್=ತನ್ನನ್ನು ತಾನು; ಬೇಕು=ಅಗತ್ಯ/ ಅವಶ್ಯಕ; ಅರಿಯಬೇಕು=ತಿಳಿಯಬೇಕು; **ತನ್ನ ತಾನರಿಯಬೇಕು**=ತನ್ನನ್ನು ತಾನು ತಿಳಿದುಕೊಳ್ಳುವುದು/ತನ್ನ ವ್ಯಕ್ತಿತ್ವದ ಇತಿಮಿತಿಗಳನ್ನು ಅರಿತುಕೊಳ್ಳುವುದು;

ಜೀವನದಲ್ಲಿ ಉಂಟಾಗುವ ನೋವು ನಲಿವಿನ ಸನ್ನಿವೇಶಗಳಲ್ಲಿ ಪಾಲ್ಗೊಳ್ಳುವುದರಿಂದ, ಒಳಿತು ಕೆಡುಕಿನ ಪ್ರಸಂಗಗಳನ್ನು ನೋಡುವುದರಿಂದ, ಕೇಳುವುದರಿಂದ ಮತ್ತು ಓದುವುದರಿಂದ ವ್ಯಕ್ತಿಯು ಪಡೆಯುವ ತಿಳುವಳಿಕೆಯೇ ದೊಡ್ಡದಲ್ಲ. ಎಲ್ಲಕ್ಕಿಂತ ಮಿಗಿಲಾಗಿ ವ್ಯಕ್ತಿಯು ತನ್ನ ನಡೆನುಡಿಗಳನ್ನು ರೂಪಿಸಿ ನಿಯಂತ್ರಿಸುತ್ತಿರುವ ಸಂಗತಿಗಳು ಯಾವುವು ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕು. ಇದನ್ನೇ ವಚನಕಾರರು ‘ತನ್ನ ತಾನರಿಯುವುದು’ ಎನ್ನುತ್ತಾರೆ.

“ತನ್ನ ತಾನರಿಯುವುದು” ಎಂದರೆ ಮಾನವ ಸಮುದಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನವು ನಿಸರ್ಗದಲ್ಲಿ ಉಂಟಾಗುವ ಸಂಗತಿಗಳಿಗೆ ಮತ್ತು ಸಮಾಜದ ಸಂಪ್ರದಾಯ ಹಾಗೂ ಕಟ್ಟುಪಾಡುಗಳಿಗೆ ಒಳಪಟ್ಟಿದೆ. ತನ್ನನ್ನೂ ಒಳಗೊಂಡಂತೆ

ಎಲ್ಲ ವ್ಯಕ್ತಿಗಳ ಮಯ್ ಮನದಲ್ಲಿ ಒಳಿತು ಕೆಡುಕಿನ ಒಳಮಿಡಿತಗಳು ಸದಾಕಾಲ ಇದ್ದೇ ಇರುತ್ತವೆ. ಆದ್ದರಿಂದ ಜೀವನದ ಉದ್ದಕ್ಕೂ ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯವನಾಗಿ ಬಾಳಬೇಕೆಂಬ ಅರಿವನ್ನು ಹೊಂದುವುದು.

ತನ್ನ ಜೀವನದ ಏಳು ಬೀಳು ಸಮಾಜದಲ್ಲಿ ಉಂಟಾಗುವ ಒಳಿತು ಕೆಡುಕನ್ನು ಅವಲಂಬಿಸಿದೆ ಮತ್ತು ಸಮಾಜದೊಡನೆ ಹೆಣೆದುಕೊಂಡಿದೆ. ತಾನು ಸಮಾಜದ ಒಂದು ಕೊಂಡಿ ಎಂಬ ವಾಸ್ತವವನ್ನು ವ್ಯಕ್ತಿಯು ಅರಿತುಕೊಂಡು ಬಾಳುವುದು;

5. ಎಲ್ಲಿ ಹೋದಡೆ ಕಲಿಗೆ ಭಯವಿಲ್ಲ
ಹಂದೆಗೆ ಸುಖವಿಲ್ಲ ಕಾಣಿರಣ್ಣಾ. (115–798)

ಎಲ್ಲಿ=ಯಾವ ಕಡೆ/ಯಾವ ಜಾಗ; ಹೋಗು=ತೆರಳು/ಗಮಿಸು; ಹೋದಡೆ= ಹೋದರೆ/ಹೋದರೂ; ಕಲಿ=ಶೂರ/ವೀರ/ಕೆಚ್ಚುಳ್ಳವನು; ಕಲಿಗೆ= ಕೆಚ್ಚೆದೆಯುಳ್ಳ ವನಿಗೆ; ಭಯ+ಇಲ್ಲ; ಭಯ=ಹೆದರಿಕೆ/ಅಂಜಿಕೆ/ಪುಕ್ಕಲು; ಹಂದೆ=ಅಂಜುಬುರಕ/ ಪುಕ್ಕಲ/ಹೇಡಿ; ಸುಖ+ಇಲ್ಲ; ಸುಖ=ನಲಿವು/ನೆಮ್ಮದಿ; ಕಾಣಿರಿ+ಅಣ್ಣಾ; ಕಾಣ್=ನೋಡು/ಚಿಂತಿಸಿ ತಿಳಿ; ಕಾಣಿರಿ=ನೋಡಿರಿ/ತಿಳಿಯಿರಿ; ಅಣ್ಣ= ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಕಲಿಯಾದವನು ಅಂದರೆ ಮಾನಸಿಕವಾಗಿ ಗಟ್ಟಿಗನಾದವನು ಜೀವನದಲ್ಲಿ ಯಾವುದೇ ಬಗೆಯ ಅಡೆತಡೆ, ತೊಂದರೆ, ಆಪತ್ತು ಉಂಟಾದರೂ ಅದನ್ನು ವಾಸ್ತವದ ನೆಲೆಗಟ್ಟಿನಲ್ಲಿ ಕೆಚ್ಚೆದೆಯಿಂದ ಎದುರಿಸಿ ಹೋರಾಡುತ್ತಾನೆಯೇ ಹೊರತು ಅಳುಕಿನಿಂದ ಹಿಂಜರಿಯುವುದಿಲ್ಲ.

ಆದರೆ ಹೇಡಿಯಾದವನು ಅಂದರೆ ಮಾನಸಿಕವಾಗಿ ಗಟ್ಟಿತನವಿಲ್ಲದವನು "ಇಲ್ಲದ್ದನ್ನು ಇದೆಯೆಂದು, ಇರುವುದನ್ನು ಇಲ್ಲವೆಂದು" ಮನದಲ್ಲಿ ಕಲ್ಪಿಸಿ ಕೊಂಡು, ಜೀವನದ ಪ್ರತಿಯೊಂದು ಗಳಿಗೆಯಲ್ಲಿಯೂ ಕಳವಳ, ತಲ್ಲಣ, ಅನುಮಾನ, ಗಾಬರಿ ಮತ್ತು ಆತಂಕಕ್ಕೆ ಗುರಿಯಾಗಿ ತತ್ತರಿಸುತ್ತ, ಇಡೀ ಬದುಕನ್ನೇ ಸಂಕಟಮಯಗೊಳಿಸಿಕೊಂಡು ಯಾವಾಗಲೂ ನರಳುತ್ತಿರುತ್ತಾನೆ.

6. **ಒಂದೂರ ಭಾಷೆಯೊಂದೂರಲಿಲ್ಲ**
ಒಂದೂರಲ್ಲಿ ಕೊಂಡಂಥ ಆಹಾರ
ಮತ್ತೊಂದೂರಲಿಲ್ಲ. (308–817)

ಒಂದು+ಊರ್+ಅ; ಊರು=ಜನರು ವಾಸಿಸುವ ನೆಲ; ಒಂದೂರ=ಒಂದು ಊರಿನ; ಭಾಷೆ+ಒಂದು+ಊರ್+ಅಲ್ಲಿ+ಇಲ್ಲ; ಭಾಷೆ=ನುಡಿ /ಸೊಲ್ಲು/ಮಾತು; ಒಂದ್+ಊರ್+ಅಲ್ಲಿ; ಕೊಂಡ+ಅಂಥ; ಕೊಳ್ಳು=ಸ್ವೀಕರಿಸುವ /ಪಡೆಯುವ; ಕೊಂಡ=ಸ್ವೀಕರಿಸಿದ/ಪಡೆದ; ಅಂಥ=ಅಂತಹ/ಆ ರೀತಿಯ; ಆಹಾರ=ತಿನಸು ಉಣಿಸು; ಮತ್ತು+ಒಂದ್+ಊರ್+ಅಲ್ಲಿ+ಇಲ್ಲ; ಮತ್ತೊಂದು= ಬೇರೆಯಾಗಿರುವ; ಮತ್ತೊಂದೂರು=ಬೇರೆ ಊರು;

ಜಗತ್ತಿನಲ್ಲಿ ನೆಲೆಸಿರುವ ಬಹುಬಗೆಯ ಜನಸಮುದಾಯಗಳು ತಮ್ಮ ತಮ್ಮ ನೆಲದ ಪರಿಸರಕ್ಕೆ ತಕ್ಕಂತೆ ತಮ್ಮದೇ ಆದ ನುಡಿಯನ್ನು ಆಡುತ್ತಾರೆ ಮತ್ತು ಆಹಾರವನ್ನು ಸೇವಿಸುತ್ತಾರೆ. ಆದ್ದರಿಂದಲೇ ಪ್ರತಿಯೊಂದು ಊರಿನ ಜನರು ದಿನನಿತ್ಯ ಆಡುವ ನುಡಿಯಾಗಲಿ ಮತ್ತು ತಿನ್ನುವ ಉಣ್ಣುವ ಕುಡಿಯುವ ವಸ್ತುಗಳಾಗಲಿ ಮತ್ತೊಂದು ಊರಿನ ಜನರಿಗಿಂತ ತುಸುಮಟ್ಟಿಗಾದರೂ ಬೇರೆ ಬೇರೆಯಾಗಿರುತ್ತವೆ. ಊರುಗಳ ನಡುವಣ ಅಂತರ ಹೆಚ್ಚಾದಂತೆಲ್ಲಾ ಜನರು ಆಡುವ ನುಡಿರಚನೆಯಲ್ಲಿ ಮತ್ತು ಸೇವಿಸುವ ಆಹಾರದಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಂಡುಬರುತ್ತವೆ.

ಜಗತ್ತಿನಲ್ಲಿರುವ ಕೋಟಿಗಟ್ಟಲೆ ಜನರು ದಿನ ನಿತ್ಯ ಆಡುತ್ತಿರುವ ಸಾವಿರಾರು ಬಗೆಯ ನುಡಿಗಳಲ್ಲಿ ಯಾವುದೇ ಒಂದು ನುಡಿ ಮತ್ತೊಂದು ನುಡಿಗಿಂತ ಹಾಗೂ ಸೇವಿಸುತ್ತಿರುವ ಆಹಾರದಲ್ಲಿ ಯಾವುದೇ ಒಂದು ಆಹಾರವೂ ಮತ್ತೊಂದಕ್ಕಿಂತ ಮೇಲಲ್ಲ ಇಲ್ಲವೇ ಕೀಳಲ್ಲ.

ಆದರೆ ಹತ್ತಾರು ಬಗೆಯ ಮತಗಳು ಮತ್ತು ನೂರೆಂಟು ಬಗೆಯ ಜಾತಿಗಳಿಂದ ವಿಂಗಡಣೆಗೊಂಡಿರುವ ಜನಸಮುದಾಯಗಳು ತಮ್ಮ ತಮ್ಮ ಜಾತಿ, ಮತ, ಪ್ರಾಂತ್ಯಗಳ ಮೇಲರಿಮೆಯನ್ನು ಎತ್ತಿ ಸಾರಲೆಂದು 'ತಾವಾಡುವ ನುಡಿಯೇ ಉತ್ತಮ ಮತ್ತು ತಾವು ಸೇವಿಸುವ ಉಣಿಸು ತಿನಸುಗಳೇ ಎಲ್ಲಕ್ಕಿಂತ ಶುಚಿ ರುಚಿ' ಎಂದು ಹೇಳಿಕೊಳ್ಳುತ್ತಿರುತ್ತಾರೆ. ಇದು ಜಾತಿ, ಮತ ಮತ್ತು ಪ್ರಾಂತ್ಯಗಳ ಬಗೆಗಿನ ಅತಿಯಾದ ಮೋಹದಿಂದ ಜನಮನದಲ್ಲಿ ನಾಟಿಕೊಂಡಿರುವ ತಪ್ಪು ಕಲ್ಪನೆಯೇ ಹೊರತು ವಾಸ್ತವವಲ್ಲ ಎಂಬುದನ್ನು ಅಕ್ಕನ ವಚನದ ಸಾಲುಗಳು ಸಾರುತ್ತಿವೆ.

7. ಕಲ್ಲ ಹೊತ್ತು ಕಡಲೊಳಗೆ ಮುಳುಗಿದಡೆ
ಎಡರಿಂಗೆ ಕಡೆಯುಂಟೆ ಅವ್ವಾ. (148–801)

ಕಲ್ಲ್+ಅ; ಕಲ್ಲು=ಶಿಲೆ/ಅರೆ/ಬಂಡೆ; ಹೊರು=ತೂಕವಾಗಿರುವ ವಸ್ತುವನ್ನು ತಲೆಯ ಮೇಲೆ ಇಲ್ಲವೇ ಹೆಗಲ ಮೇಲೆ ಇಟ್ಟುಕೊಳ್ಳುವುದು; ಹೊತ್ತು= ಹೊತ್ತುಕೊಂಡು; ಕಡಲ್+ಒಳಗೆ; ಕಡಲು=ಸಮುದ್ರ/ಸಾಗರ; ಕಡಲೊಳಗೆ= ಕಡಲಿನಲ್ಲಿ; ಮುಳುಗು=ನೀರಿನಲ್ಲಿ ದೇಹವನ್ನು ಅದ್ದುವುದು/ನೀರಿನಲ್ಲಿ ಈಜನ್ನು ಹೊಡೆಯಲು ಹೋಗುವುದು; ಮುಳುಗಿದಡೆ=ಮುಳುಗಿದರೆ; ಎಡರು=ಅಡಚಣೆ/ ಆಪತ್ತು/ಗಂಡಾಂತರ; ಎಡರಿಂಗೆ=ಅಪಾಯಕ್ಕೆ; ಕಡೆ+ಉಂಟೆ; ಕಡೆ=ಕೊನೆ/ ಅಂತ್ಯ; ಉಂಟು=ಇರುವುದು; ಕಡೆಯುಂಟೆ=ಕೊನೆಯಿರುವುದೆ; **ಎಡರಿಂಗೆ ಕಡೆಯುಂಟೆ**=ಅಪಾಯ ತಪ್ಪಿದ್ದಲ್ಲ/ದುರಂತಕ್ಕೆ ಕೊನೆಯಿಲ್ಲ; ಅವ್ವ=ಹಿರಿಯರಾದ ಹೆಂಗಸನ್ನು ಮಾತನಾಡಿಸುವಾಗ ಬಳಸುವ ಪದ;

“ತಲೆಯ ಮೇಲೆ ದೊಡ್ಡದಾದ ಹಾಗೂ ತೂಕವಾಗಿರುವ ಕಲ್ಲಿನ ದಿಂಡನ್ನು ಹೊತ್ತುಕೊಂಡು, ಸಮುದ್ರದಲ್ಲಿ ಈಜಲು ಇಲ್ಲವೇ ಮುಳುಗಲು ಹೋಗುವ ವ್ಯಕ್ತಿಯು ಒಂದಲ್ಲ ಒಂದು ಬಗೆಯ ಗಂಡಾಂತರಕ್ಕೆ ಒಳಗಾಗುವುದು ನಿಶ್ಚಿತ.” ಎಂಬ ಸಂಗತಿಯು ಒಂದು ರೂಪಕವಾಗಿ ಬಳಕೆಯಾಗಿದೆ.

ಇತರರಿಗೆ ಕೇಡನ್ನು ಬಗೆಯುವ ಉದ್ದೇಶವನ್ನು ಹೊಂದಿರುವ ಕೆಟ್ಟ ನಡೆನುಡಿಯುಳ್ಳ ವ್ಯಕ್ತಿಯು ಸಹಮಾನವರೊಡನೆ ಮತ್ತು ಸಮಾಜದೊಡನೆ ವ್ಯವಹರಿಸಲು ತೊಡಗಿದಾಗ ಒಂದಲ್ಲ ಒಂದು ಬಗೆಯ ಸಂಕಟಕ್ಕೆ ಗುರಿಯಾಗಿ ನರಳುವುದು ನಿಶ್ಚಿತ. ಏಕೆಂದರೆ ಅವನ ಮನಸ್ಸಿನಲ್ಲಿ ಕೆಟ್ಟ ಒಳಮಿಡಿತಗಳೇ ಹೆಚ್ಚಾಗಿ ತುಂಬಿರುತ್ತವೆ ಎಂಬ ತಿರುಳನ್ನು ಈ ರೂಪಕ ಸೂಚಿಸುತ್ತಿದೆ.

8. ದೇಹ ಉಳ್ಳನ್ನಕ್ಕರ ಲಜ್ಜೆ ಬಿಡದು ಅಹಂಕಾರ ಬಿಡದು
ದೇಹದೊಳಗೆ ಮನ ಉಳ್ಳನ್ನಕ್ಕರ ಅಭಿಮಾನ ಬಿಡದು
ನೆನಹಿನ ವ್ಯಾಪ್ತಿ ಬಿಡದು. (236–810)

ದೇಹ=ಮಯ್/ಶರೀರ; ಉಳ್+ಅನ್ನಕ್ಕರ; ಉಳ್=ಇರು; ಅನ್ನಕ್ಕರ=ವರೆಗೆ/ ತನಕ; ಉಳ್ಳನ್ನಕ್ಕರ=ಇರುವ ತನಕ; ಲಜ್ಜೆ=ನಾಚಿಕೆ/ಸಂಕೋಚ; ಬಿಡು= ತೊರೆ/ ತ್ಯಜಿಸು;

ಬಿಡದು=ಹೋಗುವುದಿಲ್ಲ; ಅಹಂಕಾರ=ಗರ್ವ/ಸೊಕ್ಕು; ದೇಹದ+ಒಳಗೆ; ದೇಹದೊಳಗೆ=ದೇಹದಲ್ಲಿ; ಮನ=ಮನಸ್ಸು/ಚಿತ್ತ; ಅಭಿಮಾನ=ಹೆಚ್ಚಿನ ವ್ಯಾಮೋಹ/ತಾನು ತನ್ನದು ಎಂಬ ಮೋಹ; ನೆನಹು=ಸ್ಮರಣೆ/ಚಿಂತನೆ; ವ್ಯಾಪ್ತಿ=ಹರಹು/ಹಬ್ಬುವಿಕೆ;

ವ್ಯಕ್ತಿಗೆ ತನ್ನ ದೇಹ ಮತ್ತು ಸಮಾಜದ ಬಗ್ಗೆ ಅರಿವು ಬಂದ ಕಾಲದಿಂದ ಹಿಡಿದು, ಅವನ ಸಾವಿನ ಕೊನೆ ಗಳಿಗೆಯ ತನಕ ದೇಹದ ಬಗೆಗಿನ ಕಾಮದ ಲಜ್ಜೆ; ನಾನು ನನ್ನಿಂದಲೇ ಎಂಬ ಅಹಂಕಾರ; ನನ್ನದು ನನ್ನವರು ಎಂಬ ಮೋಹ ಮತ್ತು ಜೀವನದ ಏಳುಬೀಳುಗಳಲ್ಲಿ ಕಂಡುಂಡ ಒಲವು ನಲಿವು ನೋವಿನ ನೆನಪುಗಳು ಮನದಲ್ಲಿ ಸದಾಕಾಲ ಹಾದುಹೋಗುತ್ತಿರುತ್ತವೆ.

ಯಾವುದೇ ವ್ಯಕ್ತಿಯು **“**ತಾನು ಎಲ್ಲ ಬಗೆಯ ಆಸೆಗಳನ್ನು ಬಿಟ್ಟವನು; ಕಾಮವನ್ನು ಗೆದ್ದವನು; ತನ್ನ ಮನದಲ್ಲಿ ಯಾವುದೇ ಬಗೆಯ ಚಂಚಲತೆಯು ಇಲ್ಲವೆಂದು**”** ಹೇಳಿದರೆ, ಅಂತಹ ಮಾತುಗಳಿಂದ ಆತ ತನ್ನನ್ನು ತಾನು ವಂಚಿಸಿಕೊಳ್ಳುವುದಲ್ಲದೆ, ಲೋಕವನ್ನು ವಂಚಿಸುತ್ತಿರುತ್ತಾನೆ.

9. ನೊಂದವರ ನೋವ ನೋಯದವರೆತ್ತ ಬಲ್ಲರೊ. (286–815)

ನೊಂದ+ಅವರ್+ಅ; ನೋವು=ಬೇನೆ/ಶೂಲೆ/ಯಾತನೆ; ನೊಂದವರ=ನೋವನ್ನು ತಿಂದವರ/ಸಂಕಟವನ್ನು ಪಟ್ಟವರ; ನೋವ=ನೋವನ್ನು; ನೋಯದ+ಅವರ್+ಎತ್ತ; ನೋಯದವರು=ಸಂಕಟವನ್ನು ಪಡದವರು/ನೋವನ್ನು ತಿನ್ನದವರು/ತೊಂದರೆಗೆ ಒಳಗಾಗದವರು; ಎತ್ತ=ಯಾವ ಕಡೆ/ಯಾವ ರೀತಿ; ಬಲ್=ತಿಳಿ/ಅರಿ/ಗ್ರಹಿಸು; ಬಲ್ಲರೊ=ತಿಳಿದಿರುವರೋ; **ಎತ್ತ ಬಲ್ಲರೋ**=ಹೇಗೆ ತಾನೆ ತಿಳಿಯಬಲ್ಲರು. ಅಂದರೆ ತಿಳಿಯಲು ಆಗುವುದಿಲ್ಲ;

ಅಕ್ಕಮಹಾದೇವಿಯು ಸಾವ ಕೆಡುವ ಲೋಕದ ಗಂಡರನ್ನು ನಿರಾಕರಿಸಿ, ದೇವರಾದ ಚೆನ್ನಮಲ್ಲಿಕಾರ್ಜುನನ್ನು ತನ್ನ ಗಂಡನನ್ನಾಗಿ ಮನದಲ್ಲಿ ಕಲ್ಪಿಸಿಕೊಂಡು, ಅವನನ್ನು ಕಾಣಲು ಕೂಡಲು ಸದಾಕಾಲ ಪರಿತಪಿಸುತ್ತಿದ್ದಳು. ಅಕ್ಕನ ಮಯ್ ಮನದಲ್ಲಿ ಉಂಟಾಗುತ್ತಿರುವ ನೋವನ್ನು ಇತರರು ಅರಿಯಲಾರದವರಾಗಿದ್ದರು ಮತ್ತು ಇತರರಿಗೆ ಅವಳ ಬಯಕೆಯು ಅಸಹಜವಾಗಿಯೂ ಹಾಗೂ ವಿಚಿತ್ರವಾಗಿಯೂ ಕಾಣುತ್ತಿತ್ತು.

ಇಂತಹ ಸನ್ನಿವೇಶದಲ್ಲಿ ಅಕ್ಕನು ಆಡಿರುವ ‘ನೊಂದವರ ನೋವನ್ನು ನೋಯದವರು ಹೇಗೆ ತಾನೆ ಅರಿಯಬಲ್ಲರು’ ಎಂಬ ಮಾತುಗಳನ್ನು ಮತ್ತೊಂದು ರೀತಿಯಲ್ಲಿಯೂ ವಿವರಿಸಿಕೊಳ್ಳಬಹುದು.

ಮಾನವ ಸಮುದಾಯದ ನೋವಿನ ಆಳದಿಂದ ಮೂಡಿಬಂದ ಗೋಳಿನ ದನಿಯೇ ಅಕ್ಕನ ಬಾಯಲ್ಲಿ ಈ ಬಗೆಯ ನುಡಿಯಾಗಿ ಹೊರಹೊಮ್ಮಿರುವಂತೆ ಕಂಡುಬರುತ್ತಿದೆ.

ಪ್ರತಿನಿತ್ಯ ಹೊಟ್ಟೆ ತುಂಬ ಉಣ್ಣುವುದಕ್ಕೆ ಗತಿಯಿಲ್ಲದೆ ಹಸಿವಿನಿಂದ ನರಳುತ್ತಿರುವ; ಜಾತಿ ಮತದ ಕಾರಣದಿಂದಾಗಿ ವಿದ್ಯೆ, ಉದ್ಯೋಗ ಮತ್ತು ಸಂಪತ್ತಿನಿಂದ ವಂಚಿತರಾಗಿ ಬಡತನದ ಬೇಗೆಯಲ್ಲಿ ಬೇಯುತ್ತಿರುವ; ಮೇಲು ಜಾತಿಯವರ ಮತ್ತು ಮೇಲು ವರ್ಗದವರ ಕ್ರೂರವಾದ ಹಲ್ಲೆಗೆ ಗುರಿಯಾಗಿ ಸಾವು ನೋವುಗಳಿಗೆ ನಿತ್ಯವೂ ಬಲಿಯಾಗುತ್ತಿರುವ ಕೆಳ ಜಾತಿಯವರ ಮತ್ತು ಕೆಳ ವರ್ಗದವರ ಕೊನೆಗಾಣದ ನೋವನ್ನು ಹೊಟ್ಟೆ ತುಂಬಿದ, ಮೇಲು ಜಾತಿಯ ಮತ್ತು ಮೇಲುವರ್ಗದ ಜನರು ತಿಳಿಯಲಾರರು ಹಾಗೂ ತಮ್ಮ ಮನದಲ್ಲಿ ಊಹಿಸಿಕೊಳ್ಳಲಾರರು. ಏಕೆಂದರೆ ಮೇಲು ಜಾತಿ, ಸಂಪತ್ತು ಮತ್ತು ಆಡಳಿತದ ಗದ್ದುಗೆಯು ಉಳ್ಳವರನ್ನು ಕುರುಡರನ್ನಾಗಿ, ಕಿವುಡರನ್ನಾಗಿ ಮತ್ತು ಕರುಣೆಯಿಲ್ಲದವರನ್ನಾಗಿ ಮಾಡಿದೆ.

10. ಮುತ್ತು ಒಡೆದಡೆ ಬೆಸೆಯಬಹುದೆ
ಮನ ಮುರಿದಡೆ ಸಂತಕ್ಕೆ ತರಬಹುದೆ. (337–820)

ಮುತ್ತು=ದುಂಡನೆಯ ಮಣಿ/ಗುಂಡಗಿರುವ ಹರಳು; ಒಡೆ=ಸೀಳು/ಬಿರಿ/ಚೂರು ಚೂರಾಗುವುದು; ಒಡೆದಡೆ=ಒಡೆದರೆ/ಚೂರಾದರೆ; ಬೆಸು=ಎರಡು ಚೂರುಗಳನ್ನು ಒಂದಾಗಿ ಸೇರಿಸುವುದು/ಜೋಡಿಸುವುದು; ಬೆಸೆಯಬಹುದೆ= ಜತೆಗೂಡಿಸುವುದಕ್ಕೆ ಆಗುವುದೇ ಅಂದರೆ ಕೂಡಿಸಲು ಆಗುವುದಿಲ್ಲ;

ಮನ=ಮನಸ್ಸು/ಚಿತ್ತ; ಮುರಿ=ತುಂಡಾಗು/ಬಾಗು; ಮುರಿದಡೆ=ಮುರಿದು ತುಂಡಾದರೆ ಇಲ್ಲವೇ ಬಾಗಿದರೆ;

ಸಂತ=ಸರಿಯಾದುದು/ನೆಮ್ಮದಿಯಿಂದಿರುವುದು; ತರಬಹುದೆ=ತರಲು ಆಗುತ್ತದೆಯೇ ಅಂದರೆ ತರಲು ಆಗುವುದಿಲ್ಲ; **ಸಂತಕ್ಕೆ ತರಬಹುದೆ=** ಮೊದಲಿನಂತೆ ಸರಿಪಡಿಸಲು ಆಗುವುದೇ;

ದುಂಡನೆಯ ಮುತ್ತು ಒಡೆದು ಹೋಳಾದರೆ ಅದನ್ನು ಮತ್ತೆ ಹೇಗೆ ಒಂದುಗೂಡಿಸಲು ಆಗುವುದಿಲ್ಲವೋ ಅಂತೆಯೇ ಒಮ್ಮನದಿಂದ ಜತೆಗೂಡಿ ಬಾಳುತ್ತಿದ್ದ ವ್ಯಕ್ತಿಗಳ ನಡುವೆ ಪರಸ್ಪರ ಸಂಶಯ ಮತ್ತು ಅಪನಂಬಿಕೆ ಉಂಟಾಗಿ ಮನಸ್ಸು ಮುರಿದುಹೋದರೆ, ಮತ್ತೆ ಅವರು ಮೊದಲಿನಂತೆ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳಲಾಗುವುದಿಲ್ಲ.

11. ರತ್ನದ ಸಂಕೋಲೆಯಾದಡೆ ತೊಡರಲ್ಲವೆ
ಮುತ್ತಿನ ಬಲೆಯಾದಡೆ ಬಂಧನವಲ್ಲವೆ
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ. (345–821)

ರತ್ನ=ಕೆಂಪು ಹರಳು/ಮಾಣಿಕ್ಯ; ಸಂಕೋಲೆ+ಆದಡೆ; ಸಂಕೋಲೆ=ಬೇಡಿ/ಕೋಳ; ಆದಡೆ=ಆದರೆ; ರತ್ನದ ಸಂಕೋಲೆ=ರತ್ನದ ಹರಳುಗಳಿಂದ ಜೋಡಿಸಿ ಮಾಡಿರುವ ಸಂಕೋಲೆ; ತೊಡರ್+ಅಲ್ಲವೆ; ತೊಡರು=ಅಡ್ಡಿ/ಅಡಚಣೆ;

ಮುತ್ತು=ದುಂಡನೆಯ ಮಣಿ/ಗುಂಡಗಿರುವ ಹರಳು; ಬಲೆ+ಆದಡೆ; ಬಲೆ=ಹಕ್ಕಿಗಳನ್ನು ಪ್ರಾಣಿಗಳನ್ನು ಹಿಡಿಯಲು ಬಳಸುವ ದಾರದಿಂದ ಇಲ್ಲವೇ ಲೋಹದ ಎಳೆಗಳಿಂದ ಮಾಡಿರುವ ಉಪಕರಣ; ಮುತ್ತಿನ ಬಲೆ=ಮುತ್ತುಗಳನ್ನು ಜೋಡಿಸಿ ಮಾಡಿರುವ ಬಲೆ; ಬಂಧನ+ಅಲ್ಲವೆ; ಬಂಧನ=ಸೆರೆ/ವ್ಯಕ್ತಿಯು ಅತ್ತಿತ್ತ ಅಡ್ಡಾಡದಂತೆ ಹತೋಟಿಯಲ್ಲಿಡುವುದು;

ಚಿನ್ನ=ಹೊನ್ನು, ಒಂದು ಬಗೆಯ ಲೋಹ; ಕತ್ತಿ+ಅಲ್ಲಿ; ಕತ್ತಿ=ಕರವಾಳು/ಖಡ್ಗ/ಒಂದು ಬಗೆಯ ಹತಾರ; ಹೊಯ್=ಹೊಡಿ/ಬಡಿ/ಕಡಿ; ಹೊಯ್ದಡೆ=ಹೊಡೆದರೆ/ಕತ್ತರಿಸಿದರೆ; ತಲೆಹೊಯ್ದಡೆ=ತಲೆಯನ್ನು ಕತ್ತರಿಸಿದರೆ;

ಸಾಯದೆ+ಇರ್ಪರೆ; ಸಾಯ್=ಮರಣ ಹೊಂದುವುದು/ಜೀವ ಹೋಗುವುದು; ಇರ್ಪರೆ=ಇರುತ್ತಾರೆಯೆ/ಇರುವರೆ; **ಸಾಯದಿರ್ಪರೆ**=ಸಾಯದೆ ಜೀವಂತವಾಗಿ ಉಳಿಯುತ್ತಾರೆಯೆ/ಸಾಯುವುದು ನಿಶ್ಚಿತ;

ನಾವು ಅತಿಯಾಗಿ ಪ್ರೀತಿಸುವ ಇಲ್ಲವೇ ಮೆಚ್ಚಿಕೊಳ್ಳುವ ವ್ಯಕ್ತಿಗಳ ಕೆಟ್ಟ ನಡೆನುಡಿಗಳನ್ನು ಸಹಿಸಿಕೊಂಡರೆ ಅದರಿಂದ ಕೇಡಾಗುತ್ತದೆಯೇ ಹೊರತು ಒಳಿತಾಗುವುದಿಲ್ಲ.

12. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ. (358–823)

ಲೋಕ=ಜಗತ್ತು/ಪ್ರಪಂಚ; ಚೇಷ್ಟೆ=ತುಂಟತನ/ಕೀಟಲೆ; ಲೋಕದ ಚೇಷ್ಟೆ= ಲೋಕದಲ್ಲಿ ನಡೆಯುವ ಎಲ್ಲಾ ಬಗೆಯ ಚಟುವಟಿಕೆಗಳು/ಲೋಕದಲ್ಲಿರುವ ಜೀವಜಂತುಗಳ ದಿನನಿತ್ಯದ ಕ್ರಿಯೆಗಳು/ಜನಸಮುದಾಯಗಳ ವ್ಯವಹಾರ; ರವಿ=ನೇಸರು/ಸೂರ್ಯ; ಬೀಜ+ ಆದ+ಅಂತೆ; ಬೀಜ=ದವಸದ ಇಲ್ಲವೇ ಹಣ್ಣಿನ ಕಾಳು/ಬಿತ್ತ; ಆದ=ಆಗಿರುವ; ಅಂತೆ=ಹಾಗೆ;

ಕರಣ=ಇಂದ್ರಿಯ; **ಕರಣಂಗಳು**=ನೋಟ–ಶಬ್ದ–ಕಂಪು–ರುಚಿ–ಮುಟ್ಟುವಿಕೆಯಿಂದ ಉಂಟಾಗುವ ಅರಿವನ್ನು ಪಡೆಯಲು ನೆರವಾಗುವ ಅಂಗಗಳು. ಕಣ್ಣು–ಕಿವಿ–ಮೂಗು–ನಾಲಗೆ–ತೊಗಲು ಎಂಬ ಅಯ್ದು ಬಗೆಯ ಕರಣಗಳು; ಮನ=ಮನಸ್ಸು/ಚಿತ್ತ;

ಲೋಕದ ಸಕಲ ವ್ಯವಹಾರಗಳಿಗೂ ರವಿಯ ಮೂಡುವಿಕೆಯು ಕಾರಣವಾಗುವಂತೆಯೇ, ವ್ಯಕ್ತಿಯ ನಡೆನುಡಿಗಳೆಲ್ಲಕ್ಕೂ ಮನಸ್ಸೇ ಮೂಲ ನೆಲೆಯಾಗಿದೆ. ಅಯ್ದು ಇಂದ್ರಿಯಗಳ ಮೂಲಕ ಪಡೆಯುವ ಎಲ್ಲ ಬಗೆಯ ತಿಳಿವನ್ನು ಒರೆಹಚ್ಚಿ ನೋಡಿ, ವ್ಯಕ್ತಿಯ ನಡೆನುಡಿಗಳನ್ನು ನಿಯಂತ್ರಿಸುವ ಮತ್ತು ಹೊರಹೊಮ್ಮಿಸುವ ಕಸುವನ್ನು ಮನಸ್ಸು ಹೊಂದಿದೆ.

13. ವ್ರತ ನೇಮವೆಂಬುದು ವಂಚನೆಯ ಲುಬ್ಧವಾಣಿ ಭಕ್ತಿಯೆಂಬುದು ಬಾಜಿಗಾರರಾಟ. (332/820)

ವ್ರತ+ನೇಮ+ಎಂಬುದು; ವ್ರತ=ದೇವರನ್ನು ಪೂಜಿಸುವಾಗ ಹಿಂದಿನ ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯಕ್ಕೆ ಅನುಗುಣವಾಗಿ ಮಾಡುವ ಆಚರಣೆಗಳು/ನೋಂಪಿ; ನೇಮ=ದೇವರ ಅನುಗ್ರಹಕ್ಕೆ ಪಾತ್ರರಾಗಲು ಮಾಡುವ ಜಪ, ತಪ, ಪೂಜೆ, ಉಪವಾಸ, ಜಾಗರಣೆ ಮುಂತಾದ ನಿಯತವಾದ ಆಚರಣೆ; ಎಂಬುದು=ಎನ್ನುವುದು; ವಂಚನೆ=ಮೋಸ/ಕಪಟ; ಲುಬ್ಧ=ಅತಿಯಾಸೆ/ಜಿಪುಣ; ವಾಣಿ=ಮಾತು/ನುಡಿ/ಸೊಲ್ಲು; ಲುಬ್ಧವಾಣಿ=ಅತಿಯಾಸೆಯ ನುಡಿ; ವಂಚನೆಯ ಲುಬ್ಧವಾಣಿ=ಇತರರನ್ನು ವಂಚಿಸಲೆಂದೇ ಆಡುವ ನುಡಿ; ಭಕ್ತಿ+ ಎಂಬುದು; ಭಕ್ತಿ=ದೇವರನ್ನು ಪೂಜಿಸಲು/ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ

ಒಳ್ಳೆಯ ನಡೆನುಡಿ; ಬಾಜಿಗಾರರ+ಆಟ; ಬಾಜಿ=ಜೂಜಿಗೆ ಒಡ್ಡುವ ಹಣ, ಒಡವೆ ವಸ್ತು,ಆಸ್ತಿಪಾಸ್ತಿ; ಬಾಜಿಗಾರ=ಪಣವನ್ನು ಒಡ್ಡಿ ಜೂಜಾಡುವವನು/ ಜೂಜುಕೋರ; ಆಟ=ನಟನೆ/ಸೋಗು;

'ವ್ರತ ನೇಮವನ್ನು ಮಾಡುವುದರ ಮೂಲಕ ನಿಮ್ಮ ಜೀವನದಲ್ಲಿ ಎದುರಾಗುವ ಸಂಕಟಗಳನ್ನು ನಿವಾರಿಸಿಕೊಳ್ಳಿರಿ ಹಾಗೂ ನಿಮ್ಮ ಬಯಕೆಗಳನ್ನು ಈಡೇರಿಸಿ ಕೊಳ್ಳಿರಿ' ಎಂದು ಜನರನ್ನು ಮರುಳುಮಾಡಿ ಹಣವನ್ನು ಸುಲಿಯುವವರ ಮಾತುಗಳು ವಂಚನೆಯ ನುಡಿಗಳಾಗಿವೆ. ಏಕೆಂದರೆ ವ್ಯಕ್ತಿಯ ಬದುಕಿನ ನೋವು ನಲಿವುಗಳಿಗೆ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳು ಮತ್ತು ವ್ಯಕ್ತಿಯ ನಡೆನುಡಿಗಳು ಕಾರಣವೇ ಹೊರತು ದೇವರಲ್ಲ. ವ್ರತ ನೇಮವನ್ನು ಮಾಡುವವರು ಬಹುತೇಕ ಸನ್ನಿವೇಶಗಳಲ್ಲಿ ಮಡಿ ಮೈಲಿಗೆಯ ಹೆಸರಿನಲ್ಲಿ ಇತರರನ್ನು ಕೀಳಾಗಿ ಕಾಣುತ್ತಾರೆ. ಆಡಳಿತದ ಗದ್ದುಗೆಯನ್ನು ಹಿಡಿಯುವ, ಪಡೆಯುವ, ಉಳಿಸಿಕೊಳ್ಳುವ ಮತ್ತು ಸಂಪತ್ತನ್ನು ಗಳಿಸುವ ದುರಾಸೆಯುಳ್ಳವರಾಗಿರುತ್ತಾರೆ.ಬೆಲೆಬಾಳುವ ಚಿನ್ನ ಬೆಳ್ಳಿ ವಜ್ರದ ಒಡವೆ ವಸ್ತುಗಳನ್ನು ದೇವರ ವಿಗ್ರಹಕ್ಕೆ ನೀಡುವುದರ ಮೂಲಕ ತಮ್ಮನ್ನು ತಾವು ಇತರರಿಗಿಂತ ದೊಡ್ಡವರೆಂದು ತೋರಿಸಿಕೊಳ್ಳುತ್ತ ಮೆರೆಯುವವರ ಪಾಲಿಗೆ ಭಕ್ತಿಯೆಂಬುದು ಪಣವನ್ನು ಒಡ್ಡಿ ಆಡುವ ಜೂಜಾಟದಂತಿರುತ್ತದೆ.

ಶಿವಶರಣಶರಣೆಯರ ಪಾಲಿನ ದೇವರು ಕಲ್ಲಿನ, ಮಣ್ಣಿನ, ಮರದ ಇಲ್ಲವೇ ಲೋಹದ ವಿಗ್ರಹವಾಗಿರಲಿಲ್ಲ. ಆದ್ದರಿಂದ ಅವರು ಯಾವುದೇ ಬಗೆಯ ವ್ರತ ನೇಮಕ್ಕಿಂತ ಮಿಗಿಲಾಗಿ ವ್ಯಕ್ತಿಯ ಒಳ್ಳೆಯ ನಡೆನುಡಿಗಳನ್ನು ದೇವರೆಂದು ತಿಳಿದು ಬಾಳುತ್ತಿದ್ದರು.

14 ಸ್ನೇಹವಿದ್ದ ಠಾವಿನೊಳು ದ್ರೋಹವಾದ ಬಳಿಕ ಮರಳಿ ಸದ್ಗುಣವನರಸುವರೆ. (428/830)

ಸ್ನೇಹ+ಇದ್ದ; ಸ್ನೇಹ=ಗೆಳೆತನ/ಒಡನಾಟ; ಠಾವಿನ+ಒಳು; ಠಾವು=ಎಡೆ/ತಾಣ; ಒಳು=ಅಲ್ಲಿ; ಠಾವಿನೊಳು=ಜಾಗದಲ್ಲಿ/ತಾಣದಲ್ಲಿ; ದ್ರೋಹ+ಆದ; ದ್ರೋಹ= ವಂಚನೆ/ಮೋಸ; ಬಳಿಕ=ತರುವಾಯ/ಆಮೇಲೆ; ಮರಳಿ=ತಿರುಗಿ/ಮತ್ತೆ; ಸದ್ಗುಣ+ಅನ್+ಅರಸುವರೆ; ಸದ್ಗುಣ=ಒಳ್ಳೆಯ ನಡೆನುಡಿ; ಅನ್=ಅನ್ನು; ಅರಸು= ಹುಡುಕು/ಕಾಣುವುದಕ್ಕೆ ಪ್ರಯತ್ನಿಸು; **ಅರಸುವರೆ**=ಕಾಣಲು ಆಗುತ್ತದೆಯೆ;

ಒಲವು ನಲಿವು ಹೊಂದಾಣಿಕೆಯಿಂದ ಕೂಡಿದ ಇಬ್ಬರು ವ್ಯಕ್ತಿಗಳ ನಡುವಣ ಗೆಳೆತನದಲ್ಲಿ, ಒಬ್ಬನು ವಂಚನೆಯನ್ನು ಮಾಡಿದರೆ, ನಂಬಿಕೆಗೆ ದ್ರೋಹ ಬಗೆದವನಲ್ಲಿ ಮತ್ತೆ ಒಳ್ಳೆಯ ನಡೆನುಡಿಗಳನ್ನು ಎಂದೆಂದಿಗೂ ಕಾಣಲಾಗದು.

15. ಹಾಡಿದಡೇನು ಕೇಳಿದಡೇನು
ತನ್ನಲುಳ್ಳ ಅವಗುಣ ಬಿಡದನ್ನಕ್ಕ. (180/804)

ಹಾಡಿದಡೆ+ಏನು; ಹಾಡು=ಕೊರಳಿನಿಂದ ಇಂಪಾದ ದನಿಯಲ್ಲಿ ರಾಗಮಯವಾಗಿ ಕಾವ್ಯವನ್ನು/ವಚನವನ್ನು/ಸಾಹಿತ್ಯದ ಸಾಲುಗಳನ್ನು ಉಚ್ಚರಿಸುವುದು; ಹಾಡಿದಡೆ=ಹಾಡಿದರೆ; ಏನು=ಯಾವುದು; ಕೇಳಿದಡೆ+ಏನು; ಕೇಳು=ಆಲಿಸು; ಕೇಳಿದಡೆ=ಕೇಳಿದರೆ;

ತನ್ನ+ಅಲ್+ಉಳ್ಳ; ತನ್ನಲ್=ತನ್ನಲ್ಲಿ; ಉಳ್ಳ=ಇರುವ; ತನ್ನಲುಳ್ಳ=ತನ್ನಲ್ಲಿರುವ; ಅವಗುಣ=ಕೆಟ್ಟ ನಡೆನುಡಿ; ಬಿಡದ+ಅನ್ನಕ್ಕ; ಬಿಡು=ತೊರೆ/ತ್ಯಜಿಸು; ಅನ್ನಕ್ಕ= ವರೆಗೆ/ತನಕ; ಬಿಡದನ್ನಕ್ಕ=ಬಿಡದ ಹೊರತು/ತೊರೆಯದಿದ್ದರೆ;

ವ್ಯಕ್ತಿಯು ತನ್ನಲ್ಲಿರುವ ಕೆಟ್ಟ ನಡೆನುಡಿಗಳನ್ನು ಬಿಡದೆ ಸತ್ಯ ನೀತಿ ನ್ಯಾಯದ ಸಂಗತಿಗಳನ್ನು ತಿಳಿಸುವ ವಚನವನ್ನಾಗಲಿ ಇಲ್ಲವೇ ಕಾವ್ಯವನ್ನಾಗಲಿ ಹಾಡುವುದರಿಂದ, ಓದುವುದರಿಂದ, ಕೇಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ನಿತ್ಯಜೀವನದಲ್ಲಿ ವ್ಯಕ್ತಿಯು ಒಳ್ಳೆಯ ನಡೆನುಡಿಗಳಿಂದ ಬಾಳುವುದು ಎಲ್ಲಕ್ಕಿಂತ ದೊಡ್ಡದು.

16. ಹುಸಿಯನಾಡಿ ಲಿಂಗವ ಪೂಜಿಸಿದಡೆ
ಹೊಳ್ಳ ಬಿತ್ತಿ ಫಲವನರಸುವಂತೆ. (384/826)

ಹುಸಿ+ಅನ್+ಆಡಿ; ಹುಸಿ=ಸುಳ್ಳು/ಸಟೆ; ಅನ್=ಅನ್ನು; ಆಡು=ನುಡಿ/ಹೇಳು; ಲಿಂಗ=ಶಿವನ ವಿಗ್ರಹ/ದೇವರು; ಪೂಜೆ=ದೇವರ ವಿಗ್ರಹದ ಮುಂದೆ ಹೂವು ಹಣ್ಣನ್ನು ಸಲ್ಲಿಸಿ ಧೂಪವನ್ನು ಹಾಕಿ, ದೀಪವನ್ನು ಬೆಳಗಿಸಿ, ಕಯ್ ಮುಗಿದು ಅಡ್ಡಬೀಳುವ ಆಚರಣೆ; ಪೂಜಿಸದಡೆ=ಪೂಜಿಸಿದರೆ;

ಹೊಳ್ಳು=ಜಳ್ಳು/ಒಳಗೆ ಗಟ್ಟಿಯಾದ ಬೀಜವಿಲ್ಲದ ಕಾಳು; ಬಿತ್ತು=ಬೆಳೆಯನ್ನು ಪಡೆಯಲೆಂದು ಮಣ್ಣಿನಲ್ಲಿ ಬೀಜವನ್ನು ಹಾಕುವುದು; ಫಲ+ ಅನ್+ಅರಸು+ ಅಂತೆ; ಫಲ=ಬೆಳೆ; ಅರಸು=ಹುಡುಕು/ಬಯಸು; ಅಂತೆ= ಹಾಗೆ/ಆ ರೀತಿ;

ಜಳ್ಳು ಕಾಳನ್ನು ಹೊಲ ಗದ್ದೆಗಳಲ್ಲಿ ಬಿತ್ತಿದವನು ಬೆಳೆಯನ್ನು/ಫಸಲನ್ನು ಕಾಣಲು ಆಗುವುದಿಲ್ಲ. ಏಕೆಂದರೆ ಜಳ್ಳು ಕಾಳು ಮೊಳಕೆಯೊಡೆದು ಸಸಿಯಾಗುವುದಿಲ್ಲ. ಅಂತೆಯೇ ಸುಳ್ಳನ್ನು ಹೇಳುವ ವ್ಯಕ್ತಿಯು ಮಾಡುವ ಶಿವಪೂಜೆಯಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ದೇವರು ಒಲಿಯುವುದು ಇಲ್ಲವೇ ಮೆಚ್ಚಿಕೊಳ್ಳುವುದು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ವ್ಯಕ್ತಿಗಳನ್ನು ಮಾತ್ರ ಎಂಬ ನಿಲುವನ್ನು ವಚನಕಾರರು ಹೊಂದಿದ್ದರು.

3. ಅಕ್ಕಮ್ಮ

17. **ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು ಅಡಕೆ ಫಲ ರಸ ದ್ರವ್ಯ ಮುಂತಾದ**
ದ್ರವ್ಯಕ್ಕೆ ವ್ರತವೊ
ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೊ
ಇವು ಬಾಹ್ಯದಲ್ಲಿ ಮಾಡುವ ಸೌಕರಿಯವಲ್ಲದೆ ವ್ರತಕ್ಕೆ ಸಲ್ಲ .

(434/831)

ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು=ದಿನ ನಿತ್ಯ ಆಹಾರವಾಗಿ ತೆಗೆದುಕೊಳ್ಳುವ ವಸ್ತುಗಳು; ಫಲ=ಬೆಳೆ; ರಸ=ದ್ರವರೂಪದ ವಸ್ತು; ದ್ರವ್ಯ=ವಸ್ತು/ಸಂಪತ್ತು/ಹಣ; ಮುಂತಾದ=ಮೊದಲಾದ/ಅನೇಕ ಬಗೆಯ;

ವ್ರತ=ದೇವರನ್ನು ಪೂಜಿಸುವಾಗ ಸಂಪ್ರದಾಯವನ್ನು ಚಾಚೂತಪ್ಪದೆ ಮಾಡುವ ಆಚರಣೆಗಳು/ನೋಂಪಿ; ಮುಟ್ಟು=ಕಯ್ಯಿಂದ ಹಿಡಿಯುವುದು; ತಟ್ಟು=ಬಡಿ/ಹೊಡಿ;

ಸೋಂಕು=ಯಾವುದೇ ವಸ್ತು/ವ್ಯಕ್ತಿಯನ್ನು/ಜೀವಿಯನ್ನು ತುಸು ಮುಟ್ಟುವುದು; ಚಿತ್ತ=ಮನಸ್ಸು; **ಮುಟ್ಟುವ ತಟ್ಟುವ ಸೋಂಕುವ ಚಿತ್ತ**=ಕಣ್ಣು, ಕಿವಿ, ಮೂಗು, ನಾಲಗೆ, ತೊಗಲು ಎಂಬ ಅಯ್ದು ಇಂದ್ರಿಯಗಳ ಮೂಲಕ ಪಡೆದ ಅರಿವಿನಿಂದ ಬಹುಬಗೆಯ ಕ್ರಿಯೆಗಳಿಗೆ ತುಡಿಯುವ ಮನಸ್ಸು;

ಚಿತ್ತಕ್ಕೆ ವ್ರತ=ಮನಸ್ಸಿನಲ್ಲಿ ಸದಾಕಾಲ ಮೂಡುತ್ತಲೇ ಇರುವ ತುಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ಅಳವಡಿಸಿಕೊಂಡು ಬಾಳಬೇಕೆಂಬ

ಎಚ್ಚರವನ್ನು ಹೊಂದಿರುವುದು; ಬಾಹ್ಯ+ಅಲ್ಲಿ; ಬಾಹ್ಯ=ಹೊರಗಡೆ/ಹೊರಗಿನ; ಸೌಕರಿಯವು+ಅಲ್ಲದೆ; ಸೌಕರಿಯ=ಅನುಕೂಲ;

ಇವು ಬಾಹ್ಯದಲ್ಲಿ ಮಾಡುವ ಸೌಕರಿಯ=ಬೇರೆಯವರ ಕಣ್ಣಿಗೆ ಕಾಣುವಂತೆ ಮಾಡುವ ತೋರಿಕೆಯ ಆಚರಣೆಗಳು;

ಅಲ್ಲದೆ=ಹೊರತು; ಸಲ್ಲು=ತಕ್ಕುದಾಗಿರು/ಯೋಗ್ಯವಾಗಿರು; ಸಲ್ಲ=ತಕ್ಕುದಲ್ಲ; **ವ್ರತಕ್ಕೆ ಸಲ್ಲ**=ಉಣಿಸು ತಿನಸುಗಳಲ್ಲಿ ಕೆಲವನ್ನು ಬಿಡುವುದು ವ್ರತವಲ್ಲ;

ಶಿವಶರಣಶರಣೆಯರ ಪಾಲಿಗೆ ವ್ರತವೆಂಬುದು ಒಳ್ಳೆಯ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವ ಆಚರಣೆಯಾಗಿತ್ತೇ ಹೊರತು ದೇವರ ಹೆಸರಿನಲ್ಲಿ ಕೆಲವು ಬಗೆಯ ಉಣಿಸು ತಿನಸುಗಳನ್ನು ತೊರೆದು ಮಾಡುವ ಸಂಪ್ರದಾಯದ ಆಚರಣೆಯಾಗಿರಲಿಲ್ಲ.

18. ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು. (479/838)

ಗುರು+ಆದಡೂ; ಗುರು=ತನ್ನ ಬಳಿಬಂದ ಮಕ್ಕಳಿಗೆ ಮತ್ತು ವ್ಯಕ್ತಿಗಳಿಗೆ ಅರಿವನ್ನು ನೀಡಿ, ಅವರಲ್ಲಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವವನು; ಆದಡೂ= ಆದರೂ; ಆಚಾರ+ಭ್ರಷ್ಟನ್+ಆದಡೆ; ಆಚಾರ=ಒಳ್ಳೆಯ ನಡೆನುಡಿ;

ಭ್ರಷ್ಟ=ದಾರಿ ತಪ್ಪಿದ/ಹಾಳು ಬಿದ್ದ; ಆಚಾರಭ್ರಷ್ಟ=ಒಳ್ಳೆಯ ನಡೆನುಡಿಗಳಿಲ್ಲದವನು; ಆದಡೆ=ಆದರೆ; ಅನುಸರಿಸಲ್+ಆಗದು; ಅನುಸರಿಸು=ಹೊಂದಿಕೊಂಡು ಬಾಳುವುದು; ಆಗದು=ಆಗುವುದಿಲ್ಲ;

ಗುರುವಾದವನು ಕೆಟ್ಟ ನಡೆನುಡಿಗಳಿಂದ ವರ್ತಿಸತೊಡಗಿದರೆ, ಅಂತಹ ಗುರುವಿನ ಎಡೆಯಲ್ಲಿರದೆ, ಅವನಿಂದ ದೂರ ಸರಿಯಬೇಕು.

19 ಅಂಗಕ್ಕೆ ಆಚಾರ ಮನಕ್ಕೆ ಅರಿವು ಅರಿವಿಂಗೆ ಜ್ಞಾನ ನಿರ್ಧಾರವಾಗಿ ಕರಿಗೊಂಡುದೆ ವ್ರತ. (481/838)

ಅಂಗ=ಮಯ್/ದೇಹ; ಆಚಾರ=ಒಳ್ಳೆಯ ವರ್ತನೆ; ಮನ=ಮನಸ್ಸು/ಚಿತ್ತ; ಅರಿವು=ತಿಳುವಳಿಕೆ; ಅರಿವಿಂಗೆ=ಅರಿವಿಗೆ; ಜ್ಞಾನ=ಅರಿವು/ತಿಳುವಳಿಕೆ; ನಿರ್ಧಾರ+ಆಗಿ; ನಿರ್ಧಾರ=ನಿಶ್ಚಯ; ಕರಿಗೊಳ್ಳು=ಗಟ್ಟಿಗೊಳ್ಳು;

ವ್ರತ=ಮಿಂದು ಮಡಿಯುಟ್ಟು, ಉಪವಾಸವಿದ್ದು ದೇವರ ಹೆಸರನ್ನು ಉಚ್ಚರಿಸುತ್ತಾ, ಹೂ ಹಣ್ಣು ಕಾಯಿ ಅನ್ನ ಪಾನಗಳನ್ನು ದೇವರ ಮುಂದೆ ಎಡೆಯಾಗಿ ಇಟ್ಟು, ದೀಪ ಧೂಪಗಳಿಂದ ಪೂಜಿಸುವ ಆಚರಣೆ;

ಶಿವಶರಣಶರಣೆಯರ ಪಾಲಿಗೆ ವ್ರತವೆಂಬುದು ದೇವರನ್ನು ಪೂಜಿಸುವಾಗ ಹಿಂದಿನಿಂದಲೂ ಆಚರಿಸಿಕೊಂಡು ಬಂದಿರುವ ಸಂಪ್ರದಾಯವನ್ನು ಚಾಚುತಪ್ಪದೆ ಅನುಸರಿಸುವ ಕ್ರಿಯೆಯಾಗಿರಲಿಲ್ಲ. ವ್ರತವೆಂಬುದು ದೇಹಕ್ಕೆ ಒಳ್ಳೆಯ ಕಸುವನ್ನು ಪಡೆದುಕೊಳ್ಳುವ, ಮನಸ್ಸಿಗೆ ಒಳ್ಳೆಯ ಅರಿವನ್ನು ಗಳಿಸಿಕೊಳ್ಳುವ, ಅರಿವಿನಿಂದ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ನಡೆನುಡಿಯ ಆಚರಣೆಯಾಗಿತ್ತು.

20 ಪರಸ್ತ್ರೀ ಪರಧನಂಗಳಲ್ಲಿ ದುರ್ವಿಕಾರ ದುಶ್ಚರಿತ್ರದಲ್ಲಿ ಒಡಗೂಡದಿಪ್ಪುದೆ ಭರಿತಾರ್ಪಣ. (460/835)

ಪರ=ಇತರ/ಬೇರೆಯ; ಸ್ತ್ರೀ=ಹೆಂಗಸು; ಪರಸ್ತ್ರೀ=ಮತ್ತೊಬ್ಬನ ಹೆಂಡತಿ/ಮತ್ತೊಬ್ಬ ಹೆಂಗಸು; ಪರ+ಧನಂಗಳ್+ಅಲ್ಲಿ; ಧನ=ಸಂಪತ್ತು/ಒಡವೆ ವಸ್ತು/ಹಣಕಾಸು/ಆಸ್ತಿಪಾಸ್ತಿ; ಪರಧನ=ಬೇರೆಯವರಿಗೆ ಸೇರಿದ ಸಂಪತ್ತು; ದುರ್ವಿಕಾರ =ಇತರರನ್ನು ವಂಚಿಸುವ, ಇತರರಿಗೆ ಕೇಡನ್ನು ಬಗೆಯುವ ಕೆಟ್ಟ ಉದ್ದೇಶಗಳಿಂದ ಕೂಡಿರುವ ಮನಸ್ಸು; ದುಶ್ಚರಿತ್ರ+ಅಲ್ಲಿ; ದುಶ್ಚರಿತ್ರ=ಕೆಟ್ಟ ನಡೆನುಡಿಯವನು/ನೀಚತನವುಳ್ಳವನು;

ಒಡಗೂಡದೆ+ಇಪ್ಪುದೆ; ಒಡ+ಕೂಡು; ಒಡ=ಜತೆಯಾಗಿ; ಕೂಡು=ಸೇರು; ಒಡಗೂಡು=ಜತೆಸೇರು; ಇಪ್ಪುದೆ=ಇರುವುದೆ; ಒಡಗೂಡದಿಪ್ಪುದೆ=ಜತೆ ಸೇರದಿರುವುದೇ; ಭರಿತ+ಅರ್ಪಣ; ಭರಿತ=ತುಂಬಿರುವುದು/ಪರಿಪೂರ್ಣ ವಾಗಿರುವುದು; ಅರ್ಪಣ=ಒಪ್ಪಿಸುವುದು/ಕೊಡುವುದು;

ಭರಿತಾರ್ಪಣ=ದೇವರ ಮುಂದೆ ದೊಡ್ಡ ಪ್ರಮಾಣದಲ್ಲಿ ಉಣಿಸು ತಿನಸುಗಳನ್ನು ಎಡೆಯಾಗಿ ಇಡುವುದು/ದೇವರಿಗೆ ಸಲ್ಲಿಸುವ ಕಾಣಿಕೆ;

ವ್ಯಕ್ತಿಯು ಇತರರ ಸಂಪತ್ತನ್ನು ದೋಚದೆ ಮತ್ತು ಹೆಣ್ಣು ಮಕ್ಕಳ ಬಾಳನ್ನು ಹಾಳುಮಾಡದೆ ಒಳ್ಳೆಯ ನಡೆನುಡಿಗಳಿಂದ ಬಾಳುವುದೇ ದೇವರಿಗೆ ಸಲ್ಲಿಸುವ ನಿಜವಾದ ಕಾಣಿಕೆಯಾಗುತ್ತದೆ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

❖

4. ಅಮುಗೆ ರಾಯಮ್ಮ

21. ತನ್ನ ತಾನರಿದವಂಗೆ
ಬಿನ್ನಾಣಿಗಳ ಮಾತೇತಕಯ್ಯಾ. (601–856)

ತಾನ್+ಅರಿದ+ಅವಂಗೆ; ತನ್ನ ತಾನ್=ತನ್ನನ್ನು ತಾನು; ಅರಿ=ತಿಳಿ; ಅವಂಗೆ=ಅವನಿಗೆ; ಬಿನ್ನಾಣ=ಒನಪು/ಒಯ್ಯಾರ;

ಬಿನ್ನಾಣಿ=ಒನಪು ಒಯ್ಯಾರದ ನಡತೆಯುಳ್ಳವನು/ ತೋರಿಕೆಯ ನಡೆನುಡಿಯುಳ್ಳವನು/ಮನದೊಳಗೆ ಕಪಟಿಯಾಗಿದ್ದುಕೊಂಡು ಮಾತಿನಲ್ಲಿ ಒಳ್ಳೆಯವನಂತೆ ನಟಿಸುವವನು;

ಮಾತು+ಏತಕೆ+ಅಯ್ಯಾ; ಮಾತು=ನುಡಿ/ಸೊಲ್ಲು; ಏತಕೆ=ಯಾವುದಕ್ಕಾಗಿ; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ತನ್ನನ್ನು ತಾನು ಅರಿತುಕೊಂಡಿರುವ ವ್ಯಕ್ತಿಗೆ ಬಿನ್ನಾಣಿಗಳ ಮಾತಿನ ಅಗತ್ಯವಿಲ್ಲ. ಏಕೆಂದರೆ ಸತ್ಯ ನೀತಿ ನ್ಯಾಯದ ನುಡಿಗಳನ್ನು ಬಿನ್ನಾಣಿಗಳು ಸೊಗಸಾಗಿ ಆಡುತ್ತಾ ಹೊರನೋಟಕ್ಕೆ ಒಳ್ಳೆಯವರಂತೆ ಕಾಣುತ್ತಾರೆಯೆ ಹೊರತು, ನಡೆಯಲ್ಲಿ ತುಂಬಾ ಕೆಟ್ಟವರಾಗಿರುತ್ತಾರೆ.

ವ್ಯಕ್ತಿಯು ತನ್ನನ್ನು ತಾನು ಅರಿಯುವುದು ಎಂದರೆ "ಮಾನವ ಸಮುದಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನವು ನಿಸರ್ಗದ ಆಗುಹೋಗು ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟಿದೆ. ಆದ್ದರಿಂದಲೇ ತನ್ನನ್ನೂ ಒಳಗೊಂಡಂತೆ ಎಲ್ಲ ವ್ಯಕ್ತಿಗಳ ಮಯ್ ಮನದಲ್ಲಿ ಒಳಿತು ಕೆಡುಕಿನ ಒಳಮಿಡಿತಗಳು ಸದಾಕಾಲ ಇದ್ದೇ

ಇರುತ್ತವೆ ಎಂಬುದನ್ನು ಅರಿತುಕೊಂಡು, ಜೀವನದ ಉದ್ದಕ್ಕೂ ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯವನಾಗಿ ಬಾಳಬೇಕೆಂಬ ಎಚ್ಚರವನ್ನು ಹೊಂದುವುದು. ತಾನು ಸಮಾಜದ ಒಂದು ಕೊಂಡಿ ಎಂಬುದನ್ನು ತಿಳಿದುಕೊಂಡು, ತನ್ನ ಜೀವನದ ಒಳಿತು ಕೆಡುಕು ಸಮಾಜದಲ್ಲಿ ಉಂಟಾಗುವ ಒಳಿತು ಕೆಡುಕನ್ನು ಅವಲಂಬಿಸಿದೆ ಎಂಬ ವಾಸ್ತವವನ್ನು ಅರಿತು ಬಾಳುವುದು;

22. ಬೀದಿಯಲ್ಲಿ ನಿಂತು ನೀನೇನು ತಾನೇನು ಎಂಬವಂಗೆ ಆದ್ಯರ ವಚನವೇಕೆ. (602–856)

ಬೀದಿ+ಅಲ್ಲಿ; ಬೀದಿ=ದಾರಿ/ಹಾದಿ; ನೀನ್+ಏನು; ಏನು=ಯಾವುದು; ತಾನ್+ಏನು; ಎಂಬ+ಅವಂಗೆ; ಎಂಬ=ಎನ್ನುವ/ಎಂದು ಹೇಳುವ; ಅವಂಗೆ= ಅವನಿಗೆ; ಆದ್ಯ=ಮೊದಲನೆಯವನು/ಹಿಂದಿನವನು/ಪೂರ್ವಿಕ; ಆದ್ಯರು= ಗುರು ಹಿರಿಯರು; ವಚನ+ಏಕೆ; ವಚನ=ನುಡಿ/ಮಾತು; ಏಕೆ= ಯಾವುದಕ್ಕಾಗಿ;

"ಬೀದಿಯಲ್ಲಿ ನಿಂತು" ಎಂದರೆ ಸಾರ್ವಜನಿಕವಾಗಿ ಇತರರೊಡನೆ ವ್ಯವಹರಿಸುವಾಗ, ಅವರನ್ನು ಒಲವು ನಲಿವು ಮತ್ತು ಆದರದಿಂದ ಕಾಣಬೇಕೆ ಹೊರತು, ಎಲ್ಲರಿಗಿಂತ ತಾನೇ ದೊಡ್ಡವನು, ತಾನೇ ತಿಳಿದವನು ಎಂಬ ಅಹಂಕಾರದಿಂದ ನಡೆದುಕೊಳ್ಳುತ್ತ, ಇತರರನ್ನು ಕೀಳಾಗಿ ಕಾಣಬಾರದು.

"ಎನಗಿಂತ ಕಿರಿಯರಿಲ್ಲ" ಎಂಬ ವಿನಯದ ನಡೆನುಡಿಗಳನ್ನು ಜೀವನದಲ್ಲಿ ಆಚರಿಸಿ ತೋರಿಸಿದ ಶಿವಶರಣರ ವಚನದ ಇಂಗಿತವನ್ನು ಮನನ ಮಾಡಿಕೊಂಡ ವ್ಯಕ್ತಿಯು ಜೀವನದಲ್ಲಿ ಅಹಂಕಾರಿಯಾಗಿ ನಡೆದುಕೊಳ್ಳುವುದಿಲ್ಲ.

23. ಪಟ್ಟಣಕ್ಕೆ ಒಡೆಯನಾದ ಬಳಿಕ ಜಾತಿಗೋತ್ರವನರಸಲುಂಟೆ.(607–856)

ಪಟ್ಟಣ=ನಗರ/ಪುರ; ಒಡೆಯ+ಅನ್+ಆದ; ಒಡೆಯ=ರಾಜ/ದೊರೆ; ಬಳಿಕ=ತರುವಾಯ/ಆಮೇಲೆ; ಜಾತಿ+ಗೋತ್ರ+ ಅನ್+ಅರಸು+ಅಲ್+ ಉಂಟೆ; ಜಾತಿ=ವ್ಯಕ್ತಿಯು ಹುಟ್ಟಿದ ಕುಲ; ಗೋತ್ರ=ಕುಲ/ವಂಶ; ಅರಸು= ಹುಡುಕು/ ತಿಳಿಯಲು ಪ್ರಯತ್ನಿಸು; ಉಂಟು=ಇರುವುದು; ಉಂಟೆ=ಇರುವುದೆ; ಅರಸಲುಂಟೆ=ಹುಡುಕುವುದು ಸರಿಯೆ;

ನೂರೆಂಟು ಬಗೆಯ ಜಾತಿ ಮತಗಳಿಗೆ ಸೇರಿದ ಜನಸಮುದಾಯಗಳಿಂದ ಆಯ್ಕೆಗೊಂಡು ಪಟ್ಟಣಕ್ಕೆ ಒಡೆಯನಾಗಿ ಆಡಳಿತದ ಗದ್ದುಗೆಯನ್ನು ಏರಿದ ವ್ಯಕ್ತಿಯು 'ಇವರು ನಮ್ಮ ಜಾತಿ ಮತದವರು... ಅವರು ಬೇರೆ ಜಾತಿಮತದವರು' ಎಂಬ ತಾರತಮ್ಯ ಮಾಡದೆ, ಎಲ್ಲರ ಒಳಿತಿಗಾಗಿ ದುಡಿಯಬೇಕೆ ಹೊರತು ತನ್ನ ಜಾತಿಮತದವರು ಮಾತ್ರ ಏಳಿಗೆಯನ್ನು ಹೊಂದಲೆಂಬ ನಿಲುವನ್ನು ತಳೆಯಬಾರದು.

24. ಕೋಟ್ಯನುಕೋಟಿಯನೋದಿದಡೇನು ಸಾತ್ವಿಕರಾಗಬಲ್ಲರೆ. (636–859)

ಕೋಟಿ+ಅನುಕೋಟಿ+ಅನ್+ಓದಿದಡೆ+ಏನು; ಕೋಟಿ=ಒಂದು ನೂರು ಲಕ್ಷದ ಮೊತ್ತವನ್ನು ಸೂಚಿಸುವ ಪದ; ಕೋಟ್ಯನುಕೋಟಿ=ಕೋಟಿಗಟ್ಟಲೆ/ತುಂಬಾ / ಅತಿ ಹೆಚ್ಚಾಗಿ; ಅನ್=ಅನ್ನು; ಓದು=ಲಿಪಿರೂಪದ ಬರಹದ ಮೂಲಕ ಅರಿವನ್ನು ಪಡೆಯುವುದು; ಓದಿದಡೆ=ಓದಿದರೆ/ಓದುವುದರಿಂದ; ಏನು= ಯಾವುದು;

ಸಾತ್ವಿಕರ್+ಆಗಬಲ್ಲರೆ; ಸಾತ್ವಿಕ=ಒಳ್ಳೆಯ ನಡೆನುಡಿಯಿಂದ ಬಾಳುತ್ತಿರುವವನು/ಗುಣವಂತ; ಆಗು=ರೂಪುಗೊಳ್ಳುವುದು; ಆಗಬಲ್ಲರೆ=ಆಗುತ್ತಾರೆಯೆ;

ತುಂಬಾ ಓದಿಕೊಂಡ ಮಾತ್ರಕ್ಕೆ ವ್ಯಕ್ತಿಯು ಒಳ್ಳೆಯವನಾಗುವುದಿಲ್ಲ. ಏಕೆಂದರೆ ಯಾವ ವ್ಯಕ್ತಿಯು ತಾನು ಓದಿ ಪಡೆದ ಅರಿವಿನಿಂದ ತನ್ನ ಮತ್ತು ತನ್ನ ಕುಟುಂಬದ ಹಿತವನ್ನು ಕಾಪಾಡಿಕೊಳ್ಳುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತನ್ನು ಕಾಪಾಡುತ್ತಾನೆಯೋ ಅಂತಹ ವ್ಯಕ್ತಿಯನ್ನು ಮಾತ್ರ ಒಳ್ಳೆಯವನೆಂದು ಗುರುತಿಸಬೇಕು.

ವ್ಯಕ್ತಿಗೆ ಒಳ್ಳೆಯತನವೆಂಬುದು ಕೇವಲ ಓದಿನಿಂದ ಬರುವುದಿಲ್ಲ. ಸಹಮಾನವರ ಬಗ್ಗೆ ಆತನು ಹೊಂದಿರುವ ಒಲವು, ಕರುಣೆ, ಸಹನೆ ಮತ್ತು ಗೆಳೆತನದ ನಡೆನುಡಿಯಿಂದ ಬರುತ್ತದೆ.

25. ಗರಡಿಯಲ್ಲಿ ಸಾಮುವ ಮಾಡುವರಲ್ಲದೆ ಕಾಳಗದಲ್ಲಿ ಸಾಮುವ ಮಾಡುವರೆ. (639–859)

ಗರಡಿ+ಅಲ್ಲಿ; ಗರಡಿ=ದೇಹವನ್ನು ಗಟ್ಟಿಮುಟ್ಟಾಗಿ ಇಟ್ಟುಕೊಂಡು ಕುಸ್ತಿಯನ್ನು ಮಾಡಲು ಅಗತ್ಯವಾದ ತರಬೇತಿಯನ್ನು ನೀಡುವ ಶಾಲೆ/ರಣರಂಗದಲ್ಲಿ

ಹಗೆಗಳೊಡನೆ ಹೋರಾಡಲು ಬೇಕಾದ ದೊಣ್ಣೆ, ಕತ್ತಿ, ಬಿಲ್ಲುಬಾಣ, ಗದೆ ಗುರಾಣಿ ಮುಂತಾದ ಹತಾರಗಳನ್ನು ಬಳಸುವ ತರಬೇತಿಯನ್ನು ನೀಡುವ ನೆಲೆ;

ಸಾಮು=ದೇಹವನ್ನು ದಂಡಿಸಿ ಮಾಡುವ ವ್ಯಾಯಾಮ/ಕಸರತ್ತು; ಮಾಡುವರ್+ಅಲ್ಲದೆ; ಅಲ್ಲದೆ=ಹೊರತು ಪಡಿಸಿ; ಕಾಳಗ+ಅಲ್ಲಿ; ಕಾಳಗ=ಕದನ/ಸಮರ; ಮಾಡುವರೆ=ಮಾಡುತ್ತಾರೆಯೆ;

ಗರಡಿ ಮನೆಯಲ್ಲಿ ಮಾಡುವ ವ್ಯಾಯಾಮವನ್ನು ರಣರಂಗದಲ್ಲಿ ಮಾಡತೊಡಗಿದರೆ ದುರಂತ ಕಟ್ಟಿಟ್ಟ ಬುತ್ತಿ. ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ.

ಯಾವ ಯಾವ ಸಮಯದಲ್ಲಿ ಮತ್ತು ಸನ್ನಿವೇಶಗಳಲ್ಲಿ ಯಾವ ಕೆಲಸಗಳನ್ನು ಮಾಡಬೇಕು ಇಲ್ಲವೇ ಮಾಡಬಾರದು ಎಂಬ ಮುಂದಾಲೋಚನೆ, ಎಚ್ಚರ ಮತ್ತು ವಿವೇಕವನ್ನು ವ್ಯಕ್ತಿಯು ಹೊಂದಿರಬೇಕು.

26. ಧೀರನೆಂದು ಬೀದಿಯಲ್ಲಿ ನುಡಿಯಲೇಕೆ ಕಾವಲ್ಲಿ ಕಾಣಬಹುದು (650–860)

ಧೀರನ್+ಎಂದು; ಧೀರ=ಕೆಚ್ಚುಳ್ಳವನು/ಎದೆಗಾರ/ಅಂಜಿಕೆಯಿಲ್ಲದವನು; ಬೀದಿ+ಅಲ್ಲಿ; ಬೀದಿ=ಹಾದಿ/ದಾರಿ; ನುಡಿಯಲ್+ಏಕೆ; ನುಡಿ=ಹೇಳು/ಮಾತನಾಡು; ಏಕೆ=ಯಾವುದಕ್ಕಾಗಿ; ಕಾ+ಅಲ್ಲಿ; ಕಾ=ಕಾಪಾಡು/ಕಾವಲಿರು/ಸಲಹು; ಕಾವಲ್ಲಿ=ಹಗೆಯ ಎದುರು ಹೋರಾಡುವಾಗ/ರಣರಂಗದಲ್ಲಿ ಕಾದಾಡುವಾಗ; ಕಾಣ್=ನೋಡು/ತಿಳಿ; ಕಾಣಬಹುದು=ನೋಡಿ ತಿಳಿಯಬಹುದು/ಅರಿಯಬಹುದು;

ವ್ಯಕ್ತಿಯು ತನ್ನ ಶೂರತನವನ್ನು ಮಾತಿನಲ್ಲಿ ತೋರಿಸುವ ಬದಲು ರಣರಂಗದಲ್ಲಿ ಹಗೆಗಳ ಎದುರು ಹೋರಾಡುವುದರ ಮೂಲಕ ತೋರಿಸಬೇಕು. ಈ ಸಂಗತಿಯು ಒಂದು ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

ವ್ಯಕ್ತಿಯು ಆಡಂಬರದ, ಜಂಬದ ಮತ್ತು ಹೆಮ್ಮೆಯ ಮಾತುಗಳನ್ನಾಡುವ ಬದಲು ಒಳ್ಳೆಯ ಕೆಲಸವನ್ನು ಮಾಡಿ ತೋರಿಸಬೇಕು.

❖

5. ಅಲ್ಲಮ

27. ಅರಿವು ಅರಿವು ಎನುತಿಪ್ಪಿರಿ ಅರಿವು ಸಾಮಾನ್ಯವೆ
ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯನರಿಯಬಾರದು. (475–175)

ಅರಿ=ತಿಳಿ/ಕಲಿ; ಅರಿವು=ಯಾವುದು ಸರಿ–ಯಾವುದು ತಪ್ಪು/ಯಾವುದು ನಿಸರ್ಗ ಸಹಜವಾದುದು–ಯಾವುದು ಮಾನವ ನಿರ್ಮಿತ ಎಂಬ ತಿಳುವಳಿಕೆ; ಎನುತ್ತ+ಇಪ್ಪಿರಿ; ಎನ್ನುತ್ತ=ಎಂದು ಹೇಳುತ್ತ; ಇಪ್ಪಿರಿ= ಇರುವಿರಿ/ಇದ್ದೀರಿ; ಸಾಮಾನ್ಯ=ಎಲ್ಲಾ ಕಡೆ/ಎಲ್ಲಾ ಕಾಲದಲ್ಲಿ ಇರುವಂತಹುದು; ಸಾಮಾನ್ಯವೇ= ಸಾಮಾನ್ಯವಾದುದಲ್ಲ ಅಂದರೆ ಹೆಚ್ಚಿನದು ಏನನ್ನೋ ಒಳಗೊಂಡಿರುವುದು;

ಅರಿವು ಅರಿವು ಎನುತಿಪ್ಪಿರಿ ಅರಿವು ಸಾಮಾನ್ಯವೆ=ಅರಿವನ್ನು ಪಡೆಯುವು ದಾಗಲಿ ಇಲ್ಲವೇ ಅರಿವು ಯಾವುದು ಎಂಬುದನ್ನು ಸರಿಯಾಗಿ ತಿಳಿಯುವು ದಾಗಲಿ ಸಾಮಾನ್ಯವಾದ ಕೆಲಸವಲ್ಲ.

ಉದಾಹರಣೆ: ಜಗತ್ತಿನಲ್ಲಿರುವ ಮಾನವ ಸಮುದಾಯವನ್ನು ವಿಂಗಡಿಸಿರುವ ಬೇರೆ ಬೇರೆ ಹೆಸರಿನ ಮತಗಳು ಮತ್ತು ನೂರೆಂಟು ಬಗೆಯ ಜಾತಿಗಳು ನಿಸರ್ಗ ಸಹಜವಲ್ಲ. ಇವು ಮಾನವರು ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟಗಳು ಎಂಬ ವಾಸ್ತವವನ್ನು ಅರಿಯಬೇಕಾದರೆ ಜನ ಸಮುದಾಯಗಳ ಸಾಮಾಜಿಕ ಚರಿತ್ರೆಯನ್ನು ತಿಳಿಯಬೇಕಾಗುತ್ತದೆ. ಜಾತಿ, ಮತ, ದೇವರುಗಳು ಜನ ಸಮುದಾಯಗಳನ್ನು ಒಂದುಗೂಡಿಸುವುದರ ಬದಲು ಪರಸ್ಪರ ಅನುಮಾನ,

ಅಪನಂಬಿಕೆ, ಅಸೂಯೆ ಮತ್ತು ಹಗೆತನದ ನಡೆನುಡಿಗಳಿಗೆ ಪ್ರೇರಣೆಯಾಗಿವೆ ಎಂಬ ವಾಸ್ತವವನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ, ನಿಸರ್ಗ ಮತ್ತು ಮಾನವ ಕೇಂದ್ರಿತ ನೆಲೆಯಲ್ಲಿ ವ್ಯಕ್ತಿಯು ತನ್ನ ಮತ್ತು ಇತರರ ಬದುಕನ್ನು ನೋಡಬೇಕು.

ಹಿಂದಣ=ಹಿಂಬದಿಯಲ್ಲಿರುವ/ಹಿಂದುಗಡೆಯಲ್ಲಿರುವ; ಹೆಜ್ಜೆ=ನಡೆದಾಗ ಪಾದವನ್ನು ಊರಿದ/ಇಟ್ಟ ಜಾಗದ ಗುರುತು; ನೋಡು=ಕಾಣು/ತಿಳಿ; ಕಂಡ+ಅಲ್ಲದೆ;

ನೋಡಿ ಕಂಡಲ್ಲದೆ=ಚೆನ್ನಾಗಿ ನೋಡಿ ಸರಿಯಾಗಿ ತಿಳಿದುಕೊಳ್ಳದ ಹೊರತು; ನಿಂದ=ಈಗ ನಿಂತಿರುವ; ಹೆಜ್ಜೆ+ಅನ್+ಅರಿಯಬಾರದು; ಅನ್=ಅನ್ನು; ಅರಿಯ ಬಾರದು=ತಿಳಿದುಕೊಳ್ಳಲಾಗುವುದಿಲ್ಲ/ಅರಿತುಕೊಳ್ಳಲು ಆಗುವುದಿಲ್ಲ;

ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು=ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ. ಈಗ ನಾವು ಬಾಳುತ್ತಿರುವ ಸಮಾಜದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವ ಬಗೆಯ ನಡೆನುಡಿಗಳು ಜನರಿಗೆ ಒಳಿತನ್ನು ಉಂಟುಮಾಡುತ್ತವೆ ಇಲ್ಲವೇ ಕೇಡನ್ನು ಬಗೆಯುತ್ತವೆ ಎಂಬುದನ್ನು ವ್ಯಕ್ತಿಯು ಮೊದಲು ತಿಳಿದುಕೊಳ್ಳಬೇಕು. ಈ ಬಗೆಯ ಅರಿವನ್ನು ಪಡೆದಾಗ ಮಾತ್ರ ಒಟ್ಟು ಜನಸಮುದಾಯದ ನೆಮ್ಮದಿಯ ಬದುಕಿಗೆ ಹಾನಿಯನ್ನುಂಟುಮಾಡುವ ಸಂಪ್ರದಾಯಗಳನ್ನು ಮತ್ತು ಆಚರಣೆಗಳನ್ನು ತ್ಯಜಿಸಿ, ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಂಡು ಬಾಳಬೇಕು ಎಂಬುದು ಮನದಟ್ಟಾಗುತ್ತದೆ.

28. ಎಲ್ಲವನೂ ಸಾಧಿಸ ಹೋದಡೆ ಏನೂ ಇಲ್ಲದಂತಾಯಿತ್ತು. (456–173)

ಎಲ್ಲ=ಸಕಲ/ಸಮಗ್ರ; ಎಲ್ಲವನೂ=ಯಾವುದೊಂದನ್ನು ಬಿಡದಂತೆ ಸಕಲವನ್ನು; ಸಾಧಿಸು=ಪಡೆ/ಹೊಂದು; ಹೋದಡೆ=ಹೋದರೆ; ಸಾಧಿಸಹೋದಡೆ= ಪಡೆದು ಕೊಳ್ಳಲು ಪ್ರಯತ್ನಿಸಿದರೆ/ಹಂಬಲಿಸಿದರೆ; ಏನು=ಯಾವುದು; ಇಲ್ಲದ+ಅಂತೆ+ ಆಯಿತ್ತು; ಅಂತೆ=ಹಾಗೆ/ಆ ರೀತಿ;

ಏನೂ ಇಲ್ಲದಂತಾಯಿತು=ಒಂದಾದರೂ ದೊರಕದಂತಾಯಿತು/ಯಾವುದು ದಕ್ಕಲಿಲ್ಲ;

ವ್ಯಕ್ತಿಯು ಯಾವುದೇ ಒಂದು ಕೆಲಸವನ್ನು ಕಯ್ಗೊಂಡಾಗ, ಮೊದಲು ಅದನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿದ ನಂತರ ಮತ್ತೊಂದನ್ನು ಕಯ್ಗೊಳ್ಳಬೇಕು. ಒಂದೇ ಬಾರಿಗೆ ದೊಡ್ಡ ಸಂಪತ್ತನ್ನು ಇಲ್ಲವೇ ಹೆಸರನ್ನು ಪಡೆದುಕೊಳ್ಳಬೇಕೆಂಬ ಹಂಬಲದಿಂದ ಅನೇಕ ಕೆಲಸಗಳಲ್ಲಿ ತೊಡಗಿದರೆ, ಯಾವೊಂದು ಕೆಲಸವನ್ನು ಗಮನವಿಟ್ಟು ಮಾಡಲಾಗದೆ ಮತ್ತು ಕಯ್ಗೊಂಡಿದ್ದನ್ನು ಪರಿಪೂರ್ಣವಾಗಿ ಮಾಡಿ ಗುರಿ ಮುಟ್ಟಲಾಗದೆ, ತನ್ನ ದುಡಿಮೆಯ ಶ್ರಮ, ಕಾಲ ಮತ್ತು ತನ್ನಲ್ಲಿದ್ದ ಒಡವೆ ವಸ್ತುಗಳೆಲ್ಲವನ್ನೂ ಕಳೆದುಕೊಳ್ಳುತ್ತಾನೆ ಎಂಬ ಎಚ್ಚರಿಕೆಯನ್ನು ಈ ನುಡಿಗಳು ಸೂಚಿಸುತ್ತಿವೆ.

29. ಏನೆಂದರಿಯರು ಎಂತೆಂದರಿಯರು ಅರಿವನರಿದೆವೆಂಬರು.(345–165)

ಏನ್+ಎಂದು+ಅರಿಯರು; ಏನು=ಯಾವುದೇ ಒಂದು ವಸ್ತು/ಜೀವಿ/ಸಂಗತಿಯ ಬಗೆಗಿನ ವಾಸ್ತವ ಯಾವುದು ಎಂಬುದನ್ನು; ಅರಿಯರು=ತಿಳಿಯರು; ಎಂತು+ಎಂದು+ಅರಿಯರು;

ಎಂತು=ಯಾವ ರೀತಿ/ಬಗೆ/ಕ್ರಮ;

ಅರಿವು+ಅನ್+ಅರಿದೆವು+ಎಂಬರು; ಅರಿವನ್=ತಿಳುವಳಿಕೆಯನ್ನು/ವಿವೇಕವನ್ನು; ಅರಿದೆವು=ತಿಳಿದುಕೊಂಡಿದ್ದೇವೆ; ಎಂಬರು=ಎಂದು ಹೇಳಿ ಕೊಳ್ಳುತ್ತಾರೆ; **ಅರಿವನರಿದೆವೆಂಬರು**=ನಮಗೆ ಎಲ್ಲವೂ ಚೆನ್ನಾಗಿ ತಿಳಿದಿದೆ ಎನ್ನುತ್ತಾರೆ;

ಅರಿವನ್ನು ಪಡೆಯಬೇಕಾದರೆ ಯಾವುದೇ ಒಂದು ಸಂಗತಿಯನ್ನು ಕಾರ್ಯ ಕಾರಣಗಳ ನೆಲೆಯಲ್ಲಿ ಒರೆಹಚ್ಚಿ ನೋಡಬೇಕು. ಮಾನವರ ಬದುಕಿನಲ್ಲಿ ನಡೆಯು ವಂತಹ ಎಲ್ಲಾ ಸಂಗತಿಗಳಿಗೂ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳು ಮತ್ತು ಮಾನವರ ನಡೆನುಡಿಗಳಿಂದ ಉಂಟಾಗುವ ಪರಿಣಾಮಗಳು ಕಾರಣವಾಗಿರುತ್ತವೆ.

ಆದ್ದರಿಂದ ಯಾವುದೇ ಒಂದು ಸಂಗತಿಯ ವಾಸ್ತವವನ್ನು ಅರಿತು ಕೊಳ್ಳುವಾಗ "ಅದು ಏನು? ಅದು ಯಾವ ರೀತಿ ಉಂಟಾಯಿತು?" ಎಂಬುದನ್ನು ಪರಿಶೀಲನೆ ಮಾಡಬೇಕು. ಇಲ್ಲದಿದ್ದರೆ ಅದು ಹಿಂದಿನಿಂದಲೂ ಆಚರಣೆಯಲ್ಲಿ ಬಂದಿರುವ ಸಂಪ್ರದಾಯದ ಕುರುಡು ನಂಬಿಕೆಯಾಗುತ್ತದೆಯೇ ಹೊರತು ಅರಿವು ಎನಿಸಿಕೊಳ್ಳುವುದಿಲ್ಲ.

30 ಅರಿವ ಬಲ್ಲೆನೆಂದು
ಬಿರುನುಡಿಯ ನುಡಿವರೆ. (829–211)

ಅರಿವ=ಅರಿವನ್ನು/ತಿಳುವಳಿಕೆಯನ್ನು; ಬಲ್ಲೆನ್+ಎಂದು; ಬಲ್ಲ=ತಿಳಿದ/ಅರಿತ; ಬಲ್ಲೆನ್=ತಿಳಿದಿದ್ದೇನೆ/ಅರಿತಿದ್ದೇನೆ/ಕರಗತ ಮಾಡಿಕೊಂಡಿದ್ದೇನೆ; ಎಂದು= ಅಂದುಕೊಂಡು/ಒಳಮಿಡಿತದಿಂದ ಕೂಡಿ;

ಬಿರು=ಒರಟು/ಮೊನಚು/ಜೋರು/ಕಟು; ನುಡಿ=ಮಾತು/ಸೊಲ್ಲು; ಬಿರುನುಡಿ= ಕೇಳಿದವರ ಮನವನ್ನು ನೋಯಿಸುವಂತಹ ಮಾತು/ಇತರರ ವ್ಯಕ್ತಿತ್ವವನ್ನು ಅಲ್ಲಗಳೆಯುವಂತಹ ನುಡಿ; ನುಡಿವರೆ=ನುಡಿಯುತ್ತಾರೆಯೇ/ಆಡುತ್ತಾರೆಯೇ;

ವ್ಯಕ್ತಿಯು ತಾನೊಬ್ಬನೇ ಎಲ್ಲವನ್ನೂ ತಿಳಿದವನು ಎಂಬ ಅಹಂಕಾರದಿಂದ ಮೆರೆಯುತ್ತ ಇತರರನ್ನು ಕಡೆಗಣಿಸುವಂತಹ ಸೊಕ್ಕಿನ ನುಡಿಗಳನ್ನಾಡುವುದು ಸರಿಯಲ್ಲ.

31. ಏನೆಂದರಿಯರು ಎಂತೆಂದರಿಯರು
ಬರುಮಾತಿನ ಬೊಮ್ಮವನಾಡುತ್ತಿಪ್ಪರು.(485–176)

(ಏನ್+ಎಂದು+ಅರಿಯರು; ಅರಿಯರು=ತಿಳಿಯರು; ಎಂತು+ಎಂದು+ ಅರಿಯರು; ಎಂತು=ಯಾವ ರೀತಿ/ಬಗೆ/ಕ್ರಮ;

ಏನೆಂದರಿಯರು ಎಂತೆಂದರಿಯರು=ಅರಿವನ್ನು ಪಡೆಯಬೇಕಾದರೆ ಯಾವುದೇ ಒಂದು ಸಂಗತಿಯನ್ನು ಕಾರ್ಯ ಕಾರಣಗಳ ನೆಲೆಯಲ್ಲಿ ಒರೆಹಚ್ಚಿ ನೋಡಬೇಕು. ಮಾನವರ ಬದುಕಿನಲ್ಲಿ ನಡೆಯುವಂತಹ ಎಲ್ಲಾ ಸಂಗತಿಗಳಿಗೂ ನಿಸರ್ಗದಲ್ಲಿ ನಡೆಯುವ ಕ್ರಿಯೆಗಳು ಮತ್ತು ಮಾನವರ ನಡೆನುಡಿಗಳಿಂದ ಉಂಟಾಗುವ ಪರಿಣಾಮಗಳು ಕಾರಣವಾಗಿರುತ್ತವೆ.

ಆದ್ದರಿಂದ ಯಾವುದೇ ಒಂದು ಸಂಗತಿಯನ್ನು ಕುರಿತು ಚಿಂತಿಸುವಾಗ/ ಮಾತನಾಡುವಾಗ "ಅದು ಏನು? ಅದು ಯಾವ ರೀತಿ ಉಂಟಾಯಿತು?" ಎಂಬುದನ್ನು ಪರಿಶೀಲನೆ ಮಾಡದಿದ್ದರೆ, ಆಗ ಅದರ ಬಗ್ಗೆ ಸರಿಯಾದ ಮತ್ತು ಸಮಗ್ರವಾದ ತಿಳುವಳಿಕೆಯು ದೊರೆಯುವುದಿಲ್ಲ.

ಬರು=ಬರಿದು/ಏನೂ ಇಲ್ಲದಿರುವುದು/ಪೊಳ್ಳು; ಮಾತು=ನುಡಿ/ಸೊಲ್ಲು;

ಬರುಮಾತು=ಪೊಳ್ಳು ಮಾತು/ಏನೊಂದು ಬಗೆಯ ಕೆಲಸವನ್ನು ಮಾಡದೆ, ಕೇವಲ ಮಾತಿನಲ್ಲೇ ತೊಡಗಿರುವುದು;

ಬೊಮ್ಮ+ಅನ್+ಆಡುತ್ತ+ಇಪ್ಪರು; ಬ್ರಹ್ಮ>ಬೊಮ್ಮ; ಬೊಮ್ಮ=ಬ್ರಹ್ಮ; ಅನ್=ಅನ್ನು; ಆಡುತ್ತ=ನುಡಿಯುತ್ತ/ಹೇಳುತ್ತ; ಇಪ್ಪರು=ಇರುವರು/ಇದ್ದಾರೆ;

ಬರುಮಾತಿನ ಬೊಮ್ಮ=ಜಗತ್ತಿನಲ್ಲಿ ಎಲ್ಲಾ ಜೀವರಾಶಿಗಳ ಹುಟ್ಟು, ಬೆಳವಣಿಗೆ, ಬಾಳು ಮತ್ತು ಸಾವಿಗೆ ಕಾರಣನಾದವನು ಬ್ರಹ್ಮನೆಂಬ ದೇವ. ಆದ್ದರಿಂದ ಮಾನವರೆಲ್ಲರ ನಡೆನುಡಿಗಳೆಲ್ಲವೂ ಬ್ರಹ್ಮದೇವನ ಆಣತಿಯಂತೆ ನಡೆಯುತ್ತಿವೆ. ಮಾನವ ಸಮುದಾಯದ ನೋವು ನಲಿವಿಗೆ ಮತ್ತು ಏಳು ಬೀಳುಗಳಿಗೆ ಹಣೆ ಬರಹ, ವಿಧಿ ಬರಹ ಮತ್ತು ಹಿಂದಿನ ಜನ್ಮದ ಪಾಪ ಪುಣ್ಯಗಳೇ ಕಾರಣವೆಂಬ ನಂಬಿಕೆಯನ್ನು ಜನಮನದಲ್ಲಿ ಬಿತ್ತುವ ನುಡಿಗಳು;

ಇಂತಹ ನುಡಿಗಳಿಂದ ಜನರ ಬದುಕಿಗೆ ಏನೊಂದು ಬಗೆಯಲ್ಲೂ ಒಳಿತಾಗುವುದಿಲ್ಲ. ಏಕೆಂದರೆ ಮಾನವ ಸಮುದಾಯದ ಹಸಿವು, ಬಡತನ ಮತ್ತು ಸಂಕಟದ ಜೀವನಕ್ಕೆ ನಿಸರ್ಗ ಹಾಗೂ ಮಾನವರ ನಡೆನುಡಿಗಳು ಹೇಗೆ ಕಾರಣವಾಗುತ್ತವೆ ಮತ್ತು ಅವನ್ನು ಪರಿಹರಿಸುವ ಹಾದಿ ಯಾವುದು ಎಂಬುದನ್ನು ತಿಳಿಯದಂತೆ ತಡೆಗಟ್ಟುತ್ತವೆ. ಮಾನವರು ತಮ್ಮ ಜೀವನದ ದುರಂತಕ್ಕೆ ಬ್ರಹ್ಮ ಇಲ್ಲವೇ ದೇವರು ಕಾರಣನೆಂಬ ನಂಬಿಕೆಗೆ ಒಳಗಾಗಿ, ತಮ್ಮ ಪಾಲಿನ ಹೊಣೆಗಾರಿಕೆಯನ್ನೇ ಮರೆಯುತ್ತಾರೆ.

32. ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ. (646–188)

(ಒತ್ತು=ಅದುಮು/ಹಿಸುಕು/ಅಮುಕು; ಹಣ್ಣು=ರಸದಿಂದ ಕೂಡಿ ಚೆನ್ನಾಗಿ ಮಾಗಿರುವ ಬೆಳೆ; ಮಾಡಿದಡೆ=ಮಾಡಿದರೆ;

ಒತ್ತಿ ಹಣ್ಣ ಮಾಡಿದಡೆ=ಕಾಯಿಯಾಗಿರುವುದನ್ನು ಕಿತ್ತು ತಂದು, ವ್ಯಕ್ತಿಯು ತನ್ನ ಎರಡು ಅಂಗಯ್ ನಡುವೆ ಅದನ್ನು ಇಟ್ಟುಕೊಂಡು ಬಲವಾಗಿ ಅಮುಕುವು ದರಿಂದ ಹುಳಿಯಾಗಿರುವ ಕಾಯಿ, ಸಿಹಿ ರಸದಿಂದ ತುಂಬಿದ ಹಣ್ಣಾಗುವುದಿಲ್ಲ. ಏಕೆಂದರೆ ಮರ/ಗಿಡದ ಬೇರುಗಳಿಂದ ಸಾರವನ್ನು ಹೀರಿಕೊಂಡು ಕಾಯಿ ದೊಡ್ಡದಾಗುತ್ತ, ಕಾಲಕ್ರಮೇಣ ಹಣ್ಣಾದಾಗ ಮಾತ್ರ ಅದರಲ್ಲಿ ರಸ ತುಂಬುತ್ತದೆ. ಈ

ರೀತಿ ಒಂದು ಕಾಯಿ ಹಣ್ಣಾಗಲು ಕಾಲ ಮತ್ತು ನಿಸರ್ಗದ ಕ್ರಿಯೆಗಳು ಅಗತ್ಯ;

ಅದು+ಎತ್ತಣ; ಅದು=ಆ ರೀತಿ ಹಿಸುಕಿದ ಕಾಯಿ; ಎತ್ತಣ=ಯಾವ ಬಗೆಯಿಂದ/ರೀತಿಯಿಂದ; ರುಚಿ+ಅಪ್ಪುದೋ; ರುಚಿ=ಸವಿ/ಹಿತ. ಮಾನವರು ತಿನ್ನುವ, ಕುಡಿಯುವ ಮತ್ತು ಉಣ್ಣುವ ವಸ್ತುಗಳಲ್ಲಿ ಉಪ್ಪು/ಹುಳಿ/ಕಾರ/ಸಿಹಿ/ಕಹಿ/ಒಗರು ಎಂಬ ಆರು ಬಗೆಯ ರಸಗಳನ್ನು ರುಚಿಯೆಂದು ಕರೆಯುತ್ತಾರೆ; ಅಪ್ಪುದೋ=ಆಗುವುದೋ/ಆಗುತ್ತದೆಯೇ;

ಅದೆತ್ತಣ ರುಚಿಯಪ್ಪುದೋ=ಹೇಗೆ ತಾನೆ ರುಚಿಯಾದ ಹಣ್ಣಾಗುತ್ತದೆ;

ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಬೇಕಾದರೆ, ಅದನ್ನು ಹಂತ ಹಂತವಾಗಿ ಮಾಡಬೇಕು. ಅದನ್ನು ಬಿಟ್ಟು, ಕಯ್ಗೊಂಡ ಕೂಡಲೇ ಮಾಡಿ ಮುಗಿಸಿ ನಲಿವನ್ನು ಪಡೆಯಬೇಕೆಂದು ಆತುರಪಟ್ಟರೆ ಕೆಲಸವು ಹದಗೆಡುತ್ತದೆಯಲ್ಲದೆ, ಅದರಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ.

33. ಕಿರಿಯರಾದಡೇನು ಹಿರಿಯರಾದಡೇನು
ಅರಿವಿಂಗೆ ಹಿರಿದು ಕಿರಿದುಂಟೆ. (1115–240)

(ಕಿರಿಯರ್+ಆದಡೆ+ಏನು; ಕಿರಿಯರ್=ವಯಸ್ಸಿನಲ್ಲಿ ಚಿಕ್ಕವರು; ಆದಡೆ= ಆದರೆ; ಏನು=ಪ್ರಶ್ನೆಯನ್ನು ಮಾಡುವಾಗ ಬಳಸುವ ಪದ/ಯಾವುದು;

ಹಿರಿಯರ್+ಆದಡೆ+ಏನು; ಹಿರಿಯರ್=ವಯಸ್ಸಿನಲ್ಲಿ ದೊಡ್ಡವರು; ಅರಿವು= ತಿಳುವಳಿಕೆ/ವಿವೇಕ; ಅರಿವಿಂಗೆ=ತಿಳುವಳಿಕೆಗೆ/ವಿವೇಕಕ್ಕೆ; ಹಿರಿದು=ದೊಡ್ಡದು/ ಮಿಗಿಲಾದುದು/ಹೆಚ್ಚಾದುದು; ಕಿರಿದು+ಉಂಟೆ; ಕಿರಿದು=ಚಿಕ್ಕದು/ಮಿತಿಯುಳ್ಳದ್ದು/ ಸಣ್ಣದಾದುದು; ಉಂಟೆ=ಇರುವುದೇ;

ಅರಿವಿಂಗೆ ಹಿರಿದು ಕಿರಿದುಂಟೆ=ಅರಿವಿನಲ್ಲಿ ಚಿಕ್ಕದು ದೊಡ್ಡದು ಎಂಬ ತಾರತಮ್ಯವಾಗಲಿ ಇಲ್ಲವೇ ಮೇಲುಕೀಳು ಎಂಬುದಾಗಲಿ ಇಲ್ಲ. ಏಕೆಂದರೆ ಒಳಿತಿನ ನಡೆನುಡಿಗಳಿಗೆ ನೆರವಾಗುವ ಎಲ್ಲ ಬಗೆಯ ತಿಳುವಳಿಕೆಯೂ ಅದು ಚಿಕ್ಕ ಸಂಗತಿಯಾಗಿರಲಿ ಇಲ್ಲವೇ ದೊಡ್ಡ ಸಂಗತಿಯಾಗಿರಲಿ ಮಾನವ ಬದುಕಿಗೆ ಅತ್ಯಗತ್ಯ;

ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ನಡೆನುಡಿಗಳನ್ನು ಸೂಚಿಸುವ ಅರಿವನ್ನು ದೊಡ್ಡದೆಂದು ತಿಳಿಯಬೇಕೆ ಹೊರತು,

ಅದನ್ನು ಹೇಳಿದವರು ವಯಸ್ಸಿನಲ್ಲಿ ಚಿಕ್ಕವರೋ ಇಲ್ಲವೇ ದೊಡ್ಡವರೋ ಎಂಬುದನ್ನು ನೋಡಬಾರದು.

34. ಕೌಪ ಕಾಷಾಂಬರವ ಕಟ್ಟಿ ಮಂಡೆ ಬೋಳಾದಡೇನಯ್ಯ ಮನದಲ್ಲಿ ನಿಜವಿಲ್ಲದನ್ನಕ್ಕರ. (1139–242)

(ಕೌಪ=ಲಂಗೋಟಿ/ಕಚ್ಚೆಪಡೆ; ಕಾಷಾಯ+ಅಂಬರ; ಕಾಷಾಯ=ಕೆಂಪನೆಯ ಬಣ್ಣದ; ಅಂಬರ=ಬಟ್ಟೆ/ಅರಿವೆ; ಕಾಷಾಂಬರ=ಕಾವಿ ಬಣ್ಣದ ಬಟ್ಟೆ/ಉಡುಗೆ; ಕಟ್ಟಿ=ಉಟ್ಟುಕೊಂಡು/ತೊಟ್ಟುಕೊಂಡು;

ಕೌಪ ಕಾಷಾಂಬರವ ಕಟ್ಟಿ=ಕುಟುಂಬದಲ್ಲಿ ಹೆಂಡತಿ ಮತ್ತು ಮಕ್ಕಳೊಡನೆ ಇದ್ದ ನಂಟನ್ನು ತೊರೆದು, ಮಯ್ಯಲ್ಲಿ ತುಡಿಯುವ ಕಾಮ ಮತ್ತು ಮನದಲ್ಲಿ ಮಿಡಿಯುವ ಕೆಟ್ಟ ಆಸೆಗಳಿಂದ ಬಿಡುಗಡೆಯನ್ನು ಪಡೆಯಲೆಂದು ಕಾವಿಬಟ್ಟೆ ಯನ್ನುಡುವುದು;

ಮಂಡೆ=ತಲೆ/ಬುರುಡೆ; ಬೋಳ್+ಆದಡೆ+ಏನ್+ಅಯ್ಯ; ಬೋಳ್= ಬರಿದಾದ/ಬೊಕ್ಕಾದ/ತಲೆಯಲ್ಲಿದ್ದ ಕೂದಲನ್ನು ತೆಗೆಸಿರುವುದು; **ಮಂಡೆ ಬೋಳಾಗುವುದು**=ಸಂಸಾರದಿಂದ ದೂರ ಸರಿದು ಸಂನ್ಯಾಸಿಯಾದ ವ್ಯಕ್ತಿಯು ತಲೆಯ ಮೇಲಣ ಕೂದಲನ್ನು ತೆಗೆಸುವುದು ಒಂದು ಬಗೆಯ ಆಚರಣೆಯಾಗಿದೆ. ಈ ರೀತಿ ಮಂಡೆ ಬೋಳಾಗಿರುವುದು ಸನ್ಯಾಸತ್ವದ ಒಂದು ಗುರುತು/ಸಂಕೇತ;

ಆದಡೆ=ಆದರೆ; ಏನ್=ಯಾವ ಪ್ರಯೋಜನ/ಯಾವುದು; ಅಯ್ಯ= ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಮನ+ಅಲ್ಲಿ; ಮನ=ಮನಸ್ಸು/ಚಿತ್ತ; ನಿಜ+ಇಲ್ಲದ+ಅನ್ನಕ್ಕರ; ನಿಜ=ಸತ್ಯ/ದಿಟ/ ವಾಸ್ತವ;

ಮನದಲ್ಲಿ ನಿಜವಿಲ್ಲದಿರುವುದು=ಮನದಲ್ಲಿ ನಿರಂತರವಾಗಿ ಮೂಡುವ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಒಳ್ಳೆಯತನ ದಿಂದ ಬಾಳಬೇಕೆಂಬ ನಿಲುವು ಇಲ್ಲದಿರುವುದು; ಅನ್ನಕ್ಕರ=ಅಂದ ಮೇಲೆ/ವರೆಗೆ;

ಬಹಿರಂಗದಲ್ಲಿ ಜನರ ಕಣ್ಣಿಗೆ ಸಂನ್ಯಾಸಿಯಂತೆ ಕಾಣಿಸಿಕೊಳ್ಳಲು ವ್ಯಕ್ತಿಯು ಉಡುವ ತೊಡುವ ಬಟ್ಟೆಬರೆಗಳಿಂದ ಯಾವ ಪ್ರಯೋಜನವೂ ಇಲ್ಲ. ಇದಕ್ಕೆ ಬದಲಾಗಿ ವ್ಯಕ್ತಿಯು ತನ್ನ ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತ,

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಹಂಬಲವನ್ನು ಅಂತರಂಗದ ಮನದಲ್ಲಿ ಹೊಂದಿರಬೇಕು.

35. ಘನತರವಾದ ಚಿತ್ರದ ರೂಹ ಬರೆಯಬಹುದಲ್ಲದೆ
ಪ್ರಾಣವ ಬರೆಯಬಹುದೆ ಅಯ್ಯಾ. (79–144)

(ಘನ=ದೊಡ್ಡದು/ಉತ್ತಮವಾದುದು/ಅತಿಶಯವಾದುದು; ತರ=ರೀತಿ/ಪ್ರಕಾರ; ಘನತರ=ದೊಡ್ಡದಾಗಿರುವ/ಉತ್ತಮವಾಗಿರುವ; ಚಿತ್ರ=ಗೆರೆ/ಬಣ್ಣಗಳ ವಿನ್ಯಾಸದಿಂದ ಕಲಾತ್ಮಕವಾಗಿ ರಚನೆಗೊಂಡಿರುವ ವಸ್ತು; ರೂಹು=ರೂಪ/ಆಕಾರ; ರೂಹ=ಆಕಾರವನ್ನು/ರೂಪವನ್ನು; ಬರೆಯಬಹುದು +ಅಲ್ಲದೆ; ಬರೆ=ರಚಿಸು/ಗೆರೆಯನ್ನು ಎಳೆ; ಬರೆಯಬಹುದು=ರಚಿಸಲು ಆಗುತ್ತದೆ; ಅಲ್ಲದೆ=ಹಾಗೆ ಮಾಡದೆ/ಅದನ್ನು ಬಿಟ್ಟು;

ಪ್ರಾಣ=ಉಸಿರು/ಜೀವ; **ಬರೆಯಬಹುದೇ**=ಬರೆಯಲು ಆಗುತ್ತದೆಯೇ/ಜಡವಾದ ಚಿತ್ರಕ್ಕೆ ಜೀವವನ್ನು ನೀಡಲು/ಉಸಿರನ್ನು ತುಂಬಲು ಆಗುತ್ತದೆಯೇ;

ನೋಡುವವರ ಕಣ್ಮನಗಳನ್ನು ಸೆಳೆಯುವಂತಹ ಗಿಡ, ಮರ, ಪ್ರಾಣಿ, ಹಕ್ಕಿ, ಹೆಣ್ಣು, ಗಂಡು ಮತ್ತು ನಿಸರ್ಗದ ಇರುವಿಕೆಯನ್ನು ಕುರಿತ ಸುಂದರವಾದ ಚಿತ್ರಗಳನ್ನು ಕಲಾತ್ಮಕವಾಗಿ ರಚಿಸುವ ಕಯ್ ಚಳಕವನ್ನು ಕಲಾವಿದನಾದ ವ್ಯಕ್ತಿಯು ಹೊಂದಿರುತ್ತಾನೆ. ಆದರೆ ಚಿತ್ರಗಾರನು ತಾನು ರಚಿಸಿದ ಚಿತ್ರಗಳಿಗೆ ಜೀವವನ್ನು ತುಂಬಿ, ಅವು ಚೇತನಗೊಂಡು ಉಸಿರಾಡುವಂತೆ/ಬಾಳುವಂತೆ ಮಾಡಲಾರ. ಜಗತ್ತಿನಲ್ಲಿ ಮಾನವನಿಗಿರುವ ಶಕ್ತಿಯ ಮತ್ತು ಕುಶಲತೆಯ ಇತಿಮಿತಿಯನ್ನು ಈ ರೂಪಕ ಸೂಚಿಸುತ್ತಿದೆ.

36. ತನುವ ಗೆಲಲರಿಯದೆ ಮನವ ಗೆಲಲರಿಯದೆ
ಧನವ ಗೆಲಲರಿಯದೆ ಭ್ರಮೆಗೊಂಡಿತ್ತು ಲೋಕವೆಲ್ಲವು. (1217–250)

(ತನು=ಮಯ್/ದೇಹ; ಗೆಲಲ್+ಅರಿಯದೆ; ಗೆಲ್=ಜಯಿಸು; ಅರಿಯದೆ=ತಿಳಿಯದೆ; ಗೆಲಲರಿಯದೆ=ತನ್ನ ಹತೋಟಿಯಲ್ಲಿ/ನಿಯಂತ್ರಣದಲ್ಲಿ ಇಟ್ಟುಕೊಂಡು ಬಾಳುವುದನ್ನು ತಿಳಿಯದೆ;

ತನುವ ಗೆಲಲರಿಯದೆ=ಮಯ್ಯನ್ನು ಹೇಗೆ ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬುದನ್ನು ತಿಳಿಯದೆ /ವ್ಯಕ್ತಿಯು ಮಾಡುವ ಎಲ್ಲಾ ಬಗೆಯ ಕೆಲಸಗಳಿಗೂ

ದೇಹವೇ ಒಂದು ಉಪಕರಣ. ಆದ್ದರಿಂದ ದೇಹವನ್ನು ಗಟ್ಟಿಮುಟ್ಟಾಗಿ ಯಾವುದೇ ರೋಗರುಜಿನಗಳು ತಟ್ಟದಂತೆ ಚೆನ್ನಾಗಿ ಇಟ್ಟುಕೊಳ್ಳಬೇಕೆಂಬುದನ್ನು ಅರಿಯದೆ;

ಮನ=ಮನಸ್ಸು; **ಮನವ ಗೆಲಲರಿಯದೆ**=ಮನದಲ್ಲಿ ತುಡಿಯುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯದನ್ನು ನಡೆನುಡಿಗಳಲ್ಲಿ ಅಳವಡಿಸಿಕೊಂಡು ಬಾಳುವುದನ್ನು ತಿಳಿಯದೆ;

ಧನ=ಹಣ/ಒಡವೆ ವಸ್ತು/ಆಸ್ತಿಪಾಸ್ತಿ/ಸಂಪತ್ತು; **ಧನವ ಗೆಲಲರಿಯದೆ**= ಸಂಪಾದಿಸಿದ ಹಣವನ್ನು ದುಂದು ವೆಚ್ಚ ಮಾಡಿ ಕಳೆಯದೆ ಇಲ್ಲವೇ ಕೆಟ್ಟ ಚಟಗಳಿಗಾಗಿ ಬಳಸದೆ ತನ್ನ, ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಳಸಬೇಕೆಂಬ ಎಚ್ಚರವಿಲ್ಲದೆ;

ಭ್ರಮೆ+ಕೊಂಡಿತ್ತು; ಭ್ರಮೆ=ತಪ್ಪುಗ್ರಹಿಕೆ/ಕಲ್ಪಿತ ಸಂಗತಿ; ಭ್ರಮೆಗೊಂಡಿತ್ತು= ಇಲ್ಲದ್ದನ್ನು ಇದೆಯೆಂಬ/ಇರುವುದನ್ನು ಇಲ್ಲವೆಂಬ ಒಳಮಿಡಿತಗಳಿಂದ ಕೂಡಿರುವುದು; ಲೋಕ+ಎಲ್ಲವು; ಲೋಕ=ಜಗತ್ತು/ಜನಸಮುದಾಯ; ಎಲ್ಲ= ಪ್ರತಿಯೊಂದನ್ನು ಒಳಗೊಂಡಿರುವುದು;

ಭ್ರಮೆಗೊಂಡಿತ್ತು ಲೋಕವೆಲ್ಲವು=ಜಗತ್ತಿನ ಜನಸಮುದಾಯವೆಲ್ಲವೂ ಜೀವನದ ಉದ್ದಕ್ಕೂ ಬಹುಬಗೆಯ ತಪ್ಪುಗ್ರಹಿಕೆಗಳಿಂದಲೇ ತೊಳಲಾಡುತ್ತಿದೆ;

ಮಾನವ ಜೀವಿಯ ತನ್ನ ಬದುಕಿನಲ್ಲಿ ಒಲವು ನಲಿವು ನೆಮ್ಮದಿಯಿಂದ ಎಲ್ಲರೊಡನೆ ಬಾಳಬೇಕಾದರೆ ತನ್ನ ಮಯ್ ಮನಗಳನ್ನು ಕೆಟ್ಟದ್ದರ ಕಡೆಗೆ ಜಾರದಂತೆ ಹತೋಟಿಯಲ್ಲಿಟ್ಟುಕೊಂಡು, ಸಂಪಾದಿಸಿದ ಹಣವನ್ನು ದುಂದು ಮಾಡದೆ/ಕೆಟ್ಟ ಚಟಗಳಿಗೆ ಬಳಸದೆ/ಹಣವನ್ನು ದೊಡ್ಡದೆಂದು ತಿಳಿದು ಹಣಕ್ಕೆ ದಾಸನಾಗದೆ, ಎಚ್ಚರದಿಂದ ಕೂಡಿರಬೇಕು.

37. ತನ್ನ ತಾನರಿದಡೆ ನುಡಿಯೆಲ್ಲ ತತ್ವ ನೋಡಾ
ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ. (1208–249)

(ತನ್ನ=ತನ್ನನ್ನು; ತಾನ್+ಅರಿದಡೆ; ತಾನು=ವ್ಯಕ್ತಿಯು; ಅರಿವು=ತಿಳುವಳಿಕೆ/ ವಿವೇಕ; ಅರಿದಡೆ=ತಿಳಿದುಕೊಂಡರೆ;

'ತನ್ನನ್ನು ತಾನು ತಿಳಿಯುವುದು' ಎಂದರೆ ಸಾಮಾಜಿಕ ಜೀವಿಯಾದ ಮಾನವನ ದೇಹವು ಒಂದು ಕಡೆಯಲ್ಲಿ ನಿಸರ್ಗ ಸಹಜವಾದ ಹಸಿವು ಮತ್ತು ಕಾಮದಿಂದ

ಕೂಡಿದ್ದರೆ, ಮತ್ತೊಂದೆಡೆಯಲ್ಲಿ ಅವನ ನಡೆನುಡಿಗಳನ್ನು ನಿಯಂತ್ರಿಸುವಂತಹ ಸಾಮಾಜಿಕ ಕಟ್ಟುಪಾಡುಗಳು, ಸಂಪ್ರದಾಯಗಳು, ನಂಬಿಕೆಗಳು ಮತ್ತು ರಾಜ್ಯಾಡಳಿತದ ನಿಯಮಗಳು ಬದುಕನ್ನು ಸುತ್ತುವರಿದಿರುತ್ತವೆ. ಆದ್ದರಿಂದಲೇ ವ್ಯಕ್ತಿಯ ಮಯ್ ಮನಸ್ಸು ಸದಾಕಾಲ ಒಳಿತು ಕೆಡುಕಿನ ಇಬ್ಬಗೆಯ ತೊಳಲಾಟದಲ್ಲಿ ಸಿಲುಕಿರುತ್ತವೆ. ಈ ವಾಸ್ತವವನ್ನು ಅರಿತುಕೊಂಡು ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿ, ಒಳ್ಳೆಯ ನಡೆನುಡಿಗಳಿಂದ ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಎಚ್ಚರವನ್ನು ಹೊಂದಿರುವುದು;

ನುಡಿ+ಎಲ್ಲ; ನುಡಿ=ಮಾತು/ಸೊಲ್ಲು; ಎಲ್ಲ=ಸಕಲ/ಸಮಗ್ರ;

ತತ್ವ=ದಿಟ/ಸತ್ಯ/ವಾಸ್ತವವನ್ನು ಒಳಗೊಂಡಿರುವ ವಿಚಾರ/ಸಂಗತಿ; **ನುಡಿಯೆಲ್ಲ ತತ್ವ**=ಆಡಿದ ಮಾತುಗಳು ವಾಸ್ತವದ ಸಂಗತಿಗಳಿಂದ ಕೂಡಿರುತ್ತವೆ;

ನೋಡು=ಕಾಣು/ತಿಳಿ; ತಾ=ತಾನು/ವ್ಯಕ್ತಿಯು; ಮರೆ=ಕಡೆಗಣಿಸು/ತಿರಸ್ಕರಿಸು/ನೆನಪಿಸಿಕೊಳ್ಳದಿರು; ಮರೆದಡೆ=ಮರೆತರೆ;

ತನ್ನ ತಾ ಮರೆತಡೆ=ನಿಸರ್ಗ ಮತ್ತು ಸಮಾಜ ತನ್ನ ನಡೆನುಡಿಗಳನ್ನು ರೂಪಿಸುತ್ತಿದೆಯೆಂಬ ವಾಸ್ತವವನ್ನು ಮರೆತರೆ/ಕಡೆಗಣಿಸಿದರೆ; ಮಾಯೆ=ಮಯ್ ಮನಗಳಲ್ಲಿ ಬಯಕೆಗಳನ್ನು ಕೆರಳಿಸಿ ತಮ್ಮತ್ತ ಸೆಳೆಯುವ ವಸ್ತು/ಜೀವಿ/ವ್ಯಕ್ತಿಗಳು;

ನುಡಿಯೆಲ್ಲಾ ಮಾಯೆ=ವ್ಯಕ್ತಿಯು ಆಡಿದ ನುಡಿಯೆಲ್ಲವೂ ವಾಸ್ತವಕ್ಕೆ ದೂರವಾಗಿರುತ್ತವೆ. ಇಂತಹ ಮಾತುಗಳಿಂದಾಗಿ ವ್ಯಕ್ತಿಯ ಬದುಕು ಹಲವು ಬಗೆಯ ಸಂಕಟ/ದುರಂತಗಳಿಗೆ ಗುರಿಯಾಗುತ್ತದೆ; ನೋಡಾ=ಕಂಡೆಯಾ/ತಿಳಿದಿರುವೆಯಾ;

ಲೋಕದಲ್ಲಿನ ವಾಸ್ತವ ಸಂಗತಿಗಳನ್ನು ಅರಿತುಕೊಂಡು ವ್ಯಕ್ತಿಯು ಆಡುವ ಮಾತುಗಳು ತನ್ನನ್ನೂ ಒಳಗೊಂಡಂತೆ ಎಲ್ಲರಿಗೂ ಒಳಿತನ್ನು ಉಂಟುಮಾಡುತ್ತವೆ. ಈ ವಾಸ್ತವವನ್ನು ಅರಿಯದೆ ಆಡುವ ಮಾತುಗಳು ಬದುಕನ್ನು ಗೊಂದಲಕ್ಕೆ ಈಡುಮಾಡಿ ಕೇಡನ್ನುಂಟುಮಾಡುತ್ತವೆ.

38. ನಿರ್ಣಯವನರಿಯದ ಮನವೆ ದುಗುಡವನಾಹಾರಗೊಂಡೆಯಲ್ಲಾ. (45–141)

(ನಿರ್ಣಯ+ಅನ್+ಅರಿಯದ; ನಿರ್ಣಯ=ಯಾವುದೇ ಒಂದು ಸಂಗತಿಯ ಬಗ್ಗೆ ಏನನ್ನು ಮಾಡಬೇಕು ಇಲ್ಲವೇ ಮಾಡಬಾರದು ಎಂಬುದನ್ನು

ತೀರ್ಮಾನಿಸುವುದು; ಅರಿ=ತಿಳಿ; ಅರಿಯದ=ತಿಳಿಯಲಾಗದ/ಗೊತ್ತುಪಡಿಸಿಕೊಳ್ಳ ಲಾಗದ; ಮನ=ಮನಸ್ಸು;

ನಿರ್ಣಯವನರಿಯದ ಮನ=ವ್ಯಕ್ತಿಯ ದಿನನಿತ್ಯದ ವ್ಯವಹಾರಗಳಲ್ಲಿ ತೊಡಕು ಉಂಟಾದಾಗ, ಅದನ್ನು ಹೇಗೆ ಪರಿಹರಿಸಿಕೊಂಡು ಮುನ್ನಡೆಯಬೇಕು ಎಂಬುದನ್ನು ನಿಶ್ಚಯಿಸಲಾಗದೆ, ಇಬ್ಬಗೆಯಲ್ಲಿ ಚಂಚಲತೆಯಿಂದ ಮನಸ್ಸು ತೊಳಲಾಡುವುದು;

ದುಗುಡ+ಅನ್+ಆಹಾರ+ಕೊಂಡೆ+ಅಲ್ಲಾ; ದುಗುಡ=ಕಳವಳ/ತಲ್ಲಣ/ ಆತಂಕ; ಆಹಾರ=ಕೂಳು/ಅನ್ನ; ಕೊಳ್=ತೆಗೆದುಕೊ/ಸ್ವೀಕರಿಸು/ಪಡೆಯುವುದು; ಅಲ್ಲಾ=ಅಲ್ಲವೇ; ಕೊಂಡೆಯಲ್ಲಾ=ಪಡೆದುಕೊಂಡೆಯಲ್ಲವೇ/ತೆಗೆದುಕೊಂಡೆ ಯಲ್ಲವೇ; **'ಆಹಾರಗೊಂಡೆ'** ಎಂಬ ಪದಕಂತೆಯು 'ಗುರಿಯಾದೆ/ಹೊಂದಿದೆ/ ನಿನ್ನದಾಗಿಸಿಕೊಂಡೆ' ಎಂಬ ತಿರುಳಿನಲ್ಲಿ ಬಳಕೆಯಾಗಿರುವ ನುಡಿಗಟ್ಟು;

ದುಗುಡವನಾಹಾರಗೊಂಡೆ=ಮಾನಸಿಕ ಒತ್ತಡಕ್ಕೆ ಒಳಗಾಗಿ ಆತಂಕ/ತಲ್ಲಣ/ ಆಕ್ರೋಶ/ಹೆದರಿಕೆ/ಕಳವಳದ ಒಳಮಿಡಿತಗಳಿಂದ ತೊಳಲಾಡುತ್ತಿರುವೆ;

ಜೀವನದಲ್ಲಿ ಯಾವುದೇ ಬಗೆಯ ಅಡೆತಡೆಗಳು ಉಂಟಾದಾಗ ವ್ಯಕ್ತಿಯು ಕಂಗಾಲಾಗಿ ಹೆದರಿ ಮುದುಡಿಕೊಳ್ಳದೆ, ಕೆಚ್ಚು ಮತ್ತು ವಿವೇಕದಿಂದ ಸಮಸ್ಯೆಯನ್ನು ಎದುರಿಸಿ ಮುನ್ನಡೆಯಬೇಕು. ಇಲ್ಲದಿದ್ದರೆ ಮಾನಸಿಕ ಒತ್ತಡಕ್ಕೆ ಒಳಗಾಗಿ ವ್ಯಕ್ತಿಯು ನಿರಂತರವಾದ ಸಂಕಟದಿಂದ ನರಳತೊಡಗುತ್ತಾನೆ.

39. ನೋಡೂದ ನೋಡಲರಿಯದೆ
ಕೆಟ್ಟಿತ್ತೀ ಲೋಕವೆಲ್ಲ. (585–183)

(ನೋಡು=ಕಾಣು/ತಿಳಿ/ಅರಿ; ನೋಡೂದ=ನೋಡಬೇಕಾದುದನ್ನು/ ತಿಳಿಯಬೇಕಾದುದನ್ನು; ನೋಡಲ್+ಅರಿಯದೆ; ಅರಿಯದೆ=ತಿಳಿಯದೆ;

ಕೆಟ್ಟು+ಇತ್ತು+ಈ; ಕೆಡು=ನಾಶವಾಗು/ಹಾಳಾಗು/ಹದಗೆಡು; ಕೆಟ್ಟಿತ್ತು= ಹಾಳಾಯಿತು/ನಾಶವಾಯಿತು; ಲೋಕ+ಎಲ್ಲ; **ಈ ಲೋಕವೆಲ್ಲ**=ಇಡೀ ಜಗತ್ತು/ ಜನಸಮುದಾಯ;

'ನೋಡುವುದು' ಎಂಬ ಪದ ಒಂದು ರೂಪಕವಾಗಿ ಬಳಕೆಯಾಗಿದೆ. ಮಾನವ ಸಮುದಾಯದ ಬದುಕಿನಲ್ಲಿ ನಲಿವು ನೆಮ್ಮದಿಗಿಂತಲೂ ನೋವು ಸಂಕಟಗಳೇ ಹೆಚ್ಚಾಗಿವೆ. ಹಸಿವು, ಬಡತನ, ರೋಗರುಜಿನಗಳಿಂದ ನರಳುವುದರ ಜತೆಗೆ ಕೊಲೆ

ಸುಲಿಗೆ ಹಿಂಸೆಯ ನಡೆನುಡಿಗಳಿಂದ ಮಾನವರ ಬಾಳು ದುರಂತಮಯವಾಗಿದೆ.

ಇದಕ್ಕೆ ಕಾರಣವೇನೆಂಬುದನ್ನು ನೋಡಿದಾಗ ಜಾತಿ, ಮತ ಮತ್ತು ದೇವರ ಹೆಸರಿನಲ್ಲಿ ಮಾನವ ಸಮುದಾಯ ಮಾಡಿಕೊಂಡಿರುವ ಕಟ್ಟುಪಾಡುಗಳು ಮಾನವರನ್ನು ನೂರೆಂಟು ಬಗೆಯ ಸಾಮಾಜಿಕ ಗುಂಪುಗಳನ್ನಾಗಿ ವಿಂಗಡಿಸಿ, ಪರಸ್ಪರ ವ್ಯಕ್ತಿಗಳ ನಡುವೆ ಅಸೂಯೆ, ಅಪನಂಬಿಕೆ ಮತ್ತು ಹಗೆತನವನ್ನುಂಟು ಮಾಡಿವೆ. ಇದರಿಂದಾಗಿ ಮಾನವರ ದಿನನಿತ್ಯದ ಬದುಕಿನಲ್ಲಿ ನೂರಾರು ಬಗೆಯ ಕಲಹದ ಮತ್ತು ಸೇಡಿನ ಸಂಗತಿಗಳು ಎಲ್ಲೆಡೆಯು ಕಂಡುಬರುತ್ತಿವೆ.

ಮಾನವ ಸಮುದಾಯದ ಸಂಕಟಕ್ಕೆ ಮಾನವರ ಕೆಟ್ಟ ನಡೆನುಡಿಗಳೇ ಕಾರಣ ವೆಂಬುದನ್ನು ಅರಿತುಕೊಂಡು, ಪ್ರತಿಯೊಬ್ಬ ವ್ಯಕ್ತಿಯು ತನಗೆ ಜೀವನದಲ್ಲಿ ಒಳಿತನ್ನು ಬಯಸುವಂತೆಯೇ ಇತರರಿಗೆ ಒಳಿತನ್ನು ಮಾಡುವಂತಹ ಒಳ್ಳೆಯ ನಡೆನುಡಿಗಳಿಂದ ಬಾಳುವುದನ್ನು ಕಲಿಯುವುದು ಮತ್ತು ತನ್ನ ಬದುಕಿನೊಡನೆ ಇಡೀ ಮಾನವ ಸಮುದಾಯದ ಬದುಕು ಹೆಣೆದುಕೊಂಡಿದೆ ಎಂಬುದನ್ನು ಅರಿತುಕೊಂಡು, ಪರಸ್ಪರ ಪ್ರೀತಿ ಮತ್ತು ಕರುಣೆಯ ನಡೆನುಡಿಗಳಿಂದ ಬಾಳಬೇಕೆಂಬುದನ್ನು ಮನಗಾಣುವುದು ಎಂಬ ತಿರುಳಿನಲ್ಲಿ 'ನೋಡುವುದು' ಎಂಬ ಪದ ಬಳಕೆಯಾಗಿದೆ.)

40. ಭ್ರಾಂತಿನ ಭ್ರಮೆಯೊಳಗೆ ಬಳಲುತ್ತಿರಲು
ಮಾತಿನ ಮಾತಿನೊಳಗೆ ಅರಿವೆಂಬುದುಂಟೆ. (518–178)

(ಭ್ರಾಂತು=ತಪ್ಪು ತಿಳಿವಳಿಕೆ/ತಾನು ತಿಳಿದಿರುವುದೇ ಸರಿ ಎನ್ನುವ ಒಳಮಿಡಿತ; ಭ್ರಾಂತಿನ=ತಪ್ಪು ತಿಳುವಳಿಕೆಯಿಂದ ಕೂಡಿದ; ಭ್ರಮೆ+ಒಳಗೆ; ಭ್ರಮೆ=ಇರುವುದನ್ನು ಇಲ್ಲವೆಂದು, ಇಲ್ಲದಿರುವುದನ್ನು ಇದೆಯೆಂದು ನಂಬಿರುವುದು; ಬಳಲುತ್ತ+ ಇರಲು; ಬಳಲು=ಆಯಾಸಗೊಳ್ಳುವುದು/ದಣಿಯುವುದು; ಇರಲು=ಇದ್ದಾಗ/ಇರುವಾಗ;

ಮಾತು=ನುಡಿ/ಸೊಲ್ಲು; ಮಾತಿನ+ಒಳಗೆ; ಅರಿವು+ಎಂಬುದು+ಉಂಟೆ; ಅರಿವು=ತಿಳುವಳಿಕೆ; ಎಂಬುದು=ಎನ್ನುವುದು; ಉಂಟೆ=ಇದೆಯೇ/ಇರುತ್ತದೆಯೇ;

ಮಾತಿನ ಮಾತಿನೊಳಗೆ ಅರಿವೆಂಬುದುಂಟೆ=ಮಾತಿಗೆ ಮಾತನ್ನು ಜೋಡಿಸಿ ಕೊಂಡು ಇಲ್ಲವೇ ಮಾತಿಗೆ ಮಾತನ್ನು ಬೆಳೆಸಿಕೊಂಡು ಆಡುವುದರಿಂದ ಅರಿವು ದೊರೆಯುವುದಿಲ್ಲ;

ಯಾವುದೇ ಸಂಗತಿಯ ಬಗೆಗಿನ ವಾಸ್ತವವನ್ನು/ಸತ್ಯವನ್ನು/ನಿಜವನ್ನು ತಿಳಿದುಕೊಳ್ಳದೇ, ತಮಗೆ ಗೊತ್ತಿರುವುದೇ ಸರಿಯೆಂದು ವಾದ ಮಾಡುವ ವ್ಯಕ್ತಿಗಳ ಮಾತಿನಲ್ಲಿ ಅರಿವು ಕಂಡುಬರುವುದಿಲ್ಲ.)

41. ಸಹಜವ ನುಡಿದಡೆ ಸೇರುವರಿಲ್ಲ ಕಾಣಿರಣ್ಣಾ
ಅಸಹಜಕ್ಕಲ್ಲದೆ ಲೋಕ ಭಜಿಸದು. (1555–284)

(ಸಹಜ=ವಾಸ್ತವವಾಗಿರುವುದು; ನುಡಿದಡೆ=ನುಡಿದರೆ/ಹೇಳಿದರೆ; ಸೇರುವರು+ಇಲ್ಲ; ಸೇರು=ಜತೆಯಾಗುವುದು/ಹೊಂದಿಕೊಳ್ಳುವುದು; ಸೇರುವರಿಲ್ಲ=ಮೆಚ್ಚುವುದಿಲ್ಲ/ಒಪ್ಪಿಕೊಳ್ಳುವುದಿಲ್ಲ/ಜತೆಗೂಡುವುದಿಲ್ಲ;

ಕಾಣಿರಿ+ಅಣ್ಣ; ಕಾಣಿರಿ=ನೋಡಿರಿ/ತಿಳಿದುಕೊಳ್ಳಿ; ಅಣ್ಣ=ಗಂಡಸರೊಡನೆ ಮಾತನಾಡುವಾಗ ವ್ಯಕ್ತಿಯು ತನ್ನ ಒಲವು ನಲಿವು ಆದರವನ್ನು ಸೂಚಿಸಲು ಬಳಸುವ ಪದ. ಕೆಲವೊಮ್ಮೆ ಅಣಕ/ಹಾಸ್ಯ ಮಾಡುವಾಗಲು 'ಅಣ್ಣ' ಎಂಬ ಪದವನ್ನು ಚುಚ್ಚುನುಡಿಯಾಗಿ ಬಳಸಲಾಗುತ್ತದೆ;

ಸಹಜವ ನುಡಿದರೆ ಸೇರುವರಿಲ್ಲ=ಇರುವುದನ್ನು ಇದ್ದಂತೆ ಹೇಳಿದರೆ ಇಲ್ಲವೇ ಕಂಡದ್ದನ್ನು ಕಂಡಂತೆ ನುಡಿದರೆ ಅಂತಹ ನುಡಿಗಳಿಗೆ ಜನರಿಂದ ಹೆಚ್ಚು ಮನ್ನಣೆಯು ದೊರೆಯುವುದಿಲ್ಲ;

ಅಸಹಜಕ್ಕೆ+ಅಲ್ಲದೆ; ಅಸಹಜ=ದಿಟವಲ್ಲದ್ದು/ವಾಸ್ತವಕ್ಕೆ ದೂರವಾದುದು; **ಅಸಹಜಕ್ಕೆ**=ಸುಳ್ಳು ಸಂಗತಿಗಳಿಗೆ/ಜನರ ಮನದಲ್ಲಿ ಸಂಶಯ, ಹಗೆತನ ಮತ್ತು ಸೇಡಿನ ಒಳಮಿಡಿತಗಳನ್ನು ಕೆರಳಿಸುವಂತಹ ಸಂಗತಿಗಳಿಗೆ; ಅಲ್ಲದೆ=ಅಂತಹ ವಿಚಾರಗಳಿಗೆ ಮಾತ್ರ;

ಲೋಕ=ಜಗತ್ತು/ಜನಸಮುದಾಯ; ಭಜನೆ=ದೇವರ ನಾಮವನ್ನು/ ಮಂತ್ರಗಳನ್ನು ದೊಡ್ಡ ದನಿಯಲ್ಲಿ ವಾದ್ಯಗಳ ನಾದದ ಜತೆಗೂಡಿ ಹಾಡುವುದು/ ಉಚ್ಚರಿಸುವುದು; ಭಜಿಸು=ಮೆಚ್ಚಿಕೊಂಡು ಕೊಂಡಾಡುವುದು/ನಂಬಿಕೊಂಡು ಹೊಗಳುವುದು;

ಲೋಕ ಭಜಿಸದು=ಲೋಕದ ಜನರು ಅಸಹಜವಾದುದನ್ನು ಮೆಚ್ಚಿ ಕೊಂಡಾಡುತ್ತಾರೆಯೇ ಹೊರತು ಸಹಜವಾದುದನ್ನು ಮೆಚ್ಚಿಕೊಳ್ಳುವುದಿಲ್ಲ.

ಸುಳ್ಳಿನ/ಕೆಟ್ಟತನದ/ಹಗೆತನದ/ಕ್ರೂರತನದ ಸಂಗತಿಗಳನ್ನು ಜನರು ಬಹುಬೇಗ

ನಂಬುತ್ತಾರೆಯೇ ಹೊರತು ನಿಜವಾದ/ಒಳ್ಳೆಯ/ಪ್ರೀತಿಯ/ಕರುಣೆಯಿಂದ ಕೂಡಿದ ಸಂಗತಿಗಳನ್ನು ಕಡೆಗಣಿಸುತ್ತಾರೆ ಎಂಬ ತಿರುಳಿನಲ್ಲಿ ಬಳಕೆಯಾಗಿದೆ. 'ನಿಜವು ನಾಲ್ಕು ಹೆಜ್ಜೆಗಳನ್ನಿಡುವ ಸಮಯಕ್ಕೆ, ಸುಳ್ಳು ಇಡೀ ಜಗತ್ತನ್ನೆ ಸುತ್ತಿ ಬಂದಿರುತ್ತದೆ' ಎಂಬ ಮಾತು ಜನಬಳಕೆಯಲ್ಲಿದೆ.)

42. ಇಲ್ಲದ ಶಂಕೆಯನು ಉಂಟೆಂದು ಭಾವಿಸಿದಡೆ
ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿಪ್ಪುದು. (936–224)

ಇಲ್ಲದ=ವಾಸ್ತವದಲ್ಲಿ ಕಂಡು ಬರದ; ಶಂಕೆ=ಕೇಡಾಗಬಹುದೆಂದು ಮನದಲ್ಲಿ ಹೆದರಿಕೆಯಿಂದ ತಲ್ಲಣಿಸುವುದು; ಉಂಟು+ ಎಂದು; ಉಂಟು=ಇದೆ/ಇರುವುದು; ಭಾವಿಸು=ತಿಳಿ/ಆಲೋಚಿಸು; ಭಾವಿಸಿದಡೆ =ತಿಳಿದುಕೊಂಡರೆ/ಕಲ್ಪಿಸಿಕೊಂಡರೆ;

ರೂಪ+ಆಗಿ; ರೂಪ=ಆಕಾರ; ಕಾಡುತ್ತ+ಇಪ್ಪುದು; ಕಾಡು=ಪೀಡಿಸು/ಹಿಂಸಿಸು; ಇಪ್ಪುದು=ಇರುವುದು; **ರೂಪಾಗಿ ಕಾಡುತ್ತಿಪ್ಪುದು**=ಮನದಲ್ಲಿ ಉಂಟಾದ ಹೆದರಿಕೆಯೇ ಒಂದು ರೂಪನ್ನು ಪಡೆದು, ನಿಜವಾಗಿ ಎದುರಿಗೆ ಬಂದಂತೆ ಆಗುತ್ತದೆ;

ಜೀವನದಲ್ಲಿ ತೊಡಕು ಉಂಟಾದಾಗ ಮುಂದೇನಾಗುವುದೋ ಎಂಬ ಹೆದರಿಕೆಯಿಂದ ವ್ಯಕ್ತಿಯು ತನ್ನ ಮನದಲ್ಲಿ ನಾನಾ ಬಗೆಯ ಕಲ್ಪನೆಗಳನ್ನು ಮಾಡಿಕೊಳ್ಳತೊಡಗಿದರೆ, ಅದು ನಿಜವಾಯಿತೇನೋ ಎಂಬಂತೆ ಕೆಟ್ಟದ್ದೇ ಕಣ್ಣ ಮುಂದೆ ಸುಳಿದಂತಾಗುತ್ತದೆ.

ಉದಾಹರಣೆ: ಕತ್ತಲೆಯಿಂದ ತುಂಬಿರುವ ದಾರಿಯಲ್ಲಿ ವ್ಯಕ್ತಿಯು ಒಬ್ಬಂಟಿಯಾಗಿ ನಡೆದುಕೊಂಡು ಹೋಗುತ್ತಿರುವಾಗ ವಾಸ್ತವದಲ್ಲಿ ಇಲ್ಲದ ದೆವ್ವವನ್ನು ನೆನೆಸಿಕೊಂಡು ಅಂಜತೊಡಗಿದರೆ, ದಾರಿಯ ಇಕ್ಕೆಲದಲ್ಲಿರುವ ಬೇಲಿಯಲ್ಲಿನ ಮರಗಿಡಗಳ ಕೊಂಬೆರೆಂಬೆಗಳೇ ದೆವ್ವದ ಆಕಾರದಲ್ಲಿ ಗೋಚರಿಸಿ ಕಾಡತೊಡಗುತ್ತದೆ;

ಜೀವನದಲ್ಲಿ ತೊಡಕು ಉಂಟಾದಾಗ ಗಟ್ಟಿ ಮನಸ್ಸಿನಿಂದ ಮತ್ತು ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿಂದ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕೇ ಹೊರತು, ಇಲ್ಲಸಲ್ಲದ ಹೆದರಿಕೆಯಿಂದ ತತ್ತರಿಸಬಾರದು.

43. ಹಸಿವುಳ್ಳನ್ನಕ್ಕ ವ್ಯಾಪಾರ ಬಿಡದು
ಸೀತ ಉಳ್ಳನ್ನಕ್ಕ ಉಪಾಧಿಕೆ ಬಿಡದು
ಮಾತುಳ್ಳನ್ನಕ್ಕ ಬೂಟಾಟಿಕೆ ಬಿಡದು . (1593–287)

ಹಸಿವು+ಉಳ್+ಅನ್ನಕ್ಕ; ಹಸಿವು=ಉಂಡು ತಿಂದು ಕುಡಿದು ಹೊಟ್ಟೆಯನ್ನು ತುಂಬಿಸಿಕೊಳ್ಳುವ ಅಗತ್ಯ. ಜೀವಿಯು ಉಳಿದು ಬೆಳೆದು ಬಾಳುವುದಕ್ಕೆ ಪ್ರತಿನಿತ್ಯವೂ ಹಸಿವನ್ನು ತಣಿಸಿಕೊಳ್ಳಲೇಬೇಕು; ಅನ್ನಕ್ಕ=ವರೆಗೆ/ತನಕ; ಉಳ್ಳನ್ನಕ್ಕ=ಇರುವ ವರೆಗೆ/ಇರುವ ತನಕ;

ವ್ಯಾಪಾರ=ಏನನ್ನಾದರೂ ಕೊಡುವ ತೆಗೆದುಕೊಳ್ಳುವ ವ್ಯವಹಾರವನ್ನು ಇತರರೊಡನೆ ನಡೆಸುವುದು/ಒಂದಲ್ಲ ಒಂದು ಬಗೆಯ ಚಟುವಟಿಕೆಯಲ್ಲಿ/ ಕೆಲಸದಲ್ಲಿ ತೊಡಗಿರುವುದು; ಬಿಡು=ತೊರೆ/ತ್ಯಜಿಸು; ಬಿಡದು=ಬಿಡುವುದಿಲ್ಲ/ ಬಿಟ್ಟುಹೋಗುವುದಿಲ್ಲ/ಇದ್ದೇ ಇರುತ್ತದೆ;

ಶೀತ>ಸೀತ; ಸೀತ=ಚಳಿ ಮಳೆ ಗಾಳಿಯಿಂದ ಉಂಟಾಗುವ ತಣ್ಣನೆಯ ಕೊರೆತ/ತಂಡಿ; ಉಪಾಧಿಕೆ=ತೊಂದರೆ/ಹಿಂಸೆ/ಯಾತನೆ; ಮಾತು+ ಉಳ್+ಅನ್ನಕ್ಕರ; ಬೂಟಾಟಿಕೆ=ನಟನೆ/ಸೋಗು/ತೋರಿಕೆಯ ನಡೆನುಡಿ;

ವ್ಯಕ್ತಿಯು ಜೀವಂತವಾಗಿರುವ ತನಕ ನಿಸರ್ಗ ಸಹಜವಾಗಿ ಹಸಿವು ಮತ್ತು ರೋಗರುಜಿನಗಳಿಗೆ ಆತನ ದೇಹ ಒಳಗಾಗುತ್ತಿರುತ್ತದೆ. ಅಂತೆಯೇ ಸಾಮಾಜಿಕ ವಾಗಿ ಆತ ಇತರರೊಡನೆ ವ್ಯವಹರಿಸುವಾಗ ಸನ್ನಿವೇಶಕ್ಕೆ ತಕ್ಕಂತೆ ಎಲ್ಲಿ ಯಾವಾಗ ಯಾರೊಡನೆ ಹೇಗೆ ಮಾತನಾಡಬೇಕು/ಮಾತನಾಡಬಾರದು ಎಂಬ ಎಚ್ಚರವನ್ನು ಹೊಂದಿರುತ್ತಾನೆ. ಏಕೆಂದರೆ ಮಾತು ಎಂಬುದು ಮನದಲ್ಲಿ ಮಿಡಿಯುವ ಒಳ ಮಿಡಿತಗಳನ್ನು ಮುಚ್ಚಿಟ್ಟುಕೊಳ್ಳುವ ಇಲ್ಲವೇ ಹೊರಹಾಕುವ ಉಪಕರಣವಾಗಿದೆ.

ಆದ್ದರಿಂದ ಒಬ್ಬ ವ್ಯಕ್ತಿಯು ಆಡುವ ಮಾತುಗಳು ನಿಜವೋ ಸುಳ್ಳೋ ಎಂಬುದನ್ನು ಬೇರೆಯವರು ಹೇಳಲಾಗದು. ವ್ಯಕ್ತಿಯು ತನ್ನ ಅನುಕೂಲಕ್ಕೆ ತಕ್ಕಂತೆ ಮಾತುಗಳನ್ನಾಡುವ ಕುಶಲತೆಯನ್ನು ಹೊಂದಿರುತ್ತಾನೆ . ಆದ್ದರಿಂದಲೇ ಮಾತು ಇರುವ ತನಕ ಬೇರೆಯವರನ್ನು ನಂಬಿಸುವ/ಮರುಳುಗೊಳಿಸುವ ಬೂಟಾಟಿಕೆಯ ನಟನೆಯು ಮಾತಿನೊಡನೆ ಜತೆಗೂಡಿರುತ್ತದೆ.

44. ಹೂ ಮಿಡಿಯ ಹರಿದು ಒತ್ತಿ ಹಣ್ಣ ಮಾಡಿಹೆನೆಂದಡೆ ಹಣ್ಣಾಗಬಲ್ಲುದೆ. (1602–288)

ಹೂ=ಹೂವು/ಕುಸುಮ; ಮಿಡಿ=ಹೀಚು; ಹೂಮಿಡಿ=ಎಳೆಯ ಕಾಯಿ/ಬಲಿಯದ ಚಿಕ್ಕಗಾತ್ರದ ಕಾಯಿ; ಹರಿದು=ಕಿತ್ತು ತಂದು, ಕೀಳು; ಒತ್ತು=ಹಿಸುಕು, ಅದುಮು; ಹಣ್ಣು=ಚೆನ್ನಾಗಿ ಮಾಗಿ ರಸದಿಂದ ತುಂಬಿ ರುಚಿಕರವಾದ ವಸ್ತು; ಮಾಡು+ಇಹೆನ್+ಎಂದರೆ; ಇಹೆನ್=ಇರುವೆನು; ಮಾಡಿಹೆನ್=ಮಾಡುವೆನು; ಎಂದರೆ=ಎಂದು ಹೇಳಿದರೆ; ಹಣ್ಣು+ಆಗಬಲ್ಲುದೆ; ಆಗಬಲ್ಲುದೆ=ಆಗುತ್ತದೆಯೇ; **ಹಣ್ಣಾಗಬಲ್ಲುದೆ**=ಹಣ್ಣಾಗುವುದೇ/ಹಣ್ಣಾಗುವುದಿಲ್ಲ;

ಇನ್ನೂ ಬಲಿಯದ ಹೀಚುಕಾಯನ್ನು ಕಿತ್ತು ತಂದು, ವ್ಯಕ್ತಿಯು ತನ್ನ ಎರಡು ಅಂಗಯ್ ನಡುವೆ ಅದನ್ನು ಇಟ್ಟುಕೊಂಡು ಬಲವಾಗಿ **ಅಮುಕುವುದರಿಂದ** ಹೀಚುಕಾಯಿಯು ರಸದಿಂದ ತುಂಬಿದ ಹಣ್ಣಾಗುವುದಿಲ್ಲ. ಏಕೆಂದರೆ ಮರ/ಗಿಡದ ಬೇರುಗಳಿಂದ ಸಾರವನ್ನು ಹೀರಿಕೊಂಡು ಕಾಯಿ ದೊಡ್ಡದಾಗುತ್ತ ಬೆಳೆದು, ಕಾಲಕ್ರಮೇಣ ಮಾಗಿ ಹಣ್ಣಾದಾಗ ಮಾತ್ರ ಅದರಲ್ಲಿ ರಸ ತುಂಬುತ್ತದೆ. ಈ ರೀತಿ ಒಂದು ಕಾಯಿ ಹಣ್ಣಾಗಲು ಕಾಲ ಮತ್ತು ನಿಸರ್ಗದ ಕ್ರಿಯೆಗಳು ಅಗತ್ಯ;

ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಬೇಕಾದರೆ, ಅದನ್ನು ಹಂತ ಹಂತವಾಗಿ ಮಾಡಬೇಕು. ಹಾಗೆ ಮಾಡದೆ, ಕಯ್ಗೊಂಡ ಕೂಡಲೇ ಮಾಡಿ ಮುಗಿಸಿ ನಲಿವನ್ನು ಪಡೆಯಬೇಕೆಂದು ಆತುರಪಟ್ಟರೆ ಕೆಲಸವು ಹದಗೆಡುತ್ತದೆಯಲ್ಲದೆ, ಅದರಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ.

45. ದಾಳಿಕಾರಂಗೆ ಧರ್ಮವುಂಟೆ. (134–149)

ದಾಳಿ=ಲಗ್ಗೆ/ಆಕ್ರಮಣ/ಮುತ್ತಿಗೆ; ದಾಳಿಕಾರ=ಇತರರ ಮಾನ, ಪ್ರಾಣ, ಒಡವೆವಸ್ತು, ಆಸ್ತಿಪಾಸ್ತಿಗಳನ್ನು ದೋಚಲೆಂದು ಕ್ರೂರತನದಿಂದ ಹಲ್ಲೆ ಮಾಡುವ ವ್ಯಕ್ತಿ; ದಾಳಿಕಾರಂಗೆ=ದಾಳಿಕಾರನಿಗೆ/ದರೋಡೆಕೋರನಿಗೆ/ಲೂಟಿಕೋರನಿಗೆ;

ಧರ್ಮ+ಉಂಟೆ; ಧರ್ಮ=ಅರಿವು, ಒಲವು, ನಲಿವು, ಕರುಣೆಯಿಂದ ಕೂಡಿದ ನಡೆನುಡಿ/ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೂ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ನಡೆನುಡಿ; ಉಂಟೆ=ಇರುತ್ತವೆಯೇ/ಇರುವುದೇ;

ಜನರ ಆಸ್ತಿಪಾಸ್ತಿಗಳನ್ನು ಕೊಳ್ಳೆ ಹೊಡೆಯುವ ಮತ್ತು ಜಾತಿ, ಮತ, ದೇವರ ಹೆಸರಿನಲ್ಲಿ ಜನಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ಅಸೂಯೆ ಮತ್ತು ಹಗೆತನವನ್ನುಂಟು ಮಾಡಿ, ಜನರು ಒಬ್ಬರು ಮತ್ತೊಬ್ಬರೊಡನೆ ಬಡಿದಾಡಿ ಕೊಂಡು ಸಾವು ನೋವುಗಳಿಗೆ ಬಲಿಯಾಗುವಂತೆ ಮಾಡಿ, ತಾನು ಮಾತ್ರ ಉನ್ನತವಾದ ಗದ್ದುಗೆಯನ್ನೇರಿ ನಾಡಿನ ಸಂಪತ್ತನ್ನು ದೋಚುವ ಕಪಟಿಯೂ ಕ್ರೂರಿಯೂ ಆದ ವ್ಯಕ್ತಿಯ ನಡೆನುಡಿಯಲ್ಲಿ ಸತ್ಯ, ನೀತಿ, ನ್ಯಾಯ ಮತ್ತು ಕರುಣೆಯ ಒಳಮಿಡಿತಗಳು ಇರುವುದಿಲ್ಲ.

46. ಮರನುಳ್ಳನ್ನಕ್ಕರ ಎಲೆ ಉಲಿವುದು ಮಾಬುದೆ ಶರೀರ ಉಳ್ಳನ್ನಕ್ಕರ ವಿಕಾರ ಮಾಬುದೆ. (487–176)

ಮರ+ಉಳ್+ಅನ್ನಕ್ಕರ; ಮರ=ತರು/ಸಸ್ಯ; ಉಳ್=ಇರು; ಅನ್ನಕ್ಕರ=ವರೆಗೆ/ತನಕ; ಉಳ್ಳನ್ನಕ್ಕರ=ಇರುವ ತನಕ/ಇರುವವರೆಗೆ; ಎಲೆ=ಮರದ ಕೊಂಬೆರೆಂಬೆಗಳಲ್ಲಿ ಬಿಟ್ಟಿರುವ ಎಸಳು/ದಳ; ಉಲಿ=ದನಿ/ಶಬ್ದ; ಉಲಿವುದು= ದನಿಗಯ್ಯುವುದು /ಶಬ್ದ ಮಾಡುವುದು; ಮಾಣ್=ಬಿಡು/ನಿಲ್ಲಿಸು/ತೊರೆ; ಮಾಣ್ಬುದೆ>ಮಾಬುದೆ; ಮಾಬುದೆ=ನಿಲ್ಲಿಸುವುದೆ/ಬಿಡುತ್ತದೆಯೆ;

ಶರೀರ=ಮಯ್/ದೇಹ; ವಿಕಾರ=ಬದಲಾವಣೆ/ವಸ್ತುಗಳ–ಜೀವಿಗಳ ರೂಪದಲ್ಲಿ ಉಂಟಾಗುವ ವ್ಯತ್ಯಾಸ; **ಶರೀರ ಉಳ್ಳನ್ನಕ್ಕರ ವಿಕಾರ ಮಾಬುದೆ**= ಶರೀರದಲ್ಲಿ ಜೀವ ಇರುವ ತನಕ ಎಂದರೆ ಸಾವು ಬರುವವರೆಗೂ ಒಂದಲ್ಲ ಒಂದು ಬಗೆಯ ಒಳಮಿಡಿತಗಳು ವ್ಯಕ್ತಿಯ ಮಯ್ ಮನಗಳಲ್ಲಿ ಎಡೆಬಿಡದೆ ಮಿಡಿಯುತ್ತಿರುತ್ತವೆ.

ಜೀವಂತವಾಗಿರುವ ಮರದ ಕೊಂಬೆರೆಂಬೆಗಳಲ್ಲಿನ ಎಲೆಗಳು ಹೇಗೆ ಗಾಳಿಯ ಬಡಿತಕ್ಕೆ ಅಲ್ಲಾಡುತ್ತ ಪಟಪಟನೆ ದನಿಯನ್ನು ಮಾಡುತ್ತಿರುತ್ತವೆಯೋ ಅಂತೆಯೇ ಶರೀರದಲ್ಲಿ ಜೀವವಿರುವ ತನಕ ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳು ತುಡಿಯುತ್ತಲೇ ಇರುತ್ತವೆ. ಆದ್ದರಿಂದ ವ್ಯಕ್ತಿಯು ತನ್ನ ಜೀವಿತದ ಕೊನೆ ಗಳಿಗೆಯ ತನಕ ಕೆಟ್ಟ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು ಬಾಳುವ ಎಚ್ಚರವನ್ನು ಹೊಂದಿರಬೇಕು.

47. ಮಾತಿನ ಮಾತಿನ ಮಹಂತರು ಹಿರಿಯರೆ. (230–156)

ಮಾತು=ನುಡಿ/ಸೊಲ್ಲು; ಮಹಂತ=ಒಲವು, ಆದರ, ಮನ್ನಣೆಗೆ ಪಾತ್ರನಾದ ವ್ಯಕ್ತಿ/ದೇಗುಲದ ಆಡಳಿತದ ಉಸ್ತುವಾರಿಯನ್ನು ವಹಿಸಿಕೊಂಡಿರುವ ವ್ಯಕ್ತಿ; ಹಿರಿಯರು=ವಯಸ್ಸು/ತಿಳುವಳಿಕೆ/ಒಳ್ಳೆಯ ನಡೆನುಡಿಗಳಲ್ಲಿ ದೊಡ್ಡವರು;

ಮಾತಿನ ಮಾತಿನ=ಯಾವುದೇ ಒಂದು ಒಳ್ಳೆಯ ಕೆಲಸವನ್ನು ಮಾಡದೆ ಬರಿ ಮಾತನಾಡುವುದರಲ್ಲಿಯೇ ತೊಡಗಿರುವುದು;

ಮಾತಿನ ಮಾತಿನ ಮಹಂತರು=ಸತ್ಯ/ನೀತಿ/ನ್ಯಾಯ/ವಾಸ್ತವದ ನುಡಿಗಳನ್ನು ಒಂದೇ ಸಮನೆ ಆಡುತ್ತ, ತಮ್ಮ ನಿತ್ಯ ಜೀವನದ ಆಚರಣೆಯಲ್ಲಿ ಅವನ್ನು ಅಳವಡಿಸಿ ಕೊಳ್ಳದೇ, ಮಾತನ್ನು ಚತುರತೆಯಿಂದ ಆಡುವುದನ್ನೇ ಒಂದು ಕಲೆಯನ್ನಾಗಿ ಮಾಡಿಕೊಂಡಿರುವ ವ್ಯಕ್ತಿಗಳು; **ಹಿರಿಯರೆ**=ದೊಡ್ಡವರೆ/ಮನ್ನಣೆಗೆ ಯೋಗ್ಯರೆ;

ಕೇಳುವವರ ಮನ ಸೆಳೆಯುವಂತೆ ಇಲ್ಲವೇ ಮನ ಮೆಚ್ಚಿಸುವಂತೆ ಸೊಗಸಾಗಿ ಮಾತನಾಡುವ ವ್ಯಕ್ತಿಗಳನ್ನು ದೊಡ್ಡವರೆಂದು ತಿಳಿಯಬಾರದು. ಏಕೆಂದರೆ ಮಾತಿಗಿಂತ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಕೆಲಸ ದೊಡ್ಡದು. ಆದ್ದರಿಂದ ಯಾವುದೇ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅವರು ಮಾಡುವ ಒಳ್ಳೆಯ ಕೆಲಸದಿಂದ ಒರೆಹಚ್ಚಿ ನೋಡಬೇಕೆ ಹೊರತು ಅವರು ಆಡುವ ಸೊಗಸಾದ ಮಾತುಗಳಿಂದಲ್ಲ ಎಂಬ ಅರಿವನ್ನು ಹೊಂದಿರಬೇಕು.

48. ಮಾತೆಂಬುದು ಜ್ಯೋತಿರ್ಲಿಂಗ (1444–273)

ಮಾತು+ಎಂಬುದು; ಮಾತು=ನುಡಿ/ಸೊಲ್ಲು; ಎಂಬುದು=ಎನ್ನುವುದು; ಜ್ಯೋತಿ=ಬೆಳಕು/ದೀವಿಗೆ; ಲಿಂಗ=ಶಿವನ ಸಂಕೇತವಾದ ವಿಗ್ರಹ;

ಜ್ಯೋತಿರ್ಲಿಂಗ=ಕಾಂತಿಯಿಂದ ಬೆಳಗುತ್ತಾ, ಎಲ್ಲೆಡೆ ಬೆಳಕಿನ ಕಿರಣಗಳನ್ನು ಹರಡುತ್ತಿರುವ ಲಿಂಗ; 'ಜ್ಯೋತಿರ್ಲಿಂಗ' ಎಂಬ ಪದವನ್ನು ಒಂದು ರೂಪಕವಾಗಿ ಬಳಸಲಾಗಿದೆ.

ವ್ಯಕ್ತಿಯು ಆಡುವ ಮಾತುಗಳನ್ನು ಬೆಳಗುತ್ತಿರುವ ಲಿಂಗಕ್ಕೆ ಹೋಲಿಸಲಾಗಿದೆ. ಲಿಂಗದಿಂದ ಹೊರಹೊಮ್ಮುತ್ತಿರುವ ಬೆಳಕಿನ ಕಿರಣಗಳು ಸುತ್ತಮುತ್ತಲಿನ ಕತ್ತಲೆಯನ್ನು ನಿವಾರಿಸಿ, ವ್ಯಕ್ತಿಯ ಕಣ್ಣ ಮುಂದಿರುವ ವಸ್ತು/ಜೀವಿಗಳನ್ನು

ಸರಿಯಾಗಿ ಕಾಣುವುದಕ್ಕೆ ನೆರವಾಗುತ್ತವೆಯೋ, ಅಂತೆಯೇ ವ್ಯಕ್ತಿಯು ಆಡುವ ಮಾತುಗಳು ಕೇಳುಗರ ಮನದ ಆತಂಕ, ಕಳವಳ, ನೋವನ್ನು ನಿವಾರಿಸಿ ಕೇಳುಗರ ಮನಸ್ಸಿಗೆ ಮುದವನ್ನು ಮತ್ತು ಅರಿವನ್ನು ಮೂಡಿಸುವಂತಿರಬೇಕು. ವ್ಯಕ್ತಿಯು ಆಡುವ ಮಾತುಗಳು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವಂತಿರಬೇಕು.

49. ವಾಕಿನಿಂ ಪರಬ್ರಹ್ಮವ ನುಡಿವ ಕುತರ್ಕಿಗಳ ಎಡೆಯಲ್ಲಿ ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು. (1580–286)

ವಾಕ್+ಇನ್+ಇಂ; ವಾಕ್=ನುಡಿ/ಮಾತು; ಪರಬ್ರಹ್ಮ=ಪರಮಾತ್ಮ/ಜಗತ್ತಿನಲ್ಲಿರುವ ಸಕಲ ಜೀವಿಗಳ ಹುಟ್ಟಿಗೆ ಕಾರಣನಾದ ದೇವರು/ವೇದ ವೇದಾಂತಗಳ ವಿಚಾರ;

ನುಡಿವ=ಮಾತನಾಡುವ; ತರ್ಕ=ವ್ಯಕ್ತಿಯು ತಾನು ಹೇಳುತ್ತಿರುವ ವಿಚಾರವೇ ದಿಟವೆಂದು/ಸರಿಯೆಂದು ವಾದಿಸುವುದು; ತರ್ಕಿ=ತರ್ಕವನ್ನು ಮಾಡುವವನು/ವಾದದಲ್ಲಿ ತೊಡಗುವವನು; ಕುತರ್ಕಿ=ತಪ್ಪನ್ನೇ ಸರಿಯೆಂದು, ಸುಳ್ಳನ್ನೇ ಸತ್ಯವೆಂದು, ಕೆಟ್ಟದ್ದನ್ನೇ ಒಳ್ಳೆಯದೆಂದು, ಇಲ್ಲದ್ದನ್ನೇ ಇದೆಯೆಂದು ವಾದಿಸುವ ವ್ಯಕ್ತಿ; ಎಡೆ+ಅಲ್ಲಿ; ಎಡೆ=ಜಾಗ/ಹತ್ತಿರ/ಮುಂದೆ;

ಪರಬ್ರಹ್ಮವ ನುಡಿವ ಕುತರ್ಕಿಗಳು=ಪರಲೋಕದಲ್ಲಿರುವ ಬ್ರಹ್ಮನೆಂಬ ದೇವರಿಂದ ಈ ಜಗತ್ತಿನ ಜೀವರಾಶಿಗಳೆಲ್ಲವೂ ಹುಟ್ಟಿವೆ. ಮಾನವನ ಜೀವನದಲ್ಲಿ ನಡೆಯುವ ಆಗುಹೋಗುಗಳಿಗೆ ಬ್ರಹ್ಮನು ವ್ಯಕ್ತಿಗಳ ಹಣೆಯಲ್ಲಿ ಬರೆದಿರುವ 'ವಿಧಿಲಿಖಿತ'ವೇ ಕಾರಣವಾಗಿದೆ. ವ್ಯಕ್ತಿಯು ತನ್ನ ಹಿಂದಿನ ಜನ್ಮಗಳಲ್ಲಿ ಮಾಡಿರುವ ಪಾಪಪುಣ್ಯಗಳಿಗೆ ತಕ್ಕಂತೆ ಈ ಜನ್ಮದಲ್ಲಿ ಸಿರಿತನ ಇಲ್ಲವೇ ಬಡತನವನ್ನು, ನೋವು ನಲಿವನ್ನು ಹೊಂದುತ್ತಾನೆ. ದೇವರ ಇಚ್ಚೆಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಈ ಜಗತ್ತಿನಲ್ಲಿ ಅತ್ತಿತ್ತ ಅಲುಗದು ಎಂಬ ಸಂಗತಿಗಳನ್ನು ಹೇಳುವವರನ್ನು ಕುತರ್ಕಿಗಳೆಂದು ಕರೆಯಲಾಗಿದೆ. ಏಕೆಂದರೆ ಇಂತಹ ವಿಚಾರವನ್ನು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು ನಿರಾಕರಿಸುತ್ತಾರೆ.

ಮಾನವ ಜೀವಿಯ ಆಗುಹೋಗುಗಳಿಗೆ/ಏಳುಬೀಳುಗಳಿಗೆ ನಿಸರ್ಗದಲ್ಲಿ ನಡೆಯುವ ಸಂಗತಿಗಳು ಮತ್ತು ಮಾನವರ ನಡೆನುಡಿಗಳೇ ಕಾರಣವಾಗಿವೆ.

ಮಾನವರ ಸಿರಿತನ ಬಡತನಕ್ಕೆ ಕಾರಣ ಬ್ರಹ್ಮನು ಬರೆದ ವಿಧಿಲಿಖಿತವಲ್ಲ; ಸಮಾಜದಲ್ಲಿ ದೊಡ್ಡ ಗದ್ದುಗೆಯಲ್ಲಿರುವವರು ಮತ್ತು ಆಸ್ತಿಪಾಸ್ತಿ ಹಣ ಒಡವೆ ವಸ್ತುಗಳನ್ನು ತಮ್ಮದಾಗಿಸಿಕೊಂಡಿರುವ ಸಿರಿವಂತರು ದುಡಿಯುವ ವರ್ಗದ ಜನರನ್ನು ನಾನಾ ರೀತಿಗಳಲ್ಲಿ ವಂಚಿಸುತ್ತಿರುವುದು ಶ್ರಮಜೀವಿಗಳ ಹಸಿವು, ಬಡತನ, ಸಂಕಟಕ್ಕೆ ಕಾರಣವಾಗಿದೆ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು. ವ್ಯಕ್ತಿಗಳ ಜೀವನದಲ್ಲಿನ ನೋವು ನಲಿವುಗಳಿಗೆ ವ್ಯಕ್ತಿಗಳ ಒಳ್ಳೆಯ ಇಲ್ಲವೇ ಕೆಟ್ಟ ನಡೆನುಡಿಗಳು ಕಾರಣವೇ ಹೊರತು ಬ್ರಹ್ಮನ ಬರೆದಿರುವ ಹಣೆಬರಹವಲ್ಲ. ಆದ್ದರಿಂದ ಪರಬ್ರಹ್ಮ ತತ್ವವನ್ನು ಕುತರ್ಕವೆಂದು ವಚನಕಾರರು ಅಲ್ಲಗಳೆದಿದ್ದಾರೆ;

ಮಾಗಿ=ಚಳಿಗಾಲ; ಕೋಗಿಲೆ+ಅಂತೆ; ಕೋಗಿಲೆ=ಒಂದು ಬಗೆಯ ಹಕ್ಕಿ. ಈ ಹಕ್ಕಿಯ ಕೂಗು ಕೇಳುವುದಕ್ಕೆ ಇಂಪಾಗಿರುತ್ತದೆ. ಬೇಸಿಗೆಯ ವಸಂತಕಾಲದಲ್ಲಿ ಮಾವಿನ ಚಿಗುರನ್ನು ತಿಂದಾಗ ಕೋಗಿಲೆಯು ಆನಂದದಿಂದ ಹಾಡುತ್ತದೆ ಎಂಬ ಕವಿ ಕಲ್ಪನೆಯಿದೆ. ಇಂತಹ ಕೋಗಿಲೆಯು ಮಾಗಿಯ ಕಾಲದಲ್ಲಿ ಅಂದರೆ ಚಳಿಗಾಲದಲ್ಲಿ ಚಳಿಯನ್ನು ತಡೆಯಲಾರದೆ ಕುಗ್ಗಿಹೋಗಿ ಮೂಕವಾಗಿರುತ್ತದೆ ಎಂಬ ಕಲ್ಪನೆಯು ಜನಮನದಲ್ಲಿದೆ; ಅಂತೆ=ಹಾಗೆ/ಆ ರೀತಿ;

ಮೂಗನ್+ಆಗಿ+ಇರಬೇಕು; ಮೂಗ=ಮಾತನ್ನಾಡಲು ಆಗದವನು/ಮಾತು ಬಾರದವನು; ಮಾಗಿಯ ಕೋಗಿಲೆ ಎಂಬ ನುಡಿಗಟ್ಟು 'ದನಿಯೆತ್ತದೆ ಸುಮ್ಮನಿರಬೇಕು/ಪ್ರತಿಯಾಗಿ ಮಾತನಾಡದಿರಬೇಕು' ಎಂಬ ತಿರುಳಿನ ರೂಪಕವಾಗಿ ಬಳಕೆಯಾಗಿದೆ.

ಉದ್ದೇಶಪೂರ್ವಕವಾಗಿ ಕಟ್ಟುಕತೆಯನ್ನೇ ದಿಟವೆಂದು ಹೇಳುವ ಕುತರ್ಕಿಗಳನ್ನು ಎಂದೆಂದಿಗೂ ತಿದ್ದುವುದಕ್ಕೆ ಇಲ್ಲವೇ ಅವರಲ್ಲಿ ಅರಿವನ್ನು ಮೂಡಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಕುತರ್ಕಿಗಳು ಸಾಮಾಜಿಕ ವಾಸ್ತವವನ್ನು/ಸತ್ಯವನ್ನು ಎಂದೆಂದಿಗೂ ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಅಂತಹವರ ಜತೆಯಲ್ಲಿ ಮಾತನ್ನಾಡುವುದರ ಬದಲು ಸುಮ್ಮನಿರಬೇಕು.

50. ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ.(123–148)

ಸಾಸವೆ+ಅಷ್ಟು; ಸಾಸವೆ=ಒಂದು ಬಗೆಯ ಕಾಳು. ಇದನ್ನು ಅಡುಗೆಯಲ್ಲಿ ಒಗ್ಗರಣೆಯನ್ನು ಹಾಕಲು ಬಳಸುತ್ತಾರೆ. ರಾಗಿಯ ಕಾಳಿನಂತೆ ತುಂಬಾ

ಚಿಕ್ಕದಾಗಿರುತ್ತೆ; ಅಷ್ಟು=ಆ ರೀತಿಯ ಗಾತ್ರ/ಅಳತೆ; ಸುಖ=ಆನಂದ/ನೆಮ್ಮದಿ/ನಲಿವು/ಹಿಗ್ಗು;

ಸಾಗರ+ಅಷ್ಟು; ಸಾಗರ=ಕಡಲು/ಸಮುದ್ರ; ದುಃಖ=ಸಂಕಟ/ನೋವು/ವೇದನೆ; ನೋಡು=ಕಾಣು/ತಿಳಿ; ನೋಡಾ=ಅರಿತು ಕೊಳ್ಳುವುದು/ತಿಳಿದುಕೊಳ್ಳುವುದು;

ವ್ಯಕ್ತಿಯ ಹುಟ್ಟಿನಿಂದ ಸಾವಿನ ತನಕ ಉಂಟಾಗುವ ನೋವು ನಲಿವಿನ ಸಂಗತಿಗಳಲ್ಲಿ ನೋವಿನ ಸಂಗತಿಗಳೇ ಹೆಚ್ಚಾಗಿರುತ್ತವೆ. ಏಕೆಂದರೆ ಯಾವುದೇ ವ್ಯಕ್ತಿಯ ಜೀವನ ಅವನೊಬ್ಬನ ನಡೆನುಡಿಗಳನ್ನೇ ಅವಲಂಬಿಸಿರುವುದಿಲ್ಲ. ಕುಟುಂಬದಲ್ಲಿರುವ ವ್ಯಕ್ತಿಗಳ ಜತೆಯಲ್ಲಿ ಹೊಂದಿರುವ ನಂಟು ಮತ್ತು ಸಹಮಾನವರೊಡನೆ ಪಡೆದಿರುವ ಒಡನಾಟವೆಲ್ಲವೂ ವ್ಯಕ್ತಿಯ ಬದುಕಿನ ಆಗುಹೋಗುಗಳಿಗೆ ಕಾರಣವಾಗುತ್ತವೆ.

ಜೀವನದ ಅನೇಕ ಸನ್ನಿವೇಶಗಳಲ್ಲಿ ವ್ಯಕ್ತಿಯು ತನ್ನದಲ್ಲದ ತಪ್ಪಿಗೆ ಬಲಿಯಾಗಬೇಕಾಗುತ್ತದೆ. ತನ್ನ ಮತ್ತು ತನ್ನವರು ಎನಿಸಿಕೊಂಡವರ ಬದುಕಿನಲ್ಲಿ ಉಂಟಾಗುವ ರೋಗರುಜಿನಗಳು, ಅವಗಡಗಳು, ಬಡತನ ಮತ್ತು ಅಪಮಾನದ ಪ್ರಸಂಗಗಳು ಹೆಚ್ಚಿನ ನೋವನ್ನು ಉಂಟುಮಾಡುತ್ತಿರುತ್ತವೆ.

ಅತಿ ಚಿಕ್ಕದಾಗಿರುವ ಸಾಸವೆಯ ಕಾಳನ್ನು ವ್ಯಕ್ತಿಯ ಬದುಕಿನ ನಲಿವಿಗೆ ಮತ್ತು ಅತಿ ವಿಸ್ತಾರವಾಗಿಯೂ ಆಳವಾಗಿಯೂ ಇರುವ ಸಾಗರದ ಪ್ರಮಾಣವನ್ನು ವ್ಯಕ್ತಿಯ ಬದುಕಿನಲ್ಲಿ ಉಂಟಾಗುವ ನೋವಿಗೆ ರೂಪಕಗಳನ್ನಾಗಿ ಚಿತ್ರಿಸಲಾಗಿದೆ.

51. ಮನದಲ್ಲಿ ಕ್ರೋಧ ವಚನದಲ್ಲಿ ಕಿಂಕಲ
ಲಿಂಗದ ವಾರ್ತೆ ನಿನಗೇಕೆ ಹೇಳಾ. (1133/242)

ಮನ+ಅಲ್ಲಿ; ಮನ=ಮನಸ್ಸು; ಕ್ರೋಧ=ಕೋಪ/ಆಕ್ರೋಶ; **ಮನದಲ್ಲಿ ಕ್ರೋಧ**=ಇತರರಿಗೆ ಕೇಡನ್ನು ಬಗೆಯಬೇಕೆಂಬ ಕೆಟ್ಟ ಉದ್ದೇಶ/ಇತರರ ಒಳಿತನ್ನು ಕಂಡು ಸಹಿಸಲಾರದ ಹೊಟ್ಟೆಕಿಚ್ಚು;

ವಚನ+ಅಲ್ಲಿ; ವಚನ=ಮಾತು/ನುಡಿ/ಸೊಲ್ಲು; ಕಿಂಕಲ=ವಿನಯ/ತಗ್ಗಿ ಬಗ್ಗಿ ನಡೆಯುವವನು;

ವಚನದಲ್ಲಿ ಕಿಂಕಲ=ಬಹಿರಂಗದಲ್ಲಿ ಜನರ ಮುಂದೆ ಆಡುವ ಮಾತುಗಳು ಒಲವು ನಲಿವು ನಯ ವಿನಯದಿಂದ ಕೂಡಿ, ಬೇರೆಯವರ ಒಳಿತನ್ನೇ ಕುರಿತು ಚಿಂತಿಸುವಂತೆ ಇರುವುದು;

ಲಿಂಗ=ಶಿವನ ಸಂಕೇತವಾದ ವಿಗ್ರಹ; ವಾರ್ತೆ=ಸುದ್ದಿ/ಸಮಾಚಾರ/ಸಂಗತಿ;

‘ಲಿಂಗದ ವಾರ್ತೆ’ ಎಂಬ ನುಡಿಗಟ್ಟು ಒಂದು ರೂಪಕವಾಗಿ ಬಳಕೆಗೊಂಡಿದೆ. ಶಿವನನ್ನು ಕುರಿತ ಸುದ್ದಿ ಎಂದರೆ ಒಳ್ಳೆಯ ನಡೆನುಡಿಗಳಿಂದ ವ್ಯಕ್ತಿಯು ತನ್ನ ಬದುಕನ್ನು ರೂಪಿಸಿಕೊಳ್ಳುವುದರ ಜತೆಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವುದು;

ನಿನಗೆ+ಏಕೆ; ಏಕೆ=ಯಾವುದಕ್ಕಾಗಿ ಬೇಕು; ಹೇಳ್+ಅ; ಹೇಳು=ಉತ್ತರಿಸು/ನುಡಿ; ಇಬ್ಬರು ವ್ಯಕ್ತಿಗಳ ನಡೆನುಡಿಗಳು ಬೇರೆ ಬೇರೆ ರೀತಿಯಲ್ಲಿದ್ದಾಗ, “ಅವನ ಸುದ್ದಿ ನಿನಗ್ಯಾಕಪ್ಪ, ಅವನ ದಾರಿಯೇ ಬೇರೆ, ನಿನ್ನ ದಾರಿಯೇ ಬೇರೆ” ಎಂಬ ಮಾತನ್ನು ಕೇಳುತ್ತಿರುತ್ತೇವೆ.

ಯಾವ ವ್ಯಕ್ತಿಯು ತನ್ನ ಅಂತರಂಗದ ಮನದಲ್ಲಿ ಇತರರಿಗೆ ಕೇಡನ್ನು ಬಗೆಯಬೇಕೆಂಬ ಕೆಟ್ಟ ಉದ್ದೇಶದಿಂದ ಕೂಡಿ, ಬಹಿರಂಗದಲ್ಲಿ ಮಾತ್ರ ಸತ್ಯ, ನೀತಿ, ನ್ಯಾಯದ ಮಾತುಗಳನ್ನು ಬಹಳ ವಿನಯದಿಂದ ನುಡಿಯುತ್ತಿರುತ್ತಾನೋ, ಅಂತಹ ವ್ಯಕ್ತಿಯು ಮಾಡುವ ಲಿಂಗ ಪೂಜೆಯಿಂದ ಇಲ್ಲವೇ ಲಿಂಗದ ಮಹಿಮೆಯನ್ನು ಹಾಡಿಹೊಗಳುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ದೇವರು ಮೆಚ್ಚುವುದು ವ್ಯಕ್ತಿಯ ಒಳ್ಳೆಯ ನಡೆನುಡಿಗಳನ್ನು ಮಾತ್ರ.

52. ಮದ್ದನರೆದು ಫಲವೇನು ಪ್ರಯೋಗಿಸಿಕೊಂಡಲ್ಲದೆ ರೋಗ ಮಾಣದು (1416/270)

ಮದ್ದು+ಅನ್+ಅರೆದು; ಮದ್ದು=ಮರಗಿಡಬಳ್ಳಿಯ ಎಲೆ/ತೊಗಟೆ/ಬೇರುಗಳ ಸಾರವನ್ನು ಒಳಗೊಂಡು ತಯಾರಿಸಿದ ವಸ್ತು. ಇದನ್ನು ರೋಗವನ್ನು ವಾಸಿಮಾಡುವುದಕ್ಕೆ ಬಳಸುತ್ತಾರೆ; ಅರೆ=ಪುಡಿ ಮಾಡು/ನುಣ್ಣಗೆ ಮಾಡು/ತೇಯುವುದು; ಅರೆದು=ಪುಡಿ ಮಾಡಿ/ತೇದು; ಫಲ+ಏನು; ಫಲ=ಪ್ರಯೋಜನ; ಏನು=ಯಾವುದು;

ಪ್ರಯೋಗಿಸಿ+ಕೊಂಡ+ಅಲ್ಲದೆ; ಪ್ರಯೋಗ=ಬಳಕೆ/ಉಪಯೋಗ; ಅಲ್ಲದೆ=ಹಾಗೆ ಮಾಡದೆ; ರೋಗ=ಬೇನೆ/ಕಾಯಿಲೆ/ಜಡ್ಡು; ಮಾಣ್=ವಾಸಿಯಾಗು/ಗುಣವಾಗು/ಬಿಡು; ಮಾಣದು=ವಾಸಿಯಾಗುವುದಿಲ್ಲ/ಗುಣವಾಗುವುದಿಲ್ಲ;

ಕೇವಲ ಮದ್ದನ್ನು ತಯಾರಿಸಿದ ಮಾತ್ರಕ್ಕೆ ರೋಗ ಗುಣವಾಗುವುದಿಲ್ಲ.

ಅದನ್ನು ಸರಿಯಾಗಿ ಬಳಸಿದಾಗ ಮಾತ್ರ ರೋಗ ನಿವಾರಣೆಯಾಗುತ್ತದೆ. ಅಂತೆಯೇ ಅರಿವನ್ನು ಪಡೆದ ಮಾತ್ರಕ್ಕೆ/ವಿದ್ಯೆಯನ್ನು ಕಲಿತ ಮಾತ್ರಕ್ಕೆ ವ್ಯಕ್ತಿಯ ಬದುಕು ಉತ್ತಮಗೊಳ್ಳುವುದಿಲ್ಲ. ಪಡೆದ ಅರಿವಿನಿಂದ/ಕಲಿತ ವಿದ್ಯೆಯಿಂದ ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವಂತಾದಾಗ ಮಾತ್ರ ವ್ಯಕ್ತಿಗೆ ಮತ್ತು ಸಮಾಜಕ್ಕೆ ಒಳಿತಾಗುತ್ತದೆ.

53. ವಾಕು ಪಾಕವಾದಡೇನು
ಮನ ಪಾಕವಾಗದನ್ನಕ್ಕರ. (175/152)

ವಾಕ್=ಮಾತು/ನುಡಿ/ಸೊಲ್ಲು; ಪಾಕ+ಆದಡೆ+ಏನು; ಪಾಕ=ಬೇಯಿಸಿ ತಯಾರಿಸಿದ ಅನ್ನ ಇಲ್ಲವೇ ಆಹಾರ/ಪರಿಪಕ್ವಗೊಂಡಿರುವುದು/ಹದವಾಗಿರುವುದು/ತುಂಬಾ ಚೆನ್ನಾಗಿರುವುದು;

ವಾಕು ಪಾಕವಾಗುವುದು=ವ್ಯಕ್ತಿಯು ಆಡುವ ಮಾತುಗಳು ಸತ್ಯ ನೀತಿ ನ್ಯಾಯದ ಸಂಗತಿಗಳಿಂದ ಕೂಡಿ, ಕೇಳುವವರ ಮನಸ್ಸಿಗೆ ಮುದವನ್ನು ನೀಡಿ ತನ್ನತ್ತ ಸೆಳೆಯುವಂತಿರುವುದು; ಆದಡೆ=ಆದರೆ; ಆದಡೇನು=ಆಗುವುದರಿಂದ ಉಂಟಾಗುವ ಪ್ರಯೋಜನವೇನು;

ವಾಕು ಪಾಕವಾದಡೇನು=ಸೊಗಸಾಗಿ/ಸುಂದರವಾಗಿ ಮಾತನಾಡುವುದರಿಂದ ಪ್ರಯೋಜನವೇನು;

ಮನ=ಮನಸ್ಸು; ಪಾಕ+ಆಗದ+ಅನ್ನಕ್ಕರ; ಅನ್ನಕ್ಕರ=ಆ ತನಕ/ಆ ವರೆಗೆ; ಪಾಕವಾಗದನ್ನಕ್ಕರ=ಪಾಕಗೊಳ್ಳದಿದ್ದರೆ/ಪಾಕವಾಗದಿರುವ ವರೆಗೆ;

ಮನ ಪಾಕವಾಗುವುದು=ವ್ಯಕ್ತಿಯು ತನ್ನ ಮನದಲ್ಲಿ ತುಡಿಯುತ್ತಿರುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಒಳ್ಳೆಯದನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದು.

ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಯನ್ನು ಮತ್ತು ಉದ್ದೇಶವನ್ನು ಹೊಂದಿರದೆ, ಕೇವಲ ಮಾತನ್ನು ಮಾತ್ರ ಸೊಗಸಾಗಿ ಆಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ವ್ಯಕ್ತಿಯ ಬದುಕಿನಲ್ಲಿ ಒಳ್ಳೆಯ ನುಡಿಗಳಂತೆಯೇ ಒಳ್ಳೆಯ ನಡೆಯೂ ಇರಬೇಕು.

54. ಸಮುದ್ರದಾಚೆಯ ತಡಿಯಲ್ಲಿ ಕಳ್ಳನ ಕಂಡು ಇಲ್ಲಿಂದ ಮುನಿದು ಬೈದರೆ ಅವ ಸಾಯಬಲ್ಲನೆ. (459/173)

ಸಮುದ್ರದ+ಆಚೆಯ; ಸಮುದ್ರ=ಕಡಲು/ಸಾಗರ; ಆಚೆ=ಅತ್ತ ಕಡೆ/ಮತ್ತೊಂದು ತುದಿ; ತಡಿ+ಅಲ್ಲಿ; ತಡಿ=ದಡ/ತೀರ/ದಂಡೆ; ಕಳ್ಳ=ಇತರರ ಒಡವೆ ವಸ್ತುಗಳನ್ನು ಕದಿಯುವುದನ್ನೇ ಕಸುಬನ್ನಾಗಿ ಮಾಡಿಕೊಂಡಿರುವ ವ್ಯಕ್ತಿ/ಚೋರ; ಕಂಡು=ನೋಡಿ;

ಇಲ್ಲಿ+ಇಂದ; ಇಲ್ಲಿ=ಇತ್ತ/ಈಚೆಯ ದಡ; ಇಲ್ಲಿಂದ=ಈಚೆಯ ದಡದಲ್ಲಿ ನಿಂತುಕೊಂಡು;

ಮುನಿ=ಕೋಪಗೊಳ್ಳು/ಆಕ್ರೋಶಗೊಂಡು; ಬಯ್=ನಿಂದಿಸು/ತೆಗಳು; ಬೈದರೆ=ಬಯ್ದರೆ/ಬಯ್ಯಲು ತೊಡಗಿದರೆ/ಶಪಿಸಿದರೆ; ಅವ=ಅವನು/ಆ ಕಳ್ಳನು; ಸಾಯ್=ಮರಣ ಹೊಂದುವುದು/ಜೀವ ಹೋಗುವುದು; **ಸಾಯಬಲ್ಲನೆ=** ಸಾಯುತ್ತಾನೆಯೆ/ನಾಶವಾಗುತ್ತಾನೆಯೆ.

ಈ ಸಂಗತಿಯು ಒಂದು ರೂಪಕವಾಗಿ ಬಳಕೆಗೊಂಡಿದೆ. ವ್ಯಕ್ತಿಯ/ ಕುಟುಂಬದ/ಸಮಾಜದ ವ್ಯವಹಾರದಲ್ಲಿ ಯಾವುದೇ ಬಗೆಯ ತೊಡಕುಉಂಟಾದಾಗ, ಅದಕ್ಕೆ ಕಾರಣವೇನೆಂಬುದನ್ನು ಸರಿಯಾಗಿ ತಿಳಿದುಕೊಂಡು, ಎಲ್ಲಿ ತಪ್ಪು ಆಗಿದೆಯೋ ಅದನ್ನು ಸರಿಪಡಿಸಿಕೊಂಡು ಬಾಳುವಂತಹ ಕೆಲಸವಾಗಬೇಕೆ ಹೊರತು ಬಯ್ಯುವಿಕೆಯಲ್ಲಿ ತೊಡಗುವುದರಿಂದ ಇಲ್ಲವೇ ಒಬ್ಬರ ಮೇಲೆ ಮತ್ತೊಬ್ಬರು ಆರೋಪವನ್ನು ಹೊರಿಸುವುದರಿಂದ ಯಾವುದೇ ಪ್ರಯೋಜನವಿಲ್ಲ.

55. ಹಿಂದನರಿಯದುದು ಮುಂದನೇನ ಬಲ್ಲುದೋ. (312/162)

ಹಿಂದು+ಅನ್+ಅರಿಯದುದು; ಹಿಂದು=ಈ ಮೊದಲು ನಡೆದಿರುವುದು/ ಆಗಿರುವುದು; ಅನ್=ಅನ್ನು; ಅರಿ=ತಿಳಿ/ಕಲಿ; ಅರಿಯದುದು=ತಿಳಿದುಕೊಳ್ಳ ದಿರುವುದು/ಅರಿತುಕೊಳ್ಳದಿರುವುದು;

ಮುಂದು+ಅನ್+ಏನ; ಮುಂದು=ಬರಲಿರುವ ಕಾಲದಲ್ಲಿ ನಡೆಯಲಿ ರುವುದು/ಉಂಟಾಗುವುದು; ಏನ=ಯಾವುದನ್ನು ತಾನೆ; ಬಲ್=ತಿಳಿ/ಅರಿ; ಬಲ್ಲುದೋ=ತಿಳಿಯಲು/ಅರಿಯಲು/ಗೊತ್ತುಮಾಡಿಕೊಳ್ಳಲು ಆಗುತ್ತದೆಯೇ;

ಮುಂದನೇನ ಬಲ್ಲುದೋ=ಮುಂದೆ ಏನು ಮಾಡಬೇಕೆಂಬುದನ್ನು ತಿಳಿಯಲಾಗುವುದಿಲ್ಲ;

'ಹಿಂದನರಿಯುವುದು' ಎಂದರೆ ಪ್ರಾಚೀನ ಕಾಲದಿಂದಲೂ ಇಂದಿನ ತನಕ ಜನಸಮುದಾಯದ ಬದುಕನ್ನು ರೂಪಿಸಿ ಮುನ್ನಡೆಸುತ್ತಿರುವ ಸಂಗತಿಗಳನ್ನು ಅರಿತುಕೊಳ್ಳುವುದು. ಆ ಸಂಗತಿಗಳಲ್ಲಿ ಯಾವ ಬಗೆಯ ಸಂಗತಿಗಳು ಮಾನವ ಸಮುದಾಯಕ್ಕೆ ಒಳಿತನ್ನು ಇಲ್ಲವೇ ಕೆಡುಕನ್ನು ಮಾಡುತ್ತಿವೆ ಎಂಬುದನ್ನು ಒರೆಹಚ್ಚಿ ನೋಡಿ ಮಾನವನ ಬದುಕಿನ ಸಾಮಾಜಿಕ ವಾಸ್ತವವನ್ನು ತಿಳಿಯಬೇಕು.

ಈ ಬಗೆಯ ಅರಿವು ಮತ್ತು ಎಚ್ಚರವನ್ನು ಪಡೆದಾಗ, ವ್ಯಕ್ತಿಯ ಮತ್ತು ಜನಸಮುದಾಯದ ನೆಮ್ಮದಿಯ ಬದುಕಿಗೆ ಹಾನಿಯನ್ನುಂಟುಮಾಡುವ ಸಂಪ್ರದಾಯಗಳನ್ನು ಮತ್ತು ಆಚರಣೆಗಳನ್ನು ತ್ಯಜಿಸಿ, ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಂಡು ಬಾಳುವುದರ ಕಡೆಗೆ ಮುನ್ನಡೆಯಬಹುದು.)

56. ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ
ಮುಂದೆ ಎಷ್ಟು ಪ್ರಳಯವಾಗುವುದೆಂದರಿಯೆ
ತನ್ನ ಸ್ಥಿತಿಯ ತಾನರಿದಡೆ ಅದೇ ಪ್ರಳಯವಲ್ಲಾ. (655/189)

ಹಿಂದೆ=ಈ ಮೊದಲು/ಕಳೆದ ಹೋದ ಕಾಲದಲ್ಲಿ; ಎಷ್ಟು=ಯಾವ ಪ್ರಮಾಣದಲ್ಲಿ/ಯಾವ ಅಳತೆಯಲ್ಲಿ; ಪ್ರಳಯ=ಅಳಿವು/ಸರ್ವನಾಶ/ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಎಂಬ ಹೆಸರಿನ ನಾಲ್ಕು ಯುಗಗಳು ಒಂದರ ನಂತರ ಮತ್ತೊಂದು ಬಂದಿವೆ. ಒಂದು ಯುಗ ಕೊನೆಗೊಂಡು ಮತ್ತೊಂದು ಯುಗ ಹುಟ್ಟುವಾಗ ಒಂದು ಯುಗದಲ್ಲಿದ್ದ ಸಕಲ ಜೀವರಾಶಿಗಳು ನಾಶಗೊಂಡು ಮತ್ತೆ ಹೊಸದಾದ ಜೀವರಾಶಿಗಳು ಹುಟ್ಟಿ ಬರುತ್ತವೆ ಎಂಬ ಕಲ್ಪನೆಯು ಜನಸಮುದಾಯದ ಮನದಲ್ಲಿ ನೆಲೆಗೊಂಡಿದೆ.

ಹೋಯಿತ್ತು+ಎಂದು+ಅರಿಯೆ; ಹೋಗು=ತೆರಳು/ಗಮಿಸು/ದಾಟು; ಹೋಯಿತ್ತು=ಉಂಟಾಗಿದೆ/ನಡೆದಿದೆ; ಅರಿಯೆ=ಅರಿಯೆನು/ನನಗೆ ಗೊತ್ತಿಲ್ಲ; ಮುಂದೆ=ಬರಲಿರುವ ಕಾಲದಲ್ಲಿ/ಸಮಯದಲ್ಲಿ; ಪ್ರಳಯ+ ಆಗುವುದು+ ಎಂದು+ಅರಿಯೆ;

ತನ್ನ=ವ್ಯಕ್ತಿಯಲ್ಲಿರುವ; ಸ್ಥಿತಿ=ಇರವು/ಇರುವಿಕೆ/ಇರುವ ರೀತಿ; ತಾನ್+ ಅರಿದಡೆ;

ತಾನ್=ವ್ಯಕ್ತಿಯು; ಅರಿದಡೆ=ಅರಿತುಕೊಂಡರೆ/ತಿಳಿದುಕೊಂಡರೆ; ಅದೇ=ಆ ಬಗೆಯ ಬದಲಾವಣೆಯೇ/ಆ ರೀತಿಯ ನಡೆನುಡಿಗಳೇ; ಪ್ರಳಯ+ಅಲ್ಲಾ; ಅಲ್ಲಾ=ಅಲ್ಲವೇ;

ತನ್ನ ಸ್ಥಿತಿಯ ತಾನರಿದಡೆ ಅದೇ ಪ್ರಳಯ=ವ್ಯಕ್ತಿಯ ನಡೆನುಡಿಯಲ್ಲಿ ಕೆಟ್ಟದ್ದು ನಾಶಗೊಂಡು ಒಳ್ಳೆಯದು ಮೂಡಿಬರುವುದನ್ನು ಸೂಚಿಸಲು 'ಪ್ರಳಯ' ಎಂಬ ಪದವನ್ನು ಒಂದು ರೂಪಕವಾಗಿ ಬಳಸಲಾಗಿದೆ.

ವ್ಯಕ್ತಿಯು ತನ್ನ ಮಯ್ ಮನಗಳನ್ನು ಕಾಡುತ್ತಿರುವ ಒಳಮಿಡಿತಗಳಲ್ಲಿ ಕೆಟ್ಟದ್ದು ಯಾವುದು/ಒಳ್ಳೆಯದು ಯಾವುದು ಎಂಬುದನ್ನು ತಾನೇ ತಿಳಿದುಕೊಂಡು, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಒಳ್ಳೆಯದನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಬಾಳಲು ತೊಡಗಿದರೆ, ಅದು ವ್ಯಕ್ತಿಯ ಜೀವನದಲ್ಲಿ ದೊಡ್ಡ ಬದಲಾವಣೆಯನ್ನು ತರುತ್ತದೆ.

57. ಎಲೆ ಮನವೆ ನಿನ್ನ ನಿಜವನರಿಯಬಲ್ಲಡೆ
ಅದೇ ಬ್ರಹ್ಮಜ್ಞಾನ ಅದೇ ಕೇವಲ ಮುಕ್ತಿ. (986/229)

ಎಲೆ=ಏನನ್ನಾದರೂ ಕುರಿತು ಇಲ್ಲವೇ ಯಾರನ್ನಾದರೂ ಉದ್ದೇಶಿಸಿ ಮಾತನಾಡುವಾಗ ಬಳಸುವ ಪದ; ಮನ=ಮನಸ್ಸು/ಚಿತ್ತ;

ನಿಜ+ಅನ್+ಅರಿಯ+ಬಲ್ಲಡೆ; ನಿಜ=ದಿಟ/ಸತ್ಯ/ವಾಸ್ತವ; ಅರಿ=ತಿಳಿ/ಕಲಿ; ಅರಿಯಬಲ್ಲಡೆ=ತಿಳಿದುಕೊಳ್ಳುವೆಯಾದರೆ/ಅರಿತುಕೊಳ್ಳುವಂತಾದರೆ;

ಅದೇ=ಅಂತಹ ತಿಳುವಳಿಕೆಯೇ; ಬ್ರಹ್ಮ=ಇಹಲೋಕದಲ್ಲಿನ ಸಕಲ ಜೀವಿಗಳ ಹುಟ್ಟಿಗೆ ಕಾರಣನಾದ ಪರಮಾತ್ಮ/ದೇವರು; ಜ್ಞಾನ=ಅರಿವು/ತಿಳುವಳಿಕೆ;

'ಬ್ರಹ್ಮಜ್ಞಾನ' ಎಂದರೆ ದೇವರ ಅವತಾರದ ಹಿನ್ನೆಲೆ, ದೇವರು ಮಾಡುವ ಪವಾಡ ಮತ್ತು ದೇವರ ಮಹಿಮೆಯನ್ನು ಬಣ್ಣಿಸುವ ಸಂಗತಿಗಳನ್ನು ಮನನ ಮಾಡಿಕೊಂಡು, ಜಗತ್ತಿನ ಎಲ್ಲ ಆಗುಹೋಗುಗಳಿಗೆ ದೇವರೇ ಕಾರಣನೆಂಬ ಅರಿವನ್ನು ಪಡೆಯುವುದು;

ಕೇವಲ=ಅಪ್ಪಟ/ಪರಿಪೂರ್ಣ; ಮುಕ್ತಿ=ಹುಟ್ಟು ಸಾವಿನ ತಿರುಗುಣಿಯಿಂದ ಜೀವ ಇಲ್ಲವೇ ಆತ್ಮ ಬಿಡುಗಡೆಯನ್ನು ಹೊಂದುವುದು. ಮುಕ್ತಿಯನ್ನು ಪಡೆದ ಜೀವಿಯು ಮತ್ತೆ ಯಾವುದೇ ಹುಟ್ಟನ್ನು ಪಡೆದು ಈ ಲೋಕಕ್ಕೆ ಬರುವುದಿಲ್ಲವೆಂಬ ನಂಬಿಕೆಯು ಜನಮನದಲ್ಲಿದೆ.

ಶಿವಶರಣಶರಣೆಯರು ದೇವರ ಅವತಾರ, ಪವಾಡ ಮತ್ತು ಮಹಿಮೆಯನ್ನು ಬಣ್ಣಿಸುವ ಸಂಗತಿಗಳನ್ನು ನಿರಾಕರಿಸಿದ್ದರು. ಪುನರ್ ಜನ್ಮ, ಕರ್ಮ ಸಿದ್ಧಾಂತ ಮತ್ತು ವಿಧಿ ಬರಹದಿಂದ ಇಹಲೋಕದಲ್ಲಿ ಜೀವಿಗಳ ಬದುಕು ನಡೆಯುತ್ತಿದೆಯೆಂಬ ತತ್ವವನ್ನು ಅಲ್ಲಗಳೆದು, ಪ್ರತಿಯೊಬ್ಬ ವ್ಯಕ್ತಿಗೂ 'ನಿನ್ನ ನಿಜವನರಿಯಬಲ್ಲಡೆ' ಎಂದು ಕರೆ ನೀಡಿದ್ದಾರೆ;

ವ್ಯಕ್ತಿಯು ತನ್ನ ನಿಜವನ್ನು ಅರಿಯುವುದೆಂದರೆ 'ತನ್ನನ್ನು ಒಳಗೊಂಡಂತೆ ಎಲ್ಲ ಮಾನವರ ಬದುಕಿನ ಆಗುಹೋಗುಗಳಿಗೆ ನಿಸರ್ಗದಲ್ಲಿ ನಡೆಯುವ ಸಂಗತಿಗಳು ಮತ್ತು ವ್ಯಕ್ತಿಗಳ ಒಳಿತು ಕೆಡುಕಿನ ನಡೆನುಡಿಗಳೇ ಕಾರಣವೆಂಬ ವಾಸ್ತವವನ್ನು ಅರಿತುಕೊಳ್ಳುವುದು'. ಈ ಬಗೆಯ ಅರಿವನ್ನು ವ್ಯಕ್ತಿಯು ಪಡೆದಾಗ, ತನ್ನ ಉಳಿವು ಅಳಿವಿಗೆ ಕಾರಣವಾಗಿರುವ ನಿಸರ್ಗವನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಮತ್ತು ತನ್ನ ಒಳಿತಿನ ಜತೆಜತೆಗೆ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುವ ಎಚ್ಚರವನ್ನು ವ್ಯಕ್ತಿಯು ಹೊಂದುತ್ತಾನೆ. ಇಂತಹ ಎಚ್ಚರದಿಂದ ಬಾಳಲು ತೊಡಗಿದಾಗ ಮಾನವರು ಹಸಿವು, ಬಡತನ ಮತ್ತು ಸಂಕಟಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಅಲ್ಲಮನು ವ್ಯಕ್ತಿಯ ಒಳ್ಳೆಯ ನಡೆನುಡಿಗಳನ್ನು 'ಬ್ರಹ್ಮಜ್ಞಾನ' ಎಂದು ಮತ್ತು ತಪ್ಪು ತಿಳುವಳಿಕೆಯಿಂದ ಮಾನಸಿಕವಾಗಿ ಬಿಡುಗಡೆಯನ್ನು ಪಡೆಯುವುದನ್ನು 'ಮುಕ್ತಿ' ಎಂದು ಕರೆದಿದ್ದಾನೆ.

58. ಕಾಯದ ಸಂಗದ ಜೀವ ಉಳ್ಳನ್ನಕ್ಕರ
ಎಂದೂ ಭವ ಹಿಂಗದು ಗುಹೇಶ್ವರ. (323/163)

ಕಾಯ=ಮಯ್/ದೇಹ; ಸಂಗ=ಕೂಡುವಿಕೆ/ಹೊಂದಿಕೆ; ಜೀವ=ಪ್ರಾಣ/ಉಸಿರು; ಉಳ್=ಇರುವುದು; ಅನ್ನಕ್ಕರ=ವರೆಗೆ/ತನಕ;

ಕಾಯದ ಸಂಗದ ಜೀವ ಉಳ್ಳನ್ನಕ್ಕರ=ದೇಹದೊಡನೆ ಉಸಿರು ಬೆರೆತು ವ್ಯಕ್ತಿಯು ಜೀವಂತನಾಗಿರುವ ತನಕ;

ಎಂದೂ=ಯಾವಾಗಲೂ/ಸದಾಕಾಲ; ಭವ=ಈ ಲೋಕದಲ್ಲಿ ವ್ಯಕ್ತಿಯ ಜೀವನದಲ್ಲಿ ಉಂಟಾಗುವ ನೋವು ನಲಿವು ಮತ್ತು ಒಳಿತು ಕೆಡುಕು;

ಹಿಂಗು=ಬಿಟ್ಟುಹೋಗು/ಇಲ್ಲವಾಗು; ಹಿಂಗದು=ಇಲ್ಲವಾಗುವುದಿಲ್ಲ; ಗುಹೇಶ್ವರ=ಶಿವ/ಅಲ್ಲಮನ ವಚನಗಳಲ್ಲಿ ಕಂಡುಬರುವ ಅಂಕಿತನಾಮ;

ವ್ಯಕ್ತಿಯು ಜೀವಂತವಾಗಿರುವ ತನಕ ಅವನ ಮಯ್ ಮನದಲ್ಲಿ ಎಲ್ಲ ಬಗೆಯ ಒಳಿತು ಕೆಡುಕಿನ ಒಳಮಿಡಿತಗಳು ತುಡಿಯುತ್ತಿರುತ್ತವೆ ಮತ್ತು ಅವನ ಬದುಕಿನಲ್ಲಿ ಒಂದಲ್ಲ ಒಂದು ಬಗೆಯ ನೋವು ನಲಿವುಗಳು ಇದ್ದೇ ಇರುತ್ತವೆ. ಆದ್ದರಿಂದ ಸಾವು ಬರುವ ತನಕ ವ್ಯಕ್ತಿಯು ತನ್ನ ಮನದಲ್ಲಿ ಮೂಡುವ ಒಳಮಿಡಿತಗಳಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಜೀವನದ ಉಂಟಾಗುವ ಎಡರು ತೊಡರುಗಳನ್ನು ಸಮಚಿತ್ತದಿಂದ ಎದುರಿಸಿ ಬಾಳಬೇಕೆಂಬುದನ್ನು ಅರಿತುಕೊಳ್ಳಬೇಕು;

59. ಕೋಪ ತಾಪವ ಬಿಟ್ಟು ಭ್ರಾಂತಿ ಭ್ರಮೆಯಂ ಬಿಟ್ಟು
ಜಂಗಮವಾಗಬೇಕು ಕಾಣಿರೆ ಮರುಳುಗಳಿರಾ. (1137/242)

ಕೋಪ=ಸಿಟ್ಟು/ಆಕ್ರೋಶ/ಮುನಿಸು; ತಾಪ=ಸಂಕಟ/ನೋವು/ವೇದನೆ; ಬಿಡು=ತೊರೆ/ತ್ಯಜಿಸು; ಬಿಟ್ಟು=ಹೋಗಲಾಡಿಸಿಕೊಂಡು/ಇಲ್ಲವಾಗಿಸಿಕೊಂಡು;

ಭ್ರಾಂತಿ=ತಪ್ಪು ತಿಳುವಳಿಕೆ; ಭ್ರಮೆ=ಇರುವುದನ್ನು ಇಲ್ಲವೆಂದೂ, ಇಲ್ಲದ್ದನ್ನು ಇದೆಯೆಂದೂ ನಂಬುವುದು;

ಜಂಗಮ+ಆಗಬೇಕು; ಜಂಗಮ=ಸಹ ಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಡೆನುಡಿಗಳಲ್ಲಿ ಶಿವನನ್ನು ಕಾಣುವವನು/ಜನಮನದಲ್ಲಿ ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯಾಗುವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಮೂಡಿಸುವವನು; ಕಾಣ್=ನೋಡು/ತಿಳಿ; ಕಾಣಿರೆ=ಅರಿತುಕೊಳ್ಳಿರಿ/ತಿಳಿದುಕೊಳ್ಳಿರಿ;

ಮರುಳು=ದಡ್ಡ/ತಿಳಿಗೇಡಿ;

ವ್ಯಕ್ತಿಯು ಒಳ್ಳೆಯ ನಡೆನುಡಿಗಳಿಂದ ಬಾಳಬೇಕಾದರೆ, ತನ್ನ ಮಯ್ ಮನದಲ್ಲಿ ನಾನಾ ಕಾರಣಗಳಿಂದಾಗಿ ಮೂಡಿಬರುವಂತಹ ಕೋಪವನ್ನು ಹತೋಟಿಯಲ್ಲಿಟ್ಟುಕೊಂಡು, ತನ್ನನ್ನು ಮತ್ತು ಇತರರನ್ನು ಸಂಕಟಕ್ಕೆ ಇಲ್ಲವೇ ದುರಂತಕ್ಕೆ ದೂಡುವಂತಹ ಪ್ರಸಂಗ ಉಂಟಾಗದಂತೆ ತಡೆಗಟ್ಟಬೇಕು. ಜಾತಿ, ಮತ ಮತ್ತು ದೇವರ ಬಗೆಗೆ ಪರಂಪರಾಗತವಾಗಿ ತನ್ನ ಮನದಲ್ಲಿ ನೆಲೆಗೊಂಡಿರುವ ಬಹುಬಗೆಯ ತಪ್ಪು ಕಲ್ಪನೆಗಳನ್ನು ಹೊರಹಾಕಬೇಕು. ಆಗ ಮಾತ್ರ ಜಂಗಮನಾದ ವ್ಯಕ್ತಿಯು ಅರಿವಿನ ಹಾದಿಯಲ್ಲಿ ಹೇಗೆ ಮುನ್ನಡೆಯು

ತ್ತಿರುತ್ತಾನೆಯೋ ಅಂತೆಯೇ ಅರಿವನ್ನು ಪಡೆದ ವ್ಯಕ್ತಿಯ ಬದುಕು ಒಳಿತಿನ ಹಾದಿಯಲ್ಲಿ ಸಾಗುತ್ತಿರುತ್ತದೆ ಎಂಬ ಇಂಗಿತವನ್ನು ಈ ಸಾಲುಗಳು ಸೂಚಿಸುತ್ತಿವೆ.

'ಜಂಗಮ' ಎಂಬ ಪದ ಇಲ್ಲಿ ಒಂದು ರೂಪಕವಾಗಿ ಬಳಕೆಯಾಗಿದೆ. 'ಜಂಗಮ' ಎಂಬ ಪದಕ್ಕೆ ಒಂದೇ ಕಡೆಯಲ್ಲಿ ನೆಲೆಯಾಗಿ ನಿಲ್ಲದೆ, ಸದಾಕಾಲ ಸಂಚರಿಸುತ್ತಿರುವುದು ಎಂಬ ತಿರುಳಿದೆ. ಮಾನವ ಸಮುದಾಯವು ಜಾತಿ, ಮತ, ದೇವರ ಹೆಸರಿನಲ್ಲಿ ಕಟ್ಟಿಕೊಂಡಿರುವ ಕಟ್ಟುಪಾಡುಗಳಿಗೆ ಮತ್ತು ನಂಬಿಕೆಗಳಿಗೆ ವ್ಯಕ್ತಿಯು ಅಂಟಿಕೊಳ್ಳದೆ, ಅವುಗಳಿಂದ ಮಾನಸಿಕವಾಗಿ ಹೊರಬಂದು ಒಳ್ಳೆಯ ನಡೆನುಡಿಗಳಿಂದ ಜೀವನವನ್ನು ಮುನ್ನಡೆಸುವಂತಾಗಬೇಕು ಎಂಬ ತಿರುಳಿನಲ್ಲಿ 'ಜಂಗಮ' ಪದ ಬಳಕೆಯಾಗಿದೆ.

60. ನಿನಗೆ ನೀನೆ ಗುರುವಲ್ಲದೆ
ನಿನ್ನಿಂದಧಿಕಮಪ್ಪ ಗುರುವುಂಟೆ. (1157/244)

ಗುರು+ಅಲ್ಲದೆ; ಗುರು=ಮಕ್ಕಳಿಗೆ ವಿದ್ಯೆಯನ್ನು ಕಲಿಸಿ, ತಿಳುವಳಿಕೆಯನ್ನು ಹೇಳಿ, ಅವರ ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ ವ್ಯಕ್ತಿ; ನಿನ್ನ+ಇಂದ+ ಅಧಿಕಮ್+ಅಪ್ಪ; ನಿನ್ನಿಂದ=ನಿನಗಿಂತಲೂ; ಅಧಿಕ=ಹೆಚ್ಚಾದುದು/ಉತ್ತಮ ವಾದುದು/ಮೇಲಾದುದು;

ಅಪ್ಪ=ಆಗಿರುವ; ಗುರು+ಉಂಟೆ; ಉಂಟು=ಇರುವುದು; ಉಂಟೇ= ಇದೆಯೇ/ಇದ್ದಾರೆಯೇ;

ವ್ಯಕ್ತಿಯು ತನ್ನ ಜೀವನವನ್ನು ಒಳ್ಳೆಯ ರೀತಿಯಲ್ಲಿ ರೂಪಿಸಿಕೊಂಡು ಮುನ್ನಡೆಸುವ ಜವಾಬ್ದಾರಿಯನ್ನು ತಾನೇ ಹೊತ್ತಿರಬೇಕು ಎಂಬುದನ್ನು "ನಿನಗೆ ನೀನೇ ಗುರು; ನಿನಗಿಂತ ದೊಡ್ಡವರಾದ ಮತ್ತೊಬ್ಬ ಗುರುವಿಲ್ಲ" ಎಂಬ ನುಡಿಗಳು ಸೂಚಿಸುತ್ತಿವೆ.

ಜೀವನದಲ್ಲಿ 'ಯಾವುದು ಸರಿ–ಯಾವುದು ತಪ್ಪು; ಯಾವುದು ನಿಜ– ಯಾವುದು ಸುಳ್ಳು; ಯಾವುದು ನೀತಿ–ಯಾವುದು ಅನೀತಿ' ಎಂಬ ಅರಿವನ್ನು ವ್ಯಕ್ತಿಯು ಪಡೆದುಕೊಳ್ಳಬೇಕು. ಆಗ ವ್ಯಕ್ತಿಯು ತನ್ನ ಮಯ್ ಮನದಲ್ಲಿ ಸದಾಕಾಲ ಮೂಡಿಬರುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯತನದಿಂದ ಜೀವನವನ್ನು ನಡೆಸಲು ಅರಿವು ಎಂಬುದೇ ಗುರುವಾಗಿ, ವ್ಯಕ್ತಿಯನ್ನು ಒಳ್ಳೆಯ ದಾರಿಯಲ್ಲಿ ಕರೆದೊಯ್ಯುತ್ತದೆ.

61. ನಿಮ್ಮನರಿದ ಶರಣಂಗೆ ಪೂಜೆಯ ಹಂಬಲ ದಂದುಗವೇಕೆ. (425/171)

ನಿಮ್ಮನ್+ಅರಿದ; ನಿಮ್ಮನ್ನು=ಶಿವನನ್ನು/ದೇವರನ್ನು; ಅರಿ=ತಿಳಿ/ಕಲಿ; ಅರಿದ=ತಿಳಿದ; ಶರಣಂಗೆ=ಶರಣನಿಗೆ; ಶರಣ=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ನಂಬಿ ನಡೆದುಕೊಳ್ಳುತ್ತಿರುವ ವ್ಯಕ್ತಿ; ಪೂಜೆ=ಶಿವನ ವಿಗ್ರಹವನ್ನು ಹೂವು ಹಣ್ಣು ಉಡುಗೆ ತೊಡುಗೆಗಳಿಂದ ಸಿಂಗರಿಸಿ, ದೂಪ ದೀಪಗಳಿಂದ ಆರತಿಯನ್ನು ಬೆಳಗಿಸುವುದು; ಹಂಬಲ=ಹೆಚ್ಚಾದ ಬಯಕೆ/ಕಾತರ/ಆಸೆ; ದಂದುಗ+ಏಕೆ; ದಂದುಗ=ಕೆಲಸ/ಕಾರ್ಯ/ಆಚರಣೆ; ಏಕೆ=ಯಾವುದಕ್ಕಾಗಿ;

ಕಲ್ಲು, ಮಣ್ಣು, ಮರ, ಲೋಹದಿಂದ ಮಾಡಿದ ವಿಗ್ರಹ ರೂಪಿಯಾದ ಶಿವನಿಗೆ ಮಾಡುವ ಯಾವುದೇ ಬಗೆಯ ಆಚರಣೆಯನ್ನಾಗಲಿ ಇಲ್ಲವೇ ದೇವರ ಪೂಜೆಯನ್ನಾಗಲಿ ಶಿವಶರಣಶರಣೆಯರು ದೊಡ್ಡದೆಂದು ಪರಿಗಣಿಸಿರಲಿಲ್ಲ. ಏಕೆಂದರೆ ವ್ಯಕ್ತಿಯು ತನಗೆ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಸಾಮಾಜಿಕ ನಡೆನುಡಿಗಳಲ್ಲಿ ಅವರು ಶಿವನನ್ನು ಕಾಣುತ್ತಿದ್ದರು. ಆದ್ದರಿಂದ ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಗೆ ದೇವರ ಪೂಜೆಯ ಅಗತ್ಯವಿಲ್ಲ ಎಂಬ ಶಿವಶರಣಶರಣೆಯರ ನಿಲುವನ್ನು ಈ ನುಡಿಗಳು ಸೂಚಿಸುತ್ತಿವೆ.

62. ವ್ರತಗೇಡಿ ವ್ರತಗೇಡಿ ಎಂಬವ ತಾನೆ ವ್ರತಗೇಡಿ. (182/153)

ವ್ರತ+ಕೇಡಿ; ವ್ರತ=ಶಾಸ್ತ್ರದ ಹೊತ್ತಿಗೆಗಳಲ್ಲಿ ಹೇಳಿರುವಂತೆ ಕಟ್ಟುನಿಟ್ಟಾದ ಕ್ರಮದಲ್ಲಿ ಮಾಡುವ ದೇವರ ಪೂಜೆ; ಜಪ, ತಪ, ಉಪವಾಸ, ದೇಹ ದಂಡನೆ ಮುಂತಾದ ಕಟ್ಟುಪಾಡುಗಳ ಮೂಲಕ ಮಾಡುವ ಆಚರಣೆ; ಕೇಡು=ನಾಶ/ಅಳಿವು; ಕೇಡಿ=ಹಾಳು ಮಾಡುವವನು; **ವ್ರತಗೇಡಿ**=ವ್ರತವನ್ನು ಹಾಳು ಮಾಡುವವನು/ತಪ್ಪು ತಪ್ಪಾಗಿ ಆಚರಿಸುವವನು; ಎಂಬವ=ಎಂದು ಹೇಳುವವನು; ತಾನೆ=ಆ ವ್ಯಕ್ತಿಯೇ;

ದೇವರನ್ನು ಪೂಜಿಸಲು ಶಾಸ್ತ್ರಗಳಲ್ಲಿ ಹೇಳಿರುವ ಮತ್ತು ಹಿಂದಿನಿಂದಲೂ ಜನಸಮುದಾಯದ ಆಚರಣೆಯಲ್ಲಿ ನಡೆದುಬಂದಿರುವ ಕಟ್ಟಲೆಗಳನ್ನು ಹಾಗೂ ಸಂಪ್ರದಾಯಗಳನ್ನು ದೊಡ್ಡದೆಂದು ನಂಬಿರುವ ವ್ಯಕ್ತಿಗೆ ಪೂಜೆಯಲ್ಲಿ ಬಳಸ

ಬೇಕಾದ ವಸ್ತುಗಳು ಮತ್ತು ಪೂಜೆಯನ್ನು ಮಾಡುವ ಆಚರಣೆಗಳು ದೊಡ್ಡದಾಗುತ್ತವೆಯೇ ಹೊರತು, ನಿಜ ಜೀವನದಲ್ಲಿ ವ್ಯಕ್ತಿಗಳ ಒಳ್ಳೆಯ ನಡೆನುಡಿಗಳು ದೊಡ್ಡದಾಗುವುದಿಲ್ಲ. ಆದ್ದರಿಂದಲೇ ಪೂಜೆಯ ಪ್ರತಿಯೊಂದು ಹಂತದಲ್ಲಿಯೂ 'ಮಡಿ ಮಡಿ' ಎಂದು ಬಡಬಡಿಸುತ್ತಾ, ಎಲ್ಲಿ ಮೈಲಿಗೆ ಆಗುವುದೋ ಎಂಬ ಆತಂಕದಿಂದ ಕೂಡಿರುತ್ತಾನೆ.

ವ್ಯಕ್ತಿಯು ತನಗೆ ಒಳಿತನ್ನು ಮಾಡಿಕೊಳ್ಳುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗೆ ನೆರವಾಗುವಂತಹ ನಡೆನುಡಿಗಳ ಆಚರಣೆಯೇ ಶಿವಶರಣ ಶರಣೆಯರ ಪಾಲಿನ ವ್ರತವಾಗಿತ್ತು. ಆದ್ದರಿಂದಲೇ ಬಹಿರಂಗದಲ್ಲಿ ಮಾಡುತ್ತಿರುವ ಯಾವುದೇ ಬಗೆಯ ಪೂಜೆಯ ಆಚರಣೆಗಳನ್ನು ಅವರು ಒಳ್ಳೆಯ ನಡೆನುಡಿ ಗಳಿಗಿಂತ ದೊಡ್ಡದೆಂದು ನಂಬಿರಲಿಲ್ಲ.

ಇತರರ ನಡೆನುಡಿಗಳಲ್ಲಿ ಕಂಡುಬರುವ ಒಳ್ಳೆಯದನ್ನು ಕಡೆಗಣಿಸಿ, ಸದಾಕಾಲ ಅವರ ತಪ್ಪುಗಳನ್ನೇ ಹುಡುಕಿ ತೆಗೆತೆಗೆದು ಎತ್ತಿ ಆಡುತ್ತಿರುವ ವ್ಯಕ್ತಿಯು ತಾನೇ ಕೆಟ್ಟ ನಡೆನುಡಿಗಳಿಂದ ಕೂಡಿರುತ್ತಾನೆ ಎಂಬ ಇಂಗಿತವನ್ನು ಕೂಡ "ವ್ರತಗೇಡಿ ವ್ರತಗೇಡಿ ಎಂಬವ ತಾನೆ ವ್ರತಗೇಡಿ" ಎಂಬ ಮಾತುಗಳಲ್ಲಿ ಕಾಣಬಹುದು.

63. ಆವ ವೇಷವಾದಡೇನು ತಾಮಸಧಾರಿಗಳು
ಕಾಮ ಕ್ರೋಧ ಲೋಭ ಬಿಡದ ನಾನಾ ವಿಧದ ಡಂಭಕರು.

(510/178)

ಆವ=ಯಾವ/ಯಾವುದೇ ಬಗೆಯ; ವೇಷ+ಆದಡೆ+ಏನು; ವೇಷ=ಉಡುಗೆ ತೊಡುಗೆ ರೂಪ; ಆದಡೆ=ಆದರೆ; ಏನು=ಯಾವುದು;

ತಾಮಸ=ಕತ್ತಲೆ/ನೀಚತನ; ಧಾರಿ=ಹೊಂದಿರುವವನು; ತಾಮಸಧಾರಿ=ಕೆಟ್ಟ ನಡೆನುಡಿಗಳಿಂದ ಕೂಡಿದವನು;

ಕಾಮ=ಗಂಡು ಹೆಣ್ಣಿನ ನಡುವಣ ದೇಹದ ನಂಟಿನ ಬಯಕೆ; ಕ್ರೋಧ= ಕೋಪ/ಆಕ್ರೋಶ; ಲೋಭ=ಜಿಪುಣತನ/ಅತಿಯಾಸೆ; ಬಿಡು= ತೊರೆ/ತ್ಯಜಿಸು; ಬಿಡದ=ತೊರೆಯದ/ತ್ಯಜಿಸದ; ನಾನಾ=ಅನೇಕ/ಹಲವು; ವಿಧ=ರೀತಿ/ಬಗೆ; ಡಂಭಕ=ಮೋಸಗಾರ/ವಂಚಕ;

ಆವ ವೇಷವಾದಡೇನು = "ಯಾವ ಬಗೆಯ ಉಡುಗೆ ತೊಡುಗೆಯನ್ನು ತೊಟ್ಟಿದ್ದರೆ ಏನು ತಾನೆ ಪ್ರಯೋಜನ" –ಈ ನುಡಿಗಳು ಒಂದು ರೂಪಕವಾಗಿ ಬಳಕೆಯಾಗಿವೆ. 'ಉಡುಗೆ ತೊಡುಗೆ' ಎಂಬುದು ವ್ಯಕ್ತಿಯು ತಳೆದಿರುವ ಸಾಮಾಜಿಕ ಪಾತ್ರಕ್ಕೆ ಸಂಕೇತವಾಗಿದೆ. 'ಸಾಮಾಜಿಕ ಪಾತ್ರ' ಎಂದರೆ ವ್ಯಕ್ತಿಯು ಹೊಂದಿರುವ ಹುದ್ದೆ, ಹೊಣೆಗಾರಿಕೆ ಮತ್ತು ಮಾಡಬೇಕಾದ ಕೆಲಸ.

ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತೇವೆ ಎಂದು ಹೇಳಿಕೊಂಡು ರಾಜಕೀಯ ರಂಗದಲ್ಲಿ ಮುಂದಾಳುಗಳ ಸೋಗಿನಲ್ಲಿ ಬರುತ್ತಾರೆ; ಸತ್ಯ ಮತ್ತು ನೀತಿಯನ್ನು ಜನರಿಗೆ ತಿಳಿಯ ಹೇಳಿ ಸಮಾಜವನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯುತ್ತೇವೆ ಎಂದು ಕಾವಿಯನ್ನು ತೊಟ್ಟು ಗುರುಗಳಾಗಿ ಇಲ್ಲವೇ ದೇವಮಾನವರ ರೂಪಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಇವರಲ್ಲಿ ಬಹುತೇಕ ಮಂದಿ ಎಲ್ಲಾ ಬಗೆಯ ಕೆಟ್ಟ ಗುಣಗಳನ್ನು ಹೊಂದಿದವರಾಗಿದ್ದು, ಜನರನ್ನು ವಂಚಿಸುವ ಕಲೆಯಲ್ಲಿ ಪರಿಣತರಾಗಿರುತ್ತಾರೆ.

ಜನಸಮುದಾಯದ ಹಿತವನ್ನು ಕಾಪಾಡುವ ಮತ್ತು ಸಮಾಜವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತಿರುವ ವ್ಯಕ್ತಿಗಳು, ಅವರು ಯಾರೇ ಆಗಿರಲಿ ಕೆಟ್ಟ ನಡೆನುಡಿಗಳಿಂದ ಕೂಡಿದ್ದರೆ, ಅಂತಹ ವ್ಯಕ್ತಿಗಳಿಂದ ಸಹ ಮಾನವರಿಗಾಗಲಿ ಮತ್ತು ಸಮಾಜಕ್ಕಾಗಲಿ ಯಾವೊಂದು ಪ್ರಯೋಜನವೂ ಇಲ್ಲ ಎಂಬುದನ್ನು ಈ ನುಡಿಗಳು ಸೂಚಿಸುತ್ತವೆ.

64. ಕಾಯವುಳ್ಳನ್ನಕ್ಕ ಶರಣರ ಸಂಗದಿಂದ ಅರಿಯಬೇಕು
ಜೀವವುಳ್ಳನ್ನಕ್ಕ ಅರಿವಿನ ಮುಖದಿಂದ ಅರಿಯಬೇಕು. (1096/239)

ಕಾಯ+ಉಳ್+ಅನ್ನಕ್ಕ; ಕಾಯ=ದೇಹ/ಶರೀರ/ಮಯ್; ಉಳ್=ಇರು; ಅನ್ನಕ್ಕ=ವರೆಗೆ/ತನಕ; ಉಳ್ಳನ್ನಕ್ಕ=ಇರುವ ತನಕ;

ಶರಣ=ಜೀವನದಲ್ಲಿ ಒಳ್ಳೆಯ ನಡೆನುಡಿಗಳೇ ಶಿವನೆಂದು ನಂಬಿ ನಡೆಯುವ ವ್ಯಕ್ತಿ; ಸಂಗ+ಇಂದ; ಸಂಗ=ಸಹವಾಸ/ಒಡನಾಟ/ಗೆಳೆತನ; ಅರಿ=ತಿಳಿ/ಕಲಿ; ಅರಿಯಬೇಕು=ತಿಳಿದುಕೊಳ್ಳಬೇಕು;

ಜೀವ+ಉಳ್+ಅನ್ನಕ್ಕ; ಜೀವ=ಪ್ರಾಣ/ಉಸಿರು; **ಜೀವವುಳ್ಳನ್ನಕ್ಕ**=ಜೀವಂತವಾಗಿರುವ ತನಕ/ಸಾವು ಬರುವ ತನಕ; ಅರಿವು=ಜೀವನದಲ್ಲಿ ಯಾವುದು ಸರಿ–

ಯಾವುದು ತಪ್ಪು; ಯಾವುದು ನಿಜ–ಯಾವುದು ಸುಳ್ಳು; ಯಾವ ರೀತಿಯಲ್ಲಿ ಬಾಳಬೇಕು–ಯಾವ ರೀತಿಯಲ್ಲಿ ಬಾಳಬಾರದು ಎಂಬ ತಿಳುವಳಿಕೆ; ಮುಖ+ಇಂದ; ಮುಖ=ಮೋರೆ/ಮೊಗ; **ಅರಿವಿನ ಮುಖದಿಂದ**=ತಿಳುವಳಿಕೆಯನ್ನು ಪಡೆಯುವುದರ ಮೂಲಕ;

ಶಿವಶರಣ ಜತೆಯ ಒಡನಾಟದಿಂದ ಮತ್ತು ಅವರ ಹಿತವಚನವನ್ನು ಕೇಳುವುದರ ಮೂಲಕ ವ್ಯಕ್ತಿಯು ಅರಿವನ್ನು ಪಡೆದುಕೊಂಡು, ತನ್ನ ಜೀವನದ ಕೊನೆ ಗಳಿಗೆಯ ತನಕ ಮಯ್ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳಬೇಕು.

65. ಕೀರ್ತಿವಾರ್ತೆಗೆ ಮಾಡುವ ಭಕ್ತ ತಪ್ಪಿದಡೆ ಅದ ಮನಕ್ಕೆ ತರಲಿಲ್ಲ
ಸಜ್ಜನ ಸದ್ಭಕ್ತನೆಡಹಿದಡೆ ಅದ ಸೈರಿಸಬಾರದು ಕೇಳಾ. (1569/285)

ಕೀರ್ತಿ=ಹೆಸರನ್ನು ಪಡೆಯುವುದು/ಹೆಸರುವಾಸಿಯಾಗುವುದು; ವಾರ್ತೆ=ಸುದ್ದಿ/ಸಮಾಚಾರ; **ಕೀರ್ತಿವಾರ್ತೆ**=ವ್ಯಕ್ತಿಯ ಹೆಸರು ಮತ್ತು ಅವನು ಮಾಡಿದ ಕೆಲಸಗಳು ಎಲ್ಲೆಡೆ ಕೇಳಿಬರುವಂತಾಗಿ ವ್ಯಕ್ತಿಯು ಜನಮನ್ನಣೆಗೆ ಪಾತ್ರನಾಗುವುದು; ಮಾಡು=ಆಚರಿಸು/ನೆರವೇರಿಸು; ಭಕ್ತ=ದೇವರನ್ನು ನಂಬಿ ಪೂಜಿಸುವವನು; ತಪ್ಪು=ಇತರರಿಗೆ ಹಾನಿಯನ್ನುಂಟುಮಾಡುವ ಕೆಲಸವನ್ನು ಮಾಡುವುದು/ಸಮಾಜ ಒಪ್ಪಿತವಾದ ರೀತಿನೀತಿಗಳನ್ನು ಬಿಟ್ಟು ಬಾಳುವುದು; ತಪ್ಪಿದಡೆ=ತಪ್ಪನ್ನು ಮಾಡಿದರೆ; ಅದ=ಅದನ್ನು/ಅಂತಹ ತಪ್ಪನ್ನು; ಮನಕ್ಕೆ=ಮನಸ್ಸಿಗೆ; ತರಲ್+ಇಲ್ಲ; ತರು=ತೆಗೆದುಕೊಂಡುಬರುವುದು; ತರಲಿಲ್ಲ=ತೆಗೆದುಕೊಳ್ಳಲಿಲ್ಲ;

ಸಜ್ಜನ=ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿ; ಸದ್ಭಕ್ತನ್+ಎಡಹಿದಡೆ; ಸದ್ಭಕ್ತ=ಒಳ್ಳೆಯ ನಡೆನುಡಿಯುಳ್ಳ ಶಿವಶರಣ; ಎಡಹು=ಮುಗ್ಗರಿಸು/ನಡೆಯುವಾಗ ಕಾಲು ತೊಡರಿ ಬೀಳುವುದು; ಎಡಹಿದಡೆ=ಮುಗ್ಗರಿಸಿದರೆ;

‘ಸಜ್ಜನ ಸದ್ಭಕ್ತನೆಡಹಿದಡೆ’ ಎಂಬ ನುಡಿಯು ಒಂದು ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ. ಒಳ್ಳೆಯ ಗುಣವಂತನಾದ ವ್ಯಕ್ತಿಯು ಜೀವನದಲ್ಲಿ ಕೆಟ್ಟ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನುಂಟುಮಾಡುವುದು;

ಸೈರಿಸು=ತಾಳು/ಸಹಿಸು; ಸೈರಿಸಬಾರದು=ಸಹಿಸಿಕೊಳ್ಳಬಾರದು/ಸುಮ್ಮನಿರಬಾರದು; ಕೇಳ್=ಆಲಿಸು/ಕೇಳು; ಕೇಳಾ=ಕೇಳುವಂತಹವನಾಗು/ತಿಳಿಯುವಂತಹವನಾಗು/ಆಲೋಚಿಸು ನೋಡು;

ದೇವರ ಪೂಜೆಗೆ ಮತ್ತು ದೇಗುಲದಲ್ಲಿ ನಿತ್ಯವೂ ನಡೆಯುವ ಆಚರಣೆಗಳಿಗೆ ಅಪಾರವಾದ ಸಂಪತ್ತನ್ನು ನೀಡುವುದರ ಮೂಲಕ ಜನಸಮುದಾಯದ ನಡುವೆ ಹೆಸರುವಾಸಿಯಾಗಿದ್ದ ವ್ಯಕ್ತಿಯೊಬ್ಬನು ಕೆಟ್ಟ ಕೆಲಸವನ್ನು ಮಾಡಿದರೆ, ಅದನ್ನು ದೊಡ್ಡ ತಪ್ಪೆಂದು ಪರಿಗಣಿಸಬೇಕಾಗಿಲ್ಲ. ಏಕೆಂದರೆ ಆತ ಹಣವನ್ನು ಸುರಿದು ದೇವರನ್ನು ಪೂಜಿಸುತ್ತಿದ್ದನೇ ಹೊರತು ಒಳ್ಳೆಯ ನಡೆನುಡಿಗಳನ್ನು ಹೊಂದಿರಲಿಲ್ಲ. ಬಹಿರಂಗದಲ್ಲಿ ದೇವರಲ್ಲಿ ಒಲವುಳ್ಳ ಶರಣನಂತೆ ಕಾಣುತ್ತಿದ್ದನೆ ಹೊರತು, ನಿತ್ಯ ಜೀವನದ ವ್ಯವಹಾರಗಳಲ್ಲಿ ಕೆಟ್ಟವನಾಗಿದ್ದ.

ಆದರೆ ನಿತ್ಯ ಜೀವನದ ವ್ಯವಹಾರದಲ್ಲಿ ಸದಾಕಾಲ ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿಯು ಇದ್ದಕ್ಕಿದ್ದಂತೆ ಕೆಟ್ಟದ್ದನ್ನು ಮಾಡತೊಡಗಿದರೆ, ಅದನ್ನು ಸಹಿಸಿಕೊಂಡು ಸುಮ್ಮನಿರಬಾರದು. ಆತನಿಗೆ ಎಚ್ಚರಿಕೆಯನ್ನು ನೀಡಿ ಮತ್ತೆ ಅಂತಹ ತಪ್ಪು ಅವನಿಂದ ಆಗದಂತೆ ಗುರುಹಿರಿಯರು ಮತ್ತು ಗೆಳೆಯರು ನೋಡಿಕೊಳ್ಳಬೇಕು.

ಏಕೆಂದರೆ ಒಳ್ಳೆಯ ವ್ಯಕ್ತಿಯು ಎಚ್ಚರ ತಪ್ಪಿ ಕೆಟ್ಟತನದಿಂದ ವರ್ತಿಸತೊಡಗಿದಾಗ, ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯಾಗುವುದರ ಜತೆಗೆ, ಜನರು ಒಳ್ಳೆಯತನದಲ್ಲಿ ಇಟ್ಟಿರುವ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಇದರಿಂದಾಗಿ ಒಳ್ಳೆಯವನಲ್ಲಿ ಮತ್ತು ಕೆಟ್ಟವನಲ್ಲಿ ವ್ಯತ್ಯಾಸವನ್ನೇ ಕಾಣಲಾಗದೆ, ಜೀವನದಲ್ಲಿ ಒಳ್ಳೆಯದು ಕೆಟ್ಟದ್ದೆಲ್ಲವನ್ನೂ ಒಂದೇ ತಕ್ಕಡಿಯಲ್ಲಿಟ್ಟು ನೋಡತೊಡಗುತ್ತಾರೆ.

66. ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ
ತನುವೆಲ್ಲ ಹುಸಿಸ್ಥಲ ಶರಣನೆಂತೆಂಬೆ. (643/187)

ಕೈ+ಅಲ್ಲಿ; ಕರ=ಕಯ್; ಸ್ಥಲ=ನೆಲೆ/ಜಾಗ; ಕರಸ್ಥಲ=ಶಿವಶರಣಶರಣೆಯರು ತಮ್ಮ ಅಂಗಯ್ ಮೇಲೆ ಇಟ್ಟುಕೊಂಡು ಪೂಜಿಸುವ ಲಿಂಗ/ಇಷ್ಟಲಿಂಗ;

ಮನ+ಅಲ್ಲಿ; ಮನ=ಮನಸ್ಸು/ಚಿತ್ತ; ಪರ=ಬೇರೆ/ಅನ್ಯ/ಇತರ; ಪರಸ್ಥಲ= ಬೇರೊಂದು ಕಡೆಯಲ್ಲಿರುವುದು ಚಂಚಲಗೊಂಡಿರುವುದು;

ತನು+ಎಲ್ಲ; ತನು=ದೇಹ/ಮಯ್/ಶರೀರ; ಹುಸಿ=ಸುಳ್ಳು; ಹುಸಿಸ್ಥಲ= ಸುಳ್ಳಿನಿಂದ ಕೂಡಿರುವುದು;

ಶರಣನ್+ಎಂತು+ಎಂಬೆ; ಶರಣ=ಶಿವನನ್ನು ಪೂಜಿಸುವವನು/ಶಿವನನ್ನು

ಒಲಿದವನು; ಎಂತು=ಯಾವ ರೀತಿ/ಯಾವ ಬಗೆ; ಎಂಬೆ=ಎನ್ನುವೆ/ಹೇಳುವೆ; ಎಂತೆಂಬೆ=ಹೇಗೆ ತಾನೆ ಹೇಳುವೆ/ಯಾವ ರೀತಿಯಲ್ಲಿ ಹೇಳಲಿ;

ಅಂಗಯ್ ಮೇಲೆ ಲಿಂಗವನ್ನು ಇಟ್ಟುಕೊಂಡು ಪೂಜಿಸುತ್ತಿರುವ ವ್ಯಕ್ತಿಯ ಮನವು ಚಂಚಲತೆಗೆ ಒಳಗಾಗಿ ಕೆಟ್ಟ ಸಂಗತಿಗಳನ್ನು ಕುರಿತು ಆಲೋಚಿಸುತ್ತಿದ್ದರೆ ಮತ್ತು ನಿತ್ಯ ಜೀವನದಲ್ಲಿ ಅವನ ವ್ಯವಹಾರಗಳೆಲ್ಲವೂ ಸುಳ್ಳು ಹಾಗೂ ವಂಚನೆಯಿಂದಲೇ ಕೂಡಿದ್ದರೆ, ಅಂತಹವನನ್ನು ಶರಣನೆಂದು ಕರೆಯಲಾಗುವುದಿಲ್ಲ.

ಏಕೆಂದರೆ ಶರಣನಾದವನು ತನ್ನ ಮನದಲ್ಲಿ ಮೂಡುವ ಒಳ್ಳೆಯ ಮತ್ತು ಕೆಟ್ಟ ತುಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ನಿತ್ಯ ಜೀವನದಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ನಿಜದ ನಡೆನುಡಿಗಳಿಂದ ಬಾಳಬೇಕು.

ಶಿವನ ಪೂಜೆಯನ್ನು ಮಾಡುವ ವ್ಯಕ್ತಿಯು ಸಾಮಾಜಿಕವಾಗಿ ಒಳ್ಳೆಯ ನಡೆನುಡಿಯುಳ್ಳವನಾಗಿರಬೇಕು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

67. ಪ್ರಣತೆಯೂ ಇದೆ ಬತ್ತಿಯೂ ಇದೆ
ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ
ಗುರುವಿದೆ ಲಿಂಗವಿದೆ ಶಿಷ್ಯನ ಸುಜ್ಞಾನ ಅಂಕುರಿಸದನ್ನಕ್ಕರ
ಭಕ್ತಿ ಎಲ್ಲಿಯದೊ. (78/144)

ಪ್ರಣತೆ=ಹಣತೆ/ಮಣ್ಣಿನ ದೀಪ; ಬತ್ತಿ=ದೀಪದಲ್ಲಿ ಇಡುವುದಕ್ಕಾಗಿ ಹತ್ತಿಯ ಎಳೆಗಳನ್ನು ಹೊಸೆದು ಮಾಡಿದ ವಸ್ತು;

ಜ್ಯೋತಿ=ಬೆಳಕು/ಕಾಂತಿ/ಪ್ರಕಾಶ; ಬೆಳಗುವಡೆ=ದೀಪ ಹೊತ್ತಿಕೊಂಡು ಬೆಳಕನ್ನು ನೀಡಬೇಕಾದರೆ;

ತೈಲ+ಇಲ್ಲದೆ; ತೈಲ=ಎಳ್ಳು, ಕಡಲೆಕಾಯಿ ಮುಂತಾದ ಕಾಳುಗಳನ್ನು ಅರೆದು ತೆಗೆದ ಎಣ್ಣೆ; ಪ್ರಭೆ=ಬೆಳಕು/ಕಾಂತಿ; ತಾನ್+ಎಲ್ಲಿಯದೊ; ತಾನ್=ಅದು; ತಾನೆಲ್ಲಿಯದೊ=ಯಾವ ರೀತಿಯಲ್ಲಿ ಅದು ಬೆಳಕನ್ನು ಚೆಲ್ಲುತ್ತದೆ/ಬೀರುತ್ತದೆ;

ಗುರು+ಇದೆ; ಗುರು=ಜನಸಮುದಾಯದ ಮನದಲ್ಲಿ ಅರಿವನ್ನು ಮೂಡಿಸಿ, ವ್ಯಕ್ತಿಗಳ ನಡೆನುಡಿಗಳನ್ನು ತಿದ್ದಿ ತೀಡಿ, ಅವರಲ್ಲಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವ ವ್ಯಕ್ತಿ; ಲಿಂಗ+ಇದೆ; ಲಿಂಗ=ಶಿವನ ಸಂಕೇತವಾದ ವಿಗ್ರಹ;

ಶಿಷ್ಯ=ಗುರುವಿನ ಮೂಲಕ ವಿದ್ಯೆಯನ್ನು ಕಲಿಯುವವನು; ಸುಜ್ಞಾನ=ಜೀವನದಲ್ಲಿ ಯಾವುದು ಸರಿ–ಯಾವುದು ತಪ್ಪು; ಯಾವುದು ನೀತಿ–ಯಾವುದು ಅನೀತಿ; ಯಾವುದು ದಿಟ–ಯಾವುದು ಸಟೆ ಎಂಬುದನ್ನು ಮನದಟ್ಟು ಮಾಡಿಕೊಂಡು, ಒಳ್ಳೆಯ ರೀತಿಯಲ್ಲಿ ಬಾಳಲು ಅಗತ್ಯವಾದ ಅರಿವು/ತಿಳುವಳಿಕೆ;

ಅಂಕುರಿಸದ+ಅನ್ನಕ್ಕರ; ಅಂಕುರ=ಮೊಳಕೆ/ಚಿಗುರು; ಅಂಕುರಿಸು= ಮೊಳಕೆ ಯೊಡೆಯುವುದು/ಚಿಗುರೊಡೆಯುವುದು; ಅನ್ನಕ್ಕರ=ಅಲ್ಲಿಯ ವರೆಗೆ/ಅಲ್ಲಿಯ ತನಕ; ಭಕ್ತಿ=ಒಳ್ಳೆಯ ನಡೆನುಡಿಗಳಿಂದ ಶಿವನನ್ನು ಪೂಜಿಸುವುದು; ಎಲ್ಲಿಯದೊ=ಎಲ್ಲಿ ಇರುವುದು/ಇರುವುದಕ್ಕೆ ಹೇಗೆ ತಾನೆ ಆಗುತ್ತದೆ;

ಹಣತೆಯಲ್ಲಿ ಬತ್ತಿ ಮತ್ತು ಎಣ್ಣೆಯನ್ನು ಹಾಕಿ, ಬೆಂಕಿಯ ಕುಡಿಯನ್ನು ತಾಕಿಸಿದಾಗ ಜ್ಯೋತಿಯು ಬೆಳಗುತ್ತದೆ. ಇವುಗಳಲ್ಲಿ ಯಾವುದೊಂದು ಇಲ್ಲದಿದ್ದರೂ ಬೆಳಕು ಕಂಗೊಳಿಸುವುದಿಲ್ಲ. ದೀಪ ಬೆಳಗುವ ಈ ಸಂಗತಿಯನ್ನು ಒಂದು ರೂಪಕವನ್ನಾಗಿ ಬಳಸಿಕೊಂಡು ಲಿಂಗ, ಗುರು ಮತ್ತು ಶರಣರ ನಡುವಣ ನಂಟಿನ ರೀತಿಯನ್ನು ಮತ್ತು ಶರಣನ ವ್ಯಕ್ತಿತ್ವ ರೂಪುಗೊಳ್ಳುವ ಬಗೆಯನ್ನು ತಿಳಿಸಲಾಗಿದೆ.

ಶಿವಶರಣನ ಮಯ್ ಮನದಲ್ಲಿ ಒಳ್ಳೆಯ ಅರಿವು ಮೂಡದಿದ್ದರೆ, ಆತ ಮಾಡುವ ಲಿಂಗಪೂಜೆಯಿಂದ ಇಲ್ಲವೇ ಗುರುಸೇವೆಯಿಂದ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಶಿವಶರಣನು ಒಳ್ಳೆಯ ಅರಿವನ್ನು ಪಡೆಯುವುದರ ಮೂಲಕ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂಬ ಎಚ್ಚರವನ್ನು ಹೊಂದಿರಬೇಕು ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.

68. ಬಲ್ಲತನವನೇರಿಸಿಕೊಂಡು ಅಲ್ಲದಾಟವನಾಡಿದಡೆ ಬಲ್ಲತನಕ್ಕೆ ಭಂಗವಾಯಿತ್ತು. (329/164)

ಬಲ್ಲತನ+ಅನ್+ಏರಿಸಿಕೊಂಡು; ಬಲ್ಲತನ=ಕಸುವು/ಅರಿವು; ಅನ್=ಅನ್ನು; ಏರು=ಆಯ್ದುಕೊಳ್ಳುವುದು/ಆರಿಸಿಕೊಳ್ಳುವುದು; ಏರಿಸಿಕೊಂಡು= ಆಯ್ದುಕೊಂಡು/ಆರಿಸಿಕೊಂಡು;

ಬಲ್ಲತನವನೇರಿಸಿಕೊಂಡು=ವ್ಯಕ್ತಿಯು ತನ್ನನ್ನು ತಾನೆ ಎಲ್ಲರಿಗಿಂತಲೂ ದೊಡ್ಡವನು/ತಿಳಿದವನು/ಎಲ್ಲರನ್ನೂ ಮುನ್ನಡೆಸಬಲ್ಲ ಶಕ್ತಿಯಿರುವವನು ಎಂದು ಮನದಲ್ಲಿ ಅಂದುಕೊಂಡು;

ಅಲ್ಲದ+ಆಟ+ಅನ್+ಆಡಿದಡೆ; ಅಲ್ಲ=ಬೇಡ/ಆಗದಿರುವುದು; ಆಟ=ಕೆಲಸ/ಕಾರ್ಯ/ವ್ಯವಹಾರ; ಆಡಿದಡೆ=ಮಾಡತೊಡಗಿದರೆ; ಅಲ್ಲದಾಟ=ಬೇಡದ ಕೆಲಸ/ಮಾಡಬಾರದ ಕಾರ್ಯ; **ಅಲ್ಲದಾಟವನಾಡಿದಡೆ**=ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ಕೆಟ್ಟ ಕೆಲಸಗಳನ್ನು ಮಾಡತೊಡಗಿದರೆ;

ಬಲ್ಲತನಕ್ಕೆ=ವ್ಯಕ್ತಿಯು ಹೊಂದಿರುವ ಅರಿವಿನ ಇಲ್ಲವೇ ದೊಡ್ಡತನದ ವ್ಯಕ್ತಿತ್ವಕ್ಕೆ; ಭಂಗ+ಆಯಿತ್ತು; ಭಂಗ=ಅಪಮಾನ/ಸೋಲು/ತೇಜಸ್ಸು ಹಾನಿಗೊಳ್ಳುವುದು; ಆಯಿತ್ತು=ಉಂಟಾಗುವುದು;

ರಾಜ್ಯವನ್ನಾಳುವ ಆಡಳಿತಗಾರರಲ್ಲಿ, ಜಾತಿ ಮತ ದೇವರ ಹೆಸರಿನಲ್ಲಿ ಕಟ್ಟಿಕೊಂಡಿರುವ ಸಾಮಾಜಿಕ ಒಕ್ಕೂಟಗಳ ನೇತಾರರು, ಗುರುಗಳು ಹಾಗೂ ದೇವ ಮಾನವರಲ್ಲಿ ಮತ್ತು ಕುಟುಂಬವನ್ನು ನಡೆಸುವ ಹೊಣೆಯನ್ನು ಹೊತ್ತಿರುವ ಹಿರಿಯರಲ್ಲಿ ಕೆಲವರು ಇತರರಿಗಿಂತ ತಾವೇ ದೊಡ್ಡವರೆಂದು, ಎಲ್ಲವನ್ನು ಬಲ್ಲವರೆಂದು, ಯಾವುದೇ ಬಗೆಯ ಕೆಲಸವನ್ನು ಮಾಡಬಲ್ಲ ಮತ್ತು ಎಲ್ಲರನ್ನೂ ಮುನ್ನಡೆಸಬಲ್ಲ ಶಕ್ತಿಯುಳ್ಳವರೆಂದು ಅಹಂಕಾರದಿಂದ ಮೆರೆಯುತ್ತಿರುತ್ತಾರೆ.

ಜವಾಬ್ದಾರಿಯುತವಾದ ಹುದ್ದೆಗಳಲ್ಲಿರುವ ಇಂತಹ ವ್ಯಕ್ತಿಗಳು ತಮ್ಮ ಹೊಣೆಗಾರಿಕೆಯನ್ನು ಮರೆತು, ಕಪಟತನದಿಂದ ಮತ್ತು ಕ್ರೂರತನದಿಂದ ಜನ ಸಮುದಾಯದ ಬದುಕಿನ ನೆಮ್ಮದಿಯನ್ನು ಹಾಳು ಮಾಡುವಂತಹ ಕೆಟ್ಟ ಕೆಲಸ ಗಳನ್ನು ಮಾಡತೊಡಗಿದಾಗ, ಅವರ ಹಿರಿತನ ಇಲ್ಲವೇ ವ್ಯಕ್ತಿತ್ವ ಕುಗ್ಗಿ ಹಾಳಾಗು ವುದರ ಜತೆಗೆ ಜನರ ಮತ್ತು ಸಮಾಜದ ಬದುಕು ದುರಂತಕ್ಕೆ ಗುರಿಯಾಗುತ್ತದೆ.

69. ಸತ್ತು ಮುಂದೆ ನೀನೇನ ಕಾಬೆಯೊ
ಇಂದೆ ಇಂದೆಯೊ ಇಂದೆ ಮಾನವ. (500/177)

(ಸತ್ತು=ಸಾವನ್ನಪ್ಪಿ/ಸಾವನ್ನು ತಂದುಕೊಂಡು; ಮುಂದೆ=ಸತ್ತ ನಂತರದಲ್ಲಿ; ನೀನ್+ಏನ; ಏನ=ಯಾವುದನ್ನ; ಕಾಣ್=ನೋಡು/ತಿಳಿ; ಕಾಣ್ಬೆ>ಕಾಬೆ; ಕಾಬೆ=ಕಾಣುವೆ/ನೋಡುವೆ; ಕಾಬೆಯೋ=ನೋಡುವೆಯೋ/ಕಾಣುವೆಯೋ;

ಸತ್ತು ಮುಂದೆ ನೀನೇನ ಕಾಬೆಯೊ= 'ಸತ್ತ ನಂತರ ಮತ್ತೇನನ್ನೂ ನೀನು ಕಾಣುವೆಯೋ ಅಂದರೆ ಏನನ್ನೂ ಕಾಣಲಾರೆ' ಎನ್ನುವ ನುಡಿಗಳ ಮೂಲಕ ಜನಸಮುದಾಯದ ಮನದಲ್ಲಿರುವ ಕೆಲವು ಕಲ್ಪನೆಗಳನ್ನು ಕುರಿತು ಚಿಂತಿಸಲಾಗಿದೆ.

ವ್ಯಕ್ತಿಯು ಸತ್ತ ನಂತರ ತಾನು ಮಾಡಿದ ಒಳ್ಳೆಯ ಇಲ್ಲವೇ ಕೆಟ್ಟ ನಡೆನುಡಿಗಳಿಗೆ ತಕ್ಕಂತೆ ಸ್ವರ್ಗ ಇಲ್ಲವೇ ನರಕಕ್ಕೆ ಹೋಗುತ್ತಾನೆ ಎನ್ನುವ ಪರಲೋಕದ ಕಲ್ಪನೆ ಮತ್ತು ವ್ಯಕ್ತಿಯ ದೇಹದಿಂದ ಹೊರಬಂದ ಆತ್ಮ (ಉಸಿರು/ಪ್ರಾಣ) ಮತ್ತೊಂದು ಜೀವಿಯಾಗಿ ಈ ಜಗತ್ತಿನಲ್ಲಿ ಹುಟ್ಟಿಬರುತ್ತದೆ ಎನ್ನುವ ಪುನರ್ ಜನ್ಮದ ಕಲ್ಪನೆಯನ್ನು ಶಿವಶರಣಶರಣೆಯರು ನಿರಾಕರಿಸಿದ್ದರು.

ವ್ಯಕ್ತಿಯು ಹುಟ್ಟಿನಿಂದ ಸಾವಿನ ತನಕ ಈ ಜಗತ್ತಿನಲ್ಲಿ ತನ್ನ ಒಳಿತಿಗಾಗಿ ಹಂಬಲಿಸುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುವುದು ಅವರ ಪಾಲಿಗೆ ದೊಡ್ಡ ಸಂಗತಿಯಾಗಿತ್ತು. ವ್ಯಕ್ತಿಯ ಒಳ್ಳೆಯ ನಡೆನುಡಿಯಿಂದ ಜೀವನದಲ್ಲಿ ಉಂಟಾಗುವ ಒಲವು ನಲಿವು ನೆಮ್ಮದಿಯ ಜೀವನವೇ ಸ್ವರ್ಗ; ಕೆಟ್ಟ ನಡೆನುಡಿಯಿಂದ ಜೀವನದಲ್ಲಿ ಉಂಟಾಗುವ ಸಾವು ನೋವು ದುರಂತವೇ ನರಕ ಎನ್ನುವ ನಿಲುವನ್ನು ತಳೆದಿದ್ದರು.

ಮಾನವ ಸಮುದಾಯದಲ್ಲಿ ಹಸಿವು, ಬಡತನ, ಅಂಗ ವಿಕಲತೆ ಮತ್ತು ರೋಗ ರುಜಿನಗಳಿಂದ ಬಳಲುತ್ತಿರುವವರೆಲ್ಲರೂ ತಾವು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕೆ ತಕ್ಕ ದಂಡನೆಯನ್ನು ಪಡೆಯುತ್ತಿದ್ದಾರೆ ಎಂಬ ಸಂಗತಿಯನ್ನು ಪುನರ್ ಜನ್ಮದ ನಂಬಿಕೆಯು ಜನಮನದಲ್ಲಿ ಬೇರೂರಿಸಿತ್ತು. ಇದನ್ನು ಶಿವಶರಣ ಶರಣೆಯರು ಅಲ್ಲಗಳೆದು ಜನರ ಸಂಕಟಕ್ಕೆ ನಿಸರ್ಗದಲ್ಲಿ ಉಂಟಾಗುವ ಆಗುಹೋಗುಗಳು ಮತ್ತು ಮಾನವರೇ ಕಟ್ಟಿಕೊಂಡಿರುವ ಸಮಾಜದಲ್ಲಿ ಆಡಳಿತದ ಗದ್ದುಗೆಯಲ್ಲಿರುವ ವ್ಯಕ್ತಿಗಳು ಹಾಗೂ ಸಿರಿವಂತರು ಜಾತಿ, ಮತ, ದೇವರ ಹೆಸರಿನಲ್ಲಿ ಮಾಡುತ್ತಿರುವ ವಂಚನೆಯೇ ಕಾರಣವೆಂಬುದನ್ನು ಜನರಿಗೆ ತಿಳಿಯಹೇಳಿದರು.

ವ್ಯಕ್ತಿಯು ಸತ್ತ ನಂತರ ಹೆಣವು ಮಣ್ಣು ಇಲ್ಲವೇ ಬೂದಿಯಾಗಿ 'ನೆಲ–ಬೆಂಕಿ–ನೀರು–ಗಾಳಿ'ಯಲ್ಲಿ ಬೆರತುಹೋಗುತ್ತದೆ ಎನ್ನುವ ವಾಸ್ತವವನ್ನು 'ಸತ್ತು ಮುಂದೆ ನೀನೇನು ಕಾಬೆಯೊ' ಎಂಬ ನುಡಿಗಳು ಸೂಚಿಸುತ್ತಿವೆ;

ಇಂದು=ಈ ದಿನ/ಗಳಿಗೆ/ಸಮಯ; ಇಂದೆ=ಈ ಗಳಿಗೆಯಲ್ಲಿಯೇ/ಈ ಸಮಯದಲ್ಲಿಯೇ; ಇಂದೆಯೊ=ಜೀವಂತವಾಗಿರುವಾಗ/ಬದುಕಿರುವಾಗ; ಮಾನವ=ವ್ಯಕ್ತಿ;

ಇಂದೆ ಇಂದೆಯೊ ಇಂದೆ ಮಾನವ=ವ್ಯಕ್ತಿಯು ತಾನು ಜೀವಂತವಾಗಿರುವ ಕೊನೆ ಗಳಿಗೆಯ ತನಕ ಅಂದರೆ ಸಾವು ತಾನಾಗಿಯೇ ಬರುವ ತನಕ ಒಳ್ಳೆಯದನ್ನು

ಮಾಡುತ್ತ, ತನ್ನನ್ನು ಒಳಗೊಂಡು ಸಹಮಾನವರ ಮತ್ತು ಸಮಾಜದ ಒಳಿತಿಗಾಗಿ ಬಾಳುತ್ತಿರಬೇಕೆ ಹೊರತು, ಬದುಕಿಗೆ ಬೆನ್ನು ತೋರಿಸಿ ತನ್ನ ಸಾವನ್ನು ತಾನೇ ತಂದುಕೊಳ್ಳಬಾರದು.

**70. ಸಾವನ್ನಕ್ಕರ ಶ್ರವವ ಮಾಡಿದಡೆ ಇನ್ನು ಕಾದುವ ದಿನವಾವುದು
ಬಾಳುವನ್ನಕ್ಕರ ಭಜಿಸುತ್ತಿದ್ದಡೆ ತಾನಹ ದಿನವಾವುದು. (1559/284)**

ಸಾವು+ಅನ್ನಕ್ಕರ; ಸಾವು=ಮರಣ; ಅನ್ನಕ್ಕರ=ವರೆಗೆ/ತನಕ; **ಸಾವನ್ನಕ್ಕರ**= ಸಾಯುವತನಕ/ಜೀವನದ ಕೊನೆಗಾಲದವರೆಗೆ; ಶ್ರವ=ಕತ್ತಿ, ಗದೆ, ಗುರಾಣಿ, ಬಿಲ್ಲು ಬಾಣ ಮುಂತಾದ ಹತಾರಗಳನ್ನು ಬಳಸಿಕೊಂಡು ರಣರಂಗದಲ್ಲಿ ಶತ್ರುವಿನ ಎದುರು ಹೋರಾಟ ಮಾಡುವುದಕ್ಕಾಗಿ ಪಡೆಯುವ ತರಬೇತಿ; ಮಾಡಿದಡೆ=ಮಾಡಿದರೆ; ಕಾದು=ಹೋರಾಡು/ಕದನ ಮಾಡು; ದಿನ+ಆವುದು; ಆವುದು= ಯಾವುದು;

ಸಾವನ್ನಕ್ಕರ ಶ್ರವವ ಮಾಡಿದಡೆ=ವ್ಯಕ್ತಿಯು ತಾನು ಸಾಯುವ ದಿನದವರೆಗೂ ಹೋರಾಟಕ್ಕೆ ತಯಾರಿಯನ್ನು ಮಾಡಿಕೊಳ್ಳುವ ತರಬೇತಿಯಲ್ಲೇ ಮಗ್ನನಾಗಿದ್ದರೆ; **ಇನ್ನು ಕಾದುವ ದಿನವಾವುದು**=ರಣರಂಗದಲ್ಲಿ ಹೋರಾಟ ಮಾಡುವುದು ಯಾವಾಗ;

ಬಾಳುವ+ಅನ್ನಕ್ಕರ; ಬಾಳು=ಜೀವನ/ಬದುಕು; **ಬಾಳುವನ್ನಕ್ಕರ**= ಬದುಕಿರುವ ತನಕ; ಭಜಿಸುತ್ತ+ಇದ್ದಡೆ; ಭಜಿಸು=ದೇವರ ನಾಮ ಸ್ಮರಣೆಯನ್ನು ಮಾಡುವುದು; ಇದ್ದಡೆ=ಇದ್ದರೆ; ತಾನ್+ಅಹ; ತಾನ್=ವ್ಯಕ್ತಿಯು; ಅಹ=ಆಗುವ;

ತಾನಹ ದಿನ=ವ್ಯಕ್ತಿಯು ಒಳ್ಳೆಯ ನಡೆನುಡಿಗಳಿಂದ ಬಾಳಿ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ವ್ಯಕ್ತಿತ್ವವನ್ನು ಗಳಿಸಿಕೊಳ್ಳುವ ಕಾಲ;

'ಹೋರಾಡಲೆಂದು ತರಬೇತಿಯನ್ನು ಪಡೆಯುವ ಮತ್ತು ದೇವರ ಒಲವನ್ನು ಪಡೆಯಲೆಂದು ನಾಮ ಸ್ಮರಣೆಯನ್ನು ಮಾಡುವ' ಈ ಎರಡು ಸಂಗತಿಗಳು ರೂಪಕಗಳಾಗಿ ಬಳಕೆಯಾಗಿವೆ.

ಜೀವನದ ಉದ್ದಕ್ಕೂ ಸತ್ಯ ನೀತಿ ನ್ಯಾಯದ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾ, ಅವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳದೆ ಮತ್ತು ಏನೊಂದು ಕೆಲಸವನ್ನೂ ಮಾಡದೆ ಕಾಲವನ್ನು ನೂಕುತ್ತ, ಇತರರ

ದುಡಿಮೆಯಿಂದ ತನ್ನ ಬದುಕನ್ನು ನಡೆಸುತ್ತಿರುವ ಪರಾವಲಂಬಿಯಾದ ವ್ಯಕ್ತಿಯ ನಡೆನುಡಿಯನ್ನು ರೂಪಕಗಳ ಮೂಲಕ ವಿಡಂಬನೆ ಮಾಡಲಾಗಿದೆ.

71. ಸೂಜಿಯ ಪೋಣಿಸಿ ದಾರವ ಮರೆದಡೆ
ಹೊಲಿಗೆ ಬಿಚ್ಚದೆ ಗುಹೇಶ್ವರ. (408/170)

ಸೂಜಿ=ಬಟ್ಟೆಯನ್ನು ಹೊಲಿಯುವಾಗ ಬಳಸುವ ಲೋಹದಿಂದ ಮಾಡಿದ ಒಂದು ಚಿಕ್ಕ ಉಪಕರಣ; ಪೋಣಿಸು=ಸೂಜಿಯ ಚಿಕ್ಕ ರಂಧ್ರಕ್ಕೆ ದಾರವನ್ನು ಸೇರಿಸುವುದು; ದಾರ=ನೂಲು/ಎಳೆ; ಮರೆದಡೆ=ಮರೆತು ಬಿಟ್ಟರೆ;

ಹೊಲಿಗೆ=ಸೂಜಿಗೆ ದಾರವನ್ನು ಪೋಣಿಸಿ ಅಗತ್ಯಕ್ಕೆ ತಕ್ಕಂತೆ ಬಟ್ಟೆಯ ತುಂಡುಗಳನ್ನು ಹೊಲಿಯುವುದು ಇಲ್ಲವೇ ಜತೆಗೂಡಿಸುವುದು;

ಬಿಚ್ಚು=ಬೇರೆಯಾಗುವುದು/ಕಳಚಿಕೊಳ್ಳುವುದು; ಬಿಚ್ಚದೆ=ಬೇರೆ ಬೇರೆಯಾಗದಿರುವುದೆ/ಬಿಟ್ಟುಕೊಳ್ಳದಿರುವುದೆ/ಜತೆಗೂಡುವುದಿಲ್ಲ; **ಹೊಲಿಗೆ ಬಿಚ್ಚದೆ**= ದಾರವಿಲ್ಲದೆ ಬರಿ ಸೂಜಿಯಿಂದ ಬಟ್ಟೆಯ ತುಂಡುಗಳನ್ನು ಹೊಲಿಯುವುದಕ್ಕೆ ಆಗುವುದಿಲ್ಲ; ಗುಹೇಶ್ವರ=ಶಿವ/ಅಲ್ಲಮನ ವಚನಗಳಲ್ಲಿ ಬಳಕೆಯಾಗಿರುವ ಅಂಕಿತನಾಮ;

ವ್ಯಕ್ತಿಯು ಯಾವುದೇ ಒಂದು ಕೆಲಸವನ್ನು ಕಯ್ಕೊಂಡಾಗ, ಅದನ್ನು ಮೊದಲಿನಿಂದ ಕೊನೆಯ ತನಕ ಒಲವು ನಲಿವು ಮತ್ತು ಆಸಕ್ತಿಯಿಂದ ಮಾಡದಿದ್ದರೆ, ಆ ಕೆಲಸವು ಜರುಗುವುದಿಲ್ಲವೆಂಬ ವಾಸ್ತವವನ್ನು ಸೂಜಿ–ದಾರ–ಹೊಲಿಗೆಯ ರೂಪಕದ ಮೂಲಕ ಹೇಳಲಾಗಿದೆ.

❖

6. ಆದಯ್ಯ

72. ತನಗೊಬ್ಬರು ಮುನಿದರು ತಾನಾರಿಗೂ ಮುನಿಯಲಾಗದು
ಮನೆಯ ಕಿಚ್ಚು ಮೊದಲೊಮ್ಮೆ ಮನೆಯ ಸುಡುವಂತೆ
ತನ್ನ ಕೋಪ ತನ್ನನೆ ಸುಡುವುದು ನೋಡಯ್ಯ. (938–1039)

ತನಗೆ+ಒಬ್ಬರು; ಮುನಿ=ಸಿಟ್ಟಾಗು/ಕೋಪಗೊಳ್ಳು; ತಾನ್+ಆರಿಗೂ; ಆರಿಗೂ =ಯಾರಿಗೂ/ಯಾರೊಬ್ಬರಿಗೂ; ಮುನಿ+ಅಲ್+ಆಗದು; ಕಿಚ್ಚು=ಬೆಂಕಿ/ಅಗ್ನಿ; ಮೊದಲ್+ಒಮ್ಮೆ; ಮನೆಯ ಕಿಚ್ಚು=ಮನೆಯೊಳಗೆ ಹತ್ತಿಕೊಂಡ ಬೆಂಕಿ; ಮೊದಲೊಮ್ಮೆ=ಶುರುವಿನಲ್ಲಿ;

ಸುಡು+ಅಂತೆ; ಸುಡು=ಸುಟ್ಟುಹಾಕು/ದಹಿಸು/ಬೇಯಿಸು; ಅಂತೆ=ಹಾಗೆ/ಆ ರೀತಿ; ತನ್ನ=ವ್ಯಕ್ತಿಯಲ್ಲಿ ಉಂಟಾದ; ಕೋಪ=ಸಿಟ್ಟು/ಆಕ್ರೋಶ; ತನ್ನನ್ನೇ= ವ್ಯಕ್ತಿಯನ್ನೇ; ನೋಡು+ಅಯ್ಯಾ; ನೋಡು=ಕಾಣು; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ವ್ಯಕ್ತಿಯು ಮಾಡುವ ಕೆಲಸಕ್ಕೆ ಅಡೆತಡೆಯುಂಟಾದಾಗ, ಆಸೆಪಟ್ಟ ಒಡವೆ ವಸ್ತುಗಳು ಕಯ್ ತಪ್ಪಿಹೋದಾಗ ಮತ್ತು ಇನ್ನಿತರ ನೂರೆಂಟು ಬಗೆಯ ಕಾರಣ ಗಳಿಂದ ವ್ಯಕ್ತಿಯ ಮನದಲ್ಲಿ ಕೆರಳುವ ಒಳಮಿಡತವೇ ಕೋಪ.

ಕೋಪವೆಂಬುದು ವ್ಯಕ್ತಿಗೆ ತನ್ನಲ್ಲಿಯೇ ಉಂಟಾಗಲಿ ಇಲ್ಲವೇ ಬೇರೆಯವರಲ್ಲಿ ಉಂಟಾಗಲಿ, ಅದಕ್ಕೆ ಗುರಿಯಾಗಿ ಆಕ್ರೋಶಗೊಂಡು ಬಯ್ಯುವುದರಿಂದ ಇಲ್ಲವೇ ಅವರ ಮಯ್ ಮೇಲೆ ಹಲ್ಲೆಮಾಡುವುದರಿಂದ ಇನ್ನೂ ಹೆಚ್ಚಿನ ಹಾನಿ

ಉಂಟಾಗುತ್ತದೆ. ಮನೆಯೊಳಗೆ ಹತ್ತಿಕೊಂಡ ಬೆಂಕಿ ಹೇಗೆ ಮನೆಯನ್ನು ಸುಟ್ಟು ಅನಂತರ ನೆರಮನೆಗೆ ಹಬ್ಬುವುದೋ ಅಂತೆಯೇ ಕೋಪವೆಂಬುದು ವ್ಯಕ್ತಿಯ ಮನದಲ್ಲಿ ಹುಟ್ಟಿ ಬಹುಬಗೆಯ ಆಕ್ರೋಶ, ಆತಂಕ, ಆವೇಶ, ಅಂಜಿಕೆ ಮತ್ತು ತಲ್ಲಣಗಳನ್ನುಂಟು ಮಾಡಿ ಬೇರೆಯವರಿಗೆ ಹಾನಿಯನ್ನುಂಟುಮಾಡುವುದಕ್ಕಿಂತ ಹೆಚ್ಚಾಗಿ ತನ್ನ ಬದುಕಿಗೆ ಕೇಡನ್ನುಂಟುಮಾಡುತ್ತದೆ.

ಕಳೆದ ಎರಡು ವರುಶಗಳ ಹಿಂದೆ ನಾನು ಕೇರಳಕ್ಕೆ ಹೋಗಿದ್ದಾಗ, ಅಲ್ಲಿ ಒಂದು ಊರಿನಲ್ಲಿ ನಡೆದ ಪ್ರಸಂಗವಿದು. ಹೋಟೆಲ್ ಮುಂದುಗಡೆ ನಿಲ್ಲಿಸಿದ್ದ ಒಂದು ಕಾರನ್ನು ಹಿಂತೆಗೆಯುತ್ತಿದ್ದಾಗ, ಮತ್ತೊಂದು ಕಾರಿನ ಒಡೆಯನ ಜತೆಯಲ್ಲಿ ಉಂಟಾದ ಸಣ್ಣ ಜಗಳವೊಂದು ದೊಡ್ಡದಾಗಿ ಎರಡು ಕಾರಿನ ಒಡೆಯರು ಕೋಪದಿಂದ ಅರಚುತ್ತ,ಬಯ್ದಾಡುತ್ತ, ಒಬ್ಬ ಜೋರಾಗಿ ಮತ್ತೊಬ್ಬನನ್ನು ದೂರ ತಳ್ಳಿದಾಗ, ಆತ ರಸ್ತೆಯಲ್ಲಿ ಬೀಳುತ್ತಿದ್ದಂತೆಯೇ ಅದೇ ಸಮಯಕ್ಕೆ ವೇಗವಾಗಿ ಬಂದ ಲಾರಿಯೊಂದು ಹರಿದು, ಆತ ಸಾವನ್ನಪ್ಪಿದ. ವ್ಯಕ್ತಿಯನ್ನು ರಸ್ತೆಗೆ ತಳ್ಳಿ ತಲೆಮರೆಸಿಕೊಂಡಿದ್ದ ವ್ಯಕ್ತಿಯು ಒಂದು ವಾರದ ನಂತರ ಕಾನೂನು ಕಟ್ಟಲೆಗೆ ಹೆದರಿ ಇಲ್ಲವೇ ತನ್ನಿಂದಾದ ಸಾವಿಗೆ ಪಶ್ಚಾತ್ತಾಪಗೊಂಡು ತನ್ನ ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡ. ಸತ್ತ ಇಬ್ಬರೂ ಸುಮಾರು ನಲವತ್ತರ ವಯೋಮಾನದವರು ಮತ್ತು ಇಬ್ಬರಿಗೂ ಹೆಂಡತಿ ಮಕ್ಕಳಿದ್ದರು. ಇಬ್ಬರಲ್ಲಿ ಒಬ್ಬರಾದರೂ ಕೋಪವನ್ನು ಹತ್ತಿಕ್ಕಿಕೊಂಡಿದ್ದರೆ ಎರಡು ಕುಟುಂಬಗಳ ದುರಂತವನ್ನು ತಡೆಯಬಹುದಿತ್ತು.

❖

7. ಆಯ್ದಕ್ಕಿ ಲಕ್ಕಮ್ಮ

73. ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ
ಅರಿವಿಂಗೆ ಬೇರೊಂದೊಡಲುಂಟೆ. (708/866)

ಕೂಟ=ಸಂಗ/ಕೂಡುವುದು; ಕೂಟಕ್ಕೆ=ಕಾಮದ ನಂಟಿಗೆ; ಸತಿ=ಮಡದಿ/ಹೆಣ್ಣು; ಪತಿ=ಗಂಡ/ಗಂಡು; ಎಂಬ=ಎನ್ನುವ/ಎಂದು ಹೇಳುವ; ನಾಮ+ಅಲ್ಲದೆ; ನಾಮ=ಹೆಸರು; ಅಲ್ಲದೆ=ಹೊರತು; ಅರಿವು=ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು;ಯಾವುದು ವಾಸ್ತವ–ಯಾವುದು ಕಟ್ಟುಕತೆ ಎಂಬುದನ್ನು ತಿಳಿದುಕೊಳ್ಳುವುದು; ಅರಿವಿಂಗೆ=ಅರಿವಿಗೆ/ತಿಳುವಳಿಕೆಗೆ; ಬೇರೆ+ಒಂದು+ಒಡಲ್+ಉಂಟೆ; ಬೇರೆ=ಪ್ರತ್ಯೇಕವಾದ; ಒಡಲ್=ದೇಹ/ಶರೀರ/ಮಯ್; ಉಂಟೆ=ಇದೆಯೇ/ಇರುವುದೇ;

ಕಾಮದ ನಂಟನ್ನು ಪಡೆಯುವಾಗ ಜತೆಗೂಡುವ ಎರಡು ದೇಹಗಳಲ್ಲಿ ಒಂದನ್ನು ‘ಹೆಣ್ಣು’ ಎಂದು, ಮತ್ತೊಂದನ್ನು ‘ಗಂಡು’ ಎಂದು ತಿಳಿಯಬಹು ದಲ್ಲದೆ, ಅರಿವನ್ನು ಪಡೆಯುವಲ್ಲಿ ಅಂದರೆ ಓದು ಬರಹದ ಕಲಿಯುವಿಕೆಯಲ್ಲಿ ‘ ಇದು ಹೆಣ್ಣು ‘ಇದು ಗಂಡು’ ಎಂಬ ಎರಡು ಬಗೆಗಳನ್ನು ಕಾಣಬಾರದು. ಏಕೆಂದರೆ ವ್ಯಕ್ತಿಯು ಪಡೆದುಕೊಳ್ಳುವ ಅರಿವಿಗೆ ಮತ್ತು ಕಲಿಯುವ ವಿದ್ಯೆಗೆ ಲಿಂಗ ತಾರತಮ್ಯವಿಲ್ಲ. ವಿದ್ಯೆ ಎಂಬುದು ಗಂಡಿಗೆ ಅಗತ್ಯವಾಗಿರುವಂತೆಯೇ ಹೆಣ್ಣಿಗೂ ಅತ್ಯಗತ್ಯವಾಗಿದೆ.

ಆಯ್ದಕ್ಕಿ ಲಕ್ಕಮ್ಮನು ಮೇಲ್ಕಂಡ ನುಡಿಯನ್ನಾಡಲು ಹನ್ನೆರಡನೆಯ ಶತಮಾನ ದಲ್ಲಿದ್ದ ಸಾಮಾಜಿಕ ಕಟ್ಟಲೆಯು ಕಾರಣವಾಗಿದೆ. ಇಂಡಿಯಾ ದೇಶದ ಪ್ರಾಚೀನ ಕಾಲದ ಸಮಾಜದಲ್ಲಿ ಜನಸಮುದಾಯವನ್ನು ಬಹುಬಗೆಗಳಲ್ಲಿ ವಿಂಗಡಿಸ

ಲಾಗಿತ್ತು. "ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ" ಎಂಬ ನಾಲ್ಕು ಬಗೆಯ ವರ್ಣ ವಿಂಗಡಣೆ ಮತ್ತು 'ಗಂಡು–ಹೆಣ್ಣು' ಎಂಬ ಲಿಂಗ ವಿಂಗಡಣೆಯ ಜೊತೆಗೆ ಶೂದ್ರರು ಮತ್ತು ಎಲ್ಲಾ ವರ್ಣಕ್ಕೆ ಸೇರಿದ ಹೆಂಗಸರು ವೇದಗಳನ್ನು ಓದಬಾರದೆಂಬ ಅಂದರೆ ವಿದ್ಯೆಯನ್ನು ಕಲಿಯಬಾರದೆಂಬ ಸಾಮಾಜಿಕ ಕಟ್ಟಲೆಯು ಜಾರಿಯಲ್ಲಿತ್ತು.

ಇದರಿಂದಾಗಿ ಹೆಂಗಸರನ್ನು ಒಳಗೊಂಡಂತೆ ಇಡೀ ಜನಸಮುದಾಯದಲ್ಲಿ ಶೇ.80 ಕ್ಕಿಂತಲೂ ಹೆಚ್ಚು ಜನರು ವಿದ್ಯೆ, ಆಡಳಿತದ ಗದ್ದುಗೆ ಮತ್ತು ಸಂಪತ್ತಿನಿಂದ ವಂಚಿತರಾಗಿ ಹಸಿವು, ಬಡತನ ಮತ್ತು ಅಪಮಾನದಿಂದ ನರಳುತ್ತಿದ್ದರು. ಇಂತಹ ಕ್ರೂರವಾದ ಸಾಮಾಜಿಕ ಕಟ್ಟಲೆಯನ್ನು ಆಯ್ದಕ್ಕಿ ಲಕ್ಕಮ್ಮನು ನಿರಾಕರಿಸುತ್ತ, ವಿದ್ಯೆಯನ್ನು ಪಡೆದು ಎಲ್ಲರೂ ತಲೆಯೆತ್ತಿ ಬಾಳುವಂತಾಗಲು ಯಾವುದೇ ಬಗೆಯ ವರ್ಣ ತಾರತಮ್ಯ ಇಲ್ಲವೇ ಲಿಂಗ ತಾರತಮ್ಯ ಇರಬಾರದೆಂಬ ನಿಲುವನ್ನು ವ್ಯಕ್ತಪಡಿಸಿದ್ದಾಳೆ.

74. ಕೈದ ಕೊಡುವರಲ್ಲದೆ
ಕಲಿತನವ ಕೊಡುವರುಂಟೆ. (714/866)

ಕೈದು=ಹತಾರ/ಶಸ್ತ್ರ; ಕೊಡುವರ್+ಅಲ್ಲದೆ; ಕೊಡು=ನೀಡು; ಅಲ್ಲದೆ= ಹೊರತು; ಕಲಿತನ=ಪರಾಕ್ರಮ/ಕೆಚ್ಚು; ಕೊಡುವರ್+ಉಂಟೆ; ಉಂಟೇ= ಇದ್ದಾರೆಯೇ/ಇರುವರೇ;

ಯಾವುದೇ ವ್ಯಕ್ತಿಗೆ ಈಟಿ, ಕತ್ತಿ, ಗದೆ, ಬಿಲ್ಲು ಬಾಣಗಳನ್ನು ನೀಡಿ ಹೋರಾಡುವ ತರಬೇತಿಯನ್ನು ನೀಡಬಹುದೇ ಹೊರತು, ಕಾಳಗದಲ್ಲಿ ಹೋರಾಡಲು ಅಗತ್ಯವಾದ ಮಾನಸಿಕ ಕೆಚ್ಚನ್ನು ಮತ್ತೊಬ್ಬರು ನೀಡಲು ಆಗುವುದಿಲ್ಲ. ಈ ಸಂಗತಿಯು ಒಂದು ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

ವ್ಯಕ್ತಿಯು ಇತರರಿಂದ ವಿದ್ಯೆ, ಸಂಪತ್ತು, ಆಡಳಿತದ ಹುದ್ದೆಯನ್ನು ಪಡೆಬಹುದು. ಆದರೆ ಒಳ್ಳೆಯ ರೀತಿಯಲ್ಲಿ ತನ್ನ ಜೀವನವನ್ನು ರೂಪಿಸಿಕೊಂಡು ಬಾಳುವ ಹೊಣೆಗಾರಿಕೆಯು ಅವನ ಮೇಲೆಯೇ ಇರುತ್ತದೆ.

75. **ಕಳುವ ಚೋರಂಗೆ**
ಬಡವರೆಂದು ದಯವುಂಟೆ. (714/866)

ಕಳ್=ಎಗರಿಸು/ಅಪಹರಿಸು; ಕಳುವ=ಪರರ ಒಡವೆ ವಸ್ತುಗಳನ್ನು ದೋಚುವ/ಕದಿಯುವ; ಚೋರ=ಕಳ್ಳ; ಚೋರಂಗೆ=ಚೋರನಿಗೆ; ಬಡವರ್+ಎಂದು; ಬಡವ=ಹಣ ಒಡವೆ ವಸ್ತುಗಳು ಇಲ್ಲದವನು/ತಿನ್ನಲು ತೊಡಲು ಗತಿಯಿಲ್ಲದವನು; ದಯ+ಉಂಟೇ; ದಯ=ಕರುಣೆ/ಕನಿಕರ; ಉಂಟೇ=ಇರುವುದೇ;

ಜನರ ಒಡವೆ ವಸ್ತುಗಳನ್ನು ದೋಚುವ ಕಳ್ಳನಿಗೆ, ಲಂಚಕೋರನಿಗೆ, ಅಕ್ರಮವಾಗಿ ಹಣ ಸಂಪಾದನೆ ಮಾಡುವ ವ್ಯಕ್ತಿಗೆ ತನ್ನ ಮತ್ತು ತನ್ನ ಕುಟುಂಬದ ಹಿತ ದೊಡ್ಡದೇ ಹೊರತು, ಅನ್ನ, ಬಟ್ಟೆ, ವಸತಿಯಿಂದ ವಂಚಿತರಾಗಿ ಹಸಿವು ಮತ್ತು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನರ ಬಗ್ಗೆ ಕಿಂಚಿತ್ತಾದರೂ ಕರುಣೆಯಿರುವುದಿಲ್ಲ.

76. **ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು**
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ. (715/866)

ಗರ್ವ+ಇಂದ; ಗರ್ವ=ಸೊಕ್ಕು/ಹೆಮ್ಮೆ; ಭಕ್ತಿ=ದೇವರನ್ನು ಒಲವು ನಲಿವುಗಳಿಂದ ಪೂಜಿಸುವುದು;

ಗರ್ವದಿಂದ ಮಾಡುವ ಭಕ್ತಿ=ದೇವರ ವಿಗ್ರಹಕ್ಕೆ ವಜ್ರ ಚಿನ್ನ ಬೆಳ್ಳಿಯ ಒಡವೆಗಳನ್ನು ತೊಡಿಸಿ, ಬಗೆಬಗೆಯ ಹೂಗಳಿಂದ ಸಿಂಗರಿಸಿ, ಉಣಿಸು ತಿನಸುಗಳನ್ನು ಮುಂದಿಟ್ಟು, ದೂಪ ದೀಪಗಳನ್ನು ಬೆಳಗುತ್ತ, ಗಂಟೆ ಜಾಗಟೆಗಳನ್ನು ಬಡಿಯುತ್ತ ಅಬ್ಬರದ ದನಿಯಿಂದ ಮಾಡುವ ಆಡಂಬರದ ಪೂಜೆ;

ದ್ರವ್ಯ=ಹಣ/ಸಂಪತ್ತು/ಒಡವೆ ವಸ್ತು; ಕೇಡು=ಹಾನಿ/ನಾಶ; ನಡೆ+ಇಲ್ಲದ; ನಡೆ=ವರ್ತನೆ/ಮಾಡುವ ಕೆಲಸ/ನಡವಳಿಕೆ; ನುಡಿ=ಮಾತು/ಸೊಲ್ಲು; ಅರಿವು=ತಿಳಿವು/ತಿಳುವಳಿಕೆ; ಅರಿವಿಂಗೆ=ಅರಿವಿಗೆ; ಹಾನಿ=ಕೇಡು/ನಾಶ/ಆಪತ್ತು/ಅಳಿವು;

ವ್ಯಕ್ತಿಯು ಸಂಪತ್ತಿನ ಸಿರಿವಂತಿಕೆಯಿಂದ ಮೆರೆಯುತ್ತ, ಇತರರ ಮುಂದೆ ತನ್ನ ಸಾಮಾಜಿಕ ಅಂತಸ್ತನ್ನು ತೋರಿಸಿಕೊಳ್ಳಲೆಂದು ಮಾಡುವ ಆಡಂಬರದ ಪೂಜೆಯಿಂದ ಹಣ ವೆಚ್ಚವಾಗುವುದೇ ಹೊರತು ಮತ್ತೇನು ಪ್ರಯೋಜನವಿಲ್ಲ.

ವ್ಯಕ್ತಿಯು ನುಡಿದಂತೆ ನಡೆಯದಿದ್ದರೆ ಅವನು ಗಳಿಸಿರುವ ಅರಿವಿಗೆ ಯಾವುದೇ ಬೆಲೆಯಿಲ್ಲ. ಏಕೆಂದರೆ ಸತ್ಯ ನ್ಯಾಯ ನೀತಿಯ ಮಾತುಗಳಿಗಿಂತ, ಅವನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದು ದೊಡ್ಡದು.

ಆಡಂಬರದ ಮಾತು ಮತ್ತು ಸಿರಿಸಂಪತ್ತಿನ ತೋರಿಕೆಯ ಪೂಜೆಗಿಂತ ವ್ಯಕ್ತಿಯು ತನ್ನ ಮತ್ತು ಸಮುದಾಯದ ಒಳಿತಿಗಾಗಿ ಒಳ್ಳೆಯ ನಡೆನುಡಿಗಳಿಂದ ಕೂಡಿ ಬಾಳುವುದೇ ದೊಡ್ಡದು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

77. ಸಸಿಗೆ ನೀರೆರೆದಡೆ ಎಳಕುವುದಲ್ಲದೆ
ನಷ್ಟಮೂಲಕ್ಕೆ ಹೊತ್ತು ನೀರ ಹೊಯಿದಡೆ ಎಳಕುವುದೆ. (728/868)

ಸಸಿ=ಎಳೆಯ ಗಿಡ/ಸಸ್ಯ/ಚಿಕ್ಕ ಪಯಿರು; ನೀರ್+ಎರೆದಡೆ; ಎರೆ=ಹಾಕು/ಸುರಿ/ಹೊಯ್ಯು; ಎರೆದಡೆ=ಹಾಕಿದರೆ; ಎಳಕುವುದು+ಅಲ್ಲದೆ; ಎಳಕು=ಅಲುಗಾಟ/ಚಲನೆ/ಜೀವರಸ ತುಂಬಿ ಬೆಳೆಯುವುದು; ಅಲ್ಲದೆ=ಹೊರತು; ನಷ್ಟ=ಹಾನಿ/ಕೇಡು/ಇಲ್ಲವಾಗುವದು;

ಮೂಲ=ಮಣ್ಣಿನೊಳಗಿರುವ ಮರಗಿಡಗಳ ತಾಯಿಬೇರು ಮತ್ತು ಕವಲುಬೇರುಗಳು; ನಷ್ಟಮೂಲ=ಬುಡ ಸಮೇತ ಕಿತ್ತುಬಂದು, ಅಡಿಮೇಲಾಗಿ ಬಿದ್ದಿರುವ ಸಸಿ; ಹೊತ್ತು=ನೀರು ತುಂಬಿದ ಕೊಡವನ್ನು ತಲೆಯ ಮೇಲೆ ಇಲ್ಲವೇ ಹೆಗಲ ಮೇಲಿಟ್ಟುಕೊಂಡು ಹೋಗಿ; ನೀರ=ನೀರನ್ನು; ಹೊಯ್=ಹಾಕು/ಸುರಿ/ಎರೆ; ಹೊಯಿದಡೆ=ಹಾಕಿದರೆ; ಎಳಕುವುದೆ=ಮತ್ತೆ ಜೀವಂತವಾಗಿ ಬೆಳೆಯುವುದೆ;

ಮಣ್ಣಿನೊಳಗೆ ಬೇರು ಬಿಟ್ಟು ಬೆಳೆದು ನಿಂತಿರುವ ಸಸಿಗೆ ಅದರ ಬುಡದಲ್ಲಿ ನೀರನ್ನು ಎರೆದರೆ, ಅದು ಬೆಳೆದು ದೊಡ್ಡದಾಗಿ ಹೂವು ಕಾಯಿ ಹಣ್ಣನ್ನು ನೀಡುತ್ತದೆ. ಬುಡಸಮೇತ ಕಿತ್ತು ಬಂದು ಅಡಿಮೇಲಾಗಿ ನೆಲದ ಮೇಲೆ ಬಿದ್ದಿರುವ ಸಸಿಯ ಬೇರುಗಳ ಮೇಲೆ ನೀರನ್ನು ಹೊಯ್ದರೆ, ಸತ್ತುಹೋಗಿರುವ ಸಸಿಯು ಮತ್ತೆ ಜೀವಂತವಾಗಿ ಬೆಳೆಯುವುದಿಲ್ಲ. ಇದನ್ನು ಒಂದು ರೂಪಕವಾಗಿ ಹೇಳಲಾಗಿದೆ.

ಉಳಿದು ಬೆಳೆದು ನಾಲ್ಕು ಕಾಲ ಬಾಳುವ ಒಳ್ಳೆಯ ಕೆಲಸಕ್ಕೆ ನಾವು ಉತ್ತೇಜನವನ್ನು ಮತ್ತು ನೆರವನ್ನು ನೀಡಬೇಕಲ್ಲದೆ, ಜನಸಮುದಾಯಕ್ಕೆ ಉಪಯೋಗವಿಲ್ಲದ ಇಲ್ಲವೇ ಕೇಡನ್ನು ತರುವ ಕೆಲಸವನ್ನು ನಾವು ಬೆಂಬಲಿಸ ಬಾರದು ಎಂಬ ತಿರುಳಿನಲ್ಲಿ ಈ ರೂಪಕ ಬಳಕೆಯಾಗಿದೆ.

8. ಗಜೇಶ ಮಸಣಯ್ಯ

ಕಾಲ : ಕ್ರಿ.ಶ.12ನೆಯ ಶತಮಾನ

ಊರು : ಕರಜಿಗಿ ಗ್ರಾಮ, ಬಿಜಾಪುರದಿಂದ ಅರವತ್ತು ಮೈಲಿ ದೂರದಲ್ಲಿರುವ ಅಕ್ಕಲಕೋಟೆಗೆ ಸಮೀಪದಲ್ಲಿದೆ.

ದೊರೆತಿರುವ ವಚನಗಳು :70

ಅಂಕಿತ ನಾಮ : ಮಹಾಲಿಂಗ ಗಜೇಶ್ವರ

78. ಒಲಿದವರ ಕೊಲುವಡೆ ಮಸೆದ ಕೂರಲಗೇಕೆ
ಅವರನೊಲ್ಲೆನೆಂದಡೆ ಸಾಲದೆ. (215/1223)

ಒಲಿ=ಮೆಚ್ಚು/ಮೋಹಗೊಳ್ಳು/ಒಪ್ಪು; ಒಲಿದವರ=ಮೋಹಗೊಂಡವರನ್ನು/ಮೆಚ್ಚಿದವರನ್ನು; ಕೊಲ್=ಪ್ರಾಣವನ್ನು ತೆಗೆ/ಪೀಡಿಸು/ನೋಯಿಸು; ಕೊಲುವಡೆ=ನೋಯಿಸುವುದಾದರೆ/ಕೊಲ್ಲುವುದಾದರೆ; ಮಸೆ=ಕತ್ತಿ, ಚಾಕು ಮುಂತಾದ ಹತಾರಗಳ ಬಾಯಿ ಹರಿತಗೊಳ್ಳುವಂತೆ ಉಜ್ಜುವುದು;

ಮಸೆದ=ಹರಿತಗೊಂಡ/ಸಾಣೆ ಹಿಡಿದ; ಕೂರ್+ಅಲಗು+ಏಕೆ; ಕೂರ್=ಹರಿತವಾದ/ಚೂಪಾದ ಮೊನೆಯುಳ್ಳ; ಅಲಗು=ಕತ್ತಿ; ಕೂರಲಗು=ಹರಿತವಾದ ಕತ್ತಿ; ಏಕೆ=ಯಾವುದಕ್ಕೆ ಬೇಕು/ಅಗತ್ಯವಿಲ್ಲ; ಅವರನ್+ಒಲ್ಲೆನ್+ಎಂದಡೆ; ಒಲ್ಲೆನ್=ಬೇಕಾಗಿಲ್ಲ/ಮೆಚ್ಚುವುದಿಲ್ಲ; ಎಂದಡೆ=ಎಂದು ಹೇಳಿದರೆ; ಸಾಲು=ಸಾಕು; ಸಾಲದೆ=ಸಾಕಾಗುವುದಿಲ್ಲವೇ;

ನಮ್ಮಲ್ಲಿ ಮೋಹಗೊಂಡಿರುವ ವ್ಯಕ್ತಿಯನ್ನು ನಮ್ಮ ಮನಸ್ಸಿನಿಂದಲೇ ಹೊರ ಹಾಕುವಂತೆ “ನಿನ್ನ ಒಡನಾಟವೇ ನನಗೆ ಬೇಕಾಗಿಲ್ಲ” ಎಂದು ನೇರವಾಗಿ ಹೇಳುವ ನುಡಿಯೇ ಒಲಿದವರ ಪಾಲಿಗೆ ಸಾವಿಗಿಂತಲೂ ಹೆಚ್ಚಾದ ಮಾನಸಿಕ ಯಾತನೆಯನ್ನು ನೀಡುತ್ತದೆ.

79. ಕೂಪರನಗಲುವುದು ಆತ್ಮಘಾತಕವವ್ವಾ
ದಿಬ್ಯವ ತುಡುಕಿದಡೆ ಕೈ ಬೇವುದಲ್ಲದೆ ಮೈ ಬೇವುದೆ
ಒಲಿದವರನಗಲಿದಡೆ ಸರ್ವಾಂಗವೂ ಬೇವುದವ್ವಾ. (220/1223)

ಕೂಪರ್+ಅನ್+ಅಗಲುವುದು; ಕೂಪ=ಪ್ರಿಯ, ನಲ್ಲ; ಕೂಪರ್=ಪ್ರಿಯರು/ಒಲಿದವರು/ಮೋಹಗೊಂಡವರು; ಅನ್=ಅನ್ನು; ಕೂಪರನ್=ಒಲಿದವರನ್ನು; ಅಗಲು=ಬಿಟ್ಟು ದೂರ ಸರಿಯುವುದು/ತೊರೆಯುವುದು; ಆತ್ಮ+ಘಾತಕ+ಅವ್ವಾ; ಆತ್ಮ=ಜೀವ; ಘಾತಕ=ಕೊಲ್ಲುತ್ತದೆ/ನಾಶ ಮಾಡುತ್ತದೆ; ಆತ್ಮಘಾತಕ=ಜೀವ ಹಾನಿ; ಅವ್ವಾ=ಹೆಂಗಸರ ಜತೆ ಮಾತನಾಡುವಾಗ ಒಲವು ನಲಿವು ಆದರದಿಂದ ಬಳಸುವ ಪದ;

ದಿಬ್ಯ=ಒಂದು ಬಗೆಯ ಆಚರಣೆ. ಯಾವುದೇ ಬಗೆಯ ಆರೋಪಕ್ಕೆ ಗುರಿಯಾದ ವ್ಯಕ್ತಿಯು ತಾನು ತಪ್ಪನ್ನು ಮಾಡಿಲ್ಲವೆಂದು ಜನರ ಮುಂದೆ ಸಾಬೀತು ಪಡಿಸುವುದಕ್ಕಾಗಿ ಆಣೆಯನ್ನು ಇಕ್ಕುವಾಗ ಇಲ್ಲವೇ ಪ್ರಮಾಣವನ್ನು ಮಾಡುವಾಗ ಕಾದ ಕಬ್ಬಿಣದ ಸರಳನ್ನು ಕಯ್ಯಿಂದ ಹಿಡಿದುಕೊಳ್ಳುವ ಆಚರಣೆ. ಆಗ ಕಯ್ ಸುಡದಿದ್ದರೆ ವ್ಯಕ್ತಿಯು ತಪ್ಪನ್ನು ಮಾಡಿಲ್ಲವೆಂದು ಸಾಬೀತಾಗುತ್ತಿತ್ತು;

ತುಡುಕು=ಮುಟ್ಟು/ಹಿಡಿ; ತುಡುಕಿದಡೆ=ಹಿಡಿದುಕೊಂಡರೆ; ಕೈ=ಹಸ್ತ; ಬೇವುದು+ಅಲ್ಲದೆ; ಬೇವುದು=ಸುಟ್ಟು ಹೋಗುತ್ತದೆ; ಅಲ್ಲದೆ=ಹೊರತು; ಮೈ=ದೇಹ/ಶರೀರ; ಬೇವುದೆ=ಬೆಂದುಹೋಗುವುದೆ;

ಕೈ ಬೇಹುದಲ್ಲದೆ ಮೈ ಬೇಹುದೆ=ಕಯ್ ಸುಡುತ್ತದೆಯೇ ಹೊರತು ಇಡೀ ದೇಹ ಬೇಯುವುದಿಲ್ಲ; ಒಲಿದವರನ್+ಅಗಲಿದಡೆ; ಒಲಿದವರನ್=ಮೋಹಿಸಿದ ವರನ್ನು/ಪ್ರೀತಿಸಿದವರನ್ನು; ಅಗಲಿದಡೆ=ದೂರ ಸರಿದರೆ; ಸರ್ವ+ಅಂಗವೂ; ಸರ್ವ=ಎಲ್ಲ/ಸಕಲ/ಸಮಸ್ತ; ಅಂಗ=ದೇಹ/ಶರೀರ; ಬೇವುದು+ಅವ್ವಾ;

ಜೀವನದಲ್ಲಿ ವ್ಯಕ್ತಿಗಳ ಮನಸ್ಸನ್ನು ಒಂದುಗೂಡಿಸುವ 'ಒಲವು' ಎಂಬುದು ತುಂಬಾ ದೊಡ್ಡದು. ಏಕೆಂದರೆ ಒಲವಿನಿಂದ ಕೂಡಿ ಬಾಳುತ್ತಿರುವ ವ್ಯಕ್ತಿಗಳು ಪರಸ್ಪರ ಸಹನೆ, ನಂಬಿಕೆ ಮತ್ತು ಕರುಣೆಯ ನಡೆನುಡಿಗಳಿಂದ ಜೀವನದಲ್ಲಿ ಎದುರಾಗುವ ಎಡರು ತೊಡರುಗಳೆಲ್ಲವನ್ನೂ ಸಹಿಸಿಕೊಂಡು ಜತೆಗೂಡಿ ಬಾಳುತ್ತಿರುತ್ತಾರೆ. ಈ ರೀತಿ ಒಲಿದು ಒಂದಾದವರು ಪರಸ್ಪರ ದೂರವಾಗುವ ಸನ್ನಿವೇಶ ಒದಗಿ ಬಂದರೆ, ಆಗ ಅವರ ಪಾಲಿಗೆ 'ಅಗಲಿಕೆ' ಎಂಬುದು ದಿಬ್ಯದ ಆಚರಣೆಯ ಸನ್ನಿವೇಶದಲ್ಲಿ ಉಂಟಾಗುವ ನೋವಿಗಿಂತಲೂ ಹೆಚ್ಚಾಗಿ ಮಯ್ ಮನಗಳೆರಡನ್ನೂ ತೀವ್ರವಾದ ಯಾತನೆಗೆ ಗುರಿಮಾಡುತ್ತದೆ.

9. ಗುಪ್ತ ಮಂಚಣ್ಣ

80. ಕಳವು ಹಾದರಕ್ಕೆ ಗುಪ್ತ
ಶಿವಭಕ್ತಿ ಶಿವಪೂಜೆ ಶಿವಜ್ಞಾನ ಇಂತಿವಕ್ಕೆ ಬಾಹ್ಯಾಡಂಬರವೆ.

(309/1232)

ಕಳವು=ಕಳ್ಳತನ/ಇತರರ ಒಡವೆ ವಸ್ತುಗಳನ್ನು ಕದಿಯುವುದು; ಹಾದರ= ಸಮಾಜ ಒಪ್ಪಿತವಲ್ಲದ ರೀತಿಯಲ್ಲಿ ಗಂಡು ಹೆಣ್ಣು ಕಾಮದ ನಂಟನ್ನು ಹೊಂದುವುದು; ಗುಪ್ತ=ಗುಟ್ಟು/ರಹಸ್ಯ/ಯಾರಿಗೂ ತಿಳಿಯದಂತೆ; ಶಿವ=ಈಶ್ವರ; ಭಕ್ತಿ=ದೇವರಲ್ಲಿ ಒಲವು ನಲಿವನ್ನು ಹೊಂದಿರುವುದು;

ಪೂಜೆ=ದೂಪ ದೀಪಗಳನ್ನು ಬೆಳಗುತ್ತ ಶಿವನ ವಿಗ್ರಹಕ್ಕೆ ಕಯ್ ಮುಗಿದು ಅಡ್ಡಬೀಳುವ ಆಚರಣೆ; ಜ್ಞಾನ=ಅರಿವು/ತಿಳುವಳಿಕೆ; ಇಂತು+ಇವಕ್ಕೆ; ಬಾಹ್ಯ+ ಆಡಂಬರವೆ; ಬಾಹ್ಯ=ಹೊರಗಡೆ/ಎಲ್ಲರಿಗೂ ಗೊತ್ತಾಗುವಂತೆ; ಆಡಂಬರ= ತೋರಿಕೆ/ಪ್ರದರ್ಶನದ ಹಂಬಲ; ಬಾಹ್ಯಾಡಂಬರ=ಬಹಿರಂಗದಲ್ಲಿ ವ್ಯಕ್ತಿಯು ತನ್ನ ಹೆಚ್ಚುಗಾರಿಕೆಯನ್ನು ಮೆರೆಯುವುದು;

ತಾವು ಮಾಡುವ ಕಳ್ಳತನ ಮತ್ತು ಹಾದರವನ್ನು ಗುಟ್ಟಾಗಿ ಮುಚ್ಚಿಟ್ಟುಕೊಳ್ಳುವ ಜನರು, ಶಿವನ ಬಗ್ಗೆ ಅಪಾರವಾದ ಒಲವು ಉಳ್ಳವರಂತೆ ಮಾಡುವ ಪೂಜೆಯನ್ನು ಮಾತ್ರ ಎಲ್ಲರ ಮುಂದೆಯು ದೊಡ್ಡದಾಗಿ ಆಚರಿಸುತ್ತಾರೆ.

ಕೆಟ್ಟ ಕೆಲಸವನ್ನು ಮರೆಮಾಚಿ, ಒಳ್ಳೆಯದನ್ನು ಮಾತ್ರ ಹೇಳಿಕೊಳ್ಳುವ ಇಲ್ಲವೇ ತೋರಿಸಿಕೊಳ್ಳುವ ಮಾನವನ ಸಾಮಾಜಿಕ ವರ್ತನೆಯನ್ನು ಈ ನುಡಿಗಳಲ್ಲಿ ವಚನಕಾರನು ಗುರುತಿಸಿದ್ದಾನೆ.

81. ಡಂಬಕದ ಪೂಜೆ ಹೋಹ ಹೊತ್ತಿನ ಕೇಡು
ಆಡಂಬರದ ಪೂಜೆ ತಾಮ್ರದ ಮೇಲಣ ಸುವರ್ಣದ ಛಾಯೆ.

(336/1235)

ಡಂಬ=ಮೋಸ/ಸೋಗಿನ ನಡೆನುಡಿ/ಬೂಟಾಟಿಕೆ; ಡಂಬಕ= ಮೋಸಗಾರ/ವಂಚಕ; ಪೂಜೆ=ದೂಪ ದೀಪಗಳನ್ನು ಬೆಳಗುತ್ತ ಶಿವನ ವಿಗ್ರಹಕ್ಕೆ ಕಯ್ ಮುಗಿದು ಅಡ್ಡಬೀಳುವ ಆಚರಣೆ; **ಡಂಬಕದ ಪೂಜೆ**=ಕೆಟ್ಟ ನಡೆನುಡಿ ಯುಳ್ಳ ವ್ಯಕ್ತಿಯು ಮಾಡುವ ತೋರಿಕೆಯ ಪೂಜೆ; ಹೋಹ=ಉರುಳುತ್ತಿರುವ/ಕಳೆದು ಹೋಗುತ್ತಿರುವ/ಚಲಿಸುತ್ತಿರುವ;

ಹೊತ್ತು=ಸಮಯ/ವೇಳೆ/ಕಾಲ; ಕೇಡು=ನಾಶ/ಹಾನಿ/ಅಳಿವು; ಆಡಂಬರ= ತೋರಿಕೆ/ಪ್ರದರ್ಶನದ ಹಂಬಲ; ತಾಮ್ರ=ಒಂದು ಬಗೆಯ ಲೋಹ; ಮೇಲಣ= ಮೇಲೆ ಕಂಡುಬರುವ/ಮೇಲೆ ಲೇಪಿಸಿರುವ; ಸುವರ್ಣ=ಚಿನ್ನ/ಹೊನ್ನು/ಬಂಗಾರ; ಛಾಯೆ=ಕಾಂತಿ/ಹೊಳಪು/ಬಣ್ಣ;

ಶಿವಶರಣಶರಣೆಯರು ವ್ಯಕ್ತಿಯ ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ನಂಬಿದ್ದರು. ಆದ್ದರಿಂದ ಅವರ ಕಣ್ಣಿಗೆ ಕಪಟತನ ಮತ್ತು ಕೇಡಿಗತನದ ನಡೆನುಡಿ ಯುಳ್ಳ ವ್ಯಕ್ತಿಯು ಮಾಡುವ ಪೂಜೆಯು ಸುಮ್ಮನೆ ಕಾಲಹರಣದಂತೆ ಕಾಣುತ್ತಿತ್ತು.

ದೇವರಲ್ಲಿ ತಾನು ಒಲವುಳ್ಳವನೆಂದು ತೋರಿಸಿಕೊಳ್ಳಲು ವಂಚಕನು ಜನರ ಮುಂದೆ ಮಾಡುವ ಆಡಂಬರದ ಪೂಜೆಯು ತಾಮ್ರದ ತಗಡಿಗೆ ಚಿನ್ನದ ನೀರನ್ನು ಲೇಪನ ಮಾಡಿದಂತಿರುತ್ತದೆ. ಈ ಹೋಲಿಕೆಯು ಮೇಲುನೋಟಕ್ಕೆ ಒಳ್ಳೆಯವನಂತೆ ಕಾಣಿಸಿಕೊಳ್ಳಲು ಪ್ರಯತ್ನಿಸುವ ವ್ಯಕ್ತಿಯು ನಿಜಜೀವನದಲ್ಲಿ ಕೆಟ್ಟವನಾಗಿರುತ್ತಾನೆ ಎಂಬುದನ್ನು ಸೂಚಿಸುತ್ತದೆ.

10. ಚಂದಿಮರಸ

82. ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಿದಡೇನಪ್ಪುದೆಲವೋ. (553/1258)

ಅರಿ=ತಿಳಿ/ಗ್ರಹಿಸು; ಅರಿಯದ=ಒಳ್ಳೆಯ ತಿಳುವಳಿಕೆಯನ್ನು ಪಡೆಯದಿರುವ/ಹೊಂದದಿರುವ; ಗುರು=ಜನರಿಗೆ ವಿದ್ಯೆಯನ್ನು ಕಲಿಸಿ, ಅವರ ನಡೆನುಡಿಯಲ್ಲಿನ ತಪ್ಪುಗಳನ್ನು ತಿದ್ದಿ ಸರಿಪಡಿಸಿ, ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ ವ್ಯಕ್ತಿ; ಶಿಷ್ಯ=ವಿದ್ಯೆಯನ್ನು ಕಲಿಯಲೆಂದು ಗುರುವಿನ ಬಳಿಯಲ್ಲಿ ಇರುವವನು/ಗುಡ್ಡ; ಶಿಷ್ಯಂಗೆ=ಗುಡ್ಡನಿಗೆ;

ಅನುಗ್ರಹ=ಕರುಣೆ/ದಯೆ/ಕೊಡುವುದು; ಮಾಡಿದಡೆ+ಏನ್+ಅಪ್ಪುದು+ಎಲವೋ; ಮಾಡಿದಡೆ=ಮಾಡಿದರೆ; **ಅನುಗ್ರಹ ಮಾಡಿದಡೆ**=ವಿದ್ಯೆಯನ್ನು ಹೇಳಿ ಕೊಟ್ಟರೆ; ಏನ್=ಯಾವುದು; ಅಪ್ಪುದು=ಆಗುವುದು; ಏನಪ್ಪದು=ಏನಾಗುವುದು/ಏನು ತಾನೆ ಪ್ರಯೋಜನ; ಎಲವೋ=ವ್ಯಕ್ತಿಯನ್ನು ಕುರಿತು ನೇರವಾಗಿ ಮಾತನಾಡಿಸುವಾಗ ಬಳಸುವ ಪದ;

"ಜೀವನದಲ್ಲಿ ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ಸರಿ–ಯಾವುದು ತಪ್ಪು; ಯಾವುದು ದಿಟ–ಯಾವುದು ಸಟೆ" ಎಂಬ ಅರಿವನ್ನು ವ್ಯಕ್ತಿಯಲ್ಲಿ ಮೂಡಿಸಿ, ಅವನಿಗೆ ಒಳ್ಳೆಯ ನಡೆನುಡಿಯನ್ನು ಕಲಿಸಿ, ಅವನ ವ್ಯಕ್ತಿತ್ವವನ್ನು ರೂಪಿಸುವ ಹೊಣೆಯನ್ನು ಹೊತ್ತಿರುವ ಗುರುವೇ ತಿಳಿಗೇಡಿಯಾಗಿದ್ದರೆ, ಅಂತಹ ಗುರುವಿನ ಬಳಿ ಬೆಳೆದ ಗುಡ್ಡನು ಒಳ್ಳೆಯದೇನನ್ನೂ ಕಲಿಯಲಾರ ಮತ್ತು ಮಾಡಲಾರ.

ಆದ್ದರಿಂದ ವಿದ್ಯೆಯನ್ನು ಕಲಿಸುವ ಗುರು ಮೊತ್ತಮೊದಲು ತಾನು ಅರಿವನ್ನು ಗಳಿಸಿಕೊಳ್ಳುವುದರ ಜತೆಗೆ ಒಳ್ಳೆಯ ನಡೆನುಡಿಗಳನ್ನು ಹೊಂದಿರಬೇಕು. ಅರಿವು

ಮತ್ತು ಸಾಮಾಜಿಕ ಎಚ್ಚರವುಳ್ಳ ಗುರುವಿನಿಂದ ವಿದ್ಯೆಯನ್ನು ಕಲಿತಾಗ ಮಾತ್ರ ಗುಡ್ಡನು ಒಳ್ಳೆಯ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಪ್ರಯೋಜನಕಾರಿಯಾಗುತ್ತಾನೆ.

83. ನಡೆಯೊಂದು ನುಡಿಯೊಂದು ಪರಿಯುಳ್ಳವ
ತತ್ತ್ವವಿದನಲ್ಲ. (626/1266)

ನಡೆ+ಒಂದು; ನಡೆ=ಮಾಡುವ ಕೆಲಸ/ವರ್ತನೆ; ನುಡಿ+ಒಂದು; ನುಡಿ= ಆಡುವ ಮಾತು/ಸೊಲ್ಲು; ಪರಿ+ಉಳ್ಳವ; ಪರಿ=ರೀತಿ/ಬಗೆ; ಉಳ್=ಇರು/ ಹೊಂದು/ಪಡೆ; ಉಳ್ಳವ=ಇರುವವನು/ಪಡೆದಿರುವವನು; ತತ್ತ್ವವಿದನ್+ಅಲ್ಲ; ತತ್ತ್ವ=ದಿಟ/ಸತ್ಯ/ವಾಸ್ತವ/ನಿಯಮ;

ತತ್ತ್ವವಿದ=ಸತ್ಯದ ವಿಚಾರವನ್ನು ಚೆನ್ನಾಗಿ ಅರಿತವನು/ನಿಸರ್ಗದ ಆಗು ಹೋಗು ಮತ್ತು ಜೀವಜಗತ್ತಿನ ಸಂಗತಿಯನ್ನು ತಿಳಿದವನು; ತತ್ತ್ವವಿದನಲ್ಲ= ಅರಿತವನಲ್ಲ/ತಿಳಿದವನಲ್ಲ;

ಮಾತಿನಲ್ಲಿ ಒಳ್ಳೆಯ ನುಡಿಗಳನ್ನಾಡುತ್ತ, ತನ್ನ ನಿತ್ಯ ಜೀವನದ ನಡೆಯಲ್ಲಿ ಅಂದರೆ ಮಾಡುವ ಕೆಲಸದಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಿರುವ ವ್ಯಕ್ತಿಯು ನೀತಿವಂತನಲ್ಲ. ಇಂತಹವರು ಆಡುವುದೇ ಒಂದು; ಮಾಡುವುದು ಮತ್ತೊಂದಾಗಿರುತ್ತದೆ. ಓದು ಬರಹದಿಂದ ಪಡೆದ ಅರಿವಿನ ಇಲ್ಲವೇ ಪಾಂಡಿತ್ಯದ ಜತೆಗೆ ಒಳ್ಳೆಯ ನಡತೆಯೂ ವ್ಯಕ್ತಿಯಲ್ಲಿರಬೇಕು.

84. ಲೋಕಕ್ಕೆ ಜ್ಞಾನಿ ಮರುಳು
ಜ್ಞಾನಿಗೆ ಲೋಕ ಮರುಳು. (669/1270)

ಲೋಕ=ಪ್ರಪಂಚ/ಮಾನವ ಸಮುದಾಯ; ಜ್ಞಾನಿ=ಅರಿವು ಉಳ್ಳವನು/ ತಿಳುವಳಿಕೆಯುಳ್ಳವನು; ಮರುಳು=ಹುಚ್ಚ/ದಡ್ಡ/ತಿಳಿಗೇಡಿ;

ಜನ ಸಮುದಾಯದಲ್ಲಿ ಬಹುತೇಕ ಮಂದಿ ತಾವು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜದ ಸಂಪ್ರದಾಯ, ಕಟ್ಟುಪಾಡು ಮತ್ತು ಆಚರಣೆಗಳಿಗೆ ಒಳಪಟ್ಟು ಬಾಳುತ್ತಿರುತ್ತಾರೆ. ಇಂತಹವರ ಮುಂದೆ ತಿಳುವಳಿಕೆಯುಳ್ಳ ವ್ಯಕ್ತಿಯು ಜಾತಿ, ಮತ, ದೇವರುಗಳ ಹೆಸರಿನಲ್ಲಿ ನಡೆಯುತ್ತಿರುವ ವಂಚನೆ, ಅನ್ಯಾಯ,

ಅತ್ಯಾಚಾರ, ಕೊಲೆ, ಸುಲಿಗೆಯ ಸಂಗತಿಗಳನ್ನು ಕುರಿತು ವಿವರಿಸುತ್ತ, ಜನರಲ್ಲಿ ಸಾಮಾಜಿಕ ಎಚ್ಚರವನ್ನು ಮೂಡಿಸಲು ಪ್ರಯತ್ನಿಸಿದಾಗ, ಜನಗಳ ಕಣ್ಣಿಗೆ ಹುಚ್ಚನಾಗಿ ಕಾಣುತ್ತಾನೆ.

ತಮ್ಮ ಹಸಿವು, ಬಡತನ ಮತ್ತು ಸಂಕಟಕ್ಕೆ ತಾವು ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪ ಪುಣ್ಯಗಳೇ ಕಾರಣವೆಂಬ ಕರ್ಮ ಸಿದ್ಧಾಂತ, ಪುನರ್ ಜನ್ಮ ಮತ್ತು ಹಣೆಬರಹವನ್ನು ಒಪ್ಪಿಕೊಂಡು ಬಾಳುತ್ತಿರುವ ಜನರು ತಿಳುವಳಿಕೆಯುಳ್ಳ ವ್ಯಕ್ತಿಯ ಕಣ್ಣಿಗೆ ತಿಳಿಗೇಡಿಗಳಾಗಿ ಕಾಣುತ್ತಾರೆ.

ಏಕೆಂದರೆ ಆಡಳಿತದ ಗದ್ದುಗೆಯಲ್ಲಿರುವವರು, ಸಿರಿವಂತರು ಮತ್ತು ಓದು ಬರಹವನ್ನು ಕಲಿತವರು ಮಾಡುತ್ತಿರುವ ವಂಚನೆ ಮತ್ತು ಸುಲಿಗೆಯು ತಮ್ಮ ಬದುಕಿನ ದುರಂತಕ್ಕೆ ಕಾರಣವೆಂಬ ವಾಸ್ತವವನ್ನು ಜನರು ಅರಿಯದವರಾಗಿರುತ್ತಾರೆ.

❖

11. ಚೆನ್ನಬಸವಣ್ಣ

85. ಅಂತರಂಗದಲ್ಲಿ ಅರಿವಾದಡೇನಯ್ಯಾ ಬಹಿರಂಗದಲ್ಲಿ ಕ್ರೀ ಇಲ್ಲದನ್ನಕ್ಕ. (906–385)

ಅಂತರಂಗ+ಅಲ್ಲಿ; ಅಂತರಂಗ=ಮನಸ್ಸು/ಒಳಗಿನದು; ಅರಿವು+ಆದಡೆ+ಏನ್+ಅಯ್ಯಾ;

ಅರಿವು=ತಿಳುವಳಿಕೆ; 'ಅಂತರಂಗದಲ್ಲಿ ಅರಿವಾಗುವುದು' ಎಂದರೆ 'ಜೀವನದಲ್ಲಿ ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ದಿಟ–ಯಾವುದು ಸಟೆ; ಯಾವುದು ನೀತಿ–ಯಾವುದು ಅನೀತಿ' ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದು/ಮನದಟ್ಟು ಮಾಡಿಕೊಳ್ಳುವುದು;

ಆದಡೆ=ಆದರೆ; ಏನ್=ಯಾವುದು; ಅಯ್ಯಾ=ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ಆದಡೇನಯ್ಯಾ=ಅದರಿಂದ ಉಂಟಾದ ಪ್ರಯೋಜನವೇನು/ಪರಿಣಾಮವೇನು;

ಬಹಿರಂಗ+ಅಲ್ಲಿ; ಬಹಿರಂಗ=ಹೊರಗಿನದು/ಹೊರಗೆ ಗೋಚರಿಸುವಂತಹುದು; ಕ್ರೀ=ಕ್ರಿಯೆ/ಕೆಲಸ/ದುಡಿಮೆ/ಕಾಯಕ;

'ಬಹಿರಂಗದಲ್ಲಿ ಕ್ರೀ ಇರುವುದು' –ಎಂದರೆ ನಿತ್ಯ ಜೀವನದ ವ್ಯವಹಾರಗಳಲ್ಲಿ ವ್ಯಕ್ತಿಯು ತನಗೆ, ತನ್ನ ಕುಟುಂಬಕ್ಕೆ, ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಉಂಟುಮಾಡುವಂತಹ ದುಡಿಮೆಯನ್ನು ಮಾಡುವುದು; ಇಲ್ಲದ+ಅನ್ನಕ್ಕ; ಅನ್ನಕ್ಕ=ವರೆಗೆ/ತನಕ; ಇಲ್ಲದನ್ನಕ್ಕ=ಇಲ್ಲದವರೆಗೆ/ಇಲ್ಲದೆ ಹೋದರೆ/ಇಲ್ಲದಿದ್ದರೆ;

ವ್ಯಕ್ತಿಯು ಕೇವಲ ಅರಿವನ್ನು ಪಡೆದುಕೊಳ್ಳುವುದೇ ದೊಡ್ಡದಲ್ಲ. ಪಡೆದ ಅರಿವಿನಿಂದ ಒಳ್ಳೆಯ ಕಾಯಕವನ್ನು ಮಾಡಬೇಕು. ಅರಿವು ಮತ್ತು ದುಡಿಮೆ

ಎರಡೂ ಜತೆಗೂಡಿದಾಗ ಮಾತ್ರ ವ್ಯಕ್ತಿಯ ಬದುಕು ಹಸನಾಗುವುದರ ಜತೆಗೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತಾಗುತ್ತದೆ.

86. ಕೊಡುವಲ್ಲಿ ಕೊಂಬಲ್ಲಿ
ಅತಿಯಾಸೆಯಿಂದ ಹುಸಿಯ ನುಡಿಯದೆ
ಕೊಟ್ಟ ಭಾಷೆಗಳ ಪ್ರಾಣಾಂತ್ಯ ಬಂದಡೆಯೂ
ನುಡಿದಂತೆ ನಡೆವುದೇ ಸತ್ಯಾಚಾರವೆಂಬೆನಯ್ಯಾ. (960–395)

ಕೊಡು+ಅಲ್ಲಿ; ಕೊಡು=ನೀಡು/ದಾನ ಮಾಡು; ಕೊಂಬ+ಅಲ್ಲಿ; ಕೊಂಬ= ತೆಗೆದುಕೊಳ್ಳುವ/ಗಳಿಸುವ/ಪಡೆದುಕೊಳ್ಳುವ;

ಕೊಡುವಲ್ಲಿ ಕೊಂಬಲ್ಲಿ=ಏನನ್ನಾದರೂ ಇತರರಿಗೆ ಕೊಡುವಾಗ ಮತ್ತು ಇತರರಿಂದ ಪಡೆಯುವಾಗ;

ಅತಿ+ಆಸೆ+ಇಂದ; ಅತಿ=ಹೆಚ್ಚಾದ/ಮಿತಿಮೀರಿದ; ಆಸೆ=ಬಯಕೆ/ ಪಡೆದುಕೊಳ್ಳಬೇಕೆಂಬ ತುಡಿತ; ಹುಸಿ=ಸುಳ್ಳು/ಸಟೆ; ನುಡಿ=ಹೇಳು; ಹುಸಿಯ ನುಡಿಯದೆ=ಸುಳ್ಳನ್ನು ಹೇಳದೆ/ಸಟೆಯನ್ನಾಡದೆ

ಕೊಟ್ಟ=ನೀಡಿದ; ಭಾಷೆ=ನುಡಿ/ಮಾತು; **ಕೊಟ್ಟ ಭಾಷೆ**=ಇತರರಿಗೆ ಕೊಟ್ಟಿರುವ ಮಾತು/ನೀಡಿರುವ ವಾಗ್ದಾನ; "ಭಾಷೆ ಕೊಡುವುದು/ಮಾತು ಕೊಡುವುದು" ಎಂದರೆ ಮತ್ತೊಬ್ಬ ವ್ಯಕ್ತಿಗೆ ತನ್ನಿಂದ ಆಗುವ ಕೆಲಸವನ್ನು ಎಂತಹ ಅಡೆತಡೆಗಳು ಬಂದರೂ ಮಾಡಿಕೊಡುತ್ತೇನೆ ಎಂದು ನುಡಿಯುವುದು;

ಪ್ರಾಣ+ಅಂತ್ಯ; ಪ್ರಾಣ=ಜೀವ/ಉಸಿರು; ಅಂತ್ಯ=ಕೊನೆ/ಕಡೆ; ಪ್ರಾಣಾಂತ್ಯ= ಜೀವ ಹೋಗುವಿಕೆ/ಸಾವು; ಬಂದಡೆಯೂ=ಬಂದರೂ/ಉಂಟಾದರೂ; ನುಡಿದ+ ಅಂತೆ; ಅಂತೆ=ಹಾಗೆ/ಅದೇ ರೀತಿ; ನುಡಿದಂತೆ=ಆಡಿದ ಮಾತಿನಂತೆ/ಕೊಟ್ಟ ಮಾತಿನಂತೆ; ನಡೆ=ಮಾಡುವುದು/ವರ್ತಿಸುವುದು; ನಡೆವುದೇ= ಕೆಲಸವನ್ನು ಮಾಡುವುದೇ; **ನುಡಿದಂತೆ ನಡೆವುದೇ**=ಕೊಟ್ಟ ಮಾತಿನಂತೆ ನಡೆದುಕೊಳ್ಳುವುದೇ;

ಸತ್ಯ+ಆಚಾರ+ಎಂಬೆನ್+ಅಯ್ಯಾ; ಸತ್ಯ=ದಿಟ/ವಾಸ್ತವ; ಆಚಾರ=ಒಳ್ಳೆಯ ನಡತೆ; ಸತ್ಯಾಚಾರ=ಒಳ್ಳೆಯ ನಡೆನುಡಿ/ಒಳ್ಳೆಯ ವರ್ತನೆ; ಎಂಬೆನ್=ಎನ್ನುವೆನು;

ವ್ಯಕ್ತಿಯು ತನ್ನ ನಿತ್ಯ ಜೀವನದ ವ್ಯವಹಾರದಲ್ಲಿ ಬೇರೆಯವರನ್ನು ವಂಚಿಸಿ ಹೆಚ್ಚು ಸಂಪತ್ತನ್ನು ಗಳಿಸಬೇಕೆಂಬ ಅತಿಯಾಸೆಯಿಂದ ಸುಳ್ಳನ್ನು ಹೇಳದೆ ಮತ್ತು

ಜೀವ ಹೋಗುವಂತಹ ಸನ್ನಿವೇಶ ಎದುರಾದರೂ ಕೊಟ್ಟ ಮಾತಿಗೆ ತಪ್ಪದೆ ಬಾಳುವುದೇ ಸತ್ಯಾಚಾರ.

87. ನಡೆಯುಳ್ಳವರ ನುಡಿಯೆಲ್ಲ ಬರಡು ಹಯನಾದಂತೆ ನಡೆಯಿಲ್ಲದವರ ನುಡಿಯೆಲ್ಲ ಹಯನು ಬರಡಾದಂತೆ.

(1330–455)

ನಡೆ+ಉಳ್ಳ್+ಅವರ; ನಡೆ=ನಡವಳಿಕೆ/ವರ್ತನೆ; ಉಳ್ಳ್=ಇರು/ಹೊಂದು; ನಡೆಯುಳ್ಳವರ=ಜೀವನದಲ್ಲಿ ಒಳ್ಳೆಯ ನಡವಳಿಕೆಯನ್ನು ಹೊಂದಿರುವವರ; 'ಒಳ್ಳೆಯ ನಡವಳಿಕೆ' ಎಂದರೆ ವ್ಯಕ್ತಿಯು ಮಾಡುವ ಕೆಲಸ ಮತ್ತು ಆತನು ಇತರರೊಂದಿಗೆ ವ್ಯವಹರಿಸುವ ರೀತಿಯು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಿರುವುದು; ನುಡಿ+ಎಲ್ಲ; ನುಡಿ=ಮಾತು/ಸೊಲ್ಲು;

ಬರಡು=ಗೊಡ್ಡಾಗಿರುವ ಪ್ರಾಣಿ. ಅಂದರೆ ಜೀವನದ ಉದ್ದಕ್ಕೂ ಒಮ್ಮೆಯಾದರೂ ಕರುವನ್ನು ಹಾಕದಿರುವ ಹಸು, ಎಮ್ಮೆ ಮುಂತಾದುವು. ಇವು ಹಾಲನ್ನು ನೀಡುವುದಿಲ್ಲ.

ಹಯನು+ಆದ+ಅಂತೆ; ಹಯನು=ಕರುವನ್ನು ಈದ/ಕರುವನ್ನು ಹಾಕಿದ ಪ್ರಾಣಿ. ಹಯನಾದ ಹಸು/ಎಮ್ಮೆಯು ಹಾಲನ್ನು ನೀಡುತ್ತದೆ; ಅಂತೆ=ಹಾಗೆ/ಆ ರೀತಿ; ನಡೆ+ಇಲ್ಲದವರ; **ನಡೆಯಿಲ್ಲದವರ ನುಡಿ**=ಒಳ್ಳೆಯ ನಡವಳಿಕೆಯಿಲ್ಲದವರ ಮಾತು; ನುಡಿ+ಎಲ್ಲ; ನುಡಿಯೆಲ್ಲ=ಮಾತೆಲ್ಲವೂ; ಬರಡು+ಆದ+ಅಂತೆ;

'ಹಯನು' ಮತ್ತು 'ಬರಡು' ಎಂಬ ಎರಡು ಪದಗಳನ್ನು ಇಲ್ಲಿ ವಚನಕಾರನು ರೂಪಕಗಳನ್ನಾಗಿ ಬಳಸಿದ್ದಾನೆ. ಹಯನಾದ ಪ್ರಾಣಿಯು ತನ್ನನ್ನು ಸಾಕಿ ಸಲಹುತ್ತಿರುವ ವ್ಯಕ್ತಿಗೆ ಹಾಲನ್ನು ನೀಡಿ ಒಳಿತನ್ನು ಉಂಟುಮಾಡುವಂತೆಯೇ ಒಳ್ಳೆಯ ಕಾಯಕವನ್ನು ಮಾಡುತ್ತಿರುವ ಮತ್ತು ನಡವಳಿಕೆಯನ್ನು ಹೊಂದಿರುವ ವ್ಯಕ್ತಿಯು ಆಡುವ ಮಾತು ಜನಸಮುದಾಯಕ್ಕೆ ಒಳಿತಿನ ದಾರಿಯನ್ನು ತೋರಿಸುತ್ತದೆ.

ಬರಡಾಗಿರುವ ಪ್ರಾಣಿಯು ಹಾಲನ್ನು ನೀಡದೆ ತನ್ನನ್ನು ಸಾಕಿ ಸಲಹುತ್ತಿರುವ ವ್ಯಕ್ತಿಗೆ ಹೊರೆಯಾಗಿ ಬದುಕುತ್ತಿರುವಂತೆ ಯಾವುದೇ ದುಡಿಮೆಯನ್ನು ಮಾಡದ ಮತ್ತು ಒಳ್ಳೆಯ ನಡವಳಿಕೆಯಿಲ್ಲದ ವ್ಯಕ್ತಿಯು ಆಡುವ ಮಾತಿನಿಂದ ಜನಸಮುದಾಯಕ್ಕೆ ಯಾವೊಂದು ರೀತಿಯಿಂದಲೂ ಪ್ರಯೋಜನವಿಲ್ಲ.

88. ನಾವೇ ಹಿರಿಯರು ನಾವೇ ದೇವರೆಂಬರು ತಮ್ಮ ತಾವರಿಯರು
ಅದ್ಭುತ ಮನಭುಂಜಕರ ಮೆಚ್ಚ
ನಮ್ಮ ಕೂಡಲಚೆನ್ನಸಂಗಮದೇವ. (927–388)

ಹಿರಿಯರು=ವಯಸ್ಸಿನಲ್ಲಿ ದೊಡ್ಡವರು/ಅರಿವಿನಲ್ಲಿ ದೊಡ್ಡವರು; ದೇವರ್+ ಎಂಬರು; ದೇವರು=ಜೀವನದಲ್ಲಿನ ಎಡರುತೊಡರು ಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ವ್ಯಕ್ತಿಯನ್ನು/ಶಕ್ತಿಯನ್ನು 'ದೇವರು' ಎಂದು ಜನಸಮುದಾಯ ನಂಬಿಕೊಂಡಿದೆ;

ನಾವೇ ದೇವರು=ಈ ಜಗತ್ತಿನ ಆಗುಹೋಗುಗಳಿಗೆ ನಾವೇ ಕಾರಣರು/ ನಮ್ಮಿಂದಲೇ ಎಲ್ಲವೂ ನಡೆಯುತ್ತಿದೆ; ಎಂಬರು=ಎನ್ನುವವರು/ಎಂದು ಹೇಳಿಕೊಳ್ಳುವವರು; ತಮ್ಮ=ತಮ್ಮನ್ನು; ತಾವ್+ಅರಿಯರು; ಅರಿ=ತಿಳಿ/ಗ್ರಹಿಸು; ಅರಿಯರು=ತಿಳಿಯರು;

'ತಮ್ಮ ತಾವು ಅರಿಯುವುದು' ಎಂದರೆ ಮಾನವ ಸಮುದಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನವು ನಿಸರ್ಗದ ಆಗುಹೋಗು ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟಿದೆ. ಆದ್ದರಿಂದಲೇ ತನ್ನನ್ನೂ ಒಳಗೊಂಡಂತೆ ಎಲ್ಲ ವ್ಯಕ್ತಿಗಳ ಮಯ್ ಮನದಲ್ಲಿ ಒಳಿತು ಕೆಡುಕಿನ ಒಳಮಿಡಿತಗಳು ಸದಾಕಾಲ ಇದ್ದೇ ಇರುತ್ತವೆ ಎಂಬ ವಾಸ್ತವವನ್ನು ವ್ಯಕ್ತಿಯು ಅರಿತುಕೊಂಡು, ಜೀವನದ ಉದ್ದಕ್ಕೂ ಕೆಡುಕಿನ ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯವನಾಗಿ ಬಾಳಬೇಕೆಂಬ ಎಚ್ಚರವನ್ನು ಹೊಂದಿರುವುದು;

ತಮ್ಮ ತಾವರಿಯರು=ಒಳ್ಳೆಯ ರೀತಿಯಲ್ಲಿ ಬಾಳುವುದಕ್ಕೆ ಅಗತ್ಯವಾದ ಸಾಮಾಜಿಕ ವಾಸ್ತವವನ್ನು ಅರಿತಿಲ್ಲದವರು/ಮಾನವನ ಬದುಕಿನ ಇತಿಮಿತಿ ಗಳನ್ನು ತಿಳಿದಿಲ್ಲದವರು;

ನಾವೇ ಹಿರಿಯರು ನಾವೇ ದೇವರೆಂಬರು ತಮ್ಮ ತಾವರಿಯರು=ನಾವೇ ಹಿರಿಯರು ನಾವೇ ದೇವರು ಎಂದು ಹೇಳಿಕೊಳ್ಳುವ ವ್ಯಕ್ತಿಗಳ ಮನದಲ್ಲಿ ತಿಳಿಗೇಡಿತನ, ಕಪಟತನ ಮತ್ತು ಅಹಂಕಾರ ತುಂಬಿರುತ್ತದೆಯೇ ಹೊರತು ಒಳ್ಳೆಯ ಅರಿವು ಇರುವುದಿಲ್ಲ. ಏಕೆಂದರೆ ಇಂತಹ ವ್ಯಕ್ತಿಗಳು ನಿಸರ್ಗ ಸಹಜವಾದ ವಿದ್ಯಮಾನಗಳನ್ನು ಮತ್ತು ಮಾನವನೇ ಕಟ್ಟಿಕೊಂಡಿರುವ ಸಾಮಾಜಿಕ ಕಟ್ಟುಪಾಡುಗಳ ವಾಸ್ತವವನ್ನು ಅರಿತಿರುವುದಿಲ್ಲ.

ಅದ್ಭುತ=ಅಚ್ಚರಿಯನ್ನು ಉಂಟುಮಾಡುವ ವಸ್ತು/ವ್ಯಕ್ತಿ/ಸಂಗತಿ; ಮನ=ಮನಸ್ಸು/ಚಿತ್ತ; ಭುಂಜಕ=ತಿನ್ನುವವನು/ಕಬಳಿಸುವವನು; **ಮನಭುಂಜಕ=** ಮನದಲ್ಲಿಯೇ ಬಹುಬಗೆಯ ಕಲ್ಪನೆಗಳನ್ನು ಮಾಡಿಕೊಳ್ಳುತ್ತಿರುವ ವ್ಯಕ್ತಿ; **ಅದ್ಭುತ ಮನಭುಂಜಕರು**=ತಮ್ಮ ಬಗ್ಗೆ ತಾವೇ ಇಲ್ಲಸಲ್ಲದ ಊಹೆಗಳನ್ನು ಮಾಡಿಕೊಂಡು ಜನಸಮುದಾಯ ಮತ್ತು ಸಮಾಜದ ಮುಂದೆ ತಮ್ಮ ವ್ಯಕ್ತಿತ್ವವನ್ನು ದೊಡ್ಡದಾಗಿ ಬಿಂಬಿಸಿಕೊಳ್ಳುತ್ತ, ಕಟ್ಟುಕತೆಗಳ ಕಲ್ಪನಾಲೋಕದಲ್ಲಿ ವಿಹರಿಸುತ್ತಿರುವವರು.

ಮೆಚ್ಚು=ಒಪ್ಪು/ಪ್ರೀತಿಸು/ಒಲಿ; ಮೆಚ್ಚ=ಒಪ್ಪುವುದಿಲ್ಲ/ಒಲಿಯುವುದಿಲ್ಲ; ಕೂಡಲಚೆನ್ನಸಂಗಮದೇವ=ಶಿವ/ಚೆನ್ನಬಸವಣ್ಣನ ವಚನಗಳ ಅಂಕಿತನಾಮ.

ಅದ್ಭುತ ಮನಭುಂಜಕರ ಮೆಚ್ಚ ನಮ್ಮ ಕೂಡಲಚೆನ್ನಸಂಗಮದೇವ=ತಮ್ಮ ವ್ಯಕ್ತಿತ್ವದ ಇತಿಮಿತಿಗಳನ್ನು ಅರಿಯದೆ ಮೆರೆಯುತ್ತಿರುವ ತಿಳಿಗೇಡಿಗಳನ್ನು ದೇವರು ಮೆಚ್ಚುವುದಿಲ್ಲ;

89. ಪಾಪಂಗಳು ಕೆಟ್ಟಲ್ಲದೆ ನಿಮ್ಮ ಭಕ್ತರಾಗರಯ್ಯಾ ಕೂಡಲಚೆನ್ನಸಂಗಮದೇವಾ. (51–301)

ಪಾಪ=ಕೆಟ್ಟ ಕೆಲಸವನ್ನು ಮಾಡುವುದರಿಂದ ವ್ಯಕ್ತಿಯು ಗಳಿಸಿಕೊಳ್ಳುವುದು; ಪುಣ್ಯ=ಒಳ್ಳೆಯ ಕೆಲಸವನ್ನು ಮಾಡುವುದರಿಂದ ವ್ಯಕ್ತಿಯು ಪಡೆದುಕೊಳ್ಳುವುದು; ಒಳ್ಳೆಯ ನಡೆನುಡಿಯಿಂದ ವ್ಯಕ್ತಿಗೆ 'ಪುಣ್ಯ' ಬಂದು ಜೀವನದಲ್ಲಿ ಒಲವು ನಲಿವು ನೆಮ್ಮದಿಯು ದೊರಕುವುದೆಂದೂ, ಕೆಟ್ಟ ನಡೆನುಡಿಯಿಂದ 'ಪಾಪ' ತುಂಬಿಕೊಂಡು ಸಾವು ನೋವು ಉಂಟಾಗುವುದೆಂಬ ನಂಬಿಕೆಯು ಜನಸಮುದಾಯದ ಮನದಲ್ಲಿ ನೆಲೆಗೊಂಡಿದೆ;

ಪಾಪಂಗಳು=ಪಾಪಗಳು/ಕೆಟ್ಟ ಕೆಲಸಗಳು; ಕೆಟ್ಟ+ಅಲ್ಲದೆ; ಕೆಡು=ನಾಶವಾಗು/ಇಲ್ಲವಾಗು; ಅಲ್ಲದೆ=ಹಾಗೆ ಮಾಡದೆ; ಪಾಪಂಗಳು ಕೆಟ್ಟಲ್ಲದೆ=ಪಾಪಗಳು ನಾಶವಾಗದೆ; ನಿಮ್ಮ=ದೇವರಾದ ಶಿವನ; ಭಕ್ತರ್+ಆಗು+ಅರ್+ಅಯ್ಯಾ; ಭಕ್ತ=ಒಳಿತಿನ ನಡೆನುಡಿಗಳನ್ನೇ ದೇವರೆಂದು ನಂಬಿ ಬಾಳುತ್ತಿರುವವನು; ಭಕ್ತರಾಗರ್=ಭಕ್ತರಾಗುವುದಿಲ್ಲ; ಕೂಡಲಚೆನ್ನಸಂಗಮದೇವ=ಶಿವ;

ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ಪಾಲಿಗೆ ಶಿವನ ಸಂಕೇತವಾದ ಲಿಂಗವೆಂಬುದು 'ಕಲ್ಲು/ಮರ/ಮಣ್ಣು/ಲೋಹ'ದಿಂದ ಮಾಡಿದ

ವಿಗ್ರಹವಾಗಿರಲಿಲ್ಲ. ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ನಂಬಿದ್ದರು. ಆದ್ದರಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆದ ಪಾಪಿಗಳು ತಮ್ಮ ಕೆಟ್ಟತನವನ್ನು ಬಿಟ್ಟು ಒಳ್ಳೆಯ ಗುಣವಂತರಾಗದ ಹೊರತು ಶಿವಪೂಜೆಗೆ ಯೋಗ್ಯರಾಗುವುದಿಲ್ಲ ಎಂಬ ನಿಲುವನ್ನು ಹೊಂದಿದ್ದರು.

90 ಬರುಮಾತಿನ ಬಳಕೆಯ ಬಳಸಿ
ಹಿರಿಯರಾದೆವೆಂಬ ಮೂಕೊರೆಯರನೇನೆಂಬೆ
ಕೂಡಲಚೆನ್ನಸಂಗಮದೇವಾ. (1633–501)

ಬರು=ಬರಿದು/ಏನೂ ಇಲ್ಲದಿರುವುದು/ಪೊಳ್ಳು; ಮಾತು=ನುಡಿ/ಸೊಲ್ಲು; ಬರುಮಾತು=ಕೆಲಸಕ್ಕೆ ಬಾರದ ಮಾತು/ನಡೆಯಲ್ಲಿ ಕಂಡು ಬರದ ನುಡಿ; ಬಳಕೆ=ಉಪಯೋಗಿಸುವಿಕೆ; ಬಳಸಿ=ಆಡುತ್ತ/ನುಡಿಯುತ್ತ;

ಬರು ಮಾತಿನ ಬಳಕೆ=ಮಾನವ ಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ 'ಅನ್ನ–ಬಟ್ಟೆ–ವಸತಿ–ವಿದ್ಯೆ–ಕೆಲಸ–ಆರೋಗ್ಯ' ವನ್ನು ಉತ್ಪಾದಿಸುವ ಮತ್ತು ವಿತರಿಸುವ ಕಸುಬುಗಳಲ್ಲಿ ಯಾವುದೊಂದನ್ನೂ ಮಾಡದೆ, ಸದಾಕಾಲ ಕೆಲಸಕ್ಕೆ ಬಾರದ ಮಾತುಗಳನ್ನು ಸತ್ಯ, ನೀತಿ, ನ್ಯಾಯ ಮತ್ತು ದೇವರ ಹೆಸರಿನಲ್ಲಿ ದೊಡ್ಡದಾಗಿ ಆಡುತ್ತಿರುವುದು/ಯಾವೊಂದು ದುಡಿಮೆಯನ್ನು ಮಾಡದೆ ಸುಂದರವಾಗಿ ಮಾತನಾಡುತ್ತಿರುವುದು;

ಬರು ಮಾತಿನ ಬಳಕೆಯ ಬಳಸಿ=ಪೊಳ್ಳು ಮಾತನಾಡುವುದನ್ನೇ ತಮ್ಮ ಜೀವನದ ಕಸುಬನ್ನಾಗಿ ಮಾಡಿಕೊಂಡು;

ಹಿರಿಯರ್+ಆದೆವು+ಎಂಬ; ಹಿರಿಯರು=ಅರಿವಿನಲ್ಲಿ ದೊಡ್ಡವರು/ತುಂಬಾ ತಿಳಿದವರು/ಎಲ್ಲರಿಗಿಂತಲೂ ಮೇಲಾದವರು; ಆದೆವು=ಆಗಿದ್ದೇವೆ/ಆಗಿರುವೆವು; ಎಂಬ=ಎಂದು ಹೇಳಿಕೊಳ್ಳುವ; ಮೂಕೊರೆಯರ್+ಅನ್+ಏನ್+ಎಂಬೆ; ಮೂಗು+ಕೊರೆಯ=ಮೂಕೊರೆಯ; ಮೂಗು=ಉಸಿರಾಡಲು ಮತ್ತು ವಾಸನೆ ಯನ್ನು ಗ್ರಹಿಸುವ ಒಂದು ಅಂಗ; ಕೊರೆ=ಅಯ್ಬು/ಕುಂದು/ಲೋಪ;

ಮೂಕೊರೆಯ=ವ್ಯಕ್ತಿಯ ಮೂಗಿನ ಆಕಾರ ಸರಿಯಾಗಿಲ್ಲದಿರುವುದು/ ಅಪ್ಪಚ್ಚಿಯಾದಂತಿರುವ ಮೂಗುಳ್ಳವನು; ಅನ್=ಅನ್ನು; ಏನ್=ಯಾವುದು; ಎಂಬೆ=ಹೇಳುವೆ; ಏನೆಂಬೆ=ಏನೆಂದು ತಾನೆ ಕರೆಯಲಿ; ಕೂಡಲಚೆನ್ನಸಂಗಮ ದೇವಾ=ಶಿವ/ಈಶ್ವರ;

ಏನೆಂಬೆ ಕೂಡಲಚೆನ್ನಸಂಗಮದೇವಾ=ದುಡಿಮೆಯನ್ನು ಮಾಡದೆ ಕೇವಲ ಮಾತಿನ ಮೋಡಿಯಲ್ಲೇ ಜೀವನವನ್ನು ನಡೆಸುತ್ತಿರುವ ವ್ಯಕ್ತಿಗಳನ್ನು ಶಿವಶರಣಶರಣೆಯರು ನಿರಾಕರಿಸಿದ್ದರು. ಏಕೆಂದರೆ ಅವರ ಪಾಲಿಗೆ ಒಳ್ಳೆಯ ಕಾಯಕವೇ ಹಿರಿಯತನದ ವ್ಯಕ್ತಿತ್ವಕ್ಕೆ ಸಂಕೇತವಾಗಿತ್ತು;

'ಮೂಕೊರೆಯರು' ಎಂಬ ಪದವನ್ನು ಒಂದು ಬಯ್ಗುಳವಾಗಿ ಬಳಸಲಾಗಿದೆ. ಬಯ್ಗುಳದ ಪದಗಳು ಮಾತಿನ ಸನ್ನಿವೇಶಕ್ಕೆ ತಕ್ಕಂತೆ ಎರಡು ಬಗೆಯ ತಿರುಳುಗಳಲ್ಲಿ ಬಳಕೆಗೊಳ್ಳುತ್ತವೆ. ಈ ವಚನದ ನುಡಿಯಲ್ಲಿ ಬಯ್ಗುಳವು ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

ಮೂಕೊರೆಯ :

1. ಚಪ್ಪಟೆಯಾದ ಇಲ್ಲವೇ ಅಪ್ಪಚ್ಚಿಯಾದಂತಿರುವ ಮೂಗಿನ ವ್ಯಕ್ತಿ. (ನೇರವಾದ ತಿರುಳು)
2. ಸಮಾಜಕ್ಕೆ ಒಳಿತನ್ನು ಮಾಡದ ವ್ಯಕ್ತಿ/ದುಡಿಮೆಯನ್ನು ಮಾಡದೆ ಇತರರಿಗೆ ಹೊರೆಯಾಗಿ ಬಾಳುತ್ತಿರುವ ವ್ಯಕ್ತಿ. (ರೂಪಕದ ತಿರುಳು)

91. ಬಾಹ್ಯದ ಜಲತೀರ್ಥದಲ್ಲಿ ಮುಳುಮುಳುಗಿ ಎದ್ದಡೇನು ಅಂತರಂಗದ ಮಲಿನತ್ವವು ಮಾಂಬುದೆ ಹೇಳಾ. (1731–515)

ಬಾಹ್ಯ=ಹೊರಗಿನ/ಬಹಿರಂಗ; ಜಲ+ತೀರ್ಥ+ಅಲ್ಲಿ; ಜಲ=ನೀರು; ತೀರ್ಥ= ಪವಿತ್ರವಾದುದು/ಉತ್ತಮವಾದುದು/ಒಳ್ಳೆಯದು; ತೀರ್ಥ=ದೇವಾಲಯಗಳಲ್ಲಿ ಪೂಜೆಯ ನಂತರ ನೀಡುವ ನೀರು. ಇದನ್ನು ಕುಡಿಯುವುದರಿಂದ ಇಲ್ಲವೇ ತಮ್ಮ ತಲೆಯ ಮೇಲೆ ಸಿಂಪಡಿಸಿಕೊಳ್ಳುವುದರಿಂದ ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯು ಜನಮನದಲ್ಲಿದೆ;

ಜಲತೀರ್ಥ=ದೇಗುಲಗಳ ಬಳಿ ಹರಿಯುತ್ತಿರುವ ನದಿ/ತೊರೆ/ಹೊಳೆ; ಮುಳುಗಿ=ನೀರಿನಲ್ಲಿ ಮಯ್ಯನ್ನು ಅದ್ದುವುದು; ಮುಳುಮುಳುಗಿ=ಮತ್ತೆ ಮತ್ತೆ ತಲೆಯನ್ನು ಅದ್ದಿ ಸ್ನಾನ ಮಾಡುವುದು;

ಎದ್ದಡೆ+ಏನು; ಎದ್ದಡೆ=ಎದ್ದರೆ; ಏನು=ಯಾವುದು; ಎದ್ದಡೇನು=ಏಳುವುದರಿಂದ ಬಂದ ಪ್ರಯೋಜನವೇನು; ಅಂತರಂಗ=ಒಳಗಡೆ/ಮನಸ್ಸು/ಚಿತ್ತ; ಮಲಿನತೆ=ಕೊಳಕು/ಹೊಲಸು; ಮಲಿನತ್ವ=ಕೊಳಕಾಗಿರುವುದು/ಹೊಲಸಾಗಿರುವುದು;

‘ಅಂತರಂಗದ ಮಲಿನತ್ವ’ ಎಂಬ ಪದಕಂತೆಯು ಒಂದು ರೂಪಕವಾಗಿ ಬಳಕೆಯಾಗಿದೆ. ವ್ಯಕ್ತಿಯ ಮನದಲ್ಲಿರುವ ಕೆಟ್ಟ ಆಸೆ, ಹಗೆತನ, ಕಪಟತನ ಮುಂತಾದ ಒಳಮಿಡಿತಗಳನ್ನು ಇದು ಸೂಚಿಸುತ್ತದೆ; ಮಾಣ್=ಕಳೆ/ಬಿಡು; ಮಾಣ್ಬುದೆ> ಮಾಂಬುದೆ;

ಮಾಂಬುದೆ=ಬಿಡುವುದೆ/ನಾಶವಾಗುವುದೆ/ಇಲ್ಲವಾಗುವುದೆ; **ಅಂತರಂಗದ ಮಲಿನತ್ವವು ಮಾಂಬುದೆ**=ಮನಸ್ಸಿನಲ್ಲಿರುವ ಕೊಳೆಯು ನಾಶವಾಗುತ್ತದೆಯೇ; ಹೇಳ್+ಆ; ಹೇಳ್=ನುಡಿ/ತಿಳಿಸು; ಹೇಳಾ=ಹೇಳಲು ತೊಡಗು/ವಿವರಿಸಿ ಹೇಳು.

ದೇಗುಲವಿರುವ ಇಲ್ಲವೇ ಪವಿತ್ರವಾದ ನೆಲೆಯೆಂದು ಹೆಸರು ಪಡೆದಿರುವ ಊರಿನ ಬಳಿ ಹರಿಯುತ್ತಿರುವ ತೊರೆಯಲ್ಲಿ ಮತ್ತೆ ಮತ್ತೆ ಮಿಂದೇಳುವುದರಿಂದ ವ್ಯಕ್ತಿಯ ಮಯ್ ಮೇಲೆ ಬಹಿರಂಗದಲ್ಲಿ ಮೆತ್ತಿಕೊಂಡಿರುವ ಕೊಳೆ ಹೋಗಬಹುದೇ ಹೊರತು ವ್ಯಕ್ತಿಯ ಅಂತರಂಗದ ಮನದಲ್ಲಿರುವ ಕೊಳೆಯು ಹೋಗುವುದಿಲ್ಲ.

‘ಮನದಲ್ಲಿರುವ ಕೊಳೆ’ ಎಂದರೆ ಮನದಲ್ಲಿ ತುಡಿಯುವ ದುರಾಸೆ, ಕಪಟತನ ಮತ್ತು ಹಗೆತನವೆಂಬ ಕೆಟ್ಟ ಒಳಮಿಡಿತಗಳು. ಈ ಬಗೆಯ ಕೊಳೆಯನ್ನು ತೊಳೆಯಲು ವ್ಯಕ್ತಿಯು ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಒಳ್ಳೆಯ ನಡೆನುಡಿಗಳಿಂದ ಬಾಳಬೇಕೆಂಬ ಅರಿವು ಮತ್ತು ಎಚ್ಚರವನ್ನು ಹೊಂದಿರಬೇಕು.

92. ಸದಾಚಾರವುಳ್ಳವರು ಅನಾಚಾರಕ್ಕೆ ಅನುಸರಿಸಿ ನಡೆದರೆ ನಾಯಕನರಕ. (187–314)

ಸದಾಚಾರ+ಉಳ್ಳವರು; ಸದಾಚಾರ=ಒಳ್ಳೆಯ ನಡೆನುಡಿ/ಉತ್ತಮ ವರ್ತನೆ; ಉಳ್=ಇರು/ಪಡೆ/ಹೊಂದು; ಉಳ್ಳವರು=ಇರುವವರು; ಅನಾಚಾರ=ಕೆಟ್ಟ ನಡೆನುಡಿ/ಕೆಟ್ಟ ವರ್ತನೆ; ಅನುಸರಿಸಿ=ಹೊಂದಿಕೊಂಡು/ಹಿಂಬಾಲಿಸಿ; ನಡೆದರೆ= ಬಾಳತೊಡಗಿದರೆ/ವರ್ತಿಸತೊಡಗಿದರೆ;

ನಾಯಕ=ಮುಂದಾಳು/ನೇತಾರ; ನರಕ=ನೋವು/ಸಂಕಟ/ಯಾತನೆಯ ನೆಲೆ; ಈ ಲೋಕದಲ್ಲಿ ಜನರಿಗೆ ಕೇಡನ್ನು ಬಗೆದು ಸಾವನ್ನಪ್ಪಿದ ವ್ಯಕ್ತಿಯು ಅನಂತರ ತಾನು ಮಾಡಿದ ಕೆಟ್ಟಕೆಲಸಗಳಿಗೆ ತಕ್ಕಂತೆ ನಾನಾ ಬಗೆಯ ದಂಡನೆಗಳಿಗೆ ಗುರಿಯಾಗಿ ನರಳುವ ಮತ್ತೊಂದು ಲೋಕದಲ್ಲಿರುವ ಜಾಗವೇ ನರಕ. ಜನರಿಗೆ ಕೇಡನ್ನು ಬಗೆದವರು ಸಂಕಟದ ನೆಲೆಯಾದ ನರಕಕ್ಕೆ, ಒಳಿತನ್ನು ಮಾಡಿದವರು

ಆನಂದದ ನೆಲೆಯಾದ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಜನಸಮುದಾಯದ ಮನದಲ್ಲಿದೆ.

ನಾಯಕನರಕ=ಬಹು ಬಗೆಯ ದಂಡನೆಗಳನ್ನು ನೀಡಿ ವ್ಯಕ್ತಿಯನ್ನು ಹಿಂಡಿ ಹಿಪ್ಪೆ ಮಾಡುವ ಜಾಗ. ನಾಯಕನರಕ ಎಂಬ ಪದಕಂತೆಯು " ದೊಡ್ಡ ಪ್ರಮಾಣದಲ್ಲಿ ಸಾವು ನೋವು ಕೊಲೆ ಸುಲಿಗೆ ಹಿಂಸೆಯು ಉಂಟಾಗುವುದು " ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ಕುಟುಂಬದಲ್ಲಾಗಲಿ ಇಲ್ಲವೇ ಸಮಾಜದಲ್ಲಾಗಲಿ ಒಳ್ಳೆಯ ಗುಣವುಳ್ಳ ವ್ಯಕ್ತಿಯು ಕಾಲಕ್ರಮೇಣ ಕೆಟ್ಟ ನಡೆನುಡಿಯುಳ್ಳವರ ಒಡನಾಟದಿಂದಾಗಿ ಅನಾಚಾರಿಯಾಗಿ ಬಾಳಲು ತೊಡಗಿದರೆ, ಅವನನ್ನು ನಂಬಿಕೊಂಡು ಬಾಳುತ್ತಿರುವ ಜನರ ಬದುಕು ದೊಡ್ಡ ನರಕವಾಗುತ್ತದೆ.

ಏಕೆಂದರೆ ಕೆಟ್ಟವನು ಎನಿಸಿಕೊಂಡ ವ್ಯಕ್ತಿಯು ಮಾಡುವ ಕೆಡುಕಿಗಿಂತ ಒಳ್ಳೆಯವನು ಎನಿಸಿಕೊಂಡ ವ್ಯಕ್ತಿಯು ಮಾಡುವ ಕೆಡುಕು ಜನರಿಗೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ದಿನನಿತ್ಯದ ವ್ಯವಹಾರಗಳಲ್ಲಿ ಕೆಟ್ಟ ವ್ಯಕ್ತಿಯನ್ನು ಕಂಡ ಕೂಡಲೇ ಜನರು "ಎಲ್ಲಿ, ಯಾವಾಗ, ಯಾವ ರೀತಿಯಿಂದ ಕೇಡನ್ನು ಮಾಡುತ್ತಾನೆಯೋ" ಎಂಬ ಹೆದರಿಕೆಯಿಂದ ಅವನಿಂದ ದೂರವಿರುತ್ತಾರೆ. ಆದರೆ ಒಳ್ಳೆಯವನು ಎನಿಸಿಕೊಂಡ ವ್ಯಕ್ತಿಯು "ತಮ್ಮನ್ನು ಕಾಪಾಡುತ್ತಾನೆ/ಚೆನ್ನಾಗಿ ನೋಡಿಕೊಳ್ಳುತ್ತಾನೆ" ಎಂಬ ನಂಬಿಕೆಯಿಂದ ಅವನ ಹತ್ತಿರವಿರುತ್ತಾರೆ.

ಆದ್ದರಿಂದ ಸದಾಚಾರವುಳ್ಳವನು ಅನಾಚಾರಿಯಾಗಿ ಬದಲಾದಾಗ ಜನರಿಗೆ ಮತ್ತು ಸಮಾಜಕ್ಕೆ ಉಂಟಾಗುವ ಕೇಡಿನ ಪ್ರಮಾಣ ಹೆಚ್ಚಾಗುತ್ತದೆ.

❖

12. ನಗೆಯ ಮಾರಿತಂದೆ

93. ನಡೆ ನುಡಿ ಶುದ್ಧವಿಲ್ಲದೆ
ಮಾತಿನ ಬಣಬೆಯ ನೀತಿಯೇಕೊ. (1205/1325)

ನಡೆ=ಮಾಡುವ ಕೆಲಸ/ಕಸುಬು; ನುಡಿ=ಆಡುವ ಮಾತು/ಸೊಲ್ಲು; ಶುದ್ಧ+ಇಲ್ಲದೆ; ಶುದ್ಧ=ಒಳ್ಳೆಯದು/ಸರಿಯಾದುದು; ಬಣಬೆ=ಹುಲ್ಲಿನ ರಾಶಿ/ ಒಟ್ಟಲು/ಮೆದೆ;

ಮಾತಿನ ಬಣಬೆ=ಇದೊಂದು ನುಡಿಗಟ್ಟು. ವ್ಯಕ್ತಿಯು ಕೆಲಸಕ್ಕೆ ಬಾರದ ಪೊಳ್ಳು ಮಾತುಗಳನ್ನು ಒಂದೇ ಸಮನೆ ಆಡುತ್ತಿರುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ನೀತಿ+ಏಕೊ; ನೀತಿ=ಸತ್ಯ ಮತ್ತು ನ್ಯಾಯದಿಂದ ಕೂಡಿದ ನಡೆನುಡಿ; ಏಕೋ=ಏನು ತಾನೆ ಪ್ರಯೋಜನ;

ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ಕೆಟ್ಟ ಗುಣಗಳಿಂದ ನಡೆದುಕೊಳ್ಳುತ್ತ, ಮಾತಿನಲ್ಲಿ ಮಾತ್ರ ಬಹು ದೊಡ್ಡ ನೀತಿವಂತನಂತೆ ತೋರಿಸಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ಬರಿ ಮಾತಿನಿಂದ ವ್ಯಕ್ತಿಗಾಗಲಿ ಇಲ್ಲವೇ ಸಮಾಜಕ್ಕಾಗಲಿ ಒಳಿತಾಗುವುದಿಲ್ಲ.

94. ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ
ಹೊಯಿವ ದೊಣ್ಣೆ ಕೈಯಲ್ಲಿ ಲೇಸಾಯಿತ್ತು ಈತನಿರವು.
(1254/1329)

ಸಮತೆ=ಎಲ್ಲರನ್ನೂ ಸಮಾನವಾಗಿ ಕಾಣುವುದು/ಮೇಲು ಕೀಳು ಎಂಬ ತಾರತಮ್ಯವನ್ನು ಮಾಡದಿರುವುದು; ಸಮಾಧಾನ=ತಾಳ್ಮೆ/ಸಹನೆ/ನೆಮ್ಮದಿ;

ಹೇಳುವ=ತಿಳಿಸುವ/ಮನದಟ್ಟು ಮಾಡಿಸುವ; ಪುಸ್ತಕ=ಹೊತ್ತಿಗೆ; ಎತ್ತು=ಬಸವ/ಗಂಡು ದನ;

ಹೊಯ್=ಹೊಡೆ/ಬಡಿ/ಕಡಿ/ಕುಟ್ಟು/ಜಜ್ಜು; ಹೊಯಿವ ದೊಣ್ಣೆ=ದಪ್ಪನೆಯ ಕೋಲು; ಲೇಸು+ಆಯಿತ್ತು; ಲೇಸು=ಒಳ್ಳೆಯದು/ಹಿತವಾದುದು; ಆಯಿತ್ತು=ಆಗಿರುವುದು; ಈತನ+ಇರವು; ಈತನ=ಇಂತಹ ವ್ಯಕ್ತಿಯ; ಇರವು=ಇರುವ ರೀತಿ;

"ಲೇಸಾಯಿತ್ತು ಈತನ ಇರವು" ಎಂದರೆ ವ್ಯಕ್ತಿಯು ಈ ರೀತಿಯಿದ್ದರೆ ಸಮಾಜಕ್ಕೆ ಒಳ್ಳೆಯದಾಗುವುದಿಲ್ಲ. ಇಂತಹ ನಯವಂಚಕರ ವ್ಯಕ್ತಿತ್ವವನ್ನು ಸೂಚಿಸಲು "ಬಾಯಲ್ಲಿ ಬೆಣ್ಣೆ; ಕಂಕುಳಲ್ಲಿ ದೊಣ್ಣೆ" ಎಂಬ ಗಾದೆಯನ್ನು ಜನರು ಬಳಸುತ್ತಾರೆ.

ಸಮಾಜದಲ್ಲಿನ ಜನರೆಲ್ಲರೂ ಬದುಕಿಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯವನ್ನು ಪಡೆದು ಸಮಾನತೆಯಿಂದ ಹಾಗೂ ನೆಮ್ಮದಿಯಿಂದ ಜತೆಗೂಡಿ ಬಾಳುವಂತಾಗಬೇಕೆಂಬ ಸಂದೇಶವನ್ನು ಸಾರುವ ಹೊತ್ತಿಗೆಗಳನ್ನು ಬಸವನ ಹೆಗಲ ಮೇಲೆ ಹೊತ್ತು ಮೆರೆಸುತ್ತ ಬರುವ ವ್ಯಕ್ತಿಯು, ಒಳ್ಳೆಯದೆಲ್ಲವೂ ತನ್ನ ಜಾತಿ ಮತದವರಿಗೆ ಮಾತ್ರ ದೊರಕಬೇಕು, ಇನ್ನುಳಿದವರಿಗೆ ಅದು ದಕ್ಕದಂತೆ ತಡೆಯಲು ಯಾವ ಬಗೆಯ ಹಿಂಸೆಯನ್ನಾದರೂ ಮಾಡಲು ಮನದೊಳಗೆ ಆಲೋಚಿಸುತ್ತಿರುತ್ತಾನೆ. ಇಂತಹ ನಯವಂಚಕನಿಂದ ಸಮಾಜಕ್ಕೆ ಕೇಡಾಗುತ್ತದೆಯೇ ಹೊರತು ಲೇಸಾಗುವುದಿಲ್ಲ.

13. ಬಸವಣ್ಣ

95 ಅಡಿಗಡಿಗೆ ದೇವರಾಣೆ ಅಡಿಗಡಿಗೆ ಭಕ್ತರಾಣೆ
ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ಹೊಲ್ಲ. (660–61)

ಅಡಿಗಡಿಗೆ=ಮತ್ತೆ ಮತ್ತೆ/ಪದೇ ಪದೇ/ಮೇಲಿಂದ ಮೇಲೆ; ದೇವರ್+ಆಣೆ; ದೇವರು=ಜೀವನದಲ್ಲಿ ಬರುವ ಎಡರು ತೊಡರುಗಳನ್ನು ನಿವಾರಿಸಿ, ತಮಗೆ ಒಳಿತನ್ನು ಮಾಡಿ ಕಾಪಾಡುವ ಅಗೋಚರ ವ್ಯಕ್ತಿಯನ್ನು/ಶಕ್ತಿಯನ್ನು ದೇವರು ಎಂದು ಮಾನವ ಸಮುದಾಯ ನಂಬಿದೆ;

ಆಣೆ=ವ್ಯಕ್ತಿಯು ತಾನು ಆಡುತ್ತಿರುವ ಮಾತು ನಿಜವೆಂದು ಪ್ರತಿಪಾದಿಸಲು/ನಂಬಿಸಲು ತನ್ನ ಮೆಚ್ಚಿನ ದೇವರು/ವ್ಯಕ್ತಿ/ವಸ್ತು/ತನ್ನ ಅಂಗಾಂಗವನ್ನು ಹೆಸರಿಸಿ ಹೇಳುವ ನುಡಿ;

ದೇವರಾಣೆ=ದೇವರ ಹೆಸರನ್ನು ಉಚ್ಚರಿಸುತ್ತ ಇಕ್ಕುವ ಆಣೆ; ಭಕ್ತರ್+ಆಣೆ; ಭಕ್ತ=ಒಳ್ಳೆಯ ನಡೆನುಡಿಗಳಿಂದ ದೇವರನ್ನು ಒಲಿದವನು/ಒಳ್ಳೆಯ ನಡೆನುಡಿಗಳೇ ದೇವರೆಂದು ನಂಬಿದವನು; ಭಕ್ತರಾಣೆ=ದೇವರಲ್ಲಿ ಒಲವುಳ್ಳ ವ್ಯಕ್ತಿಗಳ ಹೆಸರಿನ ಮೇಲೆ ಇಕ್ಕುವ ಆಣೆ; ಗುರು+ಇನ್+ಆಣೆ; ಗುರು=ವ್ಯಕ್ತಿಗೆ/ಗುಡ್ಡನಿಗೆ ಅರಿವನ್ನು/ತಿಳುವಳಿಕೆಯನ್ನು ನೀಡಿ, ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ ವ್ಯಕ್ತಿ;

ಗುರುವಿನಾಣೆ=ಗುರುವಿನ ಹೆಸರಿನ ಮೇಲೆ ಇಡುವ ಆಣೆ; ಎಂಬ=ಎನ್ನುವ/ಹೇಳುವ; ವಚನ=ಮಾತು/ನುಡಿ; ಹೊಲ್ಲ=ಕೆಟ್ಟದ್ದು/ಹೀನವಾದುದು/ಒಳ್ಳೆಯದಲ್ಲ;

ವಚನವೆ ಹೊಲ್ಲ=ಆಣೆಯಿಂದ ಕೂಡಿದ ಮಾತು ಒಳ್ಳೆಯದಲ್ಲ. ಆಣೆಯಿಡುತ್ತ ಆಡುವ ಮಾತುಗಳನ್ನು ಎಂದಿಗೂ ನಂಬಬಾರದು. ಏಕೆಂದರೆ ಆಣೆಯಿಂದ

ಕೂಡಿದ ಮಾತಿನ ಹಿನ್ನೆಲೆಯಲ್ಲಿ ಕಪಟತನ/ವಂಚಕತನ/ಮೋಸಗಾರಿಕೆಯ ಹುನ್ನಾರವಿರುತ್ತದೆ;

ವ್ಯಕ್ತಿಯು ಇತರರೊಡನೆ ಮಾತನಾಡುವಾಗ ತಾನು ದಿಟದ/ಸತ್ಯದ/ವಾಸ್ತವದ ಸಂಗತಿಯನ್ನು ಹೇಳಿದರೆ, ಅದಕ್ಕೆ ಯಾವುದೇ ಬಗೆಯ ಆಣೆಯನ್ನು ಇಡಬೇಕಾದ ಅಗತ್ಯವಿಲ್ಲ.

ಯಾವ ವ್ಯಕ್ತಿಯು ತಾನಾಡುವ ಮಾತುಗಳಿಗೆ ಪೂರಕವಾಗಿ ಮತ್ತೆ ಮತ್ತೆ ಆಣೆಯನ್ನು ಇಡುವುದರ ಮೂಲಕವೇ ಜನರ ನಂಬಿಕೆಗೆ ಪಾತ್ರನಾಗಲು ಪ್ರಯತ್ನಿಸುತ್ತಾನೆಯೋ, ಅಂತಹ ವ್ಯಕ್ತಿಯು ತನ್ನ ವ್ಯಕ್ತಿತ್ವದಲ್ಲಿ ತನಗೆ ನಂಬಿಕೆಯಿಲ್ಲದ/ತನ್ನ ವ್ಯಕ್ತಿತ್ವವನ್ನು ತಾನೇ ಕುಗ್ಗಿಸಿಕೊಂಡ/ಇತರರನ್ನು ನಂಬಿಸಿ ಮೋಸಮಾಡುವ ನಯವಂಚಕನಾಗಿರುತ್ತಾನೆ.

ಆದರೆ ಬಡತನ ಮತ್ತು ಜಾತಿ ಮೆಟ್ಟಿಲಿನಲ್ಲಿ ಕೆಳಹಂತದಲ್ಲಿರುವ ವ್ಯಕ್ತಿಯು ಉಳ್ಳವರ ಮುಂದೆ ತನ್ನ ಪ್ರಾಮಾಣಿಕತನದ ನಡೆನುಡಿಗಳನ್ನು ಸಾಬೀತು ಪಡಿಸಲು ಬೇರೆ ದಾರಿಯಿಲ್ಲದೆ ಆಣೆಯಿಡುವುದು ಕೆಲವೊಮ್ಮೆ ಕಂಡುಬರುತ್ತದೆ.

96. ಅಯ್ಯಾ ಎಂದಡೆ ಸ್ವರ್ಗ
ಎಲವೊ ಎಂದಡೆ ನರಕ. (240–28)

ಅಯ್ಯಾ=ಮತ್ತೊಬ್ಬ ವ್ಯಕ್ತಿಯನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ಎಂದಡೆ=ಎಂದು ಮಾತನಾಡಿದರೆ; ಎಲವೊ=ಮತ್ತೊಬ್ಬ ವ್ಯಕ್ತಿಯನ್ನು ತನಗಿಂತ ಕೀಳೆಂದು ಪರಿಗಣಿಸಿ, ತಿರಸ್ಕಾರದಿಂದ ಕಾಣುತ್ತ ಅಹಂಕಾರದಿಂದ ಮೆರೆಯುತ್ತ ಮಾತನಾಡುವಾಗ ಬಳಸುವ ಪದ;

ಸ್ವರ್ಗ ಮತ್ತು ನರಕ=ಮಾನವನ ಕಲ್ಪನೆಯಲ್ಲಿ ರೂಪುಗೊಂಡಿರುವ ಎರಡು ನೆಲೆಗಳು. ಸ್ವರ್ಗವು ಚೆಲುವು ಒಲವು ನಲಿವನ್ನುಂಟುಮಾಡುವ ಜಾಗ ಮತ್ತು ನರಕವು ಸಂಕಟ ವೇದನೆ ನೋವನ್ನುಂಟುಮಾಡುವ ತಾಣ ಎಂಬ ಕಲ್ಪನೆಯು ಜನಮನದಲ್ಲಿದೆ.

‘ಅಯ್ಯಾ ಎಂದಡೆ ಸ್ವರ್ಗ’ ಎಂಬ ನುಡಿಗಳು ವ್ಯಕ್ತಿಯು ಕುಟುಂಬದ ನೆಲೆ/ದುಡಿಮೆಯ ನೆಲೆ/ಸಾರ್ವಜನಿಕ ನೆಲೆಯಲ್ಲಿ ಇತರ ವ್ಯಕ್ತಿಗಳೊಡನೆ ವ್ಯವಹರಿಸುವಾಗ, ಅವರನ್ನು ಪ್ರೀತಿ/ಕರುಣೆ/ನಲಿವಿನಿಂದ “ಅಯ್ಯಾ” ಎಂದು

ಮಾತನಾಡಿಸಿದರೆ, ಆಗ ಅವರು ಕೂಡ ಅದೇ ಬಗೆಯಲ್ಲಿ ಪ್ರೀತಿಯಿಂದ ಮಾತನಾಡತೊಡಗುತ್ತಾರೆ. ಒಬ್ಬರು ಮತ್ತೊಬ್ಬರ ಬಗ್ಗೆ ಹೊಂದಿರುವ ಒಳಿತಿನ ಒಳಮಿಡಿತಗಳಿಂದಾಗಿ ಇಂತಹ ಸನ್ನಿವೇಶದಲ್ಲಿ ನಡೆಯುವ ಮಾತುಕತೆಯು ವ್ಯಕ್ತಿಗಳ ಪಾಲಿಗೆ ಆನಂದ/ನೆಮ್ಮದಿ/ಒಳಿತನ್ನು ನೀಡುತ್ತದೆ; ಒಳ್ಳೆಯ ಮಾತಿನಿಂದ ಉಂಟಾಗುವ ಒಳ್ಳೆಯ ಪರಿಣಾಮಕ್ಕೆ ಒಂದು ರೂಪಕವಾಗಿ ಸ್ವರ್ಗ ಎಂಬ ಪದವನ್ನು ಬಳಸಲಾಗಿದೆ.

'ಎಲವೊ ಎಂದಡೆ ನರಕ' ಎಂಬ ನುಡಿಗಳು ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯೊಡನೆ ವ್ಯವಹರಿಸುವಾಗ, ಜಾತಿ/ಮತ/ಗದ್ದುಗೆ/ಸಂಪತ್ತಿನ ಅಹಂಕಾರದಿಂದ ಅವನ ವ್ಯಕ್ತಿತ್ವವನ್ನೇ ಕಡೆಗಣಿಸಿ/ಅವನನ್ನು ತನಗಿಂತಲೂ ಕೀಳೆಂದು ಪರಿಗಣಿಸಿ, 'ಎಲವೊ' ಎಂದು ಮಾತನಾಡಿಸಿದರೆ, ಅಂತಹ ಮಾತನ್ನು ಕೇಳಿದ ವ್ಯಕ್ತಿಯು ಮನದಲ್ಲಿ ನೊಂದುಕೊಳ್ಳುತ್ತಾನೆ. ಕೆಲವೊಮ್ಮೆ ಆ ವ್ಯಕ್ತಿಯು ಕೋಪಗೊಂಡು ಇಲ್ಲವೇ ಅಪಮಾನವನ್ನು ತಡೆಯಲಾರದೆ, ತನ್ನನ್ನು ಕಡೆಗಣಿಸಿ ಮಾತನಾಡಿದವನಿಗೆ ಹಿಂತಿರುಗಿಕೊಂಡು ನಿಂದಿಸಿ ಮಾತನಾಡತೊಡಗಿದರೆ, ಆಗ ಅವರಿಬ್ಬರ ನಡುವೆ ಮಾತಿಗೆ ಮಾತು ಬೆಳೆದು ಬಯ್ಗುಳ/ಹೊಡೆದಾಟಕ್ಕೆ ತಿರುಗಿ, ಆ ಸನ್ನಿವೇಶವು ವ್ಯಕ್ತಿಗಳ ಪಾಲಿಗೆ ಸಾವು/ನೋವು/ಒತ್ತಡ/ಅಪಮಾನವನ್ನು ಉಂಟುಮಾಡುತ್ತದೆ. ಕೆಟ್ಟ ಮಾತಿನಿಂದ ಉಂಟಾಗುವ ಪರಿಣಾಮವನ್ನು ಸೂಚಿಸಲು 'ನರಕ' ಎಂಬ ಪದವನ್ನು ಒಂದು ರೂಪಕವಾಗಿ ಬಳಸಲಾಗಿದೆ.

ಸಾಮಾಜಿಕ ವ್ಯವಹಾರದಲ್ಲಿ ವ್ಯಕ್ತಿಯು ಮಾತನಾಡುವಾಗ ಇತರರ ಬಗ್ಗೆ ಹೊಂದಿರಬೇಕಾದ ಒಳ್ಳೆಯ ನಿಲುವನ್ನು ಮತ್ತು ಬಳಸುವ ಪದಗಳ ಬಗ್ಗೆ ತಳೆಯಬೇಕಾದ ಎಚ್ಚರವನ್ನು ಈ ನುಡಿಗಳು ಸೂಚಿಸುತ್ತವೆ.

97. ಅರತವಡಗದು ಕ್ರೋಧ ತೊಲಗದು
ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ
ನೀನೆತ್ತಲು ಶಿವನೆತ್ತಲು ಹೋಗತ್ತ ಮರುಳೆ. (131–21)

ಅರತ+ಅಡಗದು; ಅರತ=ಸೊಕ್ಕು/ಗರ್ವ; ಅಡಗು=ಕೊನೆಗೊಳ್ಳು/ಮುಗಿ/ಹಿಂದಕ್ಕೆ ಸರಿ; **ಅರತವಡಗದು**=ಸೊಕ್ಕಿನ ನಡೆನುಡಿಯು ಬಿಟ್ಟುಹೋಗುವುದಿಲ್ಲ; ಕ್ರೋಧ=ಕೋಪ/ಆಕ್ರೋಶ; ತೊಲಗು=ನಾಶವಾಗು/ಇಲ್ಲವಾಗು; **ಕ್ರೋಧ ತೊಲಗದು**=ಕೋಪತಾಪದ ನಡೆನುಡಿಯು ಇಲ್ಲವಾಗುವುದಿಲ್ಲ;

ಕ್ರೂರ=ಕರುಣೆಯಿಲ್ಲದ; ಕುಭಾಷೆ=ಕೆಟ್ಟ ನುಡಿ/ಬಯ್ಗುಳ/ಇತರರ ಮನವನ್ನು ಗಾಸಿಗೊಳಿಸುವಂತಹ ಮಾತು; ಕುಹಕ=ಮೋಸ/ಅಣಕ/ನಡೆನುಡಿ; ಬಿಡದ+ಅನ್ನಕ್ಕ; ಬಿಡು=ತೊರೆ/ತ್ಯಜಿಸು; ಅನ್ನಕ್ಕ=ವರೆಗೆ/ತನಕ; ಬಿಡದನ್ನಕ್ಕ= ಬಿಡುವವರೆಗೆ/ಬಿಡುವ ತನಕ; ನೀನ್+ಎತ್ತಲು; ಎತ್ತಲು=ಯಾವ ಕಡೆ/ಯಾವ ದಿಕ್ಕು; ಶಿವನ್+ಎತ್ತಲು; ಶಿವ=ಈಶ್ವರ/ಲಿಂಗ; ಹೋಗು+ಅತ್ತ; ಹೋಗು=ತೆರಳು/ ಗಮಿಸು; ಅತ್ತ=ಆ ಕಡೆ/ಆ ದಿಕ್ಕು; ಮರುಳ=ತಿಳಿಗೇಡಿ/ದಡ್ಡ/ಹುಚ್ಚ;

ಶಿವಶರಣಶರಣೆಯರ ಪಾಲಿಗೆ 'ಶಿವ' ಎಂದರೆ ಮಣ್ಣು/ಮರ/ಕಲ್ಲು/ ಲೋಹದಿಂದ ಮಾಡಿದ ವಿಗ್ರಹರೂಪಿ ಲಿಂಗವಲ್ಲ. ವ್ಯಕ್ತಿಯು ಒಳ್ಳೆಯ ನಡೆನುಡಿ ಗಳಿಂದ ಬಾಳುವುದರ ಮೂಲಕ ಶಿವನನ್ನು ಒಲಿಸಿಕೊಳ್ಳಬೇಕೆಂಬ/ಪೂಜಿಸ ಬೇಕೆಂಬ ನಿಲುವನ್ನು ಹೊಂದಿದ್ದರು. ಸೊಕ್ಕಿನ ನಡೆನುಡಿ/ಕೋಪ/ಕ್ರೂರತನ/ಕೆಟ್ಟ ನುಡಿ/ಕಪಟತನವನ್ನು ಬಿಡದಿದ್ದರೆ, ಅಂತಹ ವ್ಯಕ್ತಿಯು ಶಿವನನ್ನು ಪೂಜಿಸಲು/ ಒಲಿಸಿಕೊಳ್ಳಲು ಯೋಗ್ಯನಲ್ಲವೆಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.

98. ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ. (408–40)

ಆತ್ಮಸ್ತುತಿ=ವ್ಯಕ್ತಿಯು ತನ್ನ ನಡೆನುಡಿಗಳನ್ನು ತಾನೇ ದೊಡ್ಡದಾಗಿ ಇತರರ ಮುಂದೆ ಹೊಗಳಿಕೊಳ್ಳುವುದು; ಸ್ತುತಿ=ಹೊಗಳಿಕೆ/ಕೊಂಡಾಟ/ಗುಣಗಾನ; ಪರ=ಬೇರೆಯ/ಅನ್ಯ/ಇತರ; ನಿಂದೆ=ತೆಗಳಿಕೆ/ಬಯ್ಯುವಿಕೆ/ಕಡೆಗಣಿಸಿ ಮಾತನಾಡುವುದು;

ಪರನಿಂದೆ=ಇತರರ ನಡೆನುಡಿಯನ್ನು ಕುರಿತು ಅಣಕಿಸುತ್ತ/ಟೀಕಿಸುತ್ತ/ ಹಂಗಿಸುತ್ತ/ಕಡೆಗಣಿಸುತ್ತ ಮಾತನಾಡುವುದು; ಕೇಳಿಸದಿರು+ಅಯ್ಯಾ; ಕೇಳು=ಆಲಿಸು/ಕಿವಿಗೊಡು; ಕೇಳಿಸು=ಕೇಳುವಂತೆ ಮಾಡು/ಕಿವಿಗೆ ಬೀಳು/ಕೇಳಿ ಬರುವುದು; ಕೇಳಿಸದಿರು=ಕೇಳದಂತೆ ಮಾಡು/ಕಿವಿಗೆ ಬೀಳದಂತೆ ಮಾಡು;

ಯಾವಾಗಲೂ ತನ್ನನ್ನು ತಾನೇ ಹೊಗಳಿಕೊಳ್ಳುತ್ತಿರುವ ಮತ್ತು ಇತರರನ್ನು ತೆಗಳುತ್ತಿರುವ ವ್ಯಕ್ತಿಗಳೊಡನೆ ಯಾವುದೇ ಬಗೆಯ ಒಡನಾಟವನ್ನು ಇಟ್ಟುಕೊಳ್ಳ ಬಾರದು. ಏಕೆಂದರೆ ಇಂತಹ ವ್ಯಕ್ತಿಗಳು ಇತರರ ಒಳ್ಳೆಯ ನಡೆನುಡಿಗಳನ್ನು ಕಂಡು ಮೆಚ್ಚುವುದಿಲ್ಲ. ತನ್ನೊಬ್ಬನನ್ನು ಹೊರತುಪಡಿಸಿಕೊಂಡು ಉಳಿದೆಲ್ಲರನ್ನೂ ಮತ್ತು ಎಲ್ಲವನ್ನೂ ಕಂಡು ಕರುಬುತ್ತಿರುತ್ತಾರೆ ಇಲ್ಲವೇ ಹೊಟ್ಟೆಕಿಚ್ಚಿನಿಂದ ನರಳುತ್ತಿರುತ್ತಾರೆ.

99. ಆನೆಯನೇರಿಕೊಂಡು ಹೋದಿರೇ ನೀವು
ಕುದುರೆಯನೇರಿಕೊಂಡು ಹೋದಿರೇ ನೀವು
ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೇ ಅಣ್ಣಾ
ಸತ್ಯದ ನಿಲವನರಿಯದೆ ಹೋದಿರಲ್ಲಾ
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ. (638–59)

ಆನೆ+ಅನ್+ಏರಿಕೊಂಡು; ಆನೆ=ಗಜ/ಕರಿ; ಅನ್=ಅನ್ನು; ಏರು=ಹತ್ತು/ಮೇಲೆ ಹೋಗುವುದು; ಹೋಗು=ತೆರಳು/ಗಮಿಸು; ಹೋದಿರೇ=ಹೋದಿರಲ್ಲವೇ;

ಕುದುರೆ+ಅನ್+ಏರಿಕೊಂಡು; ಕುದುರೆ=ಅಶ್ವ/ತುರಗ/ಹಯ; ಕುಂಕುಮ=ಒಂದು ಬಗೆಯ ಮಂಗಳ ದ್ರವ್ಯ/ಹಣೆಗೆ ಹಚ್ಚಿಕೊಳ್ಳುವ ವಸ್ತು; ಕಸ್ತೂರಿ=ಕಸ್ತೂರಿ ಎಂಬ ಹೆಸರಿನ ಪ್ರಾಣಿಯ ಹೊಕ್ಕುಳಿನಲ್ಲಿ ದೊರೆಯುವ ಸುವಾಸನೆಯುಳ್ಳ ವಸ್ತು; ಹೂಸು=ಬಳಿದುಕೊಳ್ಳುವುದು/ಲೇಪಿಸಿಕೊಳ್ಳುವುದು;

ಆನೆಯನೇರಿಕೊಂಡು/ಕುದುರೆಯನೇರಿಕೊಂಡು/ಕುಂಕುಮ ಕಸ್ತೂರಿಯ ಹೂಸಿಕೊಂಡು=ಈ ನುಡಿಗಳು ರೂಪಕಗಳಾಗಿ ಬಳಕೆಗೊಂಡಿವೆ.

ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಸಾಗುವ ಇಲ್ಲವೇ ಕುದುರೆಯ ಮೇಲೆ ಕುಳಿತು ಸವಾರಿ ಮಾಡುವವರು ಅಂದರೆ ರಾಜಮಹಾರಾಜರು/ಸಾಮಂತರು/ಪಾಳೆಯಗಾರರು/ಮಾಂಡಲಿಕರು/ಸಮಾಜದಲ್ಲಿ ಉನ್ನತವಾದ ಗದ್ದುಗೆಯಲ್ಲಿರುವ ವ್ಯಕ್ತಿಗಳು;

ಕುಂಕುಮ ಕಸ್ತೂರಿಯನ್ನು ಲೇಪಿಸಿಕೊಂಡಿರುವ ವ್ಯಕ್ತಿಗಳು ಅಂದರೆ ಜನ ಸಮುದಾಯಕ್ಕೆ ಸತ್ಯ/ನೀತಿ/ನ್ಯಾಯದ ನಡೆನುಡಿಗಳನ್ನು ತಿಳಿಯಹೇಳುವುದನ್ನೇ ತಮ್ಮ ಕಸುಬನ್ನಾಗಿ ಮಾಡಿಕೊಂಡಿರುವ ಗುರುಹಿರಿಯರು/ಜಾತಿ ಜಗದ್ಗುರುಗಳು/ದೇವ ಮಾನವರು;

ಅಣ್ಣ=ಒಡಹುಟ್ಟಿದವರಲ್ಲಿ ಹಿರಿಯನಾದವನು/ಗಂಡಸರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ; ಸತ್ಯ=ದಿಟ/ವಾಸ್ತವ/ನಿಜ; ನಿಲವು+ಅನ್+ಅರಿಯದೆ; ನಿಲವು=ಇರುವಿಕೆ/ರೀತಿ/ಬಗೆ; ಅರಿ=ತಿಳಿ/ಗ್ರಹಿಸು; ಹೋದಿರಿ+ಅಲ್ಲಾ; ಅಲ್ಲಾ=ಅಲ್ಲವೇ;

ಸತ್ಯದ ನಿಲವನರಿಯದೆ ಹೋದಿರಲ್ಲಾ=ಮಾನವ ಸಮುದಾಯದ ಬದುಕಿನಲ್ಲಿ ಯಾವುದು ದಿಟ–ಯಾವುದು ಸಟೆ / ಯಾವುದು ವಾಸ್ತವ–ಯಾವುದು ಕಲ್ಪಿತ /

ಯಾವುದು ಸರಿ–ಯಾವುದು ತಪ್ಪು ಎಂಬುದನ್ನು ತಿಳಿಯಲಿಲ್ಲ;

ಸದ್ಗುಣ+ಎಂಬ; ಸದ್ಗುಣ=ಒಳ್ಳೆಯ ನಡೆನುಡಿ/ ಉತ್ತಮ ಗುಣ; ಎಂಬ= ಎನ್ನುವ; ಫಲ=ಬೆಳೆ; ಬಿತ್ತು=ಬೀಜಹಾಕು/ಹರಡು; ಬೆಳೆ=ಉತ್ಪತ್ತಿ ಮಾಡು;

ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ=ಒಳ್ಳೆಯ ನಡೆನುಡಿ ಗಳಿಂದ ಬಾಳುವುದು ಎಲ್ಲಕ್ಕಿಂತ ದೊಡ್ಡದು ಎಂಬ ಅರಿವನ್ನು ಹಾಗೂ ಸಹಮಾನವರ ಮತ್ತು ಸಮಾಜದ ಒಳಿತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಒಳಿತನ್ನು ಕಾಣಬೇಕೆಂಬ ಎಚ್ಚರವನ್ನು ಜನಮನದಲ್ಲಿ ಮೂಡಿಸಲಿಲ್ಲ;

ಸಮಾಜದಲ್ಲಿ ಎತ್ತರದ ಗದ್ದುಗೆಯಲ್ಲಿ ಕುಳಿತು ಆಡಳಿತವನ್ನು ನಡೆಸುವವರು ಮತ್ತು ಜನರಿಗೆ ತಿಳಿಯ ಹೇಳುವ ಗುರುಹಿರಿಯರು ಮೊದಲು ತಾವು ಒಳ್ಳೆಯ ನಡೆನುಡಿಗಳಿಂದ ಬಾಳುತ್ತ, ಜನಮನದಲ್ಲಿ ಒಳ್ಳೆಯತನದ ಅರಿವು ಮತ್ತು ಎಚ್ಚರವನ್ನು ಮೂಡಿಸದಿದ್ದರೆ, ಅಂತಹ ಆಡಳಿತದಿಂದ ಮತ್ತು ಹಿರಿತನದಿಂದ ಏನೊಂದು ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಈ ನುಡಿಗಳು ಸೂಚಿಸುತ್ತಿವೆ.

100. ಇದಿರ ಗುಣವ ಬಲ್ಲೆವೆಂಬರು
ತಮ್ಮ ಗುಣವನರಿಯರು. (123–20)

ಇದಿರ=ಇತರರ/ಬೇರೆಯವರ; ಗುಣ=ನಡತೆ/ನಡೆನುಡಿ; ಬಲ್ಲೆವು+ಎಂಬರು; ಬಲ್=ತಿಳಿ/ಅರಿ; ಬಲ್ಲೆವು=ತಿಳಿದಿದ್ದೇವೆ/ಅರಿತಿದ್ದೇವೆ; ಎಂಬರು=ಎನ್ನುವರು/ ಎಂದು ಹೇಳುವರು;

ಇದಿರ ಗುಣವ ಬಲ್ಲೆವೆಂಬರು=ಅನ್ಯರ ವರ್ತನೆಯಲ್ಲಿ ಕಂಡುಬರುವ ಒಳಿತು ಕೆಡುಕಿನ ಗುಣಗಳನ್ನು ಒರೆಹಚ್ಚಿ ನೋಡಬಲ್ಲ ಕಸುವು ನಮ್ಮಲ್ಲಿದೆ ಎನ್ನುವರು;

ಗುಣ+ಅನ್+ಅರಿಯರು; ಅನ್=ಅನ್ನು; ಅರಿ=ತಿಳಿ/ಗ್ರಹಿಸು; ಅರಿಯರು= ತಿಳಿಯರು/ತಿಳಿದುಕೊಂಡಿಲ್ಲ;

ತಮ್ಮ ಗುಣವನರಿಯರು=ತಮ್ಮ ನಡೆನುಡಿಯಲ್ಲಿನ ಒಳಿತು ಕೆಡುಕನ್ನು/ ಇತಿಮಿತಿಗಳನ್ನು/ಕುಂದುಕೊರತೆಗಳನ್ನು ಅರಿತುಕೊಂಡಿಲ್ಲ;

ವ್ಯಕ್ತಿಯು ಇತರರ ಗುಣಾವಗುಣಗಳನ್ನು ಒರೆಹಚ್ಚಿ ನೋಡಿ ಬೆಲೆಕಟ್ಟುವುದರ ಬದಲು, ತನ್ನ ನಡೆನುಡಿಯು ಹೇಗಿದೆಯೆಂಬುದನ್ನು ಅರಿತುಕೊಂಡು, ತನ್ನಲ್ಲಿರುವ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ಒಳ್ಳೆಯತನದಿಂದ ಬಾಳುವುದನ್ನು ಕಲಿಯಬೇಕು.

101. ಇಲಿಗಂಜಿ ಮನೆ ಸುಡುವರುಂಟೆ. (1208–111)

ಇಲಿಗೆ+ಅಂಜಿ; ಇಲಿ=ಜನವಸತಿಯಿರುವ ಮನೆಗಳಲ್ಲಿ ಮತ್ತು ಹೊಲಗದ್ದೆ ತೋಟಗಳ ಬಿಲದಲ್ಲಿ ನೆಲೆಸಿರುವ ಪ್ರಾಣಿ; ಅಂಜು=ಹೆದರು;

ಇಲಿಗೆ ಅಂಜಿ= ಇಲಿಯಿಂದ ಮನೆಯಲ್ಲಿರುವ ಉಣಿಸು ತಿನಸು/ಬಟ್ಟೆಬರೆ/ ವಸ್ತುಗಳು ಹಾಳಾಗುತ್ತವೆ ಎಂದು ಹೆದರಿಕೊಂಡು; ಮನೆ=ವಾಸದ ನೆಲೆ/ಬೀಡು/ ನಿವಾಸ; ಸುಡುವರ್+ ಉಂಟೆ; ಸುಡು=ಬೆಂಕಿಯಲ್ಲಿ ಬೇಯಿಸುವುದು/ಉರಿಯಲ್ಲಿ ಬೇಯುವಂತೆ ಮಾಡುವುದು; ಉಂಟೆ=ಇದ್ದಾರೆಯೆ/ಇರುವರೆ;

ವ್ಯಕ್ತಿಯ ಜೀವನದ ಆಗುಹೋಗುಗಳಲ್ಲಿ ಎಡರು ತೊಡರು ಉಂಟಾದಾಗ, ಅವಕ್ಕೆ ಹೆದರಿ ಹತಾಶೆಯಿಂದ ಬದುಕನ್ನು ಹಾಳುಮಾಡಿಕೊಳ್ಳಬಾರದು. ಗಟ್ಟಿ ಮನಸ್ಸಿನಿಂದ ಮತ್ತು ಕೆಚ್ಚೆದೆಯಿಂದ ಸಮಸ್ಯೆಗಳನ್ನು ಎದುರಿಸಿ, ತೊಡಕುಗಳನ್ನು ಪರಿಹರಿಸಿಕೊಂಡು ಬಾಳುವುದನ್ನು ಕಲಿಯಬೇಕು ಎಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ.

102. ಎನ್ನ ಕಾಯಕ್ಕೆ ಕಾಹ ಹೇಳುವರಲ್ಲದೆ ಮನಕ್ಕೆ ಕಾಹ ಹೇಳುವರಿಲ್ಲವಯ್ಯಾ. (1080–97)

ಎನ್ನ=ನನ್ನ; ಕಾಯ=ದೇಹ/ಮಯ್; ಕಾಪು>ಕಾಹು; ಕಾಹು=ಕಾಯುವಿಕೆ/ ಪಹರೆ/ಎಚ್ಚರದಿಂದ ಕಾಪಾಡಿಕೊಳ್ಳುವುದು; **ಕಾಯಕ್ಕೆ ಕಾಹು**=ದೇಹಕ್ಕೆ ಯಾವುದೇ ಹಾನಿ ತಟ್ಟದಂತೆ ಎಚ್ಚರಿಕೆಯಿಂದಿರುವುದು; ಹೇಳುವರ್+ಅಲ್ಲದೆ; ಹೇಳು=ತಿಳಿಸು/ ನುಡಿ;

ಎನ್ನ ಕಾಯಕ್ಕೆ ಕಾಹ ಹೇಳುವರು=ಯಾವುದೇ ಬಗೆಯ ಕಾಯಿಲೆ ಕಸಾಲೆಗಳಿಗೆ ಇಲ್ಲವೇ ಅವಗಡಗಳಿಗೆ ಸಿಲುಕಿ ಹಾಳಾಗದಂತೆ ನನ್ನ ದೇಹವನ್ನು ಚೆನ್ನಾಗಿ ನೋಡಿ ಕೊಳ್ಳುವುದು ಎಂಬ ಮಾತುಗಳನ್ನು ನನ್ನವರೆಲ್ಲರೂ ಜೀವನದಲ್ಲಿ ನನಗೆ ಪದೇ ಪದೇ ಹೇಳುತ್ತಿರುತ್ತಾರೆ; ಅಲ್ಲದೆ=ಹಾಗೆ ಹೇಳುವುದನ್ನು ಬಿಟ್ಟು/ಅದನ್ನು ಹೊರತು ಪಡಿಸಿ;

ಮನ=ಮನಸ್ಸು/ಚಿತ್ತ; **ಮನಕ್ಕೆ ಕಾಹು**=ಮನದಲ್ಲಿ ಮೂಡುವ ಒಳ್ಳೆಯ ಮತ್ತು ಕೆಟ್ಟ ಒಳಮಿಡಿತಗಳಲ್ಲಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳಬೇಕೆಂಬ ಅರಿವು ಮತ್ತು ಎಚ್ಚರವನ್ನು ಹೊಂದಿರುವುದು; ಹೇಳುವರ್+ ಇಲ್ಲ+ಅಯ್ಯಾ;

ಮನಕ್ಕೆ ಕಾಹ ಹೇಳುವರಿಲ್ಲವಯ್ಯಾ=ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಬಾಳು/ಒಳ್ಳೆಯ ನಡೆನುಡಿಗಳನ್ನು ರೂಪಿಸಿಕೊಳ್ಳುವ ಅರಿವನ್ನು ಪಡೆದು ಎಚ್ಚರದಿಂದ ಬಾಳು/ಸಹಮಾನವರಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟು ಮಾಡುವಂತಹ ಕೆಟ್ಟ ನಡೆನುಡಿಗಳನ್ನು ಹೊಂದಿರಬೇಡ ಎಂದು ಹೇಳುವವರು ಇಲ್ಲ;

103 ಎನ್ನವರೆನಗೊಲಿದು ಹೊನ್ನಶೂಲವನಿಕ್ಕಿದರಯ್ಯಾ
ಅಹಂಕಾರಪೂರಾಯ ಗಾಯದಲ್ಲಿ ಆನೆಂತು ಬದುಕುವೆನೆಂತು
ಜೀವಿಸುವೆ (388–39)

(ಎನ್ನ್+ಅವರ್+ಎನಗೆ+ಒಲಿದು; ಎನ್ನ್=ನಾನು; ಎನ್ನ=ನನ್ನ; ಎನ್ನವರ್= ನನ್ನೊಡನೆ ನಂಟನ್ನು ಹೊಂದಿರುವ ವ್ಯಕ್ತಿಗಳು/ನನ್ನ ಒಡನಾಡಿಗಳು/ನನ್ನ ನೆರೆಹೊರೆಯವರು; ಎನಗೆ=ನನಗೆ; ಒಲಿ=ಮೆಚ್ಚು/ಪ್ರೀತಿಸು/ಒಪ್ಪು; ಒಲಿದು= ಮೆಚ್ಚಿಕೊಂಡು;

ಎನ್ನವರೆನಗೊಲಿದು=ನನ್ನೊಡನೆ ನಂಟನ್ನು ಹೊಂದಿರುವ ವ್ಯಕ್ತಿಗಳು ನನ್ನನ್ನು ಬಹಳವಾಗಿ ಮೆಚ್ಚಿಕೊಂಡು/ಒಪ್ಪಿಕೊಂಡು/ಪ್ರೀತಿಸುತ್ತ;

ಹೊನ್ನಶೂಲ+ಅನ್+ಇಕ್ಕಿದರ್+ಅಯ್ಯಾ: ಹೊನ್ನು=ಚಿನ್ನ; ಶೂಲ=ಮರಣ ದಂಡನೆಗೆ ಗುರಿಯಾದವರ ಕೊರಳಿಗೆ ಹಾಕುವ ಉರುಳಿನಿಂದ ಕೂಡಿದ ನೇಣುಗಂಬ. ಈ ನೇಣುಗಂಬವನ್ನು ಮರ ಇಲ್ಲವೇ ಕಬ್ಬಿಣದ ಕಂಬ ಮತ್ತು ತೊಲೆಗಳಿಂದ ಮಾಡಿರುತ್ತಾರೆ; **ಹೊನ್ನಶೂಲ**=ಚಿನ್ನದ ಹೊರಕವಚದಿಂದ ಕೂಡಿದ ಕಂಬ ಮತ್ತು ತೊಲೆಗಳಿಂದ ಮಾಡಿರುವ ಶೂಲ; ಅನ್=ಅನ್ನು; ಇಕ್ಕು=ಹಾಕು/ಇಡು; ಇಕ್ಕಿದರ್=ಹಾಕಿದರು/ಏರಿಸಿದರು;

ಅಹಂಕಾರ+ಪೂರಾಯ; ಅಹಂಕಾರ=ನಾನೇ ದೊಡ್ಡವನು/ತಿಳಿದವನು ಎಂಬ ಸೊಕ್ಕಿನ ನಡೆನುಡಿ; ಪೂರಾಯ=ಹೆಚ್ಚಾದ/ಅತಿಯಾದ; ಗಾಯ=ದೇಹಕ್ಕೆ/ ಹೊಡೆತ ಬಿದ್ದಾಗ, ಆ ಜಾಗದಲ್ಲಿ ನೆತ್ತರು/ ಹೊರಬರುವುದು ಇಲ್ಲವೇ ಊದಿಕೊಳ್ಳುವುದು;

ಅಹಂಕಾರಪೂರಾಯ ಗಾಯದಲ್ಲಿ=ಈ ನುಡಿಯು ಒಂದು ರೂಪಕವಾಗಿ ಬಳಕೆಯಾಗಿದೆ. ಹೊಗಳಿಕೆಗೆ ಮರುಳಾದ ವ್ಯಕ್ತಿಯ ಮನದಲ್ಲಿ ನಾನೇ ದೊಡ್ಡವನು /ನನ್ನಿಂದಲೇ ಎಲ್ಲವೂ ನಡೆಯುತ್ತಿದೆ ಎಂಬ ಒಳಮಿಡಿತವು ಆವರಿಸಿಕೊಳ್ಳು

ತ್ತಿದ್ದಂತೆಯೇ, ಆತನ ನಡೆನುಡಿಗಳು ಆಡಂಬರಕ್ಕೆ/ತೋರಿಕೆಗೆ ಒಳಗಾಗುತ್ತವೆ. ದೇಹಕ್ಕೆ ಪೆಟ್ಟು ಬಿದ್ದಾಗ ಉಂಟಾಗುವ ರಣಗಾಯದಂತೆಯೇ, ಅಹಂಕಾರಕ್ಕೆ ಒಳಗಾದ ವ್ಯಕ್ತಿಯ ಒಳ್ಳೆಯ ವ್ಯಕ್ತಿತ್ವವೂ ಹಾಳಾಗುತ್ತದೆ ಎಂಬ ತಿರುಳಿನಲ್ಲಿ ಈ ರೂಪಕವು ಬಳಕೆಯಾಗಿದೆ.

ಆನ್+ಎಂತು; ಆನ್=ನಾನು; ಎಂತು=ಯಾವ ರೀತಿಯಲ್ಲಿ/ಯಾವ ಬಗೆಯಲ್ಲಿ; ಬದುಕುವೆನ್+ಎಂತು; ಬದುಕು=ಜೀವನ/ಬಾಳು; ಆನೆಂತು ಬದುಕುವೆನ್=ನಾನು ಹೇಗೆ ಜೀವನವನ್ನು ನಡೆಸಲಿ/ಬಾಳನ್ನು ರೂಪಿಸಿಕೊಳ್ಳಲಿ; ಜೀವಿಸು=ಜೀವನವನ್ನು ನಡೆಸು;

ಆನೆಂತು ಬದುಕುವೆನೆಂತು ಜೀವಿಸುವೆ=ಮನದಲ್ಲಿ ಅಹಂಕಾರದ ಒಳಮಿಡಿತದಿಂದ ಕೂಡಿದವನಾಗಿ, ಸರಳವಾದ ಮತ್ತು ಸಹಜವಾದ ಬದುಕಿನ ನಡೆನುಡಿಗಳನ್ನೇ ಮರೆತಿರುವ ನಾನು ಇನ್ನು ಮುಂದೆ ಹೇಗೆ ತಾನೆ ಒಳ್ಳೆಯ ಜೀವನವನ್ನು ನಡೆಸುವುದಕ್ಕೆ ಆಗುತ್ತದೆ ಎಂಬ ಕಳವಳಕ್ಕೆ/ಆತಂಕಕ್ಕೆ ವ್ಯಕ್ತಿಯು ಒಳಗಾಗಿದ್ದಾನೆ.

104. ಏನ ಮಾಡಿದಡೇನಯ್ಯಾ ಎನ್ನಲ್ಲಿ ದಿಟವಿಲ್ಲದನ್ನಕ್ಕರ
ಏನ ಹಮ್ಮಿದಡೇನಯ್ಯಾ ಎನ್ನಲ್ಲಿ ದಿಟವಿಲ್ಲದನ್ನಕ್ಕರ.(1388–128)

ಏನ್=ಯಾವುದು; ಏನ=ಯಾವುದನ್ನು ತಾನೆ; ಮಾಡಿದಡೆ+ಏನ್+ಅಯ್ಯಾ; ಮಾಡು=ನೆರವೇರಿಸು/ನಡೆಸು/ಆಚರಿಸು/ಕೆಲಸದಲ್ಲಿ ತೊಡಗು; ಮಾಡಿದಡೆ=ಮಾಡಿದರೆ;

ಎನ್ನ+ಅಲ್ಲಿ; ಎನ್ನ=ನನ್ನ; ನನ್ನಲ್ಲಿ=ನನ್ನ ನಡೆನುಡಿಯಲ್ಲಿ/ವರ್ತನೆಯಲ್ಲಿ/ವ್ಯವಹಾರದಲ್ಲಿ; ದಿಟ+ಇಲ್ಲದ+ಅನ್ನಕ್ಕರ; ದಿಟ=ಸತ್ಯ/ನಿಜ/ವಾಸ್ತವ; ಅನ್ನಕ್ಕರ=ಅಲ್ಲಿಯವರೆಗೆ/ಅಲ್ಲಿಯ ತನಕ; ದಿಟವಿಲ್ಲದನ್ನಕ್ಕರ=ನಿಜವಿಲ್ಲದಿರುವ ತನಕ;

ಏನ ಮಾಡಿದಡೇನಯ್ಯಾ ಎನ್ನಲ್ಲಿ ನಿಜವಿಲ್ಲದನ್ನಕ್ಕ=ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತಾಗುವಂತಹ ನಡೆನುಡಿಗಳನ್ನು ಹೊಂದದಿರುವ ವ್ಯಕ್ತಿಯು ಮಾಡುವ ಯಾವುದೇ ಬಗೆಯ ಕೆಲಸಗಳಿಂದ ಏನೊಂದು ಪ್ರಯೋಜನವಿಲ್ಲ;

ಹಮ್ಮಿದಡೆ+ಏನ್+ಅಯ್ಯಾ; ಹಮ್ಮು=ಕಯ್ಗೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲು ಹಲವು ರೀತಿಯಲ್ಲಿ ಚಿಂತಿಸುವುದು;

ಏನ ಹಮ್ಮಿದಡೇನಯ್ಯಾ ಎನ್ನಲ್ಲಿ ದಿಟವಿಲ್ಲದನ್ನಕ್ಕರ=ಒಳ್ಳೆಯ ನಡೆನುಡಿಗಳಿಲ್ಲದ ವ್ಯಕ್ತಿಯು ಹಾಕಿಕೊಳ್ಳುವ ಯಾವ ಯೋಜನೆಗಳಿಂದಲೂ ಯಾರಿಗೂ ಒಳಿತಾಗುವುದಿಲ್ಲ. ಏಕೆಂದರೆ ದಿಟದ ನಡೆನುಡಿಗಳಿಲ್ಲದ ವ್ಯಕ್ತಿಯ ಜೀವನವು ಸುಳ್ಳು ಮತ್ತು ಕಪಟತನದಿಂದ ಕೂಡಿರುತ್ತದೆ.

105. ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು
ಅವರು ಶಿವಪಥಕ್ಕೆ ಸಲ್ಲರು ಸಲ್ಲರಯ್ಯಾ.(96–18)

ಒಳಗೆ=ಮನಸ್ಸಿನಲ್ಲಿ/ಅಂತರಂಗದಲ್ಲಿ; ಕುಟಿಲ=ಮೋಸ/ವಂಚನೆ/ತಳುಕುಬಳುಕಿನ ನಡೆನುಡಿ; ಹೊರಗೆ=ಬಹಿರಂಗದಲ್ಲಿ/ನಿತ್ಯ ಜೀವನದ ವ್ಯವಹಾರಗಳಲ್ಲಿ;

ಭಕ್ತರ್+ಎನಿಸಿಕೊಂಬವರ; ಭಕ್ತ=ಒಳ್ಳೆಯ ನಡೆನುಡಿಗಳೇ ದೇವರನ್ನು ಒಲಿಸಿಕೊಳ್ಳುವ ಆಚರಣೆಯೆಂದು ತಿಳಿದುಕೊಂಡು ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುತ್ತಿರುವ ವ್ಯಕ್ತಿ; ಎನ್=ಹೇಳು/ನುಡಿ; ಎನಿಸು=ಎಂದು ಹೇಳುವ ಹಾಗೆ ಮಾಡು; **ಎನಿಸಿಕೊಂಬವರ**=ಎನಿಸಿಕೊಳ್ಳುವವರನ್ನು/ಎಂದು ಕರೆಯಿಸಿಕೊಳ್ಳುವವರನ್ನು;

ಬಲ್ಲನ್+ಒಲ್ಲನ್+ಅಯ್ಯಾ; ಬಲ್=ತಿಳಿ/ಅರಿ; ಬಲ್ಲನ್=ತಿಳಿದಿರುವನು/ಅರಿತಿರುವನು; ಒಲ್=ಮೆಚ್ಚು/ಒಪ್ಪು/ಸಮ್ಮತಿಸು; ಒಲ್ಲನ್=ತಿರಸ್ಕರಿಸುತ್ತಾನೆ; ಲಿಂಗ=ಈಶ್ವರ/ದೇವರು;

ಅವರು=ಒಳಗೊಂದು ಹೊರಗೊಂದು ಬಗೆಯ ನಡೆನುಡಿಯುಳ್ಳವರು/ಬಾಯಲ್ಲಿ ಒಳಿತನ್ನು ಹೇಳುತ್ತ, ಕಯ್ಯಲ್ಲಿ ಕೆಟ್ಟದ್ದನ್ನು ಮಾಡುತ್ತಿರುವ ವ್ಯಕ್ತಿಗಳು; ಶಿವ=ದೇವರು/ಈಶ್ವರ; ಪಥ=ದಾರಿ; ಶಿವಪಥ=ಒಳ್ಳೆಯ ನಡೆನುಡಿಯಲ್ಲಿ ಬದುಕನ್ನು ನಡೆಸುವುದು; ಸಲ್=ಒಪ್ಪಿಗೆಯಾಗು/ಯೋಗ್ಯವಾಗಿರು; ಸಲ್ಲರು=ಒಪ್ಪಿಗೆಯಾಗುವುದಿಲ್ಲ/ಯೋಗ್ಯರಾಗುವುದಿಲ್ಲ; ಸಲ್ಲರ್+ಅಯ್ಯಾ;

ಅವರು ಶಿವಪಥಕ್ಕೆ ಸಲ್ಲರು=ಅಂತರಂಗದ ಮನದಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೆಡುಕನ್ನು ಮಾಡುವ ಒಳಮಿಡಿತಗಳಿಂದ ಕೂಡಿ, ಬಹಿರಂಗದಲ್ಲಿ ಒಳ್ಳೆಯವರಂತೆ ನಟಿಸುವ ವ್ಯಕ್ತಿಗಳು ಶಿವನ ಒಲವಿಗೆ/ಕರುಣೆಗೆ ಪಾತ್ರರಾಗುವುದಿಲ್ಲ.

106. ಓದಿನ ಹಿರಿಯರು ವೇದದ ಹಿರಿಯರು
ಶಾಸ್ತ್ರದ ಹಿರಿಯರು ಪುರಾಣದ ಹಿರಿಯರು
ವೇಷದ ಹಿರಿಯರು ಭಾಷೆಯ ಹಿರಿಯರು
ಇವರೆಲ್ಲರು ತಮ್ಮ ತಮ್ಮನೆ ಮೆರೆದರಲ್ಲದೆ ನಿಮ್ಮ ಮೆರೆದುದಿಲ್ಲ.

(1115–101)

ಓದು=ಲಿಪಿರೂಪದ ಬರಹದಲ್ಲಿನ ವಿಚಾರಗಳನ್ನು ತಿಳಿಯುವುದು; ಹಿರಿ=ದೊಡ್ಡದು/ಮಿಗಿಲಾದುದು; ಹಿರಿಯರು=ವಯಸ್ಸಿನಲ್ಲಿ ದೊಡ್ಡವರು/ ಲೋಕಜೀವನದ ಆಗುಹೋಗುಗಳನ್ನು ಚೆನ್ನಾಗಿ ತಿಳಿದವರು;

ಓದಿನ ಹಿರಿಯರು=ನೂರಾರು ಹೊತ್ತಿಗೆಗಳನ್ನು ಓದಿ, ಅಪಾರವಾದ ತಿಳುವಳಿಕೆಯನ್ನು/ಅರಿವನ್ನು ತಮ್ಮದಾಗಿಸಿಕೊಂಡಿರುವವರು;

ವೇದ=ಇಂಡಿಯಾದೇಶದಲ್ಲಿದ್ದ ಪ್ರಾಚೀನ ಜನ ಸಮುದಾಯದವರು ನಿಸರ್ಗ ದೇವತೆಗಳನ್ನು ಪೂಜಿಸುತ್ತಿದ್ದ ಆಚರಣೆಗಳ ವಿವರವನ್ನು ಒಳಗೊಂಡ ಋಗ್ವೇದ–ಯಜುರ್ವೇದ–ಅಥರ್ವಣ ವೇದ–ಸಾಮವೇದ ಎಂಬ ನಾಲ್ಕು ವೇದಗಳು;

ವೇದದ ಹಿರಿಯರು=ನಾಲ್ಕು ವೇದಗಳನ್ನು ಚೆನ್ನಾಗಿ ಓದಿ ಕರಗತ ಮಾಡಿಕೊಂಡಿರುವ ವ್ಯಕ್ತಿಗಳು;

ಶಾಸ್ತ್ರ=ದೇವತೆಗಳ ಪೂಜೆಯಲ್ಲಿ ಅನುಸರಿಸಬೇಕಾದ ಸಂಪ್ರದಾಯಗಳನ್ನು ಮತ್ತು ಜನಸಮುದಾಯದ ಹುಟ್ಟು/ಮದುವೆ/ಸಾವಿನ ಸನ್ನಿವೇಶಗಳಲ್ಲಿ ಮಾಡಬೇಕಾದ ಆಚರಣೆಗಳನ್ನು ವಿವರಿಸುವ ಹೊತ್ತಿಗೆ;

ಶಾಸ್ತ್ರದ ಹಿರಿಯರು=ಪೂಜೆಯ ಆಚರಣೆಗಳಲ್ಲಿ ಪರಿಣಿತರಾದವರು;

ಪುರಾಣ=ಜಗತ್ತಿನ ಹುಟ್ಟು, ಜೀವರಾಶಿಗಳ ಉಗಮ, ದೇವರ ಇರುವಿಕೆ ಮತ್ತು ಮಾನವ ಸಮುದಾಯದ ಬೆಳವಣಿಗೆಯ ಬಗ್ಗೆ ಜನಮನದ ಕಲ್ಪನೆಯಲ್ಲಿ ರೂಪು ಗೊಂಡಿರುವ ಸಂಗತಿಯನ್ನೊಳಗೊಂಡ ಕತೆ. ಇಂಡಿಯಾದ ಜನಸಮುದಾಯದ ಮನದಲ್ಲಿ ಹದಿನೆಂಟು ಪುರಾಣಗಳು ರೂಪುಗೊಂಡಿವೆ;

ಪುರಾಣದ ಹಿರಿಯರು=ಹದಿನೆಂಟು ಪುರಾಣಗಳ ಬಗ್ಗೆ ಚೆನ್ನಾಗಿ ಅರಿತವರು;

ವೇಷ=ಮಯ್ಯ ಮೇಲೆ ಉಟ್ಟುಕೊಳ್ಳುವ ಉಡುಗೆ ಮತ್ತು ತೊಟ್ಟು ಕೊಳ್ಳುವ ತೊಡುಗೆ;

ವೇಷದ ಹಿರಿಯರು=ತಾವು ಉಡುವ ಬಟ್ಟೆಬರೆಗಳಿಂದ ಮತ್ತು ತೊಡುವ ಒಡವೆ ವಸ್ತುಗಳಿಂದಲೇ ಜನರ ಮುಂದೆ ತಮ್ಮನ್ನು ತಾವು 'ದೇವ ಮಾನವರು/ ಜಾತಿ ಜಗದ್ಗುರುಗಳು/ಸಮಾಜದ ಹಿತವನ್ನು ಕಾಪಾಡುವವರು' ಎಂದು ತೋರಿಸಿ ಕೊಳ್ಳುವ/ಬಿಂಬಿಸಿಕೊಳ್ಳುವ ವ್ಯಕ್ತಿಗಳು;

ಇವರ್+ಎಲ್ಲರು; **ತಮ್ಮ ತಮ್ಮನೆ**=ವ್ಯಕ್ತಿಯಾಗಿ ತಮ್ಮನ್ನು ಕುರಿತು ಮಾತ್ರ/ ತಮ್ಮೊಬ್ಬರನ್ನು; ಮೆರೆ=ಇತರರ ಮುಂದೆ ತಮ್ಮನ್ನು ತಾವು ಹೊಗಳಿಕೊಳ್ಳುವುದು/ ದೊಡ್ಡವರೆಂದು ಹೇಳಿಕೊಳ್ಳುವುದು;

ನಿಮ್ಮ=ಶಿವ/ಈಶ್ವರ/ಒಳ್ಳೆಯ ನಡೆನುಡಿಗಳ ಸಂಕೇತವಾದ ದೇವರಾದ ಕೂಡಲಸಂಗಮನನ್ನು; ಮೆರೆದುದು+ಇಲ್ಲ;

ನಿಮ್ಮ ಮೆರೆಯುವುದು ಎಂದರೆ ನಿತ್ಯ ಜೀವನದಲ್ಲಿ ವ್ಯಕ್ತಿಯು ಒಳ್ಳೆಯ ನಡೆನುಡಿಗಳಿಂದ ಬಾಳುತ್ತ, ತನ್ನ ಒಳಿತಿನ ಜತೆಜತೆಗೆ ಸಹಮಾನವರ ಮತ್ತು ಸಮಾಜದ ಹಿತವನ್ನು ಕಾಪಾಡುವುದು. ಶಿವಶರಣಶರಣೆಯರ ಪಾಲಿನ ದೇವರು ಮಣ್ಣು/ಮರ/ಕಲ್ಲು/ಲೋಹದಿಂದ ಮಾಡಿದ ಮೂರ್ತಿಯಾಗಿರಲಿಲ್ಲ. ವ್ಯಕ್ತಿಯು ತನ್ನ ನಿತ್ಯದ ಬದುಕಿನಲ್ಲಿ ಆಚರಿಸುವ ಒಳ್ಳೆಯ ನಡೆನುಡಿಯೇ ಅವರಿಗೆ ದೇವರಾಗಿತ್ತು.

ನಿಮ್ಮ ಮೆರೆದುದಿಲ್ಲ=ಸಮಾಜದಲ್ಲಿ ತಮ್ಮನ್ನು ತಾವು ದೊಡ್ಡವರು/ಹಿರಿಯರು ಎಂದು ತೋರಿಸಿಕೊಳ್ಳುತ್ತಿರುವ/ಹೇಳಿಕೊಳ್ಳುತ್ತಿರುವ ವ್ಯಕ್ತಿಗಳಲ್ಲಿ ಬಹುತೇಕ ಮಂದಿ ತಮ್ಮ ದಿನನಿತ್ಯದ ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳುತ್ತಿಲ್ಲ.

107 ಓದಿಸುವಣ್ಣಗಳೆನ್ನ ಮಾತಾಡ ಕಲಿಸಿದರಲ್ಲದೆ
ಮನಕ್ಕೆ ಮಾತಾಡ ಕಲಿಸಲಿಲ್ಲವಯ್ಯಾ. (1116 –101)

ಓದು=ಲಿಪಿರೂಪದ ಬರಹದಲ್ಲಿನ ವಿಚಾರಗಳನ್ನು ತಿಳಿಯುವುದು; ಓದಿಸುವ+ಅಣ್ಣಗಳ್+ಎನ್ನ; ಓದಿಸುವ=ವಿದ್ಯೆಯನ್ನು ಕಲಿಸುವ/ಅಕ್ಕರದ ಉಚ್ಚಾರ ಮತ್ತು ಬರಹವನ್ನು ಹೇಳಿಕೊಡುವ; ಅಣ್ಣ=ವಯಸ್ಸಿನಲ್ಲಿ ಹಿರಿಯವನು; ಅಣ್ಣಗಳು=ಗುರುಗಳು; ಎನ್ನ=ನನ್ನನ್ನು; ಮಾತು+ಆಡ; ಮಾತು=ನುಡಿ/ಸೊಲ್ಲು; ಆಡು=ಉಚ್ಚರಿಸು/ಹೇಳು; ಮಾತಾಡ=ಮಾತನ್ನಾಡಲು; ಕಲಿಸಿದರ್+ಅಲ್ಲದೆ; ಕಲಿ=ಅರಿ/ತಿಳಿ; ಕಲಿಸು=ತಿಳಿಯುವಂತೆ ಹೇಳು/ಅರಿಯುವಂತೆ ತರಬೇತಿಯನ್ನು ನೀಡು;

ಓದಿಸುವಣ್ಣಗಳೆನ್ನ ಮಾತಾಡ ಕಲಿಸಿದರು=ಅಕ್ಕರದ ಓದು ಬರಹವನ್ನು ಹೇಳಿಕೊಟ್ಟ ಗುರುಗಳು ಮಾತನಾಡುವ ಕಲೆಯಲ್ಲಿ ನನ್ನನ್ನು ಪರಿಣತನನ್ನಾಗಿ ಮಾಡಿದರು. ಅಂದರೆ ಕೇಳುವವರ ಮನ ಸೆಳೆಯುವಂತೆ, ಮನ ಮೆಚ್ಚಿಸುವಂತೆ ಮತ್ತು ಅವರನ್ನು ಮರುಳುಗೊಳಿಸುವಂತೆ ಮಾತನಾಡುವುದರಲ್ಲಿ ನಾನು ಜಾಣನಾದೆನು; ಅಲ್ಲದೆ=ಅದನ್ನು ಬಿಟ್ಟು/ಹೊರತು ಪಡಿಸಿ;

ಮನ=ಮನಸ್ಸು; ಕಲಿಸಲ್+ಇಲ್ಲ+ಅಯ್ಯಾ; ಕಲಿಸಲಿಲ್ಲ=ಹೇಳಿಕೊಡಲಿಲ್ಲ/ಅರಿಯುವಂತೆ ಮಾಡಲಿಲ್ಲ; ಅಯ್ಯಾ=ಮತ್ತೊಬ್ಬ ವ್ಯಕ್ತಿಯನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಮನಕ್ಕೆ ಮಾತಾಡ ಕಲಿಸುವುದು=ವ್ಯಕ್ತಿಯು ತನ್ನ ಮನದಲ್ಲಿ ತುಡಿಯುವ ಒಳಮಿಡಿತಗಳಲ್ಲಿ ಯಾವುದು ಕೆಟ್ಟದ್ದು/ಯಾವುದು ಒಳ್ಳೆಯದು ಎಂಬುದನ್ನು ಒರೆ ಹಚ್ಚಿನೋಡಿ, ಕೆಟ್ಟದ್ದನ್ನು ಹತ್ತಿಕ್ಕಿಕೊಂಡು ಬಾಳಬೇಕೆಂಬ ಅರಿವು ಮತ್ತು ಎಚ್ಚರವನ್ನು ಹೊಂದುವುದು.

ವ್ಯಕ್ತಿಯು ತನ್ನ ಕಣ್ಣ ಮುಂದಿನ ನಿಸರ್ಗದಲ್ಲಿನ ಆಗುಹೋಗುಗಳನ್ನು ಅರಿತುಕೊಂಡು, ತಾನು ಬಾಳುತ್ತಿರುವ ಸಮಾಜದ ಆಚರಣೆಗಳಲ್ಲಿ ಒಟ್ಟು ಜನ ಸಮುದಾಯದ ಹಿತಕ್ಕೆ ಯಾವುದು ನೆರವಾಗುತ್ತದೆ/ಯಾವುದು ಹಾನಿಯನ್ನುಂಟು ಮಾಡುತ್ತದೆ ಎಂಬುದನ್ನು ಮನದಲ್ಲಿ ಚಿಂತಿಸಿ ನೋಡಿ, ಜನಸಮುದಾಯವು ನೆಮ್ಮದಿಯಿಂದ ಕೂಡಿಬಾಳುವುದಕ್ಕೆ ನೆರವಾಗುವ ಆಚರಣೆಗಳನ್ನು ಒಪ್ಪಿಕೊಂಡು, ಕೇಡನ್ನು ಬಗೆಯುವ ಆಚರಣೆಗಳನ್ನು ತೊರೆದು ಬಾಳಬೇಕೆಂಬ ವಿವೇಕವನ್ನು ಹೊಂದುವುದು;

ಮನಕ್ಕೆ ಮಾತಾಡ ಕಲಿಸಲಿಲ್ಲವಯ್ಯಾ=ವ್ಯಕ್ತಿಯು ತನ್ನ ಮನದಲ್ಲಿ ಮೂಡುವ ಒಳಿತು ಕೆಡುಕಿನ ಸಂಗತಿಗಳನ್ನು ಒರೆಹಚ್ಚಿ ನೋಡಿ, ಕೆಡುಕನ್ನು ತೊರೆದು, ಒಳ್ಳೆಯತನದಿಂದ ಬಾಳಬೇಕೆಂಬುದನ್ನು ಕಲಿಸಲಿಲ್ಲ.

108 ಕುಲಮದವಳಿಯದನ್ನಕ್ಕ ಶರಣನಾಗಲೇಕೆ? (869–78)

ಕುಲ+ಮದ+ಅಳಿಯದ+ಅನ್ನಕ್ಕ; ಕುಲ=ಜಾತಿ/ಮತ/ವಂಶ/ಮನೆತನ; ಮದ=ಸೊಕ್ಕು/ಗರ್ವ;

‘ಕುಲಮದ’ ಎಂದರೆ ವ್ಯಕ್ತಿಯು ತಾನು ಹುಟ್ಟಿ ಬೆಳೆದು ಬಾಳುತ್ತಿರುವ ಜಾತಿ/ಮತ/ವಂಶ/ಮನೆತನವು ಪವಿತ್ರವಾದುದು ಎಂಬ ತಿಳಿಗೇಡಿತನದ ಒಳಮಿಡಿತಕ್ಕೆ ಒಳಗಾಗಿ, ಸಮಾಜದಲ್ಲಿರುವ ಇನ್ನಿತರ ಜಾತಿ/ಮತ/ವಂಶ/ಮನೆತನಕ್ಕೆ ಸೇರಿದ ಜನಸಮುದಾಯವನ್ನು ಕೀಳೆಂದು ಕಡೆಗಣಿಸಿ, ಸೊಕ್ಕಿನಿಂದ ಕೊಬ್ಬಿ ಮೆರೆಯುವ ನಡೆನುಡಿ.

ಇನ್ನಿತರ ಜಾತಿ/ಮತಗಳಿಗೆ ಸೇರಿದ ವ್ಯಕ್ತಿಗಳು ವಿದ್ಯೆಯನ್ನು ಪಡೆದು, ಅರಿವನ್ನು ಹೊಂದಿ, ಒಳ್ಳೆಯ ಗದ್ದುಗೆಯನ್ನೇರಿ, ಆಸ್ತಿಪಾಸ್ತಿ, ಹಣಕಾಸನ್ನು ಸಂಪಾದಿಸಿ ಸಮಾಜದಲ್ಲಿ ತಲೆಯೆತ್ತಿ ಬಾಳುವುದನ್ನು ಕುಲಮದವುಳ್ಳ ವ್ಯಕ್ತಿಗಳು ಸಹಿಸುವುದಿಲ್ಲ.

ಇದಕ್ಕಾಗಿ ಜಾತಿ/ಮತ/ದೇವರ ಹೆಸರಿನಲ್ಲಿ ಸುಳ್ಳಿನಿಂದ ಕೂಡಿದ; ಕಟ್ಟುಕತೆಯ ಸಂಗತಿಗಳನ್ನು ಹರಡುತ್ತಾ, ನೂರೆಂಟು ಬಗೆಯ ಜಾತಿ/ಮತಗಳಿಂದ ಹೆಣೆದು ಕೊಂಡು ರೂಪುಗೊಂಡಿರುವ ಸಮಾಜದ ಜನಸಮುದಾಯಗಳ ಮನದಲ್ಲಿ ಪರಸ್ಪರ ಅನುಮಾನದ/ಅಪನಂಬಿಕೆಯ/ಹಗೆತನದ ಬೆಂಕಿ ಹತ್ತಿ ಉರಿಯುವಂತೆ ಮಾಡುತ್ತಾ, ಸಮಾಜದಲ್ಲಿನ ಜನತೆಯು ಒಗ್ಗಟ್ಟಿನಿಂದ ಜತೆಗೂಡಿ ನೆಮ್ಮದಿಯಿಂದ ಬದುಕನ್ನು ನಡೆಸದಂತಹ ಹುನ್ನಾರಗಳನ್ನು ಹೂಡುತ್ತಿರುತ್ತಾರೆ;

ಅಳಿ=ಇಲ್ಲವಾಗು/ನಾಶವಾಗು; ಅನ್ನಕ್ಕ=ವರೆಗೆ/ತನಕ; **ಅಳಿಯದನ್ನಕ್ಕ**= ಇಲ್ಲವಾಗುವ ವರೆಗೆ/ನಾಶವಾಗುವ ತನಕ;

ಶರಣನ್+ಆಗಲು+ಏಕೆ; ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು; **ಶರಣನಾಗಲು**=ಶಿವನನ್ನು ಒಲಿಯುವ/ಪೂಜಿಸುವ ವ್ಯಕ್ತಿಯಾಗಲು; ಏಕೆ=ಏನು ತಾನೆ ಪ್ರಯೋಜನ;

ಕುಲಮದದ ಕೆಟ್ಟ ನಡೆನುಡಿಗಳನ್ನು ಬಿಟ್ಟು ಬಾಳದೆ, ಕೇವಲ ಶರಣನ ಉಡುಗೆ ತೊಡುಗೆಗಳನ್ನು ಹಾಕಿಕೊಂಡು, ತನ್ನನ್ನು ಶಿವಶರಣನೆಂದು ಹೇಳಿಕೊಳ್ಳುವುದರಿಂದ ಪ್ರಯೋಜನವಿಲ್ಲ. ವ್ಯಕ್ತಿಯು ಶರಣನಾಗಬೇಕಾದರೆ, ಅವನ ನಡೆನುಡಿಗಳು ಒಳ್ಳೆಯ ರೀತಿಯಲ್ಲಿರಬೇಕು.

109. ಕೆಲಕ್ಕೆ ಶುದ್ಧನಾದೆನಲ್ಲದೆ
ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ? (284–32)

ಕೆಲ=ಪಕ್ಕ/ಮಗ್ಗಲು; ಶುದ್ಧನ್+ಆದೆನ್+ಅಲ್ಲದೆ; ಶುದ್ಧ=ಚೊಕ್ಕಟ/ಕೊಳಕಿಲ್ಲದಿರುವುದು; ಶುದ್ಧನ್=ಒಳ್ಳೆಯ ನಡೆನುಡಿಯುಳ್ಳವನು; ಆದೆನ್=ಆಗಿರುವೆನು;

ಕೆಲಕ್ಕೆ ಶುದ್ಧನಾದೆನ್=ಬಹಿರಂಗದಲ್ಲಿ ನೋಡುವವರ ಕಣ್ಣಿಗೆ ಒಳ್ಳೆಯ ನಡೆನುಡಿಯುಳ್ಳವನಂತೆ ಕಾಣಿಸಿಕೊಳ್ಳುತ್ತೇನೆ; ಅಲ್ಲದೆ=ಅದನ್ನು ಹೊರತುಪಡಿಸಿ/ಅದನ್ನು ಬಿಟ್ಟು; ಎನ್ನ=ನನ್ನ; ಮನ=ಮನಸ್ಸು/ಚಿತ್ತ; ಶುದ್ಧನ್+ಆಗೆನ್+ಏಕೆ+ಅಯ್ಯಾ; ಆಗೆನು=ಆಗಿರುವುದಿಲ್ಲ; ಏಕೆ=ಇದಕ್ಕೆ ಕಾರಣವೇನು;

ಎನ್ನ ಮನಕ್ಕೆ ಶುದ್ಧನಾಗೆನ್=ನನ್ನ ಅಂತರಂಗದ ಮನದಲ್ಲಿ ನೂರೆಂಟು ಬಗೆಯ ಕೆಟ್ಟ ಒಳಮಿಡಿತಗಳು ಸದಾಕಾಲ ತುಡಿಯುತ್ತಿರುತ್ತವೆ. ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ಆಲೋಚನೆಗಳು ನನ್ನ ಮನ ತುಂಬಿರುತ್ತದೆ;

ವ್ಯಕ್ತಿಯು ತನ್ನ ನಡೆನುಡಿಯಲ್ಲಿನ ತಪ್ಪು ಒಪ್ಪುಗಳನ್ನು ತಾನೇ ಒರೆಹಚ್ಚಿ ನೋಡಿಕೊಳ್ಳುವಾಗ, ಈ ಬಗೆಯ ತಾಕಲಾಟಗಳಿಗೆ ಒಳಗಾಗುತ್ತಾನೆ. ಹೊರಗಿನ ತನ್ನ ನಡೆಗೂ ಒಳಗಿನ ತನ್ನ ಮನದ ಒಳಮಿಡಿತಗಳಿಗೂ ಇರುವ ಅಂತರವನ್ನು ಕಂಡು ಚಿಂತಿತನಾಗಿ, ತನ್ನನ್ನು ತಾನು ಸರಿಪಡಿಸಿಕೊಂಡು ಬಾಳಲು ಪ್ರಯತ್ನಿಸುವ ಹಂತದಲ್ಲಿ ಈ ಬಗೆಯ ಆಲೋಚನೆಗಳು ಮನದಲ್ಲಿ ಮೂಡುತ್ತವೆ.

110 ಕೋಣನ ಹೇರಿಂಗೆ ಕುನ್ನಿ ಬಸುಕುತ್ತಬಡುವಂತೆ
ತಾವೂ ನಂಬರು ನಂಬುವರನೂ ನಂಬಲೀಯರು
ತಾವೂ ಮಾಡರು ಮಾಡುವರನೂ ಮಾಡಲೀಯರು. (664–61)

(ಕೋಣ=ಗಂಡು ಎಮ್ಮೆ; ಹೇರು=ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬೇಕಾದ ವಸ್ತುಗಳಿಂದ ತುಂಬಿರುವ ಗಾಡಿ; ಹೇರಿಂಗೆ=ಹೇರಿಗೆ/ಗಾಡಿಗೆ/ಬಂಡಿಗೆ; ಕೋಣನ ಹೇರು=ಕೋಣಗಳನ್ನು ಕಟ್ಟಿರುವ ಬಂಡಿ/ಗಾಡಿ; ಕುನ್ನಿ=ನಾಯಿ; ಬಸುಕುತ್ತ+ಪಡು+ಅಂತೆ; ಬಸುಕುತ್ತ=ನಾಲಗೆಯನ್ನು ಹೊರ ಚಾಚಿ ಜೊಲ್ಲನ್ನು ಸುರಿಸುತ್ತ, ಬಿಡುತ್ತಿರುವ ಉಸಿರನ ಲಯಕ್ಕೆ ತಕ್ಕಂತೆ ದನಿಯನ್ನು ಹೊರಡಿಸುತ್ತ; ಪಡು=ಹೊಂದು; ಅಂತೆ=ಹಾಗೆ/ಆ ರೀತಿ;

ಕೋಣನ ಹೇರಿಂಗೆ ಕುನ್ನಿ ಬಸುಕುತ್ತಬಡುವಂತೆ=ತುಂಬಿದ ಬಂಡಿಯನ್ನು ಕೋಣಗಳು ಶ್ರಮದಿಂದ ಎಳೆದುಕೊಂಡು ಮುಂದೆ ಮುಂದೆ ಸಾಗುತ್ತಿರುವಾಗ, ಬಂಡಿಯ ಎರಡು ಚಕ್ರಗಳ ನಡುವಣ ಜಾಗದಲ್ಲಿ ನಡೆದು ಬರುತ್ತಿರುವ ನಾಯಿಯು ತಾನೇ ಬಂಡಿಯನ್ನು ಎಳೆಯುತ್ತಿದೆಯೇನೋ ಎನ್ನುವಂತೆ ಏದುಸಿರನ್ನು ಬಿಡುತ್ತಿರುತ್ತದೆ;

ತಾವೂ=ವ್ಯಕ್ತಿಗಳು; ನಂಬು=ನೆಚ್ಚು/ವಿಶ್ವಾಸವಿಡು; ನಂಬರು=ನಂಬುವುದಿಲ್ಲ; ನಂಬುವರನೂ=ನಂಬುವವರನ್ನೂ/ವಿಶ್ವಾಸವಿಟ್ಟಿರುವವರನ್ನು; ನಂಬಲ್+ ಈಯರು; ನಂಬಲ್=ನಂಬಿಕೆಯಿಟ್ಟುಕೊಂಡು ಬಾಳಲು; ಈ=ಕೊಡು/ ಅವಕಾಶವನ್ನು ನೀಡು; ಈಯರು=ಕೊಡುವುದಿಲ್ಲ/ಬಿಡುವುದಿಲ್ಲ;

ತಾವೂ ನಂಬರು ನಂಬುವರನೂ ನಂಬಲೀಯರು=ತಾವು ನಂಬುವುದಿಲ್ಲ, ನಂಬಿದವರನ್ನು ಅವರ ನಂಬಿಕೆಯಂತೆ ಬಾಳಲು ಬಿಡದೆ, ಅಡ್ಡಗಾಲು ಹಾಕುತ್ತಾರೆ;

ಮಾಡು=ಕೆಲಸದಲ್ಲಿ ತೊಡಗು; ಮಾಡರು=ಮಾಡುವುದಿಲ್ಲ; ಮಾಡುವರನೂ= ಮಾಡುವವರನ್ನೂ; ಮಾಡಲ್+ಈಯರು; ಮಾಡಲ್=ಕೆಲಸದಲ್ಲಿ ತೊಡಗಲು/ ಕೆಲಸವನ್ನು ಮಾಡಿ ಮುಗಿಸಲು;

ತಾವೂ ಮಾಡರು ಮಾಡುವರನೂ ಮಾಡಲೀಯರು=ತಾವು ಒಳ್ಳೆಯ ಕೆಲಸಗಳನ್ನು ಮಾಡುವುದಿಲ್ಲ. ಒಳ್ಳೆಯ ಕೆಲಸದಲ್ಲಿ ತೊಡಗಲು ಹೊರಟವರಿಗೆ ಅಡೆತಡೆಗಳನ್ನು ಒಡ್ಡುತ್ತಾರೆ;

ಕುಟುಂಬದ ನೆಲೆ/ದುಡಿಮೆಯ ನೆಲೆ/ಸಾರ್ವಜನಿಕ ನೆಲೆಗಳಲ್ಲಿ ವ್ಯಕ್ತಿಯು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾಗ, ಅದನ್ನು ಕಂಡು ಕರುಬಿ, ಆ ಕೆಲಸ ನಡೆಯದಂತೆ ತಡೆಯಲು ಕೆಲವರು ಪ್ರಯತ್ನಿಸುತ್ತಾರೆ. ಇಂತಹವರು ತಾವಾಗಿಯೇ ಒಳ್ಳೆಯ ಕೆಲಸವನ್ನು ಮಾಡಲು ಮುಂದೆ ಬರುವುದಿಲ್ಲ; ಮಾಡುವವರನ್ನು ಮಾಡಲು ಬಿಡುವುದಿಲ್ಲ. ಆದರೆ ನಡೆಯುವ ಎಲ್ಲಾ ಕೆಲಸಗಳು ತಮ್ಮಿಂದಲೇ ಆಗುತ್ತಿವೆ ಎಂಬ ರೀತಿಯ ಮಾತುಕತೆಯಲ್ಲಿ ತೊಡಗಿರುತ್ತಾರೆ. ಇಂತಹ ವ್ಯಕ್ತಿಗಳ ನೀಚತನದ ನಡೆನುಡಿಯನ್ನು ಕುರಿತು ಕೋಣನ ಬಂಡಿಯ ನೆರಳಿನಲ್ಲಿ ಸಾಗುತ್ತಿರುವ ನಾಯಿಯ ರೂಪಕದ ಮೂಲಕ ಹೇಳಲಾಗಿದೆ.

111. ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. (677– 62)

ಛಲ=ಕಯ್ಗೊಂಡ ಕೆಲಸವನ್ನು ಮಾಡುತ್ತೇನೆ ಎಂಬ ನಂಬಿಕೆಯನ್ನು ತನ್ನಲ್ಲಿ ತಾನು ಹೊಂದಿರುವುದು; ಬೇಕು=ಅಗತ್ಯ/ಅವಶ್ಯಕ; ಛಲಬೇಕು=ಗಟ್ಟಿಯಾದ ಮನಸ್ಸನ್ನು ಹೊಂದಿರಬೇಕು/ಎಂತಹ ಸನ್ನಿವೇಶ ದಲ್ಲಿಯೂ ಇಬ್ಬಗೆಯ ತುಡಿತಕ್ಕೆ ಮನಸ್ಸು ಒಳಗಾಗಬಾರದು; ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು ಶರಣಂಗೆ=ಶರಣನಿಗೆ;

ಪರ+ಧನ+ಅನ್+ಒಲ್ಲೆನ್+ಎಂಬ; ಪರ=ಇತರ/ಬೇರೆಯ; ಧನ=ಹಣ/ ಸಂಪತ್ತು/ಒಡವೆ ವಸ್ತು/ಆಸ್ತಿಪಾಸ್ತಿ; ಪರಧನ=ಬೇರೆಯವರ ಸಂಪತ್ತು; ಅನ್=ಅನ್ನು; ಒಲ್=ಬಯಸು/ಇಚ್ಚಿಸು; ಒಲ್ಲೆನ್=ನಾನು ಬಯಸುವುದಿಲ್ಲ/ನನಗೆ ಬೇಕಾಗಿಲ್ಲ; ಎಂಬ=ಎನ್ನುವ; ಪರ+ಸತಿ+ಅನ್+ಒಲ್ಲೆನ್+ಎಂಬ; ಸತಿ=ಹೆಂಡತಿ/ ಹೆಂಗಸು; ಪರಸತಿ=ಬೇರೆಯವನ ಹೆಂಡತಿ;

ಶಿವಶರಣನಾದವನು ಸಮಾಜ ಒಪ್ಪಿತವಲ್ಲದ ಕಾಮದ ನಂಟನ್ನು ಹೊಂದಬಾರದು ಮತ್ತು ಇತರರ ಸಂಪತ್ತನ್ನು ಕಪಟತನದಿಂದ/ದಬ್ಬಾಳಿಕೆಯಿಂದ ದೋಚಬಾರದು ಎಂಬ ಕಟ್ಟಲೆಯನ್ನು ತನಗೆ ತಾನೇ ಹಾಕಿಕೊಂಡು ಬಾಳಬೇಕು.

112. ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ.
(842 – 75)

ಜ್ಞಾನ=ತಿಳುವಳಿಕೆ/ಅರಿವು; ಬಲ+ಇಂದ; ಬಲ=ಶಕ್ತಿ/ಕಸುವು; ಅಜ್ಞಾನ= ಅರಿವಿಲ್ಲದಿರುವಿಕೆ/ತಿಳುವಳಿಕೆಯಿಲ್ಲದಿರುವುದು; ಕೇಡು=ನಾಶ/ಅಳಿವು/ಹಾನಿ; ನೋಡು+ಅಯ್ಯಾ; ನೋಡು=ಕಾಣು/ತಿಳಿ;

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ=ಒಳ್ಳೆಯ ಅರಿವನ್ನು ಪಡೆಯುತ್ತಿದ್ದಂತೆಯೇ ಮನದಲ್ಲಿ ನೆಲೆಮಾಡಿದ್ದ ತಪ್ಪು ತಿಳುವಳಿಕೆಯು ಇಲ್ಲವಾಗುತ್ತದೆ;

ಜ್ಯೋತಿ=ಬೆಳಗುತ್ತಿರುವ ದೀಪದಿಂದ ಹೊರಹೊಮ್ಮುತ್ತಿರುವ ಕಾಂತಿ/ಬೆಳಕು; ತಮಂಧ=ಕತ್ತಲೆ;

ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ=ಬೆಳಕು ಹರಡುತ್ತಿದ್ದಂತೆಯೇ ಕವಿದಿದ್ದ ಕತ್ತಲೆಯು ಇಲ್ಲವಾಗುತ್ತದೆ;

ಅರಿವಿನ ನಡೆನುಡಿಗಳಿಗೆ 'ಜ್ಯೋತಿಯನ್ನು' ಮತ್ತು ತಪ್ಪು ತಿಳುವಳಿಕೆ/ದಡ್ಡತನ/ ತಿಳಿಗೇಡಿತನದ ನಡೆನುಡಿಗಳಿಗೆ ತಮಂಧವನ್ನು ರೂಪಕವಾಗಿ ಬಳಸುತ್ತಾರೆ;

113. ತನ್ನ ವಿಚಾರಿಸಲೊಲ್ಲದು ಇದಿರ ವಿಚಾರಿಸಹೋಹುದೀ ಮನವು ಏನ ಮಾಡುವೆನೀ ಮನವನು ಎಂತು ಮಾಡುವೆನೀ ಮನವನು.

(38–14)

ತನ್ನ=ತನ್ನನ್ನು; ವಿಚಾರಿಸಲ್+ಒಲ್ಲದು; ವಿಚಾರಿಸು=ಯಾವುದೇ ಸಂಗತಿಯ ಸರಿ ತಪ್ಪುಗಳನ್ನು ಒರೆಹಚ್ಚಿನೋಡುವುದು; ಒಲ್=ಬಯಸು/ಇಚ್ಚಿಸು; ಒಲ್ಲದು= ಬಯಸದು/ಇಚ್ಚಿಸದು;

ತನ್ನ ವಿಚಾರಿಸಲೊಲ್ಲದು=ವ್ಯಕ್ತಿಯಾಗಿ ತನ್ನ ನಡೆನುಡಿಯಲ್ಲಿರುವ ಕುಂದು ಕೊರತೆಗಳೇನು/ಇತಿಮಿತಿಗಳೇನು/ಸರಿ ತಪ್ಪುಗಳು ಯಾವುವು ಎಂಬುದನ್ನು ತಾನೇ ಒರೆಹಚ್ಚಿ ನೋಡಿ ತಿಳಿಯಲು ಬಯಸುವುದಿಲ್ಲ. ಅಂದರೆ ವ್ಯಕ್ತಿಯು ತನ್ನ ನಡೆನುಡಿಯಲ್ಲಿನ ತಪ್ಪುಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ;

ಇದಿರ=ಬೇರೆಯವರನ್ನು/ಇತರರನ್ನು; ವಿಚಾರಿಸ+ಹೋಹುದು+ಈ; ವಿಚಾರಿಸ=ಸರಿ ತಪ್ಪುಗಳನ್ನು ಒರೆಹಚ್ಚಿ ನೋಡಲು; ಹೋಹುದು=ಹೋಗುವುದು; ಈ ಮನವು=ನನ್ನ ಮನಸ್ಸು; ಏನ= ಏನನ್ನು; ಮಾಡುವೆನ್+ಈ; ಎಂತು=ಯಾವ ರೀತಿಯಲ್ಲಿ/ಯಾವ ಬಗೆಯಲ್ಲಿ;

ಏನ ಮಾಡುವೆನೀ ಮನವನು ಎಂತು ಮಾಡುವೆನೀ ಮನವನು= ಯಾವಾಗಲೂ ಬೇರೆಯವರ ನಡೆನುಡಿಯಲ್ಲಿನ ತಪ್ಪುಗಳನ್ನು ಕೆದಕಿ, ಅವರನ್ನು ಅಪಮಾನಿಸಲು ಹಾತೊರೆಯುವ ಈ ನನ್ನ ಮನಸ್ಸನ್ನು ಯಾವ ಬಗೆಯಲ್ಲಿ ಹತೋಟಿಯಲ್ಲಿಟ್ಟುಕೊಳ್ಳಲಿ;

ಎಲ್ಲ ವ್ಯಕ್ತಿಗಳಲ್ಲೂ ಈ ಬಗೆಯ ಮಾನಸಿಕ ರೋಗವಿದೆ. ರೋಗದ ಪ್ರಮಾಣದಲ್ಲಿ ಹೆಚ್ಚು ಕಡಿಮೆಯ ಅಂತರವಿದೆ. ಇಂತಹ ರೋಗದಿಂದ ವ್ಯಕ್ತಿಯು ತಾನು ಪಾರಾಗಬೇಕೆಂಬ ಅರಿವನ್ನು ಮೊದಲು ಪಡೆಯಬೇಕು ಮತ್ತು ಅನಂತರ ತನ್ನ ನಡೆನುಡಿಗಳಲ್ಲಿ ಎಚ್ಚರ ತಪ್ಪದಂತೆ ಬಾಳುವುದನ್ನು ಕಲಿಯಬೇಕು ಎಂಬ ಸಂಗತಿಯನ್ನು ಈ ನುಡಿಗಳು ಸೂಚಿಸುತ್ತಿವೆ.

114. ದಿಟವ ನುಡಿವುದು ನುಡಿದಂತೆ ನಡೆವುದು. (237–28)

ದಿಟ=ನಿಜ/ಸತ್ಯ/ವಾಸ್ತವ; ನುಡಿ=ಹೇಳು/ಮಾತನಾಡು; **ದಿಟವ ನುಡಿವುದು**=ನಿಜವನ್ನಾಡುವುದು/ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವಂತಹ ಒಳ್ಳೆಯ ನುಡಿಗಳನ್ನಾಡುವುದು; ನುಡಿದ+ಅಂತೆ; ಅಂತೆ=ಹಾಗೆ/ಅದೇ ರೀತಿಯಲ್ಲಿ/ಬಗೆಯಲ್ಲಿ; ನುಡಿದಂತೆ=ಮಾತನಾಡಿದಂತೆ;

ನಡೆ=ನಡವಳಿಕೆ/ಕೆಲಸಗಳನ್ನು ಮಾಡುವುದು/ವರ್ತನೆ; **ನುಡಿದಂತೆ ನಡೆವುದು**=ಒಳ್ಳೆಯದನ್ನು ಬಾಯಲ್ಲಿ ಹೇಳುವ ರೀತಿಯಲ್ಲಿ ವ್ಯಕ್ತಿಯು ತನ್ನ ನಿಜ ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವುದು.

115. ಧೃತಿಗೆಟ್ಟು ಅನ್ಯರ ಬೇಡದಂತೆ
ಮತಿಗೆಟ್ಟು ಪರರುವ ಹೊಗಳದಂತೆ
ಪರಸತಿಯರ ರತಿಗೆ ಮನ ಹಾರದಂತೆ
ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ. (263–30)

ಧೃತಿ+ಕೆಟ್ಟು; ಧೃತಿ=ದಿಟ್ಟತನ/ಕೆಚ್ಚು; ಕೆಡು=ನಾಶವಾಗು/ಇಲ್ಲವಾಗು; ಕೆಟ್ಟು=ಅಳಿದು/ನಾಶವಾಗಿ/ಇಲ್ಲವಾಗಿ; ಅನ್ಯರ= ಬೇರೆಯವರನ್ನು/ಇತರರನ್ನು; ಬೇಡದ+ಅಂತೆ; ಬೇಡು=ಯಾಚಿಸು/ದೀನನಾಗಿ ಕೇಳು; ಅಂತೆ=ಹಾಗೆ/ಆ ರೀತಿ;

ಧೃತಿಗೆಟ್ಟು ಅನ್ಯರ ಬೇಡದಂತೆ=ಜೀವನದಲ್ಲಿ ಬರುವ ಎಡರು ತೊಡರುಗಳಿಂದಾಗಿ ಮಾನಸಿಕವಾಗಿ ಕುಗ್ಗಿ ಕುಸಿದು, ದೀನತೆಯಿಂದ ಇತರರ ಮುಂದೆ ಕಯ್ಯೊಡ್ಡಿ ಬಾಳದಂತೆ;

ಮತಿ+ಕೆಟ್ಟು; ಮತಿ=ತಿಳಿವು/ಅರಿವು; ಮತಿಗೆಟ್ಟು=ಸರಿ/ತಪ್ಪುಗಳನ್ನು, ಒಳಿತು/ಕೆಡುಕುಗಳನ್ನು ಒರೆಹಚ್ಚಿ ನೋಡುವ ಮಾನಸಿಕ ಶಕ್ತಿ ಕಳೆದುಹೋಗಿ; ಪರ=ಬೇರೆ/ಇತರ; ಪರರುವ=ಇತರರನ್ನು; ಹೊಗಳದ+ಅಂತೆ; ಹೊಗಳು=ಯಾವುದೇ ವಸ್ತು–ಜೀವಿ–ವ್ಯಕ್ತಿಯ ಬಗ್ಗೆ ಮಾತನಾಡುವಾಗ, ಅದರಲ್ಲಿ/ಅವರಲ್ಲಿ ಕಂಡುಬರುವ ವಾಸ್ತವ ಸಂಗತಿಗಳ ಜತೆಗೆ ಇಲ್ಲಸಲ್ಲದ ಸಂಗತಿಗಳನ್ನು ಸೇರಿಸಿಕೊಂಡು ಮಾತನಾಡುವುದು;

ಮತಿಗೆಟ್ಟು ಪರರುವ ಹೊಗಳದಂತೆ=ವ್ಯಕ್ತಿಯು ತನ್ನ ಅಗತ್ಯವನ್ನು/ಆಸೆಯನ್ನು

ಈಡೇರಿಸಿಕೊಳ್ಳುವ ಉದ್ದೇಶದಿಂದ ಇತರರನ್ನು ಕೊಂಡಾಡುತ್ತ, ತನ್ನ ವಿವೇಕವನ್ನು ಮತ್ತು ವ್ಯಕ್ತಿತ್ವವನ್ನು ಕಳೆದುಕೊಂಡು ಬಾಳದಂತೆ;

ಸತಿ=ಹೆಂಡತಿ/ಹೆಣ್ಣು; ಪರಸತಿ=ಮತ್ತೊಬ್ಬನ ಮಡದಿ; ರತಿ=ಹೆಣ್ಣು ಗಂಡು ಪರಸ್ಪರ ಕಾಮದ ನಂಟನ್ನು ಹೊಂದುವುದು; ಹಾರದ+ಅಂತೆ; ಹಾರು=ಬಯಸು/ಹಂಬಲಿಸು/ಇಚ್ಚಿಸು;

ಪರಸತಿಯರ ರತಿಗೆ ಮನಹಾರದಂತೆ=ಬೇರೆಯವರ ಹೆಂಡತಿಯರೊಡನೆ ಕಾಮದ ನಂಟನ್ನು ಪಡೆಯಬೇಕೆಂಬ ಹಂಬಲಕ್ಕೆ ಒಳಗಾಗದಂತೆ;

ಎನ್ನ=ನನ್ನನ್ನು; ಪ್ರತಿಪಾಲಿಸು=ಕಾಪಾಡು/ನಡೆಸು; ಕೂಡಲಸಂಗಮ ದೇವ= ಬಸವಣ್ಣನ ಮೆಚ್ಚಿನ ದೇವರು.

ಒಳಿತು ಕೆಡುಕಿನ ಒಳಮಿಡಿತಗಳಿಂದ ತುಡಿಯುವ ಮನಸ್ಸಿನ ತುಯ್ದಾಟವನ್ನು ನಿಯಂತ್ರಿಸಿಕೊಂಡು, ಒಳ್ಳೆಯ ನಡೆನುಡಿಗಳಿಂದ ಬಾಳಲು ಬೇಕಾದ ಅರಿವು ಮತ್ತು ಎಚ್ಚರವನ್ನು ಹೊಂದುವುದಕ್ಕಾಗಿ ವ್ಯಕ್ತಿಯು ಕೂಡಲಸಂಗಮದೇವನಲ್ಲಿ ಮೊರೆಯಿಡುತ್ತಿದ್ದಾನೆ.

116. ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು. (409–41)

ನಡೆ+ಅಲ್+ಅರಿಯದೆ; ನಡೆ=ನಡವಳಿಕೆ/ಮಾಡುವ ಕೆಲಸ; ಅರಿ=ತಿಳಿ/ಕಲಿ; ಅರಿಯದೆ=ತಿಳಿಯದೆ/ಕಲಿಯದೆ; **ನಡೆಯಲರಿಯದೆ**=ನಿತ್ಯ ಜೀವನದಲ್ಲಿ ತನ್ನ ಒಳಿತಿಗಾಗಿ ದುಡಿಯುವಂತೆಯೇ ಸಹಮಾನವರ ಮತ್ತು ಸಮಾಜದ ಹಿತಕ್ಕಾಗಿ ಬಾಳಬೇಕೆಂಬುದನ್ನು ತಿಳಿಯದೆ/ಅರಿತುಕೊಳ್ಳದೆ;

ನುಡಿ+ಅಲ್+ಅರಿಯದೆ; ನುಡಿ=ಮಾತು/ಸೊಲ್ಲು; **ನುಡಿಯಲರಿಯದೆ**= ಇತರರೊಡನೆ ತಾನಾಡುವ ಮಾತುಗಳು ಅವರ ಮನಸ್ಸಿಗೆ ಅರಿವು ಮತ್ತು ಆನಂದವನ್ನು ನೀಡುವಂತಿರಬೇಕೇ ಹೊರತು, ಅವರ ಮನಸ್ಸನ್ನು ಗಾಸಿಗೊಳಿಸುವಂತಿರಬಾರದು ಎಂಬ ಎಚ್ಚರವನ್ನು ಹೊಂದಿರದೆ;

ಲಿಂಗ=ಈಶ್ವರನ ಸಂಕೇತವಾದ ವಿಗ್ರಹ; ಪೂಜಿಸು=ದೂಪ ದೀಪಗಳ ಆರತಿಯಿಂದ/ಹೂಹಣ್ಣುಗಳ ಅರ್ಪಣೆಯಿಂದ ದೇವರ ಸೇವೆಯನ್ನು ಮಾಡುವುದು; ಫಲ+ಏನು; ಫಲ=ಪ್ರಯೋಜನ/ಪರಿಣಾಮ; ಏನು=ಯಾವುದು;

ಸಹಮಾನವರೊಡನೆ ಒಲವು ನಲಿವು ನೆಮ್ಮದಿಯಿಂದ ಜತೆಗೂಡಿ ಬಾಳುವ ಒಳ್ಳೆಯ ನಡೆನುಡಿಗಳನ್ನು ಅರಿಯದೆ ಮಾಡುವ ದೇವರ ಪೂಜೆಯಿಂದ ಯಾವ ಪ್ರಯೋಜನವೂ ಇಲ್ಲ. ದೇವರ ಪೂಜೆಯನ್ನು ಮಾಡುವ ವ್ಯಕ್ತಿಯು ಸಾಮಾಜಿಕವಾಗಿ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರಬೇಕೆಂಬ ಸಂಗತಿಯನ್ನು ಈ ನುಡಿಗಳು ಸೂಚಿಸುತ್ತಿವೆ.

117. ನುಡಿದಂತೆ ನಡೆಯದಿದ್ದಡೆ
ಕೂಡಲಸಂಗಯ್ಯ ಮೆಚ್ಚ ಕಾಣಿರಯ್ಯಾ. (418–41)

ನುಡಿದ+ಅಂತೆ; ನುಡಿ=ಮಾತು/ಸೊಲ್ಲು; ಅಂತೆ=ಹಾಗೆ/ಆ ರೀತಿ; ನಡೆಯದೆ+ಇದ್ದಡೆ; ನಡೆವಳಿಕೆ/ಮಾಡುವ ಕೆಲಸ; ಇದ್ದಡೆ=ಇದ್ದರೆ; **ನುಡಿದಂತೆ ನಡೆಯದಿದ್ದಡೆ**=ವ್ಯಕ್ತಿಯು ತಾನು ಆಡುವ ಒಳ್ಳೆಯ ಮಾತುಗಳಿಗೆ ತಕ್ಕಂತೆ ನಿತ್ಯಜೀವನದ ವ್ಯವಹಾರದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡದಿದ್ದರೆ/ಹೇಳುವುದು ಒಂದು ಮಾಡುವುದು ಮತ್ತೊಂದಾದರೆ;

ಕೂಡಲಸಂಗಯ್ಯ=ಶಿವ; ಮೆಚ್ಚು=ಒಪ್ಪು/ಒಲಿ; ಮೆಚ್ಚ= ಒಪ್ಪುವುದಿಲ್ಲ/ ಒಲಿಯುವುದಿಲ್ಲ; ಕಾಣಿರಿ+ಅಯ್ಯಾ; ಕಾಣ್=ನೋಡು/ತಿಳಿ; ಕಾಣಿರಿ=ತಿಳಿಯಿರಿ;

ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳಿದಾಗ ಮಾತ್ರ ಕೂಡಲ ಸಂಗಮ ದೇವನು ಒಲಿಯುತ್ತಾನೆ ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

118. ಬಂದುದ ಕೈಕೊಳ್ಳಬಲ್ಲಡೆ ನೇಮ
ಇದ್ದುದ ವಂಚನೆಯ ಮಾಡದಿದ್ದಡೆ ನೇಮ
ನಡೆದು ತಪ್ಪದಿದ್ದಡೆ ಅದು ನೇಮ
ನುಡಿದು ಹುಸಿಯದಿದ್ದಡೆ ಅದು ಮುನ್ನವೆ ನೇಮ. (231–28)

ಬಂದುದ=ಬಂದಿರುವುದನ್ನು/ವ್ಯಕ್ತಿಯ ಪಾಲಿಗೆ ಬಂದ ಕೆಲಸದ ಹೊಣೆಗಾರಿಕೆಯನ್ನು; ಕೈಕೊಳ್ಳ+ಬಲ್ಲಡೆ; ಕೈಕೊಳ್ಳು=ಸ್ವೀಕರಿಸು/ಒಪ್ಪಿಕೊಳ್ಳುವುದು; ಬಲ್=ಕಸುವು/ಶಕ್ತಿ; ಬಲ್ಲಡೆ=ಶಕ್ತಿಯನ್ನು/ಕಸುವನ್ನು ಹೊಂದಿದ್ದರೆ; **ಕೈಕೊಳ್ಳಬಲ್ಲಡೆ** = ಕೆಲಸವನ್ನು ಒಪ್ಪಿಕೊಂಡು ಚೆನ್ನಾಗಿ ಮಾಡಬಲ್ಲ ಕಸುವನ್ನು ಹೊಂದಿದ್ದರೆ;

ನೇಮ=ವ್ರತ, ದೇವರ ಕರುಣೆಗೆ ಪಾತ್ರರಾಗಲು ಮಾಡುವ ಜಪ/ತಪ/ಪೂಜೆ/ಉಪವಾಸ/ಜಾಗರಣೆ ಮುಂತಾದ ನಿಯತವಾದ ಆಚರಣೆ. ಇಂತಹ ಆಚರಣೆಯಲ್ಲಿ ತೊಡಗಿದಾಗ ವ್ಯಕ್ತಿಯು ಹೀಗೆಯೆ ಇರಬೇಕು/ಮಾಡಬೇಕು/ನಡೆದುಕೊಳ್ಳಬೇಕು ಎಂಬ ನಿಯಮವಿರುತ್ತದೆ;

ಬಂದುದ ಕೈಕೊಳ್ಳಬಲ್ಲಡೆ ನೇಮ=ವ್ಯಕ್ತಿಯ ತನ್ನ ಪಾಲಿನ ಕೆಲಸವನ್ನು ಒಲವು ನಲಿವು ಮತ್ತು ಪ್ರಾಮಾಣಿಕತನದಿಂದ ಮಾಡಿದರೆ, ಅದು ದೇವರ ಪೂಜೆಗೆ ಸಮನಾಗುತ್ತದೆ;

ಇದ್ದುದ=ಇರುವುದನ್ನು; ವಂಚನೆ=ಮೋಸ/ದ್ರೋಹ; ಮಾಡದೆ+ಇದ್ದಡೆ; ಇದ್ದಡೆ=ಇದ್ದರೆ;

ಇದ್ದುದ ವಂಚನೆ ಮಾಡದಿದ್ದಡೆ ನೇಮ=ಜನಸಮುದಾಯವೆಲ್ಲವೂ ಹಂಚಿಕೊಂಡು ಪಡೆಯಬೇಕಾಗಿರುವ ಅನ್ನ ಬಟ್ಟೆ ವಸತಿ ವಿದ್ಯೆ ಉದ್ಯೋಗವನ್ನು ಕಪಟತನದಿಂದ/ಕ್ರೂರತನದಿಂದ/ದಬ್ಬಾಳಿಕೆಯಿಂದ ಲಪಟಾಯಿಸದೆ, ಸಹಮಾನವರೆಲ್ಲರಿಗೂ ದೊರೆಯುವಂತೆ ನಡೆದುಕೊಂಡರೆ ಅದು ನೇಮವಾಗುತ್ತದೆ;

ನಡೆದು=ದುಡಿಮೆಯ ನೆಲೆಯಲ್ಲಿ ಕೆಲಸವನ್ನು ಮಾಡುವಾಗ; ತಪ್ಪದೆ+ಇದ್ದಡೆ; ತಪ್ಪು=ಸರಿಯಾದ ರೀತಿಯಲ್ಲಿ ಮಾಡದೆ, ಕ್ರಮತಪ್ಪಿ ನಡೆಯುವುದು; ತಪ್ಪದೆ=ತಪ್ಪುಗಳನ್ನು ಮಾಡದೆ/ಕೇಡನ್ನು ಬಗೆಯದೆ; **ನಡೆದು ತಪ್ಪದಿದ್ದಡೆ ಅದು ನೇಮ**=ವ್ಯಕ್ತಿಯು ತಾನು ಮಾಡುವ ಕೆಲಸದಲ್ಲಿ ತಪ್ಪುಗಳನ್ನು ಮಾಡದಿದ್ದರೆ, ಅದು ನೇಮವಾಗುತ್ತದೆ;

ನುಡಿ=ಮಾತು/ಸೊಲ್ಲು; ಹುಸಿಯದೆ+ಇದ್ದಡೆ; ಹುಸಿ=ಸುಳ್ಳು/ಸಟೆ/ಇರುವುದನ್ನು ಇಲ್ಲವೆಂದು ಹೇಳುವುದು, ಇಲ್ಲದ್ದನ್ನು ಇದೆಯೆಂದು ಹೇಳುವುದು; ಮುನ್ನ=ಮೊದಲು;

ನುಡಿದು ಹುಸಿಯದಿದ್ದಡೆ ಅದು ಮುನ್ನವೆ ನೇಮ=ಮಾತನಾಡುವಾಗ ಸುಳ್ಳನ್ನು ಹೇಳದಿದ್ದರೆ, ಅದು ಎಲ್ಲ ಬಗೆಯ ನೇಮಗಳಿಗಿಂತಲೂ ಒಳ್ಳೆಯದು/ಮಿಗಿಲಾದುದು;

ವ್ಯಕ್ತಿಯ ಒಳ್ಳೆಯ ನಡೆನುಡಿಗಳೇ ನೇಮವೆಂಬ ಮತ್ತು ದೇವರಿಗೆ ಮಾಡುವ ಪೂಜೆಯೆಂಬ ನಿಲುವನ್ನು ಈ ನುಡಿಗಳು ಸೂಚಿಸುತ್ತವೆ.

119. ಬರಿಯ ಮಾತಿನ ಮಾಲೆಯಲೇನಹುದು. (191–25)

ಬರಿ=ಏನೂ ಇಲ್ಲದಿರುವುದು; ಮಾತು=ನುಡಿ/ಸೊಲ್ಲು; **ಬರಿಯ ಮಾತು**=ವ್ಯಕ್ತಿಯು ತನ್ನ ಜೀವನದ ವ್ಯವಹಾರಗಳಲ್ಲಿ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳದೆ, ಕೇವಲ ಮಾತಿನಲ್ಲಿ ಮಾತ್ರ ಸತ್ಯ, ನೀತಿ, ನ್ಯಾಯ, ಕರುಣೆ, ಪ್ರಾಮಾಣಿಕತನ, ಸಮಾನತೆಯ ವಿಚಾರಗಳನ್ನು ದೊಡ್ಡದಾಗಿ ಆಡುತ್ತಿರುವುದು; ಮಾಲೆ+ಅಲ್+ಏನ್+ಅಹುದು; ಮಾಲೆ=ಸರ;

ಮಾತಿನ ಮಾಲೆ=ಇದು ಒಂದು ರೂಪಕ. ದಾರದ ಎಳೆಯೊಂದಕ್ಕೆ ಬಿಡಿಬಿಡಿ ಹೂಗಳನ್ನು/ಮುತ್ತುಗಳನ್ನು ಪೋಣಿಸಿ ಹಾರವನ್ನು ಕಟ್ಟುವಂತೆ ಅಂದ ಚಂದದ ಪದಗಳನ್ನು ಜೋಡಿಸಿಕೊಂಡು ಕೇಳುಗರ ಮನಸೆಳೆಯುವಂತೆ ಇಂಪಾಗಿ/ಸೊಗಸಾಗಿ ಮಾತನಾಡುವ ಕುಶಲತೆ; ಏನು=ಯಾವುದು; ಅಹುದು=ಆಗುತ್ತದೆ; ಏನಹುದು=ಏನನ್ನು ತಾನೇ ಗಳಿಸಿದಂತಾಗುತ್ತದೆ;

ವ್ಯಕ್ತಿಯು ತನ್ನ ನಿಜ ಜೀವನದಲ್ಲಿ ಆಚರಿಸಿ ತೋರಿಸಲಾಗದ ಸತ್ಯ, ನೀತಿ, ಸಾಮಾಜಿಕ ನ್ಯಾಯದ ಸಂಗತಿಗಳನ್ನು ಕುರಿತು ದೊಡ್ಡ ದೊಡ್ಡ ಮಾತುಗಳನ್ನು ಕೇಳುಗರು ತಲೆದೂಗುವಂತೆ ಆಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಕೇವಲ ಮಾತಿನಿಂದ ವ್ಯಕ್ತಿಯ ಇಲ್ಲವೇ ಸಮುದಾಯದ ಬದುಕಿನಲ್ಲಿ ಒಳ್ಳೆಯದು ಉಂಟಾಗುವುದಿಲ್ಲ.

120. ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು ಜೇನುತುಪ್ಪವ ಹೊಯ್ದಡೆ
ಸಿಹಿಯಾಗಬಲ್ಲುದೆ ಕಹಿಯಹುದಲ್ಲದೆ. (626–58)

ಬೇವು=ಒಂದು ಬಗೆಯ ಮರ. ಇದರ ಎಲೆ, ಕಾಯಿ, ಹಣ್ಣುಗಳೆಲ್ಲವೂ ಕಹಿಯಾದ ರುಚಿಯಿಂದ ಕೂಡಿರುತ್ತವೆ; ಬೀಜ=ಕಾಳು/ಬಿತ್ತ; ಬಿತ್ತು=ಬೀಜವನ್ನು ಹಾಕು; ಬಿತ್ತಿ=ಬೀಜವನ್ನು ಮಣ್ಣಿನಲ್ಲಿ ಹೂತು; ಬೆಲ್ಲ=ಕಬ್ಬಿನ ಜಲ್ಲೆಯನ್ನು ಗಾಣದಿಂದ ಅರೆದಾಗ ಬರುವ ಕಬ್ಬಿನ ಹಾಲನ್ನು ಕುದಿಸಿ ತಯಾರಿಸಿದ ವಸ್ತು. ಇದು ಸಿಹಿಯಾದ ರುಚಿಯನ್ನು ಹೊಂದಿದೆ; ಕಟ್ಟೆ=ಪಾತಿ/ಮಡಿ/ಹಾಕಿದ ಬೀಜ ಇಲ್ಲವೇ ನೆಟ್ಟ ಗಿಡದ ಸುತ್ತಲೂ ಕಟ್ಟುವ ಒಡ್ಡು; ಕಟ್ಟಿ=ನಿರ್ಮಿಸಿ/ರಚಿಸಿ;

ಆಕಳು=ಹಸು/ದನ; ಹಾಲನ್+ಎರೆದು; ಆಕಳ ಹಾಲು=ಹಸುವಿನ ಹಾಲು;

ಎರೆ=ಸುರಿ/ಹೊಯ್ಯು; ಎರೆದು=ಸುರಿದು/ಹಾಕಿ; ಜೇನುತುಪ್ಪ=ಜೇನು ಹುಳುಗಳು ನೂರಾರು ಬಗೆಯ ಹೂಗಳ ಮಕರಂದವನ್ನು ಹೀರಿ ತಂದು ತಯಾರಿಸಿರುವ ಸಿಹಿಯಾದ ರುಚಿಯನ್ನುಳ್ಳ ತುಪ್ಪ; ಹೊಯ್=ಸುರಿ/ಸೂಸು/ಹಾಕು; ಹೊಯ್ದಡೆ=ಹಾಕಿದರೆ/ಸುರಿದರೆ; ಸಿಹಿ+ಆಗಬಲ್ಲುದೆ; ಸಿಹಿ=ಒಂದು ಬಗೆಯ ರಸದ ಹೆಸರು. ಮಾನವರು ತಿನ್ನುವ, ಕುಡಿಯುವ ಮತ್ತು ಉಣ್ಣುವ ವಸ್ತುಗಳಲ್ಲಿ ಉಪ್ಪು, ಕಾರ, ಸಿಹಿ, ಕಹಿ, ಹುಳಿ, ಒಗರು ಎಂಬ ಆರು ಬಗೆಯ ರಸಗಳನ್ನು ಹೆಸರಿಸುತ್ತಾರೆ; ಆಗಬಲ್ಲುದೆ=ಆಗುತ್ತದೆಯೇ; ಕಹಿ+ಅಹುದು+ಅಲ್ಲದೆ; ಅಹುದು= ಆಗುವುದು; ಅಲ್ಲದೆ=ಹೊರತುಪಡಿಸಿ;

ಸಿಹಿಯಾಗಬಲ್ಲುದೆ ಕಹಿಯಹುದಲ್ಲದೆ=ಕಹಿಯಾಗುವುದೇ ಹೊರತು ಸಿಹಿಯಾಗುವುದಿಲ್ಲ; ಕಲ್ಪನೆಯ ಪ್ರಸಂಗವೊಂದನ್ನು ರೂಪಕವಾಗಿ ಚಿತ್ರಿಸಲಾಗಿದೆ. 'ಬಿತ್ತಿದಂತೆ ಬೆಳೆ' ಎಂಬ ನಾಣ್ಣುಡಿಯೊಂದು ಜನಸಮುದಾಯದಲ್ಲಿ ಬಳಕೆಯಲ್ಲಿದೆ. ಅಂತೆಯೇ ಬೇವಿನ ಬೀಜವನ್ನು ಬಿತ್ತಿ, ಅದಕ್ಕೆ ಯಾವುದೇ ಬಗೆಯ ಆರಯಿಕೆಯನ್ನು ಮಾಡಿದರೂ, ಅದರಿಂದ ಹೊರಹೊಮ್ಮುವ ಬೇವಿನ ಹಣ್ಣು ಕಹಿಯೇ ಆಗಿರುತ್ತದೆ.

ವ್ಯಕ್ತಿಯು ಯಾವುದೇ ಕೆಲಸವನ್ನು ಮಾಡುವಾಗ ಮನದಲ್ಲಿ ಒಳ್ಳೆಯ ಉದ್ದೇಶವನ್ನು ಹೊಂದಿ, ಅದನ್ನು ಒಳ್ಳೆಯ ರೀತಿಯಲ್ಲಿ ಮಾಡಿದಾಗ ಮಾತ್ರ ಒಳ್ಳೆಯದು ದೊರಕುತ್ತದೆ. ಒಳ್ಳೆಯ ಉದ್ದೇಶ ಎಂದರೆ ತಾನು ಮಾಡುವ ಕೆಲಸ ತನ್ನನ್ನು ಒಳಗೊಂಡಂತೆ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಿರಬೇಕು ಎಂಬ ಆಸೆ.

ವ್ಯಕ್ತಿಯು ಮನದಲ್ಲಿ ಕೆಟ್ಟ ಉದ್ದೇಶವನ್ನು ಹೊಂದಿ ಹೊರನೋಟಕ್ಕೆ ಅಂದ ಚೆಂದದ ಮಾತುಗಳನ್ನಾಡುತ್ತ ಮಾಡುವ ಕೆಲಸವು, ನೋಡುವುದಕ್ಕೆ ಕೇಳುವುದಕ್ಕೆ ಸುಂದರವಾಗಿದ್ದರೂ, ಅದರಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡು ಉಂಟಾಗುತ್ತದೆ ಎಂಬುದನ್ನು ಈ ರೂಪಕ ಸೂಚಿಸುತ್ತದೆ.

121. ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ
ಸಲಿಗೆ ತಪ್ಪಿದ ಬಳಿಕ ಸಲುವುದೆ ಮಾತು. (1303–119)

ಮನ್ನಣೆ=ಒಲವು ನಲಿವಿನಿಂದ ಕೂಡಿದ ಮರ್ಯಾದೆ; ತಪ್ಪು=ಇಲ್ಲವಾಗು/ ದೊರೆಯದಿರು; ತಪ್ಪಿದ=ಇಲ್ಲವಾದ; ಬಳಿಕ=ನಂತರ/ತರುವಾಯ/ಆ ಮೇಲೆ;

ಅಲ್ಲಿ+ಇರಬಹುದೆ; ಅಲ್ಲಿ=ಅಂತಹ ಕಡೆ/ಜಾಗ/ನೆಲೆ; ಇರಬಹುದೆ=ಇರಲು ಆಗುತ್ತದೆಯೇ;

ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ=ಇತರರೊಡನೆ ಹೊಂದಿದ್ದ ಒಲವು ನಲಿವಿನಿಂದ ಕೂಡಿದ ಆದರದ ಆತ್ಮೀಯವಾದ ನಂಟು ಮುರಿದುಬಿದ್ದ ನಂತರ/ಕಡಿದುಹೋದ ಮೇಲೆ, ಅಂತಹ ನೆಲೆಯಲ್ಲಿ ನೆಮ್ಮದಿಯಿಂದ ಬಾಳಲು ಆಗುತ್ತದೆಯೇ;

ಸಲಿಗೆ=ಗೆಳೆತನ/ಸದರ; ಸಲ್=ಸರಿಹೊಂದು/ಯುಕ್ತವಾಗು/ತಕ್ಕುದಾಗಿರು; ಸಲುವುದೆ=ಸರಿಹೊಂದುವುದೇ/ಸೂಕ್ತವೆನಿಸುವುದೇ; ಮಾತು=ನುಡಿ/ಸೊಲ್ಲು;

ಸಲಿಗೆ ತಪ್ಪಿದ ಬಳಿಕ ಸಲುವುದೆ ಮಾತು=ವ್ಯಕ್ತಿಗಳ ನಡುವಣ ಒಳ್ಳೆಯ ನಂಟು ಮುರಿದುಬಿದ್ದ ನಂತರ ಮತ್ತೆ ಮೊದಲಿನಂತೆ ಸರಸದ ಮಾತುಕತೆಯನ್ನಾಡಲು ಆಗುತ್ತದೆಯೇ;

ವ್ಯಕ್ತಿಗಳ ಒಲವಿನ ನಂಟಿನಲ್ಲಿ ಬಿರುಕು ಉಂಟಾದಾಗ, ಮನಸ್ಸುಗಳು ಮುರಿದುಬಿದ್ದು, ಮೊದಲಿನಂತೆ ವ್ಯವಹರಿಸಲು ಆಗುವುದಿಲ್ಲವೆಂಬ ಸಾಮಾಜಿಕ ವಾಸ್ತವವನ್ನು ಈ ನುಡಿಗಳು ಸೂಚಿಸುತ್ತಿವೆ.

122. ಮಾತಿನಲ್ಲಿ ದಿಟ ಮನದಲ್ಲಿ ಸಟೆ ಬೇಡವಯ್ಯಾ
ಮನ ವಚನ ಕಾಯ ಒಂದಾಗದಿದ್ದರೆ
ಕೂಡಲಸಂಗಯ್ಯನೆಂತೊಲಿವನಯ್ಯಾ. (1374–127)

ಮಾತಿನ+ಅಲ್ಲಿ; ಮಾತು=ನುಡಿ/ಸೊಲ್ಲು; ದಿಟ=ನಿಜ/ವಾಸ್ತವ; ಮನದ+ಅಲ್ಲಿ; ಮನ=ಮನಸ್ಸು/ಚಿತ್ತ; ಸಟೆ=ಸುಳ್ಳು/ಇರುವುದನ್ನು ಇಲ್ಲವೆಂದು, ಇಲ್ಲದ್ದನ್ನು ಇದೆಯೆಂದು ಹೇಳುವುದು; ಬೇಡ+ಅಯ್ಯಾ; ಬೇಡ=ಸಲ್ಲದು/ಕೂಡದು/ಬೇಕಾಗಿಲ್ಲ;

ಮಾತಿನಲ್ಲಿ ದಿಟ ಮನದಲ್ಲಿ ಸಟೆ=ವ್ಯಕ್ತಿಯು ಬಹಿರಂಗದಲ್ಲಿ ಇತರರ ಮುಂದೆ ಆಡುತ್ತಿರುವ ಮಾತುಗಳಲ್ಲಿ ಸತ್ಯ,ನೀತಿ, ನ್ಯಾಯದ ಸಂಗತಿಗಳು ಕೂಡಿರುತ್ತವೆ. ಆದರೆ ಅದೇ ಸಮಯದಲ್ಲಿ ಆತನ ಅಂತರಂಗದ ಮನದಲ್ಲಿ ಜನಸಮುದಾಯಕ್ಕೆ ಕೇಡನ್ನು ಬಗೆಯುವ ಕಪಟತನದ ಆಲೋಚನೆಗಳೇ ತುಂಬಿರುತ್ತವೆ/ ವ್ಯಕ್ತಿಯು ಬಾಯಲ್ಲಿ ಒಳ್ಳೆಯದನ್ನು ಹೇಳುತ್ತ, ಮನದೊಳಗೆ ಕೆಟ್ಟದ್ದನ್ನು ಚಿಂತಿಸುತ್ತಿರುವುದು; ಬೇಡವಯ್ಯಾ=ಹೊರಗೊಂದು ಒಳಗೊಂದು ಬಗೆಯ ವರ್ತನೆಯು ಸರಿಯಲ್ಲ;

ವಚನ=ಮಾತು/ನುಡಿ/ಸೊಲ್ಲು; ಕಾಯ=ದೇಹ/ಶರೀರ/ಮಯ್; ಒಂದು+ಆಗದೆ+ಇದ್ದರೆ; ಒಂದಾಗು=ಜತೆಗೂಡು/ಒಂದಾಗಿ ಸೇರು; ಒಂದಾಗದಿದ್ದರೆ=ಜತೆಗೂಡದಿದ್ದರೆ/ಬೇರೆ ಬೇರೆಯಾದರೆ;

ಮನ ವಚನ ಕಾಯ ಒಂದಾಗುವುದು=ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಮಾಡುವ ಆಲೋಚನೆ, ಬಹಿರಂಗದಲ್ಲಿ ಇತರರೊಡನೆ ಆಡುವ ಮಾತು, ದಿನನಿತ್ಯದ ಜೀವನದಲ್ಲಿ ಮಾಡುವ ಕೆಲಸ–ಇವು ಮೂರು ಒಂದೇ ಆಗಿರುವುದು. ಅಂದರೆ ವ್ಯಕ್ತಿಯ ಚಿಂತನೆ, ಮಾತು ಮತ್ತು ಕೆಲಸಗಳು ಒಳಿತಿನ ಸಂಗತಿಗಳಿಂದ ಕೂಡಿರಬೇಕು;

ಕೂಡಲಸಂಗಯ್ಯನ್+ಎಂತು+ಒಲಿವನ್+ಅಯ್ಯಾ; ಕೂಡಲಸಂಗಯ್ಯ=ಬಸವಣ್ಣನ ಮೆಚ್ಚಿನ ದೇವರು; ಎಂತು=ಹೇಗೆ ತಾನೆ/ಯಾವ ರೀತಿ; ಒಲಿ=ಮೆಚ್ಚು/ಒಪ್ಪು/ಪ್ರೀತಿಸು; ಒಲಿವನ್=ಒಲಿಯುವನು/ಮೆಚ್ಚುವನು; **ಎಂತೊಲಿವನಯ್ಯಾ**=ಹೇಗೆ ತಾನೆ ಒಲಿಯುತ್ತಾನೆ;

ಒಳ್ಳೆಯ ನಡೆನುಡಿಗಳೇ ಶಿವನೆಂದು ಮತ್ತು ಅವನ್ನು ದಿನನಿತ್ಯದ ಬದುಕಿನಲ್ಲಿ ಆಚರಿಸುವುದೇ ಶಿವನ ಪೂಜೆಯೆಂದು ಶಿವಶರಣಶರಣೆಯರು ನಂಬಿದ್ದರು. ಆದ್ದರಿಂದಲೇ ಒಳ್ಳೆಯ ಮನಸ್ಸು, ಒಳ್ಳೆಯ ಮಾತು, ಒಳ್ಳೆಯ ಕೆಲಸವನ್ನು ಮಾಡದ ವ್ಯಕ್ತಿಯನ್ನು ಕೂಡಲಸಂಗಯ್ಯನು ಒಪ್ಪಿಕೊಳ್ಳುವುದಿಲ್ಲವೆಂದು ವಚನಕಾರನು ಹೇಳಿದ್ದಾನೆ.

123. ಮೃದುವಚನವೆ ಸಕಲ ಜಪಂಗಳಯ್ಯಾ
ಮೃದುವಚನವೆ ಸಕಲ ತಪಂಗಳಯ್ಯಾ. (244–29)

ಮೃದು=ಮೆತ್ತಗಿರುವ/ಇಂಪಾದ; ವಚನ= ಮಾತು/ಸೊಲ್ಲು/ನುಡಿ;

ಮೃದು ವಚನ=ವ್ಯಕ್ತಿಯು ಆಡುವ ಮಾತು ಅದನ್ನು ಕೇಳುವವನ ಮನಸ್ಸಿನಲ್ಲಿ ಅರಿವು, ಒಲವು, ನಂಬಿಕೆ, ಆನಂದವನ್ನು ಮೂಡಿಸುವಂತಿರಬೇಕು. ಆಡುವ ಮಾತುಗಳು ಯಾವುದೇ ರೀತಿಯಲ್ಲಿಯೂ ಕೇಳುಗನ ಮನಸ್ಸನ್ನು ಗಾಸಿಗೊಳಿಸಿ ಸಂಕಟ/ನೋವು/ಅಪಮಾನದಿಂದ ಮುದುಡಿಕೊಳ್ಳುವಂತೆ ಇರಬಾರದು;

ಸಕಲ=ಎಲ್ಲವನ್ನು ಒಳಗೊಂಡಿರುವುದು/ಸಮಗ್ರವಾದುದು; ಜಪಂಗಳ್+ಅಯ್ಯಾ; ಜಪ=ದೇವರನ್ನು ಮಹಿಮೆಯನ್ನು ಕೊಂಡಾಡುವ ನುಡಿಗಳನ್ನು ಮತ್ತೆ ಮತ್ತೆ ನಿರಂತರವಾಗಿ ಉಚ್ಚರಿಸುತ್ತಿರುವುದು; ಜಪಂಗಳ್=ಜಪಗಳು; ತಪಂಗಳ್+ಅಯ್ಯಾ; ತಪ=ದೇವರ ಕರುಣೆಗೆ ಪಾತ್ರರಾಗುವುದಕ್ಕಾಗಿ ದೇವರ

ಹೆಸರನ್ನು ಒಂದೇ ಸಮನೆ ಬಾಯಲ್ಲಿ ಉಚ್ಚರಿಸುತ್ತ ಇಲ್ಲವೇ ಮನದಲ್ಲಿ ನೆನಪಿಸಿಕೊಳ್ಳುತ್ತ ಅನ್ನ ಆಹಾರಗಳನ್ನು ತೊರೆದು ದೇಹವನ್ನು ಬಹುಬಗೆಯ ದಂಡನೆಗಳಿಗೆ ಗುರಿಮಾಡುವುದು;

ಜೀವನದ ವ್ಯವಹಾರಗಳಲ್ಲಿ ಸಹಮಾನವರೊಡನೆ ಜತೆಗೂಡಿ ಬಾಳುವಾಗ ವ್ಯಕ್ತಿಯು ಆಡುವ ನುಡಿಗಳು ಬೇರೆಯವರನ್ನು ಮುದಗೊಳಿಸು ವಂತಿರಬೇಕೆ ಹೊರತು ನೋಯಿಸಿ ಗಾಸಿಗೊಳಿಸುವಂತಿರಬಾರದು. ವ್ಯಕ್ತಿಯು ಆಡುವ ಒಳ್ಳೆಯ ಮಾತುಗಳು ಎಲ್ಲಾ ಬಗೆಯ ಜಪತಪಗಳ ಆಚರಣೆಗೆ ಸಮನಾದುದು ಎಂಬ ನಿಲುವನ್ನು ಶಿವಶರಣಶರಣೆಯರು ಹೊಂದಿದ್ದರು.

124. ಲೋಕದ ಡಂಬಕರ ಮಾತು ಬೇಡ.(608–56)

ಲೋಕ=ಜಗತ್ತು/ಪ್ರಪಂಚ; ಡಂಬಕ=ಮೋಸಗಾರ/ವಂಚಕ; ಮಾತು= ನುಡಿ/ ಸೊಲ್ಲು; **ಲೋಕದ ಡಂಬಕರ ಮಾತು**=ದೇವರು/ದರ್ಮದ ಹೆಸರಿನಲ್ಲಿ ನೂರೆಂಟು ಬಗೆಯ ಕಟ್ಟುಕತೆಗಳನ್ನು ಕಟ್ಟಿ, ಜನರನ್ನು ಮಾತಿನಿಂದಲೇ ಮರಳುಮಾಡಿ, ಜನರನ್ನು ವಂಚಿಸುವವರು ಆಡುವ ಮಾತು;

ಬೇಡ=ಬೇಕಾಗಿಲ್ಲ/ಅಗತ್ಯವಿಲ್ಲ;

ವಂಚಕರ/ಕಪಟಿಗಳ ಮಾತುಗಳಿಗೆ ಮರುಳಾಗಬಾರದು. ನಿಜ ಜೀವನದಲ್ಲಿ ಕಾರ್ಯರೂಪಕ್ಕೆ ಬಾರದ ಬರಿಮಾತುಗಳನ್ನು ನಂಬಬಾರದು.

125. ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ ಮನದ ತಾಮಸ ಬಿಡದು ಮನದ ಕಪಟ ಬಿಡದು. (282–32)

ಲೋಕ+ಉಪಚಾರಕ್ಕೆ; ಲೋಕ=ಜಗತ್ತು/ಪ್ರಪಂಚ; ಉಪಚಾರ=ಸೇವೆ/ ಇತರರಿಗೆ ಅನುಕೂಲವಾಗುವ ಕೆಲಸವನ್ನು ಮಾಡುವುದು; ಮಜ್ಜನಕ್ಕೆ+ ಎರೆವೆನ್+ಅಯ್ಯಾ; ಮಜ್ಜನ=ಸ್ನಾನ; ಎರೆ=ಸುರಿ/ಹಾಕು/ಹೊಯ್ಯು; ಎರೆವೆನ್= ಹಾಕುತ್ತೇನೆ; **ಮಜ್ಜನಕ್ಕೆರೆವೆನಯ್ಯಾ**= ದೇವರ ವಿಗ್ರಹವೆಂದು ನಂಬಿರುವ ಲಿಂಗದ ಮೇಲೆ ನೀರು/ಹಾಲು/ಜೇನುತುಪ್ಪ ಮುಂತಾದ ದ್ರವವನ್ನು ಸುರಿದು, ಲಿಂಗಕ್ಕೆ ಜಳಕವನ್ನು ಮಾಡಿಸುತ್ತೇನೆ;

‘ಲೋಕೋಪಚಾರ’ ಎಂಬುದು ಒಂದು ನುಡಿಗಟ್ಟಾಗಿ ಬಳಕೆಯಾಗಿದೆ. ದೇವರಿಗೆ ಉಪಚಾರ ಮಾಡುವುದರ ಮೂಲಕ, ಆತನ ಕರುಣೆಗೆ ಪಾತ್ರರಾಗಲು ಲೋಕದಲ್ಲಿ ಜನರು ದೇವರಿಗೆ ಮಜ್ಜನದ ಸೇವೆಯನ್ನು ಮಾಡುತ್ತಿರುವಂತೆ ನಾನು ಕೂಡ ದಿನನಿತ್ಯ ಲಿಂಗಕ್ಕೆ ಮಜ್ಜನವನ್ನು ಮಾಡಿಸುತ್ತಿದ್ದೇನೆ.

ಮನ=ಮನಸ್ಸು/ಚಿತ್ತ; ತಾಮಸ=ಕತ್ತಲೆ. ಈ ಪದವನ್ನು ಒಂದು ರೂಪಕವಾಗಿ ಬಳಸಿದಾಗ ‘ಅರಿವು ಇಲ್ಲದಿರುವುದು/ಜಡತನ/ಕೆಟ್ಟದ್ದು’ ಎಂಬ ತಿರುಳು ದೊರೆಯುತ್ತದೆ; ಮನದ ತಾಮಸ=ಮನದಲ್ಲಿ ತುಡಿಯುವ ಕೆಟ್ಟ ಒಳಮಿಡಿತಗಳು. ಬಿಡು=ತೊರೆ/ತ್ಯಜಿಸು; ಬಿಡದು=ಬಿಟ್ಟುಹೋಗುವುದಿಲ್ಲ/ಬಿಡುತ್ತಿಲ್ಲ;

ಮನದ ತಾಮಸ ಬಿಡದು=ವ್ಯಕ್ತಿಯ ಮನದೊಳಗೆ ನೂರಾರು ಬಗೆಯ ಕೆಟ್ಟ ಆಲೋಚನೆಗಳು ತುಂಬಿಕೊಂಡಿವೆ. ಅವನ್ನು ಹತ್ತಿಕ್ಕಿಕೊಂಡು ಬಾಳಲು ಆಗುತ್ತಿಲ್ಲ;

ಕಪಟ=ವಂಚನೆ/ಮೋಸ; **ಮನದ ಕಪಟ ಬಿಡದು**=ಇತರರನ್ನು ವಂಚಿಸಿ, ತಾನು ಹೆಚ್ಚಿನದನ್ನು ಪಡೆಯಬೇಕೆಂಬ ಒಳಮಿಡಿತಗಳು ವ್ಯಕ್ತಿಯ ಮನಸ್ಸಿನಿಂದ ದೂರಸರಿಯುತ್ತಿಲ್ಲ;

ಕೇವಲ ಆಚರಣೆಗಳಿಂದ ಯಾವುದೇ ಪ್ರಯೋಜನವಿಲ್ಲ. ದೇವರನ್ನು ಪೂಜಿಸುವ ವ್ಯಕ್ತಿಯು ಒಳ್ಳೆಯ ನಡೆನುಡಿಗಳನ್ನು ಹೊಂದಿದವನಾಗಿರಬೇಕು ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ.

126. ವ್ಯಾಧನೊಂದು ಮೊಲವ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ
(158–23)

ವ್ಯಾಧನ್+ಒಂದು; ವ್ಯಾಧ=ಬೇಡ/ಬೇಟೆಗಾರ; ಮೊಲ=ಒಂದು ಪ್ರಾಣಿ; ತಂದಡೆ=ತಂದರೆ; **ವ್ಯಾಧನೊಂದು ಮೊಲವ ತಂದಡೆ**=ಬೇಡನು ಮೊಲ ವೊಂದನ್ನು ಬೇಟೆಯಾಡಿ ಕೊಂದು, ಅದನ್ನು ಮಾರಲೆಂದು ಜನವಸತಿಯಿರುವ ಕಡೆಗೆ ಬಂದು ಕೂಗಿದಾಗ;

ಸಲ್=ತಕ್ಕುದಾಗಿರು/ಸರಿಹೊಂದು; ಸಲುವ=ತಕ್ಕುದಾದ/ಯೋಗ್ಯವಾದ; ಹಾಗ=ಒಂದು ನಾಣ್ಯ/ಹನ್ನೆರಡನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ಒಂದು ನಾಣ್ಯದ ಹೆಸರು; ಬಿಲಿವರ್+ಅಯ್ಯಾ; ಬಿಲಿ=ಕೊಂಡುಕೊಳ್ಳುವುದು/ಬೆಲೆಕೊಟ್ಟು

ಪಡೆಯುವುದು/ಕ್ರಯಕ್ಕೆ ತೆಗೆದುಕೊಳ್ಳುವುದು;

ಸಲುವ ಹಾಗಕ್ಕೆ ಬಿಲಿವರಯ್ಯಾ=ಮೊಲಕ್ಕೆ ತಗುಲುವ ಬೆಲೆಯನ್ನು ಕಟ್ಟಿ, ನಾಣ್ಯವನ್ನು ನೀಡಿ ಕೊಂಡುಕೊಳ್ಳುತ್ತಾರೆ;

ನೆಲನ್+ಆಳ್ವನ; ನೆಲ=ಭೂಮಿ/ನಾಡು/ರಾಜ್ಯ; ಆಳ್=ಆಡಳಿತವನ್ನು ಮಾಡು; ನೆಲನಾಳ್ವನ್=ರಾಜ/ದೊರೆ; ಹೆಣನ್+ಎಂದಡೆ; ಹೆಣ=ಜೀವವಿಲ್ಲದ ದೇಹ/ಶರೀರ; ಎಂದಡೆ=ಎಂದು ಹೇಳಿದರೆ/ಎಂದು ಕೂಗಿದರೆ; **ನೆಲನಾಳ್ವನ ಹೆಣನೆಂದಡೆ**= ಜನ ವಸತಿಯಿರುವ ಕಡೆಗೆ ಬಂದು ದೊರೆಯ ಹೆಣವನ್ನು ಮಾರಾಟಕ್ಕಿಟ್ಟು ಕೂಗಿ ಕರೆದರೆ;

ಒಂದು+ಅಡಕೆಗೆ; ಅಡಕೆ=ಒಂದು ಬಗೆಯ ಕಾಯಿ; ಕೊಂಬವರ್+ಇಲ್ಲ; ಕೊಳ್=ತೆಗೆದುಕೊ/ಕ್ರಯಕ್ಕೆ ಪಡೆ/ಸ್ವೀಕರಿಸು; ಕೊಂಬವರ್=ಕೊಂಡುಕೊಳ್ಳುವವರು/ ಹಣ ಕೊಟ್ಟು ಪಡೆಯುವವರು; ಇಲ್ಲ=ಯಾರೊಬ್ಬರು ಮುಂದೆ ಬಾರರು; ಕೊಂಬವರಿಲ್ಲ=ಕೊಂಡುಕೊಳ್ಳುವವರು ಯಾರೂ ಇಲ್ಲ; **ಅಡಕೆಗೆ ಕೊಂಬವರ್**= ಒಂದು ವಸ್ತುವಿಗೆ ಪ್ರತಿಯಾಗಿ ಮತ್ತೊಂದು ವಸ್ತುವನ್ನು ಕೊಟ್ಟು, ಪರಸ್ಪರ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದ ರೀತಿಯು ಸಮಾಜದಲ್ಲಿ ಕೆಲವು ಕಾಲ ಚಾಲ್ತಿಯಲ್ಲಿತ್ತು. ತಮ್ಮಲ್ಲಿರುವ ಅಡಕೆಯನ್ನು ಕೊಟ್ಟು ತಮಗೆ ಬೇಕಾದ ವಸ್ತುವನ್ನು ಕೊಂಡುಕೊಳ್ಳುವುದು;

ಸತ್ತಿರುವ ಮೊಲಕ್ಕೆ ಒಂದು ಬೆಲೆಯಿದೆ. ಕಾರಣ ಅದರ ಮಾಂಸವನ್ನು ತಿನ್ನುವವರು ಅದನ್ನು ಬೆಲೆಕೊಟ್ಟು ಕೊಂಡುಕೊಳ್ಳುತ್ತಾರೆ. ಆದರೆ ಸತ್ತಿರುವ ರಾಜನ ಹೆಣಕ್ಕೆ ಬೆಲೆಯಿಲ್ಲ. ಮಾನವ ಜೀವಿಯು ಬದುಕಿದ್ದಾಗ ಮಾತ್ರ ಬೆಲೆ. ಆದ್ದರಿಂದ ಸಾಯುವುದಕ್ಕೆ ಮೊದಲು ವ್ಯಕ್ತಿಯು ತನ್ನ ಬದುಕನ್ನು ಚೆನ್ನಾಗಿ ನಡೆಸುವುದರ ಜತೆಗೆ ಲೋಕಕ್ಕೂ ತನ್ನಿಂದ ಪ್ರಯೋಜನವಾಗುವಂತಹ ನಡೆನುಡಿಯನ್ನು ಹೊಂದಿರಬೇಕೆಂಬ ಸಂಗತಿಯನ್ನು ಈ ಪ್ರಸಂಗವು ಸೂಚಿಸುತ್ತಿದೆ.

127. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು. (591–55)

ಸಕಲ=ಎಲ್ಲವನ್ನೂ ಒಳಗೊಂಡಿರುವುದು/ಸಮಗ್ರವಾದುದು; ಜೀವಾತ್ಮ=ವ್ಯಕ್ತಿ; ಲೇಸು=ಒಳ್ಳೆಯದು/ಹಿತಕರವಾದುದು; ಲೇಸನೆ=ಒಳ್ಳೆಯದನ್ನೇ/ಹಿತಕರ ವಾದುದನ್ನೇ; ಬಯಸು=ಕೋರು/ಹಾರಯಿಸು;

ಸಕಲ ಜೀವಾತ್ಮರಿಗೆ ಲೇಸನೆ ಬಯಸುವವರು=ಜನಸಮುದಾಯದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಒಳ್ಳೆಯದನ್ನೇ ಬಯಸುವವರು. ಅಂದರೆ ವರ್ಣ/ಜಾತಿಗಳ ಹೆಸರಿನಲ್ಲಿ ಜನಸಮುದಾಯವನ್ನು ಮೇಲು/ಕೀಳು ಎಂದು ವಿಂಗಡಿಸದೆ, ಎಲ್ಲರನ್ನು ಸಮಾನವಾಗಿ ಕಾಣುತ್ತ, ಪ್ರತಿಯೊಬ್ಬರಿಗೂ ಅನ್ನ, ಬಟ್ಟೆ, ವಸತಿ, ವಿದ್ಯೆ, ಕೆಲಸ, ಆರೋಗ್ಯ ದೊರೆಯುವಂತಾಗಿ ಎಲ್ಲರೂ ಜತೆಗೂಡಿ ನೆಮ್ಮದಿಯಿಂದ ಬಾಳುವಂತಾಗಬೇಕು ಎಂಬ ನಿಲುವನ್ನು ಉಳ್ಳವರು; ಕೂಡಲಸಂಗ=ಈಶ್ವರ/ಬಸವಣ್ಣನ ಮೆಚ್ಚಿನ ದೇವರು;

ಶರಣ=ಒಳ್ಳೆಯ ನಡೆನುಡಿಗಳಿಂದ ತನ್ನ ಬದುಕನ್ನು ರೂಪಿಸಿಕೊಂಡು, ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು/ಶಿವನನ್ನು ಪೂಜಿಸುವವನು; ಕುಲ=ಜಾತಿ/ಮತ/ವಂಶ/ಮನೆತನ; ಕುಲಜ=ಕುಲದಲ್ಲಿ ಹುಟ್ಟಿದವರು/ಮಾನವ ಸಮುದಾಯಕ್ಕೆ ಸೇರಿದವರು;

ನಮ್ಮ ಕೂಡಲಸಂಗನ ಶರಣರೆ ಕುಲಜರು=ಕುಲದ ಹೆಸರಿನಲ್ಲಿ ಮೇಲು/ಕೀಳು ಎಂಬ ತಾರತಮ್ಯದಿಂದ ರಚನೆಗೊಂಡಿದ್ದ ಸಮಾಜದ ಕಟ್ಟಲೆಯನ್ನು ನಿರಾಕರಿಸಿ, ಒಳ್ಳೆಯ ನಡೆನುಡಿಯುಳ್ಳ ವ್ಯಕ್ತಿಗಳೆಲ್ಲರೂ ಮಾನವಸಮುದಾಯವೆಂಬ ಒಂದೇ ಕುಲಕ್ಕೆ ಸೇರಿದವರು ಎಂಬ ಶಿವಶರಣಶರಣೆಯರ ನಿಲುವನ್ನು ಈ ನುಡಿಗಳು ಸೂಚಿಸುತ್ತಿವೆ.

128. ಸತ್ಯವಿಲ್ಲದವಂಗೆ ನಿತ್ಯನೇಮವೇಕೆ?. (631–59)

ಸತ್ಯ+ಇಲ್ಲದ+ಅವಂಗೆ; ಸತ್ಯ=ನಿಜ/ದಿಟ/ವಾಸ್ತವ; ಇಲ್ಲದ=ಇಲ್ಲದಿರುವ; ಅವಂಗೆ=ಅವನಿಗೆ;

ಸತ್ಯವಿಲ್ಲದವಂಗೆ=ತನ್ನ ದಿನನಿತ್ಯದ ವ್ಯವಹಾರಗಳಲ್ಲಿ ಸತ್ಯದ ನಡೆನುಡಿಯಿಂದ ಬಾಳದವನಿಗೆ; ಸತ್ಯದ ನಡೆನುಡಿ ಎಂದರೆ ವ್ಯಕ್ತಿಯು ಆಡುವ ಮಾತು ಮತ್ತು ಮಾಡುವ ಕೆಲಸಗಳು ತನ್ನ ಹಿತವನ್ನು ಕಾಯುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡಬೇಕು;

ನಿತ್ಯ=ಪ್ರತಿದಿನವೂ; ನೇಮ+ಏಕೆ; ನೇಮ=ವ್ರತ ದೇವರ ಕರುಣೆಗೆ ಪಾತ್ರರಾಗಲು ಮಾಡುವ ಜಪ/ತಪ/ಪೂಜೆ/ಉಪವಾಸ/ಜಾಗರಣೆ ಮುಂತಾದ ಆಚರಣೆ. ಈ ಆಚರಣೆಯಲ್ಲಿ ತೊಡಗಿದಾಗ ವ್ಯಕ್ತಿಯು ಹೀಗೆಯೆ ಇರಬೇಕು/

ಮಾಡಬೇಕು/ನಡೆದುಕೊಳ್ಳಬೇಕು ಎಂಬ ಕಟ್ಟಲೆಯಿರುತ್ತದೆ; ಏಕೆ=ಯಾವುದಕ್ಕೆ ಬೇಕು/ಪ್ರಯೋಜನವೇನು;

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡದ ವ್ಯಕ್ತಿಯು ಮಾಡುವ ಯಾವುದೇ ಬಗೆಯ ದೇವರ ಪೂಜೆಯಿಂದ ಇಲ್ಲವೇ ಆಚರಣೆಯಿಂದ ಏನೊಂದು ಪ್ರಯೋಜನವಿಲ್ಲ.

129 ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ
ದೂರ ದುರ್ಜನರ ಸಂಗವದು ಭಂಗವಯ್ಯಾ (134–21)

ಸಾರ=ಒಳ್ಳೆಯದು/ಉತ್ತಮವಾದುದು; ಸಜ್ಜನ=ಒಳ್ಳೆಯ ನಡೆ ನುಡಿಯುಳ್ಳ ವ್ಯಕ್ತಿ; ಸಂಗ=ಗೆಳೆತನ/ಒಡನಾಟ; ಲೇಸು=ಒಳ್ಳೆಯದು/ಹಿತಕರವಾದುದು; ಕಂಡ+ಅಯ್ಯಾ; ಕಾಣು=ನೋಡು/ತಿಳಿ/ಅರಿ;

ಸಜ್ಜನರ ಸಂಗ ಲೇಸು ಕಂಡಯ್ಯಾ=ಒಳ್ಳೆಯ ನಡೆನುಡಿಯುಳ್ಳವರ ಜತೆಗಿನ ಗೆಳೆತನ/ವ್ಯವಹಾರ ವ್ಯಕ್ತಿಗೆ ಜೀವನದಲ್ಲಿ ಒಳಿತಿನ ದಾರಿಯಲ್ಲಿ ಸಾಗುವಂತೆ ಮಾಡಿ, ಒಲವು ನಲಿವು ಆನಂದವನ್ನು ನೀಡುತ್ತದೆ.

ದೂರ=ಹಾನಿಯನ್ನುಂಟುಮಾಡುವುದು/ಕೆಟ್ಟದ್ದು; ದುರ್ಜನ=ಕೆಟ್ಟ ನಡೆನುಡಿಯುಳ್ಳ ವ್ಯಕ್ತಿ; ಸಂಗ+ಅದು; ಅದು=ಆ ನಂಟು/ಅಂತಹ ಒಡನಾಟ; ಭಂಗ+ಅಯ್ಯಾ; ಭಂಗ=ಅಪಮಾನ/ಸೋಲು/ನಾಶ;

ದುರ್ಜನರ ಸಂಗವದು ಭಂಗವಯ್ಯಾ=ಕೆಟ್ಟ ನಡೆನುಡಿಯುಳ್ಳವರ ಒಡನಾಟ/ವ್ಯವಹಾರವು ವ್ಯಕ್ತಿಗೆ ಎಂದಿದ್ದರೂ ಹಾನಿ/ಕೇಡು/ಸಾವು/ನೋವನ್ನು ತರುತ್ತದೆ ಮತ್ತು ಸಮಾಜದಲ್ಲಿ ನಾಲ್ಕು ಮಂದಿಯ ಮುಂದೆ ಅಪಮಾನದಿಂದ ತಲೆತಗ್ಗಿಸುವಂತಹ ಸನ್ನಿವೇಶ ಎದುರಾಗುತ್ತದೆ.

ಆದ್ದರಿಂದ ಕೆಟ್ಟ ನಡೆನುಡಿಯುಳ್ಳವರಿಂದ ದೂರವಿರಬೇಕು. ಒಳ್ಳೆಯ ನಡೆನುಡಿಯುಳ್ಳವರ ಹತ್ತಿರವಿರಬೇಕು.

130. ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ ಅಯ್ಯಾ? (127–20)

ಸ್ನೇಹ=ಗೆಳೆತನ/ವ್ಯಕ್ತಿಗಳ ನಡುವೆ ಪರಸ್ಪರ ಒಳಿತನ್ನು ಬಯಸುವ ಮತ್ತು

ಒಳಿತನ್ನು ಮಾಡುವ ಒಳಮಿಡಿತಗಳನ್ನು ಮನಸ್ಸಿನಲ್ಲಿ ಹೊಂದಿರುವುದು; ತಪ್ಪು=ಹಾಳಾಗು/ಕೆಡು; ಠಾವಿನ+ಅಲ್ಲಿ; ಠಾವು=ಜಾಗ/ನೆಲೆ;

ಗುಣ+ಅನ್+ಅರಸುವರೆ; ಗುಣ=ನಡತೆ/ವಿವೇಕ/ಸಜ್ಜನಿಕೆ/ಒಳ್ಳೆಯತನ; ಅನ್=ಅನ್ನು; ಅರಸು=ಹುಡುಕು; ಅರಸುವರೆ=ಹುಡುಕುತ್ತಾರೆಯೆ/ಕಾಣಲು ಪ್ರಯತ್ನಿಸುತ್ತಾರೆಯೆ;

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ ಅಯ್ಯಾ=ಇಬ್ಬರು ವ್ಯಕ್ತಿಗಳ ಮನಸ್ಸನ್ನು ಒಲವು ನಲಿವು ನಂಬಿಕೆಯಿಂದ ಪರಸ್ಪರ ಬೆಸೆದಿದ್ದ ಗೆಳೆತನವು ಮುರಿದು ಬಿದ್ದಾಗ, ಅವರ ನಡುವಣ ಒಡನಾಟದಲ್ಲಿ ಒಳ್ಳೆಯ ನಡೆನುಡಿಗಳನ್ನು ಮತ್ತೆ ಕಾಣಲು ಆಗುವುದಿಲ್ಲ. ಏಕೆಂದರೆ ಇಬ್ಬರಲ್ಲಿ ಯಾರಾದರೊಬ್ಬರು ಒಲವಿನ ಮತ್ತು ನಂಬಿಕೆಯ ನಡೆನುಡಿಗಳಿಗೆ ದ್ರೋಹವನ್ನು ಬಗೆದಿರುತ್ತಾರೆ.

131. ಹರಿವ ಹಾವಿಂಗಂಜೆ ಉರಿಯ ನಾಲಗೆಗಂಜೆ ಸುರಗಿಯ ಮೊನೆಗಂಜೆ ಒಂದಕ್ಕಂಜುವೆ ಒಂದಕ್ಕಳುಕುವೆ ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ. (447–43)

ಹರಿ=ಕಚ್ಚು/ಕಡಿ; ಹಾವಿಂಗೆ+ಅಂಜೆ; ಹಾವಿಂಗೆ=ಹಾವಿಗೆ; ಅಂಜು=ಹೆದರು/ ಪುಕ್ಕಲುಗೊಳ್ಳು; ಅಂಜೆ=ಹೆದರುವುದಿಲ್ಲ; **ಹರಿವ ಹಾವಿಂಗಂಜೆ**=ಕಚ್ಚಿದಾಗ ನಂಜನ್ನು ಕಾರುವ ಹಾವಿಗೆ ಹೆದರುವುದಿಲ್ಲ;

ಉರಿ=ಬೆಂಕಿ/ಬೆಂಕಿಯ ಜ್ವಾಲೆ; ನಾಲಿಗೆಗೆ+ಅಂಜೆ; **ಉರಿಯ ನಾಲಗೆ**= ಬೆಂಕಿಯು ದಗದಗನೆ ಹತ್ತಿ ಉರಿಯುತ್ತಿರುವಾಗ ಸುತ್ತಮುತ್ತ ಹಬ್ಬುವ ಜ್ವಾಲೆ; **ಉರಿಯ ನಾಲಿಗೆಗಂಜೆ**=ಸುಟ್ಟುಬೂದಿ ಮಾಡುವ ಬೆಂಕಿಗೆ ಹೆದರುವುದಿಲ್ಲ;

ಸುರಗಿ=ಚೂರಿ/ಸಣ್ಣ ಕತ್ತಿ; ಮೊನೆಗೆ+ಅಂಜೆ; ಮೊನೆ=ಚೂಪಾದ ತುದಿ; **ಸುರಗಿಯ ಮೊನೆಗಂಜೆ**=ತಿವಿತಕ್ಕೆ ಒಳಗಾದಾಗ ಗಳಿಗೆ ಮಾತ್ರದಲ್ಲಿ ಸಾವಿಗೆ ದೂಡುವ ಚೂರಿಯ ಮೊನೆಗೆ ಅಂಜುವುದಿಲ್ಲ;

ಒಂದಕ್ಕೆ+ಅಂಜುವೆ; ಅಂಜುವೆ=ಹೆದರುತ್ತೇನೆ/ಹಿಂಜರಿಯುತ್ತೇನೆ; **ಒಂದಕ್ಕಂಜುವೆ**=ಒಂದು ಕೆಲಸವನ್ನು ಮಾಡಲು ಹೆದರುತ್ತೇನೆ;

ಒಂದಕ್ಕೆ+ಅಳುಕುವೆ; ಅಳುಕು=ಹೆದರು/ನಡುಗು/ತತ್ತರಿಸು; ಅಳುಕುವೆ=

ಹೆದರಿಕೆಯಿಂದ ತತ್ತರಿಸುತ್ತ ನಡುಗುತ್ತೇನೆ; **ಒಂದಕ್ಕಳುಕುವೆ**=ಒಂದು ಕೆಲಸವನ್ನು ಮಾಡಲು ನಡುಗುತ್ತೇನೆ;

ಪರ=ಅನ್ಯ/ಬೇರೆಯ; ಸ್ತ್ರೀ=ಹೆಂಗಸು; ಪರಸ್ತ್ರೀ=ಬೇರೆಯವನ ಮಡದಿ/ ಬೇರೆಯ ಹೆಂಗಸು; ಪರಧನ+ಎಂಬ+ಈ; ಧನ= ಸಂಪತ್ತು/ಆಸ್ತಿಪಾಸ್ತಿ/ಒಡವೆ ವಸ್ತು/ಹಣಕಾಸು; ಪರಧನ=ಬೇರೆಯವರಿಗೆ ಸೇರಿದ ಸಂಪತ್ತು;

ಜೂಬಿಂಗೆ+ಅಂಜುವೆ; ಜೂಬು=ದೆವ್ವ/ವಯಸ್ಸು ತುಂಬುವುದಕ್ಕೆ ಮುಂಚೆ ರೋಗರುಜಿನಗಳಿಂದ/ಅವಗಡಗಳಿಂದ ಸತ್ತವರು ದೆವ್ವಗಳಾಗುತ್ತಾರೆ ಎಂಬ ಕಲ್ಪನೆಯು ಜನಮನದಲ್ಲಿದೆ. ವಾಸ್ತವದಲ್ಲಿ ದೆವ್ವ ಎಂಬುದು ಇಲ್ಲ; ಜೂಬಿಂಗೆ=ದೆವ್ವಕ್ಕೆ;

ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ=ಬೇರೆಯವರ ಮಡದಿ ಮತ್ತು ಬೇರೆಯವರ ಸಂಪತ್ತನ್ನು ದೆವ್ವವೆಂದು ಕರೆಯಲಾಗಿದೆ. ದೆವ್ವವನ್ನು ಕೇಡಿಗೆ/ ದುರಂತಕ್ಕೆ/ಹಾನಿಗೆ ಒಂದು ರೂಪಕವಾಗಿ ಬಳಸಲಾಗಿದೆ. ದೆವ್ವ ತಾನು ಮೆಟ್ಟಿಕೊಂಡವರನ್ನು ಬಲಿ ತೆಗೆದುಕೊಳ್ಳುವಂತೆಯೇ ಬೇರೆಯವರ ಮಡದಿ ಮತ್ತು ಸಂಪತ್ತಿಗೆ ಹಂಬಲಿಸಿದವನು ಸಾವು ನೋವುಗಳಿಗೆ ಗುರಿಯಾಗುತ್ತಾನೆ. ಆದ್ದರಿಂದ ಇಂತಹ ನೀಚ ಕೆಲಸಗಳನ್ನು ತಾನು ಮಾಡುವುದಿಲ್ಲವೆಂದು ವ್ಯಕ್ತಿಯು ತೀರ್ಮಾನಿಸಿದ್ದಾನೆ.

132. ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು ಸರ್ಪದಷ್ಟವಾದಡೆಯೂ ಸಾಯರು ನಿಶ್ಶಂಕಿತರಾದವರು.

(772–70)

ಹುತ್ತ=ಗೆಜ್ಜಲು ಹುಳುಗಳು ಕಟ್ಟುವ ಬಿಲಗಳಿಂದ ಕೂಡಿದ ಮಣ್ಣಿನ ಗೂಡು. ಇದನ್ನು ಹಾವು ತನ್ನ ವಾಸದ ನೆಲೆಯನ್ನಾಗಿ ಮಾಡಿಕೊಂಡಿರುತ್ತದೆ; ಮೇಲಣ=ಮೇಲುಗಡೆಯಿರುವ; ರಜ್ಜು=ಹಗ್ಗ/ಹುರಿ; ಮುಟ್ಟು=ಸೋಕು/ತಗುಲು; ಮುಟ್ಟಿದಡೆ=ತಗುಲಿದರೆ/ಸೋಕಿದರೆ; ಸಾವು=ಜೀವ ಹೋಗುವುದು; ಸಾವರು= ಸಾಯುತ್ತಾರೆ; ಶಂಕಿತರ್+ಆದವರು; ಶಂಕೆ=ಅಂಜಿಕೆ/ಹಿಂಜರಿಕೆ/ಅಳುಕು; ಶಂಕಿತ=ಅಂಜಿಕೆಯುಳ್ಳವನು/ಪುಕ್ಕಲುತನದವನು; ಶಂಕಿತರಾದವರು= ಅಂಜಿಕೆಯುಳ್ಳವರು;

ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು=ಎಲ್ಲದಕ್ಕೂ ಹೆದರುವ ಗುಣವುಳ್ಳ ವ್ಯಕ್ತಿಗಳು ಹುತ್ತದ ಮೇಲಿರುವ ಹಗ್ಗವನ್ನೇ ಹಾವೆಂದು ತಿಳಿದು, ಹೆದರಿ ಹೆಪ್ಪಳಿಸಿಹೋಗಿ ಎದೆ ನಡುಗಿ ಸಾವನ್ನಪ್ಪುತ್ತಾರೆ. ಅವರ ಪುಕ್ಕಲುತನವೇ ಅವರ ಪಾಲಿಗೆ ಸಾವನ್ನು ತರುತ್ತದೆ;

ಸರ್ಪ+ದಷ್ಟ+ಆದಡೆಯೂ; ಸರ್ಪ=ಹಾವು/ಉರಗ; ದಷ್ಟ=ಕಚ್ಚುವುದು/ಕಡಿಯುವುದು; ಸರ್ಪದಷ್ಟ=ಹಾವು ಕಡಿಯುವುದು/ಹಾವಿನಿಂದ ಕಚ್ಚಿಸಿಕೊಂಡಿರುವುದು; ಆದಡೆಯೂ=ಆಗಿದ್ದರೂ;

ಸರ್ಪದಷ್ಟವಾದಡೆಯೂ=ಹಾವು ಕಚ್ಚಿದ್ದರೂ/ಹಾವಿನ ಕಡಿತಕ್ಕೆ ಒಳಗಾಗಿದ್ದರೂ;

ಸಾಯರು=ಸಾಯುವುದಿಲ್ಲ; ನಿಶ್ಶಂಕಿತರ್+ಆದವರು;

ನಿಶ್ಶಂಕೆ=ಹೆದರಿಕೆಯಿಲ್ಲದಿರುವುದು; ಆದವರು= ಆಗಿರುವವರು;

ಸರ್ಪದಷ್ಟವಾದಡೆಯೂ ಸಾಯರು ನಿಶ್ಶಂಕಿತರಾದವರು=ಹಾವು ಕಚ್ಚಿದ್ದರೂ ಹೆದರಿಕೆಯಿಲ್ಲದ ವ್ಯಕ್ತಿಗಳು ಮಾನಸಿಕವಾಗಿ ಕುಗ್ಗದೆ ಸಾವನ್ನು ಎದುರಿಸುತ್ತಾರೆ. ದೇಹದ ಎಲ್ಲೆಡೆಗೂ ನಂಜು ಹರಡದಂತೆ ಮಾಡುವ ಮತ್ತು ನಂಜನ್ನು ಹೊರತೆಗೆಯಲು ಇತರರು ಮಾಡುವ ಆರಯಿಕೆಗೆ/ಉಪಚಾರಕ್ಕೆ ಸಹಕರಿಸುತ್ತಾ, ಸಾವಿನಿಂದ ಪಾರಾಗುತ್ತಾರೆ. ಅವರು ಹೊಂದಿರುವ ಮಾನಸಿಕ ಗಟ್ಟಿತನ ಮತ್ತು ಕೆಚ್ಚೆದೆಯ ಒಳಮಿಡಿತವೇ ಅಂಜಿಕೆಯಿಲ್ಲದ ವ್ಯಕ್ತಿಗಳಿಗೆ ಬದುಕಿ ಉಳಿಯುವ ಕಸುವನ್ನು/ಶಕ್ತಿಯನ್ನು ನೀಡುತ್ತದೆ.

133. ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ
ಒಂದನಾಡಹೋಗಿ ಒಂಬತ್ತನಾಡುವ
ಡಂಬಕರ ಮೆಚ್ಚ ಕೂಡಲಸಂಗಯ್ಯ. (114–20)

ಪೂಸು>ಹೂಸು; ಹೂಸು=ಬಳಿದುಕೊಳ್ಳುವುದು/ಲೇಪಿಸಿಕೊಳ್ಳುವುದು; ಹೂಸಿ=ವಿಭೂತಿಯನ್ನು ಇಲ್ಲವೇ ಗಂಧದ ಕೊರಡನ್ನು ನೀರಿನಿಂದ ತೇಯ್ದಾಗ ಬರುವ ಹಸಿಯನ್ನು ಹಣೆ/ತೋಳು/ಹೊಟ್ಟೆಯ ಮೇಲೆ ಬಳಿದುಕೊಳ್ಳುವುದು; ಏನು=ಯಾವುದು; ಫಲ=ಪ್ರಯೋಜನ/ಪರಿಣಾಮ;

ಮನ=ಮನಸ್ಸು/ಚಿತ್ತ; ಮನದಲ್ಲಿ=ಮನಸ್ಸಿನಲ್ಲಿ; ಲೇಸು+ಇಲ್ಲದ+ಅನ್ನಕ್ಕ; ಲೇಸು= ಒಳ್ಳೆಯದು/ಹಿತಕರವಾದುದು; ಅನ್ನಕ್ಕ=ವರೆಗೆ/ತನಕ; ಇಲ್ಲದನ್ನಕ್ಕ=ಇಲ್ಲದಿರುವ ತನಕ;

ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ=ವ್ಯಕ್ತಿಯ ಮನದಲ್ಲಿ ತನಗೆ ಒಳಿತನ್ನು ಬಯಸುವಂತೆಯೇ ಸಹಮಾನವರಿಗೆ ಮತ್ತು ಸಮಾಜಕ್ಕೆ ಹಿತವನ್ನುಂಟುಮಾಡಬೇಕೆಂಬ ಒಳ್ಳೆಯ ಉದ್ದೇಶವಿರಬೇಕು. ಮನದಲ್ಲಿ ಒಳ್ಳೆಯ ಒಳಮಿಡಿತಗಳನ್ನು ಹೊಂದಿರದೆ, ಬಹಿರಂಗದಲ್ಲಿ ಮಯ್ಯ ಮೇಲೆ ವಿಭೂತಿಯನ್ನು ಬಳಿದುಕೊಂಡು ನಾಲ್ಕು ಜನರ ಮುಂದೆ ಶಿವಶರಣನಂತೆ ತೋರಿಸಿಕೊಳ್ಳುವುದರಿಂದ ಬಂದ ಪ್ರಯೋಜನವೇನು;

ಒಂದನ್+ಆಡ+ಹೋಗಿ; ಆಡು=ಹೇಳು/ನುಡಿ; **ಒಂದನಾಡಹೋಗಿ**= ದಿಟದ/ಒಂದು ಸಂಗತಿಯನ್ನು ಹೇಳುವ ಬದಲು; ಒಂಬತ್ತನ್+ಆಡುವ; ಒಂಬತ್ತು=ವಸ್ತು/ವ್ಯಕ್ತಿಗಳನ್ನು ಸೂಚಿಸುವ ಒಂದು ಸಂಕೆ/ಹತ್ತರಿಂದ ಒಂದನ್ನು ಕಳೆದಾಗ ಬರುವ ಸಂಕೆ; **ಒಂಬತ್ತನ್ನು ಆಡುವ**=ಇಲ್ಲಸಲ್ಲದ/ಸುಳ್ಳಿನ/ಹಲವು ಬಗೆಯ ನುಡಿಗಳನ್ನು ಆಡಲು ತೊಡಗುವ; ಡಂಬ=ಮೋಸ; ಡಂಬಕ=ಮೋಸಗಾರ/ವಂಚಕ/ಕಪಟಿ;

ಮೆಚ್ಚು=ಒಪ್ಪು/ಸಮ್ಮತಿಸು/ಒಲಿ/ಪ್ರೀತಿಸು; ಮೆಚ್ಚ=ಮೆಚ್ಚುವುದಿಲ್ಲ/ಒಪ್ಪುವುದಿಲ್ಲ; ಕೂಡಲಸಂಗಯ್ಯ=ಈಶ್ವರ/ಶಿವ/ದೇವರು;

ಒಂದಾನಾಡ ಹೋಗಿ ಒಂಬತ್ತನಾಡುವ ಡಂಬಕರ ಮೆಚ್ಚ ಕೂಡಲಸಂಗಯ್ಯ= ನಿಜದ ಸಂಗತಿಯನ್ನು ಹೇಳುವ ಬದಲು, ಹಲವು ಬಗೆಯ ಸುಳ್ಳುಗಳನ್ನು ಹೇಳಿ ಜನರನ್ನು ಮರಳು ಮಾಡುವ ವಂಚಕರನ್ನು ದೇವರು ಮೆಚ್ಚುವುದಿಲ್ಲ. ದೇವರು ಮೆಚ್ಚುವುದು ವ್ಯಕ್ತಿಯ ಒಳ್ಳೆಯ ನಡೆನುಡಿಗಳನ್ನು ಮಾತ್ರ ಎಂಬ ತಿರುಳನ್ನು ಈ ನುಡಿಗಳು ಸೂಚಿಸುತ್ತಿವೆ.

❖

14. ಬೋಗಣ್ಣ

ಹೆಸರು: ಬೋಗಣ್ಣ
ದೊರೆತಿರುವ ವಚನಗಳು: 22
ಅಂಕಿತ ನಾಮ: ನಿಜಗುರು ಭೋಗೇಶ್ವರ

134. ಮಾತಿನ ಮಾಲೆಯ ಸರವನಿಕ್ಕಿಕೊಂಡು ವಾಚಾಳಿಗತನದಿಂದ ಒಡಲ ಹೊರೆವವರೆಲ್ಲರೂ ಶರಣಪ್ಪರೆ. (419/1402)

ಮಾಲೆ=ಹಾರ; **ಮಾತಿನ ಮಾಲೆ**=ಇದೊಂದು ನುಡಿಗಟ್ಟು. ಕೇಳುಗರ ಮನಸೆಳೆಯುವಂತೆ ಸೊಗಸಾಗಿ ಮಾತನಾಡುವ ಕಲೆಯಲ್ಲಿ ನಿಪುಣತೆಯನ್ನು ಹೊಂದಿರುವುದು ಎಂಬ ತಿರುಳಿನಲ್ಲಿ ಬಳಕೆಯಾಗಿದೆ; ಸರವನ್+ಇಕ್ಕಿಕೊಂಡು; ಸರ=ಮಾಲೆ/ಹಾರ; ಅನ್=ಅನ್ನು; ಇಕ್ಕಿಕೊಂಡು=ಕೊರಳಲ್ಲಿ ಹಾಕಿಕೊಂಡು;

ವಾಚಾಳಿಗತನ+ಇಂದ; ವಾಚಾಳಿಗ=ಅತಿಯಾಗಿ ಮಾತನಾಡುವವನು/ ಮಾತಿನ ಮಲ್ಲ; ವಾಚಾಳಿಗತನ=ಮಾತುಗಾರಿಕೆಯಲ್ಲಿ ನಿಪುಣತೆ/ಕುಶಲತೆ;

ಒಡಲು=ಹೊಟ್ಟೆ/ದೇಹ; ಹೊರೆವವರು+ಎಲ್ಲರೂ; ಹೊರೆ=ಕಾಪಾಡು/ ಸಲಹು; **ಒಡಲ ಹೊರೆಯುವುದು**=ಹೊಟ್ಟೆ ಪಾಡನ್ನು ನೀಗಿಕೊಳ್ಳುವುದು. ಅಂದರೆ ಜೀವನಕ್ಕೆ ಬೇಕಾದ ವಸ್ತು ಒಡವೆ ಹಣವನ್ನು ಸಂಪಾದಿಸುವುದು; ಶರಣರ್+ಅಪ್ಪರೆ; ಶರಣ=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ನಂಬಿ ಬಾಳುವವನು; ಅಪ್ಪರೆ=ಆಗುತ್ತಾರೆಯೆ; **ಶರಣರಪ್ಪರೆ**=ಶರಣರಾಗಿ ಬಾಳಲಾರರು;

ಒಳ್ಳೆಯ ಕೆಲಸಗಳನ್ನು ಮಾಡದೆ, ಸೊಗಸಾದ ಮಾತುಗಾರಿಕೆಯಿಂದ ಜನಮನವನ್ನು ಗೆಲ್ಲುತ್ತಾ, ಜನರನ್ನು ಮರುಳು ಮಾಡಿ ಹೊಟ್ಟೆಯನ್ನು ಹೊರೆದು ಕೊಳ್ಳುವವನು ಎಂದಿಗೂ ಶರಣನಾಗಲಾರ. ಏಕೆಂದರೆ ಶರಣನಾದವನು ಒಳ್ಳೆಯ ನುಡಿಗಳನ್ನಾಡುವಂತೆಯೇ ಒಳ್ಳೆಯ ದುಡಿಮೆಯನ್ನು ಮಾಡಬೇಕು.

135. ಮನವನ್ಯಾಯಪಾತಕದೊಳಗೆ ಸಿಲುಕಿಹುದು
ಮಾತಿನಲ್ಲಿ ಭಕ್ತಿ ವಿನಯ ಉಪಚಾರವ ನುಡಿವರು. (433/1405)

ಮನ+ಅನ್ಯಾಯ+ಪಾತಕ+ಒಳಗೆ; ಮನ=ಮನಸ್ಸು/ಚಿತ್ತ; ಅನ್ಯಾಯ= ಕೆಟ್ಟದ್ದು/ನ್ಯಾಯವಲ್ಲದ್ದು; ಪಾತಕ=ಪಾಪದ ಕೆಲಸ/ಇತರರಿಗೆ ಕೇಡನ್ನು ಮಾಡುವುದು; ಸಿಲುಕಿ+ಇಹುದು; ಸಿಲುಕಿ=ಒಳಗಾಗಿ; ಇಹುದು=ಇರುವುದು;

ಭಕ್ತಿ=ಒಳ್ಳೆಯ ನಡೆನುಡಿಗಳನ್ನೇ ಶಿವನೆಂದು ತಿಳಿದು ಬಾಳುವುದು; ವಿನಯ=ಇತರರ ಮುಂದೆ ಅಹಂಕಾರವನ್ನು ತೋರಿಸಿಕೊಳ್ಳದೆ ನಮ್ರತೆಯಿಂದ ನಡೆದುಕೊಳ್ಳುವುದು; ಉಪಚಾರ=ಸೇವೆ/ಆರೈಕೆ; ನುಡಿ=ಆಡುವರು/ಹೇಳುವರು;

ಒಳಗೊಂದು ಹೊರಗೊಂದು ಬಗೆಯ ನಡೆನುಡಿಗಳನ್ನುಳ್ಳ ಸೋಗಲಾಡಿಗಳು ತಮ್ಮ ಜೀವನದಲ್ಲಿ ಆಡುವುದೇ ಒಂದು; ಮಾಡುವುದೇ ಮತ್ತೊಂದಾಗಿರುತ್ತದೆ. ಮನದೊಳಗೆ ಕೆಟ್ಟ ಆಲೋಚನೆಗಳನ್ನು ಮತ್ತು ಇತರರಿಗೆ ಕೆಡುಕನ್ನು ಮಾಡುವ ಉದ್ದೇಶವನ್ನು ಹೊಂದಿದ್ದರೂ, ಬಾಯಲ್ಲಿ ಮಾತ್ರ ತುಂಬಾ ನಯ ವಿನಯ ಉಪಚಾರದಿಂದ ಕೂಡಿದ ನುಡಿಗಳನ್ನಾಡುವರು. ಇಂತಹ ನಯವಂಚಕರು ಮನದೊಳಗೆ ನಂಜನ್ನು ತುಂಬಿಕೊಂಡು ಮಾತಿನಲ್ಲಿ ತುಪ್ಪವನ್ನು ಸುರಿಸುತ್ತಾರೆ.

❖

15. ಮಾರೇಶ್ವರೊಡೆಯ

ದೊರೆತಿರುವ ವಚನಗಳು : 13
ವಚನಗಳ ಅಂಕಿತನಾಮ: ಮಾರೇಶ್ವರ

136. ಊರೆಲ್ಲರೂ ನೆರೆದು ಕಳ್ಳನ ಬೆಳ್ಳನೆಂದಡೆ
ಅವ ಕಳ್ಳನೋ ಬೆಳ್ಳನೋ ನೀವು ಹೇಳಿರೆ. (1272/1502)

ಊರ್+ಎಲ್ಲರೂ; ಊರೆಲ್ಲರೂ=ಊರಿನ ಜನರೆಲ್ಲರೂ; ನೆರೆ=ಜತೆಗೂಡಿ; ಕಳ್ಳ=ಜನರ ಒಡವೆ ವಸ್ತುಗಳನ್ನು ಕದಿಯುವುದನ್ನೇ ಕಸುಬನ್ನಾಗಿ ಉಳ್ಳವನು; ಬೆಳ್ಳನ್+ಎಂದಡೆ; ಬೆಳ್ಳ=ಏನನ್ನು ತಿಳಿಯದವನು/ಪ್ರಾಮಾಣಿಕ ವ್ಯಕ್ತಿ; ಎಂದಡೆ=ಎಂದು ಹೇಳಿದರೆ; ಅವ=ಅಂತಹ ವ್ಯಕ್ತಿಯು; **ನೀವು ಹೇಳಿರೆ**=ಅಂತಹ ವ್ಯಕ್ತಿಯನ್ನು ನೀವು ಏನೆಂದು ಕರೆಯುತ್ತೀರಿ;

ಕಂಡಕಂಡವರ ಒಡವೆ ವಸ್ತುಗಳನ್ನು ಕದ್ದು ಅಪಾರವಾದ ಸಂಪತ್ತಿಗೆ ಒಡೆಯನಾಗಿರುವ ಕಳ್ಳನನ್ನು ಊರಿನ ಜನರಲ್ಲಿ ಬಹುತೇಕ ಮಂದಿ ಒಕ್ಕೊರಲಿನಿಂದ "ಅವನು ಬಹಳ ಒಳ್ಳೆಯವನು" ಎಂದು ಹೆಸರಿಸಿ, ಅವನನ್ನು ಹಾಡಿಹೊಗಳತೊಡಗಿದಾಗ, ಅಂತಹವರ ಮುಂದೆ "ನೀವು ಹೇಳುತ್ತಿರುವುದು ಸರಿಯಲ್ಲ. ಆತ ಒಬ್ಬ ಕಳ್ಳ" ಎಂದು ಹೇಳುವ ಕೆಚ್ಚು ಯಾರೊಬ್ಬರಿಗೂ ಇರುವುದಿಲ್ಲ. ಏಕೆಂದರೆ ಅಂತಹ ಪರಿಸರದಲ್ಲಿ "ಸುಳ್ಳೇ ನಿಜವಾಗಿರುತ್ತದೆ; ನಿಜವೇ ಸುಳ್ಳಾಗಿರುತ್ತದೆ."

ಈಗ ನಾವೆಲ್ಲರೂ ಬಾಳುತ್ತಿರುವ ನಮ್ಮ ಕಣ್ಣ ಮುಂದಿನ ಜಗತ್ತಿನಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ವಂಚನೆಯನ್ನು ಮಾಡಿ ಒಂದೆರಡು ಕೋಟಿಯಲ್ಲ, ನೂರಾರು ಕೋಟಿ ಬೆಲೆಬಾಳುವ ಸಾರ್ವಜನಿಕ ಆಸ್ತಿಪಾಸ್ತಿಯನ್ನು ಲೂಟಿಮಾಡಿ ಸಿರಿವಂತಿಕೆಯಲ್ಲಿ ಮೆರೆಯುತ್ತ, ಜನಸಮುದಾಯದ ನಡುವೆ ಉನ್ನತವಾದ ಅಂತಸ್ತನ್ನು ಗಳಿಸಿರುವ ವ್ಯಕ್ತಿಯನ್ನು "ಅವನೊಬ್ಬ ಕಳ್ಳ" ಎಂದು ಹೇಳುವ ಎದೆಗಾರಿಕೆ ಯಾರೊಬ್ಬರಿಗೂ ಇಲ್ಲ. ಏಕೆಂದರೆ ಅಂತಹ ವ್ಯಕ್ತಿಗೆ ಜಾತಿಬಲ, ಜನಬಲ ಮತ್ತು ತೋಳ್ಬಲದ ಬೆಂಬಲವಿರುತ್ತದೆ.

ಮತ್ತೊಂದು ಸಂಗತಿಯೆಂದರೆ ವ್ಯಕ್ತಿಯು ಸಂಪತ್ತನ್ನು ಪ್ರಾಮಾಣಿಕತನದ ದುಡಿಮೆಯಿಂದ ಗಳಿಸಿದ್ದಾನೆಯೋ ಇಲ್ಲವೇ ಮೋಸದ ನಡೆನುಡಿಗಳಿಂದ ಪಡೆದಿದ್ದಾನೆಯೋ ಎಂಬುದನ್ನು ಜನ ಯಾವಾಗಲೂ ನೋಡುವುದಿಲ್ಲ, ಅವನ ಬಳಿಯಿರುವ ಸಂಪತ್ತಿಗೆ ಮಾತ್ರ ಬೆಲೆಕೊಟ್ಟು ಅವನನ್ನು ಸರ್ವಗುಣ ಸಂಪನ್ನನೆಂದು ಕೊಂಡಾಡಿ ಮೆರೆಸುತ್ತಾರೆ. ಆದ್ದರಿಂದಲೇ "ದುಡ್ಡಿದ್ದವನೇ ದೊಡ್ಡಪ್ಪ" ಎಂಬ ಗಾದೆ ಮಾತು ಎಲ್ಲ ಕಾಲಕ್ಕೂ ಸತ್ಯವಾಗಿದೆ.

❖

16. ಮೆರೆಮಿಂಡಯ್ಯ

137. ಐಶ್ವರ್ಯವುಳ್ಳವಂಗೆ ನಿಜಭಕ್ತಿಯಿಲ್ಲ
ಡಂಬಕದ ವೇಷಧಾರಿಗೆ ನಿಜತತ್ವದ ಜ್ಞಾನವಿಲ್ಲ. (1308/1506)

ಐಶ್ವರ್ಯ+ಉಳ್ಳ್+ಅವಂಗೆ; ಐಶ್ವರ್ಯ=ಸಂಪತ್ತು/ಆಸ್ತಿಪಾಸ್ತಿ/ಒಡವೆ ವಸ್ತು/ಹಣಕಾಸು; ಉಳ್=ಇರು; ಅವಂಗೆ=ಅವನಿಗೆ; ಐಶ್ವರ್ಯವುಳ್ಳವಂಗೆ=ಸಿರಿವಂತನಿಗೆ;

ನಿಜ+ಭಕ್ತಿ+ಇಲ್ಲ; ನಿಜ=ದಿಟ/ವಾಸ್ತವ/ಸತ್ಯ; ಭಕ್ತಿ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ನಂಬಿ ಬಾಳುವುದು; ನಿಜಭಕ್ತಿ=ಒಳ್ಳೆಯ ನಡೆನುಡಿ; ಡಂಬ=ಮೋಸ/ಬೂಟಾಟಿಕೆಯ ನಡೆನುಡಿ; ಡಂಬಕದ=ಬೂಟಾಟಿಕೆಯಿಂದ ಕೂಡಿದ/ಸೋಗಲಾಡಿತನದ ನಡೆನುಡಿ;

ವೇಷಧಾರಿ=ನಯವಂಚಕ/ಇತರರ ಮುಂದೆ ಬಹಳ ಒಳ್ಳೆಯವನಂತೆ ನಡೆದುಕೊಳ್ಳುತ್ತ, ಒಳಗೊಳಗೆ ಕೆಟ್ಟ ಕೆಲಸಗಳನ್ನು ಮಾಡುವವನು; ತತ್ವ=ನಿಯಮ/ತಿರುಳು; ನಿಜತತ್ವ=ಒಳ್ಳೆಯ ನೀತಿ ನಿಯಮ; ಜ್ಞಾನ+ಇಲ್ಲ; ಜ್ಞಾನ=ಅರಿವು/ತಿಳುವಳಿಕೆ;

ಇತರರ ಮುಂದೆ ತಾನು ಸಿರಿವಂತನೆಂದು ತೋರಿಸಿಕೊಳ್ಳುವುದಕ್ಕಾಗಿ ಅತಿಯಾಗಿ ಹಣವನ್ನು ವೆಚ್ಚಮಾಡುತ್ತ, ಆಡಂಬರದಿಂದ ದೇವರನ್ನು ಪೂಜಿಸುವ ವ್ಯಕ್ತಿಯಲ್ಲಿ ಯಾವುದೇ ಒಳ್ಳೆಯ ನಡೆನುಡಿಗಳು ಇರುವುದಿಲ್ಲ. ಏಕೆಂದರೆ ಆತ

ದೇವರನ್ನು ಒಳಗೊಂಡಂತೆ ಎಲ್ಲವನ್ನೂ ಮತ್ತು ಎಲ್ಲರನ್ನೂ ಹಣದಿಂದಲೇ ಅಳೆಯುತ್ತಾನೆ.

ಬಾಯಲ್ಲಿ ಒಳ್ಳೆಯ ಮಾತುಗಳನ್ನಾಡುತ್ತ, ದಿನನಿತ್ಯದ ವ್ಯವಹಾರದಲ್ಲಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಿರುವ ನಯವಂಚಕನಾದ ವ್ಯಕ್ತಿಯು ಒಳ್ಳೆಯ ಅರಿವನ್ನು ಪಡೆದಿರುವುದಿಲ್ಲ. ಏಕೆಂದರೆ ಒಳ್ಳೆಯ ಅರಿವು ಅವನಲ್ಲಿ ಇದ್ದಿದ್ದರೆ, ಆತ ಸೋಗಲಾಡಿತನದ ವರ್ತನೆಯನ್ನು ತೊರೆದು ಸರಳವಾದ ಮತ್ತು ನೇರವಾದ ನಡೆನುಡಿಗಳಿಂದ ಬಾಳುತ್ತಿದ್ದನು.

138. ತನ್ನ ತಾನರಿದಡೆ ತನ್ನರಿವೆ ಗುರು
ತಾನೆ ಲಿಂಗ ತನ್ನ ನಿಷ್ಠೆಯೇ ಜಂಗಮ.(1336/1508)

ತಾನ್+ಅರಿದಡೆ; ತನ್ನ ತಾನ್=ವ್ಯಕ್ತಿಯು ತನ್ನನ್ನು ತಾನು; ಅರಿ=ತಿಳಿ/ಗ್ರಹಿಸು; ಅರಿದಡೆ=ತಿಳಿದುಕೊಂಡರೆ; ತನ್ನ+ಅರಿವೆ; ಅರಿವು=ತಿಳಿವಳಿಕೆ; ಗುರು=ತನ್ನ ಬಳಿ ಬಂದ ವ್ಯಕ್ತಿಗಳಿಗೆ ವಿದ್ಯೆಯನ್ನು ಕಲಿಸಿ, ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸುವವನು; ತಾನೆ=ವ್ಯಕ್ತಿಯೇ/ಅವನೇ;

ಲಿಂಗ=ಈಶ್ವರ/ದೇವರು; ನಿಷ್ಠೆ=ಅಚಲವಾದ ನಂಬಿಕೆ;

ಜಂಗಮ=ಒಳ್ಳೆಯ ನಡೆನುಡಿಗಳಲ್ಲಿ ಶಿವನನ್ನು ಕಾಣುವ ಮತ್ತು ಸದಾಕಾಲ ಸಂಚರಿಸುತ್ತ ಜನರ ಮನಸ್ಸಿನಲ್ಲಿ ಒಳ್ಳೆಯ ನಡೆನುಡಿಗಳಿಗೆ ಪ್ರೇರಣೆಯಾಗುವಂತಹ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ಮೂಡಿಸುವವನು;

ವ್ಯಕ್ತಿಯು ತನ್ನನ್ನು ತಾನು ಅರಿತುಕೊಂಡು ಬಾಳುವಂತಾದರೆ, ಗುರು ಲಿಂಗ ಜಂಗಮದಿಂದ ಪಡೆಯವುದನ್ನು ತಾನೇ ಪಡೆಯಬಲ್ಲವನಾಗುತ್ತಾನೆ. ಅಂದರೆ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ತಾನೇ ರೂಪಿಸಿಕೊಳ್ಳಬಲ್ಲ ಅರಿವನ್ನು ಪಡೆಯುತ್ತಾನೆ.

“ತನ್ನನ್ನು ತಾನು ಅರಿಯುವುದು” ಎಂದರೆ ಮಾನವ ಸಮುದಾಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನವು ನಿಸರ್ಗದ ಆಗುಹೋಗು ಮತ್ತು ಸಮಾಜದ ಕಟ್ಟುಪಾಡುಗಳಿಗೆ ಒಳಪಟ್ಟಿದೆ. ಆದ್ದರಿಂದಲೇ ತನ್ನನ್ನೂ ಒಳಗೊಂಡಂತೆ ಎಲ್ಲ ವ್ಯಕ್ತಿಗಳ ಮಯ್ ಮನದಲ್ಲಿ ಒಳಿತು ಕೆಡುಕಿನ ಒಳಮಿಡಿತಗಳು ಸದಾಕಾಲ ಇದ್ದೇ ಇರುತ್ತವೆ ಎಂಬ ವಾಸ್ತವವನ್ನು ಅರಿತುಕೊಂಡು, ಜೀವನದ ಉದ್ದಕ್ಕೂ ಕೆಡುಕಿನ

ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು, ಒಳ್ಳೆಯವನಾಗಿ ಬಾಳಬೇಕೆಂಬ ಎಚ್ಚರವನ್ನು ಹೊಂದುವುದು ಮತ್ತು ತನ್ನ ಜೀವನದ ಒಳಿತು ಕೆಡುಕು ಸಮಾಜದಲ್ಲಿ ಉಂಟಾಗುವ ಒಳಿತು ಕೆಡುಕನ್ನು ಅವಲಂಬಿಸಿದೆ ಎಂಬ ವಾಸ್ತವವನ್ನು ಅರಿತು ಬಾಳುವುದು;

❖

17. ಮೋಳಿಗೆ ಮಾರಯ್ಯ

139. ಆದ್ಯರ ವಚನವ ನೋಡಿ ಓದಿ ಹೇಳಿದಲ್ಲಿ ಫಲವೇನಿ ಭೋ
ತನ್ನಂತೆ ವಚನವಿಲ್ಲ ವಚನದಂತೆ ತಾನಿಲ್ಲ. (1498/1522)

ಆದ್ಯ=ಮೊದಲನೆಯ/ಆದಿಯ; ಆದ್ಯರು=ಮೊದಲಿನವರು/ಪೂರ್ವಿಕರು/ ಹಿಂದಿನವರು; ವಚನ=ಶಿವಶರಣಶರಣೆಯರು ರಚಿಸಿರುವ ಸೂಳ್ನುಡಿ; ಹೇಳಿದ+ಅಲ್ಲಿ; ಹೇಳು=ಇತರರಿಗೆ ತಿಳಿಸುವುದು; ಹೇಳಿದಲ್ಲಿ=ಹೇಳುವುದರಿಂದ; ಫಲ+ಏನಿ; ಫಲ=ಪ್ರಯೋಜನ/ಪರಿಣಾಮ; ಏನ್=ಯಾವುದು;

ಏನಿ=ವ್ಯಕ್ತಿಯನ್ನು ಒಲವು ನಲಿವಿನಿಂದ ಮಾತನಾಡಿಸುವಾಗ "ಏನ್ರಿ" ಎಂಬ ಬಹುವಚನ ರೂಪದ ಪದವನ್ನು ಬಳಸಲಾಗುತ್ತದೆ. ಮಾತಿನ ಸನ್ನಿವೇಶದಲ್ಲಿ ಉಚ್ಚಾರಣೆಗೊಳ್ಳುವಾಗ "ಏನ್ರಿ" ಎಂಬುದು "ಏನಿ" ಎಂದಾಗಿದೆ:

ಭೋ=ಕೇಳುವಂತಹವರಾಗಿ/ಗಮನವಿಟ್ಟು ಆಲಿಸಿ; ವ್ಯಕ್ತಿಯು ಇತರರಿಗೆ ಗುರುತರವಾದ ಸಂಗತಿಯೊಂದನ್ನು ಹೇಳುವಾಗ, ಅವರ ಗಮನವನ್ನು ತನ್ನತ್ತ ಸೆಳೆದುಕೊಳ್ಳಲೆಂದು ಎತ್ತರದ ದನಿಯಲ್ಲಿ ಹೇಳುವ ಪದ;

ತನ್ನ+ಅಂತೆ; ಅಂತೆ=ಹಾಗೆ/ಆ ಬಗೆಯಲ್ಲಿ; ತನ್ನಂತೆ=ತನ್ನ ಬದುಕಿನಂತೆ/ತನ್ನ ನಡೆನುಡಿಯಂತೆ; ವಚನ+ಇಲ್ಲ; ವಚನ+ಅಂತೆ; ವಚನದಂತೆ=ವಚನದಲ್ಲಿ ಹೇಳಿರುವಂತಹ ಒಳ್ಳೆಯ ನಡೆನುಡಿ; ತಾನ್+ಇಲ್ಲ; ತಾನಿಲ್ಲ=ತನ್ನ ಜೀವನವಿಲ್ಲ/ ತನ್ನ ನಡೆನುಡಿಗಳಿಲ್ಲ;

ಹಿರಿಯರಾದ ಶರಣಶರಣೆಯರು ಹೇಳಿರುವ ವಚನವನ್ನು ವ್ಯಕ್ತಿಯು ಓದುವುದರಿಂದ ಇಲ್ಲವೇ ಅದರ ತಿರುಳನ್ನು ಇತರರ ಮುಂದೆ ಹಾಡಿ ಹೊಗಳುವುದರಿಂದ ಯಾವ ಪ್ರಯೋಜನವೂ ಇಲ್ಲ. ವಚನದಲ್ಲಿ ಹೇಳಿರುವ ಒಳ್ಳೆಯ ನಡೆನುಡಿಗಳನ್ನು ವ್ಯಕ್ತಿಯು ಅರಿತುಕೊಂಡು, ಅವನ್ನು ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಬಾಳುವಂತಾದಾಗ ಮಾತ್ರ ವಚನಕ್ಕೆ ಮತ್ತು ವ್ಯಕ್ತಿಗೆ ಇಬ್ಬರಿಗೂ ಬೆಲೆ ಬರುತ್ತದೆ.

ಶಿವಶರಣಶರಣೆಯರು ರಚಿಸಿರುವ ವಚನವನ್ನು 'ಸೂಳ್ನುಡಿ' ಎಂದು ಕರೆಯುತ್ತಾರೆ. ಸೂಳ್ ಮತ್ತು ನುಡಿ ಎಂಬ ಎರಡು ಪದಗಳು ಸೇರಿ 'ಸೂಳ್ನುಡಿ' ಎಂದಾಗಿದೆ. 'ಸೂಳ್' ಎಂದರೆ ಸರದಿ ಇಲ್ಲವೇ ವ್ಯಕ್ತಿಯ ಪಾಲಿಗೆ ದೊರೆತ ಅವಕಾಶ. ನುಡಿ ಎಂದರೆ ಮಾತು/ಸೊಲ್ಲು. ಸರದಿಯ ಪ್ರಕಾರ ಆಡಿದ ಮಾತಿಗೆ ಸೂಳ್ನುಡಿ ಎಂದು ಹೆಸರು.

ಹನ್ನೆರಡನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಆಂದೋಲನದ ಸಮಯದಲ್ಲಿ ಶಿವಶರಣಶರಣೆಯರು ತಮ್ಮ ವ್ಯಕ್ತಿಗತ ನಡೆನುಡಿಗಳನ್ನು ಒರೆಹಚ್ಚಿ ನೋಡಿಕೊಳ್ಳುವಾಗ ಮತ್ತು ಸಮಾಜದ ಅರೆಕೊರೆಗಳನ್ನು ಕುರಿತು ಒಬ್ಬರು ಮತ್ತೊಬ್ಬರೊಡನೆ ವಿಚಾರವನ್ನು ವಿನಿಮಯ ಮಾಡಿಕೊಳ್ಳುವಾಗ ಆಡಿದ ನುಡಿಗಳೇ ವಚನಗಳಾಗಿ ರೂಪಗೊಂಡಿವೆ.

140. ಮಾತಿನಲ್ಲಿ ಭಕ್ತಿ ಮನದಲ್ಲಿ ಕತ್ತರಿ ಭಕ್ತಿಯಲ್ಲಿ ಬಲೆ ಚಿತ್ತದಲ್ಲಿ ಕತ್ತಲೆಯಿಪ್ಪವರಿಗೆಲ್ಲಿಯದೊ ಭಕ್ತಿಶೀಲ. (1810/1554)

ಮಾತು+ಅಲ್ಲಿ; ಮಾತು=ನುಡಿ/ಸೊಲ್ಲು; ಭಕ್ತಿ=ದೇವರನ್ನು ಪೂಜಿಸಲು ಇಲ್ಲವೇ ಒಲಿಸಿಕೊಳ್ಳಲು ವ್ಯಕ್ತಿಯು ಹೊಂದಿರಬೇಕಾದ ಒಳ್ಳೆಯ ನಡೆನುಡಿ; ಮಾತಿನಲ್ಲಿ ಭಕ್ತಿ=ಸತ್ಯ,ನೀತಿ,ನ್ಯಾಯದ ನುಡಿಗಳನ್ನು ಬಾಯ್ತುಂಬ ಆಡುವುದು;

ಮನ+ಅಲ್ಲಿ; ಮನ=ಮನಸ್ಸು/ಚಿತ್ತ;

ಕತ್ತರಿ=ಈ ಪದ ಎರಡು ತಿರುಳುಗಳಲ್ಲಿ ಬಳಕೆಯಾಗುತ್ತದೆ. 1. ಏನನ್ನಾದರೂ ಕತ್ತರಿಸುವುದಕ್ಕಾಗಿ ಬಳಸುವ ಇಕ್ಕುಳದ ಆಕಾರದಲ್ಲಿರುವ ಉಪಕರಣ. 2. ಕಪಟತನ/ಮೋಸ;

ಮನದಲ್ಲಿ ಕತ್ತರಿ=ಇತರರನ್ನು ವಂಚಿಸಿ ಕೇಡನ್ನು ಬಗೆಯುವ ಆಲೋಚನೆಯನ್ನು ಮನದಲ್ಲಿ ಹೊಂದಿರುವುದು;

ಭಕ್ತಿ+ಅಲ್ಲಿ; ಬಲೆ=ಈ ಪದ ಎರಡು ತಿರುಳುಗಳಲ್ಲಿ ಬಳಕೆಯಾಗುತ್ತದೆ.

1. ಹಕ್ಕಿ ಮೀನು ಮುಂತಾದ ಜೀವಿಗಳನ್ನು ಹಿಡಿಯಲು ನೂಲಿನಿಂದ ಹೆಣೆದಿರುವ ವಸ್ತು. 2.ಮೋಸ/ವಂಚನೆ/ಕಪಟತನ;

ಭಕ್ತಿಯಲ್ಲಿ ಬಲೆ=ದೇವರಲ್ಲಿ ಒಲವು ಉಳ್ಳವನಂತೆ ನಟಿಸುತ್ತಾ, ಇತರರನ್ನು ಮರುಳು ಮಾಡಿ ತನ್ನತ್ತ ಸೆಳೆದುಕೊಳ್ಳುವುದು;

ಚಿತ್ತ+ಅಲ್ಲಿ; ಚಿತ್ತ=ಮನಸ್ಸು; ಕತ್ತಲೆ+ಇಪ್ಪ+ಅವರಿಗೆ+ಎಲ್ಲಿಯದೊ; ಕತ್ತಲೆ=ಈ ಪದ ಎರಡು ತಿರುಳುಗಳಲ್ಲಿ ಬಳಕೆಯಾಗಿದೆ.

1. ತಿಮಿರ/ಮಬ್ಬು.

2. ಅರಿವು ಇಲ್ಲದಿರುವುದು;

ಇಪ್ಪ=ಇರುವ; ಅವರಿಗೆ=ಅಂತಹ ವ್ಯಕ್ತಿಗಳಿಗೆ; ಇಪ್ಪವರಿಗೆ= ಇರುವ ವ್ಯಕ್ತಿಗಳಿಗೆ; ಎಲ್ಲಿಯದೊ=ಯಾವ ರೀತಿಯಲ್ಲಿ ತಾನೆ ಇರುವುದು/ಬರುವುದು;

ಚಿತ್ತದಲ್ಲಿ ಕತ್ತಲೆ=ಮನದಲ್ಲಿ ಒಳ್ಳೆಯ ಆಲೋಚನೆಗಳಿಲ್ಲದೆ, ಕೆಟ್ಟ ಒಳಮಿಡಿತಗಳೇ ತುಂಬಿರುವುದು; ಶೀಲ=ಒಳ್ಳೆಯ ನಡತೆ/ಸದಾಚಾರ; ಭಕ್ತಿಶೀಲ= ಒಳ್ಳೆಯ ನಡೆನುಡಿ/ಒಳ್ಳೆಯ ಗುಣ;

ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳನ್ನೇ ತುಂಬಿಕೊಂಡು, ಬಾಯಲ್ಲಿ ಮಾತ್ರ ಸತ್ಯ,ನೀತಿ,ನ್ಯಾಯದ ಮಾತುಗಳನ್ನಾಡುತ್ತಾ, ದೇವರಲ್ಲಿ ಒಲವು ಉಳ್ಳವರಂತೆ ನಟಿಸುತ್ತಿರುವ ವ್ಯಕ್ತಿಗಳು ನಯವಂಚಕರೇ ಹೊರತು ಗುಣವಂತರಲ್ಲ.

141. ಇದಿರಿಗೆ ಬೋಧಿಸಿ ಹೇಳುವ ಹಿರಿಯರೆಲ್ಲರೂ ಹಿರಿಯಪ್ಪರೆ
ನುಡಿದಂತೆ ನಡೆದು ನಡೆದಂತೆ ನುಡಿದು
ನಡೆನುಡಿ ಸಿದ್ಧಾಂತವಾಗಿಯಲ್ಲದೆ
ಅರುಹಿರಿಯರಾಗಬಾರದು. (2009–1576)

ಇದಿರು=ಮುಂದುಗಡೆ/ಎದುರುಗಡೆ; ಇದಿರಿಗೆ=ಇತರರಿಗೆ/ಎದುರು ಇರುವವರಿಗೆ; ಬೋಧ=ತಿಳುವಳಿಕೆ/ವಿಚಾರ; **ಬೋಧಿಸಿ ಹೇಳುವ**=

ತಿಳಿಯುವಂತೆ ವಿವರಿಸುವ/ಮನದಟ್ಟು ಮಾಡಿಸುವ; ಹಿರಿಯರ್+ಎಲ್ಲರೂ; ಹಿರಿಯರು=ವಯಸ್ಸಿನಲ್ಲಿ ದೊಡ್ಡವರು/ಅರಿವಿನಲ್ಲಿ ದೊಡ್ಡವರು; ಹಿರಿಯರ್+ಅಪ್ಪರೆ; ಅಪ್ಪರೆ=ಆಗುತ್ತಾರೆಯೇ; ಹಿರಿಯರಪ್ಪರೆ=ಹಿರಿಯರಾಗುತ್ತಾರೆಯೆ/ಹಿರಿಯರು ಎನಿಸಿಕೊಳ್ಳುವುದಕ್ಕೆ ಯೋಗ್ಯರಾಗುತ್ತಾರೆಯೆ;

ನುಡಿದ+ಅಂತೆ; ನುಡಿ=ಮಾತು/ಸೊಲ್ಲು; ನಡೆ=ವರ್ತನೆ/ನಡತೆ;

ನುಡಿದಂತೆ ನಡೆದು=ಹಿರಿಯರಾದವರು ಸತ್ಯ,ನೀತಿ,ನ್ಯಾಯದ ಸಂಗತಿಗಳನ್ನು ಇತರರಿಗೆ ತಾವು ಹೇಳುವಂತೆಯೇ, ಅವನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ಬಾಳುವುದು;

ನಡೆದಂತೆ ನುಡಿದು=ಹಿರಿಯರಾದವರು ತಾವು ಮೊದಲು ಒಳ್ಳೆಯ ಕೆಲಸವನ್ನು ಮಾಡುತ್ತ, ಆ ರೀತಿಯ ಕೆಲಸವನ್ನು ಮಾಡಬೇಕೆಂದು ಇತರರಿಗೆ ಅನಂತರ ಹೇಳುವುದು;

ಸಿದ್ಧಾಂತ+ಆಗಿ+ಅಲ್ಲದೆ; ಸಿದ್ಧಾಂತ=ಯಾವುದೇ ಒಂದು ವಿಚಾರವನ್ನು ಎಲ್ಲರಿಗೂ ತಿಳಿಯುವಂತೆ ಹೇಳುವ ತತ್ವ/ನಿಲುವು/ನಿರ್ಣಯ;

ನಡೆನುಡಿ ಸಿದ್ಧಾಂತವಾಗುವುದು=ವ್ಯಕ್ತಿಯು ತನ್ನ ಜೀವನದ ವ್ಯವಹಾರಗಳಲ್ಲಿ ಆಡುವ ಒಳ್ಳೆಯ ನುಡಿ ಮತ್ತು ಮಾಡುವ ಒಳ್ಳೆಯ ಕೆಲಸಗಳು ಒಂದಕ್ಕೊಂದು ಜತೆಗೂಡಿ ಇರುವುದು;

ಅಲ್ಲದೆ=ಹೊರತುಪಡಿಸಿ; ಆಗಿಯಲ್ಲದೆ=ಆ ರೀತಿಯಲ್ಲಿ ಇರದೆ; ಅರುಹಿರಿಯರ್+ಆಗಬಾರದು; ಅರುಹಿರಿಯರು=ಒಳ್ಳೆಯ ಅರಿವನ್ನು ಹೊಂದಿ, ಒಳ್ಳೆಯ ಬದುಕನ್ನು ನಡೆಸುತ್ತಿರುವ ಹಿರಿಯರು; ಆಗಬಾರದು=ಆಗಲಾರರು/ಆಗುವುದಿಲ್ಲ;

ಇತರರ ಮುಂದೆ ಸತ್ಯ,ನೀತಿ,ನ್ಯಾಯದ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಆಡಿದ ಮಾತ್ರಕ್ಕೆ ವ್ಯಕ್ತಿಗಳು ಹಿರಿಯರಾಗುವುದಿಲ್ಲ. ನಡೆಯೊಂದು ರೀತಿ, ನುಡಿಯೊಂದು ರೀತಿಯಲ್ಲಿದ್ದರೆ ಅಂದರೆ ಬಾಯಲ್ಲಿ ನಿಜವನ್ನು ನುಡಿಯುತ್ತ, ನಿತ್ಯ ಜೀವನದ ವ್ಯವಹಾರದಲ್ಲಿ ಕೆಟ್ಟ ಕೆಲಸವನ್ನು ಮಾಡುತ್ತಿರುವವರು ಹಿರಿಯರಲ್ಲ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನುಂಟುಮಾಡುವಂತಹ ಮಾತನ್ನು ಆಡುವವರು ಮತ್ತು ಆಡಿದ ಮಾತಿಗೆ ತಕ್ಕಂತೆ ಕೆಲಸಗಳನ್ನು ಮಾಡುವವರು ಮಾತ್ರ ಅರಿವುಳ್ಳ ಹಿರಿಯರು ಎನಿಸಿಕೊಳ್ಳುತ್ತಾರೆ.

18. ಸಿದ್ಧರಾಮೇಶ್ವರ

142. ಓದುವುದು ಸದ್ಗುಣಕ್ಕಲ್ಲದೆ
ಕಿವಿಯನೂದುವುದಕ್ಕೇನೋ ಅಯ್ಯಾ. (1594/706)

ಓದು=ಅಕ್ಕರದ ರೂಪದಲ್ಲಿರುವ ಸಂಗತಿಗಳನ್ನು ಮತ್ತು ವಿಚಾರಗಳನ್ನು ಓದಿ ತಿಳಿವಳಿಕೆಯನ್ನು ಪಡೆಯುವುದು; ಸದ್ಗುಣಕ್ಕೆ+ಅಲ್ಲದೆ; ಸದ್ಗುಣ=ಒಳ್ಳೆಯ ನಡೆನುಡಿ; ಅಲ್ಲದೆ=ಹೊರತು; ಕಿವಿ+ಅನ್+ಊದುವುದಕ್ಕೆ+ಏನೋ; ಊದು= ಬಾಯಿಂದ ಗಾಳಿಯನ್ನು ಹೊರಡಿಸುವುದು;

ಕಿವಿಯನ್ನು ಊದು/ಕಿವಿಯೂದು=ಇದೊಂದು ನುಡಿಗಟ್ಟು. ಚಾಡಿ ಹೇಳುವುದು / ಸುಳ್ಳು ಸುದ್ದಿಗಳನ್ನು ಹರಡುವುದು ಎಂಬ ತಿರುಳಿನಲ್ಲಿ ಬಳಕೆ ಯಾಗಿದೆ; ಅಯ್ಯಾ=ಗಂಡಸರೊಡನೆ ನಯ ವಿನಯದಿಂದ ಮಾತನಾಡುವಾಗ ಬಳಸುವ ಪದ; **ಏನೋ ಅಯ್ಯಾ**=ನೀನು ಮಾಡುತ್ತಿರುವ ಕೆಲಸ ಸರಿಯಾಗಿದೆಯೆ ಇಲ್ಲವೇ ತಪ್ಪಾಗಿದೆಯೆ ಎಂಬುದನ್ನು ನೀನೇ ತಿಳಿದು ನೋಡು;

ವ್ಯಕ್ತಿಯು ಓದು ಬರಹದಿಂದ ಪಡೆದ ಅರಿವಿನಿಂದ ಒಳ್ಳೆಯ ನಡೆನುಡಿಗಳನ್ನು ಕಲಿತುಕೊಂಡು, ತನ್ನ ಮತ್ತು ತನ್ನ ಕುಟುಂಬದ ಒಳಿತಿಗಾಗಿ ಬಾಳುವಂತೆಯೇ ಸಹಮಾನವರ ಮತ್ತು ಸಮಾಜದ ಒಳಿತಿಗಾಗಿಯೂ ಬಾಳಬೇಕು. ಹಾಗಲ್ಲದೆ ಚಾಡಿ ಮಾತುಗಳಿಂದ, ಸುಳ್ಳು ನುಡಿಗಳಿಂದ ಇಲ್ಲಸಲ್ಲದ ಕೆಟ್ಟ ಸುದ್ದಿಗಳನ್ನು ಹಬ್ಬಿಸಿ, ವ್ಯಕ್ತಿಗಳ ನಡುವೆ ಪರಸ್ಪರ ಅಸಹನೆ, ಅಪನಂಬಿಕೆ ಮತ್ತು ಹಗೆತನವನ್ನುಂಟು ಮಾಡಿ, ವ್ಯಕ್ತಿಗಳ ನೆಮ್ಮದಿಯ ಬದುಕನ್ನು ಹಾಳುಮಾಡಬಾರದು.

143. ಹೇಳುವಡೆ ಬಹು ಸುಲಭ
ಆಳುವಡೆ ಅದು ಬಹಳ ದುರ್ಘಟ ನೋಡಯ್ಯಾ. (1320/684)

ಹೇಳುವಡೆ=ಹೇಳುವುದಾದರೆ/ಬರಿ ಮಾತನ್ನಾಡುವುದಾದರೆ; ಬಹು=ಬಹಳ; ಸುಲಭ=ಸಲೀಸು/ಸರಾಗ/ಯಾವುದೇ ಅಡ್ಡಿ ಆತಂಕವಿಲ್ಲದಿರುವುದು; ಆಳುವುದು=ಆಡಳಿತವನ್ನು ನಡೆಸುವುದು/ಒಳ್ಳೆಯ ಕೆಲಸವನ್ನು ಮಾಡುವುದು; ಆಳುವಡೆ=ಆಳುವುದಾದರೆ;

ದುರ್ಘಟ=ತೊಡಕಾದುದು/ಜಟಿಲವಾದುದು/ಅಡ್ಡಿ ಅಡಚಣೆಯಿಂದ ಕೂಡಿರುವುದು; ನೋಡು+ಅಯ್ಯಾ; ನೋಡು=ದಿನನಿತ್ಯದ ಆಗುಹೋಗುಗಳನ್ನು ಒರೆಹಚ್ಚಿ ವಾಸ್ತವವನ್ನು ತಿಳಿಯುವುದು;

ಕುಟುಂಬ, ದುಡಿಮೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ವ್ಯಕ್ತಿಯು ಜನರ ಮುಂದೆ ದೊಡ್ಡ ದೊಡ್ಡ ಮಾತುಗಳನ್ನಾಡುತ್ತ, ಅಪಾರವಾದ ಆಸೆಗಳನ್ನು ಜನ ಮನದಲ್ಲಿ ಮೂಡಿಸಿ, ತನ್ನನ್ನು ನಂಬುವಂತೆ ಮಾಡಬಹುದು. ಅನಂತರ ಅದೇ ವ್ಯಕ್ತಿಯು ಮುಂದೊಮ್ಮೆ ಜವಾಬ್ದಾರಿಯುತವಾದ ಗದ್ದುಗೆಯನ್ನು ಏರಿ ಕುಳಿತಾಗ, ಆಡಳಿತದ ಸೂತ್ರವನ್ನು ಹಿಡಿದು ಎಲ್ಲರನ್ನು ಸಮಾನವಾಗಿ ಕಾಣುತ್ತ, ಕೆಟ್ಟದ್ದನ್ನು ನಿಯಂತ್ರಿಸಿ ಒಳ್ಳೆಯದನ್ನು ಉತ್ತೇಜಿಸಿ, ಎಲ್ಲರಿಗೂ ಒಳಿತಾಗುವಂತೆ ಆಳ್ವಿಕೆಯನ್ನು ನಡೆಸುವುದು ತುಂಬಾ ಜಟಿಲವಾದ ಕೆಲಸವಾಗಿರುತ್ತದೆ.

❖

19. ಸೊಡ್ಡಳ ಬಾಚರಸ

144. ವಚನದ ರಚನೆಯ ನುಡಿವ ಬರುಬಾಯ ಭುಂಜಕರೆಲ್ಲ ಭಕ್ತರಪ್ಪರೆ ಅಯ್ಯಾ. (810/1705)

ವಚನ=ಶಿವಶರಣಶರಣೆಯರು ಆಡಿರುವ ಸೊಳ್ನುಡಿ; ರಚನೆ=ಪದ ಮತ್ತು ತಿರುಳಿನಿಂದ ಕೂಡಿದ ಬರಹ; ವಚನದ ರಚನೆ=ವಚನದಲ್ಲಿ ಕಂಡುಬರುವ ಸಂಗತಿ/ವಿಚಾರ;ನುಡಿ=ಹೇಳು/ವಿವರಿಸು; ಬರು=ಬರಿದು/ಏನೂ ಇಲ್ಲದಿರುವುದು /ಪೊಳ್ಳು;

ಬಾಯಿ=1. ಉಣಿಸು ತಿನಸುಗಳನ್ನು ಸೇವಿಸಲು ಮತ್ತು ಮಾತನ್ನಾಡಲು ಬಳಕೆಯಾಗುವ ದೇಹದ ಒಂದು ಅಂಗ

2. ಮಾತು/ನುಡಿ;

ಬರುಬಾಯ್=ಕೆಲಸಕ್ಕೆ ಬಾರದ ಮಾತು/ಪೊಳ್ಳು ಮಾತು/ಕಾಡು ಹರಟೆ; ಭುಂಜಕ=ತಿನ್ನುವವನು/ಉಣ್ಣುವವನು/ಕಬಳಿಸುವವನು;

ಬರುಬಾಯ ಭುಂಜಕರು=ಜೀವನದಲ್ಲಿ ಒಂದಾದರೂ ಒಳ್ಳೆಯ ಕೆಲಸವನ್ನು ಮಾಡದೆ, ಕೇವಲ ಮಾತಿನ ಮೋಡಿಯಿಂದಲೇ ಜನರನ್ನು ವಂಚಿಸಿ, ಹೊಟ್ಟೆಯನ್ನು ಹೊರೆದುಕೊಳ್ಳುವವರು;

ಭಕ್ತರ್+ಅಪ್ಪರೆ; ಭಕ್ತ=ಒಳ್ಳೆಯ ನಡೆನುಡಿಗಳನ್ನೇ ದೇವರೆಂದು ನಂಬಿಕೊಂಡು

ಬಾಳುವವನು; ಅಪ್ಪರೆ=ಆಗುತ್ತಾರೆಯೆ; ಅಯ್ಯಾ=ಇತರರನ್ನು ಒಲವು ನಲಿವಿನಿಂದ ಮಾತನಾಡಿಸುವಾಗ ಬಳಸುವ ಪದ;

ಶಿವಶರಣಶರಣೆಯರು ವಚನದಲ್ಲಿ ಹೇಳಿರುವ ಒಳ್ಳೆಯ ನಡೆನುಡಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳದೆ, ಮಾತಿನ ಚಪಲಕ್ಕಾಗಿಯೋ ಇಲ್ಲವೇ ಹೊಟ್ಟೆಯ ಪಾಡಿಗಾಗಿಯೋ ವಚನದ ಸಂಗತಿಗಳನ್ನು ಇತರರ ಮುಂದೆ ಹಾಡಿ ಹೊಗಳುವ ವ್ಯಕ್ತಿಗಳು ಎಂದಿಗೂ ಶಿವನ ಒಲವಿಗೆ ಪಾತ್ರರಾಗಲಾರರು.

145. ಕಳುವ ಕಳ್ಳಂಗೆ ಕತ್ತಲೆಯಲ್ಲದೆ ಬೆಳಗು ಸಮನಿಸುವುದೆ. (833/1708)

ಕಳ್=ಅಪಹರಿಸು; ಕಳುವ=ಕಳ್ಳತನ ಮಾಡುವ; ಕಳ್ಳಂಗೆ=ಕಳ್ಳನಿಗೆ; ಕಳ್ಳ= ಇತರರ ಒಡವೆ ವಸ್ತುಗಳನ್ನು, ಆಸ್ತಿಪಾಸ್ತಿಗಳನ್ನು ಕದಿಯುವ ವ್ಯಕ್ತಿ; ಕತ್ತಲೆ+ಅಲ್ಲದೆ; ಕತ್ತಲೆ=ಬೆಳಕಿಲ್ಲದಿರುವುದು/ತಿಮಿರ; ಕತ್ತಲೆಯಲ್ಲದೆ= ಕತ್ತಲೆಯನ್ನು ಬಿಟ್ಟು; ಬೆಳಗು=ಬೆಳಕು ತುಂಬಿರುವುದು/ಹಗಲಿನ ಸಮಯ;

ಸಮನಿಸು=ಒಪ್ಪು/ಹೊಂದಿಕೆಯಾಗು; ಸಮನಿಸುವುದೆ=ಒಪ್ಪುವುದೆ/ ಹೊಂದಿಕೆಯಾಗುವುದೆ;

ಕಳ್ಳತನವನ್ನೇ ತನ್ನ ಕಸುಬನ್ನಾಗಿ ಮಾಡಿಕೊಂಡಿರುವ ಕಳ್ಳನಿಗೆ ಕತ್ತಲೆಯು ಮೆಚ್ಚುಗೆಯಾಗುತ್ತದೆಯೇ ಹೊರತು ಬೆಳಕಲ್ಲ. ಏಕೆಂದರೆ ಯಾರ ಕಣ್ಣಿಗೂ ಬೀಳದಂತೆ ಕಳ್ಳತನ ಮಾಡಲು ಕತ್ತಲೆಯು ನೆರವಾದರೆ, ಬೆಳಕು ಅಡ್ಡಿಯಾಗುತ್ತದೆ . ಕಳ್ಳನ ವ್ಯಕ್ತಿತ್ವವನ್ನು ಸೂಚಿಸುವ ಈ ನುಡಿಯು ಒಂದು ರೂಪಕವಾಗಿ ಬಳಕೆಯಾಗಿದೆ.

ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವ ಕೆಟ್ಟ ನಡೆನುಡಿ ಯುಳ್ಳ ವ್ಯಕ್ತಿಯು ತನ್ನಂತೆಯೇ ಕೆಟ್ಟತನವುಳ್ಳ ವ್ಯಕ್ತಿಯನ್ನು ಒಪ್ಪಿಕೊಳ್ಳುತ್ತಾನೆಯೇ ಹೊರತು ಒಳ್ಳೆಯತನವುಳ್ಳ ವ್ಯಕ್ತಿಯನ್ನು ಒಪ್ಪುವುದಿಲ್ಲ. ಏಕೆಂದರೆ ಕೆಟ್ಟಕೆಲಸವನ್ನು ತಡೆಯುವ ವ್ಯಕ್ತಿಯು ಕೆಟ್ಟ ನಡತೆಯುಳ್ಳವನ ಕಣ್ಣಿಗೆ ಹಗೆಯಂತೆ ಕಂಡುಬರುತ್ತಾನೆ.

❖

20. ಹಡಪದ ಅಪ್ಪಣ್ಣ

146. ತನ್ನ ತಾನರಿಯದೆ ತನ್ನ ತಾ ನೋಡದೆ ತನ್ನ ತಾ ನುಡಿಯದೆ
ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ
ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ. (960/1723)

ತಾನ್+ಅರಿಯದೆ; ಅರಿ=ತಿಳಿ; ಅರಿಯದೆ=ತಿಳಿದುಕೊಳ್ಳದೆ;

ತನ್ನ ತಾನರಿಯದೆ=ನಿಸರ್ಗದ ಆಗುಹೋಗು ಮತ್ತು ಸಮಾಜದ ಕಟ್ಟು ಪಾಡುಗಳ ನಡುವೆ ಬಾಳುತ್ತಿರುವ ವ್ಯಕ್ತಿಯು ತನ್ನ ವ್ಯಕ್ತಿತ್ವದ ಇತಿಮಿತಿಗಳನ್ನು ತಿಳಿದುಕೊಳ್ಳದೆ;

ನೋಡು=ಕಾಣು/ವಿಚಾರ ಮಾಡು;

ತನ್ನ ತಾ ನೋಡದೆ=ದಿನ ನಿತ್ಯದ ಬದುಕಿನಲ್ಲಿ ಸಹಮಾನವರ ಜತೆಯಲ್ಲಿ ತಾನು ಹೇಗೆ ನಡೆದುಕೊಳ್ಳುತ್ತಿದ್ದೇನೆ ಎಂಬುದನ್ನು ಒರೆಹಚ್ಚಿ ನೋಡಿಕೊಳ್ಳದೆ;

ನುಡಿ=ಹೇಳು; ತನ್ನ **ತಾ ನುಡಿಯದೆ**=ತನ್ನ ನಡೆನುಡಿಯಲ್ಲಿರುವ ಒಳಿತು ಕೆಡುಕಿನ ಸಂಗತಿಗಳನ್ನು ತಾನೇ ಹೇಳಿಕೊಳ್ಳದೆ, ಅಂದರೆ ತನ್ನ ಮನದಲ್ಲಿಯೇ ತಾನು ಮಾತನಾಡಿಕೊಂಡು, ಕೆಟ್ಟದ್ದನ್ನು ಬಿಡಬೇಕೆಂಬ ನಿಲುವನ್ನು ತಳೆಯದೆ;

ಅನ್ಯರ=ಇತರರ/ಬೇರೆಯವರ; ಸುದ್ದಿ=ಸಮಾಚಾರ/ವಾರ್ತೆ; ನುಡಿದು+ ಆಡುವ; ಆಡು=ತೆಗಳು/ನಿಂದಿಸು; ಕುನ್ನಿ=ನಾಯಿ/ನಾಯಿ ಮರಿ; 'ಕುನ್ನಿ' ಎಂಬ ಪದ ಒಂದು ಬಯ್ಗುಳವಾಗಿ ಬಳಕೆಯಾಗಿದೆ. ವ್ಯಕ್ತಿಯ ಸಾಮಾಜಿಕ ವ್ಯಕ್ತಿತ್ವವನ್ನೇ

ಅಲ್ಲಗಳೆದು, ಅವನನ್ನು ಒಂದು ನಾಯಿಗೆ ಹೋಲಿಸಲಾಗಿದೆ;

ಗುರು+ಇಲ್ಲ; ಗುರು=ಮಕ್ಕಳಿಗೆ ಮತ್ತು ತನ್ನ ಬಳಿ ಬಂದವರಿಗೆ ಅರಿವನ್ನು ನೀಡಿ, ಅವರ ವ್ಯಕ್ತಿತ್ವವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವ ವ್ಯಕ್ತಿ; ಲಿಂಗ+ಇಲ್ಲ; ಲಿಂಗ=ಈಶ್ವರ; ಜಂಗಮ+ಇಲ್ಲ; ಜಂಗಮ=ಎಲ್ಲಿಯೂ ಒಂದು ಕಡೆ ನೆಲೆಯಾಗಿ ನಿಲ್ಲದೆ, ಸದಾಕಾಲ ಸಂಚರಿಸುತ್ತ ಜನಸಮುದಾಯದ ಜನಮನದಲ್ಲಿ ಒಳ್ಳೆಯ ನಡೆನುಡಿಗಳ ಬಗ್ಗೆ ಅರಿವನ್ನು ಮತ್ತು ಎಚ್ಚರವನ್ನು ಮೂಡಿಸುತ್ತಿರುವ ಶಿವಶರಣ;

ತನ್ನ ಮಯ್ ಮನದಲ್ಲಿ ತುಡಿಯುವ ಒಳಿತು ಕೆಡುಕಿನ ಒಳಮಿಡಿತಗಳಲ್ಲಿ, ಕೆಡುಕನ್ನು ಹತ್ತಿಕ್ಕಿಕೊಂಡು, ಒಳ್ಳೆಯ ರೀತಿಯಲ್ಲಿ ಜೀವನವನ್ನು ನಡೆಸದೆ, ಇತರರ ನಡೆನುಡಿಗಳಲ್ಲಿನ ತಪ್ಪುಗಳನ್ನು ಎತ್ತಿ ಆಡುವವನು ಅತ್ಯಂತ ನೀಚ ವ್ಯಕ್ತಿಯಾಗಿ ರುತ್ತಾನೆ. ಇಂತಹ ವ್ಯಕ್ತಿಯು ಗುರು ಲಿಂಗ ಜಂಗಮದಿಂದ ದೂರವಿರುತ್ತಾನೆ. ಅಂದರೆ ಸಾಮಾಜಿಕವಾಗಿ ಒಂದು ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ.

147. ನುಡಿದರೇನಯ್ಯ ನಡೆ ಇಲ್ಲದನ್ನಕ್ಕ
ನಡೆದರೇನಯ್ಯ ನುಡಿ ಇಲ್ಲದನ್ನಕ್ಕ. (985/1726)

ನುಡಿದರ್+ಏನ್+ಅಯ್ಯ; ನುಡಿ=ಮಾತು/ಸೊಲ್ಲು; ನುಡಿದರೆ=ಒಳ್ಳೆಯ ಮಾತುಗಳನ್ನು ಆಡುವುದರಿಂದ; ಏನ್=ಯಾವುದು; ಏನಯ್ಯ=ಏನು ತಾನೆ ಪ್ರಯೋಜನ/ಯಾವ ಪ್ರಯೋಜನವೂ ಇಲ್ಲ;

ನಡೆ=ದಿನ ನಿತ್ಯ ಮಾಡುವ ಕೆಲಸ/ವ್ಯವಹಾರ; ಇಲ್ಲದ+ಅನ್ನಕ್ಕ; ಅನ್ನಕ್ಕ=ಆ ವರೆಗೆ/ಅಲ್ಲಿಯ ತನಕ; ಇಲ್ಲದನ್ನಕ್ಕ=ಇಲ್ಲದಿದ್ದರೆ/ಇಲ್ಲದಿರುವ ತನಕ; **ನಡೆ ಇಲ್ಲದನ್ನಕ್ಕ**=ಒಳ್ಳೆಯ ಕೆಲಸವನ್ನು ಮಾಡದಿದ್ದರೆ; ನಡೆದರ್+ಏನ್+ಅಯ್ಯ;

ನಡೆದರೆ=ಒಳ್ಳೆಯ ಕೆಲಸವನ್ನು ಮಾಡಿದರೆ; **ನುಡಿ ಇಲ್ಲದನ್ನಕ್ಕ**=ಒಳ್ಳೆಯ ಮಾತುಗಳಿಲ್ಲದಿದ್ದರೆ, ಅಂದರೆ ವ್ಯಕ್ತಿಯು ಆಡುವ ಮಾತುಗಳು ಅದನ್ನು ಕೇಳಿದವರಿಗೆ ಅರಿವು, ಆನಂದ ಮತ್ತು ನೆಮ್ಮದಿಯನ್ನು ಮೂಡಿಸದಿದ್ದರೆ;

ವ್ಯಕ್ತಿಯು ಆಡುವ ನುಡಿ ಮತ್ತು ಮಾಡುವ ಕೆಲಸಗಳೆರಡೂ ಒಳ್ಳೆಯದಾಗಿದ್ದಾಗ ಮಾತ್ರ ಜನಸಮುದಾಯ ಮತ್ತು ಸಮಾಜ ಉಳಿದು ಬೆಳೆದು ಬಾಳುತ್ತದೆ.

❖

148. ಅರಿವೆಂಬುದೆ ಆಚಾರ
ಆಚಾರವೆಂಬುದೆ ಅರಿವು. (873/1713)

ಅರಿವು+ಎಂಬುದೆ; ಅರಿವು=ತಿಳುವಳಿಕೆ; ಎಂಬುದು=ಎಂದು ಹೇಳುವುದು/ಎನ್ನುವುದು; ಎಂಬುದೆ=ಎನ್ನುವುದೆ; ಆಚಾರ=ಒಳ್ಳೆಯ ನಡೆನುಡಿ; ಆಚಾರ+ಎಂಬುದೆ;

ಜೀವನದಲ್ಲಿ "ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ದಿಟ–ಯಾವುದು ಸಟೆ; ತನ್ನನ್ನು ಒಳಗೊಂಡಂತೆ ಎಲ್ಲರ ಒಳಿತಿಗಾಗಿ ಯಾವ ಬಗೆಯ ಕೆಲಸವನ್ನು ಮಾಡಬೇಕು–ಯಾವುದನ್ನು ಮಾಡಬಾರದು" ಎಂಬುದನ್ನು ವ್ಯಕ್ತಿಯು ಮನದಟ್ಟು ಮಾಡಿಕೊಂಡು, ತನ್ನ ನಡೆನುಡಿಗಳನ್ನು ಎಚ್ಚರದಿಂದ ರೂಪಿಸಿಕೊಂಡು ಬಾಳಲು ಒಳ್ಳೆಯ ಅರಿವನ್ನು ಮತ್ತು ಒಳ್ಳೆಯ ಆಚಾರವನ್ನು ಹೊಂದಿರಬೇಕು.

149. ಮನವನರಿದಂಗೆ ಮತದ ಹಂಗೇಕೊ
ನಿತ್ಯವನರಿದಂಗೆ ತೀರ್ಥದ ಹಂಗೇಕೊ. (1009/1730)

ಮನ+ಅನ್+ಅರಿದಂಗೆ; ಮನ=ಮನಸ್ಸು/ಚಿತ್ತ; ಅನ್=ಅನ್ನು; ಅರಿ=ತಿಳಿ; ಅರಿದಂಗೆ=ಅರಿದವನಿಗೆ/ತಿಳಿದ ವ್ಯಕ್ತಿಗೆ/ಬಲ್ಲವನಿಗೆ; ಮನವನರಿದಂಗೆ=ಮನಸ್ಸನ್ನು ತಿಳಿದವನಿಗೆ;

ಮನವನು ಅರಿತವನು=ತನ್ನ ಮನದಲ್ಲಿ ಸದಾಕಾಲ ಮೂಡಿಬರುತ್ತಿರುವ ಒಳಿತು ಕೆಡುಕಿನ ಮಿಡಿತಗಳನ್ನು ಒರೆಹಚ್ಚಿ ನೋಡಿ, ಕೆಡುಕನ್ನು ಒಳಮಿಡಿತಗಳನ್ನು ಹತ್ತಿಕ್ಕಿಕೊಂಡು ಒಳ್ಳೆಯ ನಡೆನುಡಿಗಳಿಂದ ಬಾಳಬೇಕೆಂಬುದನ್ನು ಅರಿತವನು;

ಮತ=ಜನ ಸಮುದಾಯದಲ್ಲಿ ಬಳಕೆಯಲ್ಲಿರುವ ಬಹುಬಗೆಯ ಸಂಪ್ರದಾಯ ಮತ್ತು ಆಚರಣೆಗಳು; ಹಂಗು+ಏಕೊ; ಹಂಗು=ರುಣ/ಅಗತ್ಯ/ಅವಲಂಬನೆ; ಮತದ ಹಂಗು=ಹಿಂದಿನಿಂದಲೂ ನಡೆದುಬಂದಿರುವ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ತೊಡಗುವುದು; ಏಕೆ=ಯಾವುದಕ್ಕಾಗಿ; ಹಂಗೇಕೊ= ಅವಲಂಬಿಸಬೇಕಾದ ಅಗತ್ಯವೇನು?

ನಿತ್ಯ+ಅನ್+ಅರಿದಂಗೆ; ನಿತ್ಯ=ಸತ್ಯ/ದಿಟ/ವಾಸ್ತವ; ನಿತ್ಯವನರಿದಂಗೆ=ನಿತ್ಯವನ್ನು ಅರಿತವನಿಗೆ; **ನಿತ್ಯವನ್ನು ಅರಿತವನು**=ತನ್ನನ್ನು ಒಳಗೊಂಡಂತೆ ಎಲ್ಲ

ವ್ಯಕ್ತಿಗಳ ಬದುಕಿನ ಏಳುಬೀಳುಗಳಿಗೆ ನಿಸರ್ಗದಲ್ಲಿ ಉಂಟಾಗುವ ಸಂಗತಿಗಳು ಮತ್ತು ಸಮಾಜದ ಕಟ್ಟುಪಾಡುಗಳು ಕಾರಣವಾಗಿವೆ ಎಂಬ ವಾಸ್ತವನ್ನು ತಿಳಿದವನು;

ತೀರ್ಥ=ದೇವಾಲಯಗಳಲ್ಲಿ ದೇವರ ಪೂಜೆಯ ನಂತರ ನೀಡುವ ನೀರು. ಇದನ್ನು ದೇವರಲ್ಲಿ ಒಲವುಳ್ಳ ವ್ಯಕ್ತಿಗಳು ಪವಿತ್ರವೆಂದು ತಿಳಿದು, ಇದನ್ನು ಕುಡಿಯುವುದರಿಂದ ತಮ್ಮ ಬದುಕಿನಲ್ಲಿ ಒಳ್ಳೆಯದಾಗುತ್ತೆಂದು ನಂಬಿದ್ದಾರೆ;

ತೀರ್ಥದ ಹಂಗು=ಬೆಟ್ಟಗುಡ್ಡಗಳಲ್ಲಿ ಇಲ್ಲವೇ ನದಿ ತೊರೆಗಳ ದಡದಲ್ಲಿ ಕಟ್ಟಿರುವ ದೇಗುಲಗಳಿಗೆ ಯಾತ್ರೆ ಹೋಗಿ, ಅಲ್ಲಿರುವ ದೇವತೆಗಳನ್ನು ಬಹು ಬಗೆಯ ಆಚರಣೆಗಳಿಂದ ಪೂಜಿಸುತ್ತ, ತಮ್ಮ ಬದುಕಿನ ಸಂಕಟಗಳ ನಿವಾರಣೆಗೆ ದೇವರನ್ನು ಅವಲಂಬಿಸುವುದು;

ಜೀವನದಲ್ಲಿ ಒಲವು ನಲಿವು ನೆಮ್ಮದಿಯು ದೊರೆಯುವಂತಾಗಲು ಒಳ್ಳೆಯ ನಡೆನುಡಿಗಳು ಅಗತ್ಯವೆಂಬುದನ್ನು ಅರಿತು ಬಾಳುವ ವ್ಯಕ್ತಿಗೆ ಯಾವುದೇ ಮತದ ಆಚರಣೆಯ ಹಂಗಿಲ್ಲ ಮತ್ತು ದೇವರ ಅನುಗ್ರಹದ ಅಗತ್ಯವಿಲ್ಲ.

150. ಬರಿಯ ನುಡಿಯ ನುಡಿವವರ ಕಂಡರೆ ಛೀ ಎಂಬೆನು.

(1056/1736)

ಬರಿ=ಬರಿದು/ಏನೂ ಇಲ್ಲದಿರುವುದು/ಪೊಳ್ಳು; ಬರಿಯ=ಪೊಳ್ಳಾದ/ಬರಿದಾದ; ನುಡಿ=ಮಾತು/ಸೊಲ್ಲು; **ಬರಿಯ ನುಡಿ**=ಕೆಲಸಕ್ಕೆ ಬಾರದ ಮಾತು/ನಡೆಯಲ್ಲಿ ಕಂಡು ಬರದ ನುಡಿ; ನುಡಿವವರ=ಮಾತನಾಡುವವರನ್ನು;

ಕಾಣ್=ನೋಡು; ಕಂಡರೆ=ನೋಡಿದರೆ; ಛೀ=ಇತರರ ನಡೆನುಡಿಗಳಲ್ಲಿ ಕೆಟ್ಟದ್ದು ಕಂಡುಬಂದಾಗ, ಅವರ ಬಗ್ಗೆ ತಿರಸ್ಕಾರವನ್ನು, ಜುಗುಪ್ಸೆಯನ್ನು ಮತ್ತು ನಿಂದನೆಯನ್ನು ವ್ಯಕ್ತಪಡಿಸಲೆಂದು ಬಳಸುವ ಪದ; ಎಂಬೆನು=ಎನ್ನುತ್ತೇನೆ/ಎಂದು ಹೇಳುತ್ತೇನೆ;

ಮಾನವ ಸಮುದಾಯ ಉಳಿದು ಬೆಳೆದು ಬಾಳುವುದಕ್ಕೆ ಅಗತ್ಯವಾದ 'ಅನ್ನ–ಬಟ್ಟೆ–ವಸತಿ–ವಿದ್ಯೆ–ಆರೋಗ್ಯ'ವನ್ನು ನೀಡುವ ಕಸುಬುಗಳಲ್ಲಿ ಯಾವುದೇ ಒಂದು ಕಾಯಕವನ್ನು ಮಾಡದೆ, ಸತ್ಯ, ನೀತಿ, ನ್ಯಾಯ ಮತ್ತು ದೇವರ ಹೆಸರಿನಲ್ಲಿ ದೊಡ್ಡ ದೊಡ್ಡ ಮಾತುಗಳನ್ನಾಡುತ್ತ, ಕುಟುಂಬಕ್ಕೆ ಮತ್ತು ಸಮಾಜಕ್ಕೆ ಹೊರೆಯಾಗಿ ಬಾಳುತ್ತಿರುವ ಹೊಣೆಗೇಡಿಗಳನ್ನು ವಚನಕಾರರು ತಿರಸ್ಕರಿಸಿದ್ದರು.

ಬರಹಗಾರ

ಹೆಸರು : ಸಿ.ಪಿ.ನಾಗರಾಜ (೧೯೪೫)

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.,

ಕೆಲಸ : ಕನ್ನಡ ಅಧ್ಯಾಪಕ

೧೯೭೧–೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨–೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬–೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

೧. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ, ಅಂಬೆ, ಹಾವು, ಅಂಗಿಬಟ್ಟೆ, ಒಂದು ರೂಪಾಯಿ, ಕಳ್ಳರಿದ್ದಾರೆ ಎಚ್ಚರಿಕೆ, ಹೆಣದ ಹಣ, ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ, ಕನಕನ ಅವ್ವ, ಹಳ್ಳಿಗಾಡಿನ ರೂವಾರಿ, ಡಾ.ಬಂದೀಗೌಡ, ಆಣೆ ಪ್ರಮಾಣಗಳು, ಬಯ್ಗುಳ, ಸರ್ವಜ್ಞ ವಚನಗಳ ಓದು, ಅಲ್ಲಮ ವಚನಗಳ ಓದು, ಶಿವಶರಣೆಯರ ವಚನಗಳ ಓದು, ಶಿವಶರಣರ ವಚನಗಳ ಓದು, ಬಸವಣ್ಣ ವಚನಗಳ ಓದು, ಮುದ್ದೆಗಂಟು, ಶಿವಶರಣಶರಣೆಯರ ವಚನಗಳ ಓದು, ಪಂಪ ಭಾರತ ಓದು, ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು

ವಚನದಿಂದ ಆಯ್ದ ಸಾಲುಗಳ ಓದು
ಕುವೆಂಪು ಕವನಗಳ ಓದು   ಕನ್ನಡ ಬಯ್ಗುಳ ಓದು
ಬಸವಯುಗದ ವಚನಕಾರರು
ಕನಕದಾಸರ ರಾಮಧಾನ್ಯ ಪ್ರಸಂಗ ಓದು
ಬ್ರೆಕ್ಟ್ ಕವನಗಳ ಓದು
ರವೀಂದ್ರನಾಥ ಠಾಕೂರ್ ಕವನಗಳ ಓದು
ಸೀತಾ ಪರಿತ್ಯಾಗ ಪ್ರಸಂಗ
ಕುಮಾರವ್ಯಾಸ ಭಾರತ ಓದು:
ಕೀಚಕನ ಪ್ರಸಂಗ ಮತ್ತು ಉತ್ತರ ಕುಮಾರನ ಪ್ರಸಂಗ
ವಚನಗಳ ಓದು

೨. ಡಿಜಿಟಲ್ ಪುಸ್ತಕಗಳು

೧. ಕನ್ನಡ ಸಾಹಿತ್ಯ ಸಂಚಯ :
https://cpnagaraj.sanchaya.net
೨. ಮೈಲಾಂಗ್–ಕನ್ನಡ ಇ ಬುಕ್ಸ್ – ಆಡಿಯೋ ಬುಕ್ಸ್
https://mylang.in
೩. ಋತುಮಾನ
https://ruthumana.com

3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್
ಕುವೆಂಪು ಕವನಗಳ ಓದು–೧೩ ಎಪಿಸೋಡ್
ಪಂಪ ಭಾರತ ಪ್ರಸಂಗಗಳು – ೯ ಎಪಿಸೋಡ್

ಆಣೆ ಪ್ರಮಾಣಗಳ ಓದು–೧೦
ಕನಕದಾಸರ ರಾಮಧಾನ್ಯ ಪ್ರಸಂಗ–೧
ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ–೬
ಡಿ.ಎನ್. ಶಂಕರ ಭಟ್ – ಭಾಷೆಯ ಬಗೆಗೆ ನೀವೇನು ಬಲ್ಲಿರಿ–೪೧
ಸಿ.ಎಚ್. ರಾಜಶೇಖರ್– ಸಮಗ್ರ ಬುದ್ಧ ಸಾಹಿತ್ಯ ಮಾಲೆ–೩೦
ಕೆ.ವಿ. ನಾರಾಯಣ– ನುಡಿಯರಿಮೆ ಬರಹಗಳು–೨೬
ಕೆ.ವಿ. ನಾರಾಯಣ– ಕನ್ನಡ ಜಗತ್ತು : ಅರ್ಧ ಶತಮಾನ – ೯೧
ದೇವನೂರು ಮಹಾದೇವ – ಎದೆಗೆ ಬಿದ್ದ ಅಕ್ಷರ–೨೯
ಬಿ.ವಿ. ವೀರಭದ್ರಪ್ಪ – ವೇದಗಳಲ್ಲಿ ಜನಸಾಮಾನ್ಯರು–೪೦

ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–೧೩
(ಅನುವಾದ : ಎಚ್.ಎಸ್. ನಾಗಭೂಷಣ)

ಮುರಳಿಧರ ಜಗತಾಪ – ಸಮಾಜ ಸುಧಾರಕ ಮಹಾತ್ಮ ಫುಲೆ – ೨೭
(ಅನುವಾದ : ಅಕಿಂಚನ)

ಬರ್ಟ್ರೆಂಡ್ ರಸೆಲ್ – ಸುಖ ಸಾಧನೆ – ೬೪
(ಅನು : ಯೋಗನರಸಿಂಹಮ್)

ರೈನರ್ ಮಾರಿಯಾ ರಿಲ್ಕ್ – ಯುವಕವಿಗೆ ಬರೆದ ಪತ್ರಗಳು – ೧೦
(ಅನು : ಓ.ಎಲ್. ನಾಗಭೂಷಣ ಸ್ವಾಮಿ)

ರವೀಂದ್ರನಾಥ ಠಾಕೂರ್ ಕವನಗಳ ಓದು–೧೬
ಬ್ರೆಕ್ಟ್ ಕವನಗಳ ಓದು–೧೯
ಕನ್ನಡ ಬಯ್ಗುಳ ಓದು–ಪಿಎಚ್.ಡಿ. ಬರಹ–೨೦
ತಥಾಗತ ಬುದ್ಧ ತೋರಿದ ಧಮ್ಮಪದ–೧೦ : ಎಸ್. ಶಿವಾಜಿ ಜೋಯಿಸ್

ವಿಳಾಸ : ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೇ ಕ್ರಾಸ್, ಕೃಷ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521

e-mail : ngy7777@gmail.com

ಸಿ.ಪಿ.ನಾಗರಾಜ ಅವರು ಹನ್ನೆರಡನೆಯ ಶತಮಾನದ ಶಿವಶರಣಶರಣೆಯರ ವಚನಗಳಿಂದ ಆಯ್ದು ಪ್ರಕಟಿಸುತ್ತಿರುವ 'ವಚನಗಳ ಓದು' ಸಂಕಲನವನ್ನು ಓದುವಾಗ, ವಚನಗಳೆಲ್ಲಾ ಏನೋ ಕಿವಿಗೆ ಇಂಪಾದ, ಬುದ್ಧಿಗೆ ಚುರುಕನ್ನು ನೀಡುವ ಸುಭಾಷಿತಗಳೆಂದಷ್ಟೇ ನೋಡದಿರೋಣ. ಅದು ಸಿ.ಪಿ.ನಾಗರಾಜ ಅವರ ಆಶಯವೂ ಆಗಿದೆ. ವಚನಗಳಲ್ಲಿ ಸುಭಾಷಿತಗಳು ವಿಪುಲವಾಗಿವೆ. ಸೊಗಸಾಗಿವೆ. ಆದರೆ ಮನಸ್ಸಿಗೆ ಆಹ್ಲಾದ ನೀಡಿ ಮುಕ್ತಾಯವಾಗುವ ಕಾವ್ಯದ ಪರಿ ವಚನಗಳದ್ದಲ್ಲ. ಅವು ಪ್ರಾಯೋಗಿಕ ಜಗತ್ತಿನ ತಿಳಿವಳಿಕೆ ಮತ್ತು ಮುಲಾಮು. ಎರಡಕ್ಕೂ ಸಿದ್ಧೌಷಧ. ಇಂತಹ ಪ್ರಬೋಧನಾತ್ಮಕ ಮತ್ತು ಪ್ರಯೋಜನಕಾರಿ ಕೃತಿಯೊಂದನ್ನು ರಚಿಸಿ ಹೊರತಂದಿರುವ ಸಿ.ಪಿ.ನಾಗರಾಜ ಅವರಿಗೆ ಅಭಿನಂದನೆಗಳು ಮತ್ತು ಶುಭಾಶಯಗಳು.

ಜಿ.ರಾಮಕೃಷ್ಣ

ನಾಸು ಸ್ಮಾರಕ ಪ್ರಕಾಶನ,
ಬೆಂಗಳೂರು.

ರೂ. 750/-